ಮೈಸೂರು ವಿದ್ಯಾಶಾಖೆಯಿಂದ ಪ್ರಕಟಿತವಾದುದು

ಮೈಸೂರು ಕೈಪಿಡಿ

ಹೈಸ್ಕೂಲ್ ತರಗತಿಗಳಿಗಾಗಿ

ಮೊದಲನೆಯ ಸಂಪುಟ—೫,೦೦೦ ಪ್ರತಿಗಳು

ಬೆಂಗಳೂರು
ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟುದು
೧೯೩೭

ಕ್ರಯ ೧–೧೧–೦


ಮೈಸೂರು ಕೈಪಿಡಿ

ಹೈಸ್ಕೂಲ್ ತರಗತಿಗಳಿಗಾಗಿ

ಮೊದಲನೆಯ ಸಂಪುಟ—೫,೦೦೦ ಪ್ರತಿಗಳು

ಮೈಸೂರು ವಿದ್ಯಾಶಾಖೆಯಿಂದ ಪ್ರಕಟಿತವಾದುದು
ಬೆಂಗಳೂರು
೧೯೩೭

ಮೈಸೂರು ಸರ್ಕಾರದ ಮುದ್ರಣಾಲಯದ ಸೂಪರಿಂಟೆಂಡೆಂಟರವರಿಂದ
ಮುದ್ರಿಸಲ್ಪಟ್ಟಿತು—ಬೆಂಗಳೂರು
೧೯೩೭



ಆಳುವ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್
ಬಹದ್ದೂರ್ ಅವರು

ಪ್ರಸ್ತಾವನೆ

ವಿದ್ಯಾ ಇಲಾಖೆಯ ಟೆಕ್ಸ್ಟ್_ಬುಕ್ ಕಮಿಟಿಯವರು ಒಂದು ಉಪ ಸಮಿತಿಯನ್ನು ಏರ್ಪಡಿಸಿ, ಮೈಸೂರು ಸಂಸ್ಥಾನಕ್ಕೆ ಸಂಬಂಧಿಸುವ ಎಲ್ಲ ಸಂಗತಿಗಳೂ ನಾಡಿನ ವಿದ್ಯಾರ್ಥಿಗಳಿಗೆ ತಿಳಿಯುವಂತೆಯೂ ಅವರಲ್ಲಿ ದೇಶಾಭಿಮಾನ ಹೆಚ್ಚುವಂತೆಯೂ ಪಠ್ಯಪುಸ್ತಕಗಳನ್ನು ಬರಸಬೇಕೆಂದು ತೀರ್ಮಾನಿಸಿ, ಆ ಕೆಲಸಕ್ಕಾಗಿ ಒಂದು ಲೇಖಕ ಮಂಡಲಿಯನ್ನು ನೇಮಿಸಿದರು. ಆ ಮಂಡಲಿಗೆ ಶ್ರೀಮಾನ್ ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ., ಶ್ರೀಮಾನ್ ಕೆ. ಕೃಷ್ಣಯ್ಯಂಗಾರ್, ಬಿ.ಎ., ಮತ್ತು ಶ್ರೀಮಾನ್ ವಿ. ಸೀತಾರಾಮಯ್ಯ, ಎಂ.ಎ., ಎಂಬ ಮೂವರು ಸದಸ್ಯರು. ಇಲಾಖೆಯ ಆಡಳಿತದಲ್ಲಿರುವ ಎಲ್ಲ ಪ್ರೈಮರಿ, ಮಿಡಲ್ ಮತ್ತು ಹೈಸ್ಕೂಲ್ ತರಗತಿಗಳಲ್ಲಿಯೂ ವಿದ್ಯಾರ್ಥಿಗಳು ಸುಲಭವಾಗಿ ಓದುವಂತೆ, ಆಯಾ ಅಂತಸ್ತನ್ನರಿತು, ಏಕಕೇಂದ್ರ ಕ್ರಮದಲ್ಲಿ ಮೈಸೂರಿನ ಭೂವಿವರಣೆ, ಚರಿತ್ರೆ, ಜನಜೀವನ, ಪೌರ, ರಾಜಕೀಯ ವಿಚಾರ ಮುಂತಾದ ಸಂಗತಿಗಳನ್ನು ಒಳಗೊಂಡು ಈ ಪುಸ್ತಕಗಳು ತಯಾರಾಗಿವೆ. ಇನ್ನೂ ಮುಂಚಿತವಾಗಿಯೇ ಅವನ್ನು ಪ್ರಕಟಿಸಲು ಕಾರಣಾಂತರದಿಂದ ಸಾಧ್ಯವಾಗಲಿಲ್ಲ.

ಈ ಪುಸ್ತಕವು ಹೈ ಸ್ಕೂಲ್ ತರಗತಿಗಳ ಉಪಯೋಗಕ್ಕಾಗಿ ಬರೆದುದು. ಬಹುಮಟ್ಟಿಗೆ ಇಲ್ಲಿ ವಿಷಯವು ವಿವರಣ ರೂಪದಲ್ಲಿದೆ. ವರ್ಷ ವರ್ಷವೂ ಸಂಖ್ಯೆ ಸಂಗತಿಗಳು ವ್ಯತ್ಯಾಸವಾಗುವುವು. ಆದರೂ ಈ ದೇಶದ ಆಕೃತಿಯನ್ನು ತೋರಿಸಿ, ವಿದ್ಯಾರ್ಥಿಗಳಿಗೆ ದೇಶಪ್ರೇಮ, ರಾಜಭಕ್ತಿ, ತಿಳಿವಳಿಕೆ, ಪೌರದೃಷ್ಟಿ ಇವು ಉಂಟಾಗುವಂತೆ ವಿಷಯಗಳನ್ನು ಕುರಿತು ಬರೆಯುವ ಪ್ರಯತ್ನ ಇಲ್ಲಿ ನಡೆದಿದೆಯೆನ್ನಬಹುದು. ಇತರರು ಓದುವಾಗಲೂ ಬಳಸುವಾಗಲೂ ಇದರಲ್ಲಿ ಕಂಡುಬರಬಹುದಾದ ಲೋಪದೋಷಗಳನ್ನು ಇಲಾಖೆಗೆ ದಯವಿಟ್ಟು ತಿಳಿಸಿದರೆ ಮುಂದಿನ ಪರಿಷ್ಕರಣಗಳಿಗೆ ಸಹಾಯವಾಗುತ್ತದೆ.

ಈ ಪುಸ್ತಕದಲ್ಲಿ ಅಚ್ಚಾಗಿರುವ ಚಿತ್ರಗಳನ್ನು ದಯಮಾಡಿ ಒದಗಿಸಿ ಕೊಟ್ಟಿರುವ ಎಲ್ಲ ಮಹನೀಯರಿಗೂ ವಿದ್ಯಾ ಇಲಾಖೆ ಕೃತಜ್ಞವಾಗಿದೆ. ಹಾಗೆಯೇ ಈ ಪುಸ್ತಕಗಳನ್ನು ಬರೆವಕಾಲದಲ್ಲಿ ಸಲಹೆಗಳನ್ನಿತ್ತು ಸಹಾಯ ಮಾಡಿರುವ ಮಹನೀಯರಿಗೂ ಇಲಾಖೆಯು ಋಣಿ.

ಎನ್. ಎಸ್. ಸುಬ್ಬರಾವ್,

Director of Public Instruction in Mysore.

ಮೈಸೂರು ಕೈಪಿಡಿ

ವಿವರ

ಮೈಸೂರು ಸಂಸ್ಥಾನದ ಸಾಮಾನ್ಯ ವರ್ಣನೆ

ವಿವರ

ಮೈಸೂರು ಸಂಸ್ಥಾನದ ಸಾಮಾನ್ಯ ವರ್ಣನೆ.

ಮೊದಲನೆಯ ಅಧ್ಯಾಯ.

ಸಾಮಾನ್ಯ ವಿವರಣೆ.

ಕೊಡಚಾದ್ರಿಯಿಂದ ನೋಟ.

ಕೊಡಚಾದ್ರಿಯ ಶಿಖರದ ಮೇಲೆ ನಿಂತುಕೊಂಡು ಪಶ್ಚಿಮದ ಕಡೆಗೆ ನೋಡಿದರೆ ಬಹಳ ಸಮೀಪದಲ್ಲಿಯೇ ಅರಬ್ಬೀ ಸಮುದ್ರವು ಕಾಣುತ್ತದೆ. ಮುಂದಿರುವ ಮಂಜುಮುಸುಕಿದ ತಗ್ಗಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಗಳು ಮಧ್ಯಮಧ್ಯ ಚುಕ್ಕೆಗಳಂತೆ ಕಾಣುವುವು. ಹಾಗೆಯೇ ಮುಂದೆ ನೋಡುವಲ್ಲಿ ಅರಬ್ಬೀ ಸಮುದ್ರದ ತೆರೆಗಳ ಮೇಲೆ ಹರಿದಾಡುತ್ತಿರುವ ದೋಣಿಗಳೂ ಚಿಕ್ಕ ಚಿಕ್ಕ ಜಹಜುಗಳೂ ಕಣ್ಣಿಗೆ ಬೀಳುವುವು. ನಮ್ಮ ಇರ್ಕಡೆಗಳಲ್ಲೂ ಪಶ್ಚಿಮಘಟ್ಟದ ಶ್ರೇಣಿಗಳು ನಿಬಿಡವಾಗಿಯೂ ಪರಂಪರೆಯಾಗಿಯೂ ಹಬ್ಬಿ ಮನೋಹರವಾದ ಅರಣ್ಯ ಪ್ರದೇಶಗಳನ್ನೊಳಕೊಂಡು ದೈವನಿರ್ಮಿತವಾದ ದೊಡ್ಡ ಗೋಡೆಗಳಂತೆ ಕಾಣುವುವು. ಮೇಲೆ ನಿಂತು ನೋಡುತ್ತಿರುವ ನಮಗೆ ಮೈಸೂರು ಪ್ರಾಂತವು ಎಂತಹ ಉನ್ನತವಾದ ದಿಣ್ಣೆಯ ಭೂಮಿಯೆಂಬುದು ಗೋಚರಿಸುತ್ತದೆ.

ಹುಲಿಕಲ್ ಮತ್ತು ಆಗುಂಬೆಗಳಿಂದ ನೋಟ.

ಇದೇ ಬಗೆಯ ನೋಟವನ್ನು ಹುಲಿಕಲ್ ಘಾಟಿಯ ಮೇಲಂತಸ್ತಿನಿಂದಲೂ, ಆಗುಂಬೆ ಘಾಟಿಯ ಉಪ್ಪರಿಗೆಯಿಂದಲೂ ಪ್ರೇಕ್ಷಕರು ನೋಡಬಹುದು. ಮೈಸೂರು ಸಂಸ್ಥಾನವು ಪ್ರಸ್ಥಭೂಮಿಯೆನ್ನುವುದು ಇಲ್ಲಿಯೂ ವಿಶದವಾಗುತ್ತದೆ. ಆದರೆ ಸಮುದ್ರವು ದೂರವಾಗಿರುವುದರಿಂದ ಅದು ಅಷ್ಟೊಂದು ಚೆನ್ನಾಗಿ ಕಾಣುವುದಿಲ್ಲ. ಸಂಧ್ಯಾಕಾಲದ ರಕ್ತಕಿರಣಗಳು

ಜಲರಾಶಿಯ ಮೇಲೆ ಬಿದ್ದು ಪ್ರತಿಫಲನವಾದಾಗ ಆ ಥಾಳಥಳ್ಯವು ನೋಡು ವವರ ಕಣ್ಣು ಕುಕ್ಕುವುದು. ಇಲ್ಲಿಯ ನೋಟವು ಬೇರೊಂದು ರೀತಿಯಲ್ಲಿ ಮನೋಹರವಾಗಿದೆ. ಘಟ್ಟದ ರಸ್ತೆಗಳು ಘಟಸರ್ಪಗಮನದಂತೆ ವಕ್ರ ವಕ್ರವಾಗಿ ಇಳಿದಿಳಿದು ಗೊಂಡಾರಣ್ಯಗಳಲ್ಲಿ ಅದೃಶ್ಯವಾಗುತ್ತ ತಗ್ಗಿಗೆ ಕೊಂಡೊಯ್ಯುವುವು.

ಶಿವನಸಮುದ್ರದಿಂದ ನೋಟ.

ಪೂರ್ವದ ಮೇರೆಯಲ್ಲಿರುವ ಶಿವನಸಮುದ್ರದ ಬಳಿ ನೋಡುವುದಾ ದರೆ ಬೆಟ್ಟಗಳ ನಡುವೆ ಹಾಯ್ದು ಹೋಗುವ ದೃಷ್ಟಿಗೆ ಬಂಗಾಳಾ ಕೊಲ್ಲಿಯ ಜಲರಾಶಿಯಾಗಲಿ, ಜಹಜುಗಳ ರೇಖೆಗಳಾಗಲಿ, ಪ್ರತಿಫಲಿತ ರಶ್ಮಿಗಳಾಗಲಿ ಕಣ್ಣಿಗೆ ಬೀಳುವುದಿಲ್ಲ. ದೂರದ ತಗ್ಗಿನಲ್ಲಿ ಮಂಜು ಮುಸುಕಿರುವುದನ್ನೂ, ಗಿಡ ಮರಗಳ ಛಾಯೆಯನ್ನೂ, ಬೆಟ್ಟಗುಡ್ಡಗಳು ಅಲ್ಲಲ್ಲಿ ಚದರಿರುವುದನ್ನೂ ಈ ಎಡೆಯಲ್ಲಿ ಕಾಣಬಹುದು.

ಸಾಮಾನ್ಯವಾದ ಆಕಾರ.

ಮೈಸೂರು ಸಂಸ್ಥಾನವು ಪೂರ್ವ ಪಶ್ಚಿಮ ಘಟ್ಟಗಳಿಗೆ ಸೇರಿದಂತೆ ನಡುವೆ ಇದೆ. ನೀಲಗಿರಿಯ ಕಡೆಗೆ ಸಂಕುಚಿತವಾಗುತ್ತಲೂ, ಕೃಷ್ಣಾ ನದಿಯ ಕಡೆಗೆ ವಿಸ್ತಾರವಾಗುತ್ತಲೂ ಇರುವ ತ್ರಿಕೋಣಾಕೃತಿಯ ಕಲ್ಲು ನೆಲದ ಭೂಮಿಯೆಂದು ಇದನ್ನು ಹೇಳಬಹುದು. ನೀಲಗಿರಿಯ ಬಳಿ ಶೃಂಗಾಗ್ರವಿದ್ದು ಪೂರ್ವ ಪಶ್ಚಿಮ ಘಟ್ಟಗಳೆಂಬ ಬಾಹುಗಳ ಮೇಲೆ ಹರಡಿ ನಿಂತಿರುವ ಎತ್ತರವಾದ ಈ ಸಂಸ್ಥಾನಕ್ಕೆ ಪ್ರಸ್ಥಭೂಮಿಯೆಂದು ಹೇಳು ತ್ತಾರೆ. ಉತ್ತರದ ಕಡೆಗೆ ಯಾವುದೊಂದು ನಿಷ್ಕೃಷ್ಟವಾದ ಪರ್ವತ ಪಙ್ತಿಯೂ ಇಲ್ಲ. ನ್ಯಾಯವಾಗಿ ನೋಡಿದರೆ ದಖ್ಖನ ಪ್ರಸ್ಥಭೂಮಿಯ ದಕ್ಷಿಣಭಾಗವೇ ಈ ಮೈಸೂರು ಸಂಸ್ಥಾನವಾಗಿರುತ್ತದೆ.

ಸಮುದ್ರದಿಂದ ದೂರ.

ಪಶ್ಚಿಮದ ಮೇರೆ ಕೆಲವು ಕಡೆಗಳಲ್ಲಿ ಅರಬ್ಬೀ ಸಮುದ್ರಕ್ಕೆ 8–10 ಮೈಲಿಗಳಷ್ಟು ಸಮೀಪವಾಗಿರುವುದು. ಆದರೆ ಈ ಮೇರೆ ಸಾಮಾನ್ಯ ವಾಗಿ 30–40 ಮೈಲಿಗಳಷ್ಟು ದೂರವನ್ನು ಬಿಟ್ಟುಕೊಂಡೇ ಗಮಿಸಿರುತ್ತ

ದೆಂದು ಒಟ್ಟಿನಲ್ಲಿ ಹೇಳಬಹುದು. ಪೂರ್ವದ ಮೇರೆ ಬಂಗಾಳಾಕೊಲ್ಲಿಗೆ ಇಷ್ಟು ಸಮೀಪವಾಗಿಲ್ಲ. ಬಹಳ ಹತ್ತಿರವಿರುವ ಭಾಗವು ಪೂರ್ವ ಸಮುದ್ರಕ್ಕೆ ಸುಮಾರು 120 ಮೈಲಿಗಳಷ್ಟು ದೂರವಿದೆ. ಉಳಿದ ಕಡೆಗಳಲ್ಲಿ ಈ ದೂರ ಹೆಚ್ಚಾಗಿರುವುದು. ದಕ್ಷಿಣದಲ್ಲಿ 250 ಮೈಲಿಗಳಷ್ಟು ದೂರದಲ್ಲಿ ಸಮುದ್ರವಿರುತ್ತದೆ. ಉತ್ತರದ ಮೇರೆಯನ್ನು ಕೃಷ್ಣಾನದಿಯ ದಡದಿಂದ ಸ್ವಲ್ಪ ಹೆಚ್ಚು ಕಡಮೆಯಾಗಿ ನೋಡಿ ಹೇಳಬಹುದು. ವಾಯುವ್ಯದ ಮೂಲೆಯಿಂದ ಈಶಾನ್ಯದ ಮೂಲೆಗೆ ಗೆರೆ ಎಳೆದರೆ ಇದು ಕೃಷ್ಣಾನದಿಗೆ ಸುಮಾರು 100 ರಿಂದ ಹಿಡಿದು 150 ಮೈಲಿಗಳಷ್ಟು ದಕ್ಷಿಣಕ್ಕಿರುತ್ತದೆ.

ಸ್ಥಾನ.

ಮೈಸೂರು ಸಂಸ್ಥಾನವು ಉಷ್ಣವಲಯದಲ್ಲಿದೆ. ಭೂಮಧ್ಯ ರೇಖೆಗೆ ಉತ್ತರದಲ್ಲಿ ಅಕ್ಷಾಂಶ 11°–38 ಮತ್ತು 15°–2′ ರೇಖೆಗಳ ಮಧ್ಯದಲ್ಲಿಯೂ, ಪೂರ್ವ ರೇಖಾಂಶ 74°–42′ ಮತ್ತು 78°–36′ ರೇಖೆಗಳ ಮಧ್ಯದಲ್ಲಿಯೂ ಈ ಸಂಸ್ಥಾನವಿದೆ. ಒಟ್ಟು ವಿಸ್ತೀರ್ಣವು 29,475 ಚದರ ಮೈಲಿಗಳು. ಈ ಸಂಸ್ಥಾನದ ಪರಮಾವಧಿ ಉದ್ದ 209 ಮೈಲಿಗಳೂ, ಪರಮಾವಧಿ ಅಗಲ 230 ಮೈಲಿಗಳೂ ಆಗಿರುವುವು. ಮೈಸೂರು ಸಂಸ್ಥಾನವು ಇಂಡಿಯಾದೇಶದ ವಿಸ್ತಾರದಲ್ಲಿ $\frac{1}{40}$ ಭಾಗ ಮಾತ್ರವಿದೆ.

ಮೈಸೂರು ಸಂಸ್ಥಾನವು ಕರ್ಣಾಟಕದ ಒಂದು ಭಾಗ.

ಮೈಸೂರು ಸಂಸ್ಥಾನವು ಕನ್ನಡ ನಾಡಿನ ಒಂದು ಭಾಗವಾಗಿದೆ. ಹಿಂದಿನ ಕಾಲದಲ್ಲಿ ಕರ್ಣಾಟಕದ ಎಲ್ಲೆಯನ್ನು ಉತ್ತರಕ್ಕೆ ಗೋದಾವರಿ ನದಿಯೆಂದೂ ದಕ್ಷಿಣಕ್ಕೆ ಕಾವೇರಿ ನದಿಯೆಂದೂ ಹೇಳುತ್ತಿದ್ದರು. ಪಶ್ಚಿಮಕ್ಕೆ ಅರಬ್ಬೀ ಸಮುದ್ರವೇ ಮೇರೆಯಾಗಿತ್ತು. ಪೂರ್ವದಿಕ್ಕಿನಲ್ಲಿ ಮಾತ್ರ ಯಾವುದೊಂದು ನಿಷ್ಕೃಷ್ಟವಾದ ಪ್ರಕೃತಿ ರೇಖೆಯೂ ಇದ್ದಿರಲಿಲ್ಲ. ಈಗ ಕನ್ನಡ ನಾಡು ಕಾರಣಾಂತರಗಳಿಂದ ಮೊದಲಿನಷ್ಟು ವಿಸ್ತಾರವಾಗಿಲ್ಲ. ತಮಿಳರು, ತೆಲುಗರು ಮತ್ತು ಮರಾಟೆಯುವರು ಗಡಿನಾಡುಗಳನ್ನು ಒತ್ತರಿಸಿಕೊಂಡು ಬಂದುದರಿಂದ ಕೆಲವು ಪ್ರಾಂತಗಳಲ್ಲಿ ಅನ್ಯಭಾಷೆಯವರ ಪ್ರಾಬಲ್ಯವುಂಟಾಗಿದೆ. ಮೈಸೂರು ಸಂಸ್ಥಾನವು ಸಮುದ್ರತೀರವನ್ನೂ

ಕನ್ನಡ ನಾಡಿನ ಕೆಲವು ಜಿಲ್ಲೆಗಳನ್ನೂ ರಾಜಕೀಯ ಕಾರಣಗಳಿಂದ ಹಿಂದೆ ಕಳೆದುಕೊಂಡಿತು. ಆದುದರಿಂದ ಕನ್ನಡಿಗರಲ್ಲಿ ಅರ್ಧಭಾಗ ಜನರು ಮೈಸೂರು ಸಂಸ್ಥಾನದಲ್ಲಿಯೂ ಉಳಿದ ಅರ್ಧ ಬ್ರಿಟಿಷ್ ಇಂಡಿಯಾ ಮತ್ತು ನೈಜಾಂ ರಾಷ್ಟ್ರಗಳಲ್ಲಿಯೂ ಸೇರಿ ಹೋಗಿದ್ದಾರೆ. ಸದ್ಯದಲ್ಲಿ ಈ ಸಂಸ್ಥಾನದ ಮೇರೆಗಳು ಈ ರೀತಿಯಾಗಿವೆ :—

ಉತ್ತರದಲ್ಲಿ.—ಧಾರ್ವಾಡ, ಬಳ್ಳಾರಿ, ಅನಂತಪುರ ಜಿಲ್ಲೆಗಳು.

ಪೂರ್ವದಲ್ಲಿ.—ಚಿತ್ತೂರು, ಉತ್ತರ ಆರ್ಕಾಟ್ ಮತ್ತು ಶಾಲ್ಯದ ಜಿಲ್ಲೆಗಳು.

ದಕ್ಷಿಣದಲ್ಲಿ.—ಕೊಯಮುತ್ತೂರು, ನೀಲಗಿರಿ ಮತ್ತು ಮೈನಾಡು ಜಿಲ್ಲೆಗಳು.

ಪಶ್ಚಿಮದಲ್ಲಿ.—ಕೊಡಗು, ಉತ್ತರ ಕನ್ನಡ ಮತ್ತು ದಕ್ಷಿಣಕನ್ನಡ ಜಿಲ್ಲೆಗಳು.

ಸಾಮಾನ್ಯವಾದ ಮೇಲ್ಮೈ.

ಮೈಸೂರು ಸಂಸ್ಥಾನವು ಪ್ರಸ್ಥಭೂಮಿಯಾಗಿದೆ. ಆದರೆ ಸಮತಲವಾದ ಮೈದಾನವಾಗಿಲ್ಲ. ಪೂರ್ವಘಟ್ಟಗಳನ್ನು ಹತ್ತಿಬಂದರೆ ಸಂಸ್ಥಾನದ ಎಲ್ಲೆ ದೊರೆಯುತ್ತದಷ್ಟೆ. ಅಲ್ಲಿಂದ ಪಶ್ಚಿಮಕ್ಕೆ ಬೆಂಗಳೂರುವರೆಗೂ ನೆಲವು ಏರುತ್ತ ಬರುವುದು. ಬೆಂಗಳೂರು ಸಮುದ್ರಮಟ್ಟದಿಂದ 3,021 ಅಡಿಗಳಷ್ಟು ಎತ್ತರವಾಗಿದೆ. ಮೇಲ್ಮೈ ವಿಚಾರದಲ್ಲಿ ಈ ರೀತಿ ಹೇಳಬಹುದು. ಸಾಮಾನ್ಯವಾಗಿ ಬೆಂಗಳೂರಿಂದ ನಾಲ್ಕು ದಿಕ್ಕುಗಳಿಗೂ ನೆಲವು ಇಳಿಜಾರಾಗುತ್ತ ಹೋಗುವುದು. ಉತ್ತರದ ಸೀಮಾದೇಶವು ಮತ್ತು ದಕ್ಷಿಣದ ಸೀಮಾದೇಶವು ಸಮುದ್ರಮಟ್ಟದಿಂದ ಸುಮಾರು 2,000 ಅಡಿಗಳಷ್ಟು ಎತ್ತರವಾಗಿದ್ದು, 3,000 ಅಡಿಗಳಷ್ಟು ಎತ್ತರವಾಗಿರುವ ಮಧ್ಯಭಾಗದ ಕಡೆಗೆ—ಎಂದರೆ ಕೃಷ್ಣಾ ಕಾವೇರಿ ನದಿಗಳ ಜಲಾನಯನ ಭೂಮಿ ಪ್ರತ್ಯೇಕವಾಗುವ ಮಧ್ಯರಾಷ್ಟ್ರದ ಕಡೆಗೆ—ಏರುತ್ತ ಬರುವುದು. ಚಿತ್ರದುರ್ಗದ ಬೆಟ್ಟಗಳಿಂದ ವಾಯುವ್ಯದ ಕಡೆಗೆ ಇಳಿಜಾರಾಗುತ್ತ ಹೋಗಿ ಹರಿಹರದ ಬಳಿ 1,754 ಅಡಿಗಳಷ್ಟು ಎತ್ತರಕ್ಕೆ ನಿಲ್ಲುವುದು. ಹರಿಹರವೇ ಬಹುಶಃ ಸಂಸ್ಥಾನದಲ್ಲಿ ಬಹಳ ತಗ್ಗಾದ ಸ್ಥಳವೆಂದು ಹೇಳ

ಬಹುದು.* ಶ್ರೀರಂಗಪಟ್ಟಣದಿಂದ ನೈರುತ್ಯದ ಕಡೆಗೆ ನೆಲವು ಇಳಿಜಾರಾ ಗುತ್ತ ಗೋಡೆಗಳಂತಿರುವ ಕೊಡಗಿನ ಬೆಟ್ಟಗಳನ್ನೂ ನೀಲಗಿರಿಯ ಬೆಟ್ಟ ಗಳನ್ನೂ ಹಠಾತ್ತಾಗಿ ಸಂಧಿಸುತ್ತದೆ. ಇದೇ ರೀತಿ ಶ್ರೀರಂಗಪಟ್ಟಣದಿಂದ ವಾಯುವ್ಯದ ಕಡೆಯಲ್ಲಿ ಇಳಿಜಾರಾಗುವ ನೆಲವು ಪಶ್ಚಿಮ ಘಟ್ಟಕ್ಕೆ ಸೇರಿದ ಮಂಜರಾಬಾದಿನ ಮತ್ತು ನಗರದ ಬೆಟ್ಟಗಳನ್ನು ಸಂಧಿಸುತ್ತದೆ.

ಸಂಸ್ಥಾನದ ಮೇಲ್ಮೈ ಒಂದೇ ಸಮನಾಗಿರದೆ ಅನೇಕ ಬೆಟ್ಟದ ಸಾಲುಗಳಿಂದ ಮತ್ತು ಒಂಟೊಂಟಿಯಾಗಿ ಎದ್ದಿರುವ ಬೆಟ್ಟಗಳಿಂದ ವಿಭಕ್ತವಾಗಿದೆ. ಈ ಬೆಟ್ಟಗಳು ದಕ್ಷಿಣೋತ್ತರವಾಗಿಯೂ, ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗೆ ಹೆಚ್ಚುಕಡಮೆ ಸಮಾನಾಂತರವಾಗಿಯೂ ಹಬ್ಬಿ ರುವುವು. ಆಯಾ ಸಾಲುಗಳಗಿರುವ ದೂರವು ಒಂದೇ ಸಮನಾಗಿಲ್ಲ, ಬೇರೆ ಬೇರೆಯಾಗಿದೆ. ಈ ಕಾರಣದಿಂದ ಕೆಲವು ವೇಳೆ ಅಗಲವಾದ ಕಣಿ ವೆಯ ಪ್ರದೇಶಗಳೂ, ಮತ್ತೆ ಕೆಲವು ವೇಳೆ ಕಿರಿದಾದ ಕಣಿವೆಯ ಪ್ರದೇಶ ಗಳೂ ದೊರೆಯುವು. ಒಂಟೊಂಟಿಯಾಗಿರುವ ಬೆಟ್ಟಗಳಾದರೋ ಇದ್ದ ಕ್ಕಿದ್ದಹಾಗೆ 4,000--5,000 ಅಡಿಗಳಷ್ಟು ಎತ್ತರವಾಗಿ ಎದ್ದು ಹಿಂದಿನ ಕಾಲದ ಕೋಟೆಗಳ ಕಿರೀಟ ಶೇಷವನ್ನು ಧರಿಸಿ ಅಲ್ಲಲ್ಲಿ ನೋಡಿಕೊಳ್ಳುತ್ತಿ ರುವ ರಕ್ಷಕ ಭಟರಂತೆ ನಿಂತಿವೆ. ದುರ್ಭೇದ್ಯವಾದ ಈ ದುರ್ಗಗಳನ್ನು ನೋಡಿದರೆ ಸಂಸ್ಥಾನದ ಜನರು ಪದೇ ಪದೇ ಯುದ್ಧಗಳಲ್ಲಿ ತೊಡಗುತ್ತಿ ದ್ದರೆಂದು ತಿಳಿಯುತ್ತದೆ.

ಮೇಲೆ ಹೇಳಿದ ಕಾರಣಗಳಿಂದ ಸಮತಲ ಮೈದಾನವೆಂದು ಹೇಳಿಸಿ ಕೊಳ್ಳುವ ಪ್ರದೇಶ ಸ್ವಲ್ಪವಾದರೂ ಈ ಪ್ರಸ್ಥಭೂಮಿಯಲ್ಲಿ ದೊರೆಯದು. ಬೆಟ್ಟಗುಡ್ಡಗಳಿಂದಲೂ, ಹಳ್ಳ ತಿಟ್ಟು ಕಣಿವೆಗಳಿಂದಲೂ ಮೇಲ್ಮೈ ತುಂಬಿ ಹೋಗಿದೆ. ಕೆಲವು ವೇಳೆ ಮೈಲಿಯೊಂದಕ್ಕೆ 10-12 ಅಡಿಗಳಷ್ಟು ಇಳಿ ಜಾರೂ ಮತ್ತೆ ಕೆಲವು ಕಡೆ 60 ರಿಂದ 80 ಅಡಿಗಳಷ್ಟು ಇಳಿಜಾರೂ ಇರುವುದು. ಚಪ್ಪಟೆಯಾದ ಮೈದಾನವು ಒಂದು ಚದರಮೈಲಿಯಷ್ಟಾ ದರೂ ದೊರೆಯುವುದಿಲ್ಲ.

---

* ಸಾಗರ ತಾಲ್ಲೂಕಿನಲ್ಲಿರುವ ಭೀಮೇಶ್ವರ ಕಣಿವೆಯು ಇನ್ನೂ ತಗ್ಗಿನಲ್ಲಿ 278 ಅಡಿಗಳಷ್ಟು ಎತ್ತರ ಮಾತ್ರ ಇರುತ್ತದೆ.

ಬೆಟ್ಟಗಳು ಮತ್ತು ಅವುಗಳ ವರ್ಣನೆ.

ಮೈಸೂರು ಸಂಸ್ಥಾನವು ಪೂರ್ವ ಮತ್ತು ಪಶ್ಚಿಮ ಘಟ್ಟಗಳಿಗೆ ಸೇರಿಕೊಂಡು ಹರಡಿದೆಯೆಂದು ಹಿಂದೆ ಹೇಳಿದೆಯಷ್ಟೆ. ಪಶ್ಚಿಮಘಟ್ಟಗಳ ಶ್ರೇಣಿಯಲ್ಲಿ ಕೊಡಚಾದ್ರಿ, ವರಾಹ ಪರ್ವತ ಮತ್ತು ಕುದುರೆಯ ಮುಖ ಎಂಬ ಉನ್ನತವಾದ ಶಿಖರಗಳಿವೆ. ಕೊಡಚಾದ್ರಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿದೆ. ನಗರದ ತಾಲ್ಲೂಕಿನಲ್ಲಿರುವ ಹೊಸನಗರದಿಂದ (ಕಲ್ಲೂರು ಕಟ್ಟೆ) ಸುಮಾರು ವಾಯುವ್ಯದಿಕ್ಕಿನಲ್ಲಿ ಹತ್ತು ಹನ್ನೆರಡು ಮೈಲಿಗಳ ದೂರ ಹೋಗುವುದರೊಳಗಾಗಿ ಪಶ್ಚಿಮಘಟ್ಟಗಳು ಸಿಕ್ಕುವುವು. ಸಂಪೇಕಟ್ಟೆಯ ಕಾನಿನೊಳಗೆ ಇರ್ಕಡೆಗಳಲ್ಲೂ ಬೆಳದಿರುವ ಭೂತಾಕಾರದ ಹೆಬ್ಬಲಸು, ಸಂಪಿಗೆ ಮತ್ತು ದೂಪದ ಮರಗಳನ್ನು ಹಾಯ್ದು ಹೋಗುತ್ತ, ವಿವಿಧ ವರ್ಣಗಳ ಪಕ್ಷಿ ಕುಲಗಳನ್ನು ನೋಡುತ್ತ, ಅವುಗಳ ಮನೋಹರ ಗೀತಗಳನ್ನಾಲಿಸುತ್ತ, ಆಗೊಂದು ಈಗೊಂದು ಕೇಳಿಸುವ ಕ್ರೂರ ಮೃಗ ಗರ್ಜನೆಯಿಂದ ನಡುಗುತ್ತ ಸಂಪೆಯ ಕಟ್ಟೆಯನ್ನು ಸೇರಿದರೆ ಗಗನ ಚುಂಬಿಗಳಾಗಿ ಬಿಳಿಮುಗಿಲಿನಿಂದ ಮುಚ್ಚಿರುವ ಪರ್ವತಾಗ್ರಗಳ ಸೊಬಗನ್ನು ನೋಡಬಹುದು. ಕೊಡಚಾದ್ರಿಯ ಶಿಖರಕ್ಕೆ ಅಲ್ಲಿಂದ ಏಳೆಂಟು ಮೈಲಿಗಳಷ್ಟುದೂರ ಹತ್ತಿ ಹೋಗಬೇಕು. ಮುಂದೆ ಗುಳುಗಳನೆ ಏಳುತ್ತಿರುವ ಬುಗ್ಗೆಗಳ ಶೀತಳ ಸ್ವಾದೋದಕ, ಜಂಬು ಜಂಬೀರ ಬಕ್ಕೆ ಪಲಸು ಮುಂತಾದ ಫಲವೃಕ್ಷಗಳು, ಕೆಲವೆಡೆಗಳಲ್ಲಿ ದಾರಿಯುದ್ದಕ್ಕೂ ಸೂರ್ಯತಾಪ ನಿವಾರಕವಾಗಿ ವನದೇವಿ ಬೆಳಸಿರುವ ಲತಾಮಂಟಪಗಳು, ಇವುಗಳನ್ನು ಅನುಭವಿಸುತ್ತ, ಆಸ್ವಾದಿಸುತ್ತ ಆನಂದಿಸುತ್ತ ಹೋದರೆ, ಕಟ್ಟಕಡೆಗೆ ಇರ್ಕಡೆಗಳಲ್ಲೂ ಪಾತಾಳಕ್ಕಿಳಿದುಹೋಗಿರುವ ಕಮರಿಗಳನ್ನು ದಿಟ್ಟಿಸಲಾರದೆ ಭಯಭ್ರಾಂತರಾಗಿ ಮಂದಗಮನದಿಂದ ಮುಂಬರಿದು ಶಿಖರವನ್ನು ಸೇರುತ್ತೇವೆ. ಅಲ್ಲಿಯೂ ಒಂದು ಈಶ್ವರನ ಗುಡಿ! ಒಂದು ಮಂಟಪ! ಯಾವ ಭಕ್ತಾದಿಗಳು ಬರುವರೆಂದು ಭಗವಂತನು ಕಾದಿರುವನೋ! ಕೈ ಹಾಕದರೆ ಸಿಕ್ಕುವಂತೆ ತೋರುವ ಅರಬ್ಬೀ ಸಮುದ್ರವನ್ನು ಪರಮೇಶ್ವರನು ನೋಡುತ್ತ ಅಲ್ಲಿಯೇ ಅಚಲನಾಗಿ ನಿಂತಿರಬಹುದು.

ಎಡಬಲಗಳಲ್ಲಿ ಈ ಪರ್ವತ ಶ್ರೇಣಿಯ ಬುಡವು ಮಂಜುಮುಸುಕಿದ ಅಗಾಧ ಪ್ರಪಾತದ ತಳದಲ್ಲಿ ಎಲ್ಲಿಯೋ ಅಡಗಿಹೋಗಿದೆ. ಆ ಪ್ರಪಾತ

ಕ್ಕಾದರೋ ಸಾವಿರಾರು ಅಡಿಗಳೆಂಬುದು ಲಕ್ಷ್ಯವೇ ಇಲ್ಲ. ನಾಲ್ಕೈದು ಸಾವಿರ ಅಡಿಗಳವರೆಗೆ ಹಠಾತ್ತಾಗಿ ಇಳಿದು ಕಡಿದಾದ ಗೋಡೆಗಳಂತೆ ನಿಂತಿರುವ ಆ ಪ್ರಪಾತ ಶ್ರೇಣಿಯನ್ನು ಮೇಲಿಂದ ನೋಡಿದರೆ ಎದೆಯು ಝುಲ್ಲೆನ್ನುತ್ತದೆ; ಕಣ್ಣುಗಳು ಸುತ್ತಿಕೊಂಡು ಬರುತ್ತವೆ. ಈ ಪರ್ವತ ಶ್ರೇಣಿ ಹಾಗೆಯೇ ಉತ್ತರಕ್ಕೆ ಹಬ್ಬಿ ಸಾಗರದ ತಾಲ್ಲೂಕಿನಲ್ಲಿ ಗೋವರ್ಧನ ಗಿರಿಯನ್ನು ರೂಪಿಸಿದೆ. ನಿರ್ಮಾನುಷವಾದ ಪ್ರದೇಶದಲ್ಲಿ, ಗೊಂಡಾ ರಣ್ಯಗಳ ಮಧ್ಯದಲ್ಲಿ ಸೃಷ್ಟಿಯ ಅಂತ್ಯ ಸೀಮೆಯಿದೆಂಬಂತೆ ಆ ಗೋವರ್ಧನ ಗಿರಿ ಪ್ರಶಾಂತವಾಗಿ ಯೋಗಾರೂಢನಾದ ಪರ್ವತ ರಾಜನಂತೆ ನಿಂತಿದೆ. ದಕ್ಷಿಣದಿಕ್ಕಿನಲ್ಲಿ ಈ ಪರ್ವತಶ್ರೇಣಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಹಾದು ವರಾಹ ಪರ್ವತ, ಕುದುರೆಯ ಮುಖ ಮತ್ತು ಬಲ್ಲಾಳರಾಯನದುರ್ಗಗಳನ್ನುಂಟು ಮಾಡಿದೆ. ಅರಬ್ಬೀ ಸಮುದ್ರದ ಕಡೆಯಿಂದ ಬರುತ್ತಿದ್ದ ನಾವಿಕರಿಗೆ ಪೂರ್ವ ಕಾಲದಲ್ಲಿ ಕುದುರೆಯಮುಖವು ಒಂದು ಹೆಗ್ಗುರುತಾಗಿದ್ದಿತು. ಕಡೂರು ಡಿಸ್ಟ್ರಿಕ್ಟಿನ ನೈರುತ್ಯಮೂಲೆಯಲ್ಲಿರುವ ಈ ಶಿಖರವು ಆ ನಾವಿಕರಿಗೆ ಕುದುರೆಯ ಮುಖದಂತೆ ಕಾಣುತ್ತಿದ್ದುದರಿಂದ ಆ ಹೆಸರು ಬಂದಿರುವುದಾಗಿ ತಿಳಿದಿದೆ.

ಪೂರ್ವ ಮತ್ತು ಪಶ್ಚಿಮಘಟ್ಟಗಳಲ್ಲದೆ ದೇಶದಮೇಲೆ ಇನ್ನೂ ಅನೇಕ ಬೆಟ್ಟದ ಸಾಲುಗಳಿವೆ. ಇವುಗಳನ್ನು ಸ್ಥೂಲವಾಗಿ ಮೂರು ಪಂಗಡಗಳಲ್ಲಿ ಸೇರಿಸಬಹುದು. ಇವು ಕ್ರಮವಾಗಿ (i) ಪಶ್ಚಿಮಘಟ್ಟಗಳಿಗೆ ಸಮೀಪವಾದ ಪಶ್ಚಿಮ ಶ್ರೇಣಿಗಳು (ii) ಪೂರ್ವಘಟ್ಟಗಳಿಗೆ ಸಮೀಪ ವಾದ ಪೂರ್ವಶ್ರೇಣಿಗಳು (iii) ಇವುಗಳೆರಡಕ್ಕೂ ಮಧ್ಯದಲ್ಲಿರುವ ಮಧ್ಯ ಶ್ರೇಣಿಗಳು. ಈ ಶ್ರೇಣಿಗಳಿಗೆ ಸೇರಿಕೊಂಡು ಉಪಶ್ರೇಣಿಗಳೂ ಉಂಟು.

I. ಪಶ್ಚಿಮದಲ್ಲಿರುವ ಶ್ರೇಣಿ ಸುಮಾರು 75°-30′ ರೇಖಾಂಶ ರೇಖೆಯನ್ನನುಸರಿಸಿ ಹಬ್ಬಿರುತ್ತದೆ. ಈ ಶ್ರೇಣಿಯ ದಕ್ಷಿಣದ ಸರಹದ್ದು ಬಲ್ಲಾಳರಾಯನದುರ್ಗ, ಉತ್ತರದ ಸರಹದ್ದು ಷಿಕಾರಿಪುರ. ಇದು ಷಿಕಾರಿಪುರದಿಂದ ಮುಂದಕ್ಕೂ ಉತ್ತರದಿಕ್ಕಿಗೆ ಹಾದು ಹೋಗಿದೆ. ಈ ಪಶ್ಚಿಮ ಶ್ರೇಣಿಗೆ ಸೇರಿದ ಉಪಶ್ರೇಣಿಯೊಂದು ಕೆಲವು ಮೈಲಿಗಳದೂರ ದಲ್ಲಿ ಪೂರ್ವದಿಕ್ಕಿನಲ್ಲಿದೆ. ಇದೇ ಬಾಬಾಬುಡರ್ ಬೆಟ್ಟಗಳ ಶ್ರೇಣಿ. ಇದು ಹೊನ್ನಾಳಿಯ ಮೇಲುಗಡೆ ತುಂಗಭದ್ರಾ ತೀರದಿಂದ ಹಿಡಿದು ಸೂಳೇಕೆರೆಯ ಮಾರ್ಗವಾಗಿ ದಕ್ಷಿಣಕ್ಕೆ ಮೂಡಗೆರೆಯ ವರೆಗೂ ಬರುತ್ತದೆ.

ಚಿಕ್ಕಮಗಳೂರಿಗೆ ಸುಮಾರು ಹತ್ತು ಹನ್ನೆರಡು ಮೈಲಿಗಳ ದೂರದಲ್ಲಿ ಬಾಬಾಬುಡನ್ ಬೆಟ್ಟಗಳಿರುವುವು. ಚಿಕ್ಕಮಗಳೂರನ್ನು ಬಿಟ್ಟು ನಾಲ್ಕೈದು ಮೈಲಿಗಳದೂರ ಹೋಗುವುದರೊಳಗಾಗಿ ಕಾಡು ಸಿಕ್ಕುತ್ತದೆ. ಆದರೆ ಪಶ್ಚಿಮಘಟ್ಟಗಳ ಒತ್ತಿನಲ್ಲಿರುವ ಆ ಕಾಡುಗಳ ಗಭೀರತೆಯಾಗಲಿ, ಆ ಭೂತಪ್ರಮಾಣದ ಅದ್ಭುತ ವೃಕ್ಷ ಪಂಕ್ತಿಗಳಾಗಲಿ, ಆ ಭೀಕರ ನಿಶಾಪರಿಸರಣವಾಗಲಿ ಇಲ್ಲಿಲ್ಲ. ಬೆಟ್ಟವನ್ನು ಏರುವುದಕ್ಕಿರುವ ಸೊಗಸಾದ ರಸ್ತೆಯಲ್ಲಿ, ಸುತ್ತಿಸುತ್ತಿ ಹತ್ತುತ್ತ ಮೇಲಕ್ಕೆ ಹೋಗುತ್ತಿದ್ದರೆ ಕಾಫಿಯ ತೋಟಗಳೂ ಸಣ್ಣಪುಟ್ಟ ಹಳ್ಳಿಗಳೂ ನಮ್ಮೊಡನೆ ಗಗನಾಭಿಮುಖವಾಗಿ ಎದ್ದುಬರುತ್ತಿರುವಂತೆ ಭಾಸವಾಗುವುದು. ಬೆಟ್ಟದ ಹಿಂಭಾಗಕ್ಕೆ ಹೋಗುತ್ತಲೂ ನಮ್ಮ ಕಣ್ಣುಮುಂದೆ ಎಂತಹ ದೃಶ್ಯ! ಪ್ರಕೃತಿದೇವಿಯ ಇಂತಹ ಸೌಂದರ್ಯ ರಾಶಿಯ ಸೂರೆಯನ್ನು ನಾವು ಮತ್ತೆಲ್ಲಿಯೂ ಕಾಣಲಾರೆವು. ಈ ದೃಶ್ಯವು ಅನಿರೀಕ್ಷಿತವಾಗಿ ಸಂಘಟಿಸುವುದರಿಂದ ನಾವು ಒಮ್ಮಿಂದೊಮ್ಮೆ ಚಮಕಿತರಾಗಿ, ಭೂಲೋಕದಿಂದೆಲ್ಲಿಯೋ ಮನಮೋಹಕವಾದ ಊರ್ಧ್ವಲೋಕಕ್ಕೆ ಬಂದಂತೆ ಸ್ತಬ್ಧರಾಗುತ್ತೇವೆ. ಆ ವಿಸ್ತಾರವಾದ ಸೌಂದರ್ಯಸಾಗರದ ಅಂಚಿನಲ್ಲಿ ನಿಂತ ನಾವು "ಈ ಸೃಷ್ಟಿಯ ಮುಂದೆ, ಆ ಸೃಷ್ಟಿಕರ್ತನ ಮುಂದೆ ಈ ಹುಲುಮನುಜನೆಲ್ಲಿ!" ಎಂದು ಹೇಳುತ್ತ ಅದ್ಭುತ ಮತ್ತು ಶಾಂತಿರಸಗಳಲ್ಲಿ ಮಗ್ನರಾಗುತ್ತೇವೆ. ಅಗಾಧವಾದ ಪಚ್ಚೆಯ ಬಟ್ಟಲಿನಂತೆ ತರುಲತಾದಿಗಳಿಂದ ಹಸುರುಗೂಡಿ ಮೂರು ದಿಕ್ಕುಗಳಲ್ಲೂ ಕೆಳಕ್ಕಿಳಿದು ಹೋಗಿರುವ ತಳಭಾಗ; ಉಳಿದಿರುವ ದಿಕ್ಕಿನಲ್ಲಿ ಕಣ್ಣು ಓಡುವವರೆಗೂ ಕ್ಷೀರ ಸಮುದ್ರದ ತರಂಗಮಾಲೆಗಳಂತೆ ಏರಿಳಿತಗಳಿಂದ ಕೂಡಿರುವ ಮಂಜುಮುಸುಕಿದ ಪರ್ವತಶಿಖರಮಾಲೆಗಳು; ಪುಷ್ಪಕ ವಿಮಾನಗಳಂತೆ ತಳದಿಂದ ಮೇಲಕ್ಕೆ ಮೆಲ್ಲಮೆಲ್ಲನೆ ಏರುತ್ತಿರುವ ಬಿಳಿಯ ಮೋಡಗಳು; ನಮ್ಮ ಮಾರ್ಗಾಯಾಸವನ್ನು ಹೋಗಲಾಡಿಸಲು ಪನ್ನೀರನ್ನು ಚಿಮುಕಿಸಿದಂತೆ ಆಗಾಗ್ಗೆ ತುಂತುರಾಗಿ ಬೀಳುತ್ತಿರುವ ಶೈತ್ಯ ಸೌರಭ್ಯಭರಿತವಾದ ಮಂಜಿನಮಳೆ; ನಮಗೆ ಸ್ವಾಗತವನ್ನು ಬಯಸುತ್ತಿರುವ ಪಕ್ಷಿಕುಲದ ರಾಗಾಲಾಪನೆ; ನಮ್ಮ ಅಂತರಂಗವನ್ನು ಒಲಿಸಿಕೊಳ್ಳುತ್ತಿರುವ ಮೃದುಪದಧ್ವನಿಯ ಶುಭ್ರವರ್ಣದ ನದೀ ಕಿಶೋರಿಗಳು. ಈ ಪರಿಸರಣದಲ್ಲಿ ಯಾರ ಮನಸ್ಸುತಾನೆ ಉದಾತ್ತವೂ ನಿರ್ಮಲವೂ ಆಗದಿರದು!



ಬಾಬಾಬುಡನ್ ಬೆಟ್ಟ

ಮುಂದೆ ಹೋಗುತ್ತ ಹೋಗುತ್ತ ಅತ್ತಿಗುಂಡಿಯೆಂಬ ಹಳ್ಳಿಯನ್ನು ಸೇರುವೆವು. ಶಿಖರವನ್ನು ಮುಟ್ಟಬೇಕಾದರೆ ಇನ್ನೂ ಮೂರು ಮೈಲಿಗಳ ದೂರ ನಡೆಯಬೇಕು. ಅಲ್ಲಿಗೆ ಹೋದರೆ ಬಲಗಡೆ ಮುಳ್ಳೈಯನಗಿರಿ ಎಡಗಡೆ ಕಲ್ಹತ್ತಿಗಿರಿ ಗೋಚರಿಸುತ್ತವೆ. ಮುಂಭಾಗದ ದೂರದ ತಗ್ಗಿನಲ್ಲಿ ಚಿಕ್ಕಮಗಳೂರು ಕಾಣುವುದು. ಶಿಖರದ ಮೇಲೆ ದತ್ತಾತ್ರೇಯ ಪೀಠವಿದೆ. ಇದು ಸ್ವಲ್ಪ ತಗ್ಗಿನಲ್ಲಿರುವ ಒಂದು ಗುಹೆ. ಗುಹೆಯ ಬಲಭಾಗದಲ್ಲಿ ಒಂದು ಜೊತೆ ಪಾದುಕೆಗಳಿವೆ. ಅಲ್ಲಿಯೇ ಒಂದು ಗವಿಯ ಬಾಗಿಲು ಕಾಣುವುದು. ದತ್ತಾತ್ರೇಯರು ಆ ಗವಿಯಿಂದ ಬಂದು ಧರ್ಮೋದ್ಧಾರ ಮಾಡುವರೆಂದು ಹಿಂದುಗಳು ನಂಬಿದ್ದಾರೆ. ಅದು ಬಾಬಾಬುಡನ್ ಎಂಬ ವನು ಅದೃಶ್ಯನಾದ ಸ್ಥಳವೆಂದು ಮುಸಲ್ಮಾನರು ತಿಳಿದಿದ್ದಾರೆ. ಗುಹೆಯ ಎಡಗಡೆಯಲ್ಲಿ ಒಂದು ಹೊಂಡವಿದೆ. ಇದರ ಮಣ್ಣಿನಲ್ಲಿ ರೋಗನಿವಾರಕ ಗುಣವಿದೆಯೆಂದು ಕೆಲವರು ಹೇಳುತ್ತಾರೆ.

ಬಾಬಾಬುಡನ್ ಬೆಟ್ಟದ ಸಾಲು ಕುದುರೆಯ ಲಾಳದ ಆಕಾರದಲ್ಲಿ ಹಬ್ಬಿದೆ. ಹೆಬ್ಬೆಯಿಂದ ಮೊದಲು ಪೂರ್ವಾಭಿಮುಖವಾಗಿ ಹದಿನೈದು ಮೈಲಿಗಳವರೆಗೆ ಹೊರಟು ಅನಂತರ ದಕ್ಷಿಣಕ್ಕೆ ೨೦ ಮೈಲಿಗಳವರೆಗೂ ಹಬ್ಬಿದೆ. ದಕ್ಷಿಣದ ಕೊನೆಯಲ್ಲಿರುವ ದೇವೀರಮ್ಮನ ಗುಡ್ಡದ ಮೇಲೆ ದೀಪಾವಳಿಯ ಕಾಲಕ್ಕೆ ದೀಪವನ್ನು ಹಚ್ಚುವರು. ಆಗ ಆ ದೀಪವು ಸುತ್ತಲೂ ಬಹುದೂರದ ವರೆಗೆ ಕಾಣಿಸುತ್ತದೆ.

II. ಮಧ್ಯ ಶ್ರೇಣಿ ಚಿತ್ರದುರ್ಗ ಡಿಸ್ಟ್ರಿಕ್ಟಿನ ಉತ್ತರದಲ್ಲಿರುವ ಕನಕುಪ್ಪೆಯಿಂದ ಚಿತ್ರದುರ್ಗ ಬೆಟ್ಟಗಳು, ಹಾಗಲವಾಡಿ, ಚುಂಚನಗಿರಿ, ಮೇಲುಕೋಟೆ, ಫ್ರೆಂಚ್‌ರಾಕ್ಸ್ ಬೆಟ್ಟಗಳು, ಚಾಮುಂಡಿ ಬೆಟ್ಟಗಳು—ಈ ರೀತಿ ಹಬ್ಬಿ ಗೋಪಾಲಸ್ವಾಮಿಯ ಬೆಟ್ಟದಲ್ಲಿ ಮುಕ್ತಾಯವಾಗುತ್ತದೆ.

ಗೋಪಾಲಸ್ವಾಮಿಯ ಬೆಟ್ಟವು ಈ ಸಂಸ್ಥಾನದ ದಕ್ಷಿಣದಲ್ಲಿದೆ. "ಅದರ ಶಿಖರವನ್ನು ಸೇರಬೇಕಾದರೆ ಈಗ ಹೊಸದಾಗಿ ದಾರಿ ಮಾಡಿಸಿದ್ದಾರೆ. ಅದರಮೇಲೆ ನಡೆಯುತ್ತ ನಡೆಯುತ್ತ ಹೋದರೆ ಬೆಟ್ಟದಮೇಲೆ ನಡೆಯುತ್ತಿದ್ದೇವೆಂಬ ಭಾವನೆಯೇ ಬರುವುದಿಲ್ಲ. ಕೆಳಗೆ ನೋಡಿದರೆ ದಟ್ಟವಾದ ಕಾಡು ! ನೆಲವೇ ಕಾಣಿಸಲೊಲ್ಲದು. ಎಲ್ಲಿ ನೋಡಿದರೂ ಕಲ್ಲಿಲ್ಲ ; ಬಂಡೆಯಿಲ್ಲ ; ಕುರುಚಲು ಗಿಡಗಳಿಲ್ಲ ; ಮುಳ್ಳುಗಳೂ ಕೂಡ ಇಲ್ಲ ;

ಮೃದುವಾದ ಕರಿಯ ಮಣ್ಣಿನ ನೆಲ; ಅದನ್ನು ಮುಚ್ಚಿಕೊಂಡು ಸ್ವಲ್ಪವೂ ಬಿಡದಂತೆ ದಟ್ಟವಾಗಿ ಪರ್ವತದ ಮೇಲೆಲ್ಲ ಹಸುರು ಬಣ್ಣದ ಮೊಖಮಲ್ಲು ಬಟ್ಟೆಯನ್ನು ಸುಕ್ಕಿಲ್ಲದಂತೆ ಹೊದ್ದಿಸಿದ ಹಾಗಿರುವ ಹುಲುಸಾದ ಹಸುರು ಹುಲ್ಲಿನ ಬೆಳೆ; ಪ್ರಕೃತಿಯೇ ಸೌಮ್ಯರೂಪವನ್ನು ಧಾರಣೆಮಾಡಿ ನಗುತ್ತ ನಗುತ್ತ ಗೋಪಾಲಸ್ವಾಮಿಯ ಸೇವೆಗೆ ನಿಂತು ಅವನ ದರ್ಶನಕ್ಕೆಂದು ಬರುವ ಯಾತ್ರಿಕರನ್ನು ತನ್ನ ಮಕ್ಕಳಂತೆ ಎತ್ತಿ ಆಡಿಸುತ್ತ ಕರೆದುಕೊಂಡು ಹೋಗು ವಂತೆ ಭಾವನೆಯುಂಟಾಗುವುದು. ಹಾಗೆಯೇ ಇದನ್ನು ನೋಡುತ್ತ ನೋಡುತ್ತ ಮೇಲಕ್ಕೆ ಹೋಗುತ್ತಿದ್ದೇವೆಂಬ ಜ್ಞಾನವೇ ಇಲ್ಲದೆ ಎಡಗಡೆಗೆ ತಿರುಗಿ ನೋಡಲು ಎಂತಹ ದಿವ್ಯನೋಟ! ಪೂರ್ವ ಪಶ್ಚಿಮ ಘಟ್ಟಗಳೆಂಬ ಎರಡು ತೋಳುಗಳನ್ನು ಚಾಚಿಕೊಂಡು ನಿಂತಿರುವ ಪ್ರಶಾಂತವೂ, ಗಂಭೀರವೂ ಆದ ನೀಲಗಿರಿಯ ಪರ್ವತ. ದೂರದಲ್ಲಿದ್ದರೂ ಕೈನೀಡಿದರೆ ಸಿಕ್ಕುವಷ್ಟು ಹತ್ತಿರದಲ್ಲಿರುವಂತೆ ತೋರುವ ಪರ್ವತರಾಜಿ! ಮನೋಹರವಾದ ನೀಲವರ್ಣ! ಅದರ ಮೇಲೆ ವಿಶೇಷವಾಗಿ ಪರ್ವತದ ವಕ್ಷಸ್ಥಳದಲ್ಲಿ, ಗಂಗಾ ಪ್ರವಾಹದಂತೆ ತರಂಗ ತರಂಗಗಳ ಆಕಾರವಾಗಿ ಆ ಪರ್ವತದ ಉದ್ದಕ್ಕೂ ಹೋಗುತ್ತಿರುವ ಶುಭ್ರವಾದ ಮೇಘಪಂಕ್ತಿ! ಇಂಥ ಪರ್ವತದ ಅಚಲತೆ, ಸ್ಥೈರ್ಯ, ಔನ್ನತ್ಯ, ಗಾಂಭೀರ್ಯಗಳನ್ನು ನೋಡಿದರೆ, ಹೇಗೋ ನಮ್ಮ ಮನಸ್ಸು ಅಚಲವೂ, ಸ್ಥಿರವೂ, ಉನ್ನತವೂ, ಗಂಭೀರವೂ ಆಗಿ ಅದರಲ್ಲಿದ್ದ ತುಚ್ಛವಾದ ಯೋಚನೆಗಳೆಲ್ಲವೂ ಮಾಯವಾಗಿ ಹೃದಯದಲ್ಲಿ ಅನಿರ್ವಚನೀಯವಾದ ಕೇವಲ ಒಂದೇ ಒಂದು ಅಪೂರ್ವವಾದ ಉದಾತ್ತಭಾವವು ತುಂಬಿಕೊಂಡು ಅಲ್ಲಿ ಆಧಿಪತ್ಯಮಾಡುತ್ತ ಕುಳಿತುಕೊಳ್ಳುವುದು." *

III. ಪೂರ್ವಶ್ರೇಣಿ 77°—77°.–30′ ರೇಖಾಂಶ ರೇಖೆಗಳ ಮಧ್ಯದಲ್ಲಿ ಹಬ್ಬಿರುತ್ತದೆ. ಇದು ಪಾವಗಡದ ಬೆಟ್ಟಗಳಿಂದ ಪ್ರಾರಂಭವಾಗಿ ಮದ್ದಗಿರಿ, ದೇವರಾಯನದುರ್ಗ, ಶಿವಗಂಗೆ, ಸಾವನದುರ್ಗಗಳ ಮಾರ್ಗವಾಗಿ ಬಿಳಿಗಿರಿರಂಗನ ಬೆಟ್ಟದವರೆಗೂ ವ್ಯಾಪಿಸಿದೆ.

ತುಮಕೂರಿನಿಂದ ಪೂರ್ವಕ್ಕೆ ಸುಮಾರು ಹತ್ತು ಮೈಲಿಗಳ ದೂರದಲ್ಲಿ ದೇವರಾಯನ ದುರ್ಗವಿರುವುದು. ಹಿಂದಿನ ಕಾಲದಲ್ಲಿ 'ಆನೆ ಬಿದ್ದ ಜರಿ' ಎಂದು ಹೆಸರಿದ್ದಿತೆಂದೂ, ಚಿಕ್ಕದೇವರಾಜೊಡೆಯರು ಈ ದುರ್ಗ

* ಎ. ಆರ್. ಕೃಷ್ಣಶಾಸ್ತ್ರಿ. ಪ್ರಬುದ್ಧ ಕರ್ಣಾಟಕ ಸಂಚಿಕೆ ೨.

ವನ್ನು ವಶಪಡಿಸಿಕೊಂಡಮೇಲೆ ಈಗಿನ ಹೆಸರು ಬಂದಿತೆಂದೂ ಜನರು ಹೇಳುತ್ತಾರೆ. ತುಮಕೂರಿನಿಂದ ಸುಮಾರು ನಾಲ್ಕೈದು ಮೈಲಿಗಳಷ್ಟು ದೂರ ಹೋಗುವುದರೊಳಗಾಗಿ ಕಾಡೊಂದು ಕಾಣುವುದು. ಆದರೆ ಮಲೆನಾಡಿನಲ್ಲಿ ಘಟ್ಟದ ಬಳಿಯ ಗೊಂಡಾರಣ್ಯಗಳನ್ನೂ, ಬಾಬಾಬುಡ್ಡ ಬೆಟ್ಟಗಳಲ್ಲಿ ಜಾಗರ್ ಕಣಿವೆಯ ದಟ್ಟವಾದ ಕಾಡುಗಳನ್ನೂ ನೋಡಿದವರಿಗೆ ಈ ದೇವರಾಯನ ದುರ್ಗದ ಹಾದಿಯಲ್ಲಿರುವ ಮೋಟು ಮರಗಳ ಗುಂಪು ಕೇವಲ ನಿಕೃಷ್ಟವಾಗಿ ಕಂಡುಬರುವುದುಂಟು. ಆದರೆ ದುಷ್ಟಮೃಗಗಳ ಆವಾಸಸ್ಥಾನವಾಗಿ ಸುತ್ತಲಿನ ಬೈಲುಸೀಮೆಗೆ ಪ್ರತಿರೋಧವಾಗಿ ಬೆಳೆದಿರುವ ಈ ಮೋಟುಮರಗಳ ಕಾಡೇ ಇಲ್ಲಿ ಪರಮಪಾವನವಾಗಿದೆ. ಸುಮಾರು ಏಳು ಮೈಲಿಗಳ ದೂರದಲ್ಲಿ ಬಲಗಡೆ ಕಾಡುಖಾತೆಗೆ ಸೇರಿದ ಒಂದು ಚಿಕ್ಕ ಬಂಗಲೆಯಿದೆ. ಅದರ ಸಮೀಪದಲ್ಲಿ ನಾಮದ ಚಿಲುಮೆಯಿರುವುದು. ಸುಮಾರು $1\frac{1}{4}$ ಅಡಿ ಆಳವಿರುವ ಕಲ್ಲಿನ ಒರಳಿನಲ್ಲಿ ತುಂಬಿ ಹರಿಯುತ್ತಿರುವ ಅಮೃತ ಮಯ ವಾರಿಶಾಖೆಯು ಆಶ್ಚರ್ಯಕರವಾಗಿದೆ. ಒರಳನ್ನು ಬರಿದು ಮಾಡಿದರೆ ಕೆಲವು ನಿಮಿಷಗಳೊಳಗಾಗಿ ಅದು ಕೆಳಗೆ ಸ್ರವಿಸುತ್ತಿರುವ ದ್ರವದಿಂದ ಪುನಃ ತುಂಬಿಕೊಳ್ಳುವುದು. ಇದನ್ನು ಚಿಕ್ಕದೇವರಾಜೊಡೆಯರು ತಮ್ಮ ಆಹ್ನೀಕಕ್ಕೆ ಏರ್ಪಡಿಸಿದರೆಂದು ಜನರು ಹೇಳುತ್ತಾರೆ. ದೇವರಾಯನ ದುರ್ಗದ ತಪ್ಪಲು ವರ್ಷರ್ತು, ಶರದೃತುಗಳಲ್ಲಿ ಕಾಡುಮರಗಳ ಹಸರು ಛಾಯೆಯಿಂದ ಮನೋಹರವಾಗಿರುತ್ತದೆ. ಸುತ್ತಲೂ ಆವರಿಸಿರುವ ಬೆಟ್ಟದ ಒಳಮೈಯೆಲ್ಲ ಶ್ರೀಗಂಧದ ಮರಗಳಿಂದ ನಿಬಿಡವಾಗಿ ಸಂಪದ್ಯುಕ್ತವಾಗಿರುತ್ತದೆ. ಈ ದುರ್ಗವನ್ನು ಹತ್ತುವುದಕ್ಕೆ ಒಳ್ಳೆಯ ರಸ್ತೆಯಿಲ್ಲ. ಮೇಲಕ್ಕೆ ಹೋಗುತ್ತ ಮುಕ್ಕಾಲು ದೂರವನ್ನು ದಾಟಿದರೆ ಜಯಮಂಗಲೀ ನದಿಯ ಉತ್ಪತ್ತಿಸ್ಥಾನವು ಗೋಚರಿಸುವುದು. ದುರ್ಗದಮೇಲೆ ಯೋಗಾನರಸಿಂಹ, ಭೋಗಾನರಸಿಂಹ ದೇವಸ್ಥಾನಗಳೂ ಕೆಲವು ಬಂಗಲೆಗಳೂ, ಒಂದು ಚಿಕ್ಕಹಳ್ಳಿಯೂ ಇವೆ. ಶಿಖರದ ಮೇಲಿರುವ ದೇವಾಲಯದಲ್ಲಿ ಅದಕ್ಕೆ ಸೇರಿದಂತೆ ಒಂದು ಗುಹೆಯೂ, ಪಾತಾಳಗಂಗೆಯೆಂಬ ನಿರ್ಮಲೋದಕ ಸ್ಥಾನವೂ ಇವೆ. ಮೇಲುಭಾಗದ ಬಂಡೆಯ ತುದಿಯಲ್ಲಿ ಒಂದು ಗಂಟೆಯನ್ನು ಕಟ್ಟಿದ್ದಾರೆ. ಧೈರ್ಯಶಾಲಿಗಳು ಕೈನೀಡಿ ಅದನ್ನು ಬಾರಿಸಬಹುದು.

ಇದೇ ಸಾಲಿನಲ್ಲಿರುವ ಮಧುಗಿರಿ ದುರ್ಗವು ಪ್ರಸಿದ್ಧವಾದುದು. ಬಿದನೂರಿನ ರಾಣಿಯಾದ ವೀರಮ್ಮಾಜಿಯನ್ನು ಹೈದರನು ಇಲ್ಲಿ ಸೆರೆ ಹಾಕಿದ್ದ ನೆಂದು ಚರಿತ್ರೆಯಿಂದ ತಿಳಿಯುತ್ತದೆ. ಈ ದುರ್ಗವು ಸಮುದ್ರಮಟ್ಟ ದಿಂದ 3,535 ಅಡಿಗಳಷ್ಟು ಎತ್ತರವಾಗಿದೆ. ಬೆಟ್ಟವು ಮುಂಭಾಗದಲ್ಲಿ ಬಹಳ ಕಡಿದಾಗಿ ಮೇಲಕ್ಕೆ ಮೂಡಿರುವ ಒಂದೇ ಕಲ್ಲಾಗಿ ಕಾಣುವುದು. ಅನೇಕ ಕಡೆಗಳಲ್ಲಿ ಹತ್ತುವುದು ಬಹಳ ಕಷ್ಟ ; ಮೇಲೆ ಒಳ್ಳೆಯ ಬಲವಾದ ಕೋಟೆಯಿದೆ.

ದಕ್ಷಿಣ ದಿಕ್ಕಿನಲ್ಲಿ ಹಬ್ಬಿರುವ ಕಬ್ಬಾಳದುರ್ಗವೂ ಹೀಗೆಯೇ ಚರಿತ್ರೆ ಯಲ್ಲಿ ಪ್ರಸಿದ್ಧವಾದುದು. ಮುಮ್ಮಡಿ ಕೃಷ್ಣರಾಜೊಡೆಯರ ಕಾಲಕ್ಕೂ ಇದು ಕಾರಾಗೃಹವಾಗಿ ಏರ್ಪಾಡಾಗಿತ್ತು. ಮೇಲಿರುವ ಕೋಟೆಯನ್ನು ಘಟಕರಾಜನೆಂಬ ಪಾಳೆಯಗಾರನು ಕಟ್ಟಿದನೆಂದು ತಿಳಿಯುತ್ತದೆ. ಬಿಳಿ ಗಿರಿರಂಗನ ಬೆಟ್ಟ ಈ ಸಾಲಿನಲ್ಲಿ ಬಹಳ ಎತ್ತರವಾದ ಬೆಟ್ಟ. ಇದು ಸಮುದ್ರಮಟ್ಟದಿಂದ 5,091 ಅಡಿಗಳಷ್ಟು ಎತ್ತರವಾಗಿದೆ.

ಈ ಪೂರ್ವಶ್ರೇಣಿಗೆ ಪೂರ್ವ ದಿಕ್ಕಿನಲ್ಲಿ ಕೋಲಾರ ಡಿಸ್ಟ್ರಿಕ್ಟಿನ ಮೂರು ಶಾಖೆಗಳನ್ನು ಹೇಳಬಹುದು. ಒಂದು ಶಾಖೆ ದಕ್ಷಿಣದಲ್ಲಿ ಟೀಕಲ್ ಗುಡ್ಡಗಳಿಂದ ಪ್ರಾರಂಭವಾಗಿ ಉತ್ತರಕ್ಕೆ ಕೋಲಾರದ ಬೆಟ್ಟಗಳನ್ನೂ ಅಂಬಾಜಿದುರ್ಗ, ಇಟಿಕಲ್ ದುರ್ಗ ಇವುಗಳನ್ನೂ ಸೇರಿಸಿಕೊಂಡು ಕಡಪಾ ಜಿಲ್ಲೆಯೊಳಗೆ ಸೇರಿ ಹೋಗುತ್ತದೆ. ಇನ್ನೊಂದು ಶಾಖೆ ಮೊದಲಿನ ಸಾಲಿಗೆ ಪೂರ್ವದಲ್ಲಿ ಮುಡಿಮಡಗು ಸರಹದ್ದಿನಿಂದ, ಕುರುಡುಮಲೆ ಮಾರ್ಗವಾಗಿ ಬೇಟರಾಯನಕೊಂಡ, ಎರ್ರಕೊಂಡದವರೆಗೂ ವ್ಯಾಪಿಸಿದೆ. ಇನ್ನೊಂದು ಶಾಖೆ ಕೋಲಾರದ ವಾಯವ್ಯ ಮೂಲೆಯಲ್ಲಿ ಗುಡಿಬಂಡೆಯಲ್ಲಿ ಪ್ರಾರಂಭ ವಾಗಿ ದಕ್ಷಿಣಕ್ಕೆ ನಂದಿಯದುರ್ಗದ ಮಾರ್ಗವಾಗಿ ಬೆಂಗಳೂರು ಡಿಸ್ಟ್ರಿಕ್ಟಿನ ಬನ್ನೇರುಘಟ್ಟದ ವರೆಗೂ ಹರಡಿದೆ.

ಬೆಂಗಳೂರಿನ ಪಶ್ಚಿಮಕ್ಕಾಗಲಿ, ಉತ್ತರಕ್ಕಾಗಲಿ, ಊರಿನ ಗಲಭೆ ಯನ್ನು ದಾಟಿಹೋದರೆ ದೂರದಲ್ಲಿ ಸಾವನದುರ್ಗ, ಶಿವಗಂಗೆ ಮತ್ತು ನಂದಿಯ ದುರ್ಗಗಳು ಗೋಚರಿಸುತ್ತವೆ. ನಂದಿಯದುರ್ಗವು ಆರೋಗ್ಯ ಕರವಾಗಿಯೂ, ಬೇಸಿಗೆಯಲ್ಲಿ ತಂಪಾಗಿಯೂ, ಇರುವುದು. ಸಮುದ್ರ ಮಟ್ಟದಿಂದ 4,800 ಅಡಿಗಳಷ್ಟು ಎತ್ತರವಾಗಿದೆ. ಮೈಸೂರು ಸಂಸ್ಥಾ

ನವು ಕಮಿಷನರುಗಳ ಆಳಿಕೆಯಲ್ಲಿದ್ದಾಗ ಆ ಅಧಿಕಾರಿಗಳು ಬೇಸಗೆಯಲ್ಲಿ ಈ ದುರ್ಗದಲ್ಲಿ ವಾಸಮಾಡುತ್ತಿದ್ದರು. ಈ ನಂದಿಯ ದುರ್ಗಕ್ಕೆ ಮೆಟ್ಟಲುಗಳಿವೆ, ಇವುಗಳನ್ನು ಹತ್ತಿ ಮೇಲಕ್ಕೆ ಹೋದರೆ ಕೋಟೆಯ ದಿಡ್ಡಿಬಾಗಿಲುಗಳನ್ನು ಸಂಧಿಸಬಹುದು. ಅಲ್ಲಿಂದ ಮುಂದೆ ಒಂದು ಕೈ ತೋಟ, ಅದರ ಮೇಲುಗಡೆಯೇ ಅಮೃತ ಸರೋವರ. ಶಿಖರದ ಮೇಲೆ ಹೋಗಿ ಕೆಳಗೆ ನೋಡಿದರೆ ಸಾವಿರಾರು ಕೆರೆಗಳೂ ಸಣ್ಣಪುಟ್ಟ ಹಳ್ಳಿಗಳೂ, ಡೊಂಕು ಡೊಂಕಾಗಿ ಹರಿದು ಹೋಗುತ್ತಲಿರುವ ನದಿಗಳೂ, ಮಂಜಿನ ಮುಸುಕಿನಲ್ಲಿ ಅಡಗಿಹೋಗಿ ಪಾತಾಳದಲ್ಲಿರುವಂತೆ ಕಾಣುವುವು. ಸಾಯಂಕಾಲವಾಗುತ್ತಲೂ ಬೆಂಗಳೂರಿನ ವಿದ್ಯುದ್ದೀಪಗಳು ಲಕ್ಷ ದೀಪಗಳಂತೆ ಕಾಣುವುವು. ಸುಖವಾಗಿ ಬೀಸುತ್ತಿರುವ ಮಂದಮಾರುತ, ಭೂಮಿಯನ್ನು ಬಿಟ್ಟು ಅಂತರಿಕ್ಷದಲ್ಲಿ ನಿಂತಿರುವಂತೆ ಒಂದು ಭಾವನೆ, ನಂದನವನದಂತೆ ರಮ್ಯವಾದ ಉಪವನ, ಇವುಗಳಿಂದ ನಂದಿಯ ದುರ್ಗವು ರಮಣೀಯವಾದ ಸ್ವರ್ಗಸ್ಥಾನವಾಗಿ ಅನುಭವವಾಗುವುದು. ಬೆಟ್ಟದಮೇಲೆ ಹಲವು ಬಂಗಲೆಗಳೂ ಒಂದು ಹೋಟಲೂ ಇವೆ. ಪೋಲೀಸ್ ಠಾಣೆಯನ್ನೂ, ಆಸ್ಪತ್ರೆಯನ್ನೂ ಪ್ರಯಾಣಿಕರ ಸೌಕರ್ಯಕ್ಕಾಗಿ ಸರ್ಕಾರದವರು ಏರ್ಪಡಿಸಿದ್ದಾರೆ.

ಮಲೆನಾಡು—ಮೈದಾನ.

ಸಂಸ್ಥಾನದ ಪಶ್ಚಿಮ ಭಾಗದಲ್ಲಿ ಬೆಟ್ಟಗಳು ಒತ್ತಾಗಿಯೂ ಅಧಿಕವಾಗಿಯೂ ಇರುವುದರಿಂದ ಆ ಭಾಗವನ್ನೆಲ್ಲ ಮಲೆನಾಡೆಂದು ಕರೆಯುತ್ತೇವೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಶಿಕಾರಿಪುರದಿಂದ ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಪಿರಿಯಾಪಟ್ಟಣದವರೆಗೂ ಒಂದು ಗೆರೆಯನ್ನು ಎಳೆದು ಅಲ್ಲಿಂದ ಬಿಳಿಗಿರಿರಂಗನ ಬೆಟ್ಟಕ್ಕೆ ತಿರುಗಿಸಿದರೆ, ಈ ರೇಖೆಯ ಪೂರ್ವ ಮತ್ತು ಉತ್ತರ ಭಾಗಗಳು ಬಯಲು ಸೀಮೆಯಾಗಿಯೂ ಪಶ್ಚಿಮ ಮತ್ತು ದಕ್ಷಿಣ ಭಾಗಗಳು ಮಲೆನಾಡಾಗಿಯೂ ವಿಂಗಡವಾಗುತ್ತವೆ. ಮಲೆನಾಡಿನಲ್ಲಿ ಅತ್ಯುನ್ನತ ಶಿಖರಗಳು ಮುಗಿಲನ್ನು ಭೇದಿಸಿಕೊಂಡು ವಿಚಿತ್ರಾಕಾರಗಳನ್ನು ತೋರುವುವು. ಈ ಬೆಟ್ಟ ಗುಡ್ಡಗಳ ತಪ್ಪಲುಗಳಲ್ಲಿರುವ ಅಗಾಧವಾದ ಗೊಂಡಾರಣ್ಯಗಳು ಸೂರ್ಯರಶ್ಮಿಯನ್ನು ಕೆಳಕ್ಕೆ ಬೀಳಗೊಡಿಸದಂತೆ ಪರ್ಣಭರಿತವಾಗಿರುವುವು. ಮರಗಳು ನೂರಾರು ಅಡಿಗಳವರೆಗೂ ಎತ್ತ

ರವಾಗಿ ಬೆಳೆದು ಶಾಖೋಪಶಾಖೆಗಳಿಂದಲೂ ತಮ್ಮನ್ನು ಅವಲಂಬಿಸಿದ ಲತಾಪುಂಜಗಳಿಂದಲೂ ರಂಜಿಸುತ್ತವೆ. ನಾನಾವಿಧ ಪಕ್ಷಿಗಳ ಕಲಕಲ ಧ್ವನಿಯಿಂದಲೂ ಮೆಲ್ಲ ಮೆಲ್ಲಗೆ ಧುಮುಕುತ್ತಿರುವ ಜಲಧಾರೆಗಳ ಅವ್ಯಕ್ತ ಮಧುರ ನಾದದಿಂದಲೂ ಈ ಪ್ರದೇಶಗಳು ಮನೋಹರವಾಗಿರುತ್ತವೆ. ಒಮ್ಮೊಂದೊಮ್ಮೆ ಕಾಡುಮೃಗಗಳ ಘರ್ಜನೆ ದೂರದಿಂದ ಕೇಳಿಬಂದು ಎದೆಯನ್ನು ತಲ್ಲಣಗೊಳಿಸುವುದು. ಮನುಷ್ಯ ಸಂಚಾರವು ಅತಿವಿರಳ. ಹತ್ತಾರು ಮೈಲಿಗಳದೂರ ಪ್ರಯಾಣ ಮಾಡಿದರೂ ಹಳ್ಳಿಗಳಾಗಲಿ, ಗುಡಿಸಲುಗಳಾಗಲಿ ಕಣ್ಣಿಗೆ ಬೀಳವು. ಅಲ್ಲಲ್ಲಿ ಹರಿಯುವ ಸೀಳುಹೊಳೆಗಳನ್ನು ದಾಟಿ ಗಿಡಮರಗಳ ಸಂದುಗೊಂದುಗಳಲ್ಲಿ ಬೆಟ್ಟಗಳನ್ನು ಹತ್ತಿ ಇಳಿದರೆ ನಾಲ್ಕು ಗುಡಿಸಲುಗಳಿರುವ ಹಳ್ಳಿ ಸಿಕ್ಕುತ್ತದೆ; ತಿಂಗಳು ಗಟ್ಟಲೆ ಹೊರಗಿನ ಜನರ ಮುಖಗಳನ್ನು ನೋಡದೆ ಬಿಳಿಚಿಕೊಂಡು ಬಾಳುತ್ತಿರುವ ನಿವಾಸಿಗಳು ಕಾಣುತ್ತಾರೆ. ಇರುವ ಅತ್ಯಲ್ಪ ಜನಸಂಚಾರವು ಮಳೆಗಾಲದಲ್ಲಿ ನಿಂತು ಹೋಗುವುದರಿಂದ ಮಲೆನಾಡು ಆಗ ವಿಜನ ಪ್ರದೇಶವಾಗಿ ತೋರುತ್ತದೆ. ಬಯಲು ಸೀಮೆಯ ಕಡೆಗೆ ತಿರುಗಿದರೆ ದೊರೆಯುವ ದೃಶ್ಯವೇ ಬೇರೆ. ಇಲ್ಲಿ ಅಡಿಗಡಿಗೂ ಜನಗಳು ಎದುರು ಬೀಳುತ್ತಾರೆ. ನಾಲ್ಕಾರು ಮೈಲಿಗಳು ಹೋಗುವುದರೊಳಗಾಗಿ ಹತ್ತಾರು ಹಳ್ಳಿಗಳು ಸಿಕ್ಕುತ್ತವೆ. ಎಲ್ಲಿ ನೋಡಿದರೂ ವ್ಯವಸಾಯದ ಕುರುಹುಗಳೂ ಜೀವಕಳೆಯೂ ತುಂಬಿರುತ್ತವೆ. ಪೈರುಪಚ್ಚೆಗಳ ವಿಸ್ತಾರವು ಮನಸ್ಸನ್ನು ಸೂರೆಗೊಳ್ಳುವುದು. ಆದರೆ ಇಲ್ಲಿಯ ಬೆಟ್ಟಗುಡ್ಡಗಳು ಒತ್ತಾಗಿಯೂ ರಮ್ಯವಾಗಿಯೂ ಇಲ್ಲ. ಇಲ್ಲಿ ಮಲೆನಾಡಿನಲ್ಲಿರುವಂಥ ಗೊಂಡಾರಣ್ಯಗಳೂ ಇಲ್ಲ. ಜನಗಳಾದರೋ ಚಟುವಟಿಕೆಯುಳ್ಳವರಾಗಿಯೂ ಆರೋಗ್ಯ ದೃಢಕಾಯರಾಗಿಯೂ ಹರ್ಷಚಿತ್ತರಾಗಿಯೂ ಕಂಡುಬರುತ್ತಾರೆ.

ಅನೇಕ ಕಡೆಗಳಲ್ಲಿ ಮಲೆನಾಡಿನಿಂದ ಬಯಲು ಸೀಮೆಗೆ ಕ್ರಮಕ್ರಮವಾದ ಮಾರ್ಪಾಟು ಕಂಡುಬರುವುದಾದರೂ ಕೆಲವು ಕಡೆಗಳಲ್ಲಿ ಈ ವ್ಯತ್ಯಾಸವು ಬಹಳ ಹಠಾತ್ತಾಗಿ ಕಣ್ಣಿಗೆ ಬೀಳುತ್ತದೆ. ಲಕ್ಕುವಳ್ಳಿಯ ಹತ್ತಿರ ಇಂತಹ ಹಠಾತ್ತಾದ ವ್ಯತ್ಯಾಸವು ಚೆನ್ನಾಗಿ ಕಾಣುವುದು.

ಎರಡನೆಯ ಅಧ್ಯಾಯ.

ನೀರಿನ ಸೌಕರ್ಯ.


ಸಂಸ್ಥಾನವು ಮುಂಗಾರು ಹಿಂಗಾರುಗಳೆರಡಕ್ಕೂ ಒಳಪಟ್ಟಿದೆ


ಹಿಂದೂಸ್ಥಾನದ ಭೂ ಪಟದಲ್ಲಿ ಮೈಸೂರು ಸಂಸ್ಥಾನದ ಪ್ರದೇಶವನ್ನು ಪರೀಕ್ಷಿಸಿ. ಅದು ಪರ್ಯಾಯದ್ವೀಪದ ಇಕ್ಕಟ್ಟಾದ ಭಾಗದಲ್ಲಿರುವುದು ಗೋಚರಿಸುತ್ತದೆ. ಉತ್ತರ ಸರಹದ್ದಿಗೆ ಸರಿಯಾಗಿ ರೇಖೆಯನ್ನು ಎಳೆದರೆ ಇದು ಸುಮಾರು 400 ಮೈಲಿಗಳಷ್ಟು ಉದ್ದವಾಗಬಹುದು. ದಕ್ಷಿಣ ಸರಹದ್ದಿನ ರೇಖೆಯು ಸುಮಾರು 200 ಮೈಲಿಗಳಷ್ಟು ಉದ್ದವಾಗಬಹುದು. ಪೂರ್ವ ಪಶ್ಚಿಮ ಸಮುದ್ರ ತೀರಗಳಿಗೆ ಬಹಳ ದೂರದಲ್ಲಿಲ್ಲದಿರುವುದರಿಂದ ಅರಬ್ಬಿ ಸಮುದ್ರದ ಕಡೆಯಿಂದ ಬೀಸುವ ನೈರುತ್ಯ ಮಾರುತಗಳಿಗೂ, ಬಂಗಾಳಾ ಕೊಲ್ಲಿಯಿಂದ ಹೊರಟು ಈಶಾನ್ಯ ಮೂಲೆಯಿಂದ ಬೀಸುವ ಈಶಾನ್ಯ ಮಾರುತಗಳಿಗೂ ಮೈಸೂರು ಸಂಸ್ಥಾನವು ಒಳಪಟ್ಟಿದೆ. ಈ ನೈರುತ್ಯೇಶಾನ್ಯ ಮಾರುತಗಳು ಮೋಡಗಳನ್ನು ತಳ್ಳಿಕೊಂಡು ಬಂದು ಮಳೆಯನ್ನು ಸುರಿಸುತ್ತವೆ. ಮೇ ತಿಂಗಳಿನಿಂದ ಹಿಡಿದು ನವೆಂಬರು ತಿಂಗಳು ಪೂರ್ತಿ ಮಳೆಗಾಲವೆಂದು ಹೇಳಬಹುದು. ಕೆಲವು ವೇಳೆ ಏಪ್ರಿಲ್ ತಿಂಗಳಲ್ಲಿಯೇ ಸಿಡಿಲು ಗುಡುಗುಗಳ ಆರ್ಭಟದಿಂದಲೂ ಆಲಿಕಲ್ಲುಗಳ ರಭಸದಿಂದಲೂ ಮುಂಗಾರಿನ ಮಳೆಗಳು ಬೀಳುವುದುಂಟು; ಮತ್ತು ಈಶಾನ್ಯದ ಮಳೆಗಳು ಡಿಶಂಬರ್ ತಿಂಗಳಲ್ಲಿಯೂ ಬೀಳುತ್ತಿರುವುದುಂಟು. ಮಲೆನಾಡು ಪ್ರದೇಶದಲ್ಲಿ ಜೂನ್ ಮತ್ತು ಜುಲೈ ತಿಂಗಳುಗಳಲ್ಲಿಯೇ ಅರ್ಧ ಮುಕ್ಕಾಲು ಭಾಗ ಮಳೆಯು ಸುರಿಯುವುದು. ಆಗಸ್ಟು ಮತ್ತು ಸೆಪ್ಟಂಬರು ತಿಂಗಳುಗಳಲ್ಲಿ ಅಷ್ಟೊಂದು ಹೆಚ್ಚು ಮಳೆಯಿರುವುದಿಲ್ಲ. ಬಯಲು ಸೀಮೆಯಲ್ಲಿ ಮೇ ಮತ್ತು ಜೂನ್ ತಿಂಗಳುಗಳಲ್ಲಿ ಸುಮಾರಾಗಿಯೂ, ಸೆಪ್ಟಂಬರ್, ಅಕ್ಟೋಬರ್, ಮತ್ತು ನವೆಂಬರ್ ತಿಂಗಳಲ್ಲಿ ಹೆಚ್ಚಾಗಿಯೂ ಮಳೆ ಬೀಳುವುದು.

ನೈರುತ್ಯದ ಮಳೆ ಸಂಸ್ಥಾನದಲ್ಲಿ ಕಾಲಿಡುವುದು ಸುಮಾರು ಜೂನ್ 4 ಅಥವ 5ನೆಯ ತಾರೀಖಿನಲ್ಲಿ. ಅಲ್ಲಿಂದ ಜುಲೈ ತಿಂಗಳು ಪೂರ್ತಿ ಅಥವ ಆಗಸ್ಟ್ ತಿಂಗಳ ಮಧ್ಯಭಾಗದವರೆಗೂ ಹೆಚ್ಚು ಕಡಮೆ ಸಂತತವಾಗಿ ಮಳೆ ಗಾಳಿಗಳಿದ್ದು ಅನಂತರ ಹದಿನೈದು ಇಪ್ಪತ್ತು ದಿವಸಗಳ ವಿರಾಮವು ದೊರೆಯುತ್ತದೆ. ಅನಂತರ ಮಳೆ ಪುನಃ ಪ್ರಾರಂಭವಾಗಿ ಮೊದಲಿನಷ್ಟೇ ರಭಸವಾಗಿ ಬೀಳುತ್ತಾ ಸೆಪ್ಟಂಬರ್ ತಿಂಗಳ ಕೊನೆಯವರೆಗೂ ಸಾಗಿಬರುತ್ತದೆ. ಅಕ್ಟೋಬರ್ ತಿಂಗಳು 10ನೆಯ ತಾರೀಖುವರೆಗೂ ಮಧ್ಯದಲ್ಲಿ ಬಿಸಿಲೂ, ಪೂರ್ವ ದಿಕ್ಕಿನ ಕಡೆಯಿಂದ ಜಂಝೂ ಮಾರುತಗಳೂ ತಲೆದೋರುವುವು. ಅನಂತರ ಈಶಾನ್ಯದ ಮಳೆ ಸುರಿಯಲಾರಂಭವಾಗುತ್ತದೆ. ನವೆಂಬರು ತಿಂಗಳು ಪೂರ್ತಿಯಾಗಿ ಈ ಮಳೆ ಸುರಿಯುವ ವಾಡಿಕೆಯಿದೆ.


ಮುಂಗಾರಿನಲ್ಲಿ ಮಳೆ.


ಪಶ್ಚಿಮ ಘಟ್ಟಗಳ ಶ್ರೇಣಿಯನ್ನು ನೈರುತ್ಯದ ಮೋಡಗಳು ಸಂಧಿಸುವಾಗ ಬಹುಭಾಗದ ದ್ರವವೆಲ್ಲಾ ಮಳೆಯಾಗಿ ಆ ಘಟ್ಟದ ಪ್ರಾಂತದಲ್ಲೇ ಸುರಿಯುವುದು. ಈ ಭಾಗದಲ್ಲಿ ಎಂದರೆ ಕೊಲ್ಲೂರು ಘಾಟಿ, ಆಗುಂಬೆ ಘಾಟಿ, ಹುಲಿಕಲ್‌ಘಾಟಿ, ಕೊಡಚಾದ್ರಿ, ಕುದುರೇಮುಖ ಮೊದಲಾದುವುಗಳನ್ನೊಳಗೊಂಡ ರೇಖೆಯಲ್ಲಿ ವರ್ಷಕ್ಕೆ 250 ಅಂಗುಲಗಳಿಗಿಂತ ಮೇಲ್ಪಟ್ಟು ಮಳೆ ಬೀಳುವುದು. ಆಗುಂಬೆಯಲ್ಲಿ ಸರ್ವಸಾಧಾರಣವಾಗಿ 320 ಅಂಗುಲಗಳವರೆಗೂ ಮಳೆಯಾಗುವುದು. ಈ ಶ್ರೇಣಿಗಳಿಗೆ ಪೂರ್ವದಲ್ಲಿ ಸುಮಾರು 20 ಮೈಲಿಗಳ ದೂರದವರೆಗೂ ಮಳೆಯ ಹೊಡೆತವು ಹೆಚ್ಚಾಗಿಯೇ ಇರುತ್ತದೆ. ಸಾಗರದ ತಾಲ್ಲೂಕಿನ ಅರಳಗೋಡಿನಿಂದ ಕರೂರು ನಗರಗಳ ಮಾರ್ಗವಾಗಿ ಮೂಡಗೆರೆ ತಾಲ್ಲೂಕಿನ ಕೊಟಿಗೆಹಾರ್ ಟೋಲುಗೇಟು, ಮಂಜರಾಬಾದಿನ ಮಾರನಹಳ್ಳಿ ಟೋಲುಗೇಟುಗಳಿಗೆ ಗೆರೆ ಎಳೆದರೆ ಈ ಭಾಗದಲ್ಲೆಲ್ಲಾ ಸುಮಾರು 150 ಅಂಗುಲಗಳ ಮೇಲೆ ಮಳೆ ಬೀಳುವುದೆಂದು ಹೇಳಬಹುದು. ಈ ರೇಖೆಗೆ ಪೂರ್ವದಲ್ಲಿ ಗೇರುಸೊಪ್ಪೆಯಿಂದ ಹೊಸನಗರ (ಕಲ್ಲೂರುಕಟ್ಟೆ), ತೀರ್ಥಹಳ್ಳಿಗಳ ಮಾರ್ಗವಾಗಿ ಕೊಪ್ಪಕ್ಕೂ ಮುಂದೆ ಮೂಡಗೆರೆ ಮಂಜರಾಬಾದಿಗೂ ಗೆರೆ ಎಳೆದರೆ ಈ ಭಾಗದಲ್ಲೆಲ್ಲಾ 100 ಅಂಗುಲಗಳಿಗೆ ಮೇಲ್ಪಟ್ಟು ಮಳೆ ಬೀಳುವುದೆಂದು


ಅಂಗುಲಗಳು
ಮೈಸೂರು ಡಿಸ್ಟ್ರಿಕ್ಟು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
ಅಂಗುಲಗಳು
20.00
18.00
16.00
14.00
12.00
10.00
8.00
6.00
4.00
2.00
0.00


ಅಂಗುಲಗಳು
ಹಾಸನದ ಡಿಸ್ಟ್ರಿಕ್ಟು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
ಅಂಗುಲಗಳು
20.00
18.00
16.00
14.00
12.00
10.00
8.00
6.00
4.00
2.00
0.00

ಮಳೆಯ ಅಳತೆ


ಕಡೂರು ಡಿಸ್ಟ್ರಿಕ್ಟ್
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
24.00
22.00
20.00
18.00
16.00
14.00
12.00
10.00
8.00
6.00
4.00
2.00
0.00


ಶಿವಮೊಗ್ಗ ಡಿಸ್ಟ್ರಿಕ್ಟ್
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
20.00
18.00
16.00
14.00
12.00
10.00
8.00
6.00
4.00
2.00
0.00

ಹೇಳಬಹುದು. ಇಲ್ಲಿಂದ ಈಚೆಗೆ ನೈರುತ್ಯದ ಮಳೆಯ ರಭಸವು ಬಹುಬೇಗ ಕಡಮೆಯಾಗುತ್ತದೆ. ಹೊಸನಗರದಿಂದ ಶಿವಮೊಗ್ಗೆಯು 42 ಮೈಲಿಗಳಷ್ಟು ದೂರವಿದೆ. ಆದರೆ ಶಿವಮೊಗ್ಗೆಯಲ್ಲಿ ಸುಮಾರು 35 ಅಂಗುಲಗಳ ಮಳೆ ಮಾತ್ರ ಬೀಳುವುದು. ಕೊಪ್ಪದಿಂದ ತರೀಕೆರೆಗೆ ಸುಮಾರು ಅಷ್ಟೇ ದೂರವಿರುವುದು. ತರೀಕೆರೆಯಲ್ಲಿ 35 ಅಂಗುಲಗಳಷ್ಟು ಮಾತ್ರ ಮಳೆ ಬೀಳುತ್ತದೆ. ಮೂಡಗೆರೆಗೆ ಪೂರ್ವ ದಿಕ್ಕಿನಲ್ಲಿ ಸುಮಾರು 15–20 ಮೈಲಿಗಳಷ್ಟು ದೂರದಲ್ಲ ಬೇಲೂರಿರುವುದು. ಅಲ್ಲಿ 25–30 ಅಂಗಲುಗಳಷ್ಟೇ ಮಳೆಯಾಗುತ್ತದೆ.

ಬಾಬಾಬುಡರ್ ಶ್ರೇಣಿಯ ಪ್ರಭಾವ.

ಬಾಬಾಬುಡರ್ ಪರ್ವತ ಶ್ರೇಣಿಯು ಮಳೆಯನ್ನು ಯಾವ ರೀತಿ ಬದಲಾಯಿಸುತ್ತದೆ ಎನ್ನುವುದು ಸ್ವಾರಸ್ಯವಾದ ವಿಷಯ. ಬಾಬಾಬುಡರ್ ಪರ್ವತಗಳು ಚಿಕ್ಕಮಗಳೂರಿಗೆ ಸುಮಾರು 10–12 ಮೈಲಿಗಳ ದೂರದಲ್ಲಿವೆ. ದತ್ತಾತ್ರೇಯ ಪೀಠದಿಂದ ಸುಮಾರು 3 ಮೈಲಿಗಳ ದೂರದಲ್ಲಿರುವ ಅತ್ತಿಗುಂಡಿಯಲ್ಲಿ ವರ್ಷಕ್ಕೆ 135 ಅಂಗುಲಗಳಷ್ಟು ಮಳೆಯಾಗುತ್ತಿದ್ದರೂ ಚಿಕ್ಕಮಗಳೂರಿನಲ್ಲಿ 35 ಅಂಗುಲ ಮಳೆಯಾಗುವುದೇ ಕಷ್ಟ. ಈ ಬಾಬಾಬುಡರ್ ಬೆಟ್ಟಗಳಿಗೆ ಪೂರ್ವದಲ್ಲಿರುವ ಬೀರೂರು, ಕಡೂರುಗಳ ವಿಷಯವನ್ನು ಪರೀಕ್ಷಿಸಿದರೆ ಇಲ್ಲಿ 25 ಅಂಗುಲಗಳಷ್ಟು ಮಳೆಯಾಗುವುದೇ ಕಷ್ಟ. ಇದೇ ಹಾದಿಯಲ್ಲಿ ಮುಂದಕ್ಕೆ ಸಿಕ್ಕುವ ಚಿತ್ರದುರ್ಗದ ಡಿಸ್ಟ್ರಿಕ್ಟೂ ತುಮಕೂರಿನ ಉತ್ತರ ಭಾಗವೂ ಹೆಚ್ಚು ಮಳೆಯಿಲ್ಲದ ಭಾಗಗಳಾಗಿರುವುವು. ನಮ್ಮ ಸಂಸ್ಥಾನದಲ್ಲೆಲ್ಲಾ ಅತ್ಯಲ್ಪ ವೃಷ್ಟಿಯ ಸ್ಥಳವೆಂದರೆ ಚಳ್ಳಕೆರೆ ತಾಲ್ಲೂಕು. ಸೀರ್ಯದಿಂದ ಹಿರಿಯೂರಿಗೂ, ಅಲ್ಲಿಂದ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿಗೂ ಮುಂದೆ ಮೊಳಕಾಲ್ಮುರುವಿಗೂ ಗೆರೆಯನ್ನೆಳೆದರೆ—ಇದರ ಪೂರ್ವ ಭಾಗವೆಲ್ಲ ಮಳೆಯಿಲ್ಲದ ಕೊಂಪೆಯಾಗುತ್ತದೆ. ಚಳ್ಳಕೆರೆಯಲ್ಲಿ 1920ನೆಯ ಇಸವಿಯಲ್ಲಿ 6·67 ಅಂಗುಲಗಳಷ್ಟು ಮಾತ್ರ ಮಳೆ ಆಗಿದೆ.

ಕೊಡಗಿನ ಬೆಟ್ಟಗಳ ಪ್ರಭಾವ.

ಮೈಸೂರು ಡಿಸ್ಟ್ರಿಕ್ಟಿನ ಪಶ್ಚಿಮ ಭಾಗವು ಮತ್ತು ನೈರುತ್ಯ ಮೂಲೆಯು ಮಲೆನಾಡಾಗಿದ್ದರೂ ಉಳಿದ ಕಡೆಯ ಮಲೆನಾಡಿನಲ್ಲಿ ಬೀಳು


ವಷ್ಟು ಮಳೆ ಇಲ್ಲಿ ಬೀಳುವುದಿಲ್ಲ. ಇದಕ್ಕೆ ಮುಖ್ಯ ಕಾರಣ ಕೊಡಗಿನ ಬೆಟ್ಟ ಗುಡ್ಡಗಳು ಮತ್ತು ನೀಲಗಿರಿ. ಪೆರಿಯಾಪಟ್ಟಣ ಮತ್ತು ಹುಣಸೂರು ಗಳು ಮಲೆನಾಡಾಗಿದ್ದರೂ ಅಲ್ಲಿ 40 ಅಂಗುಲ ಮಳೆಯಾಗುವುದೇ ಕಷ್ಟ. ಕಾಕನಕೋಟೆಯ ಜಂಗಲಿಯಲ್ಲಿ ಮಾತ್ರ 60 ಅಂಗುಲಕ್ಕೆ ಮೇಲ್ಪಟ್ಟು ಮಳೆಯಾಗುವುದು.


ದಕ್ಷಿಣದ ಬೆಟ್ಟಗಳ ಪ್ರಭಾವ.


ಮೈಸೂರು ಡಿಸ್ಟ್ರಿಕ್ಟಿನ ದಕ್ಷಿಣದಲ್ಲಿ ಚಾಮರಾಜನಗರ, ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಿಗೆ ಸೇರಿದ ಕೆಲವು ಭಾಗಗಳಲ್ಲಿ ಮಳೆ ಬಹಳ ಕಡಮೆಯಾಗಿದೆ. ಬೇಗೂರು, ಗುಂಡ್ಲುಪೇಟೆ, ಚಾಮರಾಜನಗರ ಇವು ಗಳನ್ನು ಸೇರಿಸಿದರೆ ಈ ರೇಖೆಗಳ ಮಧ್ಯದೇಶದಲ್ಲೆಲ್ಲಾ ಮಳೆ ಕಡಮೆ ಯೆಂದು ಹೇಳಬಹುದು. ಗೋಪಾಲಸ್ವಾಮಿಯಬೆಟ್ಟ, ನೀಲಗಿರಿ, ಎಳಂದೂರು ಬೆಟ್ಟ ಮುಂತಾದುವು ಸುತ್ತಲೂ ಆವರಿಸಿಕೊಂಡಿರುವುದೇ ಇದಕ್ಕೆ ಕಾರಣವೆಂದು ಊಹಿಸಲಾಗಿದೆ.


ಹಿಂಗಾರಿನಲ್ಲಿ ಮಳೆ.

ಈಶಾನ್ಯ ಮಾರುತಗಳಿಂದ ದೊರೆಯುವ ಮಳೆ ಮಲೆನಾಡಿನವರೆಗೆ ವ್ಯಾಪಿಸುವುದಾದರೂ ಅದು ಸಾಮಾನ್ಯವಾಗಿ ಕೋಲಾರ, ಬೆಂಗಳೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿ ಚೆನ್ನಾಗಿ ಬೀಳುತ್ತದೆ. ಚಿತ್ರ ದುರ್ಗದ ಡಿಸ್ಟ್ರಿಕ್ಟಿಗೆ ಯಾವ ಕಡೆಯಿಂದಲೂ ಮಳೆ ಚೆನ್ನಾಗಿ ಬಾರದೆ ಅದು ಬೆಂಗಾಡು ಪ್ರದೇಶವಾಗಿ ಪರಿಣಾಮವಾಗಿದೆ. ಪೂರ್ವಘಟ್ಟಗಳು ನಿಬಿಡವಾಗಿಯೂ ಒತ್ತಾಗಿಯೂ ಹಬ್ಬಿಕೊಂಡಿಲ್ಲ. ಮೋಡಗಳು ನೈರು ತ್ಯದ ಕಡೆಯಿಂದ ಹೆಚ್ಚಾಗಿ ಬರಲು ಅವಕಾಶವುಂಟು. ಆದರೂ ಮಳೆ ಎಷ್ಟೊಂದು ಬರಬಹುದೋ ಅಷ್ಟೊಂದು ಬರುವುದಿಲ್ಲ. ಆದರೆ ಈ ಕಡೆಯ ಮಳೆಗಳಲ್ಲಿ ಒಂದು ವಿಚಿತ್ರವಾದ ಲಕ್ಷಣವಿದೆ. ಒಮ್ಮೊಂದೊಮ್ಮೆ ಹಠಾ ತ್ತಾಗಿ ಮೋಡಗಳು ಕವಿದುಕೊಂಡು 7–8 ಅಂಗುಲಗಳಷ್ಟು ಮಳೆಯನ್ನು ಒಂದೇ ದಿವಸ ಸುರಿಸಿ ಕೆರೆಗಳನ್ನು ತುಂಬಿಸಿಬಿಡುವುದುಂಟು. ಬಂಗಾಳಾ ಕೊಲ್ಲಿಯಲ್ಲಿ ಆಗಾಗ ತಲೆದೋರುವ ಬಿರುಗಾಳಿ ಸುಂಟರಗಾಳಿಗಳ ಫಲ ವಾಗಿ ಈ ಜಂಝೂಮಾರುತವುಂಟಾಗುತ್ತದೆ.


ಬೆಂಗಳೂರು ಡಿಸ್ಟ್ರಿಕ್ಟು
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
20.00 18.00 16.00 14.00 12.00 10.00 8.00 6.00 4.00 2.00 0.00


ಕೋಲಾರದ ಡಿಸ್ಟ್ರಿಕ್ಟು
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
20.00 18.00 16.00 14.00 12.00 10.00 8.00 6.00 4.00 2.00 0.00


ತುಮಕೂರು ಡಿಸ್ಟ್ರಿಕ್ಟು
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
20.00
18.00
16.00
14.00
12.00
10.00
8.00
6.00
4.00
2.00
0.00


ಚಿತ್ರದುರ್ಗ ಡಿಸ್ಟ್ರಿಕ್ಟು
ಅಂಗುಲಗಳು
ಜ ಫಿ ಮಾ ಏ ಮೆ ಜೂ ಜು ಆ ಸೆ ಅ ನ ಡಿ
20.00
18.00
16.00
14.00
12.00
10.00
8.00
6.00
4.00
2.00
0.00

ಸರಾಸರಿಗಿಂತ ವ್ಯತ್ಯಾಸಗಳು.

ಮಳೆ ಸಂಸ್ಥಾನದಲ್ಲಿ ಹರಡಿರುವ ರೀತಿಯನ್ನು ಹಿಂದಿನ ಚಿತ್ರದಲ್ಲಿ ತೋರಿಸಿದೆ. ಒಂದೊಂದು ವರ್ಷದಲ್ಲಿ ಈ ಮಳೆ ಅಲ್ಲಲ್ಲಿ ಹೆಚ್ಚಾಗಿ ಸುರಿಯುವುದುಂಟು. ಶಿವಮೊಗ್ಗಿಯಲ್ಲಿ ಸಾಮಾನ್ಯವಾಗಿ 35 ಅಂಗುಲಗಳಷ್ಟು ಮಳೆಯಾಗುವುದು. ಆದರೆ 1872ರಲ್ಲಿ 64·46 ಅಂಗುಲಗಳಷ್ಟೂ, 1882ರಲ್ಲಿ 56·57 ಅಂಗುಲಗಳಷ್ಟೂ ಮಳೆ ಬಿದ್ದಿರುತ್ತದೆ. ಹೀಗೆಯೆ ಬೆಂಗಳೂರಿನಲ್ಲಿ ಸರಾಸರಿ ಮಳೆ 35 ಅಂಗುಲಗಳಾದರೂ 1852ರಲ್ಲಿ 55·1 ಅಂಗುಲಗಳೂ, 1874ರಲ್ಲಿ 56·65 ಅಂಗುಲಗಳೂ, 1880ರಲ್ಲಿ 51·70 ಅಂಗುಲಗಳೂ ಬಿದ್ದಿವೆ. ಎಷ್ಟೋ ಬಾರಿ ಸರಾಸರಿಗಿಂತ ಬಹಳ ಕಡಮೆಯಾಗಿ ಮಳೆ ಬೀಳುವುದೂ ಉಂಟು. 1876ರಲ್ಲಿ ಬೆಂಗಳೂರಲ್ಲಿ 17·16 ಅಂಗುಲಗಳಷ್ಟೆ ಮಳೆ ಬಿದ್ದಿರುತ್ತದೆ; ಮತ್ತು ಅನೇಕ ವರ್ಷಗಳಲ್ಲಿ 30 ಅಂಗುಲಗಳಿಗಿಂತ ಕಡಮೆಯಾಗಿ ಬಿದ್ದಿರುತ್ತದೆ.

ಮಳೆಯ ಅನಿಶ್ಚಯ.

ಮೈಸೂರು ಸಂಸ್ಥಾನವು ನೈರುತ್ಯೇಶಾನ್ಯ ಮಾರುತಗಳಿಗೆ ಒಳಪಟ್ಟಿದೆಯೆಂದು ಹೇಳುವುದಾದರೂ ಬೀಳುವ ಮಳೆ ಸಕಾಲಕ್ಕೆ ಬೀಳದೆಯೂ, ಸಾಕಾದಷ್ಟು ಬೀಳದೆಯೂ ಹೋಗುವುದರಿಂದ ಫಸಲು ಕೈಗೆ ಬರುವವರೆಗೂ ರೈತರು ಅಧೈರ್ಯದಿಂದಲೇ ಇರಬೇಕಾಗಿದೆ. ಎಷ್ಟೋ ವರ್ಷಗಳಲ್ಲಿ ಮುಂಗಾರಿನ ಮಳೆಗಳು ಚೆನ್ನಾಗಿ ಆಗಿ ಬಿತ್ತನೆಯ ಕೆಲಸವೆಲ್ಲಾ ನೆಟ್ಟಗಾಗುತ್ತದೆ. ತರುವಾಯ ಸುಮಾರಾಗಿ ಮಳೆ ಬಿದ್ದು ಫಸಲಿನ ಆಶೆಯನ್ನೂ ತೋರಿಸುತ್ತದೆ. ಕಟ್ಟಕಡೆಯಲ್ಲಿ ಏನೊಂದು ಮಳೆಯೂ ಆಗದೆ ರೈತರು ನಿರಾಶರಾಗಿ ಹೋಗಿದ್ದಾರೆ. ಒಂದೊಂದು ವೇಳೆ ಬಹುಕಾಲದವರೆಗೂ ಮಳೆಯು ತಲೆದೋರದೆ ಕಡೆಕಡೆಯಲ್ಲಿ ಚೆನ್ನಾಗಿ ಆಗುವುದುಂಟು. ಕೆಲವು ಸಂದರ್ಭಗಳಲ್ಲಿ ಬೇಡದಾಗ ಅತಿವೃಷ್ಟಿಯಾಗಿ ಬೇಕಾದಾಗ ಅನಾವೃಷ್ಟಿಯಾಗಿ ತೊಂದರೆ ಕೊಡುವುದುಂಟು. ಮಳೆಯ ಈ ವಿಪರೀತ ಚರ್ಯೆಯಿಂದ ಸುಭಿಕ್ಷದ ದಿವಸಗಳು ಬಹಳ ವಿರಳವಾಗಿ ಹೋಗಿವೆ.

ನದಿಗಳ ಗುಂಪುಗಳು.

ಸಂಸ್ಥಾನದಲ್ಲಿ ಬೀಳುವ ಮಳೆಯ ನೀರು ನದಿಗಳ ಮೂಲಕ ಸಮುದ್ರಗಳನ್ನು ಸೇರುವುದು. ಈ ದೇಶವನ್ನು ಕಾವೇರಿಯ ಜಲಾನಯನ ಭೂಮಿ, ತುಂಗಾ, ಭದ್ರಾ ಮತ್ತು ತುಂಗಭದ್ರೆಗಳ ಜಲಾನಯನ ಭೂಮಿ, ದಕ್ಷಿಣ ಪಿನಾಕಿನಿ ಉತ್ತರ ಪಿನಾಕಿನಿ ಮತ್ತು ಪಾಲಾರುಗಳ ಜಲಾನಯನ ಭೂಮಿ ಮತ್ತು ಶರಾವತಿಯ ಜಲಾನಯನ ಭೂಮಿ, ಎಂದು ವಿಂಗಡಿಸ ಬಹುದು. ನದಿಗಳಲ್ಲಿ ಕಾವೇರಿಯೂ ಅದರ ಉಪನದಿಗಳೂ ಮುಖ್ಯ ವಾದುವು. ಮಳೆಗಾಲದಲ್ಲಿ ಎಲ್ಲಾ ನದಿಗಳೂ ತುಂಬಿ ಹರಿಯುತ್ತವೆ. ಬೇಸಗೆಯಲ್ಲಿ ಕೆಲವು ನದಿಗಳು ಬತ್ತಿಹೋಗುತ್ತವೆ.

ಮೈಸೂರು ಸಂಸ್ಥಾನ ನದಿಗಳನ್ನು ನಾಲ್ಕುಪಂಗಡಗಳಾಗಿ ವಿಂಗಡಿಸಿ ಹೇಳಬಹುದು.—(1) ಕಾವೇರಿ ಮತ್ತು ಅದರ ಉಪನದಿಗಳು, (2) ಅರಬ್ಬೀ ಸಮುದ್ರಕ್ಕೆ ಬೀಳುವ ಘಟ್ಟದ ನದಿಗಳು, (3) ಕೃಷ್ಣಾ ನದಿಯ ಉಪನದಿಗಳು, ಮತ್ತು (4) ನಂದಿಯ ದುರ್ಗದ ನದಿಗಳು.

ಕಾವೇರಿ ಕೊಡಗಿನಲ್ಲಿ ಬ್ರಹ್ಮಗಿರಿ ಎಂಬ ಬೆಟ್ಟದ ಬಳಿ ಹುಟ್ಟು ವುದು. ಹುಟ್ಟುವ ಸ್ಥಳವನ್ನು ತಲಕಾವೇರಿಯೆಂದು ಕರೆಯುತ್ತಾರೆ. ಅದು ಹಾಸನ ಡಿಸ್ಟ್ರಿಕ್ಟಿನ ದಕ್ಷಿಣಭಾಗದಲ್ಲಿ ಸ್ವಲ್ಪ ಹರಿದು ಮೈಸೂರು ಡಿಸ್ಟ್ರಿಕ್ಟನ್ನು ವಾಯವ್ಯ ಮೂಲೆಯಲ್ಲಿ ಪ್ರವೇಶಿಸುತ್ತದೆ. ಚುಂಚನಕಟ್ಟೆಯ ಬಳಿ ಸುಮಾರು ಎಪ್ಪತ್ತು ಅಡಿಗಳ ಎತ್ತರದಿಂದ ಧುಮಿಕಿ ಮುಂದಕ್ಕೆ ಪ್ರವಹಿ ಸುತ್ತ, ಶ್ರೀರಂಗಪಟ್ಟಣವನ್ನು ಬಳಸಿಕೊಂಡು ತಲಕಾಡು ಸೋಸಲೆಗಳ ಮಾರ್ಗವಾಗಿ ಶಿವನಸಮುದ್ರಕ್ಕೆ ಬರುವುದು. ಅಲ್ಲಿ ಮುನ್ನೂರು ಅಡಿಗಳ ಎತ್ತರದಿಂದ ಧುಮುಕುವುದು. ಇಲ್ಲಿ ಗಗನಚುಕ್ಕಿ ಭರಚುಕ್ಕಿಗಳೆಂಬ ಜಲ ಪಾತಗಳಿವೆ. ಮಳೆಗಾಲದಲ್ಲಿ ಸುಮಾರು ಒಂದು ಮೈಲಿಯಷ್ಟು ಅಗಲವುಳ್ಳ ಜಲಪ್ರವಾಹವು ಏಕಪ್ರಕಾರವಾಗಿ ನುಗ್ಗಿ ಬರುತ್ತ ಧುಮುಕುತ್ತಿರುವುದು ಬಹು ರಮಣೀಯವಾದ ದೃಶ್ಯವಾಗಿರುತ್ತದೆ. ಕಾವೇರಿ ಶಿವನಸಮುದ್ರ ದಿಂದ ಆಚೆಗೆ ನಮ್ಮ ಸಂಸ್ಥಾನವನ್ನು ಬಿಟ್ಟು ಮದ್ರಾಸ್ ಆಧಿಪತ್ಯದಲ್ಲಿ ಹರಿ ಯುವುದು ; ಅನಂತರ ಬಂಗಾಳಾ ಕೊಲ್ಲಿಯನ್ನು ಸೇರುತ್ತದೆ. ಕಾವೇ ರಿಯ ವಿಚಾರವಾಗಿ ಪುರಾಣದ ಕಥೆಗಳುಂಟು. ಈಕೆ ಬ್ರಹ್ಮನ ಮಗಳಾದ ವಿಷ್ಣುಮಾಯೆ. ಭೂಲೋಕದಲ್ಲಿ ಲೋಪಾಮುದ್ರೆಯಾಗಿ ಅವತರಿಸಿದಳು.



ಶಿವನಸಮುದ್ರದ ಜಲಪಾತ

ಬ್ರಹ್ಮನು ಈ ಲೋಪಾಮುದ್ರೆಯನ್ನು ಕವೇರಮುನಿಗೆ ಸಾಕಿಕೊಳ್ಳೆಂದು ಕೊಟ್ಟನು. ಆತನು ಸಾಕಿದ ಮಗಳಾದುದರಿಂದ ಕಾವೇರಿ ಎಂದು ಹೆಸರಾಯಿತು.

ಕಾವೇರಿ ನದಿಗೆ ಹನ್ನೆರಡು ಕಡೆಗಳಲ್ಲಿ ಅಣೆಕಟ್ಟಿ ಕಾಲುವೆಗಳನ್ನು ತೆಗೆದಿದ್ದಾರೆ. ಇವುಗಳಲ್ಲಿ ಕನ್ನಂಬಾಡಿ ಕಟ್ಟೆಯೂ ಅದರಿಂದ ಆಗಿರುವ ಕೃಷ್ಣರಾಜ ಸಾಗರವೂ ಬಹಳ ಪ್ರಸಿದ್ಧವಾದುವು. ಕೃಷ್ಣರಾಜ ಸಾಗರದಂತಹ ದೊಡ್ಡ ಕೆರೆಗಳು ಇಂಡಿಯಾದೇಶದಲ್ಲಿ ಬಹಳ ಕಡಮೆ. ಮೈಸೂರಿಗೆ ಸುಮಾರು ಹತ್ತುಮೈಲಿಗಳ ದೂರದಲ್ಲಿ ಈ ಕೆರೆಯಿರುವುದು. ಇದರ ಅಡ್ಡಗಟ್ಟೆ ಅಗಾಧವಾದ ಕೋಟೆಯ ಗೋಡೆಯಂತೆ ಬಹು ಎತ್ತರವಾಗಿಯೂ ದೃಢವಾಗಿಯೂ ಇದೆ. ಅದನ್ನು ಏರಿ ಮೇಲಕ್ಕೆ ಹೋದರೆ ಕಣ್ಣಿನ ನೋಟ ಓಡುವವರೆಗೂ ಮುಂದೆ ಜಲರಾಶಿ. ದೊಡ್ಡ ದೊಡ್ಡ ಅಲೆಗಳು ನಾನು ಮುಂದು ತಾನು ಮುಂದು ಎಂದು ಮೇಲೆ ಮೇಲೆ ಏಳುತ್ತ ನುಗ್ಗುತ್ತ ಕಟ್ಟೆಯನ್ನು ಒದೆಯುತ್ತಿರುವುವು. ಸಮುದ್ರತೀರದಲ್ಲಿ ಅಲೆಗಳ ಹೊಡೆತದಿಂದ ನೀರು ನೊರೆನೊರೆಯಾಗಿ ಹರಿದು ಇಂಗುವಂತೆ ಕೃಷ್ಣರಾಜ ಸಾಗರದಲ್ಲಿಯೂ ಕಂಡುಬರುತ್ತದೆ. ತುಂತುರು ಹನಿಗಳಿಂದಲೂ, ಶೈತ್ಯದಿಂದಲೂ ತುಂಬಿದ ಮಂದಮಾರುತವು ಬಹು ಸುಖವಾಗಿ ಮೇಲೆ ಬೀಸುತ್ತದೆ. ಪ್ರಕೃತಿಯ ಅದ್ಭುತ ಚೈತನ್ಯವನ್ನು ಮನುಷ್ಯ ಮಾತ್ರದವನು ಹೇಗೆ ಒಂದು ಕಟ್ಟೆಹಾಕಿ ಸ್ವಾಧೀನ ಪಡಿಸಿಕೊಂಡಿರುವನು ಎಂದು ಆಶ್ಚರ್ಯದಿಂದ ನಾವು ತಲೆದೂಗುತ್ತೇವೆ. ಇದರಲ್ಲಿರುವ ತೂಬುಗಳೆಲ್ಲ ಯಂತ್ರಗಳಿಂದ ನಡೆಯುತ್ತವೆ. ಮಳೆಗಾಲದಲ್ಲಿ ಈ ಸಾಗರವು ತುಂಬಿ ಕೋಡಿ ಬಿದ್ದಾಗ ಕೋಡಿಯಿಂದ ಉರುಳುರುಳಿ ಬೀಳುವ ಜಲಪ್ರವಾಹವು ನೋಡುವುದಕ್ಕೆ ಬಹಳ ಚೆನ್ನಾಗಿರುತ್ತದೆ.

ಕಾವೇರಿ ನದಿಗೆ ಎಡಗಡೆ ಹೇಮಾವತಿ, ಲೋಕಪಾವನಿ, ಷಿಂಷ ಅಥವ ಕದಂಬನದಿ ಮತ್ತು ಅರ್ಕಾವತಿ ಎಂಬವು ಬಂದು ಸೇರುತ್ತವೆ. ಬಲಗಡೆ ಲಕ್ಷ್ಮಣತೀರ್ಥ, ಕಪಿನಿ ಮತ್ತು ಹೊನ್ನು ಹೊಳೆಗಳು ಬಂದು ಸೇರುತ್ತವೆ.

ಹೇಮಾವತಿ ಕಡೂರು ಡಿಸ್ಟ್ರಿಕ್ಟಿನಲ್ಲಿ ಮೂಡಗೆರೆಯ ಬಳಿ ಹುಟ್ಟುತ್ತದೆ. ಅನಂತರ ಹಾಸನ ಡಿಸ್ಟ್ರಿಕ್ಟಿನಲ್ಲಿ ಹೆಚ್ಚಾಗಿ ಹರಿದು ಮೈಸೂರು ಡಿಸ್ಟ್ರಿಕ್ಟನ್ನು

ಪ್ರವೇಶಿಸಿ ಚುಂಚನಕಟ್ಟೆಯ ಬಳಿ ಕಾವೇರಿಯನ್ನು ಸೇರುತ್ತದೆ. ಇದಕ್ಕೆ ಎಣ್ಣೆ ಹೊಳೆ ಎಂಬ ಹೆಸರೂ ಉಂಟು. ದಕ್ಷಬ್ರಹ್ಮನು ತಾನು ಮಾಡಿದ ಯಾಗಕ್ಕೆ ತನ್ನ ಮಗಳಾದ ಸತೀದೇವಿಯನ್ನು ಕರಸಿಕೊಳ್ಳಲಿಲ್ಲ. ಆದರೂ ಆಕೆ ಆ ಯಾಗಕ್ಕೆ ಹೋಗಬೇಕೆಂದು ಆಸೆಪಟ್ಟಳು. ಪತಿಯಾದ ಈಶ್ವರನು ಬೇಡವೆಂದರೂ ಆಕೆ ಕೇಳಲಿಲ್ಲ. ಕಡೆಗೆ ಯಾಗಕ್ಕೆ ಹೋಗಿ ಅಲ್ಲಿ ತಂದೆ ಯಾಡಿದ ಮಾತುಗಳಿಂದ ಅಪಮಾನಿತಳಾಗಿ ಯಜ್ಞಕುಂಡದಲ್ಲಿ ಬಿದ್ದು ಪ್ರಾಣತ್ಯಾಗಮಾಡಿದಳು. ಆ ಬೆಂಕಿಯಲ್ಲಿ ಸುಟ್ಟದ್ದರಿಂದ ಚಿನ್ನದ ಬಣ್ಣವನ್ನು ಪಡೆದು ಹಿಮವಂತನಿಗೆ ಮಗಳಾಗಿ ಜನಿಸಿ ಹೈಮವತಿ ಎಂಬ ಹೆಸರಿನಿಂದ ಪ್ರಖ್ಯಾತಳಾದಳು. ಈಶ್ವರನನ್ನೇ ಮದುವೆಯಾಗಬೇಕೆಂದು ಆಕೆ ತಪಸ್ಸು ಮಾಡಿ, ಆತನನ್ನು ಕೈಹಿಡಿದಳು. ಆಗ ಈಶ್ವರನು ಲೋಕೋಪಕಾರಕ್ಕಾಗಿ ನದಿಯಾಗೆಂದು ಆಕೆಗೆ ಹೇಳಿದನಂತೆ. ಆ ಹೈಮವತಿಯೇ ಹೇಮಾವತಿ ಯಾಗಿ ನಮ್ಮದೇಶದಲ್ಲಿ ಹರಿಯುತ್ತಿದ್ದಾಳೆಂದು ಪುರಾಣದ ಕಥೆಯೊಂದಿದೆ.

ಷಿಂಷ ಅಥವ ಕದಂಬನದಿ ತುಮಕೂರಿನ ಬಳಿಯಿರುವ ದೇವರಾಯನ ದುರ್ಗದ ದಕ್ಷಿಣ ಪ್ರಾಂತದಲ್ಲಿ ಹುಟ್ಟುವುದೆಂದು ಹೇಳಬಹುದು. ಇದು ಗುಬ್ಬಿಯ ಬಳಿ ಹರಿಯುವಾಗ ಪೂರ್ವಕಾಲದ ಕದಂಬಋಷಿಯ ಆಶ್ರಮದ ಪಕ್ಕದಲ್ಲಿ ಬರುತ್ತಿದ್ದುದರಿಂದ ಕದಂಬನದಿಯೆಂದು ಹೆಸರಾಯಿತು. ಇದು ತುಮಕೂರು, ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಹರಿದು ಕಾವೇರಿಯನ್ನು ಸೇರುತ್ತದೆ.

ಲಕ್ಷ್ಮಣತೀರ್ಥವು ಕೊಡಗಿನ ಬೆಟ್ಟಗಳಲ್ಲಿ ಹುಟ್ಟಿ ಹುಣಸೂರು ಮಾರ್ಗವಾಗಿ ಹರಿದು ಕಾವೇರಿಯನ್ನು ಸೇರುವುದು. ಕಪಿನಿ ಪಶ್ಚಿಮ ಘಟ್ಟಗಳಲ್ಲಿ ಜನಿಸಿ ಹೆಗ್ಗಡದೇವನಕೋಟೆಯ ಕಾಡುಗಳಲ್ಲಿ ಹರಿಯುತ್ತ ಕಾಡಾನೆಗಳ ನೀರಾಟಕ್ಕೆ ಆಶ್ರಯವಾಗಿ, ನಂಜನಗೂಡಿನ ನಂಜುಂಡೇಶ್ವರ ಸ್ವಾಮಿಯ ಸೇವೆ ಮಾಡಿಕೊಂಡು ತಿರುಮಕೂಡಲಿನ ಬಳಿ ಕಾವೇರಿಯನ್ನು ಸೇರುತ್ತದೆ.

ಎರಡನೆಯ ಪಂಗಡದ ನದಿಗಳಲ್ಲಿ ಅನೇಕ ಚಿಕ್ಕ ಚಿಕ್ಕ ನದಿಗಳಿವೆ. ಅವುಗಳಲ್ಲಿ ನೇತ್ರಾವತಿ, ಮತ್ತು ಶರಾವತಿ ಎರಡು ಮುಖ್ಯವಾದುವು. ನೇತ್ರಾವತಿ ಪಶ್ಚಿಮಘಟ್ಟಗಳ ವರಾಹ ಪರ್ವತದಲ್ಲಿ ಜನಿಸುತ್ತದೆ. ಶರಾವತಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಅಂಬುತೀರ್ಥದ ಬಳಿ ಜನಿಸುತ್ತದೆ.



ಗೇರುಸೊಪ್ಪೆ ಜಲಪಾತ

ಶ್ರೀರಾಮನ ಬಾಣಪ್ರಯೋಗದಿಂದ ಈ ನದಿ ಉದ್ಭವವಾಯಿತೆಂದೂ ಆದು ದರಿಂದ ಶರಾವತಿಯೆಂಬ ಹೆಸರಾಯಿತೆಂದೂ ಜನರು ಹೇಳುವರು. ಈ ನದಿ ನಗರ ಮತ್ತು ಸಾಗರ ತಾಲ್ಲೂಕುಗಳಲ್ಲಿ ಹರಿಯುತ್ತದೆ. ಸಾಗರಕ್ಕೆ ಸುಮಾರು ಹದಿನೆಂಟು ಮೈಲಿಗಳ ದೂರದಲ್ಲಿ ಗೇರುಸೊಪ್ಪೆಯ ಹತ್ತಿರ ಸುಮಾರು ೯೦೦ ಅಡಿಗಳ ಎತ್ತರದಿಂದ ಧುಮುಕುವುದು. ಇದೇ ಜೋಗ ಜಲಪಾತವು. ಇನ್ನೂ ಎರಡುಮೂರು ಮೈಲಿಗಳ ದೂರವಿರುವಾಗಲೇ ಅರಣ್ಯಮಧ್ಯದಲ್ಲ ಆ ಜಲಪಾತಘೋಷವು ದಶದಿಕ್ಕುಗಳನ್ನು ಭೇದಿಸಿಕೊಂಡು ಪ್ರತಿಧ್ವನಿ ಮಾಡುತ್ತಿರುವುದು. ವಿಶಾಲವಾಗಿಯೂ ಶಾಂತವಾಗಿಯೂ ಹರಿಯುತ್ತಿರುವ ಶರಾವತಿಯನ್ನು ತೆಪ್ಪದಲ್ಲಿ ದಾಟಿ ಆಚೆಯ ಕಡೆಗೆ ಹೋ ದರೆ ಎರಡು ಮೈಲಿಗಳಷ್ಟುದೂರ ನಡೆದಮೇಲೆ ಇನ್ನೆಂದಿಗೂ ಮರೆಯಲಾ ಗದ ಅದ್ಭುತ ದೃಶ್ಯವು ಗೋಚರಿಸುತ್ತದೆ. ಶರಾವತಿ—ರಾಜ, ರೋರರ್, ರಾಕೆಟ್, ಮತ್ತು ಲೇಡಿ—ಎಂದು ನಾಲ್ಕು ಭಾಗಗಳಾಗಿ ಮೇಲಿಂದ ಧುಮು ಕುತ್ತಿರುತ್ತದೆ. ಇಂತಹ ರಮಣೀಯವಾದ ದೃಶ್ಯವು ಪ್ರಪಂಚದಲ್ಲಿ ಮತ್ತೆ ಲ್ಲಿಯೂ ದೊರೆಯದು. ಗೊಂಡಾರಣ್ಯಗಳ ಮಧ್ಯದಲ್ಲಿ ವನದೇವ ತೆಯು ಅರ್ಘ್ಯವನ್ನು ಕೊಡುತ್ತಿರುವಂತೆ ಧುಮುಕುತ್ತಿರುವ ಕ್ಷೀರರಾಶಿ ಗೋಚರಿಸುತ್ತದೆ. ಅಂತರಾಳವು ಸೀರ್ಪನಿಗಳಿಂದ ಮಂಜು ಮುಸುಕಿ ದಂತಾಗಿ ಅವುಗಳಲ್ಲಿ ತೂರುವ ಸೂರ್ಯ ರಶ್ಮಿಗಳಿಂದ ನೂರಾರು ಕಾಮನ ಬಿಲ್ಲುಗಳು ತಲೆದೋರಿ ವಿವಿಧ ವರ್ಣಗಳ ಗೃಹದ್ವಾರ ಗೋಪುರಗಳ ಮನೋಹರ ಭವನದಂತೆ ರಂಜಿಸುತ್ತವೆ. ಕೆಳಗಡೆ ಇಳಿದು ಹೋದರೆ ವರ್ಷಾಕಾಲದ ಸೋನೆ ಮಳೆಯಂತೆ ಅಖಂಡವಾಗಿ ಸುರಿಯುತ್ತಿರುವ ಸೀರ್ಪನಿಗಳಿಂದ ನಿಮಿಷಮಾತ್ರದಲ್ಲಿ ಶರೀರವಾದ್ಯಂತವೂ ತೊಯ್ದುಹೋಗು ವುದು. ಮುಂದುಗಡೆ ಅಗಾಧವಾದ ಕೊಪ್ಪರಿಗೆಗಳಲ್ಲಿ ಕುದಿಯುತ್ತಿ ರುವ ಹಾಲಿನಂತೆ ಉಕ್ಕುಕ್ಕಿ ಬೀಳುತ್ತಿರುವ ಜಲರಾಶಿ ; ಅಮರಗಂಗಾನದಿ ಯನ್ನು ಧಿಕ್ಕರಿಸುತ್ತ ಮೇಲಿಂದ ಸಂತತವಾಗಿ ಧುಮುಕುತ್ತಿರುವ ಕ್ಷೀರ ಧಾರೆ. ಒಂದೆಡೆ ಅಖಂಡವಾಗಿ, ಗಂಭೀರವಾಗಿ ರಾಜಠೀವಿಯಿಂದ ಇಳಿ ಯುತ್ತಿರುವ ರಾಜ ; ಇನ್ನೊಂದುಕಡೆ ಬಂಡೆಗಳ ಸಂದಿನಲ್ಲಿ ಅತ್ಯದ್ಭುತ ರಭಸದಿಂದ ನುಗ್ಗಿಬಂದು ಭೀಷಣಘೋಷದಿಂದ ಅದನ್ನು ಮಧ್ಯಭಾಗದಲ್ಲಿ ಸಂಧಿಸುತ್ತಿರುವ ರೋರರ್ ; ಅದರ ಪಕ್ಕದಲ್ಲಿ ಬ್ರಹ್ಮಲೋಕದಿಂದ ಧುಮುಕಿ

ಬಂದ ಗಂಗೆಯಂತೆ ತರಂಗತರಂಗವಾಗಿ ಉರುಳುರುಳಿ ಬೀಳುತ್ತ ಪರಮೇಶ್ವರನನ್ನೇ ಕೊಚ್ಚಿಬಿಡುವೆನೆಂಬ ದರ್ಪಾವತಾರಲ ರಾಕೆಟ್ ; ಸ್ತ್ರೀ ಸಹಜ ಸೌಂದರ್ಯ ಗಾಂಭೀರ್ಯ ಶಾಂತಿಗಳಿಂದ ಮೆಲ್ಲಮೆಲ್ಲನೆ ಲಜ್ಜೆಯಿಂದ ಇಳಿದಿಳಿದು ಬರುತ್ತಿರುವ ಲೇಡಿ. ಈ ಎಲ್ಲ ಭಾಗಗಳನ್ನೂ ನೋಡಿ ನೋಡಿ ಕಣ್ಣು ದಣಿಯದು, ಮನಸ್ಸು ತುಂಬದು. ಗೇರುಸೊಪ್ಪೆಯ ಬಳಿ ಇಂತಹ ರಮಣೀಯ ದೃಶ್ಯವನ್ನು ಬೀರಿ, ನಮ್ಮ ಸಂಸ್ಥಾನವನ್ನು ರಮಣೀಯಸ್ಥಾನವನ್ನಾಗಿ ಮಾಡಿ ಶರಾವತಿ ಉತ್ತರ ಕನ್ನಡಜಿಲ್ಲೆಯ ಹೊನ್ನಾವರದ ಬಳಿ ಸಾಮಾನ್ಯ ನದಿಯಂತೆ ಅರಬ್ಬೀ ಸಮುದ್ರವನ್ನು ಸೇರುತ್ತದೆ.

ಮೂರನೆಯ ಪಂಗಡವಾದ ಕೃಷ್ಣಾನದಿಯ ಉಪನದಿಗಳಲ್ಲಿ ತುಂಗಭದ್ರಾ ಮತ್ತು ವೇದಾವತಿಗಳನ್ನು ಹೇಳಬಹುದು. ತುಂಗಭದ್ರೆ ಮೊದಲು ತುಂಗಾ ಮತ್ತು ಭದ್ರಾ ಎಂಬ ಎರಡು ಬೇರೆಬೇರೆ ನದಿಗಳಾಗಿ ಪಶ್ಚಿಮಘಟ್ಟಕ್ಕೆ ಸೇರಿದ ವರಾಹ ಪರ್ವತದಲ್ಲಿ ಹುಟ್ಟುತ್ತದೆ. ಹಿಂದೆ ಹಿರಣ್ಯಾಕ್ಷನೆಂಬ ರಾಕ್ಷಸನು ಭೂಮಿಯನ್ನೆಲ್ಲ ಚಾಪೆಯಂತೆ ಸುತ್ತಿ ರಸಾತಲದಲ್ಲಿ ಹಾಕಿಬಿಟ್ಟನಂತೆ. ಆಗ ದೇವತೆಗಳಿಗೆ ಹವಿಸ್ಸನ್ನು ಕೊಡುವರಾರೂ ಇಲ್ಲದೇ ಹೋದರು. ವಿಷ್ಣು ವರಾಹಾವತಾರಮಾಡಿ ಭೂಮಿಯನ್ನು ಉದ್ಧಾರಮಾಡಲು ಹೊರಟನು. ರಸಾತಲಕ್ಕೆ ಹೋಗಿ ಅಲ್ಲಿ ಬಿದ್ದಿದ್ದ ಭೂಮಿಯನ್ನು ತನ್ನ ಕೋರೆದಾಡೆಗಳ ಮೇಲಿಟ್ಟುಕೊಂಡು ಮೇಲಕ್ಕೆ ತಂದನು. ಈ ಸಾಹಸ ಕಾರ್ಯದಿಂದ ಬಹಳ ಆಯಾಸವಾಗಲು ವರಾಹ ಪರ್ವತದ ಬಳಿ ನಿಂತು ಸ್ವಲ್ಪ ವಿಶ್ರಮಿಸಿಕೊಂಡನಂತೆ. ಆಗ ಆತನ ಬೆವರು ಧಾರಾಕಾರವಾಗಿ ಹರಿದು ತುಂಗಾ ಮತ್ತು ಭದ್ರಾ ನದಿಗಳಾದುವೆಂದೂ, ಕಣ್ಣುಗಳ ಕಡೆಯಿಂದ ಹರಿದ ನೀರು ನೇತ್ರಾವತಿಯಾಯಿತೆಂದೂ ಪುರಾಣದ ಕಥೆಯೊಂದಿದೆ.

ತುಂಗಾನದಿ, ತೀರ್ಥಹಳ್ಳಿ, ಶಿವಮೊಗ್ಗಿಗಳ ಪಕ್ಕದಲ್ಲಿ ಹರಿದು ಹೋಗುತ್ತದೆ. ಭದ್ರಾನದಿ ಕಳಸ, ನರಸಿಂಹರಾಜಪುರಗಳ ಮಾರ್ಗವಾಗಿ ಹರಿಯುತ್ತದೆ. ಇವೆರಡೂ ಶಿವಮೊಗ್ಗಿಗೆ ಸುಮಾರು ಹತ್ತುಮೈಲಿಗಳ ದೂರದಲ್ಲಿರುವ ಕೂಡಲಿಯ ಬಳಿ ಸಂಗಮವಾಗುತ್ತವೆ. ಅಲ್ಲಿಂದ ಮುಂದೆ ತುಂಗಭದ್ರಾ ಎಂಬ ಹೆಸರಿನಿಂದ ಪ್ರವಹಿಸುವುದು. ಈ ನದಿ ನಮ್ಮ ಸಂಸ್ಥಾನವನ್ನು ಹರಿಹರದ ಬಳಿ ಬಿಟ್ಟುಬಿಡುವುದು. ಪುರಾಣಗಳಲ್ಲಿ

ತುಂಗಭದ್ರಾನದಿಗೆ ಪಂಪಾನದಿಯೆಂಬ ಹೆಸರುಂಟು. ಇದು ಕೃಷ್ಣಾನದಿಯನ್ನು ಕರ್ನೂಲ್ ಬಳಿ ಸೇರುತ್ತದೆ.

ವೇದಾವತೀ ನದಿ ಮೊದಲು ವೇದ, ಮತ್ತು ಆವತಿ ಎಂಬ ಎರಡು ಬೇರೆಬೇರೆ ನದಿಗಳಾಗಿ ಬಾಬಾಬುಡರ್ ಶ್ರೇಣಿಗೆ ಸೇರಿದ ಮುಳ್ಳಯ್ಯನ ಗಿರಿಯ ಬಳಿ ಹುಟ್ಟುತ್ತದೆ. ಇವೆರಡೂ ಭಾಗಗಳು ಕಡೂರಿನ ಬಳಿ ಇರುವ ತಂಗಲಿಯಲ್ಲಿ ಸಂಗಮವಾಗುತ್ತವೆ. ಅಲ್ಲಿಂದ ಮುಂದೆ ವೇದಾವತಿ ಎಂಬ ಹೆಸರು ಬರುವುದು. ವೇದಾವತೀ ನದಿಗೆ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮಾರೀಕಣಿವೆಯ ಬಳಿ ಅಡ್ಡಗಟ್ಟೆಯನ್ನು ಹಾಕಿ ವಾಣೀ ವಿಲಾಸ ಸಾಗರ ಅಥವ ಮಾರೀಕಣಿವೆಯ ಕೆರೆಯನ್ನು ಕಟ್ಟಿದ್ದಾರೆ. ಈ ನದಿಗೆ ಹಿರಿಯೂರಿಂದ ಏಳುಮೈಲಿ ಆಚೆ ಹಗರಿ ಎಂಬ ಹೆಸರು ಬರುತ್ತದೆ.

ನಂದಿಯ ದುರ್ಗದ ನದಿಗಳು ನಾಲ್ಕನೆಯ ಗುಂಪಿಗೆ ಸೇರಿದುವು. ಇವುಗಳಲ್ಲಿ ಉತ್ತರಪಿನಾಕಿನಿ, ದಕ್ಷಿಣಪಿನಾಕಿನಿ, ಅರ್ಕಾವತಿ ಮತ್ತು ಪಾಲಾರ್ ಎಂಬವು ಮುಖ್ಯವಾದುವು.

ಸಮುದ್ರಕ್ಕೆ ಹರಿದು ಹೋಗುವ ನಮ್ಮ ಸಂಸ್ಥಾನದ ನದಿಗಳ ನೀರನ್ನು ಜನರು ಅಲ್ಲಲ್ಲಿ ತಡೆದು ವ್ಯವಸಾಯಕ್ಕೆ ಉಪಯೋಗಿಸುತ್ತಾರೆ. ಇದಕ್ಕಾಗಿ ಸಾಮಾನ್ಯವಾಗಿ ಹಳ್ಳವಾದ ಪ್ರದೇಶಗಳಲ್ಲಿಯೂ, ಕಣಿವೆಗಳಲ್ಲಿಯೂ ಅಡ್ಡಗಟ್ಟೆಗಳನ್ನು ಹಾಕಿ ಕೆರೆಗಳ ಸಾಲುಗಳನ್ನು ಕಟ್ಟಿರುವರು. ವೇದಾವತಿ ನದಿಯಿಂದ ಚಿನ್ನಹಗರಿ, ನಾಯಕನಹಟ್ಟಿ, ಭರ್ಮಸಾಗರ, ಇತ್ಯಾದಿಗಳ ಸಾಲುಗಳ ಕೆರೆಗಳು ನೂರರ ಮೇಲಿವೆ. ಪಾಲಾರು ನದಿಯಿಂದ ರಾಮಸಾಗರ ಮತ್ತು ಪಾಲಾರಿನ ಸಾಲುಗಳ ಕೆರೆಗಳು ಸಾವಿರದ ಮೇಲಿವೆ. ದಕ್ಷಿಣಪಿನಾಕಿನಿಯಿಂದ ಹೊಸಕೋಟೆ ಮತ್ತು ಕಾಡಗುಡಿಯ ಸಾಲುಕೆರೆಗಳು ನೂರರ ಮೇಲಿವೆ. ಅರ್ಕಾವತಿ ನದಿಯಿಂದ ಹೆಸರುಘಟ್ಟ ಇತ್ಯಾದಿಯಾಗಿ ಇನ್ನೂರರ ಮೇಲೆ ಕೆರೆಗಳಿವೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಷಿಂಷಾನದಿಯಿಂದ ಸೂಳೇಕೆರೆ, ಮದ್ದೂರು, ಕೊಪ್ಪ, ಬಸರಾಳು, ಬೆಳ್ಳೂರು, ಸಾಲುಕೆರೆಗಳು ಇನ್ನೂರರ ಮೇಲಿವೆ. ಕಾವೇರಿ ನದಿಗೆ ಅಣೆಕಟ್ಟಿ ಕೃಷ್ಣರಾಜಸಾಗರವನ್ನೂ, ವೇದಾವತಿಗೆ ಅಡ್ಡಕಟ್ಟಿ ಮಾರೀಕಣಿವೆ ಕೆರೆಯನ್ನೂ, ಸರ್ಕಾರದವರು ಕಟ್ಟಿರುವರು. ಈ ಉಪಾಯದಿಂದ ಮಳೆಗಾಲದಲ್ಲಿ ತುಂಬಿಹರಿಯುವ ನೀರು ಕೆರೆಗಳಲ್ಲಿ ನಿಂತು ಕೆಲವು ವರ್ಷಗಳವರೆಗೆ ಮಳೆ

ಬಾರದಿದ್ದರೂ ನೀರಿನ ವಸತಿಯನ್ನು ಕಲ್ಪಿಸುವುವು. ಮೈಸೂರು ಸಂಸ್ಥಾನ ದಲ್ಲಿ ಮನುಷ್ಯನು ಮಾಡಿರುವ ಅದ್ಭುತವಾದ ಕೆಲಸವೆಂದರೆ ಕೆರೆಗಳ ಕಾಮಗಾರಿ. ಸಾಧ್ಯವಾಗಿರುವ ಕಡೆಗಳಲ್ಲೆಲ್ಲಾ ಆಗಲೇ ಕೆರೆಗಳನ್ನು ಕಟ್ಟಿ ರುವುದರಿಂದ ಹೊಸದಾಗಿ ಕಟ್ಟಬೇಕೆನ್ನುವವರಿಗೆ ಸ್ಥಳ ದೊರೆಯುವುದೇ ದುರ್ಲಭವಾಗಿದೆ.

ವ್ಯವಸಾಯಕ್ಕೆ ಒದಗುವ ನೀರು.

ವ್ಯವಸಾಯಕ್ಕೆ ಬೇಕಾಗುವ ನೀರನ್ನು ಕೆಳಗೆ ಕಾಣಿಸಿರುವ ರೀತಿ ಯಲ್ಲಿ ರೈತರು, ಒದಗಿಸಿಕೊಳ್ಳುತ್ತಾರೆ.

1. ನದಿಗಳಿಂದ ಕಾಲುವೆಗಳನ್ನು ತೆಗೆದು ನೀರನ್ನು ಹಾಯಿಸು ವುದು. ಅನುಕೂಲವಾದ ಕಡೆಗಳಲ್ಲಿ ಅಣೆಕಟ್ಟೆಯನ್ನು ಹಾಕಿ ಈ ಕಾಲುವೆ ಗಳನ್ನು ಮಾಡಿಕೊಳ್ಳುವರು. ಕಾವೇರಿ ನದಿಗೂ ಇದರ ಉಪನದಿಗಳಾದ ಸುವರ್ಣಾವತಿ, ಲಕ್ಷ್ಮಣತೀರ್ಥ, ಹೇಮಾವತಿ, ಕಪಿನಿ, ಷಿಂಷಾಗಳಿಗೂ ಈ ರೀತಿ ಅಣೆಕಟ್ಟುಗಳನ್ನು ಹಾಕಿದ್ದಾರೆ.

2. ನದಿಗಳಿಂದ ತೆಗೆದ ಕಾಲುವೆಗಳನ್ನು ಅನುಕೂಲವಾದ ಜಾಗ ಗಳಲ್ಲಿ ಹರಿಸಿ ಕೆರೆಗಳನ್ನು ಏರ್ಪಡಿಸಿದ್ದಾರೆ. ಷಿಂಷಾನದಿಗೆ ತಗ್ಗಹಳ್ಳಿಯ ಬಳಿ ಅಣೆಕಟ್ಟಿ ಕಾಲುವೆ ತೆಗೆದು ಮದ್ದೂರು ಕೆರೆಯನ್ನು ತುಂಬಿಸಿರುವರು. ಹೀಗೆ ಏರ್ಪಟ್ಟ ಕೆರೆಗಳಿಂದ ಕಾಲುವೆಗಳನ್ನು ತೆಗೆದು ವ್ಯವಸಾಯಕ್ಕೆ ಉಪ ಯೋಗಿಸುವರು.

3. ನದಿಗಳು ಮತ್ತು ತೊರೆಗಳು ಹರಿಯುವ ಕಣಿವೆಗಳಲ್ಲಿ ಅಡ್ಡ ಗಟ್ಟೆ ಹಾಕಿ ಸಾಲು ಕೆರೆಗಳನ್ನು ಒಂದರ ಕೆಳಗೊಂದು ಕಟ್ಟುವುದು. ಈ ವಿಚಾರವನ್ನು ಮೇಲೆ ಹೇಳಿದ್ದೇವೆ. ಇದರಿಂದ ಒಂದು ಕೆರೆ ತುಂಬಿ ಕೋಡಿ ಹರಿದಾಗ ಆ ನೀರು ವ್ಯರ್ಥವಾಗದೆ ಮುಂದಿನ ಕೆರೆಗೆ ಹೋಗುತ್ತದೆ. ಎಲ್ಲಾ ದರೂ ಒಂದುಕಡೆ ಮಳೆ ಹೆಚ್ಚಾಗಿ ಬಿದ್ದು ಮಿಕ್ಕ ಭಾಗದಲ್ಲಿ ಆಗದಿದ್ದರೂ ಈ ಸಾಲು ಕೆರೆಗಳಲ್ಲಿ ಮುಕ್ಕಾಲು ಭಾಗವೆಲ್ಲಾ ತುಂಬಿಹೋಗುವ ಸಂಭವ ವಿರುತ್ತದೆ.

4. ಮಳೆಯ ನೀರು ಬೆಟ್ಟಗುಡ್ಡಗಳಿಂದ ಜಾರಿಬಂದು ಕೆರೆಕುಂಟೆ ಗಳಾಗುವ ಹಾಗಿದ್ದರೆ ಅಂತಹ ಕಡೆಯಲ್ಲಿ ಕೆರೆಗಳನ್ನು ಏರ್ಪಡಿಸಿರುತ್ತಾರೆ. ಈ ಕೆರೆಗಳು ತುಂಬುವುದಕ್ಕೆ ಆ ಪ್ರದೇಶದಲ್ಲಿಯೇ ಮಳೆಯಾಗಬೇಕು.

5. ಬಾವಿಗಳು ಮತ್ತು ತಲಪರಿಗೆಗಳು. ತೋಟಗಳಲ್ಲಿಯೂ ಕೆರೆಗಳ ಅಚ್ಚುಗಟ್ಟಿಯ ಕೆಳಗೂ ಇಂತಹ ಬಾವಿಗಳನ್ನು ತೋಡಿರುತ್ತಾರೆ. ತಲಪರಿಗೆಗಳಿಗೆ ಸರಿಯಾದ ಬುಗ್ಗೆಯ ನೀರು ಒದಗಿ ಬರುತ್ತಿರಬೇಕು. ಇದನ್ನು ಸಮೀಪದ ಚಿಕ್ಕ ಬಾವಿಗೆ ಹರಿಸಿಕೊಂಡು ಯಾತಗಳ ಮೂಲಕ ವ್ಯವಸಾಯಕ್ಕೆ ಹಾಯಿಸಿಕೊಳ್ಳುತ್ತಾರೆ.

ನದಿಗಳ ಉಪಯೋಗ.

ಮೈಸೂರು ಸಂಸ್ಥಾನದ ನದಿಗಳು ವ್ಯವಸಾಯಕ್ಕೆ ಉಪಯೋಗವಾಗಿರುವುವು; ದೋಣಿಗಳ ಅಥವ ಹಡಗುಗಳ ಸಂಚಾರಕ್ಕೆ ಯೋಗ್ಯವಾಗಿಲ್ಲ. ದವಸಧಾನ್ಯಗಳನ್ನು ದೋಣಿಗಳಲ್ಲಿ ಸಾಗಿಸುವುದಕ್ಕೂ ಅನುಕೂಲವಿಲ್ಲ. ಸಾಕಾದಷ್ಟು ನೀರು ಇಲ್ಲದಿರುವುದೂ, ನದಿಗಳ ಪಾತ್ರದಲ್ಲಿ ಕಲ್ಲುಬಂಡೆಗಳಿರುವುದೂ ಇದಕ್ಕೆ ಮುಖ್ಯಕಾರಣಗಳು. ಆದರೆ ಮಳೆಗಾಲದಲ್ಲಿ ಹೆಚ್ಚಾಗಿ ನೀರು ಹರಿಯುವಾಗ ಚೌಬೀನೀ ಮರಗಳನ್ನು ತೇಲಿಬಿಡುವುದಕ್ಕೆ ತುಂಗಾ, ಭದ್ರಾ, ಮತ್ತು ಕಪಿನೀನದಿಗಳು ಉಪಯುಕ್ತವಾಗಿವೆ.

ನಮ್ಮ ದೇಶದ ನದಿಗಳಲ್ಲಿ ಕಾವೇರಿ ಮತ್ತು ಶರಾವತಿಗಳು ಎತ್ತರದಿಂದ ಧುಮುಕುವುವಷ್ಟೆ. ಹೀಗೆ ದೊರೆಯುವ ಜಲಪಾತಗಳಲ್ಲಿ ಶಿವನಸಮುದ್ರದ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ದೊರಕಿಸಿಕೊಂಡು ಊರುಗಳನ್ನು ಬೆಳಗುವುದಕ್ಕೂ ಗಣಿಯ ಕೆಲಸಗಳನ್ನು ಮಾಡಿಸುವುದಕ್ಕೂ ಕೈಗಾರಿಕೆಗಳಿಗೂ ಉಪಯೋಗಿಸುತ್ತಿದ್ದಾರೆ. ಗೇರುಸೊಪ್ಪೆಯ ಜಲಪಾತದಿಂದಲೂ ವಿದ್ಯುತ್ತನ್ನು ದೊರಕಿಸಿಕೊಂಡು ಶಿವಮೊಗ್ಗಿ ಮುಂತಾದ ಪ್ರಾಂತಗಳಿಗೆ ಅನುಕೂಲ ಮಾಡಬೇಕೆಂದು ಸರ್ಕಾರದವರು ಆಲೋಚಿಸುತ್ತಿದ್ದಾರೆ. ಈಗ ಭದ್ರಾವತಿಯಲ್ಲಿ ನಡೆಯುತ್ತಿರುವ ಕಬ್ಬಿಣದ ಕಾರ್ಖಾನೆಯ ಕೆಲಸವನ್ನು ವಿದ್ಯುತ್ತಿನಿಂದ ಸುಲಭಪಡಿಸಿಕೊಳ್ಳಬಹುದೆ ಎನ್ನುವುದನ್ನು ಶಾಸ್ತ್ರಜ್ಞರು ಪರ್ಯಾಲೋಚಿಸುತ್ತಿದ್ದಾರೆ. ಆದುದರಿಂದ ಹಡಗುಗಳ ಸಂಚಾರಕ್ಕೆ ಯೋಗ್ಯವಾಗಿಲ್ಲದಿದ್ದರೂ ವಿದ್ಯುತ್ತನ್ನು ಪಡೆಯುವುದಕ್ಕೂ ವ್ಯವಸಾಯಕ್ಕೂ ನದಿಗಳು ಉಪಯೋಗಕರವಾಗಿವೆಯೆಂದು ಹೇಳಬೇಕು.

ಮೂರನೆಯ ಅಧ್ಯಾಯ.

ವಾಯುಗುಣ ಮತ್ತು ಭೂಗುಣ.

ಋತುಗಳು.

ಸಾಮಾನ್ಯವಾಗಿ ಒಂದು ವರ್ಷವನ್ನು ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಮತ್ತು ಶಿಶಿರ ಎಂದು ಷಡೃತುಗಳಾಗಿ ವಿಂಗಡಿಸುವ ರಷ್ಟೆ. ಇದಕ್ಕೆ ಬದಲು ಬೇಸಗೆಯ ಕಾಲ, ಮಳೆಗಾಲ ಮತ್ತು ಚಳಿ ಗಾಲ ಎಂದು ಮೂರು ಕಾಲಗಳಾಗಿ ವಿಂಗಡಿಸಿದರೆ ಸಾಕಾಗುವುದೆಂದು ಹೇಳಬಹುದು. ಮಾರ್ಚಿ, ಏಪ್ರಿಲ್, ಮತ್ತು ಮೇ ತಿಂಗಳುಗಳು ಬೇಸ ಗೆಯ ಕಾಲ. ಶಿವರಾತ್ರಿಯಾಗುತ್ತಲೂ ಚಳಿ ಬಿಟ್ಟಿತು ಎಂದು ಜನರು ಆಡಿಕೊಳ್ಳುವುದುಂಟು. ಜೂನ್ ತಿಂಗಳಿಂದ ನವೆಂಬರ್ ತಿಂಗಳ ಮಧ್ಯದ ವರೆಗೂ ಮಳೆಗಾಲ. ನವೆಂಬರ್ ತಿಂಗಳ ಮಧ್ಯದಿಂದ ಫೆಬ್ರವರಿ ತಿಂಗಳ ಪೂರ್ತಿ ಚಳಿಗಾಲ. ಮಳೆಗಾಲವು ಮುಗಿಯುತ್ತ ಬಂದಹಾಗೆಲ್ಲ ಮಂಜು ಸುರಿಯುವುದಕ್ಕೆ ಆರಂಭವಾಗುವುದು. ಡಿಶಂಬರ್, ಮತ್ತು ಜನವರಿ ತಿಂಗಳುಗಳಲ್ಲಿ ಹೆಚ್ಚು ಮಂಜು ಸುರಿಯುತ್ತದೆ. ಈ ಮಂಜು ಬೆಳಗಿನ ಜಾವ 3-4 ಗಂಟೆಗೆ ಆರಂಭವಾಗಿ ಬೆಳಗ್ಗೆ 8-9 ಗಂಟೆಗಳವರೆಗೂ ಇರುವುದುಂಟು. ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಆಗಸ್ಟ್ ತಿಂಗಳಿಂದಲೇ ಮಂಜು ಪ್ರಾರಂಭವಾಗುವುದೆಂದೂ ಅದು ಬೆಟ್ಟಗಳಮೇಲೆ ಕಾಣಿಸಿಕೊಳ್ಳು ವುದೆಂದೂ ತಿಳಿದುಬಂದಿದೆ.

ವಾಯುಗುಣವನ್ನು ನಿಶ್ಚಯಿಸುವ ಅಂಶಗಳು.

ಮೈಸೂರು ಸಂಸ್ಥಾನವು ಉಷ್ಣವಲಯದಲ್ಲಿರುವುದರಿಂದ ನ್ಯಾಯ ವಾಗಿ ಇಲ್ಲಿ ಬಿಸಲಿನ ತಾಪವು ಹೆಚ್ಚಾಗಿಯೇ ಇರಬೇಕು. ಆದರೆ ಉಷ್ಣ ವಲಯದ ಇತರ ಪ್ರದೇಶಗಳಿಗೂ ಮೈಸೂರಿಗೂ ಕೆಲವು ವ್ಯತ್ಯಾಸಗಳಿವೆ. ಒಂದೇ ಅಕ್ಷಾಂಶರೇಖೆಯಲ್ಲಿರುವ ಘಟ್ಟದ ಕೆಳಗಣ ಸೀಮೆಯನ್ನೂ ಮೈಸೂ ರಿನ ಭಾಗಗಳನ್ನೂ ಪೂರ್ವದಿಕ್ಕಿನಲ್ಲಿ ಕಣಿವೇ ಕೆಳಗಣ ಸ್ಥಳಗಳನ್ನೂ ತೆಗೆದು

ಕೊಂಡರೆ ಈ ಎಲ್ಲ ಭಾಗಗಳಲ್ಲೂ ಒಂದೇ ತೆರನಾದ ವಾಯುಗುಣವಿಲ್ಲವೆನ್ನುವುದು ತಿಳಿಯುತ್ತದೆ. ಉದಾಹರಣೆಗೆ ಜುಲೈ ತಿಂಗಳಿನಲ್ಲಿ ಮದರಾಸಿನ ಉಷ್ಣಾಂಶವು 100° F ಗಳಿಗಿಂತ ಹೆಚ್ಚಾಗಿರುವುದು ಸರ್ವಸಾಮಾನ್ಯವಾಗಿದೆ. ಅದೇ ಅಕ್ಷಾಂಶದಲ್ಲಿರುವ ಬೆಂಗಳೂರಿನ ಉಷ್ಣಾಂಶವು 84° F ಆಗಿರುತ್ತದೆ. ಈ ರೀತಿ ಅಲ್ಲಲ್ಲಿ ವ್ಯತ್ಯಾಸ ಕಂಡುಬರಲು ಕೆಲವು ಕಾರಣಗಳುಂಟು.

1. ಸಮುದ್ರಮಟ್ಟದಿಂದ ಎತ್ತರ.—ಸಮುದ್ರ ತೀರದಲ್ಲಿರುವ ಪ್ರದೇಶದಿಂದ ಆಕಾಶದಕಡೆಗೆ ಏರುತ್ತ ಹೋದರೆ ಪ್ರತಿ 300 ಅಡಿಗಳಿಗೂ 1° F ಉಷ್ಣವು ಕಡಮೆಯಾಗುವುದು. ಮೈಸೂರು ಸಂಸ್ಥಾನವು 2,000 ಅಡಿಗಳ ಮೇಲಿರುವ ಪ್ರಸ್ಥಭೂಮಿಯಾಗಿರುವುದರಿಂದ ಇಲ್ಲಿನ ವಾಯುಗುಣವು ತೀರಪ್ರದೇಶಗಳ ವಾಯುಗುಣಕ್ಕಿಂತ ಶೀತಲವಾಗಿರಬೇಕು.

2. ಮಳೆ.—ಮಳೆ ಬೀಳುವುದರಿಂದ ವಾಯುವಿನಲ್ಲಿರುವ ಉಷ್ಣವು ಕಡಮೆಯಾಗುವುದೆನ್ನುವುದನ್ನು ಅನುಭವದಿಂದ ನೋಡಿರುತ್ತೇವೆ. ಮೈಸೂರು ಸಂಸ್ಥಾನವು ನೈರುತ್ಯೇಶಾನ್ಯದ ಮಳೆಗಳೆರಡಕ್ಕೂ ಒಳಗಾಗಿರುವುದರಿಂದ ವರ್ಷದಲ್ಲಿ 6 ತಿಂಗಳ ಕಾಲ ಹೆಚ್ಚಾಗಿ ಮೋಡವಾಡುತ್ತಲೂ, ಮಳೆಯು ಸುರಿಯುತ್ತಲೂ ಉಷ್ಣವನ್ನು ಕಡಮೆಮಾಡುತ್ತವೆ.

3. ಗಾಳಿ.—ಸಮುದ್ರದ ಕಡೆಯಿಂದ ಗಾಳಿ ಬೀಸುವುದಾದರೆ ಶೀತೋಷ್ಣಗಳ ವಿಪರೀತವು ಬಹಳಮಟ್ಟಿಗೆ ಕಡಮೆಯಾಗುವುದು. ಸಾಮಾನ್ಯವಾಗಿ ನೆಲವು ಶೀಘ್ರದಲ್ಲಿ ಕಾಯುವುದು ಮತ್ತು ಆರುವುದು. ಸಮುದ್ರದ ನೀರು ಸುಲಭವಾಗಿ ಕಾಯುವುದೂ ಇಲ್ಲ, ಆರುವುದೂ ಇಲ್ಲ. ಆದುದರಿಂದ ನೆಲವು ಹೆಚ್ಚು ಕಾದಿರುವಾಗ ಸಮುದ್ರದ ಕಡೆಯಿಂದ ತಂಗಾಳಿಯು ಬೀಸುವುದು. ಪೂರ್ವ ಪಶ್ಚಿಮ ಸಮುದ್ರಗಳಿಂದ ಹೀಗೆ ಗಾಳಿಯು ಸಂಸ್ಥಾನದ ಮೇಲೆ ಬೀಸುತ್ತಿರುತ್ತದೆ.

4. ಕಾಡುಗಳು.—ಕಾಡುಗಳಲ್ಲಿ ಗಿಡಮರಗಳೂ ನೆರಳೂ ಹೆಚ್ಚಾಗಿರುವುದರಿಂದ ಅದರಲ್ಲಿರುವ ತಂಪು ಸುಲಭದಲ್ಲಿ ಆರುವುದಿಲ್ಲ. ಗಿಡಮರಗಳಿಲ್ಲದ ಪ್ರದೇಶದಲ್ಲಾದರೋ ಇರುವ ನೀರು ಶೀಘ್ರದಲ್ಲಿ ಆವಿಯಾಗಿ ಹೋಗಿ ಸೆಕೆಯುಂಟಾಗುತ್ತದೆ. ಆದುದರಿಂದ ಕಾಡುಗಳ ಮೇಲಿಂದ ಬೀಸುವ ಗಾಳಿ ಸಾಮಾನ್ಯವಾಗಿ ತಂಪಾಗಿಯೇ ಇರುವುದು.

ಮೇಲೆ ಹೇಳಿದ ಕಾರಣಗಳಿಂದ ಮೈಸೂರು ಸಂಸ್ಥಾನವು ಉಷ್ಣ ವಲಯದಲ್ಲಿದ್ದರೂ ಹೆಚ್ಚು ಸೆಕೆಯಿಲ್ಲದೆ ಸಮಧಾತುವಾದ ವಾಯುಗುಣ ವನ್ನು ಪಡೆದಿರುವುದು. ಇದರಿಂದ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಒಂದೇ ವಿಧವಾದ ವಾಯುಗುಣವಿರುವುದೆಂದು ಭಾವಿಸಬಾರದು. ಆಯಾ ಸನ್ನಿವೇಶಕ್ಕನುಗುಣವಾಗಿ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ವಾಯುಗುಣದ ಏರ್ಪಾಡು ಸ್ವಲ್ಪ ಸ್ವಲ್ಪವಿದ್ದೇ ಇರುತ್ತದೆ.

ಸಂಸ್ಥಾನದ ಬೇರೆ ಬೇರೆ ಭಾಗಗಳ ವಾಯುಗುಣ.

ಬೆಂಗಳೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ, ತುಮ ಕೂರು ಡಿಸ್ಟ್ರಿಕ್ಟಿನ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿಯೂ ವಾಯು ಗುಣವು ಹೆಚ್ಚುಕಡಮೆ ಒಂದೇ ಸಮನಾಗಿರುವುದೆಂದು ಹೇಳಬಹುದು. ಆದರೆ ನೆಲವು ಬೆಂಗಳೂರಿನಿಂದ ನಾಲ್ಕು ಕಡೆಗೂ ಇಳಿಜಾರಾಗುತ್ತ ಹೋಗುವುದರಿಂದಲೂ, ಕೋಲಾರದ ಡಿಸ್ಟ್ರಿಕ್ಟು ಅಷ್ಟೊಂದು ಎತ್ತರ ವಿಲ್ಲದ್ದರಿಂದಲೂ, ಅಲ್ಲಿ ಸ್ವಲ್ಪ ಸೆಕೆ ಹೆಚ್ಚಾಗಿರುವುದು. ಬೆಂಗಳೂರು ಡಿಸ್ಟ್ರಿಕ್ಟಿಗಿಂತ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮಳೆ ಕಡಿಮೆ. ಈ ಕಾರಣದಿಂ ದಲೂ ಅಲ್ಲಿ ಸೆಕೆ ಹೆಚ್ಚು.

ತುಮಕೂರು ಡಿಸ್ಟ್ರಿಕ್ಟಿನ ಉತ್ತರಭಾಗ ಮತ್ತು ಚಿತ್ರದುರ್ಗ ಡಿಸ್ಟ್ರಿ ಕ್ಟುಗಳಲ್ಲಿ ಕಾಡುಗಳಿಲ್ಲ. ಅಲ್ಲಿ ಮಳೆ ಕಡಮೆ. ಭೂಮಿಯ ಮಟ್ಟವು ಚಿತ್ರದುರ್ಗದಿಂದ ಉತ್ತರಕ್ಕೆ ಮತ್ತು ವಾಯವ್ಯಕ್ಕೆ ಕಡಮೆಯಾಗುತ್ತ ಹೋಗುವುದು. ಅಲ್ಲಿಯ ನೆಲವು ಕರಿಯಮಣ್ಣಿನಿಂದ ಕೂಡಿದೆ. ಈ ಕಾರಣಗಳಿಂದ ಈ ಭಾಗದ ವಾಯುಗುಣವು ಬಳ್ಳಾರಿಯ ಕಡೆಯ ವಾಯು ಗುಣದಂತೆ ಬಹಳ ಸೆಕೆಯುಳ್ಳುದ್ದಾಗಿರುವುದು.

ತುಮಕೂರು ಡಿಸ್ಟ್ರಿಕ್ಟಿನ ದಕ್ಷಿಣ ಮತ್ತು ನೈರುತ್ಯ ಭಾಗಗಳಲ್ಲಿ ಬೆಂಗಳೂರಿನ ವಾಯುಗುಣವೇ ಇರುತ್ತದೆ. ಇಲ್ಲಿಯ ನೆಲವು ಕೆಂಪು ಮಣ್ಣಿನಿಂದ ಕೂಡಿರುವುದು, ಮತ್ತು ಭೂಮಿ ಎತ್ತರವಾಗಿರುವುದು; ಸುತ್ತಲಿನ ಬೆಟ್ಟಗುಡ್ಡಗಳಲ್ಲಿ ಮರಗಿಡಗಳಿರುವುವು. ಈ ಕಾರಣಗಳಿಂದ ಇಲ್ಲಿಯ ಹವ ಉತ್ಕೃಷ್ಟವಾಗಿದೆ.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬೆಂಗಳೂರಿಗಿಂತ ಸೆಕೆ ಹೆಚ್ಚು.

ಹಾಸನ ಡಿಸ್ಟ್ರಿಕ್ಟಿನ ಉಷ್ಣಾಂಶವು ಬೆಂಗಳೂರಿಗಿಂತ ಕಡಮೆಯಾಗಿದೆ. ಇಲ್ಲಿ ಉಷ್ಣಾಂಶದ ಸರಾಸರಿ 72°.9 ಏಪ್ರಿಲ್ ತಿಂಗಳಲ್ಲಿ 97.°6 ವರೆಗೂ ಏರುವುದಾದರೂ ಜನವರಿ ತಿಂಗಳಲ್ಲಿ 42°.7 ಡಿಗ್ರಿಗಳಷ್ಟು ಕಡಮೆ ಶೈತ್ಯವಿರುತ್ತದೆ. ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಸೆಕೆ ಸಾಮಾನ್ಯವಾಗಿ ಹೆಚ್ಚುವುದಾದರೂ ಅರಬ್ಬೀ ಸಮುದ್ರದ ಕಡೆಯಿಂದ ಬೀಸುವ ಗಾಳಿಯ ದೆಸೆಯಿಂದ ವಾಯುಗುಣವು ಹಿತಕರವಾಗಿರುತ್ತದೆ. ಪಶ್ಚಿಮ ಘಟ್ಟಗಳಿಗೆ ಸಮೀಪವಾದ ಭಾಗದಲ್ಲಿ ಕಾಡುಗಳ ಶೈತ್ಯದ ದೆಸೆಯಿಂದ ವಾಯುಗುಣವು ಶೀತಳವಾಗಿರುತ್ತದೆ. ಆದರೆ ಕೊಳೆತು ನಾರುವ ಸಸ್ಯಾದಿಗಳಿಂದ, ಮಲೇರಿಯಾ ಜ್ವರವು ತಲೆದೋರಿ ಈ ಭಾಗವು ಅನಾರೋಗ್ಯದ ಸೀಮೆಯಾಗಿದೆ.

ಕಡೂರು ಡಿಸ್ಟ್ರಿಕ್ಟಿನ ವಾಯುಗುಣವು ಮುಕ್ಕಾಲುಭಾಗವೆಲ್ಲಾ ಹಾಸನ ಡಿಸ್ಟ್ರಿಕ್ಟನ್ನು ಹೋಲುತ್ತದೆ. ಇಲ್ಲಿ ಚಳಿಗಾಲದಲ್ಲಿ ಚಳಿ ಹೆಚ್ಚು. ಮಲೆನಾಡಿನ ಭಾಗವೆಲ್ಲಾ ಮಲೇರಿಯಾ ಜ್ವರದ ಬೀಡಾಗಿದೆ.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ವಾಯುಗುಣದ ವ್ಯತ್ಯಾಸವನ್ನು ಬಹಳ ಮಟ್ಟಿಗೆ ನೋಡಬಹುದು. ಪಶ್ಚಿಮದ ಎಲ್ಲೆ ಸಮುದ್ರ ತೀರಕ್ಕೆ 8–10 ಮೈಲಿಗಳ ದೂರದಲ್ಲಿದೆ. ಪೂರ್ವದ ಎಲ್ಲೆ 100 ಮೈಲಿಗಳ ದೂರದಲ್ಲಿದೆ. ಪಶ್ಚಿಮದಕಡೆ ಮಳೆ ಹೆಚ್ಚು. ಬೆಟ್ಟಗುಡ್ಡಗಳೂ ಕಾಡುಗಳೂ ಹೆಚ್ಚು. ಪೂರ್ವದಲ್ಲಿ ಮಳೆ ಕಡಮೆ. ದೊಡ್ಡ ಕಾಡುಗಳೂ ಇಲ್ಲ. ಆದುದರಿಂದ ಪೂರ್ವಭಾಗದಲ್ಲಿ ಸೆಕೆ ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ. ಮಲೆನಾಡು ಭಾಗದಲ್ಲಾದರೋ ಡಿಶಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಚಳಿ ಬಹಳ ಹೆಚ್ಚಾಗಿರುತ್ತದೆ. ಆಗಾಗ ಸಮುದ್ರದ ಗಾಳಿಯ ದೆಸೆಯಿಂದ ವಾಯುಗುಣವು ಹಿತಕರವಾಗಿದ್ದರೂ ಮಲೆನಾಡು ಪ್ರಾಂತ್ಯವೆಲ್ಲ ಅನಾರೋಗ್ಯದ ಕೊಂಪೆಯಾಗಿರುತ್ತದೆ. ಡಿಶಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ಮಂಜು ಬಹಳ ಒತ್ತಾಗಿ ಬೀಳುವುದು.

ಒಟ್ಟಿನಲ್ಲಿ ಮಲೆನಾಡು ಪ್ರಾಂತ್ಯವನ್ನು ಬಿಟ್ಟರೆ ಮೈಸೂರು ಸಂಸ್ಥಾನದ ವಾಯುಗುಣವು ಮನುಷ್ಯರಿಗೂ ಪಶುಗಳಿಗೂ ಹಿತಕರವಾಗಿದೆಯೆಂದು ಹೇಳಬಹುದು.

ಭೂಗುಣ.

ಭೂಗುಣ.—ನೆಲದ ಮೇಲೆ ಕಾಣುತ್ತಿರುವ ಬೆಟ್ಟಗುಡ್ಡಗಳೂ ನೆಲದಲ್ಲಿ ಅಡಗಿರುವ ಬಂಡೆ ಶಿಲೆಗಳೂ, ಬಿಸಿಲು ಮಳೆ ಗಾಳಿಗಳಿಂದ ಮಾರ್ಪಟ್ಟು ಆಯಾಯ ಸ್ಥಳಗಳ ಭೂಗುಣವನ್ನು ಬೇರೆ ಬೇರೆ ಮಾಡಿವೆ. ಸಾಮಾನ್ಯವಾಗಿ ಬೆಟ್ಟಗುಡ್ಡಗಳಮೇಲೆ ಬೀಳುವ ಮಳೆಯ ನೀರು ಅಲ್ಲಿರುವ ಮಣ್ಣನ್ನು ಕೊಚ್ಚಿಕೊಂಡು ಕೆಳಗಿಳಿಯುತ್ತದೆ. ಇದರೊಡನೆ ಸಣ್ಣಪುಟ್ಟ ಕಲ್ಲುಗಳೂ ಉರುಳಿಬಂದು ಬೀಳುವುವು. ಬಿಸಿಲಿನಿಂದಲೂ ನೀರಿನಿಂದಲೂ ಅರ್ಧ ಜೀರ್ಣವಾಗಿರುವ ಬಂಡೆಗಳು ಪುಡಿಪುಡಿಯಾಗಿ ನೀರಿನಲ್ಲಿ ಕದಡಿಕೊಂಡು ಕೆಳಕ್ಕೆ ಬರುತ್ತವೆ. ಅಯಾ ಭೂಮಿಗಳ ಮೇಲೆ ನೀರು ಹರಿದುಬರುವಾಗ ಅಲ್ಲಿರುವ ಲವಣಗಳನ್ನು ಕರಗಿಸಿಕೊಂಡು ಲೋಹಗಳನ್ನು ಜೀರ್ಣಿಸಿಕೊಂಡು ಕ್ರಮಕ್ರಮವಾಗಿ ಕಣಶಿಲೆ ಇತ್ಯಾದಿಗಳನ್ನು ಸವೆಸುವ ಸಾಮರ್ಥ್ಯವನ್ನು ಅದು ಪಡೆಯುತ್ತದೆ. ಸಾಮಾನ್ಯವಾಗಿ ಬೆಟ್ಟಗಳ ಮಧ್ಯದಲ್ಲಿರುವ ಕಣಿವೆಯ ಪ್ರದೇಶಗಳಲ್ಲೆಲ್ಲಾ ನೆಲವು ಫಲವತ್ತಾಗಿರುವುದು. ಕಣಿವೆಯಿಂದ ಮೇಲ್ಭಾಗಕ್ಕೆ ಹತ್ತಿಹೋದರೆ ಎತ್ತರದಲ್ಲಿ ಕಲ್ಲುಮರಳು ಮಿಶ್ರವಾದ ಕೆಂಪು ನೆಲವು ದೊರೆಯುವುದುಂಟು. ಇನ್ನೂ ಮೇಲ್ಭಾಗದಲ್ಲಿ ಕಲ್ಲುಮರಗಳ ಪ್ರದೇಶವೇ ಹೆಚ್ಚಾಗಿ ಸಿಕ್ಕುತ್ತದೆ. ನಮ್ಮ ಸಂಸ್ಥಾನದಲ್ಲಿ ಎಂಟು ಬಗೆಗಳ ನೆಲವಿರುವುದೆಂದು ತಿಳಿದುಬಂದಿದೆ.

ಭೂಗುಣದ ಭೇದಗಳು.

(1) <u>ಎರೆಭೂಮಿ.</u>—ಇದು ಕರಿಯನೆಲ. ಕಲ್ಲುಗಳು ಮಿಶ್ರವಾಗಿರುವುದಿಲ್ಲ.

(2) <u>ಕರೇಭೂಮಿ.</u>—ಇದೂ ಕರಿಯನೆಲ. ಆದರೆ ಕಲ್ಲುಗಳು ಮಿಶ್ರವಾಗಿರುತ್ತವೆ.

(3) <u>ಕೆಂಗಲ್ಲು ಅಥವಾ ಕೆಂಪು</u>.—ಇದರಲ್ಲಿ ನಾನಾ ಬಗೆಗಳುಂಟು. ಎಣ್ಣೆಗೆಂಪು ಬಣ್ಣದಿಂದ ಶುದ್ಧ ಕೆಮ್ಮಣ್ಣುವರೆಗೂ ದೊರೆಯುತ್ತದೆ. ಆಯಾ ಬಣ್ಣಕ್ಕನುಸಾರವಾಗಿ ಭೂಗುಣವಿರುವುದು. ಬಂಕೆ ಬಂಕೆಯಾದ ಮಣ್ಣು ಸೇರಿರುತ್ತದೆ.

(4) ಮರಳುಭೂಮಿ.—ಇದರಲ್ಲಿ ಮರಳು ಹೆಚ್ಚು ಮಿಶ್ರವಾಗಿರುವುದು.

(5) ಕಲ್ಲು ಮರಳುಭೂಮಿ.—ಸಾಮಾನ್ಯವಾದ ಮಣ್ಣು ನೆಲ. ಇದರಲ್ಲಿ ಕಲ್ಲುಗಳೂ ಗರಸೂ ಮಿಶ್ರವಾಗಿರುತ್ತದೆ.

(6) ಬಿಳೇಕರ್ಲು.—ಇದು ಬಿಳೀಭೂಮಿ. ಬಂಕೆ ಬಂಕೆಯಾಗಿರುವುದು.

(7) ಮಸಬು ಅಥವ ಕೆಬ್ಬೆನೆಲ.—ಸಾಮಾನ್ಯವಾಗಿ ತೋಟಗಳಲ್ಲಿ ಇಂತಹ ನೆಲವನ್ನು ನೋಡಬಹುದು.

(8) ಚೌಳುನೆಲ.—ಇದರಲ್ಲಿ ಕ್ಷಾರಗಳೂ ಲವಣಗಳೂ ಹೇರಳವಾಗಿರುತ್ತವೆ.

ಸಂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಭೂಗುಣಗಳು.

ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಒಳ್ಳೆಯ ಕೆಮ್ಮಣ್ಣು ನೆಲವು ಹೆಚ್ಚಾಗಿದೆ. ಇದರಲ್ಲಿ ಕೀಳು ಬಣ್ಣಗಳ ನೆಲವೂ ಉಂಟು. ಕೆಳಭಾಗದಲ್ಲಿರುವ ಕಣಶಿಲೆಯನ್ನು ಮುಚ್ಚಿಕೊಂಡು ಕೆಲವು ಅಂಗುಲಗಳಿಂದ ಹಿಡಿದು ಅನೇಕ ಅಡಿಗಳಷ್ಟು ದಪ್ಪವಾಗಿ ಇದು ದೊರೆಯುತ್ತದೆ. ಇದೂ ಅಲ್ಲದೆ ತಿಳಿಕಪ್ಪಿನ ನೆಲವೂ, ಮರಳುಗೂಡಿದ ನೆಲವೂ, ಬಿಳೀ ಜೇಡಿಯ ನೆಲವೂ ಅಲ್ಲಲ್ಲಿ ದೊರೆಯುತ್ತವೆ. ಕೆಲವು ಕಡೆಗಳಲ್ಲಿ ಕರಿಯ ನೆಲವು ಸಿಕ್ಕುವುದಾದರೂ ಅವುಗಳಿಂದ ಹೆಚ್ಚು ಪ್ರಯೋಜನವನ್ನು ಪಡೆಯುತ್ತಿಲ್ಲ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ದಿಣ್ಣೆಯ ಪ್ರದೇಶವೆಲ್ಲಾ ಕೆಂಪಾಗಿಯೂ ಗರಸಿನಿಂದ ಕೂಡಿಯೂ ಇದೆ. ಕೆಳಭಾಗದ ಕಣಿವೆಗಳಲ್ಲಿ ಫಲವತ್ತಾದ ನೆಲವಿರುವುದು. ಜೀರ್ಣಿಸಿದ ಬಂಡೆಗಳ ನುಣ್ಣನೆಯ ಪುಡಿ ಮಳೆಗಾಲದಲ್ಲಿ ಜಾರಿ ಬಂದು ಇಲ್ಲಿ ಸೇರಿರುವುದು. ಗುಡ್ಡಗಳ ಮೇಲ್ಭಾಗವು ಕಲ್ಲು ನೆಲವಾದುದರಿಂದ ಅಷ್ಟೊಂದು ಸಾರ್ಥಕವಾಗಿಲ್ಲ. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮಧುಗಿರಿ, ಚಿಕ್ಕನಾಯ್ಕನಹಳ್ಳಿ ತಾಲ್ಲೂಕುಗಳು ಫಲವತ್ತಾದುವು. ಇಲ್ಲಿ ಕಪ್ಪು ನೆಲವಿದೆ. ಸೀರ್ಯದ ಪೂರ್ವಭಾಗವೂ ಕೊರಟಗೆರೆಯ ಉತ್ತರ ಭಾಗವೂ ಮೇಲಿನಂತೆಯೇ ಇದೆ. ದಕ್ಷಿಣದ ತಾಲ್ಲೂಕುಗಳಲ್ಲಿಯೂ, ಪಶ್ಚಿಮದ ತಾಲ್ಲೂಕುಗಳಲ್ಲಿಯೂ ಕೆಮ್ಮಣ್ಣುಭೂಮಿ ಹೆಚ್ಚಾಗಿ ದೊರೆಯುತ್ತದೆ.

ಪೂರ್ವಭಾಗದ ತಾಲ್ಲೂಕುಗಳಲ್ಲಿ ಮರಳುಭೂಮಿ ಹೆಚ್ಚು. ಕಣಿವೆಯ ಪ್ರದೇಶಗಳಲ್ಲಿಯೂ, ಕೆರೆ ಕೆಳಗಣ ಪ್ರದೇಶಗಳಲ್ಲಿಯೂ ನೆಲವು ಫಲವತ್ತಾಗಿದೆ. ಮಿಕ್ಕ ಭಾಗವೆಲ್ಲ ಸಾರವಿಲ್ಲದ ಭೂಮಿ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೆಂಪು ನೆಲವು ಹೆಚ್ಚು. ಗರಸು ಸೇರಿದ ಸಾರವಿಲ್ಲದ ಭೂಮಿ ಬೇಕಾದಷ್ಟಿದೆ. ಕಣಿವೆಗಳಲ್ಲಿ ಅನೇಕ ಭಾಗಗಳು ಚೌಳುಭೂಮಿಯಾಗಿರುವುವು. ಚಾಮರಾಜನಗರ ಮತ್ತು ಎಳಂದೂರುಗಳಲ್ಲಿ ಶ್ರೇಷ್ಠವಾದ ಎರೆಭೂಮಿಯಿದೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ಜಂಬಿಟ್ಟಿಗೆಯ ನೆಲವೂ ಕೆಮ್ಮಣ್ಣು ನೆಲವೂ ಹೆಚ್ಚು. ಪೂರ್ವದಿಕ್ಕಿನ ತಾಲ್ಲೂಕುಗಳಲ್ಲಿ ಮರಳು ಮಿಶ್ರವಾದ ನೆಲವಿದೆ. ಅರಕಲಗೂಡಿನಿಂದ ಅರಸೀಕೆರೆಯ ಕಡೆಗೆ ಹೋಗುತ್ತ ಮಾರ್ಗದಲ್ಲಿ ಕರಿಯ ನೆಲವು ಅಲ್ಲಲ್ಲಿ ದೊರೆಯುವುದು. ಕಡೂರು ಡಿಸ್ಟ್ರಿಕ್ಟಿನಲ್ಲಿ ಬಾಬಾಬುಡ್ಡ ಬೆಟ್ಟಗಳ ದಕ್ಷಿಣ ಭಾಗದಲ್ಲೆಲ್ಲ ಉತ್ಕೃಷ್ಟವಾಥ ಎರೆಭೂಮಿಯಿರುತ್ತದೆ. ಪೂರ್ವಭಾಗದಲ್ಲಿ ಮರಳು ಮಿಶ್ರವಾದ ನೆಲವಿರುವುದು. ಕಡೂರಿನ ಸುತ್ತಲೂ ಕೆಲವು ಕಡೆ ಎರೇ ಭೂಮಿ, ಕೆಲವು ಕಡೆ ಕೆಂಪು ಭೂಮಿ ದೊರೆಯುತ್ತವೆ. ಅಲ್ಲಲ್ಲಿ ಸಾರವಿಲ್ಲದ ಬಿಳೀ ನೆಲವು ಸಿಕ್ಕುವುದುಂಟು. ಶಿವಮೊಗ್ಗೆಯಲ್ಲಿ ಪಶ್ಚಿಮ ಭಾಗವೆಲ್ಲಾ ಜಂಬಿಟ್ಟಿಗೆಯ ನೆಲ. ಕಣಿವೆಗಳಲ್ಲಿ ಮರಳು ಮಿಶ್ರವಾದ ನೆಲವಿದೆ. ತೋಟಗಳಲ್ಲಿ ಮಾತ್ರ ಜಿಗುಟಾದ ಜೇಡೀ ಮಣ್ಣಿನ ಭೂಮಿಯುಂಟು. ನೈರುತ್ಯದ ಕಡೆಯ ತಾಲ್ಲೂಕುಗಳಲ್ಲಿ ಎರೆ ಭೂಮಿ ದೊರೆಯುತ್ತದೆ. ಚಿತ್ರದುರ್ಗದ ವಾಯವ್ಯ ಪ್ರದೇಶವೆಲ್ಲ ಕರಿಯ ಭೂಮಿ. ಅಲ್ಲಲ್ಲಿ ಮರಳು ಮಿಶ್ರವಾದ ಗರಸುಪುಡಿಯ ಭೂಮಿ ದೊರೆಯುವುದುಂಟು. ಪೂರ್ವಭಾಗವೆಲ್ಲ ಮರಳು ಮಿಶ್ರವಾದ ನೆಲವಾಗಿದೆ. ಪಶ್ಚಿಮಭಾಗದ ಕಣಿವೆಗಳಲ್ಲಿ ಕೆಂಪುಬಂಕೆಯ ಮಣ್ಣು ದೊರೆಯುವುದು. ದಕ್ಷಿಣದ ಕಡೆ ಕ್ಷಾರಗೂಡಿದ ನೆಲವು ಹೇರಳವಾಗಿದೆ.

ರಾಸಾಯನಿಕ ವಸ್ತುಗಳು.

ಸಾಮಾನ್ಯವಾಗಿ ಮೈಸೂರಿನ ಭೂಗುಣದಲ್ಲಿ ಕಬ್ಬಿಣವೂ ಅಲ್ಯೂಮಿನಿಯಂ ಲೋಹವೂ ಹೆಚ್ಚಾಗಿವೆ. ಅನೇಕ ಕಡೆಗಳಲ್ಲಿ ಸಾರಜನಕವು ಕಡಮೆಯಾಗಿರುವುದರಿಂದ ಸಾರಜನಕವನ್ನು ಒದಗಿಸುವ ಗೊಬ್ಬರವನ್ನು ಹಾಕಿದರೆ ಫಸಲು ಚೆನ್ನಾಗಿ ಬರುವುದು. ಕೆಲವು ಕಡೆಗಳಲ್ಲಿ ರಂಜಕಧೃತಿ

ಕಡಮೆಯಾಗಿಯೂ ಮತ್ತೆ ಕೆಲವು ಕಡೆಗಳಲ್ಲಿ ಮುಖ್ಯವಾಗಿ ಮಲೆನಾಡಿನ ಜಂಬಿಟ್ಟಿಗೆಯ ಭೂಮಿಯಲ್ಲಿ—ಪೊಟಾಷ್ ಕಡಮೆಯಾಗಿಯೂ ಇವೆ. ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಸಾರಜನಕವು ಹೆಚ್ಚಾಗಿದೆಯಾದರೂ ಸುಣ್ಣದ ಸಾರವಿಲ್ಲ. ಉತ್ತರದ ಕಡೆಯಲ್ಲಿರುವ ಕರಿಯ ನೆಲದಲ್ಲಿ ಸುಣ್ಣದ ಸಾರವು ಹೇರಳವಾಗಿದೆ.

ಆದುದರಿಂದ ಒಂದೇ ವಿಧವಾದ ಭೂಗುಣವು ಸಂಸ್ಥಾನದಲ್ಲಿಲ್ಲ ವೆಂದು ಹೇಳಬೇಕಾಗಿದೆ. ಮಳೆಯಲ್ಲಿ ಹೇಗೆ ವ್ಯತ್ಯಾಸವಿರುವುದೋ ಹಾಗೆಯೇ ಭೂಗುಣದಲ್ಲಿಯೂ ವ್ಯತ್ಯಾಸವಿದೆ.

ನಾಲ್ಕನೆಯ ಅಧ್ಯಾಯ.

ಕಾಡುಗಳು ಮತ್ತು ಬೆಳೆಗಳು.

ಸಸ್ಯಾದಿಗಳು.

ಒಂದು ದೇಶದ ವಾಯುಗುಣ, ಭೂಗುಣ ಮತ್ತು ಬೀಳುವ ಮಳೆ ಇವುಗಳನ್ನು ತಿಳಿದುಕೊಂಡರೆ ಅಲ್ಲಿಯ ಸಸ್ಯ ಸಮೃದ್ಧಿಯನ್ನೂ ಬೆಳೆಯ ವಿಚಾರವನ್ನೂ ಸುಲಭದಲ್ಲಿ ಹೇಳಬಹುದಷ್ಟೆ. ಮೈಸೂರು ಸಂಸ್ಥಾನದ ವಾಯುಗುಣವು ಸ್ವಲ್ಪ ಹೆಚ್ಚುಕಡಮೆ ಒಂದೇ ರೀತಿಯಿರುವುದೆಂದು ಹೇಳುವುದಾದರೂ ಭೂಗುಣದಲ್ಲಿಯೂ ಮಳೆಯಲ್ಲಿಯೂ ಬಹಳ ವ್ಯತ್ಯಾಸವಿರುವುದನ್ನು ಆಗಲೇ ನೋಡಿದ್ದೇವೆ. ಪಶ್ಚಿಮಘಟ್ಟಗಳ ಶ್ರೇಣಿಯಲ್ಲಿ 250 ಅಂಗುಲಗಳಷ್ಟು ಮಳೆಯಾಗುವುದನ್ನೂ ಚಿತ್ರದುರ್ಗದ ಪೂರ್ವಭಾಗದಲ್ಲಿ 20 ಅಂಗುಲಗಳಷ್ಟು ಕೂಡ ಮಳೆಯಾಗದಿರುವುದನ್ನೂ ನೋಡಿದರೆ ಸಸ್ಯ ಸಮೃದ್ಧಿಯ ವಿಚಾರದಲ್ಲಿ ವ್ಯತ್ಯಾಸಗಳಿರಲೇಬೇಕೆನ್ನುವುದು ಸ್ಫುಟವಾಗುತ್ತದೆ. ಪ್ರಕೃತಿದತ್ತವಾದ ಅನುಕೂಲಗಳಿಂದ ಗಿಡಮರಗಳು ವಿಶೇಷವಾಗಿ ಮಲೆನಾಡು ಪ್ರಾಂತದಲ್ಲಿ ಬೆಳೆಯುತ್ತವೆ. ಆದುದರಿಂದ ಅಲ್ಲಿ ಕಾಡುಗಳು ಹೆಚ್ಚು. ಸಂಸ್ಥಾನದ ಕಾಡು ಪ್ರದೇಶಗಳನ್ನು ಕೆಳಗೆ ಹೇಳಿದ ರೀತಿಯಲ್ಲಿ ವಿಂಗಡಿಸಬಹುದು.

ಕಾಡುಗಳು.

(1) ಘಟ್ಟದ ಕಾಡುಗಳು.—ಇವು ಸೊರಬದ ಉತ್ತರ ಭಾಗದಿಂದ ಮಂಜರಾಬಾದಿನ ದಕ್ಷಿಣದವರೆಗೂ ಹಬ್ಬಿವೆ. ಇದರ ಅಗಲವು ಒಂದೇ ಸಮನಾಗಿಲ್ಲ. ಕೆಲವುಕಡೆ 6 ಮೈಲಿಗಳಷ್ಟು ಕಿರಿದಾಗಿಯೂ, ಮತ್ತೆ ಕೆಲವುಕಡೆ 40 ಮೈಲಿಗಳಷ್ಟು ವಿಸ್ತಾರವಾಗಿಯೂ ಇರುವುದು.

ಇದರಲ್ಲಿ ಎರಡು ಭಾಗಗಳನ್ನು ಮಾಡಬಹುದು. ಘಟ್ಟಗಳಿಗೆ ಒತ್ತಿಕೊಂಡು ಬೆಟ್ಟಗಳ ಮೇಲೂ ಕಂದರಗಳಲ್ಲೂ ಬೆಳೆದಿರುವ ಕಾಡುಗಳು ಮೊದಲನೆಯ ಪಂಗಡ; ಇದು ಜೋಗಿನ ಜಲಪಾತದಿಂದ ದಕ್ಷಿಣಕ್ಕೆ ಮಂಜರಾಬಾದಿನ ಬಿಸಲೇ ಘಾಟಿಯವರೆಗೂ ಸುಮಾರು 225 ಮೈಲಿಗಳ ಉದ್ದ ಹರಡಿದೆ. ಇದರ ವಿಸ್ತೀರ್ಣ ಸುಮಾರು 1,000 ಚ. ಮೈಲಿಗಳು. ಈ ಭಾಗದ ಕಾಡುಗಳು ಬಹಳ ಒತ್ತಾಗಿಯೂ, ಮನೋಹರವಾಗಿಯೂ ಇವೆ. ಅನೇಕ ವೇಳೆ 60—80 ಅಡಿಗಳವರೆಗೂ ಏಕಪ್ರಕಾರವಾಗಿ ಪ್ರಕಾಂಡಗಳಾಗಿದ್ದು ಅನಂತರ ಶಾಖೋಪಶಾಖೆಗಳು ಒಡೆದಿರುವ ದೊಡ್ಡ ಮರಗಳು ಇಲ್ಲಿ ಕಣ್ಣಿಗೆ ಬೀಳುವುವು. ಈ ಗೊಂಡಾರಣ್ಯಗಳು ಬಹಳ ದುರ್ಗಮವಾಗಿವೆ. ಬೆಟ್ಟಗಳ ಮೇಲ್ಭಾಗದಲ್ಲಿ ಅಷ್ಟೊಂದು ದೊಡ್ಡ ಮರಗಳಿರುವುದಿಲ್ಲ.

ಎರಡನೆಯ ಪಂಗಡದಲ್ಲಿ ದೊಡ್ಡ ಮತ್ತು ಚಿಕ್ಕ ಮರಗಳ ಮಿಶ್ರವಿದೆ. ಈ ಪಂಗಡದ ಕಾಡುಗಳು ಸುಮಾರು 30 ಮೈಲಿ ಅಗಲವಾಗಿಯೂ ಸೊರಬದ ಉತ್ತರದಿಂದ, ಸಾಗರ, ನಗರ, ತೀರ್ಥಹಳ್ಳಿ, ನರಸಿಂಹರಾಜಪುರ, ಕೊಪ್ಪ, ಮೂಡಗೆರೆ ತಾಲ್ಲೂಕುಗಳ ಮಾರ್ಗವಾಗಿ ಮಂಜರಾಬಾದಿನ ದಕ್ಷಿಣಕ್ಕೂ ಹಬ್ಬಿವೆ. ಇಲ್ಲಿ ಮಳೆ 60 ಅಂಗುಲಗಳಿಂದ ಮೇಲೆ 100 ಅಂಗುಲಗಳವರೆಗೂ ಕೆಲವು ಸಮಯಗಳಲ್ಲಿ 100ಕ್ಕೆ ಮೀರಿಯೂ ಆಗುವುದು. ಅಲ್ಲಲ್ಲಿ ಮಧ್ಯದಲ್ಲಿರುವ ಹಳ್ಳಿಗಳನ್ನೂ ಬತ್ತ ಮತ್ತು ಅಡಿಕೆ ಬೆಳೆಯುವ ಪ್ರದೇಶಗಳನ್ನೂ ಹಸರು ಗೊಬ್ಬರಕ್ಕಾಗಿ ಕಡಿದಿರುವ ಭಾಗಗಳನ್ನೂ ಕಳೆದರೆ, ಈ ಪಂಗಡದ ಕಾಡು ಸೀಮೆಯು ಹೆಚ್ಚು ಆದಾಯವನ್ನು ದೊರಕಿಸುವ ಸೀಮೆಯಾಗಿದೆಯೆಂದು ಹೇಳಬಹುದು.

ತೇಗದ ಕಾಡುಗಳು.

(2) ತೇಗದಮರದ ಕಾಡು.—ಇದರಲ್ಲಿಯೂ ಎರಡು ಪಂಗಡಗಳನ್ನು ಮಾಡಬಹುದು. ಮೊದಲನೆಯದು ಉತ್ತಮತರದ ತೇಗದ ಮರದ ಕಾಡು. ಇದು ಘಟ್ಟದ ಕಾಡಿನ ಎರಡನೆಯ ಪಂಗಡದಿಂದ ಕ್ರಮಕ್ರಮವಾಗಿ ಪ್ರತ್ಯೇಕವಾಗಿದೆ. ಹಾಸನದ ಕೆಲವು ಭಾಗಗಳನ್ನು ಬಿಟ್ಟರೆ ಈ ಪಂಗಡದ ಕಾಡು ಷಿಕಾರಿಪುರದಿಂದ ಚಾಮರಾಜನಗರದವರೆಗೂ

ಹಬ್ಬಿರುವುದೆಂದು ಹೇಳಬಹುದು. ಇದರ ವಿಸ್ತೀರ್ಣ ಸುಮಾರು 647 ಚ. ಮೈಲಿಗಳು. ಇದರಲ್ಲಿ ತೇಗದಮರವು ವಿಶೇಷವಾಗಿದೆ. ಈ ಕಾಡುಗಳ ಹೊರವಳಯದಲ್ಲಿ ಜನಭರಿತವಾದ ಹಳ್ಳಿಗಳಿರುವುವು. ಇಲ್ಲಿಯ ಕಾಡುಗಳಲ್ಲಿ ಸಂಚಾರ ಮಾಡುವುದಕ್ಕೆ ಸುಗಮವಾದ ರಸ್ತೆಗಳಿರುವುವು. ಇನ್ನೊಂದು ಪಂಗಡದ ಕಾಡು ಸೊರಬದ ತಾಲ್ಲೂಕು ಆನವಟ್ಟಿಯಿಂದ ಚಾಮರಾಜನಗರದವರೆಗೂ ಹಬ್ಬಿದೆ. ಮೇಲಿನ ಕಾಡಿನಲ್ಲಿರುವ ಮರಗಳೇ ಇಲ್ಲಿದ್ದರೂ ಇಲ್ಲಿ ಸುಮಾರು 30-35 ಅಂಗುಲ ಮಳೆಯಾಗುವುದರಿಂದ ಮರಗಳು ಅಷ್ಟೊಂದು ಚೆನ್ನಾಗಿ ಬೆಳೆಯುವುದಿಲ್ಲ. ಈ ಕಾಡಿನ ವಿಸ್ತೀರ್ಣ ಸುಮಾರು 262 ಚ. ಮೈಲಿಗಳು.

ಸೌದೆಯ ಕಾಡುಗಳು.

(3) ಸೌದೆಮರದ ಕಾಡು.—ಇದರಲ್ಲಿಯೂ ಎರಡು ಪಂಗಡಗಳನ್ನು ಮಾಡಬಹುದು. ಉತ್ತಮ ತರದ ಸೌದೆಯ ಭಾಗವು ದಾವಣಗೆರೆಯ ನೈರುತ್ಯದ ಮೂಲೆಯಿಂದ ಚನ್ನಪಟ್ಟಣದ ಉತ್ತರದವರೆಗೂ ಹಬ್ಬಿದೆ. ಈ ಭಾಗದಲ್ಲಿ 25-30 ಅಂಗುಲಗಳ ಮಳೆಯಾಗುವುದು. ಈ ಕಾಡುಗಳ ಸುತ್ತಮುತ್ತಲೂ ಜನ ನಿಬಿಡವಾದ ಹಳ್ಳಿಗಳಿರುವುವು. ಈ ಹಳ್ಳಿಗಳ ಜನರು ಸೌದೆಗೂ ಮೇವಿಗೂ ಕಾಡುಗಳನ್ನು ಹೆಚ್ಚಾಗಿ ಆಶ್ರಯಿಸುವರು. ಇನ್ನೊಂದು ಪಂಗಡದ ಕಾಡು ಉತ್ಕೃಷ್ಟವಾದುದಲ್ಲ. ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಉತ್ತರ ಭಾಗದಲ್ಲಿ ಈ ಕಾಡು ಹೆಚ್ಚಾಗಿದೆ. ಇಲ್ಲಿ 15-20 ಅಂಗುಲಗಳಷ್ಟು ಮಳೆಯಾಗುವುದು.

ಬೆಲೆ ಬಾಳುವ ಮರಗಳು.

ಕಾಡುಗಳಿಂದ ನಮ್ಮ ಸಂಸ್ಥಾನಕ್ಕೆ ಬಹಳ ಉತ್ಪತ್ತಿಯಿದೆ. ಅದರಲ್ಲಿ ಬೆಳೆಯುವ ಮರಗಳಲ್ಲಿ ಕೆಲವು ಮುಖ್ಯವಾದುವನ್ನು ಕೆಳಗೆ ವಿವರಿಸುತ್ತೇವೆ.

(1) ತೇಗ.—ಬಹಳ ಹೆಚ್ಚು ಮಳೆಯಾಗುವ ಕಡೆಗಳಲ್ಲಾಗಲಿ, ತೀರ ಕಡಮೆ ಮಳೆಯಾಗುವ ಕಡೆಗಳಲ್ಲಾಗಲಿ ಇದು ಬೆಳೆಯುವುದಿಲ್ಲ. ಮೈಸೂರು ಡಿಸ್ಟ್ರಿಕ್ಟಿನ ಹೆಗ್ಗಡದೇವನಕೋಟೆಯ ಕಾಡುಗಳಲ್ಲಿಯೂ, ಶಿವಮೊಗ್ಗಿಯ ಮಧ್ಯಭಾಗದ ಕಾಡುಗಳಲ್ಲಿಯೂ ಇದು ಚೆನ್ನಾಗಿ ಬೆಳೆಯುತ್ತದೆ.

ಇದು ಗಟ್ಟಿಯಾದ ಮರ. ಚೆನ್ನಾಗಿ ಬಾಳಿಕೆ ಬರುವುದು. ನೀರಿನಿಂದ ಕೆಡುವುದಿಲ್ಲ. ಮನೆಗಳನ್ನು ಕಟ್ಟುವುದಕ್ಕೂ ರೈಲು ಕಂಬಿಗಳ ತಳ ಹದಿಗೂ, ಬೆಂಚು ಕುರ್ಚಿ ಮುಂತಾದ ಸಾಮಾನುಗಳನ್ನು ಮಾಡುವುದಕ್ಕೂ, ಹಡಗುಗಳನ್ನು ಕಟ್ಟುವುದಕ್ಕೂ ಬಹಳ ಉಪಯೋಗವಾಗಿದೆ.

(2) ಕರಿಯಮರ.—ಉತ್ಕೃಷ್ಟವಾದುದು ; ಕಪ್ಪುಬಣ್ಣದ್ದಾಗಿ ಘನ ಅಡಿಗೆ 80 ಪೌಂಡುಗಳಷ್ಟು ತೂಗುತ್ತದೆ ; ಬಹಳ ಭಾರವಾದುದು. ಒಳ್ಳೆಯ ಮೆರುಗನ್ನು ತಾಳುತ್ತದೆ. ಬಹಳ ಘಟ್ಟಿಯಾದ ಮರ. ಘಟ್ಟದ ಕಾಡುಗಳಲ್ಲಿ ದೊರೆಯುವುದು.

(3) ಮತ್ತಿ.—ಇದು ಘಟ್ಟದ ಕಾಡುಗಳಲ್ಲಿಯೂ, ಅದಕ್ಕೆ ಪೂರ್ವದಲ್ಲಿರುವ ಮಿಶ್ರದ ಕಾಡುಗಳಲ್ಲಿಯೂ ದೊರೆಯುವುದು. ಕಪ್ಪು ಮಿಶ್ರವಾದ ಇಟ್ಟಿಗೆಯ ಬಣ್ಣದಮರ ಒಳ್ಳೆಯ ಸೌದೆಯಾಗುತ್ತದೆ. ಎಲೆಗಳನ್ನು ಅಡಿಕೆಯ ತೋಟಗಳಿಗೆ ಗೊಬ್ಬರವಾಗಿ ಉಪಯೋಗಿಸುತ್ತಾರೆ. ಇದರಲ್ಲಿ ದೊರೆಯುವ ಒಂದು ಬಗೆಯ ಗೋಂದನ್ನು (ಅಂಟನ್ನು) ಸುವಾಸನೆ ಕೊಡಲು ಉಪಯೋಗಿಸುವರು. ಚೆಕ್ಕೆಯನ್ನು ಚರ್ಮವನ್ನು ಹದ ಮಾಡಲುಪಯೋಗಿಸುವರು.

(4) ಹೊನ್ನೆ.—ಎರಡನೆಯ ಪಂಗಡದ ಕಾಡುಗಳಲ್ಲಿ ದೊರೆಯುತ್ತದೆ. ಮರ ಗಟ್ಟಿ. ಇಟ್ಟಿಗೆಯ ಬಣ್ಣ. ಮರದ ಸಾಮಾನುಗಳು, ಕಿಟಕಿ, ಬಂಡಿ, ಇತ್ಯಾದಿಗಳನ್ನು ಮಾಡಲು ಉಪಯೋಗವಾಗಿದೆ.

(5) ಶ್ರೀಗಂಧದಮರ.—ಇದರಿಂದ ಸಂಸ್ಥಾನಕ್ಕೆ ಬಹಳ ಆದಾಯವಿದೆ. ಈ ಮರಗಳು ಚಿತ್ರದುರ್ಗ, ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಬಹಳ ವಿರಳ ; ಘಟ್ಟದ ಕಾಡುಗಳಲ್ಲಿ ತೀರ ಕಡಮೆ ; ಇದರ ಪೂರ್ವಕ್ಕಿರುವ ಮಿಶ್ರವಾದ ಕಾಡಿನಲ್ಲಿ ಯಥೇಚ್ಛವಾಗಿ ದೊರೆಯುತ್ತವೆ. ಇಲ್ಲಿಯ ಮರಗಳು ದೊಡ್ಡವಾಗಿ ಬೆಳೆದರೂ ಅಷ್ಟೊಂದು ವಾಸನೆಯನ್ನು ಪಡೆದಿಲ್ಲ. ಈ ಮರವು ಸುಮಾರು 30 ವರ್ಷಗಳ ಕಾಲ ಬಾಳುವುದು. ಇದರ ಚೆಕ್ಕೆಯಲ್ಲಿ ವಾಸನೆಯಿಲ್ಲ. ಆದರೆ ಒಳಗಿನ ಮರವೂ ಬೇರುಗಳೂ ಸುವಾಸನೆಯಿಂದಕೂಡಿವೆ. ಎರಡನೆಯ ಪಂಗಡದ ಕೀಳುತರದ ಕಾಡುಗಳಲ್ಲಿ ಬೆಳೆಯುವ ಶ್ರೀಗಂಧದ ಮರವು ಬಹಳ ಉತ್ಕೃಷ್ಟವಾದುದು. ಇಲ್ಲಿ ಮರವು ದೊಡ್ಡದಾಗಿ ಬೆಳೆಯದಿದ್ದರೂ ಅದರಲ್ಲಿ ವಾಸನೆ ಹೆಚ್ಚು. ಶ್ರೀಗಂಧದ ಮರದಲ್ಲಿ ಬಿಳುಪು, ಕೆಂಪು, ನಾಗ,


ನವಿಲು ಎಂದು ನಾಲ್ಕು ಬಗೆಯುಂಟು. ಕೊನೆಯ ಎರಡು ಬಗೆಗಳಿಗೆ ಬಹಳ ಹೆಚ್ಚು ಬೆಲೆಯಿದೆ. ಶ್ರೀಗಂಧದ ಮರಕ್ಕೆ ಒಂದು ಬಗೆಯ ರೋಗವು ತಗಲುವುದೆಂದೂ, ಅದಕ್ಕೆ ತಕ್ಕ ಪರಿಹಾರವು ದೊರೆತಿಲ್ಲ ವೆಂದೂ ತಿಳಿಯಬಂದಿದೆ.

(6) ಬೊಂಬು—ಬಿದಿರುಗಳು.—ಎರಡನೆಯ ಪಂಗಡದ ಕಾಡುಗ ಳಲ್ಲಿ ಯಥೇಚ್ಛವಾಗಿ ದೊರೆಯುತ್ತವೆ. ಇವು ಕೀಳ್ತರದ ಕಾಡುಗಳಲ್ಲಿ ಬೆಳೆ ಯುವುದಾದರೂ ಅಷ್ಟೊಂದು ಉತ್ತಮವಾದುವಲ್ಲ. ಇವು ನಾನಾ ಕೆಲಸ ಗಳಿಗೆ ಬರುವುವು.


ಬೆಳೆಗಳು.

ಮನುಷ್ಯನು ಇಲ್ಲಿಯ ವಾಯುಗುಣಕ್ಕೂ ಸೀರಿನ ವಸತಿಗೂ ಭೂಗುಣಕ್ಕೂ ಅನುಸಾರವಾಗಿ ಯಾವ ಬೆಳೆಗಳನ್ನು ಮಾಡಿಕೊಂಡಿರು ತ್ತಾನೆನ್ನುವುದನ್ನು ಈಗ ತಿಳಿಸುವೆವು. ಸಾಮಾನ್ಯವಾಗಿ ಮನುಷ್ಯನಿಗೆ ಬೇಕಾದ ಆಹಾರ ಸಾಮಗ್ರಿಗಳನ್ನು ಮೈಸೂರು ಸಂಸ್ಥಾನದಲ್ಲಿ ಬೆಳೆಯ ಬಹುದು. ರೈತನು ತನಗೆ ಬೇಕಾದ ಧಾನ್ಯಗಳನ್ನೂ ತೈಲದ ಬೀಜ ಗಳನ್ನೂ ಬೆಳೆದುಕೊಳ್ಳುತ್ತಾನೆ. ರೈತನಿಗೆ ತಕ್ಕಷ್ಟು ಉಪಪತ್ತಿಯಿಲ್ಲದ್ದ ರಿಂದ ಸಾಕಾದಷ್ಟು ಗೊಬ್ಬರವನ್ನು ಹಾಕಿ ಹೆಚ್ಚು ಬೆಳೆಯನ್ನು ಮಾಡಲಾರ ದವನಾಗಿದ್ದಾನೆ. ಇದೂ ಅಲ್ಲದೆ ಶಾಸ್ತ್ರರೀತಿಯಾದ ಪರಿಶೋಧನೆ ಗಳು, ಉತ್ತಮತರದ ಸಾಗುವಳಿಯ ರೀತಿಗಳು, ತಕ್ಕ ಬಂಡವಾಳ ಇವು ಗಳೆಲ್ಲ ರೈತನಲ್ಲಿಲ್ಲ. ಆದರೆ ಇದ್ದುದರಲ್ಲಿ ರೈತನು ಬುದ್ಧಿವಂತನಾಗಿ ಯಾವುದಕ್ಕೆ ಹೆಚ್ಚು ಗಿರಾಕಿಯಿರುವುದೋ ಅದನ್ನು ಹೇಗಾದರೂ ಮಾಡಿ ಬೆಳೆಯುವನು. ಕೆಲವು ಮುಖ್ಯ ಬೆಳೆಗಳನ್ನು ಕೆಳಗೆ ವಿವರಿಸಿದೆ.

ಬತ್ತ.—ಇದರಲ್ಲಿ ಸುಮಾರು ನೂರಾರು ತರಹಗಳುಂಟು. ನೆಲವು ತಕ್ಕಮಟ್ಟಿಗೆ ಫಲವತ್ತಾಗಿಯೂ ನೀರಿನ ಆಸರೆ ಚೆನ್ನಾಗಿಯೂ ಇರುವ ಕಡೆಗಳಲೆಲ್ಲಾ ಇದನ್ನು ಬೆಳೆಯುತ್ತಾರೆ. ಮಲೆನಾಡಿನಲ್ಲಿ ಮಳೆಯ ನೀರೇ ಬತ್ತಕ್ಕೆ ಹೆಚ್ಚು ಆಧಾರ. ಮಿಕ್ಕ ಕಡೆಗಳಲ್ಲಿ ಕೆರೆಗಳಿಂದಲೂ, ನದಿಯ ಕಾಲುವೆಗಳಿಂದಲೂ ನೀರನ್ನು ಹಾಯಿಸಿಕೊಳ್ಳುತ್ತಾರೆ. ಶಿವಮೊಗ್ಗ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಬತ್ತದ ಬೆಳೆ ಹೆಚ್ಚು. ಕಾವೇರಿ ಮತ್ತು ಅದರ ಉಪನದಿಗಳ ಕಾಲುವೆಗಳಿಂದ ಬತ್ತವನ್ನು ಹಿಂದಿನಿಂದಲೂ


ನಾಗಮಂಗಲ
ಕೃಷ್ಣರಾಜಪೇಟೆ
ಹತ್ತಿ
ಮಂಡ್ಯ
ತೆಂಗು
ಎಡತೊರೆ
ಭತ್ತ ಕಬ್ಬು
ಶ್ರೀರಂಗಪಟ್ಟಣ
ಮಳವಳ್ಳಿ
ಹೊಗೆಸೊಪ್ಪು
ಹುಣಸೂರು
ಮೈಸೂರು
ತಿರುಮಕೂಡ್ಲುನರಸೀಪುರ
ಹತ್ತಿ
ಹತ್ತಿ
ನಂಜನಗೂಡು
ಬಾಳೆ
ಹೆಗ್ಗಡದೇವನಕೋಟೆ
ಎಳಂದೂರು
ಕಾಫಿ
ಚಾಮರಾಜನಗರ
ಹೊಗೆಸೊಪ್ಪು
ಹತ್ತಿ
ಗುಂಡ್ಲುಪೇಟೆ
35" ಕ್ಕೆಮೇಲೆ
30"-35"
25"-30"
20-25

ಅರಸೀಕೆರೆ
ತೆಂಗು
ಭತ್ತ
ಬೇಲೂರು
ಕಬ್ಬು
ಹಾಸನ
ಭತ್ತ
ತೆಂಗು
ಸಕಲೇಶಪುರ
ಮಂಜರಾಬಾದು
ಭತ್ತ
ಚನ್ನರಾಯಪಟ್ಣ
ಕಬ್ಬು
ಏಲಕ್ಕಿ
ಕಾಫಿ
ಹೊಳೆನರಸೀಪುರ
ಅರಕಲಗೂಡು
ಭತ್ತ
ಭತ್ತ
ಕಬ್ಬು
150" - 200"
100" - 150"
50 - 100
20 - 50

ಬೆಳೆಗಳು


ತರೀಕೆರೆ
ಹತ್ತಿ
ನರಸಿಂಹರಾಜಪುರ
ಕಬ್ಬು
ಕೊಪ್ಪ
ಕದೂರು
ಹತ್ತಿ
ಕಾಫಿ
ಶೃಂಗೇರಿ
ಚಿಕ್ಕಮಗಳೂರು
ಅಡಿಕೆ
ಮೂಡಗೆರೆ
ಕಾಫಿ
ಏಲಕ್ಕಿ
200 ಕ್ಕೆ ಮೇಲೆ
100 - 150
50 - 100
20 - 50
ಸೊರಬ
ಶಿಕಾರಿಪುರ
ಹೊನ್ನಾಳಿ
ಸಾಗರ
ಚನ್ನಗಿರಿ
ಹೊಸನಗರ
ಏಲಕ್ಕಿ ಮೆಣಸು
ಅಡಿಕೆ ಬಾಳೆ
ಶಿವಮೊಗ್ಗ
ಅಡಿಕೆ ಬಾಳೆ
ತೀರ್ಥಹಳ್ಳಿ
200 ಕ್ಕೆ ಮೇಲೆ
150 - 200
100 - 150
50 - 100
20 - 50

ಬೆಳೆಗಳು

ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಈಚೆಗೆ ಕೃಷ್ಣರಾಜಸಾಗರದ ಸಹಾಯದಿಂದ ಬತ್ತದ ಬೆಳೆ ಇನ್ನೂ ಅಭಿವೃದ್ಧಿಗೆ ಬರುವ ಸಂಭವವಿದೆ.

ಕಬ್ಬು.—ಇದರಲ್ಲಿ ರಸದಾಳಿ, ಪಟ್ಟಾಪಟ್ಟಿ, ಚೀಣೀ, ಮರಕಬ್ಬು ಎಂದು ನಾಲ್ಕು ಬಗೆಯುಂಟು. ಶಿವಮೊಗ್ಗ ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿ ಕಬ್ಬಿನಬೆಳೆ ಹೆಚ್ಚು. ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಅದನ್ನು ವಿಶೇಷವಾಗಿ ಬೆಳೆಯುತ್ತಾರೆ. ಕಬ್ಬು ಬೆಳೆಯುವುದಕ್ಕೆ ನೆಲವು ಬಹಳ ಉತ್ಕೃಷ್ಟವಾಗಿರಬೇಕು ; ಮತ್ತು ಗೊಬ್ಬರವನ್ನೂ ಚೆನ್ನಾಗಿ ಹಾಕಬೇಕು ; ನೀರಿನ ಆಸರೆಯು ಚೆನ್ನಾಗಿರಬೇಕು. ಅರ್ವಿ‌ನ್ ನಾಲೆಯ ಕೆಳಗೆ ಕಬ್ಬನ್ನು ವಿಶೇಷವಾಗಿ ಬೆಳೆದು ಮಂಡ್ಯದಲ್ಲಿರುವ ಸಕ್ಕರೆಯ ಕಾರ್ಖಾನೆಗೆ ಒದಗಿಸುತ್ತಿದ್ದಾರೆ.

ರಾಗಿ.—ಖುಷ್ಕಿ ಬೆಳೆಗಳಲ್ಲಿ ರಾಗಿಯೇ ಪ್ರಧಾನವಾದುದು. ಕಷ್ಟಪಡುವ ರೈತಾಪಿ ಜನಗಳಿಗೂ, ಕೂಲಿಯವರಿಗೂ ಅತ್ಯುತ್ತಮವಾದ ಆಹಾರವೆಂದು ತಿಳಿಯಲಾಗಿದೆ. ಇದರಲ್ಲಿ ಕರಿಯರಾಗಿ, ಕೆಂಪುರಾಗಿ ಮತ್ತು ಹುಲ್ಲುಪೊರೆ—ಎಂದು ಮೂರು ವಿಧ. ಇವುಗಳಲ್ಲದೆ ಗಿಡ್ಡರಾಗಿ, ದೊಡ್ಡರಾಗಿ ಎಂಬ ಭೇದಗಳುಂಟು. ಆಯಾ ಸ್ಥಳಕ್ಕನುಸಾರವಾಗಿ ಕೆಲವು ಒಳಭೇದಗಳಿವೆ. ರಾಗಿ ಬೆಳೆಯು ಸುಮಾರು 4–4½ ತಿಂಗಳಲ್ಲಿ ಕಟಾವಿಗೆ ಬರುವುದು. ಬೆಂಗಳೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳಲ್ಲಿಯೂ, ತುಮಕೂರು ಡಿಸ್ಟ್ರಿಕ್ಟಿನಲ್ಲಿಯೂ ಇದನ್ನು ಹೆಚ್ಚಾಗಿ ಬೆಳೆಯುತ್ತಾರೆ. ಸಾಮಾನ್ಯವಾಗಿ ರಾಗಿಯ ಜೊತೆಯಲ್ಲಿ ಅವರೆ, ತೊಗರಿ, ಹುಚ್ಚೆಳ್ಳು, ಜೋಳ ಇವುಗಳನ್ನು ಹಾಕುವುದುಂಟು.

ಹುರುಳಿ.—ಇದರಲ್ಲಿ ಕರಿಯದು ಕೆಂಪು ಬಿಳುಪು ಎಂದು ಕೆಲವು ಜಾತಿಗಳಿವೆ. ಸಾಮಾನ್ಯವಾಗಿ ಕೀಳು ನೆಲದಲ್ಲಿ ಇದನ್ನು ಬೆಳೆಯುತ್ತಾರೆ. ಒಂದೊಂದುವೇಳೆ, ಜೋಳದ ಪೈರಾದನಂತರ ಹುರುಳಿಯನ್ನು ಬಿತ್ತಿ ಫಸಲು ಮಾಡುವುದುಂಟು. ಇದನ್ನು ಕೀಳ್ತರದ ಖುಷ್ಕಿ ಜಮೀನುಗಳಲ್ಲೆಲ್ಲಾ ಹೆಚ್ಚು ಮಳೆಯಿಲ್ಲದಕಡೆ ಬೆಳೆಯುತ್ತಾರೆ.

ಅಡಕೆ.—ಇದಕ್ಕೆ ನೆಲವು ಬಂಕೆಯಾಗಿಯೂ ಫಲವತ್ತಾಗಿಯೂ ಇರಬೇಕು. ಕಣಿವೆಯ ಪ್ರದೇಶಗಳಲ್ಲಿಯೂ ಕೆರೆಯ ಕೆಳಗಣ ತೋಟಗಳಲ್ಲಿಯೂ ಇದನ್ನು ವಿಶೇಷವಾಗಿ ಬೆಳೆಯುತ್ತಾರೆ ; ಶಿವಮೊಗ್ಗ ಡಿಸ್ಟ್ರಿಕ್ಟಿ

ನಲ್ಲಿಯೂ, ಉಳಿದ ಮಲೆನಾಡು ಭಾಗಗಳಲ್ಲಿಯೂ ಹೆಚ್ಚಾಗಿ ಬೆಳೆಯುವರು. ತುಮಕೂರು ಡಿಸ್ಟ್ರಿಕ್ಟಿನಲ್ಲಿಯೂ ಇದನ್ನು ವಿಶೇಷವಾಗಿ ಬೆಳೆಯುತ್ತಾರೆ. ಮಲೆನಾಡು ಭಾಗಗಳಲ್ಲಿ ಹೆಚ್ಚು ಮಳೆಯ ದೆಸೆಯಿಂದ ಅಡಕೆಗೆ ಕೋಳೇ ರೋಗವು ಬರುತ್ತದೆ. ಇದಕ್ಕೆ ವ್ಯವಸಾಯದ ಇಲಾಖೆಯವರು ತಕ್ಕ ಚಿಕಿತ್ಸೆಯನ್ನು ಕಂಡುಹಿಡಿದಿದ್ದಾರೆ.

ತೆಂಗು.—ಇದರಲ್ಲಿ ನಾಲ್ಕು ಜಾತಿಗಳಿವೆ.—ಕೆಂಪು, ಹಸುರು ಮಿಶ್ರವಾದ ಕೆಂಪು, ಎಳೆಯ ಹಸರು ಮತ್ತು ಶುದ್ಧ ಹಸರು. ಚಿಕ್ಕನಾಯಕನ ಹಳ್ಳಿಯ ಪ್ರಾಂತದಲ್ಲಿ ಇದನ್ನು ವಿಶೇಷವಾಗಿ ಬೆಳೆಯುತ್ತಾರೆ. ಚನ್ನಪಟ್ಟಣದ ಸುತ್ತಮುತ್ತಲೂ ಒಳ್ಳೆಯ ತೆಂಗಿನ ತೋಟಗಳಿವೆ. ಚಿಕ್ಕನಾಯಕನ ಹಳ್ಳಿಯ ಹತ್ತಿರ ದೊರೆಯುವ ಗಂಗಪಾಣಿ ಎಳನೀರು ಬಹಳ ಪ್ರಸಿದ್ಧ ವಾದುದು.

ಕಾಫಿ.—ಇದನ್ನು ಮಲೆನಾಡು ಭಾಗಗಳಲ್ಲಿ ಬೆಳೆಯುತ್ತಾರೆ. ಸುಮಾರು 2,500–3,000 ಅಡಿಗಳ ಎತ್ತರದಲ್ಲಿ ಬೆಟ್ಟಗಳ ಇಳಿಜಾರು ಪ್ರದೇಶದಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಇದನ್ನು ಬೆಳೆಯಬೇಕಾದರೆ ಜಾಗವನ್ನು ಜಾಗರೂಕತೆಯಿಂದ ಆರಿಸಬೇಕು.

(1) ಸ್ಥಳವು ನೈರುತ್ಯದ ಅಥವಾ ಪೂರ್ವದಿಕ್ಕಿನ ಮಾರುತಗಳಿಗೆ ಎದುರಿರಬಾರದು.

(2) ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳ ಮಳೆಗೆ ಒಳಪಟ್ಟಿರಬೇಕು.

(3) ನೈರುತ್ಯದ ಮಳೆಯಿಂದ ಹೆಚ್ಚು ಬಾಧಕವಾಗಬಾರದು. ಆದುದರಿಂದ ಇಳಿಜಾರು ಉತ್ತರಮುಖವಾಗಿಯಾಗಲಿ, ಈಶಾನ್ಯ ಅಥವ ಆಗ್ನೇಯಮುಖವಾಗಿಯಾಗಲಿ ಇದ್ದರೆ ಒಳ್ಳೆಯದು.

(4) ತೇವವಿರುವ ಮತ್ತು ಶಾಖವಾಗಿರುವ ಹವವಾಗಬೇಕು.

(5) ನೀರು ಬೀಳುತ್ತಿರುವುದಾದರೂ ನಿಲ್ಲದಂತೆ ಜಾರಿಹೋಗುತ್ತಿರಬೇಕು.


(6) ಭೂಮಿಯು ಬಂಕೆಯಾದ ಮಣ್ಣಿನಿಂದ ಕೂಡಿರಬೇಕು.

ಚಿಕ್ಕಮಗಳೂರಿನ ಬಳಿ ಬಾಬಾಬುಡ್ಗ ಬೆಟ್ಟಗಳ ಕಾಫಿಯು ಶ್ರೇಷ್ಠವಾದುದು. ಹಾಸನ ಡಿಸ್ಟ್ರಿಕ್ಟಿನ ಪಶ್ಚಿಮ ಭಾಗದಲ್ಲಿಯೂ ಶಿವಮೊಗ್ಗಿಯ



ಪಾವಗಡ
ಸಿರಾ
ಹರಳು
ಮಧುಗಿರಿ
ಎಳ್ಳು
ಹುಳಿಯಾರು
ಕೊರಟಗೆರೆ
ಅಡಿಕೆ
ತೆಂಗು
ಚಿಕ್ಕನಾಯಕನಹಳ್ಳಿ
ತುಮಕೂರು
ಗುಬ್ಬಿ
ತೆಂಗು
ಅಡಿಕೆ
ತೆಂಗು
ನೆಲಗಡಲೆ
ತಿಪಟೂರು
ತುರುವೇಕೆರೆ
ಕುಣಿಗಲ್
35" ಕ್ಕೆ ಮೇಲೆ
30"–35"
25"–30"
20"–25"
15"–20"

ಬೆಳೆಗಳು



ದೊಡ್ಡಬಳ್ಳಾಪುರ
ದೇವನಹಳ್ಳಿ
ಹಣ್ಣುಗಳು
ಭತ್ತ ಕಬ್ಬು
ಹಣ್ಣುಗಳು
ನೆಲಮಂಗಲ
ಹೊಸಕೋಟೆ
ಭತ್ತ ಕಬ್ಬು
ಬೆಂಗಳೂರು
ಮಾಗಡಿ
ಸೇಬು
ಅಂಜೂರ
ಕ್ಲೋಸ್‌ಪೇಟೆ
ಆನೆಕಲ್ಲು
ಚನ್ನಪಟ್ಣ
ಕಾನಕಾನಹಳ್ಳಿ
35" ಕ್ಕೆ ಮೇಲೆ
30"-35"
25"-30"
20"-25"
ಬಾಗೇಪಲ್ಲಿ
ಗುಡಿಬಂಡೆ
ಗೌರಿಬಿದನೂರು
ಚಿಕ್ಕಬಳ್ಳಾಪುರ
ಉರುಳುಗಡ್ಡೆ
ಉರುಳುಗಡ್ಡೆ
ಚಿಂತಾಮಣಿ
ಶಿಡ್ಲಘಟ್ಟ
ಭತ್ತ ಮತ್ತು ಕಬ್ಬು
ಶ್ರೀನಿವಾಸಪುರ
ಮುಳಬಾಗಿಲು
ಕೋಲಾರ
ಮಾಲೂರು
ಬಂಗಾರಪೇಟೆ
ಭತ್ತಮತ್ತುಕಬ್ಬು
25"-30"
20"-25"

ಬೆಳೆಗಳು

ಪಶ್ಚಿಮ ಭಾಗದಲ್ಲಿಯೂ ಕಾಫಿಯನ್ನು ಬೆಳೆಯುತ್ತಾರೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಹುಣಸೂರಿನ ಹತ್ತಿರದ ಪ್ರದೇಶಗಳಲ್ಲಿಯೂ ಕಾಫಿಯನ್ನು ಬೆಳೆಯುವರು. ಕಾಫೀ ಗಿಡಗಳಿಗೆ ಕೆಲವು ತರಹದ ರೋಗಗಳು ಬರುತ್ತವೆ. ಇವುಗಳಿಗೆ ತಕ್ಕ ಪರಿಹಾರಗಳನ್ನು ನಾನಾ ರೀತಿಗಳಲ್ಲಿ ಮಾಡಿಕೊಳ್ಳುತ್ತಿದ್ದಾರೆ.

ಹತ್ತಿ.—ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹತ್ತಿಯ ಬೆಳೆಯು ಹೆಚ್ಚು. ಇದಕ್ಕೆ ಆವಶ್ಯಕವಾದ ಕಪ್ಪುಭೂಮಿಯು ಅಲ್ಲಿ ಯಥೇಚ್ಛವಾಗಿ ದೊರೆಯುತ್ತದೆ. ಇದಕ್ಕೆ ಹೆಚ್ಚು ಮಳೆ ಬೇಕಾಗಿಲ್ಲ. ಭೂಮಿಯು ಫಲವತ್ತಾಗಿಯೂ ಬಿದ್ದ ನೀರನ್ನು ಬಹುಕಾಲ ಹಿಡಿಯುವುದಾಗಿಯೂ ಇದ್ದರೆ ಸಾಕು. ಈ ಗುಣಗಳು ಕಪ್ಪುಮಣ್ಣಿಗುಂಟು. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಚಾಮರಾಜನಗರ ಮತ್ತು ನಂಜನಗೂಡಿನ ಪ್ರಾಂತಗಳಲ್ಲಿಯೂ ಹತ್ತಿಯನ್ನು ಬೆಳೆಯುತ್ತಾರೆ.

ಹೊಗೆಯಸೊಪ್ಪು.—ಇದನ್ನು ಮೈಸೂರು ಡಿಸ್ಟ್ರಿಕ್ಟಿನಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಹುಣಸೂರು ಮತ್ತು ಎಡತೊರೆ ತಾಲ್ಲೂಕುಗಳಲ್ಲಿ ಇದರ ಬೆಳೆ ಹೆಚ್ಚು. ಬೆಟ್ಟದಪುರದ ಹೊಗೆಯಸೊಪ್ಪು ಬಹಳ ಪ್ರಸಿದ್ಧವಾದುದು.

ಇವುಗಳಲ್ಲದೆ ಬೆಲೆ ಹೆಚ್ಚಾಗಿ ಸಿಕ್ಕುವ ಆಲೂಗಡ್ಡೆ, ಕಡಲೇಕಾಯಿ, ತರ್ಕಾರಿಗಳು, ಹಣ್ಣುಗಳು ಇವುಗಳನ್ನೆಲ್ಲ ರೈತನು ಆಯಾ ಭೂಗುಣವನ್ನೂ ಸನ್ನಿವೇಶವನ್ನೂ ಅನುಸರಿಸಿ ಬೆಳೆಯುತ್ತಾನೆ. ರೇಷ್ಮೆ ವ್ಯವಸಾಯವಿರುವ ಕಡೆಗಳಲ್ಲಿ ಉಪ್ಪುನೇರಳೆಯನ್ನು ಬೆಳೆಯುತ್ತಾನೆ.

ಕಾಡುಮೃಗಗಳು ಮತ್ತು ಸಾಕಿದ ಪ್ರಾಣಿಗಳು.

ಮೃಗಗಳು.— ಮೈಸೂರು ಸಂಸ್ಥಾನದಲ್ಲಿ ಸಿಂಹವನ್ನು ಬಿಟ್ಟು ಸಾಮಾನ್ಯವಾದ ಉಷ್ಣವಲಯದ ಪ್ರಾಣಿಗಳೆಲ್ಲಾ ಇವೆ. ಮಲೆನಾಡು ಪ್ರಾಂತವು ಉನ್ನತವಾದ ಬೆಟ್ಟಗುಡ್ಡಗಳಿಂದಲೂ ದೊಡ್ಡ ದೊಡ್ಡ ಕಾಡುಗಳಿಂದಲೂ ಕಂದರಗಳಿಂದಲೂ ಕಣಿವೆಗಳಿಂದಲೂ ಕೂಡಿದೆಯಷ್ಟೆ. ಇಲ್ಲಿ ದೊರೆಯುವ ಪ್ರಾಣಿಜಾತಿಗೂ ಮಲಬಾರು ಮತ್ತು ತಿರುವಾಂಕೂರಿನ ಕಾಡುಗಳಲ್ಲಿ ದೊರೆಯುವ ಪ್ರಾಣಿಜಾತಿಗೂ ಸಾಮ್ಯವಿದೆ. ಕಾಡುಗಳಲ್ಲಿ

ಹುಲಿ, ಚಿರತೆ, ತೋಳ, ಆನೆ, ಕರಡಿ, ಮುಳ್ಳುಹಂದಿ, ಕಾಡುಕೋಣ ಮುಂತಾದ ಮೃಗಗಳೆಲ್ಲಾ ಇವೆ.

ಮೈಸೂರು, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಆನೆಗಳೂ ಕಾಡುಕೋಣಗಳೂ ಹೆಚ್ಚು. ಚಾಮರಾಜನಗರ, ಗುಂಡ್ಲುಪೇಟೆ ಪ್ರಾಂತಗಳಲ್ಲಿ ಕತ್ತೆಕಿರುಬಗಳು ಹೆಚ್ಚು. ಮಲೆನಾಡಿನ ಕಾಡುಗಳಲ್ಲಿಯೂ ದೇವರಾಯನದುರ್ಗದಲ್ಲಿಯೂ ಚಿರತೆಯು ದೊರೆಯುತ್ತದೆ. ಮಂಗಗಳಲ್ಲಿ ನಾನಾ ಜಾತಿಯವು ದೊರೆಯುವುವು.

ಸಾಕಿದ ಪ್ರಾಣಿಗಳು.

ಮನುಷ್ಯನು ಸಾಕಿಕೊಂಡಿರುವ ಪ್ರಾಣಿಗಳಲ್ಲಿ ಎಮ್ಮೆ, ಹಸು, ದನಗಳು, ಕುರಿ, ಕುದುರೆ, ಕತ್ತೆ ಮುಂತಾದುವು ಮುಖ್ಯವಾದುವು. ಮಲೆನಾಡು ಪ್ರಾಂತಗಳಲ್ಲಿ ಹಸುಗಳು ಅಭಿವೃದ್ಧಿಗೆ ಬರುವುದಿಲ್ಲ. ಅಲ್ಲಿನ ವಾಯುಗುಣವು ಎಮ್ಮೆಗಳಿಗೆ ಹಿತಕರವಾಗಿದೆ. ಹಾಲನ್ನು ಹೆಚ್ಚಾಗಿ ಕೊಡುವ ಒಳ್ಳೆಯ ಹಸುಗಳು ಬಯಲು ಸೀಮೆಯಲ್ಲಿ ಮಾತ್ರ ಅದರಲ್ಲಿಯೂ ಮೇವು ಚೆನ್ನಾಗಿ ಸಿಕ್ಕುವ ಪ್ರದೇಶಗಳಲ್ಲಿ ಮಾತ್ರ ದೊರೆಯುತ್ತವೆ. ಮಧುಗಿರಿ ಪ್ರಾಂತದಲ್ಲಿ ಮತ್ತು ಬೆಂಗಳೂರು ಮೈಸೂರು ಕಡೆಗಳಲ್ಲಿ ಒಳ್ಳೆಯ ಹಸುಗಳಿವೆ.

ದನಗಳಲ್ಲಿ ಮೂರು ಬಗೆಯವುಂಟು. ಅಮೃತಮಹಲ್ ದನ, ಮಾದೇಶ್ವರ ಬೆಟ್ಟದ ದನ, ಮತ್ತು ಕಾನಕಾನಹಳ್ಳಿಯ ದನ. ಇವುಗಳಲ್ಲಿ ಅಮೃತಮಹಲಿನವು ಬಹಳ ಉತ್ಕೃಷ್ಟವಾದುವು. ಅಮೃತಮಹಲಿನ ದನದಲ್ಲಿ ಹಳ್ಳಿಕಾರ್, ಹಾಗಲ್ವಾಡಿ ಮತ್ತು ಚಿತ್ರದುರ್ಗದವು ಎಂದು ಮೂರು ಜಾತಿಗಳಿವೆ. ಆಯಾ ಪ್ರದೇಶಗಳ ದೆಸೆಯಿಂದ ಆಯಾ ಹೆಸರುಗಳು ಬಂದಿರುವುವು. ಈ ದನಗಳು ಬಹಳ ಚಟುವಟಿಕೆಯುಳ್ಳವು, ಮತ್ತು ಶ್ರಮಸಹಿಷ್ಣುಗಳು. ತೆಳುವಾದ ನಡು, ಗಟ್ಟಿಯಾದ ಕಾಲುಗಳು, ಅಗಲವಾದ ಹಣೆ, ಉದ್ದವಾದ ಮುಖ, ಉದ್ದವಾದ ಮತ್ತು ನಯವಾದ ಕೊಂಬುಗಳು ಈ ಜಾತಿಯ ದನಗಳಿಗಿವೆ. ನೋಡುವುದಕ್ಕೆ ಇವು ಅಂದವಾಗಿರುವುವು. ಈ ಜಾತಿಯ ಹಸುಗಳು ಬೆಳ್ಳಗಿರುತ್ತವೆ. ಎತ್ತುಗಳು ನೀಲಿಮಿಶ್ರವಾದ ಬಿಳುಪು ಬಣ್ಣವುಳ್ಳುವು.


ಮೊಳಕಾಲ್ಮೂರು
ಹರಿಹರ
ದಾವಣಗೆರೆ
ಹತ್ತಿ
ಜಗಳೂರು
ಭತ್ತ ಮತ್ತು ಕಬ್ಬು
ಚಳ್ಳಕೆರೆ
ಭತ್ತ ಮತ್ತು ಕಬ್ಬು
ಚಿತ್ರದುರ್ಗ
ಹತ್ತಿ
ತೆಂಗು
ತೆಂಗು
ಹೊಳಲ್ಕೆರೆ
ಭತ್ತ ಮತ್ತು ಕಬ್ಬು
ಹಿರಿಯೂರು
ತೆಂಗು
ಹತ್ತಿ
ಹೊಸದುರ್ಗ
ತೆಂಗು
20°-25°
15°-20°

ಬೆಳೆಗಳು

ಮಾದೇಶ್ವರ ಬೆಟ್ಟದ ದನಗಳು ಬಿಳಿಗಿರಿರಂಗನ ಬೆಟ್ಟದ ಕಡೆಯಲ್ಲಿ ಹೇರಳವಾಗಿವೆ. ಇವು ಆಕಾರದಲ್ಲಿ ದಪ್ಪ ; ಮತ್ತು ಬುದ್ಧಿಯಲ್ಲಿ ಸ್ವಲ್ಪ ಮೊದ್ದು ; ಶ್ರಮಸಹಿಷ್ಣುಗಳು ಆದರೆ ಬಹಳ ನಿಧಾನವಾಗಿ ನಡೆಯುತ್ತವೆ ; ಅಮೃತಮಹಲಿನ ದನಗಳಿಗಿಂತ ಕೀಳು.

ಕಾನಕಾನಹಳ್ಳಿಯ ದನಗಳು ಆ ಪ್ರಾಂತದಿಂದ ಬರತಕ್ಕವು. ಇವು ಮಾದೇಶ್ವರ ಬೆಟ್ಟದ ದನಗಳಂತೆಯೇ ಇವೆ. ಆದರೆ ಆಕಾರದಲ್ಲಿ ಸ್ವಲ್ಪ ಗಿಡ್ಡ.

ಹಳ್ಳಿಯದನಗಳು ನಾನಾ ರೀತಿಯಿರುತ್ತವೆ. ಬಣ್ಣದಲ್ಲಿಯೂ ಆಕಾರದಲ್ಲಿಯೂ ಗುಣದಲ್ಲಿಯೂ ಒಂದು ಕಡೆಯ ದನಗಳಿಗೂ ಮತ್ತೊಂದು ಕಡೆಯ ದನಗಳಿಗೂ ಬಹಳ ವ್ಯತ್ಯಾಸಗಳಿರುತ್ತವೆ. ಚೆನ್ನಾಗಿ ಮೇವು ಹಾಕಿ ಎಚ್ಚರಿಕೆಯಿಂದ ಸಾಕಿದ ದನಗಳು ನೋಡುವುದಕ್ಕೆ ಲಕ್ಷಣವಾಗಿಯೂ ಹೆಚ್ಚು ಕೆಲಸ ಮಾಡುವುವಾಗಿಯೂ ಇರುತ್ತವೆ. ರೈತರು ದನಗಳನ್ನು ಚೆನ್ನಾಗಿ ಸಾಕಲೆಂದು ಸರ್ಕಾರದವರು ದನಗಳ ಪ್ರದರ್ಶನಗಳನ್ನು ಆಗಾಗ್ಗೆ ಏರ್ಪಡಿಸುತ್ತಿರುವರು. ಉತ್ತಮವಾದುವುಗಳಿಗೆ ಬಹುಮಾನಗಳನ್ನು ಕೊಡುತ್ತ ಪ್ರೋತ್ಸಾಹ ತೋರಿಸುತ್ತಿರುವರು. ವ್ಯವಸಾಯದ ಕೆಲಸಕ್ಕೂ, ಬಂಡಿಗಳನ್ನು ಎಳೆಯುವುದಕ್ಕೂ, ಗೊಬ್ಬರಕ್ಕೂ ದನಗಳು ಉಪಯೋಗವಾಗಿರುವುದರಿಂದ ಎಲ್ಲಾ ಹಳ್ಳಿಗಳಲ್ಲಿಯೂ ದನಗಳು ಇದ್ದೇ ಇರುತ್ತವೆ.

ಕುರಿಯಲ್ಲಿ ಮೂರು ಬಗೆಯುಂಟು. ಕುರುಬ, ಗೊಲ್ಲ ಮತ್ತು ಎಳೆಗ. ಇವುಗಳಲ್ಲಿ ಕುರುಬಜಾತಿಯದು ಉತ್ತಮವಾದುದು. ಇವುಗಳನ್ನು ತುಪ್ಪಟಕ್ಕಾಗಿಯೂ, ಮಾಂಸಕ್ಕಾಗಿಯೂ ಸಾಕುವರು. ಬಯಲು ಸೀಮೆಯಲ್ಲಿ ಕುರಿಗಳು ಹೆಚ್ಚು. ಈ ಕುರಿಗಳ ತುಪ್ಪಟವು ಸ್ವಲ್ಪ ಒರಟು ; ಉತ್ತಮವಾದ ಕೆಲಸಕ್ಕೆ ಬರತಕ್ಕುದಲ್ಲ. ಒರಟುತರದ ಧಾವಳಿಗಳನ್ನೂ ಕಂಬಳಿಗಳನ್ನೂ ನೇಯುವುದಕ್ಕೆ ಮಾತ್ರ ಈ ತುಪ್ಪಟವು ಉಪಯುಕ್ತವಾಗಿದೆ. ಈಚೆಗೆ ಸರ್ಕಾರದವರು ಮೆರೀನಾ ಟಗರುಗಳನ್ನು ತಂದು ಉತ್ತಮ ಜಾತಿಯ ಕುರಿಗಳು ದೊರೆಯುವಂತೆ ಏರ್ಪಾಟುಮಾಡುತ್ತಿದ್ದಾರೆ.

ನಮ್ಮಲ್ಲಿ ಒಳ್ಳೆಯ ಜಾತಿಯ ಕುದುರೆಗಳಿಲ್ಲ. ನಾಡುತಟ್ಟು ಹಳ್ಳಿಗಳ ಕಡೆ ಸ್ವಲ್ಪ ಉಪಯೋಗದಲ್ಲಿದ್ದರೂ ಕೆಲಸಕ್ಕೆ ಬಾರದ್ದು. ಜಟಕಾಗಾಡಿ

ಗಳ ತಟ್ಟುಗಳು ಮಹಾರಾಷ್ಟ್ರದ ಜಾತಿಗೆ ಸೇರಿದ್ದಾಗಿದೆ. ಸೈನ್ಯದಲ್ಲಿ ಉಪಯೋಗಿಸುವ ಕುದುರೆಗಳೆಲ್ಲಾ ಮಿಶ್ರಜಾತಿಯವು ; ಅರಬ್ಬೀ ಮತ್ತು ಮಹಾರಾಷ್ಟ್ರಗಳ ಬೆರಕೆ ಮತ್ತು ಆಸ್ಟ್ರೇಲಿಯ ಗುಜರಾತುಗಳ ಬೆರಕೆ ಯಾಗಿವೆ. ಸರ್ಕಾರದವರು ಕುಣಿಗಲ್ಲಿನಲ್ಲಿ ಕುದುರೆಗಳನ್ನು ಸಾಕುವ ಇಲಾಖೆಯನ್ನು ಇಟ್ಟಿದ್ದಾರೆ. ಹೊರದೇಶಗಳ ಉತ್ತಮವಾದ ಕುದುರೆ ಗಳನ್ನು ತಂದು ಇಲ್ಲಿಯ ಜಾತಿಯವನ್ನು ಉತ್ತಮಗೊಳಿಸಲು ಪ್ರಯತ್ನ ಪಡುತ್ತಿದ್ದಾರೆ. ಇದರಿಂದ ಒಳ್ಳೆಯ ಫಲಗಳು ದೊರೆತಿವೆ. ಸೈನ್ಯಕ್ಕೆ ಬೇಕಾಗುವ ಮತ್ತು ಪಂದ್ಯಗಳಿಗೆ ಬೇಕಾಗುವ ಕುದುರೆಗಳನ್ನು ಈಗ ಕುಣಿ ಗಲ್ಲಿನಿಂದ ಪಡೆಯಬಹುದಾಗಿದೆ.

ರೇಷ್ಮೆಹುಳು.—ನಮ್ಮ ದೇಶದಲ್ಲಿ ರೇಷ್ಮೆ ಹುಳುಗಳನ್ನು ಬಹುಕಾಲ ದಿಂದಲೂ ಸಾಕುತ್ತಿದ್ದಾರೆ. 1886ರಲ್ಲಿ ನಾನಾ ಕಾರಣಗಳಿಂದ ಈ ಹುಳುಗಳ ವ್ಯವಸಾಯವು ದುಃಸ್ಥಿತಿಗೆ ಬಂದು ನಿಂತುಹೋಗುವುದರಲ್ಲಿತ್ತು. ಅಲ್ಲಿಂದೀಚೆಗೆ ತಲೆಯೆತ್ತಿದ್ದರೂ ಒಳ್ಳೆಯ ಹುಳುಗಳು ದೊರೆಯದೆ ಶ್ರೇಷ್ಠ ವಾದ ರೇಷ್ಮೆಯು ಸಿಕ್ಕುತ್ತಿರಲಿಲ್ಲ ; ಮತ್ತು ರೇಷ್ಮೆಯ ನೂಲನ್ನು ತೆಗೆ ಯುವ ವಿಧಾನಗಳಲ್ಲಿ ಅನೇಕ ಕುಂದು ಕೊರತೆಗಳಿದ್ದುದರಿಂದ ಫಲಗಳು ಪ್ರೋತ್ಸಾಹಕರವಾಗಿರಲಿಲ್ಲ. ಸರ್ಕಾರದವರು ರೇಷ್ಮೆಯ ಇಲಾಖೆಯನ್ನು ಸ್ಥಾಪಿಸಿದಂದಿನಿಂದ ರೇಷ್ಮೆಯ ವ್ಯವಸಾಯವು ಬಹಳ ಅಭಿವೃದ್ಧಿಗೆ ಬಂದಿರು ವುದು. ಈಗ ಒಳ್ಳೆಯ ಹುಳುಗಳು ದೊರೆಯುತ್ತವೆ. ನೂಲು ತೆಗೆಯು ವುದರಲ್ಲಿ ಶಾಸ್ತ್ರೀಯವಾದ ಏರ್ಪಾಡು ಆಚರಣೆಯಲ್ಲಿದೆ. ಆದುದರಿಂದ ಮೈಸೂರಿನ ರೇಷ್ಮೆಯು ಜಗತ್ಪ್ರಖ್ಯಾತವಾಗಿದೆ.



ಖನಿಜಗಳು ಕೈಗಾರಿಕೆಗಳು

ಐದನೆಯ ಅಧ್ಯಾಯ.

ಖನಿಜಗಳು ಮತ್ತು ಕೈಗಾರಿಕೆಗಳು.

ಖನಿಜಗಳು.

ನಮ್ಮ ದೇಶದಲ್ಲಿ ದೊರೆಯುವ ಖನಿಜಗಳನ್ನು ಸ್ಥೂಲವಾಗಿ ಮೂರು ಪಂಗಡಗಳಾಗಿ ವಿಂಗಡಿಸಬಹುದು.

(1) ಲೋಹಗಳನ್ನು ದೊರಕಿಸುವ ಖನಿಜಗಳು.
(2) ಕೈಗಾರಿಕೆಗಳಿಗೆ ಸಹಾಯ ಮಾಡುವ ಖನಿಜಗಳು.
(3) ಕಟ್ಟಡಗಳಿಗೆ ಸಹಾಯ ಮಾಡುವ ವಸ್ತುಗಳು.

ಲೋಹಗಳ ಅದುರುಗಳು.

I. ಲೋಹಗಳಲ್ಲಿ ಮುಖ್ಯವಾದುವನ್ನು ಕೆಳಗೆ ವಿವರಿಸಿದೆ.

ಚಿನ್ನ.—ಬಹಳ ಕಾಲದ ಹಿಂದಿನಿಂದಲೂ ನಮ್ಮ ದೇಶದಲ್ಲಿ ಚಿನ್ನವು ದೊರೆಯುತ್ತಿದ್ದಿತೆಂದೂ ಅದನ್ನು ಗಣಿಗಳಿಂದ ತೆಗೆಯುತ್ತಿದ್ದರೆಂದೂ ತಿಳಿದು ಬಂದಿದೆ. ಇವುಗಳಲ್ಲಿ ಕೋಲಾರದ ಚಿನ್ನದ ಗಣಿಗಳು ಪ್ರಖ್ಯಾತವಾಗಿವೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ನ್ಯಾಮತಿ ಸಮೀಪದಲ್ಲಿಯೂ, ಕಡೂರು ಡಿಸ್ಟ್ರಿಕ್ಟಿನಲ್ಲಿ ತರೀಕೆರೆಯ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿಯೂ ಚಿನ್ನದ ಪದರಗಳು ದೊರೆಯುತ್ತವೆ. ಚಿತ್ರದುರ್ಗ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಸೀರ್ಯದ ಪಶ್ಚಿಮ ಭಾಗಗಳಲ್ಲಿಯೂ ಚಿನ್ನದ ಗಣಿಯ ಕೆಲಸಗಳು ಹಿಂದೆ ನಡೆದಿವೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಶ್ರೀರಂಗಪಟ್ಟಣ, ಹುಣಸೂರು ಮತ್ತು ಕೃಷ್ಣರಾಜಪೇಟೆಯ ಸುತ್ತ ಮುತ್ತಲೂ ಗಣಿಗಳಿರುವುವು. ಆದರೆ ಇವುಗಳೆಲ್ಲರ ಪೈಕಿ ಕೋಲಾರದ ಗಣಿಗಳೊಂದರಲ್ಲಿಯೇ ತೃಪ್ತಿಕರವಾಗಿ ಕೆಲಸವು ಇದುವರೆಗೂ ನಡೆದುಬಂದಿರುವುದು. ಕೋಲಾರದ ಗಣಿಗಳಿಂದ ವರ್ಷವೊಂದಕ್ಕೆ ಸರಾಸರಿ 3½ ಕೋಟಿ ರೂಪಾಯಿಗಳ ಚಿನ್ನವೂ 3½ ಲಕ್ಷ ರೂಪಾಯಿಗಳ ರಾಜ್ಯಾದಾಯವೂ ದೊರೆಯುತ್ತವೆ.

ಕಬ್ಬಿಣ.— ಬಾಬಾಬುಡನ್ ಬೆಟ್ಟಗಳಲ್ಲಿ ಕಬ್ಬಿಣದ ಗಣಿಗಳು ಯಥೇಷ್ಟವಾಗಿ ದೊರೆಯುತ್ತವೆ. ಶಿವಮೊಗ್ಗ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿಯೂ ಕಬ್ಬಿಣವು ದೊರೆಯುತ್ತದೆ. ಚಿತ್ರದುರ್ಗದ ಕರೇಕಲ್ಲು ಗುಡ್ಡ, ಜೋಡಿಮರಡಿ, ಇವುಗಳಲ್ಲಿನ ಗಣಿಗಳು ತುಮಕೂರು ಡಿಸ್ಟ್ರಿಕ್ಟಿನ ಚಿಕ್ಕನಾಯಕನಹಳ್ಳಿಯವರೆಗೂ ವ್ಯಾಪಿಸಿವೆ. ಮೈಸೂರು ಡಿಸ್ಟ್ರಿಕ್ಟಿನ ಮಳವಳ್ಳಿ ತಾಲ್ಲೂಕಿನಲ್ಲಿಯೂ ಕಬ್ಬಿಣವು ದೊರೆಯುತ್ತದೆ.

ಲೋಹ ಮಂಡೂರ.—ಇದರ ಗಣಿಗಳು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕುಂಸಿ ಮತ್ತು ಶಂಕರ ಗುಡ್ಡಗಳಲ್ಲಿ ಹೆಚ್ಚಾಗಿ ದೊರೆಯುತ್ತವೆ. ಚಿತ್ರದುರ್ಗ ಮತ್ತು ತುಮಕೂರು ಡಿಸ್ಟ್ರಿಕ್ಟುಗಳಲ್ಲಿಯೂ ಪಶ್ಚಿಮದಕಡೆ ಇದರ ಗಣಿಗಳಿರುವುವು. ನಮ್ಮ ಸಂಸ್ಥಾನದಲ್ಲಿ ಸುಮಾರು 20,000 ಟನ್ನುಗಳಷ್ಟು ಲೋಹ ಮಂಡೂರವನ್ನು ವರ್ಷಂಪ್ರತಿ ರಫ್ತುಮಾಡುತ್ತಿದ್ದರು ; ಸುಮಾರು 5,000 ರೂಪಾಯಿಗಳ ರಾಜಾದಾಯವು ದೊರೆಯುತ್ತಿತ್ತು. 1907ನೆಯ ಇಸವಿಯಲ್ಲಿ ಸುಮಾರು 70,000 ಟನ್ನುಗಳಷ್ಟು ಲೋಹ ಮಂಡೂರವನ್ನು ಹೊರದೇಶಗಳಿಗೆ ಕಳುಹಿಸಿದರು. ಇದರಲ್ಲಿ ಸುಮಾರು 53,000 ಟನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಿಂದಲೂ 11 ಸಾವಿರ ಟನ್ನು ತುಮಕೂರು ಡಿಸ್ಟ್ರಿಕ್ಟಿನಿಂದಲೂ 4,500 ಟನ್ನು ಕಡೂರು ಡಿಸ್ಟ್ರಿಕ್ಟಿನಿಂದಲೂ ದೊರೆತವು.

ಕ್ರೋಮಿಯಂ.—ಕ್ರೋಮೈಟು ಗಣಿಗಳು ಶಿವಮೊಗ್ಗ, ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ದೊರೆಯುತ್ತವೆ. ಇವುಗಳಲ್ಲಿ ಮೈಸೂರಿಗೂ ನಂಜನಗೂಡಿಗೂ ಮಧ್ಯದಲ್ಲಿ ಕೆಲವು ಉತ್ಕೃಷ್ಟವಾದುವು ಸಿಕ್ಕಿವೆ. ಕಡಕೊಳ, ಸಿಂಧುವಳ್ಳಿ ಪ್ರಾಂತದಲ್ಲಿ ಇವು ವಿಶೇಷವಾಗಿರುವುವು.

ಇವುಗಳಲ್ಲದೆ ಸಂಸ್ಥಾನದ ಕೆಲ ಕೆಲವು ಭಾಗಗಳಲ್ಲಿ ತಾಮ್ರ, ಸೀಸ, ಸತು, ಬೆಳ್ಳಿ ಮತ್ತು ಸುರಮಗಳು ಸ್ವಲ್ಪ ಮಟ್ಟಿಗೆ ದೊರೆಯುತ್ತವೆ.

ಕೈಗಾರಿಕೆಗಳಿಗೆ ಉಪಯುಕ್ತವಾದ ಖನಿಜ ವಸ್ತುಗಳು.

II. ಕೈಗಾರಿಕೆಗಳಲ್ಲಿ ಉಪಯೋಗ ಮಾಡಬಹುದಾದ ಕೆಳಗೆ ಕಾಣಿಸಿರುವ ವಸ್ತುಗಳು ಸಿಕ್ಕುತ್ತವೆ.

ಕುರಂದದ ಕಲ್ಲು.—ಇದರಲ್ಲಿ ಮೇಲ್ತರದ ಕಲ್ಲುಗಳು ನಮ್ಮ ಸಂಸ್ಥಾನದಲ್ಲಿ ದೊರೆಯುವುದಿಲ್ಲ. ಮಧ್ಯಮ ತರಹದ ಕಲ್ಲುಗಳು ತಕ್ಕ ಮಟ್ಟಿಗೆ

ಸಿಕ್ಕುವುವು. ಶೃಂಗೇರಿ ಜಹಗೀರಿಯಲ್ಲಿ ಸಿಕ್ಕುವ ಕುರಂದದ ಕಲ್ಲು ಇರುವುದರಲ್ಲಿ ಉತ್ತಮವಾದುದು. ಅರಸೀಕೆರೆಯ ದಕ್ಷಿಣ ಭಾಗದಲ್ಲಿ ಮತ್ತು ನೈರುತ್ಯದಲ್ಲಿ ಕುರಂದದ ಕೆಲವು ಗಣಿಗಳಿವೆ. ಪಾವುಗಡ, ಮಧುಗಿರಿ, ಗೋರೀಬಿದನೂರು, ಮತ್ತು ಮಂಡ್ಯ ಈ ತಾಲ್ಲೂಕುಗಳಲ್ಲಿಯೂ ಕುರಂದವು ದೊರೆಯುತ್ತದೆ. ಮೈಸೂರು ಡಿಸ್ಟ್ರಿಕ್ಟಿನ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳನ್ನೂ ಈ ಕುರಂದದ ಸ್ಥಳಗಳನ್ನಾಗಿ ಹೇಳಬಹುದು.

ಅಭ್ರಕ.—ಇದು ಶಾಖವನ್ನು ತಡೆಯತಕ್ಕದ್ದು ಮತ್ತು ವಿದ್ಯುನ್ನಿರೋಧಕವು. ಇದನ್ನು ಬಗ್ಗಿಸಬಹುದು. ಇದು ಪಾರದರ್ಶಕ ವಸ್ತುವಾಗಿಯೂ ಇದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಂಡೂರು, ಉಂಡವಾಡಿ, ವಡೆಸಮುದ್ರ, ಮತ್ತು ತಗಡೂರುಗಳ ಬಳಿ ದೊರೆಯುತ್ತದೆ. ಕಡೂರು ಡಿಸ್ಟ್ರಿಕ್ಟಿನಲ್ಲಿ ಶೃಂಗೇರಿ ಜಹಗೀರಿಯ ಕಿಕ್ರಿ ಬಳಿ ಈ ಗಣಿಗಳಿವೆ. ಹಿಂದೆ ತಕ್ಕಮಟ್ಟಿಗೆ ಇಲ್ಲಿ ಕೆಲಸ ನಡೆದಿತ್ತು.

ಕಲ್ನಾರು.—ಇದು ಸುಲಭದಲ್ಲಿ ಕರಗುವುದಿಲ್ಲ. ಆದುದರಿಂದ ಪದಾರ್ಥಗಳನ್ನು ಬೆಂಕಿಯಿಂದ ಪರಿರಕ್ಷಿಸಲು ಇದು ಉಪಯೋಗವಾಗುತ್ತದೆ. ಚಿತ್ರದುರ್ಗ, ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ದೊರೆಯುತ್ತೆ.

ಕಟ್ಟಡದ ವಸ್ತುಗಳು.

III. ಕಟ್ಟಡಗಳಿಗೆ ಉಪಯುಕ್ತವಾದ ಪದಾರ್ಥಗಳಲ್ಲಿ ಸುಣ್ಣಕಲ್ಲು ಮೊದಲನೆಯದು. ಇದು ಸಂಸ್ಥಾನದ ಅನೇಕ ಕಡೆಗಳಲ್ಲಿ ದೊರೆಯುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಹೊನ್ನಾಳಿ, ಹಾಸನ ಡಿಸ್ಟ್ರಿಕ್ಟಿನಲ್ಲಿ ಹೊಳೇನರಸೀಪುರ, ಕಡೂರು ಡಿಸ್ಟ್ರಿಕ್ಟಿನಲ್ಲಿ ಬೀರೂರು, ಚಿತ್ರದುರ್ಗದ ಹಿರಿಯೂರು ಪ್ರಾಂತ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಮಂಡ್ಯ, ಹುಣಸೂರು, ಮತ್ತು ಗುಂಡ್ಲುಪೇಟೆ ಇವು ಸುಣ್ಣಕಲ್ಲು ದೊರೆಯುವ ಮುಖ್ಯ ಸ್ಥಳಗಳು. ಸುಣ್ಣದ ಶಿಲೆಯು ತುಮಕೂರು ಡಿಸ್ಟ್ರಿಕ್ಟಿನಲ್ಲಿ ವೋಬ್ಳಾಪುರದ ಹತ್ತಿರ ದೊರೆಯುತ್ತದೆ. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಹೊನ್ನಾಳಿ ಮತ್ತು ಕುಮ್ಸಿಗಳ ಬಳಿಯೂ ಇದು ದೊರೆಯುವುದು. ಲೋಹಗಳನ್ನು ಕರಗಿಸುವುದು, ಸೀಮೆಂಟು ಮಾಡುವುದು ಇತ್ಯಾದಿ ಕೆಲಸಗಳಿಗೆ ಇದು ಉಪಯುಕ್ತವಾಗಿದೆ.

ಜಂಬಿಟ್ಟಿಗೆ, ಬಿಳಿಯಜೇಡು ಗೋಪೀಚಂದನ ಇತ್ಯಾದಿಗಳು ಸಂಸ್ಥಾನದ ಕೆಲವು ಭಾಗಗಳಲ್ಲಿ ದೊರೆಯುತ್ತವೆ; ಕಟ್ಟಡದ ಕಲ್ಲುಗಳು ಎಲ್ಲಾ ಭಾಗಗಳಲ್ಲಿಯೂ ದೊರೆಯುತ್ತವೆ.

ಕೈಗಾರಿಕೆಗಳು.

ನಮ್ಮ ಸಂಸ್ಥಾನವು ಕೈಗಾರಿಕೆಯ ಸ್ಥಾನವಲ್ಲ. ಇಲ್ಲಿಯ ಜನರಿಗೆ ವ್ಯವಸಾಯವೇ ಮುಖ್ಯವಾದ ಕಸಬು. ಮೇಲೆ ಹೇಳಿದಂತೆ ಖನಿಜ ವಸ್ತುಗಳು ದೊರೆಯುವುದಾದರೂ ಹಿಂದಿನ ಅಧ್ಯಾಯದಲ್ಲಿ ತಿಳಿಸಿದಂತೆ ಹತ್ತಿ ಮತ್ತು ಉಣ್ಣೆ ಇರುವುದಾದರೂ ಇಂಗ್ಲೆಂಡ್, ಜರ್ಮನಿ ಮುಂತಾದ ದೇಶಗಳಲ್ಲಿರುವಂತೆ ಇಲ್ಲಿ ಕೈಗಾರಿಕೆಗಳು ಪ್ರಬಲವಾಗಿಲ್ಲ. ಇದಕ್ಕೆ ನಾನಾ ಕಾರಣಗಳುಂಟು. ಇಲ್ಲಿ ನಡೆಯುತ್ತಿರುವ ಕೆಲವು ಕೈಗಾರಿಕೆಗಳ ವಿಷಯವನ್ನು ಮುಂದೆ ತಿಳಿಸಿದೆ.

ಗಣಿಯ ಕೆಲಸ.

ಕೋಲಾರದ ಚಿನ್ನದ ಗಣಿಯ ಕೆಲಸಗಳು ಬಹಳ ವರ್ಷಗಳಿಂದಲೂ ನಡೆಯುತ್ತಿವೆ. ಆದರೆ ಇದಕ್ಕೆ ಬಂಡವಾಳಗಾರರು ಪರದೇಶೀಯರು. ಕೂಲಿಗಾರರು ಬಹುಭಾಗ ಕಣಿವೇ ಕೆಳಗಿನವರು. ಈ ಗಣಿಯ ಕೆಲಸವು ನಮ್ಮ ದೇಶದಲ್ಲಿರುವುದೆಂದು ಹೇಳಿಕೊಳ್ಳುವುದಾದರೂ ಬರುವ ರಾಜಾದಾಯವನ್ನು ಬಿಟ್ಟರೆ ದೇಶದ ಜನಗಳಿಗೆ ಹೆಚ್ಚು ಪ್ರಯೋಜನವಾಗಿಲ್ಲ.

ಕಬ್ಬಿಣದ ಕಾರ್ಖಾನೆ.

ಬಾಬಾಬುಡ್ಸ್ ಬೆಟ್ಟಗಳಲ್ಲಿ ಯಥೇಚ್ಛವಾಗಿ ಕಬ್ಬಿಣವು ದೊರೆಯುವುದೆಂದು ಹಿಂದೆ ನೋಡಿದೆವಷ್ಟೆ. ಸುತ್ತು ಮುತ್ತಲೂ ದೊಡ್ಡದೊಡ ಕಾಡುಗಳಿರುವುದರಿಂದ ಬೇಕಾದ ಇದ್ದಲನ್ನು ಸುಲಭದಲ್ಲಿ ಪಡೆಯಬಹುದಾಗಿದೆ. ಈ ಕಾರಣಗಳಿಂದ ನೀರಿನ ಆಶ್ರಯವು ಚೆನ್ನಾಗಿರುವ ಕಡೆ ಈ ಬೆಟ್ಟಗಳ ಹತ್ತಿರದಲ್ಲಿ ಎಲ್ಲಿಯಾದರೂ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಬಹುದೆಂದು ಸರ್ಕಾರದವರು ಆಲೋಚಿಸುತ್ತಿದ್ದರು. ಅದರಂತೆಯೇ ಈಗ ಭದ್ರಾವತಿಯಲ್ಲಿ ಇಂತಹದೊಂದು ಕಾರ್ಖಾನೆಯನ್ನು ಸರ್ಕಾರದವರು ಇಟ್ಟಿದಾರೆ. ಅಲ್ಲಿ ದಿನ ಒಂದಕ್ಕೆ 80 ಟನ್ನುಗಳಷ್ಟು ಕಬ್ಬಿಣವನ್ನು

ಪಡೆಯಬಹುದಾಗಿದೆ. ಆದರೆ ಈ ಕಬ್ಬಿಣದಲ್ಲಿ ರಂಜಕ ಭಾಗವು ಹೆಚ್ಚಾಗಿರುವುದೆಂದು ಶಾಸ್ತ್ರಜ್ಞರಲ್ಲಿ ಕೆಲವರು ಅಭಿಪ್ರಾಯ ಪಡುತ್ತಾರೆ. ಇದ್ದಿಲನ್ನು ಮಾಡಿಕೊಳ್ಳುವ ವಿಧಾನದಲ್ಲಿ ಟಾರ್ ಎಣ್ಣೆ ಮತ್ತು ಮರದೆಣ್ಣೆ, ಇತ್ಯಾದಿ ತೈಲಗಳು ಉಪಪದಾರ್ಥಗಳಾಗಿ ದೊರೆಯುತ್ತವೆ. ಕಬ್ಬಿಣಕ್ಕೂ ಉಪಪದಾರ್ಥಗಳಿಗೂ ತಕ್ಕ ಗಿರಾಕಿಯು ಸಿಕ್ಕುತ್ತ ಬಂದರೆ ಈ ಕಾರ್ಖಾನೆಯಿಂದ ಬಹಳ ಲಾಭ ಬರುವ ಸಂಭವವುಂಟು.

ಕ್ರೋಮ್ ಮತ್ತು ಲೋಹಮಂಡೂರಗಳನ್ನು ಗಣಿಗಳಿಂದ ತೆಗೆಯುತ್ತಿದ್ದಾರೆಂದು ತಿಳಿಸಿದ್ದೇವೆ. ಇವುಗಳನ್ನು ರಫ್ತುಮಾಡುತ್ತಿದಾರೆಯೇ ವಿನಾ ಸಂಸ್ಥಾನದಲ್ಲಿಯೇ ಕಾರ್ಖಾನೆಗಳನ್ನಿಟ್ಟು ಉಪಯೋಗಿಸಿಕೊಳ್ಳುತ್ತಿಲ್ಲ.

ಹೆಂಚುಗಳು, ಇಟ್ಟಿಗೆಗಳು ಮುಂತಾದ ಸಾಮಾನುಗಳನ್ನು ಮಾಡುವ ಕಾರ್ಖಾನೆಗಳು, ಸಂಸ್ಥಾನದಲ್ಲಿ ಕೆಲವಿವೆ. ಬೆಂಗಳೂರು, ತೀರ್ಥಹಳ್ಳಿ ಮೈಸೂರು, ಸಾಗರ ಈ ಕಡೆಗಳಲ್ಲಿ ಈ ಕಾರ್ಖಾನೆಗಳಿವೆ.

ಎಣ್ಣೆಯ ಕಾರ್ಖಾನೆಗಳು.

ಸಂಸ್ಥಾನದಲ್ಲಿ ಬೆಳೆಯುವ ತೈಲ ಬೀಜಗಳಲ್ಲಿ ಬಹು ಭಾಗವು ರಫ್ತಾಗುತ್ತಲೂ ಕೊಂಚ ಭಾಗವು ಆಯಾ ಹಳ್ಳಿಗಳಲ್ಲಿರುವ ಗಾಣಗಳಲ್ಲೇ ತೈಲವಾಗುತ್ತಲೂ ಇದೆ. ಉತ್ತಮ ತರಹದ ಯಂತ್ರಗಳ ಮೂಲಕ ಎಣ್ಣೆಯನ್ನು ತೆಗೆಯುವ ಏರ್ಪಾಡು ಈಚೆಗೆ ಜಾರಿಗೆ ಬಂದಿದೆ. ಎಣ್ಣೆಯ ಕಾರ್ಖಾನೆಗಳಿಂದ ದಿವಸ ಒಂದಕ್ಕೆ ಸುಮಾರು 70 ಟನ್ನುಗಳಷ್ಟು ಎಣ್ಣೆಯು ತಯಾರಾಗುತ್ತಿದೆ. ಈ ಕಾರ್ಖಾನೆಗಳೆಲ್ಲಾ ಬೆಂಗಳೂರಿನಲ್ಲಿಯೇ ಹೆಚ್ಚಾಗಿವೆ.

ತೈಲಗಳ ಕಾರ್ಖಾನೆಗಳಲ್ಲಿ ಇನ್ನೆರಡನ್ನು ಹೇಳಬೇಕಾಗಿದೆ. ಮೊದಲನೆಯದು, ಸರ್ಕಾರದ ಗಂಧದೆಣ್ಣೆಯ ಕಾರ್ಖಾನೆ. ಮೈಸೂರು ಸಂಸ್ಥಾನದಲ್ಲಿ ದೊರೆಯುವ ಶ್ರೀಗಂಧದ ಮರವನ್ನು ಹಾಗೆಯೇ ಮಾರುವುದರಿಂದ ಅಷ್ಟೊಂದು ಲಾಭವು ಬರುತ್ತಿರಲಿಲ್ಲ. ಈ ಗಂಧದ ಮರಗಳಿಂದ ಎಣ್ಣೆಯನ್ನು ಬೇರ್ಪಡಿಸಿ ಎಣ್ಣೆಯನ್ನು ಪರದೇಶಗಳಿಗೆ ರಫ್ತುಮಾಡುವುದಾದರೆ ಹೆಚ್ಚು ಲಾಭವು ದೊರೆಯುವ ಸಂಭವವಿತ್ತು. ಇದನ್ನು ಪರ್ಯಾಲೋಚಿಸಿ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಸರ್ಕಾರದರು ಈ ಕಾರ್ಖಾನೆಗಳನ್ನು

ಸ್ಥಾಪಿಸಿದರು. ಈಚೆಗೆ ಬೆಂಗಳೂರಿನ ಕಾರ್ಖಾನೆಯನ್ನು ಮುಚ್ಚಿ ಮೈಸೂರಲ್ಲಿ ಮಾತ್ರ ಶ್ರೀಗಂಧದೆಣ್ಣೆಯ ಕಾರ್ಖಾನೆಯನ್ನು ಇಟ್ಟಿದ್ದಾರೆ. ಸುಮಾರು 30 ಲಕ್ಷ ರೂಪಾಯಿಗಳು ಬೆಲೆಬಾಳುವಷ್ಟು ಎಣ್ಣೆಯನ್ನು ವರ್ಷಂಪ್ರತಿ ತಯಾರಿಸುತ್ತಿದಾರೆ.

ಮೈಸೂರಿನಲ್ಲಿದ್ದ ಎಸ್ಸೆಫ್ಲೋರ್ ಎಂಬ ಕಾರ್ಖಾನೆ ಎರಡನೆಯದು ಇದು ಈಗಿಲ್ಲ. ಅದನ್ನು ಮುಚ್ಚಿಬಿಟ್ಟಿದ್ದಾರೆ. ದಾಲ್ಚಿನ್ನಿ ಎಣ್ಣೆ, ಏಲಕ್ಕಿ ಎಣ್ಣೆ, ಪಚ್ಚೆಯತೆನೆ ಎಣ್ಣೆ, ಲವಂಗದೆಣ್ಣೆ, ಇತ್ಯಾದಿಗಳನ್ನು ಇವರು ತಯಾರಿಸಿ ಮಾರುತ್ತಿದ್ದರು. ಅಷ್ಟೊಂದು ಲಾಭವೇನೂ ದೊರೆತಂತೆ ಕಂಡುಬಂದಿಲ್ಲ.

ಸೋಪ್ ಫ್ಯಾಕ್ಟರಿ.

ಬೆಂಗಳೂರಿನಲ್ಲಿ ಸಾಬೂನುಗಳನ್ನು ತಯಾರುಮಾಡತಕ್ಕ ಕಾರ್ಖಾನೆಯೊಂದು ಸರ್ಕಾರದವರಿಂದ ಸ್ಥಾಪಿತವಾಗಿದೆ. ಇದರಿಂದ ತಕ್ಕ ಮಟ್ಟಿಗೆ ಲಾಭವು ದೊರೆಯುತ್ತಿದೆ. ಕೀಳ್ತರದ ಸೋಪುಗಳನ್ನು ತಯಾರುಮಾಡತಕ್ಕ ಖಾಸಗೀ ಜನಗಳಿಂದ ಸ್ಥಾಪಿತವಾದ ಚಿಕ್ಕ ಕಾರ್ಖಾನೆಗಳು ಬೆಂಗಳೂರಿನಲ್ಲಿ ಕೆಲವಿವೆ.

ಹತ್ತಿ ಮತ್ತು ಉಣ್ಣೆಯ ಕಾರ್ಖಾನೆಗಳು.

ನೆಯಿಗೆಯವರು ಆದಿಯಿಂದಲೂ ಹಳ್ಳಿಗಳಲ್ಲಿಯೂ ಊರುಗಳಲ್ಲಿಯೂ ಸೇರಿಕೊಂಡಿದ್ದಾರಷ್ಟೆ. ಇವರ ಕಸಬು ದೊಡ್ಡ ಕೈಗಾರಿಕೆಯೆನಿಸಿಲ್ಲ. ಬೆಂಗಳೂರಿನಲ್ಲಿ ಬುದ್ಧಿವಂತರಾದ ನೆಯ್ಗೆಯವರು ಒಳ್ಳೊಳ್ಳೆಯ ಕಲಾಪತ್ತಿನ ಸೀರೆಗಳನ್ನು ಮಾಡುವರು. ದೊಡ್ಡ ಬಳ್ಳಾಪುರದಲ್ಲಿ ಸಾಮಾನ್ಯ ಸೀರೆಗಳನ್ನು ಚೆನ್ನಾಗಿ ಮಾಡುವರು. ಆದಿಕರ್ಣಾಟಕ ಜನರಲ್ಲಿ ಬಹುಮಂದಿ ನೆಯ್ಗೆಯವರಾದರೂ ಇವರು ತಯಾರಿಸುವ ಬಟ್ಟೆಗಳು ಕೀಳ್ತರದ್ದು. ದೊಡ್ಡದೊಡ್ಡ ಕಾರ್ಖಾನೆಗಳು ಮುಕ್ಕಾಲುಪಾಲೆಲ್ಲಾ ಬೆಂಗಳೂರಿನಲ್ಲಿಯೇ ಇವೆ. ಮೈಸೂರಿನಲ್ಲಿ ಹತ್ತಿಯ ನೂಲಿನ ಒಂದು ಕಾರ್ಖಾನೆ ಮಾತ್ರವಿದೆ. ಸಂಸ್ಥಾನದಲ್ಲಿ ಸುಮಾರು ಒಂದು ಲಕ್ಷ ಎಕರೆಗಿಂತ ಹೆಚ್ಚಾಗಿಯೇ ಹತ್ತಿಯ ಸಾಗುವಳಿಯಾಗುತ್ತಿದೆ. ನಮ್ಮ ಸಂಸ್ಥಾನದಲ್ಲಿ ಯಾವ ಹತ್ತಿಯನ್ನು ಬೆಳೆಯುತ್ತಿರುವರೋ ಅದನ್ನೇ ಈ ಕಾರ್ಖಾನೆಗಳು ಉಪ

ಯೋಗಿಸುತ್ತಿಲ್ಲ. ಬೆಂಗಳೂರಿನಲ್ಲಿ ಬಿನ್ನಿಮಿಲ್ಲಲ್ಲದೆ ಕಂಬಳಿಗಳ ಎರಡು ಮೂರು ಚಿಕ್ಕ ಕಾರ್ಖಾನೆಗಳಿವೆ. ಜೈಲಿನಲ್ಲಿ ಒಳ್ಳೊಳ್ಳೆಯ ಜಮಖಾನಗಳನ್ನು ಮಾಡುತ್ತಾರೆ. ಬೆಂಗಳೂರಿನಲ್ಲಿ ತಯಾರಾಗುವ ಜಮಖಾನಗಳೂ ರತ್ನಕಂಬಳಿಗಳೂ ಹೊರದೇಶಗಳಿಗೆ ರಫ್ತಾಗುತ್ತವೆ.

ರೇಷ್ಮೆ.

ರೇಷ್ಮೆಯ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸುಮಾರು 1¼ ಕೋಟಿ ರೂಪಾಯಿ ಬೆಲೆ ಬಾಳುವ ರೇಷ್ಮೆನೂಲನ್ನು ಸಂಸ್ಥಾನದಲ್ಲಿ ತಯಾರ್ಮಾಡುತ್ತಿದಾರೆ. ಇಲ್ಲಿ ತಯಾರಾಗುವ ರೇಷ್ಮೆಯಲ್ಲಿ ⅓ಭಾಗವನ್ನು ಸಂಸ್ಥಾನದ ನೆಯ್ಗೆಯವರೇ ಉಪಯೋಗಿಸುತ್ತಾರೆ. ಉಳಿದ ಭಾಗವು ಮದರಾಸು ಆಧಿಪತ್ಯಕ್ಕೂ, ಉಳಿದ ಕಡೆಗಳಿಗೂ ರಫ್ತಾಗುತ್ತದೆ. ರೇಷ್ಮೆಯ ವಿಚಾರದಲ್ಲಿ ತಕ್ಕ ಪರಿಶೋಧನೆಯನ್ನು ನಡೆಸಿ ಜನಗಳಿಗೆ ಸಹಾಯಮಾಡಲು ಸರ್ಕಾರದವರು ಒಂದು ಇಲಾಖೆಯನ್ನೇ ಏರ್ಪಡಿಸಿದ್ದಾರೆ. ಆದರೆ ರೇಷ್ಮೆಯ ಬಟ್ಟೆಗಳನ್ನು ಮಾಡುವ ದೊಡ್ಡ ಕಾರ್ಖಾನೆಗಳಾವುವೂ ನಮ್ಮ ದೇಶದಲ್ಲಿ ಸ್ಥಾಪಿತವಾಗಿಲ್ಲ.

ಬೆಲ್ಲ–ಸಕ್ಕರೆ.

ದೇಶದಲ್ಲಿ ಬೆಳೆಯುವ ಕಬ್ಬಿನಿಂದ ಬೆಲ್ಲವನ್ನು ಹೆಚ್ಚಾಗಿ ತಯಾರ್ಮಾಡುತ್ತಿದ್ದಾರೆ; ತಕ್ಕಷ್ಟು ಸಕ್ಕರೆಯನ್ನು ಮಾಡುತ್ತಿಲ್ಲ. ಆಯಾ ಕಬ್ಬಿನ ಗದ್ದೆಗಳ ಬಳಿಯಲ್ಲಿಯೇ ಕೊಪ್ಪರಿಗೆಗಳಲ್ಲಿ ಕಬ್ಬಿನ ಹಾಲನ್ನು ಕಾಸಿಬಿಡುವರು. ವಿಸ್ತಾರವಾದ ಪ್ರದೇಶಗಳಲ್ಲಿ ಕಬ್ಬನ್ನು ಬೆಳೆಯದೇ ಇರುವುದರಿಂದಲೂ, ಮತ್ತು ತಕ್ಕಷ್ಟು ಕಬ್ಬು ಒಂದೇ ಕಡೆಯಲ್ಲಿ ಒದಗದೇ ಇರುವುದರಿಂದಲೂ ಈ ಬೆಲ್ಲಕ್ಕಾಗಿ ಅಥವಾ ಸಕ್ಕರೆಗಾಗಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ಹಿಂದೆ ಏರ್ಪಡಿಸಿರಲಿಲ್ಲ. ಈಗ ಸರ್ಕಾರದವರು ಮಂಡ್ಯದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಇಟ್ಟಿದ್ದಾರೆ. ಇದು ಚೆನ್ನಾಗಿ ನಡೆಯುತ್ತಿದೆ.

ಚರ್ಮ ಹದಮಾಡುವುದು.

ಚರ್ಮವನ್ನು ಹದಮಾಡತಕ್ಕ ಚಿಕ್ಕ ಕಾರ್ಖಾನೆಗಳು ಬೆಂಗಳೂರಿನಲ್ಲಿ ಸುಮಾರು 16 ಇವೆ. ಇದೂ ಅಲ್ಲದೆ ದೊಡ್ಡದೊಂದು ಕಾರ್ಖಾನೆಯು

ಖಾಸಗೀ ಜನಗಳಿಂದ 1908ರಲ್ಲಿ ಬೆಂಗಳೂರಲ್ಲಿಯೇ ಸ್ಥಾಪಿತವಾಗಿ ಕೆಲಸವು ಸುಮಾರಾಗಿ ನಡೆಯುತ್ತಿದೆ.

ಕಾಡು ವಸ್ತುಗಳ ಕೈಗಾರಿಕೆ.

ಕಾಡುಗಳಿಗೆ ಸಂಬಂಧಪಟ್ಟ ಕೆಲಸಗಳು ಇನ್ನೂ ಶಾಸ್ತ್ರರೀತಿಯಾಗಿಯೂ ಲಾಭದಾಯಕವಾಗಿಯೂ ನಡೆದರೆ ಕೆಲವು ಕಾರ್ಖಾನೆಗಳು ಸ್ಥಾಪಿತವಾಗಬಹುದು. ನಮ್ಮ ಕಾಡುಗಳಲ್ಲಿ ಬೆಂಕಿಯ ಪೆಟ್ಟಿಗೆಗಳನ್ನು ತಯಾರು ಮಾಡಲನುಕೂಲಿಸುವ 20 ತರಹದ ಮರಗಳು ದೊರೆಯುವುವೆಂದು ತಿಳಿದುಬಂದಿದೆ. ಶಿವಮೊಗ್ಗಿಯಲ್ಲಿ ಈ ಬೆಂಕಿಯ ಪೆಟ್ಟಿಗೆಗಳ ಕಾರ್ಖಾನೆಯೊಂದನ್ನು ಸ್ಥಾಪಿಸಿದ್ದರು. ಆದರೆ ಅದು ಕೆಲವು ಕಾಲದಲ್ಲಿಯೇ ಮುಚ್ಚಲ್ಪಟ್ಟಿತು.

ಚಿಕ್ಕ ಕೈಗಾರಿಕೆಗಳು.

ಸೊರಬ ಸಾಗರಗಳಲ್ಲಿರುವ ಗೂಡಿಗರು ಗಂಧದ ಮರದ ಕೆತ್ತನೆಯ ಕೆಲಸವನ್ನೂ, ನಾಗಮಂಗಲ ಶ್ರವಣಬೆಳುಗೊಳದ ಜನರು ಹಿತ್ತಾಳೆ ಕಂಚಿನ ಪಾತ್ರೆಗಳನ್ನೂ, ಚೆನ್ನಪಟ್ಟಣದವರು ಬಣ್ಣದ ಸಾಮಾನು ವೀಣೆಯ ತಂತಿಗಳನ್ನೂ, ಕೈಕಸಬುಗಳಾಗಿ ಇಟ್ಟುಕೊಂಡಿದ್ದಾರೆ. ಬೆಂಗಳೂರಿನಲ್ಲಿ ಮೆಟಲ್ ಫ್ಯಾಕ್ಟರಿ ಎಂದು ಕಂಚಿನ ಮತ್ತು ಹಿತ್ತಾಳೆಯ ಪಾತ್ರೆಗಳನ್ನು ಮಾಡುವ ಕಾರ್ಖಾನೆಯಿದೆ.

ಕೈಗಾರಿಕೆಗಳಿಗೆ ಪ್ರೋತ್ಸಾಹ.

ಮೈಸೂರು ಸಂಸ್ಥಾನದಲ್ಲಿ ಅರ್ಥಸಾಧಕ ಸಭೆಯು ಸ್ಥಾಪಿತವಾಗಿ ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯೊಂದು ಹುಟ್ಟಿದಂದಿನಿಂದ ಸಂಸ್ಥಾನದಲ್ಲಿ ಕೈಗಾರಿಕೆಗೆ ಒಳ್ಳೆಯ ಪ್ರೋತ್ಸಾಹ ದೊರೆಯಿತು. ಕೈಗಾರಿಕೆಗಳ ಕಡೆಗೆ ಜನಸಾಮಾನ್ಯದ ಮನಸ್ಸು ತಿರುಗಲೆಂದು ಸರ್ಕಾರದವರು ಅನೇಕ ಏರ್ಪಾಡುಗಳನ್ನು ಮಾಡಿದ್ದಾರೆ. ಇಂಡಸ್ಟ್ರಿಯಲ್ ಸ್ಕೂಲುಗಳನ್ನು ಅಲ್ಲಲ್ಲಿ ಸ್ಥಾಪಿಸಿರುವರು ; ಟೆಕ್ನಿಕಲ್ ಇನ್‌ಸ್ಟಿಟ್ಯೂಟನ್ನು ಮೈಸೂರಿನಲ್ಲಿಟ್ಟಿರುವರು ; ನೇಯ್ಗೆಯ, ಬಣ್ಣದ ಸಾಮಾನುಗಳ ಸ್ಕೂಲುಗಳನ್ನು ಇಟ್ಟಿರುವರು ; ಸಂಸ್ಥಾನದ ರೈಲು ಕಾರ್ಖಾನೆಗಳಲ್ಲಿಯೂ ಬೇಕಾದಷ್ಟು ಶಿಕ್ಷಣ

ವನ್ನು ಕೊಡಿಸುತ್ತಿದ್ದಾರೆ; ಕೆಲವು ಹೊಸ ಕಾರ್ಖಾನೆಗಳನ್ನು ಸ್ಥಾಪಿಸಿ ಕೆಲಸಕಾರ್ಯಗಳ ರೀತಿಯನ್ನು ತಿಳಿಸುತ್ತಿದ್ದಾರೆ; ಸರ್ಕಾರದವರು ಖಾಸಗಿ ಜನಗಳಿಗೆ ಬಂಡವಾಳವನ್ನೂ, ಯಂತ್ರ ಮತ್ತು ಕೈಗಾರಿಕೆ ವಿದ್ಯೆಗಳಲ್ಲಿ ಸಲಹೆಗಳನ್ನೂ ಕೊಟ್ಟು ಬಹಳ ಪ್ರೋತ್ಸಾಹಮಾಡುತ್ತಿದ್ದಾರೆ. ಇದರ ಜೊತೆಗೆ ಇನ್ನೊಂದು ಮುಖ್ಯ ಅನುಕೂಲವನ್ನು ಹೇಳಬೇಕು,-ವಿದ್ಯುಚ್ಛಕ್ತಿಯ ಉತ್ಪತ್ತಿ. ಇದರ ದೆಸೆಯಿಂದ ಸಣ್ಣಪುಟ್ಟ ಕೈಗಾರಿಕೆಗಳು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಹೆಚ್ಚಲವಕಾಶವಾಯಿತು. ಹಿಂದೆ ನಡೆದ ಯೂರೋಪಿನ ಯುದ್ಧದಲ್ಲಿ ಪದಾರ್ಥಗಳಿಗೆ ಹೆಚ್ಚು ಗಿರಾಕಿಯೂ ಬಂದು ಕೈಗಾರಿಕೆಗಳಿಗೆ ಪ್ರೋತ್ಸಾಹ ಉಂಟಾಯಿತು. ಇಷ್ಟಾದರೂ ಸಂಸ್ಥಾನದಲ್ಲಿ ಕೈಗಾರಿಕೆಗಳು ಬಹಳವಾಗಿ ಹೆಚ್ಚಿಲ್ಲ. ಇವುಗಳಿಂದ ಜೀವನ ಸಾಗಿಸಿಕೊಳ್ಳುವವರ ಸಂಖ್ಯೆಯು ಕಡಮೆಯಾಗಿಯೇ ಇದೆ.

ಕೈಗಾರಿಕೆಗಳು ಏಳ್ಗೆಯಾಗದಿರುವುದಕ್ಕೆ ಕಾರಣಗಳು.

ಮುಖ್ಯವಾಗಿ ಜನರಲ್ಲಿ ಬಂಡವಾಳವಿಲ್ಲ. ಕೈಗಾರಿಕೆಗಳಿಗೆ ಬೇಕಾಗುವ ಹಣವನ್ನು ಒದಗಿಸಿಕೊಳ್ಳುವುದು ಬಹಳ ಕಷ್ಟವಾಗಿದೆ. ಸರಿಯಾಗಿ ಕೆಲಸ ಮಾಡುವವರೂ, ಶೋಧನೆಮಾಡಿ ಶಾಸ್ತ್ರರೀತಿಯಿಂದ ಕೆಲಸ ನಡೆಸುವವರೂ, ಅತಿವಿರಳ. ನಮ್ಮದೇಶದಲ್ಲಾಗುವ ಪದಾರ್ಥಗಳನ್ನೂ, ದೊರೆಯುವ ಖನಿಜಗಳನ್ನೂ ಹೊರದೇಶಗಳಿಗೆ ಸುಲಭ ಖರ್ಚಿನಲ್ಲಿ ಕಳುಹಿಸಬೇಕಾದರೆ ನಮ್ಮ ಸಂಸ್ಥಾನಕ್ಕೆ ಸಮುದ್ರ ತೀರವೂ ಒಂದು ರೇವು ಪಟ್ಟಣವೂ ಆವಶ್ಯಕ. ಗಣಿಗಳಲ್ಲಿ ತೃಪ್ತಿಕರವಾಗಿ ಕೆಲಸ ನಡೆಯಬೇಕಾದರೂ ಕಾರ್ಖಾನೆಗಳಲ್ಲಿ ಲಾಭಕರವಾಗಿ ಕೆಲಸ ನಡೆಯಬೇಕಾದರೂ ಪದಾರ್ಥಗಳನ್ನು ಸಾಗಿಸುವುದಕ್ಕೆ ಬೀಳುವ ಲಾಗವಡು ಬಹಳ ಕಡಮೆಯಾಗಿರಬೇಕು. ಇದಕ್ಕೆ ಅನುಕೂಲವಾದ ರಸ್ತೆಗಳೂ, ಲೋಹ ಮಾರ್ಗಗಳೂ, ರೇವು ಪಟ್ಟಣಗಳೂ, ಹಡಗುಗಳೂ, ಒದಗಿ ಬಂದರೆ ನಮ್ಮ ದೇಶವನ್ನು ಕೈಗಾರಿಕೆಯ ಸ್ಥಾನವಾಗಿ ಮಾಡಬಹುದು.

ಈಗಿನ ಕಾಲದಲ್ಲಿ ಪೋಟಾಪೋಟಿಯು ಬಹಳ ಹೆಚ್ಚು. ನಮ್ಮ ದೇಶಕ್ಕೆ ಹೊರಗಿನಿಂದ ಬರುವ ಪದಾರ್ಥಗಳು ಬಹಳ ಅಗ್ಗವಾಗಿ ದೊರೆಯುತ್ತಿವೆ. ನಾವು ತಯಾರು ಮಾಡಬೇಕೆಂದಿರುವ ಪದಾರ್ಥಗಳಿಗೆ

ಅಸಲು ಬೆಲೆಯೇ ಹೆಚ್ಚಾದರೆ ಕಾರ್ಖಾನೆಗಳನ್ನು ಮುಚ್ಚಿ ನಷ್ಟ ಪಡಬೇಕಾಗುವುದು. ಹಿಂದೆ ನಮ್ಮ ದೇಶದಲ್ಲಿ ಸಕ್ಕರೆಯ ದೊಡ್ಡ ದೊಡ್ಡ ಕಾರ್ಖಾನೆಗಳಿದ್ದುವು, ಬಳೆಗಳ ಕಾರ್ಖಾನೆಗಳೂ ಇದ್ದುವು, ಉಕ್ಕನ್ನೂ ತಯಾರು ಮಾಡುತ್ತಿದ್ದರು. ಈಗ ಈ ಪದಾರ್ಥಗಳೆಲ್ಲ ಹೊರಗಡೆಯಿಂದ ಬಂದು ಸುಲಭ ಬೆಲೆಗೆ ಸಿಕುತ್ತಿವೆ. ಆದುದರಿಂದ ಹಿಂದೆ ಇದ್ದ ಕೈಗಾರಿಕೆಗಳು ಹೋದುವು ; ಹೊಸದಾಗಿ ಕೈಗಾರಿಕೆಗಳು ಹೆಚ್ಚಾಗಿ ಸ್ಥಾಪಿತವಾಗಲಿಲ್ಲ.

ಆರನೆಯ ಅಧ್ಯಾಯ.

ರೈಲುಗಳು ಮತ್ತು ರಸ್ತೆಗಳು.

ನಮ್ಮ ದೇಶದಲ್ಲಿ ರೈಲುಗಳನ್ನು ೧೯ನೆಯ ಶತಮಾನದ ಮಧ್ಯಭಾಗದಲ್ಲಿಯೇ ಹಾಕಲು ಆರಂಭಿಸಿದರು. ಮೊದಲಿನಲ್ಲಿ ಮದರಾಸುಕಡೆ ರೈಲನ್ನು ಹಾಕಿದರು. ಅನಂತರ ಬೆಂಗಳೂರಿಂದ ಮೈಸೂರಿಗೆ ರೈಲನ್ನು ಹಾಕಿದರು. ರಾಜ್ಯವನ್ನು ಶ್ರೀ ನಾಲ್ವಡಿ ಚಾಮರಾಜೇಂದ್ರ ಒಡೆಯರವರು ವಹಿಸಿಕೊಂಡ ಒಂದೆರಡು ವರ್ಷಗಳೊಳಗಾಗಿ ಈ ಕೆಲಸವು ಮುಕ್ತಾಯವಾಯಿತು. ಕ್ರಮಕ್ರಮವಾಗಿ ಮೈಸೂರಿಂದ ತುಮಕೂರು, ಗುಬ್ಬಿ, ಹರಿಹರದವರೆಗೂ, ಬೀರೂರಿಂದ ಶಿವಮೊಗ್ಗಿಗೂ ರೈಲಾಯಿತು. ದಿವಾನ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಸಂಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ರೈಲುಗಳನ್ನು ಹಾಕುವ ಏರ್ಪಾಟಾಯಿತು. ಈಗ ನಮ್ಮ ಸಂಸ್ಥಾನದಲ್ಲಿ 722 ಮೈಲಿಗಳ ರಸ್ತೆಯಿದೆ. ಅದರಲ್ಲಿ 451 ಮೈಲಿಗಳಷ್ಟು ರೈಲು ರಸ್ತೆಯನ್ನು ನಮ್ಮ ಸರ್ಕಾರದವರೂ ಉಳಿದುದನ್ನು ಎಂ. ಎಸ್. ಎಂ. ಕಂಪೆನಿಯವರೂ ನಡೆಸುತ್ತಿದ್ದಾರೆ. ಸುಮಾರು 5 ಕೋಟಿ ರೂಪಾಯಿಗಳ ಬಂಡವಾಳವನ್ನು ಈ ರೈಲು ಮಾರ್ಗಗಳಿಗಾಗಿ ಸರ್ಕಾರದವರು ಹಾಕಿದ್ದಾರೆ. ಸದ್ಯದಲ್ಲಿರುವ ರೈಲು ಮಾರ್ಗಗಳನ್ನು ನಕ್ಷೆಯಲ್ಲಿ ತೋರಿಸಿದೆ.

ರೈಲುಮಾರ್ಗದ ಬಡಾವಣೆಗಳು

ಮೈಸೂರು ಸಂಸ್ಥಾನವು ಮದರಾಸ್, ಬೊಂಬಾಯಿ ಅಧಿಪತ್ಯಗಳಿಗೆ ಸೇರಿದಂತೆ ಇರುವುದು. ಈ ಸಂಸ್ಥಾನಕ್ಕೆ ಸಮುದ್ರ ತೀರವಿಲ್ಲ. ಜನರ ಪ್ರಯಾಣಕ್ಕೂ, ವ್ಯಾಪಾರಕ್ಕೂ ಅನುಕೂಲವಾಗಬೇಕಾದರೆ ದೇಶದ ನಾಲ್ಕು ದಿಕ್ಕುಗಳಿಗೂ ರೈಲುಮಾರ್ಗಗಳು ಹರಡಿ ಬ್ರಿಟಿಷ್ ಇಂಡಿಯಾದ ರೈಲುಗಳನ್ನು ಸಂಧಿಸುವುದು ಆವಶ್ಯಕವಾಗಿದೆ. ಪೂರ್ವ ಮತ್ತು ಉತ್ತರ ದಿಕ್ಕುಗಳ ಕಡೆಗೆ ಸಮರ್ಪಕವಾದ ರೈಲು ರಸ್ತೆಗಳು ಇವೆ. ಆದರೆ

ದಕ್ಷಿಣ ಮತ್ತು ಪಶ್ಚಿಮದ ಕಡೆಗಳಿಗೆ ತೃಪ್ತಿಕರವಾದ ಲೋಹಮಾರ್ಗಗಳಿಲ್ಲ. ಮಂಗಳೂರು ಭಟ್ಕಲ್ ಮುಂತಾದ ಅರಬ್ಬೀ ಸಮುದ್ರದ ರೇವುಪಟ್ಟಣಗಳಿಗೆ ರೈಲನ್ನು ಹಾಕುವುದಾದರೆ ವ್ಯಾಪಾರಕ್ಕೆ ಹೆಚ್ಚು ಲಾಭವುಂಟು. ಹಾಗೆಯೇ ದಕ್ಷಿಣದಲ್ಲಿ ಚಾಮರಾಜನಗರದವರೆಗೂ ಹಾಕಿರುವ ರೈಲನ್ನು ಸಂಸ್ಥಾನದ ಸರಹದ್ದನ್ನು ದಾಟಿಸಿ, ಈರೋಡು ಅಥವಾ ಪೊದನೂರುಗಳಿಗೆ ಸಂಬಂಧಿಸಿದರೆ ಬಹಳ ಅನುಕೂಲವಾಗುವುದು. ಈ ವಿಚಾರಗಳು ಸರ್ಕಾರದವರ ಪರ್ಯಾಲೋಚನೆಯಲ್ಲಿವೆ; ಮತ್ತು ಈ ಸಂಬಂಧವಾಗಿ ಇಂಡಿಯಾ ಸರ್ಕಾರದವರೊಡನೆ ಪತ್ರವ್ಯವಹಾರಗಳು ನಡೆಯುತ್ತಲಿವೆ. ಮುಂದೆ ಹಾಕಬೇಕೆಂದಿರುವ ರೈಲುಗಳನ್ನು ಕೆಳಗೆ ಕಾಣಿಸಿದೆ.

ಬೆಂಗಳೂರಿಂದ ಹೊಸೂರು.

ಚಾಮರಾಜನಗರದಿಂದ ಸತ್ಯಮಂಗಲ, ಈರೋಡು.

ಅನಂತಪುರದಿಂದ ಭಟ್ಕಲ್.

ರಸ್ತೆಗಳು.

ದೇಶದ ವ್ಯಾಪಾರವು ಅಭಿವೃದ್ಧಿಯಾಗುವುದಕ್ಕೆ ರೈಲುಗಳಂತೆಯೇ ರಸ್ತೆಗಳೂ ಸಹಾಯಮಾಡಿವೆ. ದೇಶದಲ್ಲೆಲ್ಲ ಒಳ್ಳೆಯ ರಸ್ತೆಗಳಿರುವುದರಿಂದ ಸಾಮಾನುಗಳನ್ನು ಸಾಗಿಸುವುದಕ್ಕೆ ಅನುಕೂಲವಾಗಿದೆ. ಸಂಸ್ಥಾನದಲ್ಲಿರುವ ರಸ್ತೆಗಳನ್ನು ಮೂರು ಪಂಗಡಗಳಾಗಿ ವಿಂಗಡಿಸಬಹುದು. (1) ಇಂಜನಿಯರಿಂಗ್ ಇಲಾಖೆಗೆ ಸೇರಿದ ಅಥವಾ ಸರ್ಕಾರದ ಸ್ವಂತ ಅಧೀನದಲ್ಲಿರುವ ರಸ್ತೆಗಳು, (2) ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳು, (3) ಹಳ್ಳಿಯ ರಸ್ತೆಗಳು.

ಸರ್ಕಾರದ ಸ್ವಂತ ರಸ್ತೆಗಳು.—ಹಿಂದಿನ ಕಾಲದಲ್ಲಿ ರಸ್ತೆಗಳ ಮೂಲಕವೇ ಜನಗಳ ಪ್ರಯಾಣವು ಸಾಗುತ್ತಿತ್ತು; ಮತ್ತು ಸಾಮಾನು ಬಂಡಿಗಳು ಹೋಗಬೇಕಾಗಿದ್ದುವು. ಈಗ ಕೂಡ ಸಮೀಪದ ರೈಲು ಸ್ಟೇಷನ್ನಿಗೆ ಗಾಡಿಗಳ ಮೂಲಕ ಸಾಮಾನುಗಳನ್ನು ಒಯ್ಯಬೇಕಾಗಿದೆ. ಪಶ್ಚಿಮ ಘಟ್ಟಗಳಿರುವ ಪಶ್ಚಿಮ ಸರಹದ್ದಿನಲ್ಲಿ ಈ ರಸ್ತೆಗಳ ಆವಶ್ಯಕತೆಯು ಬಹಳ ಹೆಚ್ಚಾಗಿತ್ತು. ಸಾಗರ, ನಗರ, ಮಂಜರಾಬಾದು ಮುಂತಾದ ತಾಲ್ಲೂಕುಗಳಲ್ಲಿ ಒಳ್ಳೊಳ್ಳೆಯ ಅಡಿಕೆಯ ತೋಟಗಳಿವೆ. ಮಲೆನಾಡಿನಲ್ಲಿ ಏಲಕ್ಕಿ

ಮೆಣಸು ದಾಲ್ಚಿನ್ನಿ ಮುಂತಾದ ಸಾಂಬಾರದ ಪದಾರ್ಥಗಳನ್ನು ಹೇರಳವಾಗಿ ಬೆಳೆಯುತ್ತಾರೆ; ಮತ್ತು ಮಲೆನಾಡಿನ ಅನೇಕ ಕಡೆಗಳಲ್ಲಿ ಕಾಫಿಯನ್ನು ಬೆಳೆ ಮಾಡುತ್ತಾರೆ. ಈ ಪದಾರ್ಥಗಳು ಸುಲಭವಾಗಿ ಸಮುದ್ರ ತೀರಕ್ಕೆ ಹೋಗಬೇಕಾಗಿದ್ದರೆ ಘಟ್ಟದ ರಸ್ತೆಗಳು ಆವಶ್ಯಕವಾಗಿದ್ದವು. ಈ ಕಾರಣ ಗಳಿಂದ ಕ್ರಿ. ಶ. 1831ರ ಲಾಗಾಯಿತು ಒಳ್ಳೆಯ ರಸ್ತೆಗಳನ್ನು ಹಾಕಲು ಆರಂಭ ಮಾಡಿದರು. ಸಂಸ್ಥಾನಾದ್ಯಂತ ಸೊಗಸಾದ ರಸ್ತೆಗಳು ಈಗ ತಕ್ಕಮಟ್ಟಿಗೆ ಇವೆ. ಅನೇಕ ಕಡೆಗಳಲ್ಲಿ ಹರಿಯುವ ದೊಡ್ಡ ಹೊಳೆಗಳ ಮೇಲೆ ಸೇತುವೆಗಳನ್ನು ಕಟ್ಟಿ ರಸ್ತೆಗಳನ್ನು ಹಾಕಿರುವರು. ಪ್ರತಿವರ್ಷವೂ ಈ ಸರ್ಕಾರದ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕಾಗಿ 6-7 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ. ಸರ್ಕಾರದ ಮತ್ತು ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳ ಉದ್ದವನ್ನು ಕೆಳಗೆ ಪಟ್ಟಿಯಲ್ಲಿ ತೋರಿಸಿದೆ.

ಬಾಬು	ಮೈಲಿಗಳು
ಸರ್ಕಾರದ್ದು	2,186
ಡಿಸ್ಟ್ರಿಕ್ಟು ಬೋರ್ಡು ...	3,460

ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳು.—ಸಂಸ್ಥಾನದಲ್ಲಿ ಬೇಕಾಗುವ ಎಲ್ಲಾ ರಸ್ತೆಗಳನ್ನೂ ಸರ್ಕಾರದವರೇ ಹಾಕಬೇಕಾದರೆ ಸಾಧ್ಯವಿರುವುದಿಲ್ಲ. ಮತ್ತು ಆಯಾ ಪ್ರಾಂತಗಳಿಗೆ ಆವಶ್ಯಕವಾದ ರಸ್ತೆಗಳ ಮೇಲೆ ಸಾಮಾನ್ಯವಾಗಿ ಸರ್ಕಾರದವರ ಗಮನವೂ ಬೀಳುವುದಿಲ್ಲ. ಸರ್ಕಾರದವರ ದೃಷ್ಟಿಯು ಮುಖ್ಯವಾದ ರಾಜಮಾರ್ಗಗಳ ಕಡೆಗೆ ಹೆಚ್ಚಾಗಿರುತ್ತದೆ. ಸ್ಥಳೀಯ ಸಂಸ್ಥೆ ಗಳಲ್ಲಾದರೋ ಆಯಾ ಪ್ರಾಂತದ ಮುಖಂಡರು ಒಟ್ಟಿಗೆ ಸೇರಿ ತಮ್ಮ ತಮ್ಮ ಕಡೆಗಳಿಗೆ ಬೇಕಾದ ಸೌಲಭ್ಯಗಳನ್ನು ಚರ್ಚಿಸುತ್ತಾರೆ. ಈ ಸ್ಥಳೀಯ ಮಂಡಲಿಗಳಿಗೂ ತಕ್ಕಷ್ಟು ವರಮಾನವು ಇರುವುದರಿಂದ ರಸ್ತೆಗಳನ್ನು ಹಾಕುವ ಕಾರ್ಯಭಾರವನ್ನು ಸರ್ಕಾರದವರು ಈ ಮಂಡಲಿಗಳಿಗೂ ವಹಿಸಿರು ತ್ತಾರೆ. ಹೀಗೆ ಡಿಸ್ಟ್ರಿಕ್ಟು ಬೋರ್ಡುಗಳಿಂದ ಹಾಕಲ್ಪಟ್ಟ ರಸ್ತೆಗಳು ಸುಮಾರು 3,500 ಮೈಲಿಗಳ ಮೇಲೆ ನಮ್ಮ ಸಂಸ್ಥಾನದಲ್ಲಿವೆ. ಇವು

ಮುಖ್ಯವಾಗಿ ದೇಶದ ಒಳಭಾಗಗಳಿಂದ ರಾಜ ಮಾರ್ಗಗಳಿಗೆ ಬಂದು ಸೇರುವ ಶಾಖಾ ಮಾರ್ಗಗಳಾಗಿರುವುವು. ಒಟ್ಟಿನಲ್ಲಿ ನಮ್ಮ ಸಂಸ್ಥಾನದಲ್ಲಿ ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳೂ, ಸರ್ಕಾರದ ರಸ್ತೆಗಳೂ ಸೇರಿ ದೇಶದೊಳಕ್ಕೆ ಸಾಮಾನುಗಳನ್ನು ಸುಲಭವಾಗಿ ಸಾಗಿಸುವುದಕ್ಕೂ ಒಳಗಿನಿಂದ ಹೊರಕ್ಕೆ ಒಯ್ಯುವುದಕ್ಕೂ ಬಹಳ ಸೌಕರ್ಯಗಳನ್ನು ಒದಗಿಸಿವೆ. ಈ ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡುವುದಕ್ಕೆ ವರ್ಷಂಪ್ರತಿ 3–4 ಲಕ್ಷ ರೂಪಾಯಿಗಳು ವೆಚ್ಚವಾಗುತ್ತಲಿವೆ.

ಹಳ್ಳಿಯ ರಸ್ತೆಗಳು.—ಇವು ಹಳ್ಳಿಗಳಿಂದ ಡಿಸ್ಟ್ರಿಕ್ಟು ಬೋರ್ಡು ರಸ್ತೆಗಳಿಗಾಗಲಿ, ಸರ್ಕಾರದ ರಸ್ತೆಗಳಿಗಾಗಲಿ ಬಂದು ಸೇರುವ ಮಾರ್ಗಗಳು. ಸಾಮಾನ್ಯವಾಗಿ ಈ ರಸ್ತೆಗಳು ಚೆನ್ನಾಗಿಲ್ಲ, ಅನೇಕ ಕಡೆಗಳಲ್ಲಿ ರಸ್ತೆಗಳೇ ಇಲ್ಲವೆಂದು ಹೇಳಬೇಕು. ‘ಬಂಡಿಯ ಜಾಡು’ ಎಂಬದಾಗಿ ಕೊರಕಲುಗಳಿಂದಲೂ, ಹಳ್ಳ ಕೊಳ್ಳಗಳಿಂದಲೂ ಕೂಡಿದ ಸವೆದ ಮಾರ್ಗಗಳು ಇರುತ್ತವೆ. ಆದರೆ ದಿವಾನ್ ವಿಶ್ವೇಶ್ವರಯ್ಯನವರ ಕಾಲದಲ್ಲಿ ಗ್ರಾಮಾಭಿವೃದ್ಧಿಯ ಕಾರ್ಯಗಳು ಭರದಿಂದ ನಡೆದಾಗ ಹಳ್ಳಿಯ ರಸ್ತೆಗಳನ್ನು ಹಾಕಲು ಪ್ರಬಲವಾದ ಪ್ರೋತ್ಸಾಹವು ದೊರೆಯಿತು. ದಿವಾನ್ ಸರ್ ಮಿರ್ಜಾರವರಿಂದಲೂ ಈ ಬಗೆಯ ಪ್ರೋತ್ಸಾಹ ಬೇಕಾದಷ್ಟು ದೊರೆತಿದೆ. ಗ್ರಾಮಪಂಚಾಯತಿಗಳು ಸುವ್ಯವಸ್ಥಿತವಾದ ಲಾಗಾಯಿತು ತಮ್ಮ ತಮ್ಮ ಗ್ರಾಮಗಳ ಅಭಿವೃದ್ಧಿಯ ವಿಚಾರದಲ್ಲಿ ಗ್ರಾಮಸ್ಥರಿಗೆ ಅಕ್ಕರೆಯುಂಟಾಗುತ್ತಿರುವುದರಿಂದ ಕೆಲವು ಹಳ್ಳಿಗಳಲ್ಲಿ ಒಳ್ಳೆಯ ರಸ್ತೆಗಳು ತಲೆದೋರುತ್ತಲಿವೆ. ಸರ್ಕಾರವರು ಮಾದರಿಯ ಹಳ್ಳಿಯನ್ನು ಕಟ್ಟುವ ಬಗೆ, ಮನೆಗಳು ಇರಬೇಕಾದ ರೀತಿ, ರಸ್ತೆಗಳನ್ನು ಏರ್ಪಡಿಸುವ ವಿಧಗಳು, ಇವೇ ಮುಂತಾದ ವಿಷಯಗಳಲ್ಲಿ ಆಗಿಂದಾಗ್ಗೆ ಪ್ರದರ್ಶನಗಳ ಮೂಲಕ ತಿಳಿಸುತ್ತಿದ್ದಾರೆ. ಈ ಹಳ್ಳಿಯ ರಸ್ತೆಗಳು ಉತ್ತಮ ಸ್ಥಿತಿಗೆ ಬರಬೇಕಾದರೆ ಗ್ರಾಮಸ್ಥರಿಗೆ ತಿಳಿವಳಿಕೆಯೂ, ಅವರ ಪಂಚಾಯತಿಗೆ ತಕ್ಕ ಉಪಪತ್ತಿಯೂ ಆವಶ್ಯಕ.

ವ್ಯಾಪಾರ.—ಒಂದು ದೇಶದ ವ್ಯಾಪಾರವು ಅಭಿವೃದ್ಧಿಯಾಗಬೇಕಾದರೆ ಒಳ್ಳೆಯ ರಸ್ತೆಗಳೂ, ರೈಲು ಮಾರ್ಗಗಳೂ, ರೇವು ಪಟ್ಟಣಗಳೂ ಆವಶ್ಯಕವೆಂಬುದನ್ನು ಹಿಂದೆ ತಿಳಿಸಿದೆಯಷ್ಟೆ. ನಮ್ಮಲ್ಲಿ ರೇವು ಪಟ್ಟಣಗಳು ಇಲ್ಲದಿದ್ದರೂ ಉಳಿದೆರಡು ತಕ್ಕಮಟ್ಟಿಗೆ ಇರುತ್ತವೆ. ಈಚೆಗೆ ಎತ್ತಿನ

ಬಂಡಿಗಳಲ್ಲದೆ ಮೋಟಾರು ಬಸ್ಸುಗಳೂ ಹೆಚ್ಚಾಗಿ ಆಚರಣೆಗೆ ಬರುತ್ತಿರುವುದರಿಂದ ವ್ಯಾಪಾರಕ್ಕೆ ಅನುಕೂಲವಾಗಿದೆ. ಈ ವ್ಯಾಪಾರವು ಒಳದೇಶದ ವ್ಯಾಪಾರ, ಹೊರದೇಶದ ವ್ಯಾಪಾರ ಎಂದು ಎರಡು ವಿಧವಾಗಿರುವುದು.

ಒಳದೇಶದ ವ್ಯಾಪಾರ.—ಒಳದೇಶದ ವ್ಯಾಪಾರವು ಸುಲಭವಾಗಿ ನಡೆಯುವುದಕ್ಕೆ ಸಂಸ್ಥಾನಾದ್ಯಂತ ಸಂತೆಗಳು ಏರ್ಪಟ್ಟಿವೆ. ಜಾತ್ರೆಗಳ ಕಾಲದಲ್ಲಿ ಅಲ್ಲಲ್ಲಿ ಹೆಚ್ಚಾಗಿ ಜನಗಳು ಸೇರುವುದರಿಂದ ವ್ಯಾಪಾರವು ಅಧಿಕವಾಗಿ ನಡೆಯುವುದು. ಬೆಂಗಳೂರು, ಮೈಸೂರು ಎಂಬ ದೊಡ್ಡ ಪಟ್ಟಣಗಳೂ ಒಂದೆರಡು ಸಣ್ಣ ಊರುಗಳೂ ವಿನಾ ಉಳಿದ ಕಡೆಗಳಲ್ಲೆಲ್ಲಾ ವಾರಕ್ಕೊಂದಾವೃತ್ತಿ ಸಂತೆಗಳು ಕೂಡುತ್ತವೆ. ಈ ಸಂತೆಗಳಿಗೆ ಸುತ್ತು ಮುತ್ತಲಿನ ಹಳ್ಳಿಯವರು ಬಂದು ತಮ್ಮಲ್ಲಿರುವ ಪದಾರ್ಥಗಳನ್ನು ಮಾರಿ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳುವರು. ಸಾಮಾನ್ಯವಾಗಿ ಹಳ್ಳಿಗಳಲ್ಲಿರುವ ನೆಯ್ಗೆಯವರು ತಾವು ಮಾಡಿದ ಬಟ್ಟೆಗಳನ್ನು ಈ ಸಂತೆಗಳಿಗೆ ತಂದು ಮಾರುತ್ತಾರೆ. ಅಕ್ಕಿ, ರಾಗಿ, ಬೇಳೆ, ಹಣ್ಣು ಕಾಯಿ, ಉಪ್ಪು, ಎಣ್ಣೆ ಮುಂತಾದ ಅನೇಕ ಪದಾರ್ಥಗಳು ಅಲ್ಲಿ ದೊರೆಯುತ್ತವೆ. ಈ ಸಂತೆಗಳಿಂದ ಗ್ರಾಮಸ್ಥರಿಗೆ ಬಹಳ ಪ್ರಯೋಜನವುಂಟು. ಹಳ್ಳಿಯವರು ಬೇಕಾದ ದಿನಸಿಗಳನ್ನು ತಾವೇ ಬೆಳೆಯುವುದರಿಂದ ಸಾಮಾನ್ಯವಾಗಿ ಉಪ್ಪು, ಸೀಮೆ ಎಣ್ಣೆಗಳನ್ನು ಮಾತ್ರ ಕೊಳ್ಳಲು ಅವರು ಬರುತ್ತಾರೆ. ಕೂಲಿ ಮಾಡತಕ್ಕ ಜನಗಳು ತಮಗೆ ಬೇಕಾದ ಎಲ್ಲಾ ಪದಾರ್ಥಗಳನ್ನೂ ಕೊಂಡುಕೊಳ್ಳುವರು.

ರೈತರು ತಾವು ಬೆಳೆದುದನ್ನು ಊರುಗಳಲ್ಲಿರುವ ಮಂಡಿಗಳಿಗೆ ತಂದು ಹಾಕುತ್ತಾರೆ. ದೊಡ್ಡ ವರ್ತಕರು ಗ್ರಾಮಗಳ ಕಡೆ ಹೋಗಿ ಬೆಳೆಯ ಸ್ಥಿತಿಯನ್ನು ನೋಡಿ ರೈತಾಪಿ ಜನಗಳಿಗೆ ಹಣವನ್ನು ಮುಂಗಡವಾಗಿ ಕೊಟ್ಟು ಸುಲಭ ಬೆಲೆಗೆ ದವಸ ಧಾನ್ಯಗಳನ್ನು ಒಟ್ಟುಗಟ್ಟಲೆ ಕೊಂಡುಕೊಳ್ಳುವುದೂ ಉಂಟು. ಬೆಳೆಯು ಕೈಗೆ ಬರುವ ಮೊದಲೇ ತಕ್ಕಮಟ್ಟಿಗೆ ಹಣವು ಮುಂದಾಗಿ ಬರುವುದರಿಂದಲೂ ನಮ್ಮ ದೇಶದ ರೈತರು ಬಡವರಾದುದರಿಂದಲೂ ಸರಿಯಾದ ಬೆಲೆಯು ಬರುವವರೆಗೂ ಧಾನ್ಯಗಳನ್ನು ಶೇಖರಿಸಿಟ್ಟುಕೊಳ್ಳದೆ ಅವರು ಆಗಲೇ ಮಾರಿ ಬಿಡುತ್ತಾರೆ. ಇದರಿಂದ ರೈತರಿಗೆ ನಷ್ಟವಾಗುತ್ತಿದೆ. ಕೆಲವು ಜನ ಸಾಹುಕಾರರ ಕೈಯಲ್ಲಿ ಈ ವ್ಯಾಪಾರವೆಲ್ಲಾ ನಿಂತು ಹೋಗಿದೆ.

ಹೊರದೇಶದ ವ್ಯಾಪಾರ.—ಹೊರ ದೇಶದ ವ್ಯಾಪಾರವು ಚೆನ್ನಾಗಿ ಹರಡದೇ ಇರುವುದಕ್ಕೆ ಮೂರು ಕಾರಣಗಳಿವೆ. ಸಂಸ್ಥಾನದ ಮೂರು ಕಡೆಗಳಲ್ಲಿಯೂ ಬೆಟ್ಟಗುಡ್ಡಗಳು ಆವರಿಸಿಕೊಂಡಿರುವುದರಿಂದ ಸುಗಮವಾದ ಮಾರ್ಗಗಳು ಕೆಲವು ಮಾತ್ರವಿರುವುವು. ಇದರಿಂದ ಮದರಾಸು ಮತ್ತು ಬೊಂಬಾಯಿ ಪ್ರಾಂತಗಳ ಕೆಲವು ಭಾಗಗಳನ್ನು ಸುಲಭದಲ್ಲಿ ಸೇರಲಾಗುವುದಿಲ್ಲ. ಹಡಗುಗಳ ಅಥವಾ ದೋಣಿಗಳ ಸಂಚಾರಕ್ಕೆ ಅನುಕೂಲವಾದ ನದಿಗಳು ಇಲ್ಲ. ಇದರಿಂದ ಸಾಮಾನುಗಳನ್ನು ಸುಲಭವಾದ ವೆಚ್ಚದಿಂದ ಸಾಗಿಸಲಾಗುವುದಿಲ್ಲ. ಮೂರನೆಯದು ರೇವು ಪಟ್ಟಣಗಳು ಇಲ್ಲ. ಇದರಿಂದ ನಮ್ಮ ಹಡಗುಗಳಲ್ಲಿ ನಮ್ಮ ಅನುಕೂಲಕ್ಕೆ ತಕ್ಕಂತೆ ಸಾಮಾನುಗಳನ್ನು ಕಳುಹಿಸುವುದಕ್ಕೂ ತರಿಸುವುದಕ್ಕೂ ಆಗುತ್ತಿಲ್ಲ.

ಆಮದು ಮತ್ತು ರಫ್ತು.

ನಮ್ಮ ದೇಶದಲ್ಲಿ ಕೈಗಾರಿಕೆಗಳು ಹೆಚ್ಚಾಗಿಲ್ಲ. ಆಹಾರ ಪದಾರ್ಥಗಳನ್ನೂ ಹತ್ತಿಯನ್ನೂ ಬಿಟ್ಟರೆ ಉಳಿದ ವಸ್ತುಗಳೆಲ್ಲ ಹೊರದೇಶಗಳಿಂದಲೇ ಬರಬೇಕಾಗಿವೆ. ನಮ್ಮ ದೇಶದಲ್ಲಿ ಮಾಡಬಹುದಾದ ಪದಾರ್ಥಗಳನ್ನು ಇಲ್ಲಿಯೇ ತಯಾರುಮಾಡುವುದು ಒಳ್ಳೆಯದು. ಸಾಧ್ಯವಾದರೆ ಅವುಗಳನ್ನು ಹೆಚ್ಚಾಗಿ ಮಾಡಿ ನಾವೇ ಹೊರದೇಶಗಳಿಗೆ ಕಳುಹಿಸುವುದಾದರೆ ಇನ್ನೂ ಒಳ್ಳೆಯದು. ಅದರಿಂದ ದೇಶದ ಸಂಪತ್ತು ಹೆಚ್ಚುವುದು ; ಮತ್ತು ಹೆಚ್ಚು ಜನಗಳಿಗೆ ಜೀವನೋಪಾಯಗಳು ದೊರೆಯುವುವು. ಈಗ ವರ್ಷಂಪ್ರತಿ ನಮ್ಮ ದೇಶದಿಂದ ಹೊರಗೆ ಹೋಗತಕ್ಕ ಪದಾರ್ಥಗಳು :— ಹತ್ತಿ, ರೇಷ್ಮೆ, ದವಸ ಧಾನ್ಯಗಳು, ಚರ್ಮ, ಎಣ್ಣೆಯ ಬೀಜಗಳು, ಶ್ರೀಗಂಧದೆಣ್ಣೆ, ಕಾಫಿ, ಅಡಿಕೆ, ಮುಂತಾದುವು. ಇವುಗಳ ಬೆಲೆ ಸುಮಾರು 12½ ಕೋಟಿ ರೂಪಾಯಿಗಳು. ಹೊರದೇಶಗಳಿಂದ ಬರತಕ್ಕ ಸಾಮಾನುಗಳು :—ಕಬ್ಬಿಣದ ಮತ್ತು ಉಕ್ಕಿನ ಸಾಮಾನುಗಳು, ಗಾಜಿನ ಸಾಮಾನುಗಳು, ಹತ್ತಿಯ ಮತ್ತು ಉಣ್ಣೆಯ ಬಟ್ಟೆಗಳು, ಸೀಮೆಎಣ್ಣೆ, ಮುಂತಾದುವು. ಇವುಗಳ ಬೆಲೆ ಸುಮಾರು 13 ಕೋಟಿ ರೂಪಾಯಿಗಳು.



ನೀಲಗಿರಿಯ ತೊದವ, ಗಂಡಸು



ತೊದವ, ಹೆಂಗಸು

ಏಳನೆಯ ಅಧ್ಯಾಯ.

ಜನಗಳು ಮತ್ತು ಜನಸಂಖ್ಯೆ.

ನಮ್ಮ ದೇಶದ ಜನಗಳನ್ನು ಆರ್ಯ ಮತ್ತು ದ್ರಾವಿಡ ಬುಡಕಟ್ಟಿಗೆ ಸೇರಿದವರೆಂದು ಹೇಳಬಹುದು. ಇಲ್ಲಿಯ ಮೂಲನಿವಾಸಿಗಳು ಯಾರಾಗಿದ್ದಿರಬಹುದೆನ್ನುವುದನ್ನೂ, ಅವರು ಯಾವ ಭಾಷೆಯನ್ನು ಆಡುತ್ತಿದ್ದಿರಬಹುದೆನ್ನುವುದನ್ನೂ ಸುಲಭದಲ್ಲಿ ಹೇಳಲಾಗುವುದಿಲ್ಲ. ಈ ವಿಚಾರದಲ್ಲಿ ಕೆಲವು ಶೋಧನೆಗಳನ್ನು ನಡೆಯಿಸಿ ಶಾಸ್ತ್ರಜ್ಞರು ಕೆಲವು ತೀರ್ಮಾನಗಳಿಗೆ ಬಂದಿರುತ್ತಾರೆ. ಇವು ಸ್ವಾರಸ್ಯವಾಗಿರುವುದರಿಂದ ಈ ಮೂಲ ನಿವಾಸಿಗಳ ವಿಚಾರದಲ್ಲಿ ಕೆಲವು ಸಂಗತಿಗಳನ್ನು ತಿಳಿಸುತ್ತೇವೆ.

ಪೂರ್ವ ನಿವಾಸಿಗಳು—ತೋಡರು.

ಈಗ ನೀಲಗಿರಿಯಲ್ಲಿರುವ ತೋಡರು ಮೈಸೂರಿನ ಮೂಲ ನಿವಾಸಿಗಳಿರಬಹುದೆಂದು ಕೆಲವರು ಹೇಳುತ್ತಾರೆ. ಇವರು ಆಡುವ ಭಾಷೆಯು ಹಳೆಗನ್ನಡವಾಗಿದೆ. ಇದರ ಜೊತೆಗೆ ಇವರು ಎಮ್ಮೆಯನ್ನು ಪೂಜಿಸುತ್ತಾರೆ. ಮೈಸೂರು ಎಂದರೆ ಮಹಿಷೂರು, ಮಹಿಷಮಂಡಲ—ಎಮ್ಮೆಗಳ ನಾಡು ಎಂಬದಾಗಿ ಕೆಲವರು ಅರ್ಥ ಮಾಡುವುದುಂಟು. ಚಾಮುಂಡಿ ಬೆಟ್ಟದಲ್ಲಿ ಮಹಿಷಾಸುರನೆಂಬ ರಾಕ್ಷಸನು ವಾಸವಾಗಿದ್ದನೆಂದೂ ಚಾಮುಂಡಿಯು ಅವನನ್ನು ಸಂಹರಿಸಿದಳೆಂದೂ ಕೆಲವು ಪುಸ್ತಕಗಳಲ್ಲಿ ಹೇಳಿದೆ. ತೋಡರು ಮಹಿಷಾಸುರನ ಕಡೆಯವರಾಗಿರಬಹುದು. ಅವರು ಎಮ್ಮೆಯನ್ನು ಪೂಜೆ ಮಾಡುವುದರಿಂದಲೂ, ಹಳೆಗನ್ನಡವನ್ನು ಮಾತನಾಡುವುದರಿಂದಲೂ ಅವರೇ ಇಲ್ಲಿ ಮೊದಲಿದ್ದ ಜನಗಳೆಂದು ಹೇಳಬಹುದು.

ತೋಡರು ತಮ್ಮ ಜುಟ್ಟನ್ನು ಕತ್ತರಿಸಿಕೊಳ್ಳುವುದಿಲ್ಲ. ಕೋತರು, ಬಡಗರು ಮುಂತಾದ ಬೆಟ್ಟದ ಜನರು ತೋಡರಿಗೆ ಕಾಣಿಕೆಯನ್ನು ಸಲ್ಲಿಸು

ವರು. ಭೂಮಿಯು ತೋಡರಿಗೆ ಸೇರಿದ್ದೆಂದೂ, ಸಾಗುವಳಿ ಮಾಡುವ ಮೊದಲು ಅವರಿಗೆ ಕಾಣಿಕೆಯನ್ನು ಕೊಡಬೇಕೆಂದೂ ಈ ಜನರು ಹೇಳುತ್ತಾರೆ. ಸಾಮಾನ್ಯವಾಗಿ ತೋಡರು ಪಶುಪಾಲನೆ ಮಾಡುವರೇ ಹೊರತು ವ್ಯವಸಾಯವನ್ನೂ ಕೂಲಿಯನ್ನೂ ಮಾಡುವುದಿಲ್ಲ.

ಹಳೇ ಪೈಕದವರು.

ಮಲೆನಾಡು ಪ್ರಾಂತದಲ್ಲಿ ಹಳೇ ಪೈಕದವರೆಂದು ಒಂದು ಬಗೆಯ ಜನಗಳಿದ್ದಾರೆ. ಇವರಿಗೂ ನೀಲಗಿರಿಯ ತೋಡರಿಗೂ ಸಾಮ್ಯವಿದೆ. ಈಗ ಈ ಜನಗಳು ಸಾರಾಯಿ ಇಳಿಸುವುದರಲ್ಲಿಯೂ, ತರೀ ವ್ಯವಸಾಯದಲ್ಲಿಯೂ ಮೆಣಸು ಬಳ್ಳಿಯ ಕಾಡುಗಳಲ್ಲಿಯೂ ಕೆಲಸ ಮಾಡುತ್ತಿದ್ದಾರೆ. ಮಂಜರಾಬಾದಿನ ಕಡೆಯ ಜನಗಳನ್ನು ದೇವರ ಮಕ್ಕಳೆಂದು ಕರೆಯುವರು. ತೋಡರಲ್ಲಿ 'ಪೈಕಿ' ಎಂಬ ಜನರು ಉತ್ತಮರು. ಅಲ್ಲಿಯ ಪೂಜಾರಿಗಳು ಈ 'ಪೈಕಿ' ಪಂಗಡಕ್ಕೆ ಸೇರಿದವರು. ಈ ಪೂಜಾರಿಗಳಿಗೂ ದೇರ್ ಮೊಕ್—ಎಂದರೆ ದೇವರ ಮಕ್ಕಳು ಎಂದು ಹೆಸರು.

ಸೋಲಿಗರು ಮತ್ತು ಕುರುಬರು.

ಹೆಗ್ಗಡದೇವನಕೋಟೆಯ ಭಾಗಗಳಲ್ಲಿರುವ ಕುರುಬರು, ಬಿಳಿಗಿರಿರಂಗನ ಬೆಟ್ಟದಲ್ಲಿರುವ ಸೋಲಿಗರು ಮೂಲ ನಿವಾಸಿಗಳಿಗೆ ಸೇರಿದವರಾಗಿರಬೇಕು. ನೀಲಗಿರಿಯ ಸಮೀಪದಲ್ಲಿರುವ ಬಡಗರು ನೆಲವನ್ನು ತಾವು ಉಳುವ ಮೊದಲು ಕುರುಬನ ಕೈಗೆ ನೇಗಿಲನ್ನು ಕೊಟ್ಟು ಸ್ವಲ್ಪ ಉಳುವಂತೆ ಮಾಡುವರು. ಇದರಿಂದ ಕುರುಬರಿಗೇ ಮೊದಲು ನೆಲವೆಲ್ಲಾ ಸೇರಿತ್ತೆಂದು ಕೆಲವರು ಊಹಿಸುತ್ತಾರೆ. ಈ ಕುರುಬರು ಇತರ ಬೆಟ್ಟದ ಜನಗಳಂತೆ ತೋಡರಿಗೆ ಕಾಣಿಕೆಯನ್ನು ಕೊಡುವುದಿಲ್ಲ.

ಕಾಡು ಕುರುಬರಲ್ಲಿ ಬೆಟ್ಟದ ಕುರುಬರೆಂದೂ, ಜೇನು ಕುರುಬರೆಂದೂ ಎರಡು ವಿಧ. ಬೆಟ್ಟದ ಕುರುಬರು ಕುಳ್ಳರು. ಆದರೆ ಬಹಳ ಚಟುವಟಿಕೆಯುಳ್ಳವರು, ಶ್ರಮಸಹಿಷ್ಣುಗಳು, ಕಾಡುದಾರಿಗಳನ್ನು ಚೆನ್ನಾಗಿ ಬಲ್ಲವರು. ಜೇನು ಕುರುಬರು ಮೇಲಿನವರಿಗಿಂತ ಕೀಳು; ಬಣ್ಣದಲ್ಲಿ ಹೆಚ್ಚು ಕಪ್ಪು. ಇವರು ಸಾಮಾನ್ಯವಾಗಿ ಅವರ ಹೆಸರು ಸೂಚಿಸುವಂತೆ

ಜೇನುತುಪ್ಪವನ್ನೂ, ಜೇನು ಮೇಣವನ್ನೂ, ಮಾರಿ ಜೀವನ ಮಾಡುತ್ತಾರೆ. ಈ ಜನಗಳ ಹಳ್ಳಿಗೆ 'ಹಾಡಿ' ಎಂದು ಹೆಸರು. ಇವರಲ್ಲಿ ಅಪೂರ್ವವಾದ ಒಂದು ಪದ್ಧತಿಯಿದೆ. ಮದುವೆಯಾಗದ ಗಂಡಸರೆಲ್ಲರೂ ಹಳ್ಳಿಯ ಚಾವಡಿಯ ಒಂದು ಕಡೆ ಮಲಗಬೇಕು. ಮದುವೆಯಾಗದ ಹೆಂಗಸರೆಲ್ಲ ಇನ್ನೊಂದು ಕಡೆ ದೂರ ಮಲಗಬೇಕು. ಇವರು ಗಾಜಿನ ಚೂರುಗಳಿಂದ ಕ್ಷೌರವನ್ನು ತಾವೇ ಮಾಡಿಕೊಳ್ಳುತ್ತಾರೆ. ಹೊರಗಿನವರಾರೂ ಪಾದರಕ್ಷೆಗಳನ್ನು ಹಾಕಿಕೊಂಡು ಇವರ ಹಳ್ಳಿಯೊಳಗೆ ಹೋಗಕೂಡದು. ಬೆಟ್ಟದ ಕುರುಬರು ನೋರಾಳಿ ಮತ್ತು ಮಾಸ್ತಮ್ಮ ಎನ್ನುವ ಕಾಡು ದೇವತೆಗಳನ್ನು ಪೂಜೆ ಮಾಡುತ್ತಾರೆ. ಈ ಎರಡು ಜಾತಿಯ ಕುರುಬರೂ ಕಾಡುಮೃಗಗಳನ್ನು ಬೆನ್ನಟ್ಟುವುದರಲ್ಲಿಯೂ ಅವುಗಳಿಂದ ತಪ್ಪಿಸಿಕೊಳ್ಳುವುದರಲ್ಲಿಯೂ ನಿಪುಣರು. ಇವರ ಮಕ್ಕಳು ಎರಡು ವರ್ಷವಾಗುತ್ತಲೂ ಕಾಡಿನಲ್ಲಿ ಧಾರಾಳವಾಗಿ ತಿರುಗುತ್ತಾರೆ.

ಸೋಲಿಗರು ಹಳೆಗನ್ನಡವನ್ನೇ ಮಾತನಾಡುತ್ತಾರೆ. ಇವರಿಗೆ ದೃಷ್ಟಿಯು ಬಹಳ ಚೆನ್ನಾಗಿದೆ. ಮೃಗಗಳ ಬೇಟೆಯಲ್ಲಿ ಇವರು ಕುರುಬರಂತೆಯೇ ಜಾಣರು.

ಇರುಳಿಗರು, ಕೊರಮರು ಮತ್ತು ಕೊರಚರು.

ಇಲ್ಲಿಯ ಮೂಲ ನಿವಾಸಿಗಳಲ್ಲಿ ಇರುಳಿಗರು, ಕೊರಚರು, ಮತ್ತು ಕೊರಮರು ಸೇರಿರಬಹುದು. ಇರುಳಿಗರು ಬಹಳ ಕಪ್ಪಾಗಿರುವರು. ಎತ್ತುಗಳಮೇಲೂ, ಕತ್ತೆಗಳಮೇಲೂ, ಉಪ್ಪನ್ನೂ, ಧಾನ್ಯಗಳನ್ನೂ ಹೇರಿಕೊಂಡು ಕೊರಚರೂ ಕೊರಮರೂ ಊರಿಂದೂರಿಗೆ ವ್ಯಾಪಾರ ಮಾಡಲು ಹೋಗುತ್ತಾರೆ. ಇವರಲ್ಲಿ ಕೆಲವರು ಬಿದಿರು ಬುಟ್ಟಿಗಳನ್ನೂ, ಚಾಪೆಗಳನ್ನೂ ಮಾಡಿ ಮಾರುವುದುಂಟು. ಇವರ ಹೆಂಗಸರು ಗಾಜಿನ ಮಣಿಗಳನ್ನು ಪೋಣಿಸಿ ಕೊರಳಿಗೆ ಆಭರಣವಾಗಿ ಹಾಕಿಕೊಳ್ಳುತ್ತಾರೆ. ಕವಡೆಗಳನ್ನೂ ಚಿಪ್ಪುಗಳನ್ನೂ ಹಾರವಾಗಿ ಧರಿಸುವುದುಂಟು. ಇವರ ಹೆಂಗಸರು ಆಗಾಗ್ಗೆ ಕರಿಮಣಿಯ ಸರಗಳನ್ನೂ, ಸೂಜಿಗಳನ್ನೂ ಮಾರುತ್ತ ಊರುಗಳ ಕಡೆ ಬರುವುದುಂಟು.

ಕುಳವಾಡಿ.

ಹಳ್ಳಿಗಳಲ್ಲಿರುವ ತೋಟಿ ಅಥವ ಕುಳವಾಡಿಯು ಹೊಲೆಯರೆಂಬ ಮೂಲನಿವಾಸಿಗಳ ಇನ್ನೊಂದು ಪಂಗಡಕ್ಕೆ ಸೇರಿರುತ್ತಾನೆ. ಗ್ರಾಮಗಳಲ್ಲಿ ಕುಳವಾಡಿಗೆ ಮರ್ಯಾದೆ ಹೆಚ್ಚು. ಹಳ್ಳಿಗಳನ್ನು ಮೊದಲು ಸ್ಥಾಪಿಸಿದವರು ಈ ಕುಳವಾಡಿಗಳೆಂದು ಜನರು ಹೇಳುತ್ತಾರೆ. ಗ್ರಾಮದ ಕಾರು ಕಲ್ಲುಗಳನ್ನು ಪೂಜಿಸಿದ ಮೇಲೆ ಕೊಡುವ ಹಣ್ಣು, ಕಾಯಿ, ಅಕ್ಕಿ ಇವುಗಳಿಗೆ ಇವರೇ ಹಕ್ಕುದಾರರು. ಸಾಮಾನ್ಯವಾಗಿ ಕುಳವಾಡಿಗೆ 'ನೆಲಹಾಗ' ಎನ್ನುವ ಸುಂಕವನ್ನು ಆ ಹಳ್ಳಿಯ ಜನಗಳು ಕೊಡುತ್ತಾರೆ.

ಇತರ ಮತದವರು.

ಈಗಲಾದರೋ ನಮ್ಮ ದೇಶದಲ್ಲಿ ರಾಜಕೀಯ ಕಾರಣಗಳಿಂದ ಈ ಮೂಲನಿವಾಸಿಗಳಲ್ಲದೆ ಇತರರೂ ಇರುತ್ತಾರೆ. ದ್ರಾವಿಡ ಬುಡಕಟ್ಟಿನವರು ಬಹಳ ಕಾಲದ ಹಿಂದಿನಿಂದಲೂ ಈ ಸೀಮೆಯಲ್ಲಿರುತ್ತಾರೆ. ಆರ್ಯರು ಉತ್ತರ ಹಿಂದೂಸ್ಥಾನದಿಂದ ದಕ್ಷಿಣ ಹಿಂದೂಸ್ಥಾನಕ್ಕೆ ಬಂದಾಗ ಆ ಬುಡಕಟ್ಟಿನವರೂ ಇಲ್ಲಿ ನೆಲಸಬೇಕಾಯಿತು. ಇವರಲ್ಲದೆ ಮಹಮ್ಮದೀಯರು, ಕ್ರಿಶ್ಚಿಯನ್ನರು ಈ ಸೀಮೆಯಲ್ಲಿ ಬಂದು ಸೇರಿರುತ್ತಾರೆ. ಆದುದರಿಂದ ಒಟ್ಟಿನಲ್ಲಿ ಜನರನ್ನು ಹಿಂದುಗಳು, ಮಹಮ್ಮದೀಯರು, ಕ್ರಿಶ್ಚಿಯನ್ನರು, ಮೂಲನಿವಾಸಿಗಳೆಂದು ವಿಭಾಗಿಸುವುದಾದರೂ ಅವರವರಲ್ಲಿ ಒಳ ಪಂಗಡಗಳೂ ವೃತ್ತಿಯನ್ನನುಸರಿಸಿ ಜಾತಿಗಳೂ ಅನೇಕವಾಗಿವೆ.

ಜನಸಂಖ್ಯೆಯ ಪರಿಗಣನೆ.

ನಮ್ಮ ಸಂಸ್ಥಾನದಲ್ಲಿ ಜನಸಂಖ್ಯೆಯನ್ನು ಗೊತ್ತು ಹಚ್ಚುವ ಪ್ರಯತ್ನವು ಮೊಟ್ಟಮೊದಲು ಕ್ರಿ. ಶ. 1840–1ರಲ್ಲಿ ನಡೆಯಿತು. ಎರಡನೆಯ ಪ್ರಯತ್ನವು 1851–2ರಲ್ಲೂ ಅಲ್ಲಿಂದ ಮುಂದೆ ಪ್ರತಿ ಹತ್ತು ವರ್ಷಕ್ಕೊಂದು ಬಾರಿಯಂತೆಯೂ ಕ್ರಮವಾಗಿ ಜನ ಪರಿಗಣನೆಯು ನಡೆದು ಬರುತ್ತಿದೆ. ಆದರೆ ಕ್ರಿ. ಶ. 1871 ರಿಂದ ಈಚೆಗೆ ಈ ಪರಿಗಣನೆಯು ಸಮರ್ಪಕವಾಗಿ ನಡೆಯುತ್ತಿದೆಯೆಂದು ಹೇಳಬಹುದು. ಅದಕ್ಕಿಂತ ಹಿಂದೆ ದೇಶದಲ್ಲಿ ಎಷ್ಟು ಸಂಸಾರಗಳಿವೆ ಎಂಬದನ್ನು ನೋಡಿಕೊಂಡು ಯಾವುದೋ

ಒಂದು ಸಂಖ್ಯೆಯಿಂದ—ಒಂದು ಸಂಸಾರದಲ್ಲಿರಬಹುದಾದ ಸರಾಸರಿ ಜನಗಳ ಸಂಖ್ಯೆ 4 ಅಥವ 5 ರಿಂದ—ಗುಣಿಸುತ್ತಿದ್ದರು.

ಸಂಸ್ಥಾನದ ಜನಸಂಖ್ಯೆ.

ಕ್ರಿ. ಶ. 1931ರಲ್ಲಿ ನಡೆದ ಪರಿಗಣನೆಯಲ್ಲಿ ಸಂಸ್ಥಾನದ ಒಟ್ಟು ಜನಸಂಖ್ಯೆಯು 65,57,302 ಇದ್ದಿತು. ಇದರಿಂದ ಸರಾಸರಿ ಒಂದು ಚದರ ಮೈಲಿಗೆ 224 ಜನಗಳು ಇದ್ದಂತಾಯಿತು. ಇಂಡಿಯಾ ದೇಶದ ಇತರ ಭಾಗಗಳಾದ ತಿರುವಾಂಕೂರಿನಲ್ಲಿ ಜನಸಾಂದ್ರತೆಯು—ಎಂದರೆ ಒಂದು ಚದರ ಮೈಲಿಯಲ್ಲಿರುವ ಜನಗಳ ಸಂಖ್ಯೆಯು—668, ಹೈದರಾಬಾದಿನಲ್ಲಿ 174, ಮದರಾಸು ಅಧಿಪತ್ಯದಲ್ಲಿ 329, ಬೊಂಬಾಯಿ ಅಧಿಪತ್ಯದಲ್ಲಿ 173 ಇದ್ದಿತು. ನಮ್ಮ ಸಂಸ್ಥಾನದಲ್ಲಿ 33,53,963 ಗಂಡಸರೂ 32,03,339 ಹೆಂಗಸರೂ ಇರುವುದಾಗಿಯೂ ಲೆಕ್ಕದಿಂದ ತಿಳಿದುಬಂದಿದೆ.

ಜನಸಂಖ್ಯೆಯ ವ್ಯತ್ಯಾಸಕ್ಕೆ ಕಾರಣಗಳು.

ಸಾಮಾನ್ಯವಾಗಿ ಒಂದು ದೇಶದ ಅಥವ ಪ್ರಾಂತದ ಜನಸಂಖ್ಯೆಯು ಕೆಲವು ಕಾರಣಗಳಿಂದ ಹೆಚ್ಚು ಕಡಮೆಗಳಾಗುವುದುಂಟು. ಅಲ್ಲಿಯ ಭೂಗುಣ, ಬೀಳುವ ಮಳೆ, ವಾಯುಗುಣ, ವ್ಯವಸಾಯ ಅಥವ ಕೈಗಾರಿಕೆಗಳಿಗಿರುವ ಅನುಕೂಲ, ರೋಗಾದಿ ಉಪದ್ರವಗಳು ಅವುಗಳಿಗಿರುವ ಪರಿಹಾರೋಪಾಯಗಳು, ಕ್ಷಾಮಡಾಮರಗಳು, ಇತ್ಯಾದಿ ಕಾರಣಗಳು ಜನಸಂಖ್ಯೆಯನ್ನು ವ್ಯತ್ಯಾಸಗೊಳಿಸುತ್ತವೆ. ಭೂಗುಣವು ಚೆನ್ನಾಗಿದ್ದು, ವಾಯುಗುಣವು ಹಿತಕರವಾಗಿದ್ದು ವ್ಯವಸಾಯಕ್ಕೆ ಬೇಕಾದ ನೀರೂ ಕಾಲಕಾಲಕ್ಕೆ ಮಳೆಯೂ ಆಗುತ್ತಿದ್ದರೆ ಅಲ್ಲಿ ಜನರು ಹೆಚ್ಚಾಗಿ ಸೇರುತ್ತಾರೆ. ಅಲ್ಲಿ ಜನಸಂಖ್ಯೆಯೂ ಅಭಿವೃದ್ಧಿಯಾಗುತ್ತದೆ. ನಮ್ಮ ದೇಶದಲ್ಲಿ ಕ್ಷಾಮವು ತಲೆದೋರಿ ಅಕ್ಕಪಕ್ಕದ ಸೀಮೆಗಳಲ್ಲಿ ಸುಭಿಕ್ಷವಾಗಿದ್ದರೆ ಕೆಲವು ಜನರು ನಮ್ಮಲ್ಲಿಂದ ಆ ಕಡೆಗೆ ಹೊರಟು ಹೋಗಬಹುದು. ನಮ್ಮಲ್ಲಿ ಸುಭಿಕ್ಷವಾಗಿದ್ದರೆ ಹೊರಗಡೆಯಿಂದ ಜನರು ಇಲ್ಲಿಗೆ ಬರಲೂ ಬಹುದು. ಕ್ಷಾಮಕಾಲಗಳಲ್ಲಿ ಹೊಟ್ಟೆಗಿಲ್ಲದೆ ಅನೇಕರು ಸಾಯುವರು. ಸಾಂಕ್ರಾಮಿಕ

ರೋಗಗಳು ಬಂದಾಗ ಅವುಗಳನ್ನು ತಡೆಯುವ ಶಕ್ತಿಯಿಲ್ಲದೆಯೂ ತಕ್ಕ ಪರಿಹಾರೋಪಾಯಗಳು ಇಲ್ಲದೆಯೂ ಜನರು ಮೃತ್ಯುವಿನ ಪಾಲಾಗುವರು. ಆದುದರಿಂದ ಸರ್ಕಾರದವರು ಜನರ ಕ್ಷೇಮಕ್ಕಾಗಿ ಕೆಲವು ವ್ಯವಸ್ಥೆಗಳನ್ನು ಮಾಡಿರುತ್ತಾರೆ. ನೀರಾವರೀ ಕೆಲಸಗಳನ್ನು ಕೈಕೊಂಡು ಕ್ಷಾಮಗಳನ್ನು ತಡೆಯಲು ಪ್ರಯತ್ನಿಸಿರುತ್ತಾರೆ. ಒಂದು ವರ್ಷದಲ್ಲಿ ಮಳೆ ಕಡಮೆಯಾದರೂ ಹಿಂದೆ ಶೇಖರಿಸಿರುವ ನೀರಿನಿಂದ ವ್ಯವಸಾಯವು ಸಾಗುವಂತೆ ನೋಡಿಕೊಳ್ಳುತ್ತಾರೆ; ಮತ್ತು ಸುಭಿಕ್ಷವಾಗಿರುವ ಕಡೆಯಿಂದ ದವಸಧಾನ್ಯಗಳನ್ನು ತರಿಸುವ ಏರ್ಪಾಡನ್ನು ಇಡುತ್ತಾರೆ. ಇದಲ್ಲದೆ ಜನರ ಆರೋಗ್ಯವನ್ನು ಕಾಪಾಡುವ ಹಲವು ಉಪಕಾರಗಳನ್ನು ಮಾಡಿರುವರು. ಆಸ್ಪತ್ರೆಗಳನ್ನು ಕಟ್ಟಿರುವುದು, ದೇಪೀ ಹಾಕಿಸುವುದು, ಇನಾಕ್ಯುಲೇಷರ್ ಮಾಡಿಸುವುದು, ಇವೆಲ್ಲ ರೋಗಾದಿ ಉಪದ್ರವಗಳನ್ನು ತಡೆಯಲು ಮಾಡಿರುವ ಏರ್ಪಾಡುಗಳು.

ಜನಸಂಖ್ಯೆಗಳ ವಿಮರ್ಶೆ.

ಹಿಂದೆ ನಡೆದಿರುವ ಜನ ಪರಿಗಣನೆಯ ಸಂಖ್ಯೆಗಳನ್ನೂ ಈಗಿನ ಸಂಖ್ಯೆಗಳನ್ನೂ ಕೆಳಗೆ ಕಾಣಿಸಿದೆ :—

ವರ್ಷ	ಗಂಡಸರು	ಹೆಂಗಸರು	ಒಟ್ಟು	ಸೇಕಡ ಹೆಚ್ಚು ಅಥವಾ ಕಡಮೆ	ಜನ ಸಾಂದ್ರತೆ
1871	2,535,924	2,519,488	5,055,412	...	172·5
1881	2,085,842	2,100,346	4,186,188	−17·19	142·8
1891	2,483,451	2,460,153	4,943,604	+18·09	168·6
1901	2,797,024	2,742,375	5,539,399	+12·1	185
1911	2,934,621	2,871,572	5,806,193	+4·8	197
1921	3,047,117	2,931,775	5,978,892	+3·0	203
1931	3,353,963	3,203,339	6,557,302	+9 7	224

ಈ ಸಂಖ್ಯೆಗಳನ್ನು ನೋಡಿದರೆ ಕೆಲವು ವಿಷಯಗಳು ನಮಗೆ ಮುಂದಟ್ಟಾಗುವುವು. 1881ನೆಯ ಸಂವತ್ಸರದಲ್ಲಿ ಜನಸಂಖ್ಯೆಯು ಹಿಂದಿನಗಿಂತ

ಕಡಮೆಯಾಗಿದೆ. ಇದಕ್ಕೆ ಮುಖ್ಯಕಾರಣ 1877, 1878ರಲ್ಲಿ ತಲೆದೋರಿನ ಘೋರಕ್ಷಾಮ. 1891ರಲ್ಲಿ ನೋಡಿದರೆ ಜನಸಂಖ್ಯೆಯು ಸೇಕಡ 18.09ರಷ್ಟು ಹೆಚ್ಚಿದೆ. ಕ್ಷಾಮಗಳೂ ರೋಗಾದಿಗಳೂ ಇಲ್ಲದಿದ್ದರೆ ನ್ಯಾಯವಾಗಿ ಹೆಚ್ಚಬೇಕಾದಷ್ಟು ಜನಸಂಖ್ಯೆಯು ಹೆಚ್ಚಿರುತ್ತದೆ. ಆದರೆ 1901ರ ಸಂಖ್ಯೆಯನ್ನು ನೋಡಿದರೆ ಇದೇ ಅಭಿವೃದ್ಧಿಯು ಕಂಡು ಬರುವುದಿಲ್ಲ. ಇದಕ್ಕೆ 1897–99ರಲ್ಲಿ ತಲೆದೋರಿದ ಪ್ಲೇಗು ಜಾಡ್ಯವು ಮುಖ್ಯಕಾರಣ. ಅಲ್ಲಿಂದೀಚೆಗೆ ಜನಸಂಖ್ಯೆಯು ಹೆಚ್ಚುತ್ತಿರುವುದಾದರೂ ಅಭಿವೃದ್ಧಿಯು ಸಮರ್ಪಕವಾಗಿಲ್ಲ. 1914–18ರ ಯುದ್ಧವು ಮುಗಿದ ಮೇಲೆ ದೇಶದಲ್ಲೆಲ್ಲ ತಲೆದೋರಿದ 'ಇನ್‌ಫ್ಲೂಯಂಜಾ ಜಾಡ್ಯವೂ,' ದವಸ ಧಾನ್ಯಗಳ ಅಭಾವವೂ ಜನಸಂಖ್ಯೆಯು ಹೆಚ್ಚದಿರಲು ಕಾರಣಗಳಾಗಿವೆ.

ಮತಾನುಸಾರ ಜನಸಂಖ್ಯೆ.

ನಮ್ಮ ದೇಶದಲ್ಲಿ ಹಿಂದುಗಳೇ ಹೆಚ್ಚು. ತರುವಾಯ ಮಹಮ್ಮದೀಯರು, ಕ್ರಿಶ್ಚಿಯನ್ನರು, ಜೈನರು, ಇತರರು, ಎಂಬೀ ಕ್ರಮದಲ್ಲಿ ಆಯಾ ಜಾತಿಯವರ ಸಂಖ್ಯೆಯು ಇರುತ್ತದೆ. ಪ್ರತಿ ಹತ್ತುಸಾವಿರ ಜನಸಂಖ್ಯೆಯಲ್ಲಿ ಸರಾಸರಿ ಹಿಂದುಗಳು 9,174, ಮಹಮ್ಮದೀಯರು 608, ಕ್ರಿಶ್ಚಿಯನ್ನರು 133, ಜೈನರು 45, ಕಾಡುಜನಗಳು 36, ಇತರರು 4, ಇರುತ್ತಾರೆ. ಹಿಂದಿನ ಜನಸಂಖ್ಯೆಗಳನ್ನು ಪರೀಕ್ಷಿಸಿದರೆ ಹಿಂದೂಗಳ ಸೇಕಡ ಸಂಖ್ಯಾಭಿವೃದ್ಧಿಯು ಕಡಮೆಯಾಗಿಯೂ, ಮಹಮ್ಮದೀಯರ ಮತ್ತು ಕ್ರಿಶ್ಚಿಯನ್ನರದು ಹೆಚ್ಚಾಗಿಯೂ ಆಗಿರುವುದು ಕಂಡುಬರುತ್ತದೆ.

ಅಕ್ಷರಸ್ಥರ ಸಂಖ್ಯೆ.

ನಮ್ಮ ದೇಶದಲ್ಲಿ ವಿದ್ಯಾವಂತರು ಎಂದರೆ ಓದು ಬರೆಹ ಬಲ್ಲವರು ಪ್ರತಿ ಒಂದು ಸಾವಿರ ಜನರಲ್ಲಿ 91 ಮಂದಿ ಮಾತ್ರ ಇರುತ್ತಾರೆ. ಒಂದು ವೇಳೆ ಐದು ವರ್ಷ ವಯಸ್ಸಿಗೆ ಮೇಲ್ಪಟ್ಟ ಜನರನ್ನೇ ತೆಗೆದು ಕೊಂಡು ಅಕ್ಷರಸ್ಥರ ಸಂಖ್ಯೆಯನ್ನು ಪರೀಕ್ಷಿಸಿದರೆ ಒಂದು ಸಾವಿರಕ್ಕೆ 106 ಮಂದಿ ಮಾತ್ರ ಓದು ಬರೆಹ ಬಲ್ಲವರಾಗಿದ್ದಾರೆ. ಗಂಡಸರಲ್ಲಿ ಎಷ್ಟು ಮಂದಿ, ಹೆಂಗಸರಲ್ಲಿ ಎಷ್ಟು ಮಂದಿ, ಎಂಬದನ್ನು ನೋಡಿದರೆ, ಹೆಂಗಸರು

ಬಹಳ ಹಿಂದೆ ಬಿದ್ದಿರುವರು ಎನ್ನುವುದು ತಿಳಿಯುವುದು. 5 ವರ್ಷ ವಯಸ್ಸಿಗೆ ಮೇಲ್ಪಟ್ಟವರನ್ನು ಮಾತ್ರ ತೆಗೆದುಕೊಳ್ಳೋಣ. ಒಂದು ಸಾವಿರ ಗಂಡಸರಲ್ಲಿ 174 ಜನಕ್ಕೆ ಓದು ಬರೆಹ ಬರುತ್ತದೆ, ಒಂದು ಸಾವಿರ ಹೆಂಗಸರಲ್ಲಿ 33 ಜನಕ್ಕೆ ಮಾತ್ರ ಬರುತ್ತದೆ.

ಜಾತ್ಯನುಸಾರ ಅಕ್ಷರಸ್ಥರಸಂಖ್ಯೆ.

ಜಾತಿಯನ್ನು ಅನುಸರಿಸಿ ವಿದ್ಯಾವಂತರ ಸಂಖ್ಯೆಯನ್ನು ಪರೀಕ್ಷಿಸಿದರೆ ಈ ವಿಷಯಗಳು ತಿಳಿಯುವುವು. ಸಾವಿರಕ್ಕೆ ಹಿಂದೂಗಳಲ್ಲಿ 94 ಮಂದಿ ವಿದ್ಯಾವಂತರು, ಮಹಮ್ಮದೀಯರಲ್ಲಿ 200 ಮಂದಿ, ಕ್ರಿಶ್ಚಿಯನ್ನರಲ್ಲಿ 417 ಮಂದಿ. ಹಿಂದೂಗಳಲ್ಲಿ ಬಹು ಮಂದಿ ಗ್ರಾಮಗಳಲ್ಲಿ ವಾಸಮಾಡತಕ್ಕವರು ; ವ್ಯವಸಾಯದಲ್ಲಿ ನಿರತರಾಗಿರತಕ್ಕವರು. ವಿದ್ಯೆಯನ್ನು ಕಲಿಯಬೇಕೆಂಬ ಆಕಾಂಕ್ಷೆಯು ಇವರಿಗೆ ಕಡಮೆ. ಹಳ್ಳಿಯವರು ವಿದ್ಯೆಯ ಪ್ರಯೋಜನಗಳನ್ನು ಹೆಚ್ಚು ಕಂಡುಕೊಂಡವರಲ್ಲ. ಮಹಮ್ಮದೀಯರಲ್ಲಿ ಹೆಚ್ಚುಮಂದಿ ಊರುಗಳಲ್ಲಿರುತ್ತಾರೆ. ವಿದ್ಯೆಯನ್ನು ಕಲಿಯಬೇಕೆಂಬ ನಿರ್ಬಂಧವು ಅವರ ಮತದಲ್ಲಿದೆ. ಊರುಗಳಲ್ಲಿ ಇರುವುದರಿಂದಲೂ, ಅಲ್ಲಿ ವಿದ್ಯಾಭ್ಯಾಸಕ್ಕೆ ತಕ್ಕ ಸೌಲಭ್ಯಗಳಿರುವುದರಿಂದಲೂ, ವಿದ್ಯೆಯ ಪ್ರಯೋಜನಗಳು ಮನಗಾಣುವುದರಿಂದಲೂ ಅವರು ವಿದ್ಯಾಭ್ಯಾಸದಲ್ಲಿ ಅಕ್ಕರೆಯುಳ್ಳವರಾಗಿರುತ್ತಾರೆ. ಕ್ರಿಶ್ಚಿಯನ್ನರು ಹೆಚ್ಚುಮಂದಿ ಊರುಗಳಲ್ಲಿರತಕ್ಕವರು, ವಿದ್ಯೆಯ ಪ್ರಯೋಜನವನ್ನು ಬಲ್ಲವರು. ಅಲ್ಲದೆ ಈ ಜನರಿಗೆಲ್ಲ ಬಲಾತ್ಕಾರವಾಗಿಯಾದರೂ ಮಿಷನರಿಗಳು ವಿದ್ಯೆಯನ್ನು ಕಲಿಸುತ್ತಾರೆ. ಆದುದರಿಂದ ಇವರಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚು.

ಜನಸಾಂದ್ರತೆಯ ವ್ಯತ್ಯಾಸಗಳು.

ನಮ್ಮದೇಶದ ಜನಸಂಖ್ಯೆಯನ್ನು ಹಿಂದೆ ಹೇಳಿದ್ದೇವಷ್ಟೆ. ಈ ಸಂಖ್ಯೆಯು ಎಂಟು ಡಿಸ್ಟ್ರಿಕ್ಟುಗಳಲ್ಲಿ ಹರಡಿದೆ. ನಮ್ಮ ಸಂಸ್ಥಾನವನ್ನು ಪೂರ್ವಭಾಗವೆಂದೂ ಪಶ್ಚಿಮಭಾಗವೆಂದೂ ಜನಪರಿಗಣನೆಗಾಗಿ ವಿಭಾಗಿಸುವುದುಂಟು. ಪೂರ್ವಭಾಗದಲ್ಲಿ ಮೈಸೂರು, ತುಮಕೂರು, ಚಿತ್ರದುರ್ಗ, ಬೆಂಗಳೂರು ಮತ್ತು ಕೋಲಾರ ಡಿಸ್ಟ್ರಿಕ್ಟುಗಳು ಸೇರಿವೆ. ಪಶ್ಚಿಮಭಾಗ

ದಲ್ಲಿ ಹಾಸನ, ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳು ಸೇರಿವೆ. ಈ ಪೂರ್ವ ಪಶ್ಚಿಮ ಭಾಗಗಳೆಂಬವು ಹೆಚ್ಚುಕಡಮೆ ಮೈದಾನ ಮಲೆನಾಡು ಎಂಬ ಪ್ರಕೃತಿ ಸಹಜವಾದ ವಿಭಾಗಗಳಿಗೆ ಸರಿಹೋಗುವುವು. ಪೂರ್ವ ಭಾಗದಲ್ಲಿ ಜನ ಸಾಂದ್ರತೆಯು 223, ಪಶ್ಚಿಮಭಾಗದಲ್ಲಿ 149 ಇದೆ. ಈ ಸಾಂದ್ರತೆಯ ವ್ಯತ್ಯಾಸಕ್ಕೆ ಕಾರಣಗಳು ಸ್ಪಷ್ಟವಾಗಿಯೇ ಇವೆ. ಮೈದಾನ ಭಾಗದಲ್ಲಿ ವಾಯುಗುಣವು ಹಿತಕರವಾಗಿಯೂ, ವ್ಯವಸಾಯ ಮಾಡಬಹುದಾದ ಜಮೀನು ಹೆಚ್ಚಾಗಿಯೂ, ಊರುಗಳ ಸಂಖ್ಯೆಯು ಅಧಿಕವಾಗಿಯೂ, ಇರುವುವು. ಮಲೆನಾಡಿನಭಾಗದಲ್ಲಿ ಈ ವಿಷಯಗಳಿಗೆಲ್ಲ ಕೊರತೆಯಿದೆ. ಮುಖ್ಯವಾಗಿ ಮಲೆನಾಡು ಸೀಮೆಯ ಜನ ಸಂಖ್ಯೆಯನ್ನು ತೆಗೆದುಕೊಂಡರೆ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಅದು ಕಡಮೆಯಾಗುತ್ತ ಬರುವುದನ್ನು ನೋಡಬಹುದು. 1911ರಲ್ಲಿ 5,16,716 ಇದ್ದ ಶಿವಮೊಗ್ಗ ಡಿಸ್ಟ್ರಿಕ್ಟಿನ ಜನ ಸಂಖ್ಯೆಯು 1921ರಲ್ಲಿ 4,92,560ಕ್ಕೆ ಇಳಿದಿತ್ತು. ಹೀಗೆಯೇ ಕಡೂರಿನ ಸಂಖ್ಯೆಯು 3,38,457 ರಿಂದ 3,33,538ಕ್ಕೆ ಇಳಿದಿತ್ತು. ಆ ಭಾಗಗಳಲ್ಲಿ ಹೀಗೆ ಜನ ಸಂಖ್ಯೆಯು ಹಿಂದಿನಿಂದ ಕಡಮೆಯಾಗುತ್ತಿರುವುದನ್ನು ಸರ್ಕಾರದವರು ನೋಡಿ ಅದನ್ನು ನಿವಾರಿಸಲು "ಮಲೆನಾಡಿನ ಅಭಿವೃದ್ಧಿ" ಎಂಬದಾಗಿ ಹೊಸ ಏರ್ಪಾಡನ್ನು ಆಚರಣೆಗೆ ತಂದರು.

ಮಲೆನಾಡಿನ ಅಭಿವೃದ್ಧಿ.

ಮಲೆನಾಡಿನ ಅಭಿವೃದ್ಧಿಯ ಏರ್ಪಾಡಿನ ಪ್ರಕಾರ ಅಲ್ಲಿಯ ಜನರ ಆರೋಗ್ಯವನ್ನು ಕಾಪಾಡುವುದಕ್ಕೂ ಜೀವನೋಪಾಯಕ್ಕೆ ಸೌಲಭ್ಯಗಳನ್ನು ಕಲ್ಪಿಸುವುದಕ್ಕೂ ಪ್ರಯಾಣದ ಸೌಕರ್ಯಗಳನ್ನು ಉಂಟುಮಾಡುವುದಕ್ಕೂ ಸರ್ಕಾರದವರು ಹೆಚ್ಚು ಗಮನವನ್ನು ಕೊಟ್ಟರು. ಅದರಿಂದ ಆಸ್ಪತ್ರೆಗಳನ್ನು ಹೆಚ್ಚಾಗಿ ಸ್ಥಾಪಿಸಿದರು; ಔಷಧಗಳನ್ನು ಉಚಿತವಾಗಿ ಹಂಚುವ ಏರ್ಪಾಟನ್ನು ಇಟ್ಟರು; ಮಲೇರಿಯಾ ಜ್ವರವನ್ನು ತರುವ ಜೌಗು, ಕೊಚ್ಚೆಯ ಪ್ರದೇಶಗಳನ್ನು ಆದಷ್ಟು ಮುಚ್ಚಿಸಿದರು; ಹಳ್ಳಿಗಳ ಸುತ್ತುಮುತ್ತಲೂ ಇರುವ ಬೇಲಿ ಪೊದೆಗಳನ್ನು ತೆಗಿಸಿ ನಿರ್ಮಲವಾಯುವು ದೊರೆಯುವಂತೆ ಮಾಡಿದರು; ಕುಡಿಯುವ ನೀರಿಗೆ ಒಳ್ಳೆಯ ಬಾವಿಗಳನ್ನು

ತೆಗೆಸಿದರು. ಜನರು ಆರೋಗ್ಯವಾದ ಕಡೆಗಳಲ್ಲಿ ನೆಲಸಿ ವ್ಯವಸಾಯದಿಂದ ಜೀವನಮಾಡುವಂತೆ ಏರ್ಪಾಡು ಮಾಡಿದರು; ರಸ್ತೆಗಳನ್ನೂ ರೈಲುಗಳನ್ನೂ ಹೆಚ್ಚಿಸಿದರು. ಈ ಅಭಿವೃದ್ಧಿಯ ಕಾರ್ಯಗಳು ಈಗಲೂ ನಡೆಯುತ್ತಿರುವುದರಿಂದ ಮಲೆನಾಡಿನ ಜನ ಸಂಖ್ಯೆಯು ಇನ್ನು ಮುಂದೆ ಕಡಮೆಯಾಗದೇ ಇರಬಹುದು.

ಎಂಟನೆಯ ಅಧ್ಯಾಯ.

ಪಟ್ಟಣಗಳೂ ಊರುಗಳೂ.

ನಮ್ಮ ಸಂಸ್ಥಾನದ ಜನರೆಲ್ಲ ಬಹುಮಂದಿ, ಸೇಕಡ 88ರ ಮೇಲೆ, ಹಳ್ಳಿಗಳಲ್ಲಿಯೇ ವಾಸವಾಡುತ್ತಾರೆ. ಇಂತಹ ಹಳ್ಳಿಗಳು 16,000ದ ವರೆಗೂ ಇವೆ. ಆದರೆ ಹೆಚ್ಚು ಜನರು ಒಂದೆಡೆ ಸೇರಿರುವ ಊರುಗಳೂ ಪಟ್ಟಣಗಳೂ ಇಲ್ಲದೆ ಹೋಗಿಲ್ಲ. ಹೀಗೆ ಜನರು ಸೇರಿ ಊರು ಅಥವಾ ಪಟ್ಟಣವು ಬೆಳೆಯಬೇಕಾದರೆ ನಾನಾಕಾರಣಗಳಿರಬಹುದು.

I. ರಾಜಕೀಯ ಕಾರಣ.—ಹಿಂದಿನ ಕಾಲದಲ್ಲಿ ಊರುಗಳು ಸಾಮಾನ್ಯವಾಗಿ ರಾಜಕೀಯ ಕಾರಣಗಳಿಂದ ಸ್ಥಾಪಿತವಾದುವು. ಶತ್ರುಗಳು ಸುಲಭದಲ್ಲಿ ಬರಲಾಗದ ಅನುಕೂಲವಾದ ಸ್ಥಳವನ್ನು ನೋಡಿ ಒಂದು ಕೋಟೆಯನ್ನು ಕಟ್ಟಿಕೊಂಡು ರಾಜನಾದವನು ನೆಲಸಿದರೆ, ಅವನ ಪರಿವಾರದವರೂ ಸೈನಿಕರೂ ಮನೆಗಳನ್ನು ಕಟ್ಟಿಕೊಂಡು ನಿಲ್ಲಬೇಕಾಗುತ್ತಿತ್ತು. ಇಷ್ಟು ಜನರಿಗೆ ಬೇಕಾಗುವ ಸಾಮಾನುಗಳನ್ನು ಒದಗಿಸುವುದಕ್ಕಾಗಿ ವರ್ತಕರೂ ನಾನಾ ಕಸುಬಿನವರೂ ಜೊತೆಯಲ್ಲಿಯೇ ನೆಲಸುತ್ತಿದ್ದರು. ಈರೀತಿ ಒಂದು ಊರು ಅಥವಾ ಪಟ್ಟಣವು ಆರಂಭವಾಗಿ ಬೆಳೆಯುತ್ತಿತ್ತು. ದೇಶವು ಅಭಿವೃದ್ಧಿಗೆ ಬಂದ ಹಾಗೆಲ್ಲ, ರಾಜನ ಅಟ್ಟಹಾಸವು ಹೆಚ್ಚಿದಂತೆಲ್ಲ ಪಟ್ಟಣವೂ ಪ್ರಬಲಿಸುತ್ತಿತ್ತು.

ಈ ಪಂಗಡಕ್ಕೆ ಸೇರಿದ ಕೆಲವು ಊರುಗಳು ನಮ್ಮ ದೇಶದಲ್ಲಿವೆ. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳು ರಾಜಕೀಯ ಕಾರಣಗಳಿಂದ ಮುಖ್ಯಸ್ಥಾನಗಳಾಗಿರುವುವು.

ಬೆಂಗಳೂರು.—ಇದು ನಮ್ಮ ದೇಶದಲ್ಲೆಲ್ಲ ಬಹಳ ದೊಡ್ಡದಾದ ಮತ್ತು ಜನಭರಿತವಾದ ಪಟ್ಟಣ. ಈ ಪಟ್ಟಣವು ದಂಡು ಮತ್ತು ಪೇಟೆ ಎಂದು ಎರಡು ಭಾಗಗಳಾಗಿದೆ. 'ಪೇಟೆ' ಎನ್ನುವುದಕ್ಕೆ 'ಸಿಟಿ' ಎಂದು ಇಂಗ್ಲಿಷಿನಲ್ಲಿ ಹೇಳುವುದುಂಟು. ಈ ಪಟ್ಟಣವು ಮಾಗಡಿಯ ಕೆಂಪೇ

ಗೌಡನ ಕಾಲದಲ್ಲಿ ಪ್ರವರ್ಧಮಾನವಾಗಿ ಅಲ್ಲಿಂದೀಚೆಗೂ ಬೆಳೆದು ಬಂದಿದೆ. ಇಲ್ಲಿಯ ವಾಯುಗುಣವು ಹಿತಕರವಾಗಿರುವುದರಿಂದ ಬ್ರಿಟಿಷರು ತಮ್ಮ ಸೈನ್ಯವನ್ನು 'ದಂಡು' ಎಂಬ ಭಾಗದಲ್ಲಿ ಇಟ್ಟಿದ್ದಾರೆ. ಬೇಸಗೆಯ ಕಾಲ ದಲ್ಲಿ ಮದರಾಸಿನ ಕಡೆಯಿಂದ ಅನೇಕರು ಬಂದು ಇಲ್ಲಿ ವಾಸಮಾಡುತ್ತಾರೆ. ಬೆಂಗಳೂರು ಮೈಸೂರು ಸರ್ಕಾರದ ಕೇಂದ್ರ ಸ್ಥಾನವಾಗಿರುವುದರಿಂದಲೂ ಒಳ್ಳೆಯ ವ್ಯಾಪಾರಸ್ಥಳವಾಗಿರುವುದರಿಂದಲೂ, ಕೈಗಾರಿಕೆಗಳ ಸ್ಥಳವಾಗಿರು ವುದರಿಂದಲೂ, ಜನಸಂಖ್ಯೆಯು ಇಲ್ಲಿ ಹೆಚ್ಚಾಗಿದೆ. ಬೆಂಗಳೂರಿಂದ ನಾಲ್ಕು ಕಡೆಗಳಿಗೂ ರೈಲು ಮಾರ್ಗಗಳಿವೆ. ಬೆಂಗಳೂರಲ್ಲಿ ಟೀಪು ಸುಲ್ತಾನನ ಅರಮನೆ, ಲಾಲ್‌ಬಾಗ್ ಎಂಬ ಉಪವನ, ಗವಿಗಂಗಾ ಧರೇಶ್ವರಗುಡಿ, ಬಸವನಗುಡಿ, ಗಳೆಂಬ ದೇವಸ್ಥಾನಗಳು, ಶ್ರೀಮನ್ ಮಹಾರಾಜರವರ ಅರಮನೆ, ದೊಡ್ಡ ಆಸ್ಪತ್ರೆಗಳು, ಸರ್ಕಾರದ ಕಚೇ ರಿಗಳು, ಮ್ಯೂಸಿಯಂ ಎಂಬ ವಸ್ತು ಸಂಗ್ರಹಶಾಲೆ, ಇವುಗಳೆಲ್ಲ ನೋಡ ತಕ್ಕುವಾಗಿವೆ.

ಮೈಸೂರು.—ಇದು ರಾಜಧಾನಿ. ಈ ಊರು ಬಹಳ ಹಿಂದಿನ ಕಾಲದಿಂದಲೂ ಮೈಸೂರು ಅರಸರ ರಾಜಧಾನಿಯಾಗಿತ್ತು. ಆದರೆ ಶ್ರೀರಂಗಪಟ್ಟಣವನ್ನು ರಾಜೊಡೆಯರು ವಶಪಡಿಸಿಕೊಂಡ ಮೇಲೆ ಅದು ಕೆಲವುಕಾಲ ರಾಜಧಾನಿಯಾಯಿತು ; ಮೈಸೂರಿನ ಪ್ರಾಶಸ್ತ್ಯಕ್ಕೆ ಕುಂದಕ ಬಂತು. ಬ್ರಿಟಿಷರು ಟೀಪು ಸುಲ್ತಾನನನ್ನು ಸೋಲಿಸಿ ರಾಜ್ಯ ವನ್ನು ಮುಮ್ಮಡಿ ಕೃಷ್ಣರಾಜೊಡೆಯರಿಗೆ ಕೊಟ್ಟಾಗ ಮೈಸೂರು ಪುನಃ ರಾಜಧಾನಿಯಾಯಿತು. ರಾಜಾಶ್ರಯದಲ್ಲಿದ್ದ ಅನೇಕರು ಮೈಸೂರಲ್ಲಿ ನೆಲಸಿದ್ದರಿಂದ ಊರು ದೊಡ್ಡದಾಯಿತು. ಆದುದರಿಂದಲೇ ಅಲ್ಲಿ ಅಗ್ರ ಹಾರಗಳು ಹೆಚ್ಚು. ಈಗ ಮೈಸೂರು ಪಟ್ಟಣವನ್ನು ಬಹಳ ಒಳ್ಳೆಯ ಸ್ಥಿತಿ ಯಲ್ಲಿಟ್ಟಿದ್ದಾರೆ. ಊರಿನ ಹಳೆಯ ಭಾಗವನ್ನೆಲ್ಲ ತೆಗೆದುಹಾಕಿ ವಿಶಾಲವಾದ ರಸ್ತೆಗಳಿಂದಲೂ, ಮನೋಹರವಾದ ಕಟ್ಟಡಗಳಿಂದಲೂ, ಉಪವನ ಗಳಿಂದಲೂ, ಕೂಡಿರುವ ಹಾಗೆ ಮಾಡಿರುವರು. ಮೈಸೂರಿಗೆ 'ತೋಟ ಗಳ ಊರು' ಎಂಬ ಹೆಸರು ಬಂದಿದೆ. ಅಲ್ಲಿ ಶ್ರೀಮನ್ ಮಹಾರಾಜರವರ ಅರಮನೆಗಳೂ, ಕಾಲೇಜುಗಳೂ, ಆಸ್ಪತ್ರೆಗಳೂ, ಲಾಲ್‌ಬಾಗ್ ಎಂಬ ಉಪವನವೂ ನೋಡತಕ್ಕುವಾಗಿವೆ.

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಚಿತ್ರದುರ್ಗ, ಕೋಲಾರ ಮತ್ತು ತುಮಕೂರುಗಳು ಆಯಾ ಡಿಸ್ಟ್ರಿಕ್ಟಿನ ಮುಖ್ಯ ಕಾರ್ಯಸ್ಥಾನಗಳಾಗಿವೆ. ಇವುಗಳಲ್ಲಿ ಚಿಕ್ಕಮಗಳೂರು ವಿನಾ ಉಳಿದ ಊರುಗಳಿಗೆಲ್ಲ ರೈಲುಮಾರ್ಗಗಳಿವೆ.

II. ಪುಣ್ಯಕ್ಷೇತ್ರದ ಕಾರಣ.—ಊರುಗಳು ಬೆಳೆಯುವುದಕ್ಕೆ ಅವು ಪುಣ್ಯಕ್ಷೇತ್ರಗಳಾಗಿರುವುದೂ ಒಂದು ಮುಖ್ಯಕಾರಣ. ಜನರು ದೇವರ ದರ್ಶನದಿಂದಲೂ, ತೀರ್ಥಸ್ನಾನದಿಂದಲೂ ಮುಕ್ತಿಯನ್ನು ಪಡೆಯಬೇಕೆಂದು ಹೆಚ್ಚುಗಟ್ಟಲೆಯಾಗಿ ಅಲ್ಲಿಗೆ ಹೋಗುವರು. ಹೆಚ್ಚು ಜನರು ಬಂದು ಸೇರುವುದರಿಂದ ಅವರಿಗೆ ಬೇಕಾದ ಪದಾರ್ಥಗಳನ್ನು ಮಾರುವುದಕ್ಕಾಗಿ ವರ್ತಕರೂ ಕಸುಬುಗಾರರೂ ನೆಲಸುವರು. ಹೀಗೆ ಊರು ಬೆಳೆಯುತ್ತ ಬರುತ್ತದೆ. ನಮ್ಮ ದೇಶದಲ್ಲಿ ನಂಜನಗೂಡು ಹೀಗೆ ಪ್ರಸಿದ್ಧವಾದ ಯಾತ್ರಾ ಸ್ಥಳವಾಗಿದೆ. ಶ್ರೀರಂಗಪಟ್ಟಣ, ಮೇಲುಕೋಟೆ, ಶ್ರವಣಬೆಳಗೊಳ ಮುಂತಾದ ಊರುಗಳು ಹೀಗೆಯೇ ಆರಂಭವಾದುವು. ಆದರೆ ಶ್ರೀರಂಗಪಟ್ಟಣವು ರಾಜಕೀಯ ಕಾರಣದಿಂದಲೂ ಪ್ರಾಬಲ್ಯಕ್ಕೆ ಬಂತು.

III. ಕೈಗಾರಿಕೆಗಳ ಕಾರಣ.—ಕೈಗಾರಿಕೆಗಳ ಸ್ಥಾನವಾಗಿ ಊರುಗಳು ಬೆಳೆಯುವುದುಂಟು. ಇಂತಹ ಊರುಗಳು ನಮ್ಮಲ್ಲಿ ಹೆಚ್ಚಾಗಿಲ್ಲದಿದ್ದರೂ ಕೆಲವು ಉದಾಹರಣೆಗಳನ್ನು ಕೊಡಬಹುದಾಗಿದೆ.

ರಾಬರ್ಟ್‌ಸರ್‌ಪೇಟೆ ಅಥವ ಉರಿಗಾಂ.—ಇದು ಕೋಲಾರ ಡಿಸ್ಟ್ರಿಕ್ಟಿನಲ್ಲಿದೆ. ಅಲ್ಲಿ ಚಿನ್ನದ ಗಣಿಗಳು ಇರುವುದರಿಂದ ಇಂಗ್ಲೀಷು ಕಂಪೆನಿಯವರು ಆ ಗಣಿಯ ಕೆಲಸಗಳನ್ನು ನಡೆಸುತ್ತಿದಾರೆ. ಹಿಂದೆ–ಸುಮಾರು ೫೦ ವರ್ಷಗಳ ಹಿಂದೆ–ಬೆಂಗಾಡಾಗಿದ್ದ ಆ ಪ್ರದೇಶವು ಈಗ ಜನಭರಿತವಾಗಿಯೂ, ಜೀವಕಳೆಯಿಂದ ಕೂಡಿಯೂ ಇರುವುದು. ಗಣಿಯಲ್ಲಿ ಕೆಲಸಮಾಡುವ ಅನೇಕ ಕೂಲಿಯವರೂ, ಕಂಟ್ರಾಕ್ಟುದಾರರೂ ಬಂದು ನೆಲೆಸಿರುವರು ; ವರ್ತಕರು ಅಂಗಡಿಗಳನ್ನಿಟ್ಟಿರುವರು ; ಯೂರೋಪಿಯರ್ ಜನಗಳು ಮನೆಗಳನ್ನು ಕಟ್ಟಿಕೊಂಡು ವಾಸಮಾಡುತ್ತಿರುವರು. ಈ ಕಾರಣಗಳಿಂದ ಅಲ್ಲಿ ಊರು ತಲೆದೋರಿ ಬೆಳೆದು ಬಂದಿದೆ.

ಶಿವನಸಮುದ್ರ.—ಕಾವೇರಿಯು ಇಲ್ಲಿ 300 ಅಡಿಗಳ ಎತ್ತರದಿಂದ ಧುಮುಕುತ್ತದೆ. ಭರಚುಕ್ಕಿ, ಗಗನಚುಕ್ಕಿ ಎಂಬ ಜಲಪಾತಗಳು ನೋಡು

ವುದಕ್ಕೆ ಬಹಳ ಮನೋಹರವಾಗಿರುವುವು. ದಿವಾನ್ ಶೇಷಾದ್ರಿ ಅಯ್ಯ ರ್ರವರು ಕಾವೇರಿಯ ಜಲಪಾತದಿಂದ ವಿದ್ಯುತ್ತನ್ನು ಪಡೆಯುವ ಸಾಹಸ ಕಾರ್ಯವನ್ನು ಆಲೋಚಿಸಿದರು. ಈಗ ಅಲ್ಲಿ ವಿದ್ಯುತ್ತನ್ನು ಜನಿಸುವ ಏರ್ಪಾಡುಗಳು ಇರುವುದರಿಂದ ಅಲ್ಲಿ ಒಂದು ಸಣ್ಣ ಊರು ಏರ್ಪಟ್ಟಿದೆ.

ಭದ್ರಾವತಿ.—ಬಾಬಾಬುಡನ್ ಬೆಟ್ಟಗಳಲ್ಲಿ ದೊರೆಯುವ ಕಬ್ಬಿಣದ ಅದುರುಗಳನ್ನು ತೆಗೆದುಕೊಂಡು ಹೋಗಿ ಭದ್ರಾವತಿಯಲ್ಲಿ ಕರಗಿಸುವರು. ಇದಕ್ಕಾಗಿ ಅಲ್ಲಿ ಕಬ್ಬಿಣದ ಕಾರ್ಖಾನೆಯು ಏರ್ಪಾಟಾಗಿದೆ. ಈ ಕಾರ್ಖಾನೆಯು ಸ್ಥಾಪಿತವಾಗುವ ಮೊದಲು–ಬೆಂಕಿಪುರ ಎಂದು ಹೆಸರಿದ್ದ ಆ ಊರಿನಲ್ಲಿ ಜನಸಂಖ್ಯೆಯು ಹೆಚ್ಚಾಗಿರಲಿಲ್ಲ. ಈಗಲಾದರೋ ಕಾರ್ಖಾನೆಯ ಅಧಿಕಾರಿಗಳೂ, ಕೂಲಿಯವರೂ ಸೇರಿ ಸಾವಿರಾರು ಮಂದಿ ಇರುವರು. ಅಲ್ಲಿ ಸೊಗಸಾದ ಊರು ಬೆಳೆಯುತ್ತ ಬಂದಿದೆ. ಕಾರ್ಖಾನೆಯ ಕೆಲಸವು ಅಭಿವೃದ್ಧಿಯಾಗುತ್ತ ಬಂದಹಾಗೆಲ್ಲ ಈ ಊರು ದೊಡ್ಡದಾಗುತ್ತ ಬರುವುದರಲ್ಲಿ ಸಂದೇಹವಿಲ್ಲ.

IV. ವ್ಯಾಪಾರದ ಕಾರಣ.—ವ್ಯಾಪಾರಕ್ಕೆ ಅನುಕೂಲವಾದ ಸ್ಥಳವಾಗಿ ಊರು ಸ್ಥಾಪಿತವಾಗಬಹುದು. ಆಯಾ ಪ್ರಾಂತದಲ್ಲಿ ಬೆಳೆದ ದಿನಸಿಗಳು ಒಂದು ಕಡೆ ಶೇಖರವಾಗಿ ಬೇರೇ ಕಡೆಗಳಿಗೆ ಕಳುಹಿಸಲ್ಪಡಬಹುದು; ಮತ್ತು ಆ ಊರುಗಳಿಗೇ ವರ್ತಕರಾದವರು ಹೋಗಿ ತಮಗೆ ಬೇಕಾದುವನ್ನು ಕೊಂಡುಕೊಳ್ಳಬಹುದು. ಹೀಗೆ ವ್ಯಾಪಾರದ ಕಾರಣದಿಂದಲೇ ಪ್ರಸಿದ್ಧವಾಗಿರುವ ಕೆಲವು ಊರುಗಳು ನಮ್ಮ ದೇಶದಲ್ಲಿವೆ.

ದಾವಣಗೆರೆ.—ಇದು ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿದೆ. ಹರಿಹರಕ್ಕೆ ಒಂಬತ್ತು ಮೈಲಿಯ ಈಚೆಯ ಕಡೆ ಇರುವುದು. ಚಿತ್ರದುರ್ಗದ ಪ್ರಾಂತದಲ್ಲಿಯೂ, ಸಮೀಪದ ಬ್ರಿಟಿಷ್ ಸೀಮೆಯಲ್ಲಿಯೂ ಬೆಳೆಯುವ ಹತ್ತಿಯು ಶೇಖರವಾಗುವುದಕ್ಕೆ ದಾವಣಗೆರೆಯು ಉತ್ತಮವಾದ ಸ್ಥಳ. ಅದು ಹತ್ತಿ ಬೆಳೆಯುವ ಪ್ರದೇಶದ ಮಧ್ಯದಲ್ಲಿದೆ. ಸುತ್ತಮುತ್ತಲಿನ ಹತ್ತಿಯೆಲ್ಲ ಅಲ್ಲಿಗೆ ಬರುವುದು. ಅಲ್ಲಿ ಬೀಜಗಳನ್ನು ಪ್ರತ್ಯೇಕಿಸಿ, ಹತ್ತಿಗಳನ್ನು ಪಿಂಡಿಗಳಾಗಿ ಬಿಗಿದು ಕಟ್ಟಿ, ಬೇಕಾದ ಕಡೆಗಳಿಗೆ ಸಾಗಿಸುವರು. ಹೀಗೆ ಬೀಜಗಳನ್ನು ಪ್ರತ್ಯೇಕಿಸುವ ಕಾರ್ಖಾನೆಗಳು ದಾವಣಗೆರೆಯಲ್ಲಿ ವಿಶೇಷವಾಗಿರುವುದರಿಂದ

ಕೂಲಿಗಾರರೂ ಹೆಚ್ಚಾಗಿ ನೆಲಸಿದ್ದಾರೆ. ಆದುದರಿಂದ ದಾವಣಗೆರೆಯು ದೊಡ್ಡ ಊರಾಗಿ ಅಭಿವೃದ್ಧಿ ಸ್ಥಿತಿಯಲ್ಲಿದೆ.

ಬೀರೂರು.—ಇದು ಕಡೂರು ಡಿಸ್ಟ್ರಿಕ್ಟಿನಲ್ಲಿದೆ. ಮಲೆನಾಡು ಭಾಗಗಳಿಂದ ಬರುವ ಅಡಿಕೆ ಮತ್ತು ಸುತ್ತಲೂ ಬೆಳೆಯುವ ತೆಂಗು—ಇವು ಅಲ್ಲಿ ಶೇಖರವಾಗಿ ಬಳ್ಳಾರಿ, ಧಾರ್ವಾಡ ಮುಂತಾದ ಪ್ರಾಂತಗಳಿಗೆ ಸಾಗುತ್ತವೆ. ಆದುದರಿಂದ ಇದು ವ್ಯಾಪಾರಸ್ಥಳವಾಗಿ ಅಭಿವೃದ್ಧಿ ಸ್ಥಿತಿಯಲ್ಲಿರುವುದು.

ಗುಬ್ಬಿ.—ಇದು ತುಮಕೂರು ಡಿಸ್ಟ್ರಿಕ್ಟಿನಲ್ಲಿದೆ. ಮಲೆನಾಡಿನ ಕಡೆಯಿಂದ ಸ್ವಲ್ಪಭಾಗ ಅಡಿಕೆಯೂ, ತುಮಕೂರು ಡಿಸ್ಟ್ರಿಕ್ಟಿನ ಬಹು ಭಾಗಗಳಿಂದ ಅಡಿಕೆ, ತೆಂಗೂ ಇಲ್ಲಿ ಶೇಖರವಾಗುತ್ತವೆ. ಈ ಊರಿನಲ್ಲಿ ಒಳದೇಶದ ವ್ಯಾಪಾರವೂ ಹೆಚ್ಚು, ಹೊರದೇಶದ ವ್ಯಾಪಾರವೂ ಹೆಚ್ಚು. ಈ ಊರಲ್ಲಿ ನಡೆಯುವ ದೊಡ್ಡ ಸಂತೆಯಲ್ಲಿ ಲಕ್ಷಾಂತರ ರೂಪಾಯಿಗಳ ವ್ಯಾಪಾರವು ನಡೆಯುತ್ತದೆ.

ಚಿಕ್ಕಬಳ್ಳಾಪುರ.—ಇದು ಕೋಲಾರ ಡಿಸ್ಟ್ರಿಕ್ಟಿನಲ್ಲಿದೆ. ಈ ಊರು ಕ್ರಿ. ಶ. 1479ರಲ್ಲಿ ಮಲ್ಲ ಬೈರೇಗೌಡನಿಂದ ಸ್ಥಾಪಿತವಾಗಿ ರಾಜಕೀಯ ಕಾರಣಗಳಿಂದ ಪ್ರಾಬಲ್ಯ ಸ್ಥಿತಿಯಲ್ಲಿತ್ತು. ಈಗ ಅದು ಒಳ್ಳೆಯ ವ್ಯಾಪಾರ ಸ್ಥಳವಾಗಿದೆ.

V. ಪುರಾತನ ರಾಜಧಾನಿಗಳು.—ಪುರಾತನ ಕಾಲದಲ್ಲಿ ಪ್ರಸಿದ್ಧ ರಾಜಧಾನಿಗಳಾಗಿದ್ದು ಈಗ ಅಷ್ಟೊಂದು ಉತ್ತಮ ಸ್ಥಿತಿಯಲ್ಲಿಲ್ಲದ ಕೆಲವು ಊರುಗಳಿವೆ. ಈ ಪಂಗಡಕ್ಕೆ ಸೇರಿದ ಕೆಲವು ಊರುಗಳನ್ನು ಕೆಳಗೆ ಹೇಳಿದೆ:—

ತಲಕಾಡು.—ಇದು ಗಂಗರಸರ ರಾಜಧಾನಿಯಾಗಿತ್ತು. ತಿರುಮಕೂಡಲು ನರಸೀಪುರದ ತಾಲ್ಲೂಕಿನಲ್ಲಿದೆ. ಕಾವೇರಿನದಿಯು ಈ ಊರನ್ನು ಮೂರು ಕಡೆಗಳಲ್ಲಿ ಆವರಿಸಿಕೊಂಡಿದೆ. ಇದು ಪುರಾಣೋಕ್ತವಾದ ಗಜಾರಣ್ಯ ಕ್ಷೇತ್ರವು. ಕ್ರಿ. ಶ. ೩ನೆಯ ಶತಮಾನದಿಂದ ೧೧ನೆಯ ಶತಮಾನದ ಆದಿಭಾಗದವರೆಗೆ ಗಂಗರಾಜರು ಅಲ್ಲಿ ಆಳುತ್ತಿದ್ದರು. ಕ್ರಿ. ಶ. 1004ರಲ್ಲಿ ಗಂಗವಾಡಿಯು ಚೋಳರಿಂದ ಜಯಿಸಲ್ಪಟ್ಟಾಗ ತಲಕಾಡು ರಾಜೇಂದ್ರ ಚೋಳನ ವಶವಾಯಿತು. ಆಗ ಅದಕ್ಕೆ ಅವನು ರಾಜರಾಜಪುರವೆಂಬ ಹೆಸರನ್ನು ಕೊಟ್ಟನು. ಆದರೆ ಆ ಹೆಸರು ಬಹುಕಾಲ ನಿಲ್ಲಲಿಲ್ಲ. ತಲ

ಕಾಡು ಅನಂತರ ಹೊಯ್ಸಳರ ಕೈಸೇರಿತು. ತರುವಾಯ ವಿಜಯನಗರ ದವರ ಆಧೀನದಲ್ಲಿತ್ತು. ವಿಜಯನಗರದ ರಾಯಭಾರಿ ಶ್ರೀರಂಗರಾಯ ನೆಂಬವನು ಬೆನ್ನುಫಣಿ ಎದ್ದು ಕಾಲವಾದಾಗ ಮೈಸೂರಿನ ರಾಜೊಡೆ ಯರವರು ತಲಕಾಡನ್ನು ಆಕ್ರಮಿಸಿಕೊಂಡರು. ಈಗ ತಲಕಾಡು ಪ್ರಸಿ ದ್ಧವಾದ ಯಾತ್ರಾ ಸ್ಥಳವಾಗಿದೆ. ಅಲ್ಲಿ ಪಂಚಲಿಂಗೇಶ್ವರ ಜಾತ್ರೆಯು ಐದು ವರ್ಷಗಳಿಗೊಮ್ಮೆ ನಡೆಯುವುದು. ಅನೇಕ ಪುರಾತನವಾದ ಮತ್ತು ಪ್ರಸಿದ್ಧವಾದ ದೇವಾಲಯಗಳೂ ಇವೆ. ಹಳೆಯ ಊರು ಮರಳಿಂದ ಮುಚ್ಚಿ ಹೋಗುತ್ತಿರುವುದರಿಂದ ಹೊಸದಾಗಿ ಊರನ್ನು ಸ್ವಲ್ಪದೂರದಲ್ಲಿ ಕಟ್ಟಿದ್ದಾರೆ.

<u>ನಗರ.</u>—ಇದು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿದೆ. ಇದಕ್ಕೆ ಬಿದನೂರು ಎಂದು ಹಿಂದೆ ಹೆಸರಿತ್ತು. ಕೆಳದಿಯ ವಂಶದವರು ಮೊದಲು ಇಕ್ಕೇರಿ ಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದರು. ಕೆಲವು ಕಾಲದ ಮೇಲೆ ಬಿಜಾಪುರ ಸುಲ್ತಾನರ ಹಾವಳಿಯು ಹೆಚ್ಚುತ್ತಲೂ ಬಿದನೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಇಲ್ಲಿ ಬಹಳ ಸೊಗಸಾದ ಕೋಟೆಯಿದೆ. ಹೈದರನು ಬಿದನೂರು ಸಂಸ್ಥಾನವನ್ನು ಜಯಿಸಿದಾಗ ಬಿದನೂರಿಗೆ ಹೈದರ್‌ನಗರವೆಂದು ಹೆಸರಿಟ್ಟು ಒಂದು ಟಂಕಸಾಲೆಯನ್ನು ಸ್ಥಾಪಿಸಿದನು. ಈಗ ಆ ಊರಿಗೆ ನಗರ ಎಂದು ಮಾತ್ರ ಹೆಸರಿದೆ. ಈ ಊರಿಗೆ ಸುಮಾರು ೩ ಮೈಲಿಗಳ ದೂರದಲ್ಲಿ 'ದೇವಗಂಗೆ' ಎಂಬ ವಿಹಾರ ಸ್ಥಳವುಂಟು. ಅಲ್ಲಿ ಕೆಳದಿಯ ರಾಜರೂ ಅವರ ಅಂತಃಪುರದ ಸ್ತ್ರೀಯರೂ ಆಗಾಗ ಬಂದು ವಿಹಾರ ಮಾಡುತ್ತಿದ್ದರಂತೆ.

<u>ಬೇಲೂರು ಮತ್ತು ಹಳೆಯಬೀಡು.</u>—ಇವೆರಡೂ ಹೊಯ್ಸಳರ ರಾಜಧಾನಿ ಗಳಾಗಿದ್ದುವು. ಮೊದಲಿನಲ್ಲಿ ಹಳೆಯಬೀಡು ಹೊಯ್ಸಳರ ರಾಜಧಾನಿ ಯಾಗಿತ್ತು. ಆಗ ಆ ಊರಿಗೆ ದ್ವಾರಸಮುದ್ರ ಎಂದು ಹೆಸರಿತ್ತು. ಬೇಲೂರು ಮತ್ತು ಹಳೆಯ ಬೀಡುಗಳಲ್ಲಿ ಪ್ರಸಿದ್ಧವಾದ ದೇವಸ್ಥಾನಗಳಿವೆ. ಬೇಲೂರಿನ ಚೆನ್ನಕೇಶವ ದೇವಾಲಯವೂ, ಹಳೆಯ ಬೀಡಿನ ಹೊಯ್ಸ ಳೇಶ್ವರ, ಕೇದಾರೇಶ್ವರ ದೇವಸ್ಥಾನಗಳೂ ವಾಸ್ತುಶಿಲ್ಪದಲ್ಲಿ ಕನ್ನಡಿಗರು ಪಡೆದಿದ್ದ ಕುಶಲತೆಯ ಪರಾಕಾಷ್ಠ ದೆಸೆಯನ್ನು ತೋರಿಸುತ್ತವೆ. ಈ ದೇವಸ್ಥಾನಗಳಿಂದಲೂ, ಇದೇ ರೀತಿಯಲ್ಲಿ ಕಟ್ಟಿರುವ ಹೊಯ್ಸಳರ ಇತರ

ದೇವಾಲಯಗಳಿಂದಲೂ ಹೊಯ್ಸಳ ಚಕ್ರಾಧಿಪತ್ಯದ ಮಹಾವೈಭವವು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

ಬೆಳ್ಳಿಗಾವೆ.—ಇದು ಶಿವಮೊಗ್ಗ ಡಿಸ್ಟ್ರಿಕ್ಟಿನ ಶಿಕಾರಿಪುರ ತಾಲ್ಲೂಕಿನಲ್ಲಿದೆ. ಇದಕ್ಕೆ ಬಲಿಪುರವೆಂದೂ ಬಳ್ಳಿ ಗ್ರಾಮವೆಂದೂ ಹೆಸರುಗಳಿದ್ದುವು. ರಾಷ್ಟ್ರಕೂಟ ಮತ್ತು ಚಾಳುಕ್ಯ ಚಕ್ರವರ್ತಿಗಳ ಕಾಲದಲ್ಲಿ ಬನವಸಿ ಹನ್ನೆರಡು ಸಾವಿರನಾಡಿಗೆ ಇದು ರಾಜಧಾನಿಯಾಗಿತ್ತು. ಇದು ಬಹು ಪುರಾತನ ಕಾಲದ ಪಟ್ಟಣವೆಂಬದನ್ನು ೧೨ನೆಯ ಶತಮಾನದಲ್ಲಿಯೇ ಅದಕ್ಕಿದ್ದ 'ಅನಾದಿ ರಾಜಧಾನಿ' ಎಂಬ ಹೆಸರಿನಿಂದ ತಿಳಿಯಬಹುದು. ಸ್ಥಳ ಮಾಹಾತ್ಮ್ಯದಿಂದ ಇದಕ್ಕೆ ದಕ್ಷಿಣಕೇದಾರ ಎಂದೂ ಕೀರ್ತಿಯಿತ್ತು. ಇಲ್ಲಿ ವಿಷ್ಣು, ಶಿವ, ಬ್ರಹ್ಮ, ಜಿನ ಮತ್ತು ಬುದ್ಧರಿಗೆ ಕ್ರಮವಾಗಿ ಸೇರಿದ ಐದು ಮಠಗಳಿದ್ದುವು. ಈಗಲೂ ಅಲ್ಲಿರುವ ಕೇದಾರೇಶ್ವರ, ಪಂಚಲಿಂಗ, ಕೈಟಭೇಶ್ವರ, ಸೋಮೇಶ್ವರ, ಮತ್ತು ತ್ರಿಪುರಾಂತಕೇಶ್ವರ ದೇವಾಲಯಗಳ ಚಿತ್ರಕಲಾ ನೈಪುಣ್ಯವನ್ನು ನೋಡಿದರೆ ಬೆಳ್ಳಿಗಾವೆಯ ವೈಭವವು ಹೇಗಿದ್ದಿರಬಹುದೆನ್ನುವುದು ತಿಳಿಯುತ್ತದೆ.

ಮೈಸೂರು ಸಂಸ್ಥಾನದ ಚರಿತ್ರೆ.

೧. ಪ್ರಾಚೀನಕಾಲ.

I. ಮುನ್ನುಡಿ.

II. ಆರ್ಯರ ಕಾಲ—ಕ್ರಿ. ಪೂ. ೭ನೇ ಶತಮಾನದವರೆಗೆ.

III. ಬೌದ್ಧಯುಗ—ಕ್ರಿ. ಪೂ. ೬ನೇ ಶತಮಾನದಿಂದ ಕ್ರಿ. ಶ. ೪ನೇ ಶತಮಾನದವರೆಗೆ.

IV. ಗಂಗಹೊಯಿಸಳರ ಕಾಲ—ಕ್ರಿ. ಶ. ೪ನೇ ಶತಮಾನದಿಂದ ೧೩೪೦ರವರೆಗೆ.

---

೨. ಒಡೆಯರ ರಾಜ್ಯ.

I. ವಿಜಯನಗರಸಾಮ್ರಾಜ್ಯದ ಕಾಲ ೧೩೩೦—೧೬೦೦.

II. ಮೈಸೂರ ಒಡೆಯರು ೧೪೦೦—೧೭೬೦.

III. ಹೈದರಲ್ಲಿ ಟಿಪ್ಪುಸುಲತಾನರು ೧೭೬೦—೧೮೦೦.

IV. ಹತ್ತೊಂಬತ್ತನೆ ಶತಮಾನ ೧೮೦೦—೧೯೦೨.

V. ನಾಲ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರ ಆಳಿಕೆ—ಪ್ರಥಮ ಭಾಗ.

ಮೈಸೂರು ಸಂಸ್ಥಾನದ ಚರಿತ್ರೆ.

ಮುನ್ನುಡಿ.

ಕನ್ನಡನಾಡಿನ ಭಾಗ.

ಮೈಸೂರಿನ ಈಗಿನ ಮೇರೆಗಳು ರಾಜಕೀಯ. ೧೫೦ ವರ್ಷಗಳ ಹಿಂದೆ ಈ ಮೇರೆಗಳಿರಲಿಲ್ಲ. ರಾಜಕೀಯ ಘಟನೆಗಳನ್ನು ಅನುಸರಿಸುವ ರಾಜಕೀಯ ಮೇರೆಗಳು ಒಂದೊಂದು ಕಾಲದಲ್ಲಿ ಒಂದೊಂದು ರೀತಿಯಾಗಿಯೇ ಇದ್ದವು. ಮೈಸೂರು ಸಂಸ್ಥಾನದಲ್ಲಿ ಈಗ ಸೇರಿರುವ ಪ್ರದೇಶಗಳು ಹಿಂದಿನ ಕಾಲಗಲ್ಲಿ ಕುಂತಳ, ಪುನ್ನಾಡು, ಬನವಾಸಿ, ಗಂಗವಾಡಿ, ನೊಳಂಬವಾಡಿ, ರಟ್ಟಪಾಡಿ, ಶಾಂತಳಿಗೆ, ನಗರ, ಅಷ್ಟಗ್ರಾಮ ಮುಂತಾದ ಹೆಸರುಗಳನ್ನು ಪಡೆದಿದ್ದವು. ಸ್ಥಿರವಾದ ಎಲ್ಲೆಗಳನ್ನು ನಿಶ್ಚಯಿಸಲು ಭಾಷಾಭೇದವನ್ನನುಸರಿಸಿ ಭರತಖಂಡವನ್ನು ವಿಭಾಗಿಸಿದಾಗ ಮೈಸೂರು ಸಂಸ್ಥಾನವು ಕರ್ಣಾಟಕ ಪ್ರಾಂತದ ದಕ್ಷಿಣಭಾಗವಾಗುವುದು. ಕನ್ನಡ ನಾಡೆಂಬುದು ಸ್ಥೂಲವಾಗಿ "ಕಾವೇರಿಯಿಂದಮಾಗೋದಾವರಿವರೆಗೆ." ಈ ಕಾರಣದಿಂದ ಮೈಸೂರಿನ ಚರಿತ್ರೆಯಲ್ಲಿ ಈಗ ಉತ್ತರಕರ್ಣಾಟಕವೆಂದು ಹೆಸರಾಗಿರುವ ಭಾಗದ ಸಂಬಂಧವೂ ನೆರೆಹೊರೆಯವರಾದ ಆಂಧ್ರ, ತಮಿಳ ಮತ್ತು ಮಲೆಯಾಳ ಪ್ರದೇಶಗಳ ಸಂಬಂಧವೂ ಅನಿವಾರ್ಯವಾಗಿ ಕಾಣುವುದು. ಮೈಸೂರಿನ ಚರಿತ್ರೆಯು ಕನ್ನಡಿಗರ ಚರಿತ್ರೆಯ ಮುಖ್ಯಭಾಗ.


ಈ ಚರಿತ್ರೆಯ ಆಧಾರಗಳು.

ಈ ಚರಿತ್ರೆಗೆ ಎರಡು ಆಧಾರಗಳು. ಒಂದು ಗ್ರಂಥಭಾಗ, ಮತ್ತೊಂದು ಪ್ರಾಕ್ತನ ಪರೀಕ್ಷೆಯ ಭಾಗ. ಗ್ರಂಥಭಾಗದಲ್ಲಿ ತಮಿಳು, ಕನ್ನಡ, ತೆಲುಗು, ಸಂಸ್ಕೃತ ಗ್ರಂಥಗಳೆಲ್ಲವೂ ಶೋಧನೆಗರ್ಹಗಳಾದರೂ ಐತಿಹಾಸಿಕವಾದುದು ಅಲ್ಪವೇ. ಮತ್ತು ಗ್ರಂಥಭಾಗದ ಆಧಾರವು ಸದಾ

ಅವಲಂಬನೀಯವಾದುದಲ್ಲ. ನಮ್ಮ ಚರಿತ್ರೆಯನ್ನು ಬರೆಯಲು ತೊಡಗಿದವರು ಐರೋಪ್ಯರು. ಅವರು ಬರೆದ ಹಲಕೆಲವು ಗ್ರಂಥಗಳು ಆ ಕಾರಣದಿಂದ ವಿಶೇಷ ಸಹಕಾರಿಗಳಾದವುಗಳು. ಎರಡನೆ ಆಧಾರವಾದ ಪ್ರಾಕ್ತನ ಪರೀಕ್ಷೆಯು ಹೆಚ್ಚು ಪ್ರಮಾಣವಾದುದು. ಅದರಲ್ಲಿ ಹಳೆಯ ಕಟ್ಟಡಗಳು, ಲೇಖನಗಳು, ವಿಗ್ರಹಗಳು ಮುಂತಾದುವು ಶಾಸ್ತ್ರರೀತಿಯ ಪರೀಕ್ಷೆಗೊಳಗಾಗಿ ಅನೇಕ ಸಂಗತಿಗಳು ತೇಲಿ ಬರುತ್ತವೆ. ಹೆಸರುವಾಸಿಯಾದ ಲೂಯಿರೈಸ್‌ರವರ ಮತ್ತು ರಾವ್‌ಬಹದ್ದೂರ್ ನರಸಿಂಹಾಚಾರ್ಯರ ಗ್ರಂಥಗಳೂ ವರದಿಗಳೂ ಈ ಭಾಗದಲ್ಲಿ ಮುಖ್ಯವಾದವು. ಅಕ್ಕಪಕ್ಕ ಪ್ರದೇಶಗಳಲ್ಲಿಯೂ ಇಂತಹ ಪರೀಕ್ಷೆಯಿಂದ ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಅಂಶಗಳು ಅನೇಕವಾಗಿ ತಿಳಿಯಬರುತ್ತವೆ. ಆದರೆ ಇಂತಹ ಸಂಗತಿಗಳು ಕ್ರಿ. ಪೂ. ಮೂರನೇ ಶತಮಾನದಿಂದೀಚೆಗೆ ಲಭ್ಯವೇ ವಿನಾ ಅದಕ್ಕೆ ಪೂರ್ವವಾಗಿಲ್ಲ. ಆದ್ದರಿಂದ ಪುರಾತನ ಕಾಲದ ವಿವರವನ್ನು ಗ್ರಂಥಗಳಿಂದಲೂ ಸ್ಥಳಪುರಾಣಗಳಿಂದಲೂ ತಿಳಿಯತಕ್ಕದ್ದಾಗಿದೆ.


ಕಾಲವಿಭಾಗ.

ಪ್ರಾಕ್ತನ ಪರೀಕ್ಷೆಯ ಸಹಾಯವಿಲ್ಲದ ಅತಿಪುರಾತನ ಕಾಲವನ್ನು ಪೌರಾಣಿಕವೆಂದು ಇತಿಹಾಸ ಶಾಸ್ತ್ರಜ್ಞರು ಕರೆಯುವುದುಂಟು. ಆದರೆ ಆದಿಯಿಂದ ಕ್ರಿ. ಪೂ. ೫ನೇ ಶತಮಾನದವರೆಗೆ ಚಾರಿತ್ರಪೂರ್ವಯುಗವೆನ್ನುವುದಕ್ಕಿಂತ ಆರ್ಯರ ಕಾಲವೆನ್ನುವುದು ಲೇಸು. ಆ ತರುವಾಯ ಆಳಿದವರು ಜೈನ ಮತ್ತು ಬೌದ್ಧಮತಗಳನ್ನು ಸ್ವೀಕರಿಸಿಯೋ ಪ್ರೋತ್ಸಾಹಿಸಿಯೋ ಅವುಗಳ ವ್ಯಾಪ್ತಿಗೆ ಸಹಾಯಕರಾಗಿದ್ದುದರಿಂದ ಕ್ರಿ. ಪೂ. ೫ನೇ ಶತಮಾನದಿಂದ ಕ್ರಿ. ಶ. ೩ನೇ ಶತಮಾನದವರೆಗೆ ನಡೆದ ಕಾಲವನ್ನು ಬೌದ್ಧಯುಗವೆನ್ನಬಹುದು. ಅನಂತರ ಕಾಲವಿಭಾಗವು ಆಳಿದ ರಾಜಸಂತತಿಗಳನ್ನನುಸರಿಸುವುದು. ಈ ರೀತಿಯಲ್ಲಿ ವಿಭಾಗವನ್ನು ಮಾಡಿಕೊಳ್ಳುವುದು ಓದುಗರ ಅನುಕೂಲಕ್ಕೇ ಹೊರತು ಬೇರೆಯಲ್ಲವೆಂಬುದನ್ನು ಮರೆಯಬಾರದು.



ಡಿ. ಆರ್. ಗೋಪೀನಾಥ್. ಬೆಂಗಳೂರು

ಕನ್ನಡ ನಾಡು



ಡಿ. ಆರ್. ಗೋಪೀನಾಥ್. ಬೆಂಗಳೂರು

ದಕ್ಷಿಣಾ ಪಥ

ಮೈಸೂರು ಸಂಸ್ಥಾನದ ಚರಿತ್ರೆ.

೧. ಪ್ರಾಚೀನಕಾಲ.

ಆರ್ಯರಕಾಲ—(ಕ್ರಿ. ಪೂ. ೫ನೇ ಶತಮಾನದವರೆಗೆ).

ವೇದಯುಗ.

ಅತಿಪುರಾತನ ಕಾಲದಲ್ಲಿ ದಖನ್ನಿನಲ್ಲಿ ದ್ರಾವಿಡ ಕುಲಕ್ಕೆ ಸೇರಿದ ಜನರು ನದೀತೀರಗಳಲ್ಲಿಯೂ ಮೈದಾನಗಳ ಪ್ರದೇಶದಲ್ಲಿಯೂ ನೆಲೆಸಿದ್ದರು. ಆರ್ಯರು ಸಪ್ತಸಿಂಧುವಿನಲ್ಲಿ ಪೂರ್ವನಿವಾಸಿಗಳನ್ನು ಸೋಲಿಸಿದಮೇಲೆ ಕ್ರಮವಾಗಿ ಉತ್ತರ ಹಿಂದೂಸ್ಥಾನವೆಲ್ಲವನ್ನೂ ಆಕ್ರಮಿಸಿಕೊಂಡು, ಆರ್ಯಾವರ್ತವನ್ನು ವಿಸ್ತರಿಸುತ್ತ ಅಲ್ಲಿಯ ಪೂರ್ವನಿವಾಸಿಗಳನ್ನು ತಮ್ಮ ವಶವರ್ತಿಗಳನ್ನಾಗಿ ಮಾಡುತ್ತಿದ್ದ ಕಾಲದಲ್ಲಿ ಸೋತವರಲ್ಲಿ ಕೆಲವರು ದಕ್ಷಿಣಕ್ಕೆ ಬಂದು ನೆಲೆಸಿರಬಹುದು. ಹೀಗೆ ದಕ್ಷಿಣ ಭಾಗದಲ್ಲಿ ದ್ರಾವಿಡ ಜನರು ಸ್ವತಂತ್ರರಾಗಿದ್ದರೂ ವಿರಳರಾಗಿದ್ದು ಅನುಕೂಲ ಪ್ರದೇಶಗಳಲ್ಲಿ ಮಾತ್ರ ಹಳ್ಳಿಗಳನ್ನು ಕಟ್ಟಿಕೊಂಡಿರುತ್ತಿದ್ದರು. ಬಹುಭಾಗವು ಅರಣ್ಯಮಯವಾಗಿಯೇ ಇದ್ದುದರಿಂದ ಆರ್ಯರು ದಕ್ಷಿಣಾಪಥವನ್ನು ದಂಡಕಾರಣ್ಯವೆಂದೇ ಕರೆಯುತ್ತಿದ್ದರು. ವಿಂಧ್ಯಪರ್ವತವು ಆರ್ಯರಿಗೆ ಕೆಲವುಕಾಲ ಪ್ರಬಲವಾದ ಆಟಂಕವಾಗಿ ಪಾರಿಯಾತ್ರವೆಂಬ ಹೆಸರನ್ನು ಪಡೆದಿತ್ತು.

ಆರ್ಯಾವರ್ತದ ವಿಸ್ತಾರ.

ಉತ್ಸಾಹಿಗಳಾದ ಆರ್ಯರನ್ನು ವಿಂಧ್ಯಪರ್ವತವು ಚಿರಕಾಲವೂ ಅಡ್ಡಿಮಾಡಲಿಲ್ಲ. ರಾಜ್ಯಾಕಾಂಕ್ಷೆಯೂ ಸಾಹಸಪ್ರೀತಿಯೂ ಅವರನ್ನು ಪ್ರೇರಿಸಿ ವಿಂಧ್ಯಪರ್ವತವನ್ನು ದಾಟುವಂತೆ ಮಾಡಿದವು. ಅಗಸ್ತ್ಯ ವಿಶ್ವಾಮಿತ್ರಗೋತ್ರಜರು ಆ ಪರ್ವತ ಶ್ರೇಣಿಯನ್ನು ದಾಟಿಕೊಂಡು ಬಂದು

ಋಷ್ಯಾಶ್ರಮಗಳನ್ನೂ ತಪೋವನಗಳನ್ನೂ ನಿರ್ಮಿಸಿಕೊಂಡರು. ಅವರ ಹಿಂದೆಯೇ ಕ್ಷತ್ರಿಯಗು ಬಂದು ವಿದರ್ಭ, ಅಶ್ಮಕ, ಮುಳಕ ಮುಂತಾದ ರಾಜ್ಯಗಳನ್ನು ಕಟ್ಟಿದರು.

ಋಷ್ಯಾಶ್ರಮಗಳು.

ದಂಡಕಾರಣ್ಯವು ಅತಿವಿಶಾಲವಾಗಿ ದಖನ್ನಿನ ಮಧ್ಯದಲ್ಲಿತ್ತು. ಈಗಿನ ಕರ್ಣಾಟಕವು ಆ ಅರಣ್ಯದ ಭಾಗವಾಗಿತ್ತು. ಆ ಅರಣ್ಯದಲ್ಲಿ ನೆಲೆಸಿ ಆಶ್ರಮಗಳನ್ನು ಕಟ್ಟಿಕೊಂಡು ತಪಸ್ಸನ್ನು ಮಾಡಿದ ಋಷಿಗಳನ್ನು ಈಗಲೂ ಜನರು ಸ್ಮರಿಸುತ್ತಲಿರುವರು. ಕಾಮಸಮುದ್ರದ ಬಳಿ ಅಗಸ್ತ್ಯಾಶ್ರಮವನ್ನೂ ಶ್ರೀರಂಗಪಟ್ಟಣದ ಹತ್ತಿರ ಗೌತಮಾಶ್ರಮವನ್ನೂ ಮಳೂರಿನ ಸಮೀಪದಲ್ಲಿ ಕಣ್ವಾಶ್ರಮವನ್ನೂ ಈಗಲೂ ನೋಡಬಹುದು. ತುಂಗಾತೀರದಲ್ಲಿ ವಿಭಾಂಡಕ ಋಷಿಯೂ ಆತನ ಮಗನಾದ ಋಷ್ಯಶೃಂಗನೂ ನೆಲೆಸಿದ್ದ ಸ್ಥಳವೇ ಈಗ ಶೃಂಗಗಿರಿ ಅಥವಾ ಶೃಂಗೇರಿಯೆನಿಸಿರುವುದು. ಭದ್ರಾತೀರದಲ್ಲಿ ಮಾರ್ಕಂಡೇಯ ಋಷಿಯು ತಪೋನಿರತನಾಗಿದ್ದನೆಂದೂ ಚಂದ್ರದ್ರೋಣ ಪರ್ವತ ಪ್ರಾಂತದಲ್ಲಿ ದತ್ತಾತ್ರೇಯ ಮುನಿಯಿದ್ದನೆಂದೂ ಸ್ಥಳಪುರಾಣವುಂಟು. ಶ್ರೀಮದ್ರಾಮಾಯಣದಲ್ಲಿ ಅರಸುತ್ತಹೋದರೆ ದಂಡಕಾರಣ್ಯವಾಸಿಯಾಗಿದ್ದ ಶ್ರೀರಾಮಚಂದ್ರನು ಕಂಡ ಋಷಿಗಳ ಹೆಸರುಗಳು ಇನ್ನೂ ಸಿಕ್ಕುವುವು. ಈ ಋಷಿಗಳೆಲ್ಲರೂ ಅರಣ್ಯಮಧ್ಯಪ್ರದೇಶಗಳನ್ನು ಹುಡುಕುತ್ತ ತಮ್ಮ ಯಜ್ಞಯಾಗಾದಿಗಳಿಗೂ ಅಧ್ಯಯನತಪಸ್ಸುಗಳಿಗೂ ಅನುಕೂಲವಾಗಿದ್ದೆಡೆಗಳಲ್ಲಿ ಆಶ್ರಮಗಳನ್ನು ಕಟ್ಟಿಕೊಂಡಿರಲು ಆದಿನಿವಾಸಿಗಳು ನಾನಾಬಗೆಯಾಗಿ ವಿಘ್ನಗಳನ್ನೊಡ್ಡಿ ಹಿಂಸೆಕೊಡುತ್ತಿದ್ದರು. ಇಂತಹ ತಪಸ್ವಿಗಳ ರಕ್ಷಣೆಗಾಗಿಯೂ ರಾಜ್ಯಲಾಭಕ್ಕಾಗಿಯೂ ಸೂರ್ಯಚಂದ್ರವಂಶಗಳ ರಾಜರು ಆಗಾಗ್ಗೆ ದಂಡಯಾತ್ರೆಗಳನ್ನು ಕೈಕೊಳ್ಳುತ್ತಿದ್ದರು. ಶ್ರೀರಾಮಚಂದ್ರ, ಅರ್ಜುನ, ಸಹದೇವರಂತೆಯೇ ಇತರ ಕ್ಷತ್ರಿಯರೂ ಜಯಶಾಲಿಗಳಾದರು ; ಕ್ರಮೇಣ ಹಿಮಾಚಲದಿಂದ ಕನ್ಯಾಕುಮಾರಿಯವರೆಗೂ ಇರುವ ಭೂಭಾಗವೆಲ್ಲವನ್ನೂ ಆಕ್ರಮಿಸಿ ಆಸಮುದ್ರಕ್ಷಿತೀಶರೆಂಬ ಬಿರುದನ್ನು ಸಂಪಾದಿಸಿ ತಮ್ಮ ಆರ್ಯಧರ್ಮವನ್ನು ಪ್ರಸಾರಗೊಳಿಸಿದರು.

ಕ್ಷತ್ರಿಯರ ದಂಡಯಾತ್ರೆಗಳು.

ಈಗಿನ ಮೈಸೂರು ಪ್ರಾಂತದಲ್ಲಿ ಆ ಕಾಲದಲ್ಲಿ ನಡೆದ ಸಂಗತಿಗಳು ಕೆಲವು ಸ್ಥಳಪುರಾಣಗಳಿಂದ ತಿಳಿಯುತ್ತವೆ. ಸೊರಬ ಅಥವಾ ಸುರಭಿಪುರಿಯಲ್ಲಿಯೇ ರೇಣುಕಾದೇವಿಯು ಚಿತಿಯನ್ನು ಹತ್ತಿದ್ದು; ಕೋಲಾರದ ಬಳಿಯಲ್ಲಿಯೇ ಮಾಹಿಷ್ಮತಿಯ ಪ್ರಭುವಾಗಿದ್ದ ಕಾರ್ತವೀರ್ಯನನ್ನು ಪರಶುರಾಮನು ಸಂಹರಿಸಿದ್ದು; ತೀರ್ಥಹಳ್ಳಿಯಲ್ಲಿ ಸಾಗರನೊಡನೆ ಸಂಭಾಷಣೆಯನ್ನು ನಡೆಸಿದ್ದು. ಹಿರೇಮಗಳೂರಿನಲ್ಲಿ ಪರಶುರಾಮನದೆನ್ನುವ ಪರಶುವಿಗೆ ಈಗಲೂ ಪೂಜೆ ನಡೆಯುವುದು. ಶ್ರೀರಾಮಚಂದ್ರನು ಪಂಚವಟಿಯಿಂದ ಕಿಷ್ಕಿಂಧಾಮಾರ್ಗವಾಗಿ ಲಂಕೆಗೆ ಹೋದಾಗ ಮೈಸೂರಿನಲ್ಲಿ ಪ್ರಯಾಣಮಾಡಿದನು. ಅರ್ಜುನನು ಪ್ರವಾಸಮಾಡಿ ಚಿತ್ರಾಂಗದೆಯನ್ನು ಪರಿಣಯವಾದ ಮಣಿಪುರವು ಈಗಿನ ಚಾಮರಾಜನಗರವೆಂದು ಹೇಳುವರು. ಜನಮೇಜಯರಾಯನು ಸರ್ಪಯಾಗವನ್ನು ಹಿರೇಮಗಳೂರಿನಲ್ಲಿಯೇ ನೆರವೇರಿಸಿದನೆಂದು ಪ್ರತೀತಿಯುಂಟು. ಇಂತಹ ಸ್ಥಳಪುರಾಣಗಳನ್ನು ಇತಿಹಾಸ ಶಾಸ್ತ್ರಜ್ಞರು ಒಪ್ಪದಿದ್ದರೂ ರಾಮಾಯಣ ಮಹಾಭಾರತಗಳ ಕಾಲದಲ್ಲಿ ನಮ್ಮ ಪ್ರಾಂತವು ಆರ್ಯಧರ್ಮಕ್ಕೊಳಗಾಯಿತೆಂಬ ಮುಖ್ಯ ಸಂಗತಿಯು ನಿರ್ವಿವಾದವಾದುದು.

ದ್ರಾವಿಡಜನರು.

ಆರ್ಯರನ್ನು ವಿರೋಧಿಸಿದ ಜನರು ಅಸುರರೆಂದೂ ಪುರಸ್ಕರಿಸಿದವರು ವಾನರವಿದ್ಯಾಧರರೆಂದೂ ಪುರಾಣಗಳಲ್ಲಿರುವುದು. ಅವರು ದ್ರಾವಿಡ ಬುಡಕಟ್ಟಿಗೆ ಸೇರಿ ಪ್ರಾಯಶಃ ಮೂಲದ್ರಾವಿಡಭಾಷೆಯನಾಡುತ್ತಿದ್ದ ಜನರು. ಈಗಲೂ ಕಾಣುವ ತೊದವರು, ಕಾಡುಕುರುಬರು ಮುಂತಾದ ಜನರು ಈ ಪೂರ್ವನಿವಾಸಿಗಳ ಸಂತತಿಯವರು. ದ್ರಾವಿಡರಲ್ಲಿ ಉತ್ತಮರಾದವರು ಹಳ್ಳಿಪಳ್ಳಿಗಳನ್ನು ಕಟ್ಟಿಕೊಂಡು, ಬೇಸಾಯವನ್ನೇ ಮುಖ್ಯವಾಗಿ ಅನುಸರಿಸಿದ್ದರೂ ನೆಯ್ಗೆ ಕುಂಬಾರಿಕೆಗಳಲ್ಲಿ ಜಾಣರಾಗಿದ್ದು, ನೆರೆಹೊರೆಯವರೊಡನೆ ವ್ಯಾಪಾರವನ್ನೂ ನಡೆಸುತ್ತಿದ್ದರು. ಆ ಪುರಾತನ ಕಾಲದಲ್ಲಿಯೂ ಮೈಸೂರುದೇಶ ಅಥವಾ ಮಹಿಷಮಂಡಲವು ದಂತ, ಶ್ರೀಗಂಧ ಮತ್ತು ಆನೆಗಳಿಗೆ ಪ್ರಸಿದ್ಧವಾಗಿತ್ತು. ದ್ರಾವಿಡರು ಕೈಕಸಬುಗಳಲ್ಲಿ

ನಿಪುಣರಾಗಿದ್ದಂತೆಯೇ ರಣಕುತೂಹಲಿಗಳಾಗಿಯೂ ಇದ್ದರು. ಅವರನ್ನು ಜಯಿಸುವುದು ಆರ್ಯರಿಗೆ ಸುಲಭವಾಗಿರಲಿಲ್ಲ. ಏಕೆಂದರೆ ದ್ರಾವಿಡರು ಯುದ್ಧಕಾಲದಲ್ಲಿ ಹಳ್ಳಿಗಳಿಗೆ ಕೋಟೆಕಟ್ಟಿ, ಒಗ್ಗಟ್ಟಿನಿಂದ ಹೊಡೆದಾಡುತ್ತಿದ್ದರು. ಗ್ರಾಮವ್ಯವಸ್ಥೆಯಲ್ಲಿಯೂ ದ್ರಾವಿಡರು ಹೆಸರು ಪಡೆದವರು; ಸಮುದಾಯಜೀವನವು ಅವರಿಂದಲೇ ಮೊದಲಾಯಿತಂತೆ. ಈ ರೀತಿ ಕುಶಲಿಗಳಾಗಿದ್ದಾಗ್ಯೂ ದ್ರಾವಿಡಜನರು ತತ್ವಸಾಧನೆಯಲ್ಲಿ ಆರ್ಯರಿಗಿಂತಲೂ ಕೀಳಾಗಿದ್ದರು.

ಆರ್ಯಧರ್ಮ.

ಪರಾಜಯವನ್ನು ಪಡೆದ ಜನರು ಜಯಶಾಲಿಗಳಾದ ಜನರನ್ನು ವೇಷಭಾಷೆಗಳಲ್ಲಿ ಅನುಕರಣಮಾಡುವುದು ಸ್ವಾಭಾವಿಕ. ದ್ರಾವಿಡರು ಆರ್ಯರ ನಡೆನುಡಿಗಳನ್ನೂ ನಯನೀತಿಗಳನ್ನೂ ಕಲಿತರು. ಕ್ರಮೇಣ ದ್ರಾವಿಡರ ಕುಶಲತೆಯನ್ನು ಆರ್ಯರೂ ಪಡೆದರು. ಪರಸ್ಪರ ಸಹವಾಸದಿಂದ ಪರಸ್ಪರಲಾಭವಾಯಿತು. ದ್ರಾವಿಡಭಾಗವು ಆರ್ಯರಿಗೊಳಗಾಗಿ, ಭರತವರ್ಷದ ಭಾಗವಾಗಿ, ಆರ್ಯಧರ್ಮವನ್ನು ಸ್ವೀಕರಿಸಿತು. ಕಾಲಕ್ರಮೇಣ ಗೋಪೂಜೆ, ವೇದಗಳಲ್ಲಿ ಭಕ್ತಿ, ಸಂಸ್ಕೃತಭಾಷೆಯು, ವ್ಯಾಸಂಗ, ವರ್ಣಾಶ್ರಮಧರ್ಮ, ಬ್ರಾಹ್ಮಣ್ಯಸತ್ಕಾರಗಳೊಂದಿಗೆ ರಾಮಾಯಣ ಮಹಾಭಾರತ ಪುರಾಣಗಳ ಪ್ರಚಾರವೂ, ತೀರ್ಥಸೇವಾಸಕ್ತಿಯೂ, ಸಪ್ತನದಿ ಸಪ್ತಕುಲಾಚಲ ಸಪ್ತನಗರಗಳಿಂದ ಶೋಭಿಸುವ ಕರ್ಮಭೂಮಿಯಲ್ಲಿ ಮಮತೆಯೂ ನೆಲೆಗೊಂಡವು. ಅಂದಿನಿಂದ ಅಲೆಯು ಸಮುದ್ರದ ಭಾಗವು ಹೇಗೋ ಹಾಗೆ ಮೈಸೂರಿನ ಜನಜೀವನವು ಭಾರತೀಯ ಜನಜೀವನದ ಪಾಲಾಗಿರುವುದು.

ಮಹಾಕಾವ್ಯಗಳ ತರುವಾಯ.

ಈ ಪುರಾತನ ಕಾಲದಲ್ಲಿ ಇಲ್ಲಿ ಆಳಿದ ರಾಜವಂಶಗಳ ಅಥವಾ ರಾಷ್ಟ್ರವ್ಯವಸ್ಥೆಯ ತಿಳಿವು ನಮಗೆ ವಿವರವಾಗಿಲ್ಲ. ಚಿತ್ರದುರ್ಗದ ಭಾಗವು ಕಿಷ್ಕಿಂಧೆಯ ಭಾಗವಾಗಿತ್ತೆಂದೂ, ಶಿವಮೊಗ್ಗಿಯ ಸುತ್ತಮುತ್ತಲಿನ ಪ್ರದೇಶವು ಕುಂತಲ ರಾಜ್ಯವಾಗಿತ್ತೆಂದೂ, ದಕ್ಷಿಣಭಾಗವು ಮಹಿಷಮಂಡಲವಾಗಿತ್ತೆಂದೂ ಹೇಳಬಹುದು. ದಕ್ಷಿಣಾಪಥದಲ್ಲಿ ಪ್ರಬಲರಾಗಿದ್ದ ಜನರಲ್ಲಿ

ಪ್ರಸಿದ್ಧಿಪಡೆದ ಆಭೀರ, ಭೋಜ, ರಾಷ್ಟ್ರಿಕ, ಪೆತೇನಿಕ, ಪುಳಿಂದರಲ್ಲಿ ಪುಳಿಂದರೆಂಬುವರು ಪ್ರಾಯಶಃ ಮೈಸೂರಿನ ಉತ್ತರ ಭಾಗದಲ್ಲಿಯೂ, ರಾಷ್ಟ್ರಿಕರೆಂಬುವರು ಕೃಷ್ಣಾತುಂಗಭದ್ರಾನದಿಗಳ ಮಧ್ಯಪ್ರದೇಶದಲ್ಲಿಯೂ ನೆಲೆಸಿದ್ದರೆಂದು ಊಹಿಸಬಹುದು. ನಿಷ್ಕೃಷ್ಟವಾಗಿ ಯಾವ ಸಂಗತಿ ತಿಳಿಯದಿದ್ದಾಗ್ಯೂ ಕ್ರಿ. ಪೂ. ೫ನೇ ಶತಮಾನದ ವೇಳೆಗೆ ಆರ್ಯರ ನಾಗರಿಕತೆಯು ಈ ದೇಶದಲ್ಲಿ ಸರ್ವವ್ಯಾಪ್ತಿಯನ್ನು ಪಡೆದಿದ್ದಿತೆಂದು ಹೇಳಬಹುದು.

ಬೌದ್ಧಯುಗ.


ಕ್ರಿ. ಪೂ. ೫ನೇ ಶತಮಾನದಿಂದ ಕ್ರಿ. ಶ. ೪ನೇ ಶತಮಾನದವರಿಗೆ.

ಮೌರ್ಯಸಾಮ್ರಾಜ್ಯ.

ಕ್ರಿ. ಪೂ. ಆರನೆಯ ಶತಮಾನದಲ್ಲಿ ಕ್ಷತ್ರಿಯವರ್ಣಕ್ಕೆ ಸೇರಿ ಜ್ಞಾತಪುತ್ರನೆನಿಸಿದ ವರ್ಧಮಾನನು ವೈಶಾಲಿಯಲ್ಲಿ ಜನಿಸಿ ಜೈನಮತವನ್ನೂ ಶಾಕ್ಯಸಿಂಹನೆನಿಸಿದ ಗೌತಮನು ಕಪಿಲವಸ್ತುವಿನಲ್ಲಿ ಹುಟ್ಟಿ ಬೌದ್ಧಮತವನ್ನೂ ಸ್ಥಾಪಿಸಿದರಷ್ಟೆ. ವೈಶಾಲಿ, ವಿದೇಹ, ಅಂಗ, ಮಗಧ, ಕೋಸಲ ಮತ್ತು ಕಾಶಿ ರಾಷ್ಟ್ರಗಳಲ್ಲಿ ಈ ಎರಡು ಧರ್ಮಗಳೂ ಹರಡಿ ವರ್ಷೇವರ್ಷೇ ವೃದ್ಧಿಯಾದಾಗಲೇ ಮಗಧರಾಜ್ಯವು ವಿಸ್ತಾರವನ್ನು ಹೊಂದಿತು. ನಂದವಂಶದವರ ತರುವಾಯ ಪ್ರಸಿದ್ಧ ಮೌರ್ಯರ ಮನೆತನದ ಆಳಿಕೆಗೊಳಗಾಗಿ ಚಕ್ರಾಧಿಪತ್ಯವೆನ್ನಿಸಿತು. ಆದುದರಿಂದ ಜೈನಬೌದ್ಧಮತಗಳು ನಮ್ಮ ದೇಶದಲ್ಲಿ ತೋರಿಕೊಂಡ ಕಾಲದಲ್ಲಿಯೇ ಮೌರ್ಯ ಸಾಮ್ರಾಜ್ಯವೆಂಬ ರಾಜಕೀಯ ಘಟನೆಯೂ ಒದಗಿಬಂತು.

ಚಂದ್ರಗುಪ್ತ ಸಾರ್ವಭೌಮ.

ನಂದರಾಜರ ವಿರೋಧವನ್ನು ಕಟ್ಟಿಕೊಂಡ ಚಂದ್ರಗುಪ್ತನು ಅಸಹಾಯಶೂರನಾಗಿ, ಸ್ವಸಾಮರ್ಥ್ಯಸಾಹಸಗಳಿಂದ ಪಂಚನದಪ್ರಾಂತದಲ್ಲಿ ಪ್ರಬಲರಾಗಿದ್ದ ರಾಜರನ್ನೂ ಗಣಗಳನ್ನೂ ಒಟ್ಟುಗೂಡಿಸಿಕೊಂಡು, ಯವನರ ದುರ್ಗಗಳನ್ನು ನಾಶಗೊಳಿಸಿ, ನಂದರನ್ನು ನಿರ್ಮೂಲಮಾಡಿ, ಮಗಧದೇಶವನ್ನು ಸ್ವಾಧೀನಪಡಿಸಿಕೊಂಡು, ಕ್ರಮೇಣ ಗಾಂಧಾರದಿಂದ ಬ್ರಹ್ಮಪುತ್ರಾನದಿಯವರೆಗೂ ಮತ್ತು ಹಿಮಾಚಲದಿಂದ ವಿಂಧ್ಯಪರ್ವತದವರೆಗೂ ಇರುವ ವಿಶಾಲ ಭೂಭಾಗಕ್ಕೆ ಸಮ್ರಾಟನೆನಿಸಿದನು. ಕ್ರಿ. ಪೂ. ೩೨೨ರಲ್ಲಿ ಸಿಂಹಾಸನಸ್ಥನಾದ ಈ ಚಕ್ರವರ್ತಿಯು ಕ್ರಿ. ಪೂ. ೨೯೮ ರವರೆಗೂ ಆಳಿ, ತರುವಾಯ ಸಾಮ್ರಾಜ್ಯವನ್ನು ಮಗನಿಗೆ ಬಿಟ್ಟುಕೊಟ್ಟು, ಸನ್ಯಾಸವನ್ನು ತಾಳಿ


ಅಶೋಕನ ಸಾಮ್ರಾಜ್ಯ
ಕ್ರಿ.ಪೂ.೩ನೆಯ ಶತಮಾನ
ಗಾಂಧಾರ
ಸಿಂಧು
ಗಂಗಾ
ಪಾಟಲೀಪುತ್ರ
ನರ್ಮದಾ
ಕಳಿಂಗ
ಶಾತವಾಹನ
ಬ್ರಹ್ಮದೇಶ
ಅರಬ್ಬಿ ಸಮುದ್ರ
ಬಂಗಾಳಾ ಕೊಲ್ಲಿ
ಚೋಳ
ಪಾಂಡ್ಯ
ಸಿಂಹಳ

ಅಶೋಕನ ಸಾಮ್ರಾಜ್ಯ

ಅಂತಿಮಕಾಲವನ್ನು ನಮ್ಮ ಮೈಸೂರು ಸೀಮೆಯಲ್ಲಿ ಕಳೆದನೆಂಬ ವೃತ್ತಾಂತವೊಂದುಂಟು. ಅದಕ್ಕೆ ಶ್ರವಣಬೆಳುಗೊಳದಲ್ಲಿನ ಒಂದು ಕಲ್ಬರಹವು ಪ್ರಧಾನಾಧಾರವಾಗಿಯೂ, ಇತರ ಕೆಲವು ಶಾಸನಗಳೂ ಗ್ರಂಥಗಳೂ ಸೂಚನೆಗಳಾಗಿಯೂ ಇವೆ.

ಜೈನರ ದಕ್ಷಿಣಯಾತ್ರೆ.

ಮಗಧ ದೇಶದಲ್ಲಿ ಜೈನಮತಪ್ರಚಾರವು ಮೊದಲು ನಡೆಯಿತಷ್ಟೆ. ಈ ಚಂದ್ರಗುಪ್ತ ಚಕ್ರವರ್ತಿಯು ಜೈನಮತವನ್ನವಲಂಬಿಸಿದ್ದನಂತೆ. ಇದರಲ್ಲಿ ಅಸಂಭವವಾದುದೇನೂ ಇಲ್ಲ. ಹೀಗಿರಲು ಮಗಧದಲ್ಲಿ ದ್ವಾದಶವರ್ಷ ಕಾಲದ ಘೋರಕ್ಷಾಮವೊಂದು ಸಂಭವಿಸುವ ಸೂಚನೆ ತೋರಿಬಂತು. ಆಗ ಶ್ರುತಕೇವಲಿಯೆನಿಸಿ ಜೈನರ ಗುರುವಾಗಿದ್ದ ಭದ್ರಬಾಹುವು ದೇಶಾಂತರ ವಾಸವೇ ಲೇಸೆಂದು ನಿಶ್ಚಯಿಸಿ, ತನ್ನ ಅನುಚರರನೇಕರೊಡನೆ ದಕ್ಷಿಣಾಭಿಮುಖವಾಗಿ ಹೊರಟು, ಶ್ರವಣಬೆಳುಗೊಳವನ್ನು ತಲಪಿದ ಕೂಡಲೆ ಶಾಂತಿಯಿಂದ ತುಂಬಿದ ಆ ಸ್ಥಳವನ್ನು ಕಂಡು ಮುಗ್ಧನಾಗಿ, ತಾನು ಅಲ್ಲಿಯೇ ನಿಲ್ಲುವುದಾಗಿ ಸಂಕಲ್ಪಮಾಡಿಕೊಂಡು, ತನ್ನ ಶಿಷ್ಯವೃಂದಕ್ಕೆ ಮುಂದಕ್ಕೆ ಪ್ರಯಾಣಮಾಡಿ ಪುನ್ನಾಡನ್ನು ಸೇರಿಕೊಳ್ಳುವಂತೆ ಅನುಜ್ಞೆಮಾಡಿದನು. ಗುರುವಿನ ಅಪ್ಪಣೆಯನ್ನು ಚಂದ್ರಗುಪ್ತನೆಂಬೊಬ್ಬ ಶಿಷ್ಯನು ವಿನಾ ಉಳಿದವರೆಲ್ಲರೂ ಶಿರಸಾವಹಿಸಿದರು. ಚಂದ್ರಗುಪ್ತನು ಗುರುವಿನೊಡನೆ ಅಲ್ಲಿಯೇ ನಿಂತು, ಗುರುಶುಶ್ರೂಷೆಯನ್ನು ಮಾಡುತ್ತಿದ್ದು, ಭದ್ರಬಾಹು ಮುನಿಯು ಸಲ್ಲೇಖನ ವ್ರತದಿಂದ ದೇಹವನ್ನು ನೀಗಿದಮೇಲೆ ತಾನೂ ತಪಸ್ಸನ್ನು ಕೈಕೊಂಡು, ಕೆಲಕಾಲದಮೇಲೆ ಸನ್ಯಸನವಿಧಿಯಿಂದ ಮರಣವನ್ನು ಬರಮಾಡಿಕೊಂಡನು. ಆ ಕಾಲದಿಂದ ಅನೇಕ ಜೈನಶ್ರಮಣರೂ ವ್ರತಿಗಳೂ ಶ್ರವಣಬೆಳುಗೊಳದಲ್ಲಿಯೇ ತಮ್ಮ ಅಂತ್ಯಕಾಲವನ್ನು ಕಳೆದು ಸಲ್ಲೇಖನವ್ರತವನ್ನಾಚರಿಸಿದರು. ನಿರ್ಮಲ ಸರಸ್ಸಿನಿಂದ ಬೆಳುಗೊಳವೆಂಬ ಹೆಸರನ್ನು ಪಡೆದಿದ್ದುದು ಜೈನಶ್ರಮಣರಿಂದ ಪಾವನವಾದಮೇಲೆ ಶ್ರಮಣ ಅಥವಾ ಶ್ರವಣಬೆಳುಗೊಳವೆಂದು ಪ್ರಸಿದ್ಧಿಯನ್ನು ಪಡೆದು, ಪುಣ್ಯಸ್ಥಳವೆನಿಸಿ, ಕಾಲಕ್ರಮೇಣ ದಿಗಂಬರ ಶಾಖೆಯವರಿಗೆ ಮುಖ್ಯಸ್ಥಾನವಾಯಿತು. ಈ ವೃತ್ತಾಂತವನ್ನು ಇತಿಹಾಸ ಪಂಡಿತರು ಈಚೆಗೆ ಒಪ್ಪಿ, ಮುಖ್ಯ ಸಂಗತಿಗಳೆಲ್ಲವೂ ಸಂಭವಿಸಿರಬಹುದೆಂದು ಅಭಿಪ್ರಾಯಪಡುತ್ತಾರೆ.

ಬಿಂದುಸಾರ_ಅಶೋಕ.

ಚಂದ್ರಗುಪ್ತನು ಶ್ರವಣಬೆಳುಗೊಳಕ್ಕೆ ರಾಜಕೀಯಬಲದಿಂದ ಬರ ಲಿಲ್ಲ. ಆತನ ತರುವಾಯ ಚಕ್ರವರ್ತಿಯಾದ ಬಿಂದುಃಸಾರನು ಕ್ರಿ. ಪೂ. ೨೯೮ರಿಂದ ೨೭೩ರವರೆಗೂ ಆಳಿದಾಗ ದಕ್ಷಿಣದಿಗ್ವಿಜಯವನ್ನು ಕೈಕೊಂಡು ಗೋದಾವರೀ ಕೃಷ್ಣಾ ತುಂಗಭದ್ರಾನದಿಗಳ ಪ್ರದೇಶವನ್ನು ಜಯಿಸಿದನೆಂದು ಊಹೆ. ಮುಂದೆ ಆಳಿದ ಅಶೋಕ ಚಕ್ರವರ್ತಿಯು ಕಳಿಂಗದೇಶವೊಂ ದನ್ನೇ ಜಯಿಸಿದಾಗ್ಯೂ ರಾಯಚೂರು, ಚಿತ್ರದುರ್ಗ, ಕರ್ನೂಲು ಜಿಲ್ಲೆಗ ಳಲ್ಲಿ ತನ್ನ ಶಾಸನಗಳನ್ನು ಕೊರೆಯಿಸಿರುವುದು ಆ ಊಹೆಗೆ ಆಧಾರ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಸಿದ್ದಪುರ, ಬ್ರಹ್ಮಗಿರಿ, ಜಟಿಂಗ ರಾಮೇಶ್ವರ ಗುಡ್ಡಗಳಲ್ಲಿ ಅಶೋಕನ ಶಿಲಾಶಾಸನಗಳು ಮೂರು ಬ್ರಾಹ್ಮೀಲಿಪಿಯಲ್ಲಿಯೂ, ಮಾಗಧೀ ಎಂಬ ಪ್ರಾಕೃತಭಾಷೆಯಲ್ಲಿಯೂ ಬರೆದಿವೆ.

ಶಾಸನಗಳು.

ಈ ಶಾಸನಗಳಿಂದ ಸಿದ್ದಪುರದ ಸಮೀಪದಲ್ಲಿಯೇ ಇಸಿಲಾ ಎಂಬ ನಗರದಲ್ಲಿ ಅಶೋಕನ ಅಧಿಕಾರಿಗಳು ನೆಲೆಸಿದ್ದರೆಂದು ತಿಳಿಯುವುದು. ' ದೇವಾನಾಂಪ್ರಿಯ ' ನೆಂಬ ಹೆಸರಿನಿಂದ ಅಶೋಕನು ತನ್ನ ಮಹಾಮಾತ್ರ ರಿಗೂ ಇತರರಿಗೂ ತಿಳಿಯುವಂತೆ ಹೇಳುವುದರ ಸಾರಾಂಶವಿಷ್ಟು: " ಎಲ್ಲ ಜನರೂ ಧರ್ಮಿಷ್ಠರಾಗುವುದರಲ್ಲಿ ಹೆಚ್ಚಾದ ಶ್ರದ್ಧೆಯನ್ನು ವಹಿಸಬೇಕು. ಅಶೋಕನೇ ಉಪಾಸಕನಾಗಿದ್ದ ಕಾಲದಲ್ಲಿ ವಿಶೇಷವಾದ ಶ್ರದ್ಧೆಯನ್ನು ತೋ ರಲಿಲ್ಲ. ಸಂಘವನ್ನು ಪ್ರವೇಶಿಸಿದ ಕೂಡಲೆ ಶ್ರದ್ಧಾಲುವಾದನು. ಆ ಶ್ರದ್ಧೆ ಯ ಪ್ರಭಾವದಿಂದ ಮೊದಲು ಸತ್ಯವಂತರೆಂದು ಕಂಡವರೂ, ಅವರು ಪೂಜೆ ಮಾಡುತ್ತಿದ್ದ ದೇವತೆಗಳೂ ಮಿಥ್ಯವಾಗಿ ಕಂಡುಬಂದು ಶುದ್ಧಸತ್ಯವು ದೃಶ್ಯ ವಾಯಿತು. ಇದು ಶ್ರದ್ಧೆಯ ಫಲ. ಇದರಿಂದಲೇ ಉತ್ತಮರೂ ನೀಚರೂ ಶ್ರದ್ಧಾಲುಗಳಾಗಿ ಸ್ವರ್ಗವನ್ನು ಪಡೆಯಬಹುದು " ಮತ್ತು " ತಾಯಿ ತಂದೆಗಳಲ್ಲಿ ವಿಧೇಯತೆಯನ್ನು ತೋರಬೇಕು. ಅದರಂತೆಯೇ ಪ್ರಾಣಿ ಕೋಟಿಯಲ್ಲಿ ಮಮತೆಯೂ ಇರತಕ್ಕದ್ದು. ಸತ್ಯವನ್ನೇ ನುಡಿಯತಕ್ಕದ್ದು. ಧರ್ಮದ ನಿಯಮಗಳನ್ನು ಪಾಲಿಸತಕ್ಕದ್ದು. ಶಿಷ್ಯನು ಗುರುವಿನಲ್ಲಿ ಭಕ್ತಿ ಯುಳ್ಳವನಾಗಿರತಕ್ಕದ್ದು : ಬಂಧುಗಳಲ್ಲಿ ಗೌರವವನ್ನಿಡತಕ್ಕದ್ದು. ಇದೇ

ಪ್ರಾಚೀನಕಾಲದಿಂದಲೂ ನಡೆದು ಬಂದ ಧರ್ಮಲಕ್ಷಣ: ಇದರಿಂದ ದೀರ್ಘಾಯುರ್ಲಾಭವಾಗುವುದು: ಇದನ್ನೇ ಎಲ್ಲರೂ ಅನುಸರಿಸ ತಕ್ಕದ್ದು.''

ಮತಪ್ರಚಾರಕರು.

ಈ ಶಾಸನಗಳೊಂದೇ ಅಲ್ಲ: ಅಶೋಕನ ಸಂಬಂಧವು ಇನ್ನೊಂದು ಬಗೆಯಾಗಿಯೂ ಇರುವುದು. ಬೌದ್ಧಧರ್ಮಪ್ರಚಾರಕ್ಕಾಗಿ ಪ್ರಚಾರಕರನ್ನು ಅಶೋಕ ಚಕ್ರವರ್ತಿಯು ದೇಶದೇಶಕ್ಕೂ ಕಳುಹಿಸಿ ಕೊಟ್ಟಾಗ ಮಹಿಷಮಂಡಲಕ್ಕೆ ಮಹಾದೇವನೆಂಬ ಭಿಕ್ಷುವನ್ನೂ ಬನವಾಸಿಗೆ ರಕ್ಷಿತನೆಂಬ ಭಿಕ್ಷುವನ್ನೂ ಕಳುಹಿಸಿದನು. ಅಲ್ಲದೆ ನೀತಿಪ್ರಚಾರಕ್ಕಾಗಿಯೇ ಈ ಚಕ್ರವರ್ತಿಯು ಬೇರೆ ಅಧಿಕಾರಿಗಳನ್ನು ನಿಯಮಿಸಿದ್ದನು. ಪರಿಣಾಮವಾಗಿ ಬೌದ್ಧಮತಪ್ರಚಾರವು ಮಗಧದೇಶದಲ್ಲಾದಷ್ಟು ಕರ್ಣಾಟಕದಲ್ಲಾಗದಿದ್ದರೂ ಸ್ವಲ್ಪವಾದರೂ ನಡೆದಿರಬೇಕೆಂದು ಹೇಳಬಹುದು. ಕನ್ನಡ ನಾಡಿನ ಉತ್ತರಭಾಗವು ಸಾಮ್ರಾಜ್ಯದಲ್ಲಿ ಸೇರಿದ್ದಿತು. ರಾಯಚೂರು ಜಿಲ್ಲೆಯಲ್ಲಿ ಮಾಸ್ಕಿ ಎಂಬ ಹಳ್ಳಿಯ ಬಳಿಯಲ್ಲಿಯೂ ಗುತ್ತಿಯ ಸಮೀಪದಲ್ಲಿಯೂ ಅಶೋಕನ ಶಾಸನಗಳಿವೆ. ಕ್ರಿ. ಪೂ. ೨೭೩ರಿಂದ ಕ್ರಿ. ಪೂ. ೨೩೩ರವರೆಗೆ ನಲವತ್ತು ವರುಷಗಳ ಕಾಲ ಆಳಿ, ನೀತಿಸಾಧನೆಯೇ ಪರಮೋತ್ತಮ ಸಾಧನೆಯೆಂಬ ಆದರ್ಶವನ್ನು ಆಚರಿಸಲು ಸಂಕಲ್ಪಮಾಡಿ, ರಾಜಕೀಯರಂಗದಲ್ಲಿ ಪಾರಮಾರ್ಥಿಕದೃಷ್ಟಿಯನ್ನೇ ಗ್ರಹಿಸಿ, ಅಸಮಕೀರ್ತಿಯುತನೂ ಪರಮತೇಜಸ್ವಿಯೂ ಆದ ರಾಜರ್ಷಿ ಧರ್ಮಾಶೋಕನ ಆಳಿಕೆಗೆ ನಮ್ಮ ಪ್ರಾಂತವು ಒಳಪಟ್ಟಿದ್ದುದು ಚಿರಸ್ಮರಣೀಯವಾದ ಸಂಗತಿ.

ಶಾತವಾಹನರು.

ಅಶೋಕ ಚಕ್ರವರ್ತಿಯ ಮರಣಾನಂತರ ಮೌರ್ಯ ಸಾಮ್ರಾಜ್ಯವು ಒಡೆಯಿತು. ದಖನ್ನಿನಲ್ಲಿ ಬಿಂದುಸಾರ ಅಶೋಕ ಚಕ್ರವರ್ತಿಗಳಿಗೆ ಅಧೀನರಾಗಿದ್ದ ಕಳಿಂಗರೂ, ತುಂಗಭದ್ರಾ ಕೃಷ್ಣಾ ನದಿಗಳ ಪ್ರದೇಶದಲ್ಲಿದ್ದ ಶಾತವಾಹನರೂ ಸಮಯವನ್ನು ಸಾಧಿಸಿ, ತಮ್ಮ ಸ್ವಾತಂತ್ರ್ಯವನ್ನು ಕ್ರಿ. ಪೂ. ೨೩೦ರಲ್ಲಿಯೇ ಪಡೆದರು. ಶಾತವಾಹನರಲ್ಲಿ ಕೆಲವರಿಗೆ ಆಂಧ್ರಭೃತ್ಯರೆಂದೂ ಹೆಸರುಂಟು. ಚಂದ್ರಗುಪ್ತ ಚಕ್ರವರ್ತಿಯ ಕಾಲದ ಹಿಂದೆಯೇ

ಪ್ರಬಲರಾಗಿದ್ದ ಇವರು ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ಪುನಃ ಸಾಧಿಸಿದಮೇಲೆ ಕ್ರಮೇಣ ಅಭಿವೃದ್ಧಿಯನ್ನು ಹೊಂದಿ, ಕೃಷ್ಣಾ ಗೋದಾವರಿ ಮಹಾನದಿಗಳ ಪ್ರದೇಶಗಳನ್ನು ಗೆದ್ದು, ಮಗಧ ರಾಜ್ಯದಮೇಲೆಯೇ ದಂಡೆತ್ತಿ ಹೋಗುವಷ್ಟು ಬಲಿಷ್ಠರಾದರು. ಹಿರೇ ಹಡಗಲಿ, ಮೇಕದೋಣ್, ಬನವಾಸಿ, ಮಳವಳ್ಳಿ, ತಾಳಗುಂದ, ಚಂದ್ರಾವಳಿಗಳಲ್ಲಿ ಇವರ ಆಳಿಕೆಯ ಕುರುಹುಗಳಿರುವುದರಿಂದಲೂ, ಕುಂತಲ ಸ್ವಾಮಿಯೆಂಬ ಬಿರುದು ಅವರಲ್ಲಿ ಸಾಮಾನ್ಯವಾಗಿದ್ದುದರಿಂದಲೂ ಕನ್ನಡನಾಡಿನ ಉತ್ತರಾರ್ಧವು ಶಾತವಾಹನಪ್ರಭುಗಳ ಆಡಳಿತದಲ್ಲಿದ್ದಿತೆಂದು ದೃಢವಾಗುವುದು. ಮೌರ್ಯ ಸಾಮ್ರಾಜ್ಯದಲ್ಲಿ ಸೇರಿದ್ದ ಮೈಸೂರು ಪ್ರಾಂತದ ಭಾಗವು ಮೌರ್ಯರ ತರುವಾಯ ಈ ಶಾತವಾಹನರಿಗೆ ವಶವಾಯಿತೆನ್ನುವುದರಲ್ಲಿ ಸಂದೇಹವಿಲ್ಲ.

ಕ್ರಿ. ಪೂ. ೨೩೦ಕ್ಕೆ ಮೊದಲೇ ಪ್ರಬಲರಾಗಿದ್ದ ಶಾತವಾಹನರು ಕ್ರಿ. ಶ. ೨೪೦ರವರೆಗೆ ಖ್ಯಾತಿಯಿಂದ ಆಳಿದರು. ದಕ್ಷಿಣದಲ್ಲಿ ಇವರು ಆಳುತ್ತಿದ್ದಾಗ ಉತ್ತರದಲ್ಲಿ ತಂಡೋಪತಂಡವಾಗಿ ಯವನರು, ಶಕರು, ಕುಶೀಕುಲಸ್ಥರು ದೇಶದೊಳಕ್ಕೆ ನುಗ್ಗಿ ಬಂದು ರಾಜ್ಯಧ್ವಂಸಕ್ಕೆ ತೊಡಗಿದರು. ಅವರಲ್ಲಿ ಶಕರೆಂಬುವರು ಮಾಳವ ಸೌರಾಷ್ಟ್ರ ದೇಶಗಳನ್ನು ದಾಟಿ ದಕ್ಷಿಣದಲ್ಲಿಯೂ ತಲೆಹಾಕಿ ಶಾತವಾಹನರಿಗೆ ಕಂಟಕಪ್ರಾಯರಾದರು. ಶಾತವಾಹನ ಪ್ರಭುಗಳಲ್ಲಿ ಯಶಸ್ವಿಯಾದ ಗೌತಮಿಪುತ್ರನೆಂಬಾತನು [ಕ್ರಿ. ಪೂ. ೧೦೦_೪೪] ಶಕರನ್ನಡಗಿಸಿ ದೇಶೀಯರೆಲ್ಲರಿಗೂ ಮಹದುಪಕಾರವನ್ನು ಮಾಡಿ ಧರ್ಮಿಷ್ಠನೆನಿಸಿ ಬಾಳಿದನು. ಆತನ ಬಳಿಕ ಆಳಿದವರಲ್ಲಿ ವಾಸಿಷ್ಠೀ ಪುತ್ರನು [ಕ್ರಿ. ಪೂ. [೧೪೪_೧೫೭] ಶಕರಾಜನಿಗೆ ಸೋತು ಶರಣಾಗತನಾದನು. ಶಾತವಾಹನ ರಾಜ್ಯವು ಹೀಗೆ ಕ್ಷಯಿಸಲು ಪ್ರಾರಂಭವಾಗಿ ಕಡೆಗೆ ಕ್ರಿ. ಶ. ೨೪೦ರಲ್ಲಿ ನಾಮಾವಶಿಷ್ಟವಾಯಿತು.

ಕ್ರಿಸ್ತಶಕದ ಆರಂಭದಲ್ಲಿ.

ಕನ್ನಡನಾಡಿನ ಉತ್ತರಭಾಗವು ಈರೀತಿಯಲ್ಲಿ ಮೌರ್ಯರಿಗೂ ಅವರ ಬಳಿಕ ಶಾತವಾಹನರಿಗೂ ಅಧೀನವಾಗಿತ್ತು. ಇಸಿಲೆಯಲ್ಲಿ ಅಶೋಕನ ಪ್ರತಿನಿಧಿಯಿದ್ದಂತೆ ಬನವಾಸಿಯಲ್ಲಿ ಶಾತವಾಹನರ ಪ್ರತಿನಿಧಿಯಿರುತ್ತಿದ್ದನು. ಶಾತವಾಹನರ ಕಾಲದಲ್ಲಿಯೇ ಬನವಾಸಿ ನಾಡಿನಲ್ಲಿ ನಾಗಕುಲದವರು ಪ್ರಬಲರಾಗಿದ್ದಂತೆಯೂ ನಾಗಕುಲದ ರಾಜಪುತ್ರಿಯೊಬ್ಬಳು ಶಾತವಾಹನ ರಾಜ

ನೊಬ್ಬನನ್ನು ಮದುವೆಯಾದಕಾರಣ ನಾಗಕುಲಸ್ಥನೇ ಅಲ್ಲಿಯ ಉಪ ರಾಜನಾಗಿದ್ದಂತೆಯೂ ಕಾಣಬರುವುದು. ಆ ಕಾರಣದಿಂದ ನಾಗಖಂಡ ವೆಂಬ ಹೆಸರು ಆ ಪ್ರದೇಶಕ್ಕೆ ಸಲ್ಲುತ್ತಿತ್ತು. ಶಾತವಾಹನರ ಆಧಿಪತ್ಯವು ಕೊನೆಗಂಡಮೇಲೆ ನಾಗಕುಲದವರೇ (ಚುಟುಕುಲ) ಬನವಾಸಿ ಪ್ರಾಂತಕ್ಕೆ ಒಡೆಯರಾದರು. ಮಹಿಷಮಂಡಲ ಮತ್ತು ಪುನ್ನಾಟಗಳೆಂಬ ದಕ್ಷಿಣಭಾಗದಲ್ಲಿ ಪುನ್ನಾಟಕ್ಕೆ ಕೀರ್ತಿಪುರವೆಂಬುದು ರಾಜಧಾನಿಯಾಗಿತ್ತು. ಕೆಲಕಾಲಾನಂತರ ಪುನ್ನಾಟವು ಗಂಗರಸರಿಗೂ ಬನವಾಸಿಯು ಕದಂಬ ರಾಜರಿಗೂ ಅಧೀನ ವಾಯಿತು.

ಕಾಲಸ್ಥಿತಿ.

ಮತ.

ಮೌರ್ಯ ಶಾತವಾಹನ ಪ್ರಭುಗಳ ಕಾಲವು ಬೌದ್ಧಯುಗವೆಂಬ ಕಾಲ ವಿಭಾಗದಲ್ಲಿ ಸೇರಿದುದು. ಚಂದ್ರಗುಪ್ತನ ಕಾಲದಲ್ಲ ಜೈನಮತವು ವಿಶೇಷವಾಗಿ ಪ್ರಚಾರವಾದಂತೆ ಅಶೋಕನಕಾಲದಲ್ಲಿ ಬೌದ್ಧಮತವು ಹೆಚ್ಚಾಗಿ ಹರಡಿಕೊಂಡಿತು. ಪೂರ್ವದಿಂದಲೂ ಇದ್ದ ಬ್ರಾಹ್ಮಣ ಮತದೊಡನೆ ಇವೂ ಬಳಕೆಯಲ್ಲಿದ್ದವು. ಅಶೋಕ ಚಕ್ರವರ್ತಿಯು ಒತ್ತಿ ಒತ್ತಿ ಬೋಧಿಸಿದ ಪರಮತ ಸಹಿಷ್ಣುತೆಯಿಂದಲೂ ನೀತಿಮಾರ್ಗದಿಂದಲೂ ಜನಸಾಮಾನ್ಯಕ್ಕೆ ದೊರೆತ ಸುಶಿಕ್ಷಣವು ಜೈನ ಶ್ರಮಣರಿಂದಲೂ ಬೌದ್ಧಭಿಕ್ಷುಗಳಿಂದಲೂ ವಿಸ್ತಾರವನ್ನೂ ಭದ್ರತೆಯನ್ನೂ ಪಡೆಯಿತು. ಶಾತವಾಹನರಾಜರು ಬ್ರಾಹ್ಮಣ ಮತವನ್ನವಲಂಬಿಸಿದ್ದರೂ ಎಲ್ಲರನ್ನೂ ನಿಷ್ಪಕ್ಷಪಾತದಿಂದ ಪ್ರೋತ್ಸಾಹಗೊಳಿಸುತ್ತ, ಎಲ್ಲರಿಗೂ ಆಶ್ರಯವನ್ನು ಕೊಡುತ್ತಿದ್ದರು. ಶ್ರವಣ ಬೆಳುಗೊಳವು ಜೈನರಿಗೆ ಕೇಂದ್ರಸ್ಥಾನವಾಗಿ ಪರಿಣಮಿಸಿ ಕರ್ಣಾಟಕದಲ್ಲಿ ಜೈನರು ಪ್ರಬಲರಾದರು. ಬೌದ್ಧಮತವು ಜೈನಮತದಷ್ಟು ವ್ಯಾಪಿಸಲಿಲ್ಲ. ಉತ್ತರ ಕರ್ಣಾಟಕದಲ್ಲಿಯೂ ನೆರೆನಾಡಾದ ಆಂಧ್ರ ದೇಶದಲ್ಲಿಯೂ ಬೌದ್ಧ ಮತವು ತಕ್ಕಮಟ್ಟಿಗೆ ಪ್ರಚಾರವಾಗಿ ನೆಲೆಸಿತ್ತು.

ಭಾಷೆ.

ಹಿಂದಿನ ಕಾಲದಲ್ಲಿಯೇ ಸಂಸ್ಕೃತ ಭಾಷೆಯ ವ್ಯಾಸಂಗವು ಮೊದ ಲಾಗಿತ್ತು. ಆದರೆ ಸಂಸ್ಕೃತ ಭಾಷೆಯು ಜನಸಾಮಾನ್ಯರಲ್ಲಿ ರೂಢಿಯಾಗಿ

ರಲಿಲ್ಲ. ಸಾಧಾರಣ ಜನರಾಡುತ್ತಿದ್ದ ಭಾಷೆಯು ಇದರ ಅಪಭ್ರಂಶವಾಗಿ ಪ್ರಾಕೃತವೆಂಬ ಹೆಸರನ್ನು ಪಡೆದಿತ್ತು. ಕನ್ನಡನಾಡಿನಲ್ಲಿ ಪೂರ್ವದಿಂದಲೂ ಬಳಕೆಯಲ್ಲಿದ್ದ ದ್ರಾವಿಡ ನುಡಿಯು ಇದರೊಡನೆ ಬೆರೆಯಿತು. ಮೌರ್ಯ ಚಕ್ರವರ್ತಿಗಳ ಕಾಲದಲ್ಲಿ ಮಾಗಧೀ ಎಂಬ ಪ್ರಾಕೃತ ಭಾಷೆಯು ರೂಪವೇ ರಾಜ ಭಾಷೆಯಾಗಿದ್ದಿತೆಂದು ಅಶೋಕನ ಶಾಸನಗಳಿಂದ ಕಂಡುಬರುವುದು. ಶಾತವಾಹನ ರಾಜರು ಪ್ರಾಕೃತ ಪ್ರಿಯರೆಂದು ಹೆಸರು ಪಡೆದಿದ್ದಾರೆ. ಜೈನಮತಸ್ಥರು ಮೊದಮೊದಲು ಸಂಸ್ಕೃತವನ್ನೇ ವ್ಯಾಸಂಗಮಾಡಿದರು. ಬೌದ್ಧರು ಜನಸಾಮಾನ್ಯ ಭಾಷೆಯನ್ನೇ ಉಪಯೋಗಿಸುತ್ತಲಿದ್ದರು. ಅದರಿಂದ ಪ್ರಾಕೃತಕ್ಕೆ ಗೌರವವುಂಟಾಯಿತು. ಈ ರೀತಿ ಈ ಕಾಲದಲ್ಲಿ ಜನರ ಭಾಷೆಯು ಮೂಲ ದ್ರಾವಿಡ ನುಡಿಯನ್ನೂ ಸಂಸ್ಕೃತದ ಅಪಭ್ರಂಶವನ್ನೂ ಒಳಗೊಂಡಿತ್ತು. ಸಂಸ್ಕೃತ, ದ್ರಾವಿಡಗಳು ಕಲೆತು ಕಾಲಾನಂತರ ಕನ್ನಡನುಡಿಯು ರೂಪಗೊಂಡಿತು.

ಕಲೆ.

ಮತ ಪ್ರಚಾರದಲ್ಲಿಯೂ ಮತಸ್ಥಿತಿಯಲ್ಲಿಯೂ ಬದ್ಧಾದರರಾಗಿದ್ದ ಜೈನರೂ ಬೌದ್ಧರೂ ಸಂಘಗಳನ್ನೇರ್ಪಡಿಸಿಕೊಂಡಿದ್ದರು. ಧರ್ಮಿಷ್ಠರಾದ ಪ್ರಭುಗಳೂ ಪ್ರಜೆಗಳೂ ಈ ಸಂಘಗಳಿಗೆ ಪ್ರೋತ್ಸಾಹವನ್ನು ಅತ್ಯಾದರದಿಂದ ಕೊಡುವಲ್ಲಿ ಬಸದಿ, ವಿಹಾರ ಮತ್ತು ಚೈತ್ಯಾಲಯಗಳನ್ನು ಕಟ್ಟಿಸಿಕೊಡುತ್ತಿದ್ದರು. ಇಂತಹ ಮಂದಿರಗಳು ಜನರಿಗೆ ಶಿಕ್ಷಣ ಸ್ಥಾನಗಳಾಗಿದ್ದುದಲ್ಲದೆ ಲಲಿತ ಕಲೆಗಳಿಗೆ ಉತ್ತೇಜಕಗಳಾಗಿಯೂ ಇದ್ದವು. ರಾಜ ಪುರುಷರು ಯುದ್ಧಾಸಕ್ತರಾಗಿದ್ದ ಕಾಲದಲ್ಲಿಯೂ ಕೂಡ ಸಾಮಾನ್ಯ ಜನರು ನೆಮ್ಮದಿಯಿಂದಿರುತ್ತಿದ್ದುದೂ, ಶಾತವಾಹನರ ಆಡಳಿತದಲ್ಲಿ ಅನ್ಯ ದೇಶಗಳೊಡನೆ ಲಾಭಕರವಾದ ವಾಣಿಜ್ಯವು ನಡೆಯುತ್ತಿದ್ದುದೂ ಮತ ಪ್ರಚಾರ, ಶಿಕ್ಷಣ ವ್ಯಾಪ್ತಿ ಮತ್ತು ಕುಶಲ ಕಲಾಭಿವೃದ್ಧಿಗಳಿಗೆ ಅನುಕೂಲವನ್ನೊದಗಿಸಿದವು.

ವ್ಯಾಪಾರ.

ಪೂರ್ವದಿಂದಲೂ ದಖನ್ನಿನ ಜನರು ಕೆಂಪು ಕಡಲಿನ ಸುತ್ತಮುತ್ತಲಿದ್ದ ದೂರದೇಶಗಳೊಡನೆ ವಾಸನಾದ್ರವ್ಯಗಳು, ರತ್ನಗಳು, ತೇಗ ಮತ್ತು

ದಂತಗಳಲ್ಲಿ ವ್ಯಾಪಾರವನ್ನು ಬೆಳೆಸಿದ್ದರು. ಮೌರ್ಯ ಸಮ್ರಾಟರು ಆ ದೂರದೇಶಗಳ ರಾಜರೊಂದಿಗೆ ರಾಯಭಾರಗಳನ್ನು ನಡೆಸುತ್ತ ಈ ವ್ಯಾಪಾರಕ್ಕೆ ಪ್ರೋತ್ಸಾಹವನ್ನುಂಟುಮಾಡಿದರು. ಶಾತವಾಹನ ರಾಷ್ಟ್ರವು ಮೂಡಲಲ್ಲಿ ಬಂಗಾಳಾ ಕೊಲ್ಲಿಯನ್ನೂ, ಪಡುವಲಲ್ಲಿ ಅರಬ್ಬೀ ಸಮುದ್ರವನ್ನೂ ಮುಟ್ಟಿದಾಗ ಭೂಮಧ್ಯ ಸಮುದ್ರದ ಸುತ್ತಲೂ ವ್ಯಾಪಿಸಿದ್ದ ರೋಮಕ ಸಾಮ್ರಾಜ್ಯದೊಡನೆ ವರ್ಷೇ ವರ್ಷೇ ವ್ಯಾಪಾರವು ಹೆಚ್ಚಿತು. ಈ ವ್ಯಾಪಾರದಲ್ಲಿ ಭಾರತೀಯರು ಮಾರುವವರಾಗಿದ್ದರೇ ಹೊರತು ಕೊಳ್ಳುವವರಾಗಿರಲಿಲ್ಲವಾದುದರಿಂದ ಧನವು ದೇಶದಲ್ಲಿ ತುಂಬಿತು. ವರ್ತಕರು ಪ್ರಬಲರಾಗಿ ಪಟ್ಟಣಗಳು ವೃದ್ಧಿಯಾದವು. ಕಾರ್ಲೆಯ ಸುಂದರ ಚೈತ್ಯಾಲಯವನ್ನು ಕಟ್ಟಿಸಿದ ಭೂತಪಾಲನು ಬನವಾಸಿ ಅಥವಾ ವೈಜಯಂತೀ ನಗರದ ವರ್ತಕನಾಗಿದ್ದನಂತೆ. ಇತರ ನಗರಗಳಲ್ಲಿಯೂ ಧನವಂತರಾದ ವರ್ತಕರಿದ್ದರು. ಗ್ರಾಮದ ಆಡಳಿತವು ಗ್ರಾಮಸ್ಥರ ಸಭೆಗಳಲ್ಲಿ ಅಡಕವಾಗಿದ್ದಂತೆ ಪಟ್ಟಣಗಳಲ್ಲಿ ವರ್ತಕರು ಸಭೆಗಳನ್ನೇರ್ಪಡಿಸಿಕೊಂಡು ಸಾಧಾರಣವಾಗಿ ವ್ಯವಹರಿಸುತ್ತಿದ್ದರು. ಅಂತಹ ನಗರ ಸಭೆಗಳೇ ನಿಗಮ ಸಭೆಗಳು. ಸಭಿಕರಲ್ಲಿ ಪ್ರಮುಖನಾದವನಿಗೆ ಶ್ರೇಷ್ಠಿ ಎಂಬ ಹೆಸರು ಸಲ್ಲುತ್ತಿತ್ತು.

ಈ ರೀತಿಯಲ್ಲಿ ಬೌದ್ಧಯುಗದಲ್ಲಿ ನಮ್ಮ ಪ್ರಾಂತವು ಭರತ ವರ್ಷದಲ್ಲಿ ನಡೆದ ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ತರಂಗಗಳಿಗೊಳಗಾಗಿದ್ದು ಶಾತವಾಹನರ ಆಳಿಕೆಯು ಕೊನೆಗಾಣುವ ವೇಳೆಗೆ ದಖನ್ನಿನಲ್ಲಿಯೇ ಒಂದು ವಿಧವಾದ ಪ್ರತ್ಯೇಕತೆಯನ್ನು ತಾಳಲು ಸಿದ್ಧವಾಗಿತ್ತು.

ಗಂಗಹೊಯಿಸಳರ ಕಾಲ.


(೩೦೦–೧೩೪೦.)

ಪಲ್ಲವರು.

ಶಾತವಾಹನ ಸಂತತಿಯು ಕ್ರಿ. ಶ. ೨೩೦ರಲ್ಲಿ ಅದೃಶ್ಯವಾದಂತೆಯೇ ಆಯಿತು. ಬನವಾಸಿಪ್ರಾಂತದಲ್ಲಿ ಅವರ ಬಂಧುಗಳಾಗಿ ಆಳುತ್ತಿದ್ದ ನಾಗಕುಲ (ಚುಟುಕುಲ)ದವರು ಸ್ವತಂತ್ರರಾದರು. ಅದೇ ಕಾಲದಲ್ಲಿಯೇ ಪೂರ್ವತೀರಪ್ರದೇಶದಲ್ಲಿ ವೆಂಗಿ ಮತ್ತು ಕಾಂಚೀನಗರಗಳನ್ನು ರಾಜಧಾನಿಗಳನ್ನಾಗಿ ಮಾಡಿಕೊಂಡು ಪಲ್ಲವರೆಂದು ಪ್ರಖ್ಯಾತರಾದ ರಾಜವಂಶದವರು (ವಿಂಧ್ಯಕಕುಲಶಾಖೆಯವರು) ನಾಗಕುಲದವರ ಬಾಂಧವ್ಯವನ್ನು ಕಟ್ಟಿಕೊಂಡು ಪ್ರಬಲರಾಗಲು ಮೊದಲಾಯಿತು. ಸುಮಾರು ಕ್ರಿ. ಶ. ೩೪೫ರಲ್ಲಿ ಗುಪ್ತಸಾರ್ವಭೌಮ ಸಮುದ್ರಗುಪ್ತನು ದಕ್ಷಿಣಾಪಥದಲ್ಲಿ ದಂಡಯಾತ್ರೆಯನ್ನು ನಡೆಸಿ ಅನೇಕ ರಾಜರನ್ನು ಸೋಲಿಸಿದನು. ಇದಿಷ್ಟೇ ಈ ಕಾಲದಲ್ಲಿ ಉತ್ತರಕ್ಕೂ ದಕ್ಷಿಣಕ್ಕೂ ನಡೆದ ರಾಜಕೀಯ ಸಂಬಂಧ. ಸಮುದ್ರಗುಪ್ತನು ಹಿಂತಿರುಗಿದ ಬಳಿಕ ಪಲ್ಲವರು ಪೂರ್ವತೀರದಲ್ಲಿ ಗೋದಾವರೀನದಿಯಿಂದ ಪಾಲಾರುಪೆನ್ನಾರು ನದಿಗಳವರೆಗೂ ರಾಜ್ಯವಿಸ್ತಾರ ಮಾಡಿಕೊಂಡರು.

ಕಿರಿಯರಸರು.

ಪಡುವಲಲ್ಲಿ ಆಳುತ್ತಿದ್ದ ಅರಸುಮನೆತನಗಳು ಪಲ್ಲವರ ಪ್ರಾಬಲ್ಯವನ್ನು ಒಪ್ಪಲಿಲ್ಲ. ಪರುವಿ ಎಂಬ ರಾಜಧಾನಿಯೊಡನೆ ಕ್ರಿ. ಶ. ೧ನೇ ಶತಮಾನದಿಂದ ೧೦ನೇ ಶತಮಾನದವರೆಗೂ ಆಳಿದ ಬಾಣರಸರೂ, ಬಾಣರಾಜ್ಯದ ಪಶ್ಚಿಮದಲ್ಲಿ ಹೆಂಜೆರು ಅಥವಾ ಹೇಮಾವತಿ ಎಂಬ ರಾಜಧಾನಿಯಿಂದ ಆಳುತ್ತಿದ್ದ ನೊಳಂಬರಸರೂ ಪಲ್ಲವರೆದುರಿನಲ್ಲಿ ಸ್ವತಂತ್ರರಾಗಿರಲಾರದೆ ಪೊಗದಿಯನ್ನು ಕೊಟ್ಟು ಅಧೀನರಾದರು. ಇವರೂ ಈಗಣ ಮೈಸೂರು ಜಿಲ್ಲೆಯ ದಕ್ಷಿಣಭಾಗದಲ್ಲಿ ಕಿತ್ತೂರು ಅಥವಾ ಕೀರ್ತಿಪುರವೆಂಬ



ಶ್ರೀ ಪುರುಷನ ರಾಜ್ಯ



ಗಂಗವಾಡಿ

ರಾಜಧಾನಿಯ ಸುತ್ತಮುತ್ತಲಿದ್ದ ಪುನ್ನಟವೆಂಬ ರಾಜ್ಯದ ಅರಸರೂ ಕಿರಿಯರಸರು. ಪಲ್ಲವರು ಕ್ಷೀಣರಾದಮೇಲೂ ಇವರು ಆಳಿದ ಹಿರಿಯರಸರಿಗೆ ಪೊಗದಿಕೊಡುತ್ತಲೇ ಇದ್ದರು. ಪಲ್ಲವರನ್ನು ವಿರೋಧಿಸಿ ಸ್ವತಂತ್ರರಾಗಿ ಆಳಿದ ರಾಜರು ಬನವಾಸಿಯ ಕದಂಬರು ಮತ್ತು ಗಂಗವಾಡಿಯ ಗಂಗರಸರು.

ಕದಂಬರಸರು (೩೪೦–೫೬೬).

ಕ್ರಿ. ಶ. ೪ನೆ ಶತಮಾನದ ಆದಿಯಲ್ಲಿ ಬನವಾಸಿ ಪ್ರಾಂತದಲ್ಲಿ ಕದಂಬವಂಶದವರು ಪಲ್ಲವರ ಬಂಧುಗಳಾಗಿದ್ದ ನಾಗಕುಲದವರನ್ನು ಸೋಲಿಸಿ ರಾಜ್ಯಕಟ್ಟಿದರು. ಈ ವಂಶದವರಿಗೆ ಬನವಾಸಿ, ಹಾನುಂಗಲ್ಲು ಮತ್ತು ಗೋಪಕ ಪಟ್ಟಣಗಳು ಮುಖ್ಯ ಸ್ಥಾನಗಳಾಗಿದ್ದವು.

ಕದಂಬವಂಶವನ್ನು ಸ್ಥಾಪಿಸಿದವನು ಮಯೂರಶರ್ಮನೆಂಬಾತನು. ಈತನು ಬ್ರಾಹ್ಮಣನಾಗಿ ಹುಟ್ಟಿ, ಕಾಂಚೀನಗರದಲ್ಲಿ ವೇದಾಧ್ಯಯನ ಮಾಡುತ್ತಿದ್ದಕಾಲದಲ್ಲಿ ಪಲ್ಲವವಂಶಜರಾದ ಕೆಲವು ಅಶ್ವಾರೂಢರ ಗರ್ವವನ್ನು ಸಹಿಸದೆ ಅವರ ದರ್ಪವನ್ನು ಮುರಿಯಬೇಕೆಂದು ಪ್ರತಿಜ್ಞೆಮಾಡಿ, ಶ್ರೀಪರ್ವತದಲ್ಲಿ ತಪಸ್ಸುಮಾಡಿ, ಸೇನೆಗೂಡಿಸಿ ಪಲ್ಲವರನ್ನು ಸೋಲಿಸಿದನು. ಅನಂತರ ಕಲ್ಯಾಣಿಯ ರಾಣಿಯನ್ನು ದುಷ್ಟನಾದ ಯಕ್ಷನೊಬ್ಬನಿಂದ ರಕ್ಷಿಸಿ, ಶಶಾಂಕಮುದ್ರೆಯೆಂಬ ಆಕೆಯ ಮಗಳನ್ನು ಮದುವೆ ಮಾಡಿಕೊಂಡು, ಬನವಾಸಿಯಲ್ಲಿ ರಾಜ್ಯಕಟ್ಟಿದನೆಂಬ ವೃತ್ತಾಂತವುಂಟು. ಈತನು ೩೪೦ರಿಂದ ೩೬೦ರವರೆಗೆ ಆಳಿ ಪಲ್ಲವರಿಂದಲೇ ಗೌರವವನ್ನು ಪಡೆದನು. ಈತನ ತರುವಾಯ ಆಳಿದವರಲ್ಲಿ ಕಂಗವರ್ಮ, ಕಾಕುತ್ಸ್ಥವರ್ಮ (೪೩೦–೪೫೦), ಮೃಗೇಶವರ್ಮ (೪೭೫–೪೯೦)ರೆಂಬುವರು ಹೆಸರುವಾಸಿಯಾದವರು. ಈ ವಂಶದ ರಾಜರೆಲ್ಲರೂ ಬ್ರಾಹ್ಮಣಮತಾವಲಂಬಿಗಳಾಗಿ ಅನೇಕ ಯಜ್ಞಯಾಗಾದಿಗಳನ್ನು ನಡೆಸಿದ್ದರಿಂದ ಬ್ರಾಹ್ಮಣಮತಕ್ಕೆ ಪ್ರಾಶಸ್ತ್ಯವು ದೊರಕಿತು. ಬನವಾಸಿಪಟ್ಟಣವು ಇವರ ಆಳಿಕೆಯಲ್ಲಿ ಪ್ರಸಿದ್ಧಿಯಾಯಿತು. ಇವರು ಮಗಧ ಸಾಮ್ರಾಜ್ಯದ ಗುಪ್ತವಂಶದವರೊಡನೆಯೂ ಗಂಗವಾಡಿಯ ಗಂಗರಸರೊಡನೆಯೂ ವಿವಾಹ ಸಂಬಂಧಗಳನ್ನು ಬೆಳೆಸಿದ್ದರು. ಇನ್ನೂರು ವರ್ಷಗಳಾಳಿದ ತರುವಾಯ ಕದಂಬರಸರು ಬಾದಾಮಿಯ ಚಾಲುಕ್ಯರಾಜನಾಗಿದ್ದ ಕೀರ್ತಿವರ್ಮನೆದುರಿನಲ್ಲಿ ಸೋತು (ಸು. ೫೬೬) ಸಾಮಂತ

ರಾಜರಾದರು. ತರುವಾಯ ವಿಜಯನಗರದರಸರ ಕಾಲದವರೆಗೂ ಕದಂಬವಂಶಸ್ಥರು ಮಾಂಡಲಿಕರಾಗಿಯೂ ದಂಡನಾಯಕರಾಗಿಯೂ ಇರುತ್ತಿದ್ದರು.

ಗಂಗರಸರು (ಸು. ೨೦೦–೧೦೦೪).

ಏಳಿಗೆ.

ಬನವಾಸಿ, ನೊಳಂಬವಾಡಿ ಮತ್ತು ಗಂಗವಾಡಿಗಳೆಂಬ ಮೂರು ವಿಭಾಗಗಳಲ್ಲಿ ಗಂಗವಾಡಿಯೇ ಮುಖ್ಯವಾದುದು. ಗಂಗವಾಡಿಯೆಂಬುದು ಸರಿಸುಮಾರಾಗಿ ಈಗಣ ಮೈಸೂರು ಪ್ರಾಂತದ ದಕ್ಷಿಣಭಾಗವಾಗಿದ್ದಿತು. ಕ್ರಿ. ಶ. ೪ನೇ ಶತಮಾನದಲ್ಲಿ ಕೊಂಗುಣಿ ವರ್ಮಮಾಧವನೆಂಬಾತನು ಸಿಂಹನಂದ್ಯಾಚಾರ್ಯನೆಂಬ ಜೈನ ಯತಿಯ ಸಹಾಯದಿಂದ ರಾಜ್ಯವನ್ನು ಸ್ಥಾಪಿಸಿದನು. ಮೊದಲು ಕುವಲಾಲಪುರಿ ನಂದಗಿರಿಗಳು ಇವರ ಮುಖ್ಯ ಸ್ಥಾನಗಳಾಗಿದ್ದವು. ಕೆಲವುಕಾಲದಮೇಲೆ ತಲಕಾಡು ರಾಜಧಾನಿಯಾಯಿತು.

ದುರ್ವಿನೀತ.

ಕ್ರಿ. ಶ. ೬೦೦ರವರೆಗೆ ಗಂಗರಸರು ಕ್ರಮವಾಗಿ ವೃದ್ಧಿಯನ್ನು ಪಡೆದರು. ಕದಂಬರಾಜರ ಸಂಬಂಧವನ್ನೂ, ಪುನ್ನಾಟರಾಜರ ಸಂಬಂಧವನ್ನೂ ಕಟ್ಟಿ ಬೆಂಬಲವನ್ನೂ ರಾಜ್ಯವಿಸ್ತಾರವನ್ನೂ ಪಡೆದರು. ಪುನ್ನಾಟವೆಂಬುದು ಗಂಗವಾಡಿಯಲ್ಲಿ ಸೇರಿಹೋಯಿತು. ಗಂಗರಸರಲ್ಲಿ ಮೊದಲಿಗರು ವಿದ್ಯಾಪಕ್ಷಪಾತಿಗಳಾಗಿಯೂ ಯೋಗ್ಯರಾಗಿಯೂ ಇದ್ದರು. ದುರ್ವಿನೀತನೆಂಬಾತನೇ ಈ ಮೊದಲಿನ ಅರಸರಲ್ಲಿ ಪ್ರಸಿದ್ಧನಾದವನು.

ಚಾಳುಕ್ಯಪಲ್ಲವರ ದ್ವಂದ್ವ.

ಆ ವೇಳೆಗೆ ಕದಂಬರು ಬಾದಾಮಿಯ ಚಾಲುಕ್ಯರ ಸಾಮಂತರಾಗಿದ್ದರು. ಚಾಲುಕ್ಯರು ಕದಂಬರನ್ನು ಗೆದ್ದಂತೆಯೇ ಇತರ ಕಿರಿಯರಾಜರನ್ನೂ ವಶಪಡಿಸಿಕೊಂಡು ಸಾಮ್ರಾಜ್ಯವನ್ನು ಕಟ್ಟಿ, ಕಾಂಚೀನಗರದ ಪಲ್ಲವರೊಂದಿಗೆ ದಖನ್ನಿನ ಒಡೆತನಕ್ಕಾಗಿ ಸ್ಪರ್ಧಿಸಲು ತೊಡಗಿದರು. ಈ ಸಾಮ್ರಾಜ್ಯ ದ್ವಂದ್ವದಲ್ಲಿ ೬೦೭–೬೪೨ರವರೆಗೆ ಆಳಿದ ಇಮ್ಮಡಿ ಪುಲಿಕೇಶಿಯು ಮೊದಲು ಪಲ್ಲವರನ್ನು ಸೋಲಿಸಿ, ಕಡೆಗಾಲದಲ್ಲಿ ಪಲ್ಲವರಲ್ಲಿ ಮಹಾಮಲ್ಲನೆಂದೆನಿಸಿದ

ನರಸಿಂಹವರ್ಮನಿಂದ ಪರಾಜಿತನಾದನು. ಈ ಸಂದರ್ಭದಲ್ಲಿ ಇತರ ಕಿರಿಯರಸರಿಗೆ ತೋರಿದ ಕಷ್ಟವು ದಕ್ಷಿಣದ ಮೂಲೆಯಲ್ಲಿದ್ದುದರಿಂದ ಗಂಗರಸರಿಗೆ ಇಲ್ಲದಿದ್ದಿತು. ಪುಲಿಕೇಶಿ, ನರಸಿಂಹವರ್ಮ ಮತ್ತು ಹರ್ಷವರ್ಧನರ ಕಾಲಕ್ಕೆ ಹಿಂದೆ ಆಳಿದ ದುರ್ವಿನೀತನು ಜಾಣ್ಮೆಯಿಂದ ತನ್ನರಾಜ್ಯವನ್ನು ಅದೇಕಾಲದಲ್ಲಿ ವಿಸ್ತರಿಸಿಕೊಂಡನು. ಈಗಿನ ಶಾಲ್ಯ ಮತ್ತು ಕೊಯಿಮುತ್ತೂರು ಜಿಲ್ಲೆಗಳ ಭಾಗಗಳನ್ನು ಗೆದ್ದನು; ಚಾಲುಕ್ಯರ ಪಕ್ಷಪಾತಿಯಾಗಿದ್ದರೂ ಪಲ್ಲವರ ಹಗೆತನಕ್ಕೆ ಸಿಕ್ಕದಿದ್ದನು. ಸಮಯವರಿತು ರಾಜ್ಯವನ್ನು ಭದ್ರಪಡಿಸಿದ್ದಲ್ಲದೆ ವಿದ್ಯಾಭಿಮಾನಿಯೆಂದು ಹೆಸರುಪಡೆದನು. ಪ್ರಸಿದ್ಧಕವಿ ಭಾರವಿಯು ದುರ್ವಿನೀತನ ಆಸ್ಥಾನದಲ್ಲಿ ಕೆಲಕಾಲವಿದ್ದನು. ದುರ್ವಿನೀತ ರಾಜನೇ ಪ್ರಾಕೃತ, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಪಂಡಿತನಾಗಿದ್ದು ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಗ್ರಂಥಗಳನ್ನು ರಚಿಸಿದನು. ಕನ್ನಡನುಡಿಯಲ್ಲಿ ಗ್ರಂಥರಚನೆಮಾಡಿದವರಲ್ಲಿ ದುರ್ವಿನೀತನೇ ಮೊದಲಿಗನು.

ಶ್ರೀಪುರುಷ.

ದುರ್ವಿನೀತನ ತರುವಾಯ ಚಾಲುಕ್ಯ ಪಲ್ಲವರ ಹೋರಾಟವು ಇನ್ನೂ ಬಲವಾಯಿತು. ನರಸಿಂಹವರ್ಮನ ತರುವಾಯ ಪಲ್ಲವರು ಚಾಲುಕ್ಯರೆದುರಿಗೆ ನಿಲ್ಲಲಾರದೆ ಸೋತುಹೋಗುತ್ತಲಿದ್ದರು. ಆ ಸಮಯದಲ್ಲಿ ಗಂಗರಸರು ಅನುಕೂಲವಾದಾಗ ಪಲ್ಲವರೊಡನೆ ಯುದ್ಧಮಾಡುತ್ತ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡರು. ಗಂಗರಸರಲ್ಲಿ ಹೆಸರುವಾಸಿಯಾದ ಶ್ರೀಪುರುಷ ಮಹಾರಾಜನು ಪಟ್ಟವನ್ನೇರಿದ ವೇಳೆಗೆ (೭೨೬) ಪಲ್ಲವರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಿದ್ದರು. ಅತ್ತ ಚಾಲುಕ್ಯರೂ ಕೂಡ ಸ್ವಲ್ಪ ಕಾಲದಲ್ಲಿಯೇ ದುರ್ಬಲರಾಗಿ ತಮ್ಮ ಸಾಮಂತರಲ್ಲಿಯೇ ಎಣಿಕೆಯಾಗುತ್ತಿದ್ದ ರಾಷ್ಟ್ರಕೂಟ ವಂಶದವರಿಗೆ ೭೫೩ರಲ್ಲಿ ಸೋಲುವವರಾದರು. ೭೨೬ ರಿಂದ ೭೭೬ರವರೆಗೆ ಆಳಿದ ಶ್ರೀಪುರುಷನು ಈ ಸಂದರ್ಭದಲ್ಲಿ ಸ್ವರಾಜ್ಯವನ್ನು ಭದ್ರಪಡಿಸಿ ಮಾನ್ಯಪುರವನ್ನು ರಾಜಧಾನಿಯಾಗಿ ಮಾಡಿಕೊಂಡನು. ಪಲ್ಲವರನ್ನು ಸೋಲಿಸಿ 'ಪೆರ್ಮನಡಿ' ಎಂಬ ಬಿರುದನ್ನು ಸಂಪಾದಿಸಿದನು. ಬಾಣರಸರ ರಾಜ್ಯವು ಶ್ರೀಪುರುಷನಿಗೆ ಅಧೀನವಾಯಿತು. ಇತರ ರಾಜವಂಶಗಳು ಇಳಿಗಾಲದಲ್ಲಿದ್ದಾಗ ಗಂಗವಾಡಿಯೇ ಭದ್ರತೆಯ


ಲ್ಲಿಯೂ ಸಂಪತ್ತಿನಲ್ಲಿಯೂ ಮೊದಲನೆಯದಾಗಿದ್ದು ಶ್ರೀ ರಾಜ್ಯವೆಂಬ ಹೆಸರನ್ನು ಪಡೆಯಿತು. ಈತನೂ ವಿದ್ಯಾವಂತನಾಗಿದ್ದು ಗಜಶಾಸ್ತ್ರವೆಂಬ ಗ್ರಂಥವನ್ನು ಬರೆದನು. ಅರವತ್ತೆರಡು ವರ್ಷ ಕಾಲವಾಳಿದ ಶ್ರೀಪುರುಷನ ಬಳಿಕ ಸೈಗೊಟ್ಟ ಶಿವಮಾರನೆಂಬ ಆತನ ಮೊಮ್ಮಗನು ಅರಸಾದನು. ಆತನ ಕಾಲದಲ್ಲಿ ರಾಜ್ಯಕ್ಕೆ ತೊಂದರೆ ಸಂಭವಿಸಿತು.

ರಾಷ್ಟ್ರಕೂಟರ ಪ್ರಾಬಲ್ಯ.


ಸಾಮಂತರಾಗಿದ್ದ ರಾಷ್ಟ್ರಕೂಟರು ಬಾದಾಮಿಯ ಚಾಲುಕ್ಯರ ರಾಜ್ಯವನ್ನು ೭೫೩ರಲ್ಲಿ ಆಕ್ರಮಿಸಿದರು. ಈ ರಾಷ್ಟ್ರಕೂಟರು ಮಾನ್ಯಖೇಟವನ್ನು ರಾಜಧಾನಿಯಾಗಿ ಕಟ್ಟಿಕೊಂಡು, ಪ್ರಬಲವಾದ ಸಾಮ್ರಾಜ್ಯವನ್ನು ಕಟ್ಟಿ, ಪಲ್ಲವರ ಬಲವನ್ನು ಕೊನೆಗಾಣಿಸಿದರು. ಹಾಗೆಯೇ ಗಂಗರಸರ ಮೇಲೆಯೂ ಕೈಮಾಡಿದರು. ಶಿವಮಾರನು ಪಟ್ಟವೇರಿದ ಕಾಲದಲ್ಲಿ ಮಾನ್ಯಖೇಟದಲ್ಲಿ ಗೋವಿಂದ ಮತ್ತು ಧ್ರುವ ಎಂಬಿಬ್ಬರು ಅಣ್ಣತಮ್ಮಂದಿರಲ್ಲಿ ಪಟ್ಟದ ಜಗಳ ಹುಟ್ಟಿತ್ತು. ಬಲಶಾಲಿಯಾಗಿದ್ದ ಧ್ರುವನು ಸುಖಾಸಕ್ತನೂ ಸೋಮಾರಿಯೂ ಆಗಿದ್ದ ಗೋವಿಂದನನ್ನು ಸೋಲಿಸಿ ಓಡಿಸಿದನು. ಭ್ರಷ್ಟನಾದ ಗೋವಿಂದನು ಶಿವಮಾರ ರಾಜನ ಆಸ್ಥಾನಕ್ಕೆಬಂದು, ಆತನ ಸಹಾಯವನ್ನು ಬೇಡಿದನು. ಶಿವಮಾರನು ಒಡಂಬಟ್ಟನು. ಕೂಡಲೆ ಧ್ರುವನು ದಂಡೆತ್ತಿ ಬಂದು ಶಿವಮಾರನನ್ನು ಸೋಲಿಸಿ ಸೆರೆಹಿಡಿದು ಮಾನ್ಯಖೇಟಕ್ಕೊಯ್ದುದಲ್ಲದೆ, ತನ್ನವನಾಗಿ ಗಂಗವಾಡಿಯನ್ನು ಆಳುವಂತೆ ತನ್ನಮಗ ಕಂಭರಸನೆಂಬಾತನನ್ನು ನಿಯಮಿಸಿದನು. ಈ ರೀತಿಯಲ್ಲಿ ಗಂಗವಾಡಿಯು ರಾಷ್ಟ್ರಕೂಟರ ಅಧೀನವಾಯಿತು.

ಸೈಗೊಟ್ಟ ಶಿವಮಾರ.

ಶಿವಮಾರನು ಸೆರೆಯಲ್ಲಿದ್ದಾಗಲೇ ಧ್ರುವರಾಯನು ಕಾಲವಾದನು. ಪಟ್ಟಕ್ಕಾಸೆಪಡುತ್ತಿದ್ದ ಆತನ ಕಿರಿಯಮಗ ಮುಮ್ಮಡಿ ಗೋವಿಂದನೆಂಬಾತನು ಗಂಗವಾಡಿಯನ್ನಾಳುತ್ತಿದ್ದ ಕಂಭರಸನನ್ನು ಎದುರಿಸಬೇಕಾಗಿತ್ತು. ಕಂಭರಾಜನು ಆಗಲೇ ದೊಡ್ಡ ಪಡೆಯನ್ನು ಕೂಡಿಸಿಕೊಂಡು ರಟ್ಟಪಾಡಿಯಕಡೆಗೆ ಹೊರಟಿದ್ದನು. ಆಗ ಮುಮ್ಮಡಿ ಗೋವಿಂದನು ಭೇದೋಪಾಯವನ್ನು ಹಿಡಿದು ಶಿವಮಾರನನ್ನು ಸೆರೆಯಿಂದ ಬಿಡಿಸಿ ಗಂಗವಾಡಿಯನ್ನಾಳಲು



ಹೊಯಿಸಳ ಸಾಮ್ರಾಜ್ಯ



ಹೊಯಿಸಳ ಸಾಮ್ರಾಜ್ಯ

ಕಳುಹಿಸಿಕೊಟ್ಟನು. ಸ್ವರಾಜ್ಯಕ್ಕೆ ಬಂದಕೂಡಲೆ ಶಿವಮಾರ ರಾಜನು ತನ ಗಾಡ ಅವಮಾನವನ್ನು ನೆನೆದು, ಸಾಮಂತ ರಾಜನಾಗಿರಲೊಪ್ಪದೆ ಸೈನ್ಯವನ್ನಣಿಮಾಡಿಕೊಂಡು ಕಾಗೆಮೊಗೆಯೂರೆಂಬಲ್ಲಿ ರಾಷ್ಟ್ರಕೂಟರ ದಂಡನ್ನು ಸಂಧಿಸಿ ಯುದ್ಧಮಾಡಿ ಕಾದಾಡುತ್ತ ಪ್ರಾಣಬಿಟ್ಟನು.

ರಾಷ್ಟ್ರಕೂಟ ಗಂಗರಸರ ಬಾಂಧವ್ಯ.
ಇಮ್ಮಡಿ ಬೂತುಗ.

ಶಿವಮಾರನ ತರುವಾಯ ಆಳಿದ ಗಂಗರಸರು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಲೇ ಇದ್ದು ಕಡೆಗೆ ರಾಷ್ಟ್ರಕೂಟರೊಡನೆ ಸ್ನೇಹವನ್ನು ಕಟ್ಟಿದರು. ರಾಷ್ಟ್ರಕೂಟರಲ್ಲಿ ಪ್ರಸಿದ್ಧನಾದ ನೃಪತುಂಗಮಹಾರಾಜನ ಕಾಲದಲ್ಲಿ (೮೧೪-೮೭೭) ಗಂಗರಸರಿಗೂ ರಾಷ್ಟ್ರಕೂಟರಿಗೂ ದೃಢವಾದ ಗೆಳೆತನವು ಸ್ಥಾಪಿತವಾಯಿತು. ಸ್ನೇಹವು ಸಿದ್ಧವಾದಮೇಲೆ ಗಂಗರಸರು ಉತ್ತರ ಮತ್ತು ಈಶಾನ್ಯ ದೆಸೆಗಳಲ್ಲಿದ್ದ ನೊಳಂಬರನ್ನೂ ಬಾಣರಾಜರನ್ನೂ ಸೋಲಿಸಿ ತಮ್ಮ ಬಲವನ್ನು ಹೆಚ್ಚಿಸಿಕೊಂಡರು. ಆಗ ರಾಷ್ಟ್ರಕೂಟರೂ ಗಂಗರಸರೂ ಸಮಾನರಾಗಿ ತೂಗಿದರು. ೯೩೭ರಲ್ಲಿ ಇಮ್ಮಡಿ ಬೂತುಗೇಂದ್ರನೆಂಬ ಗಂಗರಸನು ಪಟ್ಟಭದ್ರನಾದ ವೇಳೆಗೆ ಈ ಸ್ನೇಹವು ಭದ್ರವಾಗಿತ್ತು. ಬೂತುಗೇಂದ್ರನು ರಾಷ್ಟ್ರಕೂಟಾಧಿಪತಿಗೆ ಆಪ್ತನಾಗಿ, ಆತನ ಮಗಳನ್ನು ಮದುವೆಯಾಗಿ ಕೆಲ ಪ್ರದೇಶಗಳನ್ನು ಉಂಬಳಿಯಾಗಿ ಪಡೆದನು. ಈ ಸಂಬಂಧದಿಂದ ರಾಷ್ಟ್ರಕೂಟರಿಗೇ ಸಹಾಯವಾಯಿತು. ಇಮ್ಮಡಿ ಬೂತುಗೇಂದ್ರನ ಕಾಲದಲ್ಲಿ ಮಾನ್ಯಖೇಟದಲ್ಲಿ ಮುಮ್ಮಡಿ ಕೃಷ್ಣನೆಂಬ ತರುಣ ರಾಜನ ಪಟ್ಟವಾಯಿತು. ಆಗ ಲಲ್ಲೆಯನೆಂಬ ದಳಪತಿಯೊಬ್ಬನು ಸಾಹಸದಿಂದ ರಾಜ್ಯವನ್ನಪಹರಿಸಲು ಯತ್ನಿಸಿದನು. ಬೂತುಗೇಂದ್ರನೇ ಲಲ್ಲೆಯನನ್ನು ಸೋಲಿಸಿ, ಅವನ ಬಲವನ್ನು ಧ್ವಂಸಮಾಡಿ, ಕೃಷ್ಣರಾಜನನ್ನು ಸಿಂಹಾಸನದಲ್ಲಿ ಭದ್ರವಾಗಿ ಕುಳ್ಳಿರಿಸಿದನು. ಸ್ವಲ್ಪಕಾಲದಲ್ಲಿ ಕೃಷ್ಣರಾಜನಿಗೆ ಮತ್ತೊಂದು ವಿಪತ್ತು ಬಂತು. ಆಗಲೂ ಬೂತುಗೇಂದ್ರನೇ ನೆರವಾದನು.

ತಕ್ಕೋಲ (೯೪೯).

ಪೂರ್ವತೀರ ಪ್ರದೇಶದಲ್ಲಿ ಪಲ್ಲವರ ಸ್ಥಾನವನ್ನು ಚೋಳಕುಲದ ರಾಜರು ಆಕ್ರಮಿಸುತ್ತ ದಿನೇ ದಿನೇ ವೃದ್ಧಿಯಾಗುತ್ತಿದ್ದರು. ಸಾಮ್ರಾಜ

ಸ್ಥಾಪನೆಯಲ್ಲಿ ತೊಡಗಿದ್ದ ಚೋಳಪತಿಯ ಯುವರಾಜನಾಗಿದ್ದ ರಾಜಾದಿತ್ಯ ನೆಂಬಾತನು ಅಪಾರವಾದ ಸೈನ್ಯದೊಡನೆ ಕೃಷ್ಣರಾಜನ ಮೇಲೆ ಕವಿದು ಬಂದನು. ಆಗ ಬೂತುಗೇಂದ್ರನು ತನ್ನ ದಳದೊಡನೆ ಸಹಾಯವಾಗಿ ಬಂದು ಕೃಷ್ಣನನ್ನು ಸೇರಿಕೊಂಡು ತಕ್ಕೋಲವೆಂಬೆಡೆಯಲ್ಲಿ ರಾಜಾದಿತ್ಯ ನನ್ನು ಪ್ರತಿಭಟಿಸಿದನು. ಎರಡು ಪಕ್ಷಗಳಿಗೂ ಕದನವು ಮೊದಲಾಗಿ ಬಹು ಕಾಲವಾದರೂ ಸೋಲು ಗೆಲವುಗಳು ನಿಶ್ಚಯವಾಗದಿದ್ದವು. ಆಗ ಬೂತು ಗನು ತನ್ನ ಆನೆಯನ್ನು ರಾಜಾದಿತ್ಯನ ಆನೆಯೆದುರಿನಲ್ಲಿ ನಡೆಸಿದನು. ಎರಡು ಆನೆಗಳೂ ಹಣಾಹಣಿಯಲ್ಲಿ ತೊಡಗಿದವು; ಆ ಸಮಯದಲ್ಲಿ ಬೂತುಗನು ತನ್ನ ಆನೆಯ ಮೇಲಿನಿಂದ ಹಟಾತ್ತಾಗಿ ರಾಜಾದಿತ್ಯನ ಆನೆಯ ಮೇಲೆ ಹಾರಿ, ಉಭಯ ಸೈನಿಕರೂ ನೋಡುತ್ತಿರಲು ಮಲ್ಲಯುದ್ಧ ಮಾಡಿ, ಆತನನ್ನು ಸಂಹರಿಸಿದನು. ಚೋಳ ಸೈನ್ಯವು ಹಾಹಾಕಾರ ಮಾಡುತ್ತ ಪಲಾಯನವಾಯಿತು. ಕೃಷ್ಣರಾಜನು ಅತಿಸಂತುಷ್ಟನಾಗಿ ಬೂತುಗನಿಗೆ ಬನವಾಸಿ ಪ್ರಾಂತವನ್ನು ಬಿಟ್ಟುಕೊಟ್ಟನು.

ಮಾರಸಿಂಹ.

ಇಮ್ಮಡಿ ಬೂತುಗನು ೯೫೩ ರವರೆಗೆ ಆಳಿದನು. ಆತನ ತರು ವಾಯ ರಾಷ್ಟ್ರಕೂಟರ ಸಂಬಂಧವು ಇನ್ನೂ ಆಪ್ತವಾಯಿತು. ಮುಮ್ಮಡಿ ಕೃಷ್ಣನು ಉತ್ತರದಲ್ಲಿ ನಡೆಸಿದ ಯುದ್ಧಗಳಲ್ಲಿಯೂ ಗಂಗರಸರು ಸಹಾಯ ವಾಗಿದ್ದರು. ೯೬೧ ರಿಂದ ೯೭೩ ರವರೆಗೆ ಆಳಿದ ಮಾರಸಿಂಹನೆಂಬ ಗಂಗರಸನು ಕೃಷ್ಣರಾಜನ ಬಲಗೈಯಾಗಿದ್ದುದಲ್ಲದೆ ನೊಳಂಬಾಧಿರಾಜರನ್ನು ಪೂರ್ತಿಯಾಗಿ ಅಡಗಿಸಿದನು. ಮುಮ್ಮಡಿ ಕೃಷ್ಣನ ತರುವಾಯ ಮಾನ್ಯ ಖೇಟದಲ್ಲಿ ಆತನ ಮೊಮ್ಮಗ ನಾಲ್ಮಡಿ ಇಂದ್ರನು ರಾಜನಾದನು. ಆತನಿಗೆ ಸಹಾಯಕನಾಗಿದ್ದ ಮಾರಸಿಂಹನು ೯೭೪ ರಲ್ಲಿ ರಾಜ್ಯವನ್ನು ತನ್ನ ಮಗ ರಾಚಮಲ್ಲನಿಗೆ ಕೊಟ್ಟು ಬಂಕಾಪುರದಲ್ಲಿ ದೇಹತ್ಯಾಗಮಾಡಿದನು. ರಾಷ್ಟ್ರ ಕೂಟ ರಾಜ್ಯದಲ್ಲಿ ಬಿಗಿತಪ್ಪಿ ಸಾಮಂತರಾಗಿದ್ದ ಚಾಲುಕ್ಯವಂಶದವರೇ ಮುಂತಾದವರು ದಂಗೆಯೇಳುತ್ತ ತೊಂದರೆ ಕೊಡಲಾರಂಭಿಸಿದರು. ಇಂದ್ರ ರಾಜನು ಅವರನ್ನಡಗಿಸಲಾರದೆ ರಾಜ್ಯಭ್ರಷ್ಟನಾಗಿ ಅಲ್ಲಲ್ಲಿ ಅಲೆದಾಡಿ, ಕೊನೆಗೆ ೯೮೪ ರಲ್ಲಿ ಶ್ರವಣಬೆಳುಗೊಳದಲ್ಲಿ ಪ್ರಾಣವನ್ನರ್ಪಿಸಿದನು.

ರಾಷ್ಟ್ರಕೂಟರ ರಾಜ್ಯವು ೯೭೩ ರಿಂದ ಚಾಳುಕ್ಯರ ಕೈಸೇರಿತು. ಅವರು ಕಲ್ಯಾಣಿಯನ್ನು ನೆಲೆವೀಡಾಗಿ ಮಾಡಿಕೊಂಡು ಪ್ರಬಲರಾಗುತ್ತಿದ್ದರು.

ಚೋಳರಸರ ಪ್ರಾಬಲ್ಯ.

ಮಾರಸಿಂಹನ ತರುವಾಯ ಗಂಗರಸರೂ ದುರ್ಬಲರಾದರು. ಆತನ ಮಗ ನಾಲ್ಮಡಿ ರಾಚಮಲ್ಲನಕಾಲದಲ್ಲಿ ಅತಿಸ್ಮರಣೀಯವಾದ ಸಂಗತಿಯೊಂದು ನಡೆಯಿತು. ೯೮೩ ರಲ್ಲಿ ಶ್ರವಣಬೆಳುಗೊಳದಲ್ಲಿ ಅದ್ಭುತವೆನಿಸಿದ ಗೋಮಟೇಶ್ವರ ವಿಗ್ರಹವು ಸ್ಥಾಪಿತವಾಯಿತು. ಅದನ್ನು ಪ್ರತಿಷ್ಠೆ ಮಾಡಿಸಿದ ಚಾವುಂಡರಾಯನೆಂಬಾತನು ರಾಚಮಲ್ಲನ ದಳಪತಿಯೂ ಮಂತ್ರಿಯೂ ಆಗಿದ್ದನು. ಇಂತಹ ಅದ್ಭುತವಾದ ಸಂಗತಿ ನಡೆದರೂ ಕೂಡ ರಾಜವಂಶಕ್ಕೆ ಇಳಿಗಾಲವಾಗಿತ್ತು. ರಾಷ್ಟ್ರಕೂಟರಿಗೆ ಗಂಗರಸರ ಬೆಂಬಲ ತಪ್ಪಿದಂತೆಯೇ ಗಂಗರಸರಿಗೂ ರಾಷ್ಟ್ರಕೂಟರ ಸಹಾಯ ತಪ್ಪಿತು. ಮೂಡಲಲ್ಲಿ ಚೋಳರಸರು ಪ್ರಬಲರಾಗುತ್ತ ೯೯೭ ರಲ್ಲಿ ಕೋಲಾರ ಪ್ರಾಂತವನ್ನೇ ಸಾಧಿಸಿದರು. ಆಗ ಪ್ರಸಿದ್ಧನಾದ ರಾಜರಾಜದೇವನು ಚೋಳಪತಿಯಾಗಿದ್ದನು. ಆತನ ಮಗ ರಾಜೇಂದ್ರನು ೧೦೦೪ ರಲ್ಲಿ ದೊಡ್ಡ ಸೇನೆಯೊಡಗೂಡಿ ಗಂಗವಾಡಿಯಲ್ಲಿ ದಾಳಿಯಿಟ್ಟು ತಲಕಾಡನ್ನೇ ಹಿಡಿದನು. ಗಂಗರಸರ ಬಲವೆಲ್ಲವೂ ಮಾಯವಾಗಿ ಗಂಗವಾಡಿಯು ಚೋಳರಸರ ಅಧೀನವಾಯಿತು. ಅದೇವೇಳೆಗೆ ಮಲೆನಾಡಿನಲ್ಲಿ ಹುಟ್ಟಿಕೊಂಡು ಪ್ರಬಲರಾದ ಹೊಯಿಸಳರಲ್ಲಿ ಸೇರಿಕೊಂಡು ಗಂಗವಂಶದವರು ಮಾಂಡಲಿಕರೂ ದಳಪತಿಗಳೂ ಆದರು.

ಕರ್ಣಾಟಕದ ಉನ್ನತಿ.

ಗಂಗರಸರು ಒಟ್ಟು ೬೦೦ ವರ್ಷಗಳಾಳಿದರು. ಜೈನಯತಿಯ ಸಹಾಯದಿಂದ ಸ್ಥಾಪಿತರಾಗಿ ಇವರು ಜೈನಮತವನ್ನೇ ಅನುಸರಿಸಿದ್ದರು. ಅರಸರು ಸಾಮಾನ್ಯವಾಗಿ ರಣ ಕುತೂಹಲಿಗಳಾಗಿಯೂ ಕಲಾಸಕ್ತರಾಗಿಯೂ ಧಾರ್ಮಿಕರಾಗಿಯೂ ಇರುತ್ತಿದ್ದರು. ಅವರಲ್ಲಿ ಮುಖ್ಯರಾದ ಕೆಲವರನ್ನು ಮಾತ್ರ ನಾವು ಸ್ಮರಿಸಿದ್ದೇವೆ. ಕನ್ನಡನಾಡೆಂಬುದು ಪ್ರತ್ಯೇಕ ರೂಪವನ್ನು ತಾಳಿದ ಕಾಲದಲ್ಲಿ ದಕ್ಷಿಣ ಭಾಗದಲ್ಲಿ ಯಶಸ್ವಿಗಳಾಗಿ ಆಳಿದವರು ಇವರೇ. ಗಂಗರಸರ ಮತ್ತು ರಾಷ್ಟ್ರಕೂಟರಸರ ಕಾಲವೇ ಕನ್ನಡದ

ಉನ್ನತಿಯ ಕಾಲ. ಅದ್ಭುತವಾದ ಎಲ್ಲೋರದ ಕೈಲಾಸ ದೇವಾಲಯ ಮತ್ತು ಶ್ರವಣಬೆಳುಗೊಳದ ಗೋಮಟೇಶ್ವರ ವಿಗ್ರಹಗಳಿಗೆ ಸರಿದೂಗುವ ಗ್ರಂಥಗಳನ್ನು ಆದಿಪಂಪ ಮತ್ತು ಪೊನ್ನರು ಈ ಕಾಲದಲ್ಲಿಯೇ ಬರೆದರು. ರಾಜರು ವಿದ್ಯಾವಂತರಿಗೂ ಮತಗುರುಗಳಿಗೂ ಪ್ರೋತ್ಸಾಹ ಕೊಡುತ್ತಿದ್ದುದಲ್ಲದೆ ತಾವೂ ವಿದ್ವಾಂಸರಾಗಿರುತ್ತಿದ್ದರು.

ಹೊಯಿಸಳರು (೧೦೦೦–೧೩೪೦).

ಏಳಿಗೆ.

ಗಂಗವಾಡಿಯು ಚೋಳರಸರ ವಶವಾಗುತ್ತಿದ್ದ ಕಾಲದಲ್ಲಿ ಪಡುವಲ ಮಲೆನಾಡಿನಲ್ಲಿ ಒಂದು ರಾಜ್ಯವು ಉದಯವಾಗುತ್ತಿತ್ತು. ಇದೇ ಹೊಯಿಸಳ ರಾಜ್ಯ. ಸೊಸೆವೂರು ಅಥವಾ ಅಂಗಡಿಯೆಂಬ ಗ್ರಾಮದಲ್ಲಿ ಸಳನೆಂಬಾತನು ಸುದತ್ತನೆಂಬ ಜೈನಯತಿಯ ಆಜ್ಞೆಯಂತೆ ಆ ಊರಿಗೆ ಮಾರಿಯಂತಿದ್ದ ಹುಲಿಯೊಂದನ್ನು ಕಬ್ಬಿಣದ ಸಲಾಕಿಯಿಂದ ಕೊಂದು ಆ ಊರಿನ ಒಡೆಯನಾದನು. ಕ್ರಮೇಣ ಅಕ್ಕಪಕ್ಕ ಗ್ರಾಮಗಳೂ ಆತನ ಒಡೆತನದಲ್ಲಿ ಸೇರಿದವು. ಸಳನ ತರುವಾಯ <u>ನೃಪಕಾಮ</u>ನೆಂಬಾತನು (ಸು. ೧೦೨೨–೧೦೪೭) ಕೊಡಗಿನ ಕಡೆಯಲ್ಲಿ ಆಳುತ್ತಿದ್ದ ಚಂಗಾಳ್ವ ಕುಲದವರನ್ನೂ, ಆತನ ಬಳಿಕ ಆತನ ಮಗ <u>ವಿನಯಾದಿತ್ಯ</u>ನೆಂಬಾತನು (೧೦೪೭–೧೧೦೦) ಆಗ್ನೇಯದಲ್ಲಿ ನವನಾಯಕರ ಪಾಳೆಯವನ್ನೂ ಗೆದ್ದು ರಾಜ್ಯವನ್ನು ಭದ್ರಪಡಿಸಿದರು. ರಾಜ್ಯವು ಹೆಗ್ಗಡದೇವನಕೋಟೆಯಿಂದ ಉತ್ತರದಲ್ಲಿ ಚಾಲುಕ್ಯ ಸಾಮ್ರಾಜ್ಯದ ಗಡಿಯವರೆಗೂ ಹರಡಿತು. ಹಳೇಬೀಡು ಅಥವಾ <u>ದೋರಸಮುದ್ರ</u>ವು ರಾಜಧಾನಿಯಾಯಿತು.

ಚಾಲುಕ್ಯರ ಒಡೆತನ.

ಕನ್ನಡನಾಡಿನಲ್ಲಿ ಆ ಕಾಲದಲ್ಲಿ ಕಲ್ಯಾಣಿಯ ಚಾಲುಕ್ಯರೇ ಶ್ರೇಷ್ಠ ಪ್ರಭುಗಳಾಗಿದ್ದರು. ಚಿಕ್ಕದಾದ ಹೊಯಿಸಳ ರಾಜ್ಯವು ಅವರ ವಿರೋಧವನ್ನು ಕಟ್ಟಿಕೊಳ್ಳುವಂತಿರಲಿಲ್ಲ; ಅವರ ಅನುಗ್ರಹವನ್ನು ಸಂಪಾದಿಸಬೇಕಾಗಿತ್ತು. ಆದ್ದರಿಂದ ಹೊಯಿಸಳರಾಜರು ಚಾಲುಕ್ಯರಾಜರ ಒಡೆತನವನ್ನೊಪ್ಪಿ ಅವರ ಸಾಮಂತರಲ್ಲಿ ಸೇರಿದರು. ಪ್ರಸಿದ್ಧ ಚಾಲುಕ್ಯರಾಜ

ನಾದ ೧ ನೇ ಸೋಮೇಶ್ವರನಿಗೆ (೧೦೪೨–೧೦೬೮) ಹೊಯಿಸಳ ಮಹಾದೇವಿ ಯೆಂದು ಹೆಸರಾದ ಹೊಯಿಸಳ ರಾಜಕುವರಿಯು ರಾಣಿಯಾಗಿದ್ದಳು. ಸೋಮೇಶ್ವರನು ಬಹಳ ಸಮರ್ಥನೆನಿಸಿ ಚೋಳರೊಡನೆ ಕಾದಾಡಿ ೧೦೬೮ ರಲ್ಲಿ ವ್ಯಾಧಿಪೀಡಿತನಾಗಿ ತುಂಗಭದ್ರಾನದಿಯಲ್ಲಿ ಮುಳುಗಿ ದೇಹ ವನ್ನು ಬಿಟ್ಟನು. ಆತನಿಗೂ ಆತನ ಬಳಿಕ ಆಳಿ ಕೀರ್ತಿವಂತನಾದ ೬ನೇ ವಿಕ್ರಮಾದಿತ್ಯ ಅಥವಾ ತ್ರಿಭುವನಮಲ್ಲನಿಗೂ ಹೊಯಿಸಳರು ವಶವರ್ತಿ ಗಳಾಗಿ ಸಹಾಯಮಾಡುತ್ತಿದ್ದರು. ತ್ರಿಭುವನಮಲ್ಲನಿಗೆ (೧೦೭೬–೧೧೨೬) ಹೊಯಿಸಳ ವಂಶದ ಎರೆಯಂಗನೂ, ಅನಂತರ ಮೊದಲನೇ ಬಲ್ಲಾಳನೂ ಅಧೀನರಾಗಿ ತಮ್ಮ ರಾಜ್ಯವನ್ನು ಕಾಪಾಡಿಕೊಂಡರು. ೧೧೦೬ ರಲ್ಲಿ ಮೊದಲನೆ ಬಲ್ಲಾಳನು ತೀರಿಹೋಗಲು ಆತನ ಮಗ ಬಿಟ್ಟಿದೇವನು ಪಟ್ಟ ವನ್ನೇರಿ ಪ್ರಸಿದ್ಧಿಪಡೆದನು. ಹಿಂದೆ ಬಾದಾಮಿಯ ಚಾಲುಕ್ಯರೂ ಪಲ್ಲವರೂ ಹೋರಾಡುತ್ತಿದ್ದಾಗ ಗಂಗರಸರು ಭದ್ರರಾದಂತೆಯೇ ಈಗ ಕಲ್ಯಾಣಿ ಚಾಲುಕ್ಯರ ಮತ್ತು ಚೋಳರಸರ ದ್ವಂದ್ವಕಾಲದಲ್ಲಿ ಹೊಯಿಸಳರು ರಾಜ್ಯ ವನ್ನು ವಿಸ್ತರಿಸಿಕೊಂಡು ಪ್ರಬಲರಾದರು.

ವಿಷ್ಣುವರ್ಧನ (೧೧೧೧–೧೧೪೧).

ತನ್ನ ಪೂರ್ವಜರಂತೆಯೇ ಬಿಟ್ಟಿದೇವನು ಜೈನನಾಗಿದ್ದನು. ಪಟ್ಟ ವನ್ನೇರಿದ ಸ್ವಲ್ಪ ಕಾಲದಲ್ಲಿಯೇ ಶ್ರೀವೈಷ್ಣವ ಮತಸ್ಥಾಪಕರಾದ ರಾಮಾ ನುಜಾಚಾರ್ಯರು ಉಗ್ರ ಶಿವಭಕ್ತರಾಗಿದ್ದ ಚೋಳರಸರ ರಾಜ್ಯದಿಂದ ತಪ್ಪಿ ಸಿಕೊಂಡು ಮೇಲುಕೋಟೆಗೂ, ಅನಂತರ ದೋರಸಮುದ್ರಕ್ಕೂ ಬಂದರು. ಬಿಟ್ಟಿದೇವನ ಆಸ್ಥಾನದಲ್ಲಿ ಜೈನ ಗುರುಗಳಿಗೂ ಆತನಿಗೂ ನಡೆದ ವಾದ ದಲ್ಲಿ ಜೈನರು ಸೋತರು. ಇದಲ್ಲದೆ ಜೈನ ಗುರುಗಳು ರಾಜಗುರುಗ ಳೆಂದು ಹೆಮ್ಮೆಪಡುತ್ತಿದ್ದರು ; ಜೈನಮತದಲ್ಲಿ ಆಚಾರವು ಪ್ರಧಾನವಾಗಿ ತತ್ತ್ವವು ಮುಚ್ಚಿಹೋಗಿತ್ತು. ಈ ಕಾರಣಗಳಿಂದ ಬಿಟ್ಟಿದೇವನು ರಾಮಾ ನುಜಾಚಾರ್ಯರ ಶಿಷ್ಯನಾಗಿ ಶ್ರೀ ವೈಷ್ಣವಮತಕ್ಕೆ ಪ್ರೋತ್ಸಾಹಕೊಟ್ಟನು.

ರಾಜ್ಯವಿಸ್ತಾರ.

ಬಿಟ್ಟಿದೇವ ಅಥವಾ ವಿಷ್ಣುವರ್ಧನನು ರಾಜ್ಯವಿಸ್ತಾರದಲ್ಲಿ ಸಮ ರ್ಥನೂ, ಸಾಹಸಿಯೂ ಆಗಿದ್ದನು. ಆತನ ಸೇನಾಪತಿಗಳೂ ಶೂರರಾ

ಗಿದ್ದು ರಾಜಭಕ್ತರಾಗಿದ್ದರು. ಆ ಕಾಲದಲ್ಲಿ ಕಲ್ಯಾಣಿಯ ಸಾಮ್ರಾಜ್ಯ ದಲ್ಲಿ ಆಡಳಿತವು ಬಿಗಿ ತಪ್ಪಿ ಇತರ ಸಾಮಂತರು ದಂಗೆಯೇಳುತ್ತಿದ್ದುದು ಹೊಯಿಸಳ ರಾಜ್ಯವಿಸ್ತಾರಕ್ಕೆ ಅನುಕೂಲವಾಯಿತು. ಗೋಮಟೇಶ್ವರ ವಿಗ್ರಹಕ್ಕೆ ಸುತ್ತಾಲಯವನ್ನು ಮಾಡಿಸಿದ ಗಂಗರಾಜ ದಂಡನಾಯಕನು ಚೋಳಸಾಮಂತರನ್ನು ಸೋಲಿಸಿ ತಲಕಾಡು ಕೋಲಾರಗಳನ್ನು ಗೆದ್ದನು. ಪುಣಿಸರಾಜನೆಂಬ ಮತ್ತೊಬ್ಬ ದಳಪತಿಯು ನೀಲಗಿರಿ ಪ್ರಾಂತವನ್ನೂ ಉಚ್ಚಂಗಿದುರ್ಗವನ್ನೂ ಗೆದ್ದನು. ಇಂತಹ ಗೆಲವುಗಳಿಂದ ರಾಜ್ಯವು ಕ್ರಮೇಣ ಹಿರಿದಾಗಿ ಸರಿಸುಮಾರಾಗಿ ಬನವಾಸಿ ಪ್ರಾಂತ್ಯವನ್ನುಳಿದು ಮಿಕ್ಕ ಮೈಸೂರು ಪ್ರಾಂತವೆಲ್ಲವನ್ನೂ ಒಳಗೊಂಡಿತು. ಆದರೆ ಚಾಲುಕ್ಯ ಚಕ್ರೇಶ್ವರನ ಸಮಕಕ್ಷಿಯಾಗಿ ನಿಲ್ಲುವಷ್ಟು ಬಲವಿರಲಿಲ್ಲ. ಆ ಕಾರಣದಿಂದ ವಿಷ್ಣುವರ್ಧನನು ಮಹಾ ಮಂಡಲೇಶ್ವರನೆಂಬ ಬಿರುದನ್ನೇ ಧರಿಸಿದ್ದನು.

ಆಳಿಕೆ.

ವಿಷ್ಣುವರ್ಧನನ ಆಸ್ಥಾನವು ಪ್ರಸಿದ್ಧ ಚಮೂಪತಿಗಳಿಂದಲ್ಲದೆ ವಿದ್ವಾಂಸರಿಂದಲೂ ಶೋಭಿಸುತ್ತಿತ್ತು. ನಾಗಚಂದ್ರ, ರಾಜಾದಿತ್ಯ, ಕಂತಿ ಮೊದಲಾದ ಪಂಡಿತರೂ ಕವಿಗಳೂ ಆತನ ಆಶ್ರಯದಲ್ಲಿದ್ದರು. ವೈಷ್ಣವನಾದಾಗ್ಗೂ ವಿಷ್ಣುವರ್ಧನನು ಎಲ್ಲ ಮತಸ್ಥರಲ್ಲಿಯೂ ಸಮಾನವಾದ ವಿಶ್ವಾಸವನ್ನಿಟ್ಟಿದ್ದನು. ಜೈನರಿಗೂ ಬ್ರಾಹ್ಮಣರಿಗೂ ಪಕ್ಷಪಾತವಿಲ್ಲದೆ ದಾನಮಾಡುತ್ತಿದ್ದನು. ಈತನೇ ೧೧೧೭ರಲ್ಲಿ ಬೇಲೂರಿನ ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದವನು. ನಾಲ್ಕು ವರುಷಗಳ ತರುವಾಯ ದೋರಸಮುದ್ರದ ಶ್ರೇಷ್ಠಿಯಾಗಿದ್ದ ಕೇತಮಲ್ಲನೆಂಬಾತನು ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನವನ್ನು ಕಟ್ಟಲಾರಂಭಿಸಿದನು. ಪಟ್ಟಮಹಿಷಿಯಾಗಿದ್ದ ಶಾಂತಲಾದೇವಿಯು ಶ್ರವಣಬೆಳುಗೊಳದಲ್ಲಿ ಸವತಿ ಗಂಧವಾರಣ ಬಸ್ತಿಯನ್ನು ಕಟ್ಟಿಸಿದಳು. ಈ ರೀತಿಯಲ್ಲಿ ವಿಷ್ಣುವರ್ಧನನ ಆಸ್ಥಾನವೂ, ಆಳಿಕೆಯೂ ಹಿರಿಯವೆನಿಸಿದವು. ತೆರಪಿಲ್ಲದೆ ಯುದ್ಧಮಾಡುತ್ತಲಿದ್ದ ಈ ದೊರೆಯು ೧೧೪೧ರಲ್ಲಿ ಬಂಕಾಪುರದಲ್ಲಿ ಕಾಲವಾದನು. ಈತನ ಸಾಮರ್ಥ್ಯದಿಂದಲೇ ಹೊಯಿಸಳ ಸಾಮ್ರಾಜ್ಯಕ್ಕೆ ಅಸ್ತಿಭಾರವು ಸಿದ್ಧವಾಯಿತು. ವಾಸ್ತವವಾಗಿ ಸ್ವತಂತ್ರನಾಗಿದ್ದರೂ ಬನವಾಸಿ ಪ್ರಾಂತಕ್ಕಾಗಿ ಚಾಲುಕ್ಯಸಮ್ರಾಟರೊಡನೆ ಜಗಳ

ವಾಡುತ್ತಲೇ ಇದ್ದುದರಿಂದ ಕಡೆಯವರೆಗೂ ಈತನು ಚಾಲುಕ್ಯರಿಗೆ ಅಧೀನನೆಂದೇ ಗಣ್ಯನಾಗಿದ್ದನು.

೧ ನೇ ನರಸಿಂಹ (೧೧೪೩–೧೧೭೩).

ವಿಷ್ಣುವರ್ಧನನ ತರುವಾಯ ಆತನ ಮಗ ಮೊದಲನೇ ನರಸಿಂಹನು ಪಟ್ಟವೇರಿದನು. ಈತನು ತಂದೆಗೆ ತಕ್ಕ ಮಗನಾಗಿ ರಾಜ್ಯವಿಸ್ತಾರವನ್ನು ಯತ್ನಿಸದೆ ಸೋಮಾರಿಯಾಗಿ, ಸದಾ ಸುಖದಲ್ಲಿ ಮೈಮರೆತಿರುತ್ತಿದ್ದನು. ಇದು ಯುವರಾಜನಾದ ವೀರಬಲ್ಲಾಳನಿಗೆ ಸರಿಬೀಳಲಿಲ್ಲ. ತಂದೆಯ ನಡೆನುಡಿಗಳನ್ನು ಸಹಿಸಲಾರದೆ ವೀರಬಲ್ಲಾಳ ಕುಮಾರನು ಕೆಲವು ರಾಜಾಧಿಕಾರ್ಗಳನ್ನೊಲಿಸಿಕೊಂಡು ಸ್ವತಂತ್ರನಾಗಲು ಯತ್ನಿಸಿದನು. ಹೂವಿನಹಳ್ಳಿಯ ಬಳಿ ತಂದೆಗೂ ಮಗನಿಗೂ ಯುದ್ಧ ಸಂಭವವೇ ಒದಗಿತು. ರಾಜಭಕ್ತಿಭರಿತರಾದ ದಳಪತಿಗಳ ದೆಸೆಯಿಂದ ವಿಪರೀತವು ನಡೆಯದೆ ನಿಂತಿತು. ಹೀಗಿರಲು ೧೧೭೩ ರಲ್ಲಿ ನರಸಿಂಹನು ಮೃತನಾಗಿ ವೀರಬಲ್ಲಾಳನೇ ಪಟ್ಟಾಭಿಷಿಕ್ತನಾದನು. ಸಾಹಸದಲ್ಲಿಯೂ, ಸಾಮರ್ಥ್ಯದಲ್ಲಿಯೂ ತಾತನನ್ನು ಮೀರಿಸಿದ್ದ ವೀರಬಲ್ಲಾಳನು ತೊಂದರೆ ಕೊಡುತ್ತಿದ್ದ ನೆರೆಹೊರೆಯ ಸಣ್ಣಪುಟ್ಟ ರಾಜರನ್ನು ಅಲ್ಪಕಾಲದಲ್ಲಿಯೇ ಅಡಗಿಸಿ, ಬನವಾಸಿ ಪ್ರಾಂತದ ಮೇಲೂ ಶಿಥಿಲವಾಗುತ್ತಿದ್ದ ಚಾಲುಕ್ಯ ಸಾಮ್ರಾಜ್ಯದಮೇಲೂ ಕಣ್ಣಿಟ್ಟನು.

ಇಮ್ಮಡಿ ವೀರಬಲ್ಲಾಳ (೧೧೭೩–೧೨೨೦).

ಚಾಲುಕ್ಯ ಕ್ಷಯ.

ಕಲ್ಯಾಣಿಚಾಲುಕ್ಯರ ಸಾಮ್ರಾಜ್ಯವು ಒಡೆಯಲು ಮೊದಲಾಗಿತ್ತು. ೧೧೪೯ರಲ್ಲಿ ಈಶಾನ್ಯದಲ್ಲಿ ಕಾಕತೀಯರೆಂಬ ಓರುಗಲ್ಲಿನ ರಾಜರು ಚಾಲುಕ್ಯರನ್ನು ವಿರೋಧಿಸಿದರು. ರಾಜನು ದುರ್ಬಲನಾಗಿದ್ದುದನ್ನು ಕಂಡು ಮುಖ್ಯಮಂಡಲೇಶ್ವರನೂ ದಂಡನಾಯಕನೂ ಆಗಿದ್ದ ಕಲಚೂರ್ಯವಂಶದ ಬಿಜ್ಜಳನು ಕಲ್ಯಾಣಿಯನ್ನು ತಾನೇ ಆಕ್ರಮಿಸಿ ತನ್ನ ವಂಶವನ್ನು ಸ್ಥಾಪಿಸಿದನು. ಈತನು ಬನವಾಸಿ ಪ್ರಾಂತವನ್ನು ತಾನೇ ಆಳುತ್ತಿದ್ದು ಹೊಯ್ಸಳರಿಗೆ ಅವಕಾಶವಿಲ್ಲದಂತೆ ಮಾಡಿದ್ದನು. ಆದರೆ ಶೂರನಾದ ಬಿಜ್ಜಳನು ವೀರಶೈವ ಮತದ ಉದ್ಭವದ ವೇಳೆಯಲ್ಲಿ ದುರ್ಮರಣಕ್ಕೆ ತುತ್ತಾದನು ;

ಆತನ ಮಗನಿಗೆ ಕಾಕತೀಯರೇ ಅಲ್ಲದೆ ಚಾಲುಕ್ಯರ ಪರವಾಗಿ ಹೋರಾಡಲು ಸಿದ್ಧನಾದ ಬ್ರಹ್ಮದಂಡೇಶನೆಂಬಾತನೂ ವಿರೋಧಿಯಾದನು. ಈ ಸಮಯದಲ್ಲಿ ಸಾಮ್ರಾಜ್ಯದ ಉತ್ತರಭಾಗದಲ್ಲಿ ಸಾಮಂತರಾಗಿದ್ದ ದೇವಗಿರಿಯ ಯಾದವರು ಸ್ವತಂತ್ರರಾದರು. ಹೊಂಚುತ್ತಿದ್ದ ವೀರಬಲ್ಲಾಳನೂ ಅದೇ ಸಮಯವನ್ನು ಸಾಧಿಸಿ ತಾನೂ ಸ್ವತಂತ್ರನಾದನು. ಉತ್ತರದಲ್ಲಿ ಪ್ರಬಲರಾಗಿದ್ದ ಯಾದವ ಅಥವಾ ಸೇವುಣಕುಲದರಸರಿಗೂ, ದಕ್ಷಿಣದಲ್ಲಿ ಪ್ರಬಲರಾಗಿದ್ದ ಹೊಯ್ಸಳರಿಗೂ ಪರಸ್ಪರವಾಗಿ ಸ್ಪರ್ಧೆಯು ಮೊದಲಾಯಿತು. ಇಬ್ಬರ ಮಧ್ಯೆ ಕಲ್ಯಾಣಿಯ ಚಾಲುಕ್ಯರ ಸಾಮ್ರಾಜ್ಯವು ಧ್ವಂಸವಾಯಿತು.

ಯಾದವರ ಸ್ಪರ್ಧೆ.

ಬನವಾಸಿಗಾಗಿ ಆಸೆಪಡುತಲಿದ್ದ ವೀರಬಲ್ಲಾಳನು, ಬಿಜ್ಜಳನು ಜೀವದಿಂದಿದ್ದವರೆಗೂ ತಟಸ್ಥನಾಗಿದ್ದನು. ಬಿಜ್ಜಳನು ಸತ್ತಕೂಡಲೆ ವೀರಬಲ್ಲಾಳನು ಬ್ರಹ್ಮದಂಡಾಧಿಪತಿಯನ್ನು ವಿರೋಧಿಸಿ ೧೧೮೪ರಲ್ಲಿ ಸೋಲಿಸಿದನು. ಅನಂತರ ೧೧೮೭ರಲ್ಲಿ ದಂಡೆತ್ತಿಬಂದ ಯಾದವ ಭಿಲ್ಲಮದೇವನನ್ನು ಸೋಲಿಸಿದನು. ಪುನಃ ಭಿಲ್ಲಮನು ತನ್ನ ಮಗ ಜೈತುಗಿಯನ್ನು ಸೇನೆಯೊಡನೆ ಕಳುಹಿಸಲು ವೀರಬಲ್ಲಾಳನು ಆತನನ್ನೂ ಸೋಲಿಸಿ, ಬನವಾಸಿ, ಸಿಂದವಾಡಿ, ಹಾನುಂಗಲ್ಲು ಪ್ರಾಂತಗಳು ತನ್ನ ವಶದಲ್ಲಿಯೇ ಸ್ಥಿರವಾಗಿರುವಂತೆ ಲೊಕ್ಕಿಗುಂಡಿಯನ್ನು ಹಿಡಿದನು. ೧೧೯೧ರಲ್ಲಿ ಭಿಲ್ಲಮನು ದೊಡ್ಡ ಸೈನ್ಯವನ್ನು ಸಜ್ಜುಗೊಳಿಸಿ ಕಳುಹಿಸಲು ವೀರಬಲ್ಲಾಳನು ಗದುಗಿನ ಬಳಿ ಸೊರಟೂರೆಂಬಲ್ಲಿ ಆ ದಳವನ್ನು ಚೆನ್ನಾಗಿ ಸೋಲಿಸಿ ಯಾದವ ಸೇನಾಪತಿಯನ್ನು ಕೃಷ್ಣಾನದಿಯವರೆಗೂ ಅಟ್ಟಿದನು. ಸೊರಟೂರ ಕದನದ ಫಲವಾಗಿ ಕೃಷ್ಣಾನದಿಯೇ ಉತ್ತರದ ಮೇರೆಯಾಯಿತು. ಈ ರೀತಿಯಲ್ಲಿ ವೀರಬಲ್ಲಾಳನು ಕ್ಷಿಪ್ರತೆಯಿಂದ ಸನ್ನಾಹಪಟ್ಟು ರಾಜ್ಯವನ್ನು ಕೃಷ್ಣಾನದಿಯವರೆಗೂ ವಿಸ್ತರಿಸಿದನು.

ವೀರಬಲ್ಲಾಳನ ಕಾಲ.

ವೀರಬಲ್ಲಾಳನು ಶೈವ ಮತವನ್ನವಲಂಬಿಸಿದ್ದನು. ಖ್ಯಾತನಾದ ಶಿವಶಕ್ತಿ ಪಂಡಿತನು ಆತನ ಗುರುವಾಗಿದನು. ಬೆಟ್ಟದರಸ, ಕಮೆಯ ನಾಯಕ ಮುಂತಾದ ದಂಡನಾಯಕರೂ, ಕೆರೆಗಳನ್ನು ಕಟ್ಟಿಸುವುದರಲ್ಲಿ

ಹೆಸರುಪಡೆದ ಕೆರೆಯ ಪದ್ಮರಸನೂ ಆತನ ಆಸ್ಥಾನದಲ್ಲಿದ್ದವರು. ಕೆರೆಯ ಪದ್ಮರಸನಲ್ಲದೆ ನೇಮಿಚಂದ್ರ, ರುದ್ರಭಟ್ಟ ಮುಂತಾದ ಉತ್ತಮ ಕವಿಗಳೂ ಈ ದೊರೆಯ ಆಶ್ರಯದಲ್ಲಿದ್ದು, ರಾಜನ ಆಸ್ಥಾನಕ್ಕೆ ಪ್ರಶಸ್ತಿಯನ್ನುಂಟು ಮಾಡಿದರು. ದೊರೆಗೆ ಸಾಕುಮಗನಂತಿದ್ದ ಕುವರಲಕ್ಷ್ಮನೆಂಬಾತನು ವೀರರಲ್ಲಿ ಅಗ್ರಗಣ್ಯನಾಗಿದ್ದನು. ವೀರನಾದ ದೊರೆಗೆ ತಕ್ಕಂತೆ ವೀರರೂ ಉದಾರಿಗಳೂ ಆದ ಅಧಿಕಾರಿಗಳೂ ಆಸ್ಥಾನಿಕರೂ ಇದ್ದರು. ಈ ವೀರ ಬಲ್ಲಾಳನೇ ಹೊಯಿಸಳ ಸಾಮ್ರಾಜ್ಯವನ್ನು ಕಟ್ಟಿದವನು.

ಇಮ್ಮಡಿ ನರಸಿಂಹ (೧೨೧೭–೧೨೩೫)

೧೨೨೦ ರಲ್ಲಿ ವೀರಬಲ್ಲಾಳನು ತೀರಿಹೋದನು ; ಯುವರಾಜನಾಗಿದ್ದ ಇಮ್ಮಡಿ ನರಸಿಂಹನು ರಾಜನಾದನು. ಈತನ ಕಾಲದಲ್ಲಿ ತೆಂಕಲಲ್ಲಿ ರಾಜ್ಯ ವಿಸ್ತಾರವಾಯಿತು. ಉತ್ತರದಲ್ಲಿ ಚಾಲುಕ್ಯರಿಗೊದಗಿದ ಪಾಡೇ ದಕ್ಷಿಣದಲ್ಲಿ ಚೋಳರಸರಿಗೊದಗಿತ್ತು. ನರಸಿಂಹನು ಚೋಳರಾಜನ ಸಂಬಂಧವನ್ನು ಕಟ್ಟಿ ಆತನಿಗೆ ಸಹಾಯಮಾಡುವ ಸಂದರ್ಭದಲ್ಲಿ ಬಾಣರಾಜ್ಯ ಅಥವಾ ಮಹಾರಾಜವಾಡಿಯೆಂಬ ಪ್ರದೇಶವೆಲ್ಲವನ್ನೂ ತನ್ನ ಆಳಿಕೆಯಲ್ಲಿ ಸೇರಿಸಿಕೊಂಡನು. ಮತ್ತು ಚೋಳರಾಜನಿಗೆ ಹಗೆಗಳಾಗಿದ್ದ ಪಲ್ಲವರನ್ನೂ ಪಾಂಡ್ಯರನ್ನೂ ಶಿಕ್ಷಿಸಲು ಮೂಡಲಲ್ಲಿ ಕಾಂಚೀಪುರ ಮತ್ತು ತೆಂಕಲಲ್ಲಿ ರಾಮೇಶ್ವರಗಳವರೆಗೂ ದಾಳಿಯಿಟ್ಟು ರಾಮೇಶ್ವರದಲ್ಲಿ ಜಯಸ್ತಂಭವನ್ನು ನೆಡಿಸಿದನು. ಯುದ್ಧದಲ್ಲಿ ಇಷ್ಟು ಪರಾಕ್ರಮಿಯಾಗಿದ್ದ ವೀರನರಸಿಂಹ ರಾಜನ ಆಶ್ರಯದಲ್ಲಿ ಅನೇಕ ವೀರರೂ, ವಿದ್ವಾಂಸರೂ ಇದ್ದರು. ಆತನ ಕಾಲದಲ್ಲಿಯೇ ಹರಿಹರದಲ್ಲಿರುವ ಹರಿಹರೇಶ್ವರ ದೇವಾಲಯವು ನಿರ್ಮಾಣವಾಯಿತು.

ವೀರಸೋಮೇಶ್ವರ (೧೨೩೪–೧೨೬೨).

ಈ ರೀತಿಯಲ್ಲಿ ನರಸಿಂಹನು ದಕ್ಷಿಣದಲ್ಲಿ ಯುದ್ಧಾಸಕ್ತನಾಗಿದ್ದಾಗ ಯಾದವರು ಅದೇ ಸಮಯವೆಂದು ದಂಡೆತ್ತಿ ಬಂದರು. ಆದರೆ ಯುವರಾಜ ವೀರಸೋಮೇಶ್ವರನು ಅವರನ್ನು ಸೋಲಿಸಿ ಉತ್ತರದ ಮೇರೆಯನ್ನು ಕಾಪಾಡಿದನು. ೧೨೩೫ ರಲ್ಲಿ ನರಸಿಂಹನು ಮೃತನಾಗಲು ವೀರಸೋಮೇಶ್ವರನು ರಾಜನಾಗಿ ತಂದೆಯ ಕಾರ್ಯವನ್ನು ಮುಂದುವರಿಸಿದನು.

ಚೋಳರಾಜ್ಯವನ್ನು ಹೊಕ್ಕು ಸಮಯ ದೊರೆತಂತೆ ಒಂದು ಸಲ ಚೋಳ ವಂಶದವರೊಡನೆಯೂ, ಮತ್ತೊಂದು ಸಲ ಪಾಂಡ್ಯರಾಜನೊಡನೆಯೂ ಸ್ನೇಹಕಟ್ಟಿ ತನ್ನ ಪ್ರಾಬಲ್ಯವನ್ನು ಸ್ಥಾಪಿಸಿದನು. ಈ ರಾಜನು ಯುದ್ಧ ಮಾಡುತ್ತಲೇ ಮಡಿದನು. ಆ ಕೂಡಲೆ ಬಿಜ್ಜಲದೇವಿಯೆಂಬ ರಾಣಿಯ ಮಗನಾದ ಮುಮ್ಮಡಿ ನರಸಿಂಹನಿಗೂ, ದೇವಲದೇವಿಯೆಂಬ ರಾಣಿಯ ಮಗನಾದ ರಾಮನಾಥನಿಗೂ ರಾಜ್ಯವು ಭಾಗವಾಯಿತು.

ರಾಜ್ಯವಿಭಾಗ.

ಈ ವಿಭಾಗವು ಸಾಮ್ರಾಜ್ಯದಲ್ಲಿ ದೌರ್ಬಲ್ಯಕ್ಕೆ ಕಾರಣವಾಯಿತು. ಮುಮ್ಮಡಿ ನರಸಿಂಹನು ದೋರಸಮುದ್ರದ ನೆಲೆವೀಡಿನಿಂದ ಪಡುವಣ ಭಾಗವನ್ನೂ, ರಾಮನಾಥನು ಕಣ್ಣಾನೂರು ಕುಂದಾಣಿಗಳ ನೆಲೆವೀಡು ಗಳಿಂದ ಮೂಡಲ ಭಾಗವನ್ನೂ ಆಳಲು ಮೊದಲಿಟ್ಟರು.

ಸೋದರಕಲಹ

ಸೋದರರು ಪರಸ್ಪರ ಅಸೂಯೆಪಡುತ್ತಿದ್ದರು. ಅದನ್ನರಿತ ಯಾದವ ಚಕ್ರವರ್ತಿ ರಾಮಚಂದ್ರ ದೇವನು ದೊಡ್ಡದಂಡನ್ನು ೧೨೭೬ರಲ್ಲಿ ದೋರಸಮುದ್ರದ ಮೇಲೆ ಕಳುಹಿಸಿದನು. ಯಾದವ ದಳಪತಿ ಸಾಳುವ ತಿಕ್ಕಮನು ನುಗ್ಗಿಬಂದು ಬೆಳವಾಡಿಯೆಂಬಲ್ಲಿ ಪಾಳೆಯಹಾಕಿ ದೋರಸಮು ದ್ರದ ಮುತ್ತಿಗೆಗೆ ಅಣಿಯಾದನು. ರಾಜಭಕ್ತನೂ, ಶೂರನೂ ಆಗಿದ್ದ ಮಾಲೆದೇವನೆಂಬ ದಂಡನಾಯಕನ ಶೌರ್ಯದಿಂದ ರಾಜಧಾನಿಯುಳಿ ಯಿತು. ರಾಮನಾಥನು ಇದರಿಂದ ಅಸಮಾಧಾನಪಟ್ಟು ಸೋದರನ ಮೇಲೆ ತಾನೇ ಯುದ್ಧಕ್ಕೆ ಬಂದನು. ಸೊರೆಯೂರೆಂಬಲ್ಲಿ ಇಬ್ಬರೂ ಕದನಕ್ಕೆ ಸಿದ್ಧರಾದರು ; ಆಗ ಮಾಲೆದೇವನು ಬಂದು ಸಮಾಧಾನಪಡಿಸಿ ಸೋದರ ಕಲಹವನ್ನು ನಿಲ್ಲಿಸಲು ಪ್ರಯತ್ನಿಸಿದನು. ಆದರೆ ಸೋದರರು ಆತನನ್ನು ಲಕ್ಷ್ಯಮಾಡದೆ ಪದೇಪದೇ ಹೆಣಗಾಡಿದರು. ರಾಜ್ಯವಿಸ್ತಾರದಲ್ಲಿಯೂ, ವಿರೋಧಿನೃಪರ ನಿಗ್ರಹದಲ್ಲಿಯೂ ವೆಚ್ಚವಾಗಬೇಕಾಗಿದ್ದ ಬಲವು ಒಡಹುಟ್ಟಿ ದವರ ಕಾಳೆಗದಲ್ಲಿ ವೆಚ್ಚವಾಗುತ್ತಿತ್ತು. ಐಕಮತ್ಯ ತಪ್ಪಿ ಶತ್ರುಗಳಿಗೆ ಅನು ಕೂಲವಾಯಿತು. ಮಾಲೆದೇವನಂತಹ ಪ್ರಭು ಭಕ್ತ ಶೂರರ ದೆಸೆಯಿಂದ

ರಾಜ್ಯಕ್ಕೆ ಹೆಚ್ಚುಹಾನಿಯಾಗದೆ ನಿಂತಿತು. ಸೋಮನಾಥಪುರದಲ್ಲಿ ಸರ್ವಾಂಗಸುಂದರವೆನಿಸಿರುವ ದೇವಾಲಯವನ್ನು ಕಟ್ಟಿಸಿದ ಸೋಮ ದಂಡಾಧಿಪತಿಯು ಮಾಲೆದೇವನ ಸಮಕಾಲಿಕನಾಗಿದ್ದು ದೇಶವನ್ನು ರಕ್ಷಿಸಿದನು. ಇಂತಹ ಪರಾಕ್ರಮಿಗಳು ಸ್ವತಂತ್ರರಾಗಲು ಪ್ರಯತ್ನಿಸದಿದ್ದುದು ಅವರ ಭಕ್ತಿಯನ್ನೂ, ವೀರಬಲ್ಲಾಳ ವೀರನರಸಿಂಹರ ಮಹತ್ವವನ್ನೂ ಸೂಚಿಸುತ್ತದೆ.

ಮುಮ್ಮಡಿ ಬಲ್ಲಾಳ ೧೨೯೧–೧೩೪೨.

ಮುಮ್ಮಡಿ ನರಸಿಂಹನ ತರುವಾಯ ಮುಮ್ಮಡಿ ಬಲ್ಲಾಳನು ದೋರಸಮುದ್ರದಲ್ಲಿ ಅಭಿಷಿಕ್ತನಾದನು. ಈತನೇ ಹೊಯಿಸಳರಾಜರಲ್ಲಿ ಕಡೆಯವನು ; ೧೨೯೧ ರಿಂದ ೧೩೪೨ ರವರೆಗೆ ಆಳಿ ವೀರರಗುಂಪಿನಲ್ಲಿ ಸೇರಿ ವೀರ ಮರಣವನ್ನು ಪಡೆದವನು. ರಾಮನಾಥನು ೧೨೯೪ ರಲ್ಲಿ ಸಾಯಲು ಸೋಗರಕಲಹದ ತೊಂದರೆಯು ಕಡಿಮೆಯಾಯಿತು ; ಆದರೆ ಬೇರೊಂದು ಕಡೆಯಿಂದ ಘೋರವಾದ ವಿಪತ್ತು ಘಟಿಸಿತು.

ಅಲ್ಲಾವುದ್ದೀನ್‍ಖಿಲ್ಜಿ—ಕಾಫೂರನ ದಂಡಯಾತ್ರೆ.

ದಿಲ್ಲಿಯಲ್ಲಿ ೧೨೦೬ ರಲ್ಲಿ ತುರುಷ್ಕರು ರಾಜ್ಯಕಟ್ಟಿದರು. ಖಿಲ್ಜಿ ವಂಶದವರು ಪಟ್ಟದಲ್ಲಿ ಕುಳಿತಮೇಲೆ ಆ ವಂಶದಲ್ಲಿ ಹುಲಿಯಂತೆ ಹುಟ್ಟಿದ್ದ ಅಲ್ಲಾವುದ್ದೀನನು ೧೨೯೪ ರಲ್ಲಿ ಅಕಸ್ಮಾತ್ತಾಗಿ ದೇವಗಿರಿಯೆದುರಿನಲ್ಲಿ ಬಂದು ರಾಮಚಂದ್ರದೇವನನ್ನು ಪುಸಲಾಯಿಸಿ ಹೇರಳವಾದ ಕೊಳ್ಳೆಯನ್ನು ಪಡೆದಿದ್ದನು. ಸುಲತಾನನಾದ ಮೇಲೆ ಈತನು ಉತ್ತರ ದೇಶದಲ್ಲಿ ಅದ್ವಿತೀಯನಾಗಿ ದಕ್ಷಿಣಾಪಥವನ್ನು ಜಯಿಸಲು ಸನ್ನಾಹಪಟ್ಟು ದೇವಗಿರಿಯ ಯಾದವರನ್ನೂ ಓರುಗಲ್ಲಿನ ಕಾಕತೀಯರನ್ನೂ ಸೋಲಿಸಿದನು. ಆತನ ಪ್ರಸಿದ್ಧ ದಳಪತಿ ಮಾಲಿಕ್ಕಾಫೂರನು ೧೩೧೦ ರಲ್ಲಿ ಓರುಗಲ್ಲಿನ ರಾಜನಿಂದ ಕಪ್ಪಕಾಣಿಕೆಗಳನ್ನು ಸ್ವೀಕರಿಸಿ, ಹನ್ನೆರಡು ದಿನ ತೆರಪಿಲ್ಲದೆ ಪ್ರಯಾಣಮಾಡಿ, ದೋರಸಮುದ್ರದೆದುರಿನಲ್ಲಿ ಹಟಾತ್ತಾಗಿ ಗೋಚರನಾಗಿ ಬೀಡನ್ನು ಬಿಟ್ಟನು. ಗತ್ಯಂತರವಿಲ್ಲದೆ ಬಲ್ಲಾಳನು ಸಂಧಿ ಪ್ರಯತ್ನಮಾಡಿ ಹೇರಳವಾದ ಧನವನ್ನೊಪ್ಪಿಸಿ ತನ್ನ ಹಿರಿಯಮಗನನ್ನು ದಿಲ್ಲಿಗೆ ಕಳುಹಿಸಲೊಪ್ಪಿದನು. ಕಾಫೂರನು ದಕ್ಷಿಣಕ್ಕೆ ಹೊರಟು ಮಧುರೆಯಲ್ಲಿ ಒಂದು ದಳವನ್ನು ನಿಲ್ಲಿಸಿ ಹಿಂತಿರುಗಿದನು.

ಬಲ್ಲಾಳನ ಸನ್ನಾಹ.

ಈ ದುರ್ಘಟನೆಯಿಂದ ಬಲ್ಲಾಳನಿಗೆ ಚೋಳ ಪಾಂಡ್ಯರಾಜ್ಯಗಳಲ್ಲಿ ಯುದ್ಧ ನಡೆಸುವ ಯೋಚನೆಯು ದೂರವಾಗಿ ಸ್ವಂತರಾಜ್ಯದ ಭದ್ರತೆಯ ಚಿಂತೆ ಹತ್ತಿತು. ದೋರಸಮುದ್ರದ ಕೋಟೆಯನ್ನು ಬಲಪಡಿಸಿ ರಾಜ್ಯದ ಎಲ್ಲೆಗಳಲ್ಲಿ ದುರ್ಗಗಳನ್ನು ಕಟ್ಟಿಸಲು ಆತನು ತೊಡಗಿದನು. ಇಷ್ಟರಲ್ಲಿ ಕೇರಳ ರಾಜನು ಮಧುರೆಯಲ್ಲಿದ್ದ ತುರುಷ್ಕರ ದಂಡನ್ನು ಸೋಲಿಸಿದನು. ಸೋತ ತುರುಷ್ಕರಿಂದ ತೆಂಕಲಲ್ಲಿ ಹಾನಿ ತಟ್ಟದಂತೆ ಬಲ್ಲಾಳನು ೧೩೨೮ರಲ್ಲಿ ತಿರುವಣ್ಣಾಮಲೆಯ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದನು.

ಈ ವೇಳೆಯಲ್ಲಿ ಮಹಮ್ಮದ್ ಬಿನ್ ತಘಲಖನೆಂಬ ಪ್ರಸಿದ್ಧ ಸುಲತಾನನು ದಿಲ್ಲಿಯಲ್ಲಿ ಆಳುತ್ತಿದ್ದನು. ಈತನು ದಖನ್ನೆಲ್ಲವನ್ನೂ ಸ್ವಾಧೀನಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದ ೧೩೨೮ ರಲ್ಲಿ ದಂಡೆತ್ತಿ ಬಂದುದಲ್ಲದೆ ದೇವಗಿರಿಯನ್ನೇ ರಾಜಧಾನಿಯಾಗಿ ಮಾಡಲು ಉದ್ದೇಶಿಸಿದನು. ಆ ಉದ್ದೇಶವು ನೆರವೇರಲಿಲ್ಲ ; ಮತ್ತು ಆತನ ಆಳಿಕೆಯಲ್ಲಿ ದಿಲ್ಲಿಯ ಸಾಮ್ರಾಜ್ಯವೇ ಒಡೆದು ಅಲ್ಲಲ್ಲಿ ದಳಪತಿಗಳೂ, ಸಾಹಸಿಗಳೂ ಸ್ವತಂತ್ರರಾಗುವಂತಾಯಿತು. ಆಗ ಮಧುರೆಯಲ್ಲಿ ಘಯಾಸುದ್ದೀನನೆಂಬಾತನು ಸ್ವತಂತ್ರನಾಗಿ ಸುಲತಾನನೆಂದು ಕರೆಯಿಸಿಕೊಂಡು ರಾಜ್ಯವನ್ನು ಕಟ್ಟಲು ಉದ್ಯುಕ್ತನಾದನು. ತಿರುವಣ್ಣಾಮಲೆಯಲ್ಲಿ ದುರ್ಗವನ್ನೂ ಪಡೆವೀಡನ್ನೂ ನಿರ್ಮಿಸಲು ಸನ್ನಾಹಪಡುತ್ತಿದ್ದ ಬಲ್ಲಾಳನಿಗೂ ಈ ಘಯಾಸುದ್ದೀನನಿಗೂ ತಿರುಚಿನಾಪಳ್ಳಿಯ ಬಳಿ ಕೊಪ್ಪವೆಂಬೆಡೆಯಲ್ಲಿ ಕಾಳಗವು ರೇಗಿತು. ಬಲ್ಲಾಳನು ತುರುಷ್ಕರ ದಂಡನ್ನು ಸೋಲಿಸಿ ಮಧುರೆಯವರೆಗೂ ಅವರನ್ನಟ್ಟಲು ಸಿದ್ಧನಾದನು. ಎಂಭತ್ತು ವರ್ಷದ ಮುದುಕನಾಗಿದ್ದ ಬಲ್ಲಾಳನು ತರುಣನಂತೆ ಯುದ್ಧವಾಡುತ್ತಿದ್ದುದನ್ನು ಕಂಡು ತುರುಷ್ಕರು ಉಪಾಯವನ್ನು ಯೋಚಿಸಿ, ಮೊದಲು ನಮ್ರತೆಯನ್ನು ನಟಿಸಿ, ಆ ಮೇಲೆ ಬಲ್ಲಾಳನು ಅಜಾಗರೂಕನಾಗಿದ್ದ ಸಮಯದಲ್ಲಿ ಅಕಸ್ಮಾತ್ತಾಗಿ ಮೇಲೆ ಬಿದ್ದು ಆತನನ್ನು ಸೆರೆಪಿಡಿದೊಯ್ದು, ಮಧುರೆಯಲ್ಲಿ ಆತನ ಭೂಷಣಗಳನ್ನು ಸುಲಿದುಕೊಂಡು, ಆತನನ್ನು ಕೊಲ್ಲಿಸಿ, ಕಡೆಗೆ ಆತನ ದೇಹವನ್ನು ಊರಬಾಗಿಲ ಬಳಿ ತೂಗಾಡಿಸಿದರು. ಈ ಕೊಪ್ಪದ ಕಾಳಗವು ೧೩೪೨ ರಲ್ಲಿ ನಡೆಯಿತು.

ರೂಪಾಂತರ.

ಇದಕ್ಕೆ ಮೊದಲೇ ಉತ್ತರದ ಗಡಿಯ ಭದ್ರತೆಗಾಗಿ ಹಂಪೆಯ ಬಳಿ ಹೊಸಪಟ್ಟಣ ಅಥವಾ ವೀರ ವಿಜಯ ವಿರೂಪಾಕ್ಷಪುರಿ ಎಂಬುದನ್ನು ಕಟ್ಟಿಸಿ ಬಲ್ಲಾಳನು ದಿಲ್ಲಿಯಿಂದ ಹಿಂತಿರುಗಿ ಬಂದಿದ್ದ ಕುಮಾರನಿಗೆ ಯೌವ ರಾಜ್ಯಾಭಿಷೇಕವನ್ನು ಮಾಡಿಸಿದ್ದನು. ಈತನು ನಾಲ್ಮಡಿ ಬಲ್ಲಾಳನೆನಿಸಿ ರಾಜ್ಯವನ್ನು ರೂಡಿಸಿಕೊಳ್ಳಲು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ರಾಜ್ಯವು ಛಿದ್ರಛಿದ್ರವಾಗುತ್ತಲಿತ್ತು. ಅದೇ ಸಮಯದಲ್ಲಿ ತುಂಗಭದ್ರಾತೀರ ದಲ್ಲಿ ವಿಜಯನಗರವು ಸ್ಥಾಪಿತವಾಗಿ ಹಿಂದೂಗಳ ಸಾಮ್ರಾಜ್ಯರೂಪವಾಗಿ ಬಳೆಯಲಾರಂಭವಾಯಿತು.

ಈ ರೀತಿಯಲ್ಲಿ ೩೦೦ ವರ್ಷಗಳು ಕೀರ್ತಿಯಿಂದ ಮೆರೆದು ಮೈಸೂ ರನ್ನು ಒಟ್ಟುಗೂಡಿಸಿ ಕನ್ನಡ ಸಾಹಿತ್ಯದ ವೃದ್ಧಿಗೂ, ಲಲಿತಕಲೆಗಳ ಉತ್ಕ ರ್ಷೆಗೂ ಆಶ್ರಯವಾಗಿ ರಂಜಿಸಿದ ಹೊಯಿಸಳ ರಾಜ್ಯವು ಮುಳುಗಿತು. ಹೊಯಿಸಳರ ಕಾಲವು ನಿಜವಾಗಿಯೂ ವೀರಯುಗವಾಗಿದ್ದಿತು. ಅದರ ವಿವರವು ಮನೋರಂಜಕವಾದುದು.

ಹೊಯಿಸಳರ ಕಾಲಸ್ಥಿತಿ (೯೦೦–೧೩೦೦).

ಸಾಮ್ರಾಜ್ಯಸ್ಪರ್ಧೆ.

ಒಟ್ಟು ಈ ಕಾಲದಲ್ಲಿ ಪ್ರಸ್ಥಭೂಮಿಯಲ್ಲಿ ಆಳುತ್ತಿದ್ದ ರಾಜವಂಶ ಗಳಿಗೂ ಪೂರ್ವತೀರಪ್ರದೇಶದಲ್ಲಿ ಆಳುತ್ತಿದ್ದ ಪ್ರಭುಗಳಿಗೂ ದಖನ್ನಿನ ಸಾಮ್ರಾಜ್ಯಕ್ಕಾಗಿ ಸ್ಪರ್ಧೆ ನಡೆಯುತಲಿತ್ತು. ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು ಪಶ್ಚಿಮದಲ್ಲಿ ಒಬ್ಬರ ತರು ವಾಯ ಒಬ್ಬರು ಆಳುತ್ತಿದ್ದು, ಮೂಡಲಲ್ಲಿ ಆಳಿದ ಪಲ್ಲವ ಮತ್ತು ಚೋಳ ಕುಲದ ಅರಸರೊಡನೆ ಕಾದಾಡುತ್ತಿದ್ದರು. ಇವರ ಮಧ್ಯೆ ಕದಂಬ, ನೊಳಂಬ, ಬಾಣರಾಜರಂತಹ ಕಿರಿಯರಸರು ಸಾಮಂತರಾಗಿರುತ್ತಿದ್ದರು. ದಕ್ಷಿಣಮೂಲೆಯಲ್ಲಿ ಹುಟ್ಟಿ ಬಳೆದ ಗಂಗರಸರು ಮಾತ್ರ ಸ್ಥಾನಬಲದಿಂದ ಸ್ವತಂತ್ರರಾಗಿದ್ದರು. ಹೊಯಿಸಳರು ಮೊದಲು ಸಾಮಂತರಾಗಿದ್ದು ಅನಂತರ ಸ್ವತಂತ್ರರಾದರು. ಮೈಸೂರು ಪ್ರದೇಶದಲ್ಲಿ ಆಳಿದವರಲ್ಲಿ ಇವರಿಬ್ಬರೇ ಕೀರ್ತಿವಂತರು. ಗಂಗರಸರು ಬಯಲುನಾಡಿನಲ್ಲಿ ಆಳಿದ

ವರು ; ಹೊಯಿಸಳರು ಮೊದಲು ಮಲೆನಾಡಿನಲ್ಲಿ ರಾಜ್ಯಕಟ್ಟಿ ತರುವಾಯ ಸಾಮ್ರಾಜ್ಯವನ್ನು ಕಟ್ಟಿದವರು.

ಕನ್ನಡನಾಡು.

ಕನ್ನಡ ನಾಡೆಂಬುದು ಸಿದ್ಧವಾದುದು ಈ ಕಾಲದಲ್ಲಿಯೇ. ಶಾತವಾಹನರ ಕಾಲದಲ್ಲಿ ಪ್ರಾಕೃತವೇ ಇದ್ದಿತು. ಗಂಗರಸರ ಮತ್ತು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಕನ್ನಡ ನುಡಿಯು ಪ್ರತ್ಯೇಕವಾಗಿ ರೂಪಗೊಂಡು ತಲೆಯೆತ್ತಿತು. ಪ್ರಸ್ಥಭೂಮಿಯ ಪಡುವಣಭಾಗವೆಲ್ಲವೂ ಕ್ರಮೇಣ ಕನ್ನಡ ನಾಡೆನಿಸಿ ಸ್ಥೂಲವಾಗಿ ಗೋದಾವರಿಯಿಂದ ಕಾವೇರಿಯ ವರೆಗೆ ಹರಡಿತ್ತು. ಅದರ ದಕ್ಷಿಣ ಭಾಗದಲ್ಲಿ ಬನವಾಸಿ, ನೊಳಂಬವಾಡಿ ಮತ್ತು ಗಂಗವಾಡಿಗಳೆಂಬುವು ಮುಖ್ಯಭಾಗಗಳಾಗಿದ್ದವು. ಬನವಾಸಿ, ಕಿತ್ತೂರು, ಕೋಲಾರ, ತಲಕಾಡು, ಮಾನ್ಯಪುರ, ದೋರಸಮುದ್ರ, ಪೊಂಬುಚ್ಚ, ಉಚ್ಚಂಗಿ, ಹೇಮಾವತಿಗಳು ರಾಜಧಾನಿಗಳಾಗಿ ಪಟ್ಟಣಗಳಾಗಿದ್ದವು; ಶ್ರವಣಬೆಳುಗೊಳ, ಬಳ್ಳಿಗಾವೆ, ಶೃಂಗೇರಿಗಳು ಪುಣ್ಯಸ್ಥಳಗಳೂ ವಿದ್ಯಾಪೀಠಗಳೂ ಆಗಿ ಪಟ್ಟಣಗಳಾಗಿದ್ದವು. ಇನ್ನು ಕೆಲವು ಪಡೆವೀಡುಗಳಾಗಿಯೋ ವ್ಯಾಪಾರ ಕ್ಷೇತ್ರಗಳಾಗಿಯೋ ಮುಖ್ಯವೆನಿಸಿದ್ದವು. ಇವು ಹೊರತು ಉಳಿದವೆಲ್ಲವೂ ಗ್ರಾಮಗಳೇ. ಗ್ರಾಮಗಳಲ್ಲಿ ಚಿಕ್ಕವೂ ದೊಡ್ಡವೂ ಇದ್ದವು; ದೊಡ್ಡದಾಗುತ್ತ ಗ್ರಾಮವಾಗಿದ್ದುದು ಪಟ್ಟಣವೆನಿಸುತ್ತಿತ್ತು.

ಆಡಳಿತ.

ರಾಜನು ಸಾಧಾರಣವಾಗಿ ರಾಜಧಾನಿಯಲ್ಲಿ ಅರಮನೆಯಲ್ಲಿ ವೈಭವದಿಂದಿರುತ್ತಿದ್ದನು. ಸಪ್ತಾಂಗಗಳಿಂದ ಕೂಡಿ "ಸುಖಸಂಕಥಾ ವಿನೋದದಿಂದ ದುಷ್ಟಶಿಕ್ಷಣ ಶಿಷ್ಟರಕ್ಷಣ" ಗಳನ್ನು ಗೆಯ್ಯುತ್ತಿದ್ದ ರಾಜನ ಬಳಿ ಹಿರಿಯ ಭಂಡಾರಿ, ಮಾಣಿಕ್ಯಭಂಡಾರಿ, ಆಸ್ಥಾನವಸ್ತುನಾಯಕ, ಕಾಪಿನ ನಾಯಕ, ಮನೆವೆಗ್ಗಡೆ, ಕಡಿತವೆಗ್ಗಡೆ, ಮಹಾಪಸಾಯಿತ, ಹಡಪವಳ, ತುರಗಸಾಹಣಿ, ಸಂತೋಷಬೀಡಿನ ರಕ್ಷಪಾಲಕ ಮುಂತಾದ ಅರಮನೆಯ ಅಧಿಕಾರಿಗಳಲ್ಲದೆ ಮಹಾಪ್ರಧಾನ, ಅಮಾತ್ಯ, ರಾಜಾಧ್ಯಕ್ಷ, ಸರ್ವಾಧ್ಯಕ್ಷ, ಶ್ರೀಕರಣ, ದಂಡನಾಯಕ, ಕೋಟೆಯ ಯಂತ್ರವಾಹಕ ಮುಂತಾದ ರಾಜ್ಯಾಧಿಕಾರಿಗಳೂ ಇರುತ್ತಿದ್ದರು. ನೆಲಗಂದಾಯ, ಕಪ್ಪಕಾಣಿಕೆ,

ಹೆಜ್ಜುಂಕ, ಕಿರುಕುಳ, ದಂಡಗಳೂ ಅನೇಕ ತೆರಿಗೆಗಳೂ ಸೇರಿ ಬಂದ ರಾಜ್ಯಾದಾಯವು ಅರಮನೆಯ ವೆಚ್ಚ, ಸೈನ್ಯದ ವೆಚ್ಚ ಮತ್ತು ಧರ್ಮ ಕಾರ್ಯಗಳಿಗೂ, ವಿದ್ಯಾಪ್ರೋತ್ಸಾಹಕ್ಕೂ ವಿನಿಯೋಗವಾಗುತ್ತಿತ್ತು. ದೇಶ ವನ್ನು ಶತ್ರುಗಳಿಂದ ರಕ್ಷಿಸುವುದು ಮತ್ತು ದೇಶದೊಳಗೆ ಪುಂಡರನ್ನಡಗಿಸು ವುದು ಎರಡೇ ರಾಜನ ಮುಖ್ಯಕರ್ತವ್ಯಗಳಾಗಿದ್ದವು. ಕೆರೆ, ಕಾಲುವೆ, ಬಾವಿ, ಅಣೆಕಟ್ಟುಗಳನ್ನು ಕಟ್ಟಿಸುವುದು, ಮಠಸತ್ರದೇಗುಲಗಳನ್ನು ನಿರ್ಮಿ ಸುವುದು ಧರ್ಮಕಾರ್ಯಗಳೆನಿಸಿದ್ದವು. ಅವಕಾಶ ದೊರೆತಂತೆ ರಾಜನೂ ರಾಜಾಧಿಕಾರಿಗಳೂ ಪ್ರಜೆಗಳೂ ಈ ಕಾರ್ಯಗಳನ್ನು ನೆರವೇರಿಸುತ್ತಿದ್ದರು.

ಜನರ ಯಾಜಮಾನ್ಯ.

ಗ್ರಾಮಗಳಲ್ಲಿ ಬಾರಾಬಲೂತಿಯೆಂದು ತರುವಾಯ ಹೆಸರು ಪಡೆದ ಪನ್ನೆರಡು ಅಯಗಾರರ ವ್ಯವಸ್ಥೆಯು ಈ ಪ್ರಾಚೀನಕಾಲದಲ್ಲಿಯೇ ಭದ್ರ ವಾದ ರೂಪವನ್ನು ತಾಳಿತ್ತು. ಗೌಡ, ಸೇನಬೋವ ಮುಂತಾದ ಹನ್ನೆ ರಡು ಗ್ರಾಮಸೇವಕರು ಒಟ್ಟಾದಾಯದಲ್ಲಿ ಭಾಗಗಳನ್ನು ಪಡೆದು ಗ್ರಾಮದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಗ್ರಾಮಮುಖ್ಯರು ಮಹಾ ಜನರು, ಸಮಸ್ತ ಹಲರು ಎಂಬ ಹೆಸರುಗಳಿಂದ ಗೌರವಕ್ಕೆ ಪಾತ್ರರಾಗಿ ದ್ದರು. ದಾನಧರ್ಮಗಳ ವ್ಯವಸ್ಥೆ, ನ್ಯಾಯ ತೀರ್ಮಾನ, ಕಂದಾಯ ತೆರಿಗೆಗಳ ವಸೂಲಿಗಳು ಇವರಿಗೇ ಸೇರಿದ್ದವು. ಅನೇಕ ಗ್ರಾಮಗಳಿಗೆ ಸಂಬಂಧಿಸಿದ ವಿಷಯಗಳನ್ನು ನಾಡಪ್ರಭು ಅಥವಾ ನಾಡಗೌಡ ಮತ್ತು ನಾಡಸೇನಬೋವರೆಂಬುವರು ನಿರ್ವಹಿಸುತ್ತಿದ್ದರು. ನಾಡಮಹಾಜನ ರೆಂಬ ಸಭೆಯೇ ಕಳ್ಳಕಾಕರನ್ನು ಶಿಕ್ಷಿಸುತ್ತ, ಸರಹದ್ದಿನ ವ್ಯಾಜ್ಯಗಳನ್ನು ಪರಿಹರಿಸುತ್ತ, ಕೆರೆಕಾಲುವೆಗಳನ್ನು ಸುಸ್ಥಿತಿಯಲ್ಲಿಡಿಸುತ್ತ, ಪ್ರಯಾಣಿಕರ ಸೌಕರ್ಯಗಳನ್ನೊದಗಿಸುತ್ತ, ಸಂತೆ ಜಾತ್ರೆಗಳನ್ನು ವ್ಯವಸ್ಥೆಗೊಳಿಸುತ್ತ ಈಗಿನ ಜಿಲ್ಲಾ ಬೋರ್ಡುಗಳಂತಿದ್ದವು. ಪಟ್ಟಣಗಳಲ್ಲಿಯೂ ಹೀಗೆಯೇ ಪ್ರಜೆಗಳ ಯಾಜಮಾನ್ಯವೇ ನಡೆಯುತ್ತಿತ್ತು. ಪಟ್ಟಣದ ಆಡಳಿತವು ವರ್ತಕ ಶ್ರೇಷ್ಠನ ಕೈಯಲ್ಲಿತ್ತು. ಪುರಮುಖ್ಯರು ಸಭೆಸೇರಿ ವ್ಯವಹರಿಸುತ್ತ ಲಿದ್ದರು. ದೇಶದಲ್ಲಿ ಗ್ರಾಮಗಳು, ಪಟ್ಟಣಗಳು ಮತ್ತು ನಾಡುಗಳು ವ್ಯವಸಾಯ, ಉದ್ಯೋಗ ಮತ್ತು ವ್ಯಾಪಾರಗಳಲ್ಲಿ ಈ ತೆರದ ವ್ಯವಸ್ಥೆ ಯಿಂದ ತೃಪ್ತಿಕರವಾದ ಅಭಿವೃದ್ಧಿ ಪಡೆದಿದ್ದವು.

ಸೇನೆ—ಸಾಮಂತರು.

ಸಾಮ್ರಾಜ್ಯ ಸ್ಪರ್ಧೆಯ ಕಾಲವಾಗಿದ್ದುದರಿಂದ ಸೈನ್ಯವು ಮುಖ್ಯವೆನಿಸಿತ್ತು. ಸೈನ್ಯದ ಅಧಿಕಾರಿಗಳಲ್ಲಿ ದಂಡನಾಯಕ, ಮಹಾದಂಡನಾಯಕ, ಪ್ರಚಂಡ ದಂಡನಾಯಕ, ಮಹಾ ಪ್ರಚಂಡ ದಂಡನಾಯಕರುಗಳೆಂಬ ಬಿರುದುಗಳು ಸೂಚಿಸುವಂತೆ ವರ್ಗಗಳಿದ್ದವು. ಇವರಲ್ಲದೆ ಸಾಮಂತಾಧಿಪತಿಗಳೂ ತಮ್ಮ ಸೇನೆಗಳೊಡನೆ ರಾಜಾಜ್ಞೆಯನ್ನು ಇದಿರುನೋಡುತ್ತಲಿದ್ದರು. ಸಾಮಂತರಲ್ಲಿಯೂ ವರ್ಗಗಳಿದ್ದು ರಾಜಪ್ರತಿನಿಧಿಗಳಾಗಿ ನಾಡುಗಳ ಆಳಿಕೆಯನ್ನು ವಹಿಸಿದಾಗ ಮಂಡಲೇಶ್ವರ, ಮಹಾ ಮಂಡಲೇಶ್ವರ, ಪಂಚಮಹಾಶಬ್ದಮಹಾಮಂಡಲೇಶ್ವರರೆಂಬ ಬಿರುದುಗಳನ್ನು ತಾಳುತ್ತಿದ್ದರು. ಇವರು ಸದಾ ರಾಜ್ಯರಕ್ಷಣೆಯಲ್ಲಿಯೂ, ಧರ್ಮಕಾರ್ಯಗಳಲ್ಲಿಯೂ ನಿರತರಾಗಿರುತ್ತಿದ್ದರು; ಅನೇಕರು ಸಾಹಿತ್ಯದಲ್ಲಿಯೂ ಕಲೆಗಳಲ್ಲಿಯೂ ಆಸಕ್ತರಾಗಿ ತಮ್ಮ ವೈಭವದ ಜೀವನವನ್ನು ಉತ್ತಮ ರೀತಿಯಲ್ಲಿ ಕಳೆದರು. ರಾಜ್ಯ ರಕ್ಷಣೆಗೆ ಗಡಿನಾಡುಗಳಲ್ಲಿ ದುರ್ಗನಿರ್ಮಾಣವೇ ಅಲ್ಲದೆ ಉಚಿತಸ್ಥಳಗಳಲ್ಲಿ ಸೈನ್ಯವು ಸದಾ ಸಿಬಿರಮಾಡಿಕೊಂಡಿರುತ್ತಿತ್ತು. ಅಂತಹ ಸ್ಥಳಗಳೇ ಪಡೆವೀಡುಗಳು.

ವೀರಪದ್ಧತಿಗಳು.

ರಾಜಪುರುಷರಿಗೆ ರಣಶಿಕ್ಷಣವು ಅತ್ಯವಶ್ಯವೆನಿಸಿತ್ತು. ಯುದ್ಧವನ್ನೇ ವೃತ್ತಿಯಾಗಿ ಸ್ವೀಕರಿಸಿದವರಲ್ಲಿ ಈ ಸ್ಪರ್ಧೆಯ ಕಾಲದಲ್ಲಿ ವೀರತ್ವವನ್ನು ಉತ್ತೇಜಿಸಿದ ಅನೇಕ ಆಚಾರಗಳಿದ್ದವು. ವೀರರ ಹಣೆಗೆ ಪಟ್ಟವನ್ನು ಕಟ್ಟುವುದು, ಕೈಗೆ ಕೈಸರೆ ಅಥವಾ ಕಡಗವನ್ನು ತೊಡಿಸುವುದು, ಕಾಲಿಗೆ ತೊಡರ್ ಅಥವಾ ಅಂದಿಗೆಯನ್ನು ತೊಡಿಸುವುದು ರಾಜನು ವೀರರಲ್ಲಿ ಮೆಚ್ಚುಗೆಯನ್ನು ತೋರುವ ಬಗೆಗಳಾಗಿದ್ದುವು. ಯುದ್ಧಪ್ರಾರಂಭದಲ್ಲಿ ಶತ್ರುವನ್ನು ಯಾರು ಮೊದಲು ತಾಗಿ ಸಾಯಲು ಸಿದ್ಧನಾಗತಕ್ಕುದೋ ನಿಶ್ಚಯಿಸಿ, ರಾಜನು ಅಂತಹವನಿಗೆ ವೀಳೆಯವನ್ನು ಕೊಡುತ್ತಿದ್ದನು. ಆ ವೀಳೆಯಕ್ಕಾಗಿ ನಾನು ತಾನೆಂದು ಯೋಧರು ಮುಂದಾಗುತ್ತಿದ್ದರು. ರಾಜನ ಮೈಗಾವಲಿನ ಭಟರಿಗೆ ಗರುಡರೆಂಬ ಹೆಸರಿತ್ತು; ತಮ್ಮ ಸ್ವಾಮಿಯು ಸತ್ತಕೂಡಲೆ ಆ ಗರುಡರು ತಮ್ಮ ಪ್ರಾಣವನ್ನು ಬಲಿ ಕೊಡು

ತ್ತಿದ್ದರು. ಅಂತಹವರು ಪ್ರತಿಜ್ಞೆಯನ್ನು ಮಾಡಿ ಸ್ವಾಮಿಯ ದೇಹದೊಡನೆ ಸಮಾಧಿಯಾಗುವುದು, ಸಿಡಿತಲೆಗೊಡುವುದು ಸಾಮಾನ್ಯವಾಗಿತ್ತು. ಶಿಡಿತಲೆಯೆಂದರೆ ಗಿಡವನ್ನೋ ಮರದರೆಂಬೆಯನ್ನೋ ಬಗ್ಗಿಸಿ ಹಿಡಿದು ಅದಕ್ಕೆ ತನ್ನ ತಲೆಯನ್ನು ಕಟ್ಟಿ ಆಮೇಲೆ ತನ್ನ ತಲೆಯನ್ನು ಕತ್ತರಿಸಿ ತಲೆಯು ರಕ್ತವನ್ನು ಕಾರುತ್ತ ರೆಂಬೆಯೊಡನೆ ನೆಗೆಯುವಂತೆ ಮಾಡುವುದು.

ಯುದ್ಧದರೀತಿ.

ಕಾಳಗದಲ್ಲಿ ಮತಗುರುಗಳು, ವಿದ್ವಾಂಸರು, ಆರಂಬಗಾರರು ಮುಂತಾದ ಶಾಂತಜೀವಿಗಳು ಪವಿತ್ರರೆನಿಸಿದ್ದರು, ಯುದ್ಧವೆನ್ನುವುದು ಅನೇಕ ಜಟ್ಟಿಗಳ ಭಯಂಕರ ಕಾಳಗವಾಗಿತ್ತೇ ವಿನಾ ಜನಜೀವನಕ್ಕೆ ಹಾನಿಯನ್ನೊಡ್ಡುವ ಉಪದ್ರವವಾಗಿರಲಿಲ್ಲ. ರಾಜಪುರುಷರ ಪರಸ್ಪರ ಸ್ಪರ್ಧೆಯೇ ಯುದ್ಧಕ್ಕೆ ಕಾರಣವಾಗಿದ್ದುದರಿಂದ ಸಾಧಾರಣವಾಗಿ ಒಂದು ಕದನದಿಂದಲೇ ತತ್ಕಾಲಕ್ಕೆ ವ್ಯಾಜ್ಯವು ಪರಿಹಾರವಾಗುತ್ತಿತ್ತು. ಗ್ರಾಮಗಳಲ್ಲಿಯೂ ನಾಡುಗಳಲ್ಲಿಯೂ ಮುಖ್ಯಸ್ಥರಾದ ಗೌಡರುಗಳು ಯುದ್ಧಕ್ಕೆ ಸಿದ್ಧರಾಗಿರುತ್ತಿದ್ದರು. ಏಕೆಂದರೆ, ಯುದ್ಧಕ್ಕೆ ಮೊದಲು ಗೋಗ್ರಹಣವೇ ಪದ್ಧತಿಯಾಗಿತ್ತು; ಅಲ್ಲದೆ ಹಸುಗಳನ್ನು ಕದಿಯುವುದು ಕೆಲವರ ಕಸಬೇ ಆಗಿತ್ತು. ತುರುಸೆರೆಗಳು ಪದೇಪದೇ ನಡೆದು ಅಂತಹ ಸಂದರ್ಭಗಳಲ್ಲಿ ಕಾದಾಡಿ ಮಡಿದ ಅನೇಕಾನೇಕ ವೀರಗೌಂಡರ ಸ್ಮರಣೆಯು ಹೆಜ್ಜೆಹೆಜ್ಜೆಗೂ ದೇಶದಲ್ಲಿ ಕಾಣುವ ವೀರಗಲ್ಲುಗಳಲ್ಲಿ ಖಚಿತವಾಗಿದೆ. ಅಂತಹ ವೀರರ ಮಡದಿಯರೂ ವೀರರಮಣಿಯರಾಗಿ ಸಹಗಮನ ಮಾಡುತ್ತಿದ್ದುದರಿಂದ ವೀರಗಲ್ಲುಗಳಂತೆಯೇ ಮಹಾಸತಿಕಲ್ಲುಗಳು ಅಥವಾ ಮಾಸ್ತಿಕಲ್ಲುಗಳೂ ಹೇರಳವಾಗಿ ಕಾಣುತ್ತವೆ. ಯುದ್ಧದಲ್ಲಿ ಕಾದಾಡಿ ಪ್ರಾಣಕೊಟ್ಟ ವೀರರಿಗೆ ರಾಜನು ಭೂಸ್ಥಿತಿಯನ್ನು ಕೊಡುತ್ತಿದ್ದನು. ವೀರರಿಗೆ ಕೊಟ್ಟ ಭೂಮಿಯು ರಕ್ತಕೊಡಗಿಯೆಂದೂ, ವಿದ್ವಾಂಸರಿಗೆ ಕೊಟ್ಟ ಭೂಮಿಯು ಮಾನ್ಯವೆಂದೂ ಸಾಮಾನ್ಯವಾಗಿ ಹೆಸರು ಪಡೆದಿದೆ.

ಶಿಕ್ಷಣ.

ದಾನಧರ್ಮ ಮಾಡುವುದು ಎಲ್ಲರಲ್ಲಿಯೂ ಸಾಮಾನ್ಯವಾಗಿತ್ತು. ದೇವಸ್ಥಾನಗಳೇ ವಿಶೇಷವಾಗಿ ದಾನಧರ್ಮದ ಕೇಂದ್ರಸ್ಥಾನಗಳಾಗಿದ್ದವು.

ದೇವಸ್ಥಾನಗಳಲ್ಲಿ ದೇವತಾಪೂಜೆಯಲ್ಲದೆ ಬಾಲಶಿಕ್ಷಣವೂ ಇತರ ಜನ ಸೇವೆಯೂ ನಡೆಯುತ್ತಿತ್ತು. ಪ್ರೌಢ ವಿದ್ಯಾಭ್ಯಾಸಂಗವು ಘಟಿಕಾಸ್ಥಾನ ಅಗ್ರಹಾರ, ಬ್ರಹ್ಮಪುರಿ ಮತ್ತು ಮಠಗಳಲ್ಲಿ ನಡೆಯುತ್ತಿತ್ತು. ಶ್ರವಣ ಬೆಳುಗೊಳ, ಬಳ್ಳಿಗಾವೆ, ತಲಕಾಡು ಈ ರೀತಿಯಲ್ಲಿ ವಿದ್ಯೆಯ ತವರ್ಮನೆ ಗಳೆನಿಸಿದ್ದವು. ರಾಜರು, ಸಾಮಂತರು, ಅಧಿಕಾರಿಗಳು, ವರ್ತಕರು ಎಲ್ಲರೂ ದೇವಸ್ಥಾನಗಳನ್ನೂ ಶಿಕ್ಷಾಸತ್ರಗಳನ್ನೂ ಕಟ್ಟಿಸುವುದರಲ್ಲಿ ಉತ್ಸಾ ಹಗೊಳ್ಳುತ್ತಿದ್ದರು.

ತುಂಬುಜೀವನ.

ಹೊಯಿಸಳರ ಕಾಲದ ಜನಜೀವನವು ತುಂಬುಜೀವನವಾಗಿತ್ತು. ವೀರರಸೋತ್ತೇಜಕವಾದ ಕಾಲದಲ್ಲಿ ಜನರು ಹೆಮ್ಮೆಯಿಂದಿದ್ದರು. ಯುದ್ಧ ಗಳು ಪದೇ ಪದೇ ನಡೆಯುತ್ತಲಿದ್ದುದು ಜನಜೀವನಕ್ಕೆ ಕೊರತೆಯಾಗಿರ ಲಿಲ್ಲ; ಉತ್ತೇಜಕವಾಗಿತ್ತು. ಗ್ರಾಮಗಳಲ್ಲಿಯೂ, ನಗರಗಳಲ್ಲಿಯೂ ಜನರು ಪೌರುಷವೃದ್ಧಿಯಿಂದ ಲಭ್ಯವಾದ ಯಶಸ್ಸಿನ ಜೀವನದಲ್ಲಿ ನಿರತ ರಾಗಿದ್ದರು. ಹಬ್ಬ ಹರಿದಿನಗಳೊಂದಿಗೆ ಮಲ್ಲಯುದ್ಧ, ಜಟ್ಟಿಯ ಕಾಳಗ, ಟಗರು ಕಾಳಗ, ದೊಂಬರಾಟ, ಬೇಟೆ, ಕೋಲಾಟ, ಸುಗ್ಗಿಯ ಕುಣಿತ ಮುಂತಾದವು ಆಗಾಗ್ಗೆ ನಡೆಯುತಲಿದ್ದವು. ದೇವಾಲಯವಿಲ್ಲದ ಹಳ್ಳಿಯೇ ಇರಲಿಲ್ಲ; ದೇವಸ್ಥಾನವೇ ಜೀವನದ ಕೇಂದ್ರವಾಗಿತ್ತು. ಸಭೆ ಸೇರು ವುದು ಅಲ್ಲಿ; ಬಾಲ ಶಿಕ್ಷಣ ನಡೆಯುವುದು ಅಲ್ಲಿ; ಪುರಾಣ ಹರಿಕಥೆ ಹೇಳು ವುದು ಅಲ್ಲಿ; ಉತ್ಸವಗಳೂ ಹಬ್ಬಗಳೂ ನಡೆಯುವುದು ಅಲ್ಲಿ. ಮಠ ವೆಂಬುದು ಪೂಜಾಸ್ಥಾನ; ವಿದ್ಯಾಸ್ಥಾನ; ಅನಿವಾರ್ಯ ಅನ್ನದಾನಸ್ಥಾನ ಮತ್ತು ಭೈಷಜ್ಯಸ್ಥಾನಗಳೊಟ್ಟಿಗೆ ಸೇರಿದ ಸಂಸ್ಥೆಯಾಗಿರುತ್ತಿತ್ತು. ಆದ್ದ ರಿಂದ ಇಂತಹ ಕಟ್ಟಡಗಳ ನಿರ್ಮಾಣವು ಪುಣ್ಯಕೆಲಸವೆನಿಸಿತ್ತು. ಮೈಸೂರಿ ನಲ್ಲಿ ಹೆಸರುವಾಸಿಯಾದ ದೇವಾಲಯಗಳು ಈ ಕಾಲದಲ್ಲಿ ಕಟ್ಟಿದವೆಂಬುದು ಅತಿಶಯೋಕ್ತಿಯಲ್ಲ. ಜನಜೀವನದ ಹೊಮ್ಮು ಆ ದೇವಾಲಯಗಳ ನಿರ್ಮಾಣಚಾತುರ್ಯದಲ್ಲಿ ಕಂಡುಬರುವುದು. ಏಕೆಂದರೆ ಲಲಿತಕಲೆಗಳಲ್ಲಿ ಸೇರಿದ ವಾಸ್ತುಶಿಲ್ಪಗಳು ದೇವಾಲಯಗಳಲ್ಲಿ ಏಕೀಭವಿಸಿ ಜನಜೀವನವನ್ನು ಪ್ರತಿಬಿಂಬಿಸುತ್ತವೆ. ಸಾಹಿತ್ಯ, ವಾಸ್ತು ಮತ್ತು ಶಿಲ್ಪಗಳು ಈ ಕಾಲದಲ್ಲಿ ಮಾಧುರ್ಯ ಸೌಂದರ್ಯಗಳಿಂದ ರಂಜಿಸಿದವು.

ಮತಗಳು.

ನಮ್ಮ ದೇಶದಲ್ಲಿ ಬೌದ್ಧಮತದ ಕುರುಹುಗಳು ಅತ್ಯಲ್ಪ. ಮೌರ್ಯರ ಕಾಲದಲ್ಲಿ ಕೂಡ ಬೌದ್ಧಮತವು ಬೇರೂರಲಿಲ್ಲ. ಜೈನ ಮತವೇ ಹೆಚ್ಚಾಗಿ ಪ್ರಚಾರದಲ್ಲಿತ್ತು. ಶಾತವಾಹನರು ಬ್ರಾಹ್ಮಣ ಮತವನ್ನು ಅವಲಂಬಿಸಿದ್ದರು; ಗಂಗರಸರೂ, ರಾಷ್ಟ್ರಕೂಟರೂ ಜೈನಮತವನ್ನು ಸ್ವೀಕರಿಸಿದ್ದರು. ಕದಂಬರೂ, ಚಾಳುಕ್ಯರೂ ಬ್ರಾಹ್ಮಣ ಮತವನ್ನೇ ಪೋಷಿಸಿದರು. ಹೊಯಿಸಳರು ಮೊದಲು ಜೈನರಾಗಿದ್ದು ತರುವಾಯ ಶ್ರೀವೈಷ್ಣವ ಮತದಲ್ಲಿಯೂ, ಶೈವಮತದಲ್ಲಿಯೂ ಆಸಕ್ತಿಯನ್ನು ತೋರಿದರು. ಇವುಗಳೊಂದಿಗೆ ವೀರಶೈವ ಮತವು ೧೧೬೦ ರಿಂದ ಪ್ರಚಾರವಾಗ ತೊಡಗಿತು. ಇಷ್ಟು ಮತಗಳಿದ್ದಾಗ್ಗೂ ಪರಸ್ಪರ ವೈಷಮ್ಯವು ತೋರಿದಾಗ ಹಗೆತನವು ಹೆಚ್ಚಾಗಿ ವಾದವಿವಾದಗಳಲ್ಲಿಯೇ ಪರ್ಯವಸಾನವಾಗುತ್ತಿತ್ತು. ವೀರಶೈವಮತವೂ ನಕುಲೀಶ ಸಿದ್ಧಾಂತವನ್ನು ಎತ್ತಿ ಹಿಡಿದ ಕಾಲಾಮುಖರ ಮತವೂ ವೃದ್ಧಿಪಡೆದ ಮೇಲೆ ಹರಿಭಕ್ತರಿಗೂ, ಹರಭಕ್ತರಿಗೂ ಮನಸ್ತಾಪಗಳು ಬೆಳೆದವು. ಇವುಗಳನ್ನು ಹೋಗಲಾಡಿಸಬೇಕೆಂದೇ ಪೋಳಾಲ್ವ ದಂಡನಾಥನು ಹರಿಹರದಲ್ಲಿ ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದನು. ಹೊಯಿಸಳರು ಇಳಿಗಾಲದಲ್ಲಿದ್ದಾಗಲೇ ತ್ರಿಮತಸ್ಥಾಪನೆಯು ನಡೆದಿತ್ತು.

ಇಸ್ಲಾಮಿಾಮತ.

ಇಸ್ಲಾಮಿಾ ಮತವು ಪಡುಕರೆಯಲ್ಲಿ ನೆಲೆಸಿದ ಅರಬ್ಬಿಯವರ ಮೂಲಕ ಮೊದಲು ತೋರಿತು. ತರುವಾಯ ಅಲ್ಲಾವುದ್ದೀನನ ದಂಡಯಾತ್ರೆಗಳಲ್ಲಿಯೂ, ಮಧುರೆಯ ಸುಲ್ತಾನನ ಘೋರಕೃತ್ಯಗಳಲ್ಲಿಯೂ ಆ ಮತವು ವಿಷಮವಾಗಿಯೇ ಕಾಣಿಸಿಕೊಂಡಿತು. ಈ ಕಾರಣದಿಂದ ಹೊಯಿಸಳ ವಂಶದ ಕಡೆಗಾಲದಲ್ಲಿ ರಾಜ್ಯವೆಂಬುದು ಮುಸಲ್ಮಾನರನ್ನು ವಿರೋಧಿಸುವ ವ್ಯವಸ್ಥೆಯಾಗಬೇಕಾಯಿತು.

೨. ಒಡೆಯರ ರಾಜ್ಯ.


ವಿಜಯನಗರ ಸಾಮ್ರಾಜ್ಯದ ಕಾಲ ೧೩೩೦-೧೬೦೦.

ಹೊಯಿಸಳ ರಾಜ್ಯದ ನಾಮಾಂತರ.


ಕ್ರಿ. ಶ. ೧೩೪೨ ರಲ್ಲಿ ಮುಮ್ಮಡಿ ಬಲ್ಲಾಳನು ಮಧುರೆಯ ಸುಲ ತಾನನೊಡನೆ ಕಾದುತ್ತ ದುರ್ಮರಣಕ್ಕೆ ತುತ್ತಾದನು. ಆತನ ಮಗನಾದ ನಾಲ್ಮಡಿ ಬಲ್ಲಾಳನು ರಾಜ್ಯವನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಹೊಯಿಸಳ ವಂಶವು ಈ ರೀತಿಯಲ್ಲಿ ಕೊನೆಗಂಡರೂ ಹೊಯಿಸಳ ಸಾಮ್ರಾಜ್ಯವು ಕಡೆಗಾಣಲಿಲ್ಲ; ನಾಮಾಂತರವನ್ನೂ, ರೂಪಾಂತರವನ್ನೂ ಹೊಂದಿ ಮೊದಲಿಗಿಂತಲೂ ವಿಸ್ತಾರವಾಗಿ ಪ್ರಸಿದ್ಧಿ ಪಡೆಯಿತು.

ಬಹಮನಿ, ವಿಜಯನಗರಗಳು.

೧೩೨೬ರಲ್ಲಿ ದಕ್ಷಿಣ ದಂಡಯಾತ್ರೆಗಳನ್ನು ನಡೆಸಿದ ಮಹಮ್ಮದ್ ಬಿನ್ ತಘಲಖನ ಆಳಿಕೆಯಲ್ಲಿ ದಿಳ್ಳಿಯ ತುರುಷ್ಕ ಸಾಮ್ರಾಜ್ಯವು ಒಡೆದು ಹೋಗಿ ಹೊಯಿಸಳರಾಜ್ಯದ ಉತ್ತರಕ್ಕೆ ಸ್ವತಂತ್ರವಾದ ಮಹಮ್ಮದೀಯ ರಾಜ್ಯವೊಂದು ಏರ್ಪಡುವುದರಲ್ಲಿತ್ತು. ಯಾದವ ರಾಜ್ಯವೂ, ತೆಲುಗಾಣ್ಯವೂ ಧ್ವಂಸವಾಗಿ ಹೋಗಿ ಕೃಷ್ಣಾನದಿಯ ಉತ್ತರ ಪಾರ್ಶ್ವದಲ್ಲಿ ಕಲ್ಬುರುಗಿಯಲ್ಲಿ ಬಹಮನಿ ಸುಲ್ತಾನರ ಸ್ಥಾಪನೆಯಾಯಿತು. ಮುಮ್ಮಡಿ ಬಲ್ಲಾಳನು ದಕ್ಷಿಣದಲ್ಲಿ ತುರುಷ್ಕರ ಹಾವಳಿಯನ್ನು ಅಡಗಿಸುತ್ತಲಿರಲು, ಉತ್ತರದ ಗಡಿಯು ತೊಂದರೆಗೀಡಾಯಿತು. ಇಂತಹ ಕಾಲದಲ್ಲಿ ೧೩೩೬ರಲ್ಲಿ ಹೊಯಿಸಳರಾಯನ ಸಾಮಂತರೆನಿಸಿದ್ದ ಐವರು ಸೋದರರು ಬಲ್ಲಾಳ ರಾಯನು ಕಟ್ಟಿದ್ದ ವಿರೂಪಾಕ್ಷಪುರಿಯನ್ನೇ ಮುಖ್ಯಪಟ್ಟಣವನ್ನಾಗಿ ಮಾಡಿಕೊಂಡು, ವಿದ್ಯಾರಣ್ಯ ಯತೀಶ್ವರನ ಸಹಾಯವನ್ನು ಪಡೆದು, ವಿಜಯ



ವಿಜಯನಗರ ಸಾಮ್ರಾಜ್ಯ



ವಿಜಯನಗರದ ಸಾಮಂತರು

ನಗರದ ಸ್ಥಾಪನೆಯನ್ನು ಮಾಡಿದರು. ಈ ಸೋದರರ ವಂಶಕ್ಕೆ ಸಂಗಮ ವಂಶವೆಂದು ಹೆಸರು.

ಸಂಗಮವಂಶ.

ಸಂಗಮ ವಂಶದ ರಾಜರಲ್ಲಿ ಹರಿಹರ, ಬುಕ್ಕ, ಪ್ರತಾಪದೇವರಾಯ ಮತ್ತು ಪ್ರೌಢದೇವರಾಯರೆಂಬುವರು ಹೆಸರುವಾಸಿಯಾದವರು. ಇವರು ಉತ್ತರದಲ್ಲಿ ಹೊಯಿಸಳರಾಜ್ಯದ ಮೇರೆಯನ್ನು ಕಾಪಾಡಿಕೊಂಡು, ಬಹಮನಿ ಸುಲತಾನರೊಡನೆ ಯುದ್ಧ ಪ್ರತಿಯುದ್ಧಗಳನ್ನು ನಡೆಸುತ್ತಲೂ ದಕ್ಷಿಣದಲ್ಲಿ ಹೊಯಿಸಳರು ಪ್ರಾರಂಭಿಸಿದ್ದ ಚೋಳಮಂಡಲ ಮತ್ತು ಪಾಂಡ್ಯ ರಾಷ್ಟ್ರಗಳ ಗೆಲವಿಗಾಗಿ ಪ್ರಯತ್ನಿಸುತ್ತಲೂ ಇದ್ದರು. ಮಧುರೆಯ ತುರುಷ್ಕರ ದಾಂಧಲೆಯು ಇವರ ಕಾಲದಲ್ಲಿ ಅಡಗಿತು. ಉತ್ತರದಲ್ಲಿ ತುರುಷ್ಕರ ರಾಜ್ಯವು ಕೃಷ್ಣಾನದಿಯ ಮೇರೆಯನ್ನು ದಾಟಿ ಬಾರದಂತಾಯಿತು. ಮೈಸೂರು ಪ್ರಾಂತವು ಇವರಿಗೆ ಸ್ವಂತರಾಜ್ಯದಂತೆಯೇ ಇತ್ತು. ಆರಗ, ಚಂದ್ರಗುತ್ತಿ, ಪೆನುಗೊಂಡೆ, ಮುಳಬಾಗಿಲು, ತೆರಕಣಾಂಬಿಗಳಲ್ಲಿ ಈ ವಂಶದವರ ಸಾಮಂತರು ರಾಜಭಕ್ತಿಯಿಂದ ಆಳುತ್ತಿದ್ದರು.

ಸಾಳುವವಂಶ.

ಪ್ರೌಢದೇವರಾಯನ (೧೪೧೭–೧೪೪೬) ತರುವಾಯ ಆಳಿದ ರಾಜರು ದುರ್ಬಲರಾಗಿದ್ದರು. ರಾಜ್ಯದಲ್ಲಿ ಬಿಂಕ ತಪ್ಪಿತು. ಆಗ ಸಾಮಂತರು ಕೆಲವರು ಸ್ವತಂತ್ರರಾಗುವುದಕ್ಕೂ, ಸಾಹಸಿಗಳಾದವರು ಕೋಟೆ ಕೊತ್ತಲಗಳನ್ನು ಕಟ್ಟಿಕೊಂಡು ತುಂಡರಸರಾಗುವುದಕ್ಕೂ ಮೊದಲಿಟ್ಟರು. ಆದರೆ ಸಾಮಂತರಲ್ಲಿ ಹಿರಿಯನೂ ಪ್ರಧಾನ ದಂಡನಾಯಕನೂ ಆಗಿದ್ದ ಸಾಳುವನರಸಿಂಹನು ಕಂಚಿ ಮತ್ತು ಮುಳಬಾಗಿಲು ಸೀಮೆಗಳನ್ನು ಸ್ವಾಧೀನಪಡಿಸಿಕೊಂಡು ವಿಜಯನಗರದಲ್ಲಿ ತನ್ನ ವಂಶವನ್ನು ಸ್ಥಾಪಿಸಿದನು. ಈ ಸಾಳುವ ವಂಶವು ಬಹುಕಾಲ ನಡೆಯಲಿಲ್ಲ. ಎಲ್ಲ ಸಾಮಂತರನ್ನೂ ಅಡಗಿಸುವುದು ಸಾಧ್ಯವಾಗಲಿಲ್ಲ. ಇದೇ ಕಾಲದಲ್ಲಿ ಬಹಮನಿ ರಾಜ್ಯವೂ ತೊಂದರೆಗೆ ಸಿಕ್ಕಿತು ; ಒಂದು ರಾಜ್ಯದ ಸ್ಥಾನದಲ್ಲಿ ಷಾಹಿರಾಜ್ಯಗಳೆಂದು ಹೆಸರಾದ ಐದು ಸ್ವತಂತ್ರ ರಾಜ್ಯಗಳಾದವು. ಇನ್ನು ಮುಂದೆ ವಿಜಯನಗರದರಸರು ಒಬ್ಬನಿಗೆ ಬದಲಾಗಿ ಐವರು ಸುಲ್ತಾನರನ್ನೆದುರಿಸಬೇಕಾಯಿತು.

ತುಳುವಂಶ.

ಸಾಳುವವಂಶದವರ ಕಡೆಗಾಲದಲ್ಲಿಯೇ ಉಮ್ಮತ್ತೂರಿನ ಗಂಗರಾಜನೆಂಬಾತನು ಪ್ರಬಲನಾಗಿ ಪೆನುಗೊಂಡೆಯನ್ನು ಸ್ವಾಧೀನಪಡಿಸಿಕೊಂಡನು. ಆದರೆ ಸ್ವಲ್ಪ ಕಾಲದಲ್ಲಿಯೇ ಸಾಳುವರಾಜರ ದಂಡನಾಯಕನಾಗಿದ್ದ ತುಳುವಂಶದ ನರಸನಾಯಕನು ವಿಜಯನಗರವನ್ನು ಸ್ವಾಧೀನಪಡಿಸಿಕೊಂಡು ಪ್ರಸಿದ್ಧ ತುಳುವಂಶಕ್ಕೆ ಮೊದಲಿಟ್ಟನು. ಈ ವಂಶದಲ್ಲಿ ಎರಡನೆಯವನೇ ಪ್ರಖ್ಯಾತನಾದ ಕೃಷ್ಣದೇವರಾಯ. ಈತನು ತುಳುದೇಶವನ್ನೂ, ಕಾವೇರೀನದಿಯ ಪ್ರದೇಶವನ್ನೂ ಸುಲಭವಾಗಿ ವಶಪಡಿಸಿಕೊಂಡು, ಷಾಹಿ ಸುಲ್ತಾನರ ಬಲವನ್ನು ರಾಯಚೂರ ಕದನದಲ್ಲಿ ಮುರಿದಿಟ್ಟು, ಈಶಾನ್ಯದಲ್ಲಿ ಕಳಿಂಗ ರಾಷ್ಟ್ರದವರೆಗೂ ಮತ್ತು ದಕ್ಷಿಣದಲ್ಲಿ ಸೇತುವರೆಗೂ ಸಾಮ್ರಾಜ್ಯವನ್ನು ವಿಸ್ತರಿಸಿದನು. ಶ್ರೀರಂಗಪಟ್ಟಣದ ಬಳಿ ಈತನು ಸೇನೆಯೊಡನೆ ಬಂದಿದ್ದಾಗ ಅಲ್ಲಿ ನಾಯಕನಾಗಿದ್ದ ಒಬ್ಬಾತನ ಮಗಳನ್ನೋ ಸೋದರಿಯನ್ನೋ ಮದುವೆಯಾದನು ; ಆ ನಾಯಕನು ಯಾರೆಂಬುದು ತಿಳಿದಿಲ್ಲ. ಕೃಷ್ಣದೇವರಾಯನು ೧೫೦೯ರಿಂದ ೧೫೩೦ರವರೆಗೆ ಖ್ಯಾತಿಯಿಂದಲೂ ದರ್ಪದಿಂದಲೂ ಆಳಿದನು. ಉದಯಗಿರಿ, ಶೆಂಜಿ, ತಂಜಾವೂರು, ವೇಲೂರು ಮಧುರೆ, ಪೆನುಗೊಂಡೆ, ಮುಳಬಾಗಿಲು, ಉಲ್ಲಾಳ, ಬಾರಕೂರು, ಕಳಸ— ಮತ್ತು ಬಂಕಾಪುರಗಳಲ್ಲಿ ಈತನ ಸಾಮಂತರು ಆಳುತ್ತಿದ್ದರು. ಹೊಯಿಸಳರಾಜರು ಸೇತುವರೆಗೆ ರಾಜ್ಯವನ್ನು ವಿಸ್ತರಿಸಲು ಮಾಡುತ್ತಿದ್ದ ಪ್ರಯತ್ನಗಳು ಈತನ ಕಾಲದಲ್ಲಿ ನೆರವೇರಿದವು.

ಪಾಳೆಯಪಟ್ಟುಗಳು.

ಉತ್ತರದಲ್ಲಿ ತುರುಷ್ಕರನ್ನು ತಡೆಯುತ್ತಲೂ ದಕ್ಷಿಣದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸುತ್ತಲೂ ಇದ್ದ ಈ ರಾಜರ ಕಾಲದಲ್ಲಿ ಮೈಸೂರು ಪ್ರಾಂತದ ಆಡಳಿತವು ಅಷ್ಟು ಬಿಗಿಯಿಂದ ನಡೆಯಲಿಲ್ಲ. ಅಲ್ಲಲ್ಲಿ ಸಾಹಸಿಗಳಾದವರು ಕೋಟೆಗಳನ್ನು ಕಟ್ಟಿಕೊಂಡು ಪಾಳೆಯಗಾರರೆನ್ನಿಸಿಕೊಳ್ಳುತ್ತಿದ್ದರು. ಕೃಷ್ಣದೇವರಾಯನೂ ಆತನ ತರುವಾಯ ಆಳಿದ ಅಚ್ಯುತರಾಯನೂ ಅಂತಹವರ ಸಾಹಸಕ್ಕೆ ಪ್ರೋತ್ಸಾಹ ಕೊಟ್ಟು ಅವರನ್ನು ತಮ್ಮ ಸಾಮಂತರನ್ನಾಗಿಯೂ ಸೇನಾನಾಯಕರನ್ನಾಗಿಯೂ ಮಾಡಿಕೊಳ್ಳುತ್ತಿದ್ದರು. ತರೀಕೆರೆ,

ಐಗೂರು, ಸುಗಟೂರು, ಹೊಳಲಕೆರೆ, ಚಿತ್ರದುರ್ಗ, ಬೇಲೂರು, ಮಾಸ್ತಿ, ಮಾಗಡಿ ಮತ್ತು ಕೆಳದಿಗಳಲ್ಲಿ ಪಾಳೆಯಗಾರರ ವಂಶಗಳು ಈ ರಾಯರುಗಳ ಕಾಲದಲ್ಲಿ ಸ್ಥಾಪನೆಯಾದುವು. ಪಾಳೆಯಗಾರರು ಕಪ್ಪಕಾಣಿಕೆಗಳನ್ನು ಕೊಡುತ್ತ ಯುದ್ಧಕಾಲದಲ್ಲಿ ಸಹಾಯಮಾಡುತ್ತ ಸುಮಾರು ೨೫೦ ವರ್ಷಕಾಲ ದೇಶವನ್ನಾಳಿದರು.

ಮುಖ್ಯ ಪಾಳೆಯಗಾರರು.

ಈಗಿನ ಹಾಸನ ಮತ್ತು ಕಡೂರು ಜಿಲ್ಲೆಗಳ ಪ್ರದೇಶವು ಬಾಲಂ ಎಂಬ ಹೆಸರನ್ನು ಪಡೆದಿತ್ತು. ಸಂಗಮ ವಂಶದರಸರು ಆ ಪ್ರಾಂತದಲ್ಲಿ ಜನರು ನೆಲೆಸುವಂತೆ ಅನುಕೂಲಮಾಡಿ, ೧೩೯೭ರಲ್ಲಿ ಸಿಂಗಪ್ಪನಾಯಕನೆಂಬಾತನನ್ನು ಅಲ್ಲಿಗೆ ನೇಮಿಸಿದ್ದರು. ಆ ಸಿಂಗಪ್ಪನಾಯಕನೇ ಐಗೂರು ಪಾಳೆಯಗಾರರವಂಶವನ್ನು ಸ್ಥಾಪಿಸಿದನು. ೧೪೧೮ರಲ್ಲಿ ತಿಮ್ಮೇಗೌಡನೆಂಬಾತನು ರಾಯರ ಅನುಗ್ರಹಕ್ಕೆ ಪಾತ್ರನಾಗಿ, ಹೊಸಕೋಟೆಯನ್ನು ಕಟ್ಟಿ, ತುರುಷ್ಕರೊಡರ ಮೇಲಿನ ಯುದ್ಧದಲ್ಲಿ ಸಾಹಸವನ್ನು ತೋರಿದ್ದರಿಂದ ಚಿಕ್ಕರಾಯನೆಂಬ ಬಿರುದನ್ನು ಪಡೆದು ಸುಗಟೂರುಗೌಡರ ವಂಶವನ್ನು ಸ್ಥಾಪಿಸಿದನು. ಕೃಷ್ಣದೇವರಾಯರ ಕಾಲದಲ್ಲಿ ತಿರುಪತಿಯ ಕಡೆಯಿಂದ ಬಂದಿದ್ದ ತಿಮ್ಮಣ್ಣನಾಯಕನೆಂಬಾತನು ದೊರೆಯನ್ನು ಮೆಚ್ಚಿಸಿ, ಹೊಳಲಕೆರೆಯ ನಾಯಕನಾದನು. ಆದರೆ ಸ್ವಲ್ಪಕಾಲದಲ್ಲಿಯೇ ದೊರೆಯ ಕೋಪಕ್ಕೆ ಪಾತ್ರನಾಗಿ ಆನೆಗೊಂದಿಯ ಸೆರೆಯಲ್ಲಿದ್ದು ಕಾಲವಾದನು. ಆಗ ಆತನ ಮಗನಾದ ಓಬಣ್ಣನಾಯಕನು ಅರಸನ ಮನ್ನಣೆಯನ್ನು ಪಡೆದು, ತಂದೆಯ ಪದವಿಯನ್ನು ಹೊಂದಿ, ಚಿತ್ರದುರ್ಗಕ್ಕೂ ನಾಯಕನಾದನು. ೧೪೧೮ರಲ್ಲಿಯೇ ಕಾಂಚಿಯ ದಿಕ್ಕಿನಿಂದ ಬಂದವರೆಂದು ಪ್ರಸಿದ್ಧರಾದ ಆವತಿನಾಡ ಪ್ರಭುಗಳ ಪೂರ್ವಿಕರು ವಿಜಯನಗರದ ಅರಸರ ವಿಶ್ವಾಸವನ್ನು ಸಂಪಾದಿಸಿದರು. ೧೫೧೩ರಲ್ಲಿ ಅವರ ಮುಖಂಡನಾದ ಮೊದಲನೆಯ ಕೆಂಪೇಗೌಡನು ಕೃಷ್ಣದೇವರಾಯನನ್ನು ಮೆಚ್ಚಿಸಿ ಬಳ್ಳಾಪುರ, ದೇವನಹಳ್ಳಿಗಳನ್ನು ಪಡೆದನು. ಈ ಕೆಂಪೇಗೌಡನೇ ೧೫೩೭ರಲ್ಲಿ ಬೆಂಗಳೂರನ್ನು ಸ್ಥಾಪಿಸಿದವನು. ಸ್ವಲ್ಪಕಾಲದಲ್ಲಿಯೇ ಈತನು ಸ್ವತಂತ್ರನಾಗಲು ಯತ್ನಿಸಿದನು. ಆಗ ಅರಸಾಗಿದ್ದ ಆರವೀಡು ವಂಶದ ರಾಮರಾಯನು ಈತನನ್ನು ಹಿಡಿಸಿ, ಐದುವರ್ಷಕಾಲ ಸೆರೆಯಲ್ಲಿಡಿಸಿ, ತರುವಾಯ ಬಿಡುಗಡೆ

ಮಾಡಿಸಿದನು. ಈ ಕೆಂಪೇಗೌಡನ ವಂಶದವರೇ ಮುಂದಕ್ಕೆ ಮಾಗಡಿ ಸಾವನದುರ್ಗಗಳನ್ನು ಗೆದ್ದು, ಬೆಂಗಳೂರು ಕೋಲಾರ ಜಿಲ್ಲೆಗಳಲ್ಲಿ ಹೆಸರು ಗೊಂಡು ಆಳಿದವರು. ಬೇಲೂರಿನ ಪಾಳೆಯಗಾರರ ವಂಶವೂ ಈ ಕಾಲದ ಲ್ಲಿಯೇ ಕೃಷ್ಣದೇವರಾಯನ ಆಸ್ಥಾನದಲ್ಲಿ ಹಡಪದವನಾಗಿದ್ದ ಎರೆ ಕೃಷ್ಣಪ್ಪ ನಾಯಕನಿಂದ ಸುಮಾರು ೧೫೨೪ರಲ್ಲಿ ಸ್ಥಾಪಿತವಾಯಿತು.

ಇಕ್ಕೇರಿ.

ಹೀಗೆ ಸಾಹಸದಿಂದ ಪಾಳೆಯಗಾರರಾದವರ ವಂಶಗಳಲ್ಲಿ ಮೊದಲೆ ನಿಸಿದುದು ಕೆಳದಿ ಅಥವಾ ಇಕ್ಕೇರಿ ನಾಯಕರ ವಂಶ. ಶಿವಮೊಗ್ಗಿ ಜಿಲ್ಲೆಯ ಲ್ಲಿಯೇ ಆರಂಬಗಾರನಾಗಿದ್ದ ಚವುಡಪ್ಪನೆಂಬಾತನು ಕೃಷ್ಣದೇವರಾಯನ ಕೃಪೆಗೆ ಪಾತ್ರನಾಗಿ ಕೆಳದಿಗೆ ನಾಯಕನಾದನು. ಚವುಡಪ್ಪನಾಯಕನ ತರುವಾಯ ನಾಯಕತನಕ್ಕೆ ಬಂದ ಸದಾಶಿವನಾಯಕನೆಂಬಾತನು ವಿಜಯ ನಗರದ ಸಾಮ್ರಾಜ್ಯಕ್ಕೇ ಒಂದು ಆಧಾರದಂತಾದನು.

ಸದಾಶಿವನಾಯಕ.

ಅಚ್ಯುತರಾಯನ ತರುವಾಯ ರಾಜಧಾನಿಯಲ್ಲಿ ಪಟ್ಟಕ್ಕಾಗಿ ಪಿತೂರಿ ಗಳು ನಡೆದು ಕಡೆಗೆ ತುಳುವಂಶದ ಸದಾಶಿವರಾಯನ ಹೆಸರಿನಲ್ಲಿ ಆರವೀಡು ಮನೆತನದ ರಾಮರಾಯನು ಆಳಲಾರಂಭಿಸಿದನು. ಈತನು ಕೃಷ್ಣದೇವ ರಾಯನ ಅಳಿಯನಾಗಿದ್ದು, ಶೂರನೂ, ಉದಾರಿಯೂ ಆಗಿದ್ದನು. ಕೆಲ ಕಾಲದ ಮೇಲೆ ಈತನು ಸದಾಶಿವರಾಯನನ್ನು ನಿರ್ಬಂಧದಲ್ಲಿಡಿಸಿ, ತಾನೇ ಅರಸಾದನು. ಯುದ್ಧದಲ್ಲಿ ಎಷ್ಟು ಸಮರ್ಥನೋ, ಭೇದೋಪಾಯದ ಲ್ಲಿಯೂ ಅಷ್ಟೇ ಜಾಣನಾಗಿದ್ದುದರಿಂದ ಈತನು ಐವರು ಸುಲ್ತಾನರಲ್ಲಿ ಪರ ಸ್ಪರ ಕಲಹಗಳನ್ನು ಕಾಪಾಡಿ, ಕರ್ಣಾಟಕ ಸಾಮ್ರಾಜ್ಯವೆಂಬ ವಿಜಯ ನಗರ ಸಾಮ್ರಾಜ್ಯವನ್ನು ದರ್ಪದಿಂದ ಆಳಿದನು. ಬಿಜಾಪುರ, ಅಹಮ್ಮದ ನಗರ, ಗೋಲಕೊಂಡೆಯ ಸುಲ್ತಾನರು ಪ್ರತಿಯೊಬ್ಬರೂ ಒಂದೊಂದು ಸಂದರ್ಭದಲ್ಲಿ ರಾಮರಾಯನಿಂದ ಪರಾಭೂತರಾಗಿದ್ದರು. ಈ ಸಂದರ್ಭ ಗಳಲ್ಲಿ ಸದಾಶಿವನಾಯಕನು ರಾಮರಾಯನಿಗೆ ಬಲಗೈಯಂತಿದ್ದನು. ಈತನು ಚಂದ್ರಗುತ್ತಿಯ ಪಾಳೆಯಗಾರನ ಬಲವನ್ನು ಮುರಿದು, ಅವನನ್ನು ವಿಧೇಯನನ್ನಾಗಿ ಮಾಡಿ, ಬಾರಕೂರು, ಮಂಗಳೂರುಗಳಲ್ಲಿ ತುಂಟರನ್ನು

ಅಡಗಿಸಿ, ಮಲೆರಾಜ್ಯ ಅಥವಾ ಆರಗದ ಸೀಮೆಯೆಂದು ಹೆಸರಾಗಿದ್ದ ಪಶ್ಚಿಮ ಭಾಗವೆಲ್ಲವನ್ನೂ ಆಳುತ್ತಿದ್ದನು. ೧೫೪೯ರಲ್ಲಿ ಬಿಜಾಪುರದ ಅದಿಲಷಹ ನೊಡನೆ ನಡೆದ ಯುದ್ಧದಲ್ಲಿ ಸದಾಶಿವನಾಯಕನೇ ವಿಜಯನಗರ ಪಕ್ಷದ ದಳಪತಿಯಾಗಿದ್ದು ಬಿಜಾಪುರದ ಸೈನ್ಯವನ್ನು ಸೋಲಿಸಿದ್ದಲ್ಲದೆ ಸಾಹಸಪಟ್ಟು ಕಲ್ಯಾಣಿಯನ್ನು ಅದಿಲಷಹನಿಂದ ಕಸಿದುಗೊಂಡನು. ಬಿದರೆಯ ಸುಲ್ತಾನನೊಡನೆ ಯುದ್ಧ ಒದಗಿದಾಗ ಸದಾಶಿವನಾಯಕನೇ ಹೊರಟು, ಬಿದರೆಯ ಸುಲ್ತಾನನನ್ನು ಸೆರೆಹಿಡಿದನು. ದಕ್ಷಿಣದಲ್ಲಿ ತಿರುವಾಂಕೋಡಿನಲ್ಲಿ ಯುದ್ಧ ವೊದಗಲು, ಅಲ್ಲಿಯೂ ಸದಾಶಿವನಾಯಕನು ಸಾಮರ್ಥ್ಯವನ್ನು ತೋರಿ ದನು. ಬಂಕಾಪುರದಲ್ಲಿ ಮಾದರಸನೆಂಬುವನು ತೊಂದರೆಕೊಟ್ಟಾಗ ಸದಾ ಶಿವನಾಯಕನು ಅವನನ್ನು ಸೋಲಿಸಿ ಹಿಡಿದುಕೊಂಡು ಬಂದು, ರಾಮ ರಾಯನಿಗೆ ಒಪ್ಪಿಸಿದನು. ಈ ಸದಾಶಿವನಾಯಕನೇ ಕೆಳದಿ, ಭಟ ಕಲ್ಲು, ಚಂದ್ರಗಿರಿ ದುರ್ಗಗಳನ್ನು ಕಟ್ಟಿದವನು. ಈ ರೀತಿಯಲ್ಲಿ ಪ್ರಭುಸೇವೆ ಮಾಡಿ, ಈತನು ಮುಂದೆ ನಡೆದ ಘೋರಯುದ್ಧವಾದ ಮೇಲೆ ಪಟ್ಟವನ್ನು ತನ್ನ ಮಗನಿಗೆ ಕಟ್ಟಿ, ತಾನು ವೈರಾಗ್ಯವನ್ನು ಕೊಂಡು, ಕಾಡಿಗೆ ಹೋಗಿ ಕಾಲವಾದನು.

ರಕ್ಕಸ ತಗಡಿ ೧೫೬೫.

ಒಬ್ಬೊಬ್ಬರಾಗಿ ರಾಮರಾಯನನ್ನು ಎದುರಿಸಿ ಗೆಲ್ಲುವುದು ಅಸಾಧ್ಯ ವೆಂಬು ಅನುಭವದಿಂದಲೇ ಷಾಹಿಸುಲತಾನರಿಗೆ ತಿಳಿದು ಬಂದು, ೧೫೬೪ ರಲ್ಲಿ ಅವರೆಲ್ಲರೂ ಒಟ್ಟುಗೂಡಿದರು. ಈ ಸಂದರ್ಭವನ್ನು ನಿರೀಕ್ಷಿಸಿ ಕೊಂಡೇ ಇದ್ದ ರಾಮರಾಯನಿಗೆ ಆಗ ತೊಂಬತ್ತು ವರ್ಷಗಳಾಗಿದ್ದುವು. ಆದಾಗ್ಯೂ ರಾಮರಾಯನು ತರುಣನಂತೆ ಯುದ್ಧಸನ್ನದ್ದನಾಗಿ ಧೈರ್ಯೋ ತ್ಸಾಹಗಳಿಂದ ಯುದ್ಧಕ್ಕೆ ಹೊರಟನು. ಎರಡು ಪಕ್ಷಗಳಿಗೂ ಕೃಷ್ಣಾ ನದಿಗೆ ದಕ್ಷಿಣದಲ್ಲಿ ರಕ್ಕಸ ತಗಡಿ ಎಂಬ ಹಳ್ಳಿಗಳ ಸಮೀಪದಲ್ಲಿ ಘೋರ ವಾದ ಕದನವು ನಡೆಯಿತು. ಹಿಂದೂಗಳ ಪಕ್ಷಕ್ಕೇ ಜಯವಾಗುತ್ತಿದ್ದ ಸಮಯದಲ್ಲಿ ರಾಮರಾಯನ ಸೈನ್ಯದಲ್ಲಿಯೇ ಇದ್ದ ಇಬ್ಬರು ಮುಸ ಲ್ಮಾನ ದಳಪತಿಗಳು ಹಟಾತ್ತಾಗಿ ಶತ್ರು ಪಕ್ಷವನ್ನು ಸೇರಿಕೊಳ್ಳಲು ವ್ಯೂಹ ಭಂಗವಾಗಿ ರಾಮರಾಯನು ಸೆರೆಸಿಕ್ಕಿದನು. ಶತ್ರುಗಳು ಆ ವೃದ್ಧವೀರನ ತಲೆಯನ್ನು ಕಡಿಸಿ, ಎಲ್ಲರಿಗೂ ಕಾಣುವಂತೆ ಎತ್ತಿಹಿಡಿಸಿ

ದರು. ಕೂಡಲೇ ವಿಜಯನಗರದ ದಳವು ಪಲಾಯನವಾಯಿತು. ರಾಮ ರಾಯನ ತಮ್ಮಂದಿರು ತಿರುಮಲರಾಯ ಮತ್ತು ವೆಂಕಟಾದ್ರಿಗಳು ರಾಜಧಾನಿಗೆ ಬಂದು, ಬೊಕ್ಕಸವನ್ನು ಸಾಗಿಸಿಕೊಂಡು, ಚಂದ್ರಗಿರಿಗೂ ಆ ಮೇಲೆ ಪೆನುಗೊಂಡೆಗೂ ಹೊರಟರು. ಇದೇ ಪ್ರಸಿದ್ಧವಾದ ತಾಳೀಕೋಟೆಯ ಯುದ್ಧ. ಈ ಕಾಳಗದಲ್ಲಿ ಸದಾಶಿವನಾಯಕನಿದ್ದನೋ ಇಲ್ಲವೋ ತಿಳಿದಿಲ್ಲ. ಯುದ್ಧಕ್ಕೆ ಮೊದಲು ಬೇಲೂರಿನ ಎರೆ ಕೃಷ್ಣಪ್ಪನಾಯಕನು ವಿಜಯನಗರದ ಕೋಟೆಯನ್ನು ವಿಸ್ತರಿಸುವುದರಲ್ಲಿ ನಿಯುಕ್ತನಾಗಿದ್ದನು. ಆದ್ದರಿಂದ ಆತ ನಿದ್ದರೂ ಇದ್ದಿರಬಹುದು. ತಾಳೀಕೋಟೆಯ ಕದನವು ಮುಖ್ಯವಾದುದು. ಏಕಂದರೆ ಸಾಮ್ರಾಜ್ಯ ಕ್ಷಯಕ್ಕೆ ಅದೇಮೊದಲು, ಅದೇಕಾರಣ.

ಸಾಮ್ರಾಜ್ಯದ ಅವಸ್ಥೆ.

ತಿರುಮಲರಾಯನು ರಾಜಧಾನಿಯನ್ನು ಬಿಟ್ಟುಹೋದ ಕೂಡಲೆ ರಕ್ಷಣೆಯಿಲ್ಲದ ವಿಜಯನಗರವು ಸುಲ್ತಾನರ ಪಾಲಾಯಿತು. ಜಯಶಾಲಿಗಳಾದ ಸುಲ್ತಾನರು ಅಲ್ಲಿಗೆ ಬಂದು, ಊರನ್ನು ಕೊಳ್ಳೆಹೊಡೆದು, ನಾಶಮಾಡಿ ತಮ್ಮ ತಮ್ಮ ರಾಜ್ಯಗಳಿಗೆ ಹೋದರು. ಇತ್ತ ತಿರುಮಲರಾಯನು ಪೆನುಗೊಂಡೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕೃಷ್ಣಾನದಿಯ ಗಡಿಯನ್ನು ಬಿಟ್ಟುಕೊಟ್ಟನು ; ಸೆರೆಯಲ್ಲಿದ್ದ ಸದಾಶಿವರಾಯನನ್ನು ಕೊಲ್ಲಿಸಿ, ತನ್ನ ವಂಶವನ್ನೇ ಸ್ಥಾಪಿಸಿದನು. ಉಳಿದಿದ್ದ ರಾಜ್ಯದಲ್ಲಿ ಪೆನುಗೊಂಡೆ, ಉದಯಗಿರಿ, ಶ್ರೀರಂಗಪಟ್ಟಣ, ಶೆಂಜಿ, ತಂಜಾವೂರು ಮತ್ತು ಮಧುರೆಗಳಲ್ಲಿ ಸಾಮಂತರನ್ನು ನಿಯಮಿಸಿದನು. ಪಶ್ಚಿಮದ ಮತ್ತು ಉತ್ತರದ ಭಾಗವು ಸ್ವತಂತ್ರರಾಗಬೇಕೆನ್ನುತ್ತಿದ್ದ ಪಾಳೆಯಗಾರರ ಆಳಿಕೆಗೂ ಬಿಜಾಪುರದ ಸುಲ್ತಾನರ ದಂಡಯಾತ್ರೆಗಳಿಗೂ, ಪಶ್ಚಿಮ ತೀರಪ್ರದೇಶವು ಪೋರ್ಚುಗೀಸರ ಪ್ರಾಬಲ್ಯಕ್ಕೂ ಈಡಾಯಿತು. ಬಿಜಾಪುರ ಮತ್ತು ಗೋಲಕೊಂಡೆಯ ಸುಲ್ತಾನರು ತಮ್ಮಲ್ಲಿಯೇ ಒಪ್ಪಂದ ಮಾಡಿಕೊಂಡು, ಸಾಮ್ರಾಜ್ಯದ ಪಡುವಣ ಭಾಗವನ್ನು ಬಿಜಾಪುರದವರೂ, ಮೂಡಣಭಾಗವನ್ನು ಗೋಲಕೊಂಡೆಯವರೂ ಆಕ್ರಮಿಸಲು ಅನುವಾದರು. ತಿರುಮಲರಾಯನ ಬಳಿಕ ಆಳಿದ ಮೊದಲನೇ ಶ್ರೀರಂಗರಾಯನ ಕಾಲದಲ್ಲಿ ಪೆನುಗೊಂಡೆಯ ಮೇಲೆಯೇ ಸುಲ್ತಾನರು ಪದೇಪದೇ ದಂಡೆತ್ತಿ ಬರುತ್ತಿದ್ದರು. ಒಂದುಸಲ ಗೋಲಕೊಂಡೆಯ

ಸುಲ್ತಾನನ ಸ್ನೇಹದಿಂದ ರಾಜಧಾನಿಯು ಉಳಿಯಿತು. ಮತ್ತೊಂದು ಸಲ ಬಿಜಾಪುರದವರು ಶ್ರೀರಂಗರಾಯನನ್ನೇ ಸೆರೆಹಿಡಿದರು. ಕಡೆಗೆ ೧೫೭೭ ರಲ್ಲಿ ಬಿಜಾಪುರದವರು ಮುತ್ತಿದಾಗ ಜಗದೇವರಾಯನೆಂಬಾತನು ಶತ್ರುಗಳನ್ನು ಸೋಲಿಸಿ, ಬಿಜಾಪುರದ ದಂಡನಾಯಕರಬ್ಬರನ್ನು ಸೆರೆಮಾಡಿದನು. ಮುಂದಕ್ಕೆ ಶ್ರೀರಂಗರಾಯನು ಗೋಲಕೊಂಡೆಯವರನ್ನೂ ಪ್ರತಿಭಟಿಸಲು ಸಮರ್ಥನಾಗಿ ಜಗದೇವರಾಯನಿಗೆ ಶಾಲ್ಯದಿಂದ ಮಲೆನಾಡಿನವರೆಗೂ ಇರುವ ಪ್ರದೇಶವನ್ನು ಕೊಟ್ಟನು.

ಜಗದೇವರಾಯನು ಚೆನ್ನಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜಭಕ್ತಿಯಿಂದ ಆಳಿದನು. ಇದೇ ಕಾಲದಲ್ಲಿಯೇ ಸಾಲನಾಯಕನೆಂಬಾತನು ಕಂದಿಕೆರೆ, ಶೆಟ್ಟಿಕೆರೆಗಳನ್ನು ವಶಪಡಿಸಿಕೊಂಡು ಶ್ರೀರಂಗರಾಯನ ಸಾಮಂತನಾಗಿ ಚಿಕ್ಕನಾಯಕನಹಳ್ಳಿಯನ್ನು ಕಟ್ಟಿಕೊಂಡು, ಸುತ್ತಮುತ್ತಣ ಪ್ರದೇಶವನ್ನು ಗೆದ್ದುಕೊಂಡು ಹಾಗಲವಾಡಿ ಮನೆತನದ ಮೂಲಪುರುಷನಾದನು. ಇತರ ಪಾಳೆಯಗಾರರೂ ಈ ಕಾಲದಲ್ಲಿ ಹುಟ್ಟಿಕೊಂಡರು. ಆದರೆ ಪಶ್ಚಿಮ ಭಾಗದಲ್ಲಿದ್ದವರು ಸ್ವತಂತ್ರರಾಗಬೇಕೆಂದೇ ಯತ್ನಿಸುತ್ತಲಿದ್ದರು. ೧೫೭೫ರಲ್ಲಿ ಶಂಕರರಾಯನೆಂಬಾತನು ಬಿಜಾಪುರದವರ ಸ್ನೇಹಕಟ್ಟಿ ಪಾಳೆಯಗಾರನಾಗಲು ಯತ್ನಿಸಿದನು. ಬಂಕಾಪುರವು ಇದಕ್ಕೆ ಮೊದಲೇ ಬಿಜಾಪುರಕ್ಕೆ ಸೇರಿತ್ತು.

ಇಮ್ಮಡಿ ವೆಂಕಟಪತಿರಾಯ, ೧೫೮೫–೧೬೧೪.

ಶ್ರೀರಂಗರಾಯನು ೧೫೮೫ರಲ್ಲಿ ತೀರಿಹೋದನು. ಆತನ ತರುವಾಯ ಇಮ್ಮಡಿ ವೆಂಕಟಪತಿದೇವರಾಯನು ೨೯ ವರುಷ ಕಾಲವಾಳಿದ್ದರಲ್ಲಿ ಸಮರ್ಥನೂ, ಚತುರನೂ ಆಗಿದ್ದುದರಿಂದ ಸಾಮ್ರಾಜ್ಯವನ್ನು ಪುನಃ ಕಟ್ಟಲು ಯತ್ನಿಸಿದನು. ೧೫೮೬–೮೭ರಲ್ಲಿ ಗೋಲಕೊಂಡೆಯ ಸುಲತಾನನು ದಂಡೆತ್ತಿಬರಲು ವೆಂಕಟಪತಿರಾಯನು ಅವನನ್ನು ಚೆನ್ನಾಗಿ ಸೋಲಿಸಿ, ಈಶಾನ್ಯದಲ್ಲಿ ನಷ್ಟವಾಗಿದ್ದ ಭಾಗವನ್ನು ಸಾಧಿಸಿದನು. ಬಿಜಾಪುರದ ಸುಲತಾನನೂ ಅದೇರೀತಿಯಲ್ಲಿಯೇ ಸೋತನು. ಶತ್ರುಗಳ ಕೈಸೇರಿದ್ದ ತುಂಗಭದ್ರಾ ಪ್ರದೇಶವು ಪುನಃ ಪ್ರಾಪ್ತವಾಯಿತು. ರಾಯನು ಬಂಕಾಪುರವನ್ನೂ ಸಾಧಿಸಿ, ಪೋರ್ಚುಗೀಸರೊಡನೆ ಸ್ನೇಹವನ್ನು ಬೆಳೆಸಿದನು.

ಈಮಧ್ಯೆ ವೇಲೂರಿನ ಮತ್ತು ಮಧುರೆಯ ನಾಯಕರು ಸ್ವತಂತ್ರರಾಗಲು
ಮಾಡಿದ ಯತ್ನವು ಭಂಗವಾಯಿತು. ಈ ರೀತಿಯಲ್ಲಿ ಇಮ್ಮಡಿ ವೆಂಕಟ
ಪತಿರಾಯನು ವಿಜಯನಗರ ಸಾಮ್ರಾಜ್ಯವು ಪುನಃ ತಲೆಯೆತ್ತುವಂತೆ ಜಯ
ಶಾಲಿಯಾಗುತ್ತಿದ್ದನು. ಆದರೂ ಚಂದ್ರಗಿರಿಯನ್ನೇ ರಾಜಧಾನಿಯನ್ನಾಗಿ
ಮಾಡಿಕೊಂಡನು.

ಸಮಯನಷ್ಟ.

ಹದಿನಾರನೇ ಶತಮಾನದ ಅಂತ್ಯದಲ್ಲಿ ಪ್ರಸಿದ್ಧ ಮುಘಲ ಬಾದಷಹ
ನಾಗಿದ್ದ ಅಕ್ಬರನು ಅಹಮ್ಮದ್‌ನಗರವನ್ನು ಗೆದ್ದು ತನ್ನ ಸಾಮ್ರಾಜ್ಯದಲ್ಲಿ
ಸೇರಿಸಿಕೊಂಡು, ಬಿಜಾಪುರ ಗೋಲಕೊಂಡೆಗಳ ಸುಲ್ತಾನರಿಗೆ ವಿರೋಧ
ವನ್ನು ಎಣಿಸಿ, ವೆಂಕಟಪತಿರಾಯನೊಡನೆ ಸ್ನೇಹಕಟ್ಟಲು ೧೬೦೦ರಲ್ಲಿ
ತನ್ನ ರಾಯಭಾರಿಯನ್ನು ಕಳುಹಿದನು. ಅಕ್ಬರನ ಇಂಗಿತವನ್ನು ಊಹಿ
ಸಿದ ಈ ರಾಯನು ಆ ರಾಯಭಾರಿಗೆ ಹೆಚ್ಚು ಆಸ್ಪದವನ್ನು ಕೊಡದೆ
ಹಾಗೆಯೇ ಹಿಂದಕ್ಕೆ ಕಳುಹಿಸಿದನು. ೧೬೦೪ರಲ್ಲಿ ಬಿಜಾಪುರದ ಅದಿಲ
ಷಹನು ಮುಘಲರ ಪ್ರಾಬಲ್ಯವನ್ನು ಕಂಡು ವೆಂಕಟಪತಿರಾಯನ
ಸ್ನೇಹವನ್ನೂ ಬೆಂಬಲವನ್ನೂ ಅಪೇಕ್ಷಿಸಿದನು. ಈ ರೀತಿಯಲ್ಲಿ ವಿಜಯ
ನಗರ ಸಾಮ್ರಾಜವು ಪೂರ್ವಸ್ಥಿತಿಯನ್ನು ಪಡೆಯುವಂತೆ ತೋರಿತು.
ಆದರೆ ಹಾಗಾಗಲು ಅಡ್ಡಿಗಳಿದ್ದವು. ಸದಾಶಿವರಾಯನನ್ನು ಅನ್ಯಾಯ
ವಾಗಿ ಕೊಲೆಮಾಡಿದ ವಂಶವೆಂಬ ಅಪಕೀರ್ತಿಯು ಅರವೀಡು ಮನೆತನಕ್ಕೆ
ತಟ್ಟಿತ್ತು. ಪೆನುಗೊಂಡೆ, ಚಂದ್ರಗಿರಿಗಳನ್ನೇ ರಾಜಧಾನಿಗಳನ್ನಾಗಿ ಮಾಡಿ
ಕೊಂಡಾಗ ಉತ್ತರದ ಮೇರೆಯು ಹಿಂದಕ್ಕೆ ಸರಿಯಿತು. ವಂಶಪಾರಂ
ಪರ್ಯವಾಗಿ ಸ್ಥಾಪಿತರಾದ ಸಾಮಂತರಲ್ಲಿ ದುರ್ಬಲರು ಅಧಿಕಾರಕ್ಕೆ ಬರಲಾ
ಸ್ಪದವಿದ್ದುದಲ್ಲದೆ ಸಹೋದರ ವ್ಯಾಜ್ಯಗಳೂ, ವಂಶದ್ವೇಷಗಳೂ, ಹುಟ್ಟಿ
ಪ್ರಬಲಗೊಂಡಿದ್ದವು. ೧೬೧೪ರಲ್ಲಿ ವೆಂಕಟಪತಿರಾಯನು ಸತ್ತಕೂಡಲೆ
ಪಟ್ಟಕ್ಕಾಗಿ ಜಗಳ ಮೊದಲಾಗಿ ಆತನ ಕಾಲದ ಒಗ್ಗಟ್ಟು ಕ್ಷಣಮಾತ್ರ
ದಲ್ಲಿ ಧ್ವಂಸವಾಯಿತು. ಮಧುರೆ, ವೇಲೂರು, ಶೆಂಜಿ ಮತ್ತು ತಂಜಾ
ವೂರಿನ ನಾಯಕರು ಅಂತಃಕಲಹಗಳಲ್ಲಿ ಒದ್ದಾಡಿದರು. ಪಟ್ಟಕ್ಕಾಗಿ
ನಡೆದ ಜಗಳದಲ್ಲಿ ಎರಡು ಪಕ್ಷಗಳು ಏರ್ಪಟ್ಟು ಸಾಮಂತರು ಸ್ವತಂ
ತ್ರರಾಗಿಬಿಟ್ಟರು.

೧೭ನೆ ಶತಮಾನದ ಪಾಳೆಯಗಾರರು

ಇಮ್ಮಡಿ ವೆಂಕಟಪತಿರಾಯನ ಕಾಲದಲ್ಲಿ ಇಕ್ಕೇರಿ, ಚಿತ್ರದುರ್ಗ, ಬೇಲೂರು, ಆವತಿ ಮತ್ತು ನಿಡುಗಲ್ಲುಗಳ ನಾಯಕರು ರಾಜಭಕ್ತಿಯುಳ್ಳವ ರಾಗಿಯೇ ಇದ್ದರು. ಇವರಲ್ಲದೆ ಅನೇಕ ಭಾಗಗಳಲ್ಲಿ ಪಾಳೆಯಗಾರ ರೆದ್ದು ಪಾಳೆಯಗಳನ್ನೂ ಸಣ್ಣಸಣ್ಣ ರಾಜ್ಯಗಳನ್ನೂ ಕಟ್ಟಿಕೊಂಡಿದ್ದರು. ರಕ್ಕಸತಗಡಿಯ ಯುದ್ಧವಾದ ಮೇಲೆ ಶ್ರೀರಂಗಪಟ್ಟಣ ಪ್ರಾಂತವೊಂದು ವಿನಾ ಉಳಿದ ಭಾಗವೆಲ್ಲವೂ ಪ್ರಬಲ ಪಾಳೆಯಗಾರರಿಂದ ತುಂಬಿತು. ಹೀಗೆ ಪ್ರಬಲಿಸಿದ ಪಾಳೆಯಗಾರರಲ್ಲಿ ಕೆಳದಿಯನಾಯಕರೇ ಅಗ್ರಗಣ್ಯರು. ಮಲೆನಾಡಿನ ವಿಶೇಷ ಭಾಗವು ಅವರ ಅಧೀನವಾಗಿತ್ತು. ತರುವಾಯ ಬೆಂಗಳೂರು, ಕೋಲಾರ ಜಿಲ್ಲೆಗಳ ಭಾಗವನ್ನು ಆಳಿದ ಆವತಿ ನಾಡ ಪ್ರಭುಗಳು ಎರಡನೆಯವರು. ಚೆನ್ನಪಟ್ಟಣವನ್ನು ರಾಜಧಾನಿಯನ್ನಾ ಗಿಟ್ಟುಕೊಂಡು ಜಗದೇವರಾಯನ ವಂಶದವರು ೧೬೪೦ರವರೆಗೆ ಬಲಿಷ್ಠ ರಾಗಿಯೇ ಆಳಿದರು. ಬಾಲಂ ಪ್ರಾಂತದಲ್ಲಿ ಐಗೂರು ನಾಯಕರು ಹದಿನೆಂಟನೇ ಶತಮಾನದವರೆಗೂ ಸ್ವತಂತ್ರರಾಗಿಯೇ ಆಡಳಿತಮಾಡು ತ್ತಿದ್ದರು. ಹಾಗಲವಾಡಿ, ನಿಡುಗಲ್ಲು ಮತ್ತು ಮಧುಗಿರಿಗಳಲ್ಲಿ ಹೆಸರು ವಾಸಿಯಾದ ಪಾಳೆಯಗಾರರು ೧೬೭೮ರ ವರೆಗೆ ಆಳಿದರು. ಚಿತ್ರದುರ್ಗ ದಲ್ಲಿ ಮದಕರಿನಾಯಕರೆಂದು ಹೆಸರು ಪಡೆದ ವಂಶದವರು ಹೈದರನ ಕಾಲದವರೆಗೂ ಪ್ರಖ್ಯಾತಿಯಿಂದಿದ್ದರು. ಕೆಳದಿಗೂ ಚಿತ್ರದುರ್ಗಕ್ಕೂ ನಡುವೆ ಬಸವಾಪಟ್ಟಣದ ಪಾಳೆಯಗಾರರಿದ್ದರು. ಇವರೆಲ್ಲರೂ ಒಬ್ಬೊಬ್ಬ ರಾಗಿ ನಾಶಹೊಂದಿದ ವಿವರವು ಮುಂದಿನ ಕಾಲಕ್ಕೆ ಸೇರಿದ್ದು.

ದೇಶ ವಿಭಾಗ—ಪಾಳೆಯಗಾರರ ಆಡಳಿತ.

ಹೊಯಿಸಳ ಸಾಮ್ರಾಜ್ಯದಲ್ಲಿದ್ದಂತೆಯೇ ವಿಜಯನಗರದ ಸಾಮ್ರಾಜ್ಯ ದಲ್ಲಿಯೂ ದೇಶವು ಆಡಳಿತಕ್ಕಾಗಿ ಹಲವು ವಿಭಾಗಗಳಾಗಿ, ವಿಭಾಗಗಳಿಗೆ ತಕ್ಕಂತೆ ಅಧಿಕಾರಿಗಳು ನಿಯಮಿತರಾಗುತ್ತಿದ್ದರು. ಆದರೆ ಹೊಯಿಸಳ ಸಾಮ್ರಾಜ್ಯದಲ್ಲಿ ಒಂದೇ ವಿಭಾಗದಲ್ಲಿ ಸ್ಥಿರವಾಗಿ ಪರಂಪರೆಯಾಗಿ ಒಂದೇ ಮನೆತನದವರು ರಾಜಾಧಿಕಾರಿಗಳಾಗಿ ನೆಲೆಸಲು ಅವಕಾಶವಿರಲಿಲ್ಲ. ವಿಜಯನಗರ ಸಾಮ್ರಾಜ್ಯದ ಮೊದಲ ಕಾಲದಲ್ಲಿ ಮಲೆನಾಡು ಆರಗದಸೀಮೆ

ಯೆಂತಲೂ, ಮೂಡಲಬಾಗಿಲು ಅಥವಾ ಮುಳಬಾಗಿಲಿನಲ್ಲಿ ಕೇಂದ್ರವಿದ್ದ ಬಯಲನಾಡು ಮೂಡಲ ಸೀಮೆಯೆಂತಲೂ ವಿಂಗಡವಾಗಿತ್ತು. ತುರುಷ್ಕ ರೊಡನೆ ಹೋರಾಟವು ನಿರಂತರವೂ ನಡೆಯುತ್ತಿದ್ದುದರಿಂದ ವಿಜಯನಗರದ ಅರಸರು ಪಾಳೆಯಗಾರರಿಗೆ ಪ್ರೋತ್ಸಾಹಕೊಡುವ ನೀತಿಯನ್ನವಲಂಬಿಸ ಬೇಕಾಗಿತ್ತು. ಗುಮ್ಮನಾಯಕನ ಪಾಳೆಯವೊಂದು ಪಿನಾ ಉಳಿದ ಪಾಳೆಯಪಟ್ಟುಗಳೆಲ್ಲವೂ ೧೫-೧೬ನೆ ಶತಮಾನಗಳಲ್ಲಿ ಸ್ಥಾಪಿತವಾದವು. ಸಾಹಸಿಗಳಾದವರು ಪಾಳೆಯಗಾರರೆನಿಸಿ, ಕೋಟೆ ಕೊತ್ತಲಗಳನ್ನು ಕಟ್ಟಿ ಕೊಂಡು, ಅರಸರಿಗೆ ವಾರ್ಷಿಕವಾದ ಪೊಗದಿಯನ್ನೂ, ಯುದ್ಧಗಳಲ್ಲಿ ಸಹಾಯವನ್ನೂ ಕೊಡುತ್ತಲಿದ್ದುದರಿಂದ ಈ ಕಾಲವನ್ನೇ ಪಾಳೆಯಗಾರರ ಕಾಲವೆನ್ನಬಹುದು. ಪೂರ್ವ ರಾಜವಂಶಗಳ ಸಂಬಂಧಿಗಳಾಗಿಯೋ, ಸ್ವತಃ ಶೂರರಾಗಿಯೋ ವಿಜಯನಗರದ ಅರಸುಗಳನ್ನು ಮೆಚ್ಚಿಸಿ, ಅವರಿಂದ ಪಾಳೆಯಕಟ್ಟಿಕೊಳ್ಳಲು ಅನುಮತಿಯನ್ನು ಪಡೆದ ಇವರು ಕೂಡಲೆ ತಮ್ಮ ಇಷ್ಟಮಿತ್ರರೊಡನೆ ಅಲ್ಲಿ ನೆಲೆಸಿ, ಕೆಲಸಗಾರರನ್ನು ಕರೆಸಿ, ದುರ್ಗಗಳನ್ನು ಕಟ್ಟಿಕೊಂಡು, ಕಾಡುಗಳನ್ನು ನೆಲಸಮಮಾಡಿ, ರೈತರನ್ನೂ ವರ್ತಕರನ್ನೂ ಬರಮಾಡಿಕೊಂಡು, ಕೆರೆ ಕುಂಟೆಗಳನ್ನೂ, ಸತ್ರದೇವಾಲಯ ಗಳನ್ನೂ ಕಟ್ಟಿಸಿ ಆಳುತ್ತಲಿದ್ದರು. ಆದ್ದರಿಂದ ಪಾಳೆಯಗಾರರು ಕೇವಲ ಸ್ವಾರ್ಥಸಾಧಕರಾಗಿದ್ದ ಮಾನವಪಶುಗಳಾಗಿರಲಿಲ್ಲ. ದೇಶದ ಐಕ್ಯತೆಯ ಧ್ವಂಸಕ್ಕೆ ಪಾಳೆಯಗಾರರ ಪ್ರಾಬಲ್ಯವೇ ಮೂಲಕಾರಣವಾದಾಗ್ಯೂ, ಅವರ ಆಡಳಿತದಲ್ಲಿ, ಪ್ರಜಾರಕ್ಷಣೆ ಪೋಷಣೆಗಳು ತಕ್ಕಂತೆ ನಡೆಯುತ್ತಿದ್ದವು.

ಯುದ್ಧ ಸಾಹಸ.

ಸದಾ ಯುದ್ಧವಾಗುತಲಿದ್ದ ಕಾಲದಲ್ಲಿ ಪ್ರತಿ ಪಾಳೆಯಗಾರನೂ ಕೋಟೆ ಕಟ್ಟಿಕೊಂಡೇ ಇರುತ್ತಿದ್ದನು. ನಮ್ಮ ದೇಶದಲ್ಲಿ ಕಾಣುವ ಕೋಟೆಗಳಲ್ಲಿ ಬಹು ಭಾಗವು ಈ ಕಾಲದಲ್ಲಿ ಹುಟ್ಟಿದುದೇ. ಕೋಟೆಯ ಕಾಪಿನಲ್ಲಿಯೂ, ಸೈನ್ಯದ ಶಿಸ್ತಿನಲ್ಲಿಯೂ ಪಾಳೆಯಗಾರರು ಬಲು ಎಚ್ಚರಿಕೆ ಯಿಂದಿದ್ದು ಶೌರ್ಯ ಸಾಹಸಗಳನ್ನು ವೃದ್ಧಿಪಡಿಸುವ ಏರ್ಪಾಟುಗಳನ್ನು ಮಾಡಿಕೊಂಡಿದ್ದರು. ಸಾಹಸದ ಚಮತ್ಕೃತಿಯಲ್ಲಿ ಹೆಸರು ಪಡೆದ ಪಾಳೆಯಗಾರರು ಈಗಲೂ ಜನರ ನೆನಪಿನಲ್ಲಿರುತ್ತಾರೆ. ದುರ್ಗದ ಏಕಲವ್ಯ

ನೆನಿಸಿದ ತಿಮ್ಮಣ್ಣನಾಯಕ, ದೊಡ್ಡ ವಸಂತನಾಯಕ ಮತ್ತು ಹಿರಿಯ ಸಂಕಣ್ಣ ನಾಯಕರ ವೃತ್ತಾಂತಗಳು ಈಗಲೂ ಸೋಜಿಗವನ್ನುಂಟುಮಾಡುತ್ತವೆ. ಅಂಗಸಾಧನೆಯಲ್ಲಿ ಗಮನವು ವಿಶೇಷವಾಗಿದ್ದುದರಿಂದ ಗರಡಿಯ ಮನೆಗಳು ಹೆಚ್ಚಿದವು; ಪ್ರತಿಹಳ್ಳಿಯಲ್ಲೂ ಗರಡಿಯ ಮನೆಯೊಂದಿಗೆ ಹನುಮಂತ ದೇವರ ಗುಡಿಯೂ ಸಿದ್ಧವಾಯಿತು. ಯುದ್ಧದಲ್ಲಿ ಅರಸರು ಆನೆ, ಒಂಟೆ, ಕುದುರೆ ಮತ್ತು ಕಾಲ್ಬಲಗಳನ್ನು ಕಟ್ಟಿಕೊಂಡಿದ್ದರು. ಪಾಳೆಯಗಾರರು ಕತ್ತಿ, ಕಠಾರಿ, ಭರ್ಜಿ, ಅಂಬು, ಕವಣೆ, ಕೋವಿ, ಫಿರಂಗಿಗಳನ್ನು ಉಪಯೋಗಿಸುತ್ತ ದುರ್ಗಗಳ ಮುತ್ತಿಗೆಗಳಲ್ಲಿ ನಿಪುಣರೆನಿಸಿದ್ದರು. ಹೊಯಿಸಳರ ರಕ್ತಕೊಡಗಿಯ ಪದ್ಧತಿಯನ್ನೇ ಯಥಾಶಕ್ತಿ ಅನುಸರಿಸುತ್ತ ಕಾದಾಡಿ ಸತ್ತ ವೀರರ ಮಕ್ಕಳ ಪೋಷಣೆಗೆ ಹಾಲು ಬೆಣ್ಣೆ ಹಣ ವೆಂಬ ಹೆಸರಿನಿಂದ ದ್ರವ್ಯ ಸಹಾಯ ಮಾಡುತ್ತಿದ್ದರು. ಯುದ್ಧ ಸಮಯದಲ್ಲಿ ಹೇಡಿಗಳೆಂದು ಕಂಡವರು ಓಡಿಹೋಗದ ಹಾಗೆ ಅವರ ಕಾಲಿಗೆ ಸರಪಳಿಯನ್ನು ಬಿಗಿದು ಕಟ್ಟಿಸುತ್ತಿದ್ದರಂತೆ.

ಆಡಳಿತದ ವಿಭಾಗ.

ಹಳ್ಳಿಗಳಲ್ಲಿ ಹಿಂದೆಯೇ ನಡೆಯುತ್ತಿದ್ದ ಪನ್ನೆರಡು ಆಯಗಾರರ ಶಿಸ್ತೂ ಎಂಬುದೇ ಈ ಕಾಲದಲ್ಲಿಯೂ ನಡೆಯಿತು. ರಾಜಾದಾಯದ ನಿಮಿತ್ತವಾಗಿ ಕೆಲವು ಹಳ್ಳಿಗಳ ಕೂಟಕ್ಕೆ ಹೋಬಳಿಯೆಂತಲೂ, ಕೆಲವು ಹೋಬಳಿಗಳ ಗುಂಪಿಗೆ ಗಡಿಯೆಂತಲೂ, ಅನೇಕ ಗಡಿಗಳು ಕೂಡಿ ಒಂದು ಸೀಮೆಯೆಂತಲೂ ಆಳಿಕೆಯಲ್ಲಿ ವ್ಯವಹಾರವಾಗಿತ್ತು. ನೆಲಗಂದಾಯ, ಸುಂಕ, ತೆರಿಗೆ, ಪೊಗದಿ, ಕಪ್ಪ, ಕಾಣಿಕೆ, ದಂಡಗಳು ಈ ಕಾಲದಲ್ಲಿ ಹೆಚ್ಚಿದವು. ಆದಾಯದ ವಿಶೇಷ ಭಾಗವು ಸೈನ್ಯಕ್ಕೇ ಆಗುತ್ತಿತ್ತು. ಆಳುತ್ತಿದ್ದ ಪ್ರತಿಯೊಬ್ಬನೂ ತನ್ನ ಯೋಗ್ಯತೆಗೆ ಮೀರಿದ ಸೈನ್ಯ ಬಲವನ್ನೇ ಈ ಕಾಲದಲ್ಲಿ ಪೋಷಿಸುತ್ತಿದ್ದನು. ಉಳಿದ ಹಣದಲ್ಲಿ ಪೊಗದಿ ಮತ್ತು ಅರಮನೆಯ ವೆಚ್ಚವು ನಡೆದು, ಮತಗುರುಗಳಿಗೂ ವಿದ್ವಾಂಸರಿಗೂ ಪ್ರೋತ್ಸಾಹ ದೊರೆಯಬೇಕಾಗಿತ್ತು.

ಮತ.

ಹಿಂದಿನ ಕಾಲದಲ್ಲಿಯೇ ಶೈವರಿಗೂ ವೈಷ್ಣವರಿಗೂ ವೈಷಮ್ಯ ತೋರಿತ್ತು. ಬುಕ್ಕರಾಯನು ಇಬ್ಬರಿಗೂ ಮೈತ್ರಿಯನ್ನುಂಟು ಮಾಡಿದ ಒಂದು

ಸನ್ನಿವೇಶವು ಸ್ಮರಣಾರ್ಹವಾಗಿದೆ. ವಿಜಯನಗರದ ಅರಸರು ಮೊದಲು ಶೈವರಾಗಿದ್ದು ತರುವಾಯ ವೈಷ್ಣವರಾದಾಗ್ಯೂ ಎಲ್ಲ ಮತಸ್ಥರನ್ನೂ ಸಮವಾಗಿ ಕಂಡು ಪ್ರೋತ್ಸಾಹಿಸುತ್ತಿದ್ದರು. ಅವರಂತೆಯೇ ಪಾಳೆಯಗಾರರೂ ಸಹ ಎಲ್ಲ ಮತಗುರುಗಳನ್ನೂ ಗೌರವಿಸುತ್ತಿದ್ದರು. ಶೃಂಗೇರಿಯ ಪೀಠಕ್ಕೆ ಸಂಗಮ ವಂಶದವರೂ, ಇಕ್ಕೇರಿಯ ನಾಯಕರೂ ವಿಶೇಷವಾದ ದಾನಗಳನ್ನು ಮಾಡಿ ಬೆಂಬಲ ಕೊಟ್ಟರು. ತೌಳವ ಮತ್ತು ಆರವೀಡು ವಂಶದವರ, ಆಳಿಕೆಯಲ್ಲಿ, ವೈಷ್ಣವರಿಗೆ ವಿಶೇಷವಾದ ಸನ್ಮಾನವು ದೊರೆಯಿತು. ಅನೇಕ ದೇವಾಲಯಗಳು ಎದ್ದವು.

ಸಾಹಿತ್ಯ—ನೀತಿ ಕ್ಷಯ.

ಈ ಕಾಲದ ಸಾಹಿತ್ಯದಲ್ಲಿ ಹಿಂದೂ ಮತ ಪ್ರಸಾರವು ಹೆಚ್ಚಾಗಿ ಕಾಣುವುದು. ನಾರಣಪ್ಪ, ತಿಮ್ಮಣ್ಣ ಮತ್ತು ಪುರಂದರದಾಸರು ಹೆಸರುವಾಸಿಯಾದವರು. ವಾಸ್ತುಶಿಲ್ಪಗಳು ಹಂಪೆಯ ಪಾಳು ನೋಟದಲ್ಲಿ ಕಾಣುವುವು. ಆಕೃತಿ ಪ್ರಮಾಣಗಳಲ್ಲಿ ಕಟ್ಟಡಗಳೂ, ದೇವಾಲಯಗಳೂ ದೊಡ್ಡವಾಗಿವೆ; ಸ್ಥೂಲವಾದ ಮಹಿಮೆಯುಂಟು. ಆದರೆ ಹೊಯಿಸಳರ ಕಾಲದ ರಮ್ಯತೆಯೂ ಸೊಬಗೂ ಸಾಹಿತ್ಯದಲ್ಲಾಗಲಿ, ಶಿಲ್ಪದಲ್ಲಾಗಲಿ ಕಾಣುವುದಿಲ್ಲ. ಇದಕ್ಕೆ ಕಾಲಸ್ಥಿತಿಯೇ ಕಾರಣವಾಗಿತ್ತು. ಅವಸರದಲ್ಲಿ ದೇವಾಲಯಗಳೂ ಮಠಗಳೂ ಎದ್ದವು; ವೈದಿಕ ವೃತ್ತಿಯನ್ನವಲಂಬಿಸಿದವರಿಗೆ ಪ್ರಾಧಾನ್ಯವೊದಗಿತು; ಬಹಿರಾಚಾರಗಳು ಹೆಚ್ಚಿದವು. ಹಿಂದೂಗಳಲ್ಲಿಯೂ ಮುಸಲ್ಮಾನರಲ್ಲಿಯೂ ತಂತಮ್ಮ ಪ್ರತ್ಯೇಕತೆಯನ್ನು ಬೀರಿ ತೋರಿದ ಬಹಿರ್ಲಕ್ಷಣಗಳು ಮುಖ್ಯವೆನಿಸಿ, ಇಬ್ಬರಲ್ಲಿಯೂ ಧರ್ಮದ ತಿರುಳು ಆಚಾರಗಳಲ್ಲಿ ಮುಳುಗಿ ಹೋಯಿತು. ಮೊದಲು ಧರ್ಮರಕ್ಷಣೆಗಾಗಿ ಪ್ರಾರಂಭವಾದ ಉದ್ಯಮವು ಕಾಲಕ್ರಮೇಣ ರಾಜರ ಪರಸ್ಪರದ್ವೇಷಾಸೂಯೆಗಳಲ್ಲಿಯೂ ಪ್ರತಿಷ್ಠಾಸ್ಪರ್ಧೆಗಳಲ್ಲಿಯೂ ಅದೃಶ್ಯವಾಯಿತು. ವಿಜಯನಗರ ಸಾಮ್ರಾಜ್ಯವು ಒಡೆದ ಕೂಡಲೆ ಈ ನೀತಿಕ್ಷಯವು ಷಾಹಿರಾಜ್ಯಗಳಲ್ಲಿಯೂ, ನಾಯಕರ ಪಾಳೆಯಗಳಲ್ಲಿಯೂ ಪ್ರಬಲವಾಯಿತು. ಸಾಮಾನ್ಯ ವರ್ಗಕ್ಕೆ ಸೇರಿದ ಹಿಂದೂಗಳೂ ಮುಸಲ್ಮಾನರೂ ಪರಸ್ಪರ ಸ್ನೇಹ ಭಾವವನ್ನು ಒಂದುಕಡೆ ಬಳೆಸುತ್ತಿದ್ದರು; ಮತ್ತೊಂದು ಕಡೆ ಆಳರಸರು

ಕೆಲವು ವೇಳೆ ಈ ವಿರೋಧವನ್ನು ಕಾರಣವಾಗಿಯೂ, ಮತ್ತೆ ಕೆಲವು ವೇಳೆ ನಿಮಿತ್ತವಾಗಿಯೂ ಮಾಡಿಕೊಂಡು, ತಮ್ಮ ಸ್ವಾರ್ಥಸಾಧನೆಯಲ್ಲಿ ಆಸಕ್ತರಾದರು. ನೀತಿಯ ತಿರುಳು ಮಾಯವಾದ ಮೇಲೆ ನಡತೆಯಲ್ಲಿ ಗಾಂಭೀರ್ಯವು ಅದೃಶ್ಯವಾಗಿ ಕ್ಷುದ್ರತೆ, ಸುಖಾಪೇಕ್ಷೆ ಮತ್ತು ನಿರ್ಮಾನುಷ ಕ್ರೌರ್ಯಗಳು ಕಾಣಿಸಿಕೊಂಡು ದೇಶವು ಸಾಸಿರನಾಯಕರ ಪಾಲಾಗಲು ಸಿದ್ಧವಾಯಿತು.

ದಖನ್ನಿನ ಇತಿಹಾಸದಲ್ಲಿ ವಿಜಯನಗರದ ಕಾಲವು ಶಾಂತಿಯ ಕಾಲವಲ್ಲ; ಅವಾಂತರದ ಕಾಲ. ಮುತ್ತಿಕೊಂಡು ಬಂದು, ದೇವಾಲಯಗಳನ್ನು ಕೆಡಹಿಸಿ, ದೇಶವನ್ನು ಲೂಟಿ ಮಾಡುತ್ತ ತಮ್ಮ ಮತವನ್ನು ಸಕಲ ವಿಧಗಳಲ್ಲಿಯೂ ವಿಸ್ತಾರಗೊಳಿಸಲು ಯತ್ನಿಸಿದ ಮುಸಲ್ಮಾನರನ್ನು ಅಡ್ಡಿ ಮಾಡುವುದೇ ವಿಜಯನಗರದ ಉದ್ದೇಶವಾಗಿತ್ತು. ಆದ್ದರಿಂದ ಹಿಂದೂ ಮತದ ಪ್ರಚಾರವೂ ಪ್ರತಿಯಾಗಿ ನಡೆಯಿತು. ಫಲಿತಾಂಶವಾಗಿ ಉತ್ತರದಲ್ಲಿ ನಡೆದ ಧ್ವಂಸವು ಮೈಸೂರಿನಲ್ಲಿ ನಡೆಯಲಿಲ್ಲ.

ಮೈಸೂರಿನ ಒಡೆಯರು.

(೧೪೦೦_೧೭೬೦)

ಹುಟ್ಟು.

ಹದಿನಾಲ್ಕನೇ ಶತಮಾನದ ಅಂತ್ಯದಲ್ಲಿಯೇ ದ್ವಾರಕಿಯಿಂದ ಬಂದವರೆಂದು ಹೆಸರಾದ ವಿಜಯ ಮತ್ತು ಕೃಷ್ಣರೆಂಬ ಸೋದರರು ಹದಿನಾಡಿನ ಚಾಮರಾಜನ ಮಗಳನ್ನು ಕಾರುಗಹಳ್ಳಿಯ ಮಾರನಾಯಕನ ಬಾಧೆಯಿಂದ ತಪ್ಪಿಸಿದ ಮೇಲೆ ವಿಜಯ ಅಥವಾ ಯದುರಾಯರ ವಂಶಸ್ಥರು ಹದಿನಾಡಿನಲ್ಲಿಯೂ ಪುರಿಗೆರೆ ಅಥವಾ ಮೈಸೂರಿನಲ್ಲಿಯೂ ಆಳುತ್ತಿದ್ದರು. ಕ್ರಿ.ಶ. ೧೪೦೦ರಲ್ಲಿ ಮೊದಲಾದ ಈ ವಂಶದ ಒಡೆಯರು ನೆರೆಹೊರೆಯಲ್ಲಿದ್ದ ಪಾಳೆಯಗಾರರೊಡನೆ ಸ್ಪರ್ಧಿಸುತ್ತ ಸಾಳುವ ವಂಶದವರ ಕಾಲದಲ್ಲಿ ವಿಜಯನಗರದ ಅರಸರಿಗೆ ಅಧೀನರಾದರು.

ಮೊದಲ ಅರಸರು.

ಮೊದಮೊದಲು ಒಡೆಯರು ಉಮ್ಮತ್ತೂರು, ಕೆಂಬಲ್ಲು, ಹರವು ಮುಂತಾದ ಸ್ಥಳಗಳ ಮುಖಂಡರೊಡನೆ ಜಗಳವಾಡುತ್ತಿರಬೇಕಾಗಿತ್ತು. ಯದುರಾಯರ ತರುವಾಯ ಕ್ರಮವಾಗಿ ಆಳಿದ ಹಿರಿಯಬೆಟ್ಟದ ಚಾಮರಾಜ ಒಡೆಯರು (೧೪೨೩-೧೪೫೯), ತಿಮ್ಮರಾಜಒಡೆಯರು (೧೪೫೯_೧೪೭೮) ಮತ್ತು ಹಿರಿಯಚಾಮರಾಜ ಒಡೆಯರು (೧೪೭೮_೧೫೧೩) ವಂಶವನ್ನು ಭದ್ರಪಡಿಸಿದರು. ಆ ಬಳಿಕ ಪಟ್ಟವನ್ನೇರಿದ ಬೆಟ್ಟದಚಾಮರಾಜ ಒಡೆಯರ ಆಳಿಕೆಯಲ್ಲಿ (೧೫೧೩_೧೫೫೩) ಮೈಸೂರು ಅಥವಾ ಪುರಿಗೆರೆಯು ರಾಜಧಾನಿಯಾದುದಲ್ಲದೆ ಹೆಮ್ಮನಹಳ್ಳಿ, ಕೆಂಬಲ್ಲುಗಳು ಆಳಿಕೆಯಲ್ಲಿ ಸೇರಿದವು. ೧೫೫೨ರಿಂದ ೧೫೭೧ರವರೆಗೆ ಆಳಿದ ತಿಮ್ಮರಾಜ ಒಡೆಯರು ನಂಜನಗೂಡಿನ ಬಳಿ ಕೆಲವರು ಪಾಳೆಯಗಾರರನ್ನು ಸೋಲಿಸಿ, ಉಮ್ಮತ್ತೂರು ಸಿಂದುವಳ್ಳಿಗಳನ್ನು ವಶಪಡಿಸಿಕೊಂಡರು. ಈ ಒಡೆಯರ ಕಾಲದಲ್ಲಿಯೇ ರಕ್ಕಸತಗಡಿಯ ಕದನವು ನಡೆಯಿತು.

ಶ್ರೀರಂಗಪಟ್ಟಣದ ಅಧಿಕಾರ.

ರಕ್ಕಸತಗಡಿಯ ತರುವಾಯ ಆರವೀಡು ವಂಶದ ತಿರುಮಲರಾಯನ ಕಾಲದಲ್ಲಿ ಸಾಮ್ರಾಜ್ಯವು ಶ್ರೀರಂಗಪಟ್ಟಣ, ಪೆನುಗೊಂಡೆ ಮತ್ತು ಚಂದ್ರಗಿರಿಗಳೆಂದು ಭಾಗವಾಯಿತು. ಪೆನುಗೊಂಡೆಯಲ್ಲಿ ರಾಜನ ಹಿರಿಯಮಗನಾದ ಶ್ರೀರಂಗರಾಯನು ಅಭಿಷಿಕ್ತನಾದಾಗ ಶ್ರೀರಂಗಪಟ್ಟಣದಲ್ಲಿ ಆತನ ತಮ್ಮ ರಾಮರಾಯನು ಕೆಲಕಾಲ ಅಧಿಕಾರಮಾಡಿ ತೀರಿಹೋದನು. ಆ ರಾಮರಾಯನಿಗೆ ಇದ್ದ ಇಬ್ಬರು ಮಕ್ಕಳು ತಿರುಮಲರಾಯ ಮತ್ತು ಶ್ರೀರಂಗರಾಯರೊಳಗೆ ಕಿರಿಯವನಾದ ಶ್ರೀರಂಗನನ್ನು ೧೫೮೫ರಲ್ಲಿ ಅರಸಾದ ಇಮ್ಮಡಿ ವೆಂಕಟಪತಿರಾಯನು ಮಮತೆಯಿಂದ ಸಾಕುತ್ತಿದ್ದನು. ಹಿರಿಯ ಮಗನಾದ ತಿರುಮಲರಾಯನು ಶ್ರೀರಂಗಪಟ್ಟಣದಲ್ಲಿ ಪ್ರತಿನಿಧಿಯಾದನು.

ತಿರುಮಲರಾಯ ೧೫೬೫-೧೫೭೨.

ಶ್ರೀರಂಗರಾಯ (ಪೆನುಗೊಂಡೆ) ೧೫೭೨-೧೫೮೫	ರಾಮರಾಯ (ಶ್ರೀರಂಗಪಟ್ಟಣ)	ವೆಂಕಟಪತಿರಾಯ (ಚಂದ್ರಗಿರಿ) ೧೫೮೫-೧೬೧೪

ರಾಮರಾಯನ ಮಕ್ಕಳು:

ತಿರುಮಲ (ಶ್ರೀರಂಗಪಟ್ಟಣ)	ಶ್ರೀರಂಗ │ ರಾಮ

೧೫೭೧-೭೬೧; ೫೭೬-೭೮.

ಶ್ರೀರಂಗಪಟ್ಟಣದಲ್ಲಿದ್ದ ಪ್ರತಿನಿಧಿಗೆ ಸುತ್ತಮುತ್ತಣ ನಾಯಕರೂ ಒಡೆಯರೂ ಅಧೀನರಾಗಿ, ಕಪ್ಪಕಾಣಿಕೆಗಳನ್ನು ಕೊಡುತ್ತಿದ್ದರು. ಅಂತಹದರಲ್ಲಿ ಶ್ರೀರಂಗರಾಯನಿಗೆ ಆಪ್ತನಾಗಿದ್ದಾತನು ತೊರೆಮಾವಿನಹಳ್ಳಿಯ ರೇಮಟಿ ವೆಂಕಟಾದ್ರಿನಾಯಕನು. ತಿಮ್ಮರಾಜ ಒಡೆಯರ ತರುವಾಯ ಪಟ್ಟವನ್ನೇರಿದ ಬೋಳಚಾಮರಾಜ ಒಡೆಯರವರು ಸ್ವತಂತ್ರರಾಗಬೇಕೆಂದು ಯೋಚಿಸಿ, ಮೊದಲು ಕಾಡುಹಂದಿಗಳ ಕಾಟವೆಂಬ ನೆಪದಿಂದ ಪುರಿಗೆರೆಗೆ ಕೋಟೆಯನ್ನು ಕಟ್ಟಿಕೊಂಡು, ಶ್ರೀರಂಗಪಟ್ಟಣಕ್ಕೆ ಕಳುಹಿಸುತ್ತಿದ್ದ ಕಪ್ಪವನ್ನು ನಿಲ್ಲಿಸಿಕೊಂಡರು. ತರುವಾಯ ರೇಮಟಿ ವೆಂಕಟಾದ್ರಿನಾಯ

ಕನ ಸಂಗಡ ಯುದ್ಧಮಾಡಿ, ಆತನ ಬಿರುದುಗಳನ್ನು ಪಡೆದರು. ಇದೇ ಒಡೆಯರ ಪ್ರಾಬಲ್ಯಕ್ಕೆ ಪ್ರಾರಂಭ. ಮುಂದೆ ಆಳಿದ ಬೆಟ್ಟದ ಚಾಮರಾಜಒಡೆಯರವರು ಎರಡು ವರ್ಷಗಳಲ್ಲಿಯೇ ಬೊಕ್ಕಸವನ್ನು ದುಂದುಗೊಳಿಸಿ ಸಾಲವನ್ನೂ ಮಾಡಿ, ಕಡೆಗೆ ತಾವಾಗಿಯೇ ರಾಜ್ಯವನ್ನು ಬಿಟ್ಟುಕೊಟ್ಟು, ಕೆರಕಣಾಂಬಿಗೆ ಹೋದರು. ಇವರ ತಮ್ಮಂದಿರಾದ ರಾಜಒಡೆಯರು ಪಟ್ಟವನ್ನೇರಿದರು.

ರಾಜಒಡೆಯರ ಆಳಿಕೆ ೧೫೭೮-೧೬೧೭.

ಅಭಿಷೇಕ.

ಒಡೆಯರ ಚರಿತ್ರೆಯಲ್ಲಿ ಮೊದಲು ಪ್ರಸಿದ್ಧಿ ಪಡೆದವರು ಇವರೇ. ಇಲ್ಲಿಯವರೆಗೂ ಒಡೆಯರು ಸಣ್ಣಪಾಳೆಯಗಾರರಂತೆಯೇ ಇದ್ದರು. ರಾಜಒಡೆಯರು ಆಳಿಕೆಯನ್ನು ವಹಿಸಿದಮೇಲೆ ಅವರ ಸಾಮರ್ಥ್ಯದಿಂದಲೂ ವಿಜಯನಗರದ ಅರಸರ ದೌರ್ಬಲ್ಯದಿಂದಲೂ ಒಡೆಯರ ವಂಶವು ಪ್ರಬಲವಾಯಿತು. ಪಟ್ಟಕ್ಕೆ ಬಂದಾಗ ರಾಜಒಡೆಯರಿಗೆ ೩೩ ಗ್ರಾಮಗಳು ಮಾತ್ರ ಸೇರಿದ್ದುವು. ಅಲ್ಲದೆ ಬೆಟ್ಟದ ಒಡೆಯರು ದೂರಾಲೋಚನೆಯಿಲ್ಲದೆ ಸಾಲವನ್ನು ಮಾಡಿದ್ದರು. ಪಟ್ಟವನ್ನೇರುವಾಗಲೇ ಅರಮನೆಯ ಮುಖ್ಯಸ್ಥರು ಸಾಲವನ್ನು ತೀರಿಸಲು ಹಣವನ್ನು ಕೊಡಲೊಪ್ಪಿದ್ದರಿಂದ ಸ್ವಲ್ಪಕಾಲದಲ್ಲಿಯೇ ಹಣದ ತೊಂದರೆಯಿಂದ ಪಾರಾಗಿ, ರಾಜಒಡೆಯರು ತಮ್ಮ ಅಧಿಕಾರವನ್ನು ಬಲಪಡಿಸುವುದರಲ್ಲಿ ನಿರತರಾದರು.

ಶ್ರೀರಂಗಪಟ್ಟಣದ ಒಡೆತನ.

ಶ್ರೀರಂಗಪಟ್ಟಣದಲ್ಲಿ ರಾಮರಾಯನ ತರುವಾಯ ಅಧಿಕಾರಕ್ಕೆ ಬಂದ ತಿರುಮಲರಾಯನು ಇನ್ನೂ ತರುಣನಾಗಿದ್ದುದು ರಾಜಒಡೆಯರಿಗೆ ಅನುಕೂಲವಾಗಿತ್ತು. ಆ ಸಮಯದಲ್ಲಿ ರಾಜಒಡೆಯರು ಸುತ್ತಮುತ್ತಣ ನಾಯಕರನ್ನು ಸೋಲಿಸಿ, ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡು, ಕೆಲಕಾಲದ ಮೇಲೆ ತಿರುಮಲರಾಯನ ಮೇಲೆಯೇ ಕೈಮಾಡಿದರು. ಅರಸನಾಗಿದ್ದ ಇಮ್ಮಡಿ ವೆಂಕಟಪತಿರಾಯನು ದಂಗೆಯೆದ್ದಿದ್ದ ಮಧುರೆಯ ನಾಯಕನನ್ನು ಅಡಗಿಸಲು ತಿರುಮಲರಾಯನನ್ನು ನಿಯೋಗಿಸಿದನು. ತಿರುಮಲರಾಯನು ಆ ದ್ರೋಹಿಯನ್ನಡಗಿಸದೆ ತಾನು ಆತನೊಡನೆ ಸೇರಿಕೊಳ್ಳುವಂತೆ ತೋರಲು ಅರಸನಿಗೆ ಅವನಮೇಲೆ ಕೋಪಬಂತು. ಈ ಮನಸ್ತಾ



ಶ್ರೀ ರಾಜ ಒಡೆಯರು

ಪವು ರಾಜಒಡೆಯರಿಗೆ ಮತ್ತಷ್ಟು ಅನುಕೂಲವಾಯಿತು. ಅದುವರೆಗೂ ಗೋಪ್ಯವಾಗಿದ್ದ ಪ್ರಯತ್ನವು ಈಗ ಪ್ರತ್ಯಕ್ಷವಾಗಿ ನಡೆಯಿತು. ರಾಜಒಡೆಯರವರು ಕೆಸರಗುಂಟೆಯೆಂಬೆಡೆಯಲ್ಲಿ ತಿರುಮಲರಾಯನನ್ನು ಎದುರಿಸಿ ಸೋಲಿಸಿಬಿಟ್ಟು, ಶ್ರೀರಂಗಪಟ್ಟಣವನ್ನೇ ಸಾಧಿಸಿದರು (೧೬೧೦). ಅದೇ ವರುಷದಲ್ಲಿ ಗೋಲಕೊಂಡೆಯವರು ಪೆನುಗೊಂಡೆಯನ್ನು ಮುತ್ತಿಕೊಳ್ಳಲು ವೆಂಕಟಪತಿರಾಯನು ಶ್ರೀರಂಗಪಟ್ಟಣದ ವಿಚಾರವನ್ನು ಹಚ್ಚಿಕೊಳ್ಳದೆ ಇರಬೇಕಾಗಿತ್ತು. ಗೋಲಕೊಂಡೆಯವರ ತೊಂದರೆಯಿಂದ ಪಾರಾದ ಕೂಡಲೆ ಆತನು ಶ್ರೀರಂಗಪಟ್ಟಣದಲ್ಲಿ ಅಧಿಕಾರಮಾಡಲು ತಿರುಮಲರಾಯನು ಅಯೋಗ್ಯನೆಂದು ನಿಶ್ಚಯಿಸಿ, ರಾಜಒಡೆಯರನ್ನು ಒಪ್ಪಿಕೊಂಡು ಗಂಭೀರ ವಿರುಪಣ್ಣನೆಂಬ ನಿಯೋಗಿಯನ್ನು ಕಳುಹಿಸಿ, ಅಲ್ಲಿಯ ಒಡೆತನವನ್ನು ರಾಜಒಡೆಯರಿಗೇ ಕೊಟ್ಟನು.

ತಿರುಮಲರಾಯನ ಕೊನೆ.

ಈ ರೀತಿಯಲ್ಲಿ ತಿರುಮಲರಾಯನಿಗೂ ವೆಂಕಟಪತಿರಾಯನಿಗೂ ಇದ್ದ ವೈಮನಸ್ಯದಿಂದಲೂ, ವೆಂಕಟಪತಿರಾಯನ ಕಾರ್ಯಾಂತರಭಾರದಿಂದಲೂ, ಮತ್ತು ರಾಜಒಡೆಯರ ಜಾಣ್ಮೆಯಿಂದಲೂ ೧೬೧೦ ರಲ್ಲಿ ಶ್ರೀರಂಗಪಟ್ಟಣದ ಒಡೆತನವು ಒಡೆಯರ ವಂಶಕ್ಕೆ ಪ್ರಾಪ್ತವಾಯಿತು. ತಿರುಮಲರಾಯನು ಹತಾಶನಾಗಿ, ತಲಕಾಡಿಗೆ ಹೋಗಿ, ಅಲ್ಲಿಯೇ ತೀರಿಹೋದನು. ಶ್ರೀರಂಗಪಟ್ಟಣದ ಅರಮನೆಯಲ್ಲಿ ಸ್ಥಾಪಿತರಾದ ಬಳಿಕ ರಾಜಒಡೆಯರು ದೇವರ ಒಡವೆಗಳಿಗಾಗಿ ತಿರುಮಲರಾಯನ ಹೆಂಡತಿ ಅಲಮೇಲಮ್ಮನನ್ನು ಒತ್ತಾಯಪಡಿಸಿದರು. ಗತ್ಯಂತರವಿಲ್ಲದೆ ಅಲಮೇಲಮ್ಮನು ಪ್ರಾಣ ತ್ಯಾಗಮಾಡುತ್ತ ಪ್ರಸಿದ್ಧವಾದ ಒಂದು ಶಾಪವನ್ನಿಟ್ಟಳಂತೆ. ತರುವಾಯ ದುಡುಕಿನ ಕೆಲಸವಾಯಿತೆಂದು ರಾಜಒಡೆಯರು ಪಶ್ಚಾತ್ತಾಪಪಟ್ಟು, ಅದರ ಶಮನಾರ್ಥವಾಗಿ ಆಕೆಯ ಪ್ರತಿಮೆಗೆ ಪೂಜೆಯನ್ನು ನಡೆಸತಕ್ಕುದೆಂದು ಕಟ್ಟಳೆಮಾಡಿದರು. ಆ ಪೂಜೆ ಅಮಲ್‌ದೇವತೆಯ ಪೂಜೆಯೆಂದು ಈಗಲೂ ನವರಾತ್ರಿಯ ವೇಳೆಯಲ್ಲಿ ನಡೆಯುತ್ತದೆ.

ಆಡಳಿತ.

ಒಡೆಯರ ಪ್ರಾಬಲ್ಯವು ೧೬೧೦ ರಲ್ಲಿ ಶ್ರೀರಂಗಪಟ್ಟಣವು ಸ್ವಾಧೀನವಾದಂದಿನಿಂದಲೇ ಗಣ್ಯವಾಗತಕ್ಕುದು. ಶ್ರೀರಂಗಪಟ್ಟಣವನ್ನೇ ರಾಜಧಾನಿ

ಯಾಗಿ ರಾಜಒಡೆಯರು ಅಂದಿನಿಂದ ಮಾಡಿಕೊಂಡರು. ನವರಾತ್ರಿಯ ಉತ್ಸವವನ್ನು ಅವರೇ ಪ್ರಾರಂಭಿಸಿದವರು. ಒಟ್ಟು ರಾಜಒಡೆಯರು ಆಳುತ್ತಿದ್ದ ರಾಜ್ಯವು ಸರಿಸುಮಾರಾಗಿ ಈಗಿನ ಮೈಸೂರು ಜಿಲ್ಲೆಯಾಗಿತ್ತು. ರಾಜ್ಯಾಡಳಿತದಲ್ಲಿ ರಾಜಒಡೆಯರು ಯೋಗ್ಯರಾದವರನ್ನೇ ಅಧಿಕಾರಿಗಳಾಗಿ ನಿಯಮಿಸುತ್ತಿದ್ದುದರಿಂದ ತೊಂದರೆಗಳುಂಟಾಗಲಿಲ್ಲ. ಸೈನ್ಯ ಬಲವಾಗಿರಬೇಕಾದುದೂ, ಸದಾ ಸಿದ್ಧವಾಗಿರಬೇಕಾದುದೂ ಅತ್ಯವಶ್ಯವಾಗಿದ್ದುದರಿಂದ ರಾಜಒಡೆಯರು ಸೈನ್ಯಾಧಿಕಾರವನ್ನು ಪ್ರತ್ಯೇಕಪಡಿಸಿ ಅದಕ್ಕಾಗಿ ದಳವಾಯಿಗಳನ್ನು ನಿಯಮಿಸುವ ಪದ್ಧತಿಯನ್ನು ಮೊದಲಿಟ್ಟರು. ಇದರಿಂದ ಅವರ ಕಾಲದಲ್ಲಿ ತೊಂದರೆಗಳಿಲ್ಲದೆ ನಡೆದಾಗ್ಯೂ ಮುಂದೆ ತೊಂದರೆ ಸಂಭವಿಸಿತು. ರಾಜನು ದುರ್ಬಲನಾಗಿದ್ದಾಗ ದಳವಾಯಿಗಳು ದುರಾಸೆಗೆ ಸಿಕ್ಕಿ, ರಾಜಪದವಿಯನ್ನೇ ಅಪಹರಿಸಲು ಯತ್ನಿಸುವಂತಾಯಿತು.

೧೬೧೭–೩೭; ೧೬೩೭–೩೮.

ಒಡೆಯರ ರಾಜ್ಯಸ್ಥಾಪಕರಾದ ಈ ರಾಜಒಡೆಯರು ೧೬೧೭ ರಲ್ಲಿ ಮೇಲುಕೋಟೆಯಲ್ಲಿ ಕಾಲವಾದರು. ಇವರ ತರುವಾಯ ಆಳಿಕೆಯನ್ನು ಕೈಕೊಂಡ ಚಾಮರಾಜ ಒಡೆಯರವರ ಕಾಲದಲ್ಲಿ ದಳವಾಯಿಗಳೊಡನೆ ಜಗಳವು ತೋರಿಕೊಂಡಿತು. ದಳವಾಯಿಯಾಗಿದ್ದ ಬೆಟ್ಟದ ಒಡೆಯನು ರಾಜ್ಯಭ್ರಷ್ಟನಾದನು. ತರುವಾಯ ಆ ಅಧಿಕಾರಕ್ಕೆ ಬಸವಲಿಂಗಯ್ಯ ಮುಂತಾದವರು ಬಂದು ಸ್ವಲ್ಪಕಾಲದಲ್ಲಿಯೇ ನಿವೃತ್ತರಾದರು. ಅವರ ಬಳಿಕ ದಳವಾಯಿಯಾದ ವಿಕ್ರಮರಾಯನೆಂಬಾತನು ಧೂರ್ತನೂ, ಕಠೋರನೂ ಆಗಿ, ಅರಮನೆಯಲ್ಲಿ ಸರ್ವಾಧಿಕಾರವನ್ನು ವಹಿಸಿ ದುರಾಸೆಗಳನ್ನು ಬಳೆಸಿದನು. ಇತರ ದಳವಾಯಿಗಳು ಚೆನ್ನಪಟ್ಟಣ, ನಾಗಮಂಗಲ ಮತ್ತು ಹೊಸಕೋಟೆಗಳ ನಾಯಕರನ್ನೆದುರಿಸಿ ರಾಜ್ಯವನ್ನು ವಿಸ್ತರಿಸಲು ಯತ್ನಿಸಿದ್ದರು. ವಿಕ್ರಮರಾಯನಾದರೋ ೧೬೩೭ ರಲ್ಲಿ ಚಾಮರಾಜನು ಸತ್ತ ಬಳಿಕ ರಾಜರಾದ ಇಮ್ಮಡಿ ರಾಜಒಡೆಯರನ್ನು ದೌಷ್ಟ್ಯದಿಂದ ಕೊಲ್ಲಿಸಿ, ಅರಮನೆಯಲ್ಲಿ ಎಲ್ಲರನ್ನೂ ಹಿಂಸಿಸಲಾರಂಭಿಸಿದನು. ಈ ಕಾರಣದಿಂದ ಆತನಿಗೆ ವಿಗಡ ವಿಕ್ರಮರಾಯನೆಂದು ಹೆಸರಾಗಿದೆ. ಅಂತಹ ಸಮಯದಲ್ಲಿ ಪಟ್ಟವನ್ನೇರಿ, ವಿಕ್ರಮರಾಯನನ್ನು ತಕ್ಕಹಾಗೆ ಶಿಕ್ಷಿಸಿ, ಒಡೆಯರ ಮನೆತನವನ್ನು ಸ್ವತಂತ್ರವನ್ನಾಗಿಯೂ ರಾಜ್ಯವನ್ನು ಬಲಿಷ್ಠವಾದುದನ್ನಾ



ಶ್ರೀ ರಣಧೀರ ಕಂಠೀರವ ನರಸರಾಜ ಒಡೆಯರು

ಗಿಯೂ ಮಾಡಿದವರೇ ಪ್ರಸಿದ್ಧ ರಣಧೀರ ಕಂಠೀರವ ನರಸರಾಜಒಡೆಯರವರು.

ವಿಜಯನಗರದ ಪಟ್ಟದ ಅವಾಂತರ.

ಇದುವರೆಗೂ ಒಡೆಯರ ಅಧಿಕಾರವು ವಿಜಯನಗರದ ಅರಸರಿಗೆ ಅಧೀನವಾಗಿಯೆ ಇತ್ತು. ಶ್ರೀರಂಗಪಟ್ಟಣವು ವಶವಾದ ಮೇಲೆ ರಾಜಒಡೆಯರು ಇಮ್ಮಡಿ ವೆಂಕಟಪತಿರಾಯನ ಆಜ್ಞಾಧಾರಕರಾಗಿಯೇ ಇದ್ದು, ಪೊಗದಿಕೊಡುವ ಸಾಮಂತರಾಗಿದ್ದರು. ಇಮ್ಮಡಿ ವೆಂಕಟಪತಿರಾಯನು ೧೬೧೪ ರಲ್ಲಿ ತೀರಿಹೋದನು. ಕೂಡಲೆ ಆತನು ನೇಮಿಸಿದ ಇಮ್ಮಡಿ ಶ್ರೀರಂಗರಾಯನ ಪಕ್ಷವನ್ನು ಹಿಡಿದ ಹಲಕೆಲವು ಪ್ರಭುಭಕ್ತ ನಾಯಕರಿಗೂ ಬೇರೊಬ್ಬ ರಾಜಕುವರನ ಪಕ್ಷವನ್ನು ಹಿಡಿದ ಅನೇಕ ನಾಯಕರಿಗೂ ದೊಡ್ಡ ಹೋರಾಟವೇ ಮೊದಲಾಯಿತು. ಆ ಸಂದರ್ಭದಲ್ಲಿ ಇಮ್ಮಡಿ ಶ್ರೀರಂಗರಾಯನೂ, ಹೆಂಡಿರುಮಕ್ಕಳೂ ಕೊಲೆಯಾದರು. ರಾಮರಾಯನೆಂಬೊಬ್ಬ ಅರಸುಗುವರನನ್ನು ಮಾತ್ರ ತಂಜಾವೂರ ನಾಯಕನು ಅತ್ಯಂತ ಸಾಹಸದಿಂದ ಉಳಿಸಿಕೊಂಡು, ಆತನಿಗೆ ತಂಜಾವೂರಿನಲ್ಲಿ ಪಟ್ಟಗಟ್ಟಿದನು. ಈ ಪಟ್ಟದ ಜಗಳದಲ್ಲಿ ಮೈಸೂರಿನ ಒಡೆಯರಾಗಲಿ ಮಧುರೆಯ ನಾಯಕರಾಗಲಿ ಪ್ರವೇಶಿಸಲಿಲ್ಲ; ಇಬ್ಬರೂ ತಟಸ್ಥರಾಗಿದ್ದರು. ಸಾಮ್ರಾಜ್ಯವು ಈ ರೀತಿಯಲ್ಲಿ ದ್ರೋಹಿಗಳ ಕೈಗೆ ಸಿಕ್ಕಿ, ಸ್ವಯೂಥ ಕಲಹಕ್ಕೆ ತುತ್ತಾಗುತ್ತಿದ್ದ ಸಮಯದಲ್ಲಿ ಚಾಮರಾಜ ಒಡೆಯರ ಕಾಲದಲ್ಲಿ ದಳವಾಯಿಗಳು ಚೆನ್ನಪಟ್ಟಣದ ಜಗದೇವರಾಯನನ್ನು ಸೋಲಿಸಲು ಸಾಧ್ಯವಾಗಿತ್ತು. ಈ ಪಟ್ಟದ ಜಗಳದಲ್ಲಿ ಕಡೆಗೆ ವೇಲೂರಿನಲ್ಲಿ ೧೬೪೨ ರಲ್ಲಿ ಮುಮ್ಮಡಿ ಶ್ರೀರಂಗರಾಯನೆಂಬಾತನು ಅಭಿಷಿಕ್ತನಾದನು. ಈತನೇ ವಿಜಯನಗರದ ಅರಸರಲ್ಲಿ ಕಡೆಯವನು; ಸಾಮ್ರಾಜ್ಯವನ್ನೆತ್ತಿಕಟ್ಟಲು ಭಗೀರಥ ಪ್ರಯತ್ನವನ್ನೇ ಮಾಡಿದನು.

ಕಂಠೀರವ ನರಸರಾಜ ಒಡೆಯರ ಆಳಿಕೆ, ೧೬೩೮–೧೬೫೯.

ಪಟ್ಟಾಭಿಷೇಕ.

ಅರಮನೆಯಲ್ಲಿ ವಿಗಡ ವಿಕ್ರಮರಾಯನ ಹಾವಳಿಯನ್ನು ತಾಳಲಾರದೆ ಇತರ ಅಧಿಕಾರಿಗಳು ಬೆಟ್ಟದ ಒಡೆಯರ ಮಕ್ಕಳಾಗಿದ್ದ ಕಂಠೀರವ

ನರಸರಾಜರನ್ನು ಪಟ್ಟದಲ್ಲಿ ಕುಳ್ಳಿರಿಸುವ ಸನ್ನಾಹಮಾಡಿದರು. ಅವರ ಇಷ್ಟದಂತೆ ಕಂಠೀರವ ನರಸರಾಜ ಒಡೆಯರು ಅವರ ಸಹಾಯವನ್ನು ಪಡೆದು ೧೬೩೮ರಲ್ಲಿ ಪಟ್ಟವನ್ನೇರಿದರು. ಸ್ವತಃ ಮಹಾ ಬಲಶಾಲಿಗಳಾಗಿದ್ದು ಅಜ್ಞಾತ ರೀತಿಯಲ್ಲಿ ತಿರುಚನಾಪಳ್ಳಿಗೆ ಹೋಗಿ, ಅಲ್ಲಿಯ ಜಟ್ಟಿಯನ್ನು ಗೆದ್ದು ಸಾಹಸಿಗಳೆಂದು ಇದಕ್ಕೆ ಮೊದಲೇ ಕೀರ್ತಿಗೊಂಡಿದ್ದ ಕಂಠೀರವ ಒಡೆಯರು ಸುಲಭವಾಗಿ ದಳವಾಯಿ ವಿಕ್ರಮರಾಯನ ಅವಾಂತರವನ್ನು ಅಡಗಿಸಿ, ಅವನನ್ನು ಕೊಲ್ಲಿಸಿದರು. ತರುವಾಯ, ಅವರು ಆಳುವುದಕ್ಕೆ ತೊಡಗಿದ ಕೂಡಲೆ, ಒಂದುಕಡೆ ಬಿಜಾಪುರದ ದಳಪತಿಗಳನ್ನೂ ಉತ್ತರದಲ್ಲಿದ್ದ ಪಾಳೆಯಗಾರರನ್ನೂ, ಮತ್ತೊಂದುಕಡೆ ವಿಜಯನಗರದ ಅರಸನನ್ನೂ ಮಧುರೆಯ ನಾಯಕನನ್ನೂ ಸಂಧಿಸಬೇಕಾಯಿತು. ಭದ್ರತೆಯನ್ನು ಪಡೆದು ಸ್ವತಂತ್ರನಾಗುತಲಿದ್ದ ಒಡೆಯರ ಚರಿತ್ರೆಯಲ್ಲಿ ಈ ವಿಧವಾದ ಸಂಧಿವಿಗ್ರಹಗಳು ಅನಿವಾರ್ಯವಾಗಿದ್ದವು. ಒಡೆಯರ ಅರಸುತನವು ವೃದ್ಧಿಯಾದ ಬಗೆಯನ್ನು ತಿಳಿಯಲು ಸುತ್ತಮುತ್ತಲಿದ್ದ ರಾಷ್ಟ್ರಗಳ ಸ್ಥಿತಿಗತಿಗಳನ್ನು ತಿಳಿಯುವುದು ಅವಶ್ಯ.

ಬಿಜಾಪುರದವರ ದಂಡಯಾತ್ರೆಗಳು.

೧೫೭೩ರಲ್ಲಿ ಬಿಜಾಪುರ ಮತ್ತು ಗೋಲಕೊಂಡೆಯ ಸುಲ್ತಾನರು ವಿಜಯನಗರ ಸಾಮ್ರಾಜ್ಯವನ್ನು ಆಕ್ರಮಿಸುವ ಹಂಚಿಕೆಯನ್ನು ಮಾಡಿದ್ದರಷ್ಟೆ. ಅದಕ್ಕನುಸಾರವಾಗಿ ೧೫೭೫ ಮತ್ತು ೧೫೮೭ರಲ್ಲಿ ಬಿಜಾಪುರದವರು ವಾಯವ್ಯದಲ್ಲಿ ದಂಡನ್ನು ಕಳುಹಿಸಿ, ಅಲ್ಲಿದ್ದ ಪಾಳೆಯಗಾರರಿಂದ ಪೊಗದಿಯನ್ನು ಪಡೆಯಲು ಪ್ರಯತ್ನಿಸುತ್ತಿದ್ದು, ಅದೇ ಕಾಲದಲ್ಲಿ ಮುಘಲಬಾದಷಹ ಅಕ್ಬರನ ಭಯದಿಂದ ತಟಸ್ಥರಾದರು. ಶೂರನೆನಿಸಿದ <u>ಮಹಮ್ಮದ್ ಅದಿಲಷಹನೆಂಬಾತನು</u> ೧೬೨೭ರಲ್ಲಿ ಸುಲತಾನನಾದಾಗ ಕೆಳದಿಯ ನಾಯಕನು ಕೊಡಲೊಪ್ಪಿದ್ದ ಪೊಗದಿಯನ್ನು ನಿಲ್ಲಿಸಿದ್ದನು. ಮೇಲಾಗಿ ಆ ನಾಯಕನ ಹಗೆಯಾಗಿದ್ದ ಬಸವಾಪಟ್ಟಣದ <u>ಕೆಂಗ ಹನುಮಪ್ಪನಾಯಕನು</u> ಸುಲತಾನನ ಬಳಿಗೆ ಹೋಗಿ, ದಂಡಯಾತ್ರೆ ಮಾಡುವಂತೆ ಪ್ರೇರಿಸಿದನು. ಸುಲತಾನನಿಗೆ ಇದು ಒಳ್ಳೆಯ ಅನುಕೂಲವಾಯಿತು. ಕೂಡಲೆ ೧೬೩೫ರಲ್ಲಿ ಬಿಜಾಪುರದ ದಂಡು ಬಂದು ನುಗ್ಗಿ, ಕೆಳದಿಯ <u>ವೀರಭದ್ರನಾಯಕನನ್ನು</u> ಸೋಲಿಸಿ ದಂಡವನ್ನು ಹೊರಿ



ಬಿ ಆರ್ ಗೋಪೀನಾಥ ಬೆಂಗಳೂರು

ಬಿಜಾಪುರದವರ ದಂಡಯಾತ್ರೆಗಳು

ಸಿತು. ಅದೇ ಕಾಲದಲ್ಲಿಯೇ ಷಾಜಹಾನ್ ಚಕ್ರವರ್ತಿಯೊಡನೆ ಪ್ರಸಿದ್ಧವಾದ ಕರಾರುನಾಮೆಯು ನಡೆದು ಬಿಜಾಪುರದವರಿಗೆ ಮುಘಲರ ಭಯವಿಲ್ಲದಂತಾಗಲು, ಕರ್ಣಾಟಕದಲ್ಲಿ ಬಿಜಾಪುರದ ದಂಡಯಾತ್ರೆಗಳು ಪುನಃ ಪುನಃ ತೋರಿದವು. ೧೬೩೭ ರಿಂದ ೧೬೪೦ ರವರೆಗೆ ರಣದುಲ್ಲಾಖಾನ್, ಅಫಜಲಖಾನ್ ಮತ್ತು ಷಾಜಿಭೋಸ್ಲೆಗಳೆಂಬ ದಳಪತಿಗಳು ಪದೇ ಪದೇ ದಂಡೆತ್ತಿ ಬಂದು ಕೆಳದಿ, ಬಸವಾಪಟ್ಟಣ, ಶೀರ್ಯ, ಬೆಂಗಳೂರು, ಚಿಕ್ಕನಾಯಕನಹಳ್ಳಿ, ಬೇಲೂರು, ಸಕ್ಕರೆಪಟ್ಟಣ, ತುಮಕೂರು, ಬಳ್ಳಾಪುರ ಮತ್ತು ಕುಣಿಗಲ್ಲುಗಳನ್ನು ಸಾಧಿಸಿದರು. ಕೆಳದಿಯ ವೀರಭದ್ರನಾಯಕ, ಬಸವಾಪಟ್ಟಣದ ಕೆಂಗ ಹನುಮಪ್ಪನಾಯಕ, ಶೀರ್ಯದ ಕಸ್ತೂರಿ ರಂಗಪ್ಪನಾಯಕ, ಬೆಂಗಳೂರಿನ ಇಮ್ಮಡಿ ಕೆಂಪೇಗೌಡ ಮುಂತಾದವರು ತಮ್ಮ ಸ್ವಾತಂತ್ರ್ಯಗಳನ್ನು ಕಳೆದುಕೊಂಡರು. ಷಾಜಿ ಭೋಸ್ಲೆಯು ಬೆಂಗಳೂರಿನಲ್ಲಿ ಬಿಜಾಪುರದ ಅಧಿಕಾರಿಯಾಗಿ ನಿಂತನು. ಇತರೆಡೆಗಳಲ್ಲಿಯೂ ಹಾಗೆಯೇ ಅಧಿಕಾರಿಗಳು ಸ್ಥಾಪಿತರಾದರು. ಸೋತುಹೋದ ಪಾಳೆಯಗಾರರು ಕೆಲವರು ಸ್ವತಂತ್ರರಾಗಲು ಪ್ರಯತ್ನಿಸಿದ ಕೂಡಲೆ ಪುನಃ ೧೬೪೫-೪೬ ರಲ್ಲಿ ಖಾನ್ ಮಹಮ್ಮದ್ ಮತ್ತು ಮುಸ್ತಫಾಖಾನರೆಂಬ ದಳಪತಿಗಳು ಬಂದು, ಅವರನ್ನು ಸುಲಭವಾಗಿ ಸೋಲಿಸಿ, ಶಿವಗಂಗೆಯನ್ನು ಹಿಡಿದು, ಪೂರ್ವಘಟ್ಟಗಳನ್ನಿಳಿದು, ವೇಲೂರು ಮತ್ತು ಶೆಂಜಿಗಳ ಕಡೆಗೆ ನುಗ್ಗಿದರು.

ಬಿಜಾಪುರದ ಕ್ಷೀಣತೆ.

ಹೀಗೆ ರಾಜ್ಯವು ವಿಸ್ತಾರವಾಗುತ್ತಿದ್ದಾಗ ಮಹಮ್ಮದ್ ಅದಿಲಷಹನಿಗೆ ಕಾಹಿಲೆಯೊದಗಿತು. ೧೬೫೦ ರಿಂದ ೧೬೫೬ ರವರೆಗೆ ನರಳುತ್ತಲೇ ಇದ್ದು, ಆ ವರ್ಷದಲ್ಲಿ ಸುಲ್ತಾನನು ಕಾಲವಾದನು. ಆ ಕಾಲದಲ್ಲಿಯೇ ಮುಘಲ ಸುಭಾದಾರನಾಗಿದ್ದ ಅವರಂಗಸೀಬನು ಬಿಜಾಪುರ ಗೋಲಕೊಂಡೆಗಳನ್ನು ಆಕ್ರಮಿಸುವ ಸನ್ನಾಹಗಳನ್ನು ಮಾಡುತ್ತಿದ್ದನು. ಮಹಮ್ಮದನು ಸತ್ತಬಳಿಕ ಸುಲ್ತಾನನಾದ ಅಲ್ಲಿ ಅದಿಲನು ಇನ್ನೂ ಚಿಕ್ಕವನಾಗಿದ್ದುದರಿಂದ ಬಡೀಸಾಹಿಬಾ ಎಂಬ ರಾಣಿಯೇ ಆಡಳಿತವನ್ನು ನಡೆಸುತ್ತಿದ್ದಳು. ಆಗಲೇ ಮರಾಟೆಯವರು ಪ್ರಬಲರಾಗುತ್ತಿದ್ದು, ಪ್ರಸಿದ್ಧ ಶಿವಾಜಿಯು ಬಿಜಾಪುರದವರನ್ನು ಭಂಗಿಸಲು ಮೊದಲಿಟ್ಟನು. ಈ ಕಾರಣ

ಗಳಿಂದ ೧೬೫೦ರಿಂದ ೧೬೬೩ರವರೆಗೆ ಬಿಜಾಪುರದವರಿಗೆ ಮೈಸೂರು ಪ್ರಾಂತದಲ್ಲಿ ಕೈಮಾಡಲು ಅನುಕೂಲವಿಲ್ಲದಿತ್ತು. ಗೆದ್ದ ಭಾಗವು ಷಾಜಿ ಭೋಂಸ್ಲೆಯ ಅಧೀನದಲ್ಲಿತ್ತು. ಬೆಂಗಳೂರು, ಕೋಲಾರ, ಹೊಸ ಕೋಟೆ, ದೊಡ್ಡಬಳ್ಳಾಪುರ ಮತ್ತು ಶಿರ್ಯಗಳು ಆತನ ಸ್ವಂತ ಆಳಿಕೆ ಯಲ್ಲಿದ್ದುವು. ಘಟ್ಟದ ಮೇಲಿನ ಪ್ರದೇಶವನ್ನು ಬಾಲಘಾಟೆಂತಲೂ ಘಟ್ಟದ ಕೆಳಗಿನ ಪ್ರದೇಶವನ್ನು ಪಾರ್ಯಘಾಟೆಂತಲೂ ವಿಂಗಡಿಸಿದ್ದರು. ಬಿಜಾಪುರದವರ ಅಥವಾ ಷಾಜಿಯ ದೃಷ್ಟಿಯು ಶ್ರೀರಂಗಪಟ್ಟಣದ ಮೇಲೆ ನಟ್ಟಿರಲಿಲ್ಲ ; ಮುಂದೆ ವಿಶಾಲವಾಗಿ ತೋರಿದ ವೇಲೂರು, ಚಂಗಿ (ಶೆಂಜಿ), ತಂಜಾವೂರು ಪ್ರದೇಶಗಳಲ್ಲಿ ನಟ್ಟಿತ್ತು.

ಬಿಜಾಪುರದವರಿಗೆ ಈ ರೀತಿಯಲ್ಲಿ ಶಿವಮೊಗ್ಗಿ ಜಿಲ್ಲೆಯಿಂದ ಹಿಡಿದು ಬೆಂಗಳೂರು ಕೋಲಾರ ಜಿಲ್ಲೆಗಳ ಎಲ್ಲೆಯವರೆಗೂ ಇರುವ ಮಧ್ಯ ಪ್ರದೇ ಶವು ವಶವಾಯಿತು. ಈ ಸಮಯದಲ್ಲಿ ಸ್ವಾತಂತ್ರ್ಯವನ್ನು ಕಳೆದು ಕೊಂಡು, ಸಮಯ ನಿರೀಕ್ಷಣೆಮಾಡಿ, ತಮ್ಮ ರಾಜ್ಯವನ್ನು ಪುನಃ ಪಡೆ ಯಲು ಪ್ರಯತ್ನಿಸಿದ ನಾಯಕರಲ್ಲಿ ಪ್ರಸಿದ್ಧರೂ ಪ್ರಬಲರೂ ಆದವರು ಕೆಳ ದಿಯ ನಾಯಕರು.

ಕೆಳದಿಯ ನಾಯಕರು.

ರಾಮರಾಯನ ಕಾಲದಲ್ಲಿ ಆತನ ಬಲಗೈಯಾಗಿದ್ದ ಸದಾಶಿವನಾ ಯಕನ ತರುವಾಯ ದೊಡ್ಡ ಸಂಕಣ್ಣನಾಯಕನೆಂಬಾತನು ಆಳುತ್ತಲಿದ್ದು ಕಾರಣಾಂತರದಿಂದ ರಾಜನ ಕೋಪಕ್ಕೆ ಗುರಿಯಾಗಿ ಶಿಕ್ಷೆಯನ್ನನುಭವಿಸಿ, ರಕ್ಕಸತಗಡಿಯ ಯುದ್ಧದ ವೇಳೆಯಲ್ಲಿ ಉತ್ತರದೇಶದಲ್ಲಿ ಸಂಚಾರಮಾಡು ತ್ತಿದ್ದನಂತೆ. ಆ ಯುದ್ಧವಾದ ಮೇಲೆ ಸಂಕಣ್ಣನಾಯಕನು ಹಿಂತಿರುಗಿ ಬಂದು, ಮಗ್ಗುಲಲ್ಲಿದ್ದ ಬೈರಾದೇವಿಯ ರಾಜ್ಯವನ್ನು ಗೆದ್ದು, ರಾಜ್ಯವನ್ನು ವಿಸ್ತರಿಸಿಕೊಂಡನು. ತರುವಾಯ ಇಮ್ಮಡಿ ವೆಂಕಟಪತಿದೇವರಾಯನ ಕಾಲ ದಲ್ಲಿ ಆಳಿದ ಹಿರಿಯವೆಂಕಟಪ್ಪನಾಯಕನು ರಾಯನಿಗೆ ವಿಧೇಯನಾಗಿದ್ದು, ಕೈಯಲ್ಲಾದಮಟ್ಟಿಗೂ ಬಿಜಾಪುರದವರನ್ನು ತಡೆದನು. ಆತನ ತರುವಾಯ ಆಳಿದ ವೀರಭದ್ರನಾಯಕನ ಕಾಲದಲ್ಲಿ ರಣದುಲ್ಲಾಖಾನನ ದಂಡಯಾತ್ರೆ ಗಳು ಸಂಭವಿಸಿದವು. ಯುದ್ಧದಲ್ಲಿ ಸೋತು, ಅರಮನೆಯ ಒಳಜಗಳ ದಲ್ಲಿ ಬೇಸತ್ತು ವೀರಭದ್ರನಾಯಕನು ಕಡೆಗೆ ರಾಜ್ಯಭಾರವನ್ನು ಬಿಟ್ಟು

ಕಂದಲೂರು ಕೋಟೆಗೆ ತೆರಳಿದನು. ಆಗ ಚಂದಾವಾರದಲ್ಲಿದ್ದ ಶಿವಪ್ಪ ನಾಯಕನು ರಾಜ್ಯಭಾರವನ್ನು ವಹಿಸಿ, ಬಿದರೂರನ್ನು ಕಟ್ಟಿಸಿ ವಸ್ತಾರೆ, ಸಕ್ಕರೆಪಟ್ಟಣ, ಹಾಸನ, ಬೇಲೂರು, ಅರಕಲಗೂಡುಗಳನ್ನು ಸ್ವಾಧೀನ ಪಡಿಸಿಕೊಂಡನು. ಪಶ್ಚಿಮಕರೆಯಲ್ಲಿ ಹಾವಳಿಯನ್ನು ಮಾಡುತ್ತಿದ್ದ ಪೋರ್ಚುಗೀಸರನ್ನು ಅಡಗಿಸಲು ತಕ್ಕ ಏರ್ಪಾಡನ್ನು ಮಾಡಿದನು. ೧೬೫೬ರಲ್ಲಿ ಮಹಮ್ಮದ್ ಅದಿಲಷಹನು ಮೃತಪಟ್ಟ ಸುದ್ದಿಯು ಬರುತ್ತಲೇ ಕುಂದಾಪುರ, ಹೊನ್ನಾವಾರ ಮತ್ತು ಮಂಗಳೂರು ಕೋಟೆಗಳನ್ನು ಹಿಡಿದನು. ಇದಲ್ಲದೆ ವಿಜಯನಗರದ ಕಡೆಯ ಅರಸನೆನಿಸಿದ ಮುಮ್ಮಡಿ ಶ್ರೀರಂಗರಾಯನಿಗೆ ಬಹಳ ಸಹಾಯವನ್ನು ಮಾಡಿದನು. ಈ ಸಂದರ್ಭದಲ್ಲಿಯೇ ಒಡೆಯರೊಡನೆ ವೈರವು ಹುಟ್ಟಿಕೊಂಡಿತು.

ಬಿಜಾಪುರದವರ ಪ್ರಯತ್ನ ೧೬೩೯—ಒಳ ಆಡಳಿತ.

ಕಂಠೀರವ ನರಸರಾಜ ಒಡೆಯರು ಪಟ್ಟವನ್ನೇರಿದ ಕೂಡಲೆ ಬಿಜಾಪುರದ ವಿಖ್ಯಾತ ದಳಪತಿ ರಣದುಲ್ಲಾಖಾನನು ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿಬಂದು ಮುತ್ತಿದನು. ಯುದ್ಧಸನ್ನಾಹವು ತಕ್ಕಂತೆ ನಡೆಯದಿದ್ದಾಗ್ಗೂ ಕಂಠೀರವ ಒಡೆಯರು ಕೋಟೆಯನ್ನು ರಕ್ಷಿಸುತ್ತ ರಣದುಲ್ಲಾಖಾನನನ್ನಿದಿರಿಸಿ, ಅವನೊಡನೆ ಸಂಧಿಯನ್ನು ನಡೆಸಿದರು. ಪುನಃ ಅಫಜಲಖಾನನ ಕೈಕೆಳಗೆ ಬಿಜಾಪುರದ ದಂಡು ಬಂತು. ಆಗ ಕಂಠೀರವ ಒಡೆಯರು ಅವನನ್ನು ಸೋಲಿಸಿದರು. ಆದರೂ ಬಿಜಾಪುರದ ಬಲದ ಎದುರಿನಲ್ಲಿ ತಮ್ಮ ಬಲವು ಚಿರಕಾಲ ನಡೆಯಲಾರದೆಂದು ಪೊಗದಿ ಕೊಡಲೊಪ್ಪಿಕೊಂಡು, ಬಂದಿದ್ದ ಗಂಡಾಂತರದಿಂದ ಪಾರಾದ ಕೂಡಲೆ ಒಡೆಯರು ಕೋಟೆಯನ್ನು ಉದ್ಧಾರಮಾಡಿ, ಆಡಳಿತವನ್ನು ಭದ್ರಗೊಳಿಸಲು ತೊಡಗಿದರು. ಸೈನ್ಯವನ್ನು ಹೆಚ್ಚಾಗಿ ಸೇರಿಸಿ, ಸ್ವಾತಂತ್ರ್ಯವನ್ನು ವಹಿಸಿ, ಸ್ವಂತವಾದ ಟಂಕಸಾಲೆಯನ್ನಿಡಿಸಿ, ಕಂಠೀರಾಯಿ ವರಹಗಳೆಂಬ ನಾಣ್ಯಗಳನ್ನು ಅಚ್ಚು ಹೊಡೆಸಿದರು. ಇದೇ ಒಡೆಯರ ಚರಿತ್ರೆಯಲ್ಲಿ ಮೊದಲನೆಯ ನಾಣ್ಯ ಪ್ರಯತ್ನ. ಕೋಶವನ್ನು ವೃದ್ಧಿಪಡಿಸುವುದಕ್ಕೂ, ರಾಜಾಧಿಕಾರಕ್ಕೆ ಇದಿರುಬೀಳಲು ಯಾರಿಗೂ ಆಸ್ಪದವಿಲ್ಲದಂತೆ ಮಾಡುವುದಕ್ಕೂ ಒಡೆಯರು ನೆಮ್ಮದಿವಂತರೆಂದೂ, ಧನವಂತರೆಂದೂ ಹೆಸರಾಗಿದ್ದ ಪ್ರಜೆಗಳನ್ನು

ಹಿಡಿಸಿ, ಸಾಕಾದಷ್ಟು ಹಣವನ್ನು ಮಾತ್ರ ಅವರಿಗೆ ಬಿಟ್ಟು, ಉಳಿದುದನ್ನು ಬೊಕ್ಕಸಕ್ಕೆ ಸೇರಿಸಿದರು. ಇದು ಪ್ರಜೆಗೆ ಹಿಂಸಾಕರವಾಗಿತೋರಿದರೂ, ಆಗಿನ ಯುದ್ಧ ಸಂದರ್ಭದಲ್ಲಿ ಅವಶ್ಯವಾಗಿತ್ತು. ಏಕೆಂದರೆ ಬಿಜಾಪುರದವರು ದಂಡೆತ್ತಿ ಬಂದಾರೆಂಬ ಶಂಕೆಯ ಜತೆಗೆ ಮಧುರೆಯ ನಾಯಕನೊಡನೆಯೂ, ಕೆಳದಿಯ ಶಿವಪ್ಪನಾಯಕನೊಡನೆಯೂ ಹೋರಾಟವು ಘಟಿಸಿತು.

ಮಧುರೆಯ ಸ್ಥಿತಿ—ಮುಮ್ಮಡಿ ಶ್ರೀರಂಗರಾಯ.

ರಾಜಒಡೆಯರು ಶ್ರೀರಂಗಪಟ್ಟಣವನ್ನು ಸಾಧಿಸಿ ರಾಜ್ಯವನ್ನು ವಿಸ್ತರಿಸಿದಾಗಲೇ ರಾಜ್ಯದ ಎಲ್ಲೆಯು ಮಧುರಾನಾಯಕನ ಉತ್ತರದ ಮೇರೆಯನ್ನು ಸಮೀಪಿಸಿತ್ತು. ವಿಜಯನಗರ ಸಾಮ್ರಾಜ್ಯದಲ್ಲೆಲ್ಲ ಮಧುರಾನಾಯಕನೇ ದಕ್ಷಿಣವೆಲ್ಲಕ್ಕೂ ಅಧಿಕಾರಿಯಾಗಿ, ಪ್ರಬಲನಾಗಿದ್ದು, ಇದಕ್ಕೆ ಮೊದಲೇ ಸ್ವತಂತ್ರನಾಗಲು ಯತ್ನಿಸಿದ್ದನು. ಮೈಸೂರಿನ ಒಡೆಯರು ಅಭ್ಯುದಯವನ್ನು ಪಡೆಯುತ್ತಿದ್ದ ಕಾಲದಲ್ಲಿ ಮಧುರಾನಾಯಕನು ಮಧುರೆಗೆ ಬದಲಾಗಿ ತಿರುಚನಾಪಳ್ಳಿಯನ್ನು ನೆಲೆವೀಡನ್ನಾಗಿ ಮಾಡಿಕೊಂಡಿರುತ್ತಿದ್ದನು. ಸುಮಾರು ೧೬೩೩ರಲ್ಲಿ ಪಟ್ಟವನ್ನೇರಿದ ತಿರುಮಲನಾಯಕನು ಸ್ವತಂತ್ರನಾಗುವ ಆಸೆಯನ್ನು ಬಳೆಸಿದ್ದೇ ಅಲ್ಲದೆ, ಒಡೆಯರನ್ನು ತನ್ನ ವಿರೋಧಿಗಳೆಂದೇ ಭಾವಿಸಿದ್ದನು. ಕೆಲಕಾಲ ಸಾಮಂತನಂತೆ ನಟಿಸಿ, ಈತನು ೧೬೪೦ರಲ್ಲಿ ಸ್ವತಂತ್ರನಾದನು. ೧೬೪೨ರಲ್ಲಿ ವಿಜಯನಗರದ ಅರಸನಾದ ಮುಮ್ಮಡಿ ಶ್ರೀರಂಗರಾಯನು ತಿರುಮಲನಾಯಕನನ್ನು ವಶಪಡಿಸಿಕೊಳ್ಳಬೇಕೆಂದು ದಕ್ಷಿಣಕ್ಕೆ ಹೊರಡಲು, ಆ ನಾಯಕನು ದ್ರೋಹವನ್ನು ಬಗೆಯುತ್ತ ಗೋಲಕೊಂಡೆಯ ಸುಲ್ತಾನನನ್ನು ಎತ್ತಿಕಟ್ಟಿದನು. ಗೋಲಕೊಂಡೆಯವರು ವೇಲೂರಿಗೆ ಮುತ್ತಿಗೆ ಹಾಕಿದರು. ಆ ಸಮಯದಲ್ಲಿ ಕೆಳದಿಯ ಶಿವಪ್ಪನಾಯಕನು ಪ್ರಭುಭಕ್ತನೆನಿಸಿ, ಶ್ರೀರಂಗರಾಯನಿಗೆ ನೆರವಾಗಿ, ವೇಲೂರಿನ ಮುತ್ತಿಗೆಯನ್ನು ಸಾಹಸದಿಂದ ತಡೆದು, ಬಂದ ವಿಪತ್ತನ್ನು ತೊಲಗಿಸಿದನು. ಬಳಿಕ ಶ್ರೀರಂಗರಾಯನು ತುರುಷ್ಕರನ್ನು ಎದುರಿಸಲು ಸಾಮ್ರಾಜ್ಯವನ್ನು ಪುನಃ ಕೂಡಿಸುವುದೇ ತಕ್ಕುದೆಂದು ಹಾಗೆಯೇ ಸಂಕಲ್ಪ ಮಾಡಿಕೊಂಡು ಚೆಂಗಿ, ತಂಜಾವೂರು ಮತ್ತು ಮಧುರೆಯ ನಾಯಕರನ್ನು ಒಟ್ಟುಗೂಡಿಸಲು ಪ್ರಯತ್ನಪಟ್ಟನು. ಆದರೆ ಈ ನಾಯಕರು

ರಾಜಭಕ್ತಿಯನ್ನು ತೊರೆದು ಸಾಮ್ರಾಜ್ಯಕ್ಕೆ ದ್ರೋಹಮಾಡುತ್ತ ರಾಯನಿಗೆ ತೊಂದರೆಗಳನ್ನೇ ಒಡ್ಡಿದರು. ಅತ್ತ ಗೋಲಕೊಂಡೆಯವರು ಪ್ರಬಲರಾಗಿ ಕಾವೇರೀ ಪ್ರದೇಶದಲ್ಲಿ ನುಗ್ಗಿ ಬರುತ್ತಿರಲು, ತಿರುಮಲನಾಯಕನು ಬಿಜಾಪುರದವರನ್ನು ಅವರ ಮೇಲೆ ಎತ್ತಿ ಕಟ್ಟಿದನು.

ಬಿಜಾಪುರದವರೊಡನೆ ಪುನಃ ಯುದ್ಧ.

ಬಿಜಾಪುರದ ವಜೀರ ಮುಸ್ತಫಾಖಾನನು ೧೬೪೬ರಲ್ಲಿ ದಂಡೆತ್ತಿ ಹೊರಟುದಕ್ಕೆ ಈ ಆಹ್ವಾನವು ಕಾರಣವಾಗಿತ್ತು. ವೇಲೂರು ಶೆಂಜಿಗಳ ಕಡೆ ಹೊರಟಿದ್ದ ಮುಸ್ತಫಾಖಾನನು ಹಿಂದೆ ಬಿಜಾಪುರದವರು ಆಕ್ರಮಿಸಿದ್ದ ಭಾಗದಲ್ಲಿಯೇ ಹೊಕ್ಕು, ಶ್ರೀರಂಗಪಟ್ಟಣದ ರಾಜನು ಸ್ವತಂತ್ರನಾದನೆಂದು ಕೇಳಿ, ಕಂಠೀರವ ಒಡೆಯರ ಮೇಲೆ ಮುನಿದುಕೊಂಡು ಎದುರಾದನು. ಕಂಠೀರವ ಒಡೆಯರು ಪೊಗದಿ ಪೇಷ್ಕಷುಗಳನ್ನು ಕೊಟ್ಟು ಸಮಾಧಾನ ಪಡಿಸಿ ಕಳುಹಿಸಿದರು. ಮುಸ್ತಫಾಖಾನನು ಪೂರ್ವಘಟ್ಟವನ್ನಿಳಿದು, ಮುಂದಕ್ಕೆ ಹೊರಟನು

ಶ್ರೀರಂಗರಾಯನ ಪ್ರಯತ್ನ.

ಅತ್ತ ಶ್ರೀರಂಗರಾಯನು ದಕ್ಷಿಣದಲ್ಲಿ ಭಗ್ನಮನೋರಥನಾಗಿ, ತಂಜಾವೂರಿನ ಉತ್ತರ ಭಾಗದಲ್ಲಿ ಅಲೆದಾಡುತ್ತಲಿದ್ದು, ಕಡೆಗೆ ಮೈಸೂರಿಗೆ ಬಂದನು. ಕಂಠೀರವ ಒಡೆಯರು ಕೆಲವುಕಾಲ ಶ್ರೀರಂಗರಾಯನನ್ನು ತಮ್ಮ ಬಳಿಯಲ್ಲಿಟ್ಟುಕೊಂಡಿದ್ದರು. ಶ್ರೀರಂಗರಾಯನು ಸ್ವಲ್ಪಕಾಲ ಮಟ್ಟಿಗಿದ್ದು ಆಮೇಲೆ ತನಗೆ ಹಿಂದೆ ಸಹಾಯಮಾಡಿದ್ದ ಶಿವಪ್ಪನಾಯಕನ ಬಳಿಗೆ ಹೋದನು. ಶಿವಪ್ಪನಾಯಕನು ಅರಸನ ಪಕ್ಷವನ್ನು ವಹಿಸಿ ಬೇಲೂರು, ಸಕ್ಕರೆಪಟ್ಟಣಗಳನ್ನು ಜಯಿಸಿ ಅವುಗಳನ್ನಾತನಿಗೆ ಕೊಡಿಸಿ, ಶ್ರೀರಂಗರಾಯನಿಗೆ ತಕ್ಕ ಸಹಾಯಮಾಡಲಿಲ್ಲವೆಂಬ ನೆಪದಿಂದ ಕಂಠೀರವ ಒಡೆಯರ ಮೇಲೆ ದಂಡೆತ್ತಿ ಬಂದನು. ಈ ಸಂಗತಿಯ ವಿವರವು ಸ್ಪಷ್ಟವಾಗಿ ತಿಳಿದು ಬಂದಿಲ್ಲ.

ಮಧುರೆಯ ಯುದ್ಧ.

ಶ್ರೀರಂಗರಾಯನು ಹೊರಟುಹೋದ ಕೂಡಲೆ ಕಂಠೀರವ ಒಡೆಯರು ಮಧುರಾನಾಯಕನೊಡನೆ ಯುದ್ಧಕ್ಕೆ ತೊಡಗಿದರು. ತಾನೇ

ದ್ರೋಹಿಯಾಗಿದ್ದರೂ ತಿರುಮಲನಾಯಕನು ಒಡೆಯರನ್ನು ದ್ರೋಹಿಯೆಂದು ದೂಷಿಸುತ್ತ ಯುದ್ಧಕ್ಕೆ ಕೆಣಕಿದನು. ಯುದ್ಧವು ಮೊದಲಾಗುತ್ತಲೆ ದಳವಾಯಿ ಹಂಪಯ್ಯನು ಮೈಸೂರ ಸೇನೆಯೊಡನೆ ಹೊರಟು, ಸತ್ಯಮಂಗಲವನ್ನು ಗೆದ್ದು, ಮಧುರೆಯ ಸಮೀಪದವರೆಗೂ ನುಗ್ಗಿದನು. ಸುಸಮಯಕ್ಕೆ ತಿರುಮಲನಾಯಕನ ಸಹಾಯಕ್ಕಾಗಿ ಸೇತುಪತಿಯು ಒದಗಿಬಂದುದರಿಂದ ಮಧುರೆಯುಳಿಯಿತು. ಯುದ್ಧದಲ್ಲಿ ಸೆರೆಸಿಕ್ಕಿದವರಿಗೆ ಒಡೆಯರವರು ಕಿವಿಮೂಗುಗಳನ್ನು ಕತ್ತರಿಸುವಂತೆ ಆಜ್ಞೆಮಾಡುತ್ತಿದ್ದುದರಿಂದ ಮಧುರೆಯವರಿಗೆ ತುಂಬಾ ಅವಮಾನವೂ ರೋಷವೂ ತೋರಿತ್ತು. ಹಂಪಯ್ಯನು ಮಧುರೆಯಿಂದ ಹಿಂತಿರುಗುವಂತಾಯಿತು. ಆದಾಗ್ಯೂ ಮೈಸೂರಿನ ರಾಷ್ಟ್ರಕ್ಕೆ ನಷ್ಟವಾಗಲಿಲ್ಲ. ಮಧುರೆಯ ಯುದ್ಧವಲ್ಲದೆ ಕಂಠೀರವ ಒಡೆಯರ ಕಾಲದಲ್ಲಿ ಘಟ್ಟದ ಮೊದಲಿಯಾರೆಂದು ಹೆಸರಾದ ಕೊಂಗುನಾಡಿನ ಪಾಳೆಯಗಾರನೊಡನೆಯೂ ಯುದ್ಧವು ನಡೆಯಿತು. ಅದರ ಫಲಿತಾಂಶವಾಗಿ ಸಾಂಬಳ್ಳಿ, ಬಾಂಬಳ್ಳಿ ಮತ್ತು ಸತ್ಯಮಂಗಲಗಳು ರಾಜ್ಯಕ್ಕೆ ಸೇರಿದವು. ಪಶ್ಚಿಮ ದಿಕ್ಕಿನಲ್ಲಿ ಕೊಡಗಿನ ಭಾಗದಲ್ಲಿ ಆಳುತ್ತಿದ್ದ ನಂಜರಾಜಯ್ಯನೆಂಬ ಪಾಳೆಯಗಾರನೂ ಪದೇ ಪದೇ ಸೋತು, ಪಿರಿಯಪಟ್ಟಣವನ್ನು ಬಿಟ್ಟುಕೊಟ್ಟನು.

ಒಡೆಯರ ಬಲ.

ಈ ರೀತಿಯಲ್ಲಿ ೧೬೩೮ರಿಂದ ೧೬೫೯ರವರೆಗೆ ಆಳಿ ಕಂಠೀರವ ಒಡೆಯರು ೪೫ನೆಯ ವಯಸ್ಸಿನಲ್ಲಿಯೇ ಕಾಲವಾದರು. ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಹಿಡಿದು, ಮೈಸೂರು ರಾಜ್ಯಕ್ಕೆ ಅಸ್ತಿಭಾರವನ್ನು ಕಟ್ಟಿದ್ದರು ; ಕಂಠೀರವ ಒಡೆಯರು ರಾಜ್ಯವನ್ನು ವಿಪತ್ತುಗಳಿಂದ ಕಾಯಿಸಿ, ಆಳಿಕೆಯನ್ನು ಭದ್ರಪಡಿಸಿ, ರಾಜ್ಯವನ್ನು ವಿಸ್ತರಿಸಿದರು. ಸ್ವತಃ ಶೂರರೂ, ಬಲಶಾಲಿಗಳೂ, ಸಮರ್ಥ ಸೇನಾಪತಿಗಳೂ ಆಗಿದ್ದುದರಿಂದ ಇವರು ದಳವಾಯಿಗಳ ಮೇಲೆ ಭಾರವನ್ನು ಬಿಟ್ಟಿರಲಿಲ್ಲ. ರಾಜನು ಅಸಮರ್ಥನಾದಾಗ ದಳವಾಯಿಗಳು ಹೇಗೆ ನಡೆದುಕೊಂಡಾರೆಂಬುದು ಹಿಂದಿನ ಆಳಿಕೆಯಲ್ಲಿ ವ್ಯಕ್ತವಾಗಿತ್ತು. ಕಂಠೀರವ ಒಡೆಯರು ದಳವಾಯಿಗಳನ್ನು ತಮ್ಮ ವಶದಲ್ಲಿಟ್ಟುಕೊಂಡು, ತಪ್ಪು ಕಂಡಕೂಡಲೆ ಅಧಿಕಾರದಿಂದ ತಪ್ಪಿಸುತ್ತಿದ್ದರು. ಮೊದಮೊದಲಿನಲ್ಲಿ ಒಡೆಯರ ವಂಶದವರು



ಶ್ರೀ ದೊಡ್ಡ ದೇವರಾಜ ಒಡೆಯರು

ತಮ್ಮ ಬಂಧುಬಳಗದವರನ್ನೇ ದಳವಾಯಿ ಪದವಿಯಲ್ಲಿ ನಿಯಮಿಸಿಕೊಳ್ಳುತ್ತಿದ್ದರು. ಆಳಿಕೆಯ ಭದ್ರತೆಗಾಗಿ ಹಾಗೆ ಮಾಡಬೇಕಾಗಿತ್ತು. ಜ್ಞಾತಿಗಳನ್ನು ಬಿಟ್ಟು ಇತರರನ್ನು ನಿಯಮಿಸಲು ಮೊದಲಿಟ್ಟವರು ಕಂಠೀರವ ಒಡೆಯರೇ. ಇದರಿಂದ ಅವರು ಶಕ್ತಿವಂತರಾಗಿದ್ದುದು ಸ್ಪಷ್ಟವಾಗುತ್ತದೆ. ಅವಕಾಶ ದೊರೆತಂತೆ ಈ ಒಡೆಯರು ಪ್ರಜಾಹಿತ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಶ್ರೀರಂಗಪಟ್ಟಣದ ಬಳಿ ಇರುವ ಬಂಗಾರದೊಡ್ಡಿ ಕಾಲುವೆಯೆಂಬ ನೀರಾವರಿ ಕೆಲಸವು ಇವರ ಕಾಲದಲ್ಲಿಯೇ ಆದುದು.

ದೊಡ್ಡ ದೇವರಾಜ ಒಡೆಯರವರ ಆಳಿಕೆ.

೧೬೫೯_೧೬೭೨.

ಕಂಠೀರವ ಒಡೆಯರ ತರುವಾಯ ದೇವರಾಜ ಎಂಬ ಹೆಸರುಳ್ಳ ಇಬ್ಬರು ಆಳಿದಹಾಗೆ ಕಾಣುವುದು. ರಾಜರಾದವರು ಶ್ರೀರಂಗಪಟ್ಟಣದಲ್ಲಿಯೂ, ಯುವರಾಜಪದವಿಯಲ್ಲಿದ್ದವರು ಮೈಸೂರಿನಲ್ಲಿಯೂ ಆಳುವುದು ಪದ್ಧತಿಯಾಗಿದ್ದುದರಿಂದ ಏಕಕಾಲದಲ್ಲಿ ಇಬ್ಬರ ಆಳಿಕೆಯು ಕಂಡಂತಾಗುವುದು. ೧೬೫೯ರಿಂದ ೧೬೬೨ರ ವರೆಗೆ ದೊಡ್ಡ ದೇವರಾಜ ಒಡೆಯರು ಆಳಿದರು ; ೧೬೬೨ರಲ್ಲಿ ರಾಜ್ಯವನ್ನು ಪಡೆದ ಅವರ ತಮ್ಮನಾಗಿದ್ದ ಕೆಂಪದೇವಯ್ಯನೆಂಬಾತನು ದೊಡ್ಡ ದೇವರಾಜಒಡೆಯರೆಂಬ ಹೆಸರಿನಿಂದ ೧೬೭೨ರ ವರೆಗೆ ಆಳಿದನು. ಈ ದೊಡ್ಡ ದೇವರಾಜ ಒಡೆಯರು ಬಹಳ ಭಕ್ತರಾಗಿದ್ದರು. ಚಾಮುಂಡಿ ಬೆಟ್ಟಕ್ಕೆ ಸೋಪಾನವನ್ನು ಕಟ್ಟಿಸಿ, ಬೆಟ್ಟದ ಮೇಲಿರುವ ಬಸವನನ್ನು ಮಾಡಿಸಿದವರು ಇವರೇ. ಧರ್ಮಕಾರ್ಯಗಳಲ್ಲಿ ಇವರಿಗೆ ಹೆಚ್ಚಾದ ಆಸಕ್ತಿಯಿದ್ದುದರಿಂದ ಯುದ್ಧಗಳನ್ನು ದಳವಾಯಿಗಳೇ ನಡೆಸುತ್ತಿದ್ದರು. ಇವರ ಕಾಲದಲ್ಲಿಯೇ ವಿಜಯನಗರದ ಸಾಮ್ರಾಜ್ಯವು ಅಸ್ತಮಯವಾಯಿತು.

ವಿಜಯನಗರದ ಅರಸರ ಕಡೆಯ ಯುದ್ಧ.

ಮೈಸೂರನ್ನು ಬಿಟ್ಟಮೇಲೆ ಶ್ರೀರಂಗರಾಯನು ಶಿವಪ್ಪನಾಯಕನನ್ನು ಸೇರಿದನಷ್ಟೆ. ಬೇಲೂರು ಸಕ್ಕರೆಪಟ್ಟಣಗಳನ್ನು ಗೆದ್ದು ಅರಸನಿಗೆ ಕೊಟ್ಟ ತರುವಾಯ, ಕಂಠೀರವ ಒಡೆಯರೊಡನೆ ಯುದ್ಧಮಾಡಿದ್ದ ಈತನು ಈಗ ಒಡೆಯರ ಸಂಬಂಧವನ್ನು ಅಪೇಕ್ಷಿಸಿ ರಾಯಭಾರವನ್ನು ಕಳುಹಿದ

ನಂತೆ. ಆ ರಾಯಭಾರವನ್ನು ಒಡೆಯರವರು ಮನ್ನಿಸದಿರಲು, ಇಬ್ಬರಿಗೂ ಯುದ್ಧವು ಪುನಃ ತೋರಿತು. ದೇವರಾಜ ಒಡೆಯರ ದಳವಾಯಿಗಳು ಶಿವಪ್ಪನಾಯಕನನ್ನೂ, ಶ್ರೀರಂಗರಾಯನ ಮಕ್ಕಳನ್ನೂ ಹಾಸನದ ಬಳಿ ಎದುರಿಸಿದರು. ಪರಿಣಾಮವಾಗಿ ಚಿಕ್ಕನಾಯಕನಹಳ್ಳಿ, ಹಾಸನಗಳು ಒಡೆಯರ ವಶವಾದುವು. ಬೇರೆ ಕಡೆ ದಳವಾಯಿಗಳು ಕೆಂಪೇಗೌಡ ನನ್ನೂ ಸೋಲಿಸಿ ಹುಲಿಯೂರು ದುರ್ಗವನ್ನು ಗೆದ್ದರು.

ಈರೋಡಿನ ಕದನ.

ಈ ವೇಳೆಯಲ್ಲಿ ಮಧುರೆಯ ನಾಯಕನಾಗಿದ್ದ ಚೊಕ್ಕನಾಥನಾಯ ಕನು ಒಡೆಯರನ್ನು ಎದುರಿಸಲು ದೊಡ್ಡ ಸೈನ್ಯವನ್ನು ಕೂಡಿಸಿ, ಯುದ್ಧ ಸನ್ನದ್ಧನಾಗುತ್ತಿದ್ದನು. ಈ ಸನ್ನಾಹವನ್ನು ಮುರಿಯುವುದಕ್ಕೆ ದೇವರಾಜ ಒಡೆಯರು ಭೇದೋಪಾಯವನ್ನು ಚಿಂತಿಸುತ್ತಿರಲು ಹಂಗಳದಲ್ಲಿ ವಿಶಾಲಾಕ್ಷ ಪಂಡಿತನಿಂದ ಶಿಕ್ಷಿತನಾಗುತ್ತಿದ್ದ ಚಿಕ್ಕ ದೇವರಾಜನು ಯುದ್ಧವೇ ಕರ್ತವ್ಯ ವೆಂಬುದಾಗಿಯೂ, ತಾನೇ ಯುದ್ಧವನ್ನು ಜಯಶಾಲಿಯಾಗುವಂತೆ ನಡೆಸು ವುದಾಗಿಯೂ ಹೇಳಿದನು. ಸು. ೧೬೭೦ರಲ್ಲಿ ಈರೋಡಿನ ಬಳಿ ಇಬ್ಬರಿಗೂ ಯುದ್ಧ ನಡೆಯಿತು. ಮಧುರೆಯ ಸೈನ್ಯವು ಸೋತುಹೋಗಿ, ಮೈಸೂರಿನ ರಾಜ್ಯವು ಸ್ವತಂತ್ರವೂ, ಸ್ಥಿರವೂ ಆಯಿತು.

ವಿಜಯನಗರದ ಅವಸಾನ.

೧೬೪೭ರಿಂದ ೧೬೬೫ರ ವರೆಗೂ ಸಾಹಸಪಡುತ್ತ ವಿಜಯನಗರ ವನ್ನು ಪುನಃ ಎತ್ತಿಕಟ್ಟಲು ಶ್ರೀರಂಗರಾಯನು ಮಾಡಿದ ಪ್ರಯತ್ನಗಳು ಶಿವಪ್ಪನಾಯಕನು ೧೬೭೦ರಲ್ಲಿ ಮೃತನಾದಾಗ ಕೊನೆಯಾದವು. ಅಷ್ಟು ಕಾಲದಲ್ಲಿಯೂ ಶ್ರೀರಂಗರಾಯನು ದುರವಸ್ಥೆಯಲ್ಲಿಯೇ ಇದ್ದನು. ೧೬೫೩ರಲ್ಲಿ ದಖ್ಖ ಸುಭಾದಾರನಾಗಿದ್ದ ಅವರಂಗಸ್ಸೀಬನ ಬಳಿಗೇ ದೂತ ರನ್ನು ಕಳುಹಿಸಿದ್ದನೆಂಬ ಸಂಗತಿಯಿಂದ ಶ್ರೀರಂಗರಾಯನ ಅವಸ್ಥೆಯನ್ನು ಊಹಿಸಬಹುದು. ಮಧುರೆ, ಮೈಸೂರು ಮತ್ತು ಕೆಳದಿಯ ನಾಯಕರು ಆತನ ಹೆಸರಿನಲ್ಲಿ ಪರಸ್ಪರ ಯುದ್ಧಗಳಲ್ಲಿ ಕಾದುತ್ತ ಕಾಲಹರಣ ಮಾಡಿ ದರೇ ವಿನಾ ದೂರದೃಷ್ಟಿಯನ್ನು ವಹಿಸಲಿಲ್ಲ. ಸ್ವಂತ ರಾಜ್ಯಗಳ ವಿಸ್ತಾರದಲ್ಲಿಯೂ, ಸ್ವಪ್ರತಿಷ್ಠೆಯಲ್ಲಿಯೂ ಇವರು ನಿರತರಾಗಿದ್ದುದರಿಂದ

ಹೊಯಿಸಳ ಮುಮ್ಮಡಿ ಬಲ್ಲಾಳ ರಾಯನು ಸಿದ್ಧಗೊಳಿಸಿ ಮುನ್ನೂರು ವರ್ಷ ಕಾಲ ಬೆಳಗಿದ ಸಾಮ್ರಾಜ್ಯವು ಅಸ್ತಮಯವಾಯಿತು. ಶ್ರೀರಂಗರಾಯನೆಷ್ಟು ದೂರದೃಷ್ಟಿಯನ್ನು ತೋರಿದನೋ ಸಾಮಂತರು ಅಷ್ಟು ಮೂರ್ಖತೆಯನ್ನೂ ಅವಿವೇಕವನ್ನೂ ತೋರಿದರು. ಶ್ರೀರಂಗರಾಯನು ಕೆಳದಿಯಲ್ಲಿ ಕೆಲಕಾಲವಿದ್ದು ಹಾಗೆಯೇ ತೀರಿಕೊಂಡನು. ಆತನ ಮಗನಾದ ಕೋದಂಡರಾಮನೆಂಬಾತನು ಮೈಸೂರಿನ ದಳವಾಯಿ ಕುಮಾರಯ್ಯನೊಡನೆ ಹಾಸನದ ಬಳಿ ಯುದ್ಧಮಾಡಿದ ವೃತ್ತಾಂತವೊಂದು ವಿನಾ ವಿಜಯನಗರದ ವಂಶದ ಸುಳಿವು ಕರ್ಣಾಟಕದಲ್ಲಿ ಮುಂದೆ ಕಾಣಿಸದಂತಾಯಿತು. ಷಾಹಿ ರಾಜ್ಯಗಳನ್ನೂ ಮುಸಲ್ಮಾನರ ಹಾವಳಿಯನ್ನೂ ತಡೆಯುವ ಉದ್ದೇಶವೂ ಕೆಲಸವೂ ಮುಂದಿನ ಕಾಲದಲ್ಲಿ ಮರಾಟೆಯವರಿಂದ ನಡೆದುವು.

ಶಿವಾಜಿಯ ಏಳಿಗೆ.

ಬಿಜಾಪುರದ ದಳಪತಿಯಾಗಿ ಮೈಸೂರು ಪ್ರಾಂತದಲ್ಲಿ ಜಹಗೀರನ್ನು ಪಡೆದಿದ್ದ ಷಾಜಿ ಭೋಸ್ಲೆಯು ಬೆಂಗಳೂರು, ಕೋಲಾರಗಳಲ್ಲಿ ನಿಯಮಿತನಾದಾಗಲೇ ಆತನ ಮಗ ಶಿವಾಜಿಯು ಪುಣೆಯಲ್ಲಿ ಬೆಳೆದು ೧೬೪೬ರಲ್ಲಿ ದುರ್ಗಗಳನ್ನು ಸಾಧಿಸಲು ಮೊದಲಿಟ್ಟನು. ಕಾಲ ಕಳೆಯುತ್ತ ಶಿವಾಜಿಯು ಗೋಬ್ರಾಹ್ಮಣಪಾಲಕನೆಂಬ ಹೆಸರನ್ನು ಯಥಾರ್ಥವಾಗಿ ತಾಳುವಂತೆ ಬಿಜಾಪುರದವರನ್ನೂ ಮುಘಲರನ್ನೂ ಎದುರಿಸಿದನು. ಷಾಜಿಯು ೧೬೬೪ರಲ್ಲಿ ಬಸವಾಪಟ್ಟಣದಲ್ಲಿ ಸತ್ತನು. ೧೬೬೬ರಲ್ಲಿ ಶಿವಾಜಿಯು ಆಗ್ರಾದಿಂದ ತಪ್ಪಿಸಿಕೊಂಡು ಬಂದು, ೧೬೬೭ರಿಂದ ೧೬೭೨ರ ವರೆಗೂ ಸ್ವರಾಜ್ಯವನ್ನು ಕಟ್ಟಿ, ೧೬೭೪ರಲ್ಲಿ ಪಟ್ಟಾಭಿಷಿಕ್ತನಾದನು. ಶ್ರೀರಂಗರಾಯನ ಕಡೆಗಾಲವೂ ಶಿವಾಜಿಯ ಪಟ್ಟಾಭಿಷೇಕವೂ ಸುಮಾರಾಗಿ ಒಂದೇ ಕಾಲದಲ್ಲಿ ಸಂಭವಿಸಿದವು. ಅಭಿಷಿಕ್ತನಾದ ಮೇಲೆ ಶಿವಾಜಿಯು ಹಿಂದಿನ ವಿಜಯನಗರ ಸಾಮ್ರಾಜ್ಯವನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ ಗೋಲಕೊಂಡೆಯ ಪ್ರಧಾನ ಮಾದನ್ನಪಂಡಿತನೊಡನೆ ಸಂಧಿಯನ್ನು ಮಾಡಿಕೊಂಡು, ಬಿಜಾಪುರ ಕರ್ಣಾಟಕವೆಂಬ ಭಾಗವನ್ನು ಸಾಧಿಸಿ, ತುರುಷ್ಕರ ರಾಜ್ಯಕ್ಕೆ ದಕ್ಷಿಣದಲ್ಲಿ ಆಸ್ಪದವಿಲ್ಲದಂತೆ ಮಾಡಿದನು. ಶಿವಾಜಿಯು ಮುಘಲ ಸಾಮ್ರಾಜ್ಯದ ನಾಶಕ್ಕೆ ಅಸ್ತಿಭಾರವನ್ನು ಹಾಕಿ ವಿಜಯನಗರದ ಮಹದು

ದ್ದೇಶವನ್ನು ಸಾರ್ಥಕಗೊಳಿಸಿದನು. ಆದರೆ ಶಿವಾಜಿಯ ಸ್ವಂತರಾಷ್ಟ್ರವು ವಿಜಯನಗರದ ಭಾಗವಾಗಿರಲಿಲ್ಲ. ಸಾಮ್ರಾಜ್ಯದ ಭಾಗವಾಗಿದ್ದು ಬಿಜಾಪುರಕ್ಕೂ, ಗೋಲಕೊಂಡೆಗೂ ಸಿಕ್ಕದೆ ಉಳಿದುದು ಮೈಸೂರು.

ಇಕ್ಕೇರಿಯ ನಾಯಕರು.

ಕೆಳದಿಯಲ್ಲಿ ಶಿವಪ್ಪನಾಯಕನು ಸು. ೧೬೬೦ರ ವರೆಗೆ ಆಳಿದನು. ಶ್ರೀರಂಗರಾಯನಲ್ಲಿ ತೋರಿದ ಪ್ರಭುಭಕ್ತಿಯೊಂದೇ ಆತನಲ್ಲಿ ದೊಡ್ಡ ಗುಣವಾಗಿರಲಿಲ್ಲ. ರಾಜ್ಯ ವಿಸ್ತರಿಸುವುದರಲ್ಲಿಯೂ, ಪ್ರಜೆಗಳನ್ನು ಆಳುವುದರಲ್ಲಿಯೂ ಆತನು ಸಮರ್ಥನೂ, ಜಾಣನೂ ಆಗಿದ್ದನು. ನೆಲಗಂದಾಯದ ವಿಷಯದಲ್ಲಿ ಆತನು ನಡೆಸಿದ ಶಿಸ್ತು ಈಗಲೂ ಸ್ಮರಣೆಯಲ್ಲಿದೆ. ಆತನ ತರುವಾಯ ವೆಂಕಟಪ್ಪನಾಯಕ ಮತ್ತು ಭದ್ರಪ್ಪನಾಯಕರು ಕ್ರಮವಾಗಿ ಆಳಿದರು. ಭದ್ರಪ್ಪನ ಕಾಲದಲ್ಲಿ ಬಿಜಾಪುರದವರೊಂದು ಸಲ ದಂಡೆತ್ತಿ ಬಂದು ಕಪ್ಪವನ್ನು ಸುಲಿದುಕೊಂಡು ಹೋದರು. ಒಳ ಜಗಳಗಳಲ್ಲಿ ಸಿಕ್ಕಿ ಭದ್ರಪ್ಪನು ಶತ್ರುವನ್ನು ತಡೆಯಲಾರದವನಾಗಿ, ಕಡೆಗೆ ೧೬೬೪ರಲ್ಲಿ ಪಿತೂರಿಯಲ್ಲಿಯೇ ದುರ್ಮರಣವನ್ನು ಹೊಂದಿದನು. ಕೂಡಲೆ ನಾಯಕನಾದ ಹಿರಿಯ ಸೋಮಶೇಖರನಾಯಕನು ಬಿಜಾಪುರದ ಅಧಿಕಾರಿಗಳಿಗೆ ಅಧೀನನಾಗಿಯೇ ಇದ್ದನು. ೧೬೬೪ರಲ್ಲಿ ಬಿಜಾಪುರದೊಡನೆ ಹೋರಾಡುತ್ತಿದ್ದ ಶಿವಾಜಿಯು ಸಮುದ್ರ ತೀರದಲ್ಲಿ ಓಡಾಡುತ್ತ, ಕೆಳದಿ ರಾಜ್ಯದ ಮುಖ್ಯರೇವಾಗಿದ್ದ ಬಸರೂರನ್ನು ಕೊಳ್ಳೆಹೊಡೆದಿದ್ದನು. ಬಿಜಾಪುರದವರೂ ಮರಾಟೆಯವರೂ ಈ ರೀತಿಯಲ್ಲಿ ಮೈಸೂರಿನ ವಾಯುವ್ಯ ಭಾಗಕ್ಕಾಗಿ ಸ್ಪರ್ಧಿಸುತ್ತಿದ್ದರು. ಆಗ ಹಿರಿಯ ಸೋಮಶೇಖರನಾಯಕನು ತೀರಿಹೋದನು; ರಾಣಿ ಚೆನ್ನಮ್ಮಾಜಿಯು ಆಳಿಕೆಯನ್ನು ತಿಮ್ಮಯ್ಯನೆಂಬುವನ ಸಹಾಯದಿಂದ ನಡೆಸಲಾರಂಭಿಸಿದಳು. ಚೆನ್ನಮ್ಮಾಜಿಯು ಮರಾಟೆಯವರ ಪಕ್ಷವೇ ತಕ್ಕುದೆಂದು ನಿಶ್ಚಯಿಸಿ, ೧೬೭೫ರಲ್ಲಿ ಛತ್ರಪತಿ ಶಿವಾಜಿಯ ಬಳಿಗೆ ದೂತರನ್ನಟ್ಟಿ, ರಕ್ಷಣೆಯನ್ನು ಕೇಳಿಕೊಂಡು, ಪೊಗದಿಯನ್ನು ಕೊಡಲೊಪ್ಪಿದಳು. ಬಿಜಾಪುರದ ಹಂಗಿಗೊಳಗಾಗಿದ್ದ ಈ ಭಾಗವು ಈ ರೀತಿಯಲ್ಲಿ ಶಿವಾಜಿಗೆ ಸೇರಿತು.



ಶ್ರೀ ಚಿಕ್ಕ ದೇವರಾಜ ಒಡೆಯರು

ಚಿಕ್ಕದೇವರಾಯ ಒಡೆಯರ ಆಳಿಕೆ, ೧೬೭೩–೧೭೦೪.

ದೊಡ್ಡ ದೇವರಾಜ ಒಡೆಯರು ೧೬೭೩ರಲ್ಲಿ ಚಿಕ್ಕನಾಯಕನಹಳ್ಳಿಯ ಬಳಿ ಕಾಲವಾದಾಗ ಹಂಗಳದಲ್ಲಿದ್ದು ಈರೋಡು ಕದನದಲ್ಲಿ ಜಯಶಾಲಿಯಾಗಿ ಕೀರ್ತಿಯನ್ನು ಪಡೆದಿದ್ದ ಚಿಕ್ಕ ದೇವರಾಯಒಡೆಯರು ಶ್ರೀರಂಗಪಟ್ಟಣದ ಪಟ್ಟವನ್ನೇರಿದರು. ಇವರ ಆಳಿಕೆಯಲ್ಲಿ ಒಡೆಯರ ರಾಜ್ಯವು ಇನ್ನೂ ವಿಸ್ತಾರವನ್ನೂ ಭದ್ರತೆಯನ್ನೂ ಪಡೆಯಿತು. ದಖನ್ನಿನಲ್ಲಿ ಇವರ ಕಾಲದಲ್ಲಿ ಘೋರವಾದ ಯುದ್ಧಗಳು ನಡೆಯುತ್ತಿದ್ದಾಗಲೂ, ಇವರು ಅವಲಂಬಿಸಿದ ನೀತಿಯಿಂದ ಮೈಸೂರು ರಾಜ್ಯಕ್ಕೆ ತೊಂದರೆಯಿಲ್ಲದಂತಾಯಿತು.

ತೆಂಕಣ ಯುದ್ಧಗಳು, ೧೬೮೩–೧೬೯೬.

ಈರೋಡಿನ ಕದನದಿಂದ ಮಧುರೆಯನಾಯಕನು ಚೇತರಿಸಿಕೊಳ್ಳುವ ವೇಳೆಗೆ ತಂಜಾವೂರು, ಶೆಂಜಿಗಳಲ್ಲಿ ಪ್ರಬಲರಾಗುತ್ತಲಿದ್ದ ಮರಾಟೆಯವರೊಡನೆ ಹೋರಾಡಬೇಕಾಗಿ ಬಂತು. ಆ ಸಮಯವನ್ನು ಸಾಧಿಸಿ ಚಿಕ್ಕದೇವರಾಯ ಒಡೆಯರು ೧೬೭೬ರಲ್ಲಿ ಸತ್ಯಮಂಗಲವನ್ನು ಹಿಡಿದರು. ಚೊಕ್ಕನಾಥನಾಯಕನು ಅನೇಕ ತೊಂದರೆಗಳಿಗೆ ಸಿಕ್ಕಿದ್ದನು; ಆಗ ರುಸ್ತುಂಖಾನನೆಂಬ ಮುಸಲ್ಮಾನ ಸಾಹಸಿಯು ಮಧುರೆಯನ್ನು ಹಿಡಿಯಲು ಸನ್ನಾಹಗೊಂಡನು. ಅದೇ ವೇಳೆಯೆಂದು ಒಡೆಯರು ತಿರುಚನಾಪಳ್ಳಿಯನ್ನು ಮುತ್ತಿಹಿಡಿಯುವಂತೆ ಆಜ್ಞೆ ಮಾಡಿ, ದಳವಾಯಿ ಕೊಮಾರಯ್ಯನನ್ನು ಕಳುಹಿಸಿದರು. ೧೬೮೦ರಲ್ಲಿ ಕೊಮಾರಯ್ಯನು ತಿರುಚನಾಪಳ್ಳಿಯನ್ನು ಮುತ್ತಿದನು. ರುಸ್ತುಂಖಾನನು ಕೊಮಾರಯ್ಯನನ್ನು ಪ್ರತಿಭಟಿಸಲಾರದೆ ಹೋದನು. ಆಗ ಚೊಕ್ಕನಾಥನಾಯಕನ ಇಷ್ಟಮಿತ್ರರು ರುಸ್ತುಮನ ಅವತಾರ ಪೂರ್ತಿಯನ್ನು ಮಾಡಿ, ತಮ್ಮ ರಾಜ್ಯದಿಂದ ಮೈಸೂರಿನವರನ್ನು ಓಡಿಸಲು ದೊಡ್ಡ ಪ್ರಯತ್ನ ಮಾಡಿದರು. ಹೀಗೆ ಎದುರಾದ ಶತ್ರುಗಳನ್ನು ಎದುರಿಸುವುದು ಕೊಮಾರಯ್ಯನಿಗೆ ಕಷ್ಟವಾಯಿತು. ಅಂತಹ ಸಮಯದಲ್ಲಿ ಮಧುರೆಗೆ ಸಹಾಯವಾಗಿ ಶಂಭುಜಿಯ ಭಾವನಾದ ಹರಜಿಮಹದಿಕ್ ಎಂಬ ಮರಾಟಾ ದಳಪತಿಯೂ ಬಂದು, ಕೊಮಾರಯ್ಯನಿಗೆ ಆಸ್ಪದವಿಲ್ಲದಂತೆ ದಿಗ್ಬಂಧನ ಮಾಡಿ, ಅವನ ಸೈನ್ಯವನ್ನು ಸೋಲಿಸಿ,

ಕಡೆಗೆ ಕೊಮಾರಯ್ಯನನ್ನೇ ಕೈಸೆರೆ ಮಾಡಿದನು. ಮಧುರೆಯವರೂ, ಮರಾಟೆಯವರೂ ಒಂದಾಗಿ ಮೈಸೂರಿನವರ ವಶದಲ್ಲಿದ್ದ ತಿರುಚನಾಪಳ್ಳಿಯನ್ನು ಮುತ್ತಿದರು. ಸೆರೆಯಿಂದ ಬಿಡುಗಡೆಯಾಗಿ ಹಿಂತಿರುಗಿ ಬಂದ ಕೊಮಾರಯ್ಯನು ಹೇಗಾದರೂ ಮುಯ್ಯಿತೀರಿಸಿಕೊಳ್ಳಬೇಕೆಂದು ೧೬೫೫-೬ರಲ್ಲಿ ಪುನಃ ಹೊರಟು, ತಿರುಚನಾಪಳ್ಳಿಯನ್ನು ಮುತ್ತಿ ಹಿಡಿದು, ಜಯಶಾಲಿಯಾದನು. ಬೇರೆ ವಿಪತ್ತುಗಳಿಗೀಡಾಗಿದ್ದುದರಿಂದ ಮರಾಟೆಯವರು ಈ ವ್ಯಾಜ್ಯದಲ್ಲಿ ಪ್ರವೇಶಮಾಡಲಿಲ್ಲ. ಆದ್ದರಿಂದ ತಿರುಚನಾಪಳ್ಳಿಯೇ ಮಧುರೆಗೂ ಮೈಸೂರಿಗೂ ಮೇರೆಯಾಗಿರತಕ್ಕದ್ದೆಂದು ನಿಶ್ಚಯವಾಯಿತು.

ಮೂಗುಗಳ ಯುದ್ಧ

ಇದೇ ಮಧುರೆ ಮತ್ತು ಮೈಸೂರುಗಳಿಗೆ ನಡೆದ ಕಡೆಯ ಯುದ್ಧ. ಪರಿಣಾಮವಾಗಿ ಶಾಲ್ಯ, ಕೊಯಿಮುತ್ತೂರು ಜಿಲ್ಲೆಗಳು ಮೈಸೂರ ಪಾಲಾದವು. ಎರಡು ಸಂಸ್ಥಾನಗಳೂ ಮರಾಟೆಯವರನ್ನು ಶತ್ರುಗಳೆಂದೇ ಭಾವಿಸಿದುವು. ಸ್ಥಾನಬಲದಿಂದ ಮೈಸೂರು ಉಳಿಯಿತು ; ಮಧುರೆಯು ಅಳಿಯಿತು. ಅದು ಹೇಗೆಂಬುದನ್ನು ಮುಂದೆ ಕಾಣುವೆವು. ಮೈಸೂರು, ಮಧುರೆಗಳು ವಿಜಯನಗರದರಸನನ್ನು ಅಸಡ್ಡೆ ಮಾಡಿಹೋರಾಡಿದಂತೆಯೇ ಮುಘಲ ಮರಾಟಾ ಯುದ್ಧ ಕಾಲದಲ್ಲಿಯೂ ಪರಸ್ಪರವಾಗಿ ಹೋರಾಡಿದವು. ಈ ಯುದ್ಧಗಳು ಬಹಳ ಕ್ರೌರ್ಯದಿಂದ ನಡೆದವು. ಸೋತು ಸೆರೆಸಿಕ್ಕಿದವರಿಗೆ ಕಂಠೀರವ ಒಡೆಯರು ಪ್ರಾರಂಭಿಸಿದ ನಾಸಿಕಾಛೇದನವೇ ಸಾಮಾನ್ಯವಾಗಿತ್ತು. ಈ ಕಾರಣದಿಂದ ಕಂಠೀರವ ಒಡೆಯರ ಕಾಲದಲ್ಲಿ ನಡೆದ ಒಂದು ಯುದ್ಧವು 'ಮೂಗುಗಳ ಯುದ್ಧ' ವೆಂದು ಹೆಸರಾಗಿದೆ. ಚಿಕ್ಕದೇವರಾಯ ಒಡೆಯರ ಕಾಲದಲ್ಲಿಯೂ ಈ ವಿಧವಾದ ಕ್ರೌರ್ಯವು ಉಭಯರಲ್ಲಿಯೂ ನಡೆಯಿತು. ೧೭೦೦ ತರುವಾಯ ವರ್ಷೇ ವರ್ಷೇ ಮಧುರೆಯು ದುರ್ಬಲವಾಗುತಲಿತ್ತು. ೧೭೩೬ರಲ್ಲಿ ಆ ನಾಯಕರ ವಂಶಕ್ಕೆ ಕಡೆಯೆನ್ನಿಸಿದ ಮೀನಾಕ್ಷಿದೇವಿಯು ಮೋಸಕ್ಕೆ ಸಿಲ್ಕಿ ಮೃತಳಾದಳು. ಮಧುರೆಯು ಚಂದಾಸಾಹೇಬನ ವಶವಾಯಿತು.

ಮಧುರೆಯ ತರುವಾಯ ದಕ್ಷಿಣದಲ್ಲಿ ಒಡೆಯರಿಗೆ ಶತ್ರುಗಳಾದವರು ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ಇರಲಿಲ್ಲ. ೧೭೦೦ರಲ್ಲಿ ಮಾತ್ರ

ಒಡೆಯರವರು ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿಸಿದಾಗ, ಮಧುರೆ ಮತ್ತು ತಂಜಾವೂರಿನವರು ಯುದ್ಧಮಾಡಬೇಕೆಂಬಯೋಚನೆ ಮಾಡಿದರು. ಅಣೆಕಟ್ಟಿನಿಂದ ಅವರಿಗೇನೂ ನಷ್ಟವಾಗದಿರಲು ಯುದ್ಧವು ನಡೆಯಲಿಲ್ಲ.

ರಾಜ್ಯ ವಿಸ್ತಾರ

ಇತರ ದಿಕ್ಕುಗಳಲ್ಲಿಯೂ ರಾಜ್ಯವನ್ನು ಬೆಳೆಸಲು ಅನುಕೂಲವಾಗಿತ್ತು. ೧೬೩೮ರಿಂದ ೧೬೬೩ರ ವರೆಗೆ ನಡೆದ ಬಿಜಾಪುರದವರ ದಂಡಯಾತ್ರೆಗಳಲ್ಲಿ ಅನೇಕ ಪಾಳೆಯಗಾರರು ಪೆಟ್ಟುತಿಂದು ದುರ್ಬಲರಾಗಿದ್ದರು. ಶಿವಾಜಿಯೊಡನೆಯೂ ಮುಘಲರೊಡನೆಯೂ ಯುದ್ಧಗಳನ್ನು ನಡೆಸುತ್ತ, ಅಂತಃಕಲಹಗಳಿಂದ ಐಕ್ಯತೆಯನ್ನು ಕಳೆಯುತ್ತ ಇದ್ದ ಬಿಜಾಪುರಕ್ಕೆ ಗೆದ್ದ ಭಾಗಗಳನ್ನು ಚೆನ್ನಾಗಿ ರೂಢಿಸಿಕೊಳ್ಳಲು ಆಗಲಿಲ್ಲ. ಅಂತಹ ಸಮಯದಲ್ಲಿ ಒಡೆಯರವರು ತಮ್ಮ ಸೈನ್ಯಗಳನ್ನು ಪದೇಪದೇ ಕಳುಹಿಸಿ, ಚಿಕ್ಕದೇವರಾಯನದುರ್ಗ, ಮಧುಗಿರಿ, ತುಮಕೂರು, ಚಿಕ್ಕನಾಯಕನಹಳ್ಳಿ, ಹಾರನಹಳ್ಳಿ, ಬಾಣಾವರ, ಕಡೂರು, ಸಕ್ಕರೆಪಟ್ಟಣ, ಬೇಲೂರು, ಹಾಸನ, ಅರಕಲಗೂಡು, ಸಕಲೇಶಪುರಗಳನ್ನು ವಶಪಡಿಸಿಕೊಂಡರು. ಈ ಸಂದರ್ಭದಲ್ಲಿ ಮಧುಗಿರಿ, ಚಿಕ್ಕನಾಯಕನಹಳ್ಳಿ, ಐಗೂರು, ಬೇಲೂರುಗಳ ಪಾಳೆಯಗಾರರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡರು.

ಬೆಂಗಳೂರನ್ನು ಕೊಂಡದ್ದು

ಚನ್ನಪಟ್ಟಣ ಪ್ರಾಂತದಲ್ಲಿದ್ದ ಜಗದೇವರಾಯನ ವಂಶಸ್ಥರು ಇದಕ್ಕೆ ಹಿಂದೆಯೇ ಒಡೆಯರ ಬಲಕ್ಕೆ ಸೋತಿದ್ದರು. ಬಿಜಾಪುರದವರ ಜಯಯಾತ್ರೆಗಳಲ್ಲಿ ಈ ವಂಶದ ಅಧಿಕಾರವು ನಾಶವೇ ಆಯಿತು. ಷಾಜಿ ಭೋನ್ಸ್ಲೆಗೆ ಸೇರಿದ್ದ ಬೆಂಗಳೂರು, ಕೋಲಾರ ಪ್ರಾಂತವು ಆತನ ವಂಶದಲ್ಲಿಯೇ ಇದ್ದು ೧೬೮೭ರಲ್ಲಿ ಮುಘಲರನ್ನು ಸೇರಿತು. ೧೬೮೭ರಲ್ಲಿ ಮುಘಲ ದಳಪತಿ ಕಾಸಿಂಖಾನನು ಬೆಂಗಳೂರನ್ನು ಮರಾಟೆಯವರಿಂದ ಕಿತ್ತುಕೊಂಡನು. ಮರಾಟೆಯವರೊಡನೆ ಅದಕ್ಕಾಗಿ ವ್ಯಾಪಾರ ಮಾಡುತ್ತಿದ್ದ ಚಿಕ್ಕದೇವರಾಯ ಒಡೆಯರು ಕಾಸಿಂಖಾನನೊಡನೆಯೇ ವ್ಯಾಪಾರ ಮಾಡಿ, ೩ ಲಕ್ಷ ರೂಪಾಯಿಗಳನ್ನು ಕೊಟ್ಟು ಬೆಂಗಳೂರನ್ನು ಅದೇ ವರ್ಷದಲ್ಲಿ ಕೊಂಡುಕೊಂಡು, ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು.

ಆದಾಯ ವೃದ್ಧಿ

ಪಟ್ಟವನ್ನೇರಿದ ಕೂಡಲೆ ಚಿಕ್ಕದೇವರಾಯ ಒಡೆಯರು, ಗುರುವಾಗಿದ್ದು ಯಳಂದೂರು ಪಂಡಿತನೆಂದು ಹೆಸರು ಪಡೆದಿದ್ದ ವಿಶಾಲಾಕ್ಷ ಪಂಡಿತನನ್ನು ಮುಖ್ಯ ಮಂತ್ರಿಯಾಗಿ ನೇಮಿಸಿಕೊಂಡು, ಆಡಳಿತದಲ್ಲಿ ತಪ್ಪಿಹೋಗಿದ್ದ ಬಿಂಕವನ್ನು ನೆಲೆಗೊಳಿಸುವುದಕ್ಕೂ ರಾಜ್ಯವನ್ನು ವಿಸ್ತಾರಗೊಳಿಸುವುದಕ್ಕೂ ಆರಂಭಿಸಿದರು. ಕಂಠೀರವ ಒಡೆಯರು ನಾಣ್ಯಗಳನ್ನು ಮುದ್ರಿಸಿ, ಸ್ವತಂತ್ರಾಧಿಕಾರವನ್ನು ವಹಿಸಿ, ದುರ್ಗಗಳನ್ನು ಬಲಪಡಿಸಿ, ರಾಜಾದಾಯವನ್ನು ಹೆಚ್ಚಿಸಿದ್ದರು. ಈ ಒಡೆಯರು ಆ ಪ್ರಯತ್ನವನ್ನೇ ಮುಂದೆ ಸಾಗಿಸಲು ಸಿದ್ಧರಾಗಿ ಮೊದಲು ಕಂದಾಯವನ್ನು ಹೆಚ್ಚಿಸಿದರು. ಅದುವರೆಗೂ ನೆಲಗಂದಾಯ, ಕೊಳ್ಳೆಯ ಹಣ, ಮತ್ತು ಸಣ್ಣಸಣ್ಣ ಪಾಳೆಯಗಾರರು ತೆರುತ್ತಿದ್ದ ಖಂಡಣೆಯ ಹಣವೇ ರಾಜಾದಾಯವಾಗಿದ್ದುದರಿಂದ ಸಾಕಾದಷ್ಟು ಉತ್ಪತ್ತಿಯಿರಲಿಲ್ಲ. ರಾಜ್ಯವು ವಿಸ್ತಾರವಾಗಿ, ಸೈನ್ಯವು ವೃದ್ಧಿಯಾಗುತ್ತ ವೆಚ್ಚವು ಹೆಚ್ಚಾಗುತ್ತಿದ್ದುದರಿಂದ ಆದಾಯವನ್ನು ಹೆಚ್ಚಿಸುವುದು ಅವಶ್ಯವಾಗಿತ್ತು. ಅದಕ್ಕಾಗಿ ಒಡೆಯರು ಕಾವೇರಿ ನದಿಗೆ ಕಟ್ಟೆಯನ್ನು ಕಟ್ಟಿಸಿ, ಎರಡು ಹೊಸ ಕಾಲುವೆಗಳನ್ನು ತೆಗೆಸಿ, ಸಾಗುವಳಿಗೆ ಸಹಾಯಮಾಡಿ, ನೆಲಗಂದಾಯವನ್ನು ಹೆಚ್ಚಿಸಿದ್ದಲ್ಲದೆ, ಪೂರ್ವ ಕಾಲದಲ್ಲಿ ಬಳಕೆಯಲ್ಲಿದ್ದ ಸುಂಕ ತೆರಿಗೆಗಳನ್ನು ಪುನಃ ಎತ್ತುವಂತೆ ಆಜ್ಞೆಮಾಡಿದರು.

ಜಂಗಮರ ವಿರೋಧ—ರೈತರ ದಂಗೆ

ಇದರಿಂದ ಅಸಮಾಧಾನವು ತೋರಿತು. ವಿಶಾಲಾಕ್ಷ ಪಂಡಿತನೇ ಇದಕ್ಕೆ ಕಾರಣನೆಂದು ಪ್ರಜೆಗಳಲ್ಲಿ ವದಂತಿ ಹುಟ್ಟಲು ಆತನ ವಿರೋಧಿಗಳಾಗಿದ್ದ ಜಂಗಮರು ಸುಸಮಯವೆಂದು ಒಳತಂತ್ರದಿಂದ ಆ ಪಂಡಿತನನ್ನು ಕೊಲೆ ಮಾಡಿಸಿದರು. ಆಗ ಒಡೆಯರವರು ತಂತ್ರದಿಂದಲೇ ಜಂಗಮರ ಮುಖಂಡರೆಲ್ಲರನ್ನೂ ಒಟ್ಟಾಗಿ ನಾಶ ಮಾಡಿಸಿ, ಅವರ ಸೊಕ್ಕನ್ನು ಮುರಿದರು. ಇದಾದ ಮೇಲೆ ಹೆಚ್ಚಿದ್ದ ಕಂದಾಯ ತೆರಿಗೆಗಳನ್ನು ಕೊಡಲಾರದೆ ರೈತರು ಅತೃಪ್ತರಾಗಿ 'ಕಾಡ ಭೂಮಿಯನ್ನು ಬಸವಣ್ಣನು ಉಳುತ್ತಾನೆ. ದೇವೇಂದ್ರನು ಮಳೆಗರೆಯುತ್ತಾನೆ, ನಾವು ಕಷ್ಟಪಟ್ಟು ಪೈರುಮಾಡಿ ನಿಮಗೇತಕ್ಕೆ ಕೊಡಬೇಕು' ಎನ್ನುತ್ತ ದಂಗೆಯೆದ್ದರು.

ಒಡೆಯರು ಅವರೆಲ್ಲರನ್ನೂ ಶಿಕ್ಷೆಗೆ ಗುರಿಮಾಡಿ, ಹೆಚ್ಚಿಸಿದ ನೆಲಗಂದಾಯದ ಜತೆಗೆ ಇನ್ನೂ ಹತ್ತೊಂಬತ್ತು ತೆರಿಗೆಗಳನ್ನು ನಿಷ್ಕರ್ಷೆಮಾಡಿ, ಅವುಗಳ ವಸೂಲಿಗೆ ತಕ್ಕ ಸಿಬ್ಬಂದಿಯನ್ನು ನೇಮಿಸಿದರು. ಹೀಗೆಯೇ ವ್ಯಾಪಾರ ದಲ್ಲಿ ಅಳತೆ ತೂಕಗಳನ್ನು ಗೊತ್ತುಮಾಡಿ, ವ್ಯಾಪಾರದ ಕಟ್ಟಳೆಗಳನ್ನು ನಡೆಸಿ, ಅರಮನೆಯ ಆದಾಯವನ್ನು ವಸೂಲುಮಾಡಲು ತಕ್ಕಂತೆ ಸಿಬ್ಬಂದಿ ಯನ್ನೂ ನೇಮಿಸಿದರು.

ರಾಜ್ಯಭಾರದ ಶಿಸ್ತು

ಆದಾಯವನ್ನು ಹೆಚ್ಚಿಸುವುದೇ ಈ ರಾಜರ ಮುಖ್ಯೋದ್ದೇಶವಾ ಗಿತ್ತು. ವರಮಾನವೃದ್ಧಿಗೆ ತಕ್ಕ ವ್ಯವಸ್ಥೆ ಮಾಡಿದಮೇಲೆ ಆಡಳಿತದ ಅನು ಕೂಲಕ್ಕಾಗಿ ಇವರು ಒಟ್ಟು ರಾಜ್ಯವನ್ನು ೮೪ ಗಡಿಗಳಾಗಿಯೂ, ಗಡಿಗಳನ್ನು ೮ರಿಂದ ೧೬ರ ವರೆಗೆ ಹಳ್ಳಿಗಳನ್ನೊಳಗೊಂಡ ಹೋಬಳಿಗಳನ್ನಾಗಿಯೂ ವಿಭಾ ಗಿಸಿ, ಗಡಿಗಳಿಗೂ ಗ್ರಾಮಗಳಿಗೂ ತಕ್ಕ ಅಧಿಕಾರಿಗಳನ್ನು ಗೊತ್ತುಮಾಡಿ, ನೌಕರರಿಗೆ ಸಂಬಳಗಳು ಅರ್ಧಭಾಗ ಧಾನ್ಯರೂಪವಾಗಿಯೂ ಅರ್ಧಭಾಗ ದ್ರವ್ಯರೂಪವಾಗಿಯೂ ಸಲ್ಲುವಂತೆ ಏರ್ಪಾಡು ಮಾಡಿದರು. ಆಸ್ಥಾನದಲ್ಲಿ ಅಥವಾ ಕೇಂದ್ರದಲ್ಲಿ ಮುಘಲರ ಪದ್ಧತಿಯನ್ನನುಸರಿಸಿ ಹದಿನೆಂಟು ಚಾವಡಿ ಗಳನ್ನು ವಿಂಗಡಿಸಿ ಸ್ಥಾಪಿಸಿದರು. ಇವುಗಳಲ್ಲಿ ಕಂದಾಚಾರದ ಮತ್ತು ಬೇಹಿನ ಚಾವಡಿಗಳು ಮುಖ್ಯವಾಗಿದ್ದವು. ರಕ್ಷಣೆಗಾಗಿ ಕಂದಾಚಾರದವರೂ, ವರ್ತ ಮಾನವನ್ನುತರಲು ಬೇಹಿನವರೂ ಇದ್ದುದರಿಂದ ರಾಜ್ಯದಲ್ಲಿ ಕಳ್ಳಕಾಕರಾಗಲಿ ದಂಗೆಕೋರರಾಗಲಿ ಇಲ್ಲದಂತಾಗಿ ರಾಜಾಧಿಕಾರವು ಸ್ಥಿರವಾಯಿತು. ಈ ಏರ್ಪಾಡುಗಳಿಂದ ಅದುವರೆಗೂ ದರ್ಪದಿಂದಿದ್ದ ಅರಸುಮನೆಗಳ ಪ್ರಾಬ ಲ್ಯವು ತಗ್ಗಿತು. ರಾಜ್ಯದಲ್ಲಿ ವಿಪತ್ತುಗಳಿಲ್ಲದಂತಾಗಿ ಆದಾಯ ಹೆಚ್ಚಿತು. ಚಿಕ್ಕದೇವರಾಯ ಒಡೆಯರ ಕಾಲದಲ್ಲಿ ವರ್ಷಕ್ಕೆ ೭,೨೦,೦೦೦ ವರಹ ಗಳ ಉತ್ಪತ್ತಿಯಿದ್ದಿತಂತೆ. ನಿತ್ಯವೂ ಎರಡು ಸಾವಿರ ವರಹಗಳು ಬೊಕ್ಕ ಸಕ್ಕೆ ಸಂದ ಹೊರತು ಈ ರಾಜರು ಆರೋಗಣೆ ಮಾಡುತ್ತಿರಲಿಲ್ಲವೆಂದು ಜನರಾಡಿಕೊಂಡರು. ನೆರೆರಾಜ್ಯಗಳಲ್ಲಿ ಇವರಿಗೆ ಪರಮಲೋಭಿಯೆಂಬ ಹೆಸರೂ, ಆಸ್ಥಾನದಲ್ಲಿ ನವಕೋಟಿ ನಾರಾಯಣನೆಂಬ ಬಿರುದೂ ವಾಡಿಕೆ ಯಲ್ಲಿತ್ತು.

ಆಸ್ಥಾನ

ವಿಶಾಲಾಕ್ಷಪಂಡಿತನು ಕೊಲೆಯಾದನಂತರ ಒಡೆಯರು ಚಿಕ್ಕಂದಿನಿಂದಲೂ ಗೆಳೆಯನಾಗಿದ್ದ ತಿರುಮಲಾರ್ಯನನ್ನು ಪ್ರಧಾನ ಪದವಿಗೆ ನೇಮಿಸಿಕೊಂಡರು. ತಿರುಮಲಾರ್ಯನಿಗೆ ಶ್ರೀವೈಷ್ಣವ ಮತದಲ್ಲಿ ವಿಶೇಷವಾದ ಭಕ್ತಿಯೂ, ಕನ್ನಡ ಸಾಹಿತ್ಯದಲ್ಲಿ ಆದರವೂ ಇದ್ದುದರಿಂದ ಒಡೆಯರ ಆಸ್ಥಾನವು ವೈಷ್ಣವ ಗುರುಗಳಿಗೂ ವಿದ್ವಾಂಸರಿಗೂ ಆಶ್ರಯವಾಯಿತ್ತು. ರಾಜರೇ ಸ್ವತಃ ಪರಮ ಭಕ್ತರೂ ಪಾಂಡಿತ್ಯವುಳ್ಳವರೂ ಆಗಿದ್ದರು. ಆಸ್ಥಾನದಲ್ಲಿ ತಿರುಮಲಾರ್ಯನಲ್ಲದೆ ಚಿಕ್ಕುಪಾಧ್ಯಾಯ, ತಿಮ್ಮಕವಿ, ಮಲ್ಲಿಕಾರ್ಜುನ, ಸಿಂಗರಾರ್ಯ, ಹೊನ್ನಮ್ಮ, ವೇಣುಗೋಪಾಲ ಮುಂತಾದವರು ಪ್ರೋತ್ಸಾಹಿತರಾಗಿ ಕನ್ನಡದಲ್ಲಿ ಪದ್ಯಗದ್ಯ ಚಂಪೂಗ್ರಂಥಗಳನ್ನು ಬರೆದರು.

ಶ್ರೀವೈಷ್ಣವ ಮತ ಸ್ವೀಕಾರ

ಒಡೆಯರ ವಂಶದವರು ಅದುವರೆಗೆ ಯಾವ ಒಂದು ಮತ ಪಂಗಡಕ್ಕೂ ಸೇರದಿದ್ದರು. ಕಂಠೀರವ ಒಡೆಯರು ವಿಷ್ಣುಭಕ್ತರಾಗಿದ್ದರು. ಚಿಕ್ಕದೇವರಾಯ ಒಡೆಯರು ಮೊದಲು ಜೈನರಂತೆ ಕಾಣುತ್ತಿದ್ದು, ಕೆಲಕಾಲದಮೇಲೆ ಶ್ರೀವೈಷ್ಣವರಾದರು. ಮಾಡಿದ ಧರ್ಮಕಾರ್ಯಗಳಲ್ಲಿ ರಾಜರು ನಿಷ್ಪಕ್ಷಪಾತತೆಯಿಂದಿದ್ದರೂ, ಶ್ರೀವೈಷ್ಣವರಲ್ಲಿ ಹೆಚ್ಚು ವಿಶ್ವಾಸವುಳ್ಳವರಾಗಿದ್ದರು. ಮೈಸೂರಿನಲ್ಲಿ ವಿಷ್ಣುಕ್ಷೇತ್ರವೊಂದೇ ಇದ್ದಿತೆಂದು ಮನಸ್ಸಿನಲ್ಲಿ ನೊಂದುಕೊಂಡು, ಈ ರಾಜರು ಶ್ರೀಮುಷ್ಣದಿಂದ ವರಾಹಸ್ವಾಮಿಯ ವಿಗ್ರಹವನ್ನು ಗೋಪ್ಯವಾಗಿ ತರಿಸಿ, ಮೈಸೂರಿನಲ್ಲಿ ಶ್ವೇತವರಾಹಸ್ವಾಮಿಯ ದೇವಸ್ಥಾನದಲ್ಲಿ ಸ್ಥಾಪಿಸಿದ ಸಂಗತಿ ಸ್ಮರಣೀಯವಾಗಿದೆ.

ತಂಜಾವೂರು, ಚಂಗಿಯ ಮರಾಟೆಯವರು

ಕಂಠೀರವ ಒಡೆಯರ ಕಾಲದಲ್ಲಿಯೇ ಬಿಜಾಪುರದವರು ಮೈಸೂರಿನ ವಾಯವ್ಯ ಮತ್ತು ಮಧ್ಯಭಾಗಗಳನ್ನು ಜಯಿಸಿ, ಘಟ್ಟವನ್ನಿಳಿದು ವೇಲೂರು ಚಂಗಿದುರ್ಗಗಳನ್ನು ಸಾಧಿಸಿದ ತರುವಾಯ ಷಾಜಿಯ ಎರಡನೆ ಮಗ ವೆಂಕೋಜಿಯು ೧೬೭೫ರಲ್ಲಿ ತಂಜಾವೂರನ್ನು ಗೆದ್ದು ಸ್ವತಂತ್ರನಾದನು. ೧೬೭೭ರಲ್ಲಿ ಅದಿಲ ಷಾಹಿಯವರು ಅವನನ್ನು ವಶಪಡಿಸಿಕೊಳ್ಳಲು ಮಾಡಿದ ಪ್ರಯತ್ನವು ಸಫಲವಾಗಲಿಲ್ಲ. ಆ ಕಾಲಕ್ಕೆ ಛತ್ರಪತಿಯಾಗಿದ್ದ ಶಿವಾಜಿಯು

ಗೋಲಕೊಂಡೆಯ ಮಾದನ್ನಮಂತ್ರಿಯ ಸಹಾಯದಿಂದ ಬಿಜಾಪುರಕ್ಕೆ ಸೇರಿದ ಕರ್ಣಾಟಕ ಭಾಗವೆಲ್ಲವನ್ನೂ ಹಿಡಿದು, ಚಂಗಿ ಪ್ರಾಂತಕ್ಕೆ ಒಬ್ಬ ಅಧಿಕಾರಿಯನ್ನೂ, ಬೆಂಗಳೂರು ಕೋಲಾರ ಪ್ರಾಂತಕ್ಕೆ ಇನ್ನೊಬ್ಬ ಅಧಿಕಾರಿಯನ್ನೂ ನಿಯಾಮಕಮಾಡಿ, ೧೬೭೭ರಲ್ಲಿ ಹಿಂತಿರುಗಿದನು. ತಂಜಾವೂರಿನಲ್ಲಿ ವೆಂಕೋಜಿಯ ಸಂತತಿಯವರೂ, ಚಂಗಿಯಲ್ಲಿ ಶಿವಾಜಿಯ ಕಡೆಯವರೂ ಇದ್ದು ೧೬೮೦ರಲ್ಲಿ ಶಿವಾಜಿ ಮೃತನಾದ ಮೇಲೆ ಪರಸ್ಪರ ವಿರೋಧಿಗಳೇ ಆದರು. ಮೈಸೂರಿನವರಿಗೂ ಮಧುರೆಯವರಿಗೂ ನಡೆದ ಯುದ್ಧಗಳಲ್ಲಿ ಚಂಗಿಯ ಮರಾಟೆಯವರು ಮಧುರೆಯ ಪಕ್ಷವನ್ನು ಹಿಡಿದರು. ಭೇದೋಪಾಯವನ್ನು ಯೋಚಿಸಿದ ಚಿಕ್ಕದೇವರಾಯ ಒಡೆಯರು ತಂಜಾವೂರಿನ ಮರಾಟೆಯವರೊಡನೆ ಸ್ನೇಹ ಕಟ್ಟಿದ್ದರು.

ಮುಘಲ ಯುದ್ಧ


೧೬೭೨ರಲ್ಲಿ ಇಮ್ಮಡಿ ಅಲಿ ಅದಿಲಷಹನು ಸತ್ತನು; ಕಡೆಯ ಸುಲ್ತಾನನೆನಿಸಿದ ಸಿಕಂದರ್ ಅದಿಲಷಹನು ಸುಲ್ತಾನನಾದನು. ಶಿವಾಜಿ ಬದುಕಿದ್ದವರೆಗೂ ಬಿಜಾಪುರದವರಿಗೆ ವಿಶ್ರಾಂತಿಯೇ ಇರಲಿಲ್ಲ. ೧೬೮೦ರಲ್ಲಿ ಶಿವಾಜಿ ತೀರಿದ ಮೇಲೆ ಇನ್ನೂ ಘೋರವಾದ ವಿಪತ್ತೇ ಎದುರಾಗಿ ಬಂತು. ೧೬೮೧ರಲ್ಲಿ ಬಿಜಾಪುರ, ಗೋಲಕೊಂಡೆ ಮತ್ತು ಮರಾಟೆಯವರು ಮೂವರನ್ನೂ ಶತ್ರುಗಳೆಂದೆಣಿಸಿದ್ದ ಮುಘಲ ಬಾದಷಹ ಅವರಂಗಜ್ಞೇಬನು ಅಪಾರವಾದ ಪಡೆಯೊಡನೆ ದಖನ್ನಿನಲ್ಲಿ ಬಂದಿಳಿದು ಶಿವಾಜಿಯ ಮಗ ಶಂಭುಜಿಯೊಡನೆಯೂ ಬಿಜಾಪುರ ಗೋಲಕೊಂಡೆಗಳ ಸುಲ್ತಾನರೊಡನೆಯೂ ಯುದ್ಧವನ್ನು ಹೂಡಿದನು. ೧೬೮೬ರಲ್ಲಿ ಬಿಜಾಪುರ ಮುಘಲರ ಕೈಸೇರಿತು; ಕೂಡಲೆ ಬಿಜಾಪುರಕ್ಕೆ ಸೇರಿದ್ದ ಕರ್ಣಾಟಕ ಪ್ರಾಂತಗಳನ್ನು ಜಯಿಸಲು ಬಾದಷಹನು ದಳಪತಿಗಳನ್ನು ಕಳುಹಿಸಿದನು. ೧೬೮೭ರಲ್ಲಿ ಕಾಸಿಂಖಾನನು ಮರಾಟೆಯವರಿಂದ ಬೆಂಗಳೂರನ್ನು ಹಿಡಿದು, ಕೂಡಲೆ ಅದನ್ನು ಒಡೆಯರಿಗೆ ಮಾರಿಬಿಟ್ಟನು. ಅದೇ ವರ್ಷದಲ್ಲಿ ಗೋಲಕೊಂಡೆಯು ಬಾದಷಹನ ಸ್ವಾಧೀನವಾಗಿ ಷಾಹಿರಾಜ್ಯಗಳ ಸುಳಿವಿಲ್ಲದಂತಾಯಿತು. ೧೬೮೯ರಲ್ಲಿ ಶಂಭುಜಿಯೂ ಸೆರೆಗೆ ಸಿಲ್ಕಿ ಚಿತ್ರವಧೆಗೆ ಗುರಿಯಾದನು.

ಶೀರ್ಯ

ತರುವಾಯ ಬಾದಷಹನು ಷಾಹಿರಾಜ್ಯಗಳಿಗೆ ಸೇರಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರಲ್ಲಿಯೂ, ಮರಾಟೆಯವರ ಸ್ವಾತಂತ್ರ್ಯವನ್ನು ನಾಶಗೊಳಿಸುವುದರಲ್ಲಿಯೂ ನಿರತನಾದನು. ಮೈಸೂರಿನ ಉತ್ತರದಲ್ಲಿ ಇಕ್ಕೇರಿ, ಸಂತೆಬೆನ್ನೂರು, ಚಿತ್ರದುರ್ಗಗಳ ನಾಯಕರು ಪ್ರಬಲರಾಗಿದ್ದರು. ಇವರೆಲ್ಲರೂ ಹೆಸರಿಗೆ ಬಿಜಾಪುರದ ಸಾಮಂತರಾಗಿದ್ದುದರಿಂದ ಬಾದಷಹನು ಬಿಜಾಪುರದ ಗೆಲುವಿನೊಡನೆ ಆ ಪ್ರದೇಶಗಳೂ ತನಗೆ ಸೇರತಕ್ಕುವೆಂದು ತನ್ನ ದಂಡನಾಯಕರನ್ನು ಕಳುಹಿಸಿದನು. ಕಾಸಿಂಖಾನನು ಶೀರ್ಯವನ್ನೂ ಬೆಂಗಳೂರನ್ನೂ ಹಿಡಿದು ಬೆಂಗಳೂರನ್ನು ಮಾರಿದ ಮೇಲೆ ಶೀರ್ಯದಲ್ಲಿ ಮುಘಲ ಅಧಿಕಾರಿಯೊಬ್ಬನು ನಿಯಮಿತನಾದನು. ೧೬೮೭ರಲ್ಲಿ ಜಾನ್ನಿಸಾರ್‌ಖಾನ್ ಎಂಬ ಮುಘಲದಳಪತಿಯು ಬಿದರೂರು ಪ್ರಾಂತದಲ್ಲಿ ನುಗ್ಗಿದನು. ಅತ್ತಲಾಗಿ ಶಂಭುಜಿಯು ಹತನಾದಮೇಲೆ ಶಿವಾಜಿಯ ಎರಡನೆಮಗ ರಾಜಾರಾಮನು ಮಹಾರಾಷ್ಟ್ರದ ದುರ್ಗಗಳೆಲ್ಲವೂ ಕೈತಪ್ಪಿಹೋಗುತ್ತಿದ್ದುದನ್ನು ಕಂಡು ಸ್ವರಾಜ್ಯವನ್ನು ಬಿಟ್ಟು, ಗೋಪ್ಯವಾಗಿ ಪ್ರಯಾಣಮಾಡುತ್ತ ಬಿದರೂರಿನ ಮಾರ್ಗವಾಗಿ ತಲೆ ತಪ್ಪಿಸಿಕೊಂಡು ಸಂಚರಿಸಿ, ಚಂಗಿಯನ್ನು ತಲಪಿದನು. ಬಿದರೂರಿನ ರಾಣಿ ಚನ್ನಮ್ಮಾಜಿಯು ರಾಜಾರಾಮನಿಗೆ ಆಸರೆಯನ್ನೂ ಸಹಾಯವನ್ನೂ ಕೊಟ್ಟ ಸಂಗತಿಯು ಜ್ಞಾಪಕಾರ್ಹವಾದುದು.

ಚಂಗಿಯ ಮುತ್ತಿಗೆ—ದೊಡ್ಡೇರಿಯ ಕದನ

ರಾಜಾರಾಮನು ಚಂಗಿಯನ್ನು ಸೇರಿದಮೇಲೆ ಮುಘಲರು ಚಂಗಿಯ ಮುತ್ತಿಗೆಯನ್ನು ಕೈಕೊಂಡು ೧೬೯೦ರಿಂದ ೧೬೯೭ರವರೆಗೂ ಆ ಕೋಟೆಯ ಮುಂದೆಯೇ ಇದ್ದರು. ಆ ಕಾಲದಲ್ಲಿ ದೇಶಭಕ್ತಿ ತುಂಬಿದ ಮರಾಟೆಯವರನೇಕರು ಎಲ್ಲೆಲ್ಲಿಯೂ ಎದ್ದು, ಮುಘಲರಿಗೆ ಎದುರು ಬಿದ್ದರು. ಅಂತಹವರಲ್ಲಿ ಪ್ರಸಿದ್ಧರೂ ಮುಘಲರನ್ನು ಘಾತಪಡಿಸುವುದರಲ್ಲಿ ಪ್ರಚಂಡರೂ ಆಗಿದ್ದ ಧನಜಿಜಾದವ ಮತ್ತು ಶಾಂತಾಜಿಘೋರ್ಪಡೆಯೆಂಬ ಮರಾಟೆ ಸರದಾರರನ್ನಡಗಿಸಲು ಬಾದಷಹನು ಕಾಸಿಂಖಾನನಿಗೆ ಆಜ್ಞೆಯನ್ನೂ ಬಲವನ್ನೂ ಕಳುಹಿಸಿದನು. ಶಾಂತಾಜಿಯು ಮಿಂಚಿನ ವೇಗ



ಬಿ ಆರ್ ಗೋಪೀನಾಥ್ ಬೆಂಗಳೂರು

ಶ್ರೀ ಚಿಕ್ಕದೇವರಾಜ ಒಡೆಯರವರ ರಾಜ್ಯ

ದಿಂದ ಸಂಚರಿಸುತ್ತ ಶೀರ್ಯದಬಳಿ ಕಾಸಿಂಖಾನನ ಸೈನ್ಯವನ್ನು ಚೆದರಿಸಿದನು. ಕಾಸಿಂಖಾನನು ದಿಕ್ಕೆಟ್ಟು ದೊಡ್ಡೇರಿಯನ್ನು ಹೊಕ್ಕನು. ಶಾಂತಾಜಿಯು ಅಲ್ಲಿಗೂ ಬಂದು ದೊಡ್ಡೇರಿಯ ಕೋಟೆಯನ್ನು ಸುಲಭವಾಗಿ ಹಿಡಿದು ಮುಘಲರನ್ನು ಧ್ವಂಸಮಾಡಿಬಿಟ್ಟನು ; ಕಾಸಿಂಖಾನನಿಗೆ ಬೆಂಬಲವಾಗಿ ಬಂದ ಹಿಮ್ಮತ್ ಖಾನನನ್ನು ಬಸವಾಪಟ್ಟಣದಬಳಿ ಸೋಲಿಸಿ ಕೊಂದುಬಿಟ್ಟನು. ಬಾದಷಹನು ಬಸವಾಪಟ್ಟಣವನ್ನು ಮರಾಟೆಯವರಿಂದ ರಕ್ಷಿಸುವಂತೆ ಹಮೀದುದ್ದೀನ್‌ಖಾನನೆಂಬಾತನನ್ನು ಸೇನೆಯೊಡನೆ ಕೂಡಲೆ ಕಳುಹಿದನು. ಶಾಂತಾಜಿಯು ಅವನನ್ನು ಹರಿಹರದ ಬಳಿಯಲ್ಲಿಯೇ ತಡೆಯಲು ಪ್ರಯತ್ನಿಸಿದನು ; ಸಫಲವಾಗಲಿಲ್ಲ. ಹಮೀದುದ್ದೀನ್‌ಖಾನನು ಬಸವಾಪಟ್ಟಣವನ್ನು ಹಿಡಿದು ಮತ್ತಷ್ಟು ಬೆಂಬಲವನ್ನು ಪಡೆದನು.

ಚಿತ್ರದುರ್ಗದ ನಾಯಕ

ಚನ್ನಮ್ಮಾಜಿಯು ರಾಜಾರಾಮನಿಗೆ ಸಹಾಯವನ್ನು ಮಾಡಿದಂತೆಯೇ ಚಿತ್ರದುರ್ಗದ ಭರಮಪ್ಪನಾಯಕನು ಶಾಂತಾಜಿಗೆ ಸಹಾಯಕನಾಗಿದ್ದನು. ದೊಡ್ಡೇರಿಯಲ್ಲಿ ಈತನು ಕಾಸಿಂಖಾನನಿಗೆ ಎದುರಾಗಿ ಯುದ್ಧಮಾಡಿದನು. ಈತನು ಚಿತ್ರದುರ್ಗಕ್ಕೆ ಉತ್ತರಕ್ಕಿದ್ದು ಪ್ರಸಿದ್ಧವಾಗಿದ್ದ ವಾಕನಗರೆಯ ನಾಯಕನ ಸಂಬಂಧಿಯಾಗಿದ್ದಿರಬಹುದು. ಇಬ್ಬರೂ ಬೇಡರ ಕುಲದವರು ; ವಾಕನಗೆರೆಯ ಬೇಡರು ಮುಘಲರಿಗೆ ಕೊಟ್ಟ ತೊಂದರೆಯುಷ್ಟಿಷ್ಟಲ್ಲ. ಆದರೆ ಅವರಂಗಸ್ಸೀಬನ ಬಲವು ಅಪಾರವಾಗಿತ್ತು. ೧೬೯೭ರಲ್ಲಿ ಶಾಂತಾಜಿಯು ಸತ್ತನು ; ಚಂಗಿಯೂ ಮುಘಲರ ಕೈಸೇರಿತು. ಆಗ ಭರಮಪ್ಪನಾಯಕನು ಬಸವಾಪಟ್ಟಣದ ಮುಘಲ ಅಧಿಕಾರಿಗೆ ವಶವಾಗಬೇಕಾಯಿತು. ೧೭೦೦ರ ವೇಳೆಗೆ ಮುಘಲರಿಗೆಲ್ಲೆಡೆಗಳಲ್ಲಿಯೂ ಜಯವು ಲಭಿಸಿದಂತೆ ಕಾಣುತ್ತಿತ್ತು ; ಈ ಸಮಯದಲ್ಲಿಯೇ ಚಿಕ್ಕದೇವರಾಯ ಒಡೆಯರು ಮುಘಲ ಸ್ನೇಹಕ್ಕೆ ಆಸೆಪಟ್ಟರು.

ಮುಘಲರ ಆಶ್ರಯ

ಮುಘಲ ಮರಾಟೆಯವರ ಈ ದೊಡ್ಡ ಹೋರಾಟದಲ್ಲಿ ಮೈಸೂರು ರಾಜ್ಯವು ಒಂದು ಮೂಲೆಯಲ್ಲಿದ್ದು, ಹಿಂದೆ ಗಂಗವಾಡಿಯು ಚಾಲುಕ್ಯ ಪಲ್ಲವರ ದ್ವಂದ್ವದಲ್ಲಿದ್ದಂತೆಯೇ ಸುರಕ್ಷಿತವಾಗಿತ್ತು. ಬಿಜಾಪುರದವರ

ನಾಶವನ್ನು ಕಂಡು ಸಂತೋಷಿಸಿದ ಒಡೆಯರವರು ಮರಾಟೆಯವರ ನಾಶವನ್ನೂ ಹಾರೈಸಿದರು. ಮರಾಟೆಯವರು ಆಸ್ಪದ ದೊರೆತ ಕೂಡಲೆ ಬೆಂಗಳೂರನ್ನು ಪುನಃ ಪಡೆಯಲು ಯತ್ನಿಸುವುದೇ ಅಲ್ಲದೆ ದಖನ್ನಿನಲ್ಲೆಲ್ಲಿಯೂ ಮೇಲಧಿಕಾರವನ್ನು ಸ್ಥಾಪಿಸುವುದು ಸ್ಪಷ್ಟವಾಗಿತ್ತು. ಆದ್ದರಿಂದ ಚಿಕ್ಕದೇವರಾಯ ಒಡೆಯರು ಸುಮಾರು ೧೭೦೦ರಲ್ಲಿ ಬಾದಷಹನಲ್ಲಿಗೆ ತಮ್ಮ ದೂತನನ್ನು ಕಳುಹಿಸಿ, ಮುಘಲ ಚಕ್ರವರ್ತಿಯ ಅಧಿಕಾರವನ್ನು ತಾವಾಗಿಯೇ ಒಪ್ಪಿಕೊಂಡರು. ಅವರಂಗಸ್ಲೀಬನು ಒಡೆಯರ ದೂತನನ್ನು ಮನ್ನಿಸಿ, ಚಿಕ್ಕದೇವರಾಯಒಡೆಯರಿಗೆ ಜಗದೇವರಾಯನೆಂಬ ಬಿರುದನ್ನೂ ಖಿಲ್ಲತ್ತುಗಳನ್ನೂ ಕೊಟ್ಟುಕಳುಹಿಸಿ, ಮೈಸೂರಿನಿಂದ ಮರಾಟೆಯವರಿಗೆ ಸಹಾಯವೊದಗದಂತೆ ನೆರವೇರಿಸಿದನು. ಈ ನೀತಿಯು ಮುಂದಕ್ಕೆ ತೊಂದರೆ ಕೊಟ್ಟಿತು. ಇದರಿಂದ ಒಡೆಯರು ವಿಜಯನಗರದ ಉದ್ದೇಶವನ್ನೇ ಸಾಧಿಸುತಿದ್ದ ಮರಾಟೆಯವರಿಗೆ ವಿರೋಧಿಗಳಾದರು ; ಮರಾಟೆಯವರು ಮುಘಲರನ್ನು ಅರೆದು, ಅವರ ಸಾಮ್ರಾಜ್ಯವನ್ನು ನಾಶಗೊಳಿಸಿದ ಬಳಿಕ ಮೈಸೂರಿನ ಮೇಲೆ ಪದೇ ಪದೇ ಡಂಡೆತ್ತಿ ಬರುತ್ತಿದ್ದರು.

ಮುಘಲರ ಕ್ಷಯ

ಬಾದಷಹನ ಜಯವು ಮಾಯದ ಜಯವಾಗಿತ್ತು. ಸ್ವರಾಜ್ಯಕ್ಕೂ ಸ್ವಧರ್ಮಕ್ಕೂ ಹೋರಾಡುತ್ತಿದ್ದ ಮರಾಟೆಯವರನ್ನು ಗೆಲ್ಲುವುದು ಅಸಾಧ್ಯವಾಯಿತು. ಚಂಗಿಯಿಂದ ಮಹಾರಾಷ್ಟ್ರಕ್ಕೆ ಹಿಂತಿರುಗಿದ ರಾಜಾರಾಮನು ೧೭೦೦ರಲ್ಲಿ ಮೃತನಾದಾಗ್ಯೂ, ಆತನ ರಾಣಿ ತಾರಾಬಾಯಿಯು ರಾಜ್ಯಭಾರವನ್ನು ವಹಿಸಿ ಮುಘಲ ಬಾದಷಹನೊಡನೆ ಯುದ್ಧವನ್ನು ನಡೆಸಿದಳು. ಕಡೆಗೆ ಅವರಂಗಸ್ಲೀಬನು ಹತಾಶನಾಗಿ ೧೭೦೭ರಲ್ಲಿ ಸತ್ತನು ; ಮುಘಲ ಸಾಮ್ರಾಜ್ಯವೊಡೆಯಿತು. ಮುಘಲ ಸರದಾರರು ಅಲ್ಲಲ್ಲಿ ಸ್ವತಂತ್ರರಾಗುವುದಕ್ಕೂ, ಮರಾಟೆಯವರೊಡನೆ ಸೆಣಸುವುದಕ್ಕೂ ಮೊದಲಾಯಿತು. ೧೭೦೮ ರಲ್ಲಿ ಶಂಭುಜಿಯ ಮಗ ಸಾಹುವು ಮಹಾರಾಷ್ಟ್ರಕ್ಕೆ ಬಂದು ಆಳಲು ತೊಡಗಿದನು. ೧೭೫೦ರ ವೇಳೆಗೆ ಮಹಾರಾಷ್ಟ್ರ ರಾಜ್ಯವು ಸಾಮ್ರಾಜ್ಯವಾಗಲು ತೊಡಗಿತು.

ಒಡೆಯರ ನೀತಿ

ಚಿಕ್ಕದೇವರಾಯಒಡೆಯರೂ ೧೭೦೪ರಲ್ಲಿ ಕಾಲವಾದರು. ಒಡೆಯರ ವಂಶದಲ್ಲಿ ಇವರೇ ಹಿರಿಯರು. ಇವರ ಕಾಲದಲ್ಲಿ ದಖನ್ನಿನ ಇತರ ಭಾಗಗಳಲ್ಲಿ ಬಹು ಮುಖ್ಯವಾದ ಸಂಗತಿಗಳು ಘಟಿಸುತ್ತಿದ್ದವು. ಭೇದೋಪಾಯದಿಂದ ಸ್ವಂತರಾಜ್ಯವನ್ನು ರಕ್ಷಿಸಿ ವಿಸ್ತರಿಸಿದಾಗ್ಯೂ ಚಿಕ್ಕದೇವರಾಯ ಒಡೆಯರ ರಾಜನೀತಿಯಲ್ಲಿ ದೂರದೃಷ್ಟಿಯು ಕಾಣುವುದಿಲ್ಲ. ಅಕ್ಕಪಕ್ಕದಲ್ಲಿದ್ದ ಶತ್ರುಗಳನ್ನು ವಿರೋಧಿಸಲು ಮುಘಲರ ಆಶ್ರಯವನ್ನು ಬೇಡಿದುದು ವಿಜಯನಗರದ ಉದ್ದೇಶಕ್ಕೆ ವ್ಯತಿರಿಕ್ತವಾಗಿದ್ದುದಲ್ಲದೆ ಮುಂದೆ ಮೈಸೂರು ರಾಜ್ಯವು ಮುಘಲರ ಪ್ರಬಲ ವೈರಿಗಳಾದ ಮರಾಟೆಯವರ ದಂಡಯಾತ್ರೆಗಳಿಗೆ ಪದೇಪದೇ ಗುರಿಯಾಗುವಂತಾಯಿತು. ಮುಘಲಸಾಮ್ರಾಜ್ಯದ ಅಧಿಕಾರಿಗಳೊಂದುಸಲ, ಮರಾಟೆಯವರಿನ್ನೊಂದು ಸಲ ಮೈಸೂರಿನ ಮೇಲೆ ತಮ್ಮಧಿಕಾರವನ್ನು ತೋರಿಸಲು ಮೊದಲಾಗಿ, ಮೈಸೂರು ರಾಜ್ಯವು 'ಇತೋಭ್ರಷ್ಟಃ ತತೋಭ್ರಷ್ಟಃ' ಎನ್ನುವ ಅವಸ್ಥೆಗೆ ಈಡಾಯಿತು. ಈ ಒಡೆಯರ ತರುವಾಯ ಆಳಿದವರು ದುರ್ಬಲರೂ ಆಗಿದ್ದುದರಿಂದ ತೊಂದರೆಯು ಹೆಚ್ಚೇ ಆಯಿತು.

ಮೈಸೂರು 'ಮೃದಂಗ'

ಅವರಂಗಸ್ಸೀಬನು ಸತ್ತ ಮೇಲೆ ದಕ್ಷಿಣದಲ್ಲಿ ತಂಜಾವೂರು ವೆಂಕೋಜಿಯ ಸಂತತಿಯಲ್ಲಿಯೇ ಉಳಿದುಕೊಂಡರೂ ಚಂಗಿ, ಆರ್ಕಾಡು, ವೇಲೂರು, ಶೀರ್ಯ, ಕರ್ನೂಲು ಮತ್ತು ಕಡಪ ಪ್ರಾಂತಗಳು ಮುಘಲ ಸರದಾರರಿಗೆ ನೆಲೆವೀಡುಗಳಾದವು. ಗುತ್ತಿ ಪ್ರಾಂತವೊಂದು ಮಾತ್ರ ಘೋರ್ಪಡೆ ಮನೆತನಕ್ಕೆ ಸೇರಿತ್ತು. ದಖನ್ನಿನ ಪಶ್ಚಿಮ ಭಾಗವು ಮಹಾರಾಷ್ಟ್ರಕ್ಕೆ ಅಧೀನವಾಗಿತ್ತು. ಈ ಮುಘಲ ಸರದಾರರೂ, ಮರಾಟೆಯವರೂ ಪರಸ್ಪರವಾಗಿ ಜಗಳವಾಡುತ್ತ, ಅವಕಾಶ ಸಿಕ್ಕಿದಂತೆ ಶ್ರೀರಂಗಪಟ್ಟಣದ ಮೇಲೆ ದಂಡೆತ್ತಿ, ತಮ್ಮ ಯುದ್ಧಗಳ ವೆಚ್ಚವನ್ನು ಮಹಮ್ಮದೀಯರಾದರೆ ಪೊಗದಿಯೆಂತಲೂ ಮರಾಟೆಯವರಾದರೆ ಚೌಥಾಯವೆಂತಲೂ ಹುಟ್ಟಿಸಿಕೊಳ್ಳಲು ಆರಂಭಿಸಿದರು. ಹದಿನೆಂಟನೆಯ ಶತಮಾನದ ಆದಿಯಿಂದ ಅಥವಾ ಚಿಕ್ಕದೇವರಾಯ ಒಡೆಯರ ತರುವಾಯ ಮೈಸೂರು ಈ ದ್ವಿಮುಖ ವಿಪತ್ತುಗಳಿಗೆ ಸಿಲ್ಕಿತು.

ಕಂಠೀರವ ನರಸರಾಜ ಒಡೆಯರು, ೧೭೦೪–೧೭೧೩

ಚಿಕ್ಕದೇವರಾಯ ಒಡೆಯರು ಕಾಲವಾದಾಗ ಒಡೆಯರ ಮಕ್ಕಳಾಗಿದ್ದ ಕಂಠೀರವ ನರಸರಾಜರಿಗೆ ಮೂಕತನವಿದ್ದಾಗ್ಗೂ ಪ್ರಧಾನಿಯಾಗಿದ್ದ ತಿರುಮಲಾರ್ಯನ ಪ್ರಭಾವದಿಂದ ಪಟ್ಟವಾಯಿತು. ರಾಜರು ದುರ್ಬಲರಾಗಿದ್ದುದರಿಂದ ಆಡಳಿತದಲ್ಲಿ ಸೇನಾಪತಿಗಳು ಪ್ರಬಲಿಸಿದರು. ಚಿಕ್ಕದೇವರಾಯ ಒಡೆಯರ ಸುವ್ಯವಸ್ಥೆಯ ಬಲದಿಂದ ಆಡಳಿತವು ಮಾತ್ರ ಕ್ರಮದಿಂದ ನಡೆಯುತ್ತಿತ್ತು. ಮೊದಲು ದಳವಾಯಿಗಳಾದ ಕಾಂತಯ್ಯ ಮತ್ತು ನಂಜರಾಜಯ್ಯರಿಬ್ಬರೂ ರಾಜ್ಯವನ್ನು ವಿಸ್ತರಿಸುವುದಕ್ಕೆ ತೊಡಗಿ ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಮಿಡಿಗೇಶಿ ಮತ್ತು ಶೀರ್ಯಗಳನ್ನು ಗದ್ದು ರಾಜ್ಯಕ್ಕೆ ಸೇರಿಸಿದರು. ತರುವಾಯ ದಳವಾಯಿಗಳಾದ ಬಸವರಾಜ ಮತ್ತು ನಂಜರಾಜಂದಿರ ಕಾಲದಲ್ಲಿ ಆರ್ಕಾಟಿನ ನವಾಬನು ಯುದ್ಧದ ವೆಚ್ಚವನ್ನೆತ್ತಬೇಕೆಂದು ಒಂದು ದಂಡನ್ನು ಕಳುಹಿಸಿಕೊಟ್ಟನು. ಇದೇ ಮೊದಲಾಯಿತು. ಆ ವೇಳಗೆ ಅಧಿಕಾರವೆಲ್ಲವೂ ದಳವಾಯಿಗಳ ಕೈಯಲ್ಲಿಯೇ ಸೇರಿತು. ಕಂಠೀರವ ನರಸರಾಜರ ಕಡೆಗಾಲದಲ್ಲಿ ಪ್ರಸಿದ್ಧ ಕಳಲೆ ಮನೆತನಕ್ಕೆ ಸೇರಿದ ವೀರರಾಜಯ್ಯನು ದಳವಾಯಿಯಾದನು. ದಳವಾಯಿ ಪದವಿಯೂ, ಅದರೊಡನೆ ರಾಜ್ಯಾಧಿಕಾರವೂ ಆ ಮನೆತನದಲ್ಲಿಯೇ ಸ್ಥಿರವಾಗಿ, ವೀರರಾಜಯ್ಯನ ತರುವಾಯ ಆತನ ಇಬ್ಬರು ಮಕ್ಕಳು ಕಳಲೆ ದೇವರಾಜಯ್ಯ ಮತ್ತು ಕರಾಚೂರಿ ನಂಜರಾಜಯ್ಯ ಎಂಬುವರು ರಾಜನಿಗಿಂತ ಪ್ರಬಲರಾಗಿ, ರಾಜನಿರ್ಮಾಣಕರೇ ಆಗಿ ಪರಿಣಮಿಸಿದರು.

ದೊಡ್ಡ ಕೃಷ್ಣರಾಜ ಒಡೆಯರು, ೧೭೧೩–೧೭೩೧

೧೭೧೩ರಲ್ಲಿ ಮೂಕರಸರು ತೀರಿಹೋದರು. ತರುವಾಯ ಅವರ ಮಕ್ಕಳು ದೊಡ್ಡ ಕೃಷ್ಣರಾಜ ಒಡೆಯರವರು ಪಟ್ಟವನ್ನೇರಿದರು. ಇವರು ದಾನಧರ್ಮಗಳಲ್ಲಿಯೂ ಸುಖವಿನೋದಗಳಲ್ಲಿಯೂ ಮಗ್ನರಾಗಿ, ಆಡಳಿತವನ್ನು ಕಳಲೆ ದೇವರಾಜಯ್ಯನಿಗೆ ಬಿಟ್ಟುಕೊಟ್ಟರು. ದೇವರಾಜಯ್ಯನು ಸಮರ್ಥನಾಗಿದ್ದನು. ಆದರೂ ೧೭೨೪ರಲ್ಲಿ ಶತ್ರುಗಳನ್ನು ತಡೆಯುವುದು



ಶ್ರೀ ಚಾಮರಾಜ ಒಡೆಯರು



ಶ್ರೀ ಇಮ್ಮಡಿ ಕೃಷ್ಣರಾಜ ಒಡೆಯರು

ಕಷ್ಟವಾಯಿತು. ಆ ವರ್ಷದಲ್ಲಿ ಆರ್ಕಾಟು, ಶೀರ್ಯ, ಕಡಪ, ಕರ್ನೂಲು ಮತ್ತು ಸವಣೂರಿನ ನವಾಬರೂ, ಗುತ್ತಿಯ ಸಿದ್ದೋಜಿ ಘೋರ್ಪಡೆಯೂ ಒಟ್ಟುಕೂಡಿ ಶ್ರೀರಂಗಪಟ್ಟಣವನ್ನು ಮುತ್ತಿದರು. ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು, ಶತ್ರುಗಳ ಬಾಧೆಯನ್ನು ತಪ್ಪಿಸಿಕೊಳ್ಳಬೇಕಾಯಿತು. ಎರಡು ವರ್ಷಗಳು ಕಳೆದಕೂಡಲೆ ೧೭೨೬ರಲ್ಲಿ ಪೇಷ್ವೆಬಾಜಿರಾಯನು ಹಣಕ್ಕಾಗಿ ದಂಡನ್ನು ಕಳುಹಿಸಿದನು. ಆಗಲೂ ಹಣವನ್ನು ತೆತ್ತು ವಿಪತ್ತಿನಿಂದ ಪಾರಾದುದಾಯಿತು. ಹೀಗೆ ಬರಿದಾದ ಬೊಕ್ಕಸವನ್ನು ತುಂಬಲು ದೇವರಾಜಯ್ಯನು ಮಾಗಡಿ ಮತ್ತು ಸಾವನದುರ್ಗ ಪ್ರಾಂತವನ್ನಾಳುತ್ತಿದ್ದ ಮುಮ್ಮಡಿ ಕೆಂಪೇಗೌಡನ ಮೇಲೆ ದಂಡೆತ್ತಿ ಮಾಗಡಿಯನ್ನು ಸ್ವಾಧೀನಪಡಿಸಿಕೊಂಡು, ಗೌಡನನ್ನು ಶ್ರೀರಂಗಪಟ್ಟಣದ ಕಾರಾಗಾರದಲ್ಲಿಡಿಸಿದನು. ಮುಮ್ಮಡಿ ಕೆಂಪೇಗೌಡನು ಸೆರೆಯಲ್ಲಿಯೇ ಪ್ರಾಣಬಿಟ್ಟನು. ಅಲ್ಲಿಗೆ ಹೆಸರಿನಿಂದ ಆಳಿದ್ದ ಕೆಂಪೇಗೌಡರ ಅಧಿಕಾರವು ಕೊನೆಗೊಂಡಿತು.

ಚಾಮರಾಜ ಒಡೆಯರು ಇಮ್ಮಡಿ ಕೃಷ್ಣರಾಜ ಒಡೆಯರು

೧೭೩೧ರಲ್ಲಿ ದೊಡ್ಡಕೃಷ್ಣರಾಜ ಒಡೆಯರು ಮೃತರಾದಾಗ ದೇವರಾಜಯ್ಯನು ತನ್ನವಶದಲ್ಲಿಯೇ ರಾಜನು ಇರುವಹಾಗೆ ನೆರವೇರಿಸಿಕೊಳ್ಳುವ ಆಲೋಚನೆಮಾಡಿ, ಚಾಮರಾಜ ಒಡೆಯರೆಂಬುವರನ್ನು ಪಟ್ಟದಲ್ಲಿ ಕುಳ್ಳಿರಿಸಿದನು. ಅಧಿಕಾರವೆಲ್ಲವೂ ದಳವಾಯಿಯ ಕೈಲಿದ್ದುದನ್ನು ನೋಡಿ ಚಾಮರಾಜ ಒಡೆಯರು ಅದನ್ನು ತಪ್ಪಿಸಲು ಪ್ರಯತ್ನಿಸಿದರು. ಆ ಪ್ರಯತ್ನವು ನಿಷ್ಫಲವಾಯಿತು ; ದಳವಾಯಿಯು ಒಡೆಯರನ್ನು ಸೆರೆಹಿಡಿಸಿ, ಕಬ್ಬಾಳ ದುರ್ಗದಲ್ಲಿಡಿಸಿ, ಇನ್ನೂ ಶೈಶವದಲ್ಲಿದ್ದ ಇಮ್ಮಡಿ ಅಥವಾ ಚಿಕ್ಕ ಕೃಷ್ಣರಾಜ ಒಡೆಯರವರಿಗೆ ಅಭಿಷೇಕವನ್ನು ಮಾಡಿಸಿದನು. ರಾಜರು ಬಾಲ್ಯಾವಸ್ಥೆಯಲ್ಲಿದ್ದುದರಿಂದ ಅಧಿಕಾರವೆಲ್ಲವೂ ಸುಲಭವಾಗಿ ದಳವಾಯಿ, ಸರ್ವಾಧಿಕಾರಿ ಮತ್ತು ಪ್ರಧಾನಿಗಳೆಂಬ ಮೂವರಲ್ಲಿ ಅಡಕವಾಯಿತು. ಸೇನಾಭಾಗವು ಅತ್ಯವಶ್ಯವೆನಿಸಿ ಮುಖ್ಯವಾಗಿದ್ದುದರಿಂದ, ದಳವಾಯಿಯೇ ಆ ಮೂವರಲ್ಲಿ ಮುಖ್ಯನಾದನು. ಪ್ರಧಾನಿಯ ಕೆಲಸದಲ್ಲಿ ವೆಂಕಟಪತಿಯೆಂಬಾತನಿದ್ದಾಗ್ಗೂ ಸರ್ವಾಧಿಕಾರಿ ಮತ್ತು ದಳವಾಯಿಗಳಾಗಿದ್ದ ಕಳಲೆ ಸೋದರರು ದೇವರಾಜಯ್ಯ ನಂಜರಾಜರುಗಳಲ್ಲಿಯೇ ಅಧಿಕಾರವು ನಿಂತಿತು.

೧೭೩೧ ರಿಂದ ೧೭೬೦ರವರೆಗೆ ಈ ಸೋದರರು ರಾಜರೆಂಬ ಬಿರುದಿಲ್ಲದೆ ಸಮಸ್ತ ಅಧಿಕಾರವನ್ನೂ ವಹಿಸಿದ್ದರು.

ನಂಜರಾಜಯ್ಯನ ಅಸಾಮರ್ಥ್ಯ— ಮಾಯಿಕೊಂಡೆಯ ಕದನ

ದಿಲ್ಲಿಯಲ್ಲಿ ಸಯ್ಯದ್ ಸಹೋದರರು ದುರ್ಬಲರಾದವರನ್ನೇ ಪಟ್ಟದಲ್ಲಿರಿಸಿ, ಸರ್ವಾಧಿಕಾರವನ್ನು ಅಪಹರಿಸಿದಂತೆ, ಈ ಸೋದರರು ಆಳಿದರು. ರಾಜನು ಇವರ ಕೈಗೊಂಬೆಯಾಗಿದ್ದನು. ರಾಜ್ಯವಿಸ್ತಾರವೂ ನಡೆಯಲಿಲ್ಲ. ಏಕೆಂದರೆ ಸುತ್ತಮುತ್ತಲಿನ ನವಾಬರೂ, ಪುಣೆಯ ಮರಾಟೆಯವರೂ ದಂಡೆತ್ತಿಕೊಂಡು ಬರುತ್ತಲೇ ಇದ್ದರು. ೧೭೪೮ರಲ್ಲಿ ಆರ್ಕಾಟಿನ ನವಾಬರ ಜಗಳವೆದ್ದಿತ್ತು. ಆಗ ಕರಾಚೂರಿ ನಂಜರಾಜಯ್ಯನು ಪಕ್ಷವಿಪಕ್ಷಗಳಲ್ಲಿ ಸೇರಿಕೊಂಡು ಭೇದೋಪಾಯದಿಂದ ರಾಜ್ಯಸಂಪಾದನೆಯನ್ನೂ ಧನ ಸಂಪಾದನೆಯನ್ನೂ ಮಾಡುವ ಆಲೋಚನೆಯಿಂದ ತಿರುಚನಾಪಳ್ಳಿಯ ಬಳಿ ತಲೆಹಾಕಿದನು. ಆ ಉಪಾಯವು ಫಲಿಸಲಿಲ್ಲ ; ಇತ್ತಲಾಗಿ ದಂಡೆತ್ತಿ ಬರುತ್ತಿದ್ದ ಶತ್ರುಗಳಿಗೆ ಕೊಡಲು ಹಣವಿಲ್ಲದಾಯಿತು. ಸೈನ್ಯಕ್ಕೆ ಸಂಬಳಗಳನ್ನು ಸಲ್ಲಿಸುವುದಕ್ಕೂ ಆಗದೆ ಹೋಯಿತು. ಅಂತಹ ಕಾಲದಲ್ಲಿ ಹೈದರನಾಯಕನೆಂಬ ಮುಸಲ್ಮಾನ ಸೈನಿಕನೊಬ್ಬನು ಕ್ರಮೇಣ ಪದವಿಯಿಂದ ಪದವಿಗೇರಿ, ಸೈನ್ಯವನ್ನು ವಶಪಡಿಸಿಕೊಂಡು, ಕಳಲೆಯ ಸೋದರರ ಅಧಿಕಾರವನ್ನು ಕಡೆಗಾಣಿಸಿ ತನ್ನ ಅಧಿಕಾರವನ್ನೇ ೧೭೬೧ರಲ್ಲಿ ಸ್ಥಾಪಿಸಿಕೊಂಡನು. ದಳವಾಯಿಗಳ ಆಡಳಿತದಲ್ಲಿ ದೇವನಹಳ್ಳಿಯೊಂದೇ ರಾಜ್ಯಕ್ಕೆ ಹೊಸದಾಗಿ ಸೇರಿದ್ದು. ಇತರ ಭಾಗಗಳಲ್ಲಿ ಪಾಳೆಯಗಾರರೇ ಆಳುತ್ತ ಅತ್ತ ಮರಾಟೆಯವರಿಗೂ ಇತ್ತ ಸವಣೂರು, ಕಡಪ, ಕರ್ನೂಲು ನವಾಬರಿಗೂ ಮಧ್ಯೆ ಸಿಕ್ಕಿ ಬಿದ್ದು, ಸಮಯಬಂದಂತೆ ಆಚರಿಸುತ್ತಲೂ, ತಮ್ಮತಮ್ಮೊಳಗೇ ಕಲಹಗಳನ್ನು ಬೆಳಸುತ್ತಲೂ ಇದ್ದರು. ಇಕ್ಕೇರಿಯಲ್ಲಿ ಹಿರೀ ಸೋಮಶೇಖರ ನಾಯಕನಿಗೂ ಚಿತ್ರದುರ್ಗದ ಮದಕರಿನಾಯಕನಿಗೂ ಇದ್ದ ವೈರವನ್ನು ಇಬ್ಬರ ನಡುವೆ ಇದ್ದ ಸಂತೆಬೆನ್ನೂರಿನ ಪಾಳೆಯಗಾರನು ಹೆಚ್ಚಿಸುತ್ತಿದ್ದನು. ಹೀಗಿರಲು ಆರ್ಕಾಟಿನ ನವಾಬನಾಗಬೇಕೆಂದು ಸತಾರೆಯಿಂದ ಹೊರಟಿದ್ದ ಚಂದಾಸಾಹೇಬನು ಅಲ್ಲಿಗೆ ಬಂದನು. ಮದಕರಿ ನಾಯಕನು ಅವನ ಪಕ್ಷವನ್ನು ಹಿಡಿದನು ; ಸೋಮಶೇಖರನಾಯಕನು ಪ್ರತಿಯಾದನು. ಇಬ್ಬರಿಗೂ ೧೭೪೮

ರಲ್ಲಿ ಮಾಯಿಕೊಂಡೆ ಎಂಬೆಡೆಯಲ್ಲಿ ಯುದ್ಧವಾಯಿತು. ಮದಕರಿ ನಾಯಕನು ಸೋತು, ಚಂದಾ ಸಾಹೇಬನು ಸೆರೆ ಬಿದ್ದನು. ಕಡೆಗೆ ಉಪಾಯದಿಂದ ಚಂದಾ ಸಾಹೇಬನು ತಲೆತಪ್ಪಿಸಿಕೊಂಡು ಓಡಿದನು. ಪಾಳೆಯಗಾರರು ಈ ಬಗೆಯಾಗಿ ಪರಸ್ಪರ ಜಗಳಗಳನ್ನಾಡುತಲಿದ್ದರು.

ಕಾಲಸ್ಥಿತಿ

ವಿಜಯನಗರ ಸಾಮ್ರಾಜ್ಯವು ಶೂನ್ಯವಾದ ಮೇಲೆ ನಮ್ಮ ದೇಶದಲ್ಲಿ ಪಾಳೆಯಗಾರರ ಕಾಲವು ನಡೆಯಿತು. ಸ್ವತಂತ್ರವಾಗಿ ಎದ್ದ ಈ ಸಣ್ಣ ಸಣ್ಣ ರಾಜ್ಯಗಳಲ್ಲಿ, ಮೊದಲೆರಡು ತಲೆಗಳವರೆಗೂ ಸಾಮರ್ಥ್ಯವಿದ್ದು ತರುವಾಯ ಪಟ್ಟದ ಜಗಳ ಮತ್ತು ಪರಸ್ಪರ ದ್ವೇಷಗಳಲ್ಲಿ ಈ ಸಂತತಿಗಳ ಪೌರುಷವೇ ನಷ್ಟವಾಯಿತು. ಬಿಜಾಪುರದವರು, ಮರಾಟೆಯವರು ಮತ್ತು ಮುಘಲರು ಒಡ್ಡುತ್ತಿದ್ದ ಯಾತ್ರೆಗಳಲ್ಲಿ ಇವರು ಸಿಕ್ಕಿಕೊಂಡಾಗ ಕೆಲಕಾಲ ಒಬ್ಬೊಬ್ಬರಾಗಿ ಯುದ್ಧವಾಡಿ ಸೋತು, ಪೊಗದಿ ಕೊಡಲೊಪ್ಪಿದರು; ತರುವಾಯ ತಂತ್ರ, ಮೋಸ, ಉಪಾಯಗಳನ್ನು ಹಿಡಿದು ತಮ್ಮ ತಲೆಗಳನ್ನುಳಿಸಿಕೊಳ್ಳುವ ಸನ್ನಾಹಗಳಲ್ಲಿ ತೊಡಗಿದರು. ಶತ್ರುಗಳ ಆಪತ್ಕಾಲದಲ್ಲಿ ಇವರು ನಿರುಪಾಧಿಕರಾಗಿದ್ದರು; ಶತ್ರುಗಳು ದಾಳಿಯಿಟ್ಟುಕೊಂಡು ಬಂದಾಗ ಭೇದೋಪಾಯವನ್ನು ಬಗೆದರು. ಕೆಂಗ ಹನುಮಪ್ಪ ನಾಯಕ ಮತ್ತು ಮಧುರೆಯ ತಿರುಮಲನಾಯಕರು ಈ ಕಾಲದ ಮಾದರಿಗಳು. ಮುಘಲರು, ಮರಾಟೆಯವರು ಪರಸ್ಪರ ಹೋರಾಡದಿದ್ದರೆ ಮೈಸೂರೆಲ್ಲವೂ ಮರಾಟೆಯವರಿಗೋ, ಮುಘಲರಿಗೋ ಸೇರಿಬಿಡುತ್ತಿತ್ತು. ಆದರೆ ಪಾಳೆಯಗಾರರಲ್ಲಿ ಕಂಡು ಬಂದ ನೀತಿಕ್ಷಯವೇ ಮರಾಟೆಯವರಲ್ಲಿಯೂ ಮುಘಲರಲ್ಲಿಯೂ ಪ್ರಬಲಿಸಿ ಸ್ವಪ್ರತಿಷ್ಠೆ, ಸ್ವಾರ್ಥಸಾಧನೆ, ಸುಖಲೋಲುಪತೆಗಳೇ ಆಳರಸರ ಹೆಗ್ಗುರಿಗಳಾಗಿ, ಯಾದವೀಕಲಹಗಳೇ ಎಲ್ಲೆಲ್ಲಿಯೂ ರೇಗಿ ದೇಶದಲ್ಲಿ ನಿತ್ಯಯುದ್ಧವಾಗಿತ್ತು. ನಿತ್ಯಯುದ್ಧವಾಗಿದ್ದರೂ ವೀರತ್ವವು ಅಸ್ತಮಯವಾಗಿ, ಹೇಡಿತನವೂ ಹೇಡಿತನಕ್ಕೊಪ್ಪಿದ ಮೋಸ, ಪಿತೂರಿ, ವಧೆಗಳೂ ಸಾಧಾರಣವಾಗಿದ್ದವು. ರಾಯಭಾರಿಗಳಿಗೂ ದೂತರಿಗೂ ಅವಮಾನ ಮಾಡುವುದು, ಸೆರೆಸಿಕ್ಕಿದವರ ಕಿವಿ ಮೂಗುಗಳನ್ನು ಕುಯ್ಯಿಸುವುದು, ಶತ್ರುವು ಸೋತ ಮೇಲೆ ಅವನ ತಲೆಕಡಿದು ಕೋಟೆಯ

ಮೇಲೆ ನಿಲುವಿನಲ್ಲಿಡಿಸುವುದು, ಒಳತಂತ್ರ ಮಾಡಿ ಗೋಪ್ಯವಾಗಿ ಹತ್ಯೆ ಮಾಡಿಸುವುದು ಈ ಕಾಲದ ರಾಜನೀತಿಯ ಲಕ್ಷಣಗಳು. ಸೈನಿಕರಲ್ಲಿ ನಿರೀಕ್ಷ್ಯವಾಗಿದ್ದುದು ಉಪ್ಪಿಟ್ಟವನಿಗೆರಡು ಬಗೆಯ ಬಾರದೆಂಬುದೊಂದೇ ಗುಣ. ಸ್ವಾಮಿಯು ಸಕಾಲಕ್ಕೆ ಸಂಬಳವನ್ನು ಸಲ್ಲಿಸದಿರಲು ಬೇರೆ ಸ್ವಾಮಿಯನ್ನರಸುತ್ತಿದ್ದ ಸೈನಿಕರಲ್ಲಿ ಹೊಯಿಸಳರ ಕಾಲದ ಸ್ವಾಮಿಭಕ್ತಿಯು ನೆಲೆಸಿರಲಿಲ್ಲ. ಸೇನೆಗಳು ಹೀಗಿದ್ದು, ರಾಜರಾದವರಿಗೆ ಸೇನಾಬಲವೇ ಮುಖ್ಯಬಲವಾಗಿದ್ದುದರಿಂದ ತರಿಗೆ ಸುಂಕಗಳು ಜನರಿಗೆ ಹಿಂಸೆಯಾಗುವಂತೆ ಹೆಚ್ಚಿದವು. ಅಲ್ಲದೆ ನಿರಂತರ ಯುದ್ಧ ಕಾಲದಲ್ಲಿ ನೀತಿಕ್ಷಯದ ಕಾಲವಾದುದರಿಂದ ಗ್ರಾಮಗಳನ್ನು ಸುಡಿಸುವುದು, ಬಾವಿಗಳಿಗೆ ವಿಷ ಹಾಕಿಸುವುದು, ದವಸ ಧಾನ್ಯವನ್ನು ಸೂರೆಗೊಳ್ಳುವುದು, ದ್ರವ್ಯವನ್ನಪಹರಿಸುವುದು ಮುಂತಾದ ಪದ್ಧತಿಗಳು ಸಾಮಾನ್ಯವಾಗಿ, ಜನರ ಕ್ಷೇಮ ಸೌಕರ್ಯಗಳೂ ಕಡಿಮೆಯಾದವು. ಇಂತಹ ಕಾಲದಲ್ಲಿ ಯುದ್ಧದಲ್ಲಿ ಚತುರನೂ, ತಂತ್ರದಲ್ಲಿ ಜಾಣನೂ ಆದವನಿಗೆ ರಾಜ್ಯ ಸಂಪಾದನೆಯ ಆಸೆಯು ಸಹಜವಾಗಿ ಜನಿಸುತ್ತಿತ್ತು. ಅಂತಹವರ ಯೋಗ್ಯತೆಗನುಸಾರವಾಗಿ ಅವರ ರಾಜ್ಯವು ಒಂದು ತಲೆಯವರೆಗೋ ಎರಡು ತಲೆಯವರೆಗೋ ನಡೆದು ಬಂದಿತು.



ಶ್ರೀ ಹೈದರಾಲಿ ಖಾನ್

ಹೈದರಾಲಿ ಟಿಪ್ಪುಸುಲ್ತಾನರು.

(೧೭೬೦–೧೭೯೯)

ಹೈದರಾಲಿ ಖಾನ್ ಬಹಾದೂರ್, ೧೭೬೦—೧೭೮೨

ಹೈದರನ ಏಳಿಗೆ

ಕರಾಚೂರಿ ನಂಜರಾಜಯ್ಯನು ೧೭೪೯ರಲ್ಲಿ ದೇವನಹಳ್ಳಿಯ ಮುತ್ತಿಗೆಯನ್ನು 9 ತಿಂಗಳಕಾಲ ನಡೆಸಿದನು. ಆಗ ಸೈನಿಕನಾಗಿದ್ದ ಹೈದರಾಲಿಯೆಂಬ ಯುವಕನೊಬ್ಬನು ಧೈರ್ಯ ಚಮತ್ಕಾರಗಳನ್ನು ತೋರಿಸಿ, ದಳವಾಯಿಯ ಮೆಚ್ಚುಗೆಯನ್ನು ಪಡೆದನು. ಅದೇ ಸಮಯದಲ್ಲಿ ನೈಸಾಮನ ಪಟ್ಟದ ಜಗಳದಲ್ಲಿ ನಾಸಿರ್‌ಜಂಗನು ಮೈಸೂರಿನ ದಂಡೊಂದು ತನ್ನ ಸಹಾಯಕ್ಕೆ ಬರಬೇಕೆಂದು ಅಪ್ಪಣೆ ಮಾಡಿದಾಗ ಅದರಂತೆಯೇ ಒಂದು ದಳವನ್ನು ಹೈದರನ ಕೈಕೆಳಗಿಟ್ಟು ಕಳುಹಿಸಿತ್ತು. ಹೈದರನು ನಾಸಿರ್‌ಜಂಗನನ್ನು ಮಧುಗಿರಿಯಲ್ಲಿ ಸೇರಿಕೊಂಡು, ನಡೆದ ಯುದ್ಧದಲ್ಲಿ ಆತನು ದುರ್ಮರಣವನ್ನು ಪಡೆಯಲು ಕೂಡಲೆ ಅಲ್ಲಲ್ಲಿ ಕೊಳ್ಳೆಹೊಡೆದು, ತನ್ನ ಸಂಪಾದನೆಯನ್ನು ದೇವನಹಳ್ಳಿಗೆ ಕಳುಹಿಸಿ ಭದ್ರಪಡಿಸಿದನು. ತರುವಾಯ ಕರಾಚೂರಿ ನಂಜರಾಜಯ್ಯನು ೧೭೫೧ರಲ್ಲಿ ಆರ್ಕಾಟು ನವಾಬರ ಯುದ್ಧದಲ್ಲಿ ಆಸೆಯಿಂದ ಪ್ರವೇಶಿಸಿದನಷ್ಟೆ. ಅಲ್ಲಿಯೂ ಹೈದರನು ಮೈಸೂರಿನ ದಳಪತಿಗಳಲ್ಲಿ ಸಮರ್ಥನಾದವನೆನಿಸಿ, ದಿಂಡುಗಲ್ಲು ಪ್ರಾಂತಕ್ಕೆ ಫೌಜುದಾರನಾಗಿ ನಿಯಮಿತನಾದನು. ಅಲ್ಲಿದ್ದಾಗ ಹೈದರನು ಖಂಡೇರಾಯನೆಂಬ ದೇಶಸ್ಥ ಬ್ರಾಹ್ಮಣನ ಜತೆಗೂಡಿ, ಬೇಡರದಳವೊಂದನ್ನು ಕಟ್ಟಿ ಸಾಧ್ಯವಾದಂತೆ ಲೂಟಿ ಮಾಡಿ, ತನ್ನ ಬಲವನ್ನು ವೃದ್ಧಿಪಡಿಸಿಕೊಂಡನು. ಇವನ ಪ್ರಾಬಲ್ಯವನ್ನು ಕಂಡು ದಳವಾಯಿಯು ಇವನ ಜಹಗೀರನ್ನು ಕಿತ್ತುಕೊಳ್ಳುವ ಯೋಚನೆ ಮಾಡುವ ವೇಳೆಗೆ ಸರಿಯಾಗಿ ೧೭೫೭ರಲ್ಲಿ ಚೌಥಾಯದ ವಸೂಲಿಗಾಗಿ ಮರಾಟೆಯವರು ಬಂದರು. ಅಲ್ಲದೆ ಹೆಸರಿಗೆ ಮಾತ್ರ ರಾಜರಾಗಿದ್ದ ಚಿಕ್ಕ ಕೃಷ್ಣರಾಜ ಒಡೆಯರು ಹೈದರನ ಸಹಾಯದಿಂದ ದಳವಾಯಿಗಳ ದರ್ಪವನ್ನು ಮುರಿಯುವ ಸನ್ನಾಹವನ್ನೂ ಆ ವೇಳೆಯಲ್ಲಿಯೇ ಮಾಡಿದರು. ಆಗ

ಹೈದರನು, ಬಂದ ಮರಾಟೆಯವರ ತಂಟೆಯನ್ನು ತಪ್ಪಿಸಿ, ಸಂಬಳದ ಬಾಕಿಗಾಗಿ ದಂಗೆಯೇಳಲು ಸಿದ್ಧರಾಗಿದ್ದ ಸೈನಿಕರನ್ನು ಅಡಗಿಸಿ, ಬೆಂಗಳೂರು ಜಹಗೀರನ್ನು ಪಡೆದನು. ದಳವಾಯಿಯ ಪ್ರಯತ್ನವು ಈ ರೀತಿಯಲ್ಲಿ ಭಗ್ನವಾಯಿತು.

ಹೈದರನ ಸಾಹಸ

೧೭೫೯ರಲ್ಲಿ ಮರಾಟೆಯವರು ಚೌಥಾಯಕ್ಕಾಗಿ ಪುನಃ ಬಂದರು. ಹೈದರನ ಸಹಾಯವಿಲ್ಲದೆ ಮರಾಟೆಯವರನ್ನು ಕಳುಹಿಸುವುದಾಗಲಿಲ್ಲ. ಏಕೆಂದರೆ ಯುದ್ಧ ಕೌಶಲದಲ್ಲಿ ಹೈದರನು ಅಸಮಾನನಾಗಿದ್ದುದಲ್ಲದೆ ಸೈನ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿದ್ದನು. ಸೈನ್ಯದಲ್ಲಿ ಹೈದರನ ಭಾಗವೇ ಶಿಸ್ತಿನಿಂದಿದ್ದುದು ; ಸಾಹಸಿಯೂ, ಶೂರನೂ ಆದ ಅವನಲ್ಲಿ ಸೈನಿಕರಿಗೆ ಭಯಭಕ್ತಿಗಳಿದ್ದವು ; ಕೊಳ್ಳೆಗೆ ಲೋಪವಿರಲಿಲ್ಲ. ಆದ್ದರಿಂದ ಹೈದರನೇ ರಾಜ್ಯದಲ್ಲಿ ಮುಖ್ಯನಾದನು. ದಳವಾಯಿಗಳ ಅಧಿಕಾರವು ಇವನಿಂದ ಕೊನೆಗಂಡಿತು. ರಾಜರು ದಳವಾಯಿಗಳ ಅವಾಂತರದಿಂದ ಮುಕ್ತರಾದ ಕೂಡಲೆ ಹೈದರನಿಗೆ ಹೆದರ ಬೇಕಾಗಿದ್ದುದನ್ನು ಕಂಡು, ಹೈದರನ ಆಪ್ತಮಿತ್ರ ಖಂಡೇರಾಯನನ್ನು ತಮ್ಮ ಕಡೆ ಮಾಡಿಕೊಂಡು, ಮರಾಟೆಯವರ ಸಹಾಯದಿಂದ ಹೈದರನ ಬಲವನ್ನು ಮುರಿಯುವ ಯೋಚನೆಯನ್ನು ಮಾಡಿದರು. ಹೈದರನ ಅದೃಷ್ಟದಿಂದ ಮರಾಟೆಯವರು ಪಾಣಿಪಟ್ಟದ ಸನ್ನಾಹದಲ್ಲಿ ನಿರತರಾಗಿದ್ದು ಮೈಸೂರಿನ ಕಡೆಗೆ ಬರಲಾರದಿದ್ದರು. ಆದ್ದರಿಂದ ಹೈದರನು ತನ್ನ ನಿಜ ಸಾಮರ್ಥ್ಯ ಸಾಹಸ ಚಮತ್ಕಾರಗಳಿಂದಲೇ ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು, ರಾತ್ರಿಯೆಲ್ಲ ಕುದುರೆ ಸವಾರಿಮಾಡಿ, ಬೆಂಗಳೂರನ್ನು ಸೇರಿದನು. ಬೆಂಗಳೂರನ್ನು ವಶಪಡಿಸಿಕೊಂಡ ಮೇಲೆ ಹೈದರನು ಸುಲಭವಾಗಿ ಶ್ರೀರಂಗಪಟ್ಟಣವನ್ನು ಮುತ್ತಿ, ಖಂಡೇರಾಯನನ್ನೊಂದು ಪಂಜರದಲ್ಲಿಯೂ ರಾಜರನ್ನು ಅರಮನೆಯಲ್ಲಿಯೂ ಬಂಧಿಸಿ, ತಾನೇ ಸರ್ವಾಧಿಕಾರವನ್ನು ವಹಿಸಿದನು (೧೭೬೧).

ಹೈದರನ ಬಾಲ್ಯ

ಹೈದರನ ತಂದೆ ಫತ್ತೆಮಹಮ್ಮದನು ಮೊದಲು ಶಿರ್ಯದ ನವಾಬನಲ್ಲಿಯೂ ತರುವಾಯ ಆರ್ಕಾಟು ನವಾಬನಲ್ಲಿಯೂ, ಅನಂತರ ಮೈಸೂರು

ರಾಜರಲ್ಲಿಯೂ ಸೈನ್ಯದ ನೌಕರಿ ಮಾಡಿ ಫೌಜುದಾರನೆನಿಸಿ ಬೂದಿಕೋಟೆಯನ್ನು ಜಹಗೀರಾಗಿ ಪಡೆದಿದ್ದನು. ಆತನು ನವಾಯತ್ ಕುಲದ ಹೆಂಗಸನ್ನು ಮದುವೆಯಾಗಿದ್ದನು. ಇವರಿಗೆ ೧೭೨೨ರಲ್ಲಿ ಹೈದರನು ಬೂದಿಕೋಟೆಯಲ್ಲಿಯೇ ಹುಟ್ಟಿದನು. ಬಾಲ್ಯದಲ್ಲಿಯೇ ತಂದೆ ತೀರಿಕೊಂಡನು; ವೈರಿಗಳು ಸಾಲದ ಹೊರೆಯನ್ನು ಬೇರೆ ಹೊರಿಸಿದರು. ನಾನಾ ಕಷ್ಟಗಳನ್ನನುಭವಿಸಿ, ಕಡೆಗೆ ಹೈದರನು ಬೆಂಗಳೂರಿಗೆ ಬಂದು, ಮೈಸೂರಿನ ಸೈನ್ಯದಲ್ಲಿ ನೌಕರಿಯನ್ನು ಸಂಪಾದಿಸಿಕೊಂಡನು. ಸೈನ್ಯ ಶಿಕ್ಷಣವೊಂದೇ ಹೈದರನಿಗಾದುದು; ಓದುಬರಹಗಳಲ್ಲಿ ಅವನಿಗೆ ರುಚಿಯೂ ಇರಲಿಲ್ಲ; ಅವುಗಳನ್ನು ಕಲಿಯಲು ಅನುಕೂಲವೂ ಇರಲಿಲ್ಲ. ಯುಕ್ತಿಯಲ್ಲಿಯೂ ಸಾಹಸದಲ್ಲಿಯೂ ಅದ್ವಿತೀಯನಾಗಿದ್ದುದರಿಂದ ಸ್ವಲ್ಪಕಾಲದಲ್ಲಿಯೇ ಹೈದರನು ಸೈನಿಕರ ಪ್ರೀತಿಗೆಪಾತ್ರನಾದನು. ಗುರುವಿನಿಂದ ಶಿಕ್ಷಿತನಲ್ಲದಿದ್ದರೂ, ದೇವರು ಕೊಟ್ಟ ಬುದ್ಧಿಯು ಚುರುಕಾಗಿತ್ತು. ಆರ್ಕಾಟು ನವಾಬರ ಜಗಳದಕಾಲದಲ್ಲಿ ಇತರರು ಸೋಮಾರಿಗಳಾಗಿದ್ದಾಗ ಹೈದರನು ಹಣವನ್ನು ಕೂಡಿಸಿದ್ದೇ ಅಲ್ಲದೆ, ಪುದುಚೇರಿಯಲ್ಲಿಯೂ ಇತರೆಡೆಗಳಲ್ಲಿಯೂ ಫ್ರೆಂಚರ ಸೈನ್ಯ ವ್ಯವಸ್ಥೆಗಳನ್ನು ಕುತೂಹಲದಿಂದ ಪರೀಕ್ಷಿಸಿ ನೆನಪಿನಲ್ಲಿಟ್ಟನು.

ಬಿದರೂರಿನ ಜಯ

ಸರ್ವಾಧಿಕಾರವನ್ನು ಪಡೆದಕೂಡಲೆ ಹೈದರನು ಶ್ರೀರಂಗಪಟ್ಟಣ ಬೆಂಗಳೂರುಗಳು ತನ್ನ ಕೈಲಿರುವಂತೆ ವ್ಯವಸ್ಥೆಮಾಡಿ, ಸ್ನೇಹ ಕಟ್ಟುವುದಕ್ಕೂ ರಾಜ್ಯವನ್ನು ವಿಸ್ತರಿಸುವುದಕ್ಕೂ ತೊಡಗಿದನು. ಆದವೇಣಿಯಲ್ಲಿದ್ದು ನೈಜಾಮನಾಗಬೇಕೆಂದಿದ್ದ ಬಸಲತ್‌ಜಂಗನು ಅನುಕೂಲನಾದನು. ಹೈದರನು ಆತನ ಸ್ನೇಹವನ್ನು ಸಂಪಾದಿಸಿ, ಶೀರ್ಯದ ಸುಭಾದಾರಿಯನ್ನು ಆತನಿಂದ ಪಡೆದು, ಹೊಸಕೋಟೆ, ದೊಡ್ಡಬಳ್ಳಾಪುರ ಮತ್ತು ಶೀರ್ಯಗಳನ್ನು ಮೊದಲು ಅಲ್ಲಿಯ ಪಾಳೆಯಗಾರ ನವಾಬರಿಂದ ಕಿತ್ತುಕೊಂಡು, ತರುವಾಯ ಗುತ್ತಿಯ ಮುರಾರಿರಾವ್ ಘೋರ್ಪಡೆಯನ್ನು ಸೋಲಿಸಿಬಿಟ್ಟು ಪೆನುಗೊಂಡೆ ಮಡಕಶಿರಗಳನ್ನು ರಾಜ್ಯಕ್ಕೆ ಸೇರಿಸಿಕೊಂಡು, ರಾಯದುರ್ಗ, ಹರಪನಹಳ್ಳಿ ಮತ್ತು ಚಿತ್ರದುರ್ಗದ ಪಾಳೆಯಗಾರರನ್ನು ಜಯಿಸಿದನು. ಚಿತ್ರದುರ್ಗದ ಬಳಿಯಲ್ಲಿದ್ದಾಗ ಚಿತ್ರದುರ್ಗದ ಪಾಳೆಯಗಾರನು ಬಿದರೂರಿನ

ವಂಶಸ್ಥನಾಗಿದ್ದು ಪಟ್ಟಕ್ಕಾಸೆಪಡುತ್ತಿದ್ದ ಒಬ್ಬನನ್ನು ಹೈದರನಿಗೆ ತೋರಿಸಿ, ಬಿದರೂರಿನ ರಾಣಿ ವೀರಮ್ಮಾಜಿಯೊಡನೆ ಯುದ್ಧಮಾಡಲು ನೆಪವನ್ನೊದಗಿಸಿ ಕೊಟ್ಟನು. ಆ ಪಟ್ಟದ ಗೊಂಬೆಯನ್ನು ತನ್ನ ಕೈಲಿಟ್ಟುಕೊಂಡು ಹೈದರನು ೧೭೬೩ರಲ್ಲಿ ಬಿದರೂರು ಪ್ರಾಂತವನ್ನು ಹೊಕ್ಕು ತಂತ್ರದಿಂದ ಬಿದರೂರನ್ನು ಹಿಡಿದು, ರಾಣಿಯನ್ನೂ ಆಕೆಯ ವಂಶದವರನ್ನೂ ಮಧುಗಿರಿಯಲ್ಲಿ ಬಂಧನದಲ್ಲಿರಿಸಿದನು. ಇಲ್ಲಿಗೆ ಇಕ್ಕೇರಿಯ ವಂಶವು ಕೊನೆಯಾಯಿತು. ಬಿದರೂರಿನಲ್ಲಿ ಹೈದರನಿಗೆ ಅಪಾರವಾದ ಧನವು ಸಿಕ್ಕಿತು. ಇನ್ನು ಮುಂದೆ ಮರಾಟೆಯವರೊಡನೆ ಯುದ್ಧವು ಅವಶ್ಯವಾಗಿ ನಡೆಯುವುದೆಂದು ತಿಳಿದಿದ್ದ ಹೈದರನು ಬಿದರೂರನ್ನೇ ರಾಜಧಾನಿಯನ್ನಾಗಿ ಮಾಡಲೆಣಿಸಿ ಅಲ್ಲಿಯ ಕೋಟೆಯನ್ನು ವಿಸ್ತಾರಗೊಳಿಸಿ, ಅದಕ್ಕೆ ಹೈದರ ನಗರ ಎಂದು ಹೆಸರಿಟ್ಟು, ಅರಮನೆ, ಟಂಕಸಾಲೆ, ಉಗ್ರಾಣ ಮುಂತಾದುವುಗಳನ್ನು ಕಟ್ಟಿಸಿದನು. ವಾಯುಗುಣವು ಹಿತಕರವಾಗಿಲ್ಲವೆ ಈ ಪ್ರಯತ್ನವು ಭಂಗವಾಯಿತು. ಹೀಗೆ ಪೂರ್ವದಲ್ಲಿ ಬನವಾಸಿಯೆಂದು ಪ್ರಸಿದ್ಧವಾದ ಪ್ರಾಂತವು ವಶವಾದಕೂಡಲೆ ಅಲ್ಲಿಂದ ಸಮುದ್ರತೀರದವರೆಗೆ ಪಶ್ಚಿಮಕ್ಕೂ, ಕೃಷ್ಣಾನದಿಯವರೆಗೆ ಉತ್ತರಕ್ಕೂ, ತಿರುವಾಂಕೋಡು ಕೊಚ್ಚಿಗಳವರೆಗೆ ದಕ್ಷಿಣಕ್ಕೂ ರಾಜ್ಯವನ್ನು ವಿಸ್ತರಿಸಲು ಮನಸ್ಸುಮಾಡಿಕೊಂಡನು.

ಮರಾಟೆಯವರೊಡನೆ ಜಗಳ ೧೭೬೪

ಶಿರ್ಯವನ್ನು ಹಿಡಿದುದು ನೈಸ಼ಾಮನಿಗೆ ಕೋಪವನ್ನುಂಟುಮಾಡಿತು. ಬಿದರೂರನ್ನು ಗೆದ್ದುದು ಮರಾಟೆಯವರಿಗೆ ಆಗ್ರಹವನ್ನು ತಂದಿತು. ಇದನ್ನು ತಿಳಿದ ಹೈದರನು ಬಿದರೂರಿನಲ್ಲೆದ್ದ ಪಿತೂರಿಯೊಂದನ್ನು ಭೇದಿಸಿದ ಮೇಲೆ ಚಂದಾಸಾಹೇಬನ ಮಗನಾದ ರಸ಼ಾ ಆಲಿಖಾನನ ಸ್ನೇಹವನ್ನು ಕಟ್ಟಿಕೊಂಡು ಇಬ್ಬರನ್ನು ಸಮಾಧಾನಗೊಳಿಸಲು ಇಬ್ಬರ ಬಳಿಗೂ ರಾಯಭಾರಿಗಳನ್ನು ಕಳುಹಿದನು. ನೈಸ಼ಾಮನು ಸಂಧಿಗೊಪ್ಪಿದನು ; ಮರಾಟೆಯವರು ಒಪ್ಪಲಿಲ್ಲ. ಹೈದರನು ಮರಾಟೆಯವರಿಗೆ ಮುಂಚಿತವಾಗಿ ತಾನೇ ಯುದ್ಧವನ್ನು ಮೊದಲಿಡುವುದು ಒಳ್ಳೆಯದೆಂದು ಯೋಚಿಸಿ, ಸವಣೂರಿನ ಮೇಲೆ ಹೊರಟು ಅದನ್ನು ಜಯಿಸಿದನು. ತನ್ನನ್ನೆದುರಿಸಲು ಬಂದ ಮರಾಟೆ ಸರದಾರ ಗೋಪಾಲರಾಯನನ್ನು ಸೋಲಿಸಿ, ಕೃಷ್ಣಾನದಿಯನ್ನೇ ತನ್ನ ಮೇರೆಯ

ನ್ನಾಗಿ ಮಾಡಿಕೊಂಡನು. ಕೂಡಲೆ ಪೇಷ್ವೆ ಮಾಧವರಾಯನು ತಕ್ಕ ಸೈನ್ಯ ದೊಡನೆ ಯುದ್ಧಕ್ಕೆ ಬಂದನು. ರಟ್ಟಿಹಳ್ಳಿಯಲ್ಲಿ ಹೈದರನು ಪೇಷ್ವೆಯ ದೆಸೆ ಯಿಂದ ಪೂರಾ ಸೋತನು. ಎಡೆಗೆಡದೆ ಪುನಃ ಅನವಟ್ಟಿಯೆಂಬಲ್ಲಿ ಹೈದ ರನು ಯುದ್ಧ ಮಾಡಿದನು; ಸೋಲೇ ಪ್ರಾಪ್ತಿಯಾಯಿತು. ಆಗ ಹೈದ ರನು ೩೨ ಲಕ್ಷ ರೂಪಾಯಿಗಳನ್ನೂ ಗುತ್ತಿಯ ಮುರಾರಿರಾಯನಿಂದ ತೆಗೆದು ಕೊಂಡಿದ್ದ ಪ್ರಾಂತಗಳನ್ನೂ ಸವಣೂರನ್ನೂ ಪೇಷ್ವೆಗೊಪ್ಪಿಸಿ ಶ್ರೀರಂಗಪಟ್ಟ ಣಕ್ಕೆ ಹಿಂತಿರುಗಿ ಬಂದನು.

ಕೇರಳದ ಜಯ

೧೭೬೬ರಲ್ಲಿ ಕೇರಳದಲ್ಲಿ ರಾಜ್ಯಸಂಪಾದನೆ ಮಾಡುವ ಅನುಕೂಲ ವೊದಗಿತು. ಕಣ್ಣಾನೂರಿನ ಮಾಪಿಳ್ಳೆರಾಜನು ಹೈದರನ ಸಹಾಯವನ್ನು ಬಯಸಿದನು. ಹೈದರನು ಕೂಡಲೆ ದಂಡೆತ್ತಿಹೋಗಿ, ಅಲ್ಲಿ ಎದುರಾದ ನಾಯಮಾರರನ್ನು ಕಷ್ಟದಿಂದ ಸೋಲಿಸಿ, ಕೋಳಿಕೋಡನ್ನು ಸ್ವಾಧೀನ ಪಡಿಸಿಕೊಂಡನು. ಕೋಳಿಕೋಡಿನ ಜಾಮೊರಿಯು ಮೋಸವನ್ನೂ ಹಿಂಸೆ ಯನ್ನೂ ಸಹಿಸದೆ ಆತ್ಮಹತ್ಯಮಾಡಿಕೊಂಡನು. ನಾಯಮಾರರು ಏಕವಾಗಿ ದಂಗೆಯೆದ್ದರು. ದಂಗೆಯನ್ನು ಕ್ರೌರ್ಯದಿಂದ ಅಡಗಿಸಿ ಹೈದರನು ನಾಯ ಮಾರರನೇಕರನ್ನು ಹಿಡಿಸಿ ಅವರನ್ನು ಮೈಸೂರು ಪ್ರಾಂತಕ್ಕೆ ಕಳು ಹಿಸಿದನು.

ಮರಾಟೆಯವರ ತೊಂದರೆ

ಹೈದರನು ಘಟ್ಟದ ಕೆಳಪ್ರಾಂತದಲ್ಲಿದ್ದಾಗಲೇ ೧೭೬೬ರಲ್ಲಿ ಇಮ್ಮಡಿ ಚಿಕ್ಕಕೃಷ್ಣರಾಜ ಒಡೆಯರು ಕಾಲವಾದರು. ಸರ್ವಾಧಿಕಾರಿಯಾಗಿದ್ದ ಹೈದರನು ರಾಜರ ಮಕ್ಕಳು ನಂಜರಾಜ ಒಡೆಯರನ್ನು ಪಟ್ಟದಲ್ಲಿ ಕುಳ್ಳಿರಿಸುವ ಏರ್ಪಾಟನ್ನು ಮಾಡಿದನು. ೧೭೬೭ರಲ್ಲಿ ಹೈದರನು ಹಿಂತಿರುಗಿ ರಾಜ ಧಾನಿಗೆ ಬಂದಾಗ ನಂಜರಾಜ ಒಡೆಯರವರು ಸ್ವತಂತ್ರರಾಗುವ ಯತ್ನದಲ್ಲಿ ದ್ದುದನ್ನು ಕಂಡು, ಕೂಡಲೆ ಅರಮನೆಗೆ ಕೊಡುತ್ತಿದ್ದ ಹಣವನ್ನು ನಿಲ್ಲಿಸಿ, ರಾಜರನ್ನು ಅರಮನೆಯಲ್ಲಿಯೇ ನಿರ್ಬಂಧದಲ್ಲಿಟ್ಟನು. ಈ ವೃತ್ತಾಂತವನ್ನು ಕೇಳಿದಕೂಡಲೆ ಪೇಷ್ವೆ ಮಾಧವರಾಯನು ನೈಜಾಮನ ಸ್ನೇಹವನ್ನು ಕಟ್ಟಿ ಕೊಂಡು, ದಂಡನ್ನು ಕೊಟ್ಟು ಕಳುಹಿದನು. ಯುದ್ಧ ಮಾಡಲನುಕೂಲ ವಿಲ್ಲದೆ ಹೈದರನು ಮರಾಟೆಯವರ ದಾರಿಯಲ್ಲಿದ್ದ ಕೆರೆಕಟ್ಟೆಗಳನ್ನು

ಒಡೆಸಿ, ಹುಲ್ಲುಗಾವಲುಗಳಿಗೆ ಬೆಂಕಿಯನ್ನಿಡಿಸಿ, ಬಾವಿಗಳಿಗೆ ವಿಷಹಾಕಿಸಿ ನಿವಾಸಿಗಳನ್ನೂ ದನಕರುಗಳನ್ನೂ ಬೇರೆ ಸ್ಥಳಗಳಿಗೆ ಸಾಗಿಸಿದನು. ಆದರೂ ಮರಾಟೆಯವರು ನುಗ್ಗಿಕೊಂಡು ಶಿರ್ಯದ ಮೇಲೆ ಹೊರಟು, ಅಲ್ಲಿಯ ಅಧಿಕಾರಿಗೆ ಬೇರೆ ಆಸೆಯನ್ನಿಟ್ಟು, ಶಿರ್ಯವನ್ನು ವಶಪಡಿಸಿಕೊಂಡರು. ಹೈದರನು ಉಪಾಯಗಾರನಾದ ರಾಯಭಾರಿಯನ್ನು ಕಳುಹಿಸಿ ಕೌಲು ಮಾಡಿಕೊಂಡನು. ೩೫ ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಹೈದರನು ಒಪ್ಪಿ, ಅರ್ಧ ಹಣವನ್ನು ಸಲ್ಲಿಸಿ, ಉಳಿದ ಅರ್ಧಕ್ಕೆ ಕೋಲಾರ ಜಿಲ್ಲೆಯನ್ನು ಒತ್ತೆಯಾಗಿಟ್ಟ ಮೇಲೆ ಮರಾಟೆಯವರು ಹಿಂತಿರುಗಿದರು.

ಮೊದಲನೆಯ ಇಂಗ್ಲಿಷ್ ಯುದ್ಧ

ನೈಜಾಮನೊಡನೆ ಬೇರೆ ಬಗೆಯ ಸಂಧಿಯನ್ನು ಹೈದರನು ನಡೆಸಿದನು. ನೈಜಾಮನಿಗೆ ಇಂಗ್ಲಿಷರಲ್ಲಿ ಅಸಮಾಧಾನವಿತ್ತು. ಅಲ್ಲದೆ ಮದರಾಸಿನ ಇಂಗ್ಲಿಷರು ಆರ್ಕಾಟು ನವಾಬ ಮಹಮ್ಮದಾಲಿಯನ್ನು ತಮ್ಮ ಕಯ್ಯಲ್ಲಿಟ್ಟುಕೊಂಡು, ತಂತ್ರದಿಂದ ತಂಜಾವೂರನ್ನು ವಶಪಡಿಸಿಕೊಂಡು ಬಾರಾಮಹಲ್ ಪ್ರಾಂತದ ಮೇಲೆ ಕಣ್ಣಿಟ್ಟಿದ್ದರು. ಹೈದರನು ನೈಜಾಮನನ್ನು ಇಂಗ್ಲೀಷರೊಡನೆ ಯುದ್ಧ ಮಾಡಲೊಪ್ಪಿಸಿ, ಅವನ ಸ್ನೇಹವನ್ನು ಪಡೆದನು. ಈ ಮಧ್ಯೆ ವೃದ್ಧನಾಗಿದ್ದ ಕರಾಚೂರಿ ನಂಜರಾಜಯ್ಯನು ಹೈದರನ ಅಧಿಕಾರವನ್ನು ಕೊನೆಗಾಣಿಸಲು ಮರಾಟೆಯವರೊಡನೆ ಸಂಧಾನ ಮಾಡುತ್ತಿದ್ದನು. ಅದನ್ನು ತಿಳಿದು ಹೈದರನು ಆತನ ಆಸ್ತಿಪಾಸ್ತಿಗಳನ್ನು ಕಿತ್ತುಕೊಂಡು, ಆತನನ್ನು ಸೆರೆಯಲ್ಲಿಡಿಸಿದನು.

ಮದರಾಸಿನ ಕೌಲು, ೧೭೬೭-೧೭೬೯

ಇಬ್ಬರ ಸೈನ್ಯಗಳೂ ಒಟ್ಟುಗೂಡಿ ಘಟ್ಟವನ್ನಿಳಿದು ಕರ್ನಲ್‌ಸ್ಮಿತ್ ಎಂಬ ಇಂಗ್ಲಿಷ್ ದಳಪತಿಯ ಸೇನೆಯನ್ನು ಚಂಗಮಾವು ಎಂಬೆಡೆಯಲ್ಲಿಯೂ ಪುನಃ ತಿರುವಣ್ಣಾಮಲೆ ಎಂಬೆಡೆಯಲ್ಲಿಯೂ ಪ್ರತಿಭಟಿಸಿದವು. ಇಂಗ್ಲಿಷರೇ ಎರಡು ಬಾರಿಯೂ ಗೆದ್ದರು. ಜಯಶಾಲಿಯಾಗಲು ಹೈದರನು ಸನ್ನಾಹ ಪಡುತ್ತಿರುವಲ್ಲಿ ಇಂಗ್ಲಿಷರು ಓರುಗಲ್ಲು ಕಡೆ ನೈಜಾಮನ ರಾಜ್ಯವನ್ನಾಕ್ರಮಿಸಿದರು. ನೈಜಾಮನು ಹೈದರನನ್ನು ಬಿಟ್ಟುಕೊಟ್ಟು, ಇಂಗ್ಲಿಷರೊಡನೆ ಒಪ್ಪಂದವನ್ನು ನಡೆಸಿಕೊಂಡನು. ಹೈದರನೂ ಸಂಧಿ ಪ್ರಯತ್ನ

ಮಾಡಿದನು ; ಒಡಗೂಡಲಿಲ್ಲ. ಈ ಸಂದರ್ಭದಲ್ಲಿ ಮಲೆನಾಡಿನಲ್ಲಿಯೂ ಮಲೆಯಾಳದಲ್ಲಿಯೂ ದಂಗೆಗಳೆದ್ದವು. ಹೈದರನು ಬೆಂಗಳೂರನ್ನು ಭದ್ರ ಪಡಿಸಿ, ಮಂಗಳೂರು, ಹೊನ್ನಾವಾರ, ಬಸವರಾಜ ದುರ್ಗಗಳನ್ನು ಹಿಡಿದು, ಬಿದರೂರಿಗೆ ಬಂದು ಅಲ್ಲಿಯ ನಿವಾಸಿಗಳನ್ನು ದಂಡಕ್ಕೆ ಗುರಿಮಾಡಿ, ಬೆಂಗಳೂರಿಗೆ ಹಿಂತಿರುಗಿದನು. ಆ ವೇಳೆಯಲ್ಲಿ ಇಂಗ್ಲಿಷರು ಶಾಲ್ಯ, ಕೊಯಿಮುತ್ತೂರುಗಳಲ್ಲಿಯೂ ಮುಳಬಾಗಿಲು, ಕೋಲಾರ, ಹೊಸೂರುಗಳಲ್ಲಿಯೂ ಗುತ್ತಿಯ ಮುರಾರಿರಾಯನ ಬೆಂಬಲದಿಂದ ಜಯಶಾಲಿಗಳಾಗುತ್ತಿದ್ದರು. ಹೈದರನು ತನ್ನ ಸಂಸಾರವನ್ನು ಸಾವನದುರ್ಗಕ್ಕೆ ಕಳುಹಿಸಿ, ಇಂಗ್ಲಿಷರನ್ನು ಎದುರಿಸುವಂತೆ ಒಂದು ಸೇನೆಯನ್ನು ಗೊತ್ತುಮಾಡಿ, ಬಾರಾಮಹಲ್ ಪ್ರಾಂತದಲ್ಲಿ ನುಗ್ಗಿ, ಈರೋಡು, ಕಾವೇರಿಪುರಗಳನ್ನು ಹಿಡಿದು, ಕಡಲೂರನ್ನು ತಲಪಿ, ತರುವಾಯ ಮರಾಟೆಯವರು ಪುನಃ ದಂಡೆತ್ತಿಬರುವರೆಂದು ತಿಳಿದು ಸೈನ್ಯದ ಒಂದು ಭಾಗವನ್ನು ರಾಜಧಾನಿಯ ರಕ್ಷಣೆಗೆ ಕಳುಹಿಸಿ, ತಾನು ಬಿರುಗಾಳಿಯ ವೇಗದಿಂದ ಸಂಚರಿಸುತ್ತ, ಮದರಾಸಿನ ಮುಂದೆಯೇ ರಭಸದಿಂದ ಶಿಬಿರವನ್ನು ನೆಡಿಸಿದನು. ಈ ಸೈನ್ಯ ಚಾಲನಕ್ಕೆ ಇಂಗ್ಲಿಷರು ಬೆರಗಾಗಿ ಹೆದರಿ ಅವನ ಹೇಳಿಕೆಯಂತೆ ಕೌಲಿಗೊಡಂಬಟ್ಟರು. ಎರಡು ಕಡೆಯವರೂ ಗೆದ್ದಿದ್ದ ಪ್ರದೇಶಗಳನ್ನೂ ಸೆರೆ ಹಿಡಿದಿದ್ದ ಯೋಧರನ್ನೂ ಹಿಂತಿರುಗಿ ಕೊಡಬೇಕೆಂತಲೂ, ಇನ್ನು ಮುಂದೆ ಶತ್ರುಗಳು ಆಕ್ರಮಿಸಿದಾಗ ಪರಸ್ಪರವಾಗಿ ಸಹಾಯ ಮಾಡಬೇಕೆಂತಲೂ ನಿರ್ಣಯವಾಯಿತು. ಇಂಗ್ಲಿಷರ ಸಹಾಯದಿಂದ ತಾನು ಭದ್ರನಾಗಿ ಮರಾಟೆಯವರ ತೊಂದರೆಯಿಂದ ಪಾರಾಗಬೇಕೆಂಬ ಆಸೆಯು ಹೈದರನಿಗಿದ್ದುದರಿಂದ ಇಂಗ್ಲಿಷರಿಗೆ ಹೆಚ್ಚು ನಷ್ಟವಾಗದಂತೆ ಕೌಲಿನ ಷರತ್ತುಗಳನ್ನು ನಡೆಸಿದನು. ಇದೇ ಮೊದಲ ಇಂಗ್ಲಿಷ'ರ ಯುದ್ಧ.

೧೭೭೧

ಇಂಗ್ಲಿಷರ ಯುದ್ಧವು ಮುಗಿದ ಕೂಡಲೆ ಹೈದರನು ಮರಾಟೆಯವರನ್ನು ಎದುರಿಸಲು ಸನ್ನದ್ಧನಾದನು. ನೈಜಾಮನೊಡನೆ ಸ್ನೇಹ ಕಟ್ಟಿದ್ದಾಗ ಕಡಪ, ಕರ್ನೂಲು ಪ್ರಾಂತಗಳು ಹೈದರನಿಗೆ ಸೇರತಕ್ಕುವೆಂದು ಗೊತ್ತಾಗಿತ್ತು. ಅದರಂತೆ ಹೈದರನು ಆ ಪ್ರಾಂತದಲ್ಲಿ ಸಂಚಾರಮಾಡಿ, ಅಲ್ಲಿಯ ಚಿಕ್ಕ ನವಾಬರಿಂದಲೂ, ಪುಟ್ಟ ಪಾಳೆಯಗಾರರಿಂದಲೂ ಪೊಗದಿ

ಯೆಂದು ಹಣವನ್ನು ವಸೂಲು ಮಾಡಿಕೊಂಡು, ಬಳ್ಳಾರಿಯನ್ನು ಮುತ್ತಿದನು. ಅಷ್ಟರಲ್ಲಿ ಮರಾಟೆಯವರು ಬಂದುಬಿಟ್ಟರು. ಹೈದರನು ಅವರನ್ನು ಪ್ರತಿಭಟಿಸಲಾರದೆ ಅವರಿಗೆ ಆಹಾರ ಸಾಮಗ್ರಿ ಸಿಕ್ಕದಂತೆ ತುಂಟ ಯುದ್ಧವನ್ನು ಮಾಡುತಲಿದ್ದು ಕಡೆಗೆ ಸಂಧಿ ಪ್ರಯತ್ನ ಮಾಡಿದನು. ದಂಡಿನ ಜತೆಯಲ್ಲಿ ಬಂದಿದ್ದ ಪೇಷ್ವೆ ಮಾಧವರಾಯನು ಒಂದು ಕೋಟಿ ರೂಪಾಯನ್ನು ಕೇಳಿದನು. ಹೈದರನಲ್ಲಿದ್ದುದು ಹನ್ನೆರಡೇ ಲಕ್ಷಗಳು. ಸಂಧಿ ನಡೆಯಲಿಲ್ಲ.

ಮರಾಟೆಯವರ ಆಗ್ರಹ

ಮರಾಟೆಯವರು ಆಗ್ರಹಗೊಳ್ಳಲು ಬೇಕಾದಷ್ಟು ಕಾರಣವಿತ್ತು. ಚೌಥಾಯದ ಅಧಿಕಾರವನ್ನು ೧೭೨೭ರಲ್ಲಿಯೇ ಪಡೆದಿದ್ದ ಅವರಿಗೆ ಕಾಲಕ್ಕೆ ಸರಿಯಾಗಿ ಚೌಥಾಯ ಸಲ್ಲುತ್ತಿರಲಿಲ್ಲ; ಮೊದಲು ಖಂಡೇರಾಯನೂ, ತರುವಾಯ ಕರಾಚೂರಿ ನಂಜರಾಜಯ್ಯನೂ ಅವರ ಸಹಾಯವನ್ನಪೇಕ್ಷಿಸಿದ್ದರು. ರಾಜನು ಮೂಲೆಯಲ್ಲಿ ಸೇರುವಂತಾದುದೇ ಅಲ್ಲದೆ, ಆ ಇಬ್ಬರೂ ಹೈದರನ ಹಿಂಸೆಗೊಳಗಾಗಿದ್ದರು. ಹಿಂದೂ ರಾಜ್ಯವಾಗಿದ್ದುದು ಮುಸಲ್ಮಾನ ರಾಜ್ಯವಾಗುತ್ತಿದ್ದುದು ಮರಾಟೆಯವರಿಗೆ ಸರಿಬೀಳಲಿಲ್ಲ. ಪಾಣಿಪಟ್ಟ ಯುದ್ಧದಿಂದಲೇ ಹೈದರನಿಗೆ ಅನುಕೂಲವಾಗಿತ್ತು. ಆ ಮಹಾಯುದ್ಧವಾದಮೇಲೆ ಮಹಾರಾಷ್ಟ್ರದಲ್ಲಿ ಪೇಷ್ವೆ ಮಾಧವರಾಯನಿಗೂ, ಚಿಕ್ಕಪ್ಪ ರಾಘೋಬನಿಗೂ ಮನಸ್ತಾಪ ಬೆಳೆದು, ಮೈಸೂರಿನ ಕಡೆ ಲಕ್ಷ್ಯಕೊಡಲು ಪೇಷ್ವೆಗೆ ವಿರಾಮವಿರಲಿಲ್ಲ. ೧೭೬೦ರ ವೇಳೆಗೆ ಮಾಧವರಾಯನು ಇತರ ಚಿಂತೆಗಳಿಂದ ಪಾರಾಗಿ ಹೈದರಾಲಿಯನ್ನು ಅಡಗಿಸಬೇಕೆಂದು ಸ್ವತಃ ದಂಡಿನೊಡನೆ ಹೊರಟಿದ್ದನು. ಚಿತ್ರದುರ್ಗದ ನಾಯಕನು ಮರಾಟೆಯವರಿಗೆ ಸಹಾಯಕನಾದನು. ಬಡಗಲಲ್ಲಿಯೂ ಮೂಡಲಲ್ಲಿಯೂ ಮರಾಟೆಯವರು ರಾಜ್ಯವನ್ನಾಕ್ರಮಿಸಿದರು. ಆ ಕಾಲಕ್ಕೆ ದೇಹಾಲಸ್ಯ ತೋರಲು ಮಾಧವರಾಯನು ಪುಣೆಗೆ ಹಿಂತಿರುಗಬೇಕಾಯಿತು. ಸುಸಮಯವೊದಗಿತೆಂದು ಹೈದರನು ಮರಾಟೆಯವರ ದಂಡನ್ನು ತಡೆಯಲು ಪ್ರಯತ್ನಿಸಿದನು. ಪ್ರಯತ್ನವು ಕೈಗೂಡಲಿಲ್ಲ. ಕಾಣದಂತೆ ಗೋಪ್ಯವಾಗಿ ಮೇಲುಕೋಟೆಯಬಳಿ ಹೊರಡುತ್ತಿದ್ದ ಹೈದರನ ದಳವನ್ನು ಮರಾಟೆಯವರ ಸೇನಾಪತಿ ತ್ರ್ಯಂಬಕರಾವ್ ಮಾಮಾಪೇಠೆಯು ಕಂಡು ಹಿಂಬಾಲಿಸಿ ಚಿನಕುರುಳಿಯೆಂಬೆಡೆ

ಯಲ್ಲಿ ಮೇಲೆ ಬಿದ್ದು (೧೭೭೧, ಮಾರ್ಚ್ ೫) ದಿಕ್ಕಾಪಾಲಾಗಿ ಚೆದರಿಸಿದನು. ಹೈದರನು ಕುದುರೆಯೇರಿ ರಾಜಧಾನಿಗೋಡಿದನು; ಟಿಪ್ಪುವು ವೇಷಾಂತರದಿಂದ ತಪ್ಪಿಸಿಕೊಂಡನು. ಮರಾಟೆಯವರು ಕೊಳ್ಳೆಯನ್ನು ಹಂಚಿಕೊಳ್ಳುವುದರಲ್ಲಿ ಹತ್ತು ದಿನಗಳನ್ನು ಕಳೆದು, ಶ್ರೀರಂಗಪಟ್ಟಣದ ಕಡೆ ಹೊರಟು ಮುತ್ತಿಗೆಗೆ ಸಿದ್ಧರಾದರು. ರಾಜಧಾನಿಯ ಸುತ್ತಲೂ ಸುತ್ತಿಕೊಂಡು ಮರಾಟೆಯವರು ಸುತ್ತಮುತ್ತಣ ದೇಶವನ್ನು ಹಾಳುಮಾಡಲು ಸೇನಾ ಭಾಗವನ್ನು ನಿಯಮಿಸಿಕೊಂಡರು. ದೇಶವು ಹಾಳಾಗುತ್ತಿತ್ತು. ಸೋಲು ಖಂಡಿತವಾಗಿತ್ತು. ಆ ಕಾರಣದಿಂದ ಹೈದರನು ಸಂಧಿಯನ್ನು ಬೇಡಿದನು. ಸಂಧಿ ಮಾಡಿ ಹೈದರನನ್ನುಳಿಯಗೊಡಲು ಮರಾಟೆಯವರಿಗಿಷ್ಟವಿರಲಿಲ್ಲ. ಆದರೆ ಅತ್ತ ಪೇಷ್ವೆ ಮಾಧವರಾಯನು ಮರಣೋನ್ಮುಖನಾಗಿದ್ದನೆಂಬ ಸಮಾಚಾರವನ್ನು ಕೇಳಿ ಪುಣೆಗೆ ಹೊರಡಲು ತವಕ ಪಡುತ್ತ ತ್ರ್ಯಂಬಕರಾಯನು ಸಂಧಿಗೊಡಂಬಟ್ಟನು (೧೭೭೨). ಹೈದರನು ತಕ್ಷಣವೇ ೧೫ ಲಕ್ಷ ರೂಪಾಯಿಗಳನ್ನೊಪ್ಪಿಸಿ, ಉಳಿದ ಇಪ್ಪತ್ತು ಲಕ್ಷಗಳಿಗೆ ಒತ್ತೆಯಾಗಿ ಕೋಲಾರ, ಹೊಸಕೋಟೆ, ದೊಡ್ಡಬಳ್ಳಾಪುರ, ಶಿರ್ಯ, ಮಧುಗಿರಿ, ಚನ್ನರಾಯದುರ್ಗ ಮತ್ತು ಗುರ್ರಂಕೊಂಡೆಗಳನ್ನು ಇಟ್ಟು, ಮರಾಟೆಯವರನ್ನು ಕಳುಹಿಸಿದನು. ಮರಾಟೆಯವರ ಈ ಆಕ್ರಮಣದಿಂದ ಹೈದರನಿಗೆ ತೇಜೋಭಂಗವಾಯಿತು. ಕೌಲಿನ ಪ್ರಕಾರ ತನ್ನ ಸಹಾಯಕ್ಕೆ ಬಾರದೆ ದ್ರೋಹಮಾಡಿದರೆಂದು ಇಂಗ್ಲಿಷರನ್ನು ಬಯ್ಯುತ್ತಾ ಹೈದರನು ತನ್ನ ದಳವನ್ನೂ, ಬಲವನ್ನೂ ವೃದ್ಧಿಪಡಿಸಿಕೊಳ್ಳಲು ಉದ್ಯುಕ್ತನಾದನು.

ಬಾರಾಭಾಯಿಗಳ ಏಳಿಗೆ, ೧೭೭೪–೧೭೭೫

ಶ್ರೀರಂಗಪಟ್ಟಣದೆದುರಿನಲ್ಲಿ ಮರಾಟೆಯವರಿದ್ದಾಗ ನಂಜರಾಜ ಒಡೆಯರು ರಹಸ್ಯವಾಗಿ ಅವರ ಸಹಾಯವನ್ನು ಕೇಳಿದ್ದರು. ಈ ಸಮಾಚಾರವು ಹೈದರನಿಗೆ ತಿಳಿಯಿತು. ಮರಾಟೆಯವರ ಗಂಡಾಂತರವು ತಪ್ಪಿದ ಕೂಡಲೆ ಹೈದರನು ರಾಜರನ್ನು ಗೋಪ್ಯವಾಗಿ ಕೊಲ್ಲಿಸಿ, ಅವರ ತಮ್ಮಂದಿರು ಬೆಟ್ಟದ ಚಾಮರಾಜ ಒಡೆಯರಿಗೆ ಪಟ್ಟ ಕಟ್ಟಿದನು. ತನಗೆ ವಿರೋಧಿಗಳೆಂದು ತೋರಿದ ಅಧಿಕಾರಿಗಳೆಲ್ಲರನ್ನೂ ಸುಲಿದು ನಿರ್ಬಂಧದಲ್ಲಿಡಿಸಿದನು. ಮುಂದಕ್ಕೆ ಹೈದರನ ಅದೃಷ್ಟದಿಂದ ಅವನಿಗೆ ಅನುಕೂಲವಾದ ಸಂಗತಿ

ಗಳೇ ಮಹಾರಾಷ್ಟ್ರದಲ್ಲಿ ನಡೆದವು. ೧೭೭೨ರಲ್ಲಿ ಮಾಧವರಾಯನು ಸತ್ತ ಬಳಿಕ ಪೇಷ್ವೆಯಾದ ಆತನ ತಮ್ಮ ನಾರಾಯಣರಾಯನು ೧೭೭೩ರಲ್ಲಿ ಅಪಮೃತ್ಯುವಿಗೆ ತುತ್ತಾದನು. ಅನಂತರ ರಾಘೋಬನೇ ಅಧಿಕಾರವನ್ನು ವಹಿಸಿದಾಗ್ಯೂ, ಅವನೇ ಆ ಕೊಲೆಗೆ ಕಾರಣನೆಂದು ಅನೇಕರು ತಿಳಿದಿದ್ದರಾದ್ದರಿಂದ ಅವನಿಗೆ ವಿರೋಧಿಗಳು ಹೆಚ್ಚಿದರು. ನಾರಾಯಣರಾಯನ ಹೆಂಡತಿಗೆ ಗಂಡು ಮಗು ಹುಟ್ಟುತ್ತಲೇ ಆ ಮಗುವಿಗೆ ಪೇಷ್ವೆಯ ಪದವಿಯನ್ನು ಕೊಡಿಸಲು ಬದ್ಧಕಂಕಣರಾಗಿ ಹನ್ನೆರಡು ಜನ ಮುಖ್ಯಸ್ಥರು ಬಾರಾಭಾಯಿಗಳೆನಿಸಿ, ಕ್ರಮೇಣ ಅಧಿಕಾರವೆಲ್ಲವನ್ನೂ ಪಡೆದರು. ಆಗ ರಾಘೋಬನು ಹೈದರನ ಸ್ನೇಹಕ್ಕಾಸೆಪಟ್ಟನು. ನಷ್ಟವಾಗಿದ್ದ ಪ್ರಾಂತಗಳನ್ನು ಪುನಃ ಪಡೆಯಲು ಹೊಂಚು ಹಾಕುತ್ತಿದ್ದ ಹೈದರನು ೧೭೭೪ರಲ್ಲಿ ರಾಘೋಬನೊಡನೆ ಒಪ್ಪಂದವನ್ನು ನಡೆಸಿದನು. ರಾಘೋಬನು ಕೃಷ್ಣಾನದಿಯೇ ಮೈಸೂರಿನ ಮೇರೆಯೆಂದೊಪ್ಪಿದ್ದಲ್ಲದೆ ಚೌಥಾಯವನ್ನು ಆರು ಲಕ್ಷಗಳಿಗಿಳಿಸಿದನು; ರಾಘೋಬನೇ ಪೇಷ್ವೆಯಾಗುವಂತೆ ಹೈದರನು ಬೆಂಬಲ ಕೊಡಲೊಪ್ಪಿದನು. ಮಹಾರಾಷ್ಟ್ರದಲ್ಲಿ ಬಾರಾಭಾಯಿಗಳ ಪಂಗಡಕ್ಕೂ ರಾಘೋಬನಿಗೂ ಜಗಳ ನಡೆದು, ರಾಘೋಬನು ಭ್ರಷ್ಟನಾಗಿ, ಮುಂಬಯಿಯ ಇಂಗ್ಲಿಷರ ಆಶ್ರಯವನ್ನು ಕೇಳಿಕೊಂಡಾಗ, ಹೈದರನು ಸಮಯ ಸಿಕ್ಕಿತೆಂದು ಕಳೆದು ಹೋಗಿದ್ದ ಭಾಗವನ್ನು ಆಕ್ರಮಿಸಿದನು. ಈ ಕಾಲದಲ್ಲಿಯೇ ಮಲೆಯಾಳವನ್ನು ಅಡಗಿಸಲು ಹೊರಟು ಹೈದರನು ಕೊಡಗಿನಲ್ಲಿ ದಂಡೆತ್ತಿ, ಅಲ್ಲಿಯ ಪಟ್ಟದ ಜಗಳದಲ್ಲಿ ಕೈಹಾಕಿ, ರಾಜನಾಗಿದ್ದ ದೇವರಾಜನನ್ನು ಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಕಳುಹಿಸಿ, ಮಡಿಕೇರಿಯಲ್ಲಿ ಕೋಟೆಯನ್ನು ಕಟ್ಟಿ, ಕೊಡಗಿನ ಜನರನ್ನು ಕಠೋರಶಾಸನಕ್ಕೆ ಗುರಿಮಾಡಿದನು. ೧೭೭೩–೪ರಲ್ಲಿ ಉತ್ತರದಲ್ಲಿ ಟಿಪ್ಪುವೂ, ಕೊಡಗು ಮಲೆಯಾಳಗಳಲ್ಲಿ ಹೈದರನೂ ಜಯಶಾಲಿಗಳಾಗಿ ರಾಜ್ಯವನ್ನು ಪೂರ್ವ ಸ್ಥಿತಿಗೆ ತಂದರು. ಹೈದರನು ಅಲ್ಲಲ್ಲಿದ್ದ ಪಾಳೆಯಗಾರರ ರಾಜ್ಯಗಳಲ್ಲಿ ಪಿತೂರಿಗಳನ್ನೆಬ್ಬಿಸಲು ತಕ್ಕ ಮುತ್ಸದ್ದಿಗಳನ್ನು ನಿಯಮಿಸಿದನು. ಈ ಸ್ಥಿತಿಯಲ್ಲಿ ಬಳ್ಳಾರಿಯ ಪಾಳೆಯಗಾರನು ಬಸಲತ್‌ಜಂಗನ ವಿರೋಧಕ್ಕೊಳಗಾಗಿ ಹೈದರನ ಸಹಾಯವನ್ನು ಕೇಳಿದನು. ಹೈದರನು ಬಸಲತ್ತನನ್ನು ಸೋಲಿಸಿ ತರುವಾಯ ತಾನೇ ಬಳ್ಳಾರಿಗೆ ಮುತ್ತಿಗೆಯನ್ನು ಹಾಕಿ ವಶಪಡಿಸಿಕೊಂಡನು.

ಇದೇ ಸಮಯದಲ್ಲಿಯೇ ಮುರಾರಿರಾಯನ ಮೇಲೆಯೂ ಯುದ್ಧ ಮಾಡಿ ಗುತ್ತಿಯ ಕೋಟೆಯನ್ನು ಸಾಧಿಸಿ, ಮುರಾರಿರಾಯನನ್ನು ಸೆರೆಹಿಡಿದು ಕಬ್ಬಾಳದುರ್ಗದಲ್ಲಿ ಇಡಿಸಿದನು. ಬಳ್ಳಾರಿ, ಗುತ್ತಿಗಳು ಈ ರೀತಿಯಲ್ಲಿ ಸ್ವಾಧೀನವಾದವು.

೧೭೭೬ರಲ್ಲಿ ಬೆಟ್ಟದ ಚಾಮರಾಜ ಒಡೆಯರವರು ತೀರಿಕೊಂಡರು. ಆಗ ಹೈದರನು ಅರಸು ಮಕ್ಕಳೆಲ್ಲರನ್ನೂ ಕರೆಸಿ ವಿನೋದಮಯವಾದ ಪರೀಕ್ಷೆಯೊಂದರಿಂದ ಗೊತ್ತು ಮಾಡಿ ಖಾಸಾ ಚಾಮರಾಜ ಒಡೆಯರವರಿಗೆ ಪಟ್ಟಗಟ್ಟಿದನು. ಸರ್ವ ಸ್ವತಂತ್ರನಾಗಿದ್ದಾಗ್ಗೂ ಹೈದರನು ಒಡೆಯರೊಬ್ಬರನ್ನು ಪಟ್ಟದಲ್ಲಿರಿಸಿ ನವರಾತ್ರಿಯ ಉತ್ಸವವನ್ನು ನಡೆಸುವ ನಟನೆಯನ್ನು ಬಿಡಲಿಲ್ಲ.

ಪುನಃ ಯುದ್ಧ, ೧೭೭೭–೧೭೭೯

ಬಾರಾಭಾಯಿಗಳ ಪ್ರಾಬಲ್ಯದಿಂದ ದೇಶವನ್ನು ಬಿಟ್ಟೋಡಿದ ರಾಘೋಬನು ಮುಂಬಯಿಯಲ್ಲಿ ಇಂಗ್ಲಿಷರ ಸಹಾಯವನ್ನು ಕೇಳಿ, ಅವರೊಡನೆ ೧೭೭೫ರಲ್ಲಿ ಸೂರತ್ತಿನ ಕೌಲನ್ನು ನಡೆಸಿದ್ದನು. ಹೈದರನು ರಾಘೋಬನ ಪಕ್ಷವನ್ನೂ, ನೈಜಾಮನು ಬಾರಾಭಾಯಿಗಳ ಪಕ್ಷವನ್ನೂ ಒಪ್ಪಿಕೊಂಡಿದ್ದುದರಿಂದ ಬಾರಾಭಾಯಿಗಳ ಕಡೆಯವರೂ ನೈಜಾಮನೂ ಒಟ್ಟಿಗೆ ಹೈದರನ ಮೇಲೆ ದಂಡನ್ನು ಕಳುಹಿದರು. ನೈಜಾಮನ ದಳಪತಿಗೆ ಲಂಚಕೊಟ್ಟು ಹೈದರನು ಅವನ ಸನ್ನಾಹವನ್ನು ಹಾಳುಮಾಡಿದನು. ಇದನ್ನು ಕಂಡು ಹಿಮ್ಮೆಟ್ಟುತ್ತಿದ್ದ ಮರಾಟೆಯವರನ್ನು ಹೈದರನು ಹಿಂಬಾಲಿಸಿ ಸೋಲಿಸಿದನು. ಮರಾಟೆಯವರ ಸೇನಾಪತಿ ಪರಶುರಾಮ ಭಾವೂ ಪಟವರ್ಧನನು ಹೆಚ್ಚು ಸೈನ್ಯವನ್ನು ನಿರೀಕ್ಷಿಸುತಲಿದ್ದನು. ಹೈದರನು ಆ ಸಮಯದಲ್ಲಿ ತನ್ನ ವಿರೋಧಿಗಳಾಗಿದ್ದ ಕಡಪದ ನವಾಬನನ್ನೂ, ಚಿತ್ರದುರ್ಗದ ಪಾಳೆಯಗಾರನನ್ನೂ ಅಡಗಿಸಲು ಸಿದ್ಧನಾದನು. ಅಷ್ಟರಲ್ಲಿ ಮರಾಟೆಯವರ ಮತ್ತೊಂದು ಸೇನೆಯು ಬಂದಿತು. ಹೈದರನು ಯುಕ್ತಿಯಿಂದ ಮರಾಟಾ ದಳಪತಿಗಳಲ್ಲಿ ಜಗಳವನ್ನೆಬ್ಬಿಸಿ ಅವರ ಐಕಮತ್ಯವನ್ನು ನಾಶಮಾಡಿದನು. ಮರಾಟೆಯವರು ಕೃಷ್ಣಾ ನದಿಯ ಉತ್ತರಕ್ಕೆ ಹೊರಟರು. ಅವರ ತೊಂದರೆ ತಪ್ಪಿದ ಕೂಡಲೆ ಹೈದರನು ಚಿತ್ರದುರ್ಗದ ನಾಯಕನನ್ನು ಅಡಗಿಸಲು ಸನ್ನದ್ಧನಾಗಿ, ಚಿತ್ರದುರ್ಗಕ್ಕೆ ಮುತ್ತಿಗೆ ಹಾಕಿದನು. ದುರ್ಗ

ದಲ್ಲಿದ್ದ ಮುಸಲ್ಮಾನರನ್ನು ಪ್ರೇರಿಸಿ ಅವರ ಸಹಾಯದಿಂದ ದುರ್ಗವನ್ನು ವಶಪಡಿಸಿಕೊಂಡನು. ತರುವಾಯ ಹೈದರನು ಕಡಪದಕಡೆಗೆ ತಿರುಗಿ, ಅದನ್ನು ಹಿಡಿದನು. ಅಲ್ಲಿಯ ನವಾಬನು ಸಿದ್ಧವಟಕ್ಕೋಡಲು ಅಲ್ಲಿಗೂ ಹೋಗಿ ಸಿವಟದ್ಧವನ್ನು ಹಿಡಿದನು.

ಹೈದರನ ಅತ್ಯುನ್ನತಿ

ಈ ಸಮಯದಲ್ಲಿಯೇ ಹೈದರನ ಬಲವು ಅತ್ಯುನ್ನತಿಯಲ್ಲಿದ್ದುದು. ಕೃಷ್ಣಾನದಿಯೇ ಉತ್ತರದ ಮೇರೆಯಾಗಿತ್ತು ; ಪಶ್ಚಿಮ ತೀರವೆಲ್ಲವೂ ಕೈಸೇರಿ ಕೆಲವು ಯುದ್ಧದ ಹಡಗುಗಳೂ ಸಿದ್ಧವಾಗಿದ್ದವು. ಘಟ್ಟದ ಕೆಳಗಿದ್ದ ಬಾರಾಮಹಲ್ ಪ್ರಾಂತವೂ ಹೈದರನಿಗೆ ಸೇರಿತ್ತು. ಚೋಳಮಂಡಲದಲ್ಲಿ ಹೈದರಾಲಿಯೆಂದರೆ ಎಲ್ಲರೂ ಭಯಪಡುತ್ತಿದ್ದರು. ರಾಜ್ಯ ವಿಸ್ತಾರವಲ್ಲದೆ ಹೈದರನು ಸವಣೂರು ನವಾಬನೊಡನೆ ವಿವಾಹ ಸಂಬಂಧವನ್ನೂ ನಡೆಸಿದ್ದನು. ಹೈದರನ ಈ ಪ್ರಾಬಲ್ಯಕ್ಕೆ ಮರಾಟೆಯವರ ಅಂತಃಕಲಹವೇ ಮುಖ್ಯ ಆಧಾರವಾಗಿತ್ತು. ಸೂರತ್ತಿನ ಕೌಲಿನ ತರುವಾಯ ಹಾಗೂ ಹೀಗೂ ನಡೆದು, ಕಡೆಗೆ ಮರಾಟೆಯವರಿಗೂ ಇಂಗ್ಲಿಷರಿಗೂ ಯುದ್ಧವು ಮೊದಲಾಯಿತು. ಆ ಸಂದರ್ಭದಲ್ಲಿ ಬಾರಾಭಾಯಿಗಳಿಗೆ ಮುಖಂಡನಾಗಿದ್ದ ನಾನಾಫಡನವೀಸನು ಇಂಗ್ಲಿಷರೊಡನೆ ಯುದ್ಧದಲ್ಲಿ ಭಾಗಿಯಾಗಿ ಸ್ನೇಹಿತನಾಗಬೇಕೆಂದು ಹೈದರನಿಗೆ ಹೇಳಿಕಳುಹಿದನು. ರಾಘೋಬನು ಪೇಷ್ವೆಯಾಗುವುದು ಅಸಂಭವವಾಗಿದ್ದುದಲ್ಲದೆ ಹೈದರನಿಗೆ ಇಂಗ್ಲಿಷರ ಮೇಲೆ ಆಗ್ರಹವಿರಲು ಬಲವಾದ ಕಾರಣಗಳಿದ್ದವು.

ಇಂಗ್ಲಿಷರೊಡನೆ ಮನಸ್ತಾಪ

೧೭೬೭ರಲ್ಲಿ ನಡೆದ ಕರಾರಿನಂತೆ ಮದರಾಸಿನ ಇಂಗ್ಲಿಷರು ನಡೆದುಕೊಳ್ಳಲಿಲ್ಲ. ಪೇಷ್ವೆ ಮಾಧವರಾಯನು ೧೭೭೧–೭೨ರಲ್ಲಿ ದಂಡೆತ್ತಿಬಂದಾಗ್ಗ ಇಂಗ್ಲಿಷರು ಸಹಾಯಕ್ಕೆ ಬರಲಿಲ್ಲ ; ಹೈದರನು ಕೇಳಿದಾಗಲೂ ಅಸಡ್ಡೆಯಿಂದಿದ್ದುಬಿಟ್ಟಿದ್ದರು. ೧೭೭೮ರಲ್ಲಿ ಇಂಗ್ಲಿಷರು ಹೈದರನನ್ನು ರೇಗಿಸಿದ ಮತ್ತೆರಡು ಕೆಲಸಗಳನ್ನು ಮಾಡಿದರು. ಪಶ್ಚಿಮತೀರದಲ್ಲಿ ಮಾಹೆಯೆಂಬ ರೇವುಪಟ್ಟಣವು ಹೈದರನ ರಾಜ್ಯದಲ್ಲಿ ಫ್ರೆಂಚರಿಗೆ ಸೇರಿತ್ತು. ಮದ್ದುಗುಂಡು ಮುಂತಾದ ಯುದ್ಧಸಾಮಗ್ರಿಯು ಆ ಮಾರ್ಗವಾಗಿ ಹೈದರನಿಗೆ

ಬರುತ್ತಿತ್ತು. ಮರಾಟೆಯವರೊಡನೆ ಯುದ್ಧವೊದಗಿದಾಗಲೇ ಫ್ರೆಂಚ ರೊಡನೆಯೂ ಯುದ್ಧಸಂಭವವಾಗಿರಲು ಇಂಗ್ಲಿಷರು ಮಾಹೆಯನ್ನು ಹಿಡಿಯುವ ಯೋಚನೆಯಲ್ಲಿದ್ದರು. ಮಾಹೆಯು ತನಗೆ ಸೇರತಕ್ಕದ್ದೆಂದೂ, ಅದರಮೇಲೆ ಕೈಮಾಡಲಾಗದೆಂದೂ ಹೈದರನು ಸಕಾಲದಲ್ಲಿ ಇಂಗ್ಲಿಷರಿಗೆ ಎಚ್ಚರಿಕೆ ಕೊಟ್ಟನು. ಇಂಗ್ಲಿಷರು ಅದನ್ನು ಗಮನಿಸಲಿಲ್ಲ. ೧೭೭೯ರಲ್ಲಿ ಮಾಹೆಯನ್ನು ಅವರು ಹಿಡಿದರು. ಅಲ್ಲದೆ ಹೈದರನ ಸಮ್ಮತಿಯಿಲ್ಲದೆ ಹೈದರನ ರಾಜ್ಯದಲ್ಲಿ ತಮ್ಮ ದಂಡನ್ನು ಆದವೇಣಿಗಾಗಿ ಕಳುಹಿದರು. ಕಡೆಯವರೆಗೂ ಸ್ನೇಹವನ್ನೇ ರಕ್ಷಿಸಿಕೊಳ್ಳಲು ಯತ್ನಿಸಿ, ಆ ಯತ್ನವು ಸಾಗದಿರಲು ಹೈದರನು ೧೭೮೦ರಲ್ಲಿ ಇಂಗ್ಲಿಷರೊಡನೆ ಯುದ್ಧಕ್ಕಣಿಯಾದನು. ಒಂದೇ ಕಾಲದಲ್ಲಿ ಇಂಗ್ಲಿಷರಿಗೆ ಮರಾಟೆಯವರು, ಹೈದರಾಲಿ ಮತ್ತು ಫ್ರೆಂಚರು ಇದಿರಾಗಿ ಕಷ್ಟವಾಯಿತು. ಆದರೆ ಒಂದೇಕಾಲದಲ್ಲಿ ಇಂಗ್ಲಿಷರನು ವಿರೋಧಿಸಿದಾಗ್ಯೂ ಹೈದರಾಲಿ ಮತ್ತು ಮರಾಟೆಯವರು ಒಟ್ಟುಸೇರಿ ಯುದ್ಧಮಾಡಲಿಲ್ಲ; ಬೇರೆಬೇರೆಯಾಗಿ ಕಾದಾಡಿದರು. ಇದು ಇಂಗ್ಲಿಷರಿಗೆ ಅನುಕೂಲವಾಯಿತು.

ಎರಡನೆ ಇಂಗ್ಲಿಷ್ ಯುದ್ಧ—ಮರಣ.

೧೭೮೦ರಲ್ಲಿಯೇ ಮುಂದಾದವನಿಗೆ ಜಯವೆಂದು ನಂಬಿದ್ದ ಹೈದರನು ಸೇನಾಸಮೇತನಾಗಿ ಘಟ್ಟವನ್ನಿಳಿದನು. ಮದರಾಸಿನವರೆಗೂ ಇದ್ದ ಸೀಮೆಯಲ್ಲಿ ಚಂಡಮಾರುತದಂತೆ ನುಗ್ಗಿ, ಎಲ್ಲೆಲ್ಲಿಯೂ ಕೊಳೆ ಹೊಡೆದು ದೇಶವನ್ನು ಹಾಳುಮಾಡಿದನು. ಪಾಲಲೂರ ಬಳಿ ಒಂದು ಇಂಗ್ಲಿಷ್ ದಂಡು ಕರ್ನಲ್ ಬೈಲಿ ಕೈಲಿದ್ದುದು ಹೈದರನ ಕೈಗೆ ಸಿಕ್ಕಿ ಧ್ವಂಸವಾಯಿತು. ಆರ್ಕಾಟು ವಶವಾಯಿತು. ಆಗ ಫ್ರೆಂಚರ ಸೇನೆಯು ಸ್ವಲ್ಪಕಾಲದಲ್ಲಿಯೇ ಬರುವುದೆಂದು ಹೈದರನು ಕಡಲೂರಿನ ಕಡೆಗೆ ತಿರುಗಿ, ಮಾರ್ಗದಲ್ಲಿ ತಂಜಾವೂರು ಪ್ರಾಂತವನ್ನು ಸೂರೆಗೊಂಡನು. ಹೀಗಿರಲು, ಇಂಗ್ಲಿಷರು ಪಶ್ಚಿಮತೀರದಲ್ಲಿ ಹೈದರನು ಕಟ್ಟಿಕೊಂಡಿದ್ದ ನೌಕಾಪಡೆಯನ್ನು ನಾಶಮಾಡಿದರು. ಫ್ರೆಂಚರು ಸಕಾಲಕ್ಕೆ ಬರುವುದಾಗಲಿಲ್ಲ. ಆಗ ಹೈದರನು ಉತ್ತರಕ್ಕೆ ಹೊರಟು ಪೋರ್ಟೋನೋವೊ ಎಂಬಲ್ಲಿ ಸರ್ ಐರ್ ಕೂಟೆಂಬ ಇಂಗ್ಲಿಷ್ ದಳಪತಿಯನ್ನೆದುರಿಸಿದನು. ಇಂಗ್ಲಿಷರೇ

ಜಯಶಾಲಿಗಳಾದರು. ಪಾಲಿಲೂರಿನಲ್ಲಿ ಜಯವಾದೀತೆಂಬ ಭರವಸೆಯಿಂದ ಹೈದರನು ಅಲ್ಲಿ ಯುದ್ಧವನ್ನು ಹೂಡಿದನು. ಅಲ್ಲಿಯೂ ಇಂಗ್ಲಿಷರಿಗೇ ಜಯವು ಲಭಿಸಿತು. ಪುನಃ ಷೋಲಿಂಗರ ಕಣಿವೆಯ ಬಳಿ ಇಂಗ್ಲಿಷರು ಯುದ್ಧಮಾಡಿ ಹೈದರನ ಸೈನ್ಯವನ್ನು ಚೆದರಿಸಿದರು. ಆರಣಿಯಲ್ಲಿಯೂ ಹೈದರನು ಮತ್ತೊಮ್ಮೆ ಸೋತನು. ಆ ವೇಳೆಗೆ ಮಾರ್ಗದಲ್ಲಿ ಎರಡು ಮೂರುಸಲ ಸೋತು ದಳವನ್ನು ಕಳೆದುಕೊಂಡು, ಫ್ರೆಂಚರು ಕಡಲೂರಿಗೆ ಸಮಯಮೀರಿದಮೇಲೆ ಬಂದರು. ಟಿಪ್ಪುವು ತಂಜಾವೂರ ಬಳಿ ಬ್ರೈತ್ವೈಟೆಂಬ ಇಂಗ್ಲಿಷ ಸರದಾರನ ಬಲವನ್ನು ಸೋಲಿಸಿದ್ದವನು ೧೭೮೨ರಲ್ಲಿ ಪಣಿಯಾನಿ ಎಂಬೆಡೆಯಲ್ಲಿ ಮತ್ತೊಂದು ಇಂಗ್ಲಿಷ್ ದಳಕ್ಕೆ ಸೋತನು. ಹೀಗಿರಲು ಆರ್ಕಾಟಿನ ಬಳಿ ಶಿಬಿರದಲ್ಲಿದ್ದ ಹೈದರನಿಗೆ ಬೆನ್ನುಫಣಿಯೆದ್ದು, ದಿನೇದಿನೇ ಪ್ರಬಲವಾಯಿತು; ಡಿಸೆಂಬರ್ ೭ ನೆಯ ತಾರೀಖಿನ ದಿನ ಹೈದರಾಲಿ ತೀರಿ ಹೋದನು. ಪೂರ್ಣಯ್ಯ, ಕೃಷ್ಣರಾವ್ ಮುಂತಾದ ಮಂತ್ರಿಗಳು ಈ ಸಂಗತಿಯನ್ನು ಗುಟ್ಟಾಗಿಟ್ಟು, ಸಮಾಚಾರವನ್ನು ಪಶ್ಚಿಮತೀರದಲ್ಲಿದ್ದ ಟಿಪ್ಪುವಿಗೆ ಮಾತ್ರ ಹೇಳಿ ಕಳುಹಿಸಿದರು.

ಇಂಗ್ಲಿಷರಿಗೆ ಆಗ ಕಷ್ಟಕಾಲವಾಗಿತ್ತು. ಆದರೂ ಅವರು ಶಿಸ್ತಿನ ಬಲದಿಂದ ಹೈದರನನ್ನು ಪದೇಪದೇ ಸೋಲಿಸಿದರು. ಅವರ ಸರ್ವಾಧಿಕಾರಿಯಾಗಿದ್ದ ವಾರನ್‌ಹೇಸ್ಟಿಂಗ್ಸನು ಜಾಣ್ಮೆಯಿಂದ ಮರಾಟೆಯವರೊಡನೆ ಯುದ್ಧವನ್ನು ೧೭೮೨ರಲ್ಲಿಯೇ ಕೊನೆಗಾಣಿಸಿದ್ದನು. ಹೈದರನು ಸತ್ತದ್ದು ಅವರಿಗೆ ಸಮಾಧಾನವನ್ನುಂಟುಮಾಡಿತು. ಏಕೆಂದರೆ ಮೊದಲನೆ ಯುದ್ಧದಲ್ಲಿಯೇ ಇಂಗ್ಲಿಷರಿಗೆ ಹೈದರನೆಂತಹ ದಳಪತಿಯೆಂಬುದು ಅನುಭವವಾಗಿತ್ತು.

ಸ್ವಭಾವ.

ಹೈದರನು ಅಕ್ಷರಸ್ಥನಾಗಿರಲಿಲ್ಲ; ಸುಶಿಕ್ಷಿತನೂ ಆಗಿರಲಿಲ್ಲ. ಅವನ ಸಂಭಾಷಣೆಯಲ್ಲಿ ಗಾಂಭೀರ್ಯವಿಲ್ಲ; ಯುಕ್ತಿಯಿತ್ತು. ಪಿತೂರಿಗಳನ್ನು ಎತ್ತಿಕಟ್ಟುವುದರಲ್ಲಿಯೂ ಭೇದಿಸುವುದರಲ್ಲಿಯೂ ಅವನು ಅಸಮಾನನಾಗಿದ್ದನು. ಯುದ್ಧ ವಿದ್ಯೆಯಲ್ಲಿಯೇ ಅವನ ಪ್ರಾವೀಣ್ಯವೆಲ್ಲವೂ ತೋರಿಕೊಂಡಿತು. ಅವಶ್ಯವಾದಾಗ ಕ್ರೂರಿಯಾದರೂ ಹೈದರನು ಸ್ವಭಾವತಃ ಕ್ರೂರಿಯಾಗಿರಲಿಲ್ಲ. ಪರೇಂಗಿತಜ್ಞನೂ ನ್ಯಾಯಪರನೂ ಆಗಿರುತ್ತಿ

ದ್ದನು. ಮುಸಲ್ಮಾನನಾಗಿದ್ದು ಅನ್ಯಮತದ್ವೇಷಿಯಾಗಿರಲಿಲ್ಲ; ಕೊಡಗು ಮಲೆಯಾಳಗಳ ಆಕ್ರಮಣಗಳಲ್ಲಿಯೂ ಕೆಲವು ಇತರ ಸಂದರ್ಭಗಳಲ್ಲಿಯೂ ಹೈದರನು ಬಲಾತ್ಕಾರದಿಂದ ಜನರನ್ನು ಇಸ್ಲಾಮಿಾ ಮತಕ್ಕೆ ಸೇರಿಸಿ ದ್ದುಂಟು; ಅದಕ್ಕೆ ನಿಜವಾದ ಕಾರಣವು ರಾಜಕೀಯವಾಗಿದ್ದಿತೇ ವಿನಾ ಮತದ್ವೇಷವಲ್ಲ. ರಾಜ್ಯವನ್ನಪಹರಿಸಿದ್ದರಲ್ಲಿ ಹಿಂದೆ ದಳವಾಯಿಗಳು ಹಾಕಿದ್ದ ಮಾರ್ಗವನ್ನೇ ಹೈದರನು ಅನುಸರಿಸಿದನು. ರಾಜನನ್ನು ಕೊನೆಗಾಣಿಸದೆ ಅರಮನೆಯಲ್ಲಿಟ್ಟು ರಾಜನ ಹೆಸರನ್ನುಳಿಸಿ ಕಡೆತನಕ ಉಪಾಯಶಾಲಿಯಾಗಿಯೇ ಇದ್ದನು. ತಾನು ಸರ್ವಾಧಿಕಾರಿಯೆಂದೇ ಹೇಳಿಸಿಕೊಳ್ಳುತ್ತಿದ್ದನು.

ಹೈದರನ ಸ್ಥಾನ

ಹೈದರನಿಗೆ ಎಲ್ಲೆಲ್ಲಿಯೂ ಶತ್ರುಗಳೇ. ಆದರೆ ಹೈದರನು ಮರಾಟೆ ಯವರನ್ನು ಪರಮ ಶತ್ರುಗಳೆಂದು ಭಾವಿಸಿದ್ದನು. ಮರಾಟೆಯವರಿಗೆ ಬೇರೆ ತೊಂದರೆಗಳಿಲ್ಲದಿದ್ದರೆ ಹೈದರನಿಗೆ ಅವಕಾಶವಿರುತ್ತಿರಲಿಲ್ಲವೆನ್ನವುದು ನಿಜ. ಒಂದೆರಡು ಶತಮಾನಗಳ ಹಿಂದೆ ಹೈದರನು ಹುಟ್ಟಿದ್ದರೆ ಬಂಗಾಳ, ಅಯೋಧ್ಯೆಯ ನವಾಬರಂತೆ ಒಬ್ಬ ನವಾಬನಾಗುತ್ತಿದ್ದನು. ಮೈಸೂರು ರಾಜ್ಯವೇನೋ ಅವನ ಪ್ರತಾಪಸಾಹಸಗಳಿಂದಲೇ ವಿಸ್ತಾರವನ್ನು ಪಡೆ ಯಿತು. ಆದರೆ ಜಯಾಪಜಯಗಳು ಸ್ಥಿರವಾಗಿರಲಿಲ್ಲ. ಅತ್ತಕಡೆ ಮರಾಟೆ ಯವರು, ಇತ್ತಕಡೆ ಇಂಗ್ಲಿಷರು, ಮೇಲೆ ನೈಜಾಮು, ಒಳಗೂ ಹೊರಗೂ ದಂಗೆಯೇಳಲು ಸಮಯ ನಿರೀಕ್ಷಣೆಯಲ್ಲಿದ್ದ ಚಿಕ್ಕಪುಟ್ಟ ಅರಸರು ಇದ್ದಾಗ ಹೈದರನ ರಾಜ್ಯವು ಸ್ಥಿರವಾಗಿ ಹೇಗಿದ್ದೀತು? ರಾಜ್ಯವನ್ನು ಕಟ್ಟಿದರೂ ಹೈದರನು ರಾಜ್ಯನಿರ್ಮಾಣಕರಲ್ಲಿ ಸೇರಿದವನಲ್ಲ. ಶಿವಾಜಿಯಂತೆ ಹೈದ ರನೂ ತುಂಟಯುದ್ಧದಲ್ಲಿ ಚತುರ, ಸಾಹಸಿ, ಯುಕ್ತಿವಂತ. ಆದರೆ ಶಿವಾಜಿಯ ಉಚ್ಚಧ್ಯೇಯವಾಗಲಿ ಗಂಭೀರಗುಣಗಳಾಗಲಿ ಹೈದರನಲ್ಲಿರ ಲಿಲ್ಲ. ಚುರುಕು ಚಟುವಟಿಕೆಗಳಲ್ಲಿ ಇತರರನ್ನು ಮಿಾರಿಸಿ ಅನಾಯ ಕತೆಯ ಕಾಲದಲ್ಲಿ ಸ್ವಶಕ್ತಿಯಿಂದ ಉನ್ನತ ಪದವಿಗೇರಿ ರಣಕುಶಲನೆ ನಿಸಿ ಇಂಗ್ಲಿಷರು ಗೌರವಿಸುವಷ್ಟು ಬಲಶಾಲಿಯಾಗಿದ್ದನೆಂಬುದೇ ಹೈದ ರನ ಕೀರ್ತಿ.

ಟಿಪ್ಪುಸುಲ್ತಾನ್, ೧೭೮೨–೧೭೯೯

ಚಿಕ್ಕಪಿತೂರಿ

ಹೈದರಾಲಿಗೆ ಟಿಪ್ಪು ಮತ್ತು ಅಬ್ದುಲ್‌ಕರೀಂ ಎಂಬಿಬ್ಬರು ಕುವರರಿದ್ದರು. ಹೈದರನ ಸಾವಿನ ಸುದ್ದಿಯನ್ನು ಮುಖ್ಯಾಧಿಕಾರಿಗಳು ಗೋಪ್ಯವಾಗಿಟ್ಟಿದ್ದರೂ ಕೂಡ ಒಬ್ಬ ಅಧಿಕಾರಿಯು ಮಾತ್ರ ಸ್ವಾರ್ಥದಿಂದ ಎರಡನೆ ಮಗ ಕರೀಂಖಾನನ ಪರವಾಗಿ ಪಿತೂರಿಯನ್ನು ಮಾಡಿದನು. ಆರಂಭದಲ್ಲಿಯೇ ಪಿತೂರಿಯು ಭಂಗವಾಯಿತು. ತಂದೆಯು ಸತ್ತ ಸಮಾಚಾರವನ್ನು ಕೇಳಿದ ತಕ್ಷಣವೇ ಟಿಪ್ಪು ವೇಗವಾಗಿ ರಾಜಧಾನಿಗೆ ಪ್ರಯಾಣಮಾಡಿ, ಸೈನ್ಯವನ್ನೂ ಖಜಾನೆಯನ್ನೂ ವಶಪಡಿಸಿಕೊಂಡು, ಪಿತೂರಿಯನ್ನು ಸುಲಭವಾಗಿ ಕೊನೆಗಾಣಿಸಿದನು.

ಮಂಗಳೂರು ಕೌಲು

ಇಂಗ್ಲಿಷರ ಯುದ್ಧವಿನ್ನೂ ಮುಗಿದಿರಲಿಲ್ಲ. ಟಿಪ್ಪುವು ಪಶ್ಚಿಮ ತೀರವನ್ನು ಬಿಟ್ಟು ಬಂದಕೂಡಲೆ ಇಂಗ್ಲಿಷರು ಹೊನ್ನಾವಾರ, ಮಂಗಳೂರುಗಳನ್ನು ಹಿಡಿದು, ಬಿದರೂರು ಪ್ರಾಂತದಮೇಲೆ ಮ್ಯಾಥೂಸನೆಂಬ ದಳಪತಿಯನ್ನು ಕಳುಹಿಸಿದ್ದರು. ಟಿಪ್ಪುವು ಆದಷ್ಟು ಬೇಗನೆ ಪಶ್ಚಿಮಕ್ಕೆ ಹೊರಟು ಕವಲೆದುರ್ಗ, ಹೈದರಘಡ ಮತ್ತು ಅನಂತಪುರಗಳನ್ನು ವಶಪಡಿಸಿಕೊಂಡನು. ಮ್ಯಾಥೂಸನು ಬಿದರೂರನ್ನು ಆಕ್ರಮಿಸಿದ್ದನು. ಟಿಪ್ಪುವು ಬಿದರೂರನ್ನು ಮುತ್ತಿ, ಮ್ಯಾಥೂಸ್ ಮುಂತಾದವರನ್ನು ಸೆರೆಹಿಡಿದು, ಮಂಗಳೂರಿಗೆ ಹೊರಟು ಮುತ್ತಿಗೆಯನ್ನು ಹಾಕಿದನು. ಆ ವೇಳೆಗೆ ಇಂಗ್ಲಿಷರೂ ಫ್ರೆಂಚರೂ ಯುದ್ಧವನ್ನು ನಿಲ್ಲಿಸಿಕೊಂಡಿದ್ದರು. ಆದ್ದರಿಂದ ಫ್ರೆಂಚರು ಟಿಪ್ಪುವಿಗೆ ನೆರವಾಗದೆ ತಟಸ್ಥರಾದರು. ಇಂಗ್ಲಿಷರು ಒಪ್ಪಂದದ ಪ್ರಯತ್ನವನ್ನು ಮಾಡಿದರು. ಮಂಗಳೂರು ವಶವಾಗುವವರೆಗೂ ಟಿಪ್ಪುವು ಕಾಲವನ್ನು ತಳ್ಳುತ್ತಲಿದ್ದು ಆ ತೀರಪಟ್ಟಣವು ಸ್ವಾಧೀನವಾದ ಮೇಲೆ ಇಂಗ್ಲಿಷರೊಡನೆ ಒಪ್ಪಂದವನ್ನು ಮಾಡಿಕೊಂಡನು. ಯುದ್ಧದಲ್ಲಿ ಆಕ್ರಮಿಸಿದ್ದ ಕ್ಷೇತ್ರಗಳನ್ನೂ ಸೆರೆಹಿಡಿದಿದ್ದ ಸೈನಿಕರನ್ನೂ ಉಭಯರೂ ಬಿಟ್ಟುಕೊಟ್ಟು, ಯುದ್ಧದ ಪೂರ್ವಸ್ಥಿತಿಯನ್ನು ರಕ್ಷಿಸಿಕೊಳ್ಳತಕ್ಕದೆಂದು ಆ ಮಂಗಳೂರು ಕೌಲಿನಲ್ಲಿ ಗೊತ್ತಾಯಿತು. ಎರಡನೆ ಇಂಗ್ಲಿಷ ಯುದ್ಧವು ಹೀಗೆ ಕೊನೆಗಂಡಿತು.



ಶ್ರೀ ಟಿಪ್ಪು ಸುಲ್ತಾನರವರು

ಒಡೆಯರ ಪ್ರಯತ್ನ

ಈ ಯುದ್ಧಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಒಡೆಯರ ಮನೆತನದವರು ಇಂಗ್ಲಿಷರ ಸ್ನೇಹಕ್ಕಾಗಿ ಪ್ರಯತ್ನಿಸಿದ್ದರು. ೧೭೬೦ರಿಂದ ಒಡೆಯರಿಗೆ ಅಧಿಕಾರವೇ ಇರಲಿಲ್ಲ; ನೆಪ ಮಾತ್ರಕ್ಕೆ ರಾಜನಿದ್ದನು. ಹೈದರನು ಇಂಗ್ಲಿಷರೊಡನೆ ಯುದ್ಧವನ್ನುಪಕ್ರಮಿಸಿದಾಗ ರಾಣಿವಾಸದ ಲಕ್ಷ್ಮಮ್ಮಣ್ಣಿಯವರು ಮದರಾಸಿನ ಇಂಗ್ಲಿಷರಿಂದ ಸಹಾಯವನ್ನು ಪಡೆಯುವ ಪ್ರಯತ್ನಮಾಡಿದ್ದರು. ಇಂಗ್ಲಿಷಿನವರೂ ಹೈದರಾಲಿಯ ರಾಜ್ಯದಲ್ಲಿ ವೈರಿಗಳನ್ನೆಬ್ಬಿಸಲು ಸಿದ್ಧರಾಗಿದ್ದರು. ತಿರುಮಲರಾವ್ ಮತ್ತು ನಾರಾಯಣರಾವ್ ಎಂಬ ಸೋದರರು ಮೈಸೂರು ರಾಣಿಯ ಪರವಾಗಿ ಇಂಗ್ಲಿಷರೊಡನೆ ಕರಾರುಗಳನ್ನು ನಡೆಸಿದ್ದರು. ಹೈದರನು ಸತ್ತಬಳಿಕ ರಾಜಧಾನಿಯಲ್ಲಿ ಅಂಚೆ ಶಾಮಯ್ಯನೆಂಬ ಅಧಿಕಾರಿಯು ಒಡೆಯರ ಪರವಾಗಿ ಒಳಸಂಚನ್ನು ನಡೆಸುತಲಿದ್ದನು. ಸಮಾಚಾರವು ಟಿಪ್ಪುವಿಗೆ ತಿಳಿಯಿತು. ಮಂಗಳೂರಿನಿಂದ ಬಂದಕೂಡಲೇ ಟಿಪ್ಪುವು ಅಂಚೆ ಶಾಮಯ್ಯ ಮುಂತಾದ ಪಿತೂರಿಗಾರರನ್ನು ಪಂಜರಗಳಲ್ಲಿಡಿಸಿ, ಒಡೆಯರ ವಂಶದವರನ್ನು ಹೆಚ್ಚಾದ ನಿರ್ಬಂಧದಲ್ಲಿರಿಸಿದನು.

ಟಿಪ್ಪುವಿನ ದರ್ಪ; ಮರಾಟಾಯುದ್ಧ

ಇದಾದಮೇಲೆ ಟಿಪ್ಪುವು ಬಾದಷಹನೆಂಬ ಬಿರುದನ್ನು ಧರಿಸಿದನು. ಯುಕ್ತಿವಂತನಾದ ಹೈದರನು ತಾನು ರಾಜರ ಸೇವಕನೆಂಬ ನಟನೆಯನ್ನು ಬಿಟ್ಟಿರಲಿಲ್ಲ; ಟಿಪ್ಪುವು ಒಡೆಯರನ್ನು ಮೂಲೆಯಲ್ಲಿರಿಸಿ ರಾಜ್ಯವನ್ನು ಖೊದಾದಾದ್ ಸರ್ಕಾರವೆಂದು ಕರೆದು, ತಾನೇ ಸುಲ್ತಾನನೆಂದೂ ಸ್ವತಂತ್ರನಾದ ಪ್ರಭುವೆಂದೂ ಪ್ರಕಟಿಸಿದನು. ಕೊಡಗಿನಲ್ಲಿ ಚಿಕ್ಕದಾದ ಒಂದು ದಂಗೆಯನ್ನಡಗಿಸಿದ ಮೇಲೆ ಟಿಪ್ಪುವು ಬ್ರಾಹ್ಮಣರಿಗಿದ್ದ ಮಾನ್ಯಗಳನ್ನು ಕಿತ್ತುಕೊಂಡು, ಇಸ್ಲಾಮಿಾ ನೀತಿಯಂತೆ ರಾಜ್ಯಭಾರಕ್ಕೆ ಮೊದಲಿಟ್ಟನು. ಬಿಜಾಪುರವನ್ನು ತನಗೆ ಬಿಟ್ಟುಕೊಡಬೇಕೆಂದು ಕೇಳಿ ೧೭೮೫ರಲ್ಲಿ ನೈಜಾಮನನ್ನು ಕೆಣಕಿದನು. ನೈಜಾಮನೂ ಮರಾಟೆಯವರೂ ಒಂದಾದರು. ಟಿಪ್ಪುವು ಮರಾಟೆಯವರ ರಾಜ್ಯವನ್ನು ತಾನೇ ಮುಂದಾಗಿ ಆಕ್ರಮಿಸಿ, ನರಗುಂದ ಕಿತ್ತೂರುಗಳನ್ನು ಕಿತ್ತುಕೊಂಡನು. ನೈಜಾಮನ

ಮತ್ತು ಮರಾಟೆಯವರ ಸೇನೆಗಳು ಅಣಿಯಾಗಿ ಬಾದಾಮಿಯನ್ನು ಹಿಡಿದು, ಆದವೇಣಿಯನ್ನು ಮುತ್ತಿದವು. ಟಿಪ್ಪುವು ಅಲ್ಲಿಗೆ ಬಂದ ಕಾಲಕ್ಕೆ ಹಗೆಗಳು ಸವಣೂರಿಗೆ ಹೊರಟಿದ್ದರು. ಟಿಪ್ಪುವು ಸವಣೂ ರಿಗೆ ಹೊರಟು ಅಲ್ಲಿ ಯುದ್ಧಮಾಡಿ ಸೋತು, ೧೭೮೭ರಲ್ಲಿ ಒಪ್ಪಂದ ಮಾಡಿಕೊಂಡನು. ಟಿಪ್ಪುವು ೪೫ ಲಕ್ಷ ರೂಪಾಯಿಗಳನ್ನು ಸಲ್ಲಿಸಿ ಬಾದಾಮಿ, ಆದವೇಣಿ, ಕತ್ತೂರು, ನರಗುಂದಗಳನ್ನು ಬಿಟ್ಟುಕೊಡತಕ್ಕ ದೆಂದು ಗೊತ್ತಾಯಿತು.

ಟಿಪ್ಪು ಧೈರ್ಯಶಾಲಿ ; ಯುದ್ಧದಲ್ಲಿ ಯಾವಾಗಲೂ ಮುಂದಾಳು ; ಸಾಹಸಿ. ಆದರೆ ತಂದೆಯಂತೆ ಯುಕ್ತಿವಂತನಲ್ಲ. ಹೈದರನ ನಿದಾನ, ದಾಕ್ಷಿಣ್ಯ ಮತ್ತು ದೂರಾಲೋಚನೆಗಳು ಮಗನಿಗಿರಲಿಲ್ಲ. ಟಿಪ್ಪುವು ರಾಜವಂಶವನ್ನು ನಿರ್ಬಂಧದಲ್ಲಿಟ್ಟು ಬಾದಷಹನೆಂಬ ಬಿರುದನ್ನು ಧರಿಸಿದ್ದು ಮರಾಟೆಯವರನ್ನೂ ನೈಸಾಮನನ್ನೂ ರೇಗಿಸಿತು. ಹೆಮ್ಮೆಯಿಂದ ಟಿಪ್ಪು ಅವರನ್ನು ಲೆಕ್ಕಿಸಲಿಲ್ಲ. ಓದುಬರಹಗಳನ್ನು ಕಲಿತು ಶಿಕ್ಷಿತನಾಗಿದ್ದರೂ ಟಿಪ್ಪು 'ಜ್ಞಾನಲವದುರ್ವಿದಗ್ಧ'ನಾಗಿದ್ದನು. ಇಸ್ಲಾಮಿಾ ಮತದಲ್ಲಿ ಅವನಿಗಿದ್ದ ಅತಿಭಕ್ತಿಯು ಆಗಾಗ್ಗೆ ವಿಪರೀತದಲ್ಲಿ ಪರಿಣಮಿಸುತ್ತಿತ್ತು. ಈ ರೀತಿಯಲ್ಲಿ ಟಿಪ್ಪುವು ವರ್ಷೇವರ್ಷೇ ಹೆಚ್ಚುಹೆಚ್ಚಾದ ವೈರವನ್ನು ಕಟ್ಟಿಕೊಂಡನು.

ಮಲೆಯಾಳದಲ್ಲಿ ಪ್ರವರ್ತನೆ

೧೭೮೮ರಲ್ಲಿ ಟಿಪ್ಪುವು ಕೋಳಿಕೋಡು, ಕೊಯಿಮುತ್ತೂರು, ದಿಂಡು ಗಲ್ಲು ಪ್ರಾಂತಗಳಲ್ಲಿ ಸಂಚರಿಸಿ, ತಾನೇ ಪೈಗಂಬರನೆಂದೂ ಮತಸ್ಥಾಪಕ ನೆಂದೂ ಸಾರಿದನು. ಆ ವೇಳೆಯಲ್ಲಿ ಕೊಡಗಿನಲ್ಲಿಯೂ ಮಲೆಯಾಳದ ಲ್ಲಿಯೂ ಜನರು ದಂಗೆಯೆದ್ದರು. ಸುಲ್ತಾನನು ಆ ಪ್ರಾಂತಗಳಲ್ಲಿ ಸೇನೆಯನ್ನು ಹೊರಡಿಸಿ, ದಂಗೆಯನ್ನಡಗಿಸಿದ್ದಲ್ಲದೆ ಅಲ್ಲಿಯ ನಿವಾಸಿಗ ಳನ್ನು ಶಿಕ್ಷಿಸಿ ಮಲೆಯಾಳ ದೇಶವನ್ನು ವಶಪಡಿಸಿಕೊಳ್ಳಲು ಕಣ್ಣಾನೂರಿನ ಬೀಬಿಯ ಮಗಳನ್ನು ತನ್ನ ಮಗನೊಬ್ಬನಿಗೆ ಮದುವೆಮಾಡಿಸಿದನು. ಆಗ ತಾವಿಬ್ಬರೇ ಉಳಿದಿದ್ದ ಮುಸಲ್ಮಾನ್ ಪ್ರಭುಗಳೆಂದೂ, ಇಬ್ಬರೂ ಸ್ನೇಹಕಟ್ಟ ಬೇಕೆಂದೂ ನೈಸಾಮನು ರಾಯಭಾರವನ್ನು ಕಳುಹಿಸಿದನು. ಟಿಪ್ಪುವು ಮುಂಚಿತವಾಗಿ ವಿವಾಹ ಸಂಬಂಧಗಳು ನಡೆಯಬೇಕೆನ್ನಲು ನೈಸಾಮನು

ಒಪ್ಪದಾದನು. ಅಂದಿನಿಂದ ಟಿಪ್ಪುವು ನೈಜ಼ಾಮನನ್ನೂ ಆತನ ವಂಶವನ್ನೂ ಹಳಿಯುತ್ತಲಿದ್ದು ತುರ್ಕಿಯ ಸುಲ್ತಾನನಿಗೂ ಫ್ರಾನ್ಸಿನ ದೊರೆಗೂ ರಾಯಭಾರಗಳನ್ನು ಕಳುಹಿಸಿದನು.

ತಿರುವಾಂಕೋಡಿನ ಜಗಳ

ಮುಂದಿನ ವರ್ಷವೇ ಈ ಸ್ಥಿತಿ ಬದಲಾಯಿತು. ಹೈದರಾಲಿ ಟಿಪ್ಪು ಸುಲ್ತಾನರಿಬ್ಬರಿಗೂ ತಿರುವಾಂಕೋಡನ್ನು ಗೆಲ್ಲುವ ಆಸೆಯಿತ್ತು. ಮಲೆಯಾಳದ ಯುದ್ಧಗಳಲ್ಲಿ ಕೊಚ್ಚಿಯ ರಾಜನು ಪೊಗವಿಕೊಡಲೊಪ್ಪಿದ್ದನು. ೧೭೮೯ರಲ್ಲಿ ತಿರುವಾಂಕೋಡಿನ ರಾಜನು ತನ್ನ ಉತ್ತರದಗಡಿಯನ್ನು ಭದ್ರಪಡಿಸಲು ಯತ್ನಿಸಿದನು. ಸುಲ್ತಾನನು ಆಕ್ಷೇಪಿಸಿ ವಿರೋಧಿಸಿದನು. ಸೈನ್ಯದೊಡನೆ ಅಲ್ಲಿಗೆ ಹೊರಟು, ತಿರುವಾಂಕೋಡಿನವರೊಡನೆ ಕಾದಾಡಿ, ಮೊದಲು ಪರಾಜಿತನಾಗಿ ತರುವಾಯ ಹೆಚ್ಚು ಸೈನ್ಯವನ್ನು ಕರೆಸಿಕೊಂಡು ಟಿಪ್ಪುವು ೧೭೯೦ರಲ್ಲಿ ಅನಂತಶಯನವನ್ನು ಮುತ್ತಿ ವಶಪಡಿಸಿಕೊಂಡನು. ಈ ಸಂದರ್ಭದಲ್ಲಿಯೇ ಇಂಗ್ಲಿಷರೊಡನೆ ಯುದ್ಧವೊದಗಿತು.

ಇಂಗ್ಲಿಷರ ವಿರೋಧ

ಫ್ರಾನ್ಸಿನ ದೊರೆಗೆ ರಾಯಭಾರವನ್ನು ಕಳುಹಿಸಿದ್ದು ಇಂಗ್ಲಿಷರಿಗೆ ಸರಿಬೀಳಲಿಲ್ಲ. ಫ್ರಾನ್ಸಿನ ಜನರಿಗೆ ಅಥವಾ ಫ್ರೆಂಚರಿಗೆ ಅವಕಾಶವಿಲ್ಲದಂತೆ ಎಸಗಬೇಕೆಂದಿದ್ದ ಇಂಗ್ಲಿಷರಿಗೆ ಬಾರಾಮಹಲ್ ಪ್ರಾಂತಗಳೂ ಬೇಕೆನ್ನಿಸಿತ್ತು. ದಿನೇ ದಿನೇ ಪ್ರಬಲನಾಗುತ್ತಿದ್ದ ಟಿಪ್ಪುವನ್ನು ಕಂಡು ಇಂಗ್ಲಿಷರು ಮುಂದೆ ಈತನು ಫ್ರೆಂಚರಿಗೆ ಆಶ್ರಯ ಕೊಟ್ಟಾನೆಂಬ ಶಂಕೆಯಲ್ಲಿದ್ದರು. ಮರಾಟೆಯವರಿಗೆ ಆಸ್ಪದವಿದ್ದಿದ್ದರೆ ಟಿಪ್ಪುವಿನ ಅಧಿಕಾರವನ್ನು ಕೊನೆಗಾಣಿಸುತ್ತಿದ್ದರು ; ಒಳಜಗಳದಲ್ಲಿಯೇ ಅವರ ಸಾಮರ್ಥ್ಯವು ವ್ಯರ್ಥವಾಗುತ್ತಿತ್ತು. ನೈಜ಼ಾಮನಿಗೆ ಟಿಪ್ಪುವಿನಮೇಲೆ ಆಗ್ರಹವಿತ್ತು. ಟಿಪ್ಪುವು ಅನಂತಶಯನವನ್ನು ಹಿಡಿದುದು ಇಂಗ್ಲಿಷರಿಗೆ ಸಹಿಸಲಿಲ್ಲ. ಆದ್ದರಿಂದ ೧೭೯೦ರಲ್ಲಿ ಇಂಗ್ಲಿಷರು ಮರಾಟೆಯವರೊಡನೆಯೂ ನೈಜ಼ಾಮನೊಡನೆಯೂ ಒಪ್ಪಂದ ಮಾಡಿಕೊಂಡು ಟಿಪ್ಪುವಿನೊಡನೆ ಯುದ್ಧಮಾಡಲು ಸನ್ನದ್ಧರಾದರು.

ಮೂರನೆ ಇಂಗ್ಲಿಷ ಯುದ್ಧ—ಶ್ರೀರಂಗಪಟ್ಟಣದ ಕೌಲು (೧೭೯೨)

ಶತ್ರುಸೈನ್ಯಗಳು ಒಟ್ಟುಗೂಡುವುದಕ್ಕೆ ಮೊದಲೇ ಟಿಪ್ಪುವು ದಕ್ಷಿಣದಿಕ್ಕಿನಲ್ಲಿ ಈರೋಡು, ಧಾರಾಪುರಗಳನ್ನು ಹಿಡಿದು, ತಿರುಚಿನಾಪಳ್ಳಿಗೆ ಹೊರಟು ಶ್ರೀರಂಗವನ್ನು ಮುತ್ತಿದನು. ಇವನೊಡನೆ ಯುದ್ಧಮಾಡಲು ಇಂಗ್ಲಿಷರ ಸರ್ವಾಧಿಕಾರಿಯಾಗಿದ್ದ ಲಾರ್ಡ್ ಕಾರನ್ವಾಲೀಸನೇ ಮದರಾಸಿಗೆ ಬಂದು, ಸನ್ನಾಹಗಳನ್ನು ನಡೆಸಿ, ಟಿಪ್ಪುವಿನ ರಾಜ್ಯವನ್ನು ಆಕ್ರಮಿಸುವಂತೆ ಏರ್ಪಡಿಸಿದನು. ಮರಾಟೆಯವರ ದಳವು ವಾಯವ್ಯದಿಂದಲೂ, ನೈಜಾಮನ ದಂಡು ಉತ್ತರದಿಂದಲೂ ಬಂದು ಇಂಗ್ಲಿಷರನ್ನು ಬೆಂಗಳೂರ ಬಳಿ ಸೇರಿಕೊಳ್ಳುವಂತೆ ಗೊತ್ತಾಯಿತು. ಕಾರನ್ವಾಲೀಸನೇ ಸ್ವತಃ ಹೊರಟು ಟಿಪ್ಪುವಿಗೆದುರಾಗದಂತೆ ಸಂಚರಿಸಿ, ಘಟ್ಟವನ್ನು ಹತ್ತಿ, ೧೭೯೧ರಲ್ಲಿ ಬೆಂಗಳೂರು ಕೋಟೆಯನ್ನು ಹಿಡಿದನು. ಟಿಪ್ಪುವು ಶ್ರೀರಂಗಪಟ್ಟಣಕ್ಕೆ ಹೊರಟು ಮುತ್ತಿಗೆಗೆ ಸಿದ್ಧನಾಗುತ್ತ, ದ್ರೋಹಿಗಳೆಂದು ತೋರಿಬಂದವರೆಲ್ಲರನ್ನೂ ಕ್ರೂರಶಿಕ್ಷೆಗೆ ಗುರಿಮಾಡಿದನು. ಬೆಂಗಳೂರನ್ನು ಹಿಡಿದ ಬಳಿಕ ಕಾರನ್ವಾಲೀಸನು ಶ್ರೀರಂಗಪಟ್ಟಣದ ಕಡೆ ಹೊರಟು, ಕನ್ನಂಬಾಡಿಬಳಿ ಕಾವೇರಿಯನ್ನು ದಾಟುವ ಯೋಚನೆ ಮಾಡಿದನು. ಸಮಯಕ್ಕೆ ಸರಿಯಾಗಿ ಮರಾಟೆಯವರಾಗಲಿ ನೈಜಾಮನಾಗಲಿ ಬರಲಿಲ್ಲ; ಸೈನ್ಯಕ್ಕೆ ಆಹಾರ ಸಿಕ್ಕುವುದೇ ಕಷ್ಟವಾಗಿತ್ತು. ಏಕಂದರೆ ಟಿಪ್ಪುವು ದೇಶವೆಲ್ಲವನ್ನೂ ಹಾಳುಗೆಡವಿದ್ದನು. ಆದ್ದರಿಂದ ಕಾರನ್ವಾಲೀಸನು ಬೆಂಗಳೂರಿಗೆ ಹಿಂತಿರುಗಿದನು. ಮರಾಟೆಯವರು ಬಂದಕೂಡಲೆ ಕಾರನ್ವಾಲೀಸನು ಶ್ರೀರಂಗಪಟ್ಟಣಕ್ಕೆ ಪ್ರಯಾಣಮಾಡಿ ಅದನ್ನು ಮುತ್ತಿದನು. ಟಿಪ್ಪುವಿಗೆ ಬಹಳ ಕಷ್ಟವಾಯಿತು. ಮರಾಟೆಯವರು ಧಾರ್ವಾಡವನ್ನು ಹಿಡಿದು, ತುಂಗಭದ್ರಾ ಪ್ರಾಂತವೆಲ್ಲವನ್ನೂ ಕೊಳ್ಳೆಹೊಡೆದು ಬಂದಿದ್ದರು. ನೈಜಾಮನ ದಳದವರು ಕೊಪ್ಪಳ, ಬಹಾದೂರ್ಬಂದರ್, ಗಂಜಿಕೋಟೆ ಮೊದಲಾದ ಪ್ರಾಂತಗಳನ್ನು ಸಾಧಿಸಿದ್ದರು. ಮೂಡಲಲ್ಲಿ ಹೊಸೂರು, ನಂದಿದುರ್ಗ, ಸಾವನದುರ್ಗ, ಹುತ್ರಿದುರ್ಗ, ರಾಮಗಿರಿ, ಹುಲಿಯೂರು ದುರ್ಗಗಳು ಇಂಗ್ಲಿಷರ ಪಾಲಾಗಿದ್ದವು. ಟಿಪ್ಪುವು ಸಂಧಿಪ್ರಯತ್ನಮಾಡಿದನು. ಶತ್ರುಗಳು ಸ್ವಲ್ಪಕ್ಕೊಪ್ಪಲಿಲ್ಲ. ಕಾರನ್ವಾಲೀಸನು ಏಕಾಗ್ರತೆಯಿಂದ ಮುತ್ತಿಗೆಯನ್ನು ಮುಂದುವರಿಸಿದನು. ಕಡೆಗೆ ಟಿಪ್ಪುವು



ಟಿಪ್ಪು ಸುಲ್ತಾನರವರ ಮಕ್ಕಳನ್ನು ಒಪ್ಪಿಸಿದುದು

ಇಂಗ್ಲಿಷರು ಕೇಳಿದುದಕ್ಕೆ ಒಪ್ಪಿಕೊಂಡು: ಶ್ರೀರಂಗಪಟ್ಟಣದ ಕೌಲೆಂದು ಹೆಸರಾದ ಒಪ್ಪಂದಕ್ಕೆ ಒಪ್ಪಿಕೊಂಡನು. ಅದರ ಷರತ್ತುಗಳ ಪ್ರಕಾರ ಸುಲ್ತಾನನು ಸೆರೆಯಲ್ಲಿದ್ದ ಇಂಗ್ಲಿಷರನ್ನು ಬಿಡುಗಡೆ ಮಾಡಿ, ತನ್ನ ರಾಜ್ಯದಲ್ಲಿ ಅರ್ಧಭಾಗವನ್ನು ಕೊಟ್ಟುಬಿಡಲೊಪ್ಪಿ, ಯುದ್ಧದ ವೆಚ್ಚಕ್ಕಾಗಿ ಮೂರು ಕೋಟಿ ಮೂವತ್ತುಲಕ್ಷ ರೂಪಾಯಿಗಳನ್ನು ಕೊಡಲು ಒಡಂಬಟ್ಟನು. ಅರ್ಧ ಹಣವನ್ನು ತಕ್ಷಣವೇ ಕೊಡಲಾಯಿತು ; ಉಳಿದ ಅರ್ಧವು ತೀರುವವರೆಗೂ ಸುಲ್ತಾನನು ತನ್ನ ಇಬ್ಬರು ಮಕ್ಕಳನ್ನು ಒತ್ತೆಯಾಗಿಡುವುದಕ್ಕೂ ಒಪ್ಪಿಕೊಂಡನು. ಬಿಟ್ಟುಕೊಟ್ಟ ಅರ್ಧರಾಜ್ಯದಲ್ಲಿ ಇಂಗ್ಲಿಷರು ಮಲೆಯಾಳ, ಕೊಡಗು, ಬಾರಾಮಹಲ್ ಮತ್ತು ದಿಂಡುಗಲ್ಲು ಪ್ರಾಂತಗಳನ್ನು ತೆಗೆದುಕೊಂಡರು ; ಮರಾಟೆಯವರು ತುಂಗಭದ್ರೆಯೇ ತಮ್ಮ ಮೇರೆಯಾಗುವಂತೆ ವಾಯುವ್ಯ ಭಾಗಗಳನ್ನೂ, ನೈಜಾಮನು ತುಂಗಭದ್ರೆಗೆ ಉತ್ತರದಲ್ಲಿ ಹಿಂದೆ ತನಗೆ ಸೇರಿದ್ದ ಪ್ರಾಂತವನ್ನು ಕಡಪ ಜಿಲ್ಲೆಯನ್ನೂ ಪಡೆದರು.

ವೀರಸಂಕಲ್ಪ

ಈ ಯುದ್ಧದಿಂದ ಸುಲ್ತಾನನಿಗೆ ರಾಜ್ಯನಷ್ಟ, ಧನನಷ್ಟಗಳಲ್ಲದೆ ತೇಜೋವಧೆಯೂ ಆಗಿಹೋಯಿತು. ದುಃಖವೂ ಆಕ್ರೋಶವೂ ತೋರಿ, ಟಿಪ್ಪುವು ಮುಂದೆ ತನ್ನ ಹಗೆಗಳನ್ನು ನಾಶಗೊಳಿಸುವ ಭೀಷಣ ಸಂಕಲ್ಪವನ್ನು ಮಾಡಿದನು. ಒತ್ತೆಯಾಗಿದ್ದ ಮಕ್ಕಳು ಹಿಂತಿರುಗಿ ಬರುವವರೆಗೂ ಸುಲ್ತಾನನು ಸುಪ್ಪತ್ತಿಗೆಯನ್ನೂ ಸುಖವನ್ನೂ ತೊರೆದನು. ಹಗೆಗಳ ಬೆನ್ನು ಕಂಡಕೂಡಲೆ ಉಳಿದ ಹಣವನ್ನು ಕೊಟ್ಟು ತೀರಿಸಲು ಎಲ್ಲ ಪ್ರಜೆಯನ್ನೂ ದಂಡಕ್ಕೆ ಗುರಿಮಾಡಿ, ಎರಡು ವರ್ಷಗಳಲ್ಲಿಯೇ ಆ ಹೊರೆಯನ್ನು ಕಳಚಿಕೊಂಡು ಮಕ್ಕಳನ್ನು ಹಿಂತಿರುಗಿ ಪಡೆದನು.

ರಾಜ್ಯಸುಧಾರಣೆ

ಆ ಮೇಲೆ ಸುಲ್ತಾನನು ತನ್ನ ರಾಜ್ಯವನ್ನು ಸುವ್ಯವಸ್ಥೆಗೆ ತರಬೇಕೆಂದು ಅನೇಕ ಏರ್ಪಾಟುಗಳನ್ನು ಯೋಚಿಸಿದನು. ಸೈನ್ಯ, ನಾವೆ, ವಾಣಿಜ್ಯ, ನಾಣ್ಯ, ನ್ಯಾಯತೀರ್ಮಾನ, ಕಂದಾಚಾರ, ಸಾಮಾಜಿಕ ನೀತಿ ಮುಂತಾದ ಎಲ್ಲ ವಿಚಾರಗಳಲ್ಲಿಯೂ ಸುಲ್ತಾನನು ಬದಲಾವಣೆಗಳನ್ನು ನಡೆ

ಸುವ ಉದ್ದೇಶ ತೋರಿದನು. ವಾರ, ತಿಂಗಳು, ಸಂವತ್ಸರಗಳ ಹೆಸರುಗಳನ್ನೂ ಅಳತೆ ತೂಕಗಳನ್ನೂ ಬದಲಾಯಿಸಿದನು. ರಾಜಧಾನಿಯ ಕೋಟೆಯನ್ನು ಭದ್ರಗೊಳಿಸುವುದಕ್ಕೂ, ನೌಕಾಬಲವನ್ನು ನಿರ್ಮಿಸುವುದಕ್ಕೂ ಸಿದ್ಧನಾದನು. ಈ ಸಂದರ್ಭದಲ್ಲಿಯೇ ಟಿಪ್ಪುವು ಕನ್ನಂಬಾಡಿಯಲ್ಲಿ ಕಾವೇರಿಗೆ ಅಣೆಕಟ್ಟನ್ನು ಕಟ್ಟುವ ಯೋಚನೆ ಮಾಡಿದ್ದು; ಮತ್ತು ಮರಾಠೆಯವರು ಶೃಂಗೇರಿಯನ್ನು ಲೂಟಿಮಾಡಿದ್ದಕ್ಕಾಗಿ ವ್ಯಸನವನ್ನು ಸೂಚಿಸಿ, ಸ್ವಾಮಿಗಳನ್ನು ಹಿಂತಿರುಗಿ ಕರೆಸಿಕೊಂಡು ಶೃಂಗೇರಿಯನ್ನು ಪೂರ್ವಸ್ಥಿತಿಗೆ ತರಲು ಪ್ರಯತ್ನಿಸಿದ್ದು. ಈ ರಾಜ್ಯಸಂಸ್ಕಾರ ಪ್ರಯತ್ನದಲ್ಲಿ ಸುಲ್ತಾನನು ಚಿಕ್ಕದೇವರಾಯ ಒಡೆಯರ ಕಾಲದಿಂದ ಬಂದಿದ್ದ ಚಾವಡಿಗಳ ಅಥವಾ ಆಯವ್ಯಯದ ವ್ಯವಸ್ಥೆಯನ್ನು ಬದಲಾಯಿಸಲಿಲ್ಲ; ಬದಲಾಯಿಸುವ ಯೋಗ್ಯತೆಯೂ ಇರಲಿಲ್ಲ. ಇತರ ವಿಚಾರಗಳಲ್ಲಿ ಬದಲಾವಣೆಗಳ ಪ್ರಯತ್ನಗಳು ನಡೆದು ಕೆಲವು ಉತ್ತಮವಾಗಿಯೂ ಕೆಲವು ಭಾಗವು ವಿಚಾರ ಶೂನ್ಯವಾಗಿಯೂ ವಿಷಾದಾಂತವಾಗಿಯೂ ಇದ್ದವು. ಇವುಗಳ ಏರ್ಪಾಡಿನಲ್ಲಿ ಸುಲ್ತಾನನು ತಾನೇ ಸರ್ವಜ್ಞನೆಂಬ ಹೆಮ್ಮೆಯಿಂದ ಇತರರ ಉಪದೇಶವನ್ನು ಬಯಸದೆ ಪ್ರವರ್ತಿಸಿದನು; ಅಧಿಕಾರಿಗಳನ್ನು ವಿಚಾರವಿಲ್ಲದ ರೀತಿಯಲ್ಲಿ ನಿಯಮಿಸುತ್ತಿದ್ದನು. ಇವನ ಹೆಮ್ಮೆಯನ್ನೂ ಕ್ರೌರ್ಯವನ್ನೂ ತಿಳಿದ ಅಧಿಕಾರಿಗಳು ತಮ್ಮ ಸಲಹೆಗಳನ್ನು ಕೊಡಲು ಹೆದರಿ ತಟಸ್ಥರಾಗುತ್ತಿದ್ದರು. ಟಿಪ್ಪುವಿಗೆ ಸರ್ವತೋಮುಖವಾದ ದಕ್ಷತೆಯಿರಲಿಲ್ಲ; ಅದನ್ನು ತಿಳಿಯದೆ, ಯೋಗ್ಯರಾದ ಅಧಿಕಾರಿಗಳಿಗೆ ತಕ್ಕಷ್ಟು ಆಸ್ಪದವನ್ನು ಕೊಡದೆ, ಟಿಪ್ಪುವು ಮೂರ್ಖತೆಯನ್ನೂ ಕಠೋರತೆಯನ್ನೂ ತೋರುತ್ತ ಹುಚ್ಚು ಹುಲಿಯಂತೆ ಕಂಡು ಬಂದನು. ಹುಲಿಯ ಪ್ರವರ್ತನೆಯನ್ನೇ ಮೆಚ್ಚಿ ವ್ಯಾಘ್ರಾಸನವನ್ನು ನಿರ್ಮಿಸಿಕೊಂಡನು. ಗುಲಾಮನಾಗಿ ಬಾಳುವುದಕ್ಕಿಂತ ಒಂದು ದಿನ ಮಾತ್ರ ಬದುಕಿದರೂ ಹುಲಿಯಂತಿರಬೇಕೆಂದು ಹೇಳಿಕೊಂಡನು. ವಾಸ್ತವವಾಗಿ ೧೭೯೨ ರಲ್ಲಿ ನಡೆದ ಅವಮಾನದಿಂದ ವಿಚಾರಶಕ್ತಿಯನ್ನು ನುಂಗಿದ ರೋಷವೂ ದುಃಖವೂ ಸುಲ್ತಾನನ ಸ್ವಭಾವದಲ್ಲಿ ಪ್ರಬಲಗೊಂಡಿದ್ದವು. ತಾಳ್ಮೆಯು ದೂರವಾಗಿತ್ತು.

ಸುಲ್ತಾನನ ಸಂಧಾನ—ರಿಪಾಡ್ ಮತ್ತು ವೆಲ್ಲೆಸ್ಲಿ

ರಾಜ ಬಿರುದನ್ನು ತಾಳಿ ಸೆರೆಯಲ್ಲಿದ್ದ ಚಾಮರಾಜ ಒಡೆಯರವರು ಸಿಡುಬಿನಿಂದ ೧೭೯೬ರಲ್ಲಿ ಗತಿಸಿದರು. ಆ ಬಳಿಕ ಟಿಪ್ಪುವು ಯಾರನ್ನೂ ಆ ಪದವಿಯಲ್ಲಿರಿಸಲಿಲ್ಲ. ಹೈದರಾಲಿಯು ಜಾಗರೂಕತೆಯಿಂದ ನಟಿಸುತ್ತಿದ್ದ ನಟನೆಯನ್ನು ಟಿಪ್ಪು ನಿಲ್ಲಿಸಿಬಿಟ್ಟನು. ಇದರಿಂದ ಒಡೆಯರ ಪಕ್ಷದವರು ಇಂಗ್ಲಿಷರ ಸಹಾಯವನ್ನು ಬಯಸಿ, ಗೋಪ್ಯವಾಗಿ ಸಂಧಾನಗಳನ್ನು ನಡೆಸುತ್ತಿದ್ದರು. ಸುಲ್ತಾನನು ಇಂಗ್ಲಿಷರೊಡನೆ ಯುದ್ಧಕ್ಕಣಿಯಾಗುತ್ತ ಅವರ ಮೇಲೆ ಎಲ್ಲರನ್ನೂ ಎತ್ತಿಕಟ್ಟಲು ಕುಸ್ತುಂತನಿಯ (ಕಾನ್‌ಸ್ಟಾಂಟಿನೋಪಲ್), ಕಾಬೂಲ್, ಅರಬ್ಬಿಸ್ಥಾನ, ಪಾರ್ಸೀಸ್ಥಾನಗಳ ಪ್ರಭುಗಳ ಬಳಿಗೆ ರಾಯಭಾರಿಗಳನ್ನು ಕಳುಹಿಸಿದನು. ದಿಲ್ಲಿ, ಲಖನೌ, ಪುಣೆ, ಹೈದರಾಬಾದುಗಳಲ್ಲಿಯೂ ಇಂಗ್ಲಿಷರ ಹಗೆಗಳೇಳುವಂತೆ ಪ್ರಯತ್ನಿಸಿದನು. ಮುಖ್ಯವಾಗಿ ಟಿಪ್ಪುವು ಫ್ರೆಂಚ್ ಜನರ ಸ್ನೇಹದ ಮೇಲೆ ಹೆಚ್ಚಾದ ಭರವಸೆಯನ್ನಿಟ್ಟು, ಅವರ ಸಹಾಯವನ್ನು ನಂಬಿದ್ದನು. ೧೭೯೭ರಲ್ಲಿ ರಿಪಾಡನೆಂಬೊಬ್ಬ ಫ್ರಾನ್ಸಿನವನು ಮಂಗಳೂರಿನಲ್ಲಿಳಿದು, ಅಲ್ಲಿಂದ ಶ್ರೀರಂಗಪಟ್ಟಣಕ್ಕೆ ಬಂದು, ಸುಲ್ತಾನನ ಮನಸ್ಸಿನಲ್ಲಿ ಫ್ರೆಂಚ್ ಸ್ನೇಹದ ಆಸೆಯನ್ನು ಬಲಪಡಿಸಿದನು. ಸುಲ್ತಾನನು ಅವನನ್ನು ನಂಬಿ ಮಾರಿಷಸ್ ಎಂಬ ಫ್ರಾನ್ಸಿನ ನಿಲ್ದಾಣದ ಅಧಿಕಾರಿಯ ಬಳಿಗೆ ಸೈನ್ಯಕ್ಕಾಗಿ ಹೇಳಿಕಳುಹಿಸಿದನು. ಟಿಪ್ಪುವಿಗೆ ಸಹಾಯಮಾಡುವ ಸ್ಥಿತಿಯಲ್ಲಿ ಫ್ರೆಂಚರಿರಲಿಲ್ಲ. ಆದ್ದರಿಂದ ಮಾರಿಷಸ್ ದ್ವೀಪದಿಂದ ೯೪ ಜನ ನಾನಾ ರೀತಿಯ ಫ್ರೆಂಚರು ಬಂದು ಶ್ರೀರಂಗಪಟ್ಟಣದಲ್ಲಿ ನೆಲೆಸಿದರು. ಟಿಪ್ಪುವಿಗೆ ಸಹಾಯವನ್ನು ಹೆಚ್ಚಾಗಿ ಮಾಡದಿದ್ದರೂ ಅತ್ತ ಫ್ರೆಂಚರು ಮಿಶ್ರದೇಶದ ಆಕ್ರಮಣದಲ್ಲಿ ತೊಡಗಿದ್ದರು. ಆಗ ಫ್ರೆಂಚರು ಭಾರತವರ್ಷಕ್ಕೆ ಬಂದಾರೆಂಬ ಭಯವು ಇಂಗ್ಲಿಷರ ಮನಸ್ಸಿನಲ್ಲಿ ತೀಕ್ಷ್ಣವಾಗಿತ್ತು. ಅಂತಹ ಸಂಭವಕ್ಕೆ ಮುಂಚಿತವಾಗಿಯೇ ಟಿಪ್ಪುವನ್ನಡಗಿಸಿಬಿಡಬೇಕೆಂದು ಇಂಗ್ಲಿಷರ ಸರ್ವಾಧಿಕಾರಿಯಾಗಿದ್ದ ಲಾರ್ಡ್ ವೆಲ್ಲೆಸ್ಲಿಯು ಯೋಚಿಸಿ, ಯುದ್ಧಕ್ಕೆ ಸಿದ್ಧಪಡಿಸಿ, ಪೂರ್ವಭಾವಿಯಾಗಿ ಟಿಪ್ಪುವಿಗೆ ನಿರೂಪವನ್ನು ಬರೆಸಿದನು. ಸುಲ್ತಾನನು ಆ ನಿರೂಪಕ್ಕೆ ಅವಧಿಯೊಳಗಾಗಿ ಉತ್ತರಕೊಡದೆ ಸಾವಕಾಶಮಾಡಿ ಫ್ರೆಂಚರನ್ನಿದಿರುನೋಡುತ್ತಿದ್ದನು. ಅದನ್ನೇ ಕಾರಣವಾಗಿ ತೋರಿ ವೆಲ್ಲೆಸ್ಲಿಯು ೧೭೯೯ರಲ್ಲಿ ಯುದ್ಧವನ್ನು ಪ್ರಾರಂಭಿಸಿದನು.

ಕಡೆಯ ಯುದ್ಧ—ವೀರಮರಣ

ಸುಲ್ತಾನನು ನೆಚ್ಚಿದ್ದ ಫ್ರೆಂಚರ ಸಹಾಯವು ಕನಸಾಯಿತು. ಇತರ ರಾರೂ ಸಹಾಯಮಾಡಲು ಇಷ್ಟಪಡಲಿಲ್ಲ. ಇಂತಹ ವೇಳೆಯಲ್ಲಿ ಕೊಡಗಿನ ಮಾರ್ಗವಾಗಿ ಜನರಲ್ ಸ್ಟೂಯರ್ಟ್ ಎಂಬಾತನ ಕೈಕೆಳಗೆ ಒಂದು ಇಂಗ್ಲಿಷರ ಪಡೆಯೂ, ಪೂರ್ವದಿಕ್ಕಿನಿಂದ ಜನರಲ್ ಹ್ಯಾರಿಸ್ ಎಂಬಾತನ ವಶದಲ್ಲಿ ಮತ್ತೊಂದು ಇಂಗ್ಲಿಷರ ಸೈನ್ಯವೂ, ಟಿಪ್ಪುವಿನ ರಾಜ್ಯವನ್ನಾಕ್ರಮಿಸಲು ಹೊರಟವು. ಎರಡು ಸೈನ್ಯಗಳೂ ಒಟ್ಟುಗೂಡುವ ಮುನ್ನ ಎರಡನ್ನೂ ಪ್ರತ್ಯೇಕವಾಗಿ ಸೋಲಿಸುವ ಉದ್ದೇಶದಿಂದ ಸುಲ್ತಾನನು ಮೊದಲು ಪೂರ್ವಕ್ಕೆ ಹೊರಟು ಮದ್ದೂರನ್ನು ತಲಪಿದನು. ಅಲ್ಲಿಗೆ ಇಂಗ್ಲಿಷರ ದಳವು ಕೊಡಗಿನಲ್ಲಿ ಪ್ರವೇಶಿಸಿತೆಂಬ ಸಮಾಚಾರಬರಲು ಕೂಡಲೆ ಕೊಡಗಿನ ಕಡೆಗೆ ತಿರುಗಿದನು. ಸಿದ್ದೇಶ್ವರದಲ್ಲಿ ಶತ್ರುಗಳು ಅರಿಯದಂತೆ ಟಿಪ್ಪುವು ಯುದ್ಧಸಿದ್ಧನಾದನು. ಆದರೂ ಹಸುರುಗುಡಾರವನ್ನು ಕಂಡ ಶತ್ರುಗಳು ಸುಲ್ತಾನನೇ ಸ್ವತಃ ಬಂದಿದ್ದುದನ್ನು ತಿಳಿದು ಯುದ್ಧಮಾಡಿದರು. ಸುಲ್ತಾನನು ಸೋತನು. ಆ ವೇಳೆಗೆ ಹ್ಯಾರಿಸ್ಸನು ಮಳವಳ್ಳಿಯನ್ನು ತಲಪಿದ್ದನು. ಸುಲ್ತಾನನು ತಕ್ಷಣವೇ ಪೂರ್ವದಿಕ್ಕಿಗೆ ಹೊರಟು ಕಾವೇರಿ ನದಿಯನ್ನು ದಾಟಲು ಇದ್ದ ಅನುಕೂಲಗಳನ್ನು ನಾಶಮಾಡಿದನು. ಆದರೆ ಹ್ಯಾರಿಸ್ಸನು ಬೇರೆ ಮಾರ್ಗವಾಗಿ ಸಂಚರಿಸಿ, ಸೋಸಲೆಯ ಬಳಿ ಹೊಳೆಯನ್ನು ದಾಟಿ ಬಳಸಿಕೊಂಡು ಶ್ರೀರಂಗಪಟ್ಟಣದ ಎದುರಿನಲ್ಲಿ ಸಿದ್ಧನಾದನು. ಸ್ಟೂಯರ್ಟನೂ ಅಲ್ಲಿಗೆ ಬಂದು ಸೇರಿಕೊಂಡನು. ಟಿಪ್ಪುವು ಪಟ್ಟಣದ ಮುತ್ತಿಗೆಯನ್ನು ತಡೆಯಲು ಸಿದ್ಧನಾಗುತ್ತ ಸಂಧಿಗೂ ಪ್ರಯತ್ನಿಸಿದನು. ಹ್ಯಾರಿಸ್ಸನು ಎರಡು ಕೋಟಿ ರೂಪಾಯಿಗಳನ್ನೂ ಉಳಿದಿದ್ದ ಅರ್ಧ ರಾಜ್ಯವನ್ನೂ ಕೊಟ್ಟು, ಹಣವು ಪೂರ್ತಿ ಸಂದಾಯವಾಗುವವರೆಗೆ ನಾಲ್ವರು ಮಕ್ಕಳನ್ನೂ, ನಾಲ್ವರು ಮುಖ್ಯಾಧಿಕಾರಿಗಳನ್ನೂ ಒತ್ತೆಯಾಗಿಡಬೇಕೆಂದು ಕೇಳಿದನು. ಟಿಪ್ಪುವು ಒಪ್ಪಲಾರದೆ ಯುದ್ಧವನ್ನೇ ಮಾಡಲು ನಿಶ್ಚಯಿಸಿಕೊಂಡನು. ಇಂತಹ ಸಮಯದಲ್ಲಿ ಟಿಪ್ಪುವು ಪ್ರಾಮಾಣಿಕರಾದ ಮತ್ತು ಯೋಗ್ಯರಾದ ಅಧಿಕಾರಿಗಳಿಗೆ ಅವಕಾಶವನ್ನು ಕೊಡದೆ ಏನೂ ತೋಚದವನಂತಿದ್ದನು. ಮುಖ್ಯಾಧಿಕಾರಿಗಳಲ್ಲಿ ಹಲಕೆಲವರು ದ್ರೋಹಬುದ್ಧಿಯನ್ನು ಬೆಳೆಸಿಕೊಂಡಿದ್ದರು. ಸಮಯವನ್ನು ಕಾದಿದ್ದ ಇಂಗ್ಲಿಷರು ಮೇ ತಿಂಗಳು



ಶ್ರೀ ಟಿಪ್ಪು ಸುಲ್ತಾನರ ವೀರಮರಣ

೪ನೆ ತಾರೀಖು ಮಧ್ಯಾಹ್ನ ೧ ಗಂಟೆಗೆ ಲಗ್ಗೆ ಹತ್ತಿದರು. ಸಯ್ಯದ್ ಗಫೂರ್ ರೆಂಬ ಸರದಾರನು ಇಂಗ್ಲಿಷರನ್ನು ತಡೆಯುತ್ತ ಮೃತನಾದನೆಂಬ ಸಂಗತಿಯು ಬರುತ್ತಲೇ ಸುಲ್ತಾನನು ತಾನೇ ಯುದ್ಧಕ್ಕೆ ಹೊರಟನು. ಕಡೆಗೆ ಉತ್ತರದ ದಿಡ್ಡಿಬಾಗಲಿನಲ್ಲಿ ವೀರಾವೇಶದಿಂದ ಯುದ್ಧಮಾಡುತ್ತ ಟಿಪ್ಪುವು ಮಡಿದನು. ಅತ್ತ ಇಂಗ್ಲಿಷರು ಕೋಟೆಯನ್ನು ವಶಪಡಿಸಿಕೊಂಡು ಅರಮನೆಯಲ್ಲಿ ನುಗ್ಗಿದರು. ಎಲ್ಲಿ ಹುಡುಕಿದರೂ ಸುಲ್ತಾನನು ಕಾಣಲಿಲ್ಲ. ಕಡೆಗೆ ಸಮಾಚಾರ ತಿಳಿದು ಇಂಗ್ಲಿಷರು ಹೆಣದರಾಶಿಯ ಮಧ್ಯೆ ಬಿದ್ದಿದ್ದ ಸುಲ್ತಾನನ ಮೃತದೇಹವನ್ನು ಮರ್ಯಾದೆಯಿಂದ ಕಂಡು, ಮರುದಿನ ಲಾಲಬಾಗಿನಲ್ಲಿ ಗೋರಿ ಮಾಡಿಸಿದರು.


ತಂದೆ ಮಕ್ಕಳ ವ್ಯತ್ಯಾಸ

ರಾಜ್ಯವನ್ನು ಕಟ್ಟಲು ಹುಟ್ಟಿದವನು ಹೈದರಾಲಿ, ರಾಜ್ಯವನ್ನು ಕಳೆಯಲು ಹುಟ್ಟಿದವನು ಟಿಪ್ಪು ಎಂಬ ಸಾಧಾರಣ ಮಾತು ಅವರ ಗುಣಾವಗುಣಗಳನ್ನು ಸ್ಥೂಲವಾಗಿ ತಿಳಿಸುತ್ತದೆ. ಹೈದರನು ನಿರಕ್ಷರನು, ಟಿಪ್ಪು ಅಕ್ಷರಸ್ಥನು ; ಆದರೆ ಹೈದರನು ವಿವೇಕಿ, ಟಿಪ್ಪು ವಿವೇಕಿಯಲ್ಲ. ಹೈದರನು ಧೀರನೂ ಸಾಹಸಿಯೂ ಆಗಿದ್ದನು, ಟಿಪ್ಪುವೂ ಧೀರನೂ ಸಾಹಸಿಯೂ ಆಗಿದ್ದನು ; ಆದರೆ ದಳವಾಯಿತನದಲ್ಲಿ, ರಣಚಮತ್ಕಾರದಲ್ಲಿ, ಉಪಾಯದಲ್ಲಿ ಹೈದರನಿಗಿದ್ದ ದಕ್ಷತೆಯಲ್ಲಿ ಟಿಪ್ಪುವಿಗೆ ಲೇಶವೂ ಇರಲಿಲ್ಲ. ಹೈದರನಲ್ಲಿ ಕ್ರೌರ್ಯವು ಅವಶ್ಯವಾದಾಗ ಮಾತ್ರ ಕಾಣುತ್ತಿತ್ತು ; ಟಿಪ್ಪುವಿನಲ್ಲಿ ಕ್ರೌರ್ಯವು ಆಗಾಗ್ಗೆ ತೋರಿಕೊಳ್ಳುತ್ತಿತ್ತು. ಹೈದರನು ಇತರರಿಂದ ಕಲಿಯಲು ಆತುರನಾಗಿದ್ದನು ; ಟಿಪ್ಪುವು ಹೆಮ್ಮೆಯಿಂದ ಇತರರನ್ನು ಅಸಡ್ಡೆ ಮಾಡುತ್ತಲಿದ್ದನು. ಇದರಿಂದ ಹೈದರನು ಸ್ನೇಹಿತರನ್ನು ಸಂಪಾದಿಸುವುದರಲ್ಲಿ ಜಾಣನಾಗಿದ್ದನು ; ಟಿಪ್ಪುವು ಸ್ನೇಹಿತರನ್ನು ಕಳೆದುಕೊಳ್ಳುವುದಲ್ಲದೆ, ಹಗೆಗಳನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಜಾಣನಾಗಿದ್ದನು. ಸಮಸ್ತಾಧಿಕಾರವಿದ್ದರೂ, ಹೈದರನು ಒಡೆಯರೇ ರಾಜರೆಂಬ ನಟನೆಯನ್ನು ಬಿಡಲಿಲ್ಲ ; ಟಿಪ್ಪುವಾದರೋ ಬಾದಷಹನೆಂದು ಹೇಳಿಸಿಕೊಂಡು ಒಡೆಯರನ್ನು ಮೂಲೆಗೆ ತಳ್ಳಿ, ನಟನೆಯನ್ನು ನಿಲ್ಲಿಸಿ, ತನ್ನ ಸ್ವಾಭಿಮಾನದಲ್ಲಿ ಯುಕ್ತಿಯನ್ನು ಮರೆತನು. ತಾನೇ ಸರ್ವಜ್ಞನೆಂದೂ, ಸರ್ವ ಶಕ್ತನೆಂದೂ ಭಾವಿಸುತ್ತ ಅನೇಕ ವೇಳೆ ಟಿಪ್ಪುವು ಮೂರ್ಖನಾದನು. ಹೈದರನಿಗೆ ಅನ್ಯಮತದ್ವೇಷವಿರಲಿಲ್ಲ ;

ಟಿಪ್ಪುವಿನ ಇಸ್ಲಾಮೀಮತಭಕ್ತಿಯು ಕೆಲವೇಳೆ ಅನ್ಯಮತಗಳಲ್ಲಿ ತಿರಸ್ಕಾರದ ರೂಪವನ್ನು ತಾಳುತ್ತಿತ್ತು. ಹೈದರಾಲಿಯು ಕೆಲವು ನಾಯಮಾರರನ್ನೂ, ಕೆಲವು ಇಂಗ್ಲಿಷ ಬಂದಿಗಳನ್ನೂ ಮಾತ್ರ ಬಲವಂತದಿಂದ ಮುಸಲ್ಮಾನರನ್ನಾಗಿ ಮಾಡಿದನು. ಸಮಯ ದೊರೆತಹಾಗೆಲ್ಲ ಟಿಪ್ಪುವು ಕೊಡಗು ಮಲೆಯಾಳಗಳಲ್ಲಿ ಜನರನ್ನು ಇಸ್ಲಾಮೀ ಕರಣಕ್ಕಾಗಿ ಬಲವಂತಪಡಿಸಿದನು ; ಇಬ್ಬರಲ್ಲಿ ಯಾರೂ ಸ್ವದೇಶದಲ್ಲಿ ಮಟ್ಟಿಗೆ ಈ ನೀತಿಯನ್ನವಲಂಬಿಸಲಿಲ್ಲ. ಹೈದರನು ಹಿಂದೂಮತವನ್ನು ಗೌರವಿಸುತ್ತ ಹಿಂದೂಗಳನ್ನೇ ಬೆಂಬಲವನ್ನಾಗಿಟ್ಟು ಕೊಂಡಿದ್ದನು. ಟಿಪ್ಪುವು ದೇವಾಲಯಗಳ ಧ್ವಂಸಕ್ಕೆ ತೊಡಗದಿದ್ದರೂ, ಮುಸಲ್ಮಾನರನ್ನೇ ಹೆಚ್ಚಾಗಿ ಅಧಿಕಾರಗಳಲ್ಲಿ ನಿಯಮಿಸುತ್ತಲಿದ್ದನು. ಇದು ತಂದೆ ಮಕ್ಕಳಲ್ಲಿ ದೊಡ್ಡ ವ್ಯತ್ಯಾಸವೆನಿಸಿತು. ಹೈದರನು ಮತದ ಗೋಜಿಗೆ ಹೋಗುತ್ತಿರಲಿಲ್ಲ ; ಟಿಪ್ಪು ಮುಸಲ್ಮಾನಮತಕ್ಕೆ ಪ್ರಾಶಸ್ತ್ಯಕೊಟ್ಟು, ಯುದ್ಧದಲ್ಲಿ ಸೋತವರನ್ನು ಆ ಮತವನ್ನು ಸ್ವೀಕರಿಸೆಂದು ನಿರ್ಬಂಧ ಪಡಿಸುತ್ತಿದ್ದನು. ಶಿವಾಜಿಯ ಗುಣಗಳಲ್ಲಿ ಕೆಲವಾದ ಯುಕ್ತಿ, ಸಾಹಸ, ರಣಕೌಶಲಗಳು ಹೈದರನಲ್ಲಿದ್ದಂತೆಯೇ ಶಂಭುಜಿಯ ಗುಣಗಳಲ್ಲಿ ಕೆಲವಾದ ಶೌರ್ಯ, ಹೆಮ್ಮೆ, ಕ್ರೌರ್ಯಗಳು ಟಿಪ್ಪುವಿನಲ್ಲಿದ್ದವು. ಶಂಭುಜಿಯಂತೆಯೇ ಟಿಪ್ಪುವೂ ಧೀರನಾಗಿ ಸತ್ತನು.

ಇಬ್ಬರ ಸ್ಥಾನ

ಟಿಪ್ಪುವಿನ ಮಕ್ಕಳನ್ನು ಇಂಗ್ಲಿಷರು ಮೊದಲು ವೇಲೂರಿಗೂ ಅನಂತರ ಕಲಕತ್ತೆಗೂ ಸಾಗಿಸಿದರು. ಹೀಗೆ ಮೈಸೂರಿನಲ್ಲಿ ೧೭೬೧ ರಿಂದ ೧೮೦೦ರವರೆಗೆ ನಲವತ್ತು ವರ್ಷಕಾಲ ಮುಸಲ್ಮಾನರ ರಾಜ್ಯಭಾರ ನಡೆಯಿತು. ಆಡಳಿತವೇನೋ ಹಿಂದೂ ರೀತಿಯದೇ ಆಗಿತ್ತು. ದಿವಾನ್ ಪೂರ್ಣಯ್ಯ, ತೋಷೀಖಾನೆ ಕೃಷ್ಣರಾಯ, ಅಂಚೆ ಶಾಮಯ್ಯ ಮುಂತಾದ ಹಿಂದುಗಳೇ ರಾಜ್ಯವನ್ನು ನಡೆಸುತ್ತಿದ್ದರು. ೧೭೮೫ರಲ್ಲಿ ಶಾಮಯ್ಯನ ಪಿತೂರಿ ನಡೆದ ಮೇಲೆ ಟಿಪ್ಪುವು ಹಿಂದೂಗಳಿಗೆ ಅಧಿಕಾರವನ್ನು ಕೊಡುತ್ತಿರಲಿಲ್ಲ. ಯುದ್ಧವೇ ನಿರಂತರವಾಗಿ ನಡೆಯುತ್ತಿದ್ದುದರಿಂದ ಒಳ ಆಡಳಿತದಲ್ಲಿ ಬದಲಾವಣೆಗಳು ವಿಶೇಷವಾಗಿ ಆಗಲಿಲ್ಲ. ಟಿಪ್ಪು ನಡೆಸಿದ ಸುಧಾರಣೆಗಳು ಹೆಸರಿಗೆ ಮಾತ್ರ ಸುಧಾರಣೆಗಳಾಗಿದ್ದುವು. ಮುಖ್ಯವಾಗಿ ಇವರ


ಮೈಸೂರು ರಾಜ್ಯ
ಚಿಕ್ಕದೇವರಾಜ ಒಡೆಯರ ರಾಜ್ಯ
ಹೈದರಲ್ಲಿ ಟೀಪು ಸುಲ್ತಾನರ ರಾಜ್ಯ
೧೭೯೯ ರ ತರುವಾಯ
ಅರಬ್ಬಿ ಸಮುದ್ರ
ಬಂಗಾಳಾ ಕೊಲ್ಲಿ
ಕರಾಡ
ಹೈದರಾಬಾದು
ಬಿಜಾಪುರ
ಗುತ್ತಿ
ಮಂಗಳೂರು
ಮದರಾಸು
ದಿಂಡಿಗಲ್ಲು
ಮಧುರೆ
ರಾಮೇಶ್ವರ

ಮೈಸೂರು ರಾಜ್ಯ

ಆಳಿಕೆಯಲ್ಲಿ ಮೊದಲಿದ್ದ ರಾಜ್ಯವು ಅತಿ ವಿಸ್ತಾರವಾಗಿ ಹರಡಿತು. ಗಣನೆಗೆ ಬಾರದಂತಿದ್ದ ಶ್ರೀರಂಗಪಟ್ಟಣದ ರಾಜ್ಯವು ಮರಾಟೆಯವರೊಡನೆಯೂ ನೈಸಾಮನೊಡನೆಯೂ ಸರಿದೂಗುವ ಪದವಿಯನ್ನು ಪಡೆಯಿತು. ದಖನ್ನಿನಲ್ಲಿ ಇಂಗ್ಲಿಷರು ಪ್ರಾಬಲ್ಯಸಾಧನೆಯಲ್ಲಿ ಮೈಸೂರಿನೊಡನೆಯೇ ಹೆಚ್ಚು ಹೋರಾಡಿ ನಾಲ್ಕು ದೊಡ್ಡ ಯುದ್ಧಗಳನ್ನು ನಡೆಸಬೇಕಾಯಿತು. ಹೈದರಾಲಿ ಟಿಪ್ಪುಸುಲ್ತಾನರು ನೈಸಾಮ, ಆರ್ಕಾಟಿನ ನವಾಬ, ಬಂಗಾಳದ ನವಾಬ ಮತ್ತು ಅಯೋಧ್ಯೆಯ ನವಾಬರಂತೆ ನಿಸ್ತೇಜಸ್ವಿಗಳೂ ದುರ್ಬಲರೂ ಆಗಿ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲಿಲ್ಲ. ಈ ಇಬ್ಬರ ಸ್ಮಾರಕಗಳು ಬೆಂಗಳೂರಿನ ಅರಮನೆಯಲ್ಲಿಯೂ ಶ್ರೀರಂಗಪಟ್ಟಣದ ಕೋಟೆ, ಗುಂಬಸ್ ಮತ್ತು ಮಸೀದಿಗಳಲ್ಲಿಯೂ ಕಾಣುತ್ತವೆ.

ಹತ್ತೊಂಭತ್ತನೆಯ ಶತಮಾನ

೧೮೦೦—೧೯೦೨

ಬ್ರಿಟಿಷರ ಏರ್ಪಾಟುಗಳು

ಜಯಶಾಲಿಗಳಾದ ಇಂಗ್ಲಿಷರು ಶ್ರೀರಂಗಪಟ್ಟಣವು ವಶವಾದ ಬಳಿಕ ಪೂರ್ಣಯ್ಯನ ಮೂಲಕ ರಾಜ್ಯವು ತಮ್ಮ ಸ್ವಾಧೀನವಾಗುವಂತೆ ಮಾಡಿಕೊಂಡು, ಸುಲ್ತಾನನ ಮಕ್ಕಳಿಗೂ ಮುಖ್ಯಾಧಿಕಾರಿಗಳಿಗೂ ವಂಶ ಪರಂಪರೆಯ ವೇತನಗಳನ್ನು ನಿಶ್ಚಯಿಸಿದರು. ತರುವಾಯ ಬಾರಾ ಮಹಲ್, ಕೊಡಗು ಮತ್ತು ತೀರಪ್ರದೇಶಗಳನ್ನು ತಮ್ಮ ಸ್ವಂತ ಆಳಿಕೆಯಲ್ಲಿ ಸೇರಿಸಿಕೊಂಡು, ಮಧ್ಯಭಾಗವನ್ನು ಒಡೆಯರ ವಂಶಕ್ಕೆ ಕೊಡುವುದಾಗಿ ತೀರ್ಮಾನಮಾಡಿಕೊಂಡು, ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರವರೇ ಮೈಸೂರಿಗೆ ಮಹಾರಾಜರೆಂದು ಪ್ರಕಟಿಸಿದರು. ರಾಜರು ಇನ್ನೂ ಬಾಲ್ಯಾವಸ್ಥೆಯಲ್ಲಿದ್ದ ಕಾರಣದಿಂದ ಆಡಳಿತವನ್ನು ನಡೆಸಲು ಅನುಭವ ಶಾಲಿಯಾಗಿದ್ದ ಪೂರ್ಣಯ್ಯನನ್ನೇ ದಿವಾನ ಪದವಿಯಲ್ಲಿ ನಿಲ್ಲಿಸಿ, ಕ್ಲೋಸ್ ಎಂಬಾತನನ್ನು ರೆಸಿಡೆಂಟನ್ನಾಗಿಯೂ, ಸರ್ ಆರ್ಥರ್ ವೆಲ್ಲೆಸ್ಲಿಯೆಂಬಾತನನ್ನು ದಳಪತಿಯನ್ನಾಗಿಯೂ ನಿಯಮಿಸಿದರು.

ದಿವಾನ್ ಪೂರ್ಣಯ್ಯ ೧೮೦೦—೧೮೧೧

ಸಹಾಯಕ ಸೈನ್ಯಪದ್ಧತಿ

ಪೂರ್ಣಯ್ಯನು ಕೊಯಿಮುತ್ತೂರು ಪ್ರಾಂತದ ಬ್ರಾಹ್ಮಣನು. ಹೈದರಾಲಿ ಟಿಪ್ಪುಸುಲ್ತಾನರ ಕಾಲದಲ್ಲಿ ಸಂಸ್ಥಾನದ ಆಯವ್ಯಯಗಳ ನಿರ್ವಾಹದಲ್ಲಿ ಮುಖ್ಯಾಧಿಕಾರಿಯಾಗಿದ್ದು ಅವರ ಕಾಲದಲ್ಲಿ ಬಹಳ ಭಕ್ತಿಯಿಂದ ಕೆಲಸಮಾಡಿದ್ದನು. ಇಂಗ್ಲಿಷರು ಪೂರ್ಣಯ್ಯನೇ ರೀಜೆಂಟಾಗಿರಬೇಕೆಂದು ಗೊತ್ತುಮಾಡಿದ ಕೂಡಲೆ, ಪೂರ್ಣಯ್ಯನು ಇಂಗ್ಲಿಷರಲ್ಲಿಯೂ

ಒಡೆಯರಲ್ಲಿಯೂ ಭಕ್ತಿಯಿಂದಿದ್ದು ೧೮೦೦ರಿಂದ ೧೮೧೧ರ ವರೆಗೆ ದಕ್ಷತೆಯಿಂದ ಆಡಳಿತವನ್ನು ನಿರ್ವಹಿಸಿದನು.

ಪೂರ್ಣಯ್ಯನು ಮುಖ್ಯ ವಿಷಯಗಳಲ್ಲಿ ರೆಸಿಡೆಂಟರ ಸಲಹೆಗನುಸಾರವಾಗಿ ನಡೆಯುವಂತೆ ಏರ್ಪಾಟಾಗಿತ್ತು. ಒಡೆಯರ ವಂಶವನ್ನು ಉದ್ಧರಿಸಿದಾಗ ಇಂಗ್ಲಿಷರು ರಾಜ್ಯದ ಮೇರೆಗಳನ್ನು ನಿಷ್ಕರ್ಷೆ ಮಾಡಿದ್ದಲ್ಲದೆ, ತಮ್ಮ ಸಹಾಯಕ ಸೈನ್ಯಪದ್ಧತಿಯನ್ನನುಸರಿಸಿ ಕೆಲವು ಷರತ್ತುಗಳನ್ನು ವಿಧಿಸಿದ್ದರು. ಹೊರಗಿನಿಂದ ಶತ್ರುಬಾಧೆಯಿಲ್ಲದಂತೆ ಬ್ರಿಟಿಷ್ ಸೈನ್ಯವೊಂದನ್ನು ಮಹಾರಾಜರು ಇಟ್ಟುಕೊಂಡು ಪೋಷಿಸುವುದು, ವರ್ಷಕ್ಕೆ ೭ ಲಕ್ಷ ವರಹಗಳ ಪೊಗದಿಯನ್ನು ಕೊಡುವುದು, ಬ್ರಿಟಿಷರು ತಮ್ಮ ಶತ್ರುಗಳೊಡನೆ ಯುದ್ಧಮಾಡುವ ಸಂದರ್ಭದಲ್ಲಿ ಯೋಗ್ಯತೆಗನುಸಾರವಾಗಿ ಮಹಾರಾಜರು ಧನಸಹಾಯಮಾಡುವುದು, ಪೊಗದಿಯನ್ನು ಸಕಾಲಕ್ಕೆ ಸಲ್ಲಿಸದಿದ್ದ ಪಕ್ಷದಲ್ಲಿ ಬ್ರಿಟಿಷರು ಮಹಾರಾಜರ ಸ್ವಂತ ವೆಚ್ಚಕ್ಕೆ ಏರ್ಪಾಟುಮಾಡಿ ರಾಜ್ಯವನ್ನು ಪುನಃ ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುವುದು—ಆ ಷರತ್ತುಗಳಲ್ಲಿ ಮುಖ್ಯವಾದುವು. ಪೂರ್ಣಯ್ಯನು ಈ ಷರತ್ತುಗಳನ್ನು ಸ್ವಲ್ಪವೂ ತಪ್ಪದಂತೆ ಪಾಲಿಸಿ, ರಾಜ್ಯವನ್ನು ಕ್ರಮಕ್ಕೆ ತಂದು ಆದಾಯವನ್ನು ಹೆಚ್ಚಿಸಿದನು. ರಾಜ್ಯದಲ್ಲಿ ಸಂಚರಿಸಿ ಪುಂಡರನ್ನಡಗಿಸಿ, ಶಾಂತಿಯನ್ನು ನೆಲೆಗೊಳಿಸಿ, ಕೃಷಿ ವಾಣಿಜ್ಯಗಳು ಅಭಿವೃದ್ಧಿಯಾಗುವಂತೆ ಅನುಕೂಲಮಾಡಿದನು.

ಯುದ್ಧಪ್ರಮೇಯಗಳು.

ಮುಮ್ಮಡಿ ಕೃಷ್ಣರಾಜಒಡೆಯರವರಿಗೆ ೧೮೦೦ರಲ್ಲಿ ಇನ್ನೂ ಐದು ವರ್ಷಗಳೇ ತುಂಬಿದ್ದುವು. ರಾಜರಿಗೆ ವಯಸ್ಸು ಬರುವವರೆಗೆ ಪೂರ್ಣಯ್ಯನೇ ಆಡಳಿತವನ್ನು ನಡೆಸಿದವನು. ಆ ಕಾಲದಲ್ಲಿ ಯುದ್ಧಪ್ರಮೇಯಗಳು ಅತ್ಯಲ್ಪ. ಶ್ರೀರಂಗಪಟ್ಟಣದ ಪತನದ ಅನಂತರ ಐಗೂರಿನ ಪಾಳೆಯಗಾರನು ಸ್ವತಂತ್ರನಾಗಲು ಯತ್ನಿಸಿದನು. ಟಿಪ್ಪುಸುಲ್ತಾನನಿಂದ ನಿರ್ಬಂಧಿತನಾಗಿದ್ದ ಧೋಂಡೋವಾಘನೆಂಬಾತನು ಅದೇ ಕಾಲದಲ್ಲಿಯೇ ತಪ್ಪಿಸಿಕೊಂಡು ಕೆಲವು ಸಾಹಸಿಗಳನ್ನು ಸೇರಿಸಿಕೊಂಡು ರಾಜ್ಯದ ಉತ್ತರ ಗಡಿ ಪ್ರಾಂತದಲ್ಲಿ ಕೊಳ್ಳೆಹೊಡೆಯುತಲಿದ್ದನು. ಎರಡು ತೊಂದರೆಗಳನ್ನೂ ಇಂಗ್ಲಿಷರೇ ನಿವಾರಿಸಿದರು. ೧೮೦೩–೪ರಲ್ಲಿ ಇಂಗ್ಲಿಷರು ಮರಾಟೆ

ಯವರೊಡನೆ ಯುದ್ಧಮಾಡಿದರು ; ಆಗ ಪೂರ್ಣಯ್ಯನು ಒಳ್ಳೆಯ ಸಹಾಯ ವನ್ನೇ ಮಾಡಿದನು.

೧೮೦೯ರಲ್ಲಿ ವಿಚಿತ್ರವಾದ ಸಂಗತಿಯೊಂದು ನಡೆಯಿತು. ಮದ ರಾಸಿನ ಸರ್ಕಾರದವರು ಸೈನ್ಯದಲ್ಲಿ ಸುಧಾರಣೆಗಳನ್ನು ನಡೆಸುತ್ತ ಅದುವರೆಗೂ ಅಧಿಕಾರಿಗಳಿಗೆ ಸಲ್ಲುತ್ತಿದ್ದ ವಿಶೇಷ ಪರಮಾನವೊಂದನ್ನು ಕಿತ್ತುಹಾಕಿದರು. ಇದರ ಪರಿಣಾಮವಾಗಿ ಇಂಗ್ಲಿಷ್ ಅಧಿಕಾರಿ ಗಳೇ ದಂಗೆಯೆದ್ದರು. ಶ್ರೀರಂಗಪಟ್ಟಣದಲ್ಲಿದ್ದ ಇಂಗ್ಲಿಷ್ ಸೈನಿಕರು ದಂಗೆ ಎದ್ದು ಚಿತ್ರದುರ್ಗದಲ್ಲಿದ್ದ ಮತ್ತೊಂದು ದಳದೊಡನೆ ಸೇರಿ ಕೊಳ್ಳಲು ಸನ್ನದ್ಧರಾದರು. ಆಗ ಪೂರ್ಣಯ್ಯನ ಸಹಾಯದಿಂದ ರೆಸಿಡೆಂಟ್ ಕ್ಲೋಸ್ ಸಾಹೇಬನು ಅವರು ಸಂಧಿಸದಂತೆ ಮಾಡಿ ದಂಗೆಯನ್ನು ಅಡಗಿಸಿದನು.

ಒಳ ಆಡಳಿತ.

ಒಳ ಆಡಳಿತದಲ್ಲಿ ಪೂರ್ಣಯ್ಯನು ಮೈಸೂರಿನಲ್ಲಿ ಅರಮನೆಯನ್ನು ಕಟ್ಟಿಸಿ ಪಟ್ಟಣವನ್ನು ವ್ಯವಸ್ಥೆಗೊಳಿಸಿದಮೇಲೆ, ಅನೇಕ ನೀರಾವರಿ ಕೆಲಸ ಗಳ ಜೀರ್ಣೋದ್ಧಾರಮಾಡಿಸಿ, ಶ್ರೀರಂಗಪಟ್ಟಣದಲ್ಲಿ ಕಾವೇರಿಗೆ ಹೊಸ ದಾಗಿ ಒಂದು ಸೇತುವೆಯನ್ನು ಕಟ್ಟಿಸಿದನು. ಲಕ್ಷ್ಮಣತೀರ್ಥನದಿಗೊಂದು ಅಣೆಕಟ್ಟನ್ನು ಕಟ್ಟಿಸಿ, ಕಾವೇರಿನದಿಯಿಂದ ಮೈಸೂರಿಗೊಂದು ಕಾಲುವೆ ಯನ್ನು ತೆಗೆಸುವ ಯೋಚನೆಮಾಡಿ ಸಾಧ್ಯವಲ್ಲವೆಂದು ಬಿಟ್ಟು ಬಿಟ್ಟನು. ರಸ್ತೆಗಳಲ್ಲಿ ಸಾಲುಮರಗಳನ್ನು ನೆಡಿಸಿ, ಅನೇಕ ಸತ್ರಗಳನ್ನೂ ಮುಸ಼ಾಫರ ಖಾನೆಗಳನ್ನೂ ಕಟ್ಟಿಸಿ, ಸಂಚಾರಕ್ಕೆ ಅನುಕೂಲಗಳನ್ನು ಒದಗಿಸಿದನು. ೧೮೦೪-೦೫ರಲ್ಲಿ ಅಷ್ಟಗ್ರಾಮ ಮತ್ತು ಪಟ್ಟಣ ವಿಭಾಗದಲ್ಲಿ ಭೂಮಿಗಳ ಸರ್ವೆಯು ನಡೆದು, ನೆಲಗಂದಾಯವು ಫಸಲಿನ ಮೂರನೆಯ ಒಂದುಭಾಗ ದಂತೆ ನಿರ್ಣಯವಾಯಿತು. ನ್ಯಾಯತೀರ್ಮಾನದಲ್ಲಿ ಪೂರ್ವಾಚಾರವಾದ ಪಂಚಾಯಿತಿಯ ಪದ್ಧತಿಯು ಪುನಃ ತಲೆಯೆತ್ತಿದ್ದಲ್ಲದೆ, ಕೇಂದ್ರದಲ್ಲಿ ಒಂದು ನ್ಯಾಯಸ್ಥಾನವೂ ಸ್ಥಾಪಿತವಾಯಿತು.

೧೮೧೧ರ ವೇಳೆಗೆ ರಾಜರಿಗೆ ೧೬ ವರ್ಷಗಳಾದವು. ರಾಜರು ರಾಜ್ಯಭಾರವನ್ನು ತಾವೇ ವಹಿಸಲು ಕುತೂಹಲಿಗಳಾಗಿದ್ದುದರಿಂದ ರೆಸಿ



ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರು

ಡೆಂಟನು ಪೂರ್ಣಯ್ಯನವರಿಗೆ ಅದೇ ಮೇರೆಗೆ ತಿಳಿಸಿದನು. ಪೂರ್ಣಯ್ಯನು ಕೆಲಸದಿಂದ ನಿವೃತ್ತನಾಗಲು ನಿಶ್ಚಯಿಸಿಕೊಂಡನು. ೧೮೧೧ರಲ್ಲಿ ನಿವೃತ್ತನಾಗಿ ಯಳಂದೂರು ಜಹಗೀರನ್ನು ಪಡೆದು, ೧೮೧೨ರಲ್ಲಿಯೇ ಆತನು ತೀರಿಕೊಂಡನು.

ಮುಮ್ಮಡಿ ಕೃಷ್ಣರಾಜ ಒಡೆಯರ ಆಳಿಕೆ

೧೮೧೧–೧೮೩೧

೧೮೧೧ರಲ್ಲಿ ರಾಜ್ಯಭಾರವನ್ನು ವಹಿಸಿದ ರಾಜರು ಸಹಜವಾಗಿ ಸಮರ್ಥರೂ, ಉದಾರಿಗಳೂ ಆಗಿದ್ದು ಪೂರ್ವಾಚಾರ ರೀತಿಯ ಶಿಕ್ಷಣವನ್ನು ಪಡೆದಿದ್ದರು. ಕೂಡಲೆ ರಾಜರು ಬೆಂಗಳೂರು, ಮಧುಗಿರಿ ಮತ್ತು ಮಲೆನಾಡುಗಳಲ್ಲಿ ಸಂಚರಿಸಿ, ದೇಶದ ಪರಿಚಯಾನುಭವಗಳನ್ನು ಪಡೆದರು. ೧೮೧೪ರಲ್ಲಿ ಮೊದಲಾಗಿ ನೇಪಾಳ, ಪಿಂಡಾರಿ ಮತ್ತು ಮರಾಟಾ ಯುದ್ಧಗಳು ಒಂದಾದಮೇಲೊಂದು ನಡೆದಾಗ ಇಂಗ್ಲಿಷರಿಗೆ ಮೈಸೂರು ದಳವು ಸಹಾಯವಾಯಿತು. ರಾಜರು ದೇವಸ್ಥಾನಗಳ ಜೀರ್ಣೋದ್ಧಾರ, ಅಗ್ರಹಾರ ನಿರ್ಮಾಣ, ಮತ್ತು ವಿದ್ಯಾಪ್ರೋತ್ಸಾಹಗಳಲ್ಲಿ ಹೆಚ್ಚು ಔದಾರ್ಯವನ್ನು ತೋರಿದರು. ಸ್ವತಃ ಪಂಡಿತರಾಗಿದ್ದು ಅನೇಕ ಪಂಡಿತರಿಂದ ಪರಿವೃತರಾಗಿದ್ದುದರಿಂದ ಅವರ ಪ್ರೋತ್ಸಾಹ ಬಲದಿಂದ ರಾಮಾಯಣಭಾರತಾದಿ ಸಂಸ್ಕೃತ ಗ್ರಂಥಗಳು ಕನ್ನಡ ಮಾತಿನಲ್ಲಿ ರೂಪಗೊಂಡವು.

ನಗರ ಪ್ರಾಂತದ ಬಂಡಾಯ

ಕಾಲಕ್ರಮೇಣ ಆಡಳಿತದ ವೆಚ್ಚವು ಹೆಚ್ಚಿತು ; ವರಮಾನವು ತಗ್ಗುತ್ತಬಂತು. ಅಧಿಕಾರಿಗಳ ಸಂಬಳಗಳೇ ಬಾಕಿ ನಿಂತವು. ಕಂದಾಯ ತೆರಿಗೆಗಳು ಪ್ರಜೆಗಳಿಗೆ ಭಾರವಾಗಿಯೇ ಇದ್ದವು. ಇಂತಹ ಸ್ಥಿತಿಯಲ್ಲಿ ನಗರ ಪ್ರಾಂತದಲ್ಲಿ ಜನರು ಅಸಮಾಧಾನ ಭರಿತರಾಗಿದ್ದಾಗ, ತರೀಕೆರೆ ಪಾಳೆಯಗಾರರ ವಂಶಸ್ಥನಾಗಿದ್ದ ರಂಗಪ್ಪನಾಯಕನೆಂಬಾತನು ನಗರದ ಫೌಜುದಾರನನ್ನು ವಿರೋಧಿಸಿ ದಂಗೆಯೆಬ್ಬಿಸಿದನು. ಇದೇ ಸಮಯದಲ್ಲಿ ಸಾಮಾನ್ಯ ರೈತನೊಬ್ಬನ ಮಗನಾದ ಸಾದರಮಲ್ಲನೆಂಬುವನು ಬೂದಿಬಸಪ್ಪನಾಯಕನೆಂದು ಹೆಸರಿಟ್ಟುಕೊಂಡು ತಾನು ಕೆಳದಿನಾಯಕರ ವಂಶಸ್ಥನೆಂದು

ಹೇಳುತ್ತ ತನ್ನ ವಂಶದ ರಾಜ್ಯವನ್ನು ಪುನಃ ಸ್ಥಾಪಿಸುವುದಾಗಿ ಸಾರುತ್ತ ದಂಗೆಕೋರರ ಬೆಂಬಲವನ್ನು ಪಡೆದನು. ದಂಗೆಕೋರರು ಕೌಲೆದುರ್ಗ ಕಾಮನದುರ್ಗಗಳನ್ನು ಹಿಡಿದು, ರಾಜಾಧಿಕಾರಿಗಳನ್ನು ಹಿಂಸಿಸಿದರು. ನಗರಪ್ರಾಂತದಿಂದ ಬರಬೇಕಾಗಿದ್ದ ಹಣವು ಬರಲಿಲ್ಲ. ದಂಗೆಯೂ ಯುದ್ಧವೂ ಒದಗಿಬಂದವು. ದಂಗೆಯು ದಿನೇ ದಿನೇ ಪ್ರಬಲವಾಗಿ ೧೮೩೦ರಲ್ಲಿ ಹೊಳೆಹೊನ್ನೂರಿನಲ್ಲಿ ಅವಾಂತರವಾಯಿತು. ರಾಜರು ಅಸಮಾಧಾನವನ್ನೂ ಅಶಾಂತಿಯನ್ನೂ ಅಡಗಿಸಲು, ಚನ್ನರಾಯಪಟ್ಟಣಕ್ಕೆ ಹೊರಟು, ಅಲ್ಲಿಯೇ ವಿಚಾರಣೆಯನ್ನು ನಡೆಸಿದಾಗ್ಗೂ ದಂಗೆಯು ಅಡಗಲಿಲ್ಲ. ಕಡೆಗೆ ಇಂಗ್ಲಿಷರು ತಮ್ಮ ದಳವನ್ನು ಕಳುಹಿಸಿದರು. ರಾಕ್ವೇಲ್ ಎಂಬ ದಳಪತಿಯು ದಂಗಕೋರರನ್ನು ಅಡಗಿಸಿದನು. ನಗರವು ವಶವಾಗಿ ದಂಗೆಯು ನಿಂತಿತು.

ಇಂಗ್ಲಿಷರ ರಾಜ್ಯ ಸ್ವೀಕಾರ

ಆಗ ಲಾರ್ಡ್‌ಬೆಂಟಿಂಕ್ ಎಂಬಾತನು ಗವರ್ನರ್ ಜನರಲ್ ಅಥವಾ ಸರ್ವಾಧಿಕಾರಿಯಾಗಿದ್ದನು. ರಾಜರ ದೌರ್ಬಲ್ಯದಿಂದಲೇ ಆಡಳಿತವು ಕೆಟ್ಟು ದಂಗೆಯೆದ್ದಿತೆಂದೂ, ರಾಜರು ದುಂದುಗಾರರೆಂದೂ, ದಂಗೆಕೋರರನ್ನೂ ಪುಂಡು ಜನರನ್ನೂ ಸ್ವಾಧೀನಪಡಿಸಿಕೊಳ್ಳುವ ಸಾಮರ್ಥ್ಯವು ರಾಜರಲ್ಲಿಲ್ಲವಾಯಿತೆಂಮೂ ಕಲ್ಪನೆ ಮಾಡಿಕೊಂಡನು. ಆಗತಾನೇ ಕೊಡಗನ್ನು ಆಳಿಕೆಗೆ ಸೇರಿಸಿಕೊಂಡಿದ್ದ ಬೆಂಟಿಂಕನು ಮೈಸೂರನ್ನೂ ಸೇರಿಸಬೇಕೆಂದು ನಿಶ್ಚಯಿಸಿ, ರಾಜರಿಗೆ ಕ್ಲ್ರಪ್ತವಾದ ವಾರ್ಷಿಕವೇತನವನ್ನು ಗೊತ್ತುಮಾಡಿ ನಿರಧಿಕಾರಿಯಾಗಿ ಮಾಡಬೇಕೆಂದು ಯೋಚಿಸಿಕೊಂಡು, ೧೮೩೧ರಲ್ಲಿ ಹಾಗೆಯೇ ರಾಜರ ಅಧಿಕಾರವನ್ನು ಕೊನೆಗಾಣಿಸಿ, ದೇಶವನ್ನು ಇಬ್ಬರು ಇಂಗ್ಲಿಷ್ ಅಧಿಕಾರಿಗಳ ಆಡಳಿತದಲ್ಲಿರಿಸಿದನು. ವಾಸ್ತವವಾಗಿ ದಂಗೆಗೂ ಹೆಚ್ಚುವೆಚ್ಚಕ್ಕೂ ಬೇರೆ ಕಾರಣಗಳು ಇದ್ದುವು. ಬೆಂಟಿಂಕನಿಗೇ ಇದು ತಿಳಿಯಬಂದು ಮೈಸೂರು ರಾಜರ ವಿಷಯದಲ್ಲಿ ತನ್ನ ನಿಶ್ಚಯವು ಕಠಿನವಾದುದೆಂದು ಕಾಲ ಕಳೆದ ಮೇಲೆ ನೊಂದುಕೊಂಡನು. ಆದರೆ ೧೮೩೧ರಿಂದ ೧೮೮೧ರವರೆಗೆ ಐವತ್ತು ವರ್ಷಕಾಲ ದೇಶವು ಇಂಗ್ಲಿಷರ ವಶದಲ್ಲಿಯೇ ಇದ್ದು ಅವರ ಸ್ವಂತ ರಾಜ್ಯಭಾರದಲ್ಲಿ ಸೇರಿತ್ತು.



ಸರ್ ಮಾರ್ಕ್ ಕಬ್ಬ್ ಅವರು



ಸರ್ ಶೇಷಾದ್ರಿ ಅಯ್ಯರವರು

ಕಮ್ಮಿಷನರ ಕಾಲ ೧೮೩೧–೧೮೬೧

ಮೊದಮೊದಲು ಇಬ್ಬರು ಕಮ್ಮಿಷನರುಗಳಿದ್ದರು. ೧೮೩೪ರಲ್ಲಿ ಒಬ್ಬರೇ ಇರತಕ್ಕದೆಂದು ಗೊತ್ತಾಗಿ ಹೆಸರುವಾಸಿಯಾದ ಸರ್ ಮಾರ್ಕ್ ಕಬ್ಬನ್ ಎಂಬಾತನು ನಿಯಮಿತನಾಗಿ, ೨೭ ವರ್ಷಕಾಲ ಅಧಿಕಾರದಲ್ಲಿದ್ದನು. ಬೆಂಟಿಂಕನು ಕೆಲಕಾಲ ಮಟ್ಟಿಗೆ ಇಂಗ್ಲಿಷರ ಆಡಳಿತವು ನಡೆಯತಕ್ಕದೆಂದು ನಿಶ್ಚಯಿಸಿದ್ದರಿಂದ ಆಡಳಿತದಲ್ಲಿ ಸಾಧ್ಯವಾದಮಟ್ಟಿಗೂ ದೇಶದ ಪದ್ಧತಿಗಳನ್ನೇ ಅನುಸರಿಸತಕ್ಕದೆಂದೂ, ಮುಂದೆ ದೊರೆಗಳು ಪ್ರಭುತ್ವವನ್ನು ಪಡೆದಾಗ ಸೌಕರ್ಯವನ್ನು ಕೊಡದ ಏರ್ಪಾಡನ್ನು ಆಚರಣೆಯನ್ನು ತರಕೂಡದೆಂದೂ ತೀರ್ಮಾನಿಸಿದ್ದನು. ಇಂಗ್ಲಿಷ್ ಅಧಿಕಾರಿಗಳು ನಾಲ್ವರೇ ಸಾಕೆಂದು ಹೇಳಿದ್ದನು.

ಕಬ್ಬನ್ ಆಡಳಿತ ೧೮೩೪–೧೮೬೧

ಕಬ್ಬನ್‌ಸಾಹೇಬನು ಅದರಂತೆ ದೇಶವನ್ನು ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಮತ್ತು ನಗರಗಳೆಂದು ನಾಲ್ಕು ವಿಭಾಗಗಳನ್ನು ಮಾಡಿ, ಮೇಲ್ವಿಚಾರಣೆಗಾಗಿ ಒಂದೊಂದು ಭಾಗಕ್ಕೂ ಒಬ್ಬೊಬ್ಬ ಇಂಗ್ಲಿಷ್ ಅಧಿಕಾರಿಯನ್ನು ಸೂಪರಿಂಟೆಂಡೆಂಟ್ ಎಂಬ ಹೆಸರಿನಿಂದ ಗೊತ್ತುಮಾಡಿದನು. ಕಬ್ಬನ್‌ಸಾಹೇಬನ ಕಾಲದಲ್ಲಿ ರಾಜ್ಯಭಾರವನ್ನು ಕ್ರಮಕ್ಕೆ ತರುವುದೂ, ಸಾಲವನ್ನು ತೀರಿಸಿ ಆದಾಯವೆಚ್ಚಗಳನ್ನು ಸರಿಸಡಿಸುವುದೂ ಮುಖ್ಯಕೆಲಸಗಳಾಗಿದ್ದವು. ೭೭ಲಕ್ಷಗಳವರೆಗೂ ಏರಿದ್ದ ಸಾಲವು ತೀರಿ ಕಬ್ಬನ್ನಿನ ಆಳಿಕೆಯಲ್ಲಿ ಒಂದುಕೋಟಿ ರೂಪಾಯಿಯ ಉಳಿತಾಯವಾಯಿತು. ಅನೇಕ ಚಿಲ್ಲರೆ ತೆರಿಗೆಗಳು ರದ್ದಾದುದಲ್ಲದೆ ನೆಲಗಂದಾಯದ ವ್ಯವಸ್ಥೆಯಲ್ಲಿ ಷರ್ತಿ ಮತ್ತು ಬಟಾಯಿ ಎಂಬ ಹಿಂದಿನ ಪದ್ಧತಿಗಳು ಮಾಯವಾದವು. ಗೊತ್ತಾದಂತೆ ತನ್ನ ತಾಲ್ಲೂಕಿನ ಹುಟ್ಟುವಳಿಯನ್ನು ಸಲ್ಲಿಸಲು ಅಮಲ್ದಾರನಾದವನು ಮೊದಲೇ ಒಪ್ಪಿಕೊಂಡು ರೈತರನ್ನು ಹಿಂಸೆಪಡಿಸುವುದಿಲ್ಲವೆಂದು ಒಂದು ಮುಚ್ಚಳಿಕೆ ಬರೆದು ಕೊಡುತ್ತಿದ್ದ ಪದ್ಧತಿಗೆ ಷರ್ತಿಯೆಂದು ಹೆಸರು. ಮುಚ್ಚಳಿಕೆಯನ್ನು ಬರೆದುಕೊಟ್ಟರೂ ಕೂಡ ಜನರಿಗೆ ಹಿಂಸೆಯು ಸರ್ವದಾ ಸಿದ್ಧವಾಗಿಯೇ ಇತ್ತು. ಕಂದಾಯವನ್ನು ರೈತರು ಧಾನ್ಯದ

ರೂಪವಾಗಿಯೇ ಕೊಡುತ್ತಿದ್ದ ಪದ್ಧತಿಗೆ ಬಟಾಯಿಯೆಂದು ಹೆಸರು. ಕಬ್ಬನ್ನನು ಈ ಎರಡು ಪದ್ಧತಿಗಳೂ ಪ್ರಜೆಗೆ ಕಂಟಕಗಳಾಗಿದ್ದವೆಂದು ತಿಳಿದು ಕ್ರಮೇಣ ಎರಡನ್ನೂ ನಿಲ್ಲಿಸಿದನು. ರಸ್ತೆ, ಕೆರೆ, ಕಾಲುವೆ, ಸೇತುವೆ ಮುಂತಾದುವನ್ನು ಜೀರ್ಣೋದ್ಧಾರ ಮಾಡುವುದಕ್ಕೂ ಹೊಸದಾಗಿ ನಿರ್ಮಿಸುವುದಕ್ಕೂ ಮರಾಮತ್ ಇಲಾಖೆಯು ಪ್ರತ್ಯೇಕವಾಗಿ ಏರ್ಪಟ್ಟಿತು. ಜುಡಿಷಿಯಲ್ ಅಥವಾ ನ್ಯಾಯತೀರ್ಮಾನ ಭಾಗವೂ ಕೂಡ ಕಾಲ ಕ್ರಮೇಣ ಪ್ರತ್ಯೇಕವಾದ ಇಲಾಖೆಯಾಯಿತು. ಇವಲ್ಲದೆ ಇಂಗ್ಲಿಷ್ ವಿದ್ಯಾಭ್ಯಾಸ, ಮುದ್ರಣ ಮತ್ತು ಪಾಶ್ಚಾತ್ಯ ರೀತಿಯ ರೋಗ ಚಿಕಿತ್ಸೆಗಳೂ ಪ್ರೋತ್ಸಾಹವನ್ನು ಪಡೆದವು.

ಕಬ್ಬನ್‌ಸಾಹೇಬನು ಸಾಮರ್ಥ್ಯದಿಂದ ಆಳಿ ೧೮೬೧ರಲ್ಲಿ ನಿವೃತ್ತನಾದನು. ಆತನ ಕಾಲದಲ್ಲಿ ದೇಶದಲ್ಲಿ ಶಾಂತಿಯು ನೆಲೆಸಿ ಕೃಷಿ, ವ್ಯಾಪಾರಗಳು ಅಭಿವೃದ್ಧಿಯನ್ನು ಪಡೆದು ರಾಜ್ಯವು ಊರ್ಜಿತ ಸ್ಥಿತಿಗೆ ಬಂದಿತು. ಆದರೆ ದೇಶಿಯರನ್ನೇ ಅಧಿಕಾರಿಗಳನ್ನಾಗಿಟ್ಟುಕೊಳ್ಳುವ ನಿಯಮವು ಮಾತ್ರ ಆಚರಣೆಯಲ್ಲಿ ಸಾಧ್ಯವಾಗಲಿಲ್ಲ. ಮೊದಲಿದ್ದ ನಾಲ್ವರು ಇಂಗ್ಲಿಷ್ ಸೂಪರಿಂಟೆಂಡೆಂಟರಿಗೆ ಸಹಾಯಕರಾಗಿ ನಿಯಮಿತರಾದವರೂ ಇಂಗ್ಲಿಷರೇ ಆಗಿರುತ್ತಿದ್ದರು.

ಬೌರಿಂಗ್ ಆಡಳಿತ ೧೮೬೧–೧೮೭೦

ಕಬ್ಬನ್ ಸಾಹೇಬರ ತರುವಾಯ ಬೌರಿಂಗ್ ಸಾಹೇಬನು ಕಮ್ಮಿಷನರಾದನು. ಈತನ ಕಾಲದಲ್ಲಿ ರಾಜ್ಯವು ಪುನಃ ವಿಭಾಗಕ್ಕೆ ಗುರಿಯಾಗಿ ಅಷ್ಟಗ್ರಾಮ, ನಂದಿದುರ್ಗ ಮತ್ತು ನಗರ ಎಂಬ ಮೂರು ವಿಭಾಗಗಳಾಯಿತು. ಒಂದೊಂದು ವಿಭಾಗಕ್ಕೂ ಒಬ್ಬೊಬ್ಬ ಸೂಪರಿಂಟೆಂಡೆಂಟ್ ನಿಯಮಿತನಾದನು. ಮೂರು ಡಿವಿಜನ್ನುಗಳೂ ಎಂಟು ಜಿಲ್ಲೆಗಳಾಗಿ ಪ್ರತಿಜಿಲ್ಲೆಗೂ ಒಬ್ಬ ಡೆಪ್ಯುಟಿ ಸೂಪರಿಂಟೆಂಡೆಂಟನು ನಿಯಮಿತನಾದನು. ಒಟ್ಟು ಈ ಕಾಲದಲ್ಲಿ ಇಂಗ್ಲಿಷ್ ಅಧಿಕಾರಿಗಳ ಸಂಖ್ಯೆ ಹೆಚ್ಚಿತು. ಬೌರಿಂಗನ ಕಾಲದಲ್ಲಿ ಬಹುಕಾಲದಿಂದ ಅವಶ್ಯವೆನಿಸಿದ್ದ ಭೂಮಿಗಳ ಅಳತೆಯ ಕೆಲಸವು ಪ್ರಾರಂಭವಾಯಿತು. ಮುಂಬಯಿಯ ಸರ್ವೆ ಕ್ರಮವನ್ನೇ ಇಲ್ಲಿಯೂ ಅನುಸರಿಸಿ ಕಂದಾಯದ ಗೊತ್ತುವಳಿಯು ಮೂವತ್ತು ವರ್ಷ

ಸ್ಥಿರವಾಗಿರುವಂತೆ ಏರ್ಪಟ್ಟಿತು. ಇನಾಂ ಭೂಮಿಗಳ ವಿಚಾರಣೆಯನ್ನು ಆದ್ಯಂತವಾಗಿ ನಡೆಯಿಸುವುದಕ್ಕೆ ಒಂದು ವಿಚಾರಕ ಮಂಡಲಿಯು ನಿಯಮಿತವಾಗಿ ಮದರಾಸಿನ ಪದ್ಧತಿಯು ಆಚರಣೆಯಲ್ಲಿ ಬಂತು. ಬೌರಿಂಗನ ಕಾಲದಲ್ಲಿಯೇ ಬೆಂಗಳೂರು, ಮೈಸೂರು, ಶಿವಮೊಗ್ಗೆಗಳಲ್ಲಿ ಮುನಿಸಿಪಲ್ ಆಡಳಿತವೂ ಮೊದಲಾದುದು. ಈತನು ಪ್ರಾರಂಭಿಸಿದ ಒಂದು ಪದ್ಧತಿ ಮುಖ್ಯವಾದುದು : ಯಾವುದೆಂದರೆ ಬಡ್ಜೆಟ್ ಪದ್ಧತಿ--ಆಡಳಿತಗಾರರು ಹಿಂದಿನವರ್ಷದ ಆಯವ್ಯಯದ ಲೆಕ್ಕವನ್ನು ಕೊಟ್ಟು, ಮುಂದಿನ ವರ್ಷದ ಆದಾಯ ವೆಚ್ಚಗಳ ಅಂದಾಜನ್ನು ಮಾಡಿ, ಅದಕ್ಕನುಸಾರವಾಗಿ ಕಂದಾಯ ತೆರಿಗೆಗಳನ್ನೆತ್ತಿ, ನಿಷ್ಕೃಷ್ಟವಾದ ವೆಚ್ಚವನ್ನು ಕೈಕೊಳ್ಳುವುದು. ಇಂಗ್ಲಿಷ್ ವಿದ್ಯಾಭ್ಯಾಸ, ನ್ಯಾಯತೀರ್ಮಾನ ಮತ್ತು ಕಾಡುಗಳ ಪೋಷಣೆ ರಕ್ಷಣೆಗಳೂ ಅಭಿವೃದ್ಧಿಯಾದವು.

ಮಹಾರಾಜರ ಪ್ರಯತ್ನ

೧೮೩೧ರಲ್ಲಿ ಲಾರ್ಡ್ ಬೆಂಟಿಂಕನು ಮಹಾರಾಜರ ಆಳ್ವಿಕೆಯನ್ನು ನಿಲ್ಲಿಸಿದಾಗ ಕೆಲಕಾಲ ಮಾತ್ರವೇ ಇಂಗ್ಲಿಷರ ಸ್ವಂತ ಅಧಿಕಾರವು ನಡೆದು, ರಾಜ್ಯವು ಪುನಃ ಒಡೆಯರ ಸಂತತಿಯ ವಶಕ್ಕೆ ಬರುವುದಾಗಿ ಸೂಚಿಸಿದ್ದನು. ಮುಮ್ಮಡಿ ಕೃಷ್ಣರಾಜಒಡೆಯರು ರಾಜ್ಯಕೋಶಗಳನ್ನು ಬಿಟ್ಟುಕೊಟ್ಟಿದ್ದರೂ ಕೂಡ ಬ್ರಿಟಿಷರಲ್ಲಿ ಏಕರೀತಿಯಾದ ವಿಶ್ವಾಸ ಗೌರವಗಳನ್ನು ತೋರುತ್ತ ರಾಜ್ಯವನ್ನು ಪುನಃ ಪಡೆಯಲು ಮೇಲಣ ಅಧಿಕಾರಿಗಳಿಗೆ ಅರ್ಜಿಗಳನ್ನು ಬರೆಸಿ ಪ್ರಯತ್ನಿಸುತ್ತಲೇ ಇದ್ದರು. ೧೮೫೭ರಲ್ಲಿ ಪ್ರಸಿದ್ಧ ಸಿಪಾಹಿ ದಂಗೆಯು ಎದ್ದು ರೇಗಿದಾಗ ಮಹಾರಾಜರು ಬ್ರಿಟಿಷರ ಸ್ನೇಹವನ್ನೇ ಕಾಪಾಡಿಕೊಂಡು, ಅವರಿಗೆ ಬೆಂಬಲವನ್ನೂ ಸಹಾಯವನ್ನೂ ಒದಗಿಸಿದರು. ದಂಗೆಯು ಮುಗಿದ ಮೇಲೆ ಕಂಪೆನಿಯು ರದ್ದಾಗಿ ಇಂಗ್ಲೆಂಡಿನ ರಾಣಿಯಾಗಿದ್ದ ವಿಕ್ಟೋರಿಯ ರಾಣಿಯೇ ಸಕಲ ಭಾರತ ವರ್ಷಕ್ಕೂ ಸಮ್ರಾಜ್ಞಿಯೆನಿಸಿದಳು. ಆಗ ಮಹಾರಾಜರು ತಮ್ಮ ಸಂತೋಷವನ್ನು ಸೂಚಿಸಿ ಲಾರ್ಡ್ ಕ್ಯಾನಿಂಗ್, ಎಲ್ಗಿನ್ ಮುಂತಾದ ಇಂಗ್ಲಿಷ್ ಅಧಿಕಾರಿಗಳೊಡನೆ ತಮ್ಮ ರಾಜ್ಯವು ತಮಗೆ ಪುನಃ ಪ್ರಾಪ್ತಿಯಾಗುವ ವಿಚಾರವಾಗಿ ಕಾಗದ ಪತ್ರಗಳನ್ನು ನಡೆಸಿದರು. ಅರವತ್ತು ವರ್ಷ ತುಂಬಿದ ಮೇಲೆ ಮಹಾ

ರಾಜರು ಸಂತಾನವಿಲ್ಲದಿದ್ದುದರಿಂದ ದತ್ತಪುತ್ರಸ್ವೀಕಾರ ಯೋಚನೆಯನ್ನು ಮಾಡಿ, ೧೮೬೫ರಲ್ಲಿ ಮುಂದಿನ ಚಾಮರಾಜೇಂದ್ರ ಒಡೆಯರನ್ನು ಸ್ವೀಕಾರ ಮಾಡಿಕೊಂಡರು. ೧೮೬೬ರಲ್ಲಿ ಮಹಾರಾಜರ ಪಕ್ಷವನ್ನು ಹಿಡಿದು ಕೆಲವು ಪ್ರಮುಖ ಇಂಗ್ಲಿಷರು ಲಂಡನ್ನಿನಲ್ಲಿ ಭಾರತವರ್ಷದ ಸಚಿವನಲ್ಲಿ ಅರಿಕೆ ಮಾಡಿಕೊಂಡರು. ೧೮೬೭ರಲ್ಲಿ ರಾಜ್ಯವನ್ನು ಪುನಃ ಒಡೆಯರ ವಂಶಕ್ಕೇ ಕೊಡತಕ್ಕುದೆಂದು ನಿಷ್ಕರ್ಷೆಯಾಯಿತು. ಮಹಾರಾಜರ ಸ್ವೀಕೃತಪುತ್ರ ಚಾಮರಾಜೇಂದ್ರಒಡೆಯರು ವಯಸ್ಕರಾದಾಗ ಅವರಿಗೆ ರಾಜ್ಯಾಭಿಷೇಕ ವನ್ನು ಮಾಡಿಸುವುದಾಗಿ ಗೊತ್ತಾಯಿತು. ತಮಗೆ ದೊರೆಯದಿದ್ದರೂ ತಮ್ಮ ವಂಶಕ್ಕೆ ದೊರಕುವುದೆಂದು ಸಂತೋಷಿಸಿ, ಮಹಾರಾಜರವರು ತಮಗೆ ಲಭಿಸದಿದ್ದ ಶಿಕ್ಷಣವು ಮುಂದಿನ ಮಹಾರಾಜರಿಗೆ ನಡೆಯುವಂತೆ ಏರ್ಪಡಿಸಿ ೧೮೬೮ರಲ್ಲಿ ದಿವಂಗತರಾದರು.

ವೀರಕ್ಷಾಮ

೧೮೭೦ ರಲ್ಲಿ ಬೌರಿಂಗ್‌ಸಾಹೇಬನು ರಾಜೀನಾಮೆಯನ್ನು ಕೊಟ್ಟು ನಿವೃತ್ತನಾದನು. ಆತನ ಕಾಲದಲ್ಲಿ ಕಬ್ಬನ್‌ಸಾಹೇಬನು ಮೊದಲಿಟ್ಟಿದ್ದ ಆಡಳಿತದ ರೀತಿನೀತಿಗಳು ಮುಂಬರಿದು ದೇಶವು ಅಭಿವೃದ್ಧಿಗೆ ಬಂದಿದ್ದಾಗ್ಯೂ, ಇಂಗ್ಲಿಷರೇ ಹೆಚ್ಚು ಹೆಚ್ಚಾಗಿ ಅಧಿಕಾರಗಳನ್ನು ಪಡೆದಿದ್ದರು. ಮಹಾರಾಜರು ರಾಜ್ಯವನ್ನು ಪುನಃ ಪಡೆಯುವುದರಲ್ಲಿ ಇದೇ ಪ್ರತಿಬಂಧಕವಾಗಿತ್ತು. ಇಂಗ್ಲಿಷ್ ಅಧಿಕಾರಿಗಳ ಸಂಬಳಗಳು ಹೆಚ್ಚಾಗಿಯೇ ಇರಬೇಕಾಗಿದ್ದುದರಿಂದ ಆಡಳಿತದ ವೆಚ್ಚವು ಏರಿದುದಲ್ಲದೆ ಅಧಿಕಾರಗಳನ್ನು ಬಿಟ್ಟುಕೊಡಲು ಅಧಿಕಾರಸ್ಥ ಇಂಗ್ಲಿಷರಿಗೆ ಮನಬಾರಲಿಲ್ಲ. ಬೌರಿಂಗನ ತರುವಾಯ ಆಡಳಿತವನ್ನು ವಹಿಸಿದವರಿಗೆ ಅತ್ತಲಾಗಿ ತರುಣ ರಾಜರನ್ನು ಯೋಗ್ಯರೀತಿಯಲ್ಲಿ ತಿದ್ದುವುದೂ, ಇತ್ತಲಾಗಿ ರಾಜ್ಯವನ್ನು ಸುಸ್ಥಿತಿಗೆ ತಂದು ರಾಜರ ಸ್ವಂತ ಆಳಿಕೆಗೆ ಯೋಗ್ಯವಾಗಿ ಮಾಡಿಡುವುದೂ ಎರಡು ಕರ್ತವ್ಯಗಳು ಮುಖ್ಯವಾಗಿದ್ದವು. ಆದರೆ ೧೮೭೭-೭೮ರಲ್ಲಿ ವೀರಕ್ಷಾಮವು ತಲೆ ಹಾಕಿ ಜನರಲ್ಲಿ ಮೂರನೆಯ ಒಂದು ಪಾಲನ್ನು ನುಂಗಿದಾಗ ಅವಶ್ಯವಾದ ನಿವಾರಣೋಪಾಯಗಳ ಕಾರಣದಿಂದ ವೆಚ್ಚವು ಕಡಿಮೆಯಾಗದೆ ಹೆಚ್ಚೇ ಆಯಿತು. ಎಂಭತ್ತು ಲಕ್ಷಗಳವರೆಗೂ ಸಾಲವಾಯಿತು.



ದಿವಾನ್ ರಂಗಾಚಾರ್ಲು ಅವರು

ಕ್ಷಾಮವು ತೊಲಗಿದ ಮೇಲೆ ವೆಚ್ಚವನ್ನು ತಗ್ಗಿಸಲು ಒಂದು ವಿಚಾರಕ ಸಭೆಯೇರ್ಪಟ್ಟಿತು. ಹೆಚ್ಚು ಸಂಬಳಗಳನ್ನು ಪಡೆಯುತ್ತಿದ್ದ ಇಂಗ್ಲಿಷ್ ಅಧಿಕಾರಿಗಳ ಬದಲಾಗಿ ಕಡಿಮೆ ವೇತನಗಳನ್ನು ಕೊಟ್ಟು ದೇಶೀಯರನ್ನೇ ನಿಯಮಿಸಬೇಕೆಂದು ತೀರ್ಮಾನವಾಗಲು ಅದರಂತೆಯೇ ಇಂಗ್ಲಿಷ ಅಧಿಕಾರಿಗಳ ಸಂಖ್ಯೆ ಕಡಿಮೆಯಾಯಿತು.

ಗೋರ್ಡನ್

೧೮೭೮ರಲ್ಲಿ ಗೋರ್ಡನ್ ಎಂಬಾತನು ಚೀಫ್ ಕಮ್ಮಿಷನರ್ ಅಥವಾ ಪ್ರಧಾನಾಧಿಕಾರಿಯಾದನು. ಈತನು ತರುಣ ಮಹಾರಾಜರಿಗೆ ಕೆಲಕಾಲ ರಕ್ಷಕನಾಗಿದ್ದನು. ಈತನು ಅಧಿಕಾರವನ್ನು ವಹಿಸಿದಮೇಲೆ ರಾಜರ ಶಿಕ್ಷಣವನ್ನು ಯೋಗ್ಯರಾದ ಇಂಗ್ಲಿಷ ಪಂಡಿತರಿಂದ ಮಾಡಿಸಿ, ೧೮೮೦ರಲ್ಲಿ ಮಹಾರಾಜರನ್ನು ಕರೆದುಕೊಂಡು ದೇಶದ ಎಲ್ಲ ಭಾಗಗಳಲ್ಲಿಯೂ ಸಂಚರಿಸಿ, ದೇಶದ ಪರಿಚಯವನ್ನು ಪ್ರಭುವಿಗೆ ಮಾಡಿಕೊಟ್ಟನು. ಪ್ರಾಪ್ತವಯಸ್ಕರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರ ಪಟ್ಟಾಭಿಷೇಕವು ೧೮೮೧ನೆ ಮಾರ್ಚಿ ೨೫ನೆ ದಿನ ನಿಶ್ಚಯವಾದಂತೆ ನಡೆಯಿತು. ಐವತ್ತು ವರ್ಷ ಕಾಲ ನಡೆದಿದ್ದ ಬ್ರಿಟಿಷ ಕಮ್ಮಿಷನರ ಆಡಳಿತ ಕಾಲವು ಕೊನೆಯಾಯಿತು.

ಬ್ರಿಟಿಷರ ಆಳಿಕೆಯ ಪರಿಣಾಮ

ಬ್ರಿಟಿಷರ ಆಳಿಕೆಯಲ್ಲಿ ರಾಜ್ಯವು ಚೇತರಿಸಿಕೊಂಡದ್ದಲ್ಲದೆ ಎಲ್ಲ ಮಾರ್ಗಗಳಲ್ಲಿಯೂ ಅಭಿವೃದ್ಧಿಯ ಮಾರ್ಗವನ್ನು ಹಿಡಿಯಿತು. ಆಯವ್ಯಯದ ವ್ಯವಸ್ಥೆಯೇ ಆಪಿಯಾಗಿ ಆಡಳಿತದ ಎಲ್ಲ ಅಂಗಗಳಲ್ಲಿಯೂ ಕ್ರಮವೇರ್ಪಟ್ಟಿತು. ನ್ಯಾಯ ತೀರ್ಮಾನವು ಸಂಸ್ಕೃತವಾಗಿ, ಬ್ರಿಟಿಷ ರಾಜ್ಯದಲ್ಲಿದ್ದ ಕ್ರಮವು ಇಲ್ಲಿಯೂ ತೋರಿಕೊಂಡಿತು; ವ್ಯವಸಾಯ ವ್ಯಾಪಾರಗಳು ವೃದ್ಧಿಯಾದವು. ದೇಶದಲ್ಲಿ ರಸ್ತೆ, ಕಾಲುವೆ, ಸೇತುವೆ, ರೈಲ್ವೆಗಳಿಂದ ಸಂಚಾರಸೌಕರ್ಯವು ಹೆಚ್ಚಿತು. ವಿದ್ಯಾಶಾಲೆಗಳೂ, ಅಸ್ಪತ್ರೆಗಳೂ ತೋರಿಕೊಂಡವು. ಮುಖ್ಯವಾಗಿ ಬ್ರಿಟಿಷರ ಆಳಿಕೆಯಿಂದ ಪೂರ್ವದಲ್ಲಿ ವ್ಯಕ್ತಿಯ ಬಲದಿಂದ ನಡೆಯುತ್ತಿದ್ದ ಆಡಳಿತವು ತಪ್ಪಿ ಕ್ರಮವಾಗಿ, ಶಾಸನ ಸಮ್ಮತವಾಗಿ ಶಿಸ್ತಿನ ಬಲದಿಂದ ನಡೆಯುವ ಆಡಳಿತವು

ಪ್ರಾಪ್ತಿಯಾಯಿತು. ಬ್ರಿಟಿಷರ ಆಡಳಿತದಲ್ಲಿ ದೋಷಗಳಿಲ್ಲದೆ ಇರಲಿಲ್ಲ; ಆಡಳಿತದ ಹೆಚ್ಚು ವೆಚ್ಚ, ಉದ್ಯೋಗಕ್ಕೈಗಾರಿಕೆಗಳ ಕ್ಷಯ, ಪಂಚಾಯಿತಿ ಪದ್ಧತಿಯ ಕ್ಷೀಣತೆ ಮತ್ತು ಗ್ರಾಮ ಜೀವನದ ಶೈಥಿಲ್ಯಗಳು ಅವರ ಆಡಳಿತ ರೀತಿಯಿಂದಲೇ ಸಂಭವಿಸಿದವು. ಆದರೆ ಒಟ್ಟಿನಲ್ಲಿ ಬ್ರಿಟಿಷರ ರಾಜ್ಯಭಾರ ನಿರ್ವಾಹದಲ್ಲಿ ಶಾಂತಿಯು ನೆಲೆಸಿದುದಲ್ಲದೆ ಅಭಿವರ್ಧಕವಾದ ಅನೇಕ ವ್ಯವಸ್ಥೆಗಳೂ, ಚಲನೆಗಳೂ ನಡೆದವು.

ಆಡಳಿತದ ಮೂಲಕವೇ ಅಲ್ಲದೆ ಬೇರೆ ಮಾರ್ಗಗಳಲ್ಲಿಯೂ ಜನರಲ್ಲಿ ವಿಶೇಷವಾದ ಪ್ರಜ್ಞೆಯು ಮೂಡಿತು. ಪಾಶ್ಚಾತ್ಯ ನಾಗರಿಕತೆಯ ಪ್ರತ್ಯಕ್ಷ ಸಂಪರ್ಕ, ಇಂಗ್ಲಿಷ್ ವಿದ್ಯಾಭ್ಯಾಸ, ಕ್ರೈಸ್ತಮತ ಪರಿಚಯ ಮತ್ತು ಮುದ್ರಣದ ಉಪಯೋಗಗಳಿಂದ ಭಾರತ ವರ್ಷದಲ್ಲಿ ನಡೆದ ಬದಲಾವಣೆಗಳು ಮೈಸೂರಿನಲ್ಲಿಯೂ ತೋರಿಕೊಂಡವು. ಇಂಗ್ಲಿಷ್ ಶಾಲೆಗಳನ್ನು ಬ್ರಿಟಿಷ್ ಅಧಿಕಾರಿಗಳ ಬಲದಿಂದ ಮಿಷನೆರಿಗಳು ವೃದ್ಧಿಪಡಿಸಿಕೊಂಡರು. ಮೊಟ್ಟ ಮೊದಲಿನ ಇಂಗ್ಲಿಷ್ ಪಾಠಶಾಲೆಯು ಮುಮ್ಮಡಿ ಕೃಷ್ಣರಾಜ ಒಡೆಯರವರಿಂದಲೇ ಸ್ಥಾಪಿತವಾಗಿತ್ತು. ಮುದ್ರಣ ಯಂತ್ರಗಳು ಸ್ಥಾಪನೆಯಾದ ಕೂಡಲೆ ಸಂಸ್ಕೃತ, ಕನ್ನಡ ಗ್ರಂಥಗಳು ಅಚ್ಚಾಗಿ ವಿದ್ಯಾಪ್ರಸಾರಕ್ಕೆ ಸಹಾಯವಾಯಿತು. ಪ್ರಯಾಣ ಸೌಕರ್ಯಗಳಿಂದ ಜನರು ಪರಸ್ಪರ ಪರಿಚಯವನ್ನು ಹೆಚ್ಚಾಗಿ ಮಾಡಿಕೊಂಡು ಅನೇಕ ವಿಧಗಳಲ್ಲಿ ಪ್ರಜ್ಞಾವಂತರಾದರು.

ಶ್ರೀ ಚಾಮರಾಜೇಂದ್ರ ಒಡೆಯರ ಆಳಿಕೆ ೧೮೮೧–೧೮೯೪

೧೮೮೧ರಲ್ಲಿ ಬ್ರಿಟಿಷರು ಒಂದು ತಹನಾಮೆಯನ್ನು ಪ್ರಕಟಗೊಳಿಸಿ ಮುಮ್ಮಡಿ ಕೃಷ್ಣರಾಜ ಒಡೆಯರವರ ಸ್ವೀಕೃತಪುತ್ರರಾದ ಚಾಮರಾಜೇಂದ್ರ ಒಡೆಯರಿಗೆ ರಾಜ್ಯವನ್ನು ಒಪ್ಪಿಸಿದರು. ರಾಜ್ಯವನ್ನು ಬಿಟ್ಟುಕೊಡುವಾಗ ತಮ್ಮ ಶ್ರೇಷ್ಠಾಧಿಕಾರವನ್ನು ಭದ್ರಪಡಿಸಿಕೊಂಡದ್ದಲ್ಲದೆ ರಾಜ್ಯಾಡಳಿತವು ಯೋಗ್ಯವಾದ ರೀತಿಯಲ್ಲಿ ನಡೆದು ಬರುವಂತೆಯೂ, ತಾವು ಆಚರಣೆಯಲ್ಲಿ ತಂದಿದ್ದ ಆಡಳಿತದ ರೀತಿನೀತಿಗಳು ಶಿಥಿಲವಾಗದಂತೆಯೂ ಆ ಸಂದರ್ಭದಲ್ಲಿ ಕೆಲವು ಷರತ್ತುಗಳನ್ನೂ, ನಿಯಮಗಳನ್ನೂ ಗೊತ್ತು ಮಾಡಿದರು.

ಮಂತ್ರಾಲೋಚಕ ಸಭೆ

ತಹನಾಮೆಗೆ ಅನುಸಾರವಾಗಿ ಚಾಮರಾಜೇಂದ್ರ ಒಡೆಯರು ಪಟ್ಟಬಂಧೋತ್ಸವದಲ್ಲಿಯೇ ಒಂದು ಪ್ರಕಟನೆಯನ್ನು ಮಾಡಿಸಿ, ಆಡಳಿತದಲ್ಲಿ ಮಂತ್ರಾಲೋಚನ ಸಭೆಯೊಂದನ್ನು ನಿರ್ಮಿಸಿ, ಪ್ರಸಿದ್ಧ ರಂಗಾಚಾರ್ಲು ಯವರನ್ನು ದಿವಾನರನ್ನಾಗಿ ನಿಯಮಿಸಿದರು. ಈ ಮಂತ್ರಾಲೋಚಕ ಸಭೆಯೇ ಕಾರ್ಯನಿರ್ವಾಹಕ ಸಭೆಯೂ ಆಗಿ ಆಡಳಿತದ ಎಲ್ಲ ವಿಚಾರವನ್ನೂ ನಿರ್ವಹಿಸಲು ಪ್ರಾರಂಭವಾಯಿತು. ಸಭೆಗೆ ದಿವಾನ್ ರಂಗಾಚಾರ್ಲುಯವರೇ ಅಧ್ಯಕ್ಷರಾದರು ; ಮೊದಲ ಸಭೆಯಲ್ಲಿ ಅವರಲ್ಲದೆ ಮೂವರು ಸಭಿಕರು ನಿಯಮಿತರಾಗಿದ್ದರು.

ಯುದ್ಧ ಸಂಭವವು ಬ್ರಿಟಿಷರು ಆಳಿಕೆಯನ್ನು ವಹಿಸಿದಾಗಲೇ ನಿಂತಿತು. ಆದ್ದರಿಂದ ಮುಂದಿನ ಚರಿತ್ರೆಯಲ್ಲಿ ಒಳ ಆಡಳಿತದ ವಿಷಯವೇ ಮುಖ್ಯವಾಗಿರುತ್ತದೆ.

ಸುಶಿಕ್ಷಿತರಾಗಿದ್ದ ಮಹಾರಾಜರು ಯೋಗ್ಯರಾದ ಅಧಿಕಾರಿಗಳನ್ನು ನಿಯಮಿಸಿದರು. ಸಹಜವಾಗಿ ಉದಾರಿಗಳೂ, ಸದ್ಗುಣಿಗಳೂ ಆಗಿದ್ದು ಜನರ ಪ್ರೀತಿಗೆ ಪಾತ್ರರಾಗಿ, ಸ್ವರಾಜ್ಯದಲ್ಲಿಯೂ, ದಿಲ್ಲಿ, ಕಲಕತ್ತಾ, ಮುಂಬಯಿ ಮುಂತಾದ ಮುಖ್ಯ ಪಟ್ಟಣಗಳಲ್ಲಿಯೂ ತೀರ್ಥಕ್ಷೇತ್ರಗಳಲ್ಲಿಯೂ ಸಂಚಾರಮಾಡಿ, ಒಡೆಯರ ಮನೆತನಕ್ಕೆ ಒಳಗೂ ಹೊರಗೂ ಗೌರವ ಸಲ್ಲುವಂತೆ ಮಾಡಿದರು. ಕ್ರಮವಾದ ರಾಜ್ಯಭಾರವನ್ನು ನಡೆಸುತ್ತ ತಹನಾಮೆಯ ಷರತ್ತುಗಳನ್ನು ಪಾಲಿಸಿದ್ದರಿಂದ ಅತ್ತಕಡೆ ಬ್ರಿಟಿಷರಿಂದಲೂ, ಇತ್ತಕಡೆ ಪ್ರಜೆಗಳಿಂದಲೂ ಮೆಚ್ಚುಗೆಯನ್ನು ಪಡೆದರು. ಕ್ರಮಬದ್ಧ ಸರ್ಕಾರವು ನೆಲೆಸಿ ರಾಜ್ಯಭಾರವು ದಿವಾನರ ಮೂಲಕವೇ ನಡೆಯಲು ಮೊದಲಿಟ್ಟಾಗಿನಿಂದ ರಾಜ್ಯದ ಉನ್ನತಿ ಅವನತಿಗಳ ವೃತ್ತಾಂತವು ದಿವಾನರ ಆಡಳಿತದ ವೃತ್ತಾಂತವೇ ಆಗಿರುತ್ತದೆ. ಇಂಗ್ಲಿಷರು ನಡೆಸಿದ ಸಂಧಾನದಿಂದ ಸಾಂಕುಶ ಪ್ರಭುತ್ವವೇ ಮೈಸೂರಿನಲ್ಲಿ ನೆಲೆಯಾಗಿ, ಇಂಗ್ಲೆಂಡಿನ ರಾಜ್ಯಕ್ರಮವನ್ನು ಹೋಲದಿದ್ದರೂ ಆ ಕ್ರಮವೇ ಆದರ್ಶವಾಗಿ ಪರಿಣಮಿಸಿತು. ಅದರಿಂದ ಮಹಾರಾಜರು ರಾಜ್ಯಕ್ಕೆ ಅಲಂಕಾರ ಸ್ವರೂಪರೂ, ಎಲ್ಲರಿಗೂ ಮೇಲ್ಪಟ್ಟ ಅಧಿಕಾರಿಗಳೂ ಆದರು.

ದಿವಾನ್ ರಂಗಾಚಾರ್ಲು

ಸಾಂಕುಶಪ್ರಭುತ್ವರೂಪವಾದ ಪ್ರಾತಿನಿಧ್ಯ ನೆಲೆಸುವುದಕ್ಕೂ ರಾಜ್ಯದಲ್ಲಿ ನಾನಾಮುಖವಾದ ಅಭಿವೃದ್ಧಿಗೆ ಅಂಕುರಾರ್ಪಣವಾಗುವುದಕ್ಕೂ ೧೮೮೧ ರಲ್ಲಿ ದಿವಾನ್ ಕೆಲಸದಲ್ಲಿ ನಿಯಮಿತರಾಗಿ ದುರ್ದೈವದಿಂದ ೧೮೮೩ ರಲ್ಲಿ ಕಾಲವಶರಾದ ರಂಗಾಚಾರ್ಲುಯವರೇ ಮುಖ್ಯ ಕಾರಣರು. ಮದರಾಸಿನಲ್ಲಿ ಶಿಕ್ಷಿತರಾಗಿ ಅಲ್ಲಿಯೇ ಅನೇಕ ಹುದ್ದೆಗಳಲ್ಲಿದ್ದು, ಕಮ್ಮಿಷನ್ ಕಾಲದಲ್ಲಿ ಮೈಸೂರಿಗೆ ಬಂದು, ಇಲ್ಲಿಯೂ ಅನೇಕ ನೌಕರಿಗಳಲ್ಲಿದ್ದು, ರಂಗಾಚಾರ್ಲುಯವರು ಕಡೆಗೆ ಮುಖ್ಯ ಸಚಿವರಾದರು. ನಿರ್ದಾಕ್ಷಿಣ್ಯಯುತರೂ, ಪ್ರಜಾ ಪಕ್ಷಪಾತಿಗಳೂ, ದೂರದರ್ಶಿಗಳೂ ಆಗಿದ್ದುದರಿಂದ ಇವರ ಕಾಲದಲ್ಲಿ ರಾಜ್ಯದ ಪುರೋಭಿವೃದ್ಧಿಗೆ ತಳಹದಿಯು ಸಿದ್ಧವಾಯಿತು.

ಇವರು ದಿವಾನರಾದಾಗ ರಾಜ್ಯಕ್ಕೆ ೮೦ ಲಕ್ಷ ರೂ. ಸಾಲವಿದ್ದುದಲ್ಲದೆ ಕ್ಷಾಮಡಾಮರಗಳಿಂದ ರಾಜ್ಯವು ಪೀಡಿತವಾಗಿತ್ತು. ರಂಗಾಚಾರ್ಲುಯವರು ಸಾಲವನ್ನು ಕ್ರಮವಾಗಿ ತೀರಿಸಲು ತಕ್ಕ ಏರ್ಪಾಟುಗಳನ್ನು ಮಾಡಿ, ಆಡಳಿತದಲ್ಲಿ ಹೆಚ್ಚು ವೆಚ್ಚವನ್ನು ತಗ್ಗಿಸಿ, ವ್ಯವಸಾಯ ವ್ಯಾಪಾರಗಳ ಅಭಿವೃದ್ಧಿಗೆ ಮೂಲಸಾಧನೆಯೆನಿಸಿದ ರೈಲು ಮಾರ್ಗಗಳನ್ನು ಹಾಕಿಸಲು ಪ್ರಾರಂಭಿಸಿದರು. ವಿದ್ಯಾಭಿವೃದ್ಧಿ, ಸಮಾಜ ಸಂಸ್ಕಾರ, ಸ್ತ್ರೀ ವಿದ್ಯಾಭ್ಯಾಸ ಮತ್ತು ದೇಶಭಾಷೆಗಳಲ್ಲಿ ವತ್ಸಲರಾಗಿದ್ದು ಉತ್ತೇಜನ ಕೊಟ್ಟರು. ದೇಶೀಯರನ್ನೇ ಅಧಿಕಾರಗಳಿಗೆ ನಿಯಮಿಸಿಕೊಳ್ಳುತ್ತಿದ್ದುದಲ್ಲದೆ, ದೇಶದ ಜನರೇ ಪ್ರಾಜ್ಞರಾಗಿ ತಮ್ಮ ಆಡಳಿತವನ್ನು ತಾವೇ ನಿರ್ವಹಿಸಿಕೊಳ್ಳುವಂತೆ ಶಕ್ತಿಯುತರಾಗಬೇಕೆಂಬ ಗುರಿಯನ್ನೇ ಪರಮಧ್ಯೇಯವಾಗಿಟ್ಟುಕೊಂಡಿದ್ದುದರಿಂದ ಈ ದಿವಾನರು ಪ್ರಜಾಪ್ರತಿನಿಧಿಸಭೆಯನ್ನು ೧೮೮೧ರಲ್ಲಿಯೇ ಸಾಹಸದಿಂದ ಸ್ಥಾಪಿಸಿದರು. ಭಾರತವರ್ಷದಲ್ಲಿ ಮತ್ತೆಲ್ಲಿಯೂ ಇಂತಹ ವ್ಯವಸ್ಥೆಯಿರಲಿಲ್ಲ. ಅನೇಕರು ರಂಗಾಚಾರ್ಲುಯವರ ಯೋಚನೆಯು ಸೂಕ್ತವಲ್ಲವೆಂದು ಒಳ ಒಳಗೆ ಭಾವಿಸಿದ್ದರು. ಆದರೂ ಎದೆಗೆಡದೆ ರಂಗಾಚಾರ್ಲುಯವರು ಮಹಾರಾಜರ ಬೆಂಬಲದಿಂದ ಅತ್ಯುತ್ತಮವಾದ ಆ ಮಾರ್ಗದಲ್ಲಿ ಹೆಜ್ಜೆಯನ್ನಿಟ್ಟು, ಅಂತಃಕರಣ ಪೂರ್ತಿಯಾಗಿ ಆ ಸಭೆಯನ್ನು ಪೋಷಿಸುತ್ತಿದ್ದು, ೧೮೮೩ ರಲ್ಲಿ ತೀರಿಕೊಂಡರು.

ದಿವಾನ್ ಶೇಷಾದ್ರಿ ಅಯ್ಯರ್

ಅವರ ತರುವಾಯ ಅವರು ಸೂಚಿಸಿದ್ದಂತೆಯೇ ಮಹಾರಾಜರು ಕೆ. ಶೇಷಾದ್ರಿ ಅಯ್ಯರ್ ಎಂಬವರನ್ನು ದಿವಾನರಾಗಿ ನೇಮಕಮಾಡಿದರು. ಇವರು ರಂಗಾಚಾರ್ಲುಯವರು ಪ್ರಾರಂಭಿಸಿದ ಕೆಲಸಗಳನ್ನು ಮುಂದು ವರಿಸಿದರು. ರೈಲ್ದಾರಿಗಳು ವೃದ್ಧಿಯಾದವು; ೧೮೮೮ರಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಮತ್ತು ಬೆಂಗಳೂರಿಂದ ಗುಬ್ಬಿಗೆ ಒಟ್ಟು ೧೪೦ ಮೈಲಿಗಳ ರೈಲಿತ್ತು. ಶೇಷಾದ್ರಿ ಅಯ್ಯರ್‌ರವರ ಕಾಲದಲ್ಲಿ ಹರಿಹರದವರೆಗೂ ಈ ಮಾರ್ಗವು ಮುಗಿದು ಹೊಸದಾಗಿ ಬೆಂಗಳೂರಿನಿಂದ ಹಿಂದೂಪುರಕ್ಕೂ ರೈಲು ಸಿದ್ಧವಾಯಿತು. ತರುವಾಯ ಮೈಸೂರಿನಿಂದ ನಂಜನಗೂಡಿಗೂ, ಆ ತರುವಾಯ ಚಿನ್ನದ ಗಣಿಗೂ ರೈಲು ಹೊರಡುವಂತಾಯಿತು. ನೀರಾವರಿ ಕೆಲಸಗಳು ನಡೆದು, ಸಾಲ ತೀರಿ, ರಾಜ್ಯಾದಾಯವು ವೃದ್ಧಿಯನ್ನೈದುವ ಸ್ಥಿತಿಯು ಪ್ರಾಪ್ತವಾಯಿತು.

೧೮೮೪ರಲ್ಲಿ ಚೀಫ್ ಕೋರ್ಟು ಸ್ಥಾಪಿತವಾಯಿತು. ಕ್ರಮೇಣ ಪೋಲೀಸು, ಕಾಡು, ವ್ಯವಸಾಯ, ಭೂಶೋಧನೆ, ಆರೋಗ್ಯ ರಕ್ಷಣೆ, ಶಿಕ್ಷಣ, ಪ್ರಾಕ್ತನವಿಮರ್ಶೆ, ಮುಜರಾಯಿ, ಆಬ್ಕಾರಿ ಕರ್ತವ್ಯಗಳು ವಿಸ್ತಾರವಾಗಿ ಸರ್ಕಾರದ ಇಲಾಖೆಗಳಾದವು. ಕೋಲಾರದಲ್ಲಿ ಚಿನ್ನದ ಗಣಿಗಳ ಕೆಲಸ, ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿ ಮತ್ತು ಪ್ರಯೋಗ, ನೆಯ್ಗೆಯ ಗಿರಣಿಗಳು ಮತ್ತು ಸಿವಿಲ್ ಸರ್ವಿಸ್ ಪರೀಕ್ಷೆಗಳು ಇವೆಲ್ಲ ಶೇಷಾದ್ರಿ ಅಯ್ಯರವರ ಕಾಲದಲ್ಲಿ ಪ್ರಾರಂಭವಾದವುಗಳೇ.

ಮಹಾರಾಜರ ಅಕಾಲಮರಣ—ರೀಜೆಂಟರ ಆಡಳಿತ

ಮಹಾರಾಜರು ಪ್ರಮುಖರಾದ ಪ್ರಜೆಗಳೊಡನೆಯೂ, ಇಂಗ್ಲಿಷ ಸರದಾರರು ಮತ್ತು ಅಧಿಕಾರಿಗಳೊಡನೆಯೂ ಸ್ನೇಹ ಕಟ್ಟುತ್ತಲಿದ್ದು ಇತರ ಭಾರತೀಯರೊಡನೆಯೂ ಸ್ನೇಹದಿಂದಿರುತ್ತಿದ್ದರು. ಮೈಸೂರಿಗೆ ಇಂಗ್ಲಿಷ ಅಧಿಕಾರಿಗಳು ಆಗಾಗ್ಗೆ ಬರುತ್ತ ಮಹಾರಾಜರನ್ನು ಶ್ಲಾಘಿಸಿ ಹೋಗುತ್ತಲಿದ್ದರು. ಬಂದ ಭಾರತೀಯರಲ್ಲಿ ಶ್ರೀ ವಿವೇಕಾನಂದಸ್ವಾಮಿಗಳು ಮಹಾರಾಜರ ಮಿತ್ರರೆನಿಸಿ ಮೈಸೂರಿಗೆ ಬಂದಿದ್ದುದೂ, ಸ್ವಾಮಿಜಿಯವರು ಅಮೆರಿಕಾಕ್ಕೆ ಹೋಗುವ ಸಂದರ್ಭದಲ್ಲಿ ಮಹಾರಾಜರು ಸಹಾಯ

ಮಾಡಿದುದೂ ಜ್ಞಾಪಕಾರ್ಹವಾದ ಸಂಗತಿಗಳು. ಹೀಗಿರಲು ಮಹಾರಾಜರು ಉತ್ತರದಲ್ಲಿ ಸಂಚಾರ ಮಾಡುತ್ತಿದ್ದು ೧೮೯೪ರಲ್ಲಿ ಡಿಫ್ಥೀರಿಯಾ ರೋಗದಿಂದ ಕಲಕತ್ತೆಯಲ್ಲಿ ತೀರಿಹೋದರು. ಜ್ಯೇಷ್ಠಪುತ್ರರಾದ ಶ್ರೀ ಕೃಷ್ಣರಾಜ ಒಡೆಯರವರು ಆಗ್ಗೆ ಇನ್ನೂ ಹತ್ತು ವರ್ಷದ ಬಾಲಕರಾಗಿ ಇದ್ದುದರಿಂದ ವೈಸರಾಯಿಯವರು ಮಾತೃ ಶ್ರೀ ವಾಣೀವಿಲಾಸ ಸನ್ನಿಧಾನದವರು ರೀಜೆಂಟರಾಗಿಯೂ, ಸರ್ ಕೆ. ಶೇಷಾದ್ರಿಅಯ್ಯರ್‌ರವರು ದಿವಾನರಾಗಿಯೂ ಇರತಕ್ಕುದೆಂದು ಗೊತ್ತುಮಾಡಿದರು. ೧೯೦೧ರವರೆಗೆ ಇಬ್ಬರೂ ಸೇರಿ ಸಾಮರ್ಥ್ಯದಿಂದ ದೇಶವನ್ನಾಳಿದರು. ೧೯೦೧ರಲ್ಲಿ ಸರ್ ಶೇಷಾದ್ರಿ ಅಯ್ಯರ್‌ರವರ ಅಧಿಕಾರವು ಕೊನೆಗೊಂಡಿತು. ಆಗ ಸರ್ ಪಿ. ಎನ್. ಕೃಷ್ಣಮೂರ್ತಿಗಳವರು ದಿವಾನರಾದರು.

ನಾಲ್ಮಡಿ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಆಳಿಕೆಯು
ಪ್ರಥಮ ಭಾಗ

೧೯೦೨ರಲ್ಲಿ ಪ್ರಾಪ್ತವಯಸ್ಕರಾದ ಕೂಡಲೆ ನಮ್ಮ ಈಗಿನ ಮಹಾರಾಜರು ರಾಜ್ಯಸೂತ್ರಗಳನ್ನು ಕೈಕೊಂಡರು. ಯಳಂದೂರಿನ ಜಹಗೀರದಾರರಾಗಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಗಳೇ ದಿವಾನರಾಗಿದ್ದರು. ೧೯೦೨ರಲ್ಲಿ ವೈಸರಾಯರಾಗಿದ್ದ ಲಾರ್ಡ್ ಕರ್ಜನ್ನರು ಮೈಸೂರಿಗೆ ಬಂದು, ಮಹಾರಾಜರನ್ನು ರಾಜ್ಯಾಧಿಕಾರದಲ್ಲಿ ಪ್ರತಿಷ್ಠಿಸಿದರು. ಸುಶಿಕ್ಷಿತರಾದ ಮಹಾರಾಜರು ಅಂದಿನಿಂದ ಸಾಂಕುಶ ಪ್ರಭುತ್ವದ ರಾಷ್ಟ್ರದಲ್ಲಿ ಅನುಸರಿಸತಕ್ಕ ಕ್ರಮವನ್ನು ಬಿಡದೆ, ರಾಜ್ಯಾಭ್ಯುದಯದಲ್ಲಿ ಬದ್ಧದೃಷ್ಟಿಯುಳ್ಳವರಾಗಿಯೂ ಪ್ರಜೆಗಳಲ್ಲಿ ನಿಜ ವಾತ್ಸಲ್ಯವುಳ್ಳವರಾಗಿಯೂ ಆಳುತ್ತಲಿದ್ದಾರೆ.

ದಿವಾನರುಗಳು

ಸರ್ ಪಿ. ಎನ್. ಕೃಷ್ಣಮೂರ್ತಿಗಳು ೧೯೦೬ರಲ್ಲಿ ದಿವಾನ್ ಕೆಲಸದಿಂದ ನಿವೃತ್ತರಾದ ಮೇಲೆ ವಿ. ಪಿ. ಮಾಧವರಾಯರು ದಿವಾನರಾಗಿ ೧೯೦೯ರ ವರೆಗೆ ಕೆಲಸದಲ್ಲಿದ್ದರು. ತರುವಾಯ ಟಿ. ಆನಂದರಾಯರು ೧೯೧೨ರವರೆಗೆ ದಿವಾನರಾಗಿದ್ದರು. ೧೯೧೨ರಿಂದ ೧೯೧೮ರ ವರೆಗೆ ಪ್ರಸಿದ್ಧರಾದ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನರಾಗಿದ್ದರು. ಬಳಿಕ ಸರ್ ಎಂ. ಕಾಂತರಾಜ ಅರಸರು, ಸರ್ ಅಲ್ಬಿಯನ್ ಬಾನರ್ಜಿಯವರು ಮತ್ತು ಸರ್ ಮಿರ್ಜಾ ಇಸ್ಮಾಯಿಲ್‌ರವರು ದಿವಾನ ಪದವಿಯಲ್ಲಿ ಕ್ರಮವಾಗಿ ನಿಯುಕ್ತರಾದರು. ರೀಜೆನ್ಸಿ ಕಳೆದ ತರುವಾಯ ರಾಜ್ಯಭಾರದಲ್ಲಿ ಅನೇಕ ಸಂಗತಿಗಳು ನಡೆದಿವೆ. ಸಂಗತಿಗಳು ಇನ್ನೂ ಬಹಳ ಸಮೀಪವಾಗಿದ್ದು ಸ್ವಂತ ಅನುಭವದಲ್ಲಿಯೇ ಸೇರಿದವರಾದ್ದರಿಂದ ಚರಿತ್ರೆಯಲ್ಲಿ ಅವುಗಳ ಸ್ಥಾನ ಮಹತ್ವಗಳನ್ನು ಶಾಸ್ತ್ರೀಯವಾಗಿ ನಿಷ್ಕರ್ಷಿಸಲಾಗುವುದಿಲ್ಲ. ಆದ್ದರಿಂದ ಬ್ರಿಟಿಷರ ಸಂಬಂಧ, ಅರ್ಥಿಕಾಭಿವೃದ್ಧಿ ಮತ್ತು ಪ್ರಾತಿನಿಧ್ಯ ವೃದ್ಧಿ

ಗಳೆಂಬ ಭಾಗಗಳಲ್ಲಿ ಮುಖ್ಯವಾದ ಸಂಗತಿಗಳನ್ನು ಮಾತ್ರ ಕಾಣಲಾಗುವುದು.

ಬ್ರಿಟಿಷರೊಡನೆ ಸಂಬಂಧಗಳು

ಲಾರ್ಡ್ ಕರ್ಜನ್ನರ ತರುವಾಯ ಪ್ರತಿ ವೈಸರಾಯಿಯೂ ಮೈಸೂರಿಗೆ ಬಂದು ಕೆಲದಿನಗಳಿದ್ದು ಹೋಗುವುದು ವಾಡಿಕೆಯಾಗಿದೆ. ೧೯೦೬ರಲ್ಲಿ ಆಗ ಬ್ರಿಟಿಷ್ ಯುವರಾಜರಾಗಿದ್ದ ಜಾರ್ಜರೂ, ೧೯೨೧ರಲ್ಲಿ ಯುವರಾಜ ಎಡ್ವರ್ಡರೂ ಮೈಸೂರಿಗೆ ಬಂದು ಸಂತುಷ್ಟರಾಗಿ ಹೋದರು. ಮಹಾರಾಜರು ಬ್ರಿಟಿಷರ ಸಂಬಂಧವನ್ನು ಸ್ವಲ್ಪ ಲೋಪವೂ ಇಲ್ಲದಂತೆ ಕಾಪಾಡಿಕೊಂಡು ಬಂದಿರುತ್ತಾರೆ. ೧೯೧೩ರಲ್ಲಿ ವೈಸರಾಯಿಯಾಗಿದ್ದ ಲಾರ್ಡ್ ಹಾರ್ಡಿಂಜರು ಮೈಸೂರಿಗೆ ಬಂದಿದ್ದಾಗ ೧೮೮೧ರಲ್ಲಿ ಹುಟ್ಟಿದ್ದ ತಹನಾಮೆ ಅಥವಾ ಪ್ರಕಟನೆಯನ್ನು ಕೌಲಿನ ರೂಪವಾಗಿ ಮಾಡಿ ಮೈಸೂರಿನ ಮಹಾರಾಜರು ಬ್ರಿಟಿಷರ ಮಿತ್ರರೆಂದು ಹೊಸದಾದ ಕರಾರನ್ನು ನಡೆಸಿದರು. ೧೯೧೪ರಲ್ಲಿ ಬ್ರಿಟಿಷರಿಗೂ ಜರ್ಮನರಿಗೂ ಘೋರವಾದ ಯುದ್ಧವು ಮೊದಲಾದಾಗ ಮಹಾರಾಜರು ೫೦ ಲಕ್ಷಗಳನ್ನು ಉಚಿತವಾಗಿ ಕೊಟ್ಟು ಯುದ್ಧಕ್ಕಾಗಿ ತಮ್ಮ ಸ್ವಂತ ಫೌಜನ್ನು ಕಳುಹಿಸಿದರು. ಮೈಸೂರಿನ ಸೈನ್ಯವು ಮಿಶ್ರದೇಶದಲ್ಲಿ ಯುದ್ಧಮಾಡಿ ಹಿಂತಿರುಗಿಬಂತು. ಆ ದೊಡ್ಡ ಯುದ್ಧವು ೧೯೧೮ರಲ್ಲಿ ಕೊನೆಗಂಡಿತು. ೧೯೨೭ರಲ್ಲಿ ಲಾರ್ಡ್ ಇರ್ವಿನ್ನರು ರಾಜಧಾನಿಗೆ ಬಂದಿದ್ದಾಗ ಅನೇಕ ವರ್ಷಗಳಿಂದ ಮಹಾರಾಜರ ಸರ್ಕಾರದವರು ಅರಿಕೆ ಮಾಡುತ್ತಿದ್ದುದನ್ನು ಮನ್ನಿಸಿ, ವಾರ್ಷಿಕ ಪೊಗದಿಯಲ್ಲಿ ೧೦॥ ಲಕ್ಷಗಳನ್ನು ಕಡಿಮೆಮಾಡಿದರು.

ಆರ್ಥಿಕಾಭಿವೃದ್ಧಿ

ರಂಗಾಚಾರ್ಲುರವರ ಕಾಲದಿಂದ ಆಡಳಿತದ ಲಕ್ಷ್ಯವು ಆರ್ಥಿಕಾಭಿವೃದ್ಧಿಯಲ್ಲಿಯೇ ಇದ್ದಾಗ್ಯೂ ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನ್ ಪದವಿಯನ್ನು ವಹಿಸುವವರೆಗೆ ಅತ್ತಕಡೆ ವಿಶೇಷ ಗಮನವನ್ನು ಕೊಟ್ಟಿರಲಿಲ್ಲ. ಸರ್ ವಿಶ್ವೇಶ್ವರಯ್ಯನವರು ಸಂಸ್ಥಾನದ ಆರ್ಥಿಕೋನ್ನತಿಯ ಮಾರ್ಗಗಳನ್ನು ಆಲೋಚಿಸುವ ಸಲುವಾಗಿಯೇ ಪ್ರತ್ಯೇಕವಾಗಿ ಸ್ಥಾಪಿತವಾಗಿದ್ದ ಒಂದು ಸಭೆಯನ್ನು ಬಹಳವಾಗಿ ಮುಂದುವರಿಸಿದರು. ತಮ್ಮ

ಸ್ವಂತ ಸಾಹಸದಿಂದಲೇ ಕೆಲಸಮಾಡುತ್ತ ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಅಣೆಕಟ್ಟನ್ನು ಕಟ್ಟಿಸಿ ಶ್ರೀಕೃಷ್ಣರಾಜ ಸಾಗರವನ್ನೂ, ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನೂ, ಮೈಸೂರು ಬ್ಯಾಂಕು ಮತ್ತು ವಿಶ್ವವಿದ್ಯಾನಿಲಯಗಳನ್ನೂ ರೂಪಗೊಳಿಸಿದರು. ಇತರ ಬಗೆಗಳಲ್ಲಿಯೂ ಅವರ ಕಾಲವು ಬಹು ಚುರುಕಾಗಿದ್ದು ಆರ್ಥಿಕಾಭಿವೃದ್ಧಿಯ ಅನೇಕ ಪ್ರಯತ್ನಗಳು ಪ್ರಾರಂಭವಾದವು. ಅಂದಿನಿಂದ ಆರ್ಥಿಕಪ್ರಯತ್ನಗಳು ಆಡಳಿತದಲ್ಲಿ ಮುಖ್ಯವೆನಿಸಿವೆ.

ಪ್ರಾತಿನಿಧ್ಯದ ಏಳಿಗೆ

ದೂರದೃಷ್ಟಿಯುಳ್ಳ ರಂಗಾಚಾರ್ಲುಯವರು ೧೮೮೧ರಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ್ದರು. ೧೮೯೧ರಲ್ಲಿ ಆ ಸಭೆಗೆ ಸಭಿಕರನ್ನು ಚುನಾಯಿಸುವ ಪದ್ಧತಿಯು ಪ್ರಾರಂಭವಾಯಿತು. ತಮ್ಮ ಕಷ್ಟನಷ್ಟಗಳನ್ನು ವ್ಯಕ್ತಗೊಳಿಸುವುದಲ್ಲದೆ, ಸಭಿಕರು ಆಡಳಿತ ವಿಷಯಗಳನ್ನು ಚರ್ಚಿಸಿ ಸರ್ಕಾರಕ್ಕೆ ಸೂಚನೆಗಳನ್ನು ಕೊಡುವುದಕ್ಕೂ, ರಾಜ್ಯಭಾರ ನಿರ್ವಾಹದಲ್ಲಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವುದಕ್ಕೂ ಮೊದಲಾಯಿತು. ೧೯೦೭ರಲ್ಲಿ ಲೆಜಿಸ್ಲೆಟಿವ್ ಕೌನ್ಸಿಲ್ ಅಥವಾ ನ್ಯಾಯವಿಧಾಯಕಸಭೆಯು ಸ್ಥಾಪಿತವಾಯಿತು. ಮಂತ್ರಾಲೋಚಕಸಭೆಯೇ ಸರ್ಕಾರವಾಗಿಯೂ, ಪ್ರತಿನಿಧಿಸಭೆ ಮತ್ತು ನ್ಯಾಯವಿಧಾಯಕ ಸಭೆಗಳು ಪ್ರಜಾಪಕ್ಷದ ಸಂಸ್ಥೆಗಳಾಗಿಯೂ ರೂಪಗೊಂಡು ಪ್ರಜಾಸತ್ತಾತ್ಮಕವಾದ ರಾಜ್ಯಭಾರಕ್ರಮವು ಕ್ರಮಕ್ರಮವಾಗಿ ನೆಲೆಗೊಳ್ಳುವಂತೆ ಆಯಿತು. ೧೯೨೩ರಲ್ಲಿ ಈ ಚಲನೆಯನ್ನೇ ಸ್ಥಿರಗೊಳಿಸಿ ಮುಂದುವರಿಸಿದ ಸುಧಾರಣೆಗಳು ಮಹಾರಾಜರ ಪ್ರಕಟನಾಪೂರ್ವಕವಾಗಿ ಸಿದ್ಧವಾದವು. ಅವುಗಳಿಂದ ಎರಡು ಸಭೆಗಳಿಗೂ ಸ್ಥಾನವು ಭದ್ರವಾಗಿ, ಮೊದಲಿಗಿಂತಲೂ ಹೆಚ್ಚಾಗಿ ಪ್ರಜೆಗೆ ಆಡಳಿತದಲ್ಲಿ ಪ್ರವೇಶವು ದೊರಕಿತು.

ರಜತೋತ್ಸವ

೧೯೨೭ರಲ್ಲಿ ಮಹಾರಾಜರ ಆಳ್ವಿಕೆಯು ೨೫ ವರ್ಷಕಾಲ ನಡೆದಿದ್ದುದರಿಂದ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಉತ್ಸವಗಳೂ, ಸಂತೋಷಕೂಟಗಳೂ ನಡೆದವು. ಮೈಸೂರು ಸಂಸ್ಥಾನವು ಮಾದರಿ ಸಂಸ್ಥಾನವೆಂಬ ಕೀರ್ತಿಯು ಇಡಿಯ ಭಾರತವರ್ಷದಲ್ಲಿ ಹರಡಿ ಮಹಾರಾಜರನ್ನು ದಕ್ಷಿಣ

ಜನಕನೆಂದು ಅನೇಕರು ಕೊಂಡಾಡಿದರು. ಭಾರತೀಯರೇ ಸ್ವಂತವಾಗಿ ಆಳಿಕೊಳ್ಳಲು ಸಮರ್ಥರೆನ್ನುವುದಕ್ಕೆ ಮೈಸೂರು ರಾಜ್ಯವೇ ಉತ್ತಮ ದೃಷ್ಟಾಂತವೆಂದು ಹೊರಗಿನ ಭಾರತೀಯರು ಒತ್ತಿ ಹೇಳಿದರು. ಇಂತಹ ಅತ್ಯುತ್ತಮ ಸಮಯದಲ್ಲಿಯೇ ಜಗದ್ವಂದ್ಯರಾದ ಮಹಾತ್ಮಾ ಗಾಂಧೀಯವರು ಆರೋಗ್ಯಲಾಭಕ್ಕಾಗಿ ನಂದಿಯಲ್ಲಿಯೂ, ಬೆಂಗಳೂರಿನಲ್ಲಿಯೂ ಹಲವು ತಿಂಗಳುಗಳಿದ್ದು ಮಹಾರಾಜರನ್ನು ಅಭಿನಂದಿಸಿದರು.

ಭಾರತವರ್ಷದ ಭಾಗ

ಚಾಮರಾಜೇಂದ್ರ ಒಡೆಯರ ಕಾಲದಲ್ಲಿ ಶ್ರೀ ವಿವೇಕಾನಂದರೂ, ಶ್ರೀ ಕೃಷ್ಣರಾಜೇಂದ್ರ ಒಡೆಯರ ಕಾಲದಲ್ಲಿ ಮಹಾತ್ಮಾ ಗಾಂಧೀಜಿಯವರೂ ಮೈಸೂರಿಗೆ ಬಂದಿದ್ದುದು ಮೈಸೂರು ಸಂಸ್ಥಾನವು ವಿಶಾಲ ಭಾರತವರ್ಷದ ಭಾಗವೆನ್ನುವುದನ್ನು ಸೂಚಿಸುತ್ತದೆ. ಹತ್ತೊಂಬತ್ತನೆ ಶತಮಾನದ ಆದಿಯಲ್ಲಿ ಬ್ರಿಟಿಷರು ಭಾರತವರ್ಷದಲ್ಲಿ ಇತರರಿಗಿಂತ ಬಲಶಾಲಿಗಳಾಗಿದ್ದು ಕ್ರಮೇಣ ಮರಾಟೆಯವರನ್ನೂ ಸಿಕ್ಕರನ್ನೂ ಜಯಿಸಿ ಭಾರತವರ್ಷವೆಲ್ಲಕ್ಕೂ ಅಧಿಪತಿಗಳಾಗಿ, ಅತ್ತಕಡೆ ಆಫ್ಘಾನಿಸ್ಥಾನ ಬಲೂಚಿಸ್ಥಾನಗಳನ್ನೂ ಇತ್ತಕಡೆ ಬ್ರಹ್ಮದೇಶವನ್ನೂ ಸಾಧಿಸುವಂತಹರಾದರು. ೧೮೫೮ರಲ್ಲಿ ಸಿಪಾಯಿ ದಂಗೆಯು ಮುಗಿದಮೇಲೆ ಬ್ರಿಟಿಷರಿಗೆ ಭರತಖಂಡದಲ್ಲಿ ವಿರೋಧಿಗಳೇ ಇಲ್ಲದಂತಾದುದಲ್ಲದೆ ಇಂಗ್ಲೆಂಡಿನ ದೊರೆಯೇ ಭರತವರ್ಷದ ಚಕ್ರವರ್ತಿಯಾಗುವಂತೆ ನೆರವೇರಿತು. ಬ್ರಿಟಿಷರ ಆಳಿಕೆಗೊಳಗಾದ ಭಾರತೀಯರು ೧೮೮೫ರಿಂದೀಚೆಗೆ ರಾಜಕೀಯ ಸಭೆಗಳನ್ನೂ ಚರ್ಚೆಗಳನ್ನೂ ವಿಶೇಷವಾಗಿ ನಡೆಸಿ ೧೯೦೬ರಲ್ಲಿ 'ಸ್ವರಾಜ್ಯ' ಲಕ್ಷ್ಯವನ್ನು ಹಿಡಿದರು. ಬ್ರಿಟಿಷರೂ ಅದಕ್ಕನುಗುಣವಾಗಿ ೧೯೦೭ರಲ್ಲಿ ಕೆಲವು ಸುಧಾರಣೆಗಳನ್ನು ನಡೆಸಿ, ೧೯೧೭ರಲ್ಲಿ ಭಾರತವರ್ಷದಲ್ಲಿ ಭಾರತೀಯರನ್ನು ಕ್ರಮೇಣ ಸ್ವರಾಷ್ಟ್ರನಿರ್ವಾಹಕ್ಕಭಿಮುಖವಾಗಿ ಒಯ್ಯುವುದೇ ತಮ್ಮ ಆಳಿಕೆಯ ಹೆಗ್ಗುರಿಯೆಂದು ಪಾರ್ಲಿಮೆಂಟಿನಲ್ಲಿ ಸಾರಿದರು. ೧೯೧೯ರಲ್ಲಿ ಬ್ರಿಟಿಷ್ ವಿಭಾಗಗಳಲ್ಲಿ ಮಾಂಟೆಗ್ಯೂ ಚೆಲ್ಮ್ಸ್‌ಫರ್ಡ್ ಸುಧಾರಣೆಗಳೆಂಬವು ಆಚರಣೆಗೆ ಬರುವಹಾಗೆ ಕಾನೂನಾಯಿತು. ಆ ಸುಧಾರಣೆಗಳು ಪ್ರಾರಂಭವಾದ ಹತ್ತುವರುಷಗಳೊಳಗಾಗಿ ಮೊದಲೇ ಗೊತ್ತಾದಂತೆ ಮತ್ತೊಂದು ವಿಚಾರಕ ಸಭೆಯನ್ನು (ಸೈಮನ್ ಸಭೆ)



ಸರ್ ಮಿರ್ಜ಼ಾ ಎಂ. ಇಸ್ಮೈಯಿಲ್, ಕೆ.ಸಿ.ಐ.ಇ. ಅವರು

ಏರ್ಪಡಿಸುವ ಸಂದರ್ಭದಲ್ಲಿ ದೇಶೀಯ ಸಂಸ್ಥಾನಗಳ ಸ್ಥಿತಿಗತಿಗಳನ್ನೂ, ಭವಿಷ್ಯವನ್ನೂ ಪರೀಕ್ಷಿಸತಕ್ಕ ಸೂಚನೆಗಳನ್ನು ಕೊಡಲು ಬಟ್ಲರ್ ಕಮಿಟಿ ಯೆಂಬುದು ನೇಮಕವಾಯಿತು. ಇದರ ಫಲಿತಾಂಶವಾಗಿ ಲಂಡನ್ನಿನಲ್ಲಿ ಮೂರು ಬಾರಿ ರೌಂಡ್ ಟೇಬಲ್ ಕಾನ್ಫರೆನ್ಸ್ ಎಂಬ ಸಭೆಗಳು ನಡೆದವು. ಈ ಸಭೆಗಳ ಒಳಗೂ ಹೊರಗೂ ಈಗಿನ ದಿವಾನರಾದ ಸರ್ ಮಿರ್ಜಾ ಇಸ್ಮೈಯಿಲ್‌ರವರು ಉತ್ತಮವಾಗಿ ಭಾಗವಹಿಸಿ ಈ ಸಂಸ್ಥಾನಕ್ಕೆ ಕೀರ್ತಿ ಯನ್ನು ತಂದರು. ಬ್ರಿಟಿಷ್ ಮಂತ್ರಿಮಂಡಲಿಯವರು ಭಾರತೀಯ ರಾಷ್ಟ್ರ ಬಂಧದ ರೂಪಾಂತರಕರ್ತವ್ಯದಲ್ಲಿ ತೊಡಗಿ ಪಾರ್ಲಿಮೆಂಟ್ ಸಭೆಗಳಲ್ಲಿ ತಕ್ಕ ಶಾಸನವನ್ನು ರಚಿಸಿದರು. ೧೯೩೫ರಲ್ಲಿ ಶಾಸನವು ಸಿದ್ಧವಾಯಿತು ; ಅದ ಕ್ಕನುಸಾರವಾದ ಪರಿವರ್ತನೆಗಳು ಇನ್ನು ಮುಂದೆ ನಡೆಯತಕ್ಕುವು. ಅವು ಗಳ ವಿಚಾರದಲ್ಲಿ ಯೋಗ್ಯವಾದ ಪರಿಜ್ಞಾನವನ್ನು ಪಡೆಯತಕ್ಕುದು ಪ್ರಜೆಗಳೆ ಲ್ಲರ ಕರ್ತವ್ಯವಾಗಿರುತ್ತದೆ.

೨೫ ವರ್ಷಗಳ ಆಳಿಕೆಯಲ್ಲಿ ಮೈಸೂರು ಸಂಸ್ಥಾನವು ನಾನಾ ಬಗೆಯ ಅಭಿವೃದ್ಧಿಯನ್ನು ಸಾಧಿಸುತ್ತ ಭಾರತೀಯರೆಲ್ಲರಿಗೂ ಮಾರ್ಗ ದರ್ಶಕವಾಗಿರುವುದಲ್ಲದೆ ಎಲ್ಲೆಲ್ಲಿಯೂ ಹೆಸರುವಾಸಿಯಾಗಿದೆ. ಮುಂದೆ ಬರುವ ಕಾಲದಲ್ಲಿ ಇನ್ನೂ ಹೆಚ್ಚಿನ ನೆಮ್ಮದಿಯೂ ಖ್ಯಾತಿಯೂ ಲಭಿಸುವಂತೆ ವರ್ತಿಸುವುದು ಮೈಸೂರಿನ ಜನರ ಕರ್ತವ್ಯ. ದೇಶಭಕ್ತಿಯುತರಾಗಿ ಸೇವಾತುರರಾಗಿ ಬಾಳಲು ಮೈಸೂರಿನ ಜನರು ತಮ್ಮ ಸುಖಸೌಭಾಗ್ಯ ಗಳಿಗೆ ಕಾರಣಭೂತರಾಗಿ, ಧರ್ಮಬದ್ಧರಾಗಿ ಸಮಸ್ತ ರಾಜ್ಯಭಾರವನ್ನೂ ವಹಿಸಿ ‘ ರಕ್ಷಾಯೋಗಾದಯಮಪಿ ತಪಃ ಪ್ರತ್ಯಹಂ ಸಂಚಿನೋತಿ ’ ಎಂಬ ವಾಕ್ಯವನ್ನು ನೆನಪಿಗೆ ತರುತ್ತಲಿರುವ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಎಲ್ಲರೂ ಸಲ್ಲಿಸಬೇಕು.

ಗಂಗರಸರ ಕಾಲ

ರಟ್ಟಪಾಡಿ	ಕುಂತಳ	ಗಂಗವಾಡಿ	ಪೂರ್ವ ತೀರ
ಕ್ರಿ. ಶ. ೩೦೦	ಕದಂಬರು	ಮಾಧವ	
ರಾಷ್ಟ್ರಿಕರು,	ಮಯೂರವರ್ಮ		
೪೦೦ ಮುಂತಾದವರು.	ಗಂಗವರ್ಮ		ಕಾಂಚಿಯ ಪಲ್ಲವರು.
೫೦೦	ಮಾಂಧಾತೃವರ್ಮ		
		ಅವಿನೀತ	
ಬಾದಾಮಿಯ ಚಾಳುಕ್ಯರು.		ದುರ್ವಿನೀತ	
೬೦೦ ೧ನೆ ಕೀರ್ತಿವರ್ಮ			
ಇಮ್ಮಡಿ ಪುಲಿಕೇಶಿ			ಮಹಾಮಲ್ಲಪಲ್ಲವ
೭೦೦			
೭೫೩–ಮಾನ್ಯಖೇಟದ		ಶ್ರೀಪುರುಷ	
ರಾಷ್ಟ್ರಕೂಟರು.			
೮೦೦ ೧ನೆ ಕೃಷ್ಣ			
ಧ್ರುವ–ಗೋವಿಂದ			
ಅಮೋಘ ವರ್ಷ		ಶಿವಮಾರ	
೯೦೦ ೩ನೆ ಇಂದ್ರ			
೩ನೆ ಕೃಷ್ಣ			ಚೋಳರಸರು.
ಕಲ್ಯಾಣಿಯ ಚಾಲುಕ್ಯರು.	ಹೊಯಿಸಳರು.	೨ನೆ ಬೂತುಗ	ಪರಾಂತಕ
೧೦೦೦ ಸತ್ಯಾಶ್ರಯ		ಮಾರಸಿಂಹ	
೧ನೆ ಸೋಮೇಶ್ವರ		ರಕ್ಕಸಗಂಗ	ರಾಜರಾಜದೇವ

ಹೊಯಿಸಳ ವಂಶವೃಕ್ಷ

- ಸಳ
  - ವಿನಯಾದಿತ್ಯ I ೧೦೦೬—೧೦೨೨
    - ನೃಪಕಾಮ ೧೦೨೨—೧೦೪೭
      - ವಿನಯಾದಿತ್ಯ II ೧೦೪೭—೧೧೦೦
        - ಎರೆಯಂಗ
          - ಬಲ್ಲಾಳ I ೧೧೦೦—೧೧೦೬
          - ವಿಷ್ಣುವರ್ಧನ ೧೧೧೧—೧೧೪೧
            - ನರಸಿಂಹ I ೧೧೪೩—೧೧೭೩
              - ವೀರಬಲ್ಲಾಳ II ೧೧೭೩—೧೨೨೦
                - ನರಸಿಂಹ II ೧೨೨೦—೧೨೩೫
                  - ಸೋಮೇಶ್ವರ ೧೨೩೪—೧೨೬೨
                    - ನರಸಿಂಹ III ೧೨೫೪—೧೨೯೧
                      - ಬಲ್ಲಾಳ III ೧೨೯೧—೧೩೪೨
                        - ಬಲ್ಲಾಳ IV ೧೩೪೩
                    - ವೀರರಾಮನಾಥ ೧೨೫೪—೧೨೯೫
                      - ವಿಶ್ವನಾಥ ೧೨೯೩—೧೨೯೮

ಒಡೆಯರ ವಂಶವೃಕ್ಷ

ಯದುರಾಯರು ೧೩೯೯—೧೪೨೩.

- ಹಿರೇಬೆಟ್ಟದ ಚಾಮರಾಜ ಒಡೆಯರು ೧೪೨೩—೧೪೫೮.
- ಚಾಮರಾಜ.

ತಿಮ್ಮರಾಜ ಒಡೆಯರು ೧೪೫೮—೧೪೭೮

ಹಿರೇ ಚಾಮರಾಜ ಒಡೆಯರು ೧೪೭೮—೧೫೧೩.

ಬೆಟ್ಟದ ಚಾಮರಾಜ ಒಡೆಯರು ೧೫೧೩—೧೫೫೨.

- ತಿಮ್ಮರಾಜ ಒಡೆಯರು ೧೫೫೨—೧೫೭೧.
- ಕೃಷ್ಣರಾಜ.
- ಬೋಳ ಚಾಮರಾಜ ಒಡೆಯರು ೧೫೭೧—೭೬.

- ರಾಜ ಒಡೆಯರು. ೧೫೭೮—೧೬೧೭.
- ಬೆಟ್ಟದ ಚಾಮರಾಜ ಒಡೆಯರು.
- ಮುಪ್ಪಿನ ದೇವರಾಜ ಒಡೆಯರು.
- ಚನ್ನರಾಜ ಒಡೆಯರು.

ರಣಧೀರ ಕಂಠೀರವ ನರಸರಾಜ ಒಡೆಯರು. ೧೬೩೭—೧೬೫೮.

- ಚಾಮರಾಜ. ೧೬೧೭—೩೭.
- ಇಮ್ಮಡಿ ರಾಜ ಒಡೆಯ. ೧೬೩೭—೫೮.

ದೊಡ್ಡ ದೇವರಾಯ ಒಡೆಯರು. ೧೬೫೯—೭೩. | ಚಿಕ್ಕ ದೇವರಾಯ | ಕೆಂಪದೇವಯ್ಯ ೧೬೫೯—೭೩. | ಮರಿದೇವಯ್ಯ

ಚಿಕ್ಕದೇವಗಾಯ ಒಡೆಯರು ೧೬೭೩—೧೭೦೪. | ಕಂಠೀರವಯ್ಯ

ಚಿಕ್ಕದೇವರಾಯ ಒಡೆಯರು—೧೬೭೩—೧೭೦೧

ಕಂಠೀರವ ನರಸರಾಜರು (ಮೂಕರಸು)—೧೭೦೪—೧೭೧೩.

ದೊಡ್ಡಕೃಷ್ಣರಾಜ ಒಡೆಯರು—೧೭೧೩—೧೭೩೧.

ಚಾಮರಾಜ ಒಡೆಯರು ೧೭೩೧—೧೭೩೪. | ಚಿಕ್ಕಕೃಷ್ಣರಾಜ ಒಡೆಯರು ೧೭೩೪—೧೭೬೬.

ನಂಜರಾಜ ಒಡೆಯರು ೧೭೬೬—೧೭೭೦. | ಬೆಟ್ಟದ ಚಾಮ ರಾಜ ಒಡೆಯರು ೧೭೭೦—೧೭೭೬.

ಖಾಸಾಚಾಮರಾಜ ಒಡೆಯರು—೧೭೭೬—೧೭೯೬.

(ಇಮ್ಮಡಿ ಕೃಷ್ಣರಾಜ ಒಡೆಯರ ಪತ್ನಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಸ್ವೀಕೃತ ಪುತ್ರರು.)

ಮುಮ್ಮಡಿ ಶ್ರೀ ಕೃಷ್ಣರಾಜ ಒಡೆಯರು—೧೭೯೯-೧೮೩೧—೧೮೬೮

ಶ್ರೀ ಚಾಮರಾಜೇಂದ್ರ ಒಡೆಯರು—೧೮೮೧—೧೮೯೪.

ಶ್ರೀ ಕೃಷ್ಣರಾಜೇಂದ್ರ ಒಡೆಯರವರು—(೧೮೯೪—೧೯೦೨.)

ಕೆಳದಿನಾಯಕರ ವಂಶಾವಳಿ

- ಚವುಡಪ್ಪನಾಯಕ—೧೫೦೯.
  - ಸದಾಶಿವನಾಯಕ—೧೫೦೯.
    - ದೊಡ್ಡ ಸಂಕಣ್ಣನಾಯಕ
      - ರಾಮರಾಜನಾಯಕ
      - ಹಿರೇ ವೆಂಕಟಪ್ಪನಾಯಕ
        - ಭದ್ರಪ್ಪನಾಯಕ
          - ವೀರಭದ್ರನಾಯಕ (೧೬೩೨—೪೪)
    - ಚಿಕ್ಕ ಸಂಕಣ್ಣನಾಯಕ
      - ಸಿದ್ದಪ್ಪನಾಯಕ
        - ಶಿವಪ್ಪನಾಯಕ (೧೬೪೪—೬೦)
          - ಭದ್ರಪ್ಪನಾಯಕ (೧೬೬೧—೧೬೬೪)
          - ಹಿರೇ ಸೋಮಶೇಖರನಾಯಕ (ರಾಣಿ ಚನ್ನಮ್ಮಾಜಿ) (೧೬೭೨, ೧೬೮೪, ೧೬೯೦)
            - ಬಸಪ್ಪನಾಯಕ
              - ಸೋಮಶೇಖರನಾಯಕ (೧೭೪೯)
              - ವೀರಭದ್ರನಾಯಕ
                - ಬಸಪ್ಪನಾಯಕ (ರಾಣಿ ವೀರಮ್ಮಾಜಿ) (೧೭೬೩)
                  - ಚನ್ನಬಸಪ್ಪನಾಯಕ
                  - ಸೋಮಶೇಖರನಾಯಕ
        - ವೆಂಕಟಪ್ಪನಾಯಕ (೧೬೬೦)

ಮೈಸೂರಿನಲ್ಲಿ ಅರ್ಥಸಾಧನೆ ಮತ್ತು ಜನಜೀವನ

ವಿವರ

ಮೈಸೂರಿನಲ್ಲಿ ಅರ್ಥಸಾಧನೆ ಮತ್ತು ಜನಜೀವನ

೧. ದೇಶದ ಸಂಪತ್ತು

ಮೈಸೂರು ದೇಶದ ಭೂವಿವರಣೆ ಮಾಡಿ ಆಯಿತು. ಚರಿತ್ರೆಯನ್ನು ಸಂಕ್ಷೇಪವಾಗಿ ತಿಳಿಸಿ ಆಯಿತು. ಅಲ್ಲಿನ ಪ್ರಜಾವರ್ಗ, ರಾಜ್ಯಪದ್ಧತಿ, ಸಾರ್ವಜನಿಕ ಸಂಸ್ಥೆಗಳು ಮುಂತಾದ ವಿಚಾರಗಳನ್ನು ಮುಂದಿನ ಭಾಗದಲ್ಲಿ ಹೇಳಲಾಗುವುದು. ಇಲ್ಲಿ ದೇಶದ ಸಂಪತ್‌ಸ್ಥಿತಿಯೇನು? ಅಲ್ಲಿನ ಧನಧಾನ್ಯ ಸಮೃದ್ಧಿ ಯಾವ ರೀತಿಯಲ್ಲಿದೆ? ದಿನದಿನಕ್ಕೆ ಹೆಚ್ಚು ಜನರಿಗೆ ಹೆಚ್ಚುಹೆಚ್ಚಾಗಿ ಸುಖ ಶಾಂತಿ ಸೌಕರ್ಯ ಸುರಕ್ಷಣೆ ಒದಗುತ್ತಿವೆಯೆ? ಇರುವ ಜನರ ಬಡತನವೂ ಐಶ್ವರ್ಯವೂ ಯಾವ ಪ್ರಮಾಣದಲ್ಲಿವೆ? ಬಡತನವನ್ನೂ ಅದರ ದುಃಖವನ್ನೂ ಕಡಮೆಮಾಡುವುದಕ್ಕೂ ಜನರ ಐಶ್ವರ್ಯವನ್ನು ವೃದ್ಧಿಮಾಡುವುದಕ್ಕೂ ಯಾವ ಮುಖವಾಗಿ ಯತ್ನ ನಡೆಯುತ್ತಿದೆ? ಇದೇ ವಿಸ್ತೀರ್ಣ ಜನಸಂಖ್ಯೆ ಉಳ್ಳ ಇತರ ದೇಶಗಳೊಂದಿಗೆ ಮೈಸೂರು ಅಭಿವೃದ್ಧಿಯಲ್ಲಿ ಹೇಗೆ ಹೋಲುತ್ತದೆ? ಎಂಬ ವಿಷಯಗಳಲ್ಲಿ ಕೆಲವನ್ನು ಕುರಿತು ಮುಂದಿನ ಪ್ರಕರಣಗಳಲ್ಲಿ ಹೇಳುತ್ತೇವೆ.

ಸಂಪತ್ತಿನ ಪ್ರಾಮುಖ್ಯತೆ

ಸಂಪತ್ತು ಇದ್ದರೆಷ್ಟು—ಇಲ್ಲದಿದ್ದರೆಷ್ಟು? ಬಡವರು ಸುಖವಾಗಿರಲಾರರೆ? ಉತ್ತಮವಾದ ಶಾಂತಿಯನ್ನೂ ಸಂತುಷ್ಟಿಯನ್ನೂ ಬಡವರಲ್ಲಿ ಕಾಣಲಾಗದೆ? ಐಶ್ವರ್ಯವಿದ್ದ ಮಾತ್ರಕ್ಕೇ ಇವು ದೊರಕಿದಂತಾಯಿತೆ? ಸುಖ ಶಾಂತಿ ಸಂತುಷ್ಟಿಗಳು ಮನುಷ್ಯನ ಸ್ವಭಾವದ, ಮನಸ್ಸಿನ ಶಿಕ್ಷಣದ, ಮನಸ್ಸಿನ ಒಂದು ಹದದ, ಫಲಗಳಲ್ಲವೆ? ಎಂಬ ಆಕ್ಷೇಪಣೆಗೆ ಸದ್ಯಃ

ನಾವು ಗಮನಕೊಡುವ ಹಾಗಿಲ್ಲ. ಇಷ್ಟು ಹೇಳಬಹುದು: ಜೀವನಕ್ಕೆ ಬೇಕಾಗುವ ಸೌಕರ್ಯ ಹೆಚ್ಚಿದಂತೆಲ್ಲ ಶಾಸ್ತ್ರ, ಸಾಹಿತ್ಯ, ಕಲೆ, ರಾಜ್ಯ, ಸಮಾಜ ಮುಂತಾದವುಗಳ ಅಭಿವೃದ್ಧಿಗೂ, ಅವಕ್ಕೆ ಸಂಬಂಧಪಡುವ ಸಾಧನೆ ಸಮಾರಂಭಗಳಿಗೂ ಜನರು ಹೆಚ್ಚು ಗಮನ ಕೊಟ್ಟಾರೆಂದೂ ಜೀವನಕ್ಕೆ ಬೇಕಾಗುವಷ್ಟು ಸಾಮಗ್ರಿಯೂ ವರಮಾನವೂ ದೊರೆತು, ಇಂದಿಗೆ ಹೇಗೆ, ನಾಳೆಗೆ ಹೇಗೆ, ಮಕ್ಕಳು ಮರಿಗಳ ಗತಿ ಏನು, ಒಳ್ಳೆಯದಕ್ಕೆ ಹೇಗೆ, ಕೆಟ್ಟದ್ದಕ್ಕೆ ಹೇಗೆ ಎಂಬ ಕೊರತೆ ಇಲ್ಲದಂತಾದರೆ––ಇಹದ ಪುರೋವೃದ್ಧಿಯೇ ಏಕೆ––ಪರದ ಅಥವಾ ಮೋಕ್ಷದ ಸಾಧನೆಗೂ ಅನುಕೂಲ ದೊರೆತೀತೆಂದೂ ಅನೇಕರ ಅಭಿಪ್ರಾಯ. ಅರ್ಥಾಭಾವದಿಂದ ಉಂಟಾಗುವ ಪರಾಧೀನ, ಕೊಳಕು, ಅಜ್ಞಾನ, ಅನಾರೋಗ್ಯ, ದುರ್ಬಲತೆ, ಅಧೈರ್ಯ, ಹೀನಭಾವ, ಅಸಂತುಷ್ಟಿ, ದ್ವೇಷ, ಅಕಾಲದ ಸಾವು, ಕೊಲೆ, ಕುಡುಕತನ, ಸಾಲ ಇವುಗಳನ್ನು ಜನರ ಸಂಪತ್ತು ಹೆಚ್ಚಿದಂತೆಲ್ಲ ಕಡಮೆಮಾಡಲು ಸಾಧ್ಯವಾದೀತೆಂಬ ಆಸೆ ಬೇರೆ. ಇತರ ದೇಶಗಳವರಂತೆ ನಾವೂ ಬದುಕಿದ ಹೊರತು ಅವರ ರಾಜಕೀಯ ಆರ್ಥಿಕ ಬಂಧನಗಳಿಗೆ ಸಿಕ್ಕಿ ತೊಳಲಿ ಕಷ್ಟಪಡಬೇಕಾಗುವುದರಿಂದಲೂ, ಅವರೊಡನೆ ಹುರುಡಿನಿಂದ ಸ್ಪರ್ಧಿಸಿ ಅವರಂತೆಯೇ––ಸಾಧ್ಯವಾದರೆ ಇನ್ನೂ ಮೇಲಾಗಿಯೇ––ಬಾಳಬೇಕೆನ್ನುವ ಆಕಾಂಕ್ಷೆಯಿರುವುದರಿಂದಲೂ ಅರ್ಥಸಾಧನೆಯ ವಿಷಯವಾಗಿ ನಾವು ಹೆಚ್ಚು ಗಮನಕೊಡುವುದು ಆವಶ್ಯಕ. ಮೇಲಾಗಿ ಪುರುಷಪ್ರಯತ್ನದಿಂದ ಸಾಧ್ಯವಾಗುವಂತಹ ಎಲ್ಲ ಸುಖಸಂಪತ್ತುಗಳನ್ನೂ, ಜೀವನ ಸೌಲಭ್ಯಗಳನ್ನೂ ಪಡೆದು, ಜನದ ಬಾಳೂ, ದೇಶದ ಕೀರ್ತಿಶಕ್ತಿಗಳೂ, ಸಂತತವಾಗಿ ಹೆಚ್ಚುವಂತೆ ಮಾಡಬೇಕಾದುದು ಎಲ್ಲ ದೇಶಗಳವರ ಎಲ್ಲ ಕಾಲದ ಕರ್ತವ್ಯ.

ಅಭಿವೃದ್ಧಿಯ ಅಳತೆ ಪರೀಕ್ಷೆ

ಸಾಮಾನ್ಯವಾಗಿ ಯಾವುದಾದರೊಂದು ದೇಶ ಅಭಿವೃದ್ಧಿ ಸ್ಥಿತಿಯಲ್ಲಿದೆಯೆ ಇಲ್ಲವೆ, ಎಂದು ತಿಳಿಯುವುದಕ್ಕೆ ಹಲವು ಪರೀಕ್ಷೆಗಳಿವೆ: ದೇಶದಲ್ಲಿನ ಪ್ರಕೃತಿ ಸಹಾಯಗಳನ್ನು ಜನರು ಯಾವ ರೀತಿ ಉಪಯೋಗಿಸಿಕೊಂಡು, ಎಷ್ಟು ದಕ್ಷತೆಯಿಂದ ಎಂತಹ ನಿಪುಣವಾದ ಕಾರ್ಯಶಕ್ತಿಯಿಂದ ಶಾಸ್ತ್ರಸಹಾಯದಿಂದ ಸಂಪದಭಿವೃದ್ಧಿ ಕಾರ್ಯಗಳಲ್ಲಿ ತೊಡಗಿದ್ದಾರೆ?

ವ್ಯಾಪಾರ, ಕೈಗಾರಿಕೆ, ಉದ್ಯೋಗಗಳಿಂದ ಅವರು ದೇಶದ ಸಂಪತ್ತನ್ನೂ, ಸ್ವಂತ ಆಸ್ತಿ ವರಮಾನಗಳನ್ನೂ ಹೆಚ್ಚಿಸಿಕೊಳ್ಳುತ್ತಿದ್ದಾರೆಯೆ ? ಅರ್ಥಸಾಧನೆಯ ಕೆಲಸಗಳನ್ನು ಹೆಚ್ಚು ಫಲಕಾರಿಯಾಗಿಸುವುದಕ್ಕೆ ಯಾವ ಯಂತ್ರಸಹಾಯ ಸಂಸ್ಥೆವ್ಯವಸ್ಥೆಗಳನ್ನು ರಚಿಸಿಕೊಂಡಿದ್ದಾರೆ ? ಒಳದೇಶ ಹೊರದೇಶ ವ್ಯಾಪಾರವೂ ಅವುಗಳ ಫಲ ಲಾಭಗಳೂ ದಿನೇ ದಿನೇ ಹೆಚ್ಚುತ್ತಿವೆಯೆ ? ಜನರು ಹೊಸ ಕೈಗಾರಿಕೆಗಳನ್ನು ಸ್ಥಾಪಿಸಿ ಇರುವವನ್ನು ವೃದ್ಧಿ ಮಾಡಿ ಅವುಗಳಿಂದ ಬರಬಹುದಾದ ಪರಮಾವಧಿ ಉತ್ಪತ್ತಿಯನ್ನು ತೆಗೆಯುತ್ತಿದ್ದಾರೆಯೆ ? ದೇಶದ ಸಾರ್ವಜನಿಕ ಕ್ಷೇಮಗಳನ್ನು ವಿತರಣೆಯಿಂದ ಸಾಧಿಸಲು ಸಂಘಗಳನ್ನು ಏರ್ಪಡಿಸಿ ಪುಷ್ಟರಾಗುತ್ತಿದ್ದಾರೆಯೆ ? ಜನರ ತಿಳಿವಳಿಕೆಯ ಮಟ್ಟವನ್ನೂ ಕಾರ್ಯಶಕ್ತಿಯನ್ನೂ ಹೆಚ್ಚಿಸಿ ಮುಂದುವರಿಯಬೇಕೆಂಬ ಆಸೆಯನ್ನು ಜನರಲ್ಲಿ ಹುಟ್ಟಿಸಿ, ಹೊಸ ಹೊಸ ದಾರಿಗಳಲ್ಲಿ ಶ್ರಮ, ನಿಪುಣತೆ, ವಸ್ತುನಿರ್ಮಾಣಶಕ್ತಿ, ಯಂತ್ರರಚನಾ ಕೌಶಲ, ಕಾರ್ಯವಿಧಾನ, ರಚನಾ ವ್ಯವಸ್ಥೆ ಮುಂತಾದವು ಪ್ರವರ್ಧಿಸುವಂತೆ ವಿದ್ಯಾಭ್ಯಾಸ ನಡೆಯುತ್ತಿದೆಯೆ ? ಸಾಮಾನ್ಯ ದಿನಚರಿಯ ಜೀವನದಲ್ಲಿ ಸುಖವೂ ಸೌಕರ್ಯವೂ ಹೆಚ್ಚುತ್ತಿವೆಯೆ ? ದೇಶದ ಸಂಪತ್ತು ಯಾವ ಪ್ರಮಾಣದಲ್ಲಿ ಜನರಲ್ಲಿ ಹಂಚಿದೆ,—ಹಂಚಲ್ಪಡುತ್ತಿದೆ ? ಅತಿ ಕಡಮೆ ಜನರು ಅತಿ ಹೆಚ್ಚು ಸಂಪತ್ತನ್ನು ಅನುಭವಿಸುತ್ತಿರುವರೆ ? ಇಲ್ಲವಾದರೆ ಜನಸಾಮಾನ್ಯದಲ್ಲೆಲ್ಲಾ ಸುಖವೂ ಸಂಪತ್ತೂ ಸಮಧಾತುವಾಗಿ ಹಂಚಿವೆಯೆ ? ಜನರ ಆರೋಗ್ಯವೂ, ಸ್ವತಂತ್ರ ಬುದ್ಧಿಯೂ ಹೆಚ್ಚಿ ಕ್ಷಾಮಡಾಮರಗಳೂ, ರೋಗಾದಿಗಳೂ, ದುಷ್ಕೃತ್ಯಗಳೂ ಕಡಮೆಯಾಗುತ್ತ ಶಾಂತಿ, ಸಮಾಧಾನ, ಸುರಕ್ಷಣೆ, ಪರಸ್ಪರ ಸಹಾಯಾಸಕ್ತಿ, ಸಾರ್ವಜನಿಕ ಕಾರ್ಯಶ್ರದ್ಧೆ, ಜವಾಬ್ದಾರಿ ಬುದ್ಧಿ ಮುಂತಾದವು ಹೆಚ್ಚುತ್ತಿವೆಯೆ ? ಎಂಬವು ಈ ಪರೀಕ್ಷೆಗಳಲ್ಲಿ ಮುಖ್ಯವಾದವು.

ಸಂಪತ್ತೆಂದರೇನು ?

ಸಂಪತ್ತೆಂದರೇನು ? ಯಾವದಾದರೊಂದು ದೇಶದ ಸಂಪತ್ತನ್ನು ಗೊತ್ತುಮಾಡುವ ಬಗೆ ಹೇಗೆ ? ಎಂಬ ಪ್ರಶ್ನೆ ಈ ಸಂದರ್ಭದಲ್ಲಿ ಉಚಿತವಾಗುವುದು. ಒಬ್ಬ ವ್ಯಕ್ತಿಯ ಐಶ್ವರ್ಯವನ್ನು ಲೆಕ್ಕಮಾಡಬೇಕಾದರೆ, ಅವನ ಮನೆ ಮಠ, ಆಸ್ತಿ ಪಾಸ್ತಿ, ಗಾಡಿ ಕುದುರೆ, ಸಂಗ್ರಹಿಸಿಟ್ಟಿರುವ

ದವಸ ಧಾನ್ಯ, ಭೋಗಸಾಮಗ್ರಿ, ಮರಮುಟ್ಟು, ಆಭರಣ ಅಲಂಕಾರ, ಬಡ್ಡಿಗೆ ಕೊಟ್ಟಿರುವ ಹಣ, ವ್ಯಾಪಾರ ಕೈಗಾರಿಕೆಗಳಲ್ಲಿಯೂ ಇತರ ವಿಧವಾಗಿಯೂ ಹೂಡಿರುವ ಹಣ, ಬ್ಯಾಂಕಿನಲ್ಲಿಯೊ ಸಾಲದ ಪತ್ರಗಳಲ್ಲಿಯೊ ಕೂಡಿಟ್ಟಿರುವ ಧನ, ತಾನು ಮಾಡುವ ಕೆಲಸಗಳಿಗಾಗಿ ತನಗೆ ಬರುವ ವರಮಾನ, ತನ್ನ ಪ್ರಾಮಾಣಿಕತೆ ಸಂಬಿಕೆಗಳಿಗಾಗಿ ಇರುವ ಬೆಲೆ (good-will) ಮುಂತಾದವನ್ನು ಎಣಿಸುವರು. ಆತನು ಇತರರಿಗೆ ತೆರಬೇಕಾಗಿರುವ ಎಲ್ಲ ಬಗೆಯ ಹಣವನ್ನೂ ಈ ಮೊತ್ತದಿಂದ ಕಳೆದು ಗೊತ್ತುಮಾಡುವರು. ಸಮಾಜದಲ್ಲಿ, ಜನರ ಮಧ್ಯದಲ್ಲಿದ್ದುಕೊಂಡು, ಇತರರಂತೆ ಜೀವನ ಮಾಡುತ್ತ, ತಮ್ಮ ಶ್ರಮದಿಂದಲೂ, ಸೇವೆಯಿಂದಲೂ ಇತರರಿಗೆ ಸಹಾಯ ಮಾಡುತ್ತ ಅವರ ಶ್ರಮಸೇವೆಗಳಿಂದ ಪ್ರಯೋಜನ ಪಡೆಯುತ್ತ ಇರುವವರ ಉದ್ಯಮಗಳನ್ನು ಮಾತ್ರ ಅರ್ಥಸಾಧನೆಯಲ್ಲಿ ಎಣಿಸುವರು. ಅವುಗಳ ಫಲವಾಗಿ ಉತ್ಪತ್ತಿಯಾಗುವುದೆಲ್ಲ ಸಂಪತ್ತೇ. ಕಳ್ಳಕಾಕರು, ಮೋಸಗಾರರು, ರೋಗಿಗಳು, ಹುಚ್ಚರು, ಭಿಕ್ಷುಕರು, ಬೈರಾಗಿಗಳು, ಸೋಮಾರಿಗಳು ಮುಂತಾದವರು ಈ ಲೆಕ್ಕಕ್ಕೆ ಸೇರುವುದಿಲ್ಲ. ಕಳ್ಳಕಾಕರೂ, ಜೂಜುಖೋರರೂ, ಘಾತಕರೂ ಎಷ್ಟೇ ಧನವನ್ನು ಸಂಗ್ರಹಿಸಿದರೂ ಅದರಿಂದ ಸಮಾಜದ ಒಟ್ಟು ಸಂಪತ್ತು ಹೆಚ್ಚಾಗದು. ಅವರು ಸಮಾಜದ ದ್ರೋಹಿಗಳು.

ಯಾವುದಾದರೊಂದು ಸಮಯದಲ್ಲಿ ಒಂದು ದೇಶದ ಆಸ್ತಿ ಮತ್ತು ಜೀವನ ಸೌಕರ್ಯಗಳ ಒಟ್ಟು ಬೆಲೆ ಎಷ್ಟು ಎಂಬುದು ಅವರ ಸಂಪತ್ತನ್ನು ತಿಳಿಸುವುದು. ಅದನ್ನು ಲೆಕ್ಕಮಾಡುವಾಗ ವ್ಯಕ್ತಿಗಳ ಸಂಪತ್ತನ್ನು ಗುಣಿಸುವುದರ ಜೊತೆಗೆ ಕೆಲವು ಹೆಚ್ಚು ಬಾಬುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವರು. ದೇಶದಲ್ಲಿನ ಪ್ರಕೃತಿಯ ಸಹಾಯ, ಜನರ ಶಕ್ತಿ, ಸಾಹಸ, ವಿದ್ಯೆ, ಅನುಭವ, ಜೀವನರೀತಿ, ದೇಶದಲ್ಲಿ ಸುರಕ್ಷಣೆ, ಸರಕಾರದಸ್ಥಿತಿ, ವ್ಯಾಪಾರ, ಇತರ ಸಂಸ್ಥೆ, ಪದ್ಧತಿ, ವ್ಯವಹಾರ ರೀತಿ ಮುಂತಾದವೂ ಅವುಗಳ ಪ್ರಭಾವವೂ ಬೆಲೆಯೂ ಲೆಕ್ಕಕ್ಕೆ ಬರುವುವು. ನಮ್ಮವರೂ ಪರಕೀಯರೂ ಬೆರೆಯುವಾಗ ಪರಸ್ಪರ ವ್ಯಾಪಾರ ವ್ಯವಹಾರ ಏರ್ಪಡುವುವು; ಸಾಲವನ್ನು ಕೊಟ್ಟು ತೆಗೆಯುವಂತೆ ಆಗುವುದು. ಆಗ ಇವರು ಅವರಿಗೆ ತೆರಬೇಕಾದುದನ್ನು ಒಟ್ಟು ಸಂಪತ್ತಿನ ಮೊತ್ತದಿಂದ ಕಳೆಯುವರು. ಅವರಿಂದ

ಇವರಿಗೆ ಬರಬೇಕಾದುದನ್ನು ಸೇರಿಸುವರು. ಈ ಬಗೆಯ ಲೆಕ್ಕಗಳಿಂದ ಒಟ್ಟು ಸಂಪತ್ತಿನ ಮೊತ್ತದ ನಿರ್ಣಯವಾಗುವುದು.*

ಅರ್ಥಸಾಧನೆಯ ಕರಣಗಳು

ಸಂಪತ್ಸಾಧನೆಗೆ ಮುಖ್ಯವಾದ ಕರಣಗಳು ಎರಡು :—

(೧) ಪ್ರಕೃತಿಯ ಆವರಣ, ಸಹಾಯ ; ಮತ್ತು

(೨) ಜನ, ಜನಲಕ್ಷಣ—ಅವರ ಕೆಲಸದ ರೀತಿನೀತಿಗಳು.

ಪ್ರಕೃತಿಯ ಆವರಣ

(೧) ಈ ಬಾಬಿನಲ್ಲಿ ಅರ್ಥಸಾಧನೆಗೆ ಸಹಾಯವಾಗುವಂತಹ ಭೂಲಕ್ಷಣಗಳನ್ನೆಲ್ಲ ನಾವು ತಿಳಿಯಬೇಕು. ಏಕೆಂದರೆ ಎಲ್ಲ ಬೆಳೆಗಳಿಗೂ, ಎಲ್ಲ ಕಾರ್ಯಕ್ಷೇತ್ರಗಳಿಗೂ ಭೂಮಿಯೇ ಅಧಾರ. ಯಾವ ಬಗೆಯ ವ್ಯಾಪಾರ ಉದ್ಯೋಗ ಕೈಗಾರಿಕೆ ದೇಶದಲ್ಲಿ ಸ್ಥಾಪಿತವಾಗಬಲ್ಲವು ? ಅದಾವು ? ಎಂಬುದನ್ನು ದೇಶದ ಪ್ರಕೃತಿಯ ಆವರಣವೂ, ಲಕ್ಷಣವೂ ನಿರ್ಧರಿಸುತ್ತವೆ. ದೇಶದ ಒಟ್ಟು ವಿಸ್ತೀರ್ಣ, ಆಕಾರ, ಅದು ಹಬ್ಬಿರುವ ರೀತಿ, ಬೆಟ್ಟಗುಡ್ಡ, ಸಮುದ್ರತೀರ, ರೇವು ಬಂದರು, ನದಿ ಸರೋವರ, ಮಳೆ, ಮಳೆಗಾಲ, ಋತುಸ್ವಭಾವ, ವಾಯುಗುಣ, ಪೈರು ಪಚ್ಚೆ, ದವಸ ಧಾನ್ಯ, ಪ್ರಾಣಿವರ್ಗ, ಖನಿಜ ಸಂಪತ್ತಿ, ಯಾನವಾಹನ ಸೌಲಭ್ಯ, ವರ್ತಮಾನ ಸಂಚಾರಕ್ಕೆ ದೊರೆಯುವ ಅನುಕೂಲ, ಇವೇ ಮುಖ್ಯವಾದ ಅಂಗಗಳು.

ಜನ ಲಕ್ಷಣ

(೨) ಜನಲಕ್ಷಣ ಮತ್ತು ಕೆಲಸಗಳ ವಿಚಾರ — ಎಂದರೆ, ದೇಶದ ಒಟ್ಟು ಜನಸಂಖ್ಯೆ, ಅದರ ಸಾಮಾನ್ಯ ಲಕ್ಷಣ ಮತ್ತು ಸ್ವಭಾವ : ಹುಟ್ಟು ಸಾವುಗಳ ಲೆಕ್ಕಮಾಡಿದರೆ ಈ ಸಂಖ್ಯೆ ಹೆಚ್ಚುತ್ತಿದೆಯೆ, ಕಡಮೆಯಾಗುತ್ತಿದೆಯೆ ? ಹೊರಭಾಗಗಳಿಂದ ಜನರು ಬಂದು ಇಲ್ಲಿ ನೆಲಸಿ ಸಂಖ್ಯೆ

---

* ಮೈಸೂರು ದೇಶದ ಸಂಪತ್ತು ಒಟ್ಟು ೨೨೩ ಕೋಟಿ ರೂಪಾಯಿಗಳೆಂದು ೧೯೨೬ನೆಯ ಸಂವತ್ಸರದಲ್ಲಿ ಗುಣಿಸಿದ್ದಾರೆ. ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಯಾವ ಯಾವ ವಸ್ತುಶಕ್ತಿಗಳೂ ಯಂತ್ರಗಳೂ ಸಂಸ್ಥೆಗಳೂ ಸೇರಿ ಜನಜೀವನಕ್ಕೆ ನೆರವು ಕೊಡುವುವೊ, ಸಂಪಾದನೆಗೆ ಆಶ್ರಯವಾಗುವುವೊ, ಜನರ ಆರೋಗ್ಯಕ್ಕೂ ಕಾರ್ಯಪಟುತ್ವಕ್ಕೂ ಸಹಾಯವಾಗುವುವೊ ಅವೆಲ್ಲ ಈ ಲೆಕ್ಕದಲ್ಲಿ ಸೇರಿರುವುವು.

ಯನ್ನು ಹೆಚ್ಚಿಸುತ್ತಿರುವರೆ ? ಇಲ್ಲವಾದರೆ ನಾಡಿನವರು ಹೊರಕ್ಕೆ ಒಲಸೆ ಹೋಗಿ ಸಂಖ್ಯೆಯನ್ನು ಕಡಮೆಮಾಡುತ್ತಿರುವರೆ ? ವಿಶೇಷ ಕಾರಣಗಳಿಂದಲೂ, ಮಕ್ಕಳು, ಮುದುಕರು, ಅಂಗವಿಹೀನರು, ರೋಗಿಗಳು ಮುಂತಾದವರನ್ನು ಕಳೆದು ಉಳಿದ ಮೇಲೂ, ದೃಢಕಾಯರಾಗಿ ಕೆಲಸಗಳಲ್ಲಿ ತೊಡಗಬಲ್ಲವರು ಎಷ್ಟು ಮಂದಿ ? ತೊಡಗಿರುವವರ ಸಂಖ್ಯೆಗೂ, ತೊಡಗಬಲ್ಲವರ ಸಂಖ್ಯೆಗೂ ಇರುವ ವ್ಯತ್ಯಾಸಗಳೂ, ಆ ವ್ಯತ್ಯಾಸಗಳಿಗೆ ಕಾರಣಗಳೂ ಯಾವುವು ? ತೊಡಗಿರುವವರಲ್ಲಿ ಕಾರ್ಯಕುಶಲತೆ, ವ್ಯವಸ್ಥಾಶಕ್ತಿ, ವಸ್ತು ನಿರ್ಮಾಣ ಮಾಡಿ ಮುಂದೆ ನುಗ್ಗಬಲ್ಲ ಸಾಹಸ, ಇವು ಎಷ್ಟರಮಟ್ಟಿಗೆ ಇವೆ ? ಜನರ ದಿನಚರಿಯ ಅಭ್ಯಾಸ, ಗುಣ, ಸಮಾಜದ ಕಟ್ಟು ಸಂಪ್ರದಾಯ, ಜನರಲ್ಲಿ ಮುಂದಿನ ನೋಟ, ಇವು ಸಾಕಾದಷ್ಟು ಸಹಾಯಕವಾಗಿ ಇವೆಯೆ ? ಅವರು ಕಸುಬಿಂದ ಕಸುಬಿಗೂ ಸ್ಥಳದಿಂದ ಸ್ಥಳಕ್ಕೂ ಸುಲಭವಾಗಿ ಸಂಪಾದನೆಗಾಗಿ ಚಲಿಸಿಯಾರೆ ? ಮೊದಲಾದ ಸಂಗತಿಗಳು ಇಲ್ಲಿ ಎಣಿಕೆಗೆ ಬರುವುವು.

೧೯೩೧ನೆಯ ಗಣಿತಿಯ ಪ್ರಕಾರ ಮೈಸೂರು ದೇಶದ ಒಟ್ಟು ವಿಸ್ತೀರ್ಣ ಸುಮಾರು ಇಪ್ಪತ್ತೊಂಬತ್ತೂವರೆ ಸಾವಿರ ಚದರ ಮೈಲಿ. ಇದಕ್ಕೆ ಸಮುದ್ರತೀರವಿಲ್ಲ ; ರೇವು ಬಂದರುಗಳಿಲ್ಲ. ಆದುದರಿಂದ ಹಡಗು ಕಟ್ಟುವುದು, ಮೀನು ಹಿಡಿಯುವುದು, ನೀರಿಂದ ಉಪ್ಪು ಮಾಡುವುದು ಮುತ್ತು ಸಂಗ್ರಹಿಸುವುದು ಮುಂತಾದ ಉದ್ಯೋಗಗಳಾಗಲಿ ಸಮುದ್ರ ವ್ಯಾಪಾರವಾಗಲಿ ನಡೆಯುವುದಕ್ಕೆ ಇಲ್ಲಿ ಅವಕಾಶವಿಲ್ಲ. ವಾಯುಗುಣ ಹದವಾಗಿದೆ. ದೇಶವೆಲ್ಲ ಸಮುದ್ರಮಟ್ಟಕ್ಕಿಂತಲೂ ಎತ್ತರವಾಗಿದೆ. ಮಳೆ ವರ್ಷಕ್ಕೆ ೧೦–೧೫ ಅಂಗುಲಗಳಿಂದ ಹಿಡಿದು ಕೆಲವು ಕಡೆ,—ಮಲೆನಾಡು ಪ್ರಾಂತದಲ್ಲಿ—೩೬೦ ಅಂಗುಲಗಳ ವರೆಗೂ ಬಿದ್ದರೂ ಸರಾಸರಿ ೩೦ ಅಂಗುಲ ಬೀಳುವುದು. ಭೂಮಿ ವಿವಿಧವಾದ ಬೆಳಸುಗಳಿಗೂ ಹೂ ಹಣ್ಣು ತರಕಾರಿಗಳಿಗೂ ಆಶ್ರಯವಾಗಿದೆ. ದೇಶದ ನದಿಗಳು ಸಂಚಾರಕ್ಕೆ ಯೋಗ್ಯವಾಗಿಲ್ಲದಿದ್ದರೂ ಗದ್ದೆ ತೋಟಗಳಿಗೆ ಸಾಕಾಗುವಷ್ಟು ನೀರನ್ನೆರೆಯುವುವು. ಎರಡು ದೊಡ್ಡ ನದಿಗಳು ಬಹಳ ಎತ್ತರದಿಂದ ದುಮಿಕಿ ಜಲಪಾತಗಳಲ್ಲಿ ವಿದ್ಯುಚ್ಛಕ್ತಿಯ ಉತ್ಪತ್ತಿಗೆ ಅವಕಾಶವನ್ನು ಕೊಟ್ಟಿರುವುವು. ಉತ್ತರ ಹಿಂದೂಸ್ಥಾನದಲ್ಲಿಯೂ ಕಣಿವೆಯ ಕೆಳಗೂ ಕಾಣ ಬರುವ ಶೀತೋ

ಷ್ಣಗಳ ತೀವ್ರತೆ ಇಲ್ಲಿಲ್ಲ. ಸಮಶೀತೋಷ್ಣವಲಯಗಳಲ್ಲಿರುವ ಅನೇಕ ಗುಣಗಳೂ ಸೌಕರ್ಯಗಳೂ ದೊರೆಯುವುದರಿಂದ ಸುತ್ತಮುತ್ತಲ ಪ್ರಾಂತಗಳವರು ಬೇಸಗೆಯ ಕಾಲದಲ್ಲಿ ಒಂದೆರಡು ತಿಂಗಳಕಾಲ ಇಲ್ಲಿಗೆ ಹವಕ್ಕಾಗಿಯೂ, ಆರೋಗ್ಯಕ್ಕಾಗಿಯೂ ಬಂದು ನಿಲ್ಲುವರು.

ಬೆಳೆಗಳು, ಸಸ್ಯಸಂಪತ್ತಿ

ಹಿಂದೂದೇಶದಲ್ಲಿ ಬೆಳೆಯುವ ಸುಮಾರು ಎಲ್ಲ ಬೆಳಸನ್ನೂ ಮೈಸೂರು ಸೀಮೆಯಲ್ಲಿ ಬೆಳೆಯಬಹುದು. ಅವುಗಳಲ್ಲಿ ಆಹಾರ ಸಾಮಗ್ರಿಗಳನ್ನು ಒದಗಿಸುವ ಬೆಳೆ ಕೆಲವು; ಕೈಗಾರಿಕೆಗಳಿಗೆ ಮೂಲ ವಸ್ತುಗಳನ್ನು ಒದಗಿಸುವವು ಕೆಲವು; ಕೇವಲ ವ್ಯಾಪಾರಕ್ಕೆ ಸಂಬಂಧಪಟ್ಟವು ಕೆಲವು. ಭತ್ತ, ರಾಗಿ, ಜೋಳ, ಕಂಬು, ಕಬ್ಬು, ಸಾಮೆ, ನವಣೆ, ಹಾರಕ, ಸಜ್ಜೆ, ಹುರುಳಿ, ಅವರೆ, ಕಡಲೆ, ಹೆಸರು, ಉದ್ದು ಮೊದಲಾದವು ಮೊದಲನೆಯ ಗುಂಪಿಗೆ ಸೇರಿದವು. ಸಮಯಕ್ಕೆ ಸರಿಯಾಗಿ ಬಿದ್ದ ಮಳೆ ನೀರಿನ ಜೊತೆಗೆ ಕೆರೆ, ಕಟ್ಟೆ, ನಾಲೆ ಮುಂತಾದ ನೀರಾವರಿ ಕೆಲಸಗಳಿಗೆ ಅಧೀನವಾಗಿ ಭತ್ತವೂ ಕಬ್ಬೂ ಬೆಳೆಯುವುವು. ಕೇವಲ ಮಳೆಗಳಿಗೆ ಅಧೀನವಾದವು ರಾಗಿ, ದ್ವಿದಳಧಾನ್ಯ ಮುಂತಾದವು; ತೇವ ಆರದೆ ತಂಪಾದ ಹವವಿರುವಲ್ಲಿ ನೀರಿನ ಸಹಾಯದಿಂದಲೇ ಆಗಬೇಕಾದ ತೆಂಗು, ಅಡಕೆ, ಬಾಳೆ, ಶುಂಠಿ, ಅರಿಸಿನ, ನೀರುಳ್ಳಿ, ಕೊತ್ತುಂಬರಿ, ಮೆಣಸಿನಕಾಯಿ ಮುಂತಾದ ತೋಟದ ಬೆಳೆಗಳೂ ಬಹುವಾಗಿ ನಡೆಯಬಲ್ಲವು. ಹತ್ತಿ, ಹಿಪ್ಪಲಿನೇರಿಳೆ, ಹರಳು, ನೆಲಗಡಲೆ ಮುಂತಾದ ಎಣ್ಣೆಯ ಬಿತ್ತಗಳೂ ಹೊಗೆಸೊಪ್ಪೂ ಮಾರಾಟದ ಬೆಳೆಗಳು. ಕಾಫೀ, ಮೆಣಸು, ಏಲಕ್ಕಿ ಇವು ಮಲೆನಾಡಿನ ಬೆಳೆಗಳು. ದೇಶದ ಅನೇಕ ಭಾಗಗಳಲ್ಲಿ ಬಗೆಬಗೆಯ ವನಸ್ಪತಿಗಳೂ, ಮೂಲಿಕೆಗಳೂ, ಕಾಡುಮೇಡುಗಳಲ್ಲಿ ಚರ್ಮ ಹದಮಾಡುವ ತಂಗಡಿ ಮುಂತಾದ ಚಕ್ಕೆಗಳೂ, ಊರುಗಳ ಸುತ್ತಣ ತೋಟ ತುಡಿಕೆಗಳಲ್ಲಿ ಹಣ್ಣು ಹಂಪಲ ತರಕಾರಿಗಳೂ ಬೆಳೆಯುತ್ತವೆ. ಅವುಗಳಲ್ಲಿ ಕೆಲವು ಹೆಚ್ಚು ಪ್ರಮಾಣದಲ್ಲಿ ದೊರೆತು ಹೊರಕ್ಕೆ ರಫ್ತುಮಾಡುವುದಕ್ಕೂ ಇತರ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೂ ಸಹಾಯವಾಗಿವೆ.

ಪ್ರಾಣಿವರ್ಗ

ದೇಶದಲ್ಲಿರುವ ದನ ಕರು ಕುರಿ ಮುಂತಾದ ರಾಸುಗಳು ಎಷ್ಟು ? ಹಕ್ಕಿಪಕ್ಷಿಗಳೂ ಕೋಳಿಗಳೂ ಯಾವುವು ? ಯಾವ ಯಾವ ಕಾಡುಮೃಗಗಳು ಎಷ್ಟುಮಟ್ಟಿಗಿವೆ ? ಎಂಬ ಎಣಿಕೆಯೂ ಮುಖ್ಯವಾದುದೇ. ಅವುಗಳಿಗೆ ಸಂಬಂಧಪಟ್ಟಂತೆ ಅನೇಕ ಉದ್ಯೋಗಗಳು ದೇಶದಲ್ಲಿ ಏರ್ಪಡಲು ಅವು ಸಹಕಾರಿಗಳಾಗುವುವು. ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಹಂದಿ, ಕತ್ತೆ, ಕುದುರೆ ಮುಂತಾದ ಪ್ರಾಣಿಗಳಲ್ಲಿ ಕೆಲವು ಆಹಾರ ದ್ರವ್ಯಗಳನ್ನೂ, ಕೆಲವು ಸಂಚಾರ ಸೌಕರ್ಯಗಳನ್ನೂ, ಕೆಲವು ಉಳುಮೆಯ ರಾಸುಗಳನ್ನೂ ಒದಗಿಸುವುವು. ಹಸು ಎಮ್ಮೆಗಳಿಂದ ಹಾಲು ಮೊಸರು ತುಪ್ಪದ ಸರಬರಾಯಿ ಆಗುವುದು. ಕುರಿ, ಮೇಕೆ, ಹಂದಿ, ಕೋಳಿ ಇವು ಜನರ ಆಹಾರಕ್ಕೆ ನೆರೆಯುವುವು. ಕುರಿಗಳ ಉಣ್ಣೆಯಿಂದ ಉಣ್ಣೆಯ ಬಟ್ಟೆಗಳ ಕೈಗಾರಿಕೆಯೂ ತುಬಟದ ವ್ಯಾಪಾರವೂ ಸಾಧ್ಯವಾಗುವುವು. ಕೆಲವು ಪ್ರಾಣಿಗಳ ಚರ್ಮ ಕೊಂಬುಗಳಿಂದ ಸಣ್ಣ ಸಣ್ಣ ಕೈಗಾರಿಕೆಗಳು ತಲೆಯೆತ್ತುತ್ತಿರುವುವು. ನಮ್ಮ ದೇಶದಲ್ಲಿ ಕಾಡುಪ್ರಾಣಿಗಳಾದ ಜಿಂಕೆ, ದುಪ್ಪಿ ಸಾರಗಗಳೂ, ಹಿಂಸ್ರ ಜಂತುಗಳಾದ ಹುಲಿ ಚಿರತೆಗಳೂ, ಆನೆ, ಕಾಡೆಮ್ಮೆ, ಕಾಡುಹಂದಿಗಳೂ ವಿಶೇಷವಾಗಿರುವುವು. ಇವುಗಳನ್ನು ಹಿಡಿದು ಮಾರಿ ಕೆಲವರು ಜೀವಿಸುವರು. ದಂತ, ಚರ್ಮ ಇವುಗಳ ವ್ಯಾಪಾರವೂ ಬಹಳ.

ಸರ್ಕಾರಕ್ಕೆ ಹೆಚ್ಚು ವರಮಾನ ತರುತ್ತಿರುವ ಇಲಾಖೆಗಳಲ್ಲಿ ಮೂರನೆಯ ಸ್ಥಾನವನ್ನು ಪಡೆದಿರುವುದು ಅರಣ್ಯಶಾಖೆ. ನೈಋತ್ಯ ಮಾರುತದ ಪ್ರಭಾವದಿಂದ ಮಳೆಯಾಗಿ ಅತಿ ದಟ್ಟವಾಗಿ ಬೆಳೆದು ಸಂತತವಾಗಿ ಹಸುರಿರುವ ಹಸುರುಕಾಡು, ಮಿಶ್ರವಾದ ಮಲೆನಾಡು ಕಾಡು, ಸೌದೆಯ ಕಾಡು ಎಂದು ನಮ್ಮ ಕಾಡುಗಳನ್ನು ಸ್ಥೂಲವಾಗಿ ಮೂರು ಭಾಗ ಮಾಡುತ್ತಾರೆ. ಮೊದಲ ಎರಡರಲ್ಲಿಯೂ ಕಾಫೀ ಬೆಳೆ ಹೆಚ್ಚು. ಈಗ ಈಗ ಟೀ ವ್ಯವಸಾಯಕ್ಕೂ ಮೊದಲಾಗಿದೆ. ಅವುಗಳು ಈಚೆಗೆ ಶ್ರೀಗಂಧದ ಕಾಡು. ಸರ್ಕಾರದವರೂ ಸಾಹುಕಾರರೂ ನಟ್ಟು ಬೆಳಸಿರುವ ಕಾಡುಗಳೂ ಹಲವಿವೆ. ಕೋಲಾರ, ತುಮಕೂರು, ಬೆಂಗಳೂರು ಜಿಲ್ಲೆಗಳಲ್ಲಿ ಸೌದೆಯ ಕಾಡು ವಿಶೇಷ.

ನಮ್ಮ ದೇಶದಲ್ಲಿ ಬೆಳೆಯುವ ಶ್ರೀಗಂಧದ ಗಿಡ ಪ್ರಸಿದ್ಧವಾದುದು. ಪ್ರಪಂಚದಲ್ಲಿ ಉತ್ಪತ್ತಿಯಾಗುವ ಶ್ರೀಗಂಧದಲ್ಲಿ ೫ ರಲ್ಲಿ ೩ ಭಾಗ—ಒಟ್ಟು ಹಿಂದೂಸ್ಥಾನದಲ್ಲಿ ಸಿಕ್ಕುವ ಶ್ರೀಗಂಧದಲ್ಲಿ ಮುಕ್ಕಾಲು ಭಾಗಕ್ಕಿಂತ ಹೆಚ್ಚು ಭಾಗ—ನಮ್ಮದು. ಆದುದರಿಂದ ಸರ್ಕಾರಕ್ಕೆ ಅದರಿಂದ ಬರುವ ವರಮಾನ ಹೆಚ್ಚು. ಈ ಸೀಮೆಯಲ್ಲಿ ಗಂಧದ ಗಿಡಗಳು ಎಲ್ಲಿ ಬೆಳೆಯಲಿ ಅವು ಸರ್ಕಾರಕ್ಕೆ ಸೇರಬೇಕು. ಇದರಿಂದ ಸುಗಂಧ ತೈಲವನ್ನು ತೆಗೆದು ಮಾರುವರು. ದೇಶದ ಸಾಬೂನಿನ ಕೈಗಾರಿಕೆಗೂ ಇದರಿಂದ ಪರಿಮಳದ್ರವ್ಯ ಒದಗುತ್ತದೆ. ಸೊರಬ, ಸಾಗರ ಮುಂತಾದ ಕಡೆ ಈ ಮರದಲ್ಲಿ ಸುಂದರವಾದ ಕೆತ್ತನೆಯ ಕೆಲಸಗಳನ್ನು ಮಾಡುವರು. ಹೀಗೆ ವಿಶೇಷವಾದ ಒಂದು ಕಲೆಯ ಕಸುಬು ಈ ದೇಶದಲ್ಲಿ ನಡೆಯುವುದಕ್ಕೂ ಗಂಧದ ಮರ ಆಸರೆಯಾಗಿದೆ.

ತೇಗ ಮೊದಲಾದ ಸಾಗುವಾನಿ ಮರಗಳೂ ನಮ್ಮ ಕಾಡುಗಳಲ್ಲಿ ಬಹಳ. ಮರಮುಟ್ಟು, ಗಾಡಿ, ವ್ಯಾಗನ್, ತೇರು ಬಂಡಿ, ರೈಲ್ವೆ ಕಂಬಿಗಳ ಕೆಳಗಿನ ಹಲಗೆ, ನೇಗಿಲು, ರಾಟೆ ಮುಂತಾದವಕ್ಕೆ ಬೇಕಾದ ಮರ; ಕೆತ್ತನೆ ಕೆಲಸ, ಆಟದ ಸಾಮಾನು, ವಾದ್ಯಗಳು, ವಿದ್ಯುಚ್ಛಕ್ತಿಯ ದೀಪದ ಕಂಬ ಮುಂತಾದವಕ್ಕೂ, ಬೆಂಕಿಯ ಕಡ್ಡಿ, ಸೀಸದ ಕಡ್ಡಿಗಳನ್ನು ತಯಾರಿಸುವುದಕ್ಕೂ ಬೇಕಾದ ಮರ, ಕಾಗದದ ತಯಾರಿಗೆ ಬೇಕಾದ ಅಂಬಲಿ ಸರಿಗಳನ್ನು ಒದಗಿಸುವ ಬೊಂಬು, ಇವೂ ಯಥೇಚ್ಛವಾಗಿವೆ. ನಾರು ಹಗ್ಗಗಳಿಗೆ ಬೇಕಾಗುವ ಸಾಮಗ್ರಿಯನ್ನು ಅಡಕೆ, ತೆಂಗು, ಕತ್ತಾಳೆ ಮುಂತಾದ ಸಸ್ಯಜಾತಿ ಒದಗಿಸುತ್ತದೆ. ಚರ್ಮ ಹದಮಾಡುವ ಚಕ್ಕೆ, ರಂಗುಗಳಿಗಾಗುವ ಪದಾರ್ಥ, ಗೋಂದು, ಅರಗು, ಮರದೆಣ್ಣೆ, ಇಂಗು, ಸಾಂಬ್ರಾಣಿ, ಹಾಲುಮಡ್ಡಿ ಮುಂತಾದ ವಸ್ತು, ಹಿಪ್ಪೆ, ಹೊಂಗೆ ಮುಂತಾದ ಎಣ್ಣೆಯ ಬಿತ್ತ, ಹೀಗೇ ನೂರಾರು ಕೆಲಸ ಕೈಗಾರಿಕೆಗಳಿಗೆ ಉಪಯುಕ್ತವಾಗುವ ಸಾಮಾನು ಕಾಡಿಂದ ಒದಗುವುವು.

ಖನಿಜ ಸಂಪತ್ತಿ

ಸಮುದ್ರಮಟ್ಟಕ್ಕಿಂತಲೂ ಈ ದೇಶ ಎತ್ತರವಾಗಿ ಪ್ರಸ್ಥಭೂಮಿಯಾಗಿದೆ. ನಮ್ಮ ಖನಿಜ ಸಂಪತ್ತಿಯಲ್ಲಿ ವಿಶೇಷವೊಂದುಂಟು. ಇಡಿಯ

ಭರತಖಂಡದಲ್ಲಿಯೇ ಬೇರೆಲ್ಲಿಯೂ ದೊರೆಯದಿರುವಷ್ಟು ಚಿನ್ನ ಇಲ್ಲಿ ದೊರೆಯುತ್ತದೆ.

ಇಲ್ಲಿ ಸಿಕ್ಕುವ ಇತರ ಖನಿಜಗಳಲ್ಲಿ ಕಬ್ಬಿಣದ ಅದರು, ಮ್ಯಾಂಗನೀಸ್, ಕ್ರೋಮ್ ಇವು ಮುಖ್ಯವಾದವು. ಕಬ್ಬಿಣದ ಅದರು ಮಳವಳ್ಳಿಯ ಹತ್ತಿರವೂ, ಬಾಬಾಬುಡನ್ ಗಿರಿಯ ಹತ್ತಿರವೂ ದೊರಕುವುದು. ಮಳವಳ್ಳಿಯದು ಶ್ರೇಷ್ಠವಾದುದಲ್ಲ. ಬಾಬಾಬುಡನ್ ಗಿರಿಯ ಬಳಿ ಸಿಕ್ಕುವ ಅದರಿನಲ್ಲಿ ಶೇಕಡ ೬೫ ಭಾಗ ಕಬ್ಬಿಣ ಕುದುರುವುದು. ಆ ಬೆಟ್ಟದ ತಪ್ಪಲಿನಲ್ಲಿಯೇ ದೊಡ್ಡ ಸೌದೆಯ ಕಾಡುಗಳಿರುವುದರಿಂದ ಲೋಹವನ್ನು ರೂಡಿಸಲು ಸಹಾಯ ಬಹಳ. ಇಲ್ಲಿ ಕಲ್ಲಿದ್ದಲಿಲ್ಲ. ಹೊರಗಿಂದ ಅದನ್ನು ತರಿಸಲು ಹೆಚ್ಚು ವ್ಯಯಮಾಡಬೇಕು.

ಕುಂಸಿಯ ಬಳಿ ಮ್ಯಾಂಗನೀಸ್ ಎಂಬ ಖನಿಜ ಸಿಕ್ಕುವುದು. ಚಿಕ್ಕ ಜಾಜೂರು, ಶಿವಪುರ, ಮಸರಹಳ್ಳಿ, ಬಿದರೆ, ಬಾಣಸಂದ್ರ, ಯಲ್ಲದಬಾಗಿ, ಶಿವಮೊಗ್ಗ ಮುಂತಾದ ಊರುಗಳ ಸುತ್ತುಮುತ್ತು ಹೇರಳವಾಗಿದೆ. ವಿದ್ಯುಚ್ಛಕ್ತಿಯ ಸಹಾಯದಿಂದ ಕಬ್ಬಿಣ ಕರಗಿಸುವ ಯತ್ನಗಳು ನಡೆಯುತ್ತಿರುವ ಈಗ ಈ ಅದರನ್ನು ಒಳದೇಶದಲ್ಲಿಯೇ ಬಹುಮಟ್ಟಿಗೆ ಉಪಯೋಗಿಸಿಕೊಳ್ಳಬಹುದು. ಫೆರ್ರೊಮ್ಯಾಂಗನೀಸ್ ಮತ್ತು ಮ್ಯಾಂಗನೀಸ್ ಉಕ್ಕು ಎಂಬ ಮಿಶ್ರಲೋಹಗಳನ್ನು ತಯಾರಿಸಿ ರಫ್ತುಮಾಡಬಹುದು. ಇದಲ್ಲದೆ ಕ್ರೋಮೈಟ್, ಅಭ್ರಕ, ಕುರಂದಕ, ಕಲ್ನಾರು, ಪಿಂಗಾಣಿ ಜೇಡಿ, ಬಳಪದ ಕಲ್ಲು, ಕಾವಿ, ಇಟ್ಟಿಗೆ ಹೆಂಚುಗಳ ಜೇಡಿ, ಕೆತ್ತನೆಗೂ ಶಿಲ್ಪಕ್ಕೂ ಬೇಕಾಗುವ ಬಗೆಬಗೆಯ ಗಟ್ಟಿಕಲ್ಲು, ಪೈರೈಟೀಸ್, ಸೋಡಾ ಮುಂತಾದ ರಾಸಾಯನಿಕ ಕೈಗಾರಿಕೆಗಳಿಗೆ ಬೇಕಾಗುವ ಭೂಯಿಷ್ಠ ವಸ್ತುಗಳು ಇವೆಲ್ಲಾ ಹೇರಳವಾಗಿ ದೊರಕುವುವು.

ಸಂಚಾರಕ್ಕೆ ಸೌಲಭ್ಯ

ಮಲೆನಾಡು ಪ್ರದೇಶದಲ್ಲಿ ಜನರ ತಿರುಗಾಟಕ್ಕಾಗಲಿ ರೈಲು, ರಸ್ತೆ ಹಾಕುವುದಕ್ಕಾಗಲಿ ಅನುಕೂಲ ಕಡಮೆ. ವರುಷದ ಕೆಲವು ತಿಂಗಳಲ್ಲಿ ಒಂದು ಹಳ್ಳಿಯಿಂದ ಇನ್ನೊಂದಕ್ಕೆ ಹೋಗಲು ಕೂಡ ಸಾಧ್ಯವಾಗದಂತೆ ನಡುವೆ ನೀರು ಹರಿಯುತ್ತಿರುತ್ತದೆ. ಮೈದಾನ ಪ್ರದೇಶದಲ್ಲಿ ಏರುತಗ್ಗು ಹೆಚ್ಚು. ರಸ್ತೆಗಳನ್ನು ಹಾಕುವುದು ಕಷ್ಟವಲ್ಲದಿದ್ದರೂ ವೆಚ್ಚ ಬಹಳವಾಗು

ವುದು. ಇದೇ ಕಾರಣದಿಂದಲೇ ಅಲ್ಲಿ ರೈಲುಗಳು ಹರಡಲೂ ತಡೆ ಬಂದಿದೆಯೆನ್ನಬೇಕು.

ಜನರು ಈವರೆಗೂ ಎತ್ತು ಕುದುರೆಗಳ ಸಹಾಯದಿಂದಲೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಳದೇಶದಲ್ಲಿ ಸಂಚಾರಮಾಡುತ್ತಿದ್ದರು. ಈಗ ಎಲ್ಲೆಲ್ಲಿಯೂ ಮೋಟರು ಬಸ್ಸು ತಿರುಗುವುದು ಬಳಕೆಯಾಗುತ್ತಿದೆ. ಜನ ಸಂಚಾರಕ್ಕೆ ಹೇಗೋ ಸಾಮಾನುಗಳು ಸಾಗುವುದಕ್ಕೂ ಹಾಗೇ ಮೋಟರು ಲಾರಿಗಳನ್ನೇ ಉಪಯೋಗಿಸುವ ಸೌಕರ್ಯ ದೊರೆತರೆ ವ್ಯಾಪಾರದಲ್ಲಿ ಹೆಚ್ಚಿನ ಲಾಭವೂ ಚಟುವಟಿಕೆಯೂ ಉಂಟಾದಾವು. ಎಂದಮೇಲೆ ಮೋಟರು ಸಂಚಾರಕ್ಕೆ ತಕ್ಕ ರಸ್ತೆಗಳನ್ನು ಏರ್ಪಡಿಸಬೇಕು. ಅವನ್ನು ಸರ್ಕಾರದವರೂ ಸ್ಥಳ ಸಂಸ್ಥೆಗಳವರೂ ಸರಿಯಾಗಿ ಕಾಪಾಡಿಕೊಂಡು ಬರಬೇಕು. ಈಗ ಒಳವ್ಯಾಪಾರವೆಲ್ಲವೂ ಎತ್ತಿನ ಗಾಡಿಗಳಲ್ಲಿಯೇ ತುಂಬಿ ನಡೆಯುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳನ್ನು ಬಿಟ್ಟರೆ ಉಳಿದ ಕಡೆ ರೈಲುಗಳ ಅನುಕೂಲ ಕಡಮೆ. ಎತ್ತಿನಗಾಡಿಗಳಲ್ಲಿ ಸಾಮಗ್ರಿ ಸಾಗಬೇಕಾದರೆ ಕಾಲವೂ ಶ್ರಮವೂ ಅನಾವಶ್ಯಕವಾಗಿ ನಷ್ಟವಾಗುವುವು. ಬಂಡವಾಳಸ್ಥರೂ ಸರ್ಕಾರದವರೂ ಮನಸ್ಸು ಮಾಡಿದರೆ ಈ ಕೊರತೆಯನ್ನು ಸುಲಭವಾಗಿ ಹೋಗಲಾಡಿಸಬಹುದು.

ಯಂತ್ರಚಾಲಕ ಶಕ್ತಿ

ಯಂತ್ರಗಳನ್ನು ಏರ್ಪಡಿಸಿ ಹೆಚ್ಚು ಕೆಲಸಗಳನ್ನು ನಡೆಯಿಸುವ ಈ ಕಾಲದಲ್ಲಿ ಎಲ್ಲ ದೇಶಗಳವರೂ ಅನೇಕ ಬಗೆಯಲ್ಲಿ ಪ್ರಕೃತಿದತ್ತವಾದ ಶಕ್ತಿಗಳನ್ನು ರೂಡಿಸಿಕೊಂಡು ತಮ್ಮ ಕೈಗಾರಿಕೆ ಕಾರ್ಖಾನೆ ಕೆಲಸವನ್ನು ಜಾಗ್ರತೆಯಾಗಿಯೂ ದಕ್ಷತೆಯಿಂದಲೂ ಮಾಡುತ್ತಿದ್ದಾರೆ. ಇಂತಹ ಶಕ್ತಿಗಳು ಹಲವು ರೂಪಗಳಲ್ಲಿ ದೊರೆಯುತ್ತವೆ: ಯಂತ್ರಗಳನ್ನು ನಡಸಲು ಹರಿಯುವ ನೀರನ್ನು ಉಪಯೋಗಿಸುವುದುಂಟು. ನೀರನ್ನು ಕಾಯಿಸಿ ಅದರ ಆವಿಯಿಂದಲೋ; ನೀರನ್ನು ಎತ್ತರದಿಂದ ದುಮಿಕಿಸಿಕೊಂಡೋ ಸ್ವಾಭಾವಿಕವಾದ ಜಲಪಾತಗಳ ಹತ್ತಿರದಲ್ಲಿಯೋ; ಡೈನಮೋ ಎಂಬ ಯಂತ್ರದ ಮೂಲಕವೋ ವಿದ್ಯುಚ್ಛಕ್ತಿಯನ್ನು ರೂಡಿಸಿಕೊಂಡು ದೀಪ ಬೆಳಕುಗಳಿಗೂ ಯಂತ್ರ ನಡಸುವುದಕ್ಕೂ ಉಪಯೋಗಿಸಿಕೊಳ್ಳುವರು. ಇಲ್ಲ

ವಾದರೆ ಎಣ್ಣೆ ಗ್ಯಾಸ್ ಇವುಗಳ ಸಹಾಯದಿಂದಲೂ ಈ ಕೆಲಸಗಳನ್ನು ನಡಸುವುದುಂಟು. ದೇಶದಲ್ಲಿ ಸೌದೆಯೂ ಕಲ್ಲಿದ್ದಲೂ ವಿಶೇಷವಾಗಿದ್ದಷ್ಟೂ ಆವಿಯನ್ನು ಒದಗಿಸಿಕೊಳ್ಳಬಲ್ಲ ಶಕ್ತಿ ಹೆಚ್ಚಿದಂತಾಗುವುದು. ಮೈಸೂರು ದೇಶದಲ್ಲಿ ಕಲ್ಲಿದ್ದಲಾಗಲಿ, ಸೀಮೆಯ ಎಣ್ಣೆಯಾಗಲಿ ದೊರಕದು. ಹರಿಯುವ ನೀರು ಬೀಸುವ ಗಾಳಿಗಳ ಪ್ರಯೋಗದಿಂದ ದೊಡ್ಡ ಯಂತ್ರಗಳನ್ನು ನಡಸುವುದು ಬಳಕೆಗೆ ಬಂದಿಲ್ಲ. ಅಲ್ಲಲ್ಲಿ ಎಣ್ಣೆಯ ಸಹಾಯದಿಂದ ಕೆಲವು ಯಂತ್ರಗಳು ನಡೆಯುತ್ತಿವೆ. ಬಹುಮಟ್ಟಿಗೆ ಈಗ ಎಲ್ಲೆಲ್ಲಿಯೂ ನೀರಿನ ಆವಿಯಿಂದಲೂ ವಿದ್ಯುಚ್ಛಕ್ತಿಯಿಂದಲೂ ಕಾರ್ಖಾನೆಗಳಲ್ಲಿಯೂ ರೈಲುಗಳಲ್ಲಿಯೂ ಕೆಲಸವನ್ನು ನಡಸುತ್ತಿದ್ದಾರೆ. ರೈಲುಗಳಿಗೆ ಬೇಕಾಗುವ ಕಲ್ಲಿದ್ದಲು ಹೊರಪ್ರಾಂತಗಳಿಂದಲೂ ಪರದೇಶಗಳಿಂದ ಆಮದಾಗುತ್ತಿದೆ. ರೈಲುಗಳಿಗೆ ಕೇಸರಿಕೆ (ಸರುವೆ) ಸೌದೆಯನ್ನು ಉಪಯೋಗಿಸಬಹುದು. ಶಿವಸಮುದ್ರದಲ್ಲಿ ರೂಡಿಸುವ ವಿದ್ಯುಚ್ಛಕ್ತಿಯಿಂದ ದೊಡ್ಡ ಪಟ್ಟಣಗಳಿಗೆ ಬೆಳಕು ಸಿಕ್ಕಿರುವುದೇ ಅಲ್ಲದೆ ಅನೇಕ ಸ್ವದೇಶಿ ವಿದೇಶಿ ಕಾರ್ಖಾನೆಗಳವರಿಗೂ ಯಂತ್ರಚಾಲನೆಗೆ ಬೇಕಾದಷ್ಟು ವಿದ್ಯುಚ್ಛಕ್ತಿ ದೊರೆಯುತ್ತಿದೆ. ಅಮೇರಿಕಾ ಸ್ವೀಡನ್ ದೇಶಗಳನ್ನು ಬಿಟ್ಟರೆ ಮೈಸೂರಲ್ಲಿ ಒಂದರಲ್ಲಿಯೇ ಕಾರ್ಯಗಳಿಗೆ ಇಷ್ಟು ಸುಲಭವಾಗಿ ವಿದ್ಯುಚ್ಛಕ್ತಿ ಒದಗುತ್ತಿರುವುದೆನ್ನುವರು. ಶಿವಸಮುದ್ರದ ಜೊತೆಗೆ ಶರಾವತಿ ದುಮಿಕುವ ಗೇರುಸೊಪ್ಪೆ ಜಲಪಾತದಲ್ಲಿಯೂ ಈ ಶಕ್ತಿಯನ್ನು ಬೇಕಾದಷ್ಟು ರೂಡಿಸಿ, ಶಿವಮೊಗ್ಗಾಕ್ಕೂ ಬೊಂಬಾಯಿ ಪ್ರಾಂತಕ್ಕೂ ವಿದ್ಯುಚ್ಛಕ್ತಿಯನ್ನು ಒದಗಿಸುವುದು ಸಾಧ್ಯ. ಈಗ ನಡೆಯುತ್ತಿರುವ ಯತ್ನಗಳು ಸಫಲವಾಗಿ ಅಲ್ಲಿಯೂ ಈ ಶಕ್ತಿಯನ್ನು ರೂಡಿಸುವಂತಾದರೆ ದೇಶಕ್ಕೆ ಬರಬಹುದಾದ ಲಾಭ ಹೆಚ್ಚುವುದು ಖಂಡಿತ. ಸಂಸ್ಥಾನದಲ್ಲಿ ಅನೇಕ ಕಡೆ ಬೆಳೆಯುವ ಉರುಳು ಗಡ್ಡೆಯಿಂದ ಆಲ್‌ಕೊಹಾಲ್ ಎಂಬ ದ್ರವ್ಯವನ್ನು ತೆಗೆದು ಅದರಿಂದಲೂ ಚಾಲಕಶಕ್ತಿಯನ್ನು ಒದಗಿಸಿಕೊಳ್ಳಲು ಅವಕಾಶವಿದೆಯೆಂದು ಶಾಸ್ತ್ರಜ್ಞರು ಹೇಳುವರು.

ಒಟ್ಟಿನಲ್ಲಿ ಮನುಷ್ಯನ ಸೌಕರ್ಯಕ್ಕಾಗಿ ಪ್ರಕೃತಿ ಒದಗಿಸಿರುವ ಎಲ್ಲ ಅನುಕೂಲಗಳನ್ನೂ ಉಪಯೋಗಿಸಿಕೊಂಡು, ನಿಪುಣತೆಯಿಂದಲೂ ಶಾಸ್ತ್ರಜ್ಞಾನದಿಂದಲೂ ಕೆಲಸಮಾಡಿದರೆ ದೇಶದ ಸಂಪತ್ತನ್ನು ಬಹಳವಾಗಿ ವೃದ್ಧಿಪಡಿಸಬಹುದು.

೨. ಕಸುಬು, ಉದ್ಯೋಗ, ಪದ್ಧತಿಗಳು

ಜನಲಕ್ಷಣ

ಮನುಷ್ಯನ ಯತ್ನ, ಸಾಹಸ, ಜ್ಞಾನ, ಉದ್ಯೋಗಶೀಲತೆ ಇವುಗಳಿಲ್ಲದಿದ್ದರೆ ಪ್ರಕೃತಿಯ ಸಹಾಯ ಎಷ್ಟಿದ್ದರೂ ವ್ಯರ್ಥವೇ. ದೇಶದ ಸಿರಿಗಾಗಲಿ ಬಡತನಕ್ಕಾಗಲಿ ಜನರೇ ಕಾರಣ. ಉತ್ಸಾಹ, ದೇಶಾಭಿಮಾನ, ಹುರುಡು, ಮಹತ್ವಾಕಾಂಕ್ಷೆಗಳಿಂದ ೨೦–೩೦ ವರುಷಗಳ ಅಲ್ಪಾವಧಿಯಲ್ಲಿ ಹಿಂದುಳಿದಿದ್ದ ಎಷ್ಟೋ ಜನಾಂಗಗಳು ಮಹಾರಾಷ್ಟ್ರಗಳ ಪದವಿಯನ್ನು ಸಂಪಾದಿಸಿರುವುವು. ಅಲಸತನ, ನಿರುತ್ಸಾಹ, ಪೌರುಷದಲ್ಲಿ ಅಪನಂಬಿಕೆ, ಅಜ್ಞಾನ ಇವುಗಳಿಂದ ಎಷ್ಟೋ ಮಹಾರಾಷ್ಟ್ರಗಳು ದುರ್ಗತಿಗೆ ಬಂದಿವೆ. ಜರ್ಮನಿ, ಜಪಾನ್, ಅಮೇರಿಕಾ, ಇಟಲಿ ಈ ದೇಶಗಳು ಮೊದಲನೆಯ ವರ್ಗಕ್ಕೆ ಸೇರಿದವು. ಚೀಣಾ, ಇಂಡಿಯಾ ದೇಶಗಳು ಎರಡನೆಯದಕ್ಕೆ ಸೇರಿವೆ. ವಿಸ್ತೀರ್ಣವೂ ಜನಸಂಖ್ಯೆಯೂ ಹೆಚ್ಚಾದ ಮಾತ್ರಕ್ಕೇ ದೇಶಗಳಿಗೆ ಘನತೆ ಬಾರದು. ನಿಷ್ಪೌರುಷವಾದ ನಿರುದ್ಯೋಗಿಯಾದ ಬಾಳು ಬಾಳಲ್ಲ. ಜನಾಂಗ ಸಣ್ಣದಾಗಿ ಅಲ್ಪಸಂಖ್ಯೆಯದಾಗಿದ್ದರೆ ಅದೇ ಒಂದು ಕೊರತೆಯಾಗಬೇಕಾಗಿಲ್ಲ. ಜಪಾನ್, ಇಂಗ್ಲಂಡ್, ಜರ್ಮನಿ, ಝೆಕೊಸ್ಲೋವಾಕಿಯ, ಬೆಲ್ಜಿಯಂ ಮುಂತಾದ ದೇಶಗಳವರಿಗೆ ಅವರ ಸಂಖ್ಯೆಯ ಅಲ್ಪತೆಯು ಯಾವ ಕುಂದನ್ನೂ ತಂದಿಲ್ಲ. ಆ ಜನಾಂಗಗಳಲ್ಲಿ ಪ್ರತಿಯೊಬ್ಬರ ಕಾರ್ಯಶಕ್ತಿಯೂ ಫಲಕಾರಿಯಾದುದು. ಅವು ಜೀವಂತರಾಷ್ಟ್ರಗಳು. ಕೋಟ್ಯಂತರವಿರುವ ಜೀವಿಗಳ ಹಿಂಡು ಅರ್ಥಸಾಧನಾ ದೃಷ್ಟಿಯಿಂದಲೇ ಆಗಲಿ ಸಮಾಜ, ರಾಜಕೀಯ ಅಥವಾ ಸಂಸ್ಕೃತಿ ದೃಷ್ಟಿಯಿಂದಲೇ ಆಗಲಿ ಕೆಲಸಕ್ಕೆ ಬಾರದು. ಸಂಪತ್–ದೃಷ್ಟಿಯಲ್ಲಿ ಅದಕ್ಕೆ ಬೆಲೆಯಿಲ್ಲ. ಯಾವುದರ ಗಳಿಕೆಗೂ ಪುರುಷಪ್ರಯತ್ನವೇ ಸಾಧನ. ಆ ಶಕ್ತಿ ಜನರ ಗುಣ, ಸ್ವಭಾವ, ಜ್ಞಾನ, ಅನುಭವ, ಕಾರ್ಯಸಾಧನಾ ದಕ್ಷತೆ, ಉದ್ಯೋಗ ಬುದ್ಧಿ, ಸಾಹಸ, ಒಡಲಶಕ್ತಿ, ಮೆದುಳಬಲ, ಜೀವನ ರೀತಿ, ಸಮಾಜಪದ್ಧತಿ ಇವುಗಳಿಂದ ನಿರ್ಧರವಾಗುತ್ತದೆ.

ಮೈಸೂರಿನಲ್ಲಿ ಚದರಮೈಲಿಗೆ ಸುಮಾರು ೨೦೩ ರಂತೆ ಜನಸಾಂದ್ರತೆ ಇದೆ. ಮಲೆನಾಡಿನ ಕೆಲವು ಪ್ರದೇಶಗಳಲ್ಲಿ ಸಾಂದ್ರತೆ ೭೫ಕ್ಕಿಂತ ಕಡಮೆ. ಬೆಂಗಳೂರಲ್ಲಿ ಕೆಲವೆಡೆ ೬೦೦ ಕ್ಕಿಂತ ಹೆಚ್ಚು. ಜನಗಣತಿಯ ಪ್ರಕಾರ ಈ ಸಂಸ್ಥಾನದವರ ಸಂಖ್ಯೆ ಮೊತ್ತದಲ್ಲಿ ಪ್ರತಿ ದಶಮಾನದಲ್ಲಿಯೂ ಹೆಚ್ಚುತ್ತಿದೆ. ಆದರೆ ಅದು ಹೆಚ್ಚುತ್ತಿರುವ ವೇಗ ಮಾತ್ರ (ಈ ದಶಮಾನವನ್ನು ಬಿಟ್ಟು) ಎಣಿಕೆ ಎಣಿಕೆಗೂ ಕಡಮೆಯಾಗಿದೆ. *

ಎಂದರೆ ೪೦ ವರುಷಗಳಿಗೆ ಸಂಖ್ಯೆ ಹದಿನಾರು ಲಕ್ಷ ಅಥವಾ ಶೇಕಡ ೩೦ ರಷ್ಟು ಹೆಚ್ಚಾದ ಹಾಗಾಯಿತು. ಆದರೆ ಇದೇ ಕಾಲದಲ್ಲಿ ಸ್ವಾಭಾವಿಕವಾಗಿ, ಎಂದರೆ ಸತ್ತವರ ಸಂಖ್ಯೆಗಿಂತಲೂ ಉಳಿದವರ ಸಂಖ್ಯೆ ಎಷ್ಟು ಹೆಚ್ಚಿತು ಎಂಬ ಲೆಕ್ಕದ ಮೇರೆಗೆ ಈ ಸಂಖ್ಯೆ ಶೇಕಡ ೨೪ ಮಾತ್ರ.

ಜನಸಂಖ್ಯೆ ಎರಡು ಬಗೆಯಲ್ಲಿ ಹೆಚ್ಚುವುದು :—

(೧) ಸಾಯುವವರಿಗಿಂತ ಹುಟ್ಟುವವರು ಹೆಚ್ಚಾಗುವುದರಿಂದ ;

(೨) ಹೊರದೇಶಗಳಿಂದ ಬಂದು ಇಲ್ಲಿ ನೆಲಸುವವರ ಸಂಖ್ಯೆ ಹೆಚ್ಚುವುದರಿಂದ.

ನಮ್ಮ ದೇಶದಲ್ಲಿಯೇ ಹುಟ್ಟಿದವರ ಸಂಖ್ಯೆ ೬೨ ಲಕ್ಷ. (ಇಲ್ಲಿಂದ ಹೊರಗೆ ಹೋದವರು ಒಂದು ಲಕ್ಷ ಜನ. ಹೊರಗಿಂದ ಇಲ್ಲಿಗೆ ಬಂದವರು ಮೂರು ಲಕ್ಷಕ್ಕೆ ಮೀರದ ಮಂದಿ.) ನಾಡಿನ ಹೊರಗೆ ಹೋದವರಿಗಿಂತಲೂ ಒಳಕ್ಕೆ ಬಂದಿರುವವರು ನಿವ್ವಳ ೨ ಲಕ್ಷಕ್ಕೆ ಮೇಲ್ಪಟ್ಟಿದ್ದಾರೆ. ಇವರಲ್ಲಿ ಭಾರತೀಯರೇ ಬಹು ಮಂದಿ. ಅವರಲ್ಲಿಯೂ ಮದರಾಸಿನವರದು ಮೊದಲ ಭಾಗ. ಬೊಂಬಾಯಿಯವರು ಎರಡನೆಯವರು. ವಿದೇಶಿಯರು ಒಟ್ಟು ೪,೭೦೦ ; ಅವರಲ್ಲಿ ೩,೮೦೦ ಜನ ಬ್ರಿಟಿಷರು. ಉಳಿದವರು ಬೇರೆ ಬೇರೆ ದೇಶಗಳವರು. ಪರದೇಶಗಳಿಂದ ಬಂದರುವವರು ಬೆಂಗಳೂರು ದಂಡಿನಲ್ಲಿಯೂ, ಕೋಲಾರದ ಗಣಿಗಳಲ್ಲಿಯೂ, ಹಾಸನ ಕಡೂರು ಜಿಲ್ಲೆಗಳ ಕಾಫೀ ತೋಟ

---

*

		(೦೦೦ ಸಂಖ್ಯೆ)		(ಶೇಕಡ ಹೆಚ್ಚು)
೧೮೯೧	...	೪೯,೪೪	...	+೧೮·೧
೧೯೦೧	...	೫೫,೩೩	...	+೧೨·೧
೧೯೧೧	...	೫೮,೦೬	...	+೪·೮
೧೯೨೧	...	೫೯,೧೯	...	+೩·೦
೧೯೩೧	...	೬೫,೫೭	...	+೯·೨೬

ಗಳಲ್ಲಿಯೂ, ಉಳಿದವರು ಬೆಂಗಳೂರು ಮೈಸೂರು ಪಟ್ಟಣಗಳಲ್ಲಿಯೂ ಇದ್ದಾರೆ. ಹೆಚ್ಚುಕಡಮೆ ಅವರೆಲ್ಲರೂ ಪುಷ್ಟರು. ಸೈನ್ಯ ಮತ್ತು ವ್ಯಾಪಾರ ಕೈಗಾರಿಕೆಗಳ ಸಂಬಂಧದಲ್ಲಿಯೂ, ಮತಪ್ರಚಾರದ ಸಂಬಂಧದಲ್ಲಿಯೂ ಬಂದು ನೆಲಸಿರುವರು.

ನೆರೆಯ ಪ್ರಾಂತಗಳಿಂದ ಬಂದವರು ಆಯಾ ಪ್ರಾಂತಗಳಿಗೆ ಪಕ್ಕದಲ್ಲಿರುವ ಮೈಸೂರು ದೇಶದ ಜಿಲ್ಲೆಗಳವರು. ಹೀಗೆ, ಬೊಂಬಾಯಿ ಕಡೆಯಿಂದ ಬಂದಿರುವವರ ಪೈಕಿ ಬಹು ಭಾಗ ಶಿವಮೊಗ್ಗ, ಚಿತ್ರದುರ್ಗಗಳಲ್ಲಿದ್ದಾರೆ. ಕೊಡಗಿನವರ ಪೈಕಿ ಅರ್ಧಕ್ಕಿಂತ ಹೆಚ್ಚಾಗಿ ಹಾಸನ ಮೈಸೂರುಗಳಲ್ಲಿದ್ದಾರೆ. ಒಳದೇಶದವರು ಒಂದು ಜಿಲ್ಲೆಯಿಂದ ಇನ್ನೊಂದಕ್ಕೆ ಹೋಗಿ ಬರುವುದೂ ಉಂಟು. ಒಟ್ಟಿನಲ್ಲಿ ಜಿಲ್ಲೆಗಳು ಪರಸ್ಪರವಾಗಿ ಒಂದು ಸಾವಿರ ಮಂದಿಯನ್ನು ಕೊಟ್ಟು ತೆಗೆದುಕೊಳ್ಳುವುವೆನ್ನಬಹುದು. ಬೆಂಗಳೂರು ಮೈಸೂರು ಪಟ್ಟಣಗಳಿಗೆ ಮಾತ್ರ ಎಲ್ಲ ಕಡೆಯಿಂದಲೂ ಜನ ಬರುವರು. ಕೆಟ್ಟವರೂ, ಬದುಕಬೇಕೆನ್ನುವವರೂ ಎಲ್ಲರೂ ಈ ಪಟ್ಟಣಗಳಿಗೆ ಬಂದು ಸೇರುವರು. ಕಡೂರು ಚಿತ್ರದುರ್ಗಗಳಿಂದ ಹೊರಗೆ ಹೋಗುವವರು ಕಡಮೆ. ಪಶ್ಚಿಮ ಜಿಲ್ಲೆಗಳಿಗೆ ಒಟ್ಟು ೧೪ ಸಾವಿರದಷ್ಟು ಹೆಚ್ಚು ಜನ ಹೋಗಿ ಸೇರುವರು. ಅಲ್ಲಿ ಜನಸಾಂದ್ರತೆ ಬಹಳವಾಗಿಲ್ಲ. ಅಲ್ಲಿನ ಕಾಫೀ ಅಡಕೆ ಮುಂತಾದ ತೋಟಗಳಲ್ಲಿ ಕೆಲಸವೂ ಪ್ರಯೋಜನವೂ ದೊರೆಯುವುವಾದುದರಿಂದ ಜನರು ಅಲ್ಲಿಗೆ ಹೋಗಿ ನೆಲಸುವುದು ವಾಡಿಕೆ.

ಹೊರಗೆ ಹೋಗಿರುವವರು

ನಾಡಿಂದ ಹೊರಹೋಗುವವರಲ್ಲಿ ಇಂಡಿಯಾದ ಗಡಿಯನ್ನು ಮೀರಿ ಹೋಗಿರುವವರ ಸಂಖ್ಯೆ ಸ್ವಲ್ಪವೇ. ವಿದ್ಯಾರ್ಥಿಗಳು, ವ್ಯಾಪಾರಿಗಳು,—ಇಲ್ಲವಾದರೆ—ಯುದ್ಧಕಾಲದಲ್ಲಿ ಕೆಲಸಗಳಿಗಾಗಿ ಹೋಗಿ ಅಲ್ಲಿಯೇ ನಿಂತಿರುವವರು, ಇವರು ಮಾತ್ರ. ಇಂಡಿಯಾದೊಳಗೇ ಇರುವ ಮೈಸೂರವರಲ್ಲಿ ಮದರಾಸ್ ಪ್ರಾಂತದಲ್ಲಿರುವವರ ಸಂಖ್ಯೆ ಹೆಚ್ಚಿನದು. ಬೊಂಬಾಯಿ, ಕೊಡಗು, ಬರ್ಮಾಗಳಲ್ಲಿಯೂ ಕೆಲವು ಮಂದಿ ಇದ್ದಾರೆ. ಸಿಲಾನ್, ಸ್ಟ್ರೇಟ್ಸ್ ಸೆಟಲ್‌ಮೆಂಟ್, ಮಲಯ ಸಂಸ್ಥಾನಗಳು, ಕೆನಿಯಾ ಮುಂತಾದವುಗಳಿಗೆ ಕೆಲವುಮಂದಿ ಹೋಗಿರುವರು. ಸಿಲಾನಿನಲ್ಲಿರುವ ಮೈಸೂರವರ

ಸಂಖ್ಯೆ ೨,೦೦೦ ಕ್ಕೆ ಮೇಲಿದೆ. ಉಳಿದವರೆಲ್ಲರೂ ಸೇರಿದರೆ ಸುಮಾರು ೨೦೦ ಜನವಾಗುವುದು. ಇವರೆಲ್ಲರೂ ಜೀವನೋಪಾಯುಗಳಿಗಾಗಿ ಕೂಲಿಗಾರರನ್ನು ಕರೆದೊಯ್ಯುವ ಸಂಘಗಳ ಪ್ರಯತ್ನದಿಂದ ಆ ಪ್ರದೇಶಗಳಿಗೆ ಹೋಗಿರುವವರು ; ಸ್ವಲ್ಪ ಜನ ವರ್ತಕರು.

ತಿಳಿಯಬರುವ ಸಂಗತಿಗಳು

ಉಳಿದ ಭಾರತೀಯರಂತೆಯೇ, ಮೈಸೂರಿನವರೂ ಪರಸ್ಥಳ ಪ್ರವಾಸದಲ್ಲಿ ಇಷ್ಟವುಳ್ಳವರಲ್ಲ. ಜೀವನೋಪಾಯಕ್ಕಾಗಿ ಜನ್ಮಭೂಮಿಯಿಂದ ಕದಲಿ, ವಿದೇಶಗಳಿಗೆ ಹೋಗಲು ಇಷ್ಟಪಡರು. ಒಂದು ಜಿಲ್ಲೆಯಲ್ಲಿ ಕೆಲಸ ಸ್ವಲ್ಪ ಹೆಚ್ಚಿದಾಗ ಅಕ್ಕಪಕ್ಕದವರು ಇಷ್ಟವಿಲ್ಲದೆ ಅಲ್ಲಿಗೆ ಹೋಗಿ ಕೆಲಸ ಮುಗಿದ ಬಳಿಕ ಹಿಂದಿರುಗುವರು. ಅನೇಕ ಭಾಗಗಳಲ್ಲಿ, ಈಗಿನ ಉತ್ಪತ್ತಿಯ ಪ್ರಮಾಣದಂತೆ ಎಣಿಸಿದರೆ, ಅನ್ನವಸತಿಗೂ ಜನಸಂಖ್ಯೆಗೂ ಸುಮಾರು ಹೊಂದಿಕೆ ಬಂದುಬಿಟ್ಟಿದೆ. ಹೆಚ್ಚು ಕೆಲಸಮಾಡಿ ಮುಂದಕ್ಕೆ ಬರಬೇಕೆಂಬ ಆಕಾಂಕ್ಷೆ ಬಹುಮಟ್ಟಿಗೆ ಜನರಿಗಿಲ್ಲ,* ತಮ್ಮ ಅಂತಸ್ತನ್ನೂ ಹೆಚ್ಚಿಸಿಕೊಂಡು ಮೇಲ್ತರದ ಬದುಕಿನ ಸುಖವನ್ನು ಭೋಗಿಸಬೇಕೆಂಬ ಅಭಿಲಾಷೆ ಈಗತಾನೇ ಸ್ವಲ್ಪಸ್ವಲ್ಪವಾಗಿ ಕೆಲವು ಜನಕ್ಕೆ ಬರುತ್ತಿದೆ. ಆದರೂ ಹಳ್ಳಿಗಳಲ್ಲಿನ ಜನರಿಗೆ ಇನ್ನೂ ಬಂದಿಲ್ಲ. ಯುಗಯುಗಾಂತರಗಳಿಂದ ಯಾವರೀತಿ ಬಾಳಿದರೋ ಅದೇ ಬಗೆಯಲ್ಲಿ ಕರ್ಮಸಂಪ್ರದಾಯಗಳಿಗೆ ಬದ್ಧರಾಗಿ ಜಡರಾಗಿ ಬದುಕಿಕೊಂಡು ಬಂದಿದ್ದಾರೆ.

ಅರ್ಥಸಾಧನೆಗೂ ಇದಕ್ಕೂ ಸಂಬಂಧ

ಅರ್ಥಸಾಧನೆಗೂ ಇದಕ್ಕೂ ಏನು ಸಂಬಂಧವೆಂದು ಕೇಳಬಹುದು. ಸಂಬಂಧವಿದೆ. ದೇಶದಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದರೆ ಸಂಪದಭಿವೃದ್ಧಿಯಲ್ಲಿ ತೊಡಗಬಲ್ಲವರ ಸಂಖ್ಯೆ ಹೆಚ್ಚುವಂತಾಗುವುದು. ಅವರಲ್ಲಿ ರೋಗಾದಿಗಳಿಂದ ಪೀಡಿತರಾಗಿರುವವರ ಸಂಖ್ಯೆ ಕಡಮೆಯಾಯಿತೆಂದರೆ ಜೀವನ ಸುಖಪೂರ್ಣವಾಗಿಯೂ ಜನರು ಅರೋಗ ದೃಢಕಾಯರಾಗಿಯೂ ಆಗಲು

* ಪ್ರಕೃತಿಯ ಸಹಾಯದಿಂದ ಉತ್ಪತ್ತಿಮಾಡಬಹುದಾದ ಪರಮಾವಧಿ ಉತ್ಪತ್ತಿಯನ್ನು ಈಗ ತೆಗೆಯುತ್ತಿಲ್ಲ. ದೇಶದ ಜನಸಾಂದ್ರತೆ ಮಿತಿಮಿರಿಲ್ಲ. ಆದುದರಿಂದ ವೃದ್ಧಿಗೆ ಬೇಕಾದಷ್ಟು ಅವಕಾಶವಿರುವುದು ಎಂಬ ವಾದ ಬಲವಾದುದು.

ಅವಕಾಶವುಂಟು ; ಆ ಮೂಲಕ ಅವರ ಅರ್ಥಾರ್ಜನಾಯತ್ನ ಹೆಚ್ಚು ಫಲಕಾರಿಯಾದೀತು. ಅವರ ಶಕ್ತಿಸಾಹಸಗಳೂ ಕಾರ್ಯತತ್ಪರತೆಯೂ ಕುಶಲತೆಯೂ ಜ್ಞಾನವೂ ಎಷ್ಟು ಮೇಲಾದರೆ ಅಷ್ಟೂ ಅಷ್ಟು ಅವರ ಸಂಪಾದನೆ ಮೇಲಾಗುವ ಸಂಭವ ಉಂಟು. ದೇಶದೊಳಕ್ಕೆ ಬಂದು ನೆಲಸುವರ ಸಂಖ್ಯೆ ಎಷ್ಟು ಹೆಚ್ಚಿದೆ ? ಏಕೆ ? ಯಾವ ಉದ್ಯೋಗ ಗಳಿಗಾಗಿ ಅವರು ಬಂದಿದ್ದಾರೆ ? ಅವರ ಯೋಗ್ಯತೆ ಕಾರ್ಯದಕ್ಷತೆ ಏನು ? ಆ ಕೆಲಸಗಳನ್ನು ಮಾಡುತ್ತಿರುವ—ಮಾಡಬಲ್ಲ—ಜನರು ನಾಡಿ ನೊಳಗೇ ಇಲ್ಲವೆ ? ಇರುವವರ ಅಲಸತನದಿಂದ ಹೊರಗಿನವರಿಗೆ ಅವಕಾಶ ದೊರೆತಿದೆಯೆ ? ಅಥವಾ, ಇವರು ಸಾಲದಾಗಿ ಅವರು ಬರಬೇಕಾಯಿತೆ ? ಇಬ್ಬರ ಶಕ್ತಿಸಾಮರ್ಥ್ಯಗಳನ್ನೂ ಹೋಲಿಸಿ ನೋಡಿದರೆ ಯಾರವು ಮೇಲಾ ಗಿವೆ ? ಒಂದು ಮೇಲಾಗಿರುವುದಕ್ಕೂ ಇನ್ನೊಂದು ಬೀಳಾಗಿರುವುದಕ್ಕೂ ಕಾರಣವೇನು ? ಹೊರಗಿಂದ ಬಂದವರ ಕೆಲಸ ಮೇಲಾಗಿರುವುದಾದರೆ, ದೇಶಿಯರನ್ನೂ ಅದೇ ಮಟ್ಟಕ್ಕೆ ತರಲು ಯಾವ ಪ್ರಯತ್ನ ಮಾಡಬಹುದು ? ಹೊರಗಿಂದ ಬಂದಿರುವವರಿಂದ ಒಳದೇಶದವರಿಗೆ ಅಡಚಣೆಯೂ ಕೀಳ್ತರದ ಪೈಪೋಟಿಯೂ ಇದ್ದರೆ, ಅವನ್ನು ತಡೆಯಲು—ನಿಲ್ಲಿಸಲು—ಸರ್ಕಾರದ ವರೂ ದೇಶದ ಜನರೂ ಪ್ರಯತ್ನ ಮಾಡಬಹುದೆ ? ಹೊರಗಿಂದ ಬಂದವರು ಯಾವ ಉದ್ಯೋಗಗಳಲ್ಲಿದ್ದಾರೆ ? ಅವುಗಳಿಂದ ದೇಶದ ಸಂಪತ್ತೂ ಜನ ಜೀವನವೂ ಉತ್ತಮಗೊಳ್ಳುವುವೆ ? ಕೀಳಾಗುವುವೆ ? ಎಂಬ ವಿಷಯ ಗಳನ್ನೂ ಕೂಲಂಕಷವಾಗಿ ತಿಳಿದುಕೊಳ್ಳಬೇಕು. ಅವರ ಸಂಖ್ಯೆ ಎಷ್ಟು ಮುಖ್ಯವೋ, ಅವರ ಯೋಗ್ಯತೆ, ನಡವಳಿಕೆ, ಆರ್ಥಿಕ ಅಭ್ಯಾಸ, ಕಾರ್ಯ ಪಟುತ್ವ, ಖರ್ಚುವೆಚ್ಚಗಳಲ್ಲಿ ವಿವೇಕ, ವಿತರಣೆ, ಸ್ವತಂತ್ರಬುದ್ಧಿ, ಮುಂ ತಾದ ಗುಣಗಳನ್ನೂ, ಅವರಿಂದ ಆಗಬಹುದಾದ ಲಾಭನಷ್ಟಗಳನ್ನೂ ಸಂ ಪೂರ್ಣವಾಗಿ ತಿಳಿದುಕೊಂಡ ಹೊರತು ಯಾವದೊಂದು ಸಮಯದಲ್ಲಾಗಲಿ ಇಲ್ಲಿ ನಡೆಯುವ ಸಂಪದಭಿವೃದ್ಧಿ ಯತ್ನಗಳಿಗೆ ಸರಿಯಾದ ಬೆಲೆ ಕಟ್ಟಲಾಗು ವುದಿಲ್ಲ. ಹೊರಗೆ ಕಾಣುತ್ತಿರುವುದಕ್ಕೂ ಒಳಗಿನ ನಿಜಕ್ಕೂ ಇರಬಹುದಾದ ವಿನಾಶಕರ ವ್ಯತ್ಯಾಸಗಳನ್ನು ತಿಳಿಯಲು ಸಾಧ್ಯವಾಗದು.

ಒಟ್ಟು ಸಂಖ್ಯೆಯಲ್ಲಿ ಗಂಡಸರೆಷ್ಟು ಹೆಂಗಸರೆಷ್ಟು ? ಮಕ್ಕಳೂ ಮುದುಕರೂ ಎಷ್ಟು ? ಬೆಪ್ಪರು, ಕುರುಡರು ದುರ್ಬಲರು, ಹುಚ್ಚರು,

ರೋಗಿಗಳು, ಭಿಕ್ಷುಕರು, ಅನರ್ಥಕಾರಿ ಕೇಡಿಗರು ಎಷ್ಟು? ೧೫ ರಿಂದ ೫೦ ವರ್ಷ ವಯಸ್ಸಿನೊಳಗಿರುವವರ ಸಂಖ್ಯೆಯೆಷ್ಟು? ಎಂಬವನ್ನು ತಿಳಿದರೆ, ಅರ್ಥಸಾಧನೆಗೆ ತೊಡಗಬಲ್ಲವರ ಸಂಖ್ಯೆ ಗೊತ್ತಾಗುವುದು. ೧೫ ವರ್ಷಕ್ಕೆ ಕಡಮೆಯಾಗಲಿ ೫೦ ಕ್ಕೆ ಮೇಲ್ಪಟ್ಟಾಗಲಿ ಜನರು ಸಂಪಾದಿಸಲಾರರೆಂದಲ್ಲ. ಸಾಮಾನ್ಯವಾಗಿ ಚಿಕ್ಕವರ ಶಕ್ತಿ ಬಲಿತಿರುವುದಿಲ್ಲ; ಅವರ ಬುದ್ಧಿಯೂ ಅನುಭವವೂ ಅಪಕ್ವವಾಗಿರುತ್ತವೆ; ೫೦ ಕ್ಕೆ ಮೀರಿದವರ ಶಕ್ತಿ ಉಡುಗಲಾರಂಭವಾಗಿರುವುದು. ಆದುದರಿಂದ ಇವರಲ್ಲಿ ಸಂಪೂರ್ಣವಾದ ಅರ್ಥಸಾಧನಾ ಯೋಗ್ಯತೆ ಇರಲಾರದೆಂದು ಸ್ಥೂಲವಾಗಿ ಹೇಳಬಹುದು.

ಮೂವತ್ತು ಲಕ್ಷಕ್ಕೆ ಕಡಮೆ ಜನರು ಮಾತ್ರ ಅರ್ಥಸಾಧನೆಗೆ ಬೇಕಾದ ವಯಸ್ಸಿನವರು. ಹೆಂಗಸರಲ್ಲಿ ಸಮಾಜದ ನಯನೀತಿ ಸಂಪ್ರದಾಯಗಳಿಗೆ ಒಳಪಟ್ಟು ಉದ್ಯೋಗಗಳಲ್ಲಿ ತೊಡಗದಿರುವವರ ಸಂಖ್ಯೆಯೇ ಬಹಳ. ಬಡವರೂ ಕೆಲವು ಪಂಗಡಗಳವರೂ ಮಾತ್ರ ಹತ್ತಿ, ರೇಷ್ಮೆ ಉಣ್ಣೆಗಳಿಂದ ನೂಲು ತೆಗೆಯುವುದು, ನೇಗೆ ಕೆಲಸ ಊದುಬತ್ತಿ ಮಾಡುವುದು, ಬುಟ್ಟಿ ಹೆಣೆಯುವುದು, ಅಡಕೆ ತೊಗರಿ ಮಾಡುವುದು, ತರಕಾರಿ ಮಾರುವುದು, ಕೂಲಿಗೆ ದುಡಿಯುವುದು ಮುಂತಾದ ಕೆಲಸಗಳಲ್ಲಿ ತೊಡಗುವರಾದರೂ ಬಹುತರವಾಗಿ ದೇಶದಲ್ಲಿ ಅರ್ಥಸಾಧನೆಗೆ ಹೆಚ್ಚಾಗಿ ನೆರವಾಗುವುದಿಲ್ಲ. ಮುದುಕರು, ಅಂಗಹೀನರು, ರೋಗಿಗಳು ಇವರು ಕಳೆದು ಳಿದು ಕೆಲಸದಲ್ಲಿ ತೊಡಗಿರುವವರ ಸಂಖ್ಯೆ ೧೪.೫೪ ಲಕ್ಷ ಮಾತ್ರ. ಅವರ ಆಶ್ರಯದಲ್ಲಿ ಬದುಕಿರುವವರು ೪೩.೦೭ ಲಕ್ಷ ಎಂದರೆ ಒಟ್ಟು ಜನಸಂಖ್ಯೆಯಲ್ಲಿ ನಾಲ್ಕರಲ್ಲಿ ಒಂದು ಭಾಗಕ್ಕಿಂತ ಸ್ವಲ್ಪ ಹೆಚ್ಚು ಜನ ಮಾತ್ರ ದುಡಿಯುವವರೆಂದಾಯಿತು. ೪ ಜನರಿರುವ ಮನೆಯಲ್ಲಿ ಸಂಪಾದಿಸುವವರು ಒಬ್ಬರು ಮಾತ್ರವಾಗಿ, ಕುಳಿತು ತಿನ್ನುವವರು ಒಂದಕ್ಕೆ ಮೂರರಷ್ಟಾದರೆ ದೇಶದ ಸಂಪತ್ತು ಹೇಗೆ ವೃದ್ಧಿಯಾಗಬೇಕು? ವರ್ಷಕ್ಕೆ ತಲೆಯೊಂದಕ್ಕೆ ವರಮಾನ ಸರಾಸರಿ ೩೫–೪೦ ರೂಪಾಯಿಗಳಾಗಿರಲು ಜೀವನದ ಸೌಖ್ಯಗಳು ಹೇಗೆ ದೊರೆತಾವು? ಈಗ ದುಡಿಯುತ್ತಿರುವವರ, ಮತ್ತು ಮುಂದೆ ವಿದ್ಯಾಬುದ್ಧಿ ದೇಹಶಕ್ತಿಗಳಲ್ಲಿ ಬೆಳೆದು ಶ್ರಮಿಸಬೇಕಾಗಿರುವ ಮಕ್ಕಳ ಪುಷ್ಟಿ ಹೇಗೆ ಸಾಧಿತವಾದೀತು?

ಕಾರ್ಯದಕ್ಷತೆಗೆ ಸಾಧಕ ಬಾಧಕಗಳು

ಜನರ ಕಾರ್ಯದಕ್ಷತೆ ಅವರ ಆರೋಗ್ಯ, ದೇಹದಾರ್ಢ್ಯ, ತಿಳಿವಳಿಕೆ, ಅನುಭವ, ಕೆಲಸಕ್ಕೆ ಅವರಿಗೆ ಇರುವ ಅನುಕೂಲ, ಆಸಕ್ತಿ, ಯಂತ್ರದ ಉಪಕರಣ ಸಾಮಗ್ರಿ, ಅವಲಂಬಿಸಿರುವ ವೃತ್ತಿಗೂ ತಮ್ಮ ಶಕ್ತಿ ಶಿಕ್ಷಣಗಳಿಗೂ ಇರುವ ಹೊಂದಿಕೆ, ವಿತರಣೆ, ಕಾರ್ಯವ್ಯವಸ್ಥೆ ಇವಕ್ಕೆ ಅಧೀನವಾದುದು. ದೇಹಲಕ್ಷಣವೂ ಶಕ್ತಿಯೂ, ಒಳ್ಳೆಯ ವಂಶದಿಂದಲೂ ಹುಟ್ಟುವ ಕಾಲ ಬೆಳೆಯುವ ಕಾಲಗಳಲ್ಲಿರುವ ಸುತ್ತುಮುತ್ತಲ ಸ್ಥಿತಿಗತಿ ಸೌಕರ್ಯಗಳಿಂದಲೂ ಮೇಲಾಗುವುವು; ಬೀಳಾಗುವುವು. ದುರ್ಬಲರಾದ ತಾಯಿತಂದೆಯರ ಮಕ್ಕಳು ದುರ್ಬಲರಾಗುವರು. ಅಜ್ಞಾನದಿಂದ, ಬಡತನದಿಂದ ಅನನುಕೂಲದಿಂದ ಜನರ ದೇಹಶಕ್ತಿ ಬಾಲ್ಯದಲ್ಲಿಯೇ ಕೆಡುವುದು. ಬೆಳೆವಾಗ,— ಮನೆಯೊಳಗೆ, ಹೊರಗೆ—ವಿದ್ಯಾಶಾಲೆಗಳಲ್ಲಿ, ಜನರ ಸಹವಾಸದಲ್ಲಿ, ಕಾಯಶಕ್ತಿ ಮನಶ್ಶಕ್ತಿಗಳು ಹೆಚ್ಚು ಕಡಮೆಯಾಗುವುವು. ಅತಿ ಬಡತನದಲ್ಲಿ ದುರ್ಬಲರಾಗಿ ಹುಟ್ಟಿದ ಮಕ್ಕಳು ಅಕಾಲದಲ್ಲಿ ಸಾವಿಗೆ ತುತ್ತಾಗುವರು; ತಮಗೂ ತಾಯಿತಂದೆಯರಿಗೂ ಕ್ಲೇಶಕಾರಣರಾಗುವರು. ಸಮಾಜಕ್ಕೂ ಇದರಿಂದ ನಷ್ಟ. ಕೀಳಾದಸ್ಥಿತಿಯಲ್ಲಿ ಹುಟ್ಟುವರ ಸಂಖ್ಯೆಯೇ ಹೆಚ್ಚಾದುದರಿಂದ ಮನೆಯ ಬಡತನ ಹೆಚ್ಚಿ ಬದುಕಿರುವ ಮಕ್ಕಳ ಪೋಷಣೆಗೆ ಸಾಕಾದಷ್ಟು ಸಹಾಯ ದೊರೆಯದಂತಾಗುವುದು. ತಾಯಿತಂದೆಗಳು ಮಕ್ಕಳಿಗೆ ಕೊಡುವ ಶಿಕ್ಷಣ ಅವರ ಉಪಪತ್ತಿ, ಅವರು ಸಾಕಬೇಕಾಗಿರುವ ಜನರ ಸಂಖ್ಯೆ, ತಿಳಿವಳಿಕೆ, ದೂರದೃಷ್ಟಿ, ಮಕ್ಕಳ ಹುಟ್ಟುಗುಣ, ಅವರ ಶಕ್ತಿಯ ವಿಷಯದಲ್ಲಿ ತಾಯಿತಂದೆಯರಿಗಿರುವ ಜ್ಞಾನ ಇವುಗಳಿಗೆ ಒಂದು ಕಡೆಯೂ, ದೇಶದಲ್ಲಿರುವ ವಿದ್ಯಾಭ್ಯಾಸ ಪದ್ಧತಿ, ಸಮಾಜದ ಜೀವನಕ್ಕೂ ಆ ಪದ್ಧತಿಗೂ ಇರುವ ಹೊಂದಿಕೆ ಇವುಗಳಿಗೆ ಒಂದು ಕಡೆಯೂ ಅಧೀನವಾಗಿರುವುದು. ಒಟ್ಟಿನಲ್ಲಿ ಅರೋಗ್ಯ ದೃಢಕಾಯರಾಗಿ, ಹೆಚ್ಚು ವರಮಾನವುಳ್ಳ, ವಿದ್ಯಾವಂತರಾದ, ಕಡಮೆ ಮಕ್ಕಳುಳ್ಳ ಜನರ ಮಕ್ಕಳಿಗೆ ಜೀವನದ ಆರಂಭದಲ್ಲಿಯೂ ಅವಧಿಯಲ್ಲಿಯೂ ಅನೇಕ ಸಹಾಯಸೌಲಭ್ಯಗಳೂ ಅವಕಾಶಗಳೂ ದೊರಕಿ ಅವರ ಜೀವನ ಸುಗಮವಾಗುವುದಲ್ಲದೆ, ಅವರಿಂದ ದೇಶದ ಸಂಪತ್ತು ಹೆಚ್ಚಿ ಸುಖದ ಅಭಿವೃದ್ಧಿಯಾಗುವುದು. ಹಾಗಲ್ಲದೆ ಅಜ್ಞಾನದಲ್ಲಿಯೂ ಬಡತನದಲ್ಲಿಯೂ ತೇಲಿ ಮುಳು

ಗುತ್ತಿರುವವರಿಂದ ಅವರಿಗಾಗಲಿ, ಮಕ್ಕಳಿಗಾಗಲಿ, ದೇಶದ ಮೇಲ್ಮೆಗಾಗಲಿ ಯಾವ ಪ್ರಯೋಜನವೂ ಇಲ್ಲ. ಇಂತಹ ಬಡತನ ಹೇಗೆ ನಿವಾರಿತವಾಗ ಬೇಕು ? ಜನರ ಉಪಪತ್ತಿಯನ್ನು ಹೆಚ್ಚಿಸಿ ಅವರಿಂದ ಪಡೆಯಬಹುದಾದ ಪರಮಾವಧಿ ಶ್ರಮಸೇವೆಗಳನ್ನು ಸಮಾಜಕ್ಕೆ ಹೇಗೆ ದೊರಕಿಸಬೇಕು ? ಎಂಬುದೇ ಅರ್ಥಶಾಸ್ತ್ರಜ್ಞರ, ರಾಜನೀತಿಜ್ಞರ ಮುಖ್ಯ ಉದ್ದೇಶ ; ಅವರ ಎಲ್ಲ ಪ್ರಯತ್ನಗಳ ಗುರಿ.

ಆಯುಸ್ಸು, ಆರೋಗ್ಯ

ನಮ್ಮ ಜನರ ಅಯುಃಪ್ರಮಾಣ ಹೇಳಿಕೊಳ್ಳುವ ಹಾಗಿಲ್ಲ. ಸಂಸ್ಥಾನಾಮಳೆ ಗಂಡಸರ ಆಯುಸ್ಸು ಸರಾಸರಿ ೨೫.೭ ವರ್ಷ, ಹೆಂಗಸರದು ೨೪.೯ ! ಪಶ್ಚಿಮ ಭಾಗಗಳಲ್ಲಿ ಇದಕ್ಕೂ ಕಡಮೆ. ಎಂದರೆ * ಒಂದು ಶತಮಾನಕ್ಕೆ ೪ ತಲೆಗಳಂತೆ ಆಯುಸ್ಸು ನಡೆಯುವುದೆಂದಾಗ ಜನ ಶಕ್ತಿಯೂ ಪುಷ್ಟಿಯೂ ತಲೆಮಾರಿಂದ ತಲೆಮಾರಿಗೆ ನಾನಾ ಕಾರಣಗಳಿಂದ ಕಡಮೆಯಾಗುತ್ತಿರುವುದೆಂಬುದನ್ನು ತಿಳಿದಾಗ ಸ್ಥಿತಿ ಎಷ್ಟು ಶೋಚನೀಯ ವೆಂಬುದೂ ಈ ಕುಂದನ್ನು ಹೋಗಲಾಡಿಸುವುದು ಎಷ್ಟು ಅಗತ್ಯ ಎಂಬುದೂ ವ್ಯಕ್ತವಾದೀತು !

ಹುಟ್ಟುಸಾವುಗಳ ವಿಶೇಷಾಂಶಗಳು

ಹುಟ್ಟಿದ ಒಂದು ವರ್ಷದೊಳಗಾಗಿ ಐದರಲ್ಲಿ ಒಂದು ಭಾಗ ಮಕ್ಕಳು ಸಾಯುವರು. ಹುಟ್ಟಿದ ಹತ್ತು ದಿನಗಳಲ್ಲಿಯೇ ಸಾಯುವವರ ಸಂಖ್ಯೆ ಬಹಳ. ಅತಿ ಬಾಲ್ಯದಲ್ಲಿ ಜನರಿಗೆ ಮದುವೆಯಾಗುವುದರಿಂದಲೂ, ಶಕ್ತಿ ಇನ್ನೂ ಬಲಿಯದಿರುವಾಗಲೇ ಹೆಣ್ಣು ಮಕ್ಕಳಿಗೆ ತಾಯಿತನ ಬರುವುದರಿಂದಲೂ, ಎಲ್ಲ ಕಡೆಗಳಲ್ಲಿಯೂ ಮೇಲ್ತರದ ಹೆರಿಗೆಯ ಸೌಕರ್ಯ ಇಲ್ಲದಿರುವುದರಿಂದಲೂ, ತಿಳಿವಳಿಕೆ ಇಲ್ಲದವರು ಸೂಲು ಮಾಡಿಸುವದರಿಂದಲೂ, ಅನಾರೋಗ್ಯವಾದ ಆವರಣವಿರುವುದರಿಂದಲೂ, ತಾಯಿಗಾಗಲಿ ಮಗುವಿಗಾಗಲಿ ಸರಿಯಾದ ಪೋಷಣೆಯಾಗದಿರುವುದರಿಂದಲೂ, ತಾಯ ಹಾಲಿಲ್ಲದ ಮಕ್ಕಳಿಗೆ ಶುದ್ಧವಾದ ಹಾಲು ದೊರೆಯದಿರುವುದ

---

* ವಿದ್ಯೆ ಬುದ್ಧಿ ಕಲಿತು ಕೆಲಸಗಳಲ್ಲಿ ಇನ್ನೇನು ತೊಡಗಬಲ್ಲರು, ಸಂಪತ್ತನ್ನು ಗಳಿಸಬಲ್ಲರು ಎಂಬ ಹೊತ್ತಿಗೆ ಸರಿಯಾಗಿ ಜನರಿಗೆ ಮೃತ್ಯು ಸಿದ್ಧವಾದರೆ ಅದರಿಂದ ದೇಶಕ್ಕೂ ಕುಟುಂಬಗಳಿಗೂ ಎಷ್ಟು ನಷ್ಟವೋ ಯೋಚಿಸಬೇಕಾದ ವಿಷಯ.

ರಿಂದಲೂ, ಒಂದು ಹೆರಿಗೆಗೂ ಇನ್ನೊಂದು ಹೆರಿಗೆಗೂ ನಡುವೆ ೨–೩ ವರ್ಷಗಳ ಅವಧಿ ಕೂಡ ಅನೇಕ ವೇಳೆ ಇಲ್ಲದಿರುವುದರಿಂದಲೂ ಮಕ್ಕಳ ಸಾವಿನ ಸಂಖ್ಯೆ ಹೆಚ್ಚಿರುವುದು. ಹೆರಿಗೆಯ ಸಮಯದಲ್ಲಿ ತಾಯಿಯರು ಸಾಯುವುದೂ ಹೆಚ್ಚು. ಈ ತೆರನಾದ ಹೆರಿಗೆ ಹುಟ್ಟುಗಳಿಂದ ತಾಯಿಮಕ್ಕಳಿಗೆ ಕಷ್ಟವೂ ರೋಗವೂ ದೌರ್ಬಲ್ಯವೂ ಹೆಚ್ಚುವುವೇ ಹೊರತು ಅನುಕೂಲ ದೊರಕದು. ಹುಟ್ಟುವ ಮಕ್ಕಳಲ್ಲಿ ಮೂರು ಪಾಲು ಜನ ದಣಿದವರಂತೆ ಹುಟ್ಟುತ್ತಿದ್ದಾರೆ (Born tired). ತಾಯಿತಂದೆಯರ ಸಾಮಾನ್ಯ ವರಮಾನ ಅತ್ಯಲ್ಪ; ಹುಟ್ಟುವರ ವೇಗ ವಿಶೇಷವಾಗಿದೆ. ಬರುವ ವರಮಾನ ಮನೆಯವರ ಪೋಷಣೆಗೆ ಸ್ವಲ್ಪವೂ ಸಾಲದು; ಕೆಲಸ ದೊರಕುವ ಕಷ್ಟಗಳೂ, ದೊರಕುವುವೋ ಇಲ್ಲವೋ ಎಂಬ ಸಂದೇಹಗಳೂ ನಡುಮಟ್ಟದ (middle class) ಜನರಿಗೆ ಹೆಚ್ಚುತ್ತಿರುವುವು. ಹೀಗೆ ಜನರ ದೇಹದಾರ್ಢ್ಯ ಬೆಳೆಯುವುದಕ್ಕೆ ಮಾರ್ಗವಿಲ್ಲದಾಗುವುದು. ಎಲ್ಲರೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲಾಗದೆ ಯಾವುದಾದರೂ ಶಾಸ್ತ್ರ, ಯಂತ್ರ ಅಥವಾ ಕುಶಲವಿದ್ಯೆಗಳನ್ನು ಕಲಿಸಲಾಗದೆ ಇರಬೇಕಾಗುವುದರಿಂದ ಅಂತಹ ಜನರಿಗೆ ಅರ್ಥಸಾಧನೆಗೆ ಹೆಚ್ಚಿನ ಸಹಾಯ ದೊರೆಯದು. ಜೊತೆಗೆ ದ್ರವ್ಯಾಭಾವದಿಂದ ದೇಶದಲ್ಲಿನ ವಿದ್ಯಾ ಪದ್ಧತಿಯು ಜೀವನ ದೊರಕಿಸಿಕೊಳ್ಳುವುದಕ್ಕೂ, ಕಸುಬುಗಳಿಗೂ ಹುಡುಗರನ್ನು ತಯಾರಿಸಲಾರದೆಯೂ, ದೇಹಪಟುತ್ವ ಹೆಚ್ಚಾಗುವ ಕಡೆಗೆ ವಿಶೇಷ ಗಮನ ಕೊಡಲಾರದೆಯೂ ಇದೆ. ಪ್ರೌಢಶಾಲೆಗಳಿಗೆ ಏರುವವರ ಆಯುಸ್ಸಿನಲ್ಲಿ ೧೦–೧೫ ವರುಷಕಾಲ ವೃಥಾ ವೆಚ್ಚವಾಗಿ ಅವರ ದೇಹ ಬೆಂಡಾಗುವುದು. ಈ ತಲೆಮಾರಿನವರಲ್ಲಿ ಜೀವನದ ಉದ್ಯೋಗಗಳೂ, ಶಾಲೆಯಲ್ಲಿ ಕಲಿಯುವ ವಿದ್ಯೆಯೂ ಒಂದಕ್ಕೊಂದು ಹೊಂದದೆ ಹಿಂದಿದ್ದ ಜೀವನದ ಏರ್ಪಾಡುಗಳು ನಷ್ಟವಾಗಿ ಮುಂದೆ ವಿರಚಿತವಾಗಬೇಕಾದ ಪದ್ಧತಿ ಇನ್ನೂ ಬಾರದಿರುವುದರಿಂದ ಸ್ಥಿತಿ ಅವ್ಯವಸ್ಥವಾಗಿದೆ ಎನ್ನಬಹುದು. ಇದೆಲ್ಲಾ ಅಜ್ಞಾನ ದಾರಿದ್ರ್ಯಗಳಿಂದ ಉಂಟಾದುದು. ಮೂಲಕಾರಣ ಪರಿಹಾರವಾದರೆ ದುಷ್ಫಲಗಳು ತಾವಾಗಿಯೇ ನಾಶವಾಗುವುವು.

ಇಂಡಿಯಾದೇಶದ ಇತರ ಭಾಗಗಳಲ್ಲಿರುವಂತೆಯೇ ಇಲ್ಲಿನ ಜನರಿಗೂ ಮುಖ್ಯವಾಗಿ ಭೂವ್ಯವಸಾಯದಿಂದಲೇ ಜೀವನ. ಇಲ್ಲಿಯೂ ಹಳ್ಳಿ

ಗಳ ಸಂಖ್ಯೆ ಹೆಚ್ಚು.* ಜನರ ಕಸುಬು, ಉದ್ಯೋಗಗಳನ್ನು ಸ್ಥೂಲವಾಗಿ ೮ ಜಾತಿಗಳಾಗಿ ವಿಂಗಡಿಸುವರು :— (೧) ಪ್ರಕೃತಿದತ್ತವಾದ ದ್ರವ್ಯಗಳನ್ನು ರೂಡಿಸಿ ಉತ್ಪತ್ತಿ ತೆಗೆಯುವ ವ್ಯವಸಾಯ, ಖನಿಜೋದ್ಧಾರ, ವನದ್ರವ್ಯ ಸಂಗ್ರಹ, ಮೀನು ಹಿಡಿಯುವುದು ಇತ್ಯಾದಿ ; (೨) ಕೈಗಾರಿಕೆ ಕಾರ್ಖಾನೆ ಕೆಲಸ ; (೩) ವಸ್ತುಗಳ ಮಾರಾಟಕ್ಕೆ ಸಂಬಂಧಪಟ್ಟ ವ್ಯಾಪಾರ, ವಾಣಿಜ್ಯ ; (೪) ಕಟ್ಟಡ ಶಿಲ್ಪಗಳಿಗೂ ಯಂತ್ರನಿರ್ಮಾಣಕ್ಕೂ ಸಂಬಂಧಿಸಿದ ಕೆಲಸ ; (೫) ನೌಕರಿ ; (ಸರ್ಕಾರಿ, ಸಾಹುಕಾರಿ, ಸ್ಥಳ ಮಂಡಲಿಗಳ ಕೆಲಸ, ಶಾಂತಿರಕ್ಷಣೆ ಮಾಡುವ ಪೊಲೀಸ್, ಸೈನ್ಯ ಮುಂತಾದವು) ; (೬) ಯಾನ ಮತ್ತು ಸಮಾಚಾರವಾಹಕ ಕಾರ್ಯಗಳು ; (೭) ಜನರಂಜನೆಗೂ ವಿನೋದ ಸೌಕರ್ಯಗಳಿಗೂ ನೆರವಾದ ಕೆಲಸ ; (೮) ಇತರ.

ಪ್ರಾಣಿ, ಸಸ್ಯ, ಖನಿಜಗಳನ್ನು ಸಂಗ್ರಹಿಸಿ ಅವುಗಳಿಂದ ಆಹಾರ ಸಾಮಗ್ರಿ ಒದಗಿಸುವುದು ಅಥವಾ ಕೈಗಾರಿಕೆಗಳಿಗೆ ಮೂಲ ವಸ್ತುಗಳನ್ನು ಒದಗಿಸುವುದು ಮೊದಲನೆಯ ವರ್ಗಕ್ಕೆ ಸೇರಿರುತ್ತದೆ.† (ಈ ವರ್ಗದಲ್ಲಿ [೪೭.೮ ಲಕ್ಷ ಜನರು ಎಂದರೆ] ಒಟ್ಟು ಸಂಖ್ಯೆಯ ಶೇಕಡ ೭೯.೪ ಜನ ಜೀವಿಸುತ್ತಿದ್ದಾರೆ. ಬೆಂಗಳೂರು ದಂಡಿನವರನ್ನು ಸೇರಿಸಿಕೊಂಡರೆ ಈ ಸಂಖ್ಯೆ ೮೦.೯ ಆಗುತ್ತದೆ.)

ವಸ್ತುಗಳನ್ನು ತಯಾರುಮಾಡಿ ಜನರ ಭೋಗಕ್ಕೆ ಸಾಮಾನನ್ನು ಒದಗಿಸುವ ಕೈಗಾರಿಕೆಗಳು ಎರಡನೆಯ ವರ್ಗಕ್ಕೆ ಸೇರಿವೆ. ಬಟ್ಟೆಗಳನ್ನು ತಯಾರಿಸುವುದು, ಚರ್ಮ, ಕೊಂಬು, ತುಬಟ, ಉಣ್ಣೆ ಇವುಗಳಿಂದ ಸಾಮಾನನ್ನು ಮಾಡುವುದು ; ಮರ ಲೋಹ ಮಣ್ಣು ಜೇಡಿಗಳಿಂದ ಪಾತ್ರೆ ಪದಾರ್ಥ ಮುಟ್ಟುಗಳನ್ನು ಮಾಡುವುದು ; ರಾಸಾಯನಿಕ ವಸ್ತುಗಳನ್ನು ತಯಾರಿಸುವುದು ; ಕಟ್ಟಡ ಕಟ್ಟುವುದು, ಗಾಡಿ ಮೊದಲಾದ

---

*

		ಸಂಖ್ಯೆ	ಜನ ಲಕ್ಷ	ಕುಟುಂಬ ಲಕ್ಷ
ಪಟ್ಟಣಗಳು	...	೧೦೫	೮.೯೩	೧.೫೯
ಹಳ್ಳಿಗಳು	...	೧೬,೫೯೯	೫೧.೧೬	೧೦.೨೨

† ಎಂದರೆ ಬೇಸಾಯ ; ಹಣ್ಣು ಹಂಪಲ ಹೂ ತರಕಾರಿ ಬೆಳೆಯುವುದು ; ಕಾಡಿನ ಉದ್ಯೋಗಗಳು ; ಕುರಿ ಕೋಳಿ ದನ ಹಾಲು ಮೊಸರು ತುಪ್ಪ ಮುಂತಾದವಕ್ಕೆ ಸಂಬಂಧಿಸುವ ವೃತ್ತಿ ; ಬೆಸ್ತವೃತ್ತಿ, ಬೇಡವೃತ್ತಿ ಇವೂ ಸೇರುವುವು. ಗಣಿಗಳಿಂದ ಖನಿಜ ತೆಗೆಯುವುದು, ಕಲ್ಲುಗಳೊಡೆದು ಒದಗಿಸುವುದು ಇವೂ ಸೇರಿವೆ.

ವಾಹನಗಳನ್ನು ಮಾಡುವುದು ; ವಿದ್ಯುಚ್ಛಕ್ತಿ, ಬೆಳಕು ಮುಂತಾದ ಚಾಲಕ ಶಕ್ತಿಗಳನ್ನು ಒದಗಿಸುವುದು ಹೀಗೆ ಒಟ್ಟು ಕೈಗಾರಿಕೆ, ಯಾನೋದ್ಯೋಗ, ವ್ಯಾಪಾರಗಳಲ್ಲಿ ತೊಡಗಿರುವವರು ಶೇಕಡ ೧೨.೩೫ ಜನ.

ನೌಕರಿ ಸೇವಾವೃತ್ತಿಗಳಲ್ಲಿಯೂ, ಕುಶಲಕಲೆ ಶಾಸ್ತ್ರ ವಿದ್ಯೆಗಳಲ್ಲಿಯೂ ಇರುವವರು ಶೇಕಡ ೪.೩೫ ಮಂದಿ. ಉಳಿದವರು ಇತರರು.

೩. ಸಮಾಜದ ಆವರಣ

ಸಮಾಜ, ಅರ್ಥಸಾಧನೆ

ಸಮಾಜ ಪದ್ಧತಿಗಳಲ್ಲಿ ಜನರ ಅರ್ಥಸಾಧನಾ ಕಾರ್ಯಗಳಿಗೆ ನೆರವೀಯುವುವು ಯಾವುವು ? ಅಡಚನೆ ತರುವುವು ಯಾವುವು ? ಹೇಗೆ ? ಅವುಗಳಲ್ಲಿನ ನ್ಯೂನಾತಿರೇಕಗಳನ್ನು ಕಡಮೆಮಾಡಿ ಪ್ರಯೋಜನಗಳನ್ನು ಹೆಚ್ಚಿಸಿಕೊಳ್ಳಬಹುದ ? ಎಂಬ ವಿಚಾರಗಳನ್ನು ಮಾಡುವುದು ಆವಶ್ಯಕ. ನಮ್ಮ ಜನರಿಗೆ ಸಮಾಜ ವ್ಯವಸ್ಥೆಯ ಪ್ರಕಾರ ವ್ಯಕ್ತಿಸ್ವಾತಂತ್ರ್ಯವಿಲ್ಲ. ವ್ಯಕ್ತಿ ಮನೆಗೂ, ಮನೆ ಹಳ್ಳಿಗೂ, ಹಳ್ಳಿಯ ವ್ಯವಸ್ಥೆಗೂ ಅಧೀನ. ಈಗ ಪಟ್ಟಣಗಳಲ್ಲಿ ಜನರಿಗೆ ಹೆಚ್ಚು ಸ್ವತಂತ್ರವಿದೆ, ನಿಜ : ಸಮಾಜದ ಭಯ ಕಡಮೆ ; ಅದರ ಅಧಿಕಾರವೂ ಬಿಗಿಯಾಗಿಲ್ಲ. ದೊಡ್ಡ ಹಳ್ಳಿಗಳಲ್ಲಿಯೂ ಕ್ರಮೇಣ ಹಿಂದಿನ ಕಾಲದ ಕಟ್ಟುನಿಟ್ಟುಗಳು ಸಡಿಲವಾಗುತ್ತಿವೆಯೆಂದರೂ ಜನಜೀವನ ಇನ್ನೂ ಬಹುಮಟ್ಟಿಗೆ ಹಿಂದಿನ ಸಂಪ್ರದಾಯಗಳಿಗೇ ಒಳಪಟ್ಟಿದೆ. ರೂಢಿ, ಸಂಪ್ರದಾಯ, ವರ್ಣಾಶ್ರಮಧರ್ಮ, ಆಸ್ತಿವಿಭಾಗ ಪದ್ಧತಿ, ಗ್ರಾಮಜೀವನ ವ್ಯವಸ್ಥೆ, ವೃತ್ತಿ ಮತ್ತು ವರ್ಣವಿಭಾಗ ಮುಂತಾದವೆಲ್ಲ ಇಂದಿಗೂ ಬಹುಮಟ್ಟಿಗೆ ಹಳೆಯ ರೀತಿಯಲ್ಲಿಯೇ ನಡೆದುಬರುತ್ತಿವೆ. ಇವುಗಳಿಂದ ಜನರ ಅರ್ಥಸಾಧನಾ ಪಟುತ್ವಕ್ಕೂ ವ್ಯಾಪಾರಕ್ಕೂ ಅನುಕೂಲ ಪ್ರತಿಕೂಲಗಳುಂಟು.

ಜಾತಿ ವಿಭಾಗ

ಹಿಂದೂಗಳಲ್ಲಿ ವರ್ಣಪದ್ಧತಿ ದೇಶದಲ್ಲೆಲ್ಲಾ ಹರಡಿದೆ. ಹಿಂದೂ ಜನವೆಲ್ಲ ಮೊದಲು ಅವರವರ ಕಸುಬಿಗೆ ತಕ್ಕಂತೆ, ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರ ಎಂಬ ನಾಲ್ಕು ಪಂಗಡಗಳಾಗಿ ಹಂಚಿದ್ದರೂ, ಕಾಲಕ್ರಮದಲ್ಲಿ ನಾಲ್ಕು ವರ್ಣಗಳು ನಾಲ್ಕು ಸಾವಿರ ಉಪಪಂಗಡಗಳಾಗಿ ಒಡೆದುದರಿಂದ ಜನರಿಗೆ ತಾವು ಹಿಂದೂಗಳೆಂಬ ಭಾವನೆ ಕೂಡ ಇಲ್ಲವಾಗಿದೆ. ಹಿಂದೆ ಒಂದು

ಜಾತಿಯ ಕಸುಬು ಅದಕ್ಕೆ ಸರ್ವಮಾನ್ಯವಾಗಿತ್ತು ; ಇನ್ನೊಬ್ಬರಿಗೆ ಅದರಲ್ಲಿ ಪ್ರವೇಶವಿರುತ್ತಿರಲಿಲ್ಲ. ಒಂದು ಜಾತಿಯವರು ಇನ್ನೊಬ್ಬರೊಡನೆ ಊಟ ಉಪಚಾರ ಮದುವೆ ಸಂಪ್ರದಾಯಗಳಲ್ಲಿ ಬೆರೆಯದೆ, ಅವರ ಪದ್ಧತಿಗಳನ್ನು ಆಚರಿಸದೆ, ತಮ್ಮ ವೃತ್ತಿಯನ್ನು ತಮಗೆ ಮಾತ್ರವೇ ಸೇರಿದ ಆಸ್ತಿಯಂತೆ ಕಾಪಾಡಿಕೊಂಡು ಕಟ್ಟು ಕಟ್ಟಳೆಗಳನ್ನು ಮಾಡಿಕೊಂಡರು. ಒಬ್ಬರು ಹೆಚ್ಚು ಇನ್ನೊಬ್ಬರು ಕಡಮೆ ಎಂಬ ಅಪಿವೇಕವೂ ಜೊತೆಗೆ ಬೆಳೆಯಿತು. ಧರ್ಮ ದೃಷ್ಟ್ಯಾ ಎಲ್ಲ ಮುಸಲ್ಮಾನರೂ ಒಂದೇ ಎನ್ನುವ ಮುಸಲ್ಮಾನರಿಗೆ ಕೂಡ ಈ ಸೋಂಕು ಹರಡಿತು. ಈಚೆಗೆ ಪಡುವಣವರ ಸಂಸರ್ಗವಾದ ಮೇಲೆ ವ್ಯಾಪಾರ, ವ್ಯವಹಾರ ಪದ್ಧತಿ ಬೇರೆಯಾಗಿ ಹಳೆಯ ಪದ್ಧತಿಗಳ ಬಿಗುಪು ಕಡಮೆಯಾಗುತ್ತಿದೆ. ಆಯಾ ಕಸುಬಿನ ಜಾತಿಗಳಲ್ಲಿ ಹುಟ್ಟಿದಿರುವ ಅನೇಕರು ಆ ಕಸುಬುಗಳನ್ನು ಹಿಡಿಯುತ್ತಿರುವುದರಿಂದ ಉದ್ಯೋಗದಿಂದ ಜಾತಿಯನ್ನು ನಿರ್ದೇಶಿಸುವುದೂ ಗೊತ್ತುಮಾಡುವುದೂ ಕಷ್ಟವಾಗುತ್ತಿದೆ. ಸಂಪತ್ಸಾಧನೆಯ ವಿಷಯದಲ್ಲಿ ಇದು ದೊಡ್ಡ ಉಪಕಾರವೇ ಎನ್ನಬೇಕು.

ಕೇಡುಗಳು

ಈ ಕಾಲದಲ್ಲಿ ಹೊರದೇಶ ಒಳದೇಶಗಳಲ್ಲಿ ತಯಾರಾಗುವ ವಸ್ತುಗಳು ದೊಡ್ಡ ದೊಡ್ಡ ಕಾರ್ಖಾನೆ ಕಾರ್ಯಾಲಯಗಳಲ್ಲಿ ಅಮಿತವಾದ ಪ್ರಮಾಣಗಳಲ್ಲಿ ತಯಾರಾಗುವುವು. ಒಂದು ದೇಶದಲ್ಲಿ ಉತ್ಪತ್ತಿಯಾದ ವಸ್ತುವಿಗೆ ಗಿರಾಕಿ ಪ್ರಪಂಚದ ಯಾವ ಭಾಗದಲ್ಲಿಯಾದರೂ ದೊರಕಬಹುದು. ವಸ್ತುನಿರ್ಮಾಣ ಕಾರ್ಯದಲ್ಲಿಯೂ ಅನೇಕ ಅಂತಸ್ತಿನ ಕೌಶಲವಿರುತ್ತದೆ. ಕಾರ್ಖಾನೆಯ ಕೆಲಸವನ್ನು ಮಜಲುಗಳಾಗಿ ವಿಂಗಡಿಸುವುದು ವಾಡಿಕೆ. ಒಟ್ಟಾಗಿ ನೂರಾರು, ಸಾವಿರಾರು ಜನ ಸೇರಿ ಯಂತ್ರ ಸಹಾಯದಿಂದ ಕೆಲಸಮಾಡಬೇಕಾಗಿರುವಾಗ ಕುಲಗೋತ್ರ ಲೆಕ್ಕಕ್ಕೆ ಅವಕಾಶವಿಲ್ಲ. ಹಿಂದಿನ ಕಸುಬು ಪದ್ಧತಿಗಳ ಹಿಡಿತ ಪ್ರಬಲವಾಗಿದ್ದ ಪಕ್ಷದಲ್ಲಿ ಈ ಹೊಸ ಬಗೆಯ ಕೆಲಸಕ್ಕೆ ಒಂದೇ ಕಡೆ ಒಂದೇ ಕಸುಬಿನ ಸಾವಿರಾರು ಜನರು ದೊರೆಯುವುದು ಕಷ್ಟವಾಗುವುದು. ಸ್ಪರ್ಧೆ ಕಡಮೆಯಾಗುವುದು. ಕೆಲಸದ ರೀತಿಯೇ ಅವರಿಗೆ ತಿಳಿಯದೆ ಇರುವುದರಿಂದಲೂ, ಹೊಸ ಪದ್ಧತಿಗಳಿಗೆ ಹೊಂದಿಕೊಳ್ಳಬಲ್ಲ ಶಕ್ತಿ ಕಡಮೆಯಾಗಿರುವುದ

ರಿಂದಲೂ, ಕೆಲಸಗಾರರಿಗೂ, ಕೆಲಸಕ್ಕೂ ನಷ್ಟ. ಇತರ ದೇಶಗಳವರ ಪೈಪೋಟಿಯ ಎದುರಿಗೆ ಇಂತಹವರ ಕಾರ್ಯ ಸೋತುಬೀಳುತ್ತದೆ. ಜಾತಿಯಿಂದ ಕಸುಬು ಎನ್ನುವುದರಿಂದ ಆ ಜಾತಿಯಲ್ಲಿ ಹುಟ್ಟಿ ಆ ಕಸುಬಿನಲ್ಲಿ ಆಸಕ್ತಿಯಿಲ್ಲದೆ ಬೇರೆಯದಕ್ಕೆ ಹೋಗಲು ಅಸಾಧ್ಯವಾದರೆ ಅದೂ ನಷ್ಟ. ಜನರಿಗೆ ಅವರವರ ಶಕ್ತಿ ಆಸಕ್ತಿಗಳಿಗೆ ತಕ್ಕಂತೆ ಕೆಲಸಮಾಡಿ ಅರ್ಥಾರ್ಜನೆ ಮಾಡುವುದು ಅಸಾಧ್ಯವಾಗುವುದು. ಹೀಗೆ ಕೆಲಸಮಾಡದಿರುವವರು—ಅಥವಾ ಅರೆಕಸುಬಿಗಳು—ಅನೇಕರು ಕಾರ್ಯದಲ್ಲಿ ತೊಡಗುವುದರಿಂದ ಹಿರಿಯ ಆರ್ಥಿಕ ಫಲ ದೊರೆಯದು. ಎಲ್ಲರಿಗೂ ಒಂದೇ ಸಮನಾದ ಕಾರ್ಯಾವಕಾಶ ದೊರೆಯದೆ ಅನ್ಯಾಯ ಆಗಬಹುದು.

ಪ್ರಯೋಜನ

ಇಷ್ಟು ಪ್ರತಿಕೂಲವಾಯಿತು ; ಅನುಕೂಲವೂ ಸ್ವಲ್ಪವಿದೆ. ವಂಶಪಾರಂಪರ್ಯದಲ್ಲಿ ಕೆಲಸಗಳಿಗೆ ಸಂಬಂಧಪಟ್ಟ ಕುಶಲತೆ ತಂದೆಯಿಂದ ಮಗನಿಗೆ ರಕ್ತದಲ್ಲಿ ಸೇರಿ ಬರುವುದು. ಹುಡುಗರು ಬೆಳೆಯುವ ಕಾಲದಲ್ಲಿ ಸುತ್ತಲೂ ನಡೆಯುತ್ತಿರುವ ಕೆಲಸಗಳಲ್ಲಿನ ಕ್ರಮಗಳನ್ನೂ ಹದವನ್ನೂ ಜಾಣ್ಮೆಯನ್ನೂ ನೋಡಿ ಕಲಿಯಲು ಅವಕಾಶವುಂಟು. ಬೇರೆ ವಿದ್ಯಾಭ್ಯಾಸವೇ ಬೇಕಿಲ್ಲದೆ ನೋಡಿ ನೋಡಿ ಮಾಡಿ ಮಾಡಿ ಕಲಿತು ನಿಪುಣತೆ ಪಡೆಯಬಹುದು. ಕೆಲಸಕ್ಕಾಗಿ ಜನರು ಒಬ್ಬರ ಮೇಲೊಬ್ಬರು ಪೈಪೋಟಿ ನಿಲ್ಲುವಾಗ ಅಶಕ್ತರಾದವರು ಕೆಳಗೆ ಬೀಳುವ ಸಂಭವ ಉಂಟಲ್ಲವೆ ? ಕಸುಬು ಸಮಾಜ ವಿಭಾಗದ ಒಂದು ಅಂಗವಾದಾಗ ಅಶಕ್ತರ ಪೋಷಣೆ ತಾನಾಗಿಯೇ ಆಗುವುದು ; ಎಲ್ಲರಿಗೂ ರಕ್ಷಣೆಯೂ, ಸ್ಥಾನವೂ ಉಂಟು. ಆದರೂ ಒಟ್ಟಿನಲ್ಲಿ ಈಗಿನ ಕಾಲದ ಉತ್ಪತ್ತಿ ಪದ್ಧತಿ ಯಂತ್ರ ವಿಧಾನಗಳ ದೃಷ್ಟ್ಯಾ ನೋಡಿದರೆ ಈ ಪದ್ಧತಿಯಿಂದ ಕೊರತೆ ನಷ್ಟಗಳೇ ಹೆಚ್ಚೆಂದು ತಿಳಿದವರ ಅಭಿಪ್ರಾಯ.

ಫಲಿತಾಂಶ

ಅರ್ಥಸಾಧನಾ ಸ್ವಾತಂತ್ರ್ಯವಿಲ್ಲ; ಅಭಿವೃದ್ಧಿಗೆ ತಡೆ ; ಮನಸ್ಸು ಸರ್ವತೋಮುಖವಾಗಿ ಬೆಳೆಯಲು ಅವಕಾಶವಿಲ್ಲ; ಚಲನೆಗೆ ಅಡಚಣೆ ; ಸುತ್ತಲ ಆವರಣದಲ್ಲಿರುವ ಶಕ್ತಿ, ಸಾಧನೆ, ಸಹಾಯಗಳನ್ನು ಜನರು

ಶೋಧಿಸಿ ಪರೀಕ್ಷಿಸಿ ಅವುಗಳನ್ನು ಕೆಲಸಕ್ಕೆ ಹೂಡಿಕೊಳ್ಳಬಲ್ಲ ಅವಕಾಶ ಇಲ್ಲ ದಾಗಿ, ಮುಂದುವರಿದ ಅಥವಾ ಮುಂದುವರಿಯುತ್ತಿರುವ ಜನಾಂಗಗಳ ವರಿಗೆ ಅಧೀನರಾಗಲು ಸೌಲಭ್ಯ ದೊರಕಿಸಿದಂತಾಗುವುದು' ಎಂದು ಫಿಪ್‌ಸನ್ ಎಂಬವರೊಬ್ಬರು ಈ ಜಾತಿ ಪದ್ಧತಿಯ ವಿಚಾರವಾಗಿ ಹಿಂದೆ ಬರೆದರು.

ಈಗಿನ ಸೂಚನೆಗಳು

ಹಿಂದಿನ ಸಮಾಜವ್ಯವಸ್ಥೆ ಹೆಚ್ಚಾಗಿ ಹಳ್ಳಿಗಳಿಗೆ ಸಂಬಂಧಪಟ್ಟು ಒಂದು ನಿಯಮಕ್ಕೆ ಒಳಪಟ್ಟು ಸುಸೂತ್ರವಾಗಿ ನಡೆಯುತ್ತಿತ್ತು. ದೊಡ್ಡ ಪಟ್ಟಣಗಳಲ್ಲಿ ಕಸುಬುಗಳವರು ಬೇಕಾದ ಸಂಘಗಳನ್ನು ಏರ್ಪಡಿಸಿಕೊಂಡು, ತಮ್ಮ ಕಸುಬಿಗೆ ಸಂಬಂಧಪಡುವ ಎಲ್ಲ ಕೆಲಸ, ಕೂಲಿ, ವ್ಯಾಪಾರ, ಧಾರಣೆವಾಸಿ, ಲಾಭನಷ್ಟ, ಉತ್ಪತ್ತಿ, ಸಂಪತ್ತಿನ ಹಂಚಿಕೆ, ವಿದ್ಯಾಭ್ಯಾಸ, ಕಸುಬುದಾರರ ಅಂತಃಕಲಹಗಳು ಮುಂತಾದ ಎಲ್ಲಾ ವಿಷಯಗಳನ್ನೂ ವ್ಯವಸ್ಥೆಮಾಡಿಕೊಳ್ಳುತ್ತಿದ್ದರು. ಈಗ ಇಂತಹ ಕಟ್ಟು ಮಾಯವಾಗಿದೆ.

ಕೂಡು ಕುಟುಂಬಗಳು

ಲಕ್ಷಣ

ನಮ್ಮಲ್ಲಿ ವ್ಯಕ್ತಿಗಿಂತ ಮನೆಗೆ ಪ್ರಾಮುಖ್ಯತೆ ವಿಶೇಷ ಎಂದು ಮೇಲೆ ಹೇಳಿತು. ಮನೆಯಲ್ಲಿ ಗಂಡ, ಹೆಂಡತಿ, ಮಕ್ಕಳು ಇಷ್ಟು ಮಾತ್ರವೇ ಅಲ್ಲದೆ ಹತ್ತಿರದ ಬಂಧುಗಳಲ್ಲಿ ಕೆಲವರೂ ಅವರ ಮಕ್ಕಳೂ ಸೇರಿರುತ್ತಾರೆ. ಹೀಗೆ ಸಂಪಾದಿಸುವ ಕೈಗಳಿಗಿಂತಲೂ ತಿನ್ನುವ ಬಾಯಿಗಳ ಸಂಖ್ಯೆ ಹೆಚ್ಚು. ಕಷ್ಟ ಬರಲಿ ಸುಖ ಬರಲಿ ಸಂಸಾರ ಮಾತ್ರ ಅಖಂಡವಾಗಿರುತ್ತದೆ! ಸಾಮಾಜಿಕ ರೀತಿ ನೀತಿಗಳ ದೃಷ್ಟಿಯಿಂದ ಇದರಲ್ಲಿ ಯಾವ ಸಹಾಯ ಸೌಕರ್ಯಗಳಿದ್ದರೂ ಅರ್ಥಸಾಧನಾ ದೃಷ್ಟಿಯಿಂದ ಜನರಿಗೆ ತೊಂದರೆ ಹೆಚ್ಚು.

ಕಷ್ಟಗಳು

ಜನರು ವಿದ್ಯಾವಂತರಾಗಿ ಸಂಪಾದಿಸುವುದಕ್ಕೆ ಆರಂಭಮಾಡುವ ಮುಂಚೆಯೇ ಅವರ ಕುತ್ತಿಗೆಗೆ ದೊಡ್ಡ ಸಂಸಾರವೊಂದು ಕಟ್ಟಿರುವುದ

ರಿಂದ* ಅನೇಕವೇಳೆ ಅವರ ವ್ಯಾಸಂಗ ಕೂಡ ಪೂರ್ತಿಯಾಗದೆ ಹೋಗಿ ಅವರ ಸಂಪಾದನಾಶಕ್ತಿ ಕಡಮೆಯಾಗುವುದು ; ಹೆಚ್ಚು ಆದಾಯ ದೊರೆಯುವ ಕಡೆಗಳಿಗೆ ಸಂಚಾರಹೋಗಿ ನೆಲಸಲು ಅವಕಾಶವೂ ಆಸಕ್ತಿಯೂ ಇಲ್ಲವಾಗುವುವು. ಇರುವೆಡೆಯಲ್ಲಿಯೇ ಯಾವುದಾದರೊಂದು ಕೆಲಸವನ್ನು ಒಪ್ಪಿಕೊಂಡು ಆರು ಕಾಸು ಸಂಪಾದಿಸಬಹುದಾಗಿರುವಾಗ ಮೂರು ಕಾಸಿಗೆ ದುಡಿದು, ತಮ್ಮ ತಿಳಿವಳಿಕೆ, ಅನುಭವ, ಕೌಶಲಗಳಿಂದ ಬರಬಹುದಾದ ಪರಮಾವಧಿ ಸಂಪಾದನೆಯನ್ನು ಮಾಡಲು ಸಾಧ್ಯವಾಗದೆ ಹೋಗುವುದು.

ಅನುಕೂಲಗಳು

ಹಿಂದೂಧರ್ಮದ ಪ್ರಕಾರ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳೆಲ್ಲರಿಗೂ ಭಾಗವುಂಟು. ಮನೆಯ ಯಜಮಾನನು ಬದುಕಿರುವ ವರೆಗೂ ಆಸ್ತಿಗೆ ಆತನೇ ಯಜಮಾನ. ಉತ್ತರಾಧಿಕಾರಿಗಳಲ್ಲಿ ಅದು ಹಂಚಿ ಭಾಗಪತ್ರಗಳಾಗುವವರೆಗೂ ಅದು ಆತನ ವಶದಲ್ಲಿರುತ್ತದೆ. ಪಟ್ಟೆಗಳು ಬದಲಾಗುವವರೆಗೂ ಭೂಮಿ ಹಿರಿಯನ ಹೆಸರಿನಲ್ಲಿಯೇ ಇರುತ್ತದೆ. ಬಾಧ್ಯಸ್ಥರೆಲ್ಲರೂ ಬಂದು ತಿಂದುಹೋಗುವ ಅಧಿಕಾರ ಕೇಳುತ್ತಾರೆ. ಹೀಗೆ ಆಸ್ತಿ ಹಸುಗೆಯಾಗುವವರೆಗೂ ಕೂಡು ಕುಟುಂಬದಲ್ಲಿ ಯಾರು ಕೆಲಸ ಮಾಡಲಿ ಸಂಪಾದಿಸಲಿ ಬಿಡಲಿ ಅವರಿಗೆ ಅನ್ನ ಬಟ್ಟೆ ದೊರೆಯುವುವು. ಕುಟುಂಬಕ್ಕೆ ಸೇರಿದ ಮಕ್ಕಳಿಗೆ ಹೀಗೆ ತಕ್ಕಮಟ್ಟಿಗೆ ಅನುಕೂಲವಾದ ಜೀವನಾರಂಭವಾಗುವುದು. ಅಶಕ್ತರು, ಅಂಗಹೀನರು, ರೋಗಿಗಳು, ವೃದ್ಧರು ಹಲವೇನು, ಪರಾಧೀನದಲ್ಲಿರುವ ಎಲ್ಲರಿಗೂ ಆಶ್ರಯ ದೊರೆತು ಜೀವನ ನಡೆಯುತ್ತದೆ. ಆದರೆ ಇಂತಹ ಅವಿಭಕ್ತ ಕುಟುಂಬದಲ್ಲಿ ಜನದ ಸೋಮಾರಿತನ ಹೆಚ್ಚುವುದಕ್ಕೆ ಬಹುವಾದ ಅವಕಾಶವಿದೆ. ವಿದ್ಯಾಬುದ್ಧಿ ಇಲ್ಲದ ಗಂಡು ಹುಡುಗರಿಗೆ ಸ್ವಪ್ರಯತ್ನದಿಂದ ಮುಂದೆ ನುಗ್ಗಿ ಸಂಪಾದಿಸಬೇಕೆಂಬ ಆಸೆ ಕಡಮೆಯಾಗುತ್ತದೆ. ಹುಮ್ಮಸ್ಸು ಕಡಮೆಯಾದಂತೆಲ್ಲ ಸಾಹಸವೂ ಕಡಮೆಯಾಗುವುದರಲ್ಲಿ ಸಂದೇಹವೇ ಇಲ್ಲ. ಯಜಮಾನನಿಗೆ ದೊಡ್ಡ

---

* ಜೊತೆಗೆ ಬಾಲ್ಯವಿವಾಹ, ಮನೆಯ ಸಾಲ, ಮದುವೆ ಮಂಗಳಗಳಿಗೂ, ಒಳ್ಳೆಯದು ಕೆಟ್ಟದ್ದಕ್ಕೂ, ಕಡ್ಡಾಯವಾಗಿ ಮಾಡಬೇಕಾಗಿ ಬರುವ ಖರ್ಚುಗಳು ಸೇರಿ ಸಂಪಾದಿಸುವ ಯಜಮಾನನ ಸ್ಥಿತಿ ಕಠಿಣವಾಗುವುದಲ್ಲದೆ ಅವನ ದೇಹಾರೋಗ್ಯವೂ ಉತ್ಸಾಹವೂ ಕುಂದುವುವು.

ಸಂಸಾರದ ಭಾರವೂ ಭರಣವೂ ತಲೆಯ ಮೇಲೆ ಹೊತ್ತಿರುವುದರಿಂದ ಆತನು ಇರುವ ದ್ರವ್ಯವನ್ನು ಹೆಚ್ಚಾಗಿ ಫಲ ತರುವ ಕಾರ್ಯಗಳಿಗೆ ಹೂಡಿ ಪರೀಕ್ಷೆಮಾಡುವ ಸಾಹಸಕ್ಕಾಗಲಿ, ಹೊಸ ವ್ಯಾಪಾರಗಳಲ್ಲಿ ವಿನಿಯೋಗಿಸುವುದಕ್ಕಾಗಲಿ ಆಗದೆ ಹಿಂಜರಿಯುವಂತಾಗುವುದು. ಇದರಿಂದ ಇಬ್ಬಗೆಯ ನಷ್ಟ! ಕಾರ್ಯೋತ್ಸಾಹ ಧೈರ್ಯ ಸ್ವಾತಂತ್ರ್ಯಗಳು ಇಲ್ಲದಂತಾಗಿ ಅರ್ಥಸಾಧನೋದ್ಯಮಗಳಿಗೆ ಅಡ್ಡಿ ಬರುವುದೊಂದು; ಕೈಗಾರಿಕೆ ವ್ಯಾಪಾರಗಳಿಗೆ ದೊರೆಯಬಹುದಾಗಿದ್ದ ಶ್ರಮವೂ ಬಂಡವಾಳವೂ ದೊರಕದೆ ಹೋಗುವುದು ಇನ್ನೊಂದು. ಆ ಮಟ್ಟಿಗಾದರೂ ದೇಶದ ಸಂಪದಭಿವೃದ್ಧಿಗೆ ತಡೆ.

ಮನೆಯಲ್ಲಿ ಶಕ್ತರಾದವರೆಲ್ಲ ಸಂಪಾದಿಸಿ, ಅನ್ಯೋನ್ಯವಾಗಿ ಒಟ್ಟಿಗಿರುವಂತಾದರೆ ಮಾತ್ರ ಈ ಅವಿಭಕ್ತ ಕುಟುಂಬಗಳಷ್ಟು ಉತ್ತಮವಾದ ಏರ್ಪಾಡು ಬೇರೆ ಇಲ್ಲವೆಂದು ಹೇಳಬಹುದು.*

ಆಸ್ತಿವಿಭಾಗ ಪದ್ಧತಿ

ಸ್ವರೂಪ

ಪಶ್ಚಿಮ ದೇಶಗಳಲ್ಲಿ ಹಲವು ಕಡೆ ಇರುವಂತೆ ತಂದೆಯಿಂದ ಅವನ ದೊಡ್ಡ ಮಗನಿಗೆ, ತರುವಾಯ ಅವನ ಮೊದಲ ಮಗನಿಗೆ ಈ ಕ್ರಮದಲ್ಲಿ ಸಲ್ಲದೆ ಆಸ್ತಿ ಗಂಡುಮಕ್ಕಳೆಲ್ಲರಿಗೂ ವಿಭಾಗವಾಗುವುದು. ತಂದೆ ಬೇರೆ ಯಾವ ವಿಧದಲ್ಲಿಯೂ ಹಂಚದೆ ಇದ್ದರೆ ಆತನ ಸ್ವಯಾರ್ಜಿತ ಸ್ವತ್ತೂ ಹೀಗೆಯೇ ಮಕ್ಕಳಿಗೆಲ್ಲ ಸಮನಾಗಿ ಭಾಗವಾಗಬೇಕಾದ್ದೇ.† ಇದರಿಂದ ಒಂದು ವಿಧದಲ್ಲಿ ಅನುಕೂಲವುಂಟು. ಮಕ್ಕಳೆಲ್ಲರಿಗೂ ಸಮವಾದ ಭಾಗ ಬಂದು ಎಲ್ಲರ ಜೀವನಕ್ಕೂ, ಸಂಸಾರಾರಂಭಕ್ಕೂ ಸಹಾಯವಾಗುವುದು. ಆದರೆ ದೇಶದಲ್ಲಿ ದೊಡ್ಡ ಆಸ್ತಿಗಳು ಅಖಂಡವಾಗಿ ಉಳಿಯದೆ ಹೋಗುವುವು. ಆಸ್ತಿ ಎಷ್ಟು ದೊಡ್ಡದಾಗಿರಲಿ ಸಂತತವಾಗಿ

---

* ಒಳಜಗಳು, ಬಡತನ, ಸ್ವಾತಂತ್ರ್ಯಾಪೇಕ್ಷೆ, ಜೀವನಕ್ಕಾಗಿ ಪ್ರವಾಸ, ನೌಕರಿಯಲ್ಲಿ ವರ್ಗಾವರ್ಗಿ ಮುಂತಾದ ಅನೇಕ ಕಾರಣಗಳಿಂದ ಈ ಕೂಡುಕುಟುಂಬಗಳು ಒಡೆದು ಹೋಗುತ್ತಿವೆ.

† ಸ್ವಯಾರ್ಜಿತವನ್ನು ಯಜಮಾನನು ಜೀವಂತನಾಗಿರುವಾಗ ತನ್ನ ಇಷ್ಟಬಂದಂತೆ ಮನೆಯವರಿಗೋ, ಹೊರಗಿನವರಿಗೋ ಕೊಡುವ ಸಂಪೂರ್ಣ ಅಧಿಕಾರವಿರುತ್ತದೆ.

ನಾಲ್ಕಾರು ಜನ ಮಕ್ಕಳಿಗೆ, ಅನಂತರ ಅವರ ಮಕ್ಕಳಿಗೆ ಈ ರೀತಿ ಹಂಚಿಕೆಯಾಗುತ್ತಲೇ ಬಂದರೆ ಪ್ರತಿಯೊಬ್ಬ ವ್ಯಕ್ತಿಗೂ ಸಿಕ್ಕುವ ಆಸ್ತಿ ಕಡಮೆಯಾಗುವುದು. ದೊಡ್ಡ ವ್ಯಾಪಾರ ಕೈಗಾರಿಕೆಗಳ ಸ್ಥಾಪನೆಗೆ ಬೇಕಾಗುವ ದೊಡ್ಡ ಮೊತ್ತದ ಬಂಡವಾಳ ಕೂಡುವುದು ಕಷ್ಟವಾಗುವುದು. ಅಲ್ಪಸ್ವಲ್ಪ ದ್ರವ್ಯವುಳ್ಳವರ ಸಂಖ್ಯೆ ಹೆಚ್ಚುವುದರಿಂದ ಸಮಾಜದಲ್ಲಿರುವ ಬಡವರಿಗೂ ಭಾಗ್ಯವಂತರಿಗೂ ನಡುವೆಯ ಅಂತರ ಕಡಮೆಯಾಗುವುದಾದರೂ ಇಲ್ಲಿ ಸಂಪತ್ತಿನ ಉತ್ಪತ್ತಿ ಕಡಮೆಯಾದುದರಿಂದ ಸರ್ವತ್ರ ಬಡತನ ಹಂಚಿದಂತಾಗುವುದು.

ಆಸ್ತಿಯ ಪ್ರತಿಯೊಂದು ಬಾಬಿನಲ್ಲಿಯೂ ಪಾಲು ಬರಬೇಕೆಂದು ಹಟಹುಟ್ಟಿ ವಿಭಾಗದ ಕೇಡುಗಳು ಹೆಚ್ಚಿ ನಷ್ಟಗಳೂ ಕಲಹಗಳೂ ಏರುವ ಸಂಭವ ಬಹಳ. ಹೊಲ ಗದ್ದೆ ತೋಟ ಒಂದು ತಲೆಯಿಂದ ಇನ್ನೊಂದು ತಲೆಯವರ ಕಾಲಕ್ಕೆ ಕ್ರಮವಾಗಿ ಸಣ್ಣವಾಗಿ ಯಂತ್ರದ ನೇಗಿಲುಗಳಿಂದಲೂ ಶಾಸ್ತ್ರರೀತಿಯಲ್ಲಿಯೂ ವ್ಯವಸಾಯ ದೊಡ್ಡ ಪ್ರಮಾಣದಲ್ಲಿಯೂ ನಡೆಯಲಸಾಧ್ಯವಾಗುವುದು. ಅಮೇರಿಕಾ, ಕ್ಯಾನಡಾ, ಆಸ್ಟ್ರೇಲಿಯ, ನ್ಯೂಸೀಲೆಂಡ್ ದೇಶಗಳಲ್ಲಿ ಸಾವಿರಾರು ಚದರ ಮೈಲಿ ವಿಸ್ತಾರವುಳ್ಳ ಭೂಮಿಗಳಲ್ಲಿ ಒಟ್ಟಿಗೆ ಬೆಳಸನ್ನು ಬೆಳೆಯುವಂತೆ ಈ ದೇಶದಲ್ಲಿ ಮಾಡಲಾಗದೆ ಹೋಗುವುದು.

ಗ್ರಾಮಜೀವನ

ಸ್ವರೂಪ

ಮೊದಲಿಂದ ನಮ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚು. ಹತ್ತಾರು ಶತಮಾನಗಳಲ್ಲಿ ಉಂಟಾದ ರಾಜಕೀಯ ವಿಪ್ಲವಗಳೂ, ಪರತಂತ್ರವೂ ಹಳ್ಳಿಯ ಜೀವನವನ್ನು ಕೆಡಿಸಲಿಲ್ಲ; ಅಳಿಸಲಿಲ್ಲ. ಗ್ರಾಮಜೀವನ ಪದ್ಧತಿಯೂ, ಅಲ್ಲಿನ ಉದ್ಯಮಗಳ ಸ್ವರೂಪವೂ ಬದಲಾಗಲಿಲ್ಲ. ಹಳ್ಳಿ, ಬಹುಮಟ್ಟಿಗೆ ಹಿಂದಿನ ಕಾಲದಿಂದಲೂ ಸ್ವಸಂಪೂರ್ಣವಾದುದು; ಅಲ್ಲಿಗೆ ಬೇಕಾದ ಎಲ್ಲ ಕೆಲಸಕಾರ್ಯಗಳೂ ಅಲ್ಲೇ ನಡೆಯುತ್ತವೆ. ಈಗಿಗೂ ಅಚ್ಚಳಿಯದಿರುವ ಹಳ್ಳಿಗಳಲ್ಲಿ ಎಲ್ಲ ಜಾತಿಗಳವರೂ ತಮ್ಮ ಕಸುಬನ್ನು ಅನು

ಸರಿಸಿ ಪರಸ್ಪರ ಸಹಾಯಕ್ಕೆ ಒದಗುತ್ತಾರೆ. ಕೆಲಸಕ್ಕೆ ಪ್ರತಿಫಲವಾಗಿ ಮಾಮೂಲಿನಂತೆ ಪ್ರಯೋಜನವನ್ನು ಪಡೆಯುತ್ತಾರೆ; ಬೆಂಕಿ ಪೆಟ್ಟಿಗೆ, ಹೆಚ್ಚು ಬಟ್ಟೆಬರೆ, ಹೊಲಿಯುವ ಯಂತ್ರ, ದೀಪ, ಲಾಂದರ, ಉಪ್ಪು ಮುಂತಾದ ಕೆಲವು ಸಾಮಾನನ್ನುಳಿದು ಮಿಕ್ಕ ಎಲ್ಲ ವಸ್ತುಗಳನ್ನೂ ಹಳ್ಳಿಯಲ್ಲಿಯೇ ಉತ್ಪತ್ತಿಮಾಡಿಕೊಳ್ಳುತ್ತಾರೆ. ಒಂದು ಹಳ್ಳಿಯಲ್ಲಿ ದೊರೆಯದಿರುವುದನ್ನು ಸುತ್ತಲ ಅಥವಾ ನೆರೆಯ ಹಳ್ಳಿಗಳಿಂದಲೋ ವಾರಕ್ಕೊಂದು ಸಲ ನಡೆಯುವ ಸಂತೆಗಳಲ್ಲಿಯೋ ಕೊಳ್ಳುತ್ತಾರೆ. ಜೀವನಕ್ಕೆ ಬೇಕಾದ ಎಲ್ಲ ಸಾಮಾಜಿಕ ಆರ್ಥಿಕ ಅನುಕೂಲಗಳನ್ನೂ ಸುಮಾರು ಅಲ್ಲಿಯೇ ದೊರಕಿಸಿಕೊಳ್ಳುವರು; ಎಲ್ಲ ಬಗೆಯ ಸೇವೆ ಸಹಾಯ ಒದಗುವಂತೆ, ಗುಡಿಸುವವರು, ತೋಟಿ, ತಳವಾರರಿಂದ ಹಿಡಿದು ಗೌಡ ಶಾನುಭೋಗ ಜೋಯಿಸರ ವರೆಗೂ ಎಲ್ಲರೂ ಹಳ್ಳಿಯ ಜೀವನದ ಸಂಪೂರ್ಣತೆಯನ್ನು ಕಾಪಾಡಲು ಸಿದ್ಧರಾಗಿರುತ್ತಾರೆ; ಎಲ್ಲರಿಗೂ ನಿಯತವಾದ ಸ್ಥಾನವಿದೆ; ಕರ್ಮವಿದೆ. ಇಂತಹ ಹಳ್ಳಿಗಳು ಒಟ್ಟು ದೇಶದ ಕೈಪಿಡಿಯಂತೆ ಇವೆ ಎನ್ನಬಹುದು.

ಬಗೆಗಳು

ಹಳ್ಳಿಗಳಲ್ಲಿ ಜಮೀನುದಾರಿ (ಜೋಡಿ ಗ್ರಾಮ) ರಯತ್ವಾರಿ ಎಂದು ಎರಡು ಬಗೆ. ಮೈಸೂರಲ್ಲಿ ದೊಡ್ಡ ಜಮೀನುದಾರಿಗಳು ಎರಡೇ: ಯಳಂದೂರು, ಶೃಂಗೇರಿ. ಜೋಡಿ ಗ್ರಾಮಗಳ ಸಂಖ್ಯೆ ಕಡಮೆ. ಗ್ರಾಮಗಳು ಸಣ್ಣವು. ಅವುಗಳಲ್ಲಿ ಊರಿನ ಜಮೀನೆಲ್ಲ ಒಬ್ಬರಿಗೆ—ಒಂದು ವಂಶದವರಿಗೆ—ಮಾತ್ರ ಸೇರಿದುದು.

ಜಮೀನುದಾರಿ

ಜೋಡಿದಾರನೇ ಸರ್ಕಾರಕ್ಕೆ ಕಂದಾಯ ತೆರತಕ್ಕವನು. ಭೂಮಿಯನ್ನು ಸಾಗುವಳಿ ಮಾಡುವವರು ಆತನ ರೈತರು. ಆತನಿಗೆ ಅವರು ಬೆಳೆಯನ್ನೂ ಕಂದಾಯವನ್ನೂ ತೆರುತ್ತಾರೆ. ನಿಯತವಾದ ಜೋಡಿಯನ್ನು ಆತನು ಸರ್ಕಾರಕ್ಕೆ ಕಟ್ಟಿ ಉಳಿದುದನ್ನು ತನ್ನ ವರಮಾನವಾಗಿಟ್ಟುಕೊಳ್ಳುತ್ತಾನೆ. ನೇರವಾಗಿ ಕಂದಾಯ ಕವಲಿಗೆಗಳ ವಿಷಯದಲ್ಲಿ ರೈತರಿಗೂ ಸರ್ಕಾರಕ್ಕೂ ಯಾವ ಸಂಬಂಧವೂ ಇರುವುದಿಲ್ಲ.

ರಯತ್ವಾರಿ

ರಯತ್ವಾರಿ ಹಳ್ಳಿಗಳಲ್ಲಿ ಭೂಸ್ಥಿತಿವಂತನಾದ ಪ್ರತಿಯೊಬ್ಬ ರೈತನೂ ಯಜಮಾನನು ; ಸ್ವತಂತ್ರನು. ತನ್ನ ಭಾಗದ ಜಮೀನಿಗಾಗಿ ಸರ್ಕಾರಕ್ಕೆ ಕಂದಾಯವನ್ನು ತೆರುತ್ತಾನೆ. ತನಗೆ ಬೇಕಾದ ಬೆಳೆಯನ್ನಿಟ್ಟು ಹೆಚ್ಚು ಲಾಭ ಬರುವಂತೆ ಬೇಸಾಯಮಾಡುತ್ತಾನೆ. ತಾನು ವ್ಯವಸಾಯಮಾಡದಿದ್ದರೆ—ಅಥವಾ ತನ್ನ ಶಕ್ತಿಗಿಂತ ಮೀರಿದ ವ್ಯವಸಾಯ ಮಾಡಬೇಕಾಗಿದ್ದರೆ, ಇತರ ರೈತರ ಕೈಯಲ್ಲಿಯೋ, ಕೂಲಿಯವರ ಕೈಯಲ್ಲಿಯೋ ಕೆಲಸಮಾಡಿಸಿಕೊಳ್ಳುತ್ತಾನೆ. ಈ ಎಲ್ಲರೂ ಊರಿನಲ್ಲಿಯೇ ಸರ್ವದಾ ಸಂಸಾರವಿರುವವರು.

ಜೋಡಿದಾರರೂ ಭೂಮಿಗಳ ಯಜಮಾನರೂ ಕೆಲವರು ಹಳ್ಳಿಯಲ್ಲಿ ವಾಸವಾಗಿರದೆ ಪಟ್ಟಣಗಳಲ್ಲಿ ವಾಸಮಾಡುತ್ತಿರುವುದೂ ಉಂಟು. ಇಂತಹವರ ಸಂಖ್ಯೆ ವರ್ಷೇ ವರ್ಷೇ ಹೆಚ್ಚುತ್ತಿದೆ ಎನ್ನಬಹುದು. ಊರಲ್ಲಿ ಕಣ್ಣೆದುರಿಗಿದ್ದು ಅಲ್ಲಿನ ಕಷ್ಟಸುಖದಲ್ಲ ದಿನವೂ ಭಾಗಿಯಾಗದೆ ಕಣಗಾಲದಲ್ಲೊಂದು ಸಲ ಬಿತ್ತನೆಯ ಕಾಲದಲ್ಲೊಂದು ಸಲ—ಹೀಗೆ, ವರ್ಷಕ್ಕೆ ಒಂದೆರಡು ಬಾರಿ ಹಳ್ಳಿಗೆ ಹೋಗಿಬರುತ್ತಾ ಅಲ್ಲಿ ಬಂದದ್ದನ್ನು ಪಟ್ಟಣಕ್ಕೆ ಸಾಗಿಸಿಕೊಂಡು ಹೋಗಿಯೊ ಅಲ್ಲಿಯೇ ದುಡ್ಡಿಗೆ ಮಾರಿ ಬಂದ ಹಣವನ್ನು ತೆಗೆದುಕೊಂಡೊ ಉಪಯೋಗಿಸಿಕೊಳ್ಳುವ ಪದ್ಧತಿಯಲ್ಲಿ ಇರಬಹುದಾದ ಎಲ್ಲ ದೋಷಗಳೂ ಕಂಡುಬರುತ್ತವೆ. ಇದರಿಂದ ಹಳ್ಳಿಗೂ ಯಜಮಾನನಿಗೂ ಇಬ್ಬರಿಗೂ ನಷ್ಟ. ಬೆಳೆ ಸಮರ್ಪಕವಾಗಿ ಬೆಳೆಯದಾಗುವುದು. ಯಜಮಾನನಿಗೆ ಫಲಲಾಭದ ಆಸೆಯೂ ನಿರೀಕ್ಷಣೆಯೂ ಇರುವುವೇ ಹೊರತು ತಕ್ಕಷ್ಟು ಗೊಬ್ಬರ ಕೊಡಬೇಕು, ಸರಿಯಾಗಿ ಬೇಸಾಯ ಮಾಡಿಸಬೇಕು, ರೈತರ ವಿಚಾರಣೆ ಮಾಡಿಕೊಳ್ಳಬೇಕು ಮುಂತಾಗಿ ಗಮನವಿರುವುದು ಕಡಮೆಯಾಗುವುದು. ಊರೊಳಗಿಲ್ಲದ ಯಜಮಾನನ ಜಮೀನಿನ ಬೆಳೆ ಬೇಸಾಯಗಳಲ್ಲಿ ರೈತರಿಗೆ ಹೆಚ್ಚು ಲಕ್ಷ್ಯವೂ ಆಸಕ್ತಿ ಶ್ರದ್ಧೆಗಳೂ ಇಲ್ಲವಾಗುವುವು. ಪಟ್ಟಣದ ರುಚಿ ಕಂಡ ಯಜಮಾನನ ಮಕ್ಕಳೂ ಮೊಮ್ಮಕ್ಕಳೂ ಸಾಧಾರಣವಾಗಿ ಹಳ್ಳಿಯ ಹವ್ಯಾಸವನ್ನು ಕಟ್ಟಿಕೊಳ್ಳದೆ ತಮಗೆ ಭೂಮಿಯಿಂದ ಲಾಭವೇನೂ ಬಾರದೆಂದು ಭೂಮಿಕಾಣಿಗಳನ್ನು ಊರಿನವರಿಗೆ ಮಾರಿ ಅದರ ಬದುಕಿನಿಂದ ಕಳಚಿ ಬೀಳುತ್ತಿರುವುದೂ ಸಾಮಾನ್ಯ ದೃಶ್ಯವಾಗುತ್ತಿದೆ.

ಆರ್ಥಿಕ ಸಾಮಾಜಿಕ ವ್ಯವಸ್ಥೆ

ಹಳ್ಳಿಯಲ್ಲಿ ಸಾಮಾನ್ಯವಾಗಿ ಕೂಲಿ, ಭೂಮಿಯ ಸಾಗುವಳಿಗಾಗಿ ತೆರುವ ಫಸಲುಗಂಡಾಯ (Rent), ಗುತ್ತಿಗೆ, ಶ್ರಮ ಸೇವೆಗಳಿಗೆ ಕೊಡುವ ಕೂಲಿ ಸಂಬಳ, ಪದಾರ್ಥಗಳ ಧಾರಣೆವಾಸಿ ಎಲ್ಲವೂ ಹೆಚ್ಚು ಕಡಮೆ ಮಾಮೂಲನಂತೆಯೇ ನಡೆಯುವುವು. ದೊಡ್ಡ ಪಟ್ಟಣಗಳಲ್ಲಿ ಇವು ಪೈಪೋಟಿಯಿಂದ ನಿರ್ಣಯವಾಗುವುವು. ಹಿಂದಿನ ಪದ್ಧತಿಗಳ ಪ್ರಾಬಲ್ಯವೇ ಹಳ್ಳಿಗಳಲ್ಲಿ ಹೆಚ್ಚು. ಯಾವುದಾದರೂ ಒಂದು ಕೆಲಸದಲ್ಲಿ ಅತ್ಯಂ ಖಲವಾದ ಸ್ಪರ್ಥೆ (ಪೈಪೋಟಿ) ಇದ್ದರೆ, ಹುರುಡು ನಿಲ್ಲುವವರ ಶಕ್ತಿ ಕುಶಲತೆಗಳೆಲ್ಲ ಪ್ರಕಾಶಕ್ಕೆ ಬರುವುವು. ಅವರ ಕೆಲಸವೂ ಮೇಲಾಗುವುದು ; ಉತ್ಪತ್ತಿ ಹೆಚ್ಚುವುದು ; ಹೆಚ್ಚು ಕೂಲಿ ಸಿಕ್ಕುವುದು ; ಯಜಮಾನನಿಗೆ ಹಿರಿಯ ಲಾಭ ದೊರಕುವುದು ; ಸಾಮಗ್ರಿಗಳನ್ನು ಉಪಯೋಗಿಸುವವರಿಗೆ ಕರೀದಿ ಕಡಮೆಯಾಗುವುದು. ಬಹುಮಟ್ಟಿಗೆ ಈಗ ಎಲ್ಲ ವಿಧದಲ್ಲಿಯೂ ಪೈಪೋಟಿಯಿಂದ ಪ್ರಯೋಜನ ಹೆಚ್ಚು ; ಗಟ್ಟಿಗರಾಗಿ, ಕುಶಲರಾಗಿ, ಧನಾಢ್ಯರಾಗಿರುವವರು ಮಾತ್ರ ಎಲ್ಲ ಕಸುಬುಗಳಲ್ಲಿಯೂ, ಕಾರ್ಯಗಳಲ್ಲಿಯೂ ಉಳಿಯುತ್ತಾರೆ. ಅಶಕ್ತರೂ ಬಡವರೂ ಉತ್ಪತ್ತಿ ರಂಗದಿಂದ ಹಿಮ್ಮೆಟ್ಟ ಬೇಕಾಗುವುದು. ಇಲ್ಲವಾದರೆ ಪರಾಧೀನರಾಗಬೇಕಾಗುವುದು. ಇಂಥಹುರುಡು ನಮ್ಮ ಎಲ್ಲ ಉತ್ಪತ್ತಿ ಮತ್ತು ವ್ಯಾಪಾರಕ್ಷೇತ್ರಗಳಲ್ಲಿಯೂ ಬಂದ ಹೊರತು ಅಲ್ಲಿನ ಅಯೋಗ್ಯರ ಸಂಖ್ಯೆ ಕಡಮೆಯಾಗುವ ಹಾಗಿಲ್ಲ. ಯೋಗ್ಯರ ಯೋಗ್ಯತೆಯಿಂದ ಬರಬಹುದಾದ ಪ್ರಯೋಜನ ಸಂಪತ್ತಿನ ಆರ್ಜನೆಗೆ ಸಿಕ್ಕುವುದಿಲ್ಲ. ಜನರಲ್ಲಿ ಉದ್ಯೋಗಶೀಲತೆ ಉಂಟಾಗುವುದಿಲ್ಲ. ಎಲ್ಲೋ ಅಲ್ಲೊಂದು ಕಡೆ ಇಲ್ಲೊಂದು ಕಡೆ ಹೊಸರೀತಿಯ ಕಾರ್ಯಕಲಾಪ ಕಂಡುಬರುತ್ತಿದ್ದರೂ ಸಾಮಾನ್ಯವಾಗಿ ಗ್ರಾಮಜೀವನ ಸಾವಿರಾರು ವರ್ಷಗಳಿಂದ ನಡೆದ ರೀತಿಯಲ್ಲಿಯೇ ಈ ವರೆಗೂ ನಡೆದು ಬಂದಿದೆ.

ಆದರೆ ರಸ್ತೆ, ಪ್ರಯಾಣ ಸೌಕರ್ಯ, ಪಟ್ಟಣಗಳಿಗೆ ಹೋಗಿ ಬರುವಿಕೆ, ಅಲ್ಲಿನ ಧಾರಣೆವಾಸಿ, ಕೂಲಿ, ಸಂಬಳ, ಸುಖಸೌಕರ್ಯ, ವಿದ್ಯಾಪ್ರಚಾರ ಮುಂತಾದ ಸಂಗತಿಗಳನ್ನು ತಿಳಿದ ಹಳ್ಳಿಗಳ ಬದುಕು ಸ್ವಲ್ಪ ಸ್ವಲ್ಪವಾಗಿ ಮಾರ್ಪಡುತ್ತಿದೆ. ಅಲ್ಲಿನ ಜೀವನದ ಸ್ವಸಂಪೂರ್ಣತೆ ಸಡಿಲವಾಗುತ್ತಿದೆ. ಎಲ್ಲೆಲ್ಲಿಯೂ ಜನರ ಕಾರ್ಯದೃಷ್ಟಿ ಚುರು

ಕಾಗುತ್ತ, ಅವರಿಗೆ ತಮ್ಮ ಸ್ಥಿತಿಯನ್ನು ಕುರಿತು ಅತೃಪ್ತಿ, ಅಶಾಂತಿ, ಅಸಮಾಧಾನಗಳನ್ನು ತರುತ್ತಿದೆ. ಅಲ್ಲಿನ ವ್ಯಾಪಾರವೂ, ಧಾರಣೆಯೂ ಪಟ್ಟಣಗಳ ಮೆಟ್ಟಲಿಗೇ ಏರುತ್ತಿವೆಯೆಂಬ ಸೂಚನೆ ಪಟ್ಟಣಗಳ ನೆರೆಯ ಹಳ್ಳಿಗಳಲ್ಲಿ ಮೊದಲಾಗಿ ಕ್ರಮಕ್ರಮವಾಗಿ ದೂರದ ಹಳ್ಳಿಗಳಿಗೂ ಹರಡುತ್ತಿದೆ.

ಇನ್ನೈವತ್ತು ವರ್ಷಗಳಲ್ಲಿ ಸರ್ವತ್ರ ಮಾರ್ಪು ಬರುವ ಸಂಭವ ತೋರುತ್ತಿದೆಯಾದರೂ ಈಗ ಒಟ್ಟಿನಲ್ಲಿ ಜನರಿಗೆ ಹಳೆಯ ಕಾಲದಿಂದ ಬಂದ ಅಲ್ಪತೃಪ್ತಿ ಅವರನ್ನು ಜಡಸ್ಥಿತಿಯಲ್ಲಿಯೇ ಇಟ್ಟಿದೆ. ಹಳ್ಳಿಗಳವರಿಗೆ ಒಂದು ಕಸುಬಿನಿಂದ ಇನ್ನೊಂದಕ್ಕೆ ಚಲಿಸುವುದೂ, ಅಲ್ಪಾದಾಯ ಬರುವ ಕಡೆಯಿಂದ ಮೇಲಾದಾಯ ದೊರೆಯುವ ಬೇರೊಂದು ಕಡೆಗೆ ಹೋಗಿ ನೆಲಸುವುದೂ, ಸಂಪ್ರದಾಯವಾಗಿ ಬಂದ ಹಳೆಯ ಪದ್ಧತಿಗಳನ್ನೂ ಆಚಾರವನ್ನೂ ಬಿಡುವುದೂ ಇಷ್ಟವಿಲ್ಲ. ವರ್ಷಕ್ಕೆಲ್ಲ ನಾಲ್ಕು, ಹೆಚ್ಚೆಂದರೆ ಆರು ತಿಂಗಳ ಕಾಲ ವಿಶೇಷ ಕೆಲಸವಿರುವುದೇ ಹೊರತು, ಹನ್ನೆರಡು ತಿಂಗಳೂ ಕೈತುಂಬ ಕೆಲಸವಿರುವುದಿಲ್ಲ. ಅತಿ ಶ್ರಮವಿಲ್ಲದೆ ಭೂಮಿಯಿಂದ ಹಾಗೂ ಹೀಗೂ ವರ್ಷದ ಗ್ರಾಸವನ್ನು ಕೆರೆದುಕೊಳ್ಳುವ ಪ್ರಯತ್ನ ನಡೆಯುವುದು. ಅವರಿಗೆ ಬೇಕಾದುದು ತಾನೇ ಎಷ್ಟು ? ಬಟ್ಟೆಬರೆ, ಒಡವೆ ಅತಿ ಸಾಮಾನ್ಯವಾದುವು ; ಅವಕ್ಕಾಗಿ ವೆಚ್ಚ ಬಹುಸ್ವಲ್ಪ : ಎಂಥ ಪುಷ್ಟರಾದರೂ ಹೆಚ್ಚು ಖರ್ಚುಮಾಡರು. ಬೆಳಸು ಕೈತುಂಬ ಬಂದ ವರುಷಗಳಲ್ಲಿ ಮದುವೆ ಮಂಗಳಗಳನ್ನು ನೆರವೇರಿಸುವರು. ಆಗ ಯೋಗ್ಯತೆ ಮೀರಿ, ಸಾಲಮಾಡಿ, ಖರ್ಚುಮಾಡುವರು. ಅವರ ಅಲ್ಪತೃಪ್ತಿಯಿಂದ ಹೆಚ್ಚಾದ ಅರ್ಥಸಾಧನೆಗೆ ಅವಕಾಶವಿಲ್ಲ. ಎಲ್ಲರೂ ಕುಟುಂಬಿಗಳು ; ಅವರವರ ಶಕ್ತಿಗೆ ತಕ್ಕಂತೆ ದಾನ ಧರ್ಮ ದೇವರು ಕರ್ಮ ಮೋಕ್ಷ ಎಂದು ತಮಗೆ ತೋರಿದ್ದನ್ನು ಮಾಡಿ ಕಾಲವನ್ನು ತಳ್ಳುತ್ತಾರೆ. ಹೊರಗಿನ ಪ್ರಪಂಚದ ಕೋಟಲೆ ಅವರ ಗಮನಕ್ಕೆ ಬಾರದು ; ಅವರನ್ನು ತಳಮಳಗೊಳಿಸದು.

ಈ ಸ್ಥಿತಿಯಲ್ಲಿ ಸುಖವಿಲ್ಲವೆ? ನಿರಂತರ ಶ್ರಮ, ಅಸಂತೃಪ್ತಿ, ಪೈಪೋಟಿ ಇವುಗಳಿಂದ ಕೂಡಿದ ನವ ನಾಗರಿಕ ಪಟ್ಟಣಗಳಲ್ಲಿನ ಜೀವನ ರೀತಿಗಿಂತಲೂ, ಕ್ಲೇಶ ನಿರಾಶೆಗಳಿಗಿಂತಲೂ ಈ ಸ್ಥಿತಿಯೇ ಮೇಲಲ್ಲವೆ? ಎಂಬ ಚರ್ಚೆ ಇಲ್ಲಿ ಅಗತ್ಯವಿಲ್ಲ. ಹಳ್ಳಿಗಳ ಕಡೆ ಹೋಗಿ ನೋಡಿರು

ವವರಿಗೆ ಅಲ್ಲಿನ ಜಡತೆ, ಅಜ್ಞಾನ, ಭೀರುತನ, ಅಸಹಾಯತೆ ಈ ಚಿತ್ರಗಳೇ ಎಲ್ಲೆಲ್ಲಿಯೂ ಈ ಇಪ್ಪತ್ತನೆಯ ಶತಮಾನದಲ್ಲಿ ಕಂಡುಬರುವುವು. ವಿರಾಮ ವಿರುವಾಗ ಕೂಡ ಉಪವೃತ್ತಿಗಳನ್ನು ಹಿಡಿಯದವರೇ ಬಹು ಮಂದಿ. ತಮ್ಮ ಆರ್ಥಿಕಸ್ಥಿತಿ ಮೇಲಾಗಬೇಕು ; ತಾವು ಹೆಚ್ಚು ಸೌಕರ್ಯಗಳನ್ನೂ ಸುಖಸಾಮಗ್ರಿಗಳನ್ನೂ ಒದಗಿಸಿಕೊಳ್ಳಬೇಕು ; ಮಕ್ಕಳಿಗೆ ವಿದ್ಯಾಶಿಕ್ಷಣ ಕೊಡಿಸಬೇಕು ; ಎಲ್ಲರೂ ಉತ್ತಮ ಪ್ರಜಾಗುಣವನ್ನು ಬೆಳಸಿಕೊಳ್ಳ ಬೇಕು ; ತಮ್ಮ ಅಂತಸ್ತನ್ನು ಮೇಲು ಮಾಡಿಕೊಳ್ಳಬೇಕು ; ಬದುಕು ಒಳ್ಳೆಯದು, ಚೆನ್ನಾಗಿ ಬದುಕಬೇಕು ; ಇತರರು ಈ ದೇಶವನ್ನು ಭೋಗ ಭೂಮಿಯನ್ನಾಗಿ ಮಾಡಿಕೊಂಡು ಅವರ ಕುಶಲತೆ, ಕಾರ್ಯದಕ್ಷತೆಗಳಿಂದ ಆಳುತ್ತ ನಾಡಿನ ಮಕ್ಕಳನ್ನು ಕೂಲಿಗೆ ತಳ್ಳಿ ಜೀವಸುತ್ತಿರುವಾಗ, ತಮ್ಮ ಜೀವನಸುಖವನ್ನೂ ಗೌರವವನ್ನೂ ಹೆಚ್ಚಿಸಿಕೊಳ್ಳಬೇಕು ಎಂದು ಮುಂತಾಗಿ ಯೋಚನೆಮಾಡರು. ಬದುಕಿನ ಆ ಮುಖ ಅವರ ಮನಸ್ಸಿಗೆ ಹೊಳೆಯು ವುದಿಲ್ಲ. ತಮ್ಮ ಸ್ಥಿತಿ ಕೀಳಾಯಿತೆಂಬ ತಿಳಿವಳಿಕೆ ಕೂಡ ಹಲವರಿಗಿಲ್ಲ ; ಅದನ್ನು ಉತ್ತಮಗೊಳಿಸಲು ಹುಮ್ಮಸ್ಸನ್ನು ಉಂಟುಮಾಡಿ, ಉತ್ತಮ ಸ್ಥಿತಿಯ ಪ್ರಯೋಜನವನ್ನೂ ಮೋಹನತೆಯನ್ನೂ ಅವರಿಗೆ ತೋರಿಸಿ, ವಿದ್ಯಾಪ್ರಚಾರದಿಂದ ಅವರ ಕಾರ್ಯಶಕ್ತಿಯನ್ನೂ ಆಶಯ ಆಕಾಂಕ್ಷೆ ಗಳನ್ನೂ ಬೆಳಸಿ, ಇತರ ದೇಶಗಳವರ ಸ್ಥಿತಿಯನ್ನು ವರ್ಣಿಸಿ, ಹುರುಡು ಹುಟ್ಟಿಸಿ, ನಾವೂ ಅವರಂತೆ ಮನುಷ್ಯರಾಗಿ ಮೇಲ್ಮೆ ಸಾಧಿಸಬೇಕು, ನಮ್ಮ ಮನೆಯ ಸಂಪತ್ತನ್ನು ನಾವು ಅನುಭವಿಸಬೇಕು ಎಂಬ ಉತ್ಸಾಹವನ್ನು ಉಂಟುಮಾಡಿ ಅವರನ್ನು ಕಾರ್ಯೋನ್ಮುಖರಾಗಿ ಮಾಡತಕ್ಕದ್ದು ವಿದ್ಯಾ ವಂತರಾದ ಎಲ್ಲರ ಕರ್ತವ್ಯ. ಅದಕ್ಕಿಂತ ದೊಡ್ಡದಾದ ರಾಷ್ಟ್ರಸೇವೆ ಬೇರೊಂದಿಲ್ಲ.

ಸಂಪದುತ್ಪತ್ತಿಯ ಕರಣಗಳು

ಹೀಗೆ, ಒಟ್ಟಿನಲ್ಲಿ ನೋಡಿದರೆ, ಅನೇಕ ವಿಧವಾದ ಕೈಗಾರಿಕೆ ಕಾರ್ಯ ಗಳಿಗೆ ಅನುಕೂಲ ದೊರೆಯಲು ಪ್ರಕೃತಿಯ ಆವರಣದಲ್ಲಿ ಬೇಕಾದಷ್ಟು ಅವ ಕಾಶವಿದೆ. ಪೂರ್ವೋತ್ತರ ಭಾಗಗಳಲ್ಲುಳಿದು ಇತರ ಭಾಗಗಳಲ್ಲಿ ತರೀ ಬೆಳಗೂ ತೋಟಗಳಿಗೂ ಫಲವತ್ತಾದ ಭೂಮಿಯಿದೆ. ವ್ಯವಸಾಯ

ಮಳೆಗೆ ಅಧೀನವಾಗಿರುವುದರಿಂದ ದೇವರು ಕಣ್ಣು ತೆರೆದು ನೋಡಿದ ವರ್ಷ ಬೆಳೆ ಪುಷ್ಕಲವಾಗಿ ಬೆಳೆಯುತ್ತದೆ. ಬೇರೆ ಕಾಲದಲ್ಲಿ ಕೆರೆ, ನದಿ, ಅಣೆಕಟ್ಟು, ಬಾವಿ, ನಾಲೆ, ಕಾಲುವೆ ಇವುಗಳ ಮೂಲಕ ನೀರೊದಗಲು ಏರ್ಪಾಡಿದೆ. ಹಿಡುವಳಿಯಲ್ಲಿರುವ ಭೂಮಿ ಸಣ್ಣಸಣ್ಣ ತುಕಡಿಗಳಾಗಿ ಅನೇಕರ ಒಡೆತನದಲ್ಲಿದೆ.* ಹಿಡುವಳಿಯೊಂದಕ್ಕೆ ಆರೂವರೆ ಎಕರೆಯಷ್ಟು ಭೂಮಿ ಇರುವುದಾದರೂ ಆ ಭೂಮಿ ಬೇರೆ ಬೇರೆ ಕಡೆ ಚೆದರಿರುತ್ತದೆ. ಆದುದರಿಂದ ಅಮೇರಿಕಾ, ಕ್ಯಾನಡ ಮುಂತಾದ ಕಡೆ ನಡೆಯುವಂತೆ ದೊಡ್ಡ ಪ್ರಮಾಣದಲ್ಲಿಯೂ ಯಂತ್ರದ ನೇಗಿಲುಗಳ ಮೂಲಕವೂ ಆಧುನಿಕ ಶಾಸ್ತ್ರರೀತಿಯಲ್ಲಿಯೂ ವ್ಯವಸಾಯ ನಡೆಯಲು ಅವಕಾಶ ಸ್ವಲ್ಪ. ಬೇಸಾಯಗಾರರು ಬಡವರು, ಹೆಚ್ಚು ಬಂಡವಾಳವನ್ನು ಹೂಡಲಾರರು. ಅನೇಕರು ಸಾಲದಲ್ಲಿ ಮುಳುಗಿದ್ದಾರೆ. ಹಿಂದಿನಂತೆಯೇ ಬೆಳೆಗಳಿಟ್ಟು ಕಡಮೆ ಕಡಮೆ ಫಸಲು ಬೆಳೆದು ಅಹನ್ಯಹನಿ ಕಾಲಕ್ಷೇಪ ಮಾಡುತ್ತಿದ್ದಾರೆ. ಎಲ್ಲ ಭೂಮಿಗಳಲ್ಲಿಯೂ ಅಲ್ಲಿ ಅತ್ಯುತ್ತಮವಾಗಿ ಬೆಳೆಯಬಲ್ಲ ಬೆಳಸುಗಳೇ ಬೆಳೆಯುತ್ತಿಲ್ಲ. ತೆಗೆಯಬಹುದಾದ ಪರಮಾವಧಿ ಬೆಳೆಯನ್ನು ರೈತರು ತೆಗೆಯುತ್ತಿಲ್ಲ. ಮಲೆನಾಡಿನಲ್ಲಿ ಜನಸಾಂದ್ರತೆ ಕಡಮೆಯಾಗಿ ಫಲವತ್ತಾದ ಭೂಮಿ ಹೆಚ್ಚಾಗಿದೆ. ಆದರೆ ಅಲ್ಲಿನ ಅನಾರೋಗ್ಯದಿಂದ ಇತರ ಭಾಗಗಳವರು ಅಲ್ಲಿಗೆ ಹೋಗಿ ನೆಲಸಲು ಇಷ್ಟಪಡರು. ಪ್ರಕೃತಿ ಒದಗಿಸುವ ಅನೇಕ ಸಾಮಗ್ರಿಗಳಿಂದ ಈಗ ಇಲ್ಲದಿರುವ ಹಲವು ಕೈಗಾರಿಕೆಗಳನ್ನು ಸ್ಥಾಪಿಸಲೂ, ಈಗ ಹೊರಗಿಂದ ಆಮದಾಗುತ್ತಿರುವ ಸಾಮಾನುಗಳನ್ನು ತಯಾರಿಸಿಕೊಳ್ಳಲೂ ಅವಕಾಶವಿದೆ. ನಮ್ಮ ನದಿಗಳ ಮೇಲೆ ವ್ಯಾಪಾರ ಸಾಧ್ಯವಿಲ್ಲ. ಆದರೂ ಕಾವೇರಿ ಶರಾವತಿ ನದಿಗಳಿಂದ ಅಪರಿಮಿತವಾಗಿ ವಿದ್ಯುಚ್ಛಕ್ತಿಯನ್ನು ತೆಗೆಯಬಹುದು. ಶಿವಸಮುದ್ರದಲ್ಲಿ ಸಂಗ್ರಹಿಸುವ ಶಕ್ತಿಯಿಂದಲೇ ಈಗ ನಡೆಯುತ್ತಿರುವುದಕ್ಕಿಂತ ಮೂರರಷ್ಟು ಯಂತ್ರಗಳನ್ನು ನಡಸಲು ಆಗುವುದೆನ್ನುವರು. ಅಮೇರಿಕಾ, ನಾರ್‍ವೆ,

		ಒಟ್ಟು ವಿಸ್ತೀರ್ಣ (ಎಕರೆ)	ಸ್ವತ್ತುದಾರರು (ಸಂಖ್ಯೆ)
* ಒಂದು ಎಕರೆಗೆ ಕಡಮೆ	...	೯೮,೨೪೧	೧,೦೬,೯೯೨
೫ಕ್ಕೆ ಕಡಮೆ	...	೧೪,೧೨,೬೦೨	೪,೭೫,೭೫೯
೫೦ಕ್ಕೆ ಮೇಲ್ಪಟ್ಟು	...	೧,೧೧,೦೮೩	೧೩೮

ಸ್ವೀಡೆನ್ ದೇಶಗಳನ್ನು ಬಿಟ್ಟರೆ ಇಲ್ಲಿನಷ್ಟು ಅಗ್ಗವಾಗಿ ಇನ್ನೆಲ್ಲಿಯೂ ಈ ಶಕ್ತಿ ದೊರೆಯದು. ಹೊಸ ರೈಲ್ವೆಗಳನ್ನು ಏರ್ಪಡಿಸಿ ಬೆಂಗಳೂರು, ಮೈಸೂರುಗಳನ್ನು ದಕ್ಷಿಣ ದೇಶಕ್ಕೆಲ್ಲಾ ಮಧ್ಯರಾಷ್ಟ್ರವನ್ನಾಗಿ ಮಾಡಬಹುದು. ಸಮಧಾತುವಾದ ಇಲ್ಲಿನ ವಾಯುಗುಣದಿಂದ ಕೆಲಸಮಾಡಲು ಇಚ್ಛೆಯಿರುವವರಿಗೆ ದಣಿಯದೆ ದೀರ್ಘಕಾಲ ಕೆಲಸ ಮಾಡಬಲ್ಲ ಅನುಕೂಲವಿದೆ. ಈ ಅವಕಾಶವನ್ನು ಸಾಧಿಸುವ ನಾಡಿನ ಸಾಹಸಿಗಳು ಮಾತ್ರ ಹೆಚ್ಚಬೇಕು.

ಇನ್ನು ಇಲ್ಲಿನ ಕೆಲಸಗಾರರ ವಿಚಾರ :—ವಯಸ್ಕರಾದ ನಮ್ಮ ದೇಶದ ಎಲ್ಲ ಜನರೂ ಕೆಲಸಕ್ಕೆ ಒದಗರು. ಸಮಾಜಪದ್ಧತಿಗಳ ಕಾರಣದಿಂದ ನಡುಮಟ್ಟದವರಲ್ಲಿಯೂ, ಮೇಲಿನ ಅಂತಸ್ತುಗಳವರಲ್ಲಿಯೂ ಹೆಂಗಸರು ಸಂಪಾದನೆಗೆ ನೆರೆಯರು. ಜನರಿಗೆ ಸುತ್ತಲ ಪ್ರಪಂಚದ ತಿಳಿವಳಿಕೆ ಕಡಮೆ. ಅಕ್ಷರಸ್ಥರಾದವರ ಸಂಖ್ಯೆ ಶೇಕಡ ೭–೮. ಪ್ರಪಂಚದಲ್ಲಿ ಯಾವ ಯಾವುದು ಹೇಗೆ ನಡೆಯುವುದೆಂಬುದನ್ನು ತಿಳಿಯುವುದು ಕೂಡ ಅವರಿಗೆ ಬೇಕಿಲ್ಲ. ಕೈಗಾರಿಕೆಗೆ ಒದಗುವ ಕೂಲಿಗಾರರೆಲ್ಲ ಬಹುಶಃ ಮೈಸೂರಿನವರಲ್ಲದ ಇತರರು ; ಒದಗುವವರಿಗೆ ಕಾರ್ಯದ ಅನುಭವವಿಲ್ಲ. ತಂದೆ ತಾತಂದಿರು ನೆಟ್ಟ ಮರಗಳಿಗೆ ನೇಣುಹಾಕಿಕೊಂಡಾರೇ ಹೊರತು ಊರಿಂದೂರಿಗೂ ಕಸುಬಿಂದ ಕಸುಬಿಗೂ ಸುಲಭವಾಗಿ ಹೋಗಿ ನೆಲಸರು. ದೇಶವಿದೇಶಗಳಲ್ಲಿ ಶಿಕ್ಷಿತರಾಗಿ ಬಂದವರೂ ಯಂತ್ರ ಕಾರ್ಯಗಳ ಅನುಭವವಿರುವವರೂ ಸರ್ಕಾರಿ ಉದ್ಯೋಗಗಳಿಗೆ ಹಾತೊರೆಯುವರೇ ಹೊರತು ಸ್ವತಂತ್ರವಾಗಿ ಕಾರ್ಖಾನೆ ಕೈಗಾರಿಕೆ ಕೆಲಸಗಳಿಗೆ ಭುಜ ಕೊಡಲು ಮುಂದುವರಿಯುವುದಿಲ್ಲ. ದೇಶದ ಅಜ್ಞಾನ ಬಡತನಗಳ ಜೊತೆಗೆ ಆಲಸ್ಯವೂ ಶ್ರಮವಿಮುಖತೆಯೂ ಬಹಳವಾಗಿವೆಯೆನ್ನಬೇಕು.

ದೊಡ್ಡ ಆಸ್ತಿವಂತರ ಸಂಖ್ಯೆ ಕಡಮೆ. ಇರುವವರೂ ದೊಡ್ಡ ಕೈಗಾರಿಕೆಗಳಿಗೆ ಬೇಕಾಗುವಷ್ಟು ಬಂಡವಾಳವನ್ನು ಹೂಡಲು ಮನಸ್ಸು ಮಾಡುವುದಿಲ್ಲ. ಇರುವ ಬಂಡವಾಳ ಭೂಮಿಕಾಣಿಗಳಲ್ಲಿಯೂ ಲೇವಾದೇವಿಯಲ್ಲಿಯೂ ಹೂಡಿರುತ್ತದೆ. ಜನರಲ್ಲಿ ಮಿತವ್ಯಯ ಬುದ್ಧಿ ಅಪರೂಪ. ಮೇಲಂತಸ್ತುಗಳವರಲ್ಲಿ ಆದಾಯಕ್ಕಿಂತಲೂ ವೆಚ್ಚ ಬಲ. ಹೆಚ್ಚು ಸಂಪಾದಿಸುವವರಿಗೆ ಭೋಗಾಸಕ್ತಿ ವಿಶೇಷ. ಸಾಮಾನ್ಯರ ವರಮಾನ ವರ್ಷ

ವೊಂದಕ್ಕೆ ೪೦—೪೫ ರೂ. ಮೇಲ್ಪಟ್ಟಿಲ್ಲವಾಗಿ ಅವರು ಕೂಡಿಡುವ ಸಂಭವ ತೀರ ಸ್ವಲ್ಪ. ಏರ್ಪಟ್ಟ ಅನೇಕ ಕೂಡು ಬಂಡವಾಳದ ಸಂಘಗಳು ಚಾಲಕರ ಅಪ್ರಮಾಣಿಕತೆ, ಅವಿವೇಕ, ಕಾರ್ಯಜ್ಞಾನವಿಲ್ಲದಿರುವಿಕೆ, ಹೆಸರಿಗೆ ಹಾಕಿಕೊಂಡಿರುವ ಬಂಡವಾಳಕ್ಕೂ ನಿಜವಾಗಿ ಸಂಗ್ರಹಿಸಿರುವ ಹಣಕ್ಕೂ ಇರುವ ವ್ಯತ್ಯಾಸ ವೊದಲಾದ ಕಾರಣಗಳಿಂದ ಬಹುಕಾಲ ಉಳಿಯವು. ದೇಶದಲ್ಲಿ ಹುಟ್ಟುವ ಮಕ್ಕಳಿಗಿಂತ ಅಲ್ಪಾಯುಗಳು ಇವು. ಧೈರ್ಯಮಾಡಿ ಹಣ ಹಾಕಿದವರ ನಂಬಿಕೆ ಕೆಟ್ಟುಹೋಗಿ ಇಂಥ ಸಂಸ್ಥೆಗಳಿಗೆ ಹಣವೊದಗುವುದೇ ದುಸ್ತರವಾಗಿದೆ. ದೇಶದಲ್ಲಿ ವೃದ್ಧಿ ಹೊಂದುತ್ತಿರುವ ದೊಡ್ಡ ಕೈಗಾರಿಕೆಗಳಲ್ಲಿಯೂ ವ್ಯಾಪಾರ ಲೇವಾದೇವಿಗಳಲ್ಲಿಯೂ ಹೊರಗಿನವರದೇ ಬಂಡವಾಳ. ಕೊನೆಗೆ ಸೇವಿಂಗ್ಸ್ ಬ್ಯಾಂಕಿನಲ್ಲಿ ಕೂಡುತ್ತಿರುವ ಹಣದಲ್ಲಿ ಬಹುಭಾಗ ಹೊರಗಿನವರದಿರಬೇಕು. ಚಿನ್ನದ ಗಣಿಗಳು ಪಾಶ್ಚಾತ್ಯರವು; ದೊಡ್ಡ ಲೇವಾದೇವಿ ಗುಜರಾತಿ ಮಾರವಾಡಿ ಲಬ್ಬೆ ನಾಟುಕೋಟಿಯವರದು; ದೊಡ್ಡ ಯಂತ್ರದ ಕಾರ್ಖಾನೆಗಳು ಪರಾಧೀನ; ದೊಡ್ಡ ಅಂಗಡಿ ಮುಂಗಟ್ಟು ಕ್ರಮೇಣ ಹೀಗೆಯೇ ಆಗುತ್ತಿವೆ. ಇದರಿಂದ ಎರಡು ಬಗೆಯಲ್ಲಿ ನಷ್ಟ: ಕಾಲಕ್ರಮದಲ್ಲಿ ಎಲ್ಲ ಸಂಪತ್ತೂ ಒಳಗಿನವರ ಕೈತಪ್ಪಿ ಹೋಗಬಹುದೆಂಬುದು ಒಂದು; ಇಲ್ಲಿನ ಸಂಪತ್ತೆಲ್ಲ, ಇತರರಿಗೆ ಲಾಭ, ಬಡ್ಡಿ, ಕೂಲಿ ಸಂಬಳಗಳು, ಭೋಗ, ಒಡೆತನ ಈ ರೂಪದಲ್ಲಿ ಹೋಗಿ ದೇಶದ ಬಡತನವನ್ನು ಹೆಚ್ಚಿಸುವುವು.

ಅರ್ಥಸಾಧನಾ ಕಾರ್ಯಗಳಲ್ಲಿ ಕಾರ್ಯವ್ಯವಸ್ಥಾಶಕ್ತಿ, ಸಾಹಸ ಇವೆರಡೂ ಮುಖ್ಯ. ಕಾರ್ಯಾಲಯದೊಳಗೆ ವಸ್ತುನಿರ್ಮಾಣ ಕಾರ್ಯವನ್ನು ದಕ್ಷವಾಗಿ ಏರ್ಪಡಿಸಿ, ಅತಿ ಕಡಮೆ ವೆಚ್ಚಕ್ಕೆ ಅತ್ಯುತ್ತಮವಾದ ವಸ್ತುಗಳನ್ನು ತಯಾರಿಸಲು ಮೊದಲನೆಯ ಗುಣ ಸಹಾಯವಾಗುತ್ತದೆ. ಹಾಗೆ ತಯಾರಿಸಿದ ವಸ್ತುಗಳನ್ನು ಅತಿ ಹೆಚ್ಚಿನ ಲಾಭ ದೊರೆಯುವಂತೆ ಇತರ ಕಡೆಗಳಲ್ಲಿ ಮಾರಿ ಉತ್ತಮ ಫಲ ತರುವ ಶಕ್ತಿಯೂ ಇದಕ್ಕೇ ಸುಮಾರು ಸೇರಿದುದು. ನಷ್ಟ ಬರಲಿ ಲಾಭ ಬರಲಿ, ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿ, ಉಪಕರಣ ಸಾಮಗ್ರಿಗಳನ್ನು ಒದಗಿಸಿಕೊಂಡು, ಮೂಲ ವಸ್ತು ಬಂಡವಾಳ, ಕೂಲಿ, ಕಾರ್ಯರಚನಾಶಕ್ತಿ ಇವುಗಳ ಬಲದಿಂದ ಪರಮಾವಧಿ ಪ್ರಯೋಜನ ದೊರೆಯುವಂತೆ ಹೂಡಿಕೊಂಡು, ಪೇಟೆಯಲ್ಲಿ

ಸಾಮಾನಿನ ಮಾರಾಟವಾದ ಮೇಲೆ ಹಣ ಪಡೆಯುವ ಕಾರ್ಯದವರೆಗೂ ಎಲ್ಲವನ್ನೂ ಮೊದಲೇ ಗುಣಿಸಿ ಕೆಲಸಮಾಡುವ ಶಕ್ತಿ ಎರಡನೆಯದು. ಗಿರಾಕಿ ಒದಗಿಸಿಕೊಳ್ಳುವುದು, ಸಾಮಾನು ಎಲ್ಲರಿಗೂ ಒಪ್ಪಾಗುವಂತೆ ಮಾಡಿ ಇತರರೊಡನೆ ಪೈಪೋಟಿಯಲ್ಲಿ ಜಯಿಸುವುದು, ಮುಖ್ಯ. ತಕ್ಷಣದ ಲಾಭಕ್ಕಿಂತ ಸಂಸ್ಥೆಯ ಸ್ಥಿರವಾದ ನಿರಂತರ ಅಭಿವೃದ್ಧಿಯನ್ನು ಸಾಧಿಸುವ ಗುಣ ನಮ್ಮ ದೇಶದವರಲ್ಲಿ ಕಂಡುಬರುತ್ತಿಲ್ಲ. ಇರುವುದನ್ನು ಕಾಪಾಡಿ ಕೊಳ್ಳುವ ಯೋಗ್ಯತೆಯೇ ಹೋಗುತ್ತಿರುವಾಗ ಹೊಸ ಸಾಹಸಗಳಿಗೆ ಕೈ ಹಾಕುವುದೆಂದರೇನು ?

ಆದರೂ ನಿರಾಸೆಗೆ ಕಾರಣವಿಲ್ಲವೆನ್ನಬಹುದು. ಈವರೆಗೂ ಹೀಗಾದರೆ ಮುಂದೂ ಹೀಗೇ ಇರಬೇಕೆ ? ದೇಶದಲ್ಲಿ ಫಲವತ್ತಾದ ಭೂಮಿಯಿದೆ ; ಬೇಕಾದಂಥ ಮೂಲ ವಸ್ತು ಉತ್ಪತ್ತಿಯಾಗುತ್ತದೆ. ಜನರು ಯೋಗ್ಯರು; ಕುಡುಕತನವಿಲ್ಲ. ಶಿಕ್ಷಣ ಪಡೆದು ಮೈ ಬಗ್ಗಿಸಿ ಮಾಡಿದರೆ ನಯವಾಗಿ ಬುದ್ಧಿವಂತಿಕೆಯಿಂದ ಕೆಲಸಮಾಡಿ ಎಲ್ಲರಿಂದಲೂ ಸೈ ಎನ್ನಿಸಿಕೊಳ್ಳ ಬಲ್ಲರು. ಹೊರಪ್ರಾಂತಕ್ಕೆ ಹೋಗಿರುವವರು ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ. ಇರುವವರು ಶ್ರದ್ಧೆಯಿಂದ ಉದ್ಯೋಗಕ್ಕೆ ನೆರೆದರೆ ಸ್ವಂತ ವರಮಾನವನ್ನೂ ದೇಶದ ಆದಾಯ ಸಂಪತ್ತುಗಳನ್ನೂ ಒಂದು ಹತ್ತಾಗು ವಂತೆ ಬೆಳಸಬಹುದು. ಇದಕ್ಕೆ ಸರ್ಕಾರದ ಸಹಾಯ ಬೇಕು. ಶಾಸನದ ಸಹಾಯ, ವಿದ್ಯಾಪ್ರಚಾರದ ಸಹಾಯ, ಹಣ ಸಹಾಯ, ಪ್ರೋತ್ಸಾಹ, ಮಾರ್ಗದರ್ಶನ ಎಲ್ಲವೂ ಬೇಕು. ಜನರೂ ಸಮಾಜದ ಕೊರತೆಗಳ ಕಡೆ ನೋಡಿ ಅವುಗಳನ್ನು ಕ್ರಮಪಡಿಸಬೇಕು. ಎಲ್ಲಕ್ಕೂ ಮೇಲಾಗಿ ಜನದ ಚಿತ್ತವೃತ್ತಿಯೂ ಉದ್ಯೋಗಬುದ್ಧಿಯೂ ಮಹತ್ವಾಕಾಂಕ್ಷೆಯೂ, ಕಾರ್ಯ ಸಾಧನಾ ಕುಶಲತೆ ಸಾಹಸಗಳೂ ಹೆಚ್ಚುವಂತಾಗಬೇಕು. ಕಡೆಗೆ ಹೊರಗಿನ ಸಾಧನ ಮತ್ತು ಉಪಕರಣ ಸಂಪತ್ತಿಗಿಂತಲೂ ಜನರ ದೇಹಶಕ್ತಿ ಮನಶ್ಶಕ್ತಿ ಕಾರ್ಯಶಕ್ತಿಗಳು ಹೆಚ್ಚಿ ಅವರು ಬದುಕುಲು ಮನಸ್ಸುಮಾಡುವಂತೆ ಅವರ ಸತ್ವಪೋಷಣೆಯಾಗಬೇಕು.

೪. ದೇಶದ ಕೈಗಾರಿಕೆಗಳು

ವ್ಯವಸಾಯ

ಇಲ್ಲಿನ ಜನರ ಮುಖ್ಯ ಉದ್ಯೋಗ ವ್ಯವಸಾಯ. ಅದಕ್ಕೆ ಭೂಸಾರ, ಹವ, ಸಕಾಲದ ಮಳೆ, ನೀರಿನ ವಸತಿ; ರೈತರು, ಅವರ ಅನುಭವ ಕುಶಲತೆ ; ಗೊಬ್ಬರ, ಎತ್ತುಗಳು ; ನೇಗಿಲು, ಕುಂಟೆ ಮುಂತಾದ ಉಳುಮೆ ಬಿತ್ತನೆ ಮುಟ್ಟುಗಳು, ಸಹಾಯ.

ಮೈಸೂರಲ್ಲಿ ಕಾವೇರಿ ಮುಂತಾದ ನದಿಗಳ ಪಕ್ಕದಲ್ಲಿಯೂ ಕೆಲವು ಮಲೆನಾಡು ಭಾಗಗಳಲ್ಲಿಯೂ ಇತರ ಕೆರೆ ಕಾಲುವೆಗಳ ತಡಿಯಲ್ಲಿಯೂ ಇರುವ ಭೂಮಿಯನ್ನೂ, ಉತ್ತರದಲ್ಲಿರುವ ಎರೆ ಮಣ್ಣಿನ ಹತ್ತಿಯ ಮಂಡಲವನ್ನೂ ಬಿಟ್ಟರೆ ಉಳಿದ ಭೂಮಿ ಹೆಚ್ಚು ಫಲವತ್ತಾಗಿಲ್ಲ. ಈ ಉಳಿದ ಭೂಮಿಗಳಲ್ಲಿ ಹೊಲದ ಬೆಳೆಗಳನ್ನು ಮಾತ್ರ ಬೆಳೆಯ ಬಹುದು. ಭೂಮಿಗಳಲ್ಲಿ ಅಲ್ಯೂಮಿನಂ ಬೆರಕೆ ಹೆಚ್ಚು. ಸಾರಜನಕ ಪದಾರ್ಥ ಕಡಮೆ. ಆದುದರಿಂದ ಆ ಭಾಗ ಹೆಚ್ಚಾಗಿರುವ ಗೊಬ್ಬರವನ್ನೂಡಿದರೆ ಬೆಳೆಯನ್ನು ಹೆಚ್ಚಿಸಬಹುದು. ಕಾಫೀ ಭೂಮಿಗಳಲ್ಲಿ ಸಾರಜನಕಾಂಶ ಹೆಚ್ಚಾಗಿದೆ. ಉತ್ತರದ ಕಪ್ಪು ಭೂಮಿಯಲ್ಲಿ ಸುಣ್ಣದ ಅಂಶ ಹೆಚ್ಚು.

ಸಾಗುವಳಿ, ಹಿಡುವಳಿ

ಜನರಿಗೆ ಭೂಮಿಯನ್ನು ಸಂಪಾದಿಸುವುದಕ್ಕೆ ಇರುವಷ್ಟು ಆಸೆ ಅದನ್ನು ಸಾಗುವಳಿಗೆ ತರುವುದಕ್ಕಿಲ್ಲ. ಉತ್ತ ಭೂಮಿ ಒಂದು ಎಕರೆಯಿದ್ದರೆ ಮುಕ್ಕಾಲು ಎಕರೆ ಭೂಮಿ ಉಳುಮೆಯಿಲ್ಲದ ಬರಿಯ ಹಿಡುವಳಿಯಲ್ಲಿರುತ್ತದೆ. ಹೀಗೆ ಹಾಳು ಬೀಳುತ್ತಿರುವ ಭೂಮಿಯ ವಿಸ್ತಾರ ವರ್ಷೇ ವರ್ಷೇ ಹೆಚ್ಚುತ್ತಿದೆಯೆನ್ನಬಹುದು. ಸ್ವತಃ ವ್ಯವಸಾಯ ಮಾಡದ ಧನಿಕ ಯಜಮಾನರ ಹಿಡುವಳಿಗೆ ಭೂಮಿ ಹೋಗುವುದರ ಕೇಡು ಇದು. ಇದರಿಂದ ಎಷ್ಟು ಭೂಮಿಗೆ ಬೆಳೆ ಇಡಬಹುದೊ ಅಷ್ಟಕ್ಕೂ ಬೆಳೆಯಿಡದಂತಾ

ಗಿದೆ. ಬೆಳೆಯುವ ಭೂಮಿಗಳ ಬೆಳಸನ್ನು ಹೆಚ್ಚಿಸುವುದು ಎಷ್ಟು ಅಗತ್ಯವಾದ ಕೆಲಸವೊ ಬೀಡು ಬಿದ್ದಿರುವ ಜಮೀನನ್ನು ಉತ್ತು ಬಿತ್ತಿ ಬೇಸಾಯ ಮಾಡ ಬೇಕಾದುದೂ ಅಷ್ಟೇ ಅಗತ್ಯವಾದುದು.

ಹೆಚ್ಚು ಸಾಗುವಳಿಯ ಅವಶ್ಯಕತೆ

ಸಂಸ್ಥಾನಾಮಳೆ ಹಿಡುವಳಿದಾರರಿಗೆ ತಲೆಯೊಂದಕ್ಕೆ ಸರಾಸರಿ ೮ ಎಕರೆ ಭೂಮಿಯಿದೆ. ದೇಶದ ಅನೇಕ ಭಾಗಗಳಲ್ಲಿ ಜನ ಸಾಂದ್ರತೆ ಹೆಚ್ಚಾಗಿ ಭೂಮಿಯ ಬೆಳಸು ಜನರ ಆರೋಗ್ಯ, ಶಕ್ತಿ, ಸುಖ, ಪುಷ್ಟಿ, ಮುಂತಾದವನ್ನು ದೊರಕಿಸಲು ಸಾಕು ಸಾಲದಾಗುತ್ತಿದೆ. ಅಂಥ ಕಡೆಗಗಳಲ್ಲಿ ಬೆಳಸನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯಬೇಕು. ಬೇರೆ ಭಾಗಗಳಲ್ಲಿ ರೈತರ ವಸತಿಯಿಲ್ಲದೆ ಅನೇಕ ಭೂಮಿಗಳು ಹಾಳು ಬಿದ್ದಿವೆ. ಅಲ್ಲಿ ರೈತರ ವಸತಿಯನ್ನು ಕಲ್ಪಿಸುವ ಪ್ರಯತ್ನಗಳು ನಡೆಯಬೇಕು. ಇರುವ ಭೂಮಿಗಳ ವಿಸ್ತೀರ್ಣ ಆಸ್ತಿ ವಿಭಾಗದಿಂದ ಇನ್ನೂ ಸಣ್ಣ ಸಣ್ಣ ಚೂರುಗಳಾಗದಂತೆಯೂ, ಸಾಧ್ಯವಾದ ಮಟ್ಟಿಗೂ ಒಬ್ಬರ ಹಿಡುವಳಿಯ ಭೂಮಿಯೆಲ್ಲಾ ಒಂದೇ ಕಡೆ ಅಖಂಡವಾಗಿ ಆಗುವಂತೆಯೂ ಏರ್ಪಾಡಾಗಬೇಕು. ಹೀಗಾದರೆ ದೇಶದ ವ್ಯವಸಾಯ ಸಂಪತ್ತು ಬಹುಮಟ್ಟಿಗೆ ಹೆಚ್ಚುವುದು.

ಬೆಳೆಗಳು

ತರೀ, ಖುಷ್ಕೀ, ತೋಟದ ಬೆಳೆ ಎಂದೊ, ಆಹಾರದ ಬೆಳೆ ಮಾರಾಟದ (ಹಣದ) ಬೆಳೆ ಎಂದೊ ಬೆಳೆಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಈ ದೇಶದಲ್ಲಿ ಖುಷ್ಕೀ (ಅಥವಾ ಹೊಲದ) ಬೆಳೆಯೇ ವಿಶೇಷ. ವ್ಯವಸಾಯದಲ್ಲಿರುವ ಶೇಕಡ ೮೩ ಭಾಗ ಈ ಜಾತಿಗೆ ಸೇರಿದೆ. ಜನರ ಆಹಾರಕ್ಕೂ ದನಕರುಗಳ ಹುಲ್ಲು ಮೇವುಗಳಿಗೂ ಇದೇ ಮುಖ್ಯ ಆಧಾರ. ರಾಗಿ, ಜೋಳ, ಇವು ಮುಖ್ಯ ಧಾನ್ಯಗಳು. ಇತರ ದ್ವಿದಳ ಧಾನ್ಯಗಳೂ, ಎಣ್ಣೆಯ ಬಿತ್ತಗಳೂ ಬೆಳೆಯುವುವು, ಹಣದ ಬೆಳೆಗಳಲ್ಲಿ ನೆಲಗಡಲೆ, ಕಾಫೀ, ಹತ್ತಿ, ಹೊಗೆಸೊಪ್ಪು, ಅಡಕೆ, ತೆಂಗು, ಕಬ್ಬು, ಏಲಕ್ಕಿ ಮುಖ್ಯವಾದವು. ಎಲ್ಲವೂ ಮಳೆಗೂ ನೀರಿನ ವಸತಿಗೂ ಅಧೀನವಾದವು. ಮಳೆ ಮೋಸ ಮಾಡಿದರೆ ಸರ್ವತ್ರ ನಷ್ಟ ; ಕಷ್ಟ.

ತರೀ (ಗದ್ದೆಯ) ಬೆಳೆ. — ಹೆಚ್ಚು ನೀರಿನ ಸಹಾಯವಿಲ್ಲದಿದ್ದರೆ ಆಗದ ಬತ್ತವೂ ಕಬ್ಬೂ ತರೀ ಬೆಳೆಗಳು. ನೀರಿನ ವಸತಿಯೊಂದಿದ್ದರೆ ಇವು ಸಮರ್ಪಕವಾಗಿ ಆಗುವುವು. ನೀರು ಕೆರೆ, ಕಾಲುವೆ, ಬಾವಿಗಳ ಮೂಲಕ ಒದಗುವುದು. ನದಿಗಳಿಗೆ ಅನೇಕಕಡೆ ಕಟ್ಟೆ ಕಟ್ಟಿ ನೀರು ನಿಲ್ಲಿಸಿರುತ್ತಾರೆ. ಪೂರ್ವ ಭಾಗದ ಜಿಲ್ಲೆಗಳಲ್ಲಿ ಕೆರೆ ನೀರಿನ ಬಲವೇ ಬಲ. ಈಶಾನ್ಯ ಭಾಗ ದಲ್ಲಿ ಬಾವಿಗಳ ಸಹಾಯ ವಿಶೇಷ. ಹೆಚ್ಚು ನೀರಾವರಿ ಕೆಲಸಗಳಿಗೆ ಸರ್ಕಾರದವರೂ ಖಾಸಗಿ ಜನರೂ ಗಮನ ಕೊಡುತ್ತಿದ್ದಾರೆ.

ತೋಟದ ಬೆಳೆ. — ತರೀ ಬೆಳೆಗೆ ಹೇಗೊ ತೋಟದ ಬೆಳೆಗೂ ಹಾಗೆಯೇ ನೀರಿನ ಸಹಾಯವೂ ಸಂತತವಾದ ತಂಪೂ ಅವಶ್ಯಕ. ತೋಟ ತುಡಿಕೆ ಗಳಲ್ಲಿ ಬಹು ಭಾಗ ಧನಿಕರ ಕೈಯಲ್ಲಿದೆ ಎನ್ನಬಹುದು. ಅವುಗಳಲ್ಲಿ ತೆಂಗು, ಅಡಕೆ ಹೆಚ್ಚಾಗಿ ಬೆಳೆದು ಬಹುಕಾಲದವರೆಗೂ ಆದಾಯತರುತ್ತವೆ. ರೇಷ್ಮೆಯ ಕೈಗಾರಿಕೆಗೆ ಬೇಕಾದ ಕಂಬಳಿ ಸೊಪ್ಪಿಗೆ ಹಲವು ಭಾಗಗಳಲ್ಲಿ ಅನುಕೂಲವಿದೆ. ಪಟ್ಟಣಗಳ ನೆರೆಯಲ್ಲಿ ಬಾವಿ, ಕೆರೆ ಕಾಲುವೆಗಳ ಆಸರೆಯ ಕೈತೋಟಗಳಲ್ಲಿ ತರಕಾರಿ ಹಣ್ಣು ಹಂಪಲ ಬೆಳೆಯುವರು.

ಗೊಬ್ಬರಗಳು

ಸಾಧಾರಣವಾಗಿ ರೈತರು ಉಪಯೋಗಿಸುವುದು ದನದ ಗೊಬ್ಬರ. ಇದೂ ಸಾಕಾದಷ್ಟು ಪರಿಮಾಣದಲ್ಲಿ ದೊರಕದು. ಹುಲ್ಲುಗಾವಲುಗಳು ಕಡಮೆಯಾಗುತ್ತಿವೆ. ರೈತರು ಗೊಬ್ಬರಕ್ಕಾಗಿ ಹೆಚ್ಚು ದನಗಳನ್ನು ಕಟ್ಟಿ ಕೊಳ್ಳಲು ಶಕ್ತರಾಗಿಲ್ಲ. ಇರುವ ದನಗಳಿಗೆ ಸಾಕಾದಷ್ಟು ಮೇವಿಲ್ಲ; ನೀರಿಲ್ಲ. ಮೇವು ಒದಗಿಸಲು ಇರುವ ಶಕ್ತಿಗಿಂತಲೂ ಹೆಚ್ಚು ದನಗಳನ್ನು ಕಟ್ಟಿಕೊಳ್ಳುವ ಅವಿವೇಕಕ್ಕೆ ರೈತರು ಹೋಗುವುದುಂಟು. ಕೂಡಿಸಿದ ಗೊಬ್ಬರ ವನ್ನು ಸರಿಯಾಗಿ ಕಾಪಾಡದೆ ಬಿಸಿಲಿಗೆ ಮಳೆಗೆ ತೆರೆದ ಪ್ರದೇಶಗಳಲ್ಲಿ ಅದನ್ನು ಸುರಿಯುವುದೇ ವಾಡಿಕೆ. ಇದರಿಂದ ಗೊಬ್ಬರದ ಸಾರ ಇಳಿಯುವುದು. ಅಲ್ಲದೆ ಸಗಣಿಯನ್ನು ಬೆರಣಿಯಾಗಿ ಉರಿಸುವುದರಿಂದಲೂ ಒಳ್ಳೆಯ ಗೊಬ್ಬ ರವಾಗಬಲ್ಲ ವಸ್ತು ನಷ್ಟವಾಗುವುದು.

ಭೂ ಸಾರವನ್ನು ಹೆಚ್ಚಿಸಲು ಹಸುರು ಸೊಪ್ಪುಗಳನ್ನೂ ಉಪಯೋಗಿಸುವರು. ಪೂರ್ವ ಭಾಗದ ಜಿಲ್ಲೆಗಳಲ್ಲಿ ಬತ್ತದ ಗದ್ದೆಗಳಿಗೆ ಹೊಂಗೆಯ ಸೊಪ್ಪನ್ನು ಹಾಕುತ್ತಾರೆ. ಮೈಸೂರು ಹಾಸನ ಜಿಲ್ಲೆಗಳ ನಾಲೆಯ ಕೆಳಗಿನ ಭೂಮಿಯಲ್ಲಿ ಬತ್ತದ ಬೆಳೆಗೆ ಮುಂಚೆ ಹುರುಳಿಯನ್ನು ಬೆಳೆದು ಗಿಡವನ್ನು ಭೂಮಿಯೊಳಕ್ಕೇ ಉತ್ತುಬಿಡುತ್ತಾರೆ.

ಉತ್ತಮ ಗೊಬ್ಬರಗಳ ಪ್ರಯೋಗ

ಹೊಂಗೆ ನೆಲಗಡಲೆ ಹರಳು ಮುಂತಾದವುಗಳ ಹಿಂಡಿಯನ್ನು ಬೆಂಗಳೂರು ಕೋಲಾರ ಪ್ರಾಂತ ಕಬ್ಬಿನ ಬೆಳೆಗೆ ಗೊಬ್ಬರವಾಗಿ ಉಪಯೋಗಿಸುವರು. ವ್ಯವಸಾಯದ ಇಲಾಖೆಯುವರ ಪ್ರಯತ್ನದಿಂದ ಹಿಂಡಿಯನ್ನು ಸಂಸ್ಥಾನಾಮಳೆ ಉಪಯೋಗಿಸಲು ಆರಂಭವಾಗಿದೆ. ಇದೇ ಇಲಾಖೆಯವರ ಪ್ರೋತ್ಸಾಹದಿಂದಲೂ ಕೆಲವು ಜನ ಮುಂಬರಿದ ಕೃಷಿಕರ ಪ್ರಯತ್ನದಿಂದಲೂ ಕಬ್ಬಿನ ಬೆಳೆಗೂ ಕೆಲವು ತೋಟದ ಬೆಳೆಗಳಿಗೂ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುವುದು ವಾಡಿಕೆಯಾಗುತ್ತಿದೆ. ಬತ್ತ ಕಬ್ಬುಗಳಿಗೇ ಅಲ್ಲದೆ ರಾಗಿ ಜೋಳಗಳಿಗೂ ಇದರ ಪ್ರಯೋಜನ ಉಂಟೆಂದು ತಿಳಿದವರು ಹೇಳುವರು. ಮಿಾನಿನ ಗೊಬ್ಬರ, ಅಮ್ಮೋನಿಯಂ ಸಲ್ಫೇಟ್, ಎಲುಬಿನ ಗೊಬ್ಬರ, ಸೂಪರ್ ಸಲ್ಫೇಟ್ ಆಫ್ ಲೈಮ್ ಮುಂತಾದ ಭೂಸಾರ ಹೆಚ್ಚಿಸುವ ದ್ರವ್ಯಗಳನ್ನು ಉಪಯೋಗಿಸಿದರೆ ಬೆಳಸು ಹೆಚ್ಚುವುದೆಂದರಿತು ರೈತರು ಕ್ರಮವಾಗಿ ಅವುಗಳನ್ನು ಕೊಳ್ಳುತ್ತಿದ್ದಾರೆ. ರಾಸಾಯನಿಕ ಭೂ ಸಾರ ದ್ರವ್ಯಗಳನ್ನು ತರಿಸುವ ವೆಚ್ಚವೂ ಅತಿಯಲ್ಲ. ಆದುದರಿಂದ ಅವುಗಳ ಪ್ರಯೋಗ ಹೆಚ್ಚುವ ಸಂಭವವುಂಟು.

ಇತರ ಸಾರ ಪೋಷಕ ದ್ರವ್ಯಗಳ ನಷ್ಟ

ನಾವು ಉತ್ಪತ್ತಿಮಾಡುವ ಎಣ್ಣೆಯ ಬಿತ್ತದ ಬಹು ಭಾಗ ರಫ್ತಾಗುವುದರಿಂದ ನಷ್ಟ ಬಹಳ. ದನದ ಮೇವಿಗೂ ಭೂಮಿಯ ಗೊಬ್ಬರಕ್ಕೂ, ಒಳದೇಶದಲ್ಲಿಯೇ ಸುಲಭವಾಗಿ ದೊರೆಯಬಹುದಾದ ವಸ್ತು ಹೊರಕ್ಕೆ ಹೋದರೆ ಇನ್ನೇನಾದೀತು ? ಎಳ್ಳು, ನೆಲಗಡಲೆ, ಹತ್ತಿಯ ಬಿತ್ತ, ಕೊಬ್ಬರಿ ಹರಳು ಮುಂತಾದವು ವರ್ಷಕ್ಕೆ ಸುಮಾರು ೧೫ ವರೆ ಲಕ್ಷ ಮಣ ಎಂದರೆ

೯೦–೯೫ ಲಕ್ಷ ರೂಪಾಯಿಗಳಷ್ಟು ರಫ್ತಾಗುತ್ತಿವೆಯೆಂದರೆ ಇದರಿಂದ ದನದ ಮೇವಿಗೂ ಗೊಬ್ಬರಕ್ಕೂ ಎಷ್ಟು ನಷ್ಟವೆಂಬುದನ್ನು ಊಹಿಸಬಹುದು. ನೆಲಗಡಲೆಯೊಂದೇ ಐವತ್ತು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ರಫ್ತಾಗುತ್ತಿದೆ. ಹರಳಿನ ರಫ್ತು ರೂ. ೧ ಲಕ್ಷಕ್ಕೆ ಮೀರಿದೆ. ಒಳದೇಶದಲ್ಲಿ ಎಣ್ಣೆಯ ಯಂತ್ರಗಳಲ್ಲಿ ಈಗಿಗಿಂತ ಹೆಚ್ಚಾಗಿ ಎಣ್ಣೆ ತೆಗೆಯುವ ಏರ್ಪಾಡು ನಡೆದರೆ ಹೊರಗಿಂದ ತರಿಸಿಕೊಳ್ಳುವ ಎಣ್ಣೆಯ ಪ್ರಮಾಣ ಕಡಮೆಯಾಗುವುದರ ಜೊತೆಗೆ ದನಕ್ಕೆ ಮೇವೂ ಭೂಮಿಗೆ ಗೊಬ್ಬರವೂ ದೊರೆಯುವಂತಾಗುವುದು. ಆದರೆ ದೇಶದಲ್ಲಿ ಜನರೂ ಕೈಗಾರಿಕೆಗಳವರೂ ಬಿತ್ತದ ಎಣ್ಣೆಗಳನ್ನು ಹೆಚ್ಚಾಗಿ ಉಪಯೋಗಿಸಲು ಆರಂಭಿಸಿದ ಹೊರತು ಇಂಥ ಯಂತ್ರದ ಗಾಣಗಳನ್ನು ಅನೇಕವಾಗಿ ಸ್ಥಾಪಿಸಲು ಅವಕಾಶವಿಲ್ಲ.

ಇಲ್ಲಿನ ಎಲುಬನ್ನು ವಿದೇಶಗಳಿಗೂ ನೆರೆಯ ಪ್ರಾಂತಗಳಿಗೂ ರಫ್ತು ಮಾಡಿ ಅಲ್ಲಿಂದ ಎಲುಬಿನ ಗೊಬ್ಬರವನ್ನು ತರಿಸಿಕೊಳ್ಳುವುದರಿಂದಲೂ ಹೀಗೇ. *

ಉಪಯೋಗ, ಪ್ರಯತ್ನ

ಹಳ್ಳಿಗಳ ತಿಪ್ಪೆಯ ಗೊಬ್ಬರದ ಸಾರವನ್ನು ಹೆಚ್ಚಿಸುವ ಪ್ರಯತ್ನವೂ ಬಹಳವಾಗಿ ನಡೆಯಬೇಕು. ಅಮೇಧ್ಯದ ಗೊಬ್ಬರದ ಉಪಯೋಗ ಪಟ್ಟಣಗಳ ಸುತ್ತುಮುತ್ತಿನ ತರಕಾರಿ, ಹಣ್ಣು ತೋಟಗಳವರಿಗೆ ತಿಳಿದಿರುವಂತೆ ಇತರರಿಗೆ ತಿಳಿದಿಲ್ಲ. ರಾಸಾಯನಿಕ ಗೊಬ್ಬರಗಳ ಕರೀದಿ ಇಳಿದಷ್ಟೂ ಅವುಗಳ ಪ್ರಯೋಜಕತೆಯು ತಿಳಿವು ಜನರಲ್ಲಿ ಹಬ್ಬಿದಷ್ಟೂ ಹಿಂಡಿ ಹಸುರುಗಳ ಪ್ರಯೋಗ ಜಾಸ್ತಿಯಾದಷ್ಟೂ ದೇಶದ ಗೊಬ್ಬರಗಳ ಪ್ರಯೋಜನ ಮೇಲಾಗುವುದು.

ಈಗ ಬೀಡಾಗಿರುವ ಪ್ರದೇಶಗಳಲ್ಲಿಯೂ ಗೋಮಾಳಗಳಲ್ಲಿಯೂ ನದಿ ನಾಲೆಗಳ ದಡದಲ್ಲಿಯೂ ಹೊಂಗೆಯ ಮರಗಳನ್ನು ನೆಡುವುದರಿಂದಲೂ ಪ್ರಯೋಜನವುಂಟು.

ಉಪಯೋಗ ಸಂಖ್ಯೆ

ದನ ಕರು — ಉಳುಮೆಗೂ, ಕಣದ ಕೆಲಸಕ್ಕೂ, ಸಂಚಾರಕ್ಕೂ ಹಾಲು, ಮೊಸರು, ತುಪ್ಪ ಮಾಂಸ ಮುಂತಾದ ಆಹಾರಗಳನ್ನೊದಗಿಸು

* ಈಗ ವರ್ಷಕ್ಕೆ ಸುಮಾರು ಮೂರುವರೆ ಲಕ್ಷ ರೂಪಾಯಿಗಳ ಬೆಲೆ ಬಾಳುವ ಗೊಬ್ಬರವನ್ನು ನಾವು ಆಮದು ಮಾಡಿಕೊಳ್ಳುತ್ತಿದ್ದೇವೆ.

ವುದಕ್ಕೂ, ಗೊಬ್ಬರಕ್ಕೂ ದನಗಳ ಉಪಯೋಗ ಬಹಳ. ಮೊತ್ತದಲ್ಲಿ ನೋಡಿದರೆ ಆಡುಗಳ ಸಂಖ್ಯೆ ಒಂದನ್ನು ಉಳಿದು ಮಿಕ್ಕ ದನಗಳ ಸಂಖ್ಯೆ ಲಕ್ಷಾಂತರ ಕಟ್ಟಳೆ ಕಡಮೆಯಾಗುತ್ತಿದೆ. ೧೯೨೨-೨೪ ರಲ್ಲಿ ಬಂದ ನೀರು ಮೇವುಗಳ ಬರದಲ್ಲಿ ದನದ ಸಾವು ಮಿತಿಮೀರಿತು. ಸತ್ತವುಗಳಲ್ಲಿ ಮರಿ ಕರುಗಳೇ ಹೆಚ್ಚು. ದನದ ಮೇವಿನ ವಿಷಯದಲ್ಲಿ ನಮ್ಮ ಜನರಿಗೆ ಅಸಡ್ಡೆ. ಅವುಗಳ ಶಕ್ತಿಯೂ ಬಹುಮಟ್ಟಿಗೆ ಕಡಮೆ. ಇತರ ದೇಶಗಳಲ್ಲಿ ಒಣ ಮೇವನ್ನೂ ಇತರ ಆಹಾರಗಳನ್ನೂ, ಶೇಖರಿಸಿಡುವ ಹಾಗೆ ನಮ್ಮ ದೇಶದಲ್ಲಿ ಮಾಡರು; ಮೇವಿಗಾಗಿಯೇ ಬೆಳೆಗಳನ್ನು ಬೆಳಸುವ ವಾಡಿಕೆ ಇಲ್ಲ. ಮಳೆಗಾಲದಲ್ಲಿ ಸಿಕ್ಕುವ ಸ್ವಲ್ಪ ಹಸುರು ಗ್ರಾಸವನ್ನು ಬಿಟ್ಟರೆ ಉಳಿದ ಕಾಲದಲ್ಲಿ ದನಕ್ಕೆ ಹುಲ್ಲು ನೀರಿಗೆ ತೊಂದರೆ. ದೇಹ ಪುಷ್ಟಿಯಿಲ್ಲದೆ ರೋಗಗಳಿಗೆ ತುತ್ತಾಗಿ ಅವು ಬಹು ಸಂಖ್ಯೆಯಲ್ಲಿ ಸಾಯುವುವು.

ಹಾಲಿನ ತಳಿಗಳು

ನಾಡಿನ ಹಸುಗಳೂ ಎಮ್ಮೆಗಳೂ ಹೆಚ್ಚಾಗಿ ಹಾಲು ಕರೆಯುವ ತಳಿಗಳಲ್ಲ. ಸಿಂಧಿ ವಿಲಾಯತಿ, ಮತ್ತು ಬೆರಕೆ ಜಾತಿಯ ಹಸುಗಳನ್ನು ಕಟ್ಟಿ ಆರೈಕೆ ಮಾಡುತ್ತಿರುವುದರಿಂದ ಹಾಲು ಬೆಣ್ಣೆಗಳು ಈಗ ಪಟ್ಟಣಗಳಲ್ಲಿ ಒದಗುತ್ತಿವೆ. ಧಾರವಾಡ ಮತ್ತು ಅಹಮ್ಮದಾಬಾದಿನ ಎಮ್ಮೆಗಳೂ ಇದೇ ಪ್ರಯೋಜನಕ್ಕಾಗಿ ದೇಶದೊಳಕ್ಕೆ ಬರುತ್ತಿವೆ.

ಎತ್ತುಗಳು

ಹೆಚ್ಚು ಪುಷ್ಟವಲ್ಲದ ನಾಡಿನ ಎತ್ತುಗಳಿಂದಲೇ ಈಗ ವ್ಯವಸಾಯದ ಕೆಲಸಗಳೆಲ್ಲ ನಡೆಯಬೇಕು. ಉತ್ತಮ ಜಾತಿಯ ಅಮೃತಮಹಲ್ ಮತ್ತು ಮಹದೇಶ್ವರ ಬೆಟ್ಟದ ಎತ್ತುಗಳು ಲೋಕ ಪ್ರಸಿದ್ಧವಾದರೂ ಅವುಗಳನ್ನು ನಾಡಿನಲ್ಲಿ ಉಪಯೋಗಿಸುವುದು ವಿರಳ. ಸಂತೆ, ಜಾತ್ರೆ, ಪರಿಸೆಗಳ ಕಾಲದಲ್ಲಿ ಈ ಎತ್ತುಗಳ ಮಾರಾಟ ನಡೆದು ವರ್ಷಕ್ಕೆ ಸುಮಾರು ೧-೧½ ಕೋಟಿ ರೂಪಾಯಿ ಬೆಲೆಯ ಎತ್ತುಗಳು ಬೇರೆ ಪ್ರಾಂತಗಳಿಗೆ ಸಾಗುವುವು.

ಕುರಿ ಉಣ್ಣೆ

ಮೈಸೂರು ದೇಶದ ಕುರಿಗಳೂ, ಅವುಗಳ ಉಣ್ಣೆಯೂ ದಕ್ಷಿಣ ದೇಶದವುಗಳಿಗಿಂತ ಮೇಲ್ತರದವು. ಮಂಡ್ಯ, ದಾವಣಗೆರೆ, ಕೋಲಾರ ಹುಣಸೂರು

ಈ ಪ್ರಾಂತದ ಕುರಿಗಳೂ ಉಣ್ಣೆಯೂ ಉತ್ತಮವಾದವು. ಕುರಿಗಳ ಗೊಬ್ಬರದಿಂದ ಮೆಣಸಿನಕಾಯಿ ಮತ್ತು ಕಾಫೀ ತೋಟಗಳಿಗೆ ಗೊಬ್ಬರ ದೊರೆಯುತ್ತದೆ.

ಮೇಕೆ

ಮೇಕೆಗಳ ಮಂದೆಗಳೂ ಅನೇಕ ಕಡೆ ಇವೆ. ಸುತ್ತಲ ಹಸುರನ್ನೆಲ್ಲಾ ಅವು ನಾಶಮಾಡಿದರೂ ಮಾಲೀಕರಿಗೆ ಅವುಗಳ ಮಾರಾಟದಿಂದ ಹಣ ಬರುವುದು. ಮೇಕೆಗಳ ಚರ್ಮಕ್ಕೆ ಇಂಗ್ಲಂಡ್ ಅಮೇರಿಕಾಗಳ ಗಿರಾಕಿ ಬಹಳವಾಗಿದೆ. ಕಷ್ಟ ಕಾಲದಲ್ಲಿ ರೈತನಿಗೆ ಇವುಗಳ ಮಾರಾಟದಿಂದ ಹಣ ಬರುವುದು.

ಹಂದಿಗಳು

ಹಂದಿಗಳ ಸಂಖ್ಯೆ ಹೆಚ್ಚಾಗಿಲ್ಲ. ಅವುಗಳನ್ನು ಕಾಪಾಡುವವರು ಬಡವರು. ಅವರಿಗೆ ಗೊತ್ತಾದ ಊರು ನೆಲೆ ಕೂಡ ಇಲ್ಲ.

ಎಲ್ಲೆಲ್ಲಿಯೂ ದನಕರುಗಳ ಮೇವು ನೀರುಗಳಿಗೆ ವಸತಿ ಕಲ್ಪಿಸಿ ಅವುಗಳನ್ನು ಸಾಕುವುದರಲ್ಲಿ ಹೆಚ್ಚು ಶ್ರದ್ಧೆಯಿಂದ ಕೆಲಸ ನಡೆದರೆ ಎಲ್ಲಾ ಜಾತಿಯ ದನ, ಕುರಿ, ಕೋಳಿಗಳ ಸಂಖ್ಯೆಯೂ ಹೆಚ್ಚುವುದಲ್ಲದೆ ವ್ಯವಸಾಯಕ್ಕೂ ಜನರ ಆಹಾರಕ್ಕೂ ಸಂಪಾದನೆಗೂ ಬಲುಮಟ್ಟಿಗೆ ಸಹಾಯವಾಗುವುದು.

ದನಗಳ ಜಾತಿ ಪರಿಷ್ಕರಣ

ಇತರ ದೇಶಗಳಲ್ಲಿ ರಾಸುಗಳನ್ನು ತಯಾರಿಸಲು ಉತ್ತಮವಾದ ಗೂಳಿಗಳನ್ನು ಇಟ್ಟು ಆ ಮೂಲಕ ಶ್ರೇಷ್ಠವಾದ ಹೋರಿಗಳನ್ನೂ ಹಸುಗಳನ್ನೂ ಉತ್ಪತ್ತಿ ಮಾಡುವರು. ಹುಲುಸಾಗಿ ಉಣ್ಣೆ ಹೊರುವಂತೆಯೋ ಮಾಂಸಬಲಿಸುವಂತೆಯೋ ಮಾತ್ರ ಕುರಿಗಳ ಜಾತಿಯನ್ನು ಮೇಲ್ಗೈಸುವರು. ಹಂದಿಗಳ ಪೋಷಣೆಯೂ ಹಾಗೆಯೇ. ಕೋಳಿಗಳಲ್ಲಿ ಜಾತಿಗಳನ್ನು ಉತ್ತಮಗೊಳಿಸಿ ಮೊಟ್ಟೆ ಕೋಳಿ ಮುಂತಾದವನ್ನು ಆಹಾರಕ್ಕಾಗಿ ಒದಗಿಸುವುದೂ ಅನೇಕಕಡೆ ಅತಿ ಲಾಭಕರವಾದ ಕೈಗಾರಿಕೆಯಾಗಬಲ್ಲದು.

ವ್ಯವಸಾಯದ ಉಪಕರಣಗಳು

ಸ್ಥಿತಿ

ರೈತರು ಉಪಯೋಗಿಸುವ ವ್ಯವಸಾಯದ ಮುಟ್ಟುಗಳೂ ಆಯುಧಗಳೂ ಅತಿ ಸಾಮಾನ್ಯವಾದವು. ಅವುಗಳನ್ನು ಈಗಿಗೂ ಹಳ್ಳಿಗಳಲ್ಲಿಯೇ ಮಾಡಿಕೊಳ್ಳುವರು ; ಅವಕ್ಕೆ ಬೆಲೆ ಬಹಳವಿಲ್ಲ. ಕೆಟ್ಟರೆ, ಮುರಿದರೆ ಊರೊಳಗೇ ಅವನ್ನು ಕುಲುಮೆಗಳಲ್ಲಿಯೂ ಬಡಗಿಗಳಿಂದಲೂ ಸರಿಮಾಡಿಸಿಕೊಳ್ಳಬಹುದು. ನೇಗಿಲು, ಕುಂಟೆ, ಕೂರಿಗೆ, ಎಲ್ಲಾ ನಾಡು ಆಯುಧಗಳು. ಗೆಂಟೆ ಹೊಡೆಯುವುದು, ಬೀಜದ ಕಾಳನ್ನು ಚೆಲ್ಲುವುದು, ಕಳೆ ಕೀಳುವುದು ಬೆಳೆ ಕುಯ್ಯುವುದು ಮುಂತಾದವನ್ನು ಸಾಧಾರಣ ಕುಂಟೆ, ಗುದ್ದಲಿ, ಕುಡುಗೋಲುಗಳ ಮೂಲಕವೇ ಮಾಡುವರು. ಬಡಿಗೋಲುಗಳಿಂದಲೂ, ಉರುಳುಗುಂಡುಗಳಿಂದಲೂ, ತಾಳಿನ ಕಂತೆಯನ್ನೆತ್ತಿ ನೆಲಕ್ಕಪ್ಪಳಿಸಿ ಬಡಿಯುವುದರಿಂದಲೂ ಎತ್ತುಗಳಿಂದ ತುಳಿಸುವುದರಿಂದಲೂ ತಾಳಿಂದ ಕಾಳನ್ನು ಬೇರೆ ಮಾಡುವರು. ಕಾಳು ಬೆರಕೆಯಾಗುವುದನ್ನು ನೋಡದೆ ಒಂದೇ ಕಣದಲ್ಲಿ ಕಾಳೊಣಗಿಸಿ ಕಣಜಗಳಲ್ಲಿಯೋ ಹಗೇವುಗಳಲ್ಲಿಯೋ ತುಂಬಿಡುವರು. ಬೀಜದ ಕಾಳನ್ನು ಹುಲ್ಲಿನ ಮೂಟೆಗಳಲ್ಲಿ ಕಟ್ಟಿಡುವರು.

ಬತ್ತದ ಗದ್ದೆಗಳನ್ನು ಸಣ್ಣ ತುಕಡಿಗಳಾಗಿ ವಿಭಾಗಿಸಿ ಪಯಿರುಗಳನ್ನು ಕೈಯಲ್ಲೆತ್ತಿ ನೆಡುವರು. ಕಬ್ಬಿನ ಗಾಣಗಳು ಸಣ್ಣವು ; ಆಲೆಮನೆಗಳಲ್ಲಿ ಕಬ್ಬಿಂದ ಹಿಂಡಬಹುದಾದ ಎಲ್ಲ ಹಾಲನ್ನೂ ತೆಗೆಯಲು ನಾಡು ಗಾಣಗಳಿಂದ ಸಾಧ್ಯವಿಲ್ಲ. ಒಲೆಯಲ್ಲಿ ಉರಿ ನಷ್ಟವಾಗುವುದು. ಹಾಲು ಕಾಯಿಸುವ ಕೊಪ್ಪರಿಗೆಗಳೂ ಹಳೆಯ ತೆರದವು. ಹಾಲು ಕಾಯುವಾಗ ಕೊಪ್ಪರಿಗೆ ಹಾರಾ ತೆಗೆದೇ ಇರುತ್ತವೆ. ನೀರನ್ನು ಬಾವಿಗಳಿಂದ ಮೇಲಕ್ಕೆ ಎತ್ತಲು ಬಾನೆಗಳೂ ಸಾಮಾನ್ಯವಾದ ಏತ, ಕಪಿಲೆಗಳೂ ಉಪಯೋಗವಾಗುವುವು. ಈಗ ಈಗ ಹೊಸ ಬಗೆಯ ನೇಗಿಲು, ಕುಂಟೆ, ಕೂರಿಗೆ, ಕಬ್ಬಿನಗಾಣ, ಎಣ್ಣೆ ಅಥವಾ ವಿದ್ಯುಚ್ಛಕ್ತಿಯಿಂದ ಚಾಲಿತವಾದ ನೀರೆತ್ತುವ ಪಂಪು, ಇತರ ವ್ಯವಸಾಯದ ಮುಟ್ಟುಗಳು ಬಳಕೆಗೆ ಬರುತ್ತಿವೆ.

ಫಲ

ಇವುಗಳಿಂದ ಕೆಲಸವೇನೊ ತಕ್ಕಮಟ್ಟಿಗೆ ನಡೆದರೂ ಕಾಲವೂ ಶ್ರಮವೂ ಬಹುವಾಗಿ ನಷ್ಟವಾಗುವುವು. ಕೆಲಸದಲ್ಲಿ ಬಹು ಭಾಗ ಕೆಟ್ಟು ಹಾಳಾಗುವುದು. ರೈತನು ಹೆಚ್ಚು ವಿಸ್ತಾರವಾದ ಭೂಮಿಯಲ್ಲಿ ಜಾಗ್ರತೆ ಕೆಲಸ ಮಾಡಲು ಅನುಕೂಲಿಸುವಂತೆ ಶ್ರಮವನ್ನು ಕಡಮೆ ಮಾಡುವ ನೇಗಿಲು ಮುಂತಾದವನ್ನೂ ಹೊಸ ಬಗೆಯ ಯಂತ್ರಗಳನ್ನೂ ಉಪಯೋಗಿಸುವುದು ಅಗತ್ಯ.

ವ್ಯವಸಾಯದ ಅಭಿವೃದ್ಧಿ ಪರೀಕ್ಷೆಗಳು

ಈಗ ಇಲ್ಲಿನ ವ್ಯವಸಾಯು ಮೇಲಾಗಿದೆಯೆ ? ಎಂಬುದನ್ನು ತಿಳಿಯಲು

(೧) ಬೇಸಾಯಕ್ಕೆ ಬರಬಹುದಾದ ಭೂಮಿಯಲ್ಲವೂ ಬೇಸಾಯಕ್ಕೆ ಬಂದಿದೆಯೆ ?

(೨) ಸಾಗುವಳಿಯಲ್ಲಿರುವ ಭೂಮಿಯು ಬೆಳಸು ಎಷ್ಟು ಆಗಬಹುದೊ ಅಷ್ಟು ಆಗುತ್ತಿದೆಯೆ ?

(೩) ರೈತನ ಕೈಗೆ ಬರಬಹುದಾದಷ್ಟು ಹಣ ಬರುತ್ತಿದೆಯೆ ?

ಎಂಬ ಮೂರು ಪ್ರಶ್ನೆಗಳನ್ನು ಕೇಳಬಹುದು.

ಯೋಗ್ಯವಾದ ಭೂಮಿಯೆಲ್ಲ ಸಾಗುವಳಿಗೆ ಬಂದಿದೆಯೆ ?

(೧) ಇಲ್ಲ. ಸುಮಾರು ಆರುವರೆ ಲಕ್ಷ ಎಕರೆ ಭೂಮಿ ಎಂದರೆ ಈಗ ಸಾಗುವಳಿಯಾಗಿರುವುದರಲ್ಲಿ ಶೇಕಡ ಹತ್ತರಷ್ಟು ಭೂಮಿ ಇನ್ನೂ ವ್ಯವಸಾಯಕ್ಕೆ ಬಂದಿಲ್ಲ. ಕಬೂಲಿ ಬಂಜರಾಗಿ ವರ್ಷೇ ವರ್ಷೇ ನಿಲ್ಲುವ ಭೂಮಿಯನ್ನು ಎಣಿಸಿದರೆ ಸುಮಾರು ೨೩ ಲಕ್ಷ ಎಕರೆಯಷ್ಟು ಎಂದರೆ ಒಟ್ಟು ಕೃಷಿಯಾಗಬಲ್ಲ ಭೂಮಿಯ ನಾಲ್ಕನೆ ಒಂದು ಭಾಗ ಸಾಗುವಳಿಯಾಗದೆ ನಿಲ್ಲುವುದು. ಇದೂ ಅಲ್ಲದೆ ಬೆಟ್ಟಗಳ ಇಳಿಜಾರುಗಳಲ್ಲಿಯೂ ಕಾಫೀ, ಟೀ, ರಬ್ಬರ್, ಮುಂತಾದವುಗಳನ್ನು ಬೆಳೆಯಲು ಯೋಗ್ಯವಾದ ತಗ್ಗು ಭೂಮಿಗಳಲ್ಲಿಯೂ, ಈಗ ಅಮೃತಮಹಲ್ ಕಾವಲುಗಳಾಗಿಯೂ ಈಚಲ ತೋಪುಗಳ ರೂಪದಲ್ಲಿಯೂ ಇರುವ ಭೂಮಿಯಲ್ಲಿಯೂ ಕಾಡೆಂದು ಹೆಸರಿರುವ ಕೆಲವು ಪ್ರದೇಶಗಳಲ್ಲಿಯೂ ವ್ಯವಸಾಯಕ್ಕೆ ಅನುವಾದ ಪ್ರದೇಶಗಳು ಇನ್ನೂ ಇವೆ. ಆದರೆ ರೈತರು ತಮ್ಮ ಹಳ್ಳಿಗಳಿಗೆ

ಹತ್ತಿರವಿದ್ದರೂ ಬೇರೆ ಪ್ರದೇಶಗಳಿಗೆ ಹೋಗಿ ಬೇಸಾಯ ಮಾಡಲು ಒಪ್ಪರು ; ಹೀಗಿರುವಾಗ ಈ ಭೂಮಿಗಳಲ್ಲಿ ಹೋಗಿ ನೆಲಸುವವರು ಯಾರು ?

ಅನೇಕ ಕಡೆ ಮಲೆನಾಡು ಪ್ರಾಂತದಲ್ಲಿ ಕಾಫೀ, ಟೀ ತೋಟಗಳನ್ನೂ ಮೈದಾನ ಪ್ರಾಂತದಲ್ಲಿ ಮಾವು, ತೆಂಗು, ಹುಣಿಸೆ, ಹೊಂಗೆ, ಹಲಸು ಬೆಳೆಯುವ ಕಡೆ ಸರುವೆ ಮುಂತಾದ ಸಂತತವಾಗಿ ಫಲಬಿಡುವ, ಬೆಲೆ ತರುವ ಗಿಡಗಳನ್ನು ನೆಡಬಹುದು. ರೈತರ ಸಹಾಯ ಎಲ್ಲ ಕಾಲದಲ್ಲಿಯೂ ದೊರೆಯುದೆ ಇರುವ ಪ್ರದೇಶಗಳಲ್ಲಿ ಈ ಕಾರ್ಯ ಖಂಡಿತವಾಗಿ ಬಹು ಪ್ರಯೋಜನವನ್ನು ತರಬಲ್ಲದು.

ಪರಮಾವಧಿ ಬೆಳಸು ಬರುತ್ತಿದೆಯೆ ?

(೨) ಭೂಮಿಗಳಲ್ಲಿ ಬೆಳಸೂ ಪರಮಾವಧಿ ಬರುತ್ತಿಲ್ಲ. ಈ ಸಂಬಂಧಲ್ಲಿ ಮಾಡಬೇಕಾದ ಕೆಲಸ ಬೇಕಾದಷ್ಟು ಉಳಿದಿದೆ. ಹೆಚ್ಚು ನೀರಾವರಿ ವಸತಿ ಕಲ್ಪಿತವಾದರೆ ಬೇಕು ಬೇಕಾದ ಬೆಳಸುಗಳನ್ನು ತೆಗೆಯಬಹುದು. ಈಗಿರುವ ಕೆರೆಗಳನ್ನು ಉತ್ತಮಗೊಳಿಸಬೇಕು ; ಅವಕ್ಕೆ ನೀರೊದಗಿಸುವ ನಾಲೆ ಕಾಲುವೆಗಳನ್ನು ಕ್ರಮಪಡಿಸಬೇಕು ; ಕೆರೆಯ ಅಂಗಳವನ್ನು ಇನ್ನೂ ಆಳವಾಗಿ ತೋಡಿ ಸರಿಯಾಗಿಡಬೇಕು. ನೀರು ತುಂಬಿದ ಕೆರೆಗಳಿಂದ ಹರಿಯುವ ನೀರು ಸುತ್ತಲೂ ಎಲ್ಲ ಭೂಮಿಗೂ ಸರಿಯಾಗಿ ಹಂಚುವಂತೆ ಏರ್ಪಾಡಾಗಬೇಕು. ಸ್ವತಂತ್ರವಾಗಿ ದೊಡ್ಡ ಬಾವಿಗಳನ್ನು ತೋಡಲು ಪ್ರೋತ್ಸಾಹವೂ ಸಹಾಯವೂ ಬೇಕು ; ನಾಲೆಗಳೂ ನೀರೆತ್ತುವ ಪಂಪುಗಳೂ ವ್ಯವಸಾಯಕ್ಕೆ ಹೆಚ್ಚು ನೆರವೀಯುವಂತೆ ಮಾಡಿಕೊಳ್ಳಬೇಕು.

ಸರ್ಕಾರದವರ ಗಮನ ಈ ಕಡೆ ಬಹುಮಟ್ಟಿಗೆ ಇದೆ ಎನ್ನಬಹುದು : ಭದ್ರಾ ನಾಲೆಗಳಲ್ಲಿ ವ್ಯವಸಾಯ ವಸತಿ ಕಲ್ಪನೆಯೂ, ಅರ್ವಿನ್ ನಾಲೆಯ ಕೆಲಸವೂ, ನಡೆದಿವೆ. ಬಾವಿ ತೋಡುವುದು, ಕಂತಿನ ಮೇರೆಗೆ ತಕಾವಿ ಸಾಲ ಕೊಡುವುದು, ವಿದ್ಯುಚ್ಛಕ್ತಿ ಒದಗಿಸುವುದು, ಕೆರೆಯ ಪಂಚಾಯಿತಿ ವ್ಯವಸ್ಥೆ, ಬಾವಿ ಕೊರೆಯುವ ಯಂತ್ರಗಳ ಸಹಾಯ, ಇವೇ ಇದಕ್ಕೆ ನಿದರ್ಶನಗಳು. ಸರ್ಕಾರದಿಂದ ಹಣವನ್ನು ಕೇಳದೆ, ಯಾರ ಹಂಗಿಗೂ ಬೀಳದೆ ಆಯಾ ಭಾಗದ ಜನರೇ ಕಲೆತು ಕೆಲಸಮಾಡಿಕೊಂಡರೆ ಮಣ್ಣನ್ನು ಹೊನ್ನು ಮಾಡಿಕೊಳ್ಳಬಹುದೆಂಬುದನ್ನು ಯಾರೂ ಮರೆಯಕೂಡದು.

ಉತ್ತಮವಾದ ಗೊಬ್ಬರ ಹಾಕುವುದರಿಂದಲೂ, ಸಸಿಗಳಿಗೆ ಅಂಟುವ ರೋಗಗಳನ್ನೂ ಪೀಡೆಗಳನ್ನೂ ದೂರ ಮಾಡಿ ಒಳ್ಳೆಯ ಬೀಜಗಳನ್ನು ನಟ್ಟು ಎಚ್ಚರಿಕೆಯಿಂದ ಮಾಡುವ ಬೇಸಾಯದಿಂದಲೂ ಹೆಚ್ಚು ಲಾಭ ಬಲ್ಲದು.

ರೈತನಿಗೆ ಹೆಚ್ಚು ಸಂಪಾದನೆ ಬರುವುದೆ ?

(೩) ರೈತನ ಶ್ರಮಕ್ಕೆ ಅಧಿಕ ಪ್ರಯೋಜನ ದೊರೆಯುವಂತೆ ಅವನು ಬೇಸಾಯ ಮಾಡುವನೆ ? ಉತ್ಪತ್ತಿಯನ್ನು ಹದಕ್ಕೆ ತರುವನೆ ? ಭೂಮಿಗೆ ಹೊಂದುವ ಬೆಳೆಗಳನ್ನು ಬೆಳೆಯುವನೆ ? ಎಂದರೆ, ವ್ಯವಸಾಯದ ವೆಚ್ಚಗಳನ್ನು ಇಳಿಸಿಕೊಂಡು, ಬರಬಹದಾದ ಲಾಭವನ್ನು ಹೆಚ್ಚಿಸಿಕೊಳ್ಳುವ ಕಾರ್ಯವಿಧಾನಗಳನ್ನು ಅನುಸರಿಸುವುದು ; ಹಣದ ಬೆಳೆಗಳನ್ನು ಹೆಚ್ಚು ಮಾಡಿಕೊಳ್ಳುವುದು ; ಹೊಗೆಸೊಪ್ಪು, ಅಡಕೆ, ಕಾಫೀ, ಏಲಕ್ಕಿ ಮುಂತಾದ ವನ್ನು ಹದ ಮಾಡುವುದು ; ಬೆಣ್ಣೆ ತಯಾರಿಸುವುದು ; ಒಳ್ಳೆಯ ಜಾತಿಯು ಕಾಳು ಪಯಿರುಗಳನ್ನು ಪ್ರತ್ಯೇಕವಾಗಿ ಇರಿಸಿ ಕಾಪಾಡುವುದು ; ಮಾರಾಟ ದಲ್ಲಿ ಹೆಚ್ಚುಕರೀದಿ ತರುವಂತೆ, ತರುವಕಡೆಗೆ, ಕಳುಹಿಸಿ ಮಾರುವುದು ; ಪದಾರ್ಥಗಳನ್ನು ಹಸನ್‌ವಾರ್ ವಿಂಗಡಿಸಿ ಒಂದು ಗೊತ್ತಾದ ಕೇಂದ್ರ ದಿಂದ ಮಾರುವುದು, ಮುಂತಾದವು ಅತ್ಯಾವಶ್ಯಕ. ಬತ್ತದ ಪಯಿರುಗಳನ್ನು ಸರಿಯಾಗಿ ನೆಡುವುದು, ಕಬ್ಬನ್ನು ಹೆಚ್ಚು ವಿಶಾಲವಾದ ಸಾಲುಗಳಲ್ಲಿ ಹೂಳು ವುದು ; ಮೇಲ್ತರದ ಗಾಣಗಳಲ್ಲಿ ರಸ ಹಿಂಡುವುದು ; ಮುಚ್ಚಳವಿ ರುವ ಕೊಪ್ಪರಿಗೆಗಳಲ್ಲಿ ಕಬ್ಬಿನಹಾಲು ಕಾಯಿಸುವುದು ; ಬೆಲ್ಲ ಒಣಗಲು ಮೇಲಾದ ವಿಧಾನಗಳನ್ನು ಅನುಸರಿಸುವುದು ; ಕೆಲಸದ ವೆಚ್ಚವನ್ನು ಕಡಮೆ ಮಾಡಿಕೊಂಡು ಫಸಲನ್ನೂ ಲಾಭವನ್ನೂ ಹೆಚ್ಚಿಸಿಕೊಳ್ಳುವುದು ; ಹಿಪ್ಪಲಿ ನೇರಳೆ, ನೆಲಗಡಲೆ, ಹಣ್ಣು, ತರಕಾರಿ ಮುಂತಾದವನ್ನು ಬೆಳೆಯುವ ಭೂಮಿಯನ್ನು ವಿಸ್ತರಿಸುವುದು; ಮುಖ್ಯೋದ್ಯೋಗದ ಜೊತೆಗೆ ದನಕರು ಗಳನ್ನೂ ಕುರಿಯ ಹಿಂಡುಗಳನ್ನೂ ಸಾಕುವುದು ; ಉತ್ತಮವಾದ ಹೋರಿ ಗಳನ್ನು ಬೆಳಸಿ ಒದಗಿಸುವುದು ; ನೂಲುವುದು ; ಬುಟ್ಟಿ ಚಾಪೆ ಹೆಣೆಯು ವಿಕೆ ; ಕೋಳಿ ಸಾಕುವಿಕೆ, ಜೇನು ಕೂಡಿಸುವಿಕೆ ಮುಂತಾದ ಉಪ ವೃತ್ತಿ ಗಳಲ್ಲಿ ತೊಡಗುವುದು ; ದನದ ಮೇವಿಗಾಗಿಯೇ ಬೆಳಸು ಬೆಳೆದು ಅದನ್ನು ಸಂಗ್ರಹಿಸುವುದು ; ಹುಲ್ಲುಗಾವಲನ್ನು ಕಾಪಾಡಿ ಹಸುರು ಮೇವಿಗೆ

ಅನುಕೂಲ ಮಾಡಿಕೊಳ್ಳುವುದು ; ದನಕರುಗಳಿಗೆ ಅಂಟುವ ದೊಡ್ಡ ರೋಗ ಮುಂತಾದವನ್ನು ತಪ್ಪಿಸಿ ಅವುಗಳನ್ನು ರಕ್ಷಿಸುವುದು ; ಭೂಮಿಯ ಕೆಲಸವಿಲ್ಲದ ಕಾಲದಲ್ಲಿ ನೆರೆಯ ಗಿರಣಿಗಳಲ್ಲಿ ಕೆಲಸ ಮಾಡುವುದು ; ರಸ್ತೆ ಹಾಕುವುದು, ಇಟ್ಟಿಗೆ ಮಾಡುವುದು, ಈ ನಾನಾ ಕೆಲಸಗಳನ್ನು ತಮ್ಮ ಶಕ್ತಿಗೆ ತಕ್ಕಂತೆ ಮಾಡಿ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಬಹುದು. ಯಜಮಾನರು ಖುಷಿಗೆ ಬಂದಂತೆ ಅವರನ್ನು ಭೂಮಿಯಿಂದ ಓಡಿಸದಂತೆಯೂ ಸಾಹುಕಾರರು ಅರಿಯದ ರೈತರಿಂದ ಅತಿಯಾಗಿ ಬಡ್ಡಿ ಹೀರದಂತೆಯೂ ಕಾನೂನು ಏರ್ಪಟ್ಟು, ಅಲ್ಲಲ್ಲಿ ವ್ಯವಸಾಯದ ಬ್ಯಾಂಕುಗಳ, ಪರಸ್ಪರ ಸಹಾಯ ಸಂಘಗಳ, ವ್ಯವಸಾಯ ಶಾಖೆಯ ನೆರವೂ ದೊರೆತರೆ ರೈತರ ಉಪಪತ್ತಿ ಹೆಚ್ಚಲು ಅವಕಾಶವಾಗುತ್ತದೆ.

ರೀತಿಗಳು

ವ್ಯವಸಾಯದ ಇಲಾಖೆಯವರ ಪ್ರಯತ್ನದಿಂದ ಒಳ್ಳೆಯ ಬಿತ್ತನೆಯ ಕಾಳು ಅನೇಕ ಕಡೆ ದೊರೆಯುತ್ತವೆ. ಆದರೆ ರೈತರ ವ್ಯವಸಾಯ ಪದ್ಧತಿಗಳಿಂದ ಅವರು ಪಡೆಯಬಹುದಾಗಿರುವಷ್ಟು ಪ್ರಯೋಜನವನ್ನು ಪಡೆಯುತ್ತಿಲ್ಲ. ಸರ್ಕಾರದವರೂ ಡಿಸ್ಟ್ರಿಕ್ಟ್ ಮಂಡಲಿಗಳವರೂ ಆಗಾಗ್ಗೆ ನಡಸುತ್ತಿರುವ ಪ್ರದರ್ಶನಗಳಲ್ಲಿ ಆರಿಸಿದ ಬಿತ್ತ, ಸಾರವತ್ತಾದ ಗೊಬ್ಬರ, ಮೇಲ್ತರನಾದ ಕೃಷಿಯ ರೀತಿ, ಯಂತ್ರಗಳು, ಶಾಸ್ತ್ರ ವಿಧಾನದಿಂದ ಬರುವ ಹೆಚ್ಚು ಬೆಳಸು ಮುಂತಾದ್ದರ ತಿಳಿವು — ಇವು ಜನರಲ್ಲಿ ಹೆಚ್ಚುವಂತೆ ಏರ್ಪಾಡು ನಡೆಯುತ್ತದೆ. ತಮಗೆ ಲಾಭವೆಂದು ಕಂಡುಬಂದ ವಿಧಾನಗಳನ್ನು ಅನುಸರಿಸಲು ರೈತರೂ ಸಾಮಾನ್ಯವಾಗಿ ಹಿಂತೆಗೆಯುವುದಿಲ್ಲ. ಆದರೆ ಬಡತನದ ಕಾರಣದಿಂದ ಹೆಚ್ಚು ಬಂಡವಾಳವನ್ನು ಹಾಕಲು ಶಕ್ತಿಯಿಲ್ಲದೆ ಭೂಮಿಯ ಬೆಳಸನ್ನು ಹೆಚ್ಚಿಸಲಾರದೆ ಇದ್ದಾರೆ. ಗ್ರಹಚಾರವಶಾತ್ ವೆಚ್ಚ ಮಾಡಿದ ಹಣಕ್ಕೆ ತಕ್ಕಷ್ಟು ಬೆಳೆ ಬಾರದೆ ನಷ್ಟವಾದರೆ ಅವುಗಳನ್ನು ಪುನಃ ಮುಟ್ಟುವುದಕ್ಕೂ ಕೂಡ ಹಿಂಜರಿಯುವರು. ಎಂಥ ಒಳ್ಳೆಯ ವರ್ಷಗಳಲ್ಲಿಯೂ ರೈತರ ಜೀವನ ಕಷ್ಟ. ಕಂದಾಯ ಕವಳಿಗೆ, ಬಿತ್ತನೆ, ಗೊಬ್ಬರದ ಖರ್ಚು ಇವೆಲ್ಲಾ ಕಳೆದು ಉಳಿಯುವುದು ಬಹು ಸ್ವಲ್ಪ. ಈಗಿರುವ ಹಾಗೆ ದೊಡ್ಡ ರೈತರಿಗೆ ಕೂಡ ಕೈಗಾರಿಕೆ ವ್ಯಾಪಾರಗಳಿಂದ ಬರುವಷ್ಟು ಲಾಭ ವ್ಯವಸಾಯದಿಂದ, ಬರುವುದಿಲ್ಲ. ರೈತರ ಸಾಲಗಾರಿಕೆ ಶೋಚನೀಯವಾಗಿದೆ.

ರೇಷ್ಮೆ

ಸಾಮಾನ್ಯ ವಿಷಯಗಳು

ಭರತಖಂಡದಲ್ಲಿ ಉತ್ಪತ್ತಿಯಾಗುವ ಒಟ್ಟು ರೇಷ್ಮೆಯಲ್ಲಿ ಬಹು ಭಾಗ ಮೈಸೂರಿನಲ್ಲಿ ತಯಾರಾಗುವುದು. ಈಗ ಸುಮಾರು ೪೦,೦೦೦ ಎಕರೆ ಭೂಮಿಯಲ್ಲಿ ಹಿಪ್ಪಲಿ ನೇರಿಳೆಯನ್ನು (ಕಂಬಳಿ ಸೊಪ್ಪು) ಬೆಳೆಯುತ್ತಾರೆ. ಈ ವ್ಯವಸಾಯದಿಂದ ಎರಡು ಲಕ್ಷ ಸಂಸಾರಗಳಿಗೆ ಮೇಲ್ಪಟ್ಟು ಜೀವನ ನಡೆಯುತ್ತದೆ. ನಮ್ಮ ರೇಷ್ಮೆಯ ಹುಳು ಆ ಜಾತಿಯ ಹುಳುಗಳಲ್ಲಿ ಉತ್ತಮವಾದುವು. ಇಲ್ಲಿನ ಭೂಮಿ, ವಾಯು ಗುಣ, ಸ್ಥಳೀಯ ಸನ್ನಿವೇಶ ಇವು ರೇಷ್ಮೆಯ ಕೈಗಾರಿಕೆಗೆ ಚೆನ್ನಾಗಿ ಒಗ್ಗುವುವು. ಮಲೆನಾಡು ಪ್ರಾಂತಗಳಾದ ಶಿವಮೊಗ್ಗ, ಹಾಸನ, ಕಡೂರು, ಮೈಸೂರಿನ ಬೆಟ್ಟಭಾಗ ಇವುಗಳನ್ನು ಬಿಟ್ಟು ಉಳಿದ ಪ್ರದೇಶಗಳಲ್ಲೆಲ್ಲ ಈ ವ್ಯವಸಾಯ ನಡೆಯಬಲ್ಲದು.

ಮೈಸೂರಿನ ರೇಷ್ಮೆ ಹುಳು

ನಮ್ಮ ರೇಷ್ಮೆ ಹೊಳಪಾಗಿ ಸುಮಾರು ಹಳದಿಯಾಗಿರುವುದು. ಹುಳು ದೃಢಕಾಯವಾಗಿರುವುದರಿಂದ ಕಾಯಿಲೆಗಳನ್ನು ತಡೆಯ ಬಲ್ಲದು. ಆದರೆ ಬೇಗ ಬಲಿಯದು. ತಿಂಡಿಗೆ ತಕ್ಕಷ್ಟು ದಾರ ಕೊಡುವುದಿಲ್ಲ! ಎರೀ ಜಾತಿಯ ಹುಳು ೧೪–೧೫ ದಿನಗಳಲ್ಲಿ ಗೂಡು ಕಟ್ಟಿದರೆ ಇದಕ್ಕೆ ೪೦ ದಿನ ಅಥವಾ ೬ ವಾರ ಬೇಕು. ಇದಕ್ಕೆ ಕಂಬಳಿ ಎಲೆಯೇ ಬೇಕು. ಎರೀ ಹುಳು ಹರಳೆಲೆಯನ್ನು ತಿಂದು ಬೆಳೆಯಬಲ್ಲವು. ದನಗಳು ಹರಳೆಲೆಯನ್ನು ಹೆಚ್ಚಾಗಿ ತಿನ್ನವಾದ್ದರಿಂದ ಹೊಸದಾಗಿ ರೇಷ್ಮೆಯ ಕೆಲಸವನ್ನು ಆರಂಭಿಸುವಲ್ಲಿ ಎರೀ ಹುಳುವನ್ನೇ ಸಾಕಬಹುದಾಗಿವೆ. ಅದೂ ಅಲ್ಲದೆ ಹುಳುವನ್ನು ಬೇಯಿಸಿ ಕೊಲ್ಲಬೇಕಾದುದರಿಂದ ಸಾಧಾರಣವಾಗಿ ಈ ವೃತ್ತಿಗೆ ಕೈಹಾಕದ ಅನೇಕ ಹಿಂದೂ ಪಂಗಡಗಳವರು ರೇಷ್ಮೆಯ ಉತ್ಪತ್ತಿಯಲ್ಲಿ ತೊಡಗಲು ಅವಕಾಶವಾಗುವುದು. ಗೂಡುಗಳನ್ನು ಒಡೆದು ಮೂಟೆ ಕಟ್ಟಿ ವಿದೇಶಗಳಿಗಾಗಲಿ ಇಲ್ಲಿಯೇ ಸ್ಥಾಪಿತವಾಗಬಹುದಾದ ಕಾರ್ಖಾನೆಗಳಿಗಾಗಲಿ ನೂಲುವುದಕ್ಕೆ ಕಳುಹಿಸಬಹುದು. ಭೂವ್ಯವಸಾಯವೂ, ರೇಷ್ಮೆಯ ಬೆಳೆಯೂ ನಮ್ಮಲ್ಲಿ

ಪರಸ್ಪರ ಸಹಾಯಕಗಳು. ರೇಷ್ಮೆ ಹುಳು ಸಾಕುವುದು ಅನೇಕರಿಗೆ ಉಪ ವೃತ್ತಿ; ಚಿಕ್ಕಬಳ್ಳಾಪುರ, ಚೆನ್ನಪಟ್ಟಣ, ಚಾಮರಾಜನಗರ ಪ್ರಾಂತಗಳಲ್ಲಿ ಅನೇಕರ ಮುಖ್ಯೋದ್ಯೋಗ.

ಈ ಕೈಗಾರಿಕೆಗೆ ಬೇಕಾಗುವ ಎಲ್ಲ ಮೂಲ ವಸ್ತುಗಳೂ ಎಂದರೆ ಕಂಬಳಿ ಸೊಪ್ಪು, ರೇಷ್ಮೆಯಹುಳು, ಇವು ಇಲ್ಲೇ ಬೇಕಾದಷ್ಟು ದೊರೆಯುತ್ತವೆ. ಬಹುಕಾಲದಿಂದಲೂ ಜನರಿಗೆ ಈ ಕೆಲಸದಲ್ಲಿ ಅನುಭವವಿದೆ; ಕುಶಲತೆಯಿದೆ. ರೇಷ್ಮೆಗೆ ಪೇಟೆಯಲ್ಲಿ ಗಿರಾಕಿ ಇದೆ. ಹತ್ತಿ ನೂಲುವ ಕೆಲಸಕ್ಕಿಂತಲೂ ಇದರಲ್ಲಿ ಲಾಭ ಹೆಚ್ಚು. ಖರ್ಚು ಕಳೆದು ವರ್ಷಕ್ಕೆ ಸುಮಾರು ರೂ. ೧೦೦ ಗಳಿಗೆ ಕಡಮೆಯಿಲ್ಲದಂತೆ ಹಣ 'ಗಿಟ್ಟು' ವುದೆನ್ನು ವರು. ಇದಕ್ಕಾಗಿ ಹೂಡಬೇಕಾದ ಮೂಲಧನವೂ ಅಲ್ಪ. ಈ ವೃತ್ತಿ ವ್ಯವಸಾಯಕ್ಕೆ ಉಪವೃತ್ತಿಯಾಗಬಲ್ಲುದು. ಸಮಾಜದ ಕಟ್ಟಿಗೆ ಒಳಪಟ್ಟು ಮನೆಯಿಂದ ಹೊರಗೆ ಹೋಗಿ ಕೆಲಸ ಮಾಡಲು ಅನುಕೂಲವಿಲ್ಲದಿರುವ ಹೆಂಗಸರು ಒಳಗೇ ಕುಳಿತು ಕೆಲಸ ಮಾಡಲು ಅವಕಾಶವಿದೆ. ಸುಮಾರು ನಮ್ಮ ಎಲ್ಲ ಭೂಮಿಗಳಲ್ಲಿಯೂ ಕಂಬಳಿ ಸೊಪ್ಪನ್ನು ಬೆಳೆಯುವುದು ಸಾಧ್ಯ. ಹೀಗೆ ಈ ಕೈಗಾರಿಕೆಯ ಬೆಳವಣಿಗೆಗೆ ಬೇಕಾಗುವ ಎಲ್ಲ ಸೌಲಭ್ಯಗಳೂ ಇಲ್ಲಿ ಇವೆಯೆನ್ನಬೇಕು. ಚೀಣಾ ಜಪಾನ್ ದೇಶಗಳಲ್ಲಿ ರೇಷ್ಮೆಯ ಕೈಗಾರಿಕೆ ಊರ್ಜಿತವಾಗಿರುವುದಕ್ಕೂ ಈ ಕಾರಣಗಳೇ ಮುಖ್ಯ.

ಎಲ್ಲಿ, ಭೂಮಿ ಇತರ ಬೆಳೆಗಳಿಗಿಂತಲೂ ಹೆಚ್ಚಾಗಿ ಹಿಪ್ಪಲಿ ನೇರಿಳೆಗೆ ಹೊಂದುವುದೊ; ಆಹಾರ ಪದಾರ್ಥಗಳನ್ನು ಬೆಳೆಯುವ ಭೂ ವ್ಯವಸಾಯದಿಂದ ಬರುವ ಹಣ ಜನರ ಪೋಷಣೆಗೆ ಎಲ್ಲಿ ಸಾಕಾಗದೆ, ಜಾಗ್ರತೆ ಹಣ ತರುವ ಯಾವುದಾದರೂ ಉಪವೃತ್ತಿಯಿಂದ ಪೋಷಣೆ ನಡೆಯಬೇಕಾಗಿದೆಯೊ; ಪೇಟೆ ಪಟ್ಟಣ ಎಲ್ಲಿ ಹತ್ತಿರವಿರುವುವೊ; ಎಲ್ಲಿ ಇತರ ಮುಖ್ಯ ಕೈಗಾರಿಕೆಗಳು ನಡೆಯುತ್ತಾ ಇದಕ್ಕೆ ಬರಬಹುದಾದ ಜನರನ್ನು ಅವು ಆಕರ್ಷಿಸುವುದಿಲ್ಲವೊ — ಅಂಥ ಕಡೆಗಳಲ್ಲಿ ಈ ಕೈಗಾರಿಕೆ ಬಹಳ ಲಾಭತರುತ್ತದೆ.

ಸರ್ಕಾರದವರು ರೇಷ್ಮೆಗೇ ಒಂದು ಇಲಾಖೆಯನ್ನು ಸ್ಥಾಪಿಸಿ ಅದರ ಅಭಿವೃದ್ಧಿಗಾಗಿ ಶ್ರಮಪಡುತ್ತಿದ್ದಾರೆ. ದೇಶದ ಸ್ಥಿತಿಯಲ್ಲಿ ಇದು ಎಷ್ಟು ಪ್ರವರ್ಧಮಾನವಾಗಬಹುದಾಗಿತ್ತೊ ಅಷ್ಟು ಆಗದೆ ಆಗಾಗ್ಗೆ ಕಷ್ಟನಷ್ಟ

ಗಳು ಆಗುತ್ತಿದ್ದುದಕ್ಕೆ ಇಲಾಖೆಯವರು ಕಾರಣಗಳನ್ನು ಕಂಡು ಹಿಡಿದು ಅವುಗಳನ್ನು ನಿವಾರಿಸಲು ಪ್ರಯತ್ನ ಪಟ್ಟಿದ್ದಾರೆ.

(೧) ಕೆಟ್ಟ ಬಿತ್ತಗಳ ಪ್ರಭಾವ; ಅಥವಾ ಸಾಕಾದಷ್ಟು ಬಿತ್ತವಿಲ್ಲದಿರುವುದು ;

(೨) ಬೆಳಸುವುದರಲ್ಲಿಯೂ ದಾರ ತೆಗೆಯುವುದರಲ್ಲಿಯೂ ದೋಷಗಳು ;

(೩) ಕೊಳ್ಳಾಟ ಮಾರಾಟಗಳಲ್ಲಿ ನ್ಯೂನತೆ ;

(೪) ರೈತನ ಬಂಡವಾಳ ಬಹು ಕಡಮೆಯಾಗಿ ನಷ್ಟವುಂಟಾದಾಗ ಅವನಿಗೆ ಚೇತರಿಸಿಕೊಳ್ಳುವ ಶಕ್ತಿಯಿಲ್ಲದಿರುವುದು ;—ಇವೇ ಮೇಲೆ ಹೇಳಿದ ಕಾರಣಗಳು.

ಈ ದೋಷಗಳನ್ನು ನಿವಾರಿಸುವುದಕ್ಕಾಗಿ ಇಲಾಖೆಯವರು ಸ್ಥೂಲವಾಗಿ ಮೂರು ವಿಧದಲ್ಲಿ ಎಂದರೆ (೧) ಕಂಬಳಿ ಸೊಪ್ಪಿನ ವ್ಯವಸಾಯ ಮತ್ತು ಹುಳು ಸಾಕುವುದು, (೨) ರೋಗವಿಲ್ಲದ ಹುಳುಗಳ ಉತ್ಪತ್ತಿ, (೩) ರೇಷ್ಮೆಯ ತಯಾರಿಕೆ ಮತ್ತು ಮಾರಾಟ—ಈ ಬಾಬುಗಳಲ್ಲಿ ಸಹಾಯ ಮಾಡುತ್ತ ಜ್ಞಾನ ಪ್ರಸಾರಣ ಕಾರ್ಯವನ್ನೂ ಕೈಗಾರಿಕೆ ಹರಡುವ ಪ್ರಯತ್ನವನ್ನೂ ಮಾಡುತ್ತಿದ್ದಾರೆ. ಉತ್ತಮವಾದ ಹಿಪ್ಪಲಿ ನೇರಿಳೆಯ ಅಂಟುಗಳನ್ನು ಒದಗಿಸುವರು ; ರೋಗರಹಿತವಾದ ಬೀಜದ ಹುಳುಗಳನ್ನು ಉತ್ಪತ್ತಿಮಾಡಿ ಒದಗಿಸುವರು ; ಜಾಗ್ರತೆಯಾಗಿಯೂ ಹೆಚ್ಚಾಗಿಯೂ ರೇಷ್ಮೆಯಿಡುವ ಮೊಟ್ಟೆಗಳನ್ನು ತಯಾರಿಸಿ ರೈತರಿಗೆ ಮಾರುವರು ; ಹುಳುಗಳಿಗೆ ತಗಲುವ ಜಾಡ್ಯಗಳು ಸೇರದಂತೆ ಸೋಂಕು ಹರಿಸುವ ದ್ರಾವಕಗಳನ್ನು ಒದಗಿಸುವರು ; ಆಗಾಗ್ಗೆ ರೇಷ್ಮೆ ಪ್ರದರ್ಶನಗಳನ್ನು ಏರ್ಪಡಿಸಿ ಜನರಲ್ಲಿ ಕಾರ್ಯ ರೀತಿಗಳ ತಿಳಿವಳಿಕೆಯನ್ನು ಹರಡುವರು. ಬಂಡವಾಳ ಕಡಮೆಯಾದ ಕೃಷಿಕರಿಗೆ ಸಾಲಕೊಟ್ಟು ಕೆಲಸಮಾಡಿಸುವರು ; ಇದಕ್ಕೇ ಪ್ರತ್ಯೇಕವಾದ ಪರಸ್ಪರ ಸಹಾಯ ಸಂಘಗಳನ್ನು ಸ್ಥಾಪಿಸಲು ನೆರವೀಯುವರು ; ನಮ್ಮ ರೇಷ್ಮೆ ಜನರ ಬಳಕೆಗೂ ಪ್ರೀತಿಗೂ ಬರುವಂತೆ ಪ್ರಕಟನಾ ಕಾರ್ಯಗಳನ್ನು ಮಾಡುತ್ತಾ, ದಾರ ಸುತ್ತುವ ಹೊಸ ರೀತಿಯನ್ನು ತೋರಿಸುವರು. ಚೀಣಾ ಜಪಾನ್ ಕಡೆಗಳಿಂದ ಆಮದಾಗಿಬರುವ ರೇಷ್ಮೆ ನಮ್ಮದಕ್ಕಿಂತಲೂ ಕೀಳು. ಆದರೂ ಒಂದೇ ಸಮವಾದ, ಗಂಟಿಲ್ಲದ

ನೂಲನ್ನು ಆ ದೇಶಗಳವರು ಮಾರಾಟಕ್ಕೆ ಕಳುಹಿಸುತ್ತಿರುವುದರಿಂದ ನಮ್ಮ ಗಿರಾಕಿಗಳಾಗಿದ್ದವರು ನಮ್ಮನ್ನು ತೊರೆಯುತ್ತಿರುವುದು ಈ ಕಾರಣ ದಿಂದಲೇ ಎಂದು ನಿರ್ಧರಿಸಿ, (The Mysore Domestic Basin) ಎಂಬ ಸಮವಾದ ನೂಲು ರೂಡಿಸುವ ಯಂತ್ರವನ್ನು ತಯಾರಿಸಿರುವರು ; ಅದು ಎಲ್ಲರ ಬಳಕೆಗೂ ಬರುವಂತೆ ಕಿರು ಬೆಲೆಗೆ ಮಾರುವ ಏರ್ಪಾಡು ಮಾಡಿರುವರು ; ಕಚ್ಚಾ ರೇಷ್ಮೆಯ ಕಾರ್ಖಾನೆಯೊಂದನ್ನು ನಡಸಲು ನೆರ ವಿತ್ತಿರುವರು. ನಮ್ಮ ರೇಷ್ಮೆಗೆ ಯಾವ ಪ್ರದೇಶಗಳಿಂದ ಗಿರಾಕಿಬರಬಹು ದೆಂಬುದನ್ನು ಕಂಡು ಹಿಡಿದು ಅಲ್ಲಿ ಮಾರಾಟ ಹೆಚ್ಚುವ ಪ್ರಯತ್ನಗಳನ್ನು ಕೈಕೊಂಡಿರುವರು. ಈ ಕೈಗಾರಿಕೆಯ ಲಕ್ಷಣವನ್ನೂ ಕೆಲಸವನ್ನೂ ಕಲಿ ಸುವ ಶಾಲೆಗಳನ್ನು ಏರ್ಪಡಿಸಿ ವಿದ್ಯಾದಾನ ಮಾಡುವುದರ ಜೊತೆಗೆ ವಿದೇಶ ಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸಿ ಅಲ್ಲಿನ ಮೇಲ್ತರದ ವಿಧಾನಗಳನ್ನು ತಿಳಿ ದುಬರಲು ಹಣ ಸಹಾಯ ಮಾಡುತ್ತಿರುವರು.

ಮುಂದಿನ ನೋಟ

ಈ ಪ್ರಯತ್ನಗಳೆಲ್ಲವೂ ಫಲಿಸಿ ಕೈಗಾರಿಕೆ ದಕ್ಷತೆಯಿಂದ ನಡೆದರೆ ಒಂದಕ್ಕೆ ನಾಲ್ಕೈದರಷ್ಟು ರೇಷ್ಮೆಯನ್ನಾದರೂ ತೆಗೆಯುವುದು ಸಾಧ್ಯ. ಈಗ ಪೋಲಾಗುತ್ತಿರುವ ಸಾಮಾಗ್ರಿಗಳನ್ನು ಹೂಡಿ ಉಪ ಕೈಗಾರಿಕೆಗಳನ್ನು ನಡಸಬಹುದು. ಇದಲ್ಲದೆ ಒಳದೇಶದಲ್ಲಿಯೂ ಸುತ್ತಮುತ್ತಲ ಪ್ರಾಂತ ದಲ್ಲಿಯೂ ಕೋರಾ ರೇಷ್ಮೆಗೂ ಬೇಕಾದಷ್ಟು ಗಿರಾಕಿಯಿದೆ. ಇಂಡಿಯಾ ದೇಶಕ್ಕೆ ಈಗ ರೇಷ್ಮೆ ಮತ್ತು ಅನುಕರಣದ (ಖೋಟಾ) ರೇಷ್ಮೆಗಳು ನೂಲಿನ ರೂಪದಲ್ಲಿಯೂ ಬಟ್ಟೆಗಳ ರೂಪದಲ್ಲಿಯೂ (ಬಟ್ಟೆಗಳೇ ಸುಮಾರು ಎರಡು ಕೋಟಿ ಗಜ) ಸುಮಾರು ಎರಡು ಕೋಟಿ ರೂಪಾಯಿಗಳಷ್ಟಕ್ಕೆ ಮಿಾರಿ ಆಮದಾಗುತ್ತಿವೆ. ಅದರಲ್ಲಿ ಬಹು ಭಾಗವನ್ನು ನಮ್ಮ ದೇಶವೇ ಒದಗಿಸಬಲ್ಲದು.

ಗಿರಾಕಿ

ನಮ್ಮ ರೇಷ್ಮೆ ಎಷ್ಟು ಒರಟಾಗಿದ್ದರೂ ಅಗ್ಗವಾಗಿದ್ದುದರಿಂದ ಈಗ್ಗೆ ಕೆಲವು ವರ್ಷಗಳವರೆಗೂ ದಕ್ಷಿಣ ದೇಶದ ಗಿರಾಕಿಯೆಲ್ಲಾ ನಮಗಿತ್ತು, ಈಗ ಹೊರದೇಶಗಳಿಂದ ಕಣ್ಣಿಗೆ ಅಂದವಾದ ವಿದೇಶಿ ರೇಷ್ಮೆಗಳೂ

ಬೂಟಾ ರೇಷ್ಮೆಗಳೂ ಬಂದು ನಮ್ಮನ್ನು ಹಿಂದೆ ಮಾಡಿವೆ. ಕೃತಕ ರೇಷ್ಮೆ ಕೀಳು; ನಿಜ. ಆದರೆ ಶುದ್ಧವಾದ ರೇಷ್ಮೆ ನಯವಾಗಿರಬೇಕು. ಅನೇಕರಿಗೆ ನಿಜವಾದ ರೇಷ್ಮೆಗೆ ಬೆಲೆ ಕೊಡಲು ಶಕ್ತಿ ಇಲ್ಲದೆ ಕೃತಕ ರೇಷ್ಮೆಗೆ ಗಿರಾಕಿ ಹೆಚ್ಚಿರುವುದೂ ಸ್ವಾಭಾವಿಕವೇ. ಹಿಂದೆ ಡಾಕಾದಲ್ಲಿ ಯಂತ್ರಗಳಿಂದ ತಯಾರಾದ ವಿದೇಶಿ ನೂಲನ್ನು ತರಿಸಿಕೊಂಡು ಮಸ್ಲಿನ್ ಬಟ್ಟೆಗೆ ಬೇಕಾದ ನೂಲು ನೂಲುವುದನ್ನು ಜನರು ಬಿಡಲು ಆ ಕೈಗಾರಿಕೆ ಹೇಗೆ ನಾಶವಾಯಿತೋ ಅದೇ ರೀತಿ ನಮ್ಮ ರೇಷ್ಮೆಗೂ ತೊಂದರೆ ಬಂದೀತು. ಸಾಚಾ ರೇಷ್ಮೆಯನ್ನೇ ಉಪಯೋಗಿಸುತ್ತಿದ್ದ ಎಷ್ಟೊ ಮಗ್ಗಗಳು ಈಗ ಕೃತಕ ರೇಷ್ಮೆಯ ನೂಲನ್ನೇ, ಹೊರದೇಶದ ನೂಲನ್ನೇ, ತರಿಸಿಕೊಳ್ಳುತ್ತ ಪೇಟೆಯಲ್ಲಿ ಅವುಗಳ ಮಾದಾಟವೇ ಹೆಚ್ಚುವ ಚಿಹ್ನೆಗಳು ಪ್ರಬಲವಾಗುತ್ತಿವೆ. ಒಂದು ಕಡೆ ಮಳೆ ನೀರಿನ ತೊಂದರೆಯಿಂದ ಕಂಬಳಿಗಿಡ ಬೆಳೆಯದೆ ಹುಳು ಸಾಯುವುದರ ಜೊತೆಗೆ ಇನ್ನೊಂದು ಕಡೆ ನೂತ ನೂಲಿಗೆ ತಕ್ಕ ಬೆಲೆ ದೊರೆಯದಾದರೆ ನಷ್ಟ ಸಂಭವಿಸದೆ ಏನಾದೀತು?

ಇತರರ ಪೈಪೋಟಿ

ಯಂತ್ರ ವಿದ್ಯೆಯಲ್ಲಿಯೂ ಕೆಲಸದ ಕುಶಲತೆಯಲ್ಲಿಯೂ ಮುಂದುವರಿದಿರುವ ಫ್ರಾನ್ಸ್, ಜರ್ಮನಿ, ಇಟಲಿ ಮುಂತಾದ ರಾಷ್ಟ್ರಗಳು ಕೃತಕ ರೇಷ್ಮೆಯ ಉತ್ಪತ್ತಿಯನ್ನು ಹೆಚ್ಚಿಸುವ, ಉತ್ತಮಗೊಳಿಸುವ, ಅಗ್ಗವಾಗಿ ಮಾರಿಸುವ ಯತ್ನದಲ್ಲಿ ತೊಡಗಿವೆಯೆಂದರೆ ಅದರಿಂದ ಸಾಚಾ ರೇಷ್ಮೆಯ ವ್ಯಾಪಾರಕ್ಕೆ ಆಗಬಹುದಾದ ಕೇಡನ್ನು ಊಹಿಸಬಹುದು. ನಮ್ಮ ರೇಷ್ಮೆಯನ್ನು ಉತ್ತಮಗೊಳಿಸಿ ಮಾರಿದರೆ ಯಾವ ಪೈಪೋಟಿಯಿಂದಲೂ ನಮಗೆ ತೊಂದರೆಬಾರದು. ಆದರೆ ನಮ್ಮ ಕೈಗಾರಿಕೆ ಹಳ್ಳಿಗಳ ಸಣ್ಣ ಸಣ್ಣ ಗುಡಿಸಿಲುಗಳಲ್ಲಿ ಬಡರೈತರ ಕೈವೃತ್ತಿಯಾಗಿರುವುದು; ಎಷ್ಟಕ್ಕೆ ಗಿರಾಕಿ ಬಿದ್ದರೆ ಅಷ್ಟನ್ನು ಅತ್ಯಲ್ಪಕಾಲದಲ್ಲಿ ಒಂದೇ ಸಮನಾಗಿ ಸಮರ್ಪಕವಾಗಿ ತಯಾರಿಸುವ ಯೋಗ್ಯತೆ ನಮ್ಮವರಿಗೆ ಇನ್ನೂ ಇಲ್ಲ. ನಮ್ಮ ರೇಷ್ಮೆ ದೃಢವಾದುದಾದರೂ ಒರಟು. ಅದಕ್ಕೆ ಬೆಲೆ ಹೆಚ್ಚುಮಾಡಿ ಕಣ್ಣನ್ನು ಮೋಹಿಸುವ ಬಣ್ಣ ಹಾಕುವ ಕಸುಬುಗಳು ವೃದ್ಧಿಯಾಗಿಲ್ಲ. ಹೊಸ ವಿಧಾನದ ತಿಳಿವಳಿಕೆಗಳಿಗೆ ಹೊಂದಿಕೊಳ್ಳುವ ಶಕ್ತಿ ನಮ್ಮ ರೈತರಿಗೆ ಕಡಮೆ. ಸಾವಿರಾರು ಎಕರೆ

ಒಟ್ಟು ಭೂಮಿಯಲ್ಲಿ ಹಿಪ್ಪಲಿನೇರಿಳೆ ಬೆಳೆದು ಲಕ್ಷಾಂತರ ಮಣ ತೂಕದ ರೇಷ್ಮೆಯನ್ನು ಉತ್ಪತ್ತಿಮಾಡಿ ಮಾರಲು ಬಂಡವಾಳವಾಗಲಿ ಕಾರ್ಯರಚನಾ ವ್ಯವಸ್ಥೆಯಾಗಲಿ ಕಾಣಿಸದು. ಕೇಡಿನ ಹೆದರಿಕೆ ಬಹಳ. ಒಂದು ಸಲ ನಷ್ಟಪಟ್ಟ ರೈತರನ್ನು ಪುನಃ ಈ ವೃತ್ತಿಗೆ ತಿರುಗಿಸುವುದು ಕಷ್ಟ.

ಈ ಕೈಗಾರಿಕೆ ಬಹುಮಟ್ಟಿಗೆ ಜನರ ಸೂಕ್ಷ್ಮ ಶಕ್ತಿಗಳನ್ನೂ, ಎಚ್ಚರಿಕೆ, ನಿಪುಣತೆಗಳನ್ನೂ, ಬೆಳಸುವುದಾದುದರಿಂದ ಇದರಿಂದ ಅವರ ದೃಷ್ಟಿಶಕ್ತಿ, ಕೈಚಳಕ, ಅನುಭವ, ತಿಳಿವಳಿಕೆ ಎಲ್ಲವೂ ಹೆಚ್ಚಿ ಅವರ ಬುದ್ಧಿ ಹರಿತವಾಗುವುದು. ಇದೊಂದು ದೊಡ್ಡ ಮನಶ್ಶಿಕ್ಷಣದ ಉಪಾಯವೆನ್ನಲೂ ಬಹುದು.

ಸರಕಾರದ ಮೂಲಕ ರಕ್ಷಣೆ

ನಮ್ಮ ಸರ್ಕಾರದವರು ಬ್ರಿಟಿಷ್ ಸರಕಾರ್ರದವರ ಅಪ್ಪಣೆ ಪಡೆದು ವಿದೇಶಿ ರೇಷ್ಮೆಯಿಂದ ನಮ್ಮ ಕೈಗಾರಿಕೆಗೆ ನಷ್ಟತಟ್ಟದಂತೆ ಅವುಗಳ ಮೇಲೆ ಆಮದು ತೆರಿಗೆಯನ್ನು ಹಾಕಿ ಅವುಗಳ ಪೈಪೋಟಿಯ ದುಷ್ಫಲಗಳಿಂದ ಇದನ್ನು ರಕ್ಷಿಸಿದ ಹೊರತು ಇತರ ಎಲ್ಲ ಪ್ರಯತ್ನಗಳೂ ವ್ಯರ್ಥವಾಗುವುವು.

೩. ಕಾಫಿ, ಟೀ, ರಬ್ಬರು

ಕಾಫೀ ಬೆಳೆ, ಕೂಲಿ

ಮೈಸೂರಿನ ಕಾಫೀ ಬೆಳೆ ಪ್ರಖ್ಯಾತವಾದುದು. ಅದರಿಂದ ಸಂಸ್ಥಾನಕ್ಕೆ ಬಹಳ ಲಾಭವಿದೆ. ಸರಾಸರಿ ೩೦,೦೦೦ ಮಣ ಕಾಫೀ ಎಂದರೆ ೧೭–೧೮ ಲಕ್ಷ ರೂಪಾಯಿಗಳ ಬೆಲೆ ಬಾಳುವ ಕಾಫೀ ರೈಲುಗಳ ಮೂಲಕ ಹೊರದೇಶಗಳಿಗೆ ಇಲ್ಲಿಂದ ರಫ್ತಾಗುವುದು. ಈ ಬೆಳೆಗೆ ಬೇಕಾಗುವ ಕೆಲಸಗಾರರು ಬಹುವಾಗಿ ನೆರೆಯ ಪ್ರಾಂತಗಳವರು. ದಕ್ಷಿಣ ಕನ್ನಡ, ಉತ್ತರ ಆರ್ಕಾಟು, ವೆಲ್ಲೂರು ಮುಂತಾದ ಭಾಗಗಳಿಂದ ಬರುವವರೇ ಶೇಕಡ ೮೦ ಜನ *

---

* ಅಲ್ಲಿಗೂ ಬೇಕಾಗಿರುವಷ್ಟು ಜನರೆಲ್ಲರೂ ಬರುತ್ತಿಲ್ಲ. ಹೊರಗಡೆ ಹೆಚ್ಚು ಕೂಲಿ ಸಿಕ್ಕುವ ಉದ್ಯೋಗಗಳಿವೆ; ಮೈಸೂರಿನ ಹೊರಗೆ ಇತರ ದೊಡ್ಡ ಕೆಲಸಗಳು ನಡೆಯುತ್ತಿರುವುವು; ಮಂಗಳೂರು, ಮಲಪೆ, ಹಂಗರಕಟ್ಟೆ ಮುಂತಾದ ಪಶ್ಚಿಮ ತೀರಪಟ್ಟಣಗಳಲ್ಲಿ ಮೀನಿನ ಕೆಲಸ ವೃದ್ಧಿಯಾಗುತ್ತಿದೆ; ತಿರುವಾಂಕೋಡು, ಸಿಲಾನ್, ಮಲಯ ಪ್ರಾಂತಗಳಲ್ಲಿನ ಟೀ, ರಬ್ಬರ್, ಕೈಗಾರಿಕೆಗಳಲ್ಲಿ ಹೆಚ್ಚು ಕೂಲಿ ಸಿಕ್ಕುವುದು. ಈ ಕಾರಣಗಳಿಂದ ಕಾಫೀ ಬೆಳೆಗೆ ಹೊರಗಿಂದ ಕೂಲಿಯವರು ಬರುವುದು ಕಡಮೆಯಾಗುತ್ತಿದೆ.

ಯೂರೋಪಿಯನ್ ಪ್ಲಾಂಟರುಗಳ ಕೈಯೊಳಗಿನ ತೋಟಗಳ ಸರಾಸರಿ ಬೆಲೆ ಹೆಚ್ಚು. ಅವರ ಬೆಳೆಯೂ ವ್ಯಾಪಾರದ ಲಾಭಗಳೂ ಹೆಚ್ಚು. ಅವರು ಬಂಡವಾಳಸ್ಥರು. ಎಷ್ಟು ಹಣ ಬೇಕಾದರೂ ಸುಲಭವಾಗಿ ತಾವೇ ಒದಗಿಸಿಕೊಳ್ಳಬಲ್ಲರು. ಆದರೆ ಬೆಳೆಯುವುದನ್ನೆಲ್ಲಾ ಇಂಗ್ಲಂಡಿಗೆ ರಫ್ತು ಮಾಡುತ್ತಾರೆ. ನಮ್ಮ ತೋಟಗಳವರು ಅನೇಕರು ತಮಗೆ ಬೇಕಾದ ಹಣವನ್ನೆಲ್ಲಾ ಸಾಹುಕಾಗರಿಂದಲೂ, ಮಾರವಾಡಿ ಗುಜರಾತಿ ಸೇಟುಗಳಿಂದಲೂ ಪಾಶ್ಚಾತ್ಯ ಕಂಪನಿಗಳಿಂದಲೂ ಮೈಸೂರು ಬ್ಯಾಂಕಿನಿಂದಲೂ—ಕೆಲವು ವೇಳೆ ಶೇಕಡ ೧೦—೧೫ ರಂತೆ ಬಡ್ಡಿ ತೆತ್ತು—ಒದಗಿಸಿಕೊಳ್ಳಬೇಕಾಗುವುದೆನ್ನುವರು.

ಮೈಸೂರು ಕಾಫೀ ಉತ್ತಮವಾದುದಾದರೂ ಅದಕ್ಕೆ ವಿದೇಶಿ ಪೇಟೆಗಳಲ್ಲಿ ಹೆಸರಿಲ್ಲ. ಇಲ್ಲಿನ ಕಾಫೀ ಬಿತ್ತವೆಲ್ಲ ಮಂಗಳೂರಿಗೆ ಸಾಗಿ ಅಲ್ಲಿ ಹದವಾಗಿ ಹೊರ ಪೇಟೆಗಳಿಗೆ ರಫ್ತಾಗುವುದರಿಂದ ಮಂಗಳೂರು ಕಾಫೀ ಎಂದೇ ಅದಕ್ಕೆ ಹೆಸರು. ಬಿತ್ತವನ್ನು ಹದ ಮಾಡಿ ಮಾರಾಟಕ್ಕೆ ಸಿದ್ಧಗೊಳಿಸುವ ಗಿರಣಿಗಳು ಸಂಸ್ಥಾನದಲ್ಲಿಯೇ ಸ್ಥಾಪಿತವಾದರೆ ಒಂದು ಹೊಸ ಕಸುಬು ಇಲ್ಲಿ ಏರ್ಪಡುವುದಲ್ಲದೆ, ಅದರ ಲಾಭಗಳೂ ಇಲ್ಲಿಯೇ ಉಳಿದು ನಮ್ಮ ಕಾಫೀಗೆ ಪೇಟೆಯಲ್ಲಿ ಹೆಸರೂ ಸ್ಥಾನವೂ ಸಿಕ್ಕುವುವು.

ಕಾಫೀ ಬೆಳೆಯಿಂದ ಇತರ ಕಿರು ಕಸುಬುಗಳಿಗೆ ಆಶ್ರಯ ದೊರೆತಿದೆ. ಇದಕ್ಕೆ ಸುಣ್ಣವೂ ಗೊಬ್ಬರವೂ ಬಹಳವಾಗಿ ಬೇಕು. ಚಾಪೆ, ಬುಟ್ಟಿ ಕೂಲಿಯವರ ಕಂಬಳಿ, ವ್ಯವಸಾಯದ ಮುಟ್ಟುಗಳು, ಗೋಣಿಯ ಚೀಲ, ಹಗ್ಗ ಮುಂತಾದ ಸಾಮಾನುಗಳಿಗೆ ಇದರಿಂದ ಬಹುವಾಗಿ ಗಿರಾಕಿ ದೊರೆಯುವುದು.

ಹಿತ್ತಿಲ ಗೊಬ್ಬರ ಸಾಕಾದಷ್ಟು ದೊರೆಯದಾಗಿ ಕೃತಕವಾದ ಸಾರಪೋಷಕ ದ್ರವ್ಯಗಳನ್ನು ಉಪಯೋಗಿಸುತ್ತಾರೆ. ಸುಮಾರು ೨೦,೦೦೦ ಟನ್ನುಗಳಿಗೆ ಕಡಮೆಯಿಲ್ಲದಂತೆ ಈ ದ್ರವ್ಯ ಬೇಕಾಗುತ್ತದೆ. ಅನೇಕ ಪಾಶ್ಚಾತ್ಯ ಪ್ಲಾಂಟರುಗಳು ತಮ್ಮ ಭೂಮಿಯಲ್ಲಿಯೆ ಇವನ್ನು ತಯಾರಿಸಿಕೊಂಡು ಇತರರಿಗೂ ಮಾರುವರು. ಉಳಿದುದು ಮಂಗಳೂರು, ಹುಬ್ಬಳ್ಳಿ, ರಾಣೀಪೇಟೆ, ಕೊಯಮತ್ತೂರು, ಮುಂತಾದ ಕಡೆಗಳಿಂದ ಆಮದಾಗುವುದು. ಎಲುಬು ಹಿಂಡಿ ಬೆರೆತ ಈ ಗೊಬ್ಬರದ ಬಹು ಭಾಗವನ್ನು ವಿದೇಶಿ ಕಂಪನಿಯೊಂದು

ಎಲ್ಲರಿಗೂ ಒದಗಿಸುತ್ತಿದೆ. ಬೆಂಗಳೂರಲ್ಲಿ ಎಲುಬನ್ನು ಕೊಂಡು ಪಶ್ಚಿಮ ತೀರಕ್ಕೆ ಸಾಗಿಸಿ ಅಲ್ಲಿ ಆ ದ್ರವ್ಯಗಳನ್ನು ತಯಾರಿಸಿ ರಸ್ತೆಯ ಮೇಲೆ ಪುನಃ ಮಲೆನಾಡಿನ ತೋಟಗಳಿಗೆ ಬಂಡಿಯೊಂದಕ್ಕೆ ೮_೧೦ ರೂ. ಬಾಡಿಗೆ ಖರ್ಚಿಟ್ಟು ಅವನ್ನು ಮಾರುವುದೆಂದರೆ ಈ ಉದ್ಯೋಗದ ಬೆಲೆ ಎಷ್ಟು ಎಂಬುದನ್ನೂ, ಒಳದೇಶದವರು ಕಾರ್ಯ ಮಾಡದಿರುವುದರಿಂದ ದೇಶಕ್ಕೆ ಎಷ್ಟು ನಷ್ಟ ಎಂಬುದನ್ನೂ ಊಹಿಸಬಹುದು.

ಈಚೀಚಿಗೆ ಕಡೂರಿನ ಕೆಲವು ತೋಟಗಳಲ್ಲಿ ಟೀಯನ್ನು ಬೆಳೆಯಲಾರಂಭಿಸಿದ್ದಾರೆ. ರಬ್ಬರ್ ಗಿಡಗಳು ಅಲ್ಲಲ್ಲಿ ತೋಟಗಳಲ್ಲಿ ಬೆಳೆದರೂ ಸಮರ್ಪಕವಾಗಿಲ್ಲ.

ಇತರ ಕೃಷಿಗಳು

ಸಂಸ್ಥಾನಾಮಳೆ ಅನೇಕ ಬಗೆಯ ಹಣ್ಣು ಹಂಪಲ ಬೆಳೆಯುವರು. ಸರ್ಕಾರದವರು ಹಣ್ಣಿನ ಬೆಳಸಿಗೆ ಉತ್ತೇಜನವನ್ನು ಕೊಟ್ಟಿರುವರು. ಸೇಬು ದ್ರಾಕ್ಷಿಗಳ ಕೃಷಿ ಈಗ ಕೆಲವು ಕಡೆ ಬಹಳವಾಗಿ ಆಗುತ್ತಿದೆ.

ಉಳಿದ ವ್ಯಾಪಾರದ ಬೆಳೆಗಳಲ್ಲಿ ಹೊಗೆಸೊಪ್ಪು, ಕಬ್ಬು, ಏಲಕ್ಕಿ, ತೆಂಗು, ಅಡಕೆ ಮುಖ್ಯವಾದವು. ಈಗ ಒಟ್ಟು ಸುಮಾರು ೨೬,೦೦೦ ಎಕರೆ ಭೂಮಿಯಲ್ಲಿ ಹೊಗೆಸೊಪ್ಪಿನ ಸಾಗುವಳಿಯಾಗುತ್ತಿದೆ. ಎಕರೆಗೆ ಸುಮಾರು ೧೦೦೦೦_೧೨೫೦ ಗಿಡಗಳನ್ನು ನೆಡುತ್ತಾರೆ. ನಾಲ್ಕರಿಂದ ಎಂಟು ಮಣ ಬೆಳೆಯುತ್ತದೆ. ಬೆಟ್ಟದಪುರ, ಮಾಜಿಕೆರೆ, ರೇವನತೊರೆ ಮುಂತಾದ ಕಡೆ ಬೆಳೆಯುವ ಸೊಪ್ಪು ಉತ್ತಮವಾದುದು.

ಎಲೆಗಳನ್ನು ಕತ್ತರಿಸಿದ ಮೇಲೂ ಉಳಿದ ಕೂಳೆಗಳಿಂದ ಇನ್ನೊಂದು ಬೆಳಸನ್ನು ಎರಡು ತಿಂಗಳಾದ ಮೇಲೆ ಕುಯ್ಯುವರು. ಇದನ್ನು ಪುಡಿ ಮಾಡಿ ಮಾರುವರು.

ಬೆಂಗಳೂರಲ್ಲಿ ಸಿಗರೆಟ್ಟಿನ ಕಾರ್ಖಾನೆ ಒಂದಿದೆ. ಆದರೂ ಇಲ್ಲಿ ಬೆಳೆಯುವ ಸೊಪ್ಪು ಇವರಿಗೆ ಉಪಯೋಗವಾಗದಂತೆ. ಬೆಲೆ ಹೆಚ್ಚು, ಇದು ಬಹುತರ ಬೀಡಿ ಸೊಪ್ಪು ಎನ್ನುವುದೇ ಅದರ ಕಾರಣ. ಆದುದರಿಂದ ಅಮೇರಿಕಾ, ಗುಂಟೂರು, ಸೇಲಂ, ಬೆಜವಾಡ, ಕಡೆಗಳಿಂದ ಅಗ್ಗವಾದ ಸೊಪ್ಪನ್ನು ತರಿಸಿ ಬೆರಸಿ ಧೃತಿಗಳನ್ನು ಸೇರಿಸಿ ಸಿಗರೆಟ್ಟುಗಳನ್ನು ಮಾಡುವರು.

ನಮ್ಮ ದೇಶದ ಅಡಕೆ ಶ್ರೇಷ್ಠವಾದುದು. ಸುಮಾರು ೩೮,೦೦೦ ಎಕರೆ ಭೂಮಿಯಲ್ಲಿ ಅಡಕೆಯ ತೋಟಗಳಿವೆ. ೧ ಲಕ್ಷ ಮಣಕ್ಕೆ ಮೇಲ್ಪಟ್ಟ ಅಡಕೆ ಎಂದರೆ ಸುಮಾರು ೬೦ ಲಕ್ಷ ರೂಪಾಯಿಗಳ ಬೆಲೆಯ ಅಡಕೆ ದೇಶದಿಂದ ರಫ್ತಾಗುತ್ತದೆ.

ವರ್ಷಕ್ಕೆ ४೦--೫೦ ಲಕ್ಷ ರೂಪಾಯಿಗಳಿಗೆ ಕಡಮೆಯಿಲ್ಲದಷ್ಟು ಕೊಬ್ಬರಿಯೂ ರಫ್ತಾಗುವುದು.

೫. ದೇಶದ ಕೈಗಾರಿಕೆಗಳು.

ಯಂತ್ರೋದ್ಯೋಗ — ಕೈಗಾರಿಕೆ

ಈ ಶತಮಾನ ಮೊದಲಾಗುವಾಗ್ಗೆ ನಮ್ಮಲ್ಲಿ ದೊಡ್ಡ ಕಾರ್ಖಾನೆಗಳು ಅನೇಕವಿರಲಿಲ್ಲ. ಕೋಲಾರದ ಚಿನ್ನದ ಗಣಿಗಳೂ, ಶಿವಸಮುದ್ರದ ವಿದ್ಯುಚ್ಛಕ್ತಿಯ ಕೆಲಸಗಳೂ ಮಾತ್ರ ಇದ್ದವು. ಸರಕಾರದವರು ಕೊಟ್ಟ ನೆರವಿನಿಂದಲೂ ಪ್ರೋತ್ಸಾಹದಿಂದಲೂ ೨೦ ಜನಕ್ಕೆ ಮೇಲ್ಪಟ್ಟು ಉದ್ಯೋಗ ಒದಗಿಸಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿರುವ ೨೦೯ * ಖಾಸಗಿ ಕೈಗಾರಿಕೆ ಸಂಸ್ಥೆಗಳಿವೆ. ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿರುವ ಸಂಸ್ಥೆಗಳೆಲ್ಲ ಒಟ್ಟು ೮೫೦ ಆಗುವುವು.

ಸ್ಥಾಪನೆಗೆ ಅನುಕೂಲಗಳು

ಈ ಯಂತ್ರ ಕಾರ್ಯಗಳಿಗೆಲ್ಲಾ ಶಿವಸಮುದ್ರದಲ್ಲಿ ಉತ್ಪತ್ತಿಯಾಗುತ್ತಿರುವ ವಿದ್ಯುಚ್ಛಕ್ತಿಯೇ ಚಾಲಕಶಕ್ತಿಯಾಗಿದೆ ಎನ್ನಬಹುದು. ವಿದ್ಯುಚ್ಛಕ್ತಿಯಂತೆಯೇ ಎಣ್ಣೆ, ಕಾಡಿದ್ದಲು, ಸೌದೆ, ಇವೂ ಶಕ್ತಿಯನ್ನು ರೂಢಿಸಲು ಸಹಾಯವಾಗುವುವು. ಅನೇಕ ವ್ಯಾಪಾರಸ್ಥಳಗಳಿಗೂ ಮೈಸೂರು ದೇಶಕ್ಕೂ ನಡುವೆ ಸಂಚಾರ ಸೌಕರ್ಯಗಳೂ ರೈಲ್ವೆ ರಸ್ತೆಗಳೂ ಇರುವುದರಿಂದಲೂ ಈ ಸಂಸ್ಥಾನವು ದಕ್ಷಿಣ ದೇಶದ ವ್ಯಾಪಾರಕ್ಕೆ ಮಧ್ಯರಾಷ್ಟ್ರದಂತೆ ಇರುವುದರಿಂದಲೂ ಇಲ್ಲಿ ಅನೇಕ ಕೈಗಾರಿಕೆ ಕಂಪನಿಗಳು ಸ್ಥಾಪಿತವಾಗಲು ಅನುಕೂಲವಾಯಿತು.

ಮುಖ್ಯವಾದ ಯಂತ್ರದ ಕೈಗಾರಿಕೆಗಳು

ಸಂಸ್ಥಾನದಲ್ಲೆಲ್ಲಾ ಈಗ ದೊಡ್ಡ ಕೆಲಸಮಾಡುವ ಯಂತ್ರಶಾಲೆಗಳೆಂದರೆ ಕೋಲಾರದ ಚಿನ್ನದ ಗಣಿಗಳು, ಭದ್ರಾವತಿಯ ಕಬ್ಬಿಣದ ಕಾರ್ಖಾನೆ, ಶಿವಸಮುದ್ರದ ವಿದ್ಯುಚ್ಛಕ್ತಿ ಶಾಲೆ, ಹತ್ತಿ ಮತ್ತು

* ಗಣಿಗಳು ಬರಿದಾಗಿ ಗಣಿಗಳವರ ಕೆಲಸ ಕಡಮೆ ಆಗುತ್ತಗುತ್ತ ಸರಕಾರಕ್ಕೆ ಬರುವ ವರಮಾನವೂ ಕಡಮೆಯಾಗುತ್ತಾ ಹೋಗುವುದು.


ಉಣ್ಣೆಯ ಗಿರಣಿಗಳು, ಸಾಬೂನು ಮತ್ತು ಗಂಧದ ಎಣ್ಣೆಯ ಕಾರ್ಖಾನೆಗಳು.

ಚಿನ್ನದ ಗಣಿಗಳು

ಕೋಲಾರದ ಗಣಿಗಳು ೪ ಇವೆ. ಅವುಗಳ ಮೂಲಧನ ಸುಮಾರು ೨೦೦ ಲಕ್ಷ ರೂಪಾಯಿಗಳು. ಉತ್ಪತ್ತಿ ಕಡಮೆಯಾದ ಈ ವರ್ಷಗಳಲ್ಲಿಯೂ ಶೇಕಡ ೧೮–೨೦ ರಂತೆ, ಸರಾಸರಿ ೨೫–೩೦ ರಂತೆ, ಕೆಲವು ವರ್ಷ ೫೦–೧೦೦ ಕೂಡ ಡಿವಿಡೆಂಡು ಹಂಚಿದ್ದಾರೆ. ಇವುಗಳ ಮೇಲಿನ ಅಧಿಕಾರ ಸಂಪೂರ್ಣ ವಿದೇಶಿಯರದು. ಇವು ಸ್ಥಾಪಿತವಾದ ೧೮೮೭ ರಿಂದ ಹಿಡಿದು ೧೯೩೫ ರವರೆಗೆ ಸುಮಾರು ೭೭೩ ಲಕ್ಷ ಪೌಂಡುಗಳು ಎಂದರೆ ಸುಮಾರು ೧೧೫ ಕೋಟಿ ರೂಪಾಯಿಗಳ ಚಿನ್ನವನ್ನು ರೂಡಿಸಿ ೩೪ ಲಕ್ಷ ಪೌಂಡುಗಳ ಡಿವಿಡೆಂಡನ್ನು (ಎಂದರೆ ೩೧ ಕೋಟಿ ರೂಪಾಯಿಗಳು) ಹಂಚಿದ್ದಾರೆ. ವರ್ಷಕ್ಕೆ ಎರಡುಕೋಟಿ ರೂಪಾಯಿಗಳಿಗೆ ಮೀರಿದ ಚಿನ್ನ ಎಂದರೆ ಸಂಸ್ಥಾನದ ರಾಜಾದಾಯದ ಶೇಕಡ ೭೦ ಭಾಗದಷ್ಟು, ದೇಶದಿಂದ ಹೊರಗೆ ಹೋಗುವ ಚಿನ್ನದ ಬೆಲೆಯಾಯಿತು. ಇದೇ ಕಾಲದಲ್ಲಿ ನಮ್ಮ ಚಿನ್ನವನ್ನು ಗಣಿಗಳವರು ತೆಗೆದು ಸಾಗಿಸಿದುದಕ್ಕಾಗಿ ನಮ್ಮ ಸರಕಾರಕ್ಕೆ ತೆತ್ತಿರುವ ರಾಯಮಾನ ೫೧ ಕೋಟಿ ರೂಪಾಯಿಗಳು ಮಾತ್ರ! ಈ ಕೈಗಾರಿಕೆಯ ಬಂಡವಾಳ, ಬಡ್ಡಿ, ಲಾಭ, ಕೊನೆಗೆ ಸಾಮಾನ್ಯ ಕೂಲಿ ಕೂಡ ಹೊರಗಿನ ಜನರಿಗೆ ಹೋಗುವುದು. ವರ್ಷ ವರ್ಷವೂ ಸರ್ಕಾರಕ್ಕೆ ರಾಯಮಾನದ ರೂಪದಲ್ಲಿ ಸರಾಸರಿ ೧೪ ಲಕ್ಷ ರೂಪಾಯಿಗಳಂತೆ ಹಣ ಬಂದಿದೆ. ಎಂದರೆ ಆ ಕಂಪನಿಗಳು ಷೇರುದಾರರಿಗೆ ಹಂಚಿರುವ ಡಿವಿಡೆಂಡಿನ ಆರರಲ್ಲಿ ಒಂದು ಭಾಗ ಮಾತ್ರ ಗಣಿಗಳ ಒಡೆಯರಾದ ನಮಗೆ ಬಾಡಿಗೆ ದೊರೆತಂತಾಯಿತು. ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಹಣ ಬರುವುದು. ಈಗ ಎರಡು ಮೂರು ವರ್ಷಗಳಿಂದ ವರಮಾನದ ತೆರಿಗೆಯ ಮೂಲಕವಾಗಿ ಸ್ವಲ್ಪ ಹಣ ಬರುತ್ತಿದೆ. ಹೊಸದಾಗಿ ಇನ್ನು ಮೂವತ್ತು ವರ್ಷಗಳ ಗುತ್ತಿಗೆ ಕೊಟ್ಟು ರಾಯಮಾನ ಮೊದಲಿಗಿಂತ ಸ್ವಲ್ಪ ಹೆಚ್ಚಾಗಿ ಬರುವಂತೆ ಏರ್ಪಾಡಾಗಿದೆ. ಮೈಸೂರಿಗೆ ಚಿನ್ನದನಾಡು ಎಂಬ ಹೆಸರೇನೊ ಇದೆ. ಆದರೆ ಮೈಸೂರಿನ ಚಿನ್ನಕ್ಕೆ ಸಂಬಂಧಪಡುವ ಎಲ್ಲ ಲಾಭವೂ ಉತ್ಕರ್ಷೆಯೂ ಜಾನ್‌ಟೇಲರ್ ಕಂಪನಿಗೆ ಸೇರಿದುದು.



ಛಾಂಪಿಯನ್ ರೀಫ್ ಚಿನ್ನದ ಗಣಿಗಳು



ಭದ್ರಾವತಿಯ ಕಬ್ಬಿಣದ ಕಾರ್ಖಾನೆ

ಭದ್ರಾವತಿಯ ಕಬ್ಬಿಣದ ಕಾರ್ಖಾನೆ

ಭದ್ರಾವತಿಯಲ್ಲಿ ಕಾಡಿದ್ದಲಿಂದ ಕಬ್ಬಿಣವನ್ನು ತಯಾರಿಸುತ್ತಾರೆ. ಇದಕ್ಕೆ ಹಾಕಿರುವ ಮೂಲಧನ ೨ ಕೋಟಿ ರೂಪಾಯಿಗಳೆನ್ನಬಹುದು. ಚಿನ್ನದ ಕಾರ್ಖಾನೆಗಳು ಸಂಪೂರ್ಣವಾಗಿ ಪರಕೀಯ ಸಾಹುಕಾರರ ಕೈ ಕವಳವಾದರೆ, ಕಬ್ಬಿಣದ ಕಾರ್ಖಾನೆ ಕೇವಲ ಮೈಸೂರಿನವರಿಗೇ ಸೇರಿದೆ. ಸರಕಾರದವರಿಂದ ಸ್ಥಾಪಿತವಾಗಿ, ದೇಶಿಯರಿಂದಲೇ ನಡಸಲ್ಪಟ್ಟು ಸ್ವದೇಶಿ ಕಬ್ಬಿಣದ ಕಾರ್ಖಾನೆಗಳಲ್ಲಿ ಎರಡನೆಯ ಪದವಿಯನ್ನು ಪಡೆದಿದೆ. ವರ್ಷಕ್ಕೆ ೨೦,೦೦೦ ಟನ್ ಕಬ್ಬಿಣ ಇಲ್ಲಿ ತಯಾರಾಗುವುದು. ಮೆಥೈಲ್ ಆಲ್‌ಕೊಹಾಲ್ ಎಂಬ ದ್ರಾವಕವೂ, ಗ್ರೇ ಆಸಿಟೇಟ್ ಅಫ್ ಲೈಮ್ ಎಂಬ ಉಪ್ಪೂ ಇಂಡಿಯಾದೇಶಕ್ಕೆಲ್ಲಾ ನಮ್ಮ ದೇಶವೊಂದರಲ್ಲಿಯೇ ತಯಾರಾಗುವುದು. ಈ ಕಾರ್ಖಾನೆಗೆ ಸೇರಿದಂತೆ ನೀರಿನ ದೊಡ್ಡ ಕೊಳವಿಗಳನ್ನು ತಯಾರಿಸುವ ಯಂತ್ರ ಏರ್ಪಟ್ಟು ದಿನವೊಂದಕ್ಕೆ ೧೫ ರಿಂದ ೨೫ ಟನ್ನುಗಳವರೆಗೆ ಈ ಕೊಳವಿಗಳು ಉತ್ಪತ್ತಿಯಾಗುತ್ತವೆ. ಅರಣ್ಯ ಶಾಖೆಯವರಿಂದ ಸಂಗ್ರಹಿಸುವ ಬಲಗಿ ದಿಮ್ಮಿಗಳನ್ನು ಗಡಸುಮಾಡಿ ಕೀಲೆಣ್ಣೆ ಹಾಕಿಸುವುದಕ್ಕೆ ತಕ್ಕ ಕಾರ್ಯಗಳೂ ಅಲ್ಲಿ ನಡೆಯುತ್ತಿವೆ. ಇನ್ನು ಮುಂದೆ ಅಲ್ಲಿಯೇ ಉಕ್ಕನ್ನೂ, ಉಕ್ಕಿನ ಸಾಮಾನನ್ನೂ ತಯಾರುಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ವಿದೇಶಿಯರ ಪೈಪೋಟಿ, ವ್ಯಾಪಾರದ ಇಳಿತ, ಧಾರಣೆವಾಸಿಯ ಅಗ್ಗ ಮುಂತಾದ ಕಾರಣಗಳಿಂದ ಈ ಕೈಗಾರಿಕೆಯಿಂದ ಬರಬಹುದಾದ ಎಲ್ಲ ಲಾಭವೂ ಈಗ ಬಾರದಿದ್ದರೂ ಕಾಲಕ್ರಮದಲ್ಲಿ ಇದು ಅಮಿತವಾದ ಲಾಭ ತರುವುದರಲ್ಲಿ ಸಂಶಯವಿಲ್ಲ. ಕಾರ್ಖಾನೆಯ ಕೆಲಸ ಸರ್ವತೋಮುಖವಾಗಿ ಬೆಳೆದು, ಮುಖ್ಯವಸ್ತು ನಿರ್ಮಾಣದ ಜೊತೆಗೆ ದೊರೆಯುವ ಉಪಸಾಮಗ್ರಿಗಳನ್ನು ಬೇರೆಬೇರೆಯಾಗಿ ರೂಡಿಸಿ ಅವುಗಳಿಂದ ಉಪ ಕೈಗಾರಿಕೆಗಳನ್ನು ಏರ್ಪಡಿಸುವ ಯತ್ನಗಳೂ ನಡೆಯುತ್ತಿವೆ. ಗೇರುಸೊಪ್ಪೆಯಲ್ಲಿಯೂ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸುವ ಏರ್ಪಾಡು ನಡೆದು ಉಕ್ಕಿನ ಸಾಮಾನನ್ನು ತಯಾರಿಸಿ ಒಳದೇಶದಲ್ಲಿ ಅವನ್ನು ಮೊದಮೊದಲು ಬಳಸಿ ಗಿರಾಕಿ ಒದಗಿಸಿಕೊಂಡು, ಆ ಶಾಖೆಯನ್ನು ಅಭಿವೃದ್ಧಿಗೊಳಿಸಬೇಕೆಂದೂ, ಬೊಂಬಿನ ಸರಿಯನ್ನು ತಯಾರಿಸಿ ಕಾಗದದ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದೂ ಪ್ರಯತ್ನ

ನಡೆಯುತ್ತಿದೆ. ಅಸೆಟಿಕ್ ಆಸಿಡ್, ಬೇಕ್‌ಲೈಟ್, ಸಿಂಥೆಟಿಕ್ ರೆಸಿನ್ಸ್ ಮುಂತಾದ ರಾಸಾಯನಿಕ ದ್ರವ್ಯಗಳನ್ನೂ ದೇಶಕ್ಕೆ ಬೇಕಾಗುವ ಎಲ್ಲ ಸಿಮೆಂಟನ್ನೂ ತಯಾರಿಸುವ ಏರ್ಪಾಡು ನಡೆದರೆ ಒಟ್ಟು ಕಾರ್ಖಾನೆಯ ಉತ್ಪತ್ತಿಯೂ, ಕಾರ್ಯಗಳೂ ಉಪಯೋಗವೂ ಲಾಭವೂ ಹೆಚ್ಚುವುವು. ಅನೇಕ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು, ದೊಡ್ಡದಾದ ಹೊಸ ಕೈಗಾರಿಕೆಯೊಂದನ್ನು ಸ್ಥಾಪಿಸಿ, ಮೇಲಿಂದ ತಳದವರೆಗೂ ಬಹುವಾಗಿ ಮೈಸೂರಿನವರಿಗೇ ಕೆಲಸ ಒದಗಿಸಿ, ಆ ಕೆಲಸಕ್ಕೆ ಸಂಬಂಧಪಡುವ ಎಲ್ಲ ಶಿಕ್ಷಣ, ಬೇಕಾಗುವ ಎಲ್ಲ ಕುಶಲತೆ ಧೈರ್ಯಗಳನ್ನು ಇಲ್ಲಿನವರಿಗೇ ಉಂಟುಮಾಡಿರುವುದರಿಂದ ಇದರ ಪ್ರಯೋಜನ ಲೋಕೋತ್ತರವಾದುದೆನ್ನ ಬಹುದು.

ಬಟ್ಟೆಯ ಕಾರ್ಖಾನೆಗಳು

ಹತ್ತಿ, ಉಣ್ಣೆ, ರೇಷ್ಮೆಗಳಿಂದ ನೂಲುತೆಗೆದು ಬಟ್ಟೆಯನ್ನು ತಯಾರಿಸುವ ಕಾರ್ಖಾನೆಗಳೂ ನಮ್ಮ ದೇಶದಲ್ಲಿ ಹಲಪಿವೆ. ಮುಖ್ಯವಾಗಿ ಯಂತ್ರ ಸಹಾಯದಿಂದ ನಡೆಯುವ ಎಲ್ಲ ಬಟ್ಟೆ ಅಥವಾ ನೂಲುವ ಕಾರ್ಖಾನೆಗಳಿಗೂ ವಿದ್ಯುಚ್ಛಕ್ತಿಯ ಸಹಾಯ ದೊರೆಯುತ್ತಿದೆ. ರೇಷ್ಮೆಯ ವ್ಯವಸಾಯದ ವಿಚಾರವಾಗಿ ಹಿಂದೆಯೇ ತಿಳಿಸಿದುದಾಯಿತು. ದೇಶದಲ್ಲಿ ಉತ್ಪತ್ತಿಯಾಗುವ ರೇಷ್ಮೆಯಲ್ಲಿ ಮೂರರಲ್ಲಿ ಒಂದು ಭಾಗವನ್ನು ಇಲ್ಲಿನ ನೇಗೆಯವರೇ ಉಪಯೋಗಿಸುವರು. ಉಳಿದುದು ಬಹುವಾಗಿ ಮದರಾಸ್ ಆಧಿಪತ್ಯಕ್ಕೆ ರಫ್ತಾಗುವುದು. ಕೋರಾ ರೇಷ್ಮೆ ಮುಖ್ಯವಾಗಿ ಇಟಲಿ ದೇಶಕ್ಕೆ ಹೋಗುವುದು. ಅಲ್ಲಿ ಅದರ ಕೊಳೆಯನ್ನು ಬಿಡಿಸಿ ಅವರು ಅದನ್ನು ಇಂಡಿಯಾ ದೇಶಕ್ಕೇ ನೂಲಿನ ರೂಪದಲ್ಲಿಯೂ ಬಟ್ಟೆಗಳ ರೂಪದಲ್ಲಿಯೂ ತಿರುಗಿ ಕಳುಹಿಸುತ್ತಾರೆ. ಈಗ್ಗೆ ಕೆಲವು ವರ್ಷಗಳಿಗೆ ಹಿಂದೆ ರೇಷ್ಮೆ ನೂಲುವ ಯಂತ್ರವೊಂದನ್ನು ಸರ್ಕಾರದವರು ಫ್ರಾನ್ಸ್ ದೇಶದಿಂದ ತರಿಸಿ ಸ್ಥಾಪಿಸಿದ್ದಾರೆ. ಅದನ್ನು ನೋಡಿಕೊಂಡು ಸಾಹುಕಾರರೂ ಇಂಥ ಯಂತ್ರಗಳನ್ನು ಉಪಯೋಗಿಸುವ ಯತ್ನಮಾಡುತ್ತಿದ್ದಾರೆ. ಸರ್ಕಾರದವರೇ ತಯಾರಿಸಿದ ನೂಲಿನ ಯಂತ್ರವೂ ಜನರ ಬಳಕೆಗೆ ಬರುತ್ತಿದೆ.

ಹತ್ತಿಯ ಬಟ್ಟೆಗಳು

ಚಿತ್ರದುರ್ಗ, ಶಿವಮೊಗ್ಗೆ, ತುಮಕೂರು ಜಿಲ್ಲೆಗಳಲ್ಲಿ ಕೆಲವು ಭಾಗಗಳು ಎಂದರೆ ಚೆನ್ನಗಿರಿ, ಹೊನ್ನಾಳಿ, ಮಧುಗಿರಿ, ಪಾವಗಡ, ದಾವಣ

ಗೆರೆ, ಹರಿಹರ, ಹೊಳಲ್ಕೆರೆ, ಜಗಳೂರು ಮುಂತಾದವೇ ನಮ್ಮ ಹತ್ತಿಯ ಮಂಡಲ. ಒಟ್ಟು ಹತ್ತಿಯ ವ್ಯಾಪಾರವನ್ನು ನೋಡಿದರೆ ನಾವು ಹೊರಕ್ಕೆ ರಫ್ತುಮಾಡುವ ಹತ್ತಿ ಮತ್ತು ಹತ್ತಿಯ ಬಟ್ಟೆಗಿಂತ ಆಮದು ಮಾಡಿಕೊಳ್ಳುವುದರ ಬೆಲೆ ಎರಡು ಕೋಟಿ ರೂಪಾಯಿಗಳಿಗೆ ಮೀರಿದೆ. * ದೇಶಕ್ಕೆ ಬೇಕಾದ ಎಲ್ಲ ಬಟ್ಟೆಗಳನ್ನೂ ನಮ್ಮ ಹತ್ತಿಯಿಂದಲೇ ತಯಾರಿಸಿಕೊಳ್ಳುವುದಾಗದೆ ಹೋದರೂ ಇರುವ ಹತ್ತಿಯನ್ನೆಲ್ಲಾ ಒಳದೇಶದಲ್ಲಿಯೇ ಉಪಯೋಗಿಸಿ ಬಟ್ಟೆಗಳನ್ನು ತಯಾರಿಸಿಕೊಳ್ಳಲು ಅನುಕೂಲವಿದೆ. ಈಗ ನಮ್ಮ ಹತ್ತಿ ಹುಬ್ಬಳ್ಳಿ, ಬೊಂಬಾಯಿ, ಮದರಾಸು, ಕೊಯಮತ್ತೂರು, ಮಾರ್ಮಗೋವ ಮುಂತಾದ ಊರುಗಳಿಗೆ ಹೋಗುವುದು.

ಹತ್ತಿಯ ಬಟ್ಟೆಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಈಗ ಮುಖ್ಯವಾಗಿರುವ ದೊಡ್ಡವು ನಾಲ್ಕು; ಬೆಂಗಳೂರಿನ ಬಿನ್ನಿ ಮಿಲ್ಲು ; ಮೈಸೂರು (ಮಹಾರಾಜಾ) ಮಿಲ್ಲು ; ಮಿನರ್ವಾ ಮಿಲ್ಲು ; ಮೈಸೂರಿನಲ್ಲಿರುವ ಕೃಷ್ಣರಾಜೇಂದ್ರ ಮಿಲ್ಲು. ಬಿನ್ನಿ ಕಂಪನಿಯವರ ಆಡಳಿತದಲ್ಲೊಂದು, ಮಹಾರಾಜಾ ಮಿಲ್ಲಿನವರಿಗೆ ಸೇರಿದಂತೆ ಒಂದು, ಹೀಗೆ ಅರಳೆ ಕಂತೆಮಾಡುವ ಎರಡು ಕಾರ್ಖಾನೆ ಇವೆ. ಬಿನ್ನಿಯವರ ಬಂಡವಾಳ ವಿದೇಶಿ. ಮಹಾರಾಜಾ (ಮೈಸೂರು) ಮಿಲ್ಲಿನವರ ಬಂಡವಾಳ ಸ್ವದೇಶಿ : ಅದರಲ್ಲಿ ಮೈಸೂರಿನವರದೂ ಸ್ವಲ್ಪಭಾಗವುಂಟು. ಮಿನರ್ವಾ ಮಿಲ್ಲಿನವರು ಬೊಂಬಾಯವರು. ಈ ಮೂರು ಕಂಪನಿಯವರೂ ಒಟ್ಟು ಸುಮಾರು ೭೦ ಲಕ್ಷ ರೂಪಾಯಿಗಳ ಬಂಡವಾಳದಿಂದ ಕೆಲಸಮಾಡುತ್ತಾರೆ. ಮೈಸೂರಿನ ಕೃಷ್ಣರಾಜೇಂದ್ರ ಮಿಲ್ಲಿನ ಬಂಡವಾಳ ೨೦ ಲಕ್ಷ. ಈಗ ಹೊಸದಾಗಿ ಅದು ಬೇರೊಬ್ಬರ ಆಡಳಿತಕ್ಕೆ ಹೋಗಿದ್ದರೂ ಇದು ಕೇವಲ ಮೈಸೂರಿನವರದೇ. ಇವರೆಲ್ಲರೂ ನೂಲನ್ನು ನೂತು ಬಟ್ಟೆಗಳನ್ನು ತಯಾರಿಸುವರು. ಈ ಕಾರ್ಖಾನೆಗಳಲ್ಲಿ ಹೊರಗಿಂದ ತರಿಸಿಕೊಂಡ ನೂಲನ್ನು ಉಪಯೋಗಿಸುವುದು ಅಪರೂಪವಾದರೂ ಉಂಟು. ಕೆಲವರು ತಮ್ಮ ನೂಲನ್ನು ಕೈ ಮಗ್ಗಗಳವರಿಗೆ ಮಾರುತ್ತಾರೆ. ಉಳಿದ ಅನೇಕ ಕಾರ್ಯಾಲಯಗಳು ಸಣ್ಣವು. ಸರ್ಕಾರದ ನೇಗೆಯ ಕಾರ್ಖಾನೆಯೂ ಇನ್ನೂ ಕೆಲವು ಸಣ್ಣ ಕಾರ್ಖಾನೆಗಳೂ (ಒಟ್ಟು

* ನಾವು ೪೦೦-೫೦೦ ಪೌಂಡು ತೂಗುವ ಸುಮಾರು ೨೦,೦೦೦ ಬೇಲ್ ಹತ್ತಿಯನ್ನು ದೇಶದಲ್ಲಿ ಬೆಳೆಯುತ್ತೇವೆ. ಆದರೆ ಇಲ್ಲಿನ ಹತ್ತಿಯ ಕೆಲಸಗಳಿಗೆ ೪೦-೫೦ ಸಾವಿರ ಬೇಲುಗಳ ಹತ್ತಿಯಾದರೂ ಬೇಕಾಗುತ್ತದೆ.

ಹತ್ತು) ವಿದ್ಯುಚ್ಛಕ್ತಿಯ ಸಹಾಯದಿಂದ ಬಟ್ಟೆಗಳನ್ನು ನೇಯುತ್ತವೆ. ಎಲ್ಲೆಲ್ಲಿಯೂ ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿರುವುದರಿಂದ ಇವುಗಳ ಸಂಖ್ಯೆ ಹೆಚ್ಚುವುದಕ್ಕೂ ಅವಕಾಶವಿದೆ. ಇವಲ್ಲದೆ ಒಳದೇಶದ ವರ್ತಕರಿಗೂ ಬೆಂಗಳೂರು, ದೊಡ್ಡಬಳ್ಳಾಪುರ, ಮೇಲುಕೋಟೆ ಮುಂತಾದ ಪ್ರದೇಶಗಳ ಜನರ ಬಳಕೆಗೆ ಬೇಕಾದ ಸೀರೆ, ಧೋತ್ರ, ಕಣ, ಮಗುಟ, ದುಪಟಿ, ಪಂಚೆ ಎಲ್ಲಾ ನಾಡಮಗ್ಗಗಳಲ್ಲಿಯೇ ತಯಾರಾಗುತ್ತವೆ. ಆದರೆ ಮೇಲ್ತರದ ನೂಲಿನ ಬಟ್ಟೆಗೆಲ್ಲ ಈ ಮಗ್ಗಗಳವರೂ ಹೊರದೇಶದ ಅಥವಾ ಗಿರಣಿಗಳ ನೂಲನ್ನು ತರಿಸಿ ನೇಯುವುದು ವಾಡಿಕೆಯಾಗುತ್ತಿದೆಯೆನ್ನಬೇಕು. ಒಳದೇಶದಲ್ಲಿ ಮನೆಗಳಲ್ಲಿ ನೇಯುವ ಮಗ್ಗಗಳಿಗೂ ಗಿರಣಿಯ ಮಗ್ಗಗಳಿಗೂ ಯಾವ ದೊಡ್ಡ ಪೈಪೋಟಿಯೂ ಇಲ್ಲ. ಆದುದರಿಂದ ಎರಡು ಮುಖದಲ್ಲಿಯೂ ಬೆಳವಣಿಗೆ ಅಡ್ಡಿಯಿಲ್ಲದೆ ನಡೆಯಬಲ್ಲದು. ಸರ್ಕಾರದವರು ಖಾದಿ ಪ್ರಚಾರ ಕಾರ್ಯಕ್ಕೆ ಪ್ರೋತ್ಸಾಹಕೊಟ್ಟು ಬದನವಾಳ, ಅಜ್ಜಂಪುರ, ತೆರಕಣಾಂಬಿ ಮುಂತಾದ ಕಡೆ ಕಾರ್ಯಾಲಯಗಳನ್ನು ಸ್ಥಾಪಿಸಿ ನೂಲುವ ಉದ್ಯೋಗಕ್ಕೂ ನೆಯ್ಗೆಗೂ ಸಹಾಯಮಾಡುತ್ತಿದ್ದಾರೆ.* ಒಟ್ಟು ಸುಮಾರು ೫೦ ಲಕ್ಷ ರೂಪಾಯಿಗಳ ಹತ್ತಿಯ ಬಟ್ಟೆಯನ್ನು ಈ ದೇಶ ರಫ್ತು ಮಾಡುತ್ತಿದೆ.

ಉಣ್ಣೆಯ ಕಾರ್ಖಾನೆ – ಕೈಗಾರಿಕೆ

ಮೈಸೂರಲ್ಲಿ ಉಣ್ಣೆ

ಮಲೆನಾಡು ಪ್ರಾಂತವನ್ನೂ, ಅರಣ್ಯ ಪ್ರದೇಶವನ್ನೂ ಬಿಟ್ಟರೆ ಉಳಿದ ಭಾಗದಲ್ಲಿ ಕುರಿಗಳನ್ನು ಸಾಕುವರು. ಫಲವತ್ತಾಗಿರುವ ಭೂಮಿಯ ಮೇಲೆ ಪೋಷಿತವಾಗುವ ಕುರಿಯ ಉಣ್ಣೆ, ಬಂಜರಾಗಿರುವ ಕಲ್ಲು ಭೂಮಿಯಮೇಲೆ ಪೋಷಿತವಾಗುವ ಕುರಿಯ ಉಣ್ಣೆಗಿಂತಲೂ ಮೃದು.

* ಒಳದೇಶದ್ದೆಂದು ನಾವು ಕರೆಯುವ ಹತ್ತಿಯಲ್ಲಿ ಸ್ವಲ್ಪ ಭಾಗ ಹಾವೇರಿ, ರಾಣಿಬೆನ್ನೂರು ಮುಂತಾದ ಸಂಸ್ಥಾನದ ನೆರೆಯೂರುಗಳಿಂದ ರಸ್ತೆಯ ಮೂಲಕವಾಗಿ ಅರಳೆ ಹಿಂಜಿ ಬಿಡಿಸುವುದಕ್ಕಾಗಿ ದಾವಣಗೆರೆಯೊಳಕ್ಕೆ ಬರುವಂಥದು. ಕೈ ಮಗ್ಗಗಳ ಸಂಖ್ಯೆ ಸುಮಾರು ೪೦,೦೦೦ ವೆನ್ನಬಹುದು. ಸಾಧಾರಣವಾಗಿ ಇವುಗಳಲ್ಲಿ ಉಪಯೋಗಿಸುವ ನೂಲು ೨೦ ನಂಬರಿಗೆ ಮೇಲ್ಪಟ್ಟುದಲ್ಲ. ೬೦ನೇ ನಂಬರಿಗೆ ಮೀರಿದ ನೂಲನ್ನು ಉಪಯೋಗಿಸುವುದು ಅಪರೂಪ.

ಅದರ ದಾರದ ಎಳೆ ಉದ್ದವಾಗಿಯೂ, ಉಣ್ಣೆ ಹುಲುಸಾಗಿಯೂ ಇರುವುವು. ಹರಿಹರದ ಉಣ್ಣೆ ಉತ್ತಮವಾದುದು. ಚಿತ್ರದುರ್ಗ, ಪಾವಗಡ, ಸೀರ್ಯ, ಚಿಕ್ಕನಾಯಕನಹಳ್ಳಿ, ಅರಸೀಕೆರೆ, ಮಂಡ್ಯ, ಕ್ಲೋಸ್‌ಪೇಟೆ ಈಕಡೆ ಉಣ್ಣೆಯ ಕೆಲಸ ಹೆಚ್ಚು.

ವರ್ಷಕ್ಕೆ ಎರಡುಸಲ ಉಣ್ಣೆಯನ್ನು ಕತ್ತರಿಸುತ್ತಾರೆ. ಚಳಿಗಾಳಿಯಲ್ಲಿ ತೆಗೆಯುವುದಕ್ಕೆ ಮಾಗಿಯ ಉಣ್ಣೆ ಎಂದು ಹೆಸರು. ಮಳೆಗಾಲದ ಮುಂಚೆ ತೆಗೆಯುವುದಕ್ಕೆ 'ಕಾರೆ' ಉಣ್ಣೆಯೆಂದು ಹೆಸರು. ಅಲ್ಲದೆ ವಾನಂಬಾಡಿ, ಆಂಬೂರ್ ಮುಂತಾದ ಚರ್ಮ ಹದಮಾಡುವ ಮದರಾಸ್ ಪ್ರಾಂತದಿಂದ ಒದ್ದೆಯಾದ ಉಣ್ಣೆ ಬೇರೆ ಬರುತ್ತದೆ. ಇಂಥುದೇ ಕೊಡಿಗೇನಹಳ್ಳಿ, ನಾಗವಾರ, ಜೀವನಹಳ್ಳಿ, ಚಿಕ್ಕಬಳ್ಳಾಪುರ, ಚೆನ್ನಪಟ್ಟಣ ಮುಂತಾದ ಕಡೆಗಳಿಂದಲೂ ಬರುತ್ತದೆ.

ಉಣ್ಣೆಯ ದಾರವನ್ನು ಕೈಮಗ್ಗಗಳಲ್ಲಿ ಉಪಯೋಗಿಸಿ ಕರಿ ಕಂಬಳಿ, ದಾವಳಿ, ಗೊಂಗಡಿ, ಜುಜ್ಜುಗಂಬಳಿ, ಮಡಿಚೀಲ ಮುಂತಾದ ವಸ್ತುಗಳನ್ನು ಮಾಡುತ್ತಾರೆ. ಮಂಡ್ಯ, ದಾವಣಗೆರೆ, ಕೋಲಾರ, ಮೊಳಕಾಲ್ಮುರು ಈ ಪ್ರದೇಶಗಳ ಕಂಬಳಿ ಪ್ರಸಿದ್ಧವಾದುವು. ನಾಡು ಕಂಬಳಿಗಳ ಒಟ್ಟು ವ್ಯಾಪಾರ ವರ್ಷಕ್ಕೆ ಸುಮಾರು ೮೦ ಲಕ್ಷ ರೂಪಾಯಿಗಳು.

ಬೆಂಗಳೂರಿನ ಜಂಖಾನ ಹಾಸುಗಂಬಳಿಗಳು ಪ್ರಖ್ಯಾತವಾದವು. ಅವನ್ನು ಪಟ್ವೇಗಾರ ಜಾತಿಯವರೂ ಇತರ ಒಬ್ಬಿಬ್ಬರೂ ಖಾಸಗಿಯಾಗಿ ತಯಾರಿಸುವರು. ಕೇಳಿದವರಿಗೆ ಆಯಾ ನಮೂನೆಗೆ ತಕ್ಕಂತೆ ಚದರಗಜಕ್ಕೆ ರೂ. ೬ ರಿಂದ ೧೨ ವರೆಗೂ ಬೆಲೆಯುಳ್ಳ ರತ್ನಗಂಬಳಿಯನ್ನು ಸರ್ಕಾರದ ಜೈಲಿನಲ್ಲಿ ತಯಾರಿಸಿ ಮಾರುವರು. ನಮ್ಮ ಜಂಖಾನೆ ರತ್ನಗಂಬಳಿಗಳಿಗೆ ಒಳಗೂ ಹೊರಗೂ ಗಿರಾಕಿಯಿದೆ.

ಉಣ್ಣೆಯ ಕಾರ್ಖಾನೆಗಳು ನಾಲ್ಕಿವೆ: ಬೆಂಗಳೂರಿನ ಬಿನ್ನಿ ಗಿರಣಿ; ಯಶವಂತಪುರದ ಮಹಾಲಕ್ಷ್ಮೀ ಗಿರಣಿ; ಹೆಬ್ಬಾಳದ ಕೈಸರಿಹಿಂದ್ ಗಿರಣಿ; ಬೆಂಗಳೂರಿನ ಸುಬ್ಬಯ್ಯಶೆಟ್ಟರ ಗಿರಣಿ—ಇವುಗಳಲ್ಲಿ ರಗ್ಗು ಮತ್ತು ಹಾಸುಗಂಬಳಿಗಳನ್ನು ಮಾಡುವುದು ವಿಶೇಷ. ಹಾಸಿಗೆ ಹತ್ತಿಯ ನೂಲನ್ನೂ ಹೊಕ್ಕಿಗೆ ಉಣ್ಣೆಯ ನೂಲನ್ನೂ ಉಪಯೋಗಿಸಿ ಈ ಪದಾರ್ಥಗಳನ್ನು ಮಾಡುವರು. ಇವುಗಳ ವ್ಯಾಪಾರ ವರ್ಷಕ್ಕೆ ಸುಮಾರು ೭೫

ಲಕ್ಷ ಆಗುವುದು. ಅಮೇರಿಕಾ ಮುಂತಾದ ಪ್ರದೇಶಗಳಲ್ಲಿಯೂ ಇವಕ್ಕೆ ಗಿರಾಕಿಯಿದೆ.

ದೇಶದಲ್ಲಿ ಒದಗುವ ಕತ್ತಾಳೆ, ಈಚಲು, ಜೊಂಗು, ಕಡ್ಡಿ, ಬಿದಿರು ಇವುಗಳಿಂದ ಹಗ್ಗ, ಚಾಪೆ, ಮೆತ್ತೆ, ಕುರ್ಚಿ, ಬುಟ್ಟಿ ಮುಂತಾದವುಗಳನ್ನು ಬಹಳವಾಗಿ ತಯಾರಿಸುವರು. ರೇಷ್ಮೆಯ ನೆಯ್ಗೆ, ಬಣ್ಣದ ಅಚ್ಚೊತ್ತುವುದು, ನಕ್ಕಿಮಾಡುವುದು ಮುಂತಾದ ಕೈಕೆಲಸಗಳೂ ಅನೇಕ.

ನೂಲಿನ ಮತ್ತು ನೇಗೆಯ ಕೆಲಸಗಳಿಗೆ ಉಪಪೋಷಕವಾಗಿ ಅನೇಕ ಬಗೆಯ ಬಣ್ಣ ಹಾಕುವ ಕೆಲಸಗಳೂ ನಡೆಯುತ್ತಿವೆ. ನೀಲಿ, ಹಸುರು, ಕಿರುಮಂಜಿ, ಕಪ್ಪುಲೆ ಹಿಟ್ಟು ಮುಂತಾದ ಪದಾರ್ಥಗಳನ್ನು ಸಸ್ಯ ಪದಾರ್ಥಗಳಿಂದ ಒದಗಿಸಿಕೊಳ್ಳುವರು. ಲೋಹಪದಾರ್ಥಗಳಿಂದ ಬಣ್ಣಗಳನ್ನು ರೂಡಿಸುವರು. ರಾಸಾಯನಿಕವಾದ ಬಣ್ಣಗಳನ್ನು ವಿದೇಶಗಳಿಂದ ತರಿಸಿಯೂ ಉಪಯೋಗಪಡಿಸಿಕೊಳ್ಳುವರು. ಬಣ್ಣದ ಕೆಲಸಮಾಡುವ ಕಾರ್ಯಾಲಯಗಳು ಮಂಡ್ಯ, ಆನೇಕಲ್ ಮುಂತಾದ ಕಡೆಗಳಲ್ಲಿವೆ. ಒಂದೇ ಸಮನಾಗಿ ನಯವಾಗಿ ಉತ್ತಮವಾಗಿ ಚಿತ್ತಾಕರ್ಷಕವಾದ ಬಗೆಬಗೆಯ ರಂಗು ಹಾಕುವ ಉಪ ಕೈಗಾರಿಕೆಗಳು ಸ್ಥಾಪಿತವಾಗಲು ವಿಪುಲವಾದ ಅವಕಾಶವಿದೆಯೆನ್ನಬಹುದು.

ಕಾಡು ಕೈಗಾರಿಕೆಗಳು

ನಮ್ಮ ಕಾಡುಗಳಲ್ಲಿ ೭೫ ಬಗೆಯ ಚೌಬೀನೆ ಮರಗಳಿರುವುವು. ಅವುಗಳಿಂದ ಅನೇಕ ವಿಧವಾದ ಮರಮುಟ್ಟುಗಳನ್ನು ಮಾಡಬಹುದಲ್ಲದೆ ಸುಂದರವಾದ ಕೆತ್ತನೆ ಕೆಲಸಗಳನ್ನೂ ಮಾಡಬಹುದು. ಈ ಕೆಲಸಗಳಿಗೆ ಸಂಬಂಧಿಸಿದ ಕಲೆ ಕುಶಲವಿದ್ಯೆಗಳನ್ನು ಕಲಿಸುವುದಕ್ಕೆ ಮೈಸೂರಲ್ಲಿ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟ್ ಎಂಬ ಒಂದು ಕುಶಲಕಲಾಶಾಲೆಯಿದೆ. ಮರದ ಕುಶಲ ಕರ್ಮಗಳನ್ನೂ ಕೆತ್ತನೆ ಸಾಮಾನುಗಳನ್ನೂ ಮಾಡಿ ಮಾರುವ ಒಂದು ಕಾರ್ಯಾಗಾರವನ್ನು ಸರಕಾರದವರೇ ಸ್ಥಾಪಿಸಿ ನಡಸುತ್ತಿದ್ದಾರೆ. ಗಂಧದ ಮರದಲ್ಲಿಯೂ, ದಂತದಲ್ಲಿಯೂ ವಿಗ್ರಹಗಳನ್ನೂ ಮಂಟಪಗಳನ್ನೂ ಮಾಡಿ ದೇಶವಿದೇಶಗಳಲ್ಲಿ ಮಾರುವ ಪ್ರಯತ್ನಗಳು

ನಡೆಯುತ್ತಿವೆ. ಸೊರಬ ಸಾಗರದ ಕಡೆ ಗೂಡಿಗರು ಅತಿ ಹಿಂದಿನಿಂದಲೂ ಗಂಧದ ಕೆತ್ತನೆ ಕೆಲಸವನ್ನು ಮಾಡುವರು.

ನಮ್ಮ ಕಾಡುಗಳಲ್ಲಿ ಸಿಕ್ಕುವ ಅರಗು ಉತ್ತಮವಾದುದು. ಒಳದೇಶ ದಲ್ಲಿ ಅದನ್ನು ಉಪಯೋಗಿಸಲು ಉದ್ಯಮ ನಡೆಯುತ್ತಿದೆ. ಗುಂಡಿಯ ಅರಗು, ಷೆಲ್ಲಾಕ್ ಇವುಗಳನ್ನು ತಯಾರಿಸಲು ಒಂದು ಸಣ್ಣ ಕಾರ್ಖಾನೆ ಸ್ಥಾಪಿತವಾಗಿದೆ. ವಿದ್ಯುಚ್ಛಕ್ತಿ ಚಾಲಿತವಾದ ಯಂತ್ರಗಳಿಂದ ಲಾಕೀ ಬಣ್ಣದ ಸಾಮಾನುಗಳನ್ನು ತಯಾರು ಮಾಡುವ ಕೆಲಸ ಚೆನ್ನಪಟ್ಟಣದ ಸುತ್ತಲೂ ನಡೆಯುತ್ತಿದೆ. ಹಳೆಯಮರ ಅಥವಾ ಐಜಿ ಎಂಬ ಮರದಿಂದ ಈ ಸಾಮಾನನ್ನು ತಯಾರಿಸುವರು.

ಚರ್ಮ ಹದಮಾಡುವ ಸಾಮಗ್ರಿಗಳೂ, ಕಾಡುಗಳಲ್ಲಿ ಸಿಕ್ಕು ತ್ತವೆಯಲ್ಲ: ಬೆಂಗಳೂರಿನಲ್ಲಿರುವ ಚರ್ಮ ಹದಮಾಡುವ ಕಾರ್ಖಾನೆಗಳಲ್ಲಿ ಅವನ್ನು ಸ್ವಲ್ಪ ಉಪಯೋಗಿಸುತ್ತಾರೆ. ವರ್ಷಕ್ಕೆ ಸುಮಾರು ೪೦ ಲಕ್ಷ ರೂಪಾಯಿ ಬೆಲೆ ಬಾಳುವ ೯೬,೦೦೦ ಮಣ ಚಕ್ಕೆ ರಫ್ತಾಗುವುದು. ಸರ್ಕಾರಿ ಕಾರ್ಖಾನೆಯ ಜೊತೆಗೆ ಬೆಂಗಳೂರಲ್ಲಿ ಇನ್ನೂ ೧೬ ಸಾಹು ಕಾರಿ ಕಾರ್ಖಾನೆಗಳಿವೆ. ಈ ಚರ್ಮ ಹದಮಾಡುವ ಕೆಲಸ ಸುಮಾರು ಮುಸಲ್ಮಾನ ಲಬ್ಬೆ ವರ್ತಕರ ಕೈಯಲ್ಲಿದೆ. ದೇಶದ ಎಲ್ಲ ಕಡೆಗಳಿಂದಲೂ ಅವರು ಹಸಿಯ ಚರ್ಮವನ್ನು ತರಿಸಿ ಕೂಡಿಹಾಕಿ ತಮ್ಮ ಕೆಲಸಕ್ಕೆ ಬೇಕಾ ಗುವ ಮೂಲಸಾಮಗ್ರಿ ಸಂಗ್ರಹಿಸುವರು. ಹದಮಾಡಿ ಮದರಾಸಿಗೆ ಕಳುಹಿ ಸುವರು. ಚಕ್ಕೆಗಳಿಂದ ಹದಮಾಡಿದ ದನದ ಚಕ್ಕಳ ಮತ್ತು ಮೇಕೆ ಕುರಿಗಳ ಕಚ್ಚಾ ಚರ್ಮದ ರಫ್ತು ವರ್ಷಕ್ಕೆ ಸ್ವಲ್ಪ ಕಡಮೆ ೭೦ ಲಕ್ಷದವರೆಗೂ ಆಗು ವುದು.

ನಮ್ಮ ತಂಗಡಿ ಚಕ್ಕೆಗೆ ಒಳದೇಶದಲ್ಲಿ ಉಪಯೋಗವಿಲ್ಲ. ದಕ್ಷಿಣ ಆಫ್ರಿಕಾದಿಂದ ಬರುವ ವಾಟಲ್ ಚಕ್ಕೆ ತಪ್ಪದೆ ಒಂದೇ ರಬಮಿ ನಲ್ಲಿ ಬರುವುದರಿಂದ ಇದು ಅದರೊಡನೆ ಪೈಪೋಟಿಗೆ ನಿಲ್ಲಲಾರದೆ ಇದೆ. (ದನದ) ಚಕ್ಕಳದ ಕಾರ್ಖಾನೆಗಳಲ್ಲಿ ವಾಟಲ್ ಚಕ್ಕೆಯನ್ನೂ ಮೇಕೆಗಳ ಚರ್ಮದ ಕಾರ್ಖಾನೆಗಳಲ್ಲಿ ತಂಗಡಿ ಚಕ್ಕೆಯನ್ನೂ ಉಪ ಯೋಗಿಸುತ್ತಾರೆ.

ಬೆಲ್ಲ, ಸಕ್ಕರೆ ತಯಾರಿಕೆ

ನಮ್ಮ ದೇಶಕ್ಕೆ ಬೇಕಾದ ಎಲ್ಲ ಬೆಲ್ಲ ಸಕ್ಕರೆಯನ್ನೂ ನಾವೇ ತಯಾರುಮಾಡಿಕೊಳ್ಳಲು ಬೇಕಾಗುವ ಅನುಕೂಲವೂ, ಮೂಲಸಾಮಗ್ರಿಯೂ ಇಲ್ಲೇ ಉತ್ಪತ್ತಿಯಾಗಬಲ್ಲದು. ಹೆಚ್ಚು ಪರಿಮಾಣದಲ್ಲಿ ಬೆಲ್ಲ ಉತ್ಪತ್ತಿಯಾಗುವುದಲ್ಲದೆ ವರ್ಷಕ್ಕೆ ೮-೧೦ ಲಕ್ಷ ರೂಪಾಯಿಗಳಷ್ಟು ರಫ್ತಾಗುವುದು. ಉತ್ಪತ್ತಿ ಚೆನ್ನಾಗಿದ್ದ ಕಡೆ ಎಕರೆಗೆ ಸರಾಸರಿ ೧೦೨ ಮಣಗಳಂತೆ ಬೆಲ್ಲ ತೆಗೆಯುತ್ತಾರೆ. ಕೋಲಾರದ ಬೂರ ಎಂಬ ನಾಡಸಕ್ಕರೆ ಇಲ್ಲಿನ ಉಪಯೋಗದ ಎಲ್ಲ ಸಿಹಿ ಪದಾರ್ಥಗಳಿಗೂ ಒದಗುವುದಾದರೂ ಬಿಳಿಯ ಸಕ್ಕರೆಯೊಡನೆ ಪೈಪೋಟಿಗೆ ನಿಂತು ಅದಕ್ಕಿಂತಲೂ ಅಗ್ಗವಾದ ಹೊರತು ಪೇಟೆಯಲ್ಲಿ ಉಳಿಯುವ ಹಾಗಿಲ್ಲ. ಸಕ್ಕರೆಯನ್ನು ಶುದ್ಧಿಮಾಡುವ ಯಂತ್ರಗಳು ಪಾಲಹಳ್ಳಿ, ಗೋರಿಬಿದನೂರು, ಮುಂತಾದ ಕಡೆ ಏರ್ಪಟ್ಟು ಕಾರಣಾಂತರಗಳಿಂದ ನಷ್ಟಹೊಂದಿದ್ದರಿಂದ ಹೊಸದಾಗಿ ಆ ಕೆಲಸಗಳನ್ನು ಯಂತ್ರ ವಿಧಾನಗಳಿಂದ ಪುನಃ ದೊಡ್ಡ ಪ್ರಮಾಣಗಳಲ್ಲಿ ಕೈಕೊಳ್ಳಲು ದೇಶಿಯರು ಹಿಂಜರಿಯುತ್ತಿದ್ದರು. ಈಗ ಮಂಡ್ಯದಲ್ಲಿ ಸರಕಾರದವರೇ ಒತ್ತಾಸೆಕೊಟ್ಟು ಸಕ್ಕರೆ ಕಾರ್ಖಾನೆಯನ್ನು ನಡಸುತ್ತಿದ್ದಾರೆ. ದಿನವೊಂದಕ್ಕೆ ೧,೪೦೦ ಟನ್ನುಗಳಷ್ಟು ಸಕ್ಕರೆಯನ್ನು ಇಲ್ಲಿ ತಯಾರಿಸಿ ಶುದ್ಧಿಮಾಡುವರು. ಉಪಸಾಮಗ್ರಿಗಳಾಗಿ ದೊರಕುವ ಪದಾರ್ಥಗಳಿಂದಲೂ ಮಾದಕ ದ್ರವ್ಯಗಳಿಂದಲೂ ಅನೇಕವಾಗಿ ಹಣ ಬರುವುದು.

ಎಣ್ಣೆಯ ಕೈಗಾರಿಕೆ

ಭೂ ವ್ಯವಸಾಯದಿಂದ ಉತ್ಪತ್ತಿಯಾದ ಬಿತ್ತಗಳು ಎಂದರೆ ಹರಳು, ಒಳ್ಳೆಳ್ಳು, ಹುಚ್ಚೆಳ್ಳು, ನೆಲಗಡಲೆ ಮುಂತಾದವು. ಮರದ ಬಿತ್ತವೆಂದರೆ ಹೊಂಗೆ, ಬೇವು, ಹಿಪ್ಪೆ ಮೊದಲಾದವು;—ಇವೆರಡರಿಂದಲೂ ಎಣ್ಣೆಯ ಕೈಗಾರಿಕೆಗೆ ಮೂಲವಸ್ತು ಒದಗುವುದು. ಧೂಪದ ಮರದಿಂದ ಒಂದು ಬಗೆಯ ಸಸ್ಯದ ಕೊಬ್ಬನ್ನು ಮಾಡುವರು. ಕೊಬ್ಬರಿ ಎಣ್ಣೆಯ ಕೆಲಸವೂ ಅಲ್ಲಲ್ಲಿ ನಡೆಯುತ್ತದೆ.



ಮಂಡ್ಯದ ಸಕ್ಕರೆ ಕಾರ್ಖಾನೆ

ಎಣ್ಣೆಗಳನ್ನು ಹಳೆಯ ತೆರದ ಗಾಣಗಳಲ್ಲಿಯೇ ಸಾಮಾನ್ಯವಾಗಿ ತೆಗೆಯುತ್ತಾರೆ. ಈಗೀಗ ಯಂತ್ರಗಳು ಸ್ಥಾಪಿತವಾಗಿ ಎಣ್ಣೆ ದೊಡ್ಡ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿದೆ.

ಎಣ್ಣೆಯ ಕೈಗಾರಿಕೆ ಇನ್ನೂ ಹೆಚ್ಚಬೇಕಾದರೆ ಸಾಬೂನಿನ ಕಾರ್ಖಾನೆಗಳೂ, ಮೋಂಬತ್ತಿ ಮುಂತಾದ ಉಪ ಕೈಗಾರಿಕೆಗಳೂ ಪ್ರಬಲಿಸಬೇಕು. ಒಳದೇಶದಲ್ಲಿಯೇ ಹಿಂಡಿಗೆ ಗಿರಾಕಿ ಹೆಚ್ಚಬೇಕು. ಬಿತ್ತದ ಎಣ್ಣೆಗಳ ರಫ್ತು ಸುಲಭವಲ್ಲ. ಆದ್ದರಿಂದ ಹೆಚ್ಚು ಯಂತ್ರಗಳನ್ನು ಹೂಡಲು ಅವಕಾಶವಿಲ್ಲ. ದೊಡ್ಡ ಯಂತ್ರಗಳನ್ನು ಸ್ಥಾಪಿಸಿ, ಸಂಸ್ಥಾನಾಮಳೆ ಹಳ್ಳಿಗಳಲ್ಲಿ ಊರಿಕೊಂಡಿರುವ ಕಲ್ಲುಗಾಣದ ಕೆಲಸವನ್ನು ನಿಲ್ಲಿಸಿ ಹಳ್ಳಿಯ ಕೈಗಾರಿಕೆಯೊಂದನ್ನು ನಾಶಮಾಡುವುದು ಯೋಗ್ಯವೆ, ಪ್ರಯೋಜನಕಾರಿಯೆ ಎಂಬ ಪ್ರಶ್ನೆಯೂ ಏಳುತ್ತದೆ. ಶಕ್ತಿ ಚಾಲಿತ ಯಂತ್ರಗಳಿಂದ ಎಣ್ಣೆ ತೆಗೆಯುವುದರಿಂದ ಉಳಿತಾಯ ಹೆಚ್ಚೆ ಎಂಬ ಪ್ರಶ್ನೆಯನ್ನೂ ಹಾಕಿಕೊಂಡು ಮುಂಬರಿಯುವುದು ಮೇಲು. ಕೊಬ್ಬರಿಯನ್ನೂ ಸೇರಿಸಿಕೊಂಡರೆ ಈ ದೇಶದಿಂದ ವರ್ಷಂಪ್ರತಿ ಒಟ್ಟು ಹೊರಗೆ ಹೋಗುವ ಎಣ್ಣೆಯ ಬಿತ್ತಗಳು ಸುಮಾರು ೧೫೭ ಲಕ್ಷ ಮಣ. ಬಹು ಸ್ವಲ್ಪವನ್ನು ಮಾತ್ರ ಒಳದೇಶದಲ್ಲಿ ಉಪಯೋಗಿಸುತ್ತಾರೆ. ಕೈಗಾರಿಕೆ ಇಲಾಖೆಯ ಸಲಹೆಯಿಂದ ೨೪ (Anderson Expellers ಎಂಬ) ಯಂತ್ರಗಳನ್ನು ಬೇರೆಬೇರೆ ಕಡೆ ಹೂಡಿ ದಿನವೊಂದಕ್ಕೆ ೭೦ ಟನ್ ಎಣ್ಣೆಯನ್ನು ತೆಗೆಯುತ್ತಾರೆ.

ಮೈಸೂರಲ್ಲಿ ಮೋಂಬತ್ತಿಯನ್ನು ತಯಾರಿಸುವ ಒಂದು ಸಣ್ಣ ಕಾರ್ಖಾನೆ ಇದೆ. ಒಂದು ಬಣ್ಣಗಳ ಕಾರ್ಖಾನೆಯೂ, ಇನ್ನೊಂದು 'ವೈಟ್ ಲೆಡ್' ಎಂಬ ಬಣ್ಣದ ಕಾರ್ಖಾನೆಯೂ ಬೆಂಗಳೂರಲ್ಲಿ ನಡೆಯುತ್ತಿವೆ. ಸರ್ಕಾರದವರೇ ಒಂದು ದೊಡ್ಡ ಸಾಬೂನಿನ ಕಾರ್ಖಾನೆಯನ್ನು ನಡಸುತ್ತ ಬಟ್ಟೆಗೆ ಹಾಕುವ ಸಾಬೂನನ್ನೂ, ಮೈಗೆ ಹಚ್ಚುವ ಬಗೆಬಗೆಯ ಸುಗಂಧದ ಸಾಬೂನುಗಳನ್ನೂ ತಯಾರಿಸಿ ವರ್ಷಕ್ಕೆ ಸುಮಾರು ೪ ಲಕ್ಷ ರೂಪಾಯಿಗಳಷ್ಟನ್ನು ಮಾರುತ್ತಿದ್ದಾರೆ. ಇದಲ್ಲದೆ ೧೦–೧೨ ಇತರ ಸಣ್ಣ ದೊಡ್ಡ ಸಾಬೂನಿನ ಕಾರ್ಖಾನೆಗಳು ಅಗ್ಗದ ಸಾಬೂನನ್ನು ತಯಾರಿಸುವುವು.*

ವರ್ಷಕ್ಕೆ ಸು. ೪೭ ಲಕ್ಷ ರೂ. ಗಳ ಸಾಬೂನು ಇಲ್ಲಿಂದ ರಫ್ತಾಗುತ್ತಿದೆ. ಸಾಬೂನಿನ ಕಾರ್ಖಾನೆಗಾಗಿ ಸು. ೪೫,೦೦೦ ಮಣ ಕೊಬ್ಬರಿ ಎಣ್ಣೆ ಆಮದಾಗುತ್ತಿದೆ.

ಸಾರತೈಲಗಳು

ಅನೇಕ ಬಗೆಯ ಎಲೆ, ಹೂ, ತೆನೆ, ಕಡ್ಡಿ, ಹುಲ್ಲು, ಮರ, ಬಿತ್ತ ಇವುಗಳಿಂದ ಸಾರತೈಲಗಳನ್ನು ತೆಗೆಯಬಹುದು. ತೆಗೆಯುವ ವಿಧಾನಗಳೂ ಹಲವು ಬಗೆ: ಬಟ್ಟಿ ಇಳಿಸುವುದು, ತೈಲ ಹಿಂಡುವುದು, ಕೊಬ್ಬು ಮುಂತಾದವುಗಳಿಗೆ ಹೀರಿಕೊಳ್ಳುವುದು, ಇತ್ಯಾದಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಯಾರಾಗುವ ದಾಲ್ಚಿನ್ನಿ ಎಣ್ಣೆಯನ್ನು ನಮ್ಮ ಕಾಡುಗಳಲ್ಲಿ ಬೆಳೆಯುವ ದಾಲ್ಚಿನ್ನಿಯಿಂದ ಮಾಡುತ್ತಾರೆ. ಬಣ್ಣ, ವಾರ್ನಿಷು ಮುಂತಾದವಕ್ಕೂ ಔಷಧಿಗಳಿಗೂ ಉಪಯುಕ್ತವಾಗುವ ಕರ್ಪೂರ ತೈಲವನ್ನು ತೆಗೆಯುವುದಕ್ಕೆ ನಮ್ಮ ದೇಶದ ಅನೇಕ ಮರಗಳು ಮೂಲ ವಸ್ತುಗಳನ್ನು ಒದಗಿಸುವುವು. ಈ ತೈಲವನ್ನು ರೂಡಿಸುವ ಪ್ರಯತ್ನ ಬೇಕಾದಷ್ಟು ನಡೆಯಬಹುದಾಗಿದೆ.

ಓಮು, ಮೆಂತ್ಯ, ಜೀರಿಗೆ, ಕಸ್ತೂರಿ, ಜಾಜಿ, ಮಲ್ಲಿಗೆ, ಗುಲಾಬಿ, ಪಚ್ಚೆಯತೆನೆ, ಏಲಕ್ಕಿ, ಲವಂಗ, ಲಾವಂಚ ಮುಂತಾದವುಗಳಿಂದಲೂ ಬಗೆಬಗೆಯ ಸುವಾಸನೆ ತೈಲಗಳನ್ನೂ ಅತ್ತರುಗಳನ್ನೂ ತೆಗೆಯುತ್ತಾರೆ.

ಪರಿಮಳ ದ್ರವ್ಯಗಳು

ಇವುಗಳ ಜೊತೆಗೆ ಅಗುರು, ಊದುಬತ್ತಿ, ಗಂಧದ ಬಿಲ್ಲೆ, ಹಾಲು ಮಡ್ಡಿ, ಮುಂತಾದವುಗಳ ತಯಾರಿಗೂ ಒಳದೇಶದಲ್ಲಿ ಸಾಮಗ್ರಿಯಿದೆ. ಮೈಸೂರಿನ ಪರಿಮಳದ್ರವ್ಯಗಳಿಗೆ ಭರತಖಂಡದಲ್ಲೇ ಗಿರಾಕಿಯಿದೆ; ಕೀರ್ತಿಯಿದೆ.

ಗಂಧದ ಎಣ್ಣೆ

ಗಂಧದ ಎಣ್ಣೆಯನ್ನು ತಯಾರಿಸಲು ಮೈಸೂರಲ್ಲಿ ಒಂದು, ಬೆಂಗಳೂರಲ್ಲಿ ಒಂದು ಹೀಗೆ ಎರಡು ಕಾರ್ಖಾನೆಗಳನ್ನು ಸರಕಾರದವರು ಏರ್ಪಡಿಸಿದ್ದಾರೆ. ವರ್ಷಂಪ್ರತಿ ಸರಾಸರಿ ೨೫–೩೦ ಲಕ್ಷ ರೂಪಾಯಿಗಳ ಬೆಲೆ ಬಾಳುವಷ್ಟು ತೈಲವನ್ನು ಅಲ್ಲಿ ತಯಾರಿಸುವರು. ನಮ್ಮ ತೈಲ ಆಸ್ಟ್ರೇಲಿಯಾದವರು ತಯಾರಿಸುವ ತೈಲಕ್ಕಿಂತಲೂ ಅಗ್ಗವಲ್ಲವಾದರೂ ಶ್ರೇಷ್ಠವಾದುದು.



ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ

ಲೋಹದ ಕೈಗಾರಿಕೆಗಳು

ಹಿತ್ತಾಳೆ ತಾಮ್ರದ ಕೆಲಸಗಳು

ಯಂತ್ರ ವಿದ್ಯುಚ್ಛಕ್ತಿಗಳ ಸಹಾಯವಿಲ್ಲದೆ ನಡೆಯುವ ಕೆಲಸಗಳಲ್ಲಿ ಮುಖ್ಯವಾದವು ಹಿಂದಿನ ಕಾಲದಿಂದಲೂ ನಡೆದು ಬಂದವು ಮಾಗಡಿ, ನಾಗಮಂಗಲ, ಶ್ರವಣಬೆಳುಗೊಳ ಪ್ರಾಂತಗಳಲ್ಲಿ ನಡೆಯುವ ಹಿತ್ತಾಳೆ ತಾಮ್ರದ ಕೆಲಸಗಳು. ಸಾಧಾರಣವಾಗಿ ಜನರಿಗೆ ಬೇಕಾಗುವ ಪಾತ್ರೆ ಉಪಕರಣ ಸಾಮಾನುಗಳು ಇಲ್ಲಿ ತಯಾರಾಗುವುವು. ಹಿತ್ತಾಳೆ ತಾಮ್ರದ ತಗಡುಗಳನ್ನು ಹೊರಗಿಂದ ತರಿಸಿ ಪಾತ್ರೆ ಪದಾರ್ಥಗಳನ್ನು ಮಾಡುವರು.* ಕಂಚಿನ ಪಾತ್ರೆಗಳು, ಆಟದ ಸಾಮಾನು, ತಂತಿಯ ಸಾಮಾನು ಇವು ಹಲವು ಕಡೆ ಆಗುವುವು. ತಾಮ್ರದ ತಂತಿಯನ್ನು ಮೇಲಾಗಿ ತೆಗೆಯುವಂತಾದರೆ ಒಳದೇಶದಲ್ಲಿಯೂ, ಹೊರಗೂ ಅದಕ್ಕೆ ದೊಡ್ಡ ಗಿರಾಕಿ ಸಿಕ್ಕುವುದು. ಆದರೆ ಆ ಕೆಲಸಕ್ಕೆ ಬೇಕಾಗುವ ತಾಮ್ರವಾಗಲಿ ಕಾರ್ಯ ಕುಶಲತೆಯಾಗಲಿ ದೇಶದಲ್ಲಿ ಇಲ್ಲ. ವಿದ್ಯುದ್ದೀಪಗಳ ಪ್ರಸಾರಣಕ್ಕೆ ಬೇಕಾಗುವ ಎಲ್ಲ ತಾಮ್ರದ ತಂತಿಯೂ ಈಗ ಜರ್ಮನಿ ಮುಂತಾದ ವಿದೇಶಗಳಿಂದಲೇ ಬರುತ್ತಿದೆ. ಸರ್ಕಾರದವರ ಯಾಜಮಾನ್ಯದಲ್ಲಿ ಮೊದಲು ಏರ್ಪಟ್ಟು, ಈಗ ಸಾಹುಕಾರಿ ಕಂಪನಿಯೊಂದರ ಆಡಳಿತದಲ್ಲಿ ನಡೆಯುತ್ತಿರುವ ಮೈಸೂರು ಪ್ರೆಮಿಯರ್ ಮೆಟಲ್ ಫ್ಯಾಕ್ಟರಿ ಎಂಬ ಕಾರ್ಖಾನೆಯಲ್ಲಿ ಅನೇಕ ವಿಧವಾದ ಪಾತ್ರೆಗಳೂ, ಲೋಹಶಿಲ್ಪವೂ ನಡೆಯುವುದಲ್ಲದೆ ಪಾತ್ರೆಗಳಿಗೆ ನಿಕ್ಕಲ್ ಮತ್ತು ಬೆಳ್ಳಿಯ ಕಲಾಯಿಯನ್ನೂ ಮಾಡುತ್ತಿದ್ದಾರೆ. ಅಲ್ಲದೆ, ಬೆಂಗಳೂರಿನ ಅನ್ನಪೂರ್ಣ ಕುಕ್ಕರ್ ಕಂಪನಿಯವರೂ ಬಗೆಬಗೆಯ ಲೋಹದಪಾತ್ರೆಗಳನ್ನು ತಯಾರಿಸುತ್ತಿದ್ದಾರೆ. ಸರ್ಕಾರದ ವಿದ್ಯುಚ್ಛಕ್ತಿ ಶಾಖೆಯವರು ಕೆಲವು ಬಗೆಯ ಹಂಡೆಗಳನ್ನೂ ಟ್ರಾನ್ಸ್‌ಫಾರ್ಮರುಗಳನ್ನೂ ತಯಾರಿಸುತ್ತಿದ್ದಾರೆ. ಅನೇಕರು ಯಂತ್ರಗಳಿಗೂ ಮೋಟರುಗಳಿಗೂ

---

* ಆದರೆ ಭಾರವಾದ ಪಾತ್ರೆಗಳ ಬಳಕೆ ಕಡಮೆಯಾಗುತ್ತಿರುವುದರಿಂದ ಈ ಬಗೆಯ ಕೆಲಸಕ್ಕೆ ಗಿರಾಕಿ ಕಡಮೆಯಾಗುತ್ತಿದೆ.

ಸಂಬಂಧಿಸಿದ ಕಾರ್ಯಾಲಯಗಳನ್ನು ಮಾಡಿ 'ರಿಪೇರ್' ಕೆಲಸಗಳನ್ನೂ ಮಾಡುತ್ತಿದ್ದಾರೆ. ಅಲ್ಲಿ ಕೆಲವರು ಸಣ್ಣ ಸಣ್ಣ ಯಂತ್ರೋಪಕರಣಗಳನ್ನು ತಯಾರಿಸುವುದೂ ಉಂಟು.

ವೀಣೆತಂತಿ

ಮಾಗಡಿಯಲ್ಲಿ ಕೆಲವು ಮನೆಗಳವರು ವೀಣೆ ತಂಬೂರಿಗಳಿಗೆ ಬೇಕಾಗುವ ವಾದ್ಯದ ತಂತಿಗಳನ್ನು ತೆಗೆಯುವರು. ಈ ತಂತಿ ತೆಗೆಯುವ ಕೆಲಸಕ್ಕೆ ಪರದೇಶದವರ ಪೈಪೋಟಿ ಹೆಚ್ಚು. ಆ ಕಸುಬಿಗೆ ಉತ್ತೇಜನವೂ ಗಿರಾಕಿಯೂ ಕಡಮೆಯಾಗಿ ಅದು ಅಳಿದು ಹೋಗುತ್ತಿದೆ. ಬೆಳ್ಳಿಯಲ್ಲಿಯೂ ಬಂಗಾರದಲ್ಲಿಯೂ ತಂತಿಯನ್ನು ತೆಗೆದು ಜರತಾರಿ ಕಂಬಿಗಳನ್ನು ಮಾಡುವ ಕೆಲಸಕ್ಕೆ ಬೆಂಗಳೂರಲ್ಲಿ ಒಂದು ಕಾರ್ಖಾನೆಯಿದೆ. ಆದರೆ ಈ ಉದ್ಯೋಗದಲ್ಲಿ ಹೆಚ್ಚು ಜನರಿಲ್ಲ.

ಕಲ್ನಾರು

ಕಲ್ನಾರನ್ನು ತಯಾರಿಸುವುದಕ್ಕೂ ಉತ್ತಮವಾದ ಕಲ್ನಾರಿನ ಹಲಗೆಗಳನ್ನು ಮಾಡುವುದಕ್ಕೂ ಕಂಪನಿಯೊಂದು ಸ್ಥಾಪಿತವಾಗಿ ನಡೆಯುತ್ತಿದೆ. ಇಟ್ಟಿಗೆ, ನೆಲದ ಹೆಂಚು, ಮಾಳಿಗೆಯ ಹೆಂಚು, ಕೊಳವಿಗಳು ಮುಂತಾದವನ್ನು ತಯಾರಿಸಲು ಎರಡು ಸಂಸ್ಥೆಗಳೂ, ಸಿಮೆಂಟ್ ಮತ್ತು ಕಬ್ಬಿಣದಿಂದ ಕೆಲಸಮಾಡುವ ಒಂದು ಕಾರ್ಖಾನೆಯೂ ಏರ್ಪಟ್ಟಿವೆ. ಅಲ್ಲಲ್ಲಿ ಒಟ್ಟಿಗೆ ಸೇರಿ ಹತ್ತು ಕಾರ್ಖಾನೆಗಳು ಸಾಮಾನ್ಯ ಇಟ್ಟಿಗೆಯನ್ನೂ 'ಮಂಗಳೂರು' ಹೆಂಚನ್ನೂ ತಯಾರಿಸುತ್ತವೆ.

ಇಲ್ಲಿ ಈಗ ಇರತಕ್ಕ ಕೈಗಾರಿಕೆಗಳಲ್ಲದೆ, ಪ್ರಕೃತದಲ್ಲಿ ರಫ್ತಾಗುತ್ತಿರುವ ಕ್ರೋಮು, ಮ್ಯಾಂಗನೀಸುಗಳಿಂದ ಭದ್ರಾವತಿ ಕಬ್ಬಿಣದ ಕಾರ್ಖಾನೆಯ ಕೆಲಸಗಳನ್ನು ವಿಸ್ತರಿಸುವಾಗ ಉಪಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವಿದೆ.

ಬಳೆಗಳು

ದೇಶದಲ್ಲಿ ದೊರೆಯುವ ಬಳಪದ ಕಲ್ಲಿನಿಂದಲೂ ಉತ್ತಮ ಬಗೆಯ ಜೇಡಿ ಮಣ್ಣುಗಳಿಂದಲೂ ಅನೇಕ ಬಗೆಯ ಸಾಮಾನನ್ನು ಮಾಡುವ ಯತ್ನಗಳು ನಡೆಯಬಹುದು. ಕೋಲಾರ, ತುಮಕೂರು, ಚಿತ್ರದುರ್ಗ

ಈ ಜಿಲ್ಲೆಗಳ ಕೆಲವು ಊರುಗಳಲ್ಲಿ ಬಳೆಯ ಕೈಗಾರಿಕೆ ನಡೆಯುವುದು. ಆದರೆ ದೊಡ್ಡ ಪಟ್ಟಣಗಳಲ್ಲಿ ಜನರ ಮನಸ್ಸನ್ನು ಮೋಹಿಸಿ ಅವರ ಬಳಕೆಗೆ ಬರುತ್ತಿರುವ ಬಳೆಗಳೆಲ್ಲ ವಿದೇಶಗಳಿಂದಲೇ ಬರುತ್ತಿವೆ. ಇಲ್ಲಿನ ಬಳೆಯವರು ಅಂಬಾಲ, ಫಿರೋಸ್‌ಪುರ, ಕಡೆಗಳಿಂದ ಮನೆಬೆನ್ನೂರಿಗೆ ನೀಲಿ ಹಸುರುಗಳ ಗಾಜನ್ನು ತರಿಸಿ ಬಳೆಗಳನ್ನು ತಯಾರಿಸುತ್ತಾರೆ. ದೇಶದ ಒಳಗೇ ಗಾಜಿನ ಶಿಲೆ ದೊರಕುವುದರಿಂದಲೂ, ಚೌಳುಪ್ಪು ಹೇರಳವಾಗಿರುವುದರಿಂದಲೂ ಇಲ್ಲಿಯೇ ಬಗೆಬಗೆಯ ಬಳೆಗಳನ್ನು ಸಮೆಯಲು ಅನುಕೂಲಗಳಿವೆ ಎನ್ನಬಹುದು.

ಈಗ ಸ್ವಲ್ಪ ಕಾಲದಿಂದ ಸರ್ಕಾರದವರು ಪಿಂಗಾಣಿ ಕಾರ್ಖಾನೆಯೊಂದನ್ನು ಸ್ಥಾಪಿಸಿ ಉತ್ತಮವಾದ ವಿದ್ಯುಚ್ಛಕ್ತಿಯ ಮತ್ತು ಇತರ ಸಾಮಾನನ್ನು ತಯಾರಿಸುತ್ತಿದ್ದಾರೆ.

ಕೈಗಾರಿಕೆ ಮತ್ತು ಕಾರ್ಖಾನೆ ವಿದ್ಯೆ

ಯಂತ್ರ ಶಿಲ್ಪಕ್ಕೂ, ಕಾರ್ಖಾನೆ ಕೆಲಸಕ್ಕೂ, ಯಂತ್ರ ಚಾಲನೆಗೂ ಬೇಕಾಗುವ ವಿದ್ಯೆಯನ್ನು ಕಲಿಸಲು ಎಂಜಿನಿಯರಿಂಗ್ ಶಾಲೆಯಂಥ ಪ್ರೌಢ ಪಾಠಶಾಲೆಗಳಿವೆ. ಸರಕಾರದಿಂದ ಅನೇಕರು ವೇತನಪಡೆದು ಶಿವಸಮುದ್ರದ ಕಾರ್ಯಾಲಯ, ಕೈಗಾರಿಕೆ ಮತ್ತು ರೈಲ್ವೆ ಕಾರ್ಯಾಲಯಗಳಲ್ಲಿ ಕೆಲಸಗಳನ್ನು ಕಲಿತುಕೊಳ್ಳುತ್ತಿರುವರು. ವ್ಯವಸಾಯ, ತೋಟದ ವಿದ್ಯೆ, ರೇಷ್ಮೆಯ ಕೆಲಸ ಮುಂತಾದವನ್ನು ಕಲಿಸುವ ಏರ್ಪಾಡೂ ಬಹುವಾಗಿ ನಡೆದಿದೆ. ಸುಮಾರು ಎಲ್ಲ ಡಿಸ್ಟ್ರಿಕ್ಟ್ ಪಟ್ಟಣಗಳಲ್ಲಿಯೂ ಒಂದೊಂದು ಕೈಗಾರಿಕೆ ಶಾಲೆಯಿದೆ. ಹೈ ಸ್ಕೂಲುಗಳಲ್ಲಿ ಮರಗೆಲಸ, ಕುಲುಮೆ ಕೆಲಸ, ಬೆತ್ತದ ಕೆಲಸ, ಯಂತ್ರರಹಸ್ಯ ಮುಂತಾದವನ್ನು ಕಲಿಸುತ್ತಾರೆ. ಕಸುಬು ವಿದ್ಯೆಗಳನ್ನು ಕಲಿಸುವ ಮೂರು ಶಾಲೆಗಳು ಬೇರೆ ಇವೆ. ಮರದಲ್ಲಿ ಕೆತ್ತನೆ ಕೆಲಸ, ಲಾಕಿ ಬಣ್ಣದ ಸಾಮಾನುಗಳ ತಯಾರಿಕೆ, ನೇಗೆ ಇವುಗಳನ್ನೂ ಅಲ್ಲ ಅಭ್ಯಾಸಮಾಡಿಸುವರು.

ಸರಕಾರದವರು ರೇಷ್ಮೆ ನೇಗೆಯ ಕಾರ್ಖಾನೆಯೊಂದನ್ನು ತೆರೆದು ಅಲ್ಲಿ ಬಗೆಬಗೆಯ ಉತ್ತಮವರ್ಗದ ಮಗ್ಗದ ಕೆಲಸಗಳನ್ನೂ ಬಣ್ಣದ ಕೆಲಸಗಳನ್ನೂ ಮಾಡಿಸುತ್ತಾರೆ. ಸಾಬೂನಿನ ಕಾರ್ಖಾನೆಯೊಳಗೇ ಹಲವು

ಬಗೆಯ ಪರೀಕ್ಷಣ ಕಾರ್ಯಗಳು ನಡೆಯುವ ಏರ್ಪಾಡಿದೆ. ಔಷಧಿಗಳನ್ನು ತಯಾರಿಸುವ ಕಾರ್ಯಗಳನ್ನೂ ರಸ್ತೆಗಳಿಗೆ ಬೇಕಾಗುವ ಕೀಲೆಣ್ಣೆ ಯನ್ನು ಮಾಡಿಸುವ ಯತ್ನಗಳನ್ನೂ ಮಾಡುತ್ತಿರುವರು. ಸರಕಾರದ ಸೆಂಟ್ರಲ್ ಇಂಡಸ್ಟ್ರಿಯಲ್ ವರ್ಕ್‌ಷಾಪಿನಲ್ಲಿ ಹೊಸನಮೂನೆಯ ನೇಗಿಲು ಗಳನ್ನು ಮಾಡಿ ಮಾರುವರು. ಇದುವರೆಗೂ ಆಮದಾಗುತ್ತಿದ್ದ ಈ ನೇಗಿಲು ಗಳು ಮೊದಲಿನ ಕ್ರಯದ ಅರ್ಧಕ್ಕೇ ಸಿಕ್ಕುವಂತಾಗಿರುವುದು ವಿಶೇಷ ಸಂಗತಿ. ಈ ಎಲ್ಲ ಬಾಬುಗಳಲ್ಲಿಯೂ ಸುಮಾರು ೧೨ ಲಕ್ಷ ರೂಪಾಯಿ ವರೆಗೂ ಬಂಡವಾಳ ಬಿದ್ದಿದೆ. ಇವುಗಳ ಜೊತೆಗೆ ಒರಟು ರೇಷ್ಮೆ ನೂಲುವ ಕಂಪನಿಯೊಂದಕ್ಕೂ, ಸಿಮೆಂಟ್ ಉತ್ಪತ್ತಿಗೂ, ಅಮೋನಿಯಂ ಸಲ್ಫೇಟ್, ಸಲ್ಫ್ಯೂರಿಕ್ ಆಸಿಡ್ ಮುಂತಾದವನ್ನು ಇಲ್ಲೇ ತಯಾರುಮಾಡಿಕೊಳ್ಳುವು ದಕ್ಕೂ ಕಾರ್ಖಾನೆಗಳು ಏರ್ಪಡುವುದರಲ್ಲಿದೆ. ಕಾಗದದ ಕಾರ್ಖಾನೆ ಯದೂ ಸೇರಿ ಸುಮಾರು ೬೦ ಲಕ್ಷ ರೂಪಾಯಿ ಬಂಡವಾಳದಿಂದ ಈ ಕೆಲಸ ಗಳು ಮುಂದುವರಿಯಲಿರುವುವು. ಈ ಸಂಬಂಧದಲ್ಲೆಲ್ಲ ಸರಕಾರದ ಉತ್ತೇಜನವೂ ಸಾಹಸವೂ ಫಲಕಾರಿಯಾಗಿ ದೇಶದ ಸಂಪದಭಿವೃದ್ಧಿ ಬಹು ಮುಖವಾಗಿ ನಡೆಯಲು ಅವಕಾಶವಾಗುತ್ತಿರುವುದು.

ಸಂಸ್ಥಾನದಲ್ಲಿ ನಡೆಯುವ ಎಲ್ಲ ಕುಶಲವಿದ್ಯೆ ಮತ್ತು ಕೈ ಕಸುಬುಗ ಳನ್ನೂ ಕಲಿಸಲು ಮೈಸೂರಲ್ಲಿ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ ಸ್ಟಿಟ್ಯೂಟ್ ಎಂಬ ಕುಶಲ ಕಲಾಶಾಲೆಯಿದೆ. ಅಲ್ಲಿನ ಕಾರ್ಯಾಲಯಗಳ ಲ್ಲಿನ ಕೆಲಸದಿಂದ ಲಾಭ ಬರುತ್ತಿದೆ. ವಿಶ್ವವಿದ್ಯಾನಿಲಯದವರು ಸ್ಥಾಪಿಸಿ ರುವ ಎಂಜಿನಿಯರಿಂಗ್ ಕಾಲೇಜಿನಲ್ಲಿಯೂ, ಹೊಸದಾಗಿ ಸ್ಥಾಪಿತವಾಗಲಿ ರುವ ಟೆಕ್ನೊಲಾಜಿಕಲ್ ಇನ್‌ಸ್ಟಿಟ್ಯೂಟಿನಲ್ಲಿಯೂ ಕೈಗಾರಿಕೆ ಮತ್ತು ಯಂತ್ರ ವಿದ್ಯೆಗಳಲ್ಲಿ ಉಚ್ಚಶಿಕ್ಷಣ ದೊರೆಯುವುದು.

ಸ್ವತಂತ್ರವಾಗಿಯೂ ಸರಕಾರಿ ವೇತನಗಳ ಸಹಾಯದಿಂದಲೂ ಸಂಸ್ಥಾನದ ಹೊರಗೆ ಹೋಗಿ ವರ್ಷಂಪ್ರತಿ ಅನೇಕ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ದೊರೆಯದಿರುವ ವಿದ್ಯೆಗಳಲ್ಲಿ ಶಿಕ್ಷಣ ಪಡೆದು ಬರುತ್ತಿದ್ದಾರೆ.

ಪ್ರತಿಯೊಂದು ದೊಡ್ಡ ಕೈಗಾರಿಕೆ ಕಾರ್ಯಾಲಯದಲ್ಲಿಯೂ, ವ್ಯವ ಸಾಯದ ಇಲಾಖೆಯಲ್ಲಿಯೂ, ಕಾರ್ಖಾನೆಯಲ್ಲಿಯೂ, ಶಾಸ್ತ್ರ ಪರೀಕ್ಷಣ ನಡೆದು ಹೊಸಹೊಸ ವಿಧಾನಗಳೂ, ನಷ್ಟ ನಿವಾರಣೆಯ ಮಾರ್ಗಗಳೂ



ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟ್

ಕಂಡು ಹಿಡಿಯಲ್ಪಡುತ್ತಲಿವೆ. ಅನೇಕ ಶಾಸ್ತ್ರ ಪರೀಕ್ಷಣಗಳನ್ನು ಬೆಂಗಳೂರಲ್ಲಿರುವ ತಾತಾ ಇನ್‌ಸ್ಟಿಟ್ಯೂಟಿನಲ್ಲಿ ಕಂಡುಹಿಡಿದು ಒಂದು ಕಡೆ ಶಾಸ್ತ್ರದ ತತ್ವಭಾಗಕ್ಕೂ ಇನ್ನೊಂದು ಕಡೆ ಕೈಗಾರಿಕೆಯ ಪರಿಷ್ಕರಣ ಅಭಿವೃದ್ಧಿಗಳಿಗೂ ಪ್ರಯೋಜನ ದೊರಕಿಸುತ್ತಿದ್ದಾರೆ.

ಉಪಸಂಹಾರ

ಅನೇಕ ಹೊಸ ಕೈಗಾರಿಕೆಗಳು ಸ್ಥಾಪಿತವಾಗಿ ಬೆಳೆಯುವುದಕ್ಕೆ ಬೇಕಾಗುವ ಸಾಮಗ್ರಿಗಳೆಲ್ಲ ಸಂಸ್ಥಾನದಲ್ಲಿ ದೊರಕುವುವು. ಆದರೆ ಬಂಡವಾಳ ಸಿಕ್ಕುವುದು ಕಷ್ಟ. ಕೆಲಸಗಳನ್ನು ದೊಡ್ಡವಾಗಿ ಏರ್ಪಡಿಸಿ ನಿರ್ವಹಿಸಬಲ್ಲ ಸಂವಿಧಾನ ಚಾತುರ್ಯವೂ, ಸಾಹಸವೂ ಜನರಲ್ಲಿ ಸಾಕಾದಷ್ಟು ಇಲ್ಲ. ಕ್ರಮವಾಗಿ ಪರೀಕ್ಷಣ ಮತ್ತು ಶೋಧನಾಕಾರ್ಯಗಳನ್ನು ನಡಸಿ ತಿಳಿವಳಿಕೆಯನ್ನು ಹೆಚ್ಚಿಸುವ ಖಾಸಗಿ ಸಂಸ್ಥೆಗಳು ಅನೇಕವಿಲ್ಲ. ಝುಕೊಸ್ಲೋವಾಕಿಯ, ಇಂಗ್ಲಂಡ್, ಜರ್ಮನಿ, ಜಪಾನ್ ರಾಷ್ಟ್ರಗಳಂತೆ ಸಂತತವಾಗಿ ಜೇನು ಗೂಡಿನ ದುಂಬಿಗಳಂತೆ ಕೆಲಸ ನಡಸಿದ ಹೊರತು ದೇಶದ ಬಡತನ ಹೋಗದು ; ಜನರ ಸಂಪತ್ತು ವೃದ್ಧಿಯಾಗದು.

ಸಾಹುಕಾರಿ ದ್ರವ್ಯ ಸಂಸ್ಥೆಗಳು

ಮುಂಬರಿದ ಪ್ರತಿ ದೇಶದಲ್ಲಿಯೂ ಕೈಗಾರಿಕೆ ವ್ಯಾಪಾರಗಳಿಗೆ ಹಣವನ್ನು ಒದಗಿಸಲು ಸರಕಾರದ ಮತ್ತು ಸಾಹುಕಾರರ ಜೊತೆಗೆ ಬ್ಯಾಂಕುಗಳೂ ಇತರ ಕೂಡು ಬಂಡವಾಳದ ಸಂಘಗಳೂ (Joint-Stock Companies) ಇರುತ್ತವೆ. ಅವು ದೊಡ್ಡಗಾತ್ರಕ್ಕೆ ಬೆಳೆದು ಹಲವುವೇಳೆ ನಾಲ್ಕಾರು ದೇಶಗಳಲ್ಲಿ ಶಾಖೆಗಳನ್ನೂ ಕಾರ್ಯರಂಗಗಳನ್ನೂ ಏರ್ಪಡಿಸಿಕೊಳ್ಳುವುವು. ನಮ್ಮಲ್ಲಿ ಇಂಥ ಸಂಸ್ಥೆಗಳಿಲ್ಲ. ಇರುವವು ಸಣ್ಣವು ; ಅವುಗಳ ಬಂಡವಾಳ ಕಡಮೆ ; ಕಾರ್ಯಶಕ್ತಿ ಸಾಹಸಗಳೂ ಸ್ವಲ್ಪ.

ಸಂಖ್ಯೆ ; ಬಂಡವಾಳ

ಈ ಬಗೆಯ ಸಂಸ್ಥೆಗಳು ದೇಶದಲ್ಲಿ ಒಟ್ಟು ೧೬೯ ಇವೆ. ಇವುಗಳಲ್ಲಿ ೧೨೬ ಖಾಸಾ ನಮ್ಮ ದೇಶದವು. ಅವುಗಳ ಹೆಸರಿಗಿರುವ ಮೂಲಧನ ಸುಮಾರು ೯೬೪ ಲಕ್ಷ ರೂಪಾಯಿ. ಅವಕ್ಕೆ ಷೇರು ಸಿಕ್ಕಿರುವುದು ೨೨೭ ಲಕ್ಷಕ್ಕೆ ; ಹಣ ಕೈಗೆ ಬಂದಿರುವುದು ೧೬೨ ಲಕ್ಷ ರೂಪಾಯಿಗಳು ಮಾತ್ರ ! ಎಂದರೆ ಈ ಸಂಸ್ಥೆಗಳವರು ತೆಗೆಯಬಹುದಾದ ಬಂಡವಾಳ ೯.೬ ಕೋಟಿ ; ಇಷ್ಟಾದಾಗ್ಯೂ ಅವರು ಮಾಡುತ್ತಿರುವ ಕೆಲಸಕ್ಕೆ ೧.೬ ಕೋಟಿಗಿಂತ ಹೆಚ್ಚಾಗಿ ಹಣ ಉಪಯೋಗಿಸಿಕೊಂಡಿಲ್ಲ. ಪಾಶ್ಚಾತ್ಯ ಕಂಪನಿಗಳವರು ಈ ಅಂಶದಲ್ಲಿ ನೂರಕ್ಕೆ ನೂರರಂತೆ ಹಣವಿಟ್ಟುಕೊಂಡು ಅದರ ಮೇಲೆ ಹತ್ತರಷ್ಟು ನೂರರಷ್ಟು ಪ್ರಮಾಣದಲ್ಲಿ ಕೆಲಸಮಾಡುತ್ತಾರೆ. ೧.೬ ಕೋಟಿ ರೂಪಾಯಿಗಳ ಮೂಲಧನವಿರುವ ನಮ್ಮ ಸಂಸ್ಥೆಗಳಲ್ಲಿ ಹಲವು ಊರ್ಜಿತ ಸ್ಥಿತಿಯಲ್ಲಿ ಇಲ್ಲದಿರುವುದೂ, ಶೋಚನೀಯವಾದ ಸಂಗತಿ.

ಮೈಸೂರಿನ ಹೊರಗೆ ಸ್ಥಾಪಿತವಾಗಿ ಇಲ್ಲಿ ಕೆಲಸ ನಡಸುತ್ತಿರುವ ಕಂಪನಿಗಳ ಸಂಖ್ಯೆ ೪೩. ಅವುಗಳ ಮೂಲಧನವೆಲ್ಲ ಇಲ್ಲಿ ಕೆಲಸಕ್ಕೆ ಒದಗುವುದಿಲ್ಲ. ಎಷ್ಟು ಭಾಗ ಇಲ್ಲಿ ದುಡಿಯುತ್ತಿದೆ ಎಂಬುದನ್ನು ಲೆಕ್ಕಮಾಡುವುದೂ ಕಷ್ಟ. ಆ ೪೩ ಕಂಪನಿಗಳಲ್ಲಿ ಇಂಗ್ಲಂಡಿನವು ೧೪, ಸ್ಕಾಟ್ ಲಂಡ್ ಅಮೇರಿಕಾದವು ಎರಡೆರಡು ; ಒಟ್ಟು ಹದಿನೆಂಟು. ಉಳಿದವುಗಳಲ್ಲಿ ಮದರಾಸಿನವು ೧೨. ಹೊರಗಿನ ಕಂಪನಿಗಳಲ್ಲಿ ಭಾರತೀಯ ಸಂಸ್ಥೆಗಳ ಕೈಯಲ್ಲಿರುವ ಮೂಲಧನವೇ ಸುಮಾರು ೪ ಕೋಟಿಯಷ್ಟಿದೆ. ವಿದೇಶಿ ಸಂಸ್ಥೆಗಳಾದ ಪೆಟ್ರೋಲಿಯಂ ಕಂಪನಿ, ಎಂ.ಎಸ್.ಎಂ. ರೈಲ್ವೆ ಕಂಪನಿ, ಜನರಲ್ ಎಲೆಕ್ಟ್ರಿಕಲ್ ಕಂಪನಿ, ಬಿನ್ನಿ ಕಂಪನಿ, ಸಿಂಗರ್ ಸೋವಿಂಗ್ ಕಂಪನಿ, ಯುನೈಟೆಡ್ ಸ್ಟೇಟ್ಸ್ ಸ್ಟೀಲ್ ಕಾರ್ಪೊರೇಷನ್, ಚಿನ್ನದ ಕಂಪನಿಗಳು ಈ ಹೆಸರುಗಳನ್ನು ಕೇಳಿದರೆಯೇ ಅವುಗಳ ಕಾರ್ಯಶಕ್ತಿ ಎಷ್ಟು ಎಂಬುದು ತಿಳಿದುಬರುವುದು.

ಕೈಗಾರಿಕೆಯ ಕಾರ್ಯರೀತಿ

ಕೆಲವರು ಹಳ್ಳಿಗಳಲ್ಲಿ ತಮಗೆ ಬೇಕಾಗುವ ಎಲ್ಲ ಸಾಮಾನನ್ನೂ ತಾವೇ ಮಾಡಿಕೊಳ್ಳುವರು ; ಜನ ಸ್ವಸಂಪೂರ್ಣರು. ಕೆಲವರು ಒಟ್ಟಿಗೆ

ಸೇರಿ ಕೆಲಸಮಾಡಿ ಫಲವನ್ನು ತಮ್ಮೊಳಗೇ ಹಂಚಿಕೊಳ್ಳುವರು. ಅಥವಾ ಅದನ್ನು ಮಾರಿ ಹಣ ಹಂಚಿಕೊಳ್ಳುವರು ; ಕೆಲವರು ಇತರ ಸಾಹುಕಾರರ ಇಷ್ಟದಂತೆ ವಸ್ತುಗಳನ್ನು ಮಾಡಿ ತಾವು ಮಾಡಿದುದನ್ನು ಅವರಿಗೆ ಮಾರಿ ಹಣ ತೆಗೆದುಕೊಳ್ಳುವರು ; ಇಂಥವರು ಸ್ವಂತ ಯಂತ್ರ ಉಪಕರಣಗಳನ್ನಿಟ್ಟುಕೊಂಡು ಕೆಲಸಮಾಡಿ ಸ್ವತಂತ್ರರಾಗಿರುವುದೂ ಉಂಟು. ಕೆಲವು ವೇಳೆ ಅವುಗಳನ್ನೂ ವರ್ತಕರೋ ಯಜಮಾನರೋ ಒದಗಿಸಿ ಕೆಲಸಮಾಡಿದವರಿಗೆ ಕೂಲಿಯನ್ನು ಮಾತ್ರ ಕೊಡುವುದೂ ಉಂಟು. ಇನ್ನೂ ಕೆಲವು ಕೆಲಸಗಾರರು ಯಜಮಾನರು ಏರ್ಪಡಿಸುವ ಕಾರ್ಯಶಾಲೆಗಳಿಗೆ ಹೋಗಿ ಅಲ್ಲಿ ಸಂಬಳಕ್ಕೆ ಕೆಲಸಮಾಡುವರು ; (ಲೋಹದ ಕೆಲಸಗಳಲ್ಲಿಯೂ, ನೇಗೆಯ ಕೆಲಸಗಳಲ್ಲಿಯೂ ಈ ಸ್ಥಿತಿ ವಿಶೇಷ) ಗಿರಣಿ ಕಾರ್ಖಾನೆಗಳಲ್ಲಂತೂ ಸಾವಿರಾರು ಮಂದಿ ಸೇರಿ ಕೆಲಸಮಾಡಬೇಕಾಗಿರುತ್ತದೆ.

ಹೀಗೆ ತಮ್ಮ ಸಾಮಾನುಗಳಿಂದ ವಸ್ತುಗಳನ್ನು ತಾವೇ ತಯಾರು ಮಾಡಿ ತಾವೇ ಅವನ್ನು ಉಪಯೋಗಿಸಿಕೊಳ್ಳುವ ಸ್ಥಿತಿಯಿಂದ ಹಿಡಿದು ಇನ್ನೊಬ್ಬರಲ್ಲಿ ಕೂಲಿಕೆಲಸ ಮಾಡುತ್ತ ತಾವು ತಯಾರಿಸುವ ಯಾವ ವಸ್ತುವಿಗೆ ಎಲ್ಲಿ ಮಾರಾಟವಿದೆ, ಅದರ ಲಾಭ ನಷ್ಟಗಳೇನು ಎಂಬ ವಿಚಾರಗಳನ್ನು ಅರಿಯದೆ ಕೂಲಿಯ ಮಕ್ಕಳಾಗಿ ದುಡಿಯುವ ಕೆಲಸದ ವಿಧಾನದವರೆಗೂ ನಾಡಿನಲ್ಲಿ ಕೆಲಸ ನಡೆಯುತ್ತಿದೆ.

ಕೆಲವು ಸಣ್ಣ ಯಂತ್ರಗಳ ಒಡೆಯರು ಎರಡು ಮೂರು ತೆರನಾದ ಕೆಲಸಗಳನ್ನು ಮಾಡುವರು ; ಒಂದುಕಡೆ ಚಲನಚಿತ್ರಗಳನ್ನು ನಡಸುವುದು ; ಯಂತ್ರದಿಂದ ಹಿಟ್ಟು ಬೀಸಿಸುವುದು, ಮತ್ತೊಂದುಕಡೆ ಸೋಡಾ ವಾಟರ್ ಮುಂತಾದ ಪಾನೀಯಗಳನ್ನು ತಯಾರಿಸುವುದು ಮುಂತಾದುವನ್ನು ಒಂದೇಕಡೆ ನಡಸುತ್ತ, ಮೂರು ಕಡೆಯೂ ವ್ಯಾಪಾರದ ಲಾಭವನ್ನು ಪಡೆಯುವರು. ಒಂದರ ಲಾಭದಿಂದ ಇನ್ನೊಂದರ ನಷ್ಟವನ್ನು ತುಂಬಿಕೊಳ್ಳುವರು. ಸಾಗುವಾನಿ ಕೆಲಸಗಳವರು ಕೆಲವರು ಗಾಡಿಗಳನ್ನಿಟ್ಟು ಕಾಡಿಂದ ಮರಗಳನ್ನು ಸಾಗಿಸಿ ದಿಮ್ಮಿಗಳ ಜೊತೆಗೆ ಕುಯಿದ ತರಾಯಿಗಳನ್ನೂ ಇತರ ವಿಧವಾದ ಮರಮುಟ್ಟುಗಳನ್ನೂ ಮಾಡಿ ಮಾರುವರು. ಅವರೇ ಕಡಪಾಕಲ್ಲಿನ ವ್ಯಾಪಾರ, ಕಬ್ಬಿಣದ ತೊಲೆಗಳ ವ್ಯಾಪಾರ, ಗಾಜಿನ ಮತ್ತು ಹೆಂಚಿನ ವ್ಯಾಪಾರ ಮುಂತಾದ ಸುಮಾರು ಮನೆಗಟ್ಟುವ

ಕೆಲಸಗಳಿಗೆ ಸಂಬಂಧಿಸುವ ಕೆಲಸಗಳನ್ನೆಲ್ಲಾ ಮಾಡುವರು. ಕಾಗದ, ಮತ್ತು ಬರವಣಿಗೆ ಸಾಮಾನು ಮಾರುವುದು, ಅಚ್ಚಿನ ತಯಾರಿಕೆ ಕೆಲಸ; ಪ್ರಕಟನಾಕಾರ್ಯ, ಫೋಟೋ ಪ್ರತಿಕೃತಿಗಳನ್ನು ತಯಾರಿಸಿ ಅಚ್ಚುಮಾಡುವುದು, ರಬ್ಬರ್‌ಸ್ಟಾಂಪು ಮಾಡುವುದು, ಪುಸ್ತಕ ಮಾರುವುದು, ಮುಂತಾದ ಒಂದೇ ಕೆಲಸಕ್ಕೆ ಸಂಬಂಧಿಸುವ ಕೆಲಸಗಳನ್ನೆಲ್ಲಾ ಮಾಡುವ ಸಂಸ್ಥೆಗಳುಂಟು. ಆದರೆ ಪಾಶ್ಚಾತ್ಯ ದೇಶಗಳಲ್ಲಿ ದೊಡ್ಡ ಕಂಪನಿಗಳು ಮಾಡುತ್ತಿರುವ ಪರಿಮಾಣದಲ್ಲಿಯಾಗಲಿ ವಿವಿಧತೆಯಲ್ಲಾಗಲಿ ಯಾವ ಒಂದೂ ನಡೆಯುತ್ತಿಲ್ಲ. ಆ ಸ್ಥಿತಿ ಭರತಖಂಡದೊಳಕ್ಕೇ ಇನ್ನೂ ಬಂದಿಲ್ಲವೆನ್ನಬಹುದು. ವಿದೇಶಗಳ ಟ್ರಸ್ಟ್, ಕಾರ್ಟೆಲ್, ಪೂಲ್, ಹೋಲ್ಡಿಂಗ್ ಕಂಪನಿಗಳಂಥ ಸಂಸ್ಥೆಗಳು ಇಲ್ಲಿ ಈ ವರೆಗೂ ಪ್ರಚಾರಕ್ಕೆ ಬಂದಿಲ್ಲ.

೬. ದೇಶದ ವ್ಯಾಪಾರ

ಮೈಸೂರು ದೇಶದ ವ್ಯಾಪಾರ ರಸ್ತೆಗಳ ಮೂಲಕವೂ ರೈಲುಗಳ ಮೂಲಕವೂ ನಡೆಯುತ್ತದೆ. ನಮಗೆ ಸಮುದ್ರ ತೀರವಾಗಲಿ ರೇವು ಬಂದರುಗಳಾಗಲಿ ಇಲ್ಲ. ಯಾವ ನದಿಗಳಮೇಲೂ ವ್ಯಾಪಾರ ನಡೆಯಲು ಅವಕಾಶವಿಲ್ಲ. ಗಡಿನಾಡುಗಳಿಗೆ ಸೇರುವ ೨೩ ದೊಡ್ಡ ರಸ್ತೆಗಳ ವ್ಯಾಪಾರದ ಲೆಕ್ಕವನ್ನು ಇಟ್ಟಿಲ್ಲ. ರೈಲುಗಳ ಮೂಲಕ ನಡೆಯುವ ಆಮದು ರಫ್ತುಗಳ ಲೆಕ್ಕ ಕ್ರಮವಾಗಿ ಸಿಕ್ಕುತ್ತದೆ. ಅದರ ಜೊತೆಗೆ ರಸ್ತೆಯ ವ್ಯಾಪಾರದ ಲೆಕ್ಕಗಳೂ—ಪದಾರ್ಥಗಳ ಪರಿಮಾಣ ಮತ್ತು ಬೆಲೆ— ಸಿಕ್ಕಿದರೆ ಎರಡೂ ಸೇರಿ ನಮ್ಮ ದೇಶದ ಒಟ್ಟು ವ್ಯಾಪಾರದ ಮೊತ್ತವೆಷ್ಟೆಂಬುದು ಗೊತ್ತಾಗುತ್ತದೆ. ನಮ್ಮ ಸಾಮಾನು ರಸ್ತೆಯ ಮಾರ್ಗವಾಗಿ ಯಾವ ಪ್ರಾಂತ ಹೋಗುವುವೆಂಬುದು——ಮುಖ್ಯವಾಗಿ ಕಾಫೀ, ರೇಷ್ಮೆ, ದನಕರು, ಬತ್ತ, ಗೊಬ್ಬರ, ಹತ್ತಿ, ನೆಲಗಡಲೆ, ಮೊದಲಾದ ಪದಾರ್ಥಗಳ ವ್ಯಾಪಾರ ವಿಶೇಷಗಳು——ಉಕ್ಕಡ ಲೆಕ್ಕಗಳ ಸಹಾಯವಿಲ್ಲದೆ ತಿಳಿಯವು. *

ದಾವಣಗೆರೆಗೆ ಹರಿಹರದ ಮಾರ್ಗವಾಗಿ, ಅರಳೆ ಬಿಡಿಸುವುದಕ್ಕೂ, ಹಿಂಜುವುದಕ್ಕೂ ಹತ್ತಿ ಬರುವುದು. ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಕೊಳ್ಳೇಗಾಲದ ಮಾರ್ಗವಾಗಿ ಮದ್ದೂರು ತಾಲ್ಲೂಕಿಗೆ ರೇಷ್ಮೆ ಆಮದಾಗುವುದು. ಮೈಸೂರು—ಕೊಡಗುಗಳಿಗೂ ಮೈಸೂರು—ಮಲೆಯಾಳಕ್ಕೂ ನಡೆಯುವ ವ್ಯಾಪಾರ ಹುಣಸೂರಲ್ಲಿ ಸಂಧಿಸುವುದು. ದಕ್ಷಿಣ ಕನ್ನಡಕ್ಕೂ ಮೈಸೂರಿಗೂ ವ್ಯಾಪಾರ ಮಾರ್ಗಗಳಂತೆಯೂ ವರ್ತಮಾನ ವಾಹಕ ಮಾರ್ಗಗಳಾಗಿಯೂ ಘಟ್ಟದ ರಸ್ತೆಗಳು ನೆರವಾಗುವುವು. ಮಲೆನಾಡಿನ ವ್ಯಾಪಾರ ಸಾಮಗ್ರಿ ಈ ಮೂಲಕ ಪಶ್ಚಿಮ ತೀರಕ್ಕೆ ಸಾಗುವುದು.

* ಒಟ್ಟು ಈ ವ್ಯಾಪಾರದ ಬೆಲೆ ವರ್ಷಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿ ಎನ್ನಬಹುದು.

ಹರಿಹರ, ಹಿಂದೂಪುರ, ಬಿಸನಾಥಂ ಈ ಊರುಗಳ ಮಾರ್ಗವಾಗಿ ನಡೆಯುವ ರೈಲು ವ್ಯಾಪಾರದ ಲೆಕ್ಕ ಮಾತ್ರ ಪ್ರಕಟವಾಗುತ್ತಿದೆ. ಅದರ ಒಟ್ಟು (ವರ್ಷದ ಸರಾಸರಿ) ಬೆಲೆ ಸುಮಾರು ೧೮ ರಿಂದ ೨೫ ಕೋಟಿರೂಪಾಯಿ ಎನ್ನಬಹುದು.

ಬ್ರಿಟಿಷ್ ಪ್ರಾಂತಗಳಂತೆಯೇ ಮೈಸೂರು ಕೈಗಾರಿಕೆಯ ಮೂಲ ಸಾಮಗ್ರಿಗಳನ್ನೂ, ಆಹಾರ ಪದಾರ್ಥಗಳನ್ನೂ ರಫ್ತು ಮಾಡಿ, ತಯಾರಾದ ಪದಾರ್ಥಗಳನ್ನು ಆಮದುಮಾಡಿಕೊಳ್ಳುವುದು. ಎಣ್ಣೆಯ ಬಿತ್ತಗಳು, ಕಾಫೀ, ಅಡಕೆ, ಚರ್ಮಚಕ್ಕಳ, ಎಲುಬು, ಹತ್ತಿ, ರೇಷ್ಮೆ, ಲೋಹದ ಅದರು ಇವು ನೆರೆಯ ಪ್ರಾಂತಗಳಿಗೂ ವಿದೇಶಗಳಿಗೂ ಹೋಗುವುವು. ಅಲ್ಲಿ ತಯಾರಾದ ಭೋಗ ಸಾಮಗ್ರಿ ಇಲ್ಲಿಗೆ ಮಾರಾಟಕ್ಕೆ ಬರುವುವು. ಕೇವಲ ವ್ಯವಸಾಯಸ್ಥಿತಿಯಿಂದ ಸ್ವಲ್ಪ ಮೇಲಾದ ಕೈಗಾರಿಕೆಯ ಸ್ಥಿತಿಗೆ ಜನದ ಉದ್ಯೋಗಗಳು ತಿರುಗುತ್ತಿರುವ ಸೂಚನೆ ಕಾಣಲಾರಂಭವಾಗುತ್ತಿದೆ. ಮೂಲಸಾಮಗ್ರಿಗಳ ಜೊತೆಗೆ–ಅರ್ಧ ಅಥವಾ ಪೂರ್ತ–ತಯಾರಾದ ವಸ್ತುಗಳೂ ಹೆಚ್ಚುಹೆಚ್ಚಾಗಿ ಹೊರಕ್ಕೆ ಹೋಗಲು ಆರಂಭವಾಗಿರುವುದೇ ಈ ಸೂಚನೆಯ ಲಕ್ಷಣ.

ಮೈಸೂರು ಹೊರ ವ್ಯಾಪಾರದ * ಮುಖ್ಯ ಲಕ್ಷಣವೆಂದರೆ ರಫ್ತಿಗಿಂತ ಆಮದು ಹೆಚ್ಚಾಗಿರುವುದು. ಎಂದರೆ ನಾವು ಹೊರಕ್ಕೆ ಎಷ್ಟು ಸಾಮಾನನ್ನು ಕಳುಹಿಸುತ್ತೇವೆಯೊ ಅದಕ್ಕಿಂತಲೂ ಹೆಚ್ಚಾಗಿ ದೇಶದೊಳಕ್ಕೆ ತರಿಸಿಕೊಳ್ಳುತ್ತಿದ್ದೇವೆ. ಈಗೀಗ ಸ್ವಲ್ಪ ಸ್ವಲ್ಪವಾಗಿ ರಫ್ತು ಹೆಚ್ಚುತ್ತಿರುವುದು ಸಂತೋಷಕರವಾದ ಸಂಗತಿಯೇ ಆದರೂ, ಒಟ್ಟು ಹೊರದೇಶದ ವ್ಯಾಪಾರ ಅಭಿವೃದ್ಧಿಯಾಗಿಲ್ಲವೆನ್ನಬೇಕು. ಇದ್ದದ್ದು ಇದ್ದಹಾಗೆಯೇ ಇದೆ. ವರ್ಷಕ್ಕೆ ಸರಾಸರಿ ೨೫ ಕೋಟಿ ರೂಪಾಯಿಗಳದು ಎಂದರೂ ತಲೆಯೊಂದಕ್ಕೆ ೩೮ ರೂಪಾಯಿಗಳದೆಂದಾಯಿತು.

ರೈಲು ವ್ಯಾಪಾರದಲ್ಲಿ ಆಮದು ಹೆಚ್ಚಾದರೆ ರಸ್ತೆಯ ವ್ಯಾಪಾರದಲ್ಲಿ ರಫ್ತು ಹೆಚ್ಚು. ಈ ಎರಡನ್ನೂ ಒಟ್ಟುಗೂಡಿಸಿದರೆ ಒಟ್ಟಿನಲ್ಲಿ ಆಮದೇ ಆಗಲೂ ಹೆಚ್ಚಿನದು. ರೈಲಿನ ರಫ್ತಿನಲ್ಲಿ ಚಿನ್ನದ ರಫ್ತು ವಿಶೇಷವಾ

* ರಸ್ತೆಯ ಆಮದು, ರೈಲುಗಳ ಆಮದು, ರೈಲಿನ ರಫ್ತು, ರಸ್ತೆಯ ರಫ್ತು ಸೇರಿ ಒಟ್ಟು ಹೊರವ್ಯಾಪಾರವಾಗುವುದು.

ದುದು. ರಸ್ತೆಯದರಲ್ಲಿ ವ್ಯಾಪಾರ ಸಾಮಗ್ರಿಗಳೇ ಎಲ್ಲ. ರಫ್ತು ಕಡಮೆ, ಆಮದು ಹೆಚ್ಚು ಎಂದ ಮಾತ್ರಕ್ಕೇ ಎಲ್ಲ ದೇಶಗಳವರೂ ನಷ್ಟವೆಂದು ತಿಳಿಯಕೂಡದು. ಸಾಮಾನ್ಯವಾಗಿ ಹಿಂದಿನ ಶತಮಾನಗಳಲ್ಲಿ ರಫ್ತು ಹೆಚ್ಚಿಸಿಕೊಂಡು ಆಮದು ಕಡಮೆಮಾಡಿಕೊಳ್ಳುತಿದ್ದುದುಂಟು. ಚಿನ್ನಬೆಳ್ಳಿಗಳ ರೂಪದಲ್ಲಿ ಆ ಹೆಚ್ಚು ರಫ್ತಿನ ಬೆಲೆಯನ್ನು ಸಂಗ್ರಹಿಸಿ ಧನಿಕರಾಗಲು ಇಚ್ಛಿಸುತ್ತಿದ್ದರು. ಆಮದಿನಲ್ಲಿ ವಿಶೇಷವಾಗಿ ಕೈಗಾರಿಕೆಯ ಮೂಲ ವಸ್ತುಗಳನ್ನೇ ತರಿಸಿಕೊಳ್ಳುವುದು; ರಫ್ತಿನಲ್ಲಿ ವಿಶೇಷವಾಗಿ ಕಾರ್ಖಾನೆಗಳಲ್ಲಿ ಪೂರ್ತ ತಯಾರಾದ ವಸ್ತುಗಳನ್ನೇ ಹೊರಗೆ ಕಳುಹಿಸುವುದು; ಆಮದು ತರಿಸುವ ದೇಶಗಳಿಗೇ ತಮ್ಮ ಪದಾರ್ಥಗಳನ್ನು ಮಾರಾಟಕ್ಕೆ ಕಳುಹಿಸಿ ಆ ಪೇಟೆಯನ್ನು ತಮ್ಮ ಆಡಳಿತದಲ್ಲಿ, ವಶದಲ್ಲಿ ಇಟ್ಟುಕೊಳ್ಳುವುದು; ಒಳ ಕೈಗಾರಿಕೆಗಳನ್ನು ವೃದ್ಧಿಪಡಿಸಿ ವ್ಯಾಪಾರವನ್ನೂ ಲಾಭವನ್ನೂ ಹೆಚ್ಚುಮಾಡಿಕೊಳ್ಳುವುದು —ಈ ರೀತಿ ವ್ಯವಸ್ಥೆಮಾಡಿಕೊಳ್ಳುತ್ತಿದ್ದರು. ಈಗಲೂ ದೊಡ್ಡ ಕೈಗಾರಿಕೆ ರಾಷ್ಟ್ರಗಳವರಿಗೆ–ಪ್ರತ್ಯಕ್ಷವಾಗಲ್ಲದಿದ್ದರೆ ಪರೋಕ್ಷವಾಗಿ – ಧನ ಸಂಗ್ರಹವಾಗುತ್ತಿರುವುದು ಈ ರೀತಿಯೇ.

ಸ್ಥೂಲವಾಗಿ ಕಣ್ಣಿಗೆ ಕಾಣಿಸುವಂತೆ ರಫ್ತಿಗಿಂತಲೂ ಆಮದು ಹೆಚ್ಚಿರುವ ಬ್ರಿಟನ್ನಿನಲ್ಲಿ ಕೂಡ, ಕಣ್ಣಿಗೆ ಕಾಣದ ಹಾಗೆ ನಡೆಯುವ ಅವರ ಲೇವಾದೇವಿ, ಲಾಭ, ಬಡ್ಡಿ, ಕುಶಲ ಕರ್ಮಗಳ ರುಸುಮು, ಹಡಗು ವ್ಯಾಪಾರ, ದಲ್ಲಾಳಿ, ಮುಂತಾದ ಬಾಬುಗಳಲ್ಲಿ ವರ್ಷಕ್ಕೆ ೨೦೦ ಕೋಟಿ ರೂಪಾಯಿಗಳಿಗೆ ಮೀರಿದ ಹಣ ಸಂಪಾದನೆಯಾಗುತ್ತಿದೆ. ನಮ್ಮ ದೇಶಗಳಂಥ ದೇಶಗಳಲ್ಲಿ ಎಂದರೆ ಮೂಲ ಸಾಮಗ್ರಿಗಳನ್ನೂ ಆಹಾರ ಪದಾರ್ಥಗಳನ್ನೂ ರಫ್ತು ಮಾಡುತ್ತ ತಯಾರಾದ ಸಾಮಾನನ್ನು ಸ್ವೀಕರಿಸಿ ಭೋಗಿಸುತ್ತ, ಹೊರದೇಶಗಳವರಿಗೆ ಸಾಲ ಕೊಡುವುದಿರಲಿ, ಅವರಿಂದ ಸಾಲ ಪಡೆದು ಋಣಗ್ರಸ್ತವಾಗಿರುವ ಸಂಸ್ಥಾನಗಳಲ್ಲಿ ಆಮದು ಹೆಚ್ಚಾಗಿರುವುದು ಕೇಡಿನ ಲಕ್ಷಣ.

ಆಮದು_ರಫ್ತು ಒಂದಕ್ಕೊಂದು ಸಮವಾಗಿದ್ದರೆ ಒಂದು ಬಗೆ; ರಫ್ತು ಹೆಚ್ಚಾಗಿದ್ದರೆ ಅದರಿಂದ ಬರುವ ಹಣ ಒಂದಲ್ಲ ಇನ್ನೊಂದು ರೀತಿಯಲ್ಲಿ ದೇಶಕ್ಕೆ ಹಿಂದಿರುಗಿ ಬರುತ್ತಿತ್ತು. ಇಲ್ಲಿನ ಐಶ್ವರ್ಯವನ್ನು ಹೆಚ್ಚಿಸುತ್ತಿತ್ತು. ಕಡೆಗೆ ಕಣ್ಣಿಗೆ ಕಾಣಿಸದಂತೆ, ಈ ವ್ಯಾಪಾರದ ಲೆಕ್ಕಗಳಿಗೆ

ಸೇರದಂತೆ ಹೊರಕ್ಕೆ ಮಾಡುವ ತೆರಾಣಿಗಳನ್ನಾದರೂ ನಾವು ತೆರಲು ಸಹಾಯವಾಗುತ್ತಿತ್ತು. ಆಮದು ಹೆಚ್ಚೆಂದರೆ—ಆ ಮಟ್ಟಿಗಾದರೂ ನಮ್ಮ ದೇಶದವರು ಇತರರಿಗೆ ಸಾಲಗಾರರಾಗಿ ನಮ್ಮ ಕೈಗಾರಿಕೆಯೂ, ಉತ್ಪತ್ತಿಯೂ ಅವರಿಗೆ ಅಡವಾದಂತೆ. ಇದರ ಜೊತೆಗೆ ಆಮದು ರಫ್ತುಗಳ ಕೈ ಬದಲಿನಲ್ಲಿ ಆಹಾರ ಪದಾರ್ಥ ಮತ್ತು ಮೂಲಸಾಮಗ್ರಿಗಳ ಬೆಲೆ ಸಾಮಾನ್ಯವಾಗಿ ಕಡಮೆ, ತಯಾರಾದ ಕೈಗಾರಿಕೆಯ ಸಾಮಾನಿನ ಬೆಲೆ ಹೆಚ್ಚು ಇರುವುದೇ ವಾಡಿಕೆ; ಎಂದರೆ ನಾವು ಹೊರಕ್ಕೆ ಮಾರುವ ಪದಾರ್ಥಗಳಿಗಾಗಿ ನಮಗೆ ಬರುವ ಬೆಲೆಗಿಂತಲೂ ನಾವು ಕೊಳ್ಳುತ್ತಿರುವವುಗಳಿಗೆ ಹೆಚ್ಚು ಬೆಲೆ ಕೊಡುತ್ತಿರಬೇಕಾಗುತ್ತದೆ. ಇದೂ ನಷ್ಟವೇ.

ನಮ್ಮ ಸಾಮಾನು ಕೊನೆಗೆ ಯಾರ–ಯಾವ ದೇಶದವರ–ಕೈಗೆ ಸೇರುತ್ತದೆಂಬುದನ್ನು ತಿಳಿಯುವುದು ಕಷ್ಟ. ಪಶ್ಚಿಮ, ವಾಯುವ್ಯ ಭಾಗಗಳನ್ನು ಬಿಟ್ಟು ಉಳಿದ ಎಲ್ಲ ಕಡೆಗಳಲ್ಲೂ ಮದರಾಸಿನ ಆಧಿಪತ್ಯವಿರುವುದರಿಂದ ಮದರಾಸೇ ನಮ್ಮ ಮುಖ್ಯ ಗಿರಾಕಿ; ಮದರಾಸ್ ಪ್ರಾಂತದಿಂದಲೇ ನಮ್ಮ ದೇಶದೊಳಕ್ಕೆ ಸಾಮಾನು ವಿಶೇಷವಾಗಿ ಬರುವುದು; ಮದರಾಸ್ ಬಂದರೇ ನಮಗೆ ವಿದೇಶಿ ವಸ್ತುಗಳ ಮತ್ತು ವ್ಯಾಪಾರದ ಮುಖ್ಯ ರೇವು.

ಪಶ್ಚಿಮ ತೀರದಲ್ಲಿ ನಮ್ಮ ಸೀಮೆಗೆ ಅತಿ ಹತ್ತಿರದ ರೇವೆಂದರೆ ಭಟ್ಕಳ್ಳು. ಹೈದರಾಲಿಯವರ ಕಾಲದಲ್ಲಿ ಇದು ಮೈಸೂರಿಗೆ ಸೇರಿತ್ತು. ಆ ಬಂದರನ್ನು ನಮ್ಮದಾಗಿ ಮಾಡಿಕೊಳ್ಳಲು ಯತ್ನ ನಡೆಯುತ್ತಿದೆ. ಯತ್ನ ಸಫಲವಾದರೆ ನಮ್ಮ ಸೀಮೆಯ ವ್ಯಾಪಾರ ಸ್ವತಂತ್ರವಾಗಿ ಪರದೇಶಗಳಿಗೆ ಸಾಗಬಹುದು. ಬೊಂಬಾಯಿ, ಮಾರ್ಮುಗೋವ ಮೊದಲಾದ ಬಂದರುಗಳಿಗೂ ನಮ್ಮ ಪದಾರ್ಥಗಳು ಸುಲಭವಾಗಿ ಸಾಗಬಹುದು. ಸಾಗಿಸುವ ಖರ್ಚು ಕಡಮೆಯಾಗುವುದು; ಹೊರ ವ್ಯಾಪ್ಯಾರ ಪ್ರಪಂಚಕ್ಕೂ ನಮಗೂ ನೇರವಾದ ಸಂಬಂಧವುಂಟಾಗುವುದು.

ವ್ಯಾಪಾರಕ್ಕೆ ಹಣ ಒದಗುವ ರೀತಿ

ವ್ಯಾಪಾರಕ್ಕೆ ಬೇಕಾಗುವ ಎಲ್ಲ ಹಣದ ಸಹಾಯವೂ ಸಾಹುಕಾರರಿಂದಲೂ ಬ್ಯಾಂಕುಗಳಿಂದಲೂ ದೊರೆಯುತ್ತದೆ. ಸಾಹುಕಾರರಲ್ಲಿ ನಾಡಿನ ವರ್ತಕರೂ ಧನಿಕರೂ ಕೆಲವರು. ಉಳಿದವರು ಭರತಖಂಡದ ಬೇರೆಬೇರೆ

ಪ್ರಾಂತಗಳಿಂದ ಬಂದು ಇಲ್ಲಿ ಲೇವಾದೇವಿ ಮಾಡುವವರು. ಬ್ಯಾಂಕು ಗಳಲ್ಲಿ ಕೂಡು ಬಂಡವಾಳದ ಬ್ಯಾಂಕುಗಳು ಕೆಲವು ; ಸಹಕಾರ ಸಂಘಗಳು ಕೆಲವು.

ಎಲ್ಲ ವರ್ತಕರೂ ಸಾಮಾನ್ಯವಾಗಿ ಸ್ವಲ್ಪಮಟ್ಟಿಗಾದರೂ ಬಡ್ಡಿಗೆ ಸಾಲ ಕೊಡುವ ವಾಡಿಕೆಯಿಟ್ಟುಕೊಂಡಿರುತ್ತಾರೆ. ಅವರ ಮುಖ್ಯ ವ್ಯಾಪಾರದಿಂದ ಬರುವ ವರಮಾನಕ್ಕೆ ಇದೂ ಒಂದಂಶವನ್ನು ಕೂಡಿಸುತ್ತದೆ. ಅಲ್ಲದೆ, ಗಿರಾಕಿಗಳನ್ನು ಬೇರೆ ಕಡೆ ಹೋಗದಂತೆ ತಮ್ಮಲ್ಲಿಯೇ ಉಳಿಸಿಕೊಳ್ಳುವುದು ; ತಮಗೆ ಸಾಮಾನನ್ನು ಒದಗಿಸುವ ಕುಳಗಳಿಗೆ ಮುಂಗಡ ಕೊಟ್ಟು ಪದಾರ್ಥ ಸಂಚಯನ ಮಾಡುವುದು * ಮುಂತಾದ ಅನುಕೂಲಗಳನ್ನು ದೊರಕಿಸಿಕೊಳ್ಳುವರು. ಹಳ್ಳಿ ತಾಲ್ಲೂಕುಗಳಲ್ಲಿನ ಎಲ್ಲ ಲೇವಾದೇವಿಯೂ ಸ್ಥಳದ ವರ್ತಕರಿಂದಲೇ ಆಗುವುದು. ತಮ್ಮ ಪ್ರಾಂತದಲ್ಲಿ ಬೆಳೆಯುವ ವಸ್ತುಗಳನ್ನು ತಮ್ಮ ಮಂಡಿಗಳಿಗೇ ತರಬೇಕೆಂದು ಗೊತ್ತು ಮಾಡಿಕೊಂಡು ಅನೇಕವೇಳೆ ರೈತರಿಗೆ ಬೇಕಾಗುವ ಎಲ್ಲ ಸಾಲಗಳನ್ನೂ ಕೊಡುತ್ತ–ಪಾತ್ರೆ, ಬಟ್ಟೆ ಮುಂತಾದ ಸಾಮಾನನ್ನು ಕೂಡ ಅವರಿಗೆ ಒದಗಿಸುತ್ತ–ತಮ್ಮ ಕಿರದಿ ಪುಸ್ತಕಗಳಲ್ಲಿ ಸಂತತವಾಗಿ ಸಾಲದ ಲೆಕ್ಕಗಳನ್ನು ಬರೆದು ಕೇಳುತ್ತಲೇ ಇರುತ್ತಾರೆ. ಇಂಥ ವರ್ತಕರ ಕೈಗೆ ಸಿಕ್ಕಿದ ರೈತನು ಅವರಿಂದ ಬಿಡುಗಡೆಹೊಂದಲು ಶಕ್ತನಾಗುವುದಿಲ್ಲ.* ಅಂಗಡಿಯ ಲೆಕ್ಕಗಳೂ, ಸಾಲಗಳೂ ಎಂದಿಗೂ ಹರಿಯುವುದಿಲ್ಲ. ಮುಂಗಡ ಕೊಡುವುದು, ಬಡ್ಡಿ ಸೇರಿಸುವುದು, ತಮ್ಮ ಅಂಗಡಿಯ ಸಾಮಾನನ್ನು ಅವರಿಗೇ ಮಾರುವುದು ; ಅವರು ಬೆಳೆದು ತಂದ ಸಾಮಾನನ್ನೂ, ಬೆಲೆಯನ್ನೂ ಅವರ ಲೆಕ್ಕಕ್ಕೆ ಜಮಾಹಾಕುವುದು, ಪುನಃ ಸಾಲಕೊಡುವುದು ಹೀಗೆ ವಂಶ ಪಾರಂಪರ್ಯದಲ್ಲಿ ನಡೆಯುವುದುಂಟು. ಮಂಡಿಯವರು ಬಹುತರ ತರಗಿನ ದಲ್ಲಾಳರು. ಸಾಮಾನಿನ ಒಡೆಯರಿಗೆ ಗಿರಾಕಿ ಹೊಂದಿಸಿಕೊಟ್ಟು ಎರಡು ಕಡೆಯಿಂದಲೂ ತರಗು ಸಂಪಾದಿಸುವರು. † ಸಾಮಾನನ್ನು ಮೇಲು ಬೀಳುಗಳಾಗಿ ವಿಂಗಡಿಸುವ ಕೆಲಸವನ್ನು ಕೂಡ ಮಾಡರು. ರಾಶಿ

* ಮೈಸೂರಿನ ರೈತರ ಸಾಲ ೩೦_೩೫ ಕೋಟಿ ರೂಪಾಯಿಗಳಷ್ಟಿದೆಯೆಂದು ತಿಳಿದು ಬಂದಿದೆ.

† ಸಾಮಾನಿನ ಬೆಲೆಯಮೇಲೆ ಶೇಕಡ ಇಷ್ಟು ಎಂದು ಲೆಕ್ಕಮಾಡಿದರೆ ಅವರಿಗೆ ಸರಕಿನ ಯೋಗ್ಯತೆಯ ಕಡೆ ಗಮನವಿರುತ್ತಿತ್ತು. ತೂಕ ಅಳತೆಯ ಮೇಲೆ ದಲ್ಲಾಳಿ ತೆಗೆದುಕೊಳ್ಳುವುದರಿಂದ ಅವರಿಗೆ ಅಂಥ ಆದರವೇನೂ ಇರುವುದಿಲ್ಲ.

ಗಳು ಬೆರೆತುಹೋಗಲು ಬೇಕಾದಷ್ಟು ಅವಕಾಶವಿರುವುದರಿಂದ ನಮ್ಮ ದೇಶದ ಸಾಮಾನಿಗೆ ವಿದೇಶಗಳಲ್ಲಿ ಗೌರವವಿಲ್ಲ. ಹೆಚ್ಚು ಬೆಲೆಯೂ, ಮೆಚ್ಚಿಕೆಯೂ ಇಲ್ಲ.

ಪಟ್ಟಣಗಳಲ್ಲಿನ ಮುಖ್ಯ ಸಾಹುಕಾರರೆಂದರೆ, ಗುಜರಾತ್, ಸಿಂಧ್, ಮಾರವಾಡದ ಕಡೆಗಳವರು – ಸೇಟುಗಳು, ಮುಲ್ತಾನಿಯವರು. ಅವರು ಬಹು ಸಾಹಸವಂತರು. ಅವರ ಅಂಗಡಿಗಳು ಇಲ್ಲಿ ಸುಮಾರು ೧೩ ಇವೆ. ನಾಡಿನ ವರ್ತಕರಿಗೂ ವ್ಯಾಪಾರಕ್ಕೂ ಅವರು ಬಹುವಾಗಿ ಹಣ ಒದಗಿಸುವರು : ಒಂದು, ಎರಡು, ಮೂರು ತಿಂಗಳ ವಾಯಿದೆ ಹಾಕಿ ಹುಂಡಿಗಳನ್ನು ಬರಸಿಕೊಂಡು ನಂಬಿಕಸ್ಥರಾದ ವರ್ತಕರಿಗೆ ಸಾಲವಿತ್ತು ಕಟ್ಟುನಿಟ್ಟಾಗಿ ಬಾಕಿ ವಸೂಲು ಮಾಡಿಕೊಳ್ಳುತ್ತಾರೆ. ಸ್ವಲ್ಪ ಅನುಮಾನ ಬಂದರೂ ತಮ್ಮ ಹಣವನ್ನು ಪೂರ್ತಿಯಾಗಿ ಪಾವತಿಮಾಡಿರೆಂದು ಕುಳಗಳನ್ನು ಬಲಾತ್ಕರಿಸಿ ತಮಗೆ ಬರಬೇಕಾದುದನ್ನು ಮೊದಲು ತೆಗೆದುಕೊಳ್ಳುತ್ತಾರೆ. ಅವರಲ್ಲಿ ಅನೇಕರು ಭರತಖಂಡದ ಹಲವು ಭಾಗಗಳಲ್ಲಿ ಶಾಖೆಗಳನ್ನು ಏರ್ಪಡಿಸಿಕೊಂಡು ಸಮಯಬಂದಾಗ ಪರಸ್ಪರವಾಗಿ ಹಣ ಒದಗಿಸಿಕೊಳ್ಳುತ್ತಾರೆ. ಒಂದು ಕಡೆ ತಮ್ಮ ಹಣವೇ ಬೇಕಾದಷ್ಟಿರುತ್ತದೆ. ಇನ್ನೊಂದು ಕಡೆ ಇಂಪೀರಿಯಲ್ ಬ್ಯಾಂಕಿನಂತಹ ಬ್ಯಾಂಕುಗಳಲ್ಲಿ ಅವರಿಗೆ ಲೆಕ್ಕದ ಸಾಲ ಸಿಕ್ಕುತ್ತದೆ. ಅವರಲ್ಲಿ ಪ್ರತಿಯೊಬ್ಬರಿಗೂ ಇಷ್ಟು ಮಿತಿ ಎಂದು ಗೊತ್ತುಮಾಡಿ ಆ ಬ್ಯಾಂಕಿನವರು ಸಾಲ ಕೊಡುತ್ತಾರೆ. ಅವರು ರುಜುಹಾಕಿ ಅಡವಿಟ್ಟ ಹುಂಡಿಗಳ ಆಧಾರದ ಮೇಲೆ ಪೇಟೆಯಲ್ಲಿಯೂ, ಈಗ ಪರೋಕ್ಷವಾಗಿ ರಿಸರ್ವ್ ಬ್ಯಾಂಕಿನಲ್ಲಿಯೂ ಮಿತಿಯಿಲ್ಲದಷ್ಟು ಸಾಲ ದೊರೆಯುತ್ತದೆ. ಹೀಗೆ ತಂದ ಹಣವನ್ನು ಪುನಃ ಕುಳಗಳ ಮೇಲೆ ಹಾಕುತ್ತಾರೆ. ಸಾಲ ಕೊಡುವುದರಲ್ಲಿಯೂ ತೆಗೆಯುವುದರಲ್ಲಿಯೂ ಇವರಿಗೂ, ಇತರ ಲೇವಾದೇವಿ ಬ್ಯಾಂಕುಗಳಿಗೂ ಯಾವಾಗಲೂ ಪೈಪೋಟಿ ಇರುವುದು. ಇವರ ಖಾತೆ ಲೆಕ್ಕಗಳಲ್ಲಿರುವ ಕುಳಗಳಿಗೆ–ಅವರಲ್ಲಿ ನಂಬಿಕೆಯಿರುವವರೆಗೂ– ಕೇವಲ ಒಂದು ರುಜುವಿನ ವಿಶ್ವಾಸದ ಮೇಲೆ ಅನೇಕ ಸಾವಿರ ರೂಪಾಯಿಗಳ ಸಾಲಸಿಕ್ಕುವುದು. ಇವರು ಮಾಡುವ ಲೇವಾದೇವಿಯ ಮೊತ್ತ ಸುಲಭವಾಗಿ ತಿಳಿಯದಾದರೂ ವರ್ಷಕ್ಕೆ ೬–೭ ಕೋಟಿ ರೂಪಾಯಿಗಳಷ್ಟಾದರೂ ಆಗುವುದೆನ್ನಬಹುದು. ಆದರೆ, ಇತರ ಹೊಸಮಾದರಿಯ ಬ್ಯಾಂಕು



ಮೈಸೂರು ಬ್ಯಾಂಕು

ಗಳಿಗಿರುವಷ್ಟು ಸಿಬ್ಬಂದಿಯ ಖರ್ಚಾಗಲಿ, ಅವರು ಮಾಡಬೇಕಾದ ಲಾಭದ ಹಂಚಿಕೆಯಾಗಲಿ ಇವರಿಗಿಲ್ಲ. ದೇಶದೊಳಕ್ಕೆ ಬರುವ ಎಲ್ಲ ಚಿನ್ನ ಬೆಳ್ಳಿಗಳನ್ನೂ ಇವರೇ ಕೊಂಡು ಮಾರುವರು. ಆದುದರಿಂದ, ಬೊಂಬಾಯಿ, ಮದರಾಸ್, ಕಲ್ಕತ್ತಾ ಮೊದಲಾದ ಪ್ರಾಂತ ಪಟ್ಟಣಗಳಲ್ಲಿ ಕೆಲಸಮಾಡುವ ವಿದೇಶಿ ವಿನಿಮಯ (Foreign Exchange) ಬ್ಯಾಂಕುಗಳಿಗೂ ಇವರಿಗೂ ಕೊಡುವ ಕೊಳ್ಳುವ ಸಂಬಂಧಗಳೂ ಇರುವುವು. ಎಂದರೆ, ನಾಡಿನ ಒಳವರ್ತಕರಿಗೂ ಹೊರಗಿನ ಇಂಪೀರಿಯಲ್ ಬ್ಯಾಂಕು ಮತ್ತು ವಿನಿಮಯ ಬ್ಯಾಂಕುಗಳಿಗೂ ನಡುವೆ ನಿಂತು ಇವರು ವ್ಯಾಪಾರದ ಗತಿಯನ್ನು ಜಾಗ್ರತೆಗೊಳಿಸುತ್ತಿದ್ದಾರೆಂದ ಹಾಗಾಯಿತು.

ಒಳವ್ಯಾಪಾರಕ್ಕೆ ಇಂಪೀರಿಯಲ್ ಬ್ಯಾಂಕಿನ ಸಂಬಂಧ ಇನ್ನೊಂದು ಬಗೆಯಲ್ಲಿಯೂ ಆಗುವುದು. ಬೆಂಗಳೂರು ದಂಡು, ಕೋಲಾರದ ಗಣಿಗಳ ಸಾಹುಕಾರರು, ಮಲೆನಾಡಿನ ಯೂರೋಪಿಯನ್ ಕಾಫೀ ತೋಟಗಳವರು, ನೆರೆಯ ಪ್ರಾಂತಗಳಲ್ಲಿ ವಾಸವಾಗಿದ್ದುಕೊಂಡು ನಮ್ಮ ದೇಶದ ವ್ಯಾಪಾರಕ್ಕೆ ವಸ್ತುಗಳನ್ನು ಒದಗಿಸುವವರು ಮುಂತಾದವರನೇಕರು ಆ ಬ್ಯಾಂಕಿನ ಗಿರಾಕಿಗಳು. ಅವರು ನಮ್ಮ ಒಳ ಹೊರ ವ್ಯಾಪಾರಕ್ಕೆ ಹಣ ಒದಗಿಸುವುದರಿಂದ ಆ ಮಟ್ಟಿಗೆ ಈ ಬ್ಯಾಂಕೂ ಪರೋಕ್ಷವಾಗಿ ನಮ್ಮ ವ್ಯಾಪಾರಕ್ಕೆ ಹಣ ಒದಗಿಸಿದಂತಾಯಿತು. ಈಗ ಒಳ ಹೊರಗಿನ ಇನ್ನೂ ಕೆಲವು ಬ್ಯಾಂಕುಗಳು ಇಲ್ಲಿ ಲೇವಾದೇವಿಗಾಗಿ ಏರ್ಪಟ್ಟು ಕೆಲಸ ಮಾಡುತ್ತಿವೆ.

ಮುಲ್ತಾನಿ ಜನರೂ, ನಾಟುಕೋಟಿಯವರೂ ಹುಂಡಿಗಳನ್ನು ಬರಸಿಕೊಂಡು ಸಾಲ ಕೊಡುವರೆಂದು ಹೇಳಿದೆವಲ್ಲ. ಈ ಹುಂಡಿಗಳು ಸಾಧಾರಣವಾಗಿ ಕುಳಗಳ 'ಪುಷ್ಟಿ' ಮತ್ತು ಸ್ಥಿತಿಯ ಅಳತೆಯ ಮೇಲೂ ಸಾಲಗಳನ್ನು ಹಿಂದಕ್ಕೆ ಕೊಡುವುದರಲ್ಲಿ ಅವರು ತೋರಿಸುವ ಜಾಗ್ರತೆ ಜಾಗರೂಕತೆಗಳ ಮೇಲೂ ಅವರು ಮಾಡುವ ವ್ಯಾಪಾರದ ಲಕ್ಷಣ ಪ್ರಮಾಣಗಳ ಮೇಲೂ ನಿರ್ಧರವಾಗುವುವು. ಅಲ್ಲದೆ, ದೊಡ್ಡ ಬ್ಯಾಂಕುಗಳವರು ಎಷ್ಟು ಕ್ರಮವಾಗಿ ನಿರ್ದಾಕ್ಷಿಣ್ಯವಾಗಿ ಜಾಗ್ರತೆಯಿಂದ ಹಣ ವಸೂಲು ಮಾಡುವರೊ, ಅದಕ್ಕಿಂತಲೂ ಬಿಗಿಯಾಗಿಯೇ ಇರುವುದರಿಂದಲೂ ಒಂದು ಸಲ ಒಬ್ಬರಲ್ಲಿ ನಂಬಿಕೆ ಕಳೆದುಕೊಂಡವರಿಗೆ ಇನ್ನೊಂದುಸಲ ಅವರಲ್ಲಿಯಾಗಲಿ ಅಂಥ ಇತರರಿಂದಾಗಲಿ ಸಾಲ ಹುಟ್ಟುವುದು ಕಷ್ಟವಾಗುವುದ

ರಿಂದಲೂ ಬ್ಯಾಂಕುಗಳಲ್ಲಿ ವರ್ತಕರಿಗೆ ದೊರೆಯುವ ಸಾಲ ಮಿತವಾಗಿ ಅನೇಕ ನಿರ್ಬಂಧಗಳಿಗೆ ಒಳಪಟ್ಟಿರುವುದರಿಂದಲೂ, ವ್ಯಾಪಾರಸ್ಥರಿಗೆ ಮೇಲೆಮೇಲೆ ಕೈಸಾಲವೆತ್ತುವ ಆವಶ್ಯಕತೆ ಇದ್ದೇ ಇರುವುದರಿಂದಲೂ ಇವರ ಲೇವಾದೇವಿ ಹೆಚ್ಚುತ್ತಿದೆ. ಕಾಲಕ್ಕೆ ಸರಿಯಾಗಿ ಹಣ ಕಟ್ಟುವ ಅಭ್ಯಾಸವೂ ಲೇವಾದೇವಿಯ ಬೆಳವಣಿಗೆಗೆ ಬೇಕಾಗುವ ಮುಖ್ಯಗುಣ ನಂಬಿಕೆಗಳೂ ನಮ್ಮ ವರ್ತಕರಲ್ಲಿ ಬೆಳೆಯುತ್ತಿವೆಯೆಂದು ಹೇಳಬಹುದು.

ಮೈಸೂರಲ್ಲಿ ನಾಟುಕೋಟಿ ಸಾಹುಕಾರರ ಸಂಖ್ಯೆ ಕಡಮೆ. ಉಳಿದ ಹಿಂದೂ ಸಾಹುಕಾರರಲ್ಲಿ ಮಾರವಾಡಿಗಳು, ಗುಜರಾತಿಗಳು, ವೈಶ್ಯರು ಮುಖ್ಯ. ಮುಸಲ್ಮಾನರಲ್ಲಿ ಕಾಥೇವಾಡಿಯ ಖೋಜಾ ವರ್ತಕರು, ಮದರಾಸ್, ವಾನಂಬಾಡಿ ಕಡೆಯ ಲಬ್ಬೆಯವರು ಮುಖ್ಯ. ಇವರೆಲ್ಲ ಸಾಮಾನ್ಯವಾಗಿ ಪದಾರ್ಥಗಳನ್ನು ಸಾಲ ಹಾಕುವರು. ಮಾರವಾಡಿಯವರು ಬಟ್ಟೆ ಬರೆ, ನೂಲು, 'ಷಾಪ್' ಸಾಮಾನು, ಪಾತ್ರೆ ಪದಾರ್ಥ, ಕುದುವಿನ ಲೇವಾದೇವಿ-ಇವುಗಳಿಗೆ ಸಂಬಂಧಿಸುವ ವ್ಯಾಪಾರಗಳಲ್ಲಿರುವರು. ಗುಜರಾತಿಯವರು ಬಟ್ಟೆ ಬರೆ, ಒಡವೆ, ಚಿನ್ನ, ಬೆಳ್ಳಿ, ಮತ್ತು 'ಷಾಪ್' ಸಾಮಾನುಗಳ ವ್ಯಾಪಾರದಲ್ಲಿರುವರು. ಲಬ್ಬೆಯವರು ತರಗುಪೇಟೆಯಲ್ಲಿ ಧಾನ್ಯ, ಸಕ್ಕರೆ, ಸಂಬಾರದ ದಿನಸಿ, ಉಪ್ಪು, ಬಟ್ಟೆ, ಕಬ್ಬಿಣದ ಸಾಮಾನು, ಬಣ್ಣ, ಸಿಮೆಂಟ್, ಚರ್ಮ, ಚಕ್ಕಳ ಮುಂತಾದ ವ್ಯಾಪಾರಗಳಲ್ಲಿ ತೊಡಗಿರುವರು ; ಸಗಟು ಸಾಲಗಳನ್ನು ಕೊಟ್ಟು ಸಣ್ಣ ಪೇಟೆಗಳವರಿಗೆ ಪದಾರ್ಥಗಳನ್ನು ಒದಗಿಸುವರು. ಹಿಂದೂಪುರ ಮತ್ತು ಮದರಾಸ್ ಕಡೆಯ ವೈಶ್ಯರು ರೇಷ್ಮೆ ನೂಲು, ಜವಳಿ, ಒಡವೆ, ರತ್ನಪಡಿ ವ್ಯಾಪಾರ ಮುಂತಾದವುಗಳಲ್ಲಿ ತೊಡಗಿರುವರು. ಇವರಲ್ಲದೆ, ಅತಿ ಸಣ್ಣ ಸ್ವತ್ತುಗಳ ಕುದುವಿನ ಮೇಲೆ ಅತಿ ಹೆಚ್ಚಿನ ಬಡ್ಡಿ ಹಾಕಿ ಸಾಲ ಕೊಡುವ ಮಾರವಾಡಿಯವರು ಸಂಸ್ಥಾನದ ಮೂಲೆ ಮೂಲೆಯಲ್ಲಿಯೂ ಇದ್ದಾರೆ. ಈಗ ಐದಾರು ವರ್ಷಗಳಿಂದಲೂ ಕಾಬೂಲಿನ ಪಠಾಣರ ಪ್ರಭಾವ ಭಯಂಕರವಾಗಿ ಹರಡುತ್ತಿದೆ.

ಕಂಪನಿಗಳ ಮೂಲಕ ನಡೆಯುವ ಲೇವಾದೇವಿಯೆಂದರೆ ಮುಖ್ಯವಾಗಿ ಕೂಡು ಬಂಡವಾಳದ ಸಂಘಗಳಿಂದ. ಇವುಗಳಲ್ಲಿ ಮೊದಲನೆಯದು ಮೈಸೂರು ಬ್ಯಾಂಕು. ಈ ಬ್ಯಾಂಕು ನಮ್ಮದೇ ; ಇದಕ್ಕೆ ಸರ್ಕಾರದ ಬೆಂಬಲವಿದೆ. ಅಪರೂಪವಾಗಿ ಸರ್ಕಾರದ ಹಣವಲ್ಲಿ ಸ್ವಲ್ಪ ಭಾಗವನ್ನು

ಇಲ್ಲಿ ಡಿಪಾಸಿಟ್ ಇಡುವುದೂ ಉಂಟು. ಬೇಕಾದಾಗ ಇಲ್ಲಿಂದ ಕಿರುಸಾಲ ತೆಗೆದಿರುವುದೂ ಉಂಟು. ಇದರ ಮೂಲಧನ ೨೦ ಲಕ್ಷ ರೂಪಾಯಿಗಳು. ದೇಶದ ಸುಮಾರು ಎಲ್ಲ ದೊಡ್ಡ ವ್ಯಾಪಾರ ಸ್ಥಳಗಳಲ್ಲಿಯೂ ಇದರ ಶಾಖೆಗಳು, - ಒಟ್ಟು ಈಗ ೧೬ - ಇವೆ. ೧೯೧೩ರಲ್ಲಿ ಇದು ಹುಟ್ಟಿದಂದಿನಿಂದ ಈವರೆಗೆ ದೇಶದ ವ್ಯಾಪಾರ ಕೈಗಾರಿಕೆಗಳಿಗೆ ನೆರವಾಗಿ ಷೇರುದಾರರಿಗೆ ಆ ರಿಂದ ೧೨ರ ವರೆಗೂ ಡಿವಿಡೆಂಡನ್ನು ಹಂಚಿ ೧೮ ಲಕ್ಷ ರೂಪಾಯಿ ಆಪದ್ಧನವನ್ನು ಕೂಡಿಹಾಕಿದೆ. ಈ ಬ್ಯಾಂಕಿನ ಲೇವಾದೇವಿ ವರ್ಷಕ್ಕೆ ಸುಮಾರು ಐದೂವರೆಕೋಟಿ ರೂಪಾಯಿಗಳಷ್ಟಾಗುವುದು. ಬ್ಯಾಂಕಿಗೆ ಹಣ ಒದಗುವುದು ಸಾಧಾರಣವಾಗಿ ಮೂರು ಬಗೆಯಲ್ಲಿ : ಷೇರು (ಮೂಲ) ಧನ ; ಇತರರು ಇಟ್ಟ ಡಿಪಾಸಿಟ್ ಹಣ ; ಮತ್ತು ಬ್ಯಾಂಕುಗಳವರೇ ಬೇಕಾದಾಗ ಇತರರಿಂದ ತೆಗೆಯುವ ಸಾಲ. ತಾವು ತೆಗೆದುಕೊಳ್ಳುವ ಡಿಪಾಸಿಟ್ ಹಣದ ಮೇಲೆ ಬ್ಯಾಂಕಿನವರು ಬಡ್ಡಿ ತೆರಬೇಕಾಗಿರುತ್ತದೆ. ಆದರೆ, ಇದಕ್ಕಿಂತಲೂ ಅವರು ಒದಗಿಸುವ ಸಾಲದ ಮೇಲೆ ಹೆಚ್ಚು ಬಡ್ಡಿ ಹಾಕಿ ಸಂಪಾದನೆ ಮಾಡುವುದರಿಂದ ಅವರಿಗೆ ಲಾಭ. ಮೈಸೂರು ಬ್ಯಾಂಕಿನಲ್ಲಿ ಡಿಪಾಸಿಟ್‌ದಾರರಿಗೆ ಕೊಡುವ ಬಡ್ಡಿ ಈಗ ಶೇಕಡ ೩-೪ ಆಗಿರುವುದರಿಂದ_ಎಂದರೆ ಪೇಟೆಯ ಇತರ ಬ್ಯಾಂಕುಗಳು ಕೊಡುವುದಕ್ಕಿಂತ ಕಡಮೆಯಾಗಿರುವುದರಿಂದ-ಹೆಚ್ಚು ಬಡ್ಡಿ ಆಸೆಪಡುವವರು ಸಾಮಾನ್ಯವಾಗಿ ಇಲ್ಲಿ ಅದನ್ನಿಡಲು ಆತುರರಾಗಿರುವುದಿಲ್ಲ. ದೊಡ್ಡ ಡಿಪಾಸಿಟ್‌ದಾರರು ತಮ್ಮ ಹಣವನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇವೆಂದು ಇಂಥ ಬ್ಯಾಂಕುಗಳನ್ನು ಹೆದರಿಸಿ ತಾವು ಚಾಲಕ ಮಂಡಲಿಯಲ್ಲಿ ಸೇರಿಕೊಂಡು ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವುದುಂಟು. ಕೈಗಾರಿಕೆಗಳಿಗೂ ಕೆಲವುವೇಳೆ ಸಾಲ ಕೊಟ್ಟು ಮೈಸೂರು ಬ್ಯಾಂಕು ಕೈ ಕಚ್ಚಿಸಿಕೊಂಡಿದೆ. ಇಂಥ ಬ್ಯಾಂಕುಗಳು ಕೊಡುವ ಸಾಲ, ಕಿರುವಾಯಿದೆಯ ಸಾಲ. ಹಣ ಕೈಯಿಂದ ಕೈಗೆ ವೇಗವಾಗಿ ತಿರುಗುತ್ತಿರಬೇಕು. ಎಷ್ಟು ಸಲ ಕೈ ಬದಲಾಯಿಸಿ ಬೆಳೆದರೆ (Turn over) ಬ್ಯಾಂಕಿಗೆ ಅಷ್ಟು ಲಾಭ ಹೆಚ್ಚು. ಆದರೆ, ದೊಡ್ಡ ಕೈಗಾರಿಕೆಗಳ ಸ್ಥಾಪನೆಗಾಗಲಿ ವ್ಯವಸಾಯಕ್ಕಾಗಲಿ ಬೇಕಾಗುವ ನಿಡುವಾಯಿದೆಯ ಸಾಲಗಳನ್ನು ವ್ಯಾಪಾರದ ಬ್ಯಾಂಕುಗಳು ನೇರವಾಗಿ ಒದಗಿಸಲಾರವು.

ಕೈಗಾರಿಕೆಗಳ ಸಹಾಯಕ್ಕಾಗಿಯೇ ಸ್ಥಾಪಿಸಲ್ಪಟ್ಟ ಇಂಡಸ್ಟ್ರಿಯಲ್ ಬ್ಯಾಂಕೆಂಬುದು ಕೂಡ ಆ ಕೆಲಸದಲ್ಲಿ ನಷ್ಟಪಟ್ಟು ಸಾದಾ ಬ್ಯಾಂಕುಗಳಂತೆಯೇ ಕೇವಲ ಕಿರುವಾಯಿದೆಯ ಲೇವಾದೇವಿ, ಸರಕಾರಿ ಸಾಲಪತ್ರಗಳ ಅಡಮಾನ, ಕೊಳ್ಳಾಟ, ನಗದುಸಾಲ ಮುಂತಾದ ಬಗೆಯ ಕಾರ್ಯವನ್ನೇ ಮಾಡುತ್ತಿದೆ.

ದಂಡಿಗೆ ಸೇರಿದ ಬೆಂಗಳೂರು ಬ್ಯಾಂಕಿನ ಶಾಖೆಯೊಂದೂ ಅಲ್ಲಲ್ಲಿ ಸಣ್ಣಸಣ್ಣ ಲೇವಾದೇವಿ ಸಂಸ್ಥೆಗಳೂ ವ್ಯಾಪಾರಕ್ಕೆ ಹಣವನ್ನು ಒದಗಿಸುತ್ತಿವೆ.

ದೇಶದ ಪರಸ್ಪರ ಸಹಾಯ ಸಂಘಗಳ ಲೇವಾದೇವಿ ಕಾರ್ಯಗಳು ದಿನೇದಿನೇ ಹೆಚ್ಚುತ್ತಿರುವುವಾದರೂ ಒಟ್ಟು ದೇಶದ ವ್ಯಾಪಾರಕ್ಕೆ ಸರಾಫರಿಂದಲೂ ಮೈಸೂರು ಬ್ಯಾಂಕಿನವರಿಂದಲೂ ಆಗುವಂತೆ ದೊಡ್ಡ ಪ್ರಮಾಣದಲ್ಲಿ ಹಣ ಒದಗುವುದಿಲ್ಲವೆನ್ನಬಹುದು. ಉತ್ಪತ್ತಿ ಕಾರ್ಯಗಳಿಗೂ ವ್ಯಾಪಾರಕ್ಕೂ ಸಂಸ್ಥಾನದ ಸಹಕಾರ ಸಂಘಗಳೆಲ್ಲ ಒದಗಿಸಿರುವ ಹಣ ಸುಮಾರು ೩೭.೫ ಲಕ್ಷವೆಂದು ಸ್ಥೂಲವಾಗಿ ಹೇಳಬಹುದು.

ವ್ಯವಸಾಯಕ್ಕೆ ಬೇಕಾಗುವ ಎಲ್ಲ ಹಣವನ್ನೂ ಸಾಹುಕಾರರೂ ಸಹಕಾರ ಸಂಘಗಳವರೂ ಮಾತ್ರ ಒದಗಿಸುತ್ತಿರುವರು. ಈಗೀಗ ಜಮೀನು ಅಡಮಾನದ ಬ್ಯಾಂಕುಗಳೆಂಬ ಕೆಲವು ಸಂಸ್ಥೆಗಳು ಸ್ಥಾಪಿತವಾಗಿ ಕೆಲಸಮಾಡುತ್ತಿವೆ. ಸರ್ಕಾರದ ತಕಾವಿ ಸಾಲಗಳು ಎಲ್ಲರಿಗೂ ದೊರಕವು. ದೊರಕಿದ ಸಾಲವನ್ನು ಕ್ಲುಪ್ತಕಾಲಕ್ಕೆ ತೆರುವುದು ಹಲವೇಳೆ ಕಷ್ಟವಾಗುವುದು. ಈ ಅಡವಾನದ ಬ್ಯಾಂಕುಗಳು ಊರ್ಜಿತವಾದರೆ ಭೂಮಿ ಕೊಳ್ಳುವುದು, ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ಕೊಳ್ಳುವುದು ಮುಂತಾದ ಕೆಲಸಗಳು ಹೆಚ್ಚು ಪರಿಮಾಣದಲ್ಲಿ ನಡೆಯಬಹುದೆಂಬ ಭರವಸೆಯಿದೆ.

ಒಟ್ಟಿನಲ್ಲಿ, ಮೈಸೂರು ಬ್ಯಾಂಕು ನಡುತರಗತಿಯ ಜನಕ್ಕೆ ಎಟುಕದು ; ಸಹಕಾರ ಬ್ಯಾಂಕುಗಳಿಂದ ಈ ಬಗೆಯ ಜನದ ಉದ್ಧಾರ ಸ್ವಲ್ಪಮಟ್ಟಿಗೆ ಆಗಿರುವುದು ನಿಜ. ಆದರೆ, ಅವುಗಳಿಂದ ದೇಶದ ಅಭಿವೃದ್ಧಿ ಕಾರ್ಯಗಳು ಯಾವ ಪ್ರಮಾಣದಲ್ಲಿ ಎಷ್ಟು ಮುಖಗಳಲ್ಲಿ ಆಗಬೇಕೊ ಆ ಪ್ರಮಾಣದಲ್ಲಿ–ಇಲ್ಲಿ ಒಂದು ಕಡೆಯಲ್ಲಿಯೇ ಅಲ್ಲ, ಇಡಿಯ ಭರತಖಂಡದಲ್ಲಿಯೇ–ಆಗುತ್ತಿಲ್ಲ. ಇನ್ನು ಉಳಿದ ಕೂಡು ಬಂಡವಾಳದ ಕಂಪನಿಗಳಲ್ಲಿ

ಒಳದೇಶದವು ಕಡಮೆ. ಅವುಗಳ ಬಂಡವಾಳ ಡಿಪಾಸಿಟ್ಟು, ಆಪದ್ಧನ ಕಡಮೆ. ಕಂಪನಿಗಳು ಹಲವುವೇಳೆ ಅಪ್ರಯೋಜಕರ ಕೈಯಲ್ಲೂ ಅಪ್ರಾಮಾಣಿಕರ ಕೈಯಲ್ಲೂ ಸೇರಿ ಜಾಗ್ರತೆಯಾಗಿ ದಿವಾಳಿಯಾಗುವುವೆಂಬ ಭಯ ಜನರಿಗೆ ಇನ್ನೂ ಚುರುಕಾಗಿಯೇ ಇರುವುದರಿಂದ ಅವು ಸುಲಭವಾಗಿ ಪ್ರವರ್ಧಿಸವು. ಇರುವ ಸಂಸ್ಥೆಗಳಲ್ಲಿ ಹೆಸರಿಗಿರುವ ಬಂಡವಾಳಕ್ಕೂ ನಿಜವಾಗಿ ಕೈಯಲ್ಲಿರುವ ಹಣಕ್ಕೂ ೬ರಲ್ಲಿ ಒಂದರ ಪ್ರಮಾಣ ಕೂಡ ಇಲ್ಲ. ಈ ನಡುವೆ ಪರಕೀಯರು ಇನ್‌ಷೂರೆನ್ಸ್ ಕಂಪನಿಯವರು, ಉತ್ಪತ್ತಿ ಮಂಡಲಗಳವರು, ಸರಾಫರು, ಚೆಟ್ಟಿಗಳು, ಲಬ್ಬೆಯವರು, ತಮ್ಮ ಹಿಡಿತವನ್ನು ಬಿಗಿಮಾಡುತ್ತ ದೇಶದ ಸಂಪತ್ಸಾಧನಗಳನ್ನೂ ದೊಡ್ಡ ವ್ಯಾಪಾರ ಕೈಗಾರಿಕೆಗಳನ್ನೂ ಸಂಪೂರ್ಣವಾಗಿ ತಮ್ಮ ವಶಮಾಡಿಕೊಳ್ಳುತ್ತಿದ್ದಾರೆ.

ನಾಣ್ಯ, ತೂಕ

ಬ್ರಿಟಿಷ್ ಸರಕಾರದವರೊಡನೆ ಆಗಿರುವ ಒಪ್ಪಂದದ ಮೇರೆಗೆ ಮೈಸೂರು ಸರ್ಕಾರದವರು ಸ್ವಂತ ಟಂಕಸಾಲೆಯನ್ನೂ ಹಣದ ಚಲಾವಣೆಯನ್ನೂ ಇಟ್ಟುಕೊಂಡಿಲ್ಲ. ಬ್ರಿಟಿಷ್ ಇಂಡಿಯಾದಲ್ಲಿರುವ ನಾಣ್ಯ ನೋಟುಗಳೇ ಇಲ್ಲಿಯೂ ಪ್ರಚಾರದಲ್ಲಿವೆ. ವರ್ಷವೊಂದಕ್ಕೆ ಸುಮಾರು ೩೭ ಲಕ್ಷ ಬೆಳ್ಳಿಯ ರೂಪಾಯಿಗಳು ದೇಶದಲ್ಲಿ ನಿಂತು ವ್ಯಾಪಾರ ಉದ್ಯೋಗಗಳಿಗೆ ಒದಗುತ್ತವೆ. ನಾಣ್ಯಗಳು ಬೆಳ್ಳಿ, ನಿಕ್ಕಲ್, ತಾಮ್ರ ಈ ಮೂರು ಲೋಹಗಳವು. ಬೆಳ್ಳಿಯ ನಾಣ್ಯಗಳು ಮುಖ್ಯವಾಗಿ ಒಂದು ರೂಪಾಯಿ ; ಅರ್ಧ ರೂಪಾಯಿ ; ಪಾವಲೆ. ನಿಕ್ಕಲ್ಲಿನಲ್ಲಿ ನಾಲ್ಕಾಣೆ, ಎರಡಾಣೆ ಒಂದಾಣೆ ನಾಣ್ಯಗಳಿವೆ. ಕಾಲಾಣೆ, ಕಾಸು ತಾಮ್ರದವು. ರೂಪಾಯಲ್ಲಿರುವ ಬೆಳ್ಳಿ ಯಾವಾಗಲೂ ಹತ್ತು ಹನ್ನೊಂದು ಆಣೆ ಬೆಳ್ಳಿಯ ಬೆಲೆಗೆ ಮೀರಿರುವುದಿಲ್ಲವಾದರೂ ಅದು ಹದಿನಾರಾಣೆ ಬೆಲೆಗೊಂಡು ಚಲಾವಣೆಯಲ್ಲಿದೆ. ಈ ನಾಣ್ಯಗಳನ್ನು ಮುದ್ರಿಸುವುದರಿಂದ ಬರುವ ಲಾಭವೆಲ್ಲ ಬ್ರಿಟಿಷ್ ಸರ್ಕಾರಕ್ಕೆ ಸೇರುವುದು. ನೋಟುಗಳು ೫ ರೂಪಾಯಿಂದ ಹಿಡಿದು ೧೦,೦೦೦ ರೂಪಾಯಿಗಳ ವರೆಗೂ ಇರುವುವು. ಹಳ್ಳಿಗಳಲ್ಲಿ ಲೋಹ ನಾಣ್ಯಗಳ ಬಳಕೆ ಹೆಚ್ಚು. ಹಣ ಕೂಡಿಹಾಕುವವರು ಬೆಳ್ಳಿಯ ನಾಣ್ಯಗಳನ್ನೆ ಬಯಸುವುದು ಸಹಜ. ಜೊತೆಗೆ ನೋಟಿಗೂ ನಂಬಿಕೆಯಾದ ಬೆಲೆಯಿರುವುದರಿಂದ

ಅವನ್ನು ಸಂಗ್ರಹಿಸಲೂ ಹೆಚ್ಚು ಭಯಪಡುವುದಿಲ್ಲವೆನ್ನಬಹುದು. ಪಟ್ಟಣಗಳಲ್ಲಿ, ಸಣ್ಣ ವ್ಯಾಪಾರಗಳಲ್ಲಿ ಹೊರತು, ನೋಟಿನ ಚಲಾವಣೆ ಬಹಳ. ದೇಶದಲ್ಲಿ ಶೇಕಡ ೯೦ ಜನರಿಗೆ ೫ ರೂಪಾಯಿಗಳನ್ನು ಬಳಸುವುದಿರಲಿ, ಹಿಡಿಯುವ ಭಾಗ್ಯ ಕೂಡ ಇರುವುದಿಲ್ಲವೆನ್ನಬಹುದು.

ದವಸಧಾನ್ಯಗಳನ್ನು ಕೊಳಗ, ಸೇರು, ಪಲ್ಲ, ಖಂಡುಗ –ಈ ಲೆಕ್ಕದಲ್ಲಿ ಅಳೆಯುತ್ತಾರೆ. ಕೃಷ್ಣರಾಜ ಖಂಡುಗಕ್ಕೆ ೧೬೦ ಸೇರು. ಒಂದು ಕೊಳಗಕ್ಕೆ ಎಂಟುಸೇರು. ಸೇರಿನ ಉಪಭಾಗಗಳಾಗಿ ಅರೆಸೇರು, ಪಾವು, ಚಟಾಕು, ಬಳಕೆಯಲ್ಲಿವೆ. ಕೆಲವು ಧಾನ್ಯಗಳನ್ನು ಮುಖ್ಯವಾಗಿ ಬತ್ತ ಅಕ್ಕಿಗಳನ್ನು ಪಲ್ಲಾಗಳಲ್ಲಿ (೧೦೦ ಸೇರು) ಅಳೆಯುತ್ತಾರೆ. ದೊಡ್ಡ ಅಳತೆಯ ಖಂಡುಗ ೧೮೦, ೨೦೦ ಸೇರು ಇರುವುದುಂಟು. ಸಂಬಾರದ ಸಾಮಾನು, ತುಪ್ಪ, ಬೆಲ್ಲ, ಕಾಫೀ, ಸಕ್ಕರೆ, ತರಕಾರಿಗಳನ್ನು ಮಣ, ವೀಸೆ ಲೆಕ್ಕದಲ್ಲಿ ಅಳೆಯುವರು. ಮಣಕ್ಕೆ ಸಣ್ಣತೂಕ ೪೦, ದೊಡ್ಡದು ೪೮ ಸೇರು. ೨೪ ತೊಲೆಗೆ ಒಂದು ಸೇರಿನ ತೂಕ. ೫ ಸೇರಿಗೆ ಒಂದು ವೀಸೆ ; ಎರಡು ವೀಸೆಗೆ ಒಂದು ಧಡಿಯ; ೪ ಧಡಿಯ ಅಥವಾ ೯೬೦ ತೊಲೆ ತೂಕಕ್ಕೆ ಒಂದು ಮಣ.

ಅಳತೆಯ ಕೊಳಗ, ಸೇರು, ತೂಕದಸೇರು, ವೀಸೆ ಇವು ಹೀಗೇ ಇರಬೇಕೆಂದೂ ಅವುಗಳಲ್ಲಿ ವ್ಯತ್ಯಾಸ ಮಾಡಿದರೆ ಶಿಕ್ಷೆಯಾಗುವುದೆಂದೂ ಸರ್ಕಾರದ ವಿಧಿ ಇದೆ. ಅವರೂ ತಾವೇ ಮುದ್ರೆ ಒತ್ತಿ ಸರಿಯಾದ ಅಳತೆ ತೂಕಗಳನ್ನು ವರ್ತಕರಿಗೆ ಒದಗಿಸುತ್ತಾರೆ.

ಇವಲ್ಲದೆ, ಕೆಲವು ಲೆಕ್ಕಗಳಲ್ಲಿ (ಉದಾ,—ರೈಲ್ವೆ) ಟನ್ ಲೆಕ್ಕವಿದೆ. ಆಸ್ಪತ್ರೆಗಳಲ್ಲಿಯೂ ಔಷಧದ ಅಂಗಡಿಗಳಲ್ಲಿಯೂ ಔನ್ಸು, ಪೈನ್ಟ್, ಡ್ರಾಮ್, ಮುಂತಾದವೂ ಕೆಲವು ವಿಶೇಷ ಬಗೆಯ ವ್ಯಾಪಾರಗಳಲ್ಲಿ ಪೌಂಡಿನ ಲೆಕ್ಕವೂ ಇವೆ. ಇವೆಲ್ಲ, ಇಂಗ್ಲಿಷ್ ಬೆಲೆ ತೂಕಗಳು.

(೧ ತೊಲ=೧೮೦ ಗ್ರೈಯಿನ್. ೪೦ ತೊಲ=೧ ಪೌಂಡು. ೩⅔ ಪೌಂಡು = ೧ ವೀಸೆ. ೧ ಟನ್ನಿಗೆ=೯೩ ಮುಕ್ಕಾಲು ಮಣ=೨೨೪೦ ತೊಲಗಳು.)

———

೭ ಸಮಾಜದಲ್ಲಿ ಸಂಪತ್ತು

ಸಂಪಾದನೆಯ ಹಂಚಿಕೆ

ಜನಸಮುದಾಯದಲ್ಲಿ, ಕೆಲಸಮಾಡಿ ಸಂಪಾದಿಸುವವರು ಕೆಲವರು ; ಕೆಲವರು ಅಧೀನರು ; ಕೆಲವರು ಆಸ್ತಿಪಾಸ್ತಿಗಳಿಂದ ಬರುವ ಹಣವನ್ನು ಕುಳಿತು ತಿನ್ನುವವರು. ಸಂಪಾದಿಸುವವರು ಅನೇಕ ಉದ್ಯೋಗಗಳಲ್ಲಿ ಕೆಲಸ ಮಾಡುತ್ತಾರಲ್ಲವೆ ? ಭೂಮಿಯಿಂದ ಬರುವ ಫಲವನ್ನುಂಡು ಜೀವಿಸುವವರು, ಅಥವಾ ಗುತ್ತಿಗೆ, ಭೂಗಂದಾಯ (Rent) ಗಳಿಂದ ಜೀವಿಸುವವರು ; ತಮ್ಮ ಹಣವನ್ನು ಸಾಲ ಕೊಟ್ಟು ಅದರಿಂದ ಬರುವ ಬಡ್ಡಿ ಲಾಭಗಳಿಂದ ಜೀವಿಸುವವರು ; ದೇಹಶಕ್ತಿ ಮನಶ್ಶಕ್ತಿ ಕಾರ್ಯಸಾಧನಾ ಶಕ್ತಿಗಳನ್ನು ಪ್ರಯೋಗಿಸಿ ಕೂಲಿಯನ್ನೂ ಸಂಬಳವನ್ನೂ ಸಂಪಾದಿಸುವವರು; ಸಾಹಸಿಗಳಾಗಿ ಹೊಸ ಕೈಗಾರಿಕೆ ಕಾರ್ಖಾನೆಗಳನ್ನು ಏರ್ಪಡಿಸಿ ದೊಡ್ಡ ಲಾಭಗಳನ್ನು ಸಂಪಾದಿಸುವವರು :—ಹೀಗೆ ೪–೫ ಬಗೆಯ ಜನರಿದ್ದಾರೆ.

ಭೂ ಸ್ವತ್ತುಗಳಿಂದ ಜೀವಿಸುವವರು

ಭೂಮಿಯಲ್ಲಿ ಕಾಡು ಮೇಡು ಬಂಜರು ಭೂಮಿ, ಬೆಳಸು ಬೆಳೆಯುವ ಭೂಮಿ, ಬಯಲು ನಿವೇಶನ ಎಂದು ಹಲವು ಬಗೆಯವಿವೆ. ಮೇಡು ಬಂಜರುಗಳನ್ನು ಬಿಟ್ಟು ಉಳಿದ ಎಲ್ಲ ಭೂಮಿ ಯಜಮಾನರಿಗೆ ಒಂದು ತೆರದಲ್ಲಲ್ಲದಿದ್ದರೆ ಇನ್ನೊಂದು ತೆರದಲ್ಲಿ ಪ್ರಯೋಜನವನ್ನು ತರುತ್ತದೆ ; ಸ್ವತಃ ವ್ಯವಸಾಯಮಾಡಲಿ, ಬೇರೊಬ್ಬರಿಂದ ಮಾಡಿಸಲಿ ತಮ್ಮ ಬಡತನಕ್ಕೆ ಬರಬೇಕಾದ ಭಾಗ ಅವರಿಗೆ ಬರುತ್ತದೆ. ತಾವೇ ರೈತರೂ ಒಡೆಯರೂ ಆಗಿದ್ದರೆ ಪ್ರತಿಫಲವೂ ಸಂಪೂರ್ಣವಾಗಿ ಅವರಿಗೇ ದೊರೆಯುತ್ತದೆ. ರೈತರಿಂದ ಬೇಸಾಯ ಮಾಡಿಸುತ್ತಿದ್ದರೆ ಅವರಿಗೂ ಇವರಿಗೂ ನಡೆದ ಮಾತು ಕರಾರುಗಳ ಮೇಲೆ ಇಷ್ಟೆಂಬ ನಿಯತವಾದ ಗುತ್ತಿಗೆ ಅಥವಾ

'ವಾರ' ಬರುತ್ತದೆ. ಫಲವತ್ತಾದ ಭೂಮಿಗಳಿಗೂ ಪೇಟೆಗೆ ಹತ್ತಿರವಿರುವ ಭೂಮಿಗಳಿಗೂ ಪೇಟೆಗಳಿಗೆ ಸಾಮಾನನ್ನು ಒಯ್ಯುವ ಸಾಧನಗಳು ಸುಲಭವಾಗಿ ದೊರೆಯುವ ಕಡೆಗಳಲ್ಲಿಯೂ ಸಾಗುವಳಿ ತೆರಾಣಿಯು (Rent) ಮೊತ್ತ ಹೆಚ್ಚು. ವ್ಯವಸಾಯದ ಎಲ್ಲ ಖರ್ಚುಗಳು ಕಡಮೆಯಾಗಿ ಪೇಟೆಯ ಧಾರಣೆ ಅನುಕೂಲವಾಗಿರುವಾಗ ವ್ಯವಸಾಯದ ಫಲ ಲಾಭ ಹೆಚ್ಚು.

ಬೆಳಸು

ರೈತರು ಭೂಮಿಯು ಸಾಗುವಳಿ ಮಾಡುತ್ತಿರುವಾಗ ಅವರು ಯಜಮಾನರಿಗೆ ಕೊಡುವ ಭಾಗ ನಾಲ್ಕಾರು ವಿಧಗಳಲ್ಲಿರುತ್ತದೆ.

ಸರ್ಕಾರಿ ಜಮೀನು

ಭೂಮಿಗಳಲ್ಲಿ ಸರ್ಕಾರಿ ಅಥವಾ ಇನಾಮತಿ ಎಂದು ಎರಡು ಭಾಗ ಉಂಟು. ಸರ್ಕಾರಿ ಭೂಮಿಗಳೆಲ್ಲ ರಯತ್ವಾರಿ ಪದ್ಧತಿಗೆ ಒಳಪಟ್ಟ 'ಕಂದಾಯದ' ಜಮೀನುಗಳಾಗಿಯೋ, 'ಬಟಾಯಿ' ಜಮೀನುಗಳಾಗಿಯೋ ರೈತರಿಗೆ ಬೇಸಾಯಕ್ಕೆ ಕೊಡಲ್ಪಟ್ಟಿರುತ್ತವೆ. ಕಂದಾಯ ಇಷ್ಟೆಂದು ನಿಯತವಾದ ಪ್ರಮಾಣದಲ್ಲಿ ಹಣ ರೂಪದಲ್ಲಿರುತ್ತದೆ. ಭೂಮಿಯ ಒಡೆಯರು ಪಟ್ಟೆಗಳ ಮೂಲಕ ತಮ್ಮ ಸ್ವತ್ತಿನ ಮೇಲೆ ಸರ್ಕಾರದವರಿಗೆ ಕಂದಾಯ ತೆರುತ್ತಾರೆ.

ಖಾಸಗಿ ಜನರ ಸ್ವಾಧೀನದಲ್ಲಿರುವ ಭೂಮಿಗಳಲ್ಲಿ ಎಂದರೆ ಇನಾಮತಿ ಮತ್ತು ಜಾಯಂಗುತ್ತಾ ಹಳ್ಳಿಗಳಲ್ಲಿಯೂ ಸ್ವತಂತ್ರ ರೈತರಿಂದ ಸಾಗುವಳಿಯಾಗುವ ಸರ್ಕಾರಿ ಭೂಮಿಗಳಲ್ಲಿಯೂ ಭೂಮಿಯಲ್ಲಿ ಈ ಕೆಳಗೆ ಸೂಚಿಸಿರುವ ರೀತಿ ಕಂದಾಯ ವಿಭಾಗವಾಗುತ್ತದೆ.

ವಾರ:—ಫಸಲಿನಲ್ಲಿ ಸಮವಾಗಿ ಎರಡು ಭಾಗವಾಗುವುದು ; ಅರ್ಧ ಭಾಗ ಸ್ವತ್ತಿನ ಯಜಮಾನನಿಗೂ ಇನ್ನರ್ಧ ರೈತನಿಗೂ ಹೋಗುತ್ತದೆ. ಯಜಮಾನನೇ ಸರ್ಕಾರಕ್ಕೆ ಕಂದಾಯವನ್ನು ತೆರುತ್ತಾನೆ. ಸಾಧಾರಣವಾಗಿ ಗೊಬ್ಬರ ಗೋಡುಗಳ ಖರ್ಚಿನಲ್ಲಿಯೂ ಅರ್ಧ ಭಾಗವನ್ನು ಯಜಮಾನನು ತೆರುತ್ತಾನೆ.

ಮುಕ್ಕುಪ್ಪೆ :—ಮೂರರಲ್ಲಿ ಎರಡು ಭಾಗ ರೈತನಿಗೂ ಉಳಿದ ಒಂದು ಭಾಗ ಯಜಮಾನನಿಗೂ ಹೋಗುವುದು. ಸರ್ಕಾರದ ಭಾಗವನ್ನು ಯಜ

ವಾನನೇ ತೆರುತ್ತಾನೆ. ಗೊಬ್ಬರ ಮುಂತಾದ ಖರ್ಚು ಸಾಧಾರಣವಾಗಿ ರೈತನದೇ.

ಅರೆಗಂದಾಯ ಅಥವಾ ಚತುರ್ಭಾಗ :—ಯಜಮಾನನಿಗೆ ನಾಲ್ಕರಲ್ಲಿ ಒಂದು ಭಾಗ ಮಾತ್ರ ಬರುವುದು ; ಸರ್ಕಾರಕ್ಕೆ ತೆರಬೇಕಾದ ಹಣದಲ್ಲಿ ಅರ್ಧ ಭಾಗವನ್ನು ಮಾತ್ರ ಈತನು ಕೊಡುವನು.

ಒಳಗಂದಾಯ :—ಯಜಮಾನನಿಗೆ ರೈತನು ಒಂದು ನಿಯುತವಾದ ಮೊತ್ತದಲ್ಲಿ ಹಣವನ್ನು ಕೊಡುವನು.

ಗುತ್ತಿಗೆ :— ರೈತನು ಸರಿಯಾಗಿ ಬೆಳೆಯಲಿ ಬೆಳೆಯದಿರಲಿ ವರ್ಷಕ್ಕೆ ಇಷ್ಟೆಂದು ರೈತನು ದವಸವನ್ನು ಕೊಡಬೇಕೆಂದು ಒಪ್ಪಂದವಾಗಿರುತ್ತದೆ. ಇಲ್ಲಿಯೂ ಕಂದಾಯವನ್ನು ಯಜಮಾನನು ಸರ್ಕಾರಕ್ಕೆ ಕಟ್ಟಬೇಕು.

ಈ ಬಗೆಗಳಲ್ಲದೆ ಅಲ್ಲಲ್ಲಿ ಇನ್ನೂ ಬೇರೆ ಬಗೆಯ ಕಂದಾಯದ ಜಮೀನುಗಳೂ ಫಸಲು ಹಂಚಿಕೆಯ ಪದ್ಧತಿಗಳೂ ಇರುವುವು.

'ಶ್ರಯ' ಭೂಮಿಗಳಲ್ಲಿ, ಬೀಳು ಜಮೀನುಗಳಲ್ಲಿ ಸಾಗುವಳಿ ಮಾಡುವವರು ಮೊದಲು ಭೂಮಿಗಾಗಿ ಏನೂ ತೆರಬೇಕಾಗಿರುವುದಿಲ್ಲ. ಕ್ರಮವಾಗಿ ಭೂಮಿ ಹದಕ್ಕೆ ಬಂದಂತೆಲ್ಲಾ ಅದು ಪೂರ್ತಿ ಕಂದಾಯವನ್ನು ತೆರುವ ಸ್ಥಿತಿಗೆ ಬರುವವರೆಗೂ ಹೆಚ್ಚು ಹೆಚ್ಚಾಗಿ ರಾಜಭಾಗವನ್ನು ತೆರುವ ಅವಕಾಶಗಳಿವೆ.

ಇನಾಮತಿ ಭೂಮಿ

ಸರ್ವಮಾನ್ಯ.— ಭೂಮಿಗಾಗಿ, ಸಾಯರ್, ಮೊಹತರ್ಫಾ ತೆರಿಗೆಗಳನ್ನು ಕೂಡ ಯಜಮಾನರು ತೆರಬೇಕಾಗಿರುವುದಿಲ್ಲ.

ಭಟ್ಟಮಾನ್ಯ.—ಹಿಂದೆ ಸರ್ಕಾರದವರಿಗೂ, ಸಮಾಜಕ್ಕೂ ಮಾಡಿದ ಉಪಕಾರಕ್ಕಾಗಿ ಬ್ರಾಹ್ಮಣರಿಗೆ ಕೊಟ್ಟ ಭೂಮಿಗಳು. *

ಇವಲ್ಲದೆ ಜೋಡಿ ಗ್ರಾಮಗಳೂ, ದೇವಾದಾಯ, ಉಂಬಳಿ, ಉತ್ತರ, ಶಿಸ್ತು ಭೂಮಿಗಳು, ಕೊಡುಗೆ ಇನಾಮತಿಗಳು ಬಾವದಿದಾಸವಂದ ಇನಾಮತಿಗಳು, ಕೆರೆಬಂದಿ, ಕೆರೆಕೆಳಗಿನ ಇನಾಮತಿಗಳು, ಪಟ್ಟು ಗದ್ದೆಗಳೂ, ಇವೆ. ಆಯಾ ಸ್ಥಳಗಳಲ್ಲಿ ಅನೇಕ ವಿಧವಾದ ಸೇವಾ ಕಾರ್ಯಗಳಿಗೂ ಉಪಕಾರಿಗಳಿಗೂ ಕೊಟ್ಟಿರುವ ಇನಾಮತಿಗಳು ಇವು.

ದಣಿ—ರೈತ

ಫಲಪ್ರಮಾಣ—ಹೀಗೆ ವ್ಯವಸಾಯದ ಫಲ ಲಾಭ ದಣಿಗೂ ರೈತನಿಗೂ ಹಂಚಿಕೆಯಾಗುತ್ತಿದೆ. ಹಳ್ಳಿಗಳಲ್ಲಿಯೇ ವಾಸಮಾಡುತ್ತಿರುವವರು ವಾರ ಅರೆಗಂಡಾಯಗಳ ರೂಪದಲ್ಲಿ ಫಸಲಿನ ಭಾಗವನ್ನು ಪಡೆಯುವುದು ರೂಢಿ. ಪಟ್ಟಣಗಳಲ್ಲಿ ಸೇರಿರುವ ದಣಿಗಳು ಭೂಮಿಯನ್ನು ಗುತ್ತಿಗೆಗೆ ಕೊಟ್ಟು ನಿಶ್ಚಿಂತರಾಗಿರುವುದೂ ಹಾಗೆಯೇ. ಒಟ್ಟಿನಲ್ಲಿ ರೈತರ ಕೈಗೆ ಬರುವ ಫಸಲು ಸಾಮಾನ್ಯವಾದುದರಿಂದ ಗುತ್ತಿಗೆ ಕಂದಾಯಗಳ ಪ್ರಮಾಣ ಬಹುಮಟ್ಟಿಗೆ ಕಡಮೆಯಾಗಿಯೇ ಇರುವುವು. ಭೂಮಿಯಿಂದ ಶೇಕಡ ಐದು ರೂಪಾಯಿ ಕೂಡ ಗಿಟ್ಟುವುದಿಲ್ಲವೆಂಬ ಗೋಣಗಾಟ ಕೇಳುತ್ತಲೇ ಇದೆ. ಅನೇಕ ಭೂಮಿಗಳಲ್ಲಿ ಸ್ಥಿತಿಯನ್ನು ನೋಡಿದರೆ ಖರ್ಚುಳಿದು ಸರ್ಕಾರದ ತೆರಿಗೆ ಏಳುವುದೇ ದುಸ್ತರವೆಂಬ ಕೂಗು; ನಾಲೆಯ ಕೆಳಗಿನ ಭೂಮಿಗಳಲ್ಲಿಯೂ ಎಕರೆಗೆ ಐದು ಪಲ್ಲ ಭತ್ತಕ್ಕಿಂತಲೂ ಹೆಚ್ಚಿನ ಗುತ್ತಿಗೆ ಕೊಡುವ ರೈತರು ವಿರಳ; ಕೂಲಿಮಾಡಿಸಿಯೋ, ಸ್ವಂತ ಆರಂಬ ಮಾಡಿಸಿಯೋ ಕಷ್ಟಪಟ್ಟರೆ ವೆಚ್ಚಕ್ಕನುರೂಪವಾದ ಫಲಲಾಭವೂ ಬಾರದೆಂಬ ಮಾತು ಎಲ್ಲೆಲ್ಲಿಯೂ ಕೇಳುವುದು.

ಭೂಮಿಯಲ್ಲಿರುವ ಬೆಳೆಗೆಲ್ಲಾ ಸುಮಾರು ೧೪–೧೫ ಕೋಟಿ ರೂಪಾಯಿ ಬೆಲೆಯೆಂದು ಹೇಳಿರುವುದರಿಂದ ಶೇಕಡ ೫ರಂತೆ ಯಜಮಾನರಿಗೆ ದೊರೆಯುವ ಭಾಗ ೭೫ ಲಕ್ಷ ರೂಪಾಯಿಗಳಾದವು. ಎಂದರೆ ಎಕರೆಗೆ ಒಂದೂ ಕಾಲು–ಒಂದೂವರೆ ರೂಪಾಯಂತೆ ಆಯಿತು. ಎಕರೆಗೆ ವರ್ಷಕ್ಕೆ ೩೦ ಸರಾಸರಿ ರೂಪಾಯಿ ಫಸಲು ದೊರೆತರೆ ವ್ಯವಸಾಯದ ಖರ್ಚು ಹೇಗೆ ಏಳಬೇಕು? ರೈತರ ಜೀವನ ಎಂತಾಗಬೇಕು?

ವಠಾರಗಳು

ಮನೆ ಮಾರುಗಳನ್ನೂ ಅಂಗಡಿಮುಂಗಟ್ಟು ಕಾರ್ಖಾನೆಗಳನ್ನೂ ಕಟ್ಟುವ ಭೂಮಿಯ ಯಾಜಮಾನ್ಯದಿಂದಲೂ ದಣಿಗಳಿಗೆ ಹಣ ಬರುವುದು. ಪಟ್ಟಣಗಳಲ್ಲಿ ಈ ಹಣ ಬಹಳ. ಹಳ್ಳಿಗಳಲ್ಲಿ ವಾಸಮಾಡುವವರಿಗೆ ಮಾತ್ರವೇ ಮನೆಯ ಉಪಯೋಗ. ಬಾಡಿಗೆ ದೊರೆಯದು. ವರ್ಷದ ಮನೆಗಂದಾಯ ಕೂಡ ಬಹುವೇಳೆ 'ಏಳು' ವುದಿಲ್ಲ. ಅಧಿಕಾರಿ

ವರ್ಗಗಳವರೂ, ವಿದೇಶಿ ವ್ಯಾಪಾರದವರೂ, ಕಾರ್ಖಾನೆಗಳವರೂ ಇರುವ ಕಡೆಗಳಲ್ಲಿ ಬಾಡಿಗೆ ಹೆಚ್ಚಾಗಿ ಸಿಕ್ಕುವುದು. ಹಳ್ಳಿಗಳಲ್ಲಿ ದೊಡ್ಡ ಮನೆಗಳ ಬೆಲೆ ಕೂಡ ಸ್ವಲ್ಪ. ವರ್ಷಕ್ಕೆ ೫೦ ರೂಪಾಯಿಗಳ ಬಾಡಿಗೆ ದೊರೆಯುವ ಮನೆಗಳ ಸಂಖ್ಯೆ ಹೆಚ್ಚಾಗಿಲ್ಲ. ಪಟ್ಟಣಗಳಲ್ಲಿ ೪೦ ಅಡಿ ಅಗಲ ೧೦೦ ಅಡಿ ಉದ್ದವಿರುವ ಖಾಲಿ ನಿವೇಶನಗಳಿಗೆ ೧,೦೦೦–೨,೦೦೦ ರೂಪಾಯಿಗಳ ಬೆಲೆಯಾಗುವುದು. ಬೆಂಗಳೂರು, ಮೈಸೂರು, ಕೋಲಾರದ ಗಣಿಗಳು, ಡಿಸ್ಟ್ರಿಕ್ಟ್ ಪಟ್ಟಣಗಳು, ಮಂಡ್ಯ, ದಾವಣಗೆರೆ, ಭದ್ರಾವತಿ ಮುಂತಾದ ಊರುಗಳಲ್ಲಿ ದಣಿಗಳಿಗೆ ಬಾಡಿಗೆಯ ರೂಪದಲ್ಲಿ ಹೆಚ್ಚು ಹಣ ಬರುತ್ತದೆ. ಇಲ್ಲಿಯೂ ನಿವ್ವಳವಾಗಿ ಶೇಕಡ ೫–೬ಕ್ಕೆ ಮೀರಿ ಸಂಪಾದನೆ ಆಗದೆನ್ನುವರು. ದೊಡ್ಡ ಪೇಟೆಯ ಭಾಗಗಳಲ್ಲಿ ಅಂಗಡಿಗಳಿರುವವರಿಗೆ ವಿಶೇಷವಾದ ಬಾಡಿಗೆ ಬರುವುದು. ರೈಲ್ವೆ ರಸ್ತೆಯ ನೆರೆಯಲ್ಲಿರುವ ಜಮೀನುಗಳಿಗೂ, ಕೈಗಾರಿಕೆ ಅಭಿವೃದ್ಧಿಯಾಗುತ್ತಿರುವ ಪ್ರದೇಶಗಳಲ್ಲಿಯೂ ಭೂಮಿಯ ಬೆಲೆ ದಿನೇದಿನೇ ಹೆಚ್ಚುತ್ತಾ ಇದೆ.

ಕೂಲಿ ಸಂಬಳ

ವಸ್ತುಗಳನ್ನು ತಯಾರಿಸುವವರೂ, ಎಲ್ಲ ವಿಧವಾದ ಸೇವಾ ಸೌಕರ್ಯ ಕಾರ್ಯಗಳನ್ನು ಮಾಡುವವರೂ, ಅರ್ಥಶಾಸ್ತ್ರದ ದೃಷ್ಟ್ಯ ಸಿರಿವಂತರೇ ಎಂದು ಹಿಂದೆ ಹೇಳಿದೆ. ಪೊಲೀಸಿನವರು, ವೈದ್ಯರು, ನ್ಯಾಯವಾದಿಗಳು, ಸೇವಕರು, ಅಡಿಗೆಯವರು, ಗಾಡಿ ನಡಸುವವರು, ವರ್ತಕರು, ಎಲ್ಲರೂ ಸಾಮಗ್ರಿಗಳನ್ನು ತಯಾರುಮಾಡುವವರಂತೆಯೇ ಸಮಾಜಕ್ಕೆ ಪ್ರಯೋಜನವನ್ನೊದಗಿಸುವರು. ಆದುದರಿಂದ ಅವರ ಶ್ರಮಕ್ಕೆ ಪ್ರತಿಫಲ ದೊರೆಯುತ್ತದೆ. ಅನ್ನ ವಸ್ತ್ರ ವಾಹನ ಸುಖಸಾಮಗ್ರಿಗಳನ್ನು ಅವರು ಹೇಗೆ ತಯಾರುಮಾಡುವರೋ ಹಾಗೇ ಇವರು ದೇಹದ ಮತ್ತು ಮನಸ್ಸಿನ ಸುಖಗಳನ್ನು ದೊರಕಿಸುವರು. ಅನುಕೂಲಗಳನ್ನು ಒದಗಿಸುವರು. ಅವರಂತೆಯೇ ಇವರಿಗೂ ಕೂಲಿಯೂ ಸಂಬಳವೂ ದೊರೆಯುವುವು. ಸಾಮಾನ್ಯವಾಗಿ ಸಣ್ಣ ಕೆಲಸಕ್ಕೆ ಸಣ್ಣ ಮೊತ್ತದಲ್ಲಿ, ನಿಪುಣತೆಯಿಲ್ಲದ ಅಥವಾ ಕಡಮೆ ನಿಪುಣತೆ ಬೇಕಾಗುವ ಕೈಕೆಲಸವನ್ನು ಮಾಡುವವರಿಗೆ ಕೊಡುವ ಹಣಕ್ಕೆ ಕೂಲಿಯೆನ್ನುವರು. ಇದನ್ನು ದಿನಕ್ಕಿಷ್ಟು ಅಥವಾ ವಾರಕ್ಕಿಷ್ಟು

ಅಥವಾ ಒಟ್ಟು ಕೆಲಸಕ್ಕಿಷ್ಟು ಎಂಬುದಾಗಿ ಕೊಡುತ್ತಾರೆ. ಸಂಬಳವೂ ವೇತನಗಳೂ ಸಾಧಾರಣವಾಗಿ ತಿಂಗಳಿಗೊಂದುಸಲ ತೆರಾಣೆಯಾಗುತ್ತವೆ. ಆ ಕೆಲಸದಲ್ಲಿ ದೇಹದ ಶ್ರಮ ಹೆಚ್ಚು. ಈ ಕೆಲಸಗಳಲ್ಲಿ ವಿದ್ಯೆ, ತಿಳಿವಳಿಕೆ, ಕುಶಲತೆ, ಅನುಭವ, ಅಧಿಕಾರ, ಪದವಿ, ಜವಾಬ್ದಾರಿ, ಮುಂದಾಲೋಚನಾಶಕ್ತಿ ಇವುಗಳಿಗೆ ತಕ್ಕಂತೆ ಬೆಲೆ. ದೇಶದಲ್ಲಿ ಎಲ್ಲ ವಿಧವಾದ ಶ್ರಮಕರರ ಸಂಖ್ಯೆ, ಒಟ್ಟು ಕಾರ್ಖಾನೆ ಕೂಲಿಗಳು, ವ್ಯವಸಾಯದಲ್ಲಿರುವವರು, ಕಟ್ಟಡ ಕಟ್ಟುವ ಉದ್ಯೋಗಿಗಳು ಸುಮಾರು ೧೬ ಲಕ್ಷ ಮಂದಿ. ಈ ಬಗೆಯ ಎಲ್ಲ ಶ್ರಮ ಸೇವೆ ಸಹಾಯಗಳೂ ಈ ಪ್ರಕರಣದಲ್ಲಿ ಎಣಿಕೆಗೆ ಬರುವುದು. ದೊಡ್ಡ ಸಂಬಳದವರು ಕಡಮೆಯೆಂಬುದನ್ನು ಈ ದೇಶದಲ್ಲಿ ವರಮಾನದ ತೆರಿಗೆ ತೆರುವವರ ಸಂಖ್ಯೆ ಕೇವಲ ೫,೦೦೦ ಸುಮಾರು ಎಂಬುದರಿಂದ ತಿಳಿಯಬಹುದು; ಎಂದರೆ ವ್ಯವಸಾಯದ ವರಮಾನಗಳನ್ನು ಬಿಟ್ಟು ತಿಂಗಳಿಗೆ ೨೦೦ ರೂಪಾಯಿಗಳಿಗೆ ಮಿಾರಿದ ವರಮಾನವಿರುವುದು ೫,೦೦೦ ಮಂದಿಗೇ.

ಕಾಮಗಾರ ಸಂಘಗಳು

ಯಂತ್ರ ಕೈಗಾರಿಕೆಯ ಕಾರ್ಖಾನೆ ಪದ್ಧತಿಗಳು ಮುಂದುವರಿದಿರುವ ಪಾಶ್ಚಾತ್ಯ ಜನಾಂಗಗಳಲ್ಲಿ ಸುಮಾರು ಎಲ್ಲ ಬಗೆಯ ಕೆಲಸಗಾರರೂ ಸಂಘಗಳನ್ನು ಮಾಡಿಕೊಂಡಿರುವರು; ಕುಶಲ ಕರ್ಮಿಗಳ ಸಂಘಗಳು ಹೆಚ್ಚು; ಸಂಘಗಳ ಪ್ರಭಾವ ಬಹಳ. ಕೆಲಸಗಾರರು ಒಬ್ಬೊಬ್ಬರು ಹೋಗಿ ಕೂಲಿಯ ಹಣ, ಕೆಲಸದ ಕಾಲ, ಇತರ ಅನುಕೂಲ ಮುಂತಾದವುಗಳ ವಿಚಾರದಲ್ಲಿ ಗಿರಣಿಯ ಯಜಮಾನರೊಡನೆ ಒಪ್ಪಂದಮಾಡಿಕೊಳ್ಳುವುದರಲ್ಲಿ ಕೂಲಿಗಾರರಿಗೆ ಕಷ್ಟ ನಷ್ಟಗಳೆಂದು ತಿಳಿದು ಆಯಾ ಸಂಘಗಳವರ ಪ್ರತಿನಿಧಿಗಳು ತಮ್ಮ ಸಂಘದ ಶ್ರಮಕರರಿಗಾಗಿ ಈ ಸ್ಥಿತಿಗತಿಗಳನ್ನು ವ್ಯವಸ್ಥೆ ಮಾಡಿಸುತ್ತಾರೆ*. ಶ್ರಮಕರರ ಪರವಾಗಿ ಇವರು ಕೆಲಸಗಳನ್ನು ಒದಗಿಸುವ ಮುಂತಾದ ಕಾರ್ಯಗಳಲ್ಲಿ ಗಿರಣಿಗಳ ಯಜಮಾನರೊಡನೆ ಒಪ್ಪಂದ ಕರಾರುಗಳನ್ನು ಮಾಡಿಕೊಂಡು ಜನರನ್ನು ಕೆಲಸಕ್ಕೆ ಕಳುಹಿಸುವರು.

---

* ಕಾಮಗಾರಿಗೆ ಕೆಲಸವಿಲ್ಲದ ಕಾಲದಲ್ಲಿಯೂ ಕಾಯಿಲೆ ಮುಂತಾದ ಕಷ್ಟಗಳಲ್ಲಿಯೂ ಸಂಘ ಹಣ ಸಹಾಯ ಮಾಡುತ್ತದೆ. ಸಂಘದ ಪ್ರತಿನಿಧಿಗಳು ಮೆಂಬರುಗಳಿಂದಲೇ ಆರಿಸಲ್ಪಡುವರು. ಅವರಿಗೆ ಉತ್ತರವಾದಿಗಳಾಗಿರುವರು.

ಇಂಥ ಸಂಘ ಸಂಸ್ಥೆಗಳು ಆ ದೇಶಗಳಲ್ಲಿ ಸರ್ಕಾರದವರ ಆಶ್ರಯ ದಲ್ಲಿ ಬೆಳೆದಿವೆ. ಕೂಲಿಗಾರರ ಪಕ್ಷದವರೇ ಕೆಲವು ರಾಜ್ಯಗಳಲ್ಲಿ ಅಧಿ ಕಾರವನ್ನು ಮಾಡುತ್ತಿದ್ದಾರೆ. ನಿಪುಣರಲ್ಲದ ಸಾಮಾನ್ಯ ಕೂಲಿಗಾರರ ಸಂಘಗಳ ಬಲ ಕಡಮೆ.

ಮೈಸೂರಲ್ಲಿ

ಮೈಸೂರು ದೇಶದಲ್ಲಿ ಇನ್ನೂ ಅಂಥ ಕಾಮಗಾರ ಸಂಘಗಳು ಪ್ರತಿಷ್ಠೆಗೊಂಡಿಲ್ಲ. ಬೆಂಗಳೂರು, ಗಣಿಗಳು ಮುಂತಾದ ಕಡೆ ಕಾಮ ಗಾರ ಸಂಘಗಳಿದ್ದರೂ ಅವುಗಳಿಗೆ ಸರ್ಕಾರದವರಾಗಲಿ, ದಣಿಗಳಾಗಲಿ ಮಾನ್ಯತೆ ಕೊಟ್ಟಿಲ್ಲ; ಅವು ಪ್ರಬಲವಾದರೆ ಕಾಮಗಾರರಿಗೆ ಸೌಕರ್ಯಗಳು ದೊರೆಯುವುವು. ಮಿಾರಿಬಂದರೆ ಸಂಘಗಳವರು ಕೂಲಿಯವರಿಂದ ಮುಷ್ಕರಮಾಡಿಸಿ ಯಜಮಾನರ ಹಟವನ್ನು ಮುರಿಯಲು ಶಕ್ತರಾಗು ತ್ತಾರೆ. ಇಲ್ಲಿ ಈಗಿನ ಸ್ಥಿತಿಯಲ್ಲಿ ಮುಷ್ಕರಗಳಿಂದ ಆಗೊಂದುಸಲ, ಈಗೊಂದುಸಲ, ಅಲ್ಪ ಸ್ವಲ್ಪ ಪ್ರಯೋಜನ ದೊರೆತರೂ ಹೆಚ್ಚಾಗಿ ದೊರೆ ಯುತ್ತಿಲ್ಲ. ಅಲ್ಲದೆ ಮುಷ್ಕರಗಳ ಮೂಲಕ ಪ್ರಯೋಜನ ದೊರಕಿಸಿಕೊ ಳ್ಳುವ ಮಾರ್ಗ ಗಿರಣಿಗಳವರಿಗಾಗಲಿ, ಕಾಮಗಾರರಿಗಾಗಲಿ, ಜನತೆಗಾ ಗಲಿ ಕ್ಷೇಮವಾದುದಲ್ಲ. ಕೆಲಸಗಾರರು ಯಜಮಾನರ ಖುಷಿಗೂ ಅನು ಕೂಲಕ್ಕೂ ಕಟ್ಟುಬಿದ್ದಿರಬೇಕಾಗುತ್ತದೆ. ಈಗಿನ ಸರ್ಕಾರದವರ ಸಹಾ ಯದಿಂದಲೂ ಪರಸ್ಪರ ಒಪ್ಪಂದಗಳಿಂದಲೂ ಭಾನುವಾರ ರಜ, ವಾರಕ್ಕೆ ೬೦ ಘಂಟೆಗಳಿಗೂ ದಿನಕ್ಕೆ ೧೧ ಘಂಟೆಗಳಿಗೂ ಮಿಾರದ ಕೆಲಸ, ಹೆಂಗ ಸರು ಮಕ್ಕಳ ಕೂಲಿಯ ವಿಚಾರ, ಅವರನ್ನು ಇಂಥಿಂಥ ಕೆಲಸಕ್ಕೆ ಈ ಕಾಲ ಗಳಲ್ಲಿ ನಿಯಮಿಸಕೂಡದೆಂಬ ನಿರ್ಬಂಧ, ರಾತ್ರಿ ಕೆಲಸ, ದಿನಗೆಲಸದ ನಡುವೆ ವಿರಾಮ, ಗಿರಣಿಯವರ ಅಜಾಗರೂಕತೆಯಿಂದಾಗಲಿ ಕಠಿಣತೆ ಯಿಂದಾಗಲಿ ಕೂಲಿಯವರಿಗೆ ನಷ್ಟ ಸಂಭವಿಸಿದರೆ ದಂಡ, ಬೋನಸ್, ಪ್ರಾವಿಡೆಂಟ್ ಫಂಡುಗಳ ಏರ್ಪಾಡು ಮುಂತಾದ ಬಾಬುಗಳಲ್ಲಿ ವ್ಯವಸ್ಥೆ ಬಳಕೆಗೆ ಬರುತ್ತಿದೆ.

ಕುಶಲಕಲಾನಿಪುಣರು, ಶಾಸ್ತ್ರವಿದ್ಯೆ ಅಥವಾ ಯಂತ್ರ ಕಾರ್ಯಗ ಳನ್ನು ಬಲ್ಲವರು, ಇಂಥವರಿಗೆ ಹೆಚ್ಚು ವರಮಾನ ದೊರೆಯುವುದು.

ಆದರೂ ಸರ್ಕಾರಿ ಕೆಲಸಗಳಲ್ಲಿ ಬಿಟ್ಟು ಉಳಿದ ಕಾರ್ಖಾನೆಗಳಲ್ಲಿಯೂ ಸಾಹುಕಾರಿ ಯಾಜಮಾನ್ಯದಲ್ಲಿಯೂ ಕೆಲಸ, ಸಂಬಳ ನಿಲ್ಲದೆ ನಡೆಯುವುವೆಂಬ ನಿಶ್ಚಯವಿಲ್ಲ. ಆಗಾಗ ಕೆಲವು ಕಾಲ ಹೆಚ್ಚು ಕೂಲಿ, ಸಂಬಳ ದೊರೆತವರು ಅದೇ ಕೆಲಸದಲ್ಲಿ ಮುಪ್ಪು ಬರುವವರೆಗೂ ಇರುವ ನಂಬಿಕೆಯಿಲ್ಲ; ನಾಳೆಗೆ ಹೇಗೆ ಎಂಬ ಭಯವಿದ್ದೇ ಇರುತ್ತದೆ.

ಖಾಸಗಿ ವೃತ್ತಿಗಳು

ಸರ್ಕಾರಿ ಉದ್ಯೋಗಸ್ಥರನ್ನು, ವ್ಯವಸಾಯ ಕೈಗಾರಿಕೆಗಳಲ್ಲಿ ತೊಡಗಿರುವವರನ್ನೂ ಬಿಟ್ಟರೆ ಸಾಧಾರಣವಾಗಿ ಪುಷ್ಟರಾಗಿರುವ ಕಸುಬುಗಳವರು ವರ್ತಕರು–ವೈದ್ಯರು_ಲಾಯರುಗಳು_ಕಂಟ್ರಾಕ್ಟರುಗಳು. ದೊಡ್ಡ ವರ್ತಕತನದ ವಿಚಾರವಾಗಿ ಹಿಂದೆಯೇ ತಿಳಿಸಿದೆವು. ಪಾಶ್ಚಾತ್ಯರೀತಿಯ ಶಿಕ್ಷಣ ಪಡೆದು ಸ್ವತಂತ್ರವಾಗಿ ವೈದ್ಯಶಾಲೆಗಳನ್ನಿಟ್ಟಿರುವ ದೇಶಿಯರು ತಿಂಗಳಿಗೆ ೫೦೦ ರೂಪಾಯಿಗಳಿಗೆ ಮೇಲ್ಪಟ್ಟು ಸಂಪಾದಿಸುವವರು ಅಪರೂಪ. ಆದರೆ ಸ್ವತಂತ್ರ ವೃತ್ತಿಯಾದುದರಿಂದ ಅನೇಕ ಜನರಿಗೆ ಈ ವೃತ್ತಿಯಲ್ಲಿ ಆಸೆ. ಲಾಯರುಗಳಲ್ಲಿಯೂ ತಿಂಗಳ ಖರ್ಚು ಕಳೆವಷ್ಟು ಕೂಡ ದೊರಕದಿರುವ ಜನರಿಂದ ಹಿಡಿದು ೧,೦೦೦ ರೂಪಾಯಿಗಳವರೆಗೂ, ಮೇಲೂ ಸಂಪಾದಿಸುವವರಿರುವರು. ಮೇಲ್ಪಟ್ಟ ಸರಾಸರಿ ವರಮಾನವುಳ್ಳವರು ವಿರಳ. ದೊಡ್ಡ ವರಮಾನಗಳ ಆಸೆಯೂ ಸ್ವತಂತ್ರ ವೃತ್ತಿಯೆಂಬ ಮೋಹವೂ ಈ ವೃತ್ತಿಗೂ ಇದೆ. ಆದರೆ ದೇಶದಲ್ಲಿ ಇರುವ ಒಟ್ಟು ಕೆಲಸ ಕಡಮೆ. ವೃತ್ತಿಗೆ ಬರುವವರ ಸಂಖ್ಯೆ ಹೆಚ್ಚುತ್ತಾ ಸರಾಸರಿ ವರಮಾನ ಕಡಮೆಯಾಗುತ್ತಿದೆ ಎನ್ನಬಹುದು. ಲಾಯರುಗಳಿಗೂ ವೈದ್ಯರಿಗೂ ಕೆಲಸದ ಖರ್ಚು ಬಹಳ. ಬರುವ ವರಮಾನದಲ್ಲಿ ಅವುಗಳನ್ನು ಕಳೆದು ಸರಾಸರಿ ನಿವ್ವಳ ವರಮಾನವನ್ನು ನಿರ್ಧರಿಸಬೇಕು. ಅದೂ ಅಲ್ಲದೆ ತಿಂಗಳಿಗೆ ಇಷ್ಟೆಂಬ ನಿಗದಿಯಾದ ವರಮಾನವೂ ಇಲ್ಲ. ಸರಾಸರಿಯಾಗಿ ಮಾತ್ರ ಲೆಕ್ಕ ಮಾಡಬೇಕು. ಕೆಲವು ಪ್ರಾಂತಪಟ್ಟಣಗಳಲ್ಲಿಯೂ ವಿದೇಶಗಳಲ್ಲಿಯೂ, ಇರುವಂತೆ ಹತ್ತಾರು ಸಾವಿರಗಳ ವರಮಾನಗಳು ಇಲ್ಲ. ಬಹು ದೊಡ್ಡ ವಿವಾದಗಳೂ, ನ್ಯಾಯಶಾಲೆಗಳಿಗೆ ಬರುವುದಿಲ್ಲವೆನ್ನಬಹುದು.

ಕಂಟ್ರಾಕ್ಟುಗಳಲ್ಲಿಯೂ ತಿಂಗಳಿಗೆ ಸರಾಸರಿ ೧,೦೦೦ ರೂಪಾಯಿಗಳ ವರಮಾನಕ್ಕೆ ಮೇಲ್ಪಟ್ಟವರು ಕಡಮೆ. ಅವರೂ ಸರ್ಕಾರದವರೂ ಸಂಸ್ಥೆಗಳವರೂ ಕೊಡುವ ಕೆಲಸಗಳಿಂದಲೇ ಸಾಧಾರಣವಾಗಿ ಬದುಕಿರುವುದು.

ಪೈಪೋಟಿ

ಈ ವೃತ್ತಿಗಳಲ್ಲಿಯೂ ಸಂಬಳಗಳಲ್ಲಿಯೂ, ಇನ್ನೊಂದು ವಿಶೇಷಾಂಶವೇನೆಂದರೆ: ಯಾವುದಾದರೊಂದು ಕೆಲಸಕ್ಕೆ ಒಂದೇ ಬಗೆಯ ಜನ ಉಮೇದುವಾರರು. ಒಂದು ಪ್ರಕಟನೆಗೆ ಉತ್ತರವಾಗಿ ಸುಮಾರು ಒಂದೇ ಯೋಗ್ಯತೆಯ ಜನ ಹೋಗುತ್ತಾರೆ. ಸಂಬಳಗಳ ಅಳತೆಗಳಲ್ಲಿಯೂ ಹಾಗೆಯೇ; ಸಣ್ಣ ಸಂಬಳಗಳಿಗೆ ಅರ್ಜಿಹಾಕಿಕೊಳ್ಳುವವರ ಸಂಖ್ಯೆ ಹೆಚ್ಚು. ದೊಡ್ಡ ಸಂಬಳದ ಕೆಲಸಗಳು ಕಡಮೆ; ಅವಕ್ಕೆ ಉಮೇದುವಾರರಾಗುವವರೂ ಮಿತ. ಇತರರ ಪೈಪೋಟಿ ಹೆಚ್ಚಿಲ್ಲ. ಕೊನೆಗೆ ಲಾಯರು ವೈದ್ಯರುಗಳಲ್ಲಿಯೂ ದೊಡ್ಡ 'ಕೇಸು' ಗಳು ಹೋಗುವುದು ಯಾರೋ ಕೆಲವು ಜನಕ್ಕೆ ಮಾತ್ರವೇ. ಅಲ್ಲಿಯೂ ತೀವ್ರವಾದ ಪೈಪೋಟಿಯಿರುವುದಿಲ್ಲ.

ಸಾಧಾರಣವಾಗಿ ನಿಪುಣತೆಯಿಲ್ಲದ ಕೂಲಿಯವರಿಗೆ ಗಂಡಸಿಗೆ ದಿನಕ್ಕೆ ಎಂಟಾಣೆಯಂತೆಯೂ, ಹೆಣ್ಣಾಳಿಗೆ ಆರಾಣೆಯಂತೆಯೂ, ಹುಡುಗನಿಗೆ ನಾಲ್ಕಾಣೆಯಂತೆಯೂ ಕೂಲಿ ದೊರಕುವುದು. ಇಂಥ ಕೆಲವು ಕುಟುಂಬಗಳ ಆದಾಯವನ್ನು ಲೆಕ್ಕಮಾಡಿದಾಗ ಕೆಲವು ವಿಶೇಷ ಸಂಗತಿಗಳು ಹೊರಬಿದ್ದುವು. ಕುಟುಂಬಗಳಲ್ಲಿರುವವರು ಇತರ ವಿಧಗಳಲ್ಲಿಯೂ ಅಲ್ಪಸ್ವಲ್ಪ ಪ್ರಯೋಜನವನ್ನು ಬೇರೆ ಕೆಲಸಗಳಿಂದ ಸಂಪಾದಿಸಿಕೊಳ್ಳುವರು; ಅಂತು ಕೆಲಸದ ಕಾಲ ಅನಿಶ್ಚಿತ. ಇಂಥ ಕಡೆ ಕೆಲಸ ಇರುವ ದಿನಕ್ಕೂ ಇಲ್ಲದ ದಿನಕ್ಕೂ ಸರಾಸರಿ ಲೆಕ್ಕ ಮಾಡಬೇಕಾಗುವುದು.

ಕುಶಲರಾದ ಕೆಲಸಗಾರರಿಗೆ ದಿನಕ್ಕೆ ಒಂದು ರೂಪಾಯಿಂದ ಹಿಡಿದು ನಾಲ್ಕು ರೂಪಾಯಿಗಳವರೆಗೂ ಕೂಲಿ ದೊರೆಯುವುದುಂಟು. ಬಡಗಿಗಳು, ಗಾರೆಯವರು, ಮೇಸ್ತ್ರಿಗಳು, ಚರ್ಮ ಹದಮಾಡುವವರು, ಅಚ್ಚುಹಾಕುವವರು, ಚಿನ್ನ ಬೆಳ್ಳಿ ಕೆಲಸಮಾಡುವವರು ಮೊದಲಾದವರು ಉದಾಹರಣೆ. ನಾಗರಿಕ ಜೀವನವೂ ಕಾರ್ಯರೀತಿಗಳೂ ಹೆಚ್ಚಿದಂತೆಲ್ಲಾ ಹೊಸ ಕಾರ್ಯಗಳೂ ಉದ್ಯೋಗಗಳೂ ಏರ್ಪಟ್ಟು ಹೆಚ್ಚು ಸಂಪಾದನೆಗೆ

ಜಾರಿಯಾಗುತ್ತಿದೆ. ರೈಲ್ವೆ, ಮೋಟರು, ಸಿನೆಮಾ, ಹೊಟೇಲು, ಯಂತ್ರ ಕಾರ್ಯ ಮುಂತಾದ ಕೆಲಸಗಳು ಹೆಚ್ಚಿದಂತೆಲ್ಲ ಅವಕ್ಕೆ ಸಂಬಂಧಪಟ್ಟ ಉಪಕರಣಗಳನ್ನು ಒದಗಿಸುವ ಕೆಲಸವೂ ಕೂಲಿ ಸಂಬಳಗಳೂ ಹೆಚ್ಚಾಗುತ್ತವೆಯೆನ್ನಬಹುದು. ಅವುಗಳ ಜೊತೆಗೆ ಜನರ ಖರ್ಚೂ ಜೀವನಕ್ಕೆ ಬೇಕಾದ ಸಾಮಾನುಗಳ ಧಾರಣೆವಾಸಿಗಳೂ ಹೆಚ್ಚುತ್ತವೆ.

ಜೀವನ ರೀತಿ— ಕೂಲಿ ಸಂಬಳ.

ಜೀವನ ರೀತಿಗೂ ಕೂಲಿಸಂಬಳಗಳಿಗೂ ಹತ್ತಿರದ ಸಂಬಂಧವಿದೆ. ಅಲ್ಪ ತೃಪ್ತಿಯಿರುವವರು ಹೆಚ್ಚು ಕೆಲಸಮಾಡರು. ನಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಬೇಕೆನ್ನುವರು ಮುಂದಕ್ಕೆ ಬರುತ್ತಾರೆ. ಜೀವನವನ್ನು ಹೆಚ್ಚು ವಿತರಣೆಯಿಂದ ನಡೆಸಬೇಕೆಂಬ ಆಸೆಯಿಂದ ಹೆಚ್ಚು ಹಣವನ್ನು ಸಂಪಾದಿಸಲು ಪ್ರಯತ್ನಿಸುವರು. ಮನೆಯ ಮರ್ಯಾದೆ, ತಮ್ಮ ಯೋಗ್ಯತೆ, ತಮ್ಮ ಜೀವನದ ವೆಚ್ಚ ಇವಕ್ಕೆ ಸಾಕಾಗದ ಸಂಬಳಕ್ಕೆ ಹೋಗಲು ಇಷ್ಟಪಡರು. ಕೆಲವು ದಿನ ಕೆಲಸವಿಲ್ಲದಿದ್ದರೂ ಚಿಂತೆಯಿಲ್ಲ ; ಕಡಮೆ ಸಂಬಳವನ್ನೊಪ್ಪಿಕೊಳ್ಳರು. ಮೈಸೂರಿನ ಸ್ಥಿತಿ ಕಷ್ಟ ಸ್ಥಿತಿ. ಸುತ್ತಮುತ್ತಲ ಸನ್ನಿವೇಶದಿಂದ ದೊಡ್ಡ ಕೂಲಿ ಸಂಬಳ ದೊರೆಯುವುದು ಕಷ್ಟವಾಗುತ್ತದೆ. ವ್ಯಾಪಾರ ಕೈಗಾರಿಕೆಗಳಲ್ಲಿ ಲಾಭ ಪಡೆಯುತ್ತಿರುವವರೂ, ದೊಡ್ಡ ಅಧಿಕಾರಿಗಳೂ ಮಿತಿಮೀರಿದ ಸುಖಜೀವನವನ್ನೂ ಭೋಗವನ್ನೂ ನಡಸುತ್ತಿರುವ ಚಿಹ್ನೆಗಳು ಬೇಕಾದಷ್ಟು ಕಾಣುತ್ತಿವೆ. ಸಂಪಾದನೆ ಹೆಚ್ಚುವುದಕ್ಕಿಂತ ಖರ್ಚಿನ ಪ್ರಮಾಣ ಹೆಚ್ಚುವುದು ಬಹು ವೇಳೆ ಕಾಣುತ್ತದೆ.

ಸಂಬಳ—ಶಿಕ್ಷಣ ಪದ್ಧತಿ

ಜನಜೀವನಕ್ಕೂ ಸಂಪಾದನೆಗೂ ದೇಶದಲ್ಲಿ ದೊರೆಯುವ ವಿದ್ಯಾಶಿಕ್ಷಣಗಳಿಗೂ ಸಂಬಂಧ ಉಂಟು. ಬಾಲ್ಯದಲ್ಲಿ ಯಾವ ವಿಧವಾದ ವಿದ್ಯಾಶಿಕ್ಷಣ ದೊರೆತರೆ ಅದಕ್ಕೆ ತಕ್ಕಂತೆ ಕೆಲಸಮಾಡಲು ಸಾಧ್ಯವಾದೀತೇ ಹೊರತು ಬೇರೆ ಕೆಲಸಗಳನ್ನು ಮಾಡಲು ಶಕ್ತಿಬಾರದು. ಈಗ ಸ್ಕೂಲುಗಳಲ್ಲಿ ಬಾಲಕರಿಗೆ ದೊರೆಯುತ್ತಿರುವ ವಿದ್ಯೆಯಿಂದ ಜೀವನಕ್ಕೂ ಪ್ರಪಂಚ ಜ್ಞಾನಕ್ಕೂ ಹೆಚ್ಚು ನೆರವು ಸಿಕ್ಕುತ್ತಿಲ್ಲ. ಅಲ್ಲಲ್ಲಿ ಕಸುಬು ಮತ್ತು ವ್ಯಾಪಾರ ವಿದ್ಯೆಗಳಲ್ಲಿ ಶಿಕ್ಷಣ ಸಿಕ್ಕುವುದಾದರೂ ಅದನ್ನು ಪಡೆವವರು ಕಡಮೆ.

ಪುಸ್ತಕದ ಓದೂ ಸೂತ್ರಭಾಗದ ಪರಿಚಯವೂ ಹೆಚ್ಚು. ಕೆಲಸದ ತಿಳಿವಳಿಕೆ ಕಡಮೆ. ಅವರು ಸ್ವಂತವಾಗಿ ಕೆಲಸದಲ್ಲಿ ಹೂಡುವುದು ಅಪರೂಪ. ಸಾಹಿತ್ಯ, ಮತ್ತು ಶಾಸ್ತ್ರಗಳಲ್ಲಿ ಪ್ರೌಢವ್ಯಾಸಂಗ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಎಲ್ಲರೂ ಸರ್ಕಾರಿ ನೌಕರಿಗೇ ಹಾತೊರೆಯುವರು ; ಅವರಿಗೆ ಕಾರ್ಯಶಕ್ತಿ ಹೆಚ್ಚುವುದು ಹಾಗಿರಲಿ—ಇದ್ದುದು ನಷ್ಟವಾಗುವ ಸಂಭವ ಹೆಚ್ಚು. ಸರ್ಕಾರಿ ಕೆಲಸ ಕಡಮೆಯಾಗಿರುವುದರಿಂದಲೂ ಈ ಜನದ ಸಂಖ್ಯೆ ಹೆಚ್ಚುತ್ತಿರುವುದರಿಂದಲೂ ಇರುವ ಕೆಲಸಗಳಿಗೆ ವೇತನ ಕಡಮೆಯಾಗುವುದು ; ಅಲ್ಲದೆ ಅನೇಕ ಜನರ ನಿರುದ್ಯೋಗಕ್ಕೆ ಕಾರಣವಾಗಿರುವುದು. ಎಂದರೆ ಇರುವವರಿಗೆ ಮಾಡುವುದಕ್ಕೆ ಕೆಲಸ ಸಿಕ್ಕದೆಂದಲ್ಲ ; ಸಿಕ್ಕುವ ಕೆಲಸಗಳನ್ನು ಇವರು ಮಾಡರು. ಇವರು ಮಾಡಬೇಕೆನ್ನುವ ಕೆಲಸ ಸಿಕ್ಕದು. ಹೀಗೆ ವಿದ್ಯಾಶಿಕ್ಷಣಕ್ಕೂ ಅರ್ಥಸಾಧನೋದ್ಯಮಗಳಿಗೂ ಹೊಂದಿಕೆಯಿಲ್ಲ. ನಡು ತರಗತಿಯ ಜನರಲ್ಲಿ ಈ ಸಂಕಷ್ಟ ಹೇಳಲಾರದಷ್ಟಿದೆ. ಬಹುತರ ೧೮ ವಯಸ್ಸಿನಿಂದ ಹಿಡಿದು ೨೫ ವಯಸ್ಸಿನ ಒಳಗೆ ಇರುವ ಯುವಕರು ನಿರುದ್ಯೋಗದಿಂದ ಬೆಂದು ಗಾರಾಗುತ್ತಿದ್ದಾರೆ. ದೇಶದ ವಿದ್ಯಾಭ್ಯಾಸ ಪದ್ಧತಿ, ಜನರ ಧ್ಯೇಯಗಳು, ಜೀವನ ರೀತಿ, ದೇಶದ ಕಸುಬು ವೃತ್ತಿ ವ್ಯಾಪಾರ ಎಲ್ಲವೂ ಹೊಂದಿಕೊಂಡು ನಡೆಯುವಂತೆ ದೇಶದ ಜೀವನವೂ ಕಾರ್ಯಕಲಾಪಗಳೂ ರೂಪಗೊಳ್ಳಬೇಕು. ಹುಡುಗರು ಕಲಿಯುವ ವಿದ್ಯೆಗಳಿಗೂ ಅವರ ಮುಂದೆ ಕೈಕೊಳ್ಳುವ ಉದ್ಯೋಗಗಳಿಗೂ ಎಷ್ಟು ಸಾಮರಸ್ಯವಿದ್ದರೆ ಅಷ್ಟು ದಕ್ಷವಾಗಿ ಕೆಲಸ ನಡೆಯಬಲ್ಲದು ; ಕೆಲಸ ಫಲಿಸಬಲ್ಲದು.*

ದೇಶದ ಕಸುಬು ವೃತ್ತಿಗಳನ್ನು ಲೆಕ್ಕಮಾಡಿ, ಆಮದು ರಫ್ತು ವ್ಯಾಪಾರಗಳ ಲಕ್ಷಣಗಳನ್ನು ಪರಿಶೀಲಿಸಿ, ಇರುವ ಯಾವ ವೃತ್ತಿಗಳಿಗೆ ಸುಮಾರು ಎಷ್ಟು ಜನ ನಿಪುಣ ಕಾಮಗಾರರು ಬೇಕಾಗಬಹುದು ; ಅವರಿಗೆ ಕೆಲಸದ ಅನುಭವ, ಬಂಡವಾಳದ ಸಹಾಯಗಳನ್ನು ಹೇಗೆ ಒದಗಿಸತಕ್ಕದ್ದು ; ಒಳಗೇ ಯಾವ ಹೊಸ ವೃತ್ತಿಗಳನ್ನು ಸ್ಥಾಪಿಸಿ ಬೆಳಸಬಹುದು ; ಮೇಲ್ತರದ ಕೈಗಾರಿಕೆಯ ಕುಶಲರನ್ನು ವಿಶ್ವವಿದ್ಯಾನಿಲಯಗಳಲ್ಲಿ ತೇರ್ಗಡೆ ಹೊಂದುವವರಿಂದಲೂ, ಕರ್ಮಿಗಳನ್ನು ಇತರ ಕೈಗಾರಿಕೆ ಶಾಲೆಗಳಲ್ಲಿ ಉತ್ತೀರ್ಣರಾದವರಿಂದಲೂ ಕೂಡಿಸಿ, ಕಸುಬುಗಳಲ್ಲಿಯೇ ಹುಟ್ಟಿರುವವರಿಗೆ ಇವರಿಂದ ಕೇಡುಬಾರದಂತೆ, ಸ್ವಂತ ಉತ್ಪತ್ತಿಯೂ ದೇಶದ ಸಂಪತ್ತೂ ಹೆಚ್ಚಾಗುವಂತೆ, ವ್ಯವಸ್ಥೆಮಾಡುವ ಧಾರ್ಮಿಕ ಜವಾಬ್ದಾರಿ ಒಂದು ಕಡೆ ಪ್ರಭುತ್ವದವರಿಗೂ ಇನ್ನೊಂದು ಕಡೆ ಜನರ ಮುಖಂಡರಿಗೂ ಸೇರಿದುದಾಗಿದೆ. ನಮ್ಮ ವಸ್ತುಗಳಿಗೆ ಎಲ್ಲಿ ಪೇಟೆ ಇದೆಯೆಂಬ ಸಂಗತಿಯನ್ನು ವೃತ್ತಪತ್ರಿಕೆಗಳೂ ಸರ್ಕಾರದ ಇಲಾಖೆಗಳೂ ಜನರ ತಿಳಿವಳಿಕೆಗೆ ತಂದು, ಇರುವ ಪದಾರ್ಥಗಳನ್ನು ಗುಣಕ್ಕೆ ತಕ್ಕಂತೆ ವಿಂಗಡಿಸಿ, ದೊಡ್ಡ ಮೊತ್ತಗಳಲ್ಲಿ ಅವನ್ನು ಪೇಟೆಗಳಿಗೆ ಒದಗಿಸುವ ಏರ್ಪಾಡು ಮಾಡುವುದೂ ಈ ಕಾರ್ಯದಲ್ಲಿ ಒಂದು ದೊಡ್ಡ ಭಾಗವಾಗುತ್ತದೆ.

ಉದ್ಯೋಗ ಸಮಾಚಾರ

ಇತರ ದೇಶಗಳಲ್ಲಿ ಬಗೆಬಗೆಯ ನಿಪುಣತೆಯ ಮತ್ತು ಯೋಗ್ಯತೆಯ ಶ್ರಮಕರರು ಇಷ್ಟು ಜನರಿದ್ದಾರೆ; ಇಷ್ಟು ಜನರಿಗೆ ಕೆಲಸವಿಲ್ಲ ಎಂಬ ಲೆಕ್ಕಗಳನ್ನಿಟ್ಟುಕೊಂಡು ಅವರಿಗೆ ಕೆಲಸ ಸಿಕ್ಕುವಂತೆ ಏರ್ಪಾಡುಗಳು ನಡೆಯುವುವು. ಯಾವ ಕೈಗಾರಿಕೆಗಳಿಗೂ ಕಾರ್ಯಾಲಯಗಳಿಗೂ ಜನರು ಬೇಕೆಂಬುದನ್ನು ತಿಳಿದು ಆಯಾ ಸ್ಥಳಗಳಿಗೆ ಈ ಜನರನ್ನು ಕಳುಹಿಸುವ ಏರ್ಪಾಡು ಮಾಡುವರು. ನಮ್ಮ ದೇಶದಲ್ಲಿ ಅಂಥಾ ಸಂಸ್ಥೆಗಳೂ ವಿಧಾನಗಳೂ ಏರ್ಪಟ್ಟಿಲ್ಲ.

ಸರಾಸರಿ ವರಮಾನ

ಅತಿ ಹೆಚ್ಚು ಸಂಬಳ ತೆಗೆಯುವವರಿಗೂ ಅತಿ ಕಡಮೆ ಸಂಬಳ ತೆಗೆಯುವವರಿಗೂ ಸರ್ಕಾರದಲ್ಲಿ ಕೂಡ ಅಂತರ ಬಹಳ ಹೆಚ್ಚು. ಸರ್ಕಾರದ ನೌಕರರಲ್ಲಿ ಸರಾಸರಿ ತಿಂಗಳ ಸಂಬಳ ೩೦–೩೫ ರೂಪಾಯಿಗಳು ಮಾತ್ರ. ಮೇಲ್ಪಟ್ಟ ಅಧಿಕಾರಿವರ್ಗಗಳಿಗೆ ೧,೦೦೦ ದಿಂದ ೫,೦೦೦ ರೂಪಾಯಿಗಳವರೆಗೂ ಇರುತ್ತದೆ; ಅತಿ ಕಡಮೆ ಕೂಲಿ ತೆಗೆಯುವ ಜನರ ತಿಂಗಳ ವರಮಾನ ಪಟ್ಟಣಗಳಲ್ಲಿ ೩–೪ ರೂಪಾಯಿಗಳು ಮಾತ್ರ. ಕೆಲವು ಜನರಿಗೆ ಸಮಗ್ರ ಪ್ರಪಂಚದಿಂದ ದೊರೆಯಬಲ್ಲ ಎಲ್ಲ ಭೋಗಸಾಮಗ್ರಿಗಳೂ ದೊರೆಯುವುವು. ದೇಶದಲ್ಲಿ ಬಹು ಜನರಿಗೆ ಒಂದು ಹೊತ್ತಿನ ಪುಷ್ಟಿಕರವಾದ ಆಹಾರವಿಲ್ಲ. ಇಂತಹ ವಿಲಕ್ಷಣ ತಾರತಮ್ಯ ಭರತಖಂಡವೊಂದರಲ್ಲಿ ಮಾತ್ರ ಕಾಣ ಬರುವ ಸಂಗತಿ.

ಕೂಲಿಯವರ ಕುಟುಂಬಗಳ ವರಮಾನ, ಖರ್ಚು ವೆಚ್ಚ

ಸರ್ಕಾರದ ಕೈಗಾರಿಕೆಯ ಇಲಾಖೆಯವರು ಈಗ ಕೆಲವು ವರ್ಷಗಳ ಹಿಂದೆ ನಿಪುಣರಲ್ಲದ ಕೆಲವು ಕೂಲಿ ಕುಟುಂಬದವರ ವರಮಾನ ವೆಚ್ಚಗಳನ್ನು ಲೆಕ್ಕಮಾಡಿದರು. ಬೆಂಗಳೂರ ಸುತ್ತಮುತ್ತು ಇರುವ ನಾನಾ ಬಗೆಯ ಕೂಲಿಗಳ ೧೪೪ ಕುಟುಂಬಗಳ ಲೆಕ್ಕವನ್ನು ಮಾಡುವುದರಲ್ಲಿ ಕುಟುಂಬವೊಂದಕ್ಕೆ ಜನ ಸಂಖ್ಯೆ ಸರಾಸರಿ ೪.೪ ಎಂದೂ, ಮನೆಯ ಯಜಮಾನರ ವರಮಾನ ತಿಂಗಳಿಗೆ ರೂ. ೧೩–೭–೫ ಎಂದೂ, ಮನೆಯ

ಇತರರು ಹಲವು ಬಗೆಯಲ್ಲಿ ಕೂಡಿಸಿದ ಹಣ ರೂ. ೬_೦_೦ ಎಂದೂ ಒಟ್ಟಿಗೆ ತಿಂಗಳಿಗೆ ರೂ. ೧೯_೬_೧೧ ಕಾಸುಗಳೆಂದೂ ಅವರ ವೆಚ್ಚ ತಿಂಗಳಿಗೆ ಕಡಮೆಯೆಂದರೆ ರೂ. ೧೯_೪_೨ ಎಂದೂ ಲೆಕ್ಕಮಾಡಿದ್ದಾರೆ. ತಲೆಯೊಂದಕ್ಕೆ ತಿಂಗಳಿಗೆ ೪೧/೪_೫ ರೂಪಾಯಿಗಳಾಯಿತು : ಅದು ಹೆಚ್ಚೆಂದೂ ದೇಶದ ಎಲ್ಲ ಶ್ರಮಕರ ಸಂಪಾದನೆಯನ್ನೂ ತೆಗೆದುಕೊಂಡರೆ ಸರಾಸರಿ ೩ ರೂಪಾಯಿಗೆ ಕಮ್ಮಿಯೆಂದೂ ಹೇಳಬಹುದು. ಅಲ್ಲದೆ ಇವರೆಲ್ಲ ಯಂತ್ರಶಾಲೆ ಮತ್ತು ಗಿರಣಿಗಳಲ್ಲಿ ಕೆಲಸಮಾಡುವವರು. ಈ ನಾಲ್ಕು ರೂಪಾಯಿಗಳಲ್ಲಿ ಇವರಿಗೆ ಗೊತ್ತಾದ ಸಂಬಳ ದೊರಕುವುದು. ಭೂಮಿಯಮೇಲೆ ದುಡಿಯುವವರಿಗೂ, ಹಳ್ಳಿಗಾಡಿನವರಿಗೂ ಈ ಬಗೆಯ ಯಾವ ಅನುಕೂಲವೂ ಇಲ್ಲ. ಮೂರರಲ್ಲೆರಡು ಭಾಗಕ್ಕೆ ಮೇಲ್ಪಟ್ಟ ಹಣ ಆಹಾರ ಸಾಮಗ್ರಿಗಳಿಗಾಗಿ ಉಪಯುಕ್ತವಾಗುವುದು. ಬಾಕಿ ಹಣದಲ್ಲಿ ಬಟ್ಟೆ, ಬೆಳಕು, ಮನೆಯ ಬಾಡಿಗೆ, ಸೌದೆ, ರೋಗದ ಚಿಕಿತ್ಸೆ ಮುಂತಾದವುಗಳಿಗೆ ಹಣ ಒದಗಬೇಕು ! ಸರ್ಕಾರದ ಸೆರೆಮನೆಗಳಲ್ಲಿ ಇರುವ ಬಂದಿಗಳಿಗಾಗುವ ಖರ್ಚು ಎಷ್ಟೆಂಬುದನ್ನೂ ಈ ಸಂಬಂಧದಲ್ಲಿ ತಿಳಿಯಬಹುದು : ಬೆಂಗಳೂರು ಮೈಸೂರು ಸೆರೆಮನೆಗಳಲ್ಲಿ ೧೯೨೭ರಲ್ಲಿ ಆಹಾರಕ್ಕಾಗಿ ತಲೆಯೊಂದಕೆ. ವರ್ಷಕ್ಕೆ ರೂ. ೬೩_೩_೦ ಬಟ್ಟೆ ಹಾಸಿಗೆಗಳಿಗೆ ರೂ. ೫_೧೪_೮ ಯಂತೆ ಖರ್ಚು ಮಾಡಿದ್ದಾರೆ. ಸಂಸ್ಥಾನಾಮಳೆ ಸೆರೆಗಳಲ್ಲಿ ಈ ಅಂಕಿಗಳು, ಆಹಾರಕ್ಕೆ ರೂ. ೬೭_೦_೫ ಬಟ್ಟೆ ಬರೆ. ರೂ. ೫_೪_೧೧ ಆಗುವುದು, ಒಟ್ಟು ಒಬ್ಬ ಬಂದಿಯನ್ನು ನೋಡಿಕೊಳ್ಳಲು ಸರ್ಕಾರದವರು ರೂ. ೧೬೭_೧೪_೮ ಖರ್ಚು ಮಾಡುವರು. ಎಂದರೆ ಬಂದಿಗಳ ಪೋಷಣೆಯಾದರೂ ಪ್ರಾಮಾಣಿಕನಾದ ಕಾಮುಗಾರರ ಪೋಷಣೆಗಿಂತ ಮೇಲಾಗಿದೆಯೆಂದು ಹೇಳಿದ ಹಾಗಾಯಿತು. ತಿಂಗಳಿಗೆ ತಲೆಯೊಂದಕ್ಕೆ ೧೦ ರೂಪಾಯಿಗೆ ಕಡಮೆ ವರಮಾನವಿದ್ದರೆ ಜೀವನದ ಸಾಮಾನ್ಯ ವೆಚ್ಚಗಳು ನಡೆಯಲಾರವೆಂದು ಖಂಡಿತವಾಗಿ ಹೇಳಬಹುದು.

ದೇಶದಲ್ಲಿ ಕೆಲಸಗಳೂ ಕೂಲಿ ಸಂಬಳಗಳೂ ಹೆಚ್ಚಾದ ಹೊರತು ಬಡತನವೂ ಅದಕ್ಕೆ ಸಂಬಂಧಪಡುವ ಹಾಳುಗಳೂ ನಷ್ಟಗಳೂ ಕಡಮೆಯಾಗುವುದಿಲ್ಲವೆಂದು ಮೊದಲೇ ತಿಳಿಸಿದೆ.

ಜೀವನರೀತಿ, ಮಟ್ಟ

ಕೊರತೆಗಳು—ಧಾರಣೆವಾಸಿ

ಸಾಮಾನ್ಯ ವರ್ಗಗಳ ಜೀವನ ಸ್ಥಿತಿಯನ್ನು ನೋಡಿದರೆ ಅದರ ಮಟ್ಟ ಬಹು ಕೀಳೆನ್ನಬೇಕು. ಹಳ್ಳಿ ಪಟ್ಟಣಗಳಲ್ಲಿ ಕೂಡ ಉಪ್ಪು, ಹುಲ್ಲು, ಸೊಪ್ಪು, ಅವರೆ, ಹುರುಳಿ ಇವೇ ಆಹಾರಸಾಮಗ್ರಿಗಳು. ಪಾಶ್ಚಾತ್ಯ ದೇಶಗಳಲ್ಲಿನ ಪ್ರಾಣಿಗಳಿಗಾದರೂ ಹೆಚ್ಚು ಸುಖ ದೊರೆಯುವುದು. ನಮ್ಮ ಜನದ ವೆಚ್ಚ ಬಹಳವಿಲ್ಲ ; ಇರುವ ಗುಡಿಸಲುಗಳೂ ಮನೆಗಳೂ ಸಾಧಾರಣವಾದುವು. ಗುಡಿಸಲುಗಳ ಬೆಲೆ ೫೦ ರೂಪಾಯಿ ಕೂಡ ಆಗುವುದಿಲ್ಲ. ಹೊದೆಯುವ ಬಟ್ಟೆ ಸ್ವಲ್ಪ ; ಅದೂ ಒರಟು ; ಅತಿ ಸಾಮಾನ್ಯವಾದುದು ; ಅನ್ನವೇ ಅನೇಕವೇಳೆ ಭೋಗಸಾಮಗ್ರಿ : ಇತರ ಸುಖಸಾಮಗ್ರಿಗಳಲ್ಲಿ ಅಡಕೆ, ವೀಳೆಯದೆಲೆ, ಕಡ್ಡಿಪುಡಿ, ಹೊಗೆಸೊಪ್ಪು ಮುಖ್ಯ. ಇವುಗಳಲ್ಲಿ ಬಹು ಭಾಗವನ್ನು ಊರಿನ ತೋಟ ತುಡಿಕೆಗಳೇ ಒದಗಿಸುತ್ತವೆ. ಮಾಂಸಾದಿ ಆಹಾರಗಳನ್ನೂ ಕಡೆಗೆ ಬೆಲ್ಲ ಸಕ್ಕರೆಗಳನ್ನೂ ಉಪಯೋಗಿಸುವುದು ಕಡಮೆ; ಅದೂ ಹಬ್ಬ ಅಥವಾ ವಿಶೇಷ ದಿನಗಳಲ್ಲಿ ಮಾತ್ರ. ಅನೇಕ ಪಂಗಡಗಳವರು —ಬ್ರಾಹ್ಮಣರು, ಶೈವರು, ಜೈನರು, ವೈಶ್ಯರು ಮುಂತಾದವರು— ಕೇವಲ ಸಸ್ಯಾಹಾರಿಗಳು. ಮದ್ಯಪಾನವೂ ದೇಶದಲ್ಲಿ ಕಡಮೆ. ಕೆಲವು ಕಸುಬು ಪಂಗಡಗಳವರಲ್ಲಿ ಹೆಚ್ಚು. ಹಳ್ಳಿಗಳಿಗಿಂತ ಪಟ್ಟಣಗಳಲ್ಲಿ ಕುಡಿತ ಹೆಚ್ಚು. ಕೂಲಿಯವರು, ಹೊರದೇಶಗಳಿಂದ ಬಂದು ಇಲ್ಲಿ ಕೆಲಸಮಾಡುತ್ತಿರುವ ಕೊಂಗರು, ಒಡ್ಡರು, ಇಲ್ಲಿನ ಕೆಲವು ಕಸುಬುಗಳವರು ಹೆಂಡ ಸಾರಾಯಿ ಮುಂತಾದ ಮಾದಕದ್ರವಗಳನ್ನು ವಿಶೇಷವಾಗಿ ಸೇವಿಸುವರು. ಕುಡಿತವಿರುವ ಹಳ್ಳಿಗಳ ಕಡೆ ಸಾರಾಯಿಗಿಂತ ಹೆಂಡದ ಕುಡಿತ ಹೆಚ್ಚು. ಕೈಗಾರಿಕೆ ಕೂಲಿಯವರಲ್ಲಿ ಮುಖ್ಯವಾಗಿ ಹೊರದೇಶದಿಂದ ಬಂದು ನೆಲಸಿರುವವರಲ್ಲಿ ; ಪಟ್ಟಣಗಳಲ್ಲಿ ಸಾರಾಯಿ ಸೇವನೆ ವಿಶೇಷ. ಉಪಪತ್ತಿಯಿರುವವರು ಶುದ್ಧವಾದ ಮದ್ಯಗಳನ್ನೂ ವಿದೇಶಿಪಾನಗಳನ್ನೂ ಕುಡಿಯುತ್ತಾರೆ. ಬೀಡಿ ಸಿಗರೆಟ್ ಚುಟ್ಟಗಳ ಸೇವನೆ ಹೆಚ್ಚುತ್ತಿದೆಯೆನ್ನಬಹುದು. ಹಳ್ಳಿಯ ಜನಗಳ ಉಪಪತ್ತಿ ಎಷ್ಟು ಕಡಮೆಯೋ ಅವರ ಖರ್ಚು ವೆಚ್ಚಗಳೂ ಅಷ್ಟೇ ಕಡಮೆ. ಒಂದುಕಡೆ ಜನಜೀವನದ ಮಟ್ಟವನ್ನು ಎತ್ತರಿಸಬೇಕು. ಒಂದುಕಡೆ ಜನರ ಸೋಮಾರಿತನ ಕಡಮೆಯಾಗಿ ಉದ್ಯೋಗಶೀಲತೆ

ಹೆಚ್ಚಬೇಕು ; ಒಂದುಕಡೆ ಅವರಿಗೆಲ್ಲ ಕೆಲಸವೊದಗಲು ಕೈಗಾರಿಕೆ ಕಾರ್ಖಾನೆ ಮತ್ತು ಗಿರಣಿ ಕೆಲಸಗಳೂ, ಉದ್ಯೋಗಗಳೂ ದೇಶದಲ್ಲಿ ಹೆಚ್ಚಬೇಕು : ಒಂದುಕಡೆ ಅಜ್ಞಾನ ನಿವಾರಣೆಯಾಗಿ ಅವರಿಗೆ ಕಸುಬು ವಿದ್ಯೆಯೂ ಶಿಕ್ಷಣವೂ ದೊರೆಯಬೇಕು ; ಯಾವ ರೀತಿ ಕೆಲಸಮಾಡಿದರೆ ಬಡತನದ ಕಷ್ಟಗಳೂ ಶಕ್ತಿ, ಸಾಮರ್ಥ್ಯ ಕಾಲಶ್ರಮ ಇವುಗಳ ಪೋಲು (waste) ನಿಲ್ಲುವುದೋ ಆ ರೀತಿಮಾಡಿ, ಜನರೆಲ್ಲರಿಗೂ ಸುಖ, ಸೌಕರ್ಯ, ವಿರಾಮ, ವಿನೋದ, ಜೀವನದ ಸೌಭಾಗ್ಯ ಇವು ಹೆಚ್ಚುವಂತೆ ಸಮಾಜದ ಸಾಧನೆಗಳನ್ನೆಲ್ಲ ವ್ಯವಸ್ಥೆಮಾಡಬೇಕು.

ಹಿಂದೆ ಎಲ್ಲ ಶ್ರಮ ಸೇವೆಗಳಿಗೂ ಭೂಮಿಕಾಣಿಗಳ ಮಾನ್ಯವಿರುತ್ತಿತ್ತು. ಕೂಲಿಗೆ ದವಸಧಾನ್ಯಗಳನ್ನು ಕೊಡುತ್ತಿದ್ದರು. ಹಣ ಕೊಡುತ್ತಿದ್ದುದು ಅಪರೂಪ. ದೇಶದಲ್ಲಿ ಸಾಧಾರಣವಾಗಿ ಆಹಾರಕ್ಕೆ ಕೊರತೆಯಿರುತ್ತಿರಲಿಲ್ಲ. ಹಣದ ಅಭಾವವಿರುತ್ತಿತ್ತೇ ಹೊರತು ದವಸಧಾನ್ಯಗಳು, ಕ್ಷಾಮದ ವರ್ಷಗಳಲ್ಲಿ ಬಿಟ್ಟು ಉಳಿದ ಕಾಲಗಳಲ್ಲಿ, ಸಾಕಾಗುವಷ್ಟು ಇರುತ್ತಿದ್ದವು. ಈಗ ದೇಶದಲ್ಲೆಲ್ಲಾ ಹಣದ ಪ್ರಾಬಲ್ಯವೂ ಚಲಾವಣೆಯೂ ಹೆಚ್ಚಾಗಿ ಎಲ್ಲ ಪದಾರ್ಥಕ್ಕೂ ಎಲ್ಲ ಸೇವೆಗಳಿಗೂ ಹಣದಲ್ಲಿ ಬೆಲೆ ಕೊಡುವುದು ವಾಡಿಕೆಯಾಗಿದೆ. ಆದರೆ ರೈಲು ರಸ್ತೆಗಳಾಗಿ ಸಾಮಾನುಗಳ ಮಾರಾಟಕ್ಕೆ ಅನುಕೂಲ ಹೆಚ್ಚಿದಂತೆಲ್ಲ ಧಾರಣೆವಾಸಿ ಹೆಚ್ಚು ಕಡಮೆಯಾಗುವುದಕ್ಕೂ ನೆರೆಯ ಪ್ರಾಂತಗಳಲ್ಲಿನ ಪೇಟೆ ಧಾರಣೆಗೂ ಇಲ್ಲಿನ ಧಾರಣೆಗೂ ಹೊಂದಿಕೆಬರುವುದಕ್ಕೂ ಆರಂಭವಾಯಿತು. ಇಲ್ಲಿಂದ ಸಾಮಾನುಗಳು ಹೊರಗೆ ಹೋಗಬಲ್ಲವಾದುದರಿಂದಲೂ, ಹೊರಗಿಂದ ಒಳಕ್ಕೆ ಸುಲಭವಾಗಿ ಬರಬಲ್ಲವಾದುದರಿಂದಲೂ ಪರಸ್ಪರವಾಗಿ ಎಲ್ಲ ವಸ್ತುಗಳ ಪೇಟೆ ಧಾರಣೆಯೂ ಹೊರದೇಶದ ಗಿರಾಕಿಗಳು ಕೊಡುವ ಧಾರಣೆಗೆ ಬಹುಮಟ್ಟಿಗೆ ಅಧೀನವಾಯಿತು. ಹಿಂದೆ ರೂಪಾಯಿಗೆ ಹೆಚ್ಚು ಬೆಲೆಯಿತ್ತು ; ಎಂದರೆ ಆಗ ರೂಪಾಯಿಗೆ ಎಷ್ಟು ಪದಾರ್ಥ ಸಿಗುತ್ತಿತ್ತೊ ಈಗ ಅಷ್ಟು ಸಾಮಾನು ದೊರೆಯುತ್ತಿಲ್ಲ.

ಜನಜೀವನದ ಸುಖ ಹೆಚ್ಚುತ್ತಿದೆಯೇ ? ವರಮಾನ, ವೆಚ್ಚ.

ಈಗೀಗ ಮೈಸೂರು ದೇಶದಲ್ಲಿ ದೊಡ್ಡ ಊರುಗಳಲ್ಲಿನ ಜನರು ಎಲ್ಲಿ ನೋಡಿದರೂ ಕೊಡೆ, ಸೋಪು, ಉಡುಪು, ಕಾಫಿ, ತಿಂಡಿ, ಬಸ್ಸು ಪ್ರಯಾಣ,

ಕಾಲಿಗೆ ಜೋಡು, ಸಿಗರೆಟ್, ಸಿನೆಮಾಗಳು ಇವಕ್ಕೆಲ್ಲ ವೆಚ್ಚಮಾಡುತ್ತಿರುವುದನ್ನು ನೋಡಬಹುದು. ರೈಲು ಪ್ರಯಾಣವೂ ಹೆಚ್ಚುತ್ತಿದೆ. ಹಳ್ಳಿಗಳಲ್ಲಿ ಕೂಡ ವಿದೇಶಿ ವಸ್ತುಗಳಾದ ಮೋಂಬತ್ತಿ, ಲಾಂದರ, ಸೀಮೆಯ ಎಣ್ಣೆ, ಸಿಗರೆಟ್ಟು, ವಾಸೆಲೀನ್, ಬಟ್ಟೆಗಳು, ಸೋಪು, ಬೈಸಿಕಲ್ ಮುಂತಾದುವು ಹೆಚ್ಚು ಬಳಕೆಗೆ ಬರುತ್ತಿವೆ. ಬೆಲ್ಲ ಸಕ್ಕರೆಗಳ ಉಪಯೋಗ ಹೆಚ್ಚುತ್ತಿದೆ. ಪಟ್ಟಣಗಳಲ್ಲಿ ಹಣವಂತರಾದವರು ಗಾಡಿ ಮೋಟಾರುಗಳನ್ನು ಇಟ್ಟು ಭೋಗ ಭೋಗಿಸುತ್ತಾರೆ. ದೊಡ್ಡದೊಡ್ಡ ಮನೆಗಳನ್ನು ಕಟ್ಟಿಕೊಂಡು ವಿದ್ಯುಚ್ಛಕ್ತಿಯನ್ನು ಬಳಸುತ್ತಾರೆ. ಹಲವುವೇಳೆ ವರಮಾನಕ್ಕೂ ಖರ್ಚಿಗೂ ಹೊಂದಿಕೆಯೇ ಇಲ್ಲದಷ್ಟು ಖರ್ಚುಮಾಡುತ್ತಾರೆ. ಇವೆಲ್ಲ ಸುಖಸೂಚನೆಗಳೇ ನಿಜವಾದರೂ ಜನರ ವರಮಾನಕ್ಕೆ ಅಧೀನವಾಗಿರಬೇಕು. ಇವುಗಳಿಂದ ಜನರು ಸಾಮಾನ್ಯದ ಐಶ್ವರ್ಯಾಭಿವೃದ್ಧಿಯಾಗುತ್ತಿದೆಯೆಂಬ ಸೂಚನೆ ಬರುತ್ತದೆ; ಅಥವಾ ಅವರ ವರಮಾನ ಹಿಂದಿಗಿಂತಲೂ ಹೆಚ್ಚುತ್ತಿದೆಯೆಂಬ ಸೂಚನೆ ತೋರುತ್ತದೆ; ಕಡೆಯಪಕ್ಷ ಜನರಿಗೆ ಹೆಚ್ಚು ಸುಖದಿಂದ ಜೀವಿಸಬೇಕೆಂಬ ಆಸೆ ತೋರಿ ಅವರು ಎಲ್ಲ ವಿಧವಾದ ಅನುಕೂಲಗಳನ್ನೂ ಪಡೆಯಲು ಆತುರರಾಗಿರುವರೆಂದಾದರೂ ಸೂಚಿಸುತ್ತದೆ.

ಇದು ವಿಶೇಷವಾಗಿ ಪಟ್ಟಣಿಗರ ಮಾತು—ಒಂದು ಬಗೆಯ ಅರ್ಥಶಾಸ್ತ್ರಜ್ಞರ ದೃಷ್ಟ್ಯಾ ಇದು ಶುಭಸೂಚನೆಯೇ. ಖರ್ಚನ್ನು ನಡಸಬೇಕಾದರೆ ಅದಕ್ಕೆ ತಕ್ಕಂತೆ ಸಂಪಾದಿಸಬೇಕೆಂಬ ಹುಮ್ಮಸ್ಸು ಬಂದು ಅವರು ಕೆಲಸ ಕಾರ್ಯಗಳಲ್ಲಿ ಖಂಡಿತ ತೊಡಗುವರು ಎಂದು ಅವರ ನಂಬಿಕೆ; ಒಂದು ವೇಳೆ ಹಾಗೆ ಮಾಡದಿದ್ದರೆ ಹಿಂದೆ ಕೂಡಿಟ್ಟ ಹಣವನ್ನು ಬಹು ದಿನ ಹೀಗೆ ಖರ್ಚುಮಾಡುವುದಕ್ಕಾಗದೆ ಅಂಥವರು ಬಡತನಕ್ಕೆ ಬೀಳುವರು; ಒಂದು ಪದವಿ, ಅಂತಸ್ತು, ಒಂದು ಮೇಲಿನ ರೀತಿಯ ಜೀವನಾಚರಣೆಗಳ ಅಭ್ಯಾಸಮಾಡಿದವರಿಗೆ ಅದಕ್ಕೆ ಕೀಳಾದ ಜೀವನ ರುಚಿಸದಾದುದರಿಂದ ಸಾಧ್ಯವಾದ ಮಟ್ಟಿಗೂ ಆ ಅಂತಸ್ತನ್ನು ಸಾಧಿಸುವುದಕ್ಕೆ ಪ್ರಯತ್ನಪಡುವಾಗ ಹೊಸಹೊಸ ರೀತಿ ತಮ್ಮ ಶಕ್ತಿಸಾಮರ್ಥ್ಯಗಳನ್ನು ವೆಚ್ಚಮಾಡಿ ಹೊಸ ದಾರಿಯಲ್ಲಿ ಸಂಪಾದನೆ ಮಾಡುವರು, ಎಂಬ ತತ್ತ್ವ ಸಂಪೂರ್ಣವಾಗಿ ಸತ್ಯ. ಆದರೂ ನಮ್ಮ ಜನರ ವೆಚ್ಚ ಸಂಪಾದನಾಶಕ್ತಿಯಿಂದ

ಬಂದಿರುವುದೆ, ಅಥವಾ ದುಂದಿನ, ಷೋಕಿನ ವೆಚ್ಚವೆ? ಎಂಬುದನ್ನು ವಿಮರ್ಶಿಸಬೇಕು. ಪಟ್ಟಣಗಳಲ್ಲಿ ಎಲ್ಲಿ ನೋಡಿದರೂ ಜನರು ನಾನಾ ಕಸುಬುಗಳಲ್ಲಿ ಸೇರಿಕೊಂಡು ಹಿಂದಿನವರು ಕನಸು ಕಾಣದಿದ್ದ ರೀತಿಗಳಲ್ಲಿ ಹಣ ಸಂಪಾದನೆ ಮಾಡಿಕೊಳ್ಳುತ್ತಿದ್ದಾರೆ. ಈ ಕಾಲದಲ್ಲಿ ಒಂದು ಕಸುಬಿನ ಬೆಳವಣಿಗೆಗೂ ಇನ್ನೊಂದಕ್ಕೂ ಸಂಬಂಧವಿರುವುದರಿಂದ ಅದು ಅಭಿವೃದ್ಧಿ ಯಾದರೆ ಇದೂ ಅಭಿವೃದ್ಧಿಯಾಗುವುದು. ಇರುವ ಅವಕಾಶಗಳನ್ನು ರೂಡಿಸಿಕೊಂಡು ಎಲ್ಲ ಕೆಲಸಗಳಿಗೂ ಮುಂದೆ ನುಗ್ಗಿ ಈಗ ಹೊರಗಣವರಿಗೆ ಹೋಗುತ್ತಿರುವ ಸಂಪತ್ತನ್ನು ನಾವೇ ಗಳಿಸಿಟ್ಟುಕೊಳ್ಳುವಂತಾದರೆ ಮಾತ್ರ ಈ ವೆಚ್ಚಗಳಿಗೂ ಭೋಗ ಜೀವನಕ್ಕೂ ಮಾರ್ಗ. ಇಲ್ಲವಾದರೆ ಇದು ದಿವಾಳಿ ತನದ ಬುದ್ಧಿಯೆಂಬುದನ್ನು ಮರೆಯದಿರಬೇಕು. ತಿಂಗಳಿಗೆ ಇನ್ನೂರು ರೂಪಾಯಿಗಳಿಗೆ ಹೆಚ್ಚಿನ ವರಮಾನವಿದ್ದು ತೆರಿಗೆ ತೆರುವ ಜನರ ಸಂಖ್ಯೆ (ವ್ಯವಸಾಯದ ವರಮಾನವನ್ನು ಬಿಟ್ಟು) ಐದು ಸಾವಿರ ಚಿಲ್ಲರೆ ಇರುವು ದೆಂದು ಲೆಕ್ಕವಿರುವಾಗ· ದೇಶದಲ್ಲಿ ಜನರು ಇಟ್ಟಿರುವ ಮೋಟಾರುಗಳು ಏಳು ಸಾವಿರಕ್ಕೆ ಮೀರಿವೆಯೆಂದರೆ ಪಟ್ಟಣಿಗರ ಭೋಗ ವರಮಾನದ ಪ್ರಮಾಣಕ್ಕಿಂತ ಬಹು ದೂರ ಸಾಗಿದೆಯೆನ್ನುವುದು ಅತಿಶಯೋಕ್ತಿಯಾಗದು. ದೇಶದ ಒಟ್ಟು ಸ್ಥೂಲ ವರಮಾನ ೧೮ ಕೋಟಿ ರೂಪಾಯಿಗಳೆಂಬ ಎಣಿಕೆ ಯಿದೆ. ಜನಸಂಖ್ಯೆ ೬೫ ಲಕ್ಷ. ಎಂದರೆ ತಲೆಯೊಂದಕ್ಕೆ ವರ್ಷಕ್ಕೆ ೩೦ ರೂಪಾಯಿಗಳ ಸರಾಸರಿ ವರಮಾನವೆಂಬುದನ್ನು ಯಾರೂ ಮರೆಯ ಲಾಗದು.

ಬಡ್ಡಿ.

ಎಲ್ಲ ವ್ಯಾಪಾರ ಕೈಗಾರಿಕೆಗಳಿಗೂ ಒದಗುವ ಹಣಕ್ಕೆ ಸಾಮಾನ್ಯ ವಾಗಿ ಬಡ್ಡಿ ಹೇಗೆ ಬೀಳುತ್ತದೆ ಎಂಬುದು ಮುಂದಿನ ವಿಷಯ.

ಬಂಡವಾಳ ಒದಗಿಸುವವರು—ಬಡ್ಡಿಯ ದರ

ಬಡ್ಡಿಗೆ ಹಣ ಒದಗುತ್ತಿರುವುದು ಬ್ಯಾಂಕುಗಳಿಂದ, ಸಾಹುಕಾರರಿಂದ. ಕುಳದ ನಂಬಿಕೆಯ ಮೇಲೂ, ಚರ ಸ್ಥಿರ ಸ್ವತ್ತುಗಳ ಆಧಾರದ ಮೇಲೂ ಸಾಮಾನ್ಯವಾಗಿ ಹಣ ಹುಟ್ಟುವುದು. ಹಣ ಕೊಡುವವರು ಹಲವು ಬಗೆ

ಯಾಗಿರುತ್ತಾರೆ. ಕೆಲವರಿಗೆ ಬಡ್ಡಿಯ ಆಸೆ ಬಹುವಾಗಿಲ್ಲ ; ತಮಗಾಗಿಯೂ ತಮ್ಮ ಮಕ್ಕಳು ಮರಿ ಹೆಂಡತಿಯರಿಗಾಗಿಯೂ ಹಣ ಶೇಖರಿಸುವರು ; ಅವರು ಕೂಡಿಟ್ಟ ಹಣ ಸುರಕ್ಷಿತವಾಗಿದ್ದರೆ ಸಾಕು. ಇಂಥವರು ಸಾಮಾನ್ಯವಾಗಿ ಬ್ಯಾಂಕುಗಳಲ್ಲಿಯೂ, ಸರ್ಕಾರಿ ಅಥವಾ ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಲ್ಲಿಯೂ ಇಡುತ್ತಾರೆ. ಅಥವಾ, ವಿಮೆ ಸಂಘಗಳಿಗೆ ಕಂತು ಕಟ್ಟುತ್ತಿರುತ್ತಾರೆ. ಬ್ಯಾಂಕುಗಳವರು ಈ ಹಣವನ್ನು ಹೆಚ್ಚು ಬಡ್ಡಿ ಲಾಭಗಳನ್ನು ತರುವಂಥ ಕೈಗಾರಿಕೆ ವ್ಯಾಪಾರದ ಕಂಪನಿಗಳಿಗೂ ಕುಳಗಳಿಗೂ ಕೊಡುತ್ತಾರೆ. ಇವರು ಡಿಪಾಸಿಟ್ಟಿನ ಮೇಲೆ ಕೊಡುವ ಬಡ್ಡಿ ಶೇಕಡ ಆರರವರೆಗೆ ಮಾತ್ರ ; ಇವರು ಕುಳಗಳಿಂದ ವಸೂಲುಮಾಡುವುದು ಹತ್ತರಿಂದ ಹನ್ನೆರಡರವರೆಗೆ. ಇಲ್ಲಿಂದ ಸಾಲ ತೆಗೆದು ಕೆಲವರು ತಾವು ತಮ್ಮ ಕುಳಗಳಿಗೆ ಸಾಲ ಹಾಕುವರು. ಅವರು ಕೇಳುವ ಬಡ್ಡಿ ಇನ್ನೂ ಹೆಚ್ಚು ; ಹಾಗೆಯೇ ಎಲ್ಲಿ ಸುರಕ್ಷಣೆಯಿದೆಯೋ, ಎಲ್ಲಿ ಕ್ಲುಪ್ತ ಕಾಲಕ್ಕೆ ಹಣ ಹಿಂದಿರುಗಿ ಬರುವುದೊ ಅಡಮಾನವಾಗುವ ಸ್ವತ್ತು ಹೆಚ್ಚು ಬೆಲೆಬಾಳುವುದೊ, ಎಲ್ಲಿ ಕುಳ ಸಂಪೂರ್ಣವಾಗಿ ನಂಬಿಕೆ ಉಳಿಸಿಕೊಳ್ಳುವ ಸಂಭವವಿದೆಯೊ, ಅವನ ಕಾರ್ಯಕಲಾಪ ಪ್ರಯೋಜನಕಾರಿಯಾದುದೋ ಅಂತಹ ಕಡೆ ಬಡ್ಡಿಯ ದರ ಕಡಮೆ. ಎಲ್ಲಿ ಹಣ ಹಿಂದಕ್ಕೆ ಬರುವ ನಂಬಿಕೆ ಇಲ್ಲವೊ, ಯಾವ ವ್ಯಾಪಾರದಲ್ಲಿ ಲಾಭ ನಿಶ್ಚಯವಿಲ್ಲವೊ, ಎಲ್ಲಿ ಕೋರ್ಟು ಕಚೇರಿಗಳಿಗೆ ಹತ್ತಬೇಕಾಗುವ ಪ್ರಮೇಯ ಒದಗಬಹುದೆಂಬ ಹೆದರಿಕೆಯಿದೆಯೊ ಅಂಥ ಕಡೆ ಬಡ್ಡಿ ಹೆಚ್ಚು. ಸಾಮಾನ್ಯವಾಗಿ ಸ್ಥಿರ ಆಸ್ತಿಗಳಮೇಲೂ ಚರ ಆಸ್ತಿಗಳಮೇಲೂ ಅವುಗಳ ಪೇಟೆಯ ಬೆಲೆಯ ಶೇಕಡ ಇಷ್ಟು ಭಾಗ ಮಾತ್ರ ಸಾಲ ಕೊಡುವುದೆಂದು ನಿಶ್ಚಯಮಾಡಿ ಆ ಕಡಮೆ ಹಣವನ್ನು ಮಾತ್ರ ಸಾಲವಾಗಿ ಕೊಡುವುದು ವಾಡಿಕೆ. ಇವುಗಳಮೇಲೆ ಕೇಳುವ ಬಡ್ಡಿ ಕಡಮೆ. ಕೇವಲ ನಂಬಿಕೆಯ ಮೇಲೆಯೇ ಕೊಡುವ ಹಣಕ್ಕೆ ಬಡ್ಡಿ ಜಾಸ್ತಿ. ವ್ಯಾಪಾರಗಾರರಾದರೆ ಸುಮಾರು ಶೇಕಡ ೧೦–೧೫ರವರೆಗೂ ಇರುತ್ತದೆ. ಸಾಹುಕಾರರು ಕೇಳುವ ಬಡ್ಡಿ ಕುಳದ ದರದಿನಮೇಲೆ ಹೋಗುತ್ತದೆ. ಸಾಲವನ್ನು ಏತಕ್ಕೆ ಕೋರುತ್ತಿರುವರು ಎಂಬುದರ ಮೇಲೆಯೂ ಹೋಗುತ್ತದೆ. ಪ್ರತಿಯಾಗಿ ಹಣದ ಪ್ರಯೋಜನತಾರದ ಮದುವೆ ಮುಂಜಿ, ಊಟಉಪಚಾರ, ಸಾಮಾನ್ಯ ವೆಚ್ಚಗಳು ಇಂಥವುಗಳಿಗಾಗಿ ಸಾಲಬೇಕಾದರೆ ಬಡ್ಡಿ ಹೆಚ್ಚು. ಕೆಲಸ

ಗಳಿಗೆ ಮೂಲ ಧನವಾಗುವ ಸಾಲವಾದರೆ ಕಡಮೆ. ಕಂತು ಸಾಲಗಳನ್ನು ಕೊಡುವ ಖಾಸಗಿ ಸಾಹುಕಾರರು ಬಡ್ಡಿಯನ್ನೆಲ್ಲಾ ಮೊದಲೇ ಮೊಬಲಗಿನಿಂದ ಕಳೆದುಕೊಳ್ಳುವ ಪದ್ಧತಿಯಿದೆ. ಅಂತಹ ಕಡೆ ಶೇಕಡ ೧೦ ಅಥವಾ ೧೫ ಎಂದು ಮೇಲೆ ಕಂಡುಬಂದರೂ ಒಟ್ಟಿನಲ್ಲಿ ಕಂತು ಮುಗಿಯುವುದರೊಳಗಾಗಿ ೩೦_೪೦ ಕೊಟ್ಟಂತಾಗಿರುತ್ತದೆ. ಹಲವು ವೇಳೆ ಬಡ್ಡಿಗೆ ಬಡ್ಡಿ ಹಾಕಿ ಆಧಾರವಾದ ಸ್ವತ್ತೆಲ್ಲ ಸಾಲದಲ್ಲಿ ಕರಗಿಹೋಗುತ್ತದೆ.

ದರದಿನಲ್ಲಿ ಸಾಲಕ್ಕೆ ಹೋಗುವವರೂ ಹಲವುವೇಳೆ ೧೦೦ ರೂಪಾಯಿ ನಗದು ಕೈ ಹಣಕ್ಕೆ ೨೦೦—೩೦೦ರ ಪತ್ರಗಳನ್ನು ಬರೆದುಕೊಟ್ಟು ಸಾಹುಕಾರರಿಗೆ__ಪಠಾಣರಿಗೆ__ತಲೆ ಮಾರಿಕೊಳ್ಳಬೇಕಾಗುವುದೂ ಪ್ರಬಲವಾಗುತ್ತಿದೆ.

ಒಟ್ಟಿನಲ್ಲಿ ನೋಡಿದರೆ ಪಟ್ಟಣಗಳಲ್ಲಿ ಜನರ ಆದಾಯ ಹೆಚ್ಚುತ್ತಿರುವುದು ನಿಜವಾದರೂ ಸಾಲ ದೊರೆಯುವ ಸೌಲಭ್ಯಗಳೂ ಹೆಚ್ಚಿ, ಜನರ ವೆಚ್ಚವೂ ಹೆಚ್ಚುತ್ತಿರುವುದರಿಂದ ಸಾಲದ ಮೊತ್ತವೂ ಹೆಚ್ಚುತ್ತಿದೆಯೆನ್ನಬಹುದು.

ಹಳ್ಳಿಗಳಕಡೆ ಸಾಹುಕಾರರು ಕೊಡುವ ಸಾಲ ಶೇಕಡ ೨೪ರಿಂದ ೫೦__೭೫ರ ವರೆಗೂ ಹೋಗುವುದುಂಟು. ಪೇಟೆಗಳಲ್ಲಿ ಮಾರವಾಡಿ ಮುಂತಾದ ಸಾಹುಕಾರರಿಂದ ಬೆಳಗ್ಗೆ ೧೫ ಅಥವಾ ೧೪ ಆಣೆ ಸಾಲ ತೆಗೆದುಕೊಂಡು ಸಾಯಂಕಾಲ ಒಂದು ರೂಪಾಯಿನಂತೆ ಹಿಂದಕ್ಕೆ ಕೊಡುವುದೂ ರೂಢಿ. ಆದರೆ ಎಲ್ಲೆಲ್ಲಿ ಸಹಕಾರ ಸಂಘಗಳೂ ಬ್ಯಾಂಕುಗಳೂ ಸುಲಭವಾಗಿ ಸಾಲ ಕೊಡುತ್ತಿವೆಯೊ ಅಲ್ಲಿ ಬಡ್ಡಿಯ ದರ ಕಡಮೆಯಾಗಿರುತ್ತದೆ. ಸಾಹುಕಾರರು ಕೂಡ ಮೊದಲಿನಂತೆ ಅತಿ ಹೆಚ್ಚಿನ ದರಗಳನ್ನು ಕೇಳುವುದು ಕಡಮೆಯಾಗುತ್ತಿದೆ.

ಸಾಹುಕಾರರು ಕೊಡುವ ಕೈ ಸಾಲ, ಕೇವಲ ಪುಸ್ತಕ ಸಾಲದ ಲೆಕ್ಕ, ಒಡವೆ ವಸ್ತುಗಳಮೇಲೆ ಕೊಡುವ ಸಾಲ ಇವುಗಳ ಲೆಕ್ಕ ಸಿಕ್ಕುವುದಿಲ್ಲ. ಬ್ಯಾಂಕುಗಳವರು ಕೊಡುವ ಸಾಲ, ಆಧಾರ ಭೋಗ್ಯಪತ್ರಗಳಲ್ಲಿ ಸೂಚಿತವಾಗುವ ಸಾಲ, ಹುಂಡಿಗಳ ಮೇಲೆ ಎತ್ತಿದ ಸಾಲ—ವಿಮೆ ಪತ್ರಗಳ ಮೇಲೆಯೂ, ಸಹಕಾರ ಸಂಘಗಳಲ್ಲಿಯೂ ತೆಗೆದ ಸಾಲ ಇವುಗಳ ಪ್ರಮಾಣ ಸುಮಾರು ಗೊತ್ತಾಗುತ್ತದೆ. ಈ ದೇಶದವರ ಸಾಲಗಾರಿಕೆ ೩೦ ಕೋಟಿ ರೂ. ಗಳಿಗೆ ಕಡಮೆಯಿಲ್ಲವೆಂದು ಎಣಿಕೆಯಾಗಿದೆ.

ಹಣ ಕೂಡಿರುವವರ ಸಂಖ್ಯೆಯನ್ನು ಸಹಕಾರ ಮತ್ತು ಕೂಡು ಬಂಡವಾಳದ ಸಂಘಗಳ ಷೇರುದಾರರು, ಡಿಪಾಸಿಟ್‌ದಾರರು ಈ ಬಗೆಯವರ ಸಂಖ್ಯೆಯಿಂದಲೂ, ಸೇವಿಂಗ್ಸ್ ಬ್ಯಾಂಕುಗಳ ಡಿಪಾಸಿಟ್ ಲೆಕ್ಕಗಳಿಂದಲೂ ಸರ್ಕಾರದ ವಿಮೆ ಲೆಕ್ಕಗಳಿಂದಲೂ ಸರ್ಕಾರಿ ಸಾಲ ಪತ್ರಗಳನ್ನು ಕೊಳ್ಳುವ ಜನರ ಸಂಖ್ಯೆಯಿಂದಲೂ ಗೊತ್ತು ಹಚ್ಚಬಹುದು. ವಿದೇಶಿ ವಿಮೆ ಕಂಪನಿಯವರು ಈ ದೇಶದಲ್ಲಿ ಬಹುವಾಗಿ ಕೆಲಸಮಾಡುತ್ತಿರುವವರಾದರೂ ಮೈಸೂರಿನವರು ಎಷ್ಟು ಹಣವನ್ನು ಆ ಕಂಪನಿಗಳಲ್ಲಿ ಕೂಡಿಡುತ್ತಿದ್ದಾರೆ ಎಂಬ ಲೆಕ್ಕ ಸಿಕ್ಕದು. ಅವುಗಳ ವರಮಾನದ ಮೇಲೆ ತೆರಿಗೆ ಹಾಕುವಂತಾದರೆ ಆಗ ಸಿಕ್ಕಬಹುದು. ಪೋಸ್ಟಾಫೀಸು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಮೈಸೂರಿನವರು ಎಷ್ಟು ಕೂಡಿಟ್ಟಿರುವರು, ಹೊರಗಿನವರು ಎಷ್ಟಿಟ್ಟಿರುವರು, ಎಂಬ ಲೆಕ್ಕಗಳು ಸಿಗುವುದೂ ಕಷ್ಟ. ಮೈಸೂರು ಸರ್ಕಾರದ ಸೇವಿಂಗ್ಸ್ ಬ್ಯಾಂಕುಗಳು ಮತ್ತು ವಿಮೆ ಏರ್ಪಾಡುಗಳಲ್ಲಿ ಎಷ್ಟು ಹಣ ಕೂಡಿದೆಯೆಂಬ ಲೆಕ್ಕವೂ, ಎಲ್ಲ ಬ್ಯಾಂಕುಗಳಲ್ಲಿಯೂ ಇರುವ ಡಿಪಾಸಿಟ್ ಲೆಕ್ಕವೂ ಸಿಕ್ಕುವುವು. ದೇಶದ ಎಲ್ಲ ಸಾಲಗಳ ಮೊತ್ತವೆಷ್ಟು ? ತಲೆಗೆ ಎಷ್ಟು ಸಾಲವಿದೆ? ಸಾಲ ಕೊಡುವ ಜನರ ಸಂಖ್ಯೆಯೆಷ್ಟು ? ಒಳದೇಶದವರು ಎಷ್ಟು ಮಂದಿ? ಹೊರಗಿನವರು ಎಷ್ಟು ? ವ್ಯಕ್ತಿಗಳೆ, ಸಂಘಗಳೆ ? ಡಿಪಾಸಿಟ್ಟು ಕೂಡಿಡುವ ರೂಪದಲ್ಲಿಯೂ ಲೇವಾದೇವಿ ಪತ್ರಗಳನ್ನು ಕೊಂಡು ಆಸ್ತಿಯಾಗಿಟ್ಟುಕೊಳ್ಳುವ ರೂಪದಲ್ಲಿಯೂ ಸೇವಿಂಗ್ಸ್ ಬ್ಯಾಂಕುಗಳಲ್ಲಿಯೂ ಎಷ್ಟು ಹಣ ಸಾಲಗಳಿಗೆ ಒದಗುತ್ತದೆ? ಎಷ್ಟು ಹಣ ಉತ್ಪತ್ತಿತಾರದ ಅಥವಾ ಉತ್ಪತ್ತಿ ತರುವ ರೀತಿಯಲ್ಲಿ ಖರ್ಚಾಗುತ್ತದೆ? ಕೂಡಿಡುವ ಜನರಲ್ಲಿ ಮೈಸೂರಿನವರೆಷ್ಟು ಮಂದಿ? ಪ್ರವಾಸಿಗಳೂ ಪರಕೀಯರೂ ಎಷ್ಟು ಮಂದಿ? ಅವರ ಆದಾಯ ವೆಚ್ಚಗಳಿಗೂ ಇವರವಕ್ಕೂ—ಮುಂದಾಲೋಚನೆ ಮಿತವ್ಯಯಗಳಿಗೂ ತಾರತಮ್ಯವೇನು ? ಒಟ್ಟು ದೇಶದ ಸಾಲಗಾರಿಕೆ ಎಷ್ಟು ಮಂದಿಗಿದೆ ? ಸಾಲದ ತೊಂದರೆಗಳನ್ನು ತಪ್ಪಿಸುವ ಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೆ ಮಾರ್ಗಗಳಾವುವು ? ಎಂಬುದನ್ನು ಕಂಡುಹಿಡಿಯುವ ಪ್ರಯತ್ನ ಅತ್ಯಗತ್ಯವಾಗಿ ನಡೆಯಬೇಕಾಗಿದೆ.

ರೈತರ ಸಾಲ

ಹಳ್ಳಿಗಳ ಕಡೆ ಭೂಮಿಯ ಮೇಲೆ ರೈತರು ಹೇಗೆ ಸಾಲ ಮಾಡುತ್ತಿದ್ದಾರೆಂಬುದನ್ನು ಕೆಲವು ಶೋಧಕರು ತಿಳಿಯಲು ಪ್ರಯತ್ನಪಟ್ಟಿದ್ದಾರೆ.

ಹಿಂದಿನ ಸಾಲಗಳನ್ನು ತೀರಿಸುವುದಕ್ಕೆ; ಭೂಮಿಯನ್ನು ಕೊಳ್ಳುವುದಕ್ಕೆ, ಉತ್ತಮಗೊಳಿಸುವುದಕ್ಕೆ; ಕುಟುಂಬದ ಸಾಮಾನ್ಯ ವೆಚ್ಚಕ್ಕೆ; ಮದುವೆ ಮುಂತಾದ ಸಾಮಾಜಿಕ ವೆಚ್ಚಗಳಿಗೆ; ಇನ್ನೂ ಅನೇಕ ಬಗೆಯ ಉತ್ಪತ್ತಿ ತಾರದ ವೆಚ್ಚಗಳಿಗೆ ಎಂದು ತಮ್ಮ ಭೂಮಿಗಳನ್ನು ರೈತರು ಅಡವಿಡುವರು. ಸಾಲ ಕೊಡುವವರು ಸ್ವತಃ ವ್ಯವಸಾಯಗಾರರಲ್ಲದ ಸಾಹುಕಾರರು, ವರ್ತಕರು. ಕೇವಲ ಬಾಯಿಮಾತಿನ ನಂಬಿಕೆಯ ಮೇಲೆ ಯಾವ ಕುದುವನ್ನಾಗಲಿ ಆಧಾರವನ್ನಾಗಲಿ ಬಯಸದೆ ಕುಳದ ನಂಬಿಕೆಯ ಮೇಲೆ ಅವರು ಕೈ ಬದಲು ಸಾಲ ಕೊಡುವರು. ವ್ಯಾಪಾರಸ್ಥರೂ ಸಾಹುಕಾರರೂ ಕೆಲವು ವೇಳೆ ತಮ್ಮ ಖಾತೆ ಮತ್ತು ದಿನ ಪುಸ್ತಕಗಳಲ್ಲಿ ಕೈ ರುಜು ಹಾಕಿಸಿಕೊಂಡೊ ಇಲ್ಲದೆಯೊ ಸಾಲ ಕೊಡುವರು. ಸಾಮಾನ್ಯವಾದ ಒಪ್ಪಿಗೆ ಪತ್ರಗಳನು ಬರೆಸಿಕೊಳ್ಳಬಹುದು; ಚರಸ್ವತ್ತುಗಳ ಆಧಾರದಮೇಲೂ ಬೆಳೆಯುವ ಬೆಳ್ಸಿನ ಆಧಾರದ ಮೇಲೂ ಚಾಲ್ತಿ ಲೆಕ್ಕಗಳನ್ನಿಡಬಹುದು; ಮುಂಗಡ ಕೊಡಬಹುದು; ಸ್ಥಿರ ಆಸ್ತಿಯ ಅಡವಾನದ ಮೇಲೆ ಕೊಡಬಹುದು:—ಹೀಗೆ ಸಾಲದ ರೀತಿ ನಾನಾ ಬಗೆಯಾಗಿದೆ.

ಬಂಡವಾಳ

ಸರ್ಕಾರಿ ಸೇವಿಂಗ್ಸ್ ಬ್ಯಾಂಕುಗಳು, ವಿಮೆ ಹಣ, ಸಹಕಾರ ಸಂಘಗಳ ಮೂಲಧನ, ಡಿಪಾಸಿಟ್ಟುಗಳು, ಕೂಡು ಬಂಡವಾಳದ ಸಂಘಗಳ ಬಂಡವಾಳ ಮತ್ತು ಕೈ ಹಣ—ಇವುಗಳ ಲೆಕ್ಕವನ್ನು ಮಾಡಿದರೆ ಈ ದೇಶದಲ್ಲಿ ಸುಮಾರು ೧೦ ಕೋಟಿ ರೂ. ಗಳನ್ನು ಜನರು ಕೂಡಿಟ್ಟಿರುವರೆಂದು ಹೇಳಬಹುದು; ಎಂದರೆ ತಲೆಯೊಂದಕ್ಕೆ ಸುಮಾರು ರೂ. ೧೭ ಆಗುವುದು.

ಲಾಭ

ಕೇವಲ ಲಾಭದಿಂದಲೇ ಜೀವಿಸುವವರು ಇಷ್ಟುಮಂದಿ, ಅಥವಾ ಒಟ್ಟು ಅರ್ಥಸಾಧನೆಯಿಂದ ಬರುವ ಲಾಭದಲ್ಲಿ ಇಷ್ಟು ಜನರಿಗೆ ಭಾಗ

ದೊರೆಯುವುದು ಎಂದು ಹೇಳುವುದು ಕಷ್ಟ. ಮೊದಲು ನಷ್ಟವಾದರೂ ಆಗಲಿ; ಇಂಥ ಕೈಗಾರಿಕೆಯೊಂದನ್ನು ಆರಂಭಿಸಿ ನಡಸಿದರೆ ಕೆಲವು ದಿನಗಳಲ್ಲಿ ಒಂದಕ್ಕೆ ಹತ್ತರಷ್ಟು ಹಣ ಬರುವುದು ಎಂಬ ಸಾಹಸದಿಂದ ಹಣ ಹೂಡುವವರಿಗೆ ಮಾತ್ರ ದೊಡ್ಡಲಾಭ ಬರುತ್ತದೆ. ದೊಡ್ಡ ಮೊತ್ತಗಳಲ್ಲಿ ಹಣವನ್ನು ಹೂಡುತ್ತಿರುವವರ ಸಂಖ್ಯೆಯನ್ನು ಗೊತ್ತುಮಾಡಿ ಅವರು ಗಳಿಸುವ ಲಾಭ ಅಥವಾ ಡಿವಿಡೆಂಡುಗಳಿಂದ ಇದನ್ನೂ ಗೊತ್ತುಮಾಡುವುದು ವಾಡಿಕೆ. ಕೆಲಸದ ಖರ್ಚು ಕಳೆದು, ಇತರರಿಂದ ತಂದ ಹಣಕ್ಕೆ ಬಡ್ಡಿ ತೆತ್ತು, ಆಪದ್ಧನವನ್ನು ಶೇಖರಿಸಿಟ್ಟು, ಯಂತ್ರ ಕೆಟ್ಟುಹೋಗುವುದು ಹಳೆಯದಾಗುವುದು ಮುಂತಾದವಕ್ಕೂ ಪುನಃ ಅವನ್ನು ಕೊಳ್ಳಲು ಸಹಾಯವಾಗುವುದಕ್ಕೂ ಇಳಿಮಾನದ ಹಣವನ್ನು ತೆಗೆದಿಡುವರು. ತಾವು ಕೆಲಸದಲ್ಲಿ ಉಳಿಯಬೇಕಾದರೆ ತಮಗೆ ಕನಿಷ್ಟಪಕ್ಷ ಸರಾಸರಿ ಇಷ್ಟು ವರಮಾನ ಬರಬೇಕೆಂದು ಎಣಿಕೆ ಮಾಡಿದ ವರಮಾನವನ್ನು (Normal profits) ತೆಗೆದಿಡುವರು. ಇವೆಲ್ಲ ಕಳೆದುಳಿದರೆ ಅದಕ್ಕೆ ನಿವ್ವಳಲಾಭ ಎನ್ನುವರು. ಒಬ್ಬ ವ್ಯಕ್ತಿ ಸ್ವಂತವಾಗಿ ತನ್ನ ಹಣದಿಂದಲೇ ಕೆಲಸ ಮಾಡಿದರೆ ಲಾಭವೆಲ್ಲಾ ಆತನಿಗೇ ಬರುತ್ತದೆ. ಹಣಕ್ಕೆ ಬಡ್ಡಿ, ಶ್ರಮಕ್ಕೆ ಪ್ರತಿಫಲ, ಮುಂದಾಲೋಚನೆ ಸಾಹಸಗಳಿಗೆ ಪ್ರತಿಫಲ, ಎಲ್ಲವನ್ನೂ ತಾನೇ ಅನುಭವಿಸಬಹುದು. ಪಾಲುದಾರರಾಗಿ ಕೆಲವರು ಕೆಲಸ ಮಾಡುತ್ತಿದ್ದರೆ ಎಲ್ಲ ಖರ್ಚುಗಳೂ ಕಳೆದು ಉಳಿದ ಹಣ ಪಾಲುದಾರರಲ್ಲಿ ಹಂಚಿಕೆಯಾಗುವುದು. ಸಹಕಾರ ಸಂಘಗಳಲ್ಲಿ ಖರ್ಚು ಕಳೆದು ಆಪದ್ಧನವನ್ನು ತೆಗೆದಿಟ್ಟ ಮೇಲೆ ಬರುವ ನಿವ್ವಳ ಲಾಭವನ್ನು ಭಾಗಸ್ಥರಾದ ಸದಸ್ಯರಿಗೆ ಡಿವಿಡೆಂಡಿನ ರೂಪದಲ್ಲಿ ಹಂಚುವರು. ಕೂಡು ಬಂಡವಾಳದ ಸಂಸ್ಥೆಗಳಲ್ಲಿಯೂ ಹೀಗೆಯೇ. ಆದರೆ ಅಲ್ಲಿ ಮೂರು ನಾಲ್ಕು ಬಗೆಯ ಷೇರುದಾರರಿರುವಾಗ ಡಿಬೆನ್‌ಚರ್‌ದಾರರಿಗೆ ಕೊಡುವ ಬಡ್ಡಿ ಇಷ್ಟು ಎಂದು ಮೊದಲು ವರಮಾನದಲ್ಲಿಯೇ ತೆಗೆದಿಡವರು. ಆಮೇಲೆ ಲಾಭದಲ್ಲಿ ಮೊದಲನೆಯ ಹಕ್ಕು ಪ್ರಿಫರೆನ್ಸ್ ಷೇರುದಾರರಿಗೆ. ಇವರಿಗೂ ಅನೇಕ ಕಡೆ ಕೀಳೆಂದರೆ ಶೇಕಡ ಇಷ್ಟರಂತೆ ಕೊಡಬೇಕು ಎಂಬ ನಿರ್ಬಂಧವಿರುವುದುಂಟು. ಉಳಿದುದೆಲ್ಲಾ ಸಾಧಾರಣ ಷೇರುದಾರರಲ್ಲಿ ಹಂಚಿಕೆಯಾಗುವುದು. ಉಳಿಯದೆ ನಷ್ಟವಾದರೆ ಇವರಿಗೆ ಏನೂ ದೊರೆಯದು. ನಷ್ಟ ತಲೆಯಮೇಲೆ ಬೀಳುವುದು

ಸ್ವತಂತ್ರವಾಗಿ ಕೆಲಸಮಾಡುವ ಅನೇಕ ಸಾಹುಕಾರರಿಗೆ ಬರುವ ಒಟ್ಟು ಲಾಭವೆಂಬುದರಲ್ಲಿ ಅನೇಕ ಇತರ ಬಾಬುಗಳಿಗಾಗಿ ಇತರರಿಗೆ ಹೋಗಬೇಕಾಗಿದ್ದ ಹಣ ಅವರಿಗೇ ಬರುವುದು. ಶುದ್ಧ ಲಾಭವೆಂಬುದು ಪೂರ್ತ ಸಾಹಸಕ್ಕೆ ಪ್ರತಿಫಲಮಾತ್ರ.

---

೮. ಸರ್ಕಾರದ ಆಯವ್ಯಯಗಳು

ಸರ್ಕಾರಕ್ಕೆ ಹಣವನ್ನು ಏಕೆ ಒದಗಿಸಬೇಕು

ಸಮಾಜದ ಅಭಿವೃದ್ಧಿಗೆ ಸಂಬಂಧಿಸುವ ಯಾವ ಕಾರ್ಯ ನಡೆಯ ಬೇಕಾದರೂ ಸರ್ಕಾರದ ಸಹಾಯ ಬೇಕು. ಸರ್ಕಾರ ದಕ್ಷವಾಗಿ ಕೆಲಸ ಮಾಡದಾದರೆ ಪ್ರಜೆಗಳ ಪ್ರಾಣ, ಮಾನ, ಆಸ್ತಿಗಳು ರಕ್ಷಿತವಾಗಲಾರವು. ಜನ ಜೀವನ ಸುಸೂತ್ರವಾಗಿ ನಿರಾತಂಕವಾಗಿ ನಡೆಯಬೇಕಾದರೆ ದೇಶದಲ್ಲಿ ಸುರಕ್ಷಣೆಬೇಕು ; ಶಾಂತಿ ಸಮಾಧಾನಗಳು ಇರಬೇಕು. ನ್ಯಾಯದ ಶಿಸ್ತು ಏರ್ಪಟ್ಟು ಕೆಡುಕರನ್ನೂ ಪುಂಡರನ್ನೂ ಅಡಗಿಸಿಡುವುದು ಸರ್ಕಾರದ ಕೆಲಸ. ಪ್ರಜೆಗಳ ಸ್ವಾತಂತ್ರ್ಯವನ್ನೂ ಹಕ್ಕುಗಳನ್ನೂ ಕಾಪಾಡಿ ಬಲಿಷ್ಠರು ಅಶಕ್ತರನ್ನು ತುಳಿಯದಂತೆಯೂ ಸುಲಿಯದಂತೆಯೂ ಅವರವರು ಕಷ್ಟಪಟ್ಟು ಗಳಿಸಿದುದನ್ನು ಅವರವರೇ ಅನುಭವಿಸುವಂತೆಯೂ ನ್ಯಾಯ ನಿಬಂಧನೆಗಳು ಏರ್ಪಡಬೇಕು. ಆದುದರಿಂದಲೇ ಎಲ್ಲ ದೇಶಗಳಲ್ಲಿಯೂ ಸರ್ಕಾರ ರಚಿತವಾಗಿ ಅದಕ್ಕೆ ಬೇಕಾದ ಎಲ್ಲ ಶಕ್ತಿಯನ್ನೂ ಅದು ಪಡೆಯಲು ಅನುಕೂಲವಾಗುವಂತೆ ಪ್ರಜೆಗಳು ಅದಕ್ಕೆ ಬೆಂಬಲ ಕೊಡುತ್ತಿರುವುದು ; ಅದಕ್ಕೆ ವಿಧೇಯರಾಗಿ ಅದರ ವೆಚ್ಚಕ್ಕೆ ಹಣ ಒದಗಿಸುತ್ತಿರುವುದು. ಸರ್ಕಾರ ಪ್ರಜೆಗಳ ಪ್ರತಿನಿಧಿ; ಸಮಾಜದ ಕಣ್ಣು ; ರಾಜ್ಯರಕ್ಷಣೆಯ ಕೈ, ಅದರ ಮೇಲ್ಮೆಯನ್ನು ಸಾಧಿಸುವ ಯಂತ್ರ ; ಅದರ ವೈರಿಗಳನ್ನು ನಿವಾರಿಸುವ ಆಯುಧ ; ಅದರ ಮಂಗಳವನ್ನು ನಡಸುವ ಅಧಿಕಾರಿವರ್ಗ, ಸೇವಕವರ್ಗ. ಮೈಸೂರು ಸರ್ಕಾರಕ್ಕೂ ಇದೇ ಧ್ಯೇಯ; ಇದೇ ಕರ್ಮ. ಅದರ ಆಯವ್ಯಯ ರೀತಿಗಳಲ್ಲಿ ಕೆಲವನ್ನು ಇಲ್ಲಿ ವರ್ಣಿಸಲಾಗಿದೆ.

ಹುಟ್ಟುವಳಿ

ಸಂಸ್ಥಾನದ ಹುಟ್ಟುವಳಿ ವರುಷಕ್ಕೆ ಸುಮಾರು ಮೂರೂವರೆ ಕೋಟಿ ರೂಪಾಯಿಗಳು. ಆದಾಯಕ್ಕೂ ವೆಚ್ಚಕ್ಕೂ ಅಲ್ಲಿಗಲ್ಲಿಗೆ ಸರಿಹೋಗುವುದು.

ಪ್ರತಿಯೊಂದು ಲೆಕ್ಕದವರ್ಷದ * ಆರಂಭದಲ್ಲಿಯೂ ಹಣಕಾಸಿನ ಇಲಾಖೆಯವರು ಒಂದು ಅಂದಾಜು ಪಟ್ಟಿಯನ್ನು ತಯಾರಿಸಿ ಹಿಂದಿನವರ್ಷ ಇಷ್ಟು ಹುಟ್ಟುವಳಿ ಆಯಿತು ; ಇಷ್ಟು ಖರ್ಚಾಯಿತು ; ಮುಂದಿನ ವರ್ಷ ಇಷ್ಟು ಆಗಬೇಕಾಗಿದೆ, ವರಮಾನ ಇಷ್ಟು ಬರಬಹುದು ಎಂದು ಸರ್ಕಾರಕ್ಕೆ ತಿಳಿಸುವರು. ಈ ಅಂದಾಜು ಪಟ್ಟಿಯನ್ನು ತಯಾರಿಸುವುದಕ್ಕೆ ಮೊದಲು ಸರ್ಕಾರದ ಎಲ್ಲ ಇಲಾಖೆಗಳಿಂದಲೂ ಅವರ ವರಮಾನ ವೆಚ್ಚಗಳ ಪಟ್ಟಿಯನ್ನು ತರಿಸಿಕೊಂಡು ಮುಂದಿನವರ್ಷ ಅವರಿಗೆ ಬೇಕಾಗುವ ಹಣ ಎಷ್ಟು ಎಂಬ ಅಂದಾಜನ್ನು ತಿಳಿದುಕೊಳ್ಳುವರು.

ಆಯವ್ಯಯದ ಅಂದಾಜುಗಳು (Budget Estimates)

ಈ ಅಂದಾಜುಗಳನ್ನು ಸರ್ಕಾರದವರು ವರ್ಧಂತಿಯ ಅಧಿವೇಶನದಲ್ಲಿ ಪ್ರಜಾಪ್ರತಿನಿಧಿಗಳಿಗೆ ವಿವರಿಸಿ ಅವರ ಒಪ್ಪಿಗೆಯನ್ನೂ, ಸಲಹೆಯನ್ನೂ ತೆಗೆದುಕೊಂಡು ಹಣ ಸಂಗ್ರಹವನ್ನೂ ವೆಚ್ಚವನ್ನೂ ಮಾಡಲು ಅನುಮತಿ ಪಡೆಯುತ್ತಾರೆ. ಪ್ರತಿನಿಧಿ ಸಭೆಯ ದಸರಾ ಅಧಿವೇಶನದಲ್ಲಿ ಆವರೆಗೆ ಸರ್ಕಾರಕ್ಕೆ ಹುಟ್ಟುವಳಿಯಾದ ಹಣದ ಆಧಾರದ ಮೇಲೂ, ವರ್ಷದ ಮಳೆ ಬೆಳೆಗಳ ಸೂಚನೆಯಮೇಲೂ ಹಿಂದೆ ಮಾಡಿದ ಅಂದಾಜನ್ನು ಪರಿಷ್ಕರಿಸಿ ಬೇಕಾದರೆ ವ್ಯತ್ಯಾಸಮಾಡಿ ಆ ಲೆಕ್ಕಗಳನ್ನು ಸಭೆಯ ಪರಾಂಬರಿಕೆಗಾಗಿ ಇಡುತ್ತಾರೆ. ವರ್ಷದ ಕಡೆಯಲ್ಲಿ ಇಷ್ಟೇ ಆದಾಯ, ಇಷ್ಟೇ ವೆಚ್ಚ ; ಇವನ್ನು ಹೀಗೇ ಮಾಡಲಾಯಿತು ಎಂಬ ವರದಿಯನ್ನೂ ಅಂಕಿಗಳನ್ನೂ ಪ್ರಕಟಿಸುತ್ತಾರೆ.

ಸಮಾನ್ಯ ಸಂಗತಿಗಳು

ಮೈಸೂರಿನ ಆಯವ್ಯಯ ವಿಚಾರವಾಗಿ ಕೆಲವು ಸಾಮಾನ್ಯ ಸಂಗತಿಗಳನ್ನು ಮೊದಲೇ ತಿಳಿಸಬಹುದು.

೧೯೦೩–೪ರಿಂದ ಈಚೆಗೆ ಹುಟ್ಟುವಳಿ ಹೆಚ್ಚಿದೆ. ಜನರಮೇಲೆ ಹೆಚ್ಚು ತೆರಿಗೆ ಹಾಕುವುದರಿಂದಲೂ ಅಬ್ಕಾರಿ (ಸೇಂದಿ) ಬಾಬಿನಲ್ಲಿಯೂ ಈ

* ಲೆಕ್ಕದ ವರ್ಷವೆಂದರೆ ಒಂದು ಜೂಲೈ ತಿಂಗಳಿಂದ ಹಿಡಿದು ಇನ್ನೊಂದು ಜೂಲೈ ತಿಂಗಳ ವರೆಗೆ.

ಹೆಚ್ಚು ಹುಟ್ಟುವಳಿ ಬಂದಿತು. ಈಗ ಕೆಲವು ವರ್ಷಗಳಿಂದ ಸುಮಾರು ಒಂದೇ ಮಟ್ಟಿಗೆ ಇದೆ ; ಕೆಲವು ಬಾಬುಗಳಲ್ಲಿ ಕಡಮೆಯಾಗುತ್ತಲೂ ಇದೆ. ಸರ್ಕಾರದ ವೆಚ್ಚ ವರ್ಷೇ ವರ್ಷೇ—ಕೆಲವು ವರ್ಷಗಳಲ್ಲಿ ಮಿತಿಮೀರಿ—ಹೆಚ್ಚಿದೆ. ಕೆಲವು ಬಾಬುಗಳಲ್ಲಿ ಕಡಮೆಯಾದ ವೆಚ್ಚ ಇತರ ಬಾಬುಗಳಲ್ಲ ಏರಿ ಹೋಗಿದೆ. ಈಗ ಇರುವ ತೆರಿಗೆಗಳು ಕಾಲಕ್ಕೆ ತಕ್ಕಂತೆ ಏರಿ ತಗ್ಗಿ ಹೆಚ್ಚು ಹುಟ್ಟುವಳಿಯನ್ನು ತರಲಾರವು. ಜನರು ತೆರಿಗೆ ತೆರುವ ಶಕ್ತಿ, ಎಂದರೆ ವರಮಾನ, ಹೆಚ್ಚಿಲ್ಲ.

ಸರಕಾರ ದೊಡ್ಡ ನೀರಾವರಿ ಮತ್ತು ಕೈಗಾರಿಕೆ ಕೆಲಸಗಳನ್ನು ಕೈಕೊಂಡಿರುವುದರಿಂದಲೂ, ಅವಕ್ಕಾಗಿ ಸಾಲ ತೆಗೆದಿರುವುದರಿಂದಲೂ ಸಾಲಕ್ಕೆ ಬಡ್ಡಿ, ಅಪದ್ಧನ ಮುಂತಾದ ಅಂಶ ಹೆಚ್ಚಿ ವರಮಾನದಲ್ಲಿ ಉಳಿತಾಯವಾಗಬಹುದಾದ ಭಾಗವನ್ನು ನುಂಗುತ್ತಿವೆ. ಸುಮಾರು ಎಲ್ಲ ಇಲಾಖೆಗಳಲ್ಲಿಯೂ ಸಿಬ್ಬಂದಿಯ ವೆಚ್ಚ ಹೆಚ್ಚಿರುವುದು. ವಿಶೇಷವಾಗಿ ವಿದ್ಯಾಭ್ಯಾಸ, ಕೈಗಾರಿಕೆಗಳು, ಜನಾರೋಗ್ಯ, ನಗರ ನೈರ್ಮಲ್ಯ ಮುಂತಾದ ಅಭಿವೃದ್ಧಿ ಶಾಖೆಗಳಲ್ಲಿ ವೆಚ್ಚ ಹೆಚ್ಚಿದೆ.

ಹುಟ್ಟುವಳಿಯ ಬಾಬುಗಳು

ಹುಟ್ಟುವಳಿಯ ಬಹುಭಾಗ ಭೂಗಂದಾಯದಿಂದ ಬರುತ್ತಿದೆ. ಎರಡನೆಯ ಬಾಬು ಅಬ್ಕಾರಿ, ಮೂರನೆಯದು ಅರಣ್ಯಶಾಖೆಯದು.

ಭೂಗಂದಾಯ–ಸರ್ಕಾರಿ ಜಮೀನುಗಳ ಮಾರಾಟ, ರಯತ್ವಾರಿ ಜಮೀನುಗಳಿಂದ ಬರುವ ಕಂದಾಯ, ಪರಾಧೀನವಾದ ಜಮೀನುಗಳಿಂದ ಬರುವ ಕ್ವಿಟ್‌ರೆಂಟ್, ಜೋಡಿ ; ಖಾಯಂಗುತ್ತ ಭೂಮಿಯಿಂದ ಬರುವ ಗುತ್ತಿಗೆಯ ಹಣ ; ಗೋಮಾಳಗಳ ಗುತ್ತಿಗೆ ; ಸರ್ಕಾರಿ ಭೂಮಿಗಳಲ್ಲಿರುವ ಕಲ್ಲು ಮರ ಮುಂತಾದ ವಸ್ತುಗಳ ಮಾರಾಟದಿಂದ ಬರುವ ಹಣ, ದಂಡಗಳು ; ಸ್ಥಳೀಯ ಸಂಸ್ಥೆಗಳವರಿಗಾಗಿ ಸರ್ಕಾರದವರು ಎತ್ತುವ ಇತರ ತೆರಿಗೆಗಳು_ಈ ಬಗೆಯಲ್ಲಿ ಭೂಮಿಯಿಂದ ಸರ್ಕಾರಕ್ಕೆ ಆದಾಯ ಬರುತ್ತದೆ. ಮನೆ, ಅಂಗಡಿ ಮುಂತಾದವುಗಳ ಮೇಲೆ ವಸೂಲು ಮಾಡುವ ಮೊಹತರ್ಫಾ ಬಾಬಿನಲ್ಲಿ ಸ್ವಲ್ಪ ಭಾಗವೂ ಭೂಮಿಯಿಂದಲೇ ಬರುವುದೆನ್ನಬಹುದು.

ಈ ತೆರಿಗೆಯೆಲ್ಲಾ ಸಾಧಾರಣವಾಗಿ ಸರ್ಕಾರದವರು ಹಾಕಿದವರ ತಲೆಯ ಮೇಲೆಯೇ ನೇರವಾಗಿ ಬೀಳುತ್ತದೆ. ಅವರು ಇತರರ ಮೇಲೆ ಇವನ್ನು ತಳ್ಳಲು ಸುಲಭವಲ್ಲ.

ಕಿಸ್ತು

ಮೈಸೂರು ಭೂಗಂದಾಯದ ಕಿಸ್ತು ಬೊಂಬಾಯಿಯಲ್ಲಿರುವ ಪದ್ಧತಿಯನ್ನು ಅನುಸರಿಸಿದೆ. ಭೂಮಿಗಳೆಲ್ಲ 'ಸರ್ವೆ' ಅಳೆತಕ್ಕೆ ಒಳಪಟ್ಟಿವೆ. ಸರ್ಕಾರದವರು ೩೦ ವರ್ಷಕ್ಕೊಂದುಸಲ ಭೂಮಿಯನ್ನು ಅಳೆಸಿ ಭೂಗುಣದಮೇರೆಗೆ ಎಕರೆಗೆ ಇಷ್ಟು ಎಂದು ಕಂದಾಯವನ್ನು ನಿರ್ಣಯಿಸುತ್ತಾರೆ. ಮುಂದಿನ ಸರ್ವೆ ಅಳತೆ ಆಗುವವರೆಗೂ—ಅಷ್ಟೇ ಕಂದಾಯವೆಂದು ಸ್ವತ್ತಿನ ಒಡೆಯನಿಗೆ ತಿಳಿದಿರುತ್ತದೆ.

ಭೂ ಗಂದಾಯ ನಿರ್ಧರವಾಗುವ ರೀತಿ

ಸರ್ಕಾರಕ್ಕೆ ಬರಬೇಕಾದ ಕಂದಾಯವನ್ನು ನಾಲ್ಕು 'ಕಿಸ್ತು' ಕಂತುಗಳಲ್ಲಿ ವಸೂಲುಮಾಡುತ್ತಾರೆ. ಮೊದಲನೆಯ ಕಂತು ದವಸ ಕೈಗೆ ಬಂದ ಸ್ವಲ್ಪಕಾಲಕ್ಕೆ ಆರಂಭವಾಗುವುದು. ಗ್ರಾಮದ ಗೌಡ ಅಥವಾ ಶಾನುಭೋಗರ ವಶಕ್ಕೆ ಕಂದಾಯದ ಹಣ ಪಾವತಿಯಾಗುತ್ತದೆ. ಅವರು ತಾಲ್ಲೂಕು ಖಜಾನೆಗೆ ಅದನ್ನು ಕಟ್ಟಿಕೊಳ್ಳುತ್ತಾರೆ. ಕಂದಾಯವನ್ನು ನಿರ್ಧರಿಸುವವರು ಭೂಮಿಯ ಹುಟ್ಟುವಳಿ ಇಷ್ಟಾಗಬಹುದೆಂದೂ ಇಷ್ಟಕ್ಕೆ ಹೆಚ್ಚಿಲ್ಲದೆ ಕಡಮೆಯಿಲ್ಲದೆ ಜಮೀನು ಕಂದಾಯ ತೆರಬಲ್ಲುದೆಂದೂ, ಆ ಮಿತಿಗೆ ಒಳಪಟ್ಟು ಇಷ್ಟಕ್ಕೆ ಕಡಮೆಯಾಗದಂತೆ ಕಂದಾಯ ಹಾಕಬಹುದೆಂದೂ ಸರ್ಕಾರಕ್ಕೆ ವರದಿ ಕೊಡುತ್ತಾರೆ. ಫಸಲು ಕೆಟ್ಟ ವರುಷಗಳಲ್ಲಿಯೂ ಅನಾಹುತಗಳು ಸಂಭವಿಸಿದ ವರ್ಷಗಳಲ್ಲಿಯೂ ಸರ್ಕಾರದವರು ಕಂದಾಯವನ್ನು ಇಳಿಸಬಹುದು, ಬಿಟ್ಟುಕೊಡಬಹುದು.

ಕೆಲವು ವಿಧಿಗಳನ್ನು ಅನುಸರಿಸಿ ಭೂಗಂದಾಯ ಎತ್ತುವರು. ತೆರಿಗೆ ಇಷ್ಟೇ ಎಂದು ನಿಶ್ಚಿತವಾಗಿರುತ್ತದೆ. ಅವನ್ನು ತೆರುವ ಅನುಕೂಲಗಳಿವೆ. ಸಾಧಾರಣವಾಗಿ ಕುಳದಿಂದ ಕುಳಕ್ಕೆ ಅನ್ಯಾಯವಾಗದಂತೆಯೂ ಪಕ್ಷಪಾತವಿಲ್ಲದೆಯೂ, ತೆರಿಗೆ ಏರ್ಪಟ್ಟಿದ್ದರೂ ಕೊಡುವವರ ಯೋಗ್ಯತೆಗೆ ತಕ್ಕಹಾಗೆ ಇದೆಯೆ, ಮೀರಿದೆಯೆ ಎಂಬ ಅಂಶದಲ್ಲಿ ಭಿನ್ನಾಭಿಪ್ರಾಯಗ

ಳುಂಟು. ಜಮೀನಿಂದ ಆಗುತ್ತಿರುವ ಹುಟ್ಟುವಳಿ ಹೆಚ್ಚುತ್ತಿರುವ ವೇಗಕ್ಕಿಂತ ಅದನ್ನು ವಸೂಲುಮಾಡಲು ಆಗುತ್ತಿರುವ ಖರ್ಚು ಹೆಚ್ಚಾಗಿ ಏರುತ್ತಿದೆಯೆಂದು ಲೆಕ್ಕಗಳು ತೋರಿಸುತ್ತವೆ.

ನೀರಿನ ತೆರಿಗೆ

ಕೇವಲ ಭೂ—ಗಂದಾಯದ ಜೊತೆಗೆ ಸರ್ಕಾರದವರು ಜಮೀನಿಗೆ ಒದಗಿಸುವ ನೀರಿನ ಮೇಲೆಯೂ ತೆರಿಗೆ ಹಾಕುತ್ತಾರೆ. ಕೆರೆ, ನಾಲೆ ಕಾಲುವೆ ಮುಂತಾದವುಗಳಿಂದ ಹೀಗೆ ಒದಗಿಸುವ ನೀರಿನಮೇಲೆ ಬೀಳುವ ತೆರಿಗೆ ಚಂದಾ ರೂಪದಲ್ಲಿಯಾಗಲಿ (Contribution) ತೆರಿಗೆಯ ರೂಪದಲ್ಲಿಯಾಗಲಿ ಇರುತ್ತದೆ. ನೀರಿನ ವಸತಿಯಿಂದ ಭೂಮಿಯ ಬೆಳೆ ಹೆಚ್ಚುವುದಾದುದರಿಂದ ಸರ್ಕಾರದ ವೆಚ್ಚಕ್ಕೆ ಸ್ವತ್ತಿನ ಯಜಮಾನನು ತೆರಿಗೆ ತೆರುವುದು ನ್ಯಾಯವಾಗಿಯೇ ಇದೆ.

ಮುಂದಿನ ಸರ್ವೆ ಅಳತೆಯೂ, ಕಂದಾಯದ ನಿರ್ಧರವೂ ಆಗುವವರೆಗೂ ಭೂಗಂದಾಯ ಬೇರೆ ನೀರಿನತೆರಿಗೆ ಬೇರೆ ಎಂದು ಎರಡೂ ಪ್ರತ್ಯೇಕವಾಗಿ ಲೆಕ್ಕಗಳಲ್ಲಿ ತೋರಿಸಲ್ಪಡುತ್ತಿದ್ದು ಮುಂದಿನ ಶಿಸ್ತಿನಲ್ಲಿ (Settlement) ಎರಡೂ ಒಟ್ಟಿಗೆ ಭೂಗಂದಾಯವೆಂಬ ಒಂದೇ ಬಾಬಿನಲ್ಲಿ ಸೂಚಿಸಲ್ಪಡುತ್ತವೆ.

ಅಬ್ಕಾರಿ ಹುಟ್ಟುವಳಿ

ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಪಾನನಿರೋಧ ಪ್ರಯತ್ನ ನಡೆಯುತ್ತಿದೆ. ಮದ್ಯಪಾನದಿಂದ ಜನ ಜೀವನದಲ್ಲಿ ಕೇಡು, ನಷ್ಟ, ಎಂದು ಎಲ್ಲರೂ ಬಲ್ಲರು. ಅವುಗಳ ಸೇವನೆ ಸಂಪೂರ್ಣವಾಗಿ ನಿಲ್ಲುವವರೆಗೂ ಸರ್ಕಾರದ ಕೈ ಅವುಗಳ ಮೇಲಿರಬೇಕು. ನಿಷಾದ್ರವ್ಯಗಳ ಸೇವನೆ ಕಡಮೆಯಾಗಲೆಂಬ ಉದ್ದೇಶದಿಂದ ಅನೇಕ ನಿರ್ಬಂಧಗಳನ್ನು ಮಾಡಿರುವುದು ವಾಡಿಕೆ. ಬ್ರಿಟಿಷ್ ಇಂಡಿಯಾದಲ್ಲಿನಂತೆಯೇ ನಮ್ಮಲ್ಲಿಯೂ ಅಬ್ಕಾರಿ ಬಾಬಿನಿಂದ ಸರ್ಕಾರಕ್ಕೆ ಬಹಳ ಹಣ ಬರುತ್ತಿದೆ. ಪಾನನಿಂತರೆ ಈ ವರಮಾನ ನಿಲ್ಲುವುದು.

ವಿಧಗಳು

ಆಬ್ಕಾರಿ ತೆರಿಗೆಗಳಲ್ಲಿ ಎರಡುವಿಧ: ಒಂದು ಸರ್ಕಾರದ ಹುಟ್ಟುವಳಿಗಾಗಿ ಮಾತ್ರ ಹಾಕಿದ್ದು; ಇನ್ನೊಂದು ಕೆಲವು ಪದಾರ್ಥಗಳ ಸೇವನೆ ಕಡಮೆಯಾಗಲಿ ಎಂದು ಹಾಕಿದ್ದು. ಉಪ್ಪು ಮತ್ತು ಹತ್ತಿಯ ಬಟ್ಟೆಗಳ ಮೇಲೆ ಹಾಕಿದ ಕರಗಳು ಮೊದಲನೆಯ ಬಗೆಗೆ ಉದಾಹರಣೆ; ಮಾದಕ ದ್ರವ್ಯಗಳ ಮೇಲೆ ಹಾಕಿದವು ಎರಡನೆಯದಕ್ಕೆ ಉದಾಹರಣೆ. ಮೊದಲನೆಯ ಬಗೆಯವು ಈಗ ಮೈಸೂರಿನಲ್ಲಿ ಪ್ರಚಾರದಲ್ಲಿಲ್ಲ; ಎರಡನೆಯ ಬಗೆಯವೆಂದರೆ ಹೆಂಡ ಸಾರಾಯಿ (ಮೊದಲಾದ ನಾಡುದ್ರಾವಕಗಳು), ಅಕ್ಕೀಭೋಜ, ವಿದೇಶಿ ದ್ರಾವಕಗಳು, ಗಾಂಜ, ಅಫೀಮು ಇತ್ಯಾದಿ.

ಸ್ವರೂಪ

ನಾಡು ದ್ರಾವಕಗಳು, ಬೀರ್ ಹೆಂಡ ಮುಂತಾದುವುಗಳಿಂದ ಬರುವ ಹುಟ್ಟುವಳಿ ಕರರೂಪದಲ್ಲಿ ಸ್ವಲ್ಪವೂ, ಅಂಗಡಿ ಬಾಡಿಗೆಗಳ ರೂಪದಲ್ಲಿ ಸ್ವಲ್ಪವೂ ಬರುತ್ತದೆ. ವಿದೇಶಿ ದ್ರಾವಕಗಳ ಮೇಲೆ ಕರವಿಲ್ಲದಿದ್ದರೂ ಅವುಗಳ ಮಾರಾಟಕ್ಕೆ ದುಡ್ಡುಕೊಟ್ಟು ಲೈಸೆನ್ಸ್ ತೆಗೆದುಕೊಳ್ಳಬೇಕು. ಸರ್‌ಛಾರ್ಜ್ ಫೀ ಎಂಬುದನ್ನೂ ತೆರಬೇಕು. ಅಫೀಮು ಸರ್ಕಾರದವರ ಸರ್ವಾಧಿಕಾರದಲ್ಲಿರುವುದರಿಂದ ಅದರಿಂದ ಲೈಸೆನ್ಸ್ ರುಸುಮೂ ಮಾರಾಟದ ಲಾಭವೂ ಎರಡೂ ಬರುತ್ತವೆ.

ಹುಟ್ಟುವಳಿಯ ಲಕ್ಷಣಗಳು

ಆಬ್ಕಾರಿ ವರಮಾನದ ಸಂಬಂಧದಲ್ಲಿ ಮೂರು ಸಂಗತಿಗಳನ್ನು ತಿಳಿಯಬಹುದು:

(೧) ೧೯೦೩_೪ರಿಂದ ೧೧_೧೨ರ ವರೆಗೂ ಈ ಬಾಬಿನಲ್ಲಿ ಹುಟ್ಟುವಳಿ ಸಮನಾಗಿತ್ತು. ಆಮೇಲೆ ಏರಿ ಏರಿ ೨೧–೨೨ರಲ್ಲಿ ಚರಮ ಸ್ಥಿತಿಗೆ ಬಂದಿತು. ಆಗಿನಿಂದ ಹಿಡಿದು ೨೬_೨೭ರ ವರೆಗೂ ಕ್ರಮ ಕ್ರಮವಾಗಿ ಕಡಮೆಯಾಗಿ ಪುನಃ ಏರುತ್ತಿರುವ ಸೂಚನೆ ಕಾಣುತ್ತಿದೆ.

(೨) ಕರದ ರೂಪದಲ್ಲಿ ಬರುವ ಹಣಕ್ಕಿಂತಲೂ ಅಂಗಡಿ ಬಾಡಿಗೆ ಮುಂತಾಗಿ ಬರುವುದರ ಪ್ರಮಾಣವೇ ಹೆಚ್ಚು.

(೩) ಅಂಗಡಿ ಬಾಡಿಗೆಯ ವಸೂಲಿಯಲ್ಲಿ ಹೆಂಡಕ್ಕೂ ಸಾರಾಯಿಗೂ ವ್ಯತ್ಯಾಸವಿದೆ ; ಸಾರಾಯಿಂದ ಬರುವ ಕರ ಅದರ ಒಟ್ಟು ಹುಟ್ಟುವಳಿಯಲ್ಲಿ ಮೂರರಲ್ಲಿ ಎರಡು ಭಾಗ. ಹೆಂಡದಲ್ಲಿ, ತೆರಿಗೆ ಒಟ್ಟು ಹುಟ್ಟುವಳಿಯ ಮೂರರಲ್ಲಿ ಒಂದುಭಾಗ ಮಾತ್ರ.

ಪಟ್ಟಣಗಳಲ್ಲಿ ಸಾರಾಯಿ ಕುಡಿತವೂ ಹಳ್ಳಿಗಳಲ್ಲಿ ಹೆಂಡದ ಕುಡಿತವೂ ವಿಶೇಷ. ವ್ಯವಸಾಯಗಾರರು ಕುಡಿಯುವುದು ಹೆಚ್ಚು ನಿಷಾ ತಾರದ ಹೆಂಡ. ಕೈಗಾರಿಕೆ ಕಾರ್ಖಾನೆ ಪಟ್ಟಣಗಳಲ್ಲಿ ಕುಡಿಯುವುದು ಹೆಚ್ಚು ಮತ್ತನ್ನು ತರುವ ಸಾರಾಯಿ. ಸಾರಾಯಿ ಅಂಗಡಿಗಳೂ ಹೆಂಡದ ಅಂಗಡಿಗಳೂ ಕಡಮೆಯಾಗುತ್ತಿರುವುವು ; ಆದರೆ ಗಾಂಜಾ ಅಂಗಡಿಗಳು ಆಗುತ್ತಿಲ್ಲ. ದ್ರಾವಕಗಳಿಗೆ ಹೆಚ್ಚು ಹಣ ತೆರಬೇಕಾಗಿರುವುದರಿಂದ ಗಾಂಜಾ ಸೇವನೆ ಹೆಚ್ಚುತ್ತಿರುವಂತಿದೆ. ೧೯೩೫–೬ರಿಂದ ನಿರ್ಬಂಧಗಳು ಬಿಗಿಯಾಗಿ ಇದೂ ಕಡಮೆಯಾಗುವ ಭರವಸೆ ತೋರುತ್ತಿದೆ.

ವರಮಾನದ ತೆರಿಗೆ

ಈ ಸಂಸ್ಥಾನದಲ್ಲಿ ವರಮಾನದ ತೆರಗೆ ಏರ್ಪಟ್ಟಿದ್ದು ೧೯೨೦ರಲ್ಲಿ. ಇಲ್ಲಿಯೇ ಉತ್ಪತ್ತಿಯಾಗುವ ವರಮಾನ ; ಹೊರಗೆ ಉತ್ಪತ್ತಿಯಾಗಿ ಇಲ್ಲಿನವರಿಗೆ ಬರುವ ವರಮಾನ—ಇವೆರಡರ ಮೇಲೂ ತೆರಿಗೆ ಹಾಕುತ್ತಾರೆ. ವ್ಯವಸಾಯದಿಂದ ಉತ್ಪತ್ತಿಯಾಗುವ ವರಮಾನದ ಮೇಲೆ ಹಾಕಿಲ್ಲ.

ಹಿಂದಿನ ವರ್ಷ ವರಮಾನ ಇಷ್ಟು ಎಂದು ತಿಳಿದುಕೊಂಡು, ಅದರಲ್ಲಿ ಯಜಮಾನನಿಗೆ ಕಡ್ಡಾಯವಾಗಿ ಆಗುವ ಕೆಲವು ಖರ್ಚುಗಳನ್ನು ಕಳೆಯುವರು. ಆ ವರ್ಷದ ನಷ್ಟಗಳು, ತೇಮಾನದ ಹಣ, ವ್ಯಾಪಾರದ ವೆಚ್ಚಗಳು, ವಿಮೆಯ ಕಂತಿಗೆಂದು ಒಟ್ಟು ಆದಾಯದಲ್ಲಿ ಆ ತೆರದಲ್ಲಿ ಒಂದು ಭಾಗ, ಈ ಮೇರೆಗೆ ಕಳೆದು ಉಳಿದ ವರಮಾನದ ಮೇಲೆ ತೆರಿಗೆ ಹಾಕುವರು. ಯಾರು ವರಮಾನದ ತೆರಿಗೆಗೆ ಒಳಪಡುವರೆಂದು ಇಲಾಖೆಯವರು ಊಹಿಸುವರೊ ಅವರಿಂದ ಸಂಪಾದನೆಯ ಸಂಗತಿಗಳನ್ನು ತಿಳಿದುಕೊಳ್ಳುವರು. ಕಂಪನಿಗಳು, ಸರ್ಕಾರಿ ಮೊದಲಾದ ಕಚೇರಿಗಳು, ಇವುಗಳಲ್ಲಿರುವವರ ವರಮಾನದ ಸಂಗತಿಗಳನ್ನು ಸಂಗ್ರಹಿಸುವರು. ಪ್ರಧಾನವಾಗಿ ಈ ತೆರಿಗೆ ಆಯಾ ವ್ಯಕ್ತಿಗಳ ಮೇಲೆಯೇ ಬೀಳುವುದು. ಸ್ಥಳೀಯ

ಅಥವಾ ಸರ್ಕಾರಿ ನೌಕರರ ಸಂಬಳದಿಂದಲೇ ತೆರಿಗೆಯ ಹಣವನ್ನು ಮುರಿದುಕೊಂಡು ಉಳಿದುದನ್ನು ಅವರ ಕೈಗೆ ಕೊಡುವರು.

ವರ್ಷಕ್ಕೆ ರೂ. ೨,೪೦೦ (ಅಥವಾ ತಿಂಗಳೊಂದಕ್ಕೆ ರೂ. ೨೦೦) ಆದರೂ ಸಂಪಾದನೆ ಇದ್ದ ಹೊರತು ಈ ತೆರಿಗೆ ತೆರಬೇಕಾಗಿಲ್ಲ. ಹೆಚ್ಚು ವರಮಾನವಿರುವವರಿಗೆ ಹೆಚ್ಚಾಗಿಯೂ ಕಡಮೆಯಿರುವವರಿಗೆ ಕಡಮೆಯಾಗಿಯೂ ಬೀಳುವುದು ಇದರ ವಿಶೇಷ.

ಒಂದೂವರೆ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟ ವರಮಾನಗಳು ದೇಶದಲ್ಲಿಲ್ಲ. ಹೆಚ್ಚು (ಮೇಲ್ತೆರಿಗೆ) ತೆರಿಗೆ ತೆರುವವರಲ್ಲಿ ಹೊರಗಿನ ಕಂಪನಿಗಳು ಹೆಚ್ಚು ; ಒಟ್ಟು ವರಮಾನದ ತೆರಿಗೆ ತೆರುವವರ ಸಂಖ್ಯೆ ಎಂದರೆ ದೇಶದಲ್ಲಿ ಧನಿಕರ ಸಂಖ್ಯೆ ೫ ಸಾವಿರ ಚಿಲ್ಲರೆ ಮಾತ್ರ ; ದೊಡ್ಡ ವರಮಾನದ ಮೊತ್ತ ಮೂರೇ ಕೋಟಿ ಎಂಬ ಸಂಗತಿಗಳು ಈ ಲೆಕ್ಕಗಳಿಂದ ತಿಳಿಯಬರುತ್ತವೆ

ದೇಶದಲ್ಲಿ ವ್ಯವಸಾಯದಿಂದ ಬರುವ ವರಮಾನಗಳ ಮೇಲೆ ತೆರಿಗೆ ಹಾಕಿದರೆ ಕೂಡ ಇನ್ನೊಂದು ಸಾವಿರ ಜನರಿಂದ ತೆರಿಗೆ ಬಂದೀತು. ವರ್ಷಕ್ಕೆ ರೂ. ೫೦೦ ಗೆ ಮೇಲ್ಪಟ್ಟ ಕಂದಾಯ ತೆರುವವರ ಸಂಖ್ಯೆ ೧,೦೦೦ ಕ್ಕಿಂತ ಹೆಚ್ಚಿಲ್ಲ. ಅವರೆಲ್ಲರಿಂದಲೂ ಬರಬಹುದಾದ ಒಟ್ಟು ತೆರಿಗೆಯೂ ಒಂದು ಲಕ್ಷ ರೂಪಾಯಿಗಳಿಗೆ ಮೀರಲಾರದು ; ಬೇರೆ ಬೇರೆ ಬಗೆಯಾಗಿ ಅವರು ಸರ್ಕಾರಕ್ಕೆ ತೆರುತ್ತಿದ್ದಾರೆ. ವಸೂಲಿಗಾಗಿ ಮಾಡಬೇಕಾದ ಕೆಲಸವೂ ವೆಚ್ಚವೂ ಮಿತಿಮೀರಿ ಆಗುವುದು ಎಂದು ಸದ್ಯಕ್ಕೆ ಈ ಬಗೆಯವರಮಾನಗಳಿಗೆ ರಿಯಾಯಿತಿ ತೋರಿಸಿದ್ದಾರೆ.

ಸ್ಟಾಂಪಿನ ಹುಟ್ಟುವಳಿ

ಸ್ಟಾಂಪುಗಳಲ್ಲಿ ನ್ಯಾಯಶಾಖೆಗೆ ಸೇರಿದವು, ಸಾಧಾರಣ ಸ್ಟಾಂಪುಗಳು ಎಂದು ಎರಡು ಬಗೆ. ಮೊದಲನೆಯದು ಕೋರ್ಟು ಫೀ ರೂಪದಲ್ಲಿ ಬರುವುದು ; ಎರಡನೆಯದು ಕಾಗದ ಪತ್ರಗಳಿಂದ ಲೇವಾದೇವಿ ವ್ಯಾಪಾರಗಳಿಗೆ ಸಂಬಂಧಪಡುವ ಕಾರ್ಯಗಳಲ್ಲಿ ಉಪಯುಕ್ತವಾಗುವುದು. ಆಸಿಗಳು ಕೈ ಕೈ ಬದಲಾಯಿಸುವಾಗಲೂ, ಸಾಲ ಪತ್ರಗಳನ್ನು ಬರೆಯುವಾ

ಗಲೂ ಸ್ಟಾಂಪುಗಳ ಮೇಲೆ ಬರೆಯಬೇಕಾಗಿರುತ್ತದೆ. ಕೋರ್ಟುಫೀಗಳನ್ನು ಸ್ಟಾಂಪು ರೂಪದಲ್ಲಿ ಕಾಗದಗಳ ಮೇಲೆ ಹಚ್ಚಬೇಕು.

ಸಾಧಾರಣ

ಈ ಬಾಬಿನಲ್ಲಿ ಸರ್ಕಾರಕ್ಕೆ ಹುಟ್ಟುವಳಿ ಸುಮಾರು ಎಂಟೂವರೆ ಲಕ್ಷ ರೂಪಾಯಿಗಳು. ನ್ಯಾಯ ಶಾಖೆಗೆ ಸೇರಿದ ಸಾಧಾರಣ ಸ್ಟಾಂಪುಗಳಿಂದಲೂ, ಸ್ಟಾಂಪು ಹೆಚ್ಚದಿರುವ ಅಥವಾ ಕಡಮೆ ಸ್ಟಾಂಪಿನ ಪತ್ರಗಳ ಮೇಲೆ ಹಾಕುವ ತೆರಿಗೆಗಳಿಂದಲೂ ಸಾಧಾರಣ ಸ್ಟಾಂಪುಗಳ ಹುಟ್ಟುವಳಿ ಬರುತ್ತದೆ.

ಕೋರ್ಟು ಫೀ

ಕ್ರಿಮಿನಲ್ ಕೇಸುಗಳಲ್ಲಿ ವಾದಿ ತೆರಬೇಕಾಗಿರುವ ಸ್ಟಾಂಪು ಹಣ ಅತಿ ಸ್ವಲ್ಪ ; ಸಿವಿಲ್ ಕೇಸುಗಳಲ್ಲಿಯೇ ಹೆಚ್ಚು. ತಮ್ಮ ಹಕ್ಕುಬಾಧ್ಯತೆ ಲಾಭ ನಷ್ಟ ಮೊದಲಾದವುಗಳ ವ್ಯವಸ್ಥೆಗಾಗಿ ನ್ಯಾಯಶಾಲೆಗಳಿಗೆ ಹೋಗಿ ಸರ್ಕಾರದವರು ಮಾಡಿಕೊಡುವ ತೀರ್ಮಾನಗಳಿಗಾಗಿ ಜನರು ಕೊಡುವ ರುಸುಮು ಇದು. ಜನರು ತಮ್ಮ ತಮ್ಮಲ್ಲಿಯೇ ರಾಜಿಮಾಡಿಕೊಳ್ಳುವ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಲೆಂದು, ವ್ಯಾಜ್ಯಗಳಿಗಾಗಿ ಕೋರ್ಟುಗಳಿಗೇರಿ ಕಷ್ಟ, ನಷ್ಟ ಪಡುವುದು ತಪ್ಪಲೆಂದೂ ಕೋರ್ಟು ಫೀ ಸ್ಟಾಂಪುಗಳ ಬೆಲೆಯನ್ನು ಬಹುವೇಳೆ ಹೆಚ್ಚಿಸುತ್ತಾರೆ. ಅವು ಅತಿಯಾದರೆ ಬಡವರಿಗೆ ನ್ಯಾಯ ದೊರೆಯದು, ಎಂಬ ಕಾರಣ ಅವುಗಳ ಬೆಲೆಯನ್ನು ಹದ್ದಿನಲ್ಲಿಡುತ್ತದೆ.

ಈ ತೆರಿಗೆಯ ದರವೆಷ್ಟು ? ತೆರಬೇಕಾದವರು ಯಾರು ? ಎಂಬುದನ್ನು ಸರ್ಕಾರದವರು ಆಗಾಗ್ಗೆ ನಿರ್ಣಯಿಸುತ್ತಾರೆ.

ಬ್ರಿಟಿಷ್ ಪ್ರಾಂತಗಳಲ್ಲಿನಂತೆಯೇ ಇಲ್ಲಿಯೂ ದಾವಾ ಹಾಕುವಾಗ ಎಷ್ಟು ಸ್ಟಾಂಪು ಹಣ ಕೊಡಬೇಕು ? ನ್ಯಾಯದ ಕ್ರಮಗಳಿಗಾಗಿ ಎಷ್ಟು ಕೊಡಬೇಕು ? ಯಾವರೀತಿ ಕೊಡಬೇಕು ? ದಂಡಗಳೇನು ಎಂಬುವನ್ನು ಸರ್ಕಾರದವರು ನಿರ್ಧರಿಸುತ್ತಾರೆ. ಪತ್ರಗಳು ಎಂಥವು ಎಂಬುದರ ಮೇಲೆ (ಎಂದರೆ ಆಧಾರ, ಭೋಗ್ಯ, ದಾನ, ಕ್ರಯ, ಆಸ್ತಿಯಹಂಚಿಕೆ ಮುಂತಾದವು) ಇಷ್ಟು ಸ್ಟಾಂಪು ಖರ್ಚು ಕೊಡಬೇಕು ಎಂದು ನಿಯಮವಿರುತ್ತದೆ. ಇನ್ನೂ ಕೆಲವುಸಲ ಪತ್ರ ಎಷ್ಟು ಮೌಲ್ಯದ್ದು ಎಂಬುದರ ಮೇಲೆ ಸ್ಟಾಂಪಿನ ಬೆಲೆ ನಿರ್ಧರವಾಗುತ್ತದೆ.

ರೆಜಿಸ್ಟ್ರೇಷನ್ ಬಾಬು

ಜನರು ಕಾಗದ ಪತ್ರ (ದಸ್ತೈವಜು) ಗಳನ್ನು ಸರ್ಕಾರದಲ್ಲಿ ರೆಜಿಸ್ಟರ್ ಮಾಡಿಸುವುದರಿಂದ ಸರ್ಕಾರಕ್ಕೆ ಈ ಬಾಬಿನಲ್ಲಿ ಉತ್ಪತ್ತಿ ಇದೆ. ಸರ್ಕಾರದ ಪುಸ್ತಕಗಳಲ್ಲಿ ಕಾಗದ ಪತ್ರಗಳ ವ್ಯವಹಾರಕ್ಕೂ, ಆಸ್ತಿ ಪಾಸ್ತಿಗಳ ಕೈಬದಲಿಗೂ ಸಾಕ್ಷಿ ಇರುವಂತೆಯೂ, ನ್ಯಾಯಸ್ಥಾನದಲ್ಲಿ ಪತ್ರಗಳು ಊರ್ಜಿತವಾಗುವಂತೆಯೂ, ಈ ಮೂಲಕ ಏರ್ಪಾಡಾಗಿದೆ. ಕೇವಲ ಒಂದುಬಗೆಯ ಜನರಿಗಾಗಿಯೇ ಈ ಇಲಾಖೆ ಏರ್ಪಟ್ಟಿರುವುದರಿಂದ ಈ ಜನರು ಸರ್ಕಾರದ ಖರ್ಚನ್ನು ಕೊಡುವುದು ನ್ಯಾಯವೇ ಸರಿ. ಹೀಗೆ ಸರ್ಕಾರದವರಿಗೆ ತಗಲುವ ಖರ್ಚು ಒಂದು ಕಡೆ, ಜನರಿಗಾಗುವ ಪ್ರಯೋಜನ ಒಂದು ಕಡೆ, ಇವುಗಳಿಗೆ ತಕ್ಕಂತೆ ರೆಜಿಸ್ಟ್ರೇಷನ್ ದರಗಳು ಏರ್ಪಟ್ಟಿರುತ್ತವೆ. ರೆಜಿಸ್ಟರಾಗುವ ಪತ್ರದ ಮೊಬಲಗು ಎಷ್ಟು ಎಂಬುದೇ ದರವನ್ನು ನಿರ್ಧರಿಸುವ ಮುಖ್ಯವಾದ ಅಳತೆ.

ಸ್ಥಿರಸ್ವತ್ತುಗಳಿಗೆ ಸಂಬಂಧಿಸುವ ಪತ್ರ; ಆಸ್ತಿ ವಿಭಾಗ ಶಾಸನ; ದತ್ತ ಪತ್ರ; ಚರಸ್ವತ್ತುಗಳಲ್ಲಿ ರೆಜಿಸ್ಟ್ರೇಷನ್ನಿಗೆ ಬರುವುವು; ಮುದ್ರೆಯೊತ್ತಿದ ಲಕ್ಕೋಟೆ ಮುಂತಾದವು ರೆಜಿಸ್ಟ್ರೇಷನ್ನಿಗೆ ಬರುತ್ತವೆ.

ಈ ಬಾಬುಗಳಿಂದಲೇ ಅಲ್ಲದೆ ಅರಣ್ಯ ಶಾಖೆಯಿಂದಲೂ, ರೈಲ್ವೆ, ಗಣಿಗಳಿಂದಲೂ ಬರುವ ರಾಯಮಾನ, ವಿದ್ಯುಚ್ಛಕ್ತಿಯ ಒದಗಿಸುವಿಕೆಯಿಂದ ಬರುವ ಉತ್ಪತ್ತಿ, ಮುಂತಾದ ರೂಪಗಳಲ್ಲಿ ಸರ್ಕಾರಕ್ಕೆ ಹುಟ್ಟುವಳಿ ಉಂಟು.

ಕಾಡುಗಳು ರೈಲ್ವೆ ವಿದ್ಯುಚ್ಛಕ್ತಿ, ಇತ್ಯಾದಿ

ಕಾಡುಗಳಿಂದ ಉತ್ಪತ್ತಿಯಾಗುವ ಎಲ್ಲ ಹಣಗಳೂ ಖರ್ಚು ಕಳೆದು ವನಶಾಖೆಗೆ ನಿವ್ವಳ ವರಮಾನವಾಗಿ ಬರುವುವು. ಗಣಿಗಳು ಕೊಡುವ ರಾಯಮಾನದ ವಿಚಾರವನ್ನು ಹಿಂದೆಯೇ ಹೇಳಿದೆ. ಸರ್ಕಾರದವರೇ ರೈಲ್ವೆ ಕೆಲಸಗಳನ್ನು ನಡಸುತ್ತಿರುವುದರಿಂದ ಖರ್ಚು ಕಳೆದು ಉಳಿಯುವ ಹಣವೂ, ಎಂ.ಎಸ್.ಎಂ. ಕಂಪನಿಯವರು ಕೊಡುವ ರೈಲ್ವೆ ಹಣದ ಭಾಗವೂ ಸರ್ಕಾರದ ಆದಾಯಕ್ಕೆ ಸೇರುವುವು. ಶಿವಸಮುದ್ರದಲ್ಲಿ ವಿದ್ಯುಚ್ಛಕ್ತಿ

ಯನ್ನು ರೂಢಿಸಿ ದೀಪಗಳಿಗಾಗಿಯೂ, ಯಂತ್ರ ಚಾಲನೆಗಾಗಿಯೂ ಅದನ್ನು ಮಾರುವುದರಿಂದ ವರ್ಷೇ ವರ್ಷೇ ಆ ಬಾಬಿನಲ್ಲಿಯೂ ಬಹುವಾಗಿ ಹುಟ್ಟುವಳಿ ಬರುತ್ತಿರುವುದು.


ಹೀಗೆ ಸರ್ಕಾರದ ವರಮಾನ ಭೂಗಂದಾಯದ ಮೂಲಕವೂ ಸ್ವತ್ತುಗಳ ಮತ್ತು ಸ್ವಂತವಾಗಿ ನಡೆಸುವ ಕೆಲಸಗಳ ಫಲವಾಗಿಯೂ ವರಮಾನದ ತೆರಿಗೆ ಮುಂತಾದ ಕುಳಗಳ ಮೇಲೆ ಎತ್ತುವ ತೆರಿಗೆಯ ಮೂಲಕವೂ, ಉದ್ಯೋಗಿ ವರ್ಗಕ್ಕೂ ಪ್ರಜೆಗಳಿಗೂ ದೊರೆಯಿಸುವ ಸಹಾಯಗಳಿಗಾಗಿ ಪ್ರತಿಫಲರೂಪದಲ್ಲಿಯೂ ಬರುತ್ತದೆ. ತಮಗೆ ಪ್ರತಿ ಪ್ರಯೋಜನ ಬರಲಿ, ಬಾರದೆ ಹೋಗಲಿ, ಹೆಚ್ಚಾಗಿ ಬರಲಿ, ಕಡಮೆಯಾಗಿ ಬರಲಿ ಯಾವುದನ್ನು ಪ್ರಜೆಗಳು ಕಡ್ಡಾಯವಾಗಿ ತೆರಲೇಬೇಕೊ ಅದು ತೆರಿಗೆ. ಉಳಿದವು ಪೇಟೆಯಲ್ಲಿ ಮಾರುವ ವಸ್ತುಗಳಿಗೂ, ಮಾಡಿದ ಕೆಲಸಗಳಿಗೂ ಕೊಡುವ ಬೆಲೆಯಂಥವು.

ಈ ತೆರಿಗೆಗಳ ಸ್ವರೂಪ

ಭೂಗಂದಾಯವೂ ಅಬ್ಕಾರಿ ತೆರಿಗೆಗಳೂ ಪರೋಕ್ಷವಾಗಿ ವಸೂಲಾಗುವ ತೆರಿಗೆಗಳು. ಏಕೆಂದರೆ ಅವನ್ನು ಮೊದಲು ಅಂಗಡಿಯವರು ತೆತ್ತರೂ ಪದಾರ್ಥಗಳ ಕರೀದಿ ಆ ಮಟ್ಟಿಗಾದರೂ ಕೊಳ್ಳುವವರ ತಲೆಯಮೇಲೆ ಬೀಳುವುದರಿಂದ ಅವುಗಳನ್ನು ಸೇವಿಸುವ ಜನರೇ ಆ ತೆರಿಗೆಯನ್ನು ಕಟ್ಟಿದಂತಾಗುತ್ತದೆ. ವರಮಾನದ ತೆರಿಗೆ ಜನರು ಖುದ್ದು ತೆರುವ ತೆರಿಗೆ: ಅಫೀಮು, ಗಾಂಜ ಮುಂತಾದವುಗಳಿಂದ ಸರ್ಕಾರಕ್ಕೆ ಹೆಚ್ಚುಲಾಭ. ರೆಜಿಸ್ಟ್ರೇಷನ್ ಫೀ, ಸ್ಟಾಂಪುಕರ ಮುಂತಾದವು ಅರ್ಧ ತೆರಿಗೆ, ಅರ್ಧ ಮಾಡಿದ ಸಹಾಯಕ್ಕೆ ತೆಗೆದುಕೊಂಡ ಪ್ರತಿಫಲ.

ತೆರಿಗೆಯ ಪದ್ಧತಿ ಸಮರ್ಪಕವಾಗಿದೆಯೊ? ಪರೀಕ್ಷೆ

ಯಾವ ಸರ್ಕಾರದ ತೆರಿಗೆ ಪದ್ಧತಿಯೇ ಆಗಲಿ ಸಮರ್ಪಕವಾಗಿದೆಯೆ, ಇಲ್ಲವೆ ಎಂಬುದಕ್ಕೆ ಹಲವು ಪರೀಕ್ಷೆಗಳಿವೆ :—ಸರ್ಕಾರ ದುಂದು ವೆಚ್ಚಗಳನ್ನು ಮಾಡುತ್ತಿದೆಯೆ? ಅಥವಾ ದೇಶಾಭಿವೃದ್ಧಿಗೂ, ಸಾರ್ಥಕವಾದ ಕಾರ್ಯಗಳಿಗೂ ವೆಚ್ಚಮಾಡುತ್ತದೆಯೆ? ಪ್ರಜೆಗಳ ಶಕ್ತಿಗೆ ಮೀರದ



ಆದಾಯ ವೆಚ್ಚಗಳ ನಕ್ಷೆ

ತೆರಿಗೆಗಳನ್ನು ಎತ್ತುತ್ತದೆಯೆ, ಅಥವಾ ಹೆಚ್ಚು ತೆರಿಗೆಗಳನ್ನು ಹಾಕಿ ಅವರನ್ನು ಅರೆಯುತ್ತಿದೆಯೆ? ಎಲ್ಲ ಜನರೂ ಅವರವರ ತೆರಿಗೆ ತೆರುವ ಶಕ್ತಿಗೆ ತಕ್ಕಂತೆ, ಸರ್ಕಾರದ ಹುಟ್ಟುವಳಿಗೆ ಸಹಾಯ ಮಾಡುವಂತೆ ನಾನಾವಿಧವಾದ ತೆರಿಗೆಗಳು ಏರ್ಪಟ್ಟಿವೆಯೆ? ಅಥವಾ ಕೆಲವು ವರ್ಗಗಳವರ ಮೇಲೆ ಬೀಳುವಂತೆ ಮಾತ್ರ ತೆರಿಗೆ ಏರ್ಪಟ್ಟಿರುತ್ತದೆಯೆ? ಹಾಕಿದ ತೆರಿಗೆಗಳಿಂದ ಜನರ ಹಣವನ್ನು ಕೂಡಿಡಬೇಕೆಂಬ ಆಸೆಯೂ ಕೆಲಸಮಾಡಿ ಹೆಚ್ಚು ಸಂಪತ್ತನ್ನು ಸಂಪಾದಿಸಬೇಕೆಂಬ ಆಸೆಯೂ ಹೆಚ್ಚುವಂತಾಗುವುದೆ, ಕಡಮೆಯಾಗುವುದೆ? ಹಾಕಿರುವ ತೆರಿಗೆಗಳೆಲ್ಲವೂ ಪುಷ್ಕಲವಾಗಿ ಉತ್ಪತ್ತಿ ತರುವುವೆ? ಅಥವಾ ಬರುವ ತೆರಿಗೆಯ ಉತ್ಪತ್ತಿಗಿಂತಲೂ ಅವನ್ನು ವಸೂಲು ಮಾಡುವ ಖರ್ಚು ಹೆಚ್ಚಾಗುವುದೆ? ತೆರಿಗೆಗಳೆಲ್ಲಾ ಇಷ್ಟೇ, ಹೀಗೇ ಎಂದು ನಿಶ್ಚಿತವಾಗಿವೆಯೆ? ಸುಲಭವಾಗಿ ಜನರ ಸ್ಥಿತಿಗತಿಗಳಿಗೆ ಹೊಂದಿಕೊಂಡು ಜನಗಳ ಕ್ಷೇಮ ಸಾಧಕವಾಗಿವೆಯೆ? ತೆರಿಗೆಗಳನ್ನು ತೆರಲು ಅನುಕೂಲ ಸೌಲಭ್ಯಗಳು ಕಲ್ಪಿತವಾಗಿ ಜನರು ಅವನ್ನು ತಮಗೆ ಅನುಕೂಲವಾದ ಕಾಲಗಳಲ್ಲಿ ಅನಾಯಾಸವಾಗಿ ತೆರುವಂತಿವೆಯೆ? ಅವರ ಮನಸ್ಸಿಗೂ, ಧರ್ಮಬುದ್ಧಿಗೂ ಹಿಂಸೆ ತೋರದಂತೆ ಇವೆಯೆ? ಅವರ ಆಚಾರ ಪದ್ಧತಿಗಳಿಗೂ, ಅಭಿಪ್ರಾಯಗಳಿಗೂ ಹೊಂದಿಕೊಂಡಿವೆಯೆ? ಎಂಬುವು ಕೆಲವು ಅಳತೆಗಳು.

ಖರ್ಚುಗಳು

ಸರ್ಕಾರದ ವೆಚ್ಚ ಸುಮಾರು ಎರಡು ತೆರನಾಗಿರುತ್ತದೆ: (೧) ಸಮಾಜದ ಜೀವನಕ್ಕೆ ಒಳಗಿನಿಂದಲೇ ಆಗಲಿ ಹೊರಗಿನಿಂದಲೇ ಆಗಲಿ ಆಪತ್ತು ಬಾರದಿರುವಂತೆಯೂ, ಸುರಕ್ಷಣೆ, ನ್ಯಾಯ, ಶಾಂತಿ ನಡೆಯುವಂತೆಯೂ ಏರ್ಪಡಿಸಲು ಆಗುವ ವೆಚ್ಚಗಳು; (೨) ಸಮಾಜದ ಜೀವನ ಉತ್ತಮವಾಗುವಂತೆ ಅಭಿವೃದ್ಧಿಗೊಳಿಸಿ ಅಂಥಾ ಸಮಾಜದಲ್ಲಿ ಬಾಳಬೇಕೆಂಬ ಉತ್ಸಾಹವನ್ನು ಹೆಚ್ಚಿಸುವ ವೆಚ್ಚಗಳು. ಈ ಪ್ರಯೋಜನಗಳನ್ನು ಸಾಧಿಸಲು ಸರ್ಕಾರಗಳು ನಾನಾ ವಿಧವಾಗಿ ಖರ್ಚುಮಾಡಬೇಕಾಗಿರುತ್ತದೆ. ಸಶಸ್ತ್ರವಾಗಿ ಸರ್ವದಾ ಸಿದ್ಧವಾಗಿರುವ ಸೈನ್ಯ ಮತ್ತು ಪೋಲೀಸ್ ಇಲಾಖೆಗಳನ್ನು ಶಾಂತಿಸ್ಥಾಪನೆಗೂ, ಯುದ್ಧ ಪ್ರಸಂಗಕ್ಕೂ ಅಣಿಯಾಗಿರಿಸುವುದು; ನ್ಯಾಯ ವ್ಯವಸ್ಥಾಪನೆ; ರಾಜ್ಯದ ಮೇಲ್ಪಟ್ಟ ಅಧಿಕಾರಿಯನ್ನು

ಕಾಪಾಡುವುದು ; ರಾಜರಿರುವ ಸಂಸ್ಥಾನಗಳಲ್ಲಿ ರಾಜ, ಅರಮನೆ, ಇವುಗಳನ್ನು ನಡಸುವುದು ; ಹೊರಗಿನ ರಾಜ್ಯಗಳಲ್ಲಿ ರಾಜಪ್ರತಿನಿಧಿಗಳೂ, ರಾಯಭಾರಿಗಳು ಇದ್ದರೆ ಅವರ ಪೋಷಣೆ ; ದೇಶದೊಳಗಿನ ಅಧಿಕಾರಿ ಮಂಡಲವನ್ನು, ಎಂದರೆ ಮಂತ್ರಿವರ್ಗ, ನ್ಯಾಯವಿಧಾಯಕ ಸಭೆಗಳು, ಸರ್ಕಾರಿ ನೌಕರರು ಮುಂತಾದವರ ಸಂಬಳ ಸಾರಿಗೆ ಏರ್ಪಾಡು ; ಸರ್ಕಾರದ ಹೆಸರಿನಲ್ಲಿ ತೆಗೆದ ಸಾಲಕ್ಕೆ ಬಡ್ಡಿ ; ಸಾಲಹರಿಸಲು ಹಣ ; ದೇಶದ ಕೈಗಾರಿಕೆ, ವ್ಯಾಪಾರಗಳನ್ನು ಬೆಳಸಲು ಹಣ ಮತ್ತು ನಾಣ್ಯವನ್ನು ಚಲಾವಣೆಗೆ ತರುವುದು ; ಅಂಚೆ ಸೌಕರ್ಯ ಏರ್ಪಡಿಸುವುದು ; ಯಾನ ವರ್ತಮಾನ ವಾಹಕ ಸೌಕರ್ಯ ಕಲ್ಪಿಸುವುದು ; ಕೈಗಾರಿಕೆಗಳನ್ನು ಕೈಕೊಂಡು ನಡೆಯಿಸುವುದು ; ಸಾಮಾಜಿಕ ವೆಚ್ಚಗಳಿಂದ ಆರೋಗ್ಯ ಸಾಧನೆ, ನಗರ ನೈರ್ಮಲ್ಯ, ವಿದ್ಯಾಭ್ಯಾಸ, ವಿಶ್ರಾಂತಿವೇತನ, ಬಡಬಗ್ಗರ ಕಷ್ಟನಿವಾರಣೆ, ಉದ್ಯೋಗ ಮತ್ತು ವಸತಿ ಕಲ್ಪನೆ, ಇತ್ಯಾದಿ ವಿಧಗಳಲ್ಲಿ ಸರ್ಕಾರಗಳು ವೆಚ್ಚಮಾಡಬೇಕಾಗುತ್ತದೆ.*

ಒಟ್ಟು ದೇಶದ ಸಂಪತ್ತಿನ ಅಭಿವೃದ್ಧಿಯ ಜೊತೆಗೆ ಜನಸಾಮಾನ್ಯದ ಸಂಪತ್ತಿನ ಮಟ್ಟ ಏರುವಂತೆಯೂ, ಸಂಪತ್ತು ಎಲ್ಲ ವರ್ಗಗಳಲ್ಲಿಯೂ ಹಂಚುವಂತೆಯೂ, ಎಲ್ಲರಲ್ಲಿಯೂ, ಸತ್ಪ್ರಜಾಗುಣ ಬೆಳೆಯುವಂತೆಯೂ, ಎಲ್ಲರೂ ಮೇಲ್ಮೆಗೆ ಬರಲು ಸರ್ವಸಮವಾದ, ನಿಷ್ಪಕ್ಷಪಾತವಾದ ಅವಕಾಶ ದೊರೆಯುವಂತೆಯೂ ಮಾಡುವುದು ಸರ್ಕಾರದ ಕರ್ತವ್ಯವಾಗಿರುವುದು. ಇದಕ್ಕಾಗಿಯೇ ಅವರು ಇರುವುದು ; ತೆರಿಗೆಗಳನ್ನು ಹಾಕಿ ಹಣ ಸಂಗ್ರಹಿಸುವುದು.

ಬಾಬುಗಳು

ಸೈನ್ಯಶಾಖೆಯ ಮೇಲೂ, ಶಾಂತಿ ಸುರಕ್ಷಣೆಗಳನ್ನು ದೊರಕಿಸುವ ಇಲಾಖೆಗಳ ಮೇಲೂ, ವ್ಯಯಮಾಡುವ ಹಣದಿಂದ ಜನರು ತಮ್ಮಿಷ್ಟಕ್ಕೆ ತಾವು ಯಾವ ಭಯ ಭೀತಿಗಳೂ ಇಲ್ಲದೆ ತಮ್ಮ ಜೀವನೋಪಾಯಗಳಲ್ಲಿಯೂ, ಉದ್ಯೋಗಗಳಲ್ಲಿಯೂ, ಸಂಪದುತ್ಪತ್ತಿಯಲ್ಲಿಯೂ ನಿಶ್ಚಿಂತರಾಗಿ ತೊಡಗಲು ಸಾಧ್ಯವಾಗುವುದು. ಇತರ ವ್ಯಯಗಳಿಂದ ಅವರ

H. Dalton : Public Finance.

ಕಾರ್ಯ ಶಕ್ತಿ ಹೆಚ್ಚಿ ಸಂಪಾದನೆ ಮಿಗಿಲಾಗುವುದು. ಈ ಉದ್ದೇಶದಿಂದ ಮಾಡುವ ವೆಚ್ಚವೇ ಸಾರ್ಥಕ. ಎಲ್ಲ ವೆಚ್ಚಮಾಡುವಾಗಲೂ ಎಷ್ಟು ಹಣ ವೆಚ್ಚಮಾಡದೆ ಹೋದರೆ ಇದು ಖಂಡಿತ ಸಮರ್ಪಕವಾಗಿ ನಡೆಯಲಾರದೋ ಅಷ್ಟಕ್ಕೆ ಮೀರದೆ ವೆಚ್ಚವಮಾಡಿ ; ಯಾವ ಇಲಾಖೆಗಳು ಮುಖ್ಯ ಯಾವುವು ಸಾಮಾನ್ಯ ಎಂಬುದನ್ನೂ ಯಾವುದು ಹೆಚ್ಚು ಪ್ರಯೋಜನಕಾರಿ ಎಂಬುದನ್ನೂ ಮನಸ್ಸಿನಲ್ಲಿಟ್ಟುಕೊಂಡೇ ವೆಚ್ಚವನ್ನು ಹಂಚುವುದು ಧರ್ಮವಾಗುವುದು. ಜನರು ಹಣ ತೆರಬಲ್ಲರೆಂದು ಬೇಕಾದ ಹಾಗೆ ತೆರಿಗೆ ಹಾಕಿ ಮನಸ್ಸು ಬಂದುದಕ್ಕೆ ಮನಸ್ಸು ಬಂದಂತೆ ವೆಚ್ಚಮಾಡಿ ಪ್ರಜೆಗಳ ಹಣವನ್ನು ದುಂದು ಮಾಡುವುದು ಅಧರ್ಮವಾಗುವುದು. ಜನರು ಬಡವರಾಗಿ ಅವರಿಗೆ ತೆರಿಗೆ ತೆರುವ ಶಕ್ತಿ ಹೆಚ್ಚಾಗಿಲ್ಲದಿರುವಾಗ ಸರ್ಕಾರದವರ ಕರ್ತವ್ಯವು ಇನ್ನೂ ಕಷ್ಟತರವಾದುದು. ಆಗ ಮೊದಲು ಜನರ ಸಂಪತ್ತಿಯನ್ನು ಹೆಚ್ಚಿಸುವ, ಅವರ ವರಮಾನವನ್ನು ಹೆಚ್ಚಿಸುವ ಕಾರ್ಯಗಳನ್ನು ಕೈಕೊಳ್ಳಬೇಕಾಗುವುದು. ನಮ್ಮ ಸರ್ಕಾರದ ಆದಾಯವೂ ವೆಚ್ಚವೂ ಎರಡೂ ಏರುತ್ತಿದ್ದರೂ ಸಾಮಾನ್ಯ ಆದಾಯಕ್ಕಿಂತಲೂ ಸಾಮಾನ್ಯ ವೆಚ್ಚ ಹೆಚ್ಚಾಗಿ ಏರುತ್ತಿದೆಯೆನ್ನಬಹುದು. ಇದುವರೆಗೆ ಬೆಳೆಸಿದ್ದ ನೀರಾವರಿ ಕಾರ್ಯಗಳ ನಿಧಿ, ಕ್ಷಾಮ ನಿವಾರಕ ನಿಧಿ ಮುಂತಾದ ಆಪನ್ನಿಧಿಗಳಿಂದ ಹಣವನ್ನು ತೆಗೆದು ಕಡಮೆ ಬಂದುದಕ್ಕೆ ಸೇರಿಸಿಕೊಂಡಿರುವ ಸಂಗತಿಯೂ ಕಾಣಬರುವುದು. ಸಂಪದಭಿವೃದ್ಧಿ ಕಾರ್ಯಗಳನ್ನು ನಡಸಬೇಕೆಂದು ಕೋರುವ ಪ್ರಜೆಗಳು ಇದರ ಅಗತ್ಯವನ್ನು ಕಂಡುಕೊಂಡಿದ್ದಾರೆ. ಕೇಡು ಒದಗಿದ ಮೇಲೆ ಅದರ ಕಷ್ಟವನ್ನು ಪರಿಹಾರಮಾಡುವುದಕ್ಕೆ ಸಾಧ್ಯವಾದ ಮಟ್ಟಿಗೆ ಯತ್ನಿಸುವುದಕ್ಕಿಂತ ನಿವಾರ್ಯವಾದ ಕೇಡನ್ನು ನಿವಾರಿಸಲು ಮೊದಲೇ ಪ್ರಯತ್ನಿಸಬೇಕೆಂಬುದೇ ಇಲ್ಲಿ ತತ್ವವೆಂಬುದನ್ನು ಕಾಣಬಹುದು. ಹುಟ್ಟುವಳಿಯನ್ನು ಕೂಡಿಸುವುದಕ್ಕೆ ಸರ್ಕಾರದವರು ಮಾಡುವ ಖರ್ಚು ಒಟ್ಟು ಹುಟ್ಟುವಳಿಯ ಶೇಕಡ ೧೪ ಭಾಗ ; ಆಡಳಿತದ ವೆಚ್ಚ ೧೦.೫ ; ಸೈನ್ಯದವೆಚ್ಚ ೧೬.೫ ; ಅರಮನೆ ಪೊಗದಿಗಳ ಭಾಗ ಸುಮಾರು ೧೪ ; ಎಂದರೆ ಒಟ್ಟು ೫೫ ಭಾಗಗಳು. ಮಿಕ್ಕ ೪೫ ಭಾಗದಲ್ಲಿ ಉಳಿದ ವೆಚ್ಚಗಳಾಗುವುವು.

ಸಾಲಗಳು

ಸಾಮಾನ್ಯ ವೆಚ್ಚಗಳಿಗೆ ಸಾಮಾನ್ಯ ಹುಟ್ಟುವಳಿ ಸಾಲದಾಗಿರುವಾಗ ದೊಡ್ಡ ಕೈಗಾರಿಕೆ ಮತ್ತು ನೀರಾವರಿ ಕಾರ್ಯಗಳಿಗೂ ಜನರ ಆರೋಗ್ಯ, ವಿದ್ಯೆ ಮುಂತಾದುವನ್ನು ಸಾಧಿಸುವುದಕ್ಕಾಗಿಯೂ ವಿಶೇಷವಾಗಿ ಹಣವನ್ನು ಒದಗಿಸಬೇಕಾಗುವುದು. ಇವುಗಳಿಗಾಗಿ ಅನೇಕವೇಳೆ ಸಾಲ ತೆಗೆಯದಿದ್ದರೆ ವಿಧಿಯೇ ಇಲ್ಲ. ಪ್ರಜೆಗಳೂ, ಅವರ ಪ್ರತಿನಿಧಿಗಳೂ ಒಂದುಕಡೆ ಆ ಅನುಕೂಲವನ್ನು ಮಾಡಿಕೊಡಿ, ಈ ಅನುಕೂಲವನ್ನು ಹೆಚ್ಚಿಸಿಕೊಡಿ ಎಂದು ಸರ್ಕಾರವನ್ನು ಕೇಳುತ್ತಾ, ನಿಮ್ಮ ವೆಚ್ಚವನ್ನು ಕಡಮೆ ಮಾಡಿ, ತೆರಿಗೆ ಬೇಡ, ಸಾಲ ಬೇಡ ಎಂದು ಇನ್ನೊಂದುಕಡೆ ಹೇಳುವುದು ಅನ್ಯಾಯ. ನಮ್ಮಂಥ ಸಣ್ಣ ಸಂಸ್ಥಾನಗಳಲ್ಲಿ ಹೆಚ್ಚು ಹಣ ಬೇರೆ ಯಾವ ರೂಪದಲ್ಲಿಯೂ ಬರುವಹಾಗಿಲ್ಲ. ಸಂಪದಭಿವೃದ್ಧಿಕಾರ್ಯಗಳಿಗಾಗಿ ಸಾಲ ತೆಗೆಯುವುದು ಎಲ್ಲ ದೇಶಗಳಲ್ಲಿಯೂ ವಾಡಿಕೆಯಾಗಿದೆ. ಸರ್ಕಾರಕ್ಕೆ ಹಣ ಹೇಗೆ ಒದಗಬೇಕು ? ತೆರಿಗೆ ಎತ್ತುವುದರಿಂದ ; ಇಲ್ಲವೇ ಹೆಚ್ಚು ನಾಣ್ಯವನ್ನು ಚಲಾವಣೆಗೆ ತರುವುದರಿಂದ ; ಅಥವಾ ಇತರರ ದಾನದಿಂದ ; ಇಲ್ಲವಾದರೆ ಸಾಲವೆತ್ತುವುದರಿಂದ. ನಮ್ಮ ಜನರು ಹೆಚ್ಚುತೆರಿಗೆ ತೆರಲಾರರು. ನಮಗೆ ಹಣವನ್ನು ಚಲಾವಣೆಗೆ ತರುವ ಅಧಿಕಾರವಿಲ್ಲ ; (ಇದ್ದವರೂ ಹೆಚ್ಚು ಹಣ ಬೇಕಾದಾಗ ತಮಗೆ ಬೇಕಾಗುವಷ್ಟೆ ಮುದ್ರಿಸಿಕೊಳ್ಳುವುದರಿಂದ ವಿಪತ್ತು ಬರುತ್ತದೆಂದು ಬಲ್ಲರು) ; ಸರ್ಕಾರಕ್ಕೆ ದೊಡ್ಡ ದಾನಕೊಡುವ ಮಹನೀಯರು ದೇಶದಲ್ಲಿ ಬಹುಜನರಿಲ್ಲ ; ಇನ್ನು ಸಾಲವೇ ಮಾರ್ಗ.

ಸಾಲವೆಂದ ಮಾತ್ರಕ್ಕೇ ಯಾವ ಅಮಂಗಳವೂ ಬಾರದು : ಈ ಮೂಲಕ ದೇಶದ ಸಂಪತ್ತೂ ಹೆಚ್ಚುವಂತಾದರೆ ಜನರ ತೆರಿಗೆ ತೆರುವ ಶಕ್ತಿ ಹೆಚ್ಚಾಗುವುದು. ಅಲ್ಲದೆ ಇಂಥ ಕಾರ್ಯಗಳಿಂದ ಈ ತಲೆಮಾರಿನವರೊಬ್ಬರಿಗೇ ಅಲ್ಲದೆ ಮುಂದಿನವರಿಗೂ ಪ್ರಯೋಜನವುಂಟು ; ಆದುದರಿಂದ ಅವರೂ ಸ್ವಲ್ಪಭಾಗ ಹಣವನ್ನು ತೆರಲಿ. ಸಾರ್ಥಕವಾದ ವೆಚ್ಚವಾದರೆ ಸಾಲತೆಗೆಯುವುದು ಅಯುಕ್ತವಲ್ಲವೆಂದು ಎಲ್ಲ ಅರ್ಥಶಾಸ್ತ್ರಜ್ಞರೂ ಹೇಳುವರು. ಕೆಲವು ವೇಳೆ ಉತ್ಪತ್ತಿಕರವಲ್ಲದ ವೆಚ್ಚಕ್ಕಾಗಿ ಸಾಲಗಳುಂಟಾಗುವುದುಂಟು. ಆತ್ಮರಕ್ಷಣೆಗಾಗಿ ಯುದ್ಧಮಾಡಬೇಕಾದರೆ, ದೇಶದ ಶಾಂತಿ ಸುರಕ್ಷಣೆ ಸರ್ಕಾರದವರ ಅವಶ್ಯಕ ಕರ್ತವ್ಯವಾಗಿರುವಾಗ

ಅಂಥಾ ವೆಚ್ಚವನ್ನು ಮಾಡಿದ ಹೊರತು ನಿಸ್ತಾರವಿಲ್ಲ ; ಹಣ ಖರ್ಚುಮಾಡಿ ಯುದ್ಧದಲ್ಲಿ ಗೆಲ್ಲಬೇಕು ; ಇಲ್ಲವೆ, ರಾಜ್ಯವನ್ನು ಕಳೆದುಕೊಳ್ಳಬೇಕು. ಯುದ್ಧದಲ್ಲಿ ಯುವಕರು ಪ್ರಾಣ ತೆರುವರು ; ಹಣವಂತರು ಹಣ ತೆರುವರು. ತೆಗೆದ ಸಾಲ ಯಾವುದೇ ಆಗಲಿ ಬಹು ಮಟ್ಟಿಗೆ ನಮ್ಮ ದೇಶದವರಿಂದಲೇ ಆದರೆ ಒಂದು ವಿಧದಲ್ಲಿ ಅನುಕೂಲ ; ಬಡ್ಡಿಯ ಹಣವೆಲ್ಲ ದೇಶದಲ್ಲಿಯೇ ನಿಲ್ಲುವುದು ; ಒಳದೇಶದಲ್ಲಿ ವೆಚ್ಚವಾಗುವುದು. ಸಾಲದುದಕ್ಕೆ ಸಾಲ ತೆಗೆಯಬೇಕು. ಪ್ರಪಂಚದಲ್ಲಿ ಈ ಯುದ್ಧದ ಸಾಲಗಳೇ ಹೆಚ್ಚು. ಸಾಲ ಪ್ರಯೋಜನಕಾರಿಯಾದ ಕೆಲಸಕ್ಕಾದರೆ ಲಾಭಕರವಾಗುವುದು.

ಋಣವಿಮೋಚನೆಗೆ ಉಪಾಯ

ಈ ಸಾಲ ಇಷ್ಟೇ ಇದ್ದು ಅದಕ್ಕೆ ಪ್ರತಿಯಾಗಿ ಯಾವ ಹೊಸ ಆಸ್ತಿಯೂ ಇಲ್ಲದಿದ್ದರೆ ಅದು ನಷ್ಟವಾದಂತೆಯೇ ಆಗುತ್ತಿತ್ತು. ಈ ಸಾಲ ವನ್ನು ತೀರಿಸಲು ವರ್ಷೇ ವರ್ಷೇ ಸಾಲದ ಇಳಿಮಾನದ ಹಣವೆಂದು ಬೇರೆ ತೆಗೆದಿಡುವರು. ಋಣವಿಮೋಚನೆ ಈ ಮೂಲಕವಾಗಿ ಸುಲಭವಾ ಗುವುದು. ಅದೂ ಅಲ್ಲದೆ ಸಾಲಕ್ಕೆ ಪ್ರತಿಯಾಗಿ ದೇಶದ ಸಂಪತ್ತನ್ನು ಹೆಚ್ಚಿಸುವ, ದೇಶದ ವರಮಾನವನ್ನು ಹೆಚ್ಚಿಸುತ್ತಿರುವ ಆಸ್ತಿಗಳು ನಿರ್ಮಾಣ ವಾಗಿವೆ. ಈ ಬಗೆಯ ನಿಧಿಗಳನ್ನು ಏರ್ಪಡಿಸಿ ಹಣಕ್ಕೆ ಒಂದು ಕಡೆ ಪಾಚಿಕಟ್ಟಿಸುವುದಕ್ಕಿಂತ ದೇಶೋಪಕಾರವಾದ ಕೈಗಾರಿಕೆ ಮತ್ತು ಪುರೋ ಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದೂ ಎಲ್ಲರಿಗೂ ಉದ್ಯೋಗ ಕಲ್ಪಿ ಸುವ ಏರ್ಪಾಡು ಮಾಡುವುದೂ ಮೇಲೆಂದು ಈಗ ಅನೇಕರ ಮತ.

ಸರ್ಕಾರ ನಿರ್ಮಿಸಿರುವ ಆಸ್ತಿ—ಸಂಪತ್ತು

ಸಂಸ್ಥಾನದವರೇ ನಡಸುತ್ತಿರುವ ರೈಲ್ವೆಗಳು ; ಕಂಪನಿಯವರ ರೈಲ್ವೆಗಳು ; ಕಾವೇರಿ ವಿದ್ಯುಚ್ಛಕ್ತಿ ಸಂಗ್ರಹಕಾರ್ಯ ; ಕನ್ನಂಬಾಡಿಯ ಕಟ್ಟೆ, ಗಂಧದೆಣ್ಣೆಯ ಕಾರ್ಖಾನೆಗಳು ; ಕಬ್ಬಿಣದ ಕಾರ್ಖಾನೆ, ಗಣಿಗಳಿಗೆ ನೀರೊದಗಿಸುವ ಕಾರ್ಯಗಳು, ಸಾಬೂನು, ಸಕ್ಕರೆ, ಪಿಂಗಾಣಿ ಕಾರ್ಖಾನೆ ಮುಂತಾದ ರೂಪದಲ್ಲಿ ಸುಮಾರು ಹತ್ತೂವರೆ ಕೋಟಿ ರೂಪಾಯಿಗಳ ಬೆಲೆಬಾಳುವ ಆಸ್ತಿ ನಿರ್ಮಿತವಾಗಿದೆ. ಜೊತೆಗೆ ಕೈ ನಗದು, ಮತ್ತು

ಇತರಬಾಬುಗಳಲ್ಲಿ ಶೇಖರಿಸಿ ಬಡ್ಡಿಗೆ ಹಾಕಿರುವ ಹಣ, ಪ್ರಜೆಗಳಿಗೆ ಕೊಟ್ಟಿರುವ ಮುಂಗಡಗಳು, ಸಾಲಗಳು ಈ ರೂಪದಲ್ಲಿಯೂ ಸುಮಾರು ೭ ಕೋಟಿ ರೂಪಾಯಿಗಳಷ್ಟು ಆಸ್ತಿ ಎಂದರೆ ಒಟ್ಟು ಹನ್ನೆರಡೂವರೆ ಕೋಟಿ (೧೯೩೨-ಷಕ್ಕೆ ೨೧೧ ಕೋಟಿ) ರೂಪಾಯಿ ಆಸ್ತಿ ಇದ್ದಹಾಗಾಯಿತು. ಹೀಗೆ ಸರ್ಕಾರದವರು ಏರ್ಪಡಿಸಿರುವ ಸ್ವತ್ತುಗಳು ಜನರಲ್ಲಿ ತಲೆಯೊಂದಕ್ಕೆ ೩೦-೩೩ ರೂಪಾಯಿಗಳಷ್ಟಾಯಿತೆಂಬುದನ್ನು ಜ್ಞಾಪಕದಲ್ಲಿಟ್ಟಿರಬೇಕು.

ಸ್ಥಳ ಸಂಸ್ಥೆಗಳು

ಈಗಿರುವ ಸ್ಥಳ ಮಂಡಲಿಗಳನ್ನು ಅಥವಾ ಮುಂದೆ ನಿರ್ಮಾಣವಾಗುವುವನ್ನು ಮೂರುಬಗೆಯಾಗಿ ವಿಂಗಡಿಸಬಹುದು. ಅವು ಯಾವುವೆಂದರೆ:

(೧) ಮುನಿಸಿಪಾಲಿಟಿಗಳು ;
(೨) ಡಿಸ್ಟ್ರಿಕ್ಟ್‌ಬೋರ್ಡುಗಳು ;
(೩) ಗ್ರಾಮಪಂಚಾಯಿತಿಗಳು.

ಪ್ರತಿಯೊಂದೂ ಸರ್ಕಾರದ ಕಾನೂನಿನಂತೆ ಏರ್ಪಟ್ಟು ಕೆಲಸ ಮಾಡುತ್ತಿದೆ. ತಮಗೆ ಒಳಪಟ್ಟ ಎಲ್ಲ ಪೌರ ಸಾಮಾಜಿಕ ಸಂಪದ್ವಿಷಯಗಳನ್ನು ನಿರ್ವಹಿಸುವುದು ಆ ಸಂಸ್ಥೆಗಳ ಕೆಲಸ. ಒಂದು ಮುನಿಸಿಪಾಲಿಟಿಯ ಸರಾಸರಿ ಜನಸಂಖ್ಯೆ ೪,೦೦೦, ವರಮಾನ ಎರಡೂವರೆ ಸಾವಿರ ರೂಪಾಯಿ.

ಬ್ರಿಟಿಷ್ ಇಂಡಿಯಾದಲ್ಲಿನಂತೆಯೇ ಇಲ್ಲಿಯೂ ಮುನಿಸಿಪಾಲಿಟಿಗಳಿರುವ ನಗರಗಳ ಪಾಕೀಜಿಗೇ ವೆಚ್ಚ ಬಹಳ. ಆಡಳಿತದ ಖರ್ಚುಗಳೂ ಹೆಚ್ಚಿವೆ. ಹಣದ ವಸೂಲಿಯ ಖರ್ಚಿಗಿಂತಲೂ ಕಚೇರಿಯ ವೆಚ್ಚ ಹೆಚ್ಚು. ಮ್ಯುನಿಸಿಪಲ್ ಕಾರ್ಯಗಳಲ್ಲಿ ವಿದ್ಯಾಭ್ಯಾಸ ಚಿಕಿತ್ಸಾಸಹಾಯ ಇವುಗಳಿಗೆ ಪ್ರಾಮುಖ್ಯತೆ. ಆದರೂ ವಸ್ತುತಃ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸ್ವಂತವಾಗಿ ನಡಸದೆ ಸರ್ಕಾರದ ಶಾಲೆಗಳಿಗೂ ಆಸ್ಪತ್ರೆಗಳಿಗೂ ಹಣ ಸಹಾಯವನ್ನು ಮಾತ್ರ ಮ್ಯುನಿಸಿಪಾಲಿಟಿಗಳು ಮಾಡುತ್ತಿವೆ ಎನ್ನಬಹುದು. ಕೆಲವು ವಿದ್ಯಾಭ್ಯಾಸಕ್ಕಾಗಿ ಹಣ ಕೊಡುವುವು ; ಕೆಲವು ಕೊಡುವುದಿಲ್ಲ.

ಕೆಲವುಕಡೆ ವಿದ್ಯಾಭ್ಯಾಸಕ್ಕೆ ಜನರು ಪ್ರತ್ಯೇಕವಾಗಿ ತೆರಿಗೆಯನ್ನೂ (Education cess) ಕೊಡುತ್ತಿದ್ದಾರೆ. ಸುಮಾರು ೪೦ ಸಂಸ್ಥೆಗಳವರು (೪ ಡಿಸ್ಟ್ರಿಕ್ಟುಗಳವರು) ಕೊಡುತ್ತಿಲ್ಲ.

ಕೆಲಸ

ಅನೇಕ ಪ್ರದೇಶಗಳಲ್ಲಿ ಮ್ಯುನಿಸಿಪಾಟಿಗಳು ಆರಂಭವಾಗುವುದಕ್ಕೆ ಮುಂಚೆಯೇ ನೀರಿನ ಸೌಕರ್ಯಗಳಿದ್ದವು. ಅವನ್ನು ಕಾಪಾಡಿಕೊಳ್ಳುವುದು, ಮತ್ತು ಹೆಚ್ಚಿಸಿಕೊಳ್ಳುವುದು ಮಾತ್ರ ಅವರು ಈಗ ಮಾಡುತ್ತಿರುವ ಕೆಲಸ. ಬೆಂಗಳೂರು ಮೈಸೂರುಗಳಲ್ಲಿ ನೀರನ್ನು ಒದಗಿಸಲು ಬೇಕಾದಷ್ಟು ಏರ್ಪಾಡುಗಳು ನಡೆದಿವೆ. ನೀರಿನ ವಸತಿಯನ್ನು ಹೆಚ್ಚಿಸಲು ಇನ್ನೂ ವಿಶೇಷವಾದ ಪ್ರಯತ್ನಗಳು ನಡೆಯುತ್ತಿವೆ. ಕೆಲವು ದೊಡ್ಡ ಮ್ಯುನಿಸಿಪಾಲಿಟಿಗಳವರು ತಮ್ಮ ನಗರಗಳಲ್ಲಿ ನಲ್ಲಿಗಳನ್ನು ಇಡಿಸಿದ್ದಾರೆ. ಅಂಥ ಕಡೆಗಳಲ್ಲಿ ನೀರಿನ ತೆರಿಗೆಯೂ ಆ ಸಂಬಂಧದಲ್ಲಿ ವೆಚ್ಚವೂ ಎರಡೂ ಹೆಚ್ಚಾಗಿ ಕಂಡುಬರುತ್ತವೆ.

ಬಡವರ ಪಾಲನೆ ಮ್ಯುನಿಸಿಪಾಲಿಟಿಗಳ ಮುಖ್ಯ ಕೆಲಸವಾಗಿದ್ದರೂ ಯಾವ ಮ್ಯುನಿಸಿಪಾಲಿಟಿಯವರೂ ಆ ಕಡೆ ವಿಶೇಷ ಗಮನವನ್ನು ಹರಿಸಿಲ್ಲವೆನ್ನಬಹುದು.

ಸಾಮಾನ್ಯವಾಗಿ ಎಲ್ಲರೂ ಜನಾರೋಗ್ಯಕ್ಕೂ ರಸ್ತೆಗಳ ನಿರ್ಮಾಣಕ್ಕೂ ಹೆಚ್ಚುಗಮನ ಕೊಡುತ್ತಿದ್ದಾರೆ. ಪಾಶ್ಚಾತ್ಯ ದೇಶಗಳ ಮ್ಯುನಿಸಿಪಾಲಿಟಿಗಳವರು ಜನರ ಸೌಕರ್ಯಕ್ಕೆ ಮಾಡಿರುವ ಕೆಲಸಗಳು ಅದ್ಭುತವಾಗಿರುವುವು. ಅವುಗಳೆಲ್ಲವೂ ಇಲ್ಲಿ ಸದ್ಯಕ್ಕೆ ಸಾಧ್ಯವಾಗದಿದ್ದರೂ ಅನೇಕ ಜನ ಹಿತಕಾರ್ಯಗಳನ್ನು ಈಗಲೂ ಮಾಡಬಹುದು. ಆದರೆ ಸಾಧಾರಣ ಮ್ಯುನಿಸಿಪಾಲಿಟಿಗಳ ಹುಟ್ಟುವಳಿ ಬಹು ಕಡಮೆ. ಅದನ್ನು ಹೆಚ್ಚಿಸುವ ಪ್ರಯತ್ನವನ್ನು ಮಾಡಿದ ಹೊರತು ಯಾವ ಕೆಲಸವೂ ಆಗುವುದಿಲ್ಲ.

ವರಮಾನದ ಬಾಬುಗಳು

(೧) ಅಕ್ಸಾೖಯ್.—ಬಟ್ಟೆ, ಸೀಮೆಎಣ್ಣೆ, ಹೊಗೆಸೊಪ್ಪು, ಬೆಲ್ಲ ಮುಂತಾದ ಬಹುಜನರು ಉಪಯೋಗಿಸುವ ವಸ್ತುಗಳ ಮೇಲೆ ಈ ತೆರಿಗೆ

ಹಾಕುವರು ; ಇದರ ದರ ಇಷ್ಟಕ್ಕೆ ಮೀರಕೂಡದೆಂದು ಸರ್ಕಾರದವರು ವಿಧಿಸಿರುತ್ತಾರೆ. ಯಾವ ಬಗೆಯ ಸಾಮಾನಿನ ಮೇಲೆ ಸುಂಕ ಎತ್ತಬಹುದೆಂಬುದನ್ನು ನಿರ್ಧರಿಸಿರುತ್ತಾರೆ. ಈ ಬಗೆಯ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುವುದು ಸುಲಭವಾದ್ದರಿಂದಲೂ ಇತರ ಕಾರಣಗಳಿಂದಲೂ ಇದನ್ನು ಬಿಟ್ಟು ಬೇರೆ ಬಗೆಯ ತೆರಿಗೆ ಹಾಕುವುದು ಮೇಲೆಂದು ತಿಳಿದವರ ಅಭಿಪ್ರಾಯ.

(೨) ಮನೆ ಮತ್ತು ಬೀಡಿನ ಕಂದಾಯ.—ಕಟ್ಟಿದ ಮನೆಗಳ ಮೇಲೆ ಹಾಕುವ ತೆರಿಗೆ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಬೇರೆ ಬೇರೆ ರೀತಿ ನಿರ್ಧರವಾಗುತ್ತದೆ. ವರ್ಷಕ್ಕೆ ಮನೆ ಬಾಡಿಗೆ ಎಷ್ಟು ಬರಬಹುದು ಎಂದೆಣಿಸಿ ಅದರಲ್ಲಿ ಶೇಕಡ ಆರರಷ್ಟು ಕಂದಾಯವನ್ನು ಪಟ್ಟಣಗಳಲ್ಲಿ ವಿಧಿಸುವರು. ಸಣ್ಣ ಮ್ಯುನಿಸಿಪಾಲಿಟಿಗಳಲ್ಲಿ ಮನೆಯ ಬೆಲೆ ಇಷ್ಟು ಎಂದು ಅಂದಾಜುಮಾಡಿ ಅದರ ಮೇಲೆ ಇಷ್ಟು ಎಂದು ತೆರಿಗೆ ಹಾಕುವರು. ಇದರ ಜೊತೆಗೆ ಕೆಲವುಕಡೆ ನೀರಿನ ತೆರಿಗೆ ಬೆಳಕಿನ ತೆರಿಗೆಗಳನ್ನು ಮನೆಗಳ ಯಜಮಾನರು ತೆರಬೇಕಾಗುವುದು. ಬೀಡು ನಿವೇಶನಗಳ ಮೇಲೆ ಇಷ್ಟಕ್ಕೆ ಇಷ್ಟು ಕೊಡಬೇಕೆಂದು ಗೊತ್ತಾಗುತ್ತದೆ. ಈ ಬಾಬಿನಲ್ಲಿ ಈಗಿಗಿಂತಲೂ ಹೆಚ್ಚು ವಸೂಲಾಗಬಹುದೆಂದೂ ವಸೂಲಾಗಬೇಕಾಗಿರುವುದು ಕೂಡ ಸರಿಯಾಗಿ ಆಗುತ್ತಿಲ್ಲವೆಂದೂ ಲೆಕ್ಕಗಳಿಂದ ತಿಳಿಯಬರುತ್ತದೆ.

(೩) ಗಾಡಿಗಳಮೇಲೂ ದನದಮೇಲೂ ಇಷ್ಟಕ್ಕೆ ಮೀರಿ ತೆರಿಗೆ ಹಾಕಕೂಡದೆಂದು ಸರ್ಕಾರದ ನಿಯಮವಿದೆ.

(೪) ಉಕ್ಕಡದ ಸುಂಕ–ತೆಪ್ಪ–ಓಡೆಗಳು.—ವ್ಯಾಪಾರದ ಭಾಟಾ ಮಾರ್ಗಗಳಲ್ಲಿರುವ ನಂಜನಗೂಡು, ದಾವಣಗೆರೆ ಮುಂತಾದ ಮ್ಯುನಿಸಿಪಾಲಿಟಿಗಳಿಗೆ ಈ ಬಾಬಿನಿಂದ ಬಹಳ ಹಣ ಬರುತ್ತದೆ. ಕಂಟ್ರಾಕ್ಟು ಕೊಟ್ಟು ಸುಂಕ ವಸೂಲು ಮಾಡಿಸುವ ಪದ್ಧತಿ ಇರುವಕಡೆ ವಸೂಲಿ ಸುಲಭವಾಗಿಯೂ, ಕ್ರಮವಾಗಿಯೂ ನಡೆಯುತ್ತದೆ. ಸಂಸ್ಥಾನಾದ್ಯಂತ ತಿರುಗುವ ಮೋಟರು ಗಾಡಿಗಳ ಮೇಲೆ ಸರ್ಕಾರದವರೇ ತೆರಿಗೆ ಹಾಕಬೇಕೆಂದು ಇರುವುದರಿಂದ ಈ ಬಾಬಿನಲ್ಲಿ ಮ್ಯುನಿಸಿಪಾಲಿಟಿಗಳ ವರಮಾನ ಕಡಮೆಯಾದೀತು. ಆದರೆ ಅದರಿಂದ ವ್ಯಾಪಾರದ ಚಲನೆಗೂ ಬಹಳ ಸೌಕರ್ಯ ಒದಗೀತು.

(೫—೬) ಕಸುಬು ಅಂಗಡಿಗಳ ತೆರಿಗೆ.—ಒಂದಲ್ಲದಿದ್ದರೆ ಇನ್ನೊಂದನ್ನು ವಸೂಲುಮಾಡಬೇಕೆಂದು ವರಮಾನದ ತೆರಿಗೆಯನ್ನು ತೆರದಿರುವ ಸಣ್ಣ ವರ್ತಕರೂ ಕಸುಬುಗಾರರೂ ದೊಡ್ಡ ಊರುಗಳಲ್ಲಿ ಈ ಮೂಲಕ ತೆರಿಗೆಯನ್ನು ತೆರುವಂತೆ ಮಾಡಬಹುದೆಂದು ಈ ಬಗೆಯ ತೆರಿಗೆ ಏರ್ಪಟ್ಟಿದೆ.

(೭.) ಮ್ಯುನಿಸಿಪಾಲಿಟಿಯ ಆಸ್ತಿ.—ಸ್ವಂತ ಆಸ್ತಿಯಿಂದ ಬರುವ ಹುಟ್ಟುವಳಿ ಎಂದರೆ ಆಯಾ ಸ್ಥಳದ ಪೇಟೆ, ತೊಂಡು ದನದ ಕೊಟ್ಟಿಗೆ, ಕಸಾಬಿನ ಮನೆಗಳು, ಸಂತೆಮಾಳ ಮತ್ತು ಪರಿಸೆ ಪ್ರದೇಶ ಇಂಥವು ಗಳಿಂದ ಬರುವ ಹಣ.

(೮) ಚಂದಾ ಸಹಾಯಗಳು.

ಡಿಸ್ಟ್ರಿಕ್ಟ್ ಬೋರ್ಡುಗಳು

ಇವುಗಳ ಅಧಿಕಾರ ಎಷ್ಟು? ಇವು ಮಾಡಬೇಕಾದ ಕೆಲಸಗಳು ಇಂಥವು ಎಂಬುದನ್ನು ಸರ್ಕಾರದವರು ಗೊತ್ತುಮಾಡಿದ್ದಾರೆ.

ಕೆಲಸ

ರಸ್ತೆ ಹಾಕುವುದು, ಊರಿನ ನೈರ್ಮಲ್ಯ, ಜನರ ಆರೋಗ್ಯ, ಚಿಕಿತ್ಸಾ ಸಹಾಯಗಳು, ವಿದ್ಯಾಭ್ಯಾಸದ ಏರ್ಪಾಡು ಇವುಗಳೇ ಅಲ್ಲದೆ ಡಿಸ್ಟ್ರಿಕ್ಟಿನ ಸಂಪದಭಿವೃದ್ಧಿಗೂ ಗಮನಕೊಡತಕ್ಕದ್ದು ಇವರ ಕರ್ತವ್ಯ. ಎಂದರೆ ಕೈಗಾರಿಕೆ, ವ್ಯವಸಾಯ, ವ್ಯಾಪಾರ, ವಿದ್ಯಾಭ್ಯಾಸ ಇವುಗಳ ಬೆಳವಣಿಗೆಗೂ ಸಹಕಾರ ಸಂಘಗಳ ವ್ಯವಸ್ಥಾಪನೆಗೂ ಇವರು ವಿಶೇಷವಾಗಿ ಸಹಾಯ ಮಾಡಬೇಕೆಂಬುದು ನಿಯಮ. ಆದರೆ ಈ ಕಾರ್ಯಗಳನ್ನೆಲ್ಲ ನಡಸಲು ಬೇಕಾಗುವ ಹುಟ್ಟುವಳಿ ಇವರಿಗಿಲ್ಲ.

ಸ್ಥಳೀಯ ಸೆಸ್ಸುಗಳಲ್ಲಿ ನಿಯತವಾದ ಒಂದು ಭಾಗ; ವಿದ್ಯಾಭ್ಯಾಸದ ಸೆಸ್ಸು; ಐಚ್ಛಿಕವಾದ ರೆಯಿಲ್ವೆ ಅಥವಾ ವಿಶೇಷ ಸೆಸ್ಸುಗಳು; ಸುಂಕ ಗಳು; ಸ್ವಂತ ಆಸ್ತಿಗಳಿಂದ ಬರುವ ಹಣ ಈ ಬಾಬುಗಳಲ್ಲಿ ಡಿಸ್ಟ್ರಿಕ್ಟು ಬೋರ್ಡ್ ಹುಟ್ಟುವಳಿ ಬರುತ್ತದೆ.

ಕಳೆತಗಳು ಕಳೆಯಲಾಗಿ ಅವಕ್ಕೆ ಒಂಭತ್ತೂವರೆ ಲಕ್ಷ ರೂಪಾಯಿಗಳ ಆದಾಯವೂ ಎಂಟೂವರೆ ಲಕ್ಷಗಳಷ್ಟು ವೆಚ್ಚವೂ ಆಗುವುದು. ಉಳಿದುದನ್ನು ಪ್ರಜಾವರ್ಗದ ಸೌಕರ್ಯವನ್ನುಂಟುಮಾಡುವ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಲು ಅವಕಾಶವಾಗುತ್ತದೆ. ಖರ್ಚು ಕಳೆದು ಪ್ರತಿಯೊಂದಕ್ಕೂ ಉಳಿವುದು ೧೬ ಸಾವಿರ ರೂಪಾಯಿ ಎಂದು ಲೆಕ್ಕ ಮಾಡಿದರೆ ಅಷ್ಟು ಸ್ವಲ್ಪ ಹಣದಲ್ಲಿ ಯಾವ ದೊಡ್ಡ ಅಭಿವೃದ್ಧಿ ಕಾರ್ಯವನ್ನು ತಾನೇ ಕೈಕೊಳ್ಳಲಾದೀತು? ಆದುದರಿಂದ ಅಸಮರ್ಪಕವಾದ ಅಥವಾ ಅಪಾಯಕರವಾದ ವೃತ್ತಿಗಳ ಮೇಲೆ ಲೈಸೆನ್ಸ್ ಫೀ, ಕಸುಬಿನ ತೆರಿಗೆ, ಡಿಸ್ಟ್ರಿಕ್ಟಿನಲ್ಲಿ ಎತ್ತುವ ವರಮಾನದ ತೆರಿಗೆಯ ಮೇಲೆ ಒಂದು ಸೆಸ್ಸು—ಈರೀತಿ ಏರ್ಪಾಡುಮಾಡಿ ಹುಟ್ಟುವಳಿಯನ್ನು ಹೆಚ್ಚಿಸಿಕೊಳ್ಳಬಹುದೆಂದು ತೆರಿಗೆಯ ವಿಚಾರಣಾ ಸಮಿತಿಯವರು ಹೇಳಿದ್ದಾರೆ.

ಗ್ರಾಮಪಂಚಾಯಿತಿಗಳು

ಸಂಖ್ಯೆ

ನಮ್ಮ ಸಂಸ್ಥಾನದಲ್ಲಿ ಹಳ್ಳಿಗಳ ಸಂಖ್ಯೆ ೧೬,೭೭೨. ಇವುಗಳಲ್ಲಿ ೨ ಸಾವಿರಕ್ಕೆ ಮೇಲ್ಪಟ್ಟ ಜನರಿರುವುದು ೧೬೬ ರಲ್ಲಿ ಮಾತ್ರ. ಅನೇಕಕ್ಕೆ ಮ್ಯುನಿಸಿಪಾಲಿಟಿಗಳಿವೆ. ೫೦೦ಕ್ಕೆ ಕಡಮೆ ಜನರಿರುವ ಹಳ್ಳಿಗಳ ಸಂಖ್ಯೆ ೧೩,೭೮೫! ಇವುಗಳಲ್ಲಿ ಒಟ್ಟು ೨೬,೧೭,೮೯೫ ಜನ ಎಂದರೆ ಹಳ್ಳಿಯೊಂದಕ್ಕೆ ೨೦೦ ಜನರಂತೆ ವಾಸವಾಗಿದ್ದಾರೆ. ಹಳ್ಳಿಗಳೆಂದರೆ ಸಾಮಾನ್ಯವಾಗಿ ಇಂಥ ಹಳ್ಳಿಗಳನ್ನೇ ನಾವು ಇಲ್ಲಿ ನಿರ್ದೇಶಿಸುವುದು. ಇವುಗಳಲ್ಲಿಯೂ ಪ್ರಜಾಜೀವನಕ್ಕೆ ಸೌಕರ್ಯಗಳು ಏರ್ಪಡಬೇಕು. ತಮ್ಮ ಶಕ್ತಿಗೆ ತಕ್ಕಂತೆ ಇವು ಕಡ್ಡಾಯವಾಗಿ ಕೆಲವು ಕಾರ್ಯಗಳನ್ನು ಕೈಕೊಳ್ಳಬೇಕು. ಶಕ್ತಿ ಇದ್ದಂತೆಲ್ಲ ಇತರವನ್ನು ಕೈಕೊಳ್ಳಬಹುದು.

ಕೆಲಸ

ಕಡ್ಡಾಯವಾಗಿ ದಾರಿಗಳನ್ನು ಮಾಡುವುದು, ಕಾಪಾಡುವುದು; ಕುಡಿಯುವ ನೀರಿನ ವಸತಿ ಕಲ್ಪಿಸುವುದು; ಗ್ರಾಮ ನೈರ್ಮಲ್ಯಕ್ಕೆ ಏರ್ಪಡಿಸುವುದು; ದೀಪಹಾಕುವುದು; ಇತರ ಸಮಾಜ ಸೇವೆಗಳಿಗೂ ಎಂದರೆ ಬಡವರ ಮತ್ತು ರೋಗಿಗಳ ಸಹಾಯ, ವಿದ್ಯೆ, ವ್ಯವಸಾಯ,

ಗ್ರಾಮದ ಉದ್ಯೋಗಗಳ ಅಭಿವೃದ್ಧಿ, ಸಹಕಾರ ಮುಂತಾದವಕ್ಕೂ ಗಮನ ಕೊಡಬೇಕು. ಶಕ್ತಿ ಇದ್ದರೆ ಇವುಗಳ ಜೊತೆಗೆ ಹಳ್ಳಿಯ ಕಾಡುಗಳ ರಕ್ಷಣೆ, ಕೆರೆಯ ಕಾಮಗಾರಿ, ಸಣ್ಣ ಗುಡಿ ಮುಂತಾದ ಮುಜರಾಯಿ ಸಂಸ್ಥೆಗಳ ವಿಚಾರಣೆ, ವಿದ್ಯಾಶಾಲೆಗಳ ವಿಚಾರಣೆ ಮುಂತಾದವನ್ನೂ ನೋಡಿಕೊಳ್ಳ ಬಹುದು.

ಹಣ

ಆದರೆ ಇದನ್ನೆಲ್ಲ ಮಾಡುವುದಕ್ಕೆ ಹಣ ಎಲ್ಲಿಂದ ಬರಬೇಕು? ಸರ್ಕಾರದವರೂ ಡಿಸ್ಟ್ರಿಕ್ಟು ಬೋರ್ಡುಗಳವರೂ ಕೊಡುವ ಹಣ ಸಹಾಯ ಒಂದಿದೆ, ನಿಜ. ಅದು ಸಾಕಾಗುವುದಿಲ್ಲವಾದುದರಿಂದ ಎಲ್ಲ ಮನೆ, ಅಂಗಡಿ, ವ್ಯಾಪಾರ ಸ್ಥಳ, ಪಾಳು ನಿವೇಶನ, ಹಿತ್ತಿಲುಗುಂಡಿ ಇವುಗಳ ಮೇಲಿನ ತೆರಿಗೆಯಿಂದಲೂ ಇತರವಾಗಿ ಕೂಡಿಸುವ ಎಲ್ಲಾ ಸೆಸ್ಸು, ಲೈಸೆನ್ಸ್ ಫೀ ಮುಂತಾದ ಬಾಬುಗಳಿಂದಲೂ ಹಣ ಒದಗಿಸಿಕೊಳ್ಳಬಹುದು. ಜೊತೆಗೆ ಜನರಿಂದ ಹಳ್ಳಿಯಲ್ಲಿ ಸಾಮಾನ್ಯ ಕಾರ್ಯಗಳಿಗೆ ವರ್ಷಕ್ಕೆ ಇಷ್ಟು ದಿನ ಎಂದು ಕೂಲಿ ಸೇವೆಯನ್ನು ತೆಗೆದುಕೊಳ್ಳಬಹುದು.

ಗ್ರಾಮ ಪಂಚಾಯಿತಿ ಕಾನೂನಿನ ಪ್ರಕಾರ ಮನೆಕಂದಾಯ ಇಷ್ಟಕ್ಕೆ ಮೀರಕೂಡದೆಂದು ನಿರ್ಧರವಾಗಿದೆ. ೪೦–೫೦ ಮನೆಗಳಿರುವ ಹಳ್ಳಿಗಳಲ್ಲಿ ವರ್ಷಕ್ಕೆ ೧೦೦–೧೫೦ ರೂಪಾಯಿಗಳಿಗೆ ಮೀರಿ ಹುಟ್ಟುವಳಿ ಯಾಗುವುದಿಲ್ಲ. ತೊಂಡು ದನದಕೊಟ್ಟಿಗೆಯಿಂದಲೂ ಹಣ ಗಳಿಸಬಹುದು. ಎಲ್ಲಾ ಸೇರಿ ೨೦೦ ರೂಪಾಯಿಗಳಿಗೆ ಮೇಲೆ ಉತ್ಪತ್ತಿಯಾಗುವುದು ಅಸಾಧ್ಯ. ಗ್ರಾಮಗಳಲ್ಲಿ ಅತ್ಯಗತ್ಯವಾದ ಕುಡಿಯುವ ನೀರಿನ ವಸತಿ, ರಸ್ತೆ ದಾರಿಗಳ ಏರ್ಪಾಡು, ಚರಂಡಿ, ಗ್ರಾಮ ನೈರ್ಮಲ್ಯದ ಕೆಲಸ, ಚಿಕಿತ್ಸಾಸೌಕರ್ಯ ಮುಂತಾದವಕ್ಕೆ ಕಡೆಯಪಕ್ಷ ೪೦೦–೫೦೦ ರೂಪಾಯಿಗ ಳಾದರೂ ಬೇಕಾಗುವುದು.

ಈ ಹೆಚ್ಚು ಹಣವನ್ನು ಸರ್ಕಾರದವರೇ ಒದಗಿಸಬೇಕಾಗುತ್ತದೆ.

ಒದಗಿಸುವ ರೀತಿ

ಸಾಮಾನ್ಯವಾಗಿ ಗ್ರಾಮ ಸಂಸ್ಥೆಗಳಿಗೆ ಮೂರು ಬಗೆಯಲ್ಲಿ ಹಣ ಸಹಾಯವನ್ನು ಒದಗಿಸಬಹುದು :

(೧) ಹಳ್ಳಿಗಳಿಗೆ ಕೆಲವು ರಾಜಾದಾಯದ ಬಾಬುಗಳನ್ನು ಒಪ್ಪಿಸಿ ಅವರೇ ಅವನ್ನು ವಸೂಲುಮಾಡಿಕೊಳ್ಳುವಂತೆ ಅಧಿಕಾರ ಕೊಡುವುದು ; ಅಥವಾ, ತಾವೇ ವಸೂಲುಮಾಡಿ ಅವನ್ನು ಅವರಿಗೆ ಕೊಡುವುದು ;

ಅಥವಾ,

(೨) ಕೆಲವು ಹುಟ್ಟುವಳಿ ಬಾಬುಗಳಲ್ಲಿ ಗ್ರಾಮ ಪಂಚಾಯಿತಿಯವರಿಗೆ ಇಷ್ಟು ಭಾಗ, ಸರ್ಕಾರಕ್ಕೆ ಇಷ್ಟು ಭಾಗ ಎಂದು ನಿರ್ಧರಿಸುವುದು ;

ಅಥವಾ,

(೩) ನಿಯತವಾಗಿ ಇಷ್ಟು ಹಣ ಎಂದು ಕ್ರಮವಾಗಿ ಹಣ ಸಹಾಯ ಮಾಡುವುದು.

ಮೊದಲಿನ ಎರಡು ವಿಧಗಳಲ್ಲಿ ಎಲ್ಲ ಹಳ್ಳಿಗಳಿಗೂ ಅನುಕೂಲ ದೊರೆಯುವುದಿಲ್ಲ. ಸಾಮಾನ್ಯವಾಗಿ ಸಹಾಯ ದ್ರವ್ಯ ಕೊಡುವ ಪದ್ಧತಿಯೇ ಮೇಲೆಂದು ನಿಶ್ಚಯಿಸಿದ್ದಾರೆ. ನಮ್ಮದೇಶದ ಎಲ್ಲ ಗ್ರಾಮ ಪಂಚಾಯಿತಿಗಳವರ ಹುಟ್ಟುವಳಿ ೧೦ ಲಕ್ಷ ಚಿಲ್ಲರೆ. ಅನೇಕ ಹಳ್ಳಿಗಳಲ್ಲಿ ಕಡ್ಡಾಯವಾಗಿ ಜನರಿಂದ ಬಾವಿಯನ್ನು ಆಳಮಾಡಿಸುವುದು ; ಊರಿನ ರಸ್ತೆ ಸರಿಮಾಡಿಸುವುದು, ನೀರಿನ ಗುಂಡಿ ಮುಚ್ಚಿಸುವುದು ; ಲಾಂಟಾನ ಪಾಪಾಸ್‌ಕಳ್ಳಿ ಹಾಳು ಮಾಡುವುದು ಮುಂತಾದ ಕೆಲಸಗಳಿಗೆ ವಾರಕ್ಕಿಷ್ಟು ಕೂಲಿ ಕೆಲಸ ಮಾಡಬೇಕೆಂದು ಗೊತ್ತುಮಾಡಿಕೊಂಡಿರುತ್ತಾರೆ.

ಒಟ್ಟಿನಲ್ಲಿ ಸಂಸ್ಥಾನದ ಆಯವ್ಯಯ

ಒಟ್ಟಿನಲ್ಲಿ ಸರ್ಕಾರದ ವೆಚ್ಚಗಳು ಹೆಚ್ಚುತ್ತಿರುವುವು. ಆ ಪ್ರಮಾಣದಲ್ಲಿ ಸದ್ಯಕ್ಕೆ ಹುಟ್ಟುವಳಿ ಹೆಚ್ಚುವ ಸಂಭವ ಕಡಮೆ. ನಮ್ಮ ತೆರಿಗೆಯ ಪದ್ಧತಿಯನ್ನು ವಿಮರ್ಶೆ ಮಾಡಿರುವ ಸಭೆಯವರು ಹುಟ್ಟುವಳಿ ಹೆಚ್ಚಿಸುವುದಕ್ಕೆ ನಾಲ್ಕು ಮಾರ್ಗಗಳಿವೆಯೆಂದು ಹೇಳಿ ಅವುಗಳಲ್ಲಿ ಯಾವುದರಿಂದ ಹೆಚ್ಚು ಪ್ರಯೋಜನ, ಯಾವುದು ಸಾಧ್ಯ ಎಂಬುದನ್ನು ತಿಳಿಸಿದ್ದಾರೆ.

(೧) ಈಗಿರುವ ಸಾಲಗಳನ್ನು ಸರ್ಕಾರದವರು ತೀರಿಸಿಬಿಡುವ ಯತ್ನಮಾಡಿದರೆ ಬಡ್ಡಿಗಾಗಿಯೂ ಇತರ ಸಾಲದ ತೇಮಾನಕ್ಕಾಗಿಯೂ ಈಗ ಮೀಸಲಾಗುತ್ತಿರುವ ಖರ್ಚನ್ನು ಕಡಮೆ ಮಾಡುವುದು.

(೨) ಸಾಮಾನ್ಯ ಆಡಳಿತದ ಖರ್ಚನ್ನು ಮಿತಮಾಡುವುದು ;

(೩) ಬ್ರಿಟಿಷ್ ಸರ್ಕಾರದವರನ್ನು ಒಪ್ಪಿಸಿ ಪೊಗದಿ ಮುಂತಾದವನ್ನು ಕಡಮೆ ಮಾಡಿಸಿಕೊಳ್ಳುವುದು ; ವಿದೇಶಿ ವಸ್ತ್ರಗಳ ಮೇಲಿನ ಸುಂಕ, ಉಪ್ಪಿನ ತೆರಿಗೆ ಮುಂತಾದ ಹುಟ್ಟುವಳಿಗಳಲ್ಲಿ ಅವರಿಂದ ಭಾಗ ಪಡೆದು ಹಣ ಸಂಪಾದಿಸುವುದು ;

(೪) ಹೊಸ ತೆರಿಗೆಗಳನ್ನು ಹಾಕುವುದು ;

—ಎಂಬವೇ ಈ ನಾಲ್ಕು ವಿಧಾನಗಳು. ಆದರೆ ಈಗಿರುವ ಸಾಲಗಳನ್ನು ಮೇಲೆ ಹೇಳಿದಂತೆ ತೀರಿಸಿ ಈಗ ಆ ಬಾಬಿನಲ್ಲಿ ವೆಚ್ಚವಾಗುತ್ತಿರುರುವುದನ್ನು ಉಳಿಸಿಕೊಂಡರೂ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡಿರುವ ಯಾವ ಸಂಸ್ಥಾನವೇ ಆಗಲಿ ಮುಂದೆ ಸಾಲಮಾಡುವುದೇ ಇಲ್ಲವೆಂದು ಶಪಥಮಾಡಲಾಗುವುದಿಲ್ಲ. ಅರ್ವಿನ್ ಕಾಲುವೆ ಮುಂತಾದ ಕಾಲುವೆಗಳ ಕೆಲಸಗಳಿಂದ ಮುಂದೆ ದೇಶಕ್ಕೆ ಬಹುಮಟ್ಟಿನ ಮೇಲ್ಮೆ ದೊರೆಯುತ್ತದೆಂದು ತಿಳಿದಿರುವಾಗ ಅಂಥ ಕಾರ್ಯಗಳಿಗೆ ಹಣ ಒದಗಿಸಬೇಕಾಗುವುದು. ಈ ಕಾರ್ಯಗಳು ಹುಟ್ಟುವಳಿ ಕೊಡುವ ಸ್ಥಿತಿಗೆ ಬರುವವರೆಗೂ ಸಂಸ್ಥಾನದ ಸಾಧಾರಣ ಆದಾಯದಿಂದಲೇ ಅವುಗಳಿಗೆ ಬಡ್ಡಿ ಮುಂತಾದವನ್ನು ತೆರಬೇಕಾಗುವುದು.

ಆಡಳಿತದ ಖರ್ಚುಗಳು ಕಡಮೆಯಾಗುವುದಿರಲಿ ; ಹೆಚ್ಚದಿದ್ದರೆ ಪುಣ್ಯ. ಆದರೆ ಅಭಿವೃದ್ಧಿ ಶಾಖೆಗಳಲ್ಲಿ ಕೆಲಸ ಹೆಚ್ಚಾಗಿ ನಡೆಯಬೇಕೆಂದು ಸರ್ಕಾರದವರು ತೀರ್ಮಾನ ಮಾಡಿರುವಾಗ ಈ ಬಾಬಿನಿಂದಲೂ ಉದ್ಧಾರವಾಗುವ ಹಾಗಿಲ್ಲ.

ಇನ್ನು ಉಳಿದವು ಎರಡು ಮಾರ್ಗಗಳು : (೧) ಬ್ರಿಟಿಷ್ ಸರ್ಕಾರದವರಿಂದ ಪಾಲು ಕೇಳುವುದು.—ಇದು ಅಗತ್ಯವಾಗಿ ಆಗಬೇಕಾದ ಕೆಲಸ, ನ್ಯಾಯವಾದುದು. ಆದರೆ ಅವರ ಖುಷಿ ಬರುವತನಕ ಮತ್ತು ಕೇಂದ್ರ ಸರ್ಕಾರದ ಹಣಕಾಸಿನ ಸ್ಥಿತಿ ಮೇಲಾಗುವ ತನಕ ನಮಗೆ ಆ ಹೆಚ್ಚು ವರಮಾನ ಸಿಕ್ಕುವಹಾಗಿಲ್ಲ. (೨) ಮಿಕ್ಕುದು ಹೆಚ್ಚು ತೆರಿಗೆ ಎತ್ತುವುದು. ಜನರು ಈಗ ತೆರುತ್ತಿರುವುದೇ ಹೆಚ್ಚೆಂದು ಹೇಳುತ್ತಿರುವಾಗ ಯಾವ ಹೆಚ್ಚು ತೆರಿಗೆಗಳನ್ನು ಕೊಟ್ಟಾರೊ ತಿಳಿಯದು. ಯಾವ ಖರ್ಚನ್ನು ಕಡಮೆಮಾಡುವುದು ? ಯಾವ ಹುಟ್ಟುವಳಿ ಹೇಗೆ ಹೆಚ್ಚಿಸುವುದು ? ಸ್ಥಳ ಸಂಸ್ಥೆಗಳಿಗೆ

ಯಾವ ಆದಾಯವನ್ನೂ ಲಾಭ ನಷ್ಟಗಳನ್ನೂ ಒಪ್ಪಿಸುವುದು, ಯಾವ ಖರ್ಚುಬಾಬುಗಳಿಗೆ ಹೊಣೆ ಮಾಡುವುದು ಮುಂತಾದ ವಿಷಯಗಳನ್ನು ಸರ್ಕಾರದವರು ಪ್ರಜೆಗಳ ಸಲಹೆಯಿಂದಲೂ ಅನುಮತಿಯಿಂದಲೂ ನಿರ್ಧರಿಸಬೇಕಾಗಿದೆ.

ಮೈಸೂರನ್ನು ಗೆದ್ದು ಪುನಃ ನಮ್ಮ ರಾಜವಂಶೀಯರಿಗೇ ಬ್ರಿಟಿಷ್ ಸರ್ಕಾರದವರು ಹಿಂದಕ್ಕೆ ಕೊಟ್ಟರು. ಇದರಿಂದ ಅವರಿಗೆ ಬಹುವಾಗಿ ಆದಾಯ ಬರುತ್ತಿತ್ತು. ಅದನ್ನೆಲ್ಲ ಲೆಕ್ಕಮಾಡಿ ಪೊಗದಿ ಹಣವನ್ನು ಮೊತ್ತದಲ್ಲಿಷ್ಟು ಎಂದು ಮೊದಲು ಗೊತ್ತುಮಾಡಿದರೆಂದು ಕಾಣುತ್ತದೆ. ಇತರ ಅನೇಕ ರಾಜ್ಯಗಳಿಗೆ ಮಾಡಿಕೊಟ್ಟಿರುವ ರಾಜಕೀಯ ಆರ್ಥಿಕ ಅನುಕೂಲಗಳಿಗಿಂತ ಮೈಸೂರಿಗೆ ಅವರು ಹೆಚ್ಚು ಅನುಕೂಲಗಳನ್ನು ಮಾಡಿಕೊಟ್ಟಿರುವರೆನ್ನಬಹುದು. ಅವರು ಪೊಗದಿಯನ್ನು ಕೊಡಬೇಕಾದ್ದಿಲ್ಲವೆಂದು ತೀರ್ಮಾನ ಮಾಡಿದಾಗ್ಗೂ ಮುಂದೆ ಬರಲಿರುವ ರಾಜ್ಯಸಮ್ಮೇಳನ ಪದ್ಧತಿಯಂತೆ ಕೂಡ (Federal Constitution) ನಾಣ್ಯವ್ಯವಸ್ಥೆ, ವರ್ತಮಾನ ಸೌಕರ್ಯಗಳು, ಸುಂಕ, ವಿದೇಶಿ ವ್ಯಾಪಾರದ ತೆರಿಗೆ ಮುಂತಾದ ಬಾಬುಗಳಲ್ಲಿ ಬರುವ ಹಣ ಕೇಂದ್ರ ಸರ್ಕಾರಕ್ಕೇ ಸೇರುವುದು ವಾಡಿಕೆ. ಇಂಡಿಯಾ ದೇಶದ ಮೇಲ್ಮೆಗೆಲ್ಲಾ ಸಂಬಂಧಪಡುವ ವಿಷಯಗಳನ್ನು ಅವರು ಗಮನಿಸುತ್ತಿರುವುದರಿಂದ ಅಲ್ಲಿತಾನೇ ಅವರು ರಿಯಾಯತಿ ತೋರಿಸುವರೋ ಇಲ್ಲವೊ ತಿಳಿಯದು. ಪೊಗದಿಯೆಂಬ ಹೆಸರಿನಲ್ಲಿ ಸ್ವೀಕರಿಸುತ್ತಿದ್ದ ಹಣವನ್ನು ರದ್ದು ಮಾಡಿದರೂ ಸಮ್ಮೇಳನದ ಚಂದಾ ಎಂಬ ಹೆಸರಿನಲ್ಲಿ ಪುನಃ ಕೇಳಿದರೆ ಸಂಸ್ಥಾನಕ್ಕೆ ಪ್ರಯೋಜನ ಯಥಾಸ್ಥಿತಿಯಾಗುವುದು.

೬. ರಸ್ತೆ ರೈಲ್ವೆಗಳು

ಮೈಸೂರು ದೇಶದ ಸುತ್ತಲೂ ಭೂ ಪರಿಮಿತಿ ಹೊರತು ಸಮುದ್ರವಿಲ್ಲ. ಮೂರುಕಡೆಯ ಗಡಿಗಳು ಪರ್ವತಪಂಗ್ತಿಗಳು. ಸಂಚಾರಕ್ಕೆ ಅನುಕೂಲವಾದ, ಸರ್ವದಾ ತುಂಬಿ ಹರಿಯುವ, ಕಲ್ಲುಬಂಡೆಗಳಿಲ್ಲದ ದೊಡ್ಡ ನದಿಗಳಿಲ್ಲ. ಅವುಗಳ ಮೇಲೆ ಯಾವ ವ್ಯಾಪಾರವೂ ನಡೆಯಲಾರದು. ಈ ಸಂಗತಿಗಳು ದೇಶದ ಹೊರ ವ್ಯಾಪಾರಕ್ಕೆ ಪ್ರತಿಕೂಲಗಳು. ಟಿಪ್ಪು ಸುಲ್ತಾನರ ಕಾಲದಲ್ಲಿ ಆಮದು ನಿಲ್ಲಬೇಕೆಂಬ ಆಜ್ಞೆಯಾಗಿತ್ತು. ಅದರ ಉದ್ದೇಶ ಶ್ಲಾಘ್ಯವಾದರೂ ಪರಿಣಾಮದಲ್ಲಿ ವಿಪರೀತವಾಯಿತು : ವ್ಯಾಪಾರಕ್ಕೆ ತಡೆ ಬಂದಿತು. ದೇಶದ ಕೈಗಾರಿಕೆಗೂ ಕುಂದು ಬಂದಿತು. ಮುಮ್ಮಡಿ ಒಡೆಯರ ಕಾಲದಲ್ಲಿ ಅನೇಕವಾದ ಸುಂಕ ತೆರಿಗೆಗಳ ಕಟ್ಟಿನಿಂದ ವ್ಯಾಪಾರ ಕೈಗಾರಿಕೆಗಳ ಕಾಲು ಕಟ್ಟಿತು. ೧೮೩೧ರಿಂದ ಈಚೆಗೆ ಎಲ್ಲ ಪ್ರತಿ ಬಂಧಕಗಳೂ ನಿವಾರಿತವಾಗಿ ಆ ವರ್ಷದಲ್ಲಿ ದೊಡ್ಡ ರಸ್ತೆಗಳ ನಿರ್ಮಾಣ ಕಾರ್ಯ ಆರಂಭವಾಯಿತು. ಘಾಟ್‌ಗಳ ಮೂಲಕವೂ, ಕಣಿವೆಗಳ ಮೂಲಕವೂ, ಇತರ ರಸ್ತೆಗಳ ಮೂಲಕವೂ, ಮೈಸೂರಿನ ಸುತ್ತಲ ಪ್ರದೇಶಗಳಿಗೂ ಅಲ್ಲಿನ ರೇವುಗಳಿಂದ ಹೊರದೇಶಗಳಿಗೂ ನಮ್ಮ ಸಾಮಾನು ಹೋಗುವಂತಾಯಿತು.

ಮೈಸೂರು ಬೆಂಗಳೂರಿಂದ ಹೊರಡುವ ರೈಲುಗಳು ಬೊಂಬಾಯಿ ಮದರಾಸುಗಳಿಗೂ, ದಾರಿಯ ದೊಡ್ಡ ಪಟ್ಟಣಗಳಿಗೂ ಆ ಮೂಲಕ ಇಂಡಿಯಾ ದೇಶದ ಎಲ್ಲ ಭಾಗಗಳಿಗೂ ಈ ದೇಶದ ವ್ಯಾಪಾರವನ್ನು ಸೇರಿಸುತ್ತವೆ. ಒಂದು ವಿಧದಲ್ಲಿ ನೋಡಿದರೆ ದಕ್ಷಿಣ ದೇಶಕ್ಕೆಲ್ಲ ಮೈಸೂರು ಪ್ರಾಂತ (ಅದರಲ್ಲಿಯೂ ಬೆಂಗಳೂರು) ಮಧ್ಯರಾಷ್ಟ್ರವಾಗಿರುವುದರಿಂದ ಸಂಸ್ಥಾನದ ವ್ಯಾಪಾರ ಅಭಿವೃದ್ಧಿಯಾಗುವುದಕ್ಕೆ ಅಮಿತವಾದ ಅವಕಾಶವುಂಟು.

ಹಿಂದೆ ವ್ಯಾಪಾರ—ಸಂಚಾರ

ಹಿಂದಿನ ಕಾಲದಲ್ಲಿ ರಸ್ತೆ ರೈಲುಮಾರ್ಗ ಹೆಚ್ಚಾಗಿಲ್ಲದಿದ್ದಾಗ ಒಂದೂರಿಂದ ಇನ್ನೊಂದೂರಿಗೆ ಸಾಮಾನು ಸಾಗುವುದು ಕಷ್ಟವಾಗಿಯೂ ನಿಧಾನವಾಗಿಯೂ ಇತ್ತು. ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಯೂ ತನಗೆ ಬೇಕಾದುದನ್ನು ಬಹುಮಟ್ಟಿಗೆ ತಾನೇ ಒದಗಿಸಿಕೊಳ್ಳುತ್ತಿತ್ತು. ವಾರಕ್ಕೊಂದು ಸಲ ನಡೆಯುವ ಸಂತೆಯಲ್ಲಿ ಆ ಹಳ್ಳಿಯಲ್ಲಿ ದೊರಕದ ಹಲಕೆಲವು ವಸ್ತುಗಳನ್ನು ನೆರೆಯ ಹಳ್ಳಿಯವರು ಕೊಂಡುತಂದು ಮಾರುತ್ತ ಎಲ್ಲ ಉಪಯುಕ್ತಿಗಳನ್ನೂ ಪಡೆಯುತ್ತಿದ್ದರು. ವಾರಕ್ಕೆಲ್ಲಾ ಬೇಕಾದ ದಿನಸಿ ಸಾಮಾನನ್ನು ಈ ಸಂತೆಗಳಲ್ಲಿ ಕೊಂಡಿಟ್ಟುಕೊಳ್ಳುವ ಪದ್ಧತಿ ಈವರೆಗೂ ನಡೆದು ಬಂದಿದೆ. ಜಾತ್ರೆ ರಥೋತ್ಸವಗಳ ಕಾಲದಲ್ಲಿ ದನದ ಮಾರಾಟವೂ ಅನೇಕ ಕಡೆ ನಡೆಯುತ್ತಿದೆ.

ಬರಬರುತ್ತ ರಸ್ತೆಗಳೂ ಯಾನ ಸೌಕರ್ಯಗಳೂ ರೈಲ್ವೆ ವಿಸ್ತೀರ್ಣವೂ ಆದ ಹಾಗೆಲ್ಲ ದೊಡ್ಡ ಊರುಗಳಿಗೆ ಹೋಗಿ ಬರುವ ಸೌಕರ್ಯ ಹೆಚ್ಚಿ ವ್ಯಾಪಾರ ಬಹುದೂರ ಸಾಗಲು ಅವಕಾಶವಾಯಿತು. ದೇಶವಿದೇಶಗಳ ಸಾಮಾನನ್ನು ಮೂಲೆಯ ಹಳ್ಳಿಗಳಿಗೆ ಕೂಡ ತಂದು ಮಾರುವುದು ಮೊದಲಾಗಿ ಹಳ್ಳಿಯ ಸ್ವಸಂಪೂರ್ಣತೆಗೆ ಕುಂದು ಬಂದಿತು. ದೊಡ್ಡ ಊರುಗಳಿಂದ ವಿದೇಶಿವಸ್ತುಗಳನ್ನು ತಂದು ಮಾರುವುದು ಹೆಚ್ಚಿತು. ಕ್ರಮೇಣ ಬಹುದೂರದವರ ವಸ್ತುಗಳಿಗೆ ನಮ್ಮಲ್ಲಿಯೂ ನಮ್ಮ ವಸ್ತುಗಳಿಗೆ ಬಹುದೂರದ ಪ್ರದೇಶಗಳಲ್ಲಿಯೂ ಗಿರಾಕಿ ದೊರೆಯುವಂತಾಗಿ ಇಂತಹ ವ್ಯಾಪಾರದಿಂದ ಆಗುವ ಅನುಕೂಲ ಪ್ರತಿಕೂಲಗಳೆಲ್ಲವೂ ಒಂದಕ್ಕೆ ನಾಲ್ಕರಷ್ಟು ಹೆಚ್ಚಿದುವು. ಈ ಬಗೆಯ ವ್ಯಾಪಾರದ ಜೊತೆಗೆ ದಲ್ಲಾಳರ ಮತ್ತು ಮಾದರಿ ತೋರಿಸಿ ಸಾಮಾನನ್ನು ಕೊಂಡು ಮಾರುವವರ ಓಡಾಟ ಹೆಚ್ಚಿತು. ದೇಶದ ವ್ಯವಸಾಯ ಕೈಗಾರಿಕೆಗಳ ನೋಟವೂ ವ್ಯತ್ಯಾಸವಾಯಿತು. ಕೇವಲ ಆಹಾರದ ಬೆಳೆಗಳನ್ನು ಬೆಳೆಯುವುದರ ಜೊತೆಗೆ ಹಣದ ಬೆಳೆಗಳ ರುಚಿ ರೈತರಿಗೆ ಚಪಲ ತಂದಿತು. ಹಿಂದೆ ಒಂದು ಭಾಗದ ಪ್ರಯೋಜನಕ್ಕಾಗಿ ಮಾತ್ರ ಬೆಳೆಯುತ್ತಿದ್ದ ಅಥವಾ ತಯಾರಿಸುತ್ತಿದ್ದ ವಸ್ತುಗಳನ್ನು ಹೆಚ್ಚು ಬೆಲೆ ತರುವ ಕಡೆಗಳಿಗೆ ರಫ್ತು ಮಾಡುವ ಉದ್ದೇಶದಿಂದಲೇ ತಯಾರಿಸುವ ಅಭ್ಯಾಸವೂ ಆಯಿತು. ಹಣದ ಓಡಾಟವೂ ವರ್ತಕರ ಕೈಬಲವೂ

ಈ ಹಣದ ಬೆಳೆಗಳಲ್ಲಿ ಮುಂದಾದವು. ಈ ಓಡಾಟಗಳಿಂದ ಹೊಸ ವಸ್ತುಗಳೂ ಉಪವೃತ್ತಿಗಳೂ, ಲೇವಾದೇವಿ ವರ್ತಕತನಗಳೂ, ಚಟುವಟಿಕೆಯೂ ವ್ಯಾಪಾರ ವಿದ್ಯೆಗಳೂ ಎಲ್ಲಾ ಎದ್ದು ಮುಂದೆಬಂದುವೆನ್ನಬಹುದು.

ಒಳದೇಶದ ವ್ಯಾಪಾರವೆಲ್ಲ ರಸ್ತೆಗಳ ಮೇಲೆ ಎತ್ತಿನ ಗಾಡಿಗಳಲ್ಲಿಯೇ ವಿಶೇಷವಾಗಿ ನಡೆಯುತ್ತಿದೆ. ಮೋಟರು ಲಾರಿ ಮತ್ತು ಟ್ರಕ್ಕುಗಳ ಮೂಲಕ ಸಾಮಾನನ್ನು ಸಾಗಿಸುವ ಅಭ್ಯಾಸ ಹರಡುವವರೆಗೂ ಈ ಪದ್ಧತಿ ನಡೆದುಕೊಂಡು ಬಂದೀತು. ಅಲ್ಲಲ್ಲಿ ಸಣ್ಣ ವ್ಯಾಪಾರಗಾರರು ಎತ್ತುಗಳ ಮೇಲೆಯೂ ಕುದುರೆಗಳ ಮೇಲೆಯೂ ಸ್ವಲ್ಪಸ್ವಲ್ಪ ಸಾಮಾನನ್ನು ಸಾಗಿಸಿಕೊಂಡು ಹೋಗುವರು. ರೈಲು ಹೋಗುವ ಒಳದೇಶದ ಪ್ರಾಂತಗಳಲ್ಲಿ ಸ್ಟೇಷನ್ನಿನಿಂದ ಸ್ಟೇಷನ್ನಿಗೆ ರೈಲು ಗಾಡಿಗಳಲ್ಲಿ ಸಾಮಾನು ಸಾಗುವುದು.

ರಸ್ತೆಗಳು ಮೂರು ತೆರ

ಜನದ ಸಂಚಾರಕ್ಕೂ ವ್ಯಾಪಾರಕ್ಕೂ ಸೌಲಭ್ಯ ಒದಗಿಸುವ ರಸ್ತೆಗಳು ಮೂರು ಬಗೆಯವು. ಸರಕಾರದವರು ಹಾಕಿರುವ ರಾಜಮಾರ್ಗ, ಡಿಸ್ಟ್ರಿಕ್ಟ್ ರಸ್ತೆ, ಹಳ್ಳಿಯ ದಾರಿಜಾಡು. ಹಳ್ಳಿಗಳ ವೆಚ್ಚಕ್ಕೆ ಡಿಸ್ಟ್ರಿಕ್ಟಿನವರೂ ಅವರ ಸಹಾಯಕ್ಕಾಗಿ ಸರಕಾರದವರೂ ಸ್ವಲ್ಪಮಟ್ಟಿಗೆ ಹಣ ಒದಗಿಸುವುದರಿಂದ ಅವುಗಳ ಏರ್ಪಾಡು ಕಾಮಗಾರಿ ಸುಮಾರು ಒಂದೇ ತೆರನಾಗಿ ಆಗುತ್ತವೆ. ಸುಮಾರು ಎಲ್ಲ ದೊಡ್ಡ ರಸ್ತೆಗಳ ವಿಚಾರಣೆಯೂ ಸರಕಾರದ ಮರಾಮತ್ ಇಲಾಖೆಗೆ (P.W.D.) ಸೇರಿದೆ. ಹಳ್ಳಿಯ ಹಾದಿಗಳನ್ನು ಏರ್ಪಡಿಸುವ ಕಾರ್ಯ ಇನ್ನೂ ಆರಂಭವಾಗಬೇಕಾಗಿದೆಯೆನ್ನಬಹುದು. ಡಿಸ್ಟ್ರಿಕ್ಟ್ ರಸ್ತೆಗಳು ಸುಮಾರು ಸಮರ್ಪಕವಾಗಿ ಏರ್ಪಟ್ಟಿವೆ. ಈ ಮಾರ್ಗಗಳ ಉದ್ದ ಒಟ್ಟು ೩,೫೬೭ ಮೈಲಿ. ಇವುಗಳಲ್ಲಿ ೧,೭೫ಳ ಮೈಲಿಗಳಷ್ಟಕ್ಕೆ ಜಲ್ಲಿಕಲ್ಲು ಹಾಸಿ ಗಟ್ಟಿಮಾಡಿದ್ದಾರೆ. ಜಿಲ್ಲೆಯವರು ಹಣ ಒದಗಿದಂತೆಲ್ಲ ತಮ್ಮ ಪಾಲಿನ ರಸ್ತೆ ಹಾಕುವ ಮತ್ತು ಹಾಕಿರುವುದನ್ನು ಕಾಪಾಡುವ ಕೆಲಸವನ್ನು ಹೆಚ್ಚು ಮುತುವರ್ಜಿಯಿಂದ ಮಾಡುತ್ತಿದ್ದಾರೆ.

ರಸ್ತೆ–ವ್ಯಾಪಾರಾಭಿವೃದ್ಧಿ

ರಾಜಮಾರ್ಗಗಳೇ ದೇಶದ ವ್ಯಾಪಾರದ ಹೆದ್ದಾರಿಗಳು. ಅವುಗಳ ಉದ್ದ ೨,೦೬೧ ಮೈಲಿ. ಅವುಗಳಲ್ಲಿ ೧,೬೩೧ ಮೈಲಿಗೆ ಜಲ್ಲಿ ಹಾಸಿದೆ.

ವರ್ಷಕ್ಕೆ ಈ ಎರಡು ಬಾಬುಗಳಲ್ಲಿಯೂ ರಸ್ತೆಯ ಪಾಲನೆಗಾಗಿ ೭ ಲಕ್ಷ ರೂಪಾಯಷ್ಟು ವೆಚ್ಚವಾಗುತ್ತದೆ. ಒಂದು ಮೈಲಿ ರಸ್ತೆಯ ಪಾಲನೆಗೆ ಸುಮಾರು ೬೦೦ ರೂಪಾಯಿಗಳು ಬೇಕು. ಇಂಡಿಯಾದೇಶದ ಇತರ ಭಾಗಗಳಲ್ಲಿರುವ ಜನ ಸಂಖ್ಯೆಗೂ ರಸ್ತೆಗಳಿಗೂ ಹೋಲಿಸಿದರೆ ನಮ್ಮ ರಸ್ತೆಗಳ ಸಂಖ್ಯೆಯೂ ಉದ್ದವೂ, ಸಮರ್ಪಕತೆಯೂ ಹೆಚ್ಚು. ರಸ್ತೆ ಮತ್ತು ಯಾನ ವಾಹನ ಸೌಕರ್ಯಗಳಿಂದ ವ್ಯಾಪಾರವೂ ವ್ಯಾಪಾರದಿಂದ ಇವುಗಳ ವಿಸ್ತರಣವೂ ಪರಸ್ಪರವಾಗಿ ಆಗುವುವೆಂಬುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಸರಕಾರದವರು ರಸ್ತೆಯ ನಿರ್ಮಾಣದಲ್ಲಿ ಒಂದು ನಿಯಮವನ್ನು ಮಾಡಿಕೊಂಡು ಹೊಸ ಮಾರ್ಗಗಳ ನಿರ್ಮಾಣಕ್ಕೆ ಕೈ ಹಾಕುತ್ತಿದ್ದಾರೆ. ಅವುಗಳಿಗೆ ಬೇಕಾಗುವ ಹಣಕ್ಕಾಗಿ ಒಂದು ಕೋಶವನ್ನು ಏರ್ಪಡಿಸಿದ್ದಾರೆ.

ರೈಲುಗಳು

ರೈಲುಗಳಿಂದ ಪ್ರಯಾಣ ಸೌಕರ್ಯ ಹೆಚ್ಚುವುದಲ್ಲದೆ ಸಾಮಾನು ಒಂದು ಕಡೆಯಿಂದ ಮತ್ತೊಂದಕ್ಕೆ ಸಾಗಲು ಬಹುವಾದ ಸಹಾಯವಾಗುವುದು. ದೂರದ ತೊಂದರೆ ಕಡಮೆಯಾಗಿ ಜನರೂ ಪ್ರದೇಶಗಳೂ ಹತ್ತಿರ ಹತ್ತಿರಕ್ಕೆ ಬಂದಂತಾಗುವುದು. ನಮ್ಮ ದೇಶದ ಹೆಚ್ಚು ವ್ಯಾಪಾರವೆಲ್ಲ ರೈಲುಗಳಲ್ಲಿಯೇ ಸಾಗುವುದರಿಂದ ಉತ್ಪತ್ತಿಯ ಪ್ರದೇಶಗಳೂ ವ್ಯಾಪಾರದ ಸ್ಥಳಗಳೂ ಸುಲಭವಾಗಿ ಹತ್ತಿರಕ್ಕೆ ಸರಿದಂತಾಗುವುದು.

ಈಗ ನಮ್ಮ ದೇಶದಲ್ಲಿರುವ ರೈಲುದಾರಿಯ ಉದ್ದ ೭೨೦ ಮೈಲಿ. ಇಂಡಿಯಾದೇಶದೊಡನೆ ಹೋಲಿಸಿದರೆ ಇಲ್ಲಿ ೧೮೦ ಚದರ ಮೈಲಿಗಳ ಪ್ರದೇಶಕ್ಕೆ ೨.೪ ಮೈಲಿ ರೈಲಿದೆ; ಅಲ್ಲಿರುವುದು ೨.೨ ಮೈಲಿ ಮಾತ್ರ.

ಕಂಪನಿಯವರು ನಡಸುತ್ತಿರುವ ರೈಲು; ಸರ್ಕಾರದವರ ಸ್ವಂತ ಆಡಳಿತದಲ್ಲಿರುವುದು ಎಂದು ಇಲ್ಲಿಯ ರೈಲು ಎರಡು ವಿಧ. ಸರ್ಕಾರದವರ ಆಡಳಿತದಲ್ಲಿರುವ ದಾರಿ ೪೬೦ ಮೈಲಿ ಉದ್ದವಿದೆ. ಕಂಪನಿಯ ಆಡಳಿತದಲ್ಲಿರುವ ದಾರಿಯ ಉದ್ದಕ್ಕೂ ದೊಡ್ಡ ವ್ಯಾಪಾರದ ಸ್ಥಳಗಳೂ ಕೈಗಾರಿಕೆಯ ಪ್ರದೇಶಗಳೂ ಇವೆ. ಆ ಪ್ರದೇಶಗಳ ಜನಸಾಂದ್ರತೆಯೂ ಹೆಚ್ಚು. ಸರ್ಕಾರದವರು ನಡಸುತ್ತಿರುವ ದಾರಿಗಳಲ್ಲಿ ವ್ಯಾಪಾರ ಕೈಗಾರಿಕೆಗಳು ಅಷ್ಟು ಹೆಚ್ಚಾಗಿ ಮುಂದುವರಿದಿಲ್ಲ; ಜನಸಾಂದ್ರತೆಯೂ ಕಡಮೆ.

ದಾರಿಗಳು

ಕಂಪನಿಯ ರೈಲುಗಳಲ್ಲಿ ಬೆಂಗಳೂರು–ಮದರಾಸ್ ದಾರಿಯವು ದೊಡ್ಡ ಅಳತೆಯ ಕಂಬಿಗಳು. ಗುಂತಕಲ್, ಪೂನಾ ಮಾರ್ಗಗಳಲ್ಲಿರುವವು ಮೀಟರ್ ಅಳತೆಯ ಕಂಬಿ. ಸರ್ಕಾರದ ಆಡಳಿತದಲ್ಲಿರುವ ರಸ್ತೆಗಳಲ್ಲಿ ಮೈಸೂರು–ಅರಸೀಕೆರೆ, ಚಾಮರಾಜನಗರ–ಬೆಂಗಳೂರು, ಬೀರೂರು–ಶಿವಮೊಗ್ಗ–ಆನಂದಪುರ, ಚಿಕ್ಕ ಜಾಜೂರು–ಚಿತ್ರದುರ್ಗಗಳ ಕಡೆ ಇರುವ ರಸ್ತೆಗಳಲ್ಲಿ ರೈಲುದಾರಿ ಮೀಟರ್ ಅಳತೆಯದು. ಕೋಲಾರ–ಚಿಕ್ಕಬಳ್ಳಾಪುರದ ಕಡೆ ಹೋಗುವ ದಾರಿ ಸಣ್ಣಳತೆಯದು. ತರೀಕೆರೆ–ನರಸಿಂಹರಾಜಪುರ ಮತ್ತು ತಡಸ–ಹೆಬ್ಬೆ ಈ ಪ್ರದೇಶಗಳಲ್ಲಿ ಸಂಚಾರ ಮಾಡುವವು ಟ್ರಾಂಗಳು. ಕಂಪನಿಯವರ ಆಡಳಿತದಲ್ಲಿರುವ ರೈಲುಗಳಲ್ಲಿ ರೈಲುಗಳನ್ನು ನಡಸುವ ಖರ್ಚು ಕಡಮೆ. ಸರ್ಕಾರದ ಆಡಳಿತದಲ್ಲಿರುವವುಗಳಲ್ಲಿ ಹೆಚ್ಚು.

ಒಂದು ಮೈಲಿ ರೈಲು ರಸ್ತೆಯನ್ನು ಹಾಕಲು ಸುಮಾರು ೧ ಲಕ್ಷ ರೂಪಾಯಿ ಬೇಕಾಗುತ್ತದೆ.

ಮುಂದಿನ ನೋಟ

ಮುಂದಿನ ಕೆಲವು ವರ್ಷಗಳೊಳಗಾಗಿ ಇನ್ನೂ ೨೨೦ ಮೈಲಿಗಳ ಲೋಹ ಮಾರ್ಗವನ್ನೇರ್ಪಡಿಸಬೇಕೆಂದು ನಿಶ್ಚಯಿಸಿ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಅಷ್ಟರಲ್ಲಿ ಬೆಂಗಳೂರು–ಹರಿಹರ, (೧೯೩೭ಕ್ಕೆ) ಬೆಂಗಳೂರು–ಹಿಂದೂಪುರದ ರೈಲ್ವೆಗಳೂ ನಮ್ಮ ಆಡಳಿತಕ್ಕೇ ಬರುವುವು. ಆಗ ಒಟ್ಟು ೯೩೩ ಮೈಲಿಗಳ ದಾರಿ ಏರ್ಪಟ್ಟಂತಾಗುತ್ತದೆ. ಪಶ್ಚಿಮ ಭಾಗಕ್ಕೆ ಯಾವುದಾದರೂ ಒಂದು ರೇವಿಗೂ–ಮಂಗಳೂರು, ಉಡುಪಿ, ಅಥವಾ ಭಟ್ಕಲ್ಲಿಗೂ–ದಕ್ಷಿಣದಲ್ಲಿ ಈರೋಡಿಗೂ ನಮ್ಮ ರೈಲ್ವೆ ಸೇರಿಸಲ್ಪಟ್ಟರೆ ನಮ್ಮ ವ್ಯಾಪಾರವೂ ರೈಲ್ವೆ ಲಾಭಗಳೂ ವಿಶೇಷವಾಗಿ ಹೆಚ್ಚಿ ದೇಶದ ಸಂಪತ್ತು ಬಹುವಾಗಿ ಮೇಲಾಗುವುದು. ಅದಕ್ಕೆ ಇಂಡಿಯಾ ಸರ್ಕಾರದವರ ಅನುಮತಿ ಬೇಕು. ಈಗ ಲಾಭ ಪಡೆಯುತ್ತಿರುವ ವಿದೇಶಿ ರೈಲು ಕಂಪನಿಯವರನ್ನು ಒಪ್ಪಿಸಬೇಕು. ನಮ್ಮ ರೈಲ್ವೆ ಹೀಗೆ ಸೇರಿಸಲ್ಪಟ್ಟರೆ ಅವರಿಗೆ ಈಗ ಆಗುತ್ತಿರುವ ವ್ಯಾಪಾರ ಲಾಭಗಳಲ್ಲಿ ಲಕ್ಷಾಂತರ ರೂಪಾಯಿ ಭಾಗ ತಪ್ಪಿ ಹೋಗಿ ಅದು ಮೈಸೂರಿಗೆ ಬರುವುದರಿಂದ ಅವರನ್ನು ಒಪ್ಪಿಸುವುದು ಸುಲಭವಾದ ಕೆಲಸವಲ್ಲ.

೧೦. ಸರ್ಕಾರ—ಸಂಪದಭಿವೃದ್ಧಿ ಇಲಾಖೆ ಗಳು—ಜನಜೀವನ

ಅರ್ಥಸಾಧನೆಯಲ್ಲಿ ಸರಕಾರದ ಕೈ

ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಸರಕಾರಗಳವರು ಜನಜೀವನಕ್ಕೆ ಸಂಬಂಧಪಡುವ ಕಾರ್ಯ ಕಲಾಪಗಳಲ್ಲಿಯೂ ವಾಣಿಜ್ಯ ಕೈಗಾರಿಕೆಗಳಲ್ಲಿಯೂ, ಸಂಪತ್ತಿನ ಹಂಚಿಕೆಯಲ್ಲಿಯೂ ತೊಡಗಿರುತ್ತಾರೆ. ಒಂದುಕಡೆ ಇವುಗಳು ಸುಸೂತ್ರವಾಗಿ ನಡೆಯಲು ಸನ್ನಿವೇಶವನ್ನು ಕಲ್ಪಿಸುವುದು ; ಜನಕ್ಕೆ ಉತ್ಸಾಹ ಹುಟ್ಟಿಸುವುದು ; ಅವರು ಕೈಕೊಂಡ ಕಾರ್ಯಗಳಲ್ಲಿ ಸಲಹೆ ಕೊಡುವುದು ; ತಾವೇ ಮುಂದೆ ಹೋಗಿ ದಾರಿ ತೋರಿಸುವುದು ; ಹಣ ಸಹಾಯಮಾಡುವುದು ; ಗಿರಾಕಿ ಹವಣಿಸುವುದು ; ಹೊರಗಿನವರಿಂದ ತಮ್ಮವರಿಗೆ ನಷ್ಟವಾಗದಂತೆ ನೋಡಿಕೊಳ್ಳುವುದು ; ರೈಲ್ವೆ ಮುಂತಾದವನ್ನು ನಡಸಿ ಪದಾರ್ಥಗಳನ್ನು ಸಾಗಿಸುವುದು ; ದರಗಳನ್ನು ಕಡಮೆ ಮಾಡುವುದು ; ಒಳ ಕೈಗಾರಿಕೆಗಳಿಗೆ ಹೊರದೇಶದವರ ಪೈಪೋಟಿಯಿಂದ ಆಗಬಹುದಾದ ತೊಂದರೆ ತಪ್ಪಿಸುವುದು ; ಸರ್ಕಾರಿ ಇಲಾಖೆಗಳಲ್ಲಿ ವಿಷಯ ಮತ್ತು ವರ್ತಮಾನಗಳನ್ನು ಸಂಗ್ರಹಿಸಿ ಪ್ರಕಟಿಸುವುದು ; ಉದ್ಯೋಗಗಳನ್ನು ಒದಗಿಸುವುದು ; ಬಹು ಜನ ಕೂಡಿ ಕೆಲಸಮಾಡುವ ಕಡೆ ಈ ಈ ರೀತಿಯೇ ಕೆಲಸ ನಡೆಯಬೇಕು, ಹೆಂಗಸರು ಮಕ್ಕಳನ್ನು ಇಂತಹ ಕೆಲಸಗಳಿಗೆ ಹಾಕಕೂಡದು ; ಇಷ್ಟಕ್ಕೆ ಮೀರಿ ಕೆಲಸ ಮಾಡಿಸಕೂಡದು ; ಕೂಲಿಯವರಿಂದ ದಿನಕ್ಕೆ ಇಷ್ಟು ಗಂಟೆಗಳಿಗೆ ಮೀರಿ ಕೆಲಸ ಮಾಡಿಸಕೂಡದು ; ರಜ ವಿರಾಮಗಳ ಏರ್ಪಾಡಾಗಬೇಕು ; ಅವರಿಗೆ ನಷ್ಟ, ಅಪಾಯ ಆಗದಂತೆಯೂ ರೋಗ ಸಮಯದಲ್ಲಿಯೂ ಹೆಂಗಸರ ಹೆರಿಗೆ ಸಮಯದಲ್ಲಿಯೂ ಸಾವಿನ ಸಮಯಗಳಲ್ಲಿಯೂ ಈ ರೀತಿ ಸಹಾಯಮಾಡಬೇಕು ; ಅಪಾಯಕರವಾದ ಯಂತ್ರಗಳಿಂದ ಕೂಲಿಯ

ವರನ್ನು ಹೀಗೆ ಹೀಗೆ ರಕ್ಷಿಸಬೇಕು; ವ್ಯಾಪಾರ ಈ ರೀತಿಯೇ ನಡೆಯಬೇಕು; ಒಂದು ಮಿತಿಗೆ ಮಿೀರಿ ಕರೀದಿ ಹಾಕಿ ಜನರನ್ನು ಸುಲಿಯಬಾರದು; ಇಂತಹ ವಸ್ತುಗಳನ್ನು ಸಾಹುಕಾರಿ ಜನರು ತಯಾರಿಸಬಾರದು; ಅಪ್ಪಣೆಯಿಲ್ಲದೆ ಮಾರಬಾರದು; ಇಂಥವುಗಳನ್ನು ಹೀಗೆ ಉಪಯೋಗಿಸಬೇಕು ಎಂದು ಮುಂತಾಗಿ ನೂರಾರು ಬಗೆಯಲ್ಲಿ ಸರ್ಕಾರದವರು ಕಾನೂನು ಏರ್ಪಡಿಸುತ್ತಾರೆ.

ಅಜ್ಞಾನ ದಾರಿದ್ರ್ಯಗಳಲ್ಲಿ ಮುಳುಗಿ ಯಾವುದು ಹೇಗಿದೆ? ಯಾವ ಅವಕಾಶವೆಲ್ಲಿದೆ ಎಂದರಿಯದ ನಮ್ಮ ಜನರಂಥವರಿಗೆ ಈ ರೀತಿಯಾಗೆಲ್ಲ ನೆರವು ಸಿಕ್ಕದಾದರೆ ಅವರ ಬದುಕು ದುಸ್ತರವಾಗುವುದು. ನಮ್ಮ ಸರ್ಕಾರದವರೂ ಅನೇಕ ಬಗೆಯಲ್ಲಿ ಕಾರ್ಯನಡಸುತ್ತಾ ಜನರಿಗೆ ಮಾರ್ಗದರ್ಶಕರಾಗಿಯೂ ಸಹಾಯಕರಾಗಿಯೂ ಇದ್ದಾರೆ.

ಮುಖ್ಯ ವಿಭಾಗ

ಉತ್ಪತ್ತಿಗೆ ಸಂಬಂಧಿಸಿದ ಕಾರ್ಯಗಳು, ಮಾರುವೆ ವ್ಯಾಪಾರಗಳಿಗೆ ಸಂಬಂಧಪಟ್ಟವು, ಕೂಲಿ, ಬಡ್ಡಿ ಲಾಭ ಗುತ್ತಿಗೆ, ಮುಂತಾದವಕ್ಕೂ ದೇಶದಲ್ಲಿ ಸಂಪತ್ತಿನ ಹಂಚಿಕೆಗೂ ಸಂಬಂಧಿಸುವ ಕಾರ್ಯಗಳು, ಯಾನಾದಿ ಸೌಕರ್ಯ ಕಲ್ಪನೆ, ಭಾಟಾ ಮಾರ್ಗಗಳ ನಿರ್ಮಾಣ, ಜನರ ವಿದ್ಯಾಭ್ಯಾಸ, ಆರೋಗ್ಯಸಾಧನೆ, ಕ್ಷೇಮ ಮತ್ತು ಸುಖಾಭಿವೃದ್ಧಿ ಕಾರ್ಯ,–ಇವುಗಳಿಗೆ ಸಂಬಂಧಿಸಿದಂತೆ ಕೆಲಸ ನಡಸಲು ಸರ್ಕಾರದವರು ಯಾವ ಸಂಸ್ಥೆ ಇಲಾಖೆಗಳನ್ನು ಏರ್ಪಡಿಸಿರುವರೆಂಬುದನ್ನು ನೋಡೋಣ.

ಇಲಾಖೆ ಕೆಲಸಗಳು

ವ್ಯವಸಾಯ ಶಾಖೆ, ಕೈಗಾರಿಕೆ ಮತ್ತು ವಾಣಿಜ್ಯಶಾಖೆ, ಸಹಕಾರ ಶಾಖೆ, ವಿದ್ಯಾಶಾಖೆ, ನೀರಾವರಿ–ಶಿಲ್ಪ ಶಾಖೆ, ನಗರ ನೈರ್ಮಲ್ಯ ಮತ್ತು ಆರೋಗ್ಯಶಾಖೆ ಮುಂತಾದ ಇಲಾಖೆಗಳನ್ನು ಸರಕಾರದವರು ಏರ್ಪಡಿಸಿರುತ್ತಾರೆ. ಜನರಲ್ಲಿ ಮಿತವ್ಯಯ ಬುದ್ಧಿಯೂ ಹಣ ಕೂಡಿಸುವ ರೂಢಿಯೂ ಬರಲೆಂದೂ, ಮುಪ್ಪು ಮರಣಗಳಿಂದ ಕುಟುಂಬಗಳಿಗಾಗುವ ಸಂಕಟಗಳನ್ನು ಸ್ವಲ್ಪ ಮಟ್ಟಿಗಾದರೂ ತಪ್ಪಿಸುವುದಕ್ಕಾಗಿಯೂ ಸೇವಿಂಗ್ಸ್ ಬ್ಯಾಂಕು

ಗಳನ್ನೂ ಪ್ರಾವಿಡೆಂಟ್ ಫಂಡ್ ಪದ್ಧತಿಯನ್ನೂ ವಿಮೆ ಏರ್ಪಾಡುಗಳನ್ನೂ ಮಾಡಿದ್ದಾರೆ. ಯಾವ ಯಾವ ರೀತಿ ಎಲ್ಲವೂ ಅಭಿವೃದ್ಧಿಯಾಗಬೇಕು ? ಹೇಗೆ ಎಂಬುದಕ್ಕೆ ಮಾದರಿಗಳನ್ನೂ ಕಾರ್ಯಕ್ರಮಗಳನ್ನೂ ಸೂಚಿಸುವಂತೆ ವಸ್ತು ಪ್ರದರ್ಶನಗಳನ್ನೂ ನಡಸುವರು. ನಮ್ಮ ವಸ್ತುಗಳಿಗೆ ಎಲ್ಲೆಲ್ಲಿ ಗಿರಾಕಿಯಿದೆ ಎಂಬುದನ್ನೂ, ಯಾವ ತರಹ ಸಾಮಾನನ್ನು ಒಳದೇಶಕ್ಕೆ ಸುಲಭವಾಗಿ ತರಿಸಿಕೊಳ್ಳಬಹುದೆಂಬುದನ್ನೂ, ಇತರ ಯಾವ ಕಾರ್ಯ ವಿಧಾನಗಳನ್ನು ಅನುಸರಿಸಿದರೆ ನಮ್ಮ ಕೈಗಾರಿಕೆಗಳನ್ನು ಈಗಿಗಿಂತ ಉತ್ತಮಗೊಳಿಸಬಹುದೆಂಬುದನ್ನೂ ಈ ಮೂಲಕವೂ ಪ್ರಕಟನೆ ಉಪನ್ಯಾಸಗಳ ಮೂಲಕವೂ ತಿಳಿಸುವರು.

ವ್ಯವಸಾಯ ಇಲಾಖೆ

ದೇಶದ ಮುಖ್ಯ ಕಸುಬು ವ್ಯವಸಾಯವಷ್ಟೆ. ಸುಮಾರು ಈ ಶತಮಾನದ ಮೊದಲಿಂದ ಅದಕ್ಕೆ ವಿಶೇಷ ಗಮನ ದೊರೆತಿದೆ. ೧೯೧೧ರಲ್ಲಿ ವ್ಯವಸಾಯದ ಇಲಾಖೆಯ ಕೆಲಸ ಸುವ್ಯವಸ್ಥವಾಯಿತು. ಜಿಲ್ಲೆಗಳಲ್ಲಿ ಪ್ರಚಾರ ಕೆಲಸ ನಡೆಯುವುದಕ್ಕೂ ಮೇಲ್ತರದ ಕಾರ್ಯ ರೀತಿಯನ್ನು ರೈತರಿಗೆ ತೋರಿಸುವುದಕ್ಕೂ ಆರಂಭವಾಯಿತು. ಈಗ ಆ ಇಲಾಖೆಗೆ ಸಂಬಂಧಪಟ್ಟ ಉಪಶಾಖೆಗಳೇರ್ಪಟ್ಟು ಕೆಲಸ ನಡೆಯುತ್ತಿದೆ: ಸಸ್ಯಾಭಿವೃದ್ಧಿ ಮತ್ತು ಸಸ್ಯ ಪರೀಕ್ಷಣ ಶಾಖೆ; ವ್ಯವಸಾಯ ಶಿಲ್ಪ, ಹೆಬ್ಬಾಳದಲ್ಲಿ ವ್ಯವಸಾಯಶಿಕ್ಷಣ, ದನಕರುಗಳ ವೃದ್ಧಿಶಾಖೆ, ರೇಷ್ಮೆ ಇಲಾಖೆ, ಪಶು ಚಿಕಿತ್ಸೆ, ಅಮೃತ ಮಹಲ್ ಇಲಾಖೆ, ಬಾವಿ ಕೊರೆಯುವ ಯಂತ್ರಗಳು, ನೀರಿನ ಪಂಪುಗಳ ಕೆಲಸ, ಇವುಗಳಲ್ಲಿ ಕೆಲವು ಈ ಇಲಾಖೆಗೇ ಅಧೀನವಾಗಿಯೂ, ಒಂದೆರಡು ಅರ್ಧ ಪ್ರತ್ಯೇಕವಾಗಿಯೂ, ಇನ್ನೂ ಒಂದೆರಡು ವ್ಯಾಪಾರ ಕೈಗಾರಿಕೆ ಇಲಾಖೆಗಳ ಜೊತೆಗೂ ನಡೆಯುವಂತೆ ಏರ್ಪಟ್ಟಿವೆ.

ಉಪಶಾಖೆಗಳು

ರಾಸಾಯನಿಕ ಶಾಖೆ.—ಭೂಮಿ ಹೆಚ್ಚು ಫಲವತ್ತಾಗಲು ಏನು ಮಾಡಬೇಕು ? ಯಾವ ಗೊಬ್ಬರ ಉಪಯೋಗಿಸಬೇಕು ? ಯಾವ ಯಾವ ಗೊಬ್ಬರದ ಸಾರ ಎಷ್ಟು ? ಯಾವ ಭೂಮಿಗೆ ನೀರು ಹೀರುವ ಮತ್ತು



ಹೆಬ್ಬಾಳದ ವ್ಯವಸಾಯ ಕ್ಷೇತ್ರ

ತೇಮವನ್ನು ಹಿಡಿಯುವ ಶಕ್ತಿ ಹೆಚ್ಚು ? ರಾಸುಗಳಿಗೆ ಯಾವ ಆಹಾರ ಹಾಕಬೇಕು ? ಹಾಲುಹಿಂಡುವ ತಳಿಗಳ ಆರೈಕೆಗೆ ಯಾವ ತಿಂಡಿ ಹಾಕ ಬೇಕು ? ಎಂಬುದನ್ನು ಪರೀಕ್ಷಣದಿಂದ ಕಂಡುಹಿಡಿದು ಬೇಕಾದವರಿಗೆ ತಿಳಿಸುವರು. ಬತ್ತ, ರಾಗಿ, ಕಬ್ಬು, ಅಡಕೆ, ತೆಂಗು, ನೆಲಗಡಲೆ, ಕಾಫೀ ಬೆಳೆಗಳಿಗೆ ಸಂಬಂಧಿಸಿದ ಎಲ್ಲ ಶಾಸ್ತ್ರ ಪರೀಕ್ಷಣಗಳನ್ನೂ ಈ ಶಾಖೆ ಯಲ್ಲಿ ಮಾಡುವರು. ಪರಮಾವಧಿ ಬೆಳೆಗಳನ್ನು ಹೇಗೆ ತೆಗೆಯಬಹುದು ಎಂಬುದನ್ನು ಮೊದಲು ಪರೀಕ್ಷಣ ಶಾಖೆಯಲ್ಲಿ (Laboratory) ಪರೀಕ್ಷೆ ಮಾಡಿ ಸಾಧ್ಯವೆಂದು ತೋರಿಸುವರು. ಸಾರವತ್ತಾದ ಕೆಲವು ಗೊಬ್ಬರ ಗಳನ್ನು ತಯಾರಿಸಿ ರೈತರಿಗೆ ಒದಗಿಸುವರು.

ಪರೀಕ್ಷಣ ಶಾಲೆಯಲ್ಲಿ ಸರಿಬಂದುದನ್ನು ಸರಕಾರಿ ಹೊಲಗದ್ದೆಗಳಲ್ಲಿ ಮಾಡಿಸಿ ಆ ಮೇಲೆ ಕೆಲವು ಖಾಸಗಿ ಭೂಮಿಗಳಲ್ಲಿಯೂ ಪ್ರಯೋಗಿಸಿ ನೋ ಡಿಸುತ್ತಾರೆ. ಒಳ್ಳೆಯ ಫಲ ದೊರೆಯುವುದೆಂದು ತಿಳಿದರೆ ವ್ಯವಸಾಯದ ಡಿಸ್ಟ್ರಿಕ್ಟ್ ಅಧಿಕಾರಿಗಳು ಈ ವಿಧಾನಗಳನ್ನು ರೈತರಿಗೆ ಹೇಳಿಕೊಡುವಂತೆ ಏರ್ಪಾಡು ಮಾಡುತ್ತಾರೆ.

ಬತ್ತ ಕಬ್ಬುಗಳ ಬೆಳೆಯಲ್ಲಿ ಮುಖ್ಯವಾಗಿ ಈ ಶಾಖೆಯವರ ಸಹಾಯ ವನ್ನು ಪಡೆದ ಕೆಲವು ಸಾಹುಕಾರರು ಈಗ ಒಂದಕ್ಕೆ ನಾಲ್ಕರಷ್ಟು ಬೆಳಸು ಬೆಳೆಯುತ್ತಿದ್ದಾರೆ.

ಕ್ರಿಮಿಕೀಟ ನಿವಾರಣ ಶಾಖೆ.—ಬೆಳೆಗೆ ತಗಲಿ ಅದನ್ನು ನಾಶಮಾ ಡುವ ಕ್ರಿಮಿಗಳಾವುವೆಂದು ಕಂಡು ಹಿಡಿದು, ಅವರೆ, ಕಾಫೀ, ಹತ್ತಿ, ಉರುಳುಗಡ್ಡೆ, ತೆಂಗು, ಅಡಕೆ ಮುಂತಾದ ಗಿಡಗಳನ್ನು ರಕ್ಷಿಸುವ ವಿಧಾನ ಗಳನ್ನು ಈ ಶಾಖೆಯವರು ಹೇಳಿಕೊಡುತ್ತಿದ್ದಾರೆ.

ಬಂಡು (ಜೇನುತುಪ್ಪ) ಕೂಡಿಸುವ ವಿಧಾನವನ್ನು ತಿಳಿಸಲು ಕಾರ್ಯ ನಡೆಯುತ್ತಿದೆ. ವ್ಯವಸಾಯಗಾರರು ಈ ವಿದ್ಯೆಯನ್ನು ಕಲಿತು ಹೊಸ ವೃತ್ತಿಯೊಂದರಿಂದ ತಮ್ಮ ವರಮಾನವನ್ನು ಹೆಚ್ಚಿಸಿಕೊಳ್ಳಲು ಸಹಾಯ ವಾಗುವುದು.

ಸಸ್ಯರೋಗ ನಿವಾರಣೆಯ ಶಾಖೆ.—ಗಿಡಗಳ ಹತ್ತಿರವೂ ಒಳಗೂ ಬೆಳೆದ ಕೆಲವು ಸಾವಯವ ಪದಾರ್ಥಗಳಿಂದ ಸಸ್ಯಗಳು ಹೇಗೆ ಕೆಡುವುವು ಅವುಗಳನ್ನು ನಿವಾರಿಸುವುದು ಹೇಗೆ ಎಂಬುದನ್ನು ಈ ಶಾಖೆ ತಿಳಿಸುತ್ತದೆ.

ಅಡಕೆಗೆ ತಗಲುವ ಕೊಳೆ ರೋಗವನ್ನೂ ಕಾಫೀ ಬೆಳೆ ಕೆಡಿಸುವ ರೋಗವನ್ನೂ ಕಂಡುಹಿಡಿದು ಅದಕ್ಕೆ ಚಿಕಿತ್ಸೆ ತಿಳಿಸುತ್ತಾರೆ. ಜೋಳಕ್ಕೆ ಹಿಡಿಯುವ ನುಸಿ, ಉರುಳುಗಡ್ಡೆಗೆ ಬರುವ ಉಂಗುರ ರೋಗ, ಕಬ್ಬಿಗೆ ತಗಲುವ ಕೆಂಪುರೋಗ, ಹೂಗಳು ಎಣ್ಣೆ ಬಿತ್ತಗಳು ಶ್ರೀಗಂಧದ ಮರ ಕೇಸರಿಕೆ ಮುಂತಾದಕ್ಕೆ ಬರುವ ಅಂಟುರೋಗಗಳು, ಬಾಳೆ, ರಾಗಿ ಇವುಗಳಲ್ಲಿ ಹುಟ್ಟುವ ರೋಗ ಈ ಸಂಬಂಧಗಳಲ್ಲೆಲ್ಲಾ ಕೆಲಸ ನಡೆದು ರೈತರಿಗೆ ಸಲಹೆ ದೊರೆಯುತ್ತಿದೆ. ರೋಗಗಳು ಹರಡದಿರುವುದಕ್ಕೂ ಹಿಡಿದ ರೋಗ ಹೋಗುವುದಕ್ಕೂ ಯಾವ ಕಾರ್ಯ ವಿಧಾನಗಳನ್ನು ಕೈಕೊಳ್ಳಬೇಕೆಂಬುದನ್ನೂ ತಿಳಿಸುತ್ತದೆ. ರೋಗವಿಲ್ಲದ ಜಾತಿಗಳನ್ನು ಹೇಗೆ ಬೆಳಸುವುದು ಕಸಿಮಾಡುವುದು ಎಂಬುದನ್ನೂ ಸೂಚಿಸುತ್ತದೆ.

ಸಸ್ಯಪರೀಕ್ಷೆಯ ಶಾಖೆ.—ಸಂಸ್ಥಾನದಲ್ಲಿ ಮುಖ್ಯ ಬೆಳೆಗಳು ಹೆಚ್ಚುವಂತೆ ಯಾವ ರೀತಿಯ ಪೈರುಗಳೂ ಗಿಡಗಳೂ ಬೆಳೆಯಬೇಕೆಂಬುದು ಈ ಶಾಖೆಯಲ್ಲಿ ಪರೀಕ್ಷಿತವಾಗುವುದು. ಯಾವ ಜಾತಿಯ ಬಿತ್ತ ಪೈರು ಯಾವ ಫಲ ಕೊಡುತ್ತವೆ ಎಂಬುದನ್ನು ಇಲ್ಲ ತಿಳಿಸುತ್ತಾರೆ. ಹೊಸ ಬಗೆಯ ಬೆಳೆಗಳನ್ನು ಪ್ರಚಾರಕ್ಕೆ ತರಲು ಯತ್ನಿಸುತ್ತಾರೆ. ರಾಗಿಯಲ್ಲಿ ಹೆಚ್ಚಾಗಿ ಕಾಳು ಬಿಡುವ ಜಾತಿಗಳನ್ನು ಕಂಡುಹಿಡಿದು ಉತ್ತಮವಾದ ಬೀಜದ ರಾಗಿಯನ್ನು ತಯಾರಿಸಲು ನೆರವಿತ್ತಿದ್ದಾರೆ. ಇರುವ ಜಾತಿಗಳನ್ನು ಬೆರಕೆಮಾಡಿ ಯಾವುದರಿಂದ ಬೆಳೆ ಹೆಚ್ಚಬಹುದು ಎಂಬುದನ್ನು ನೋಡುತ್ತಿದ್ದಾರೆ. ನೆಲಗಡಲೆ, ಹತ್ತಿ, ಉರುಳುಗಡ್ಡೆ ಮುಂತಾದ ಬೆಳೆಗಳಲ್ಲಿ ಮುಖ್ಯವಾಗಿ ಈ ಕೆಲಸ ನಡೆದಿದೆ.

ವ್ಯವಸಾಯ-ಶಿಕ್ಷಣಶಾಖೆ.—ವ್ಯವಸಾಯ ಶಾಸ್ತ್ರಕ್ಕೆ ಸಂಬಂಧಪಟ್ಟ ಎಲ್ಲ ತಿಳಿವಳಿಕೆಯೂ, ಕಾರ್ಯ ರೀತಿಗಳೂ ಗೊತ್ತಾಗುವಂತೆ ಹೆಬ್ಬಾಳದ ಶಾಖೆಯಲ್ಲಿ ಶಿಕ್ಷಣ ದೊರೆಯುತ್ತಿದೆ. ವ್ಯವಸಾಯ ಶಾಖೆಯಲ್ಲಿ ಉತ್ತಮವೆಂದು ನಿಶ್ಚಯಿಸಲ್ಪಟ್ಟ ಪದ್ಧತಿಗಳನ್ನು ಜನರಿಗೆ ಹರಡುವ ವಿಧಾನಗಳನ್ನೂ ಅಲ್ಲಿ ಹೇಳಿಕೊಡುವ ಏರ್ಪಾಡಾಗಿದೆ. ತುಮಕೂರು ಹಾಸನ ಡಿಸ್ಟ್ರಿಕ್ಟುಗಳಲ್ಲಿಯೂ ಕೆಲವುಕಡೆ ವ್ಯವಸಾಯದ ಶಾಲೆಗಳು ನಡೆಯುತ್ತಿವೆ.

ಹೀಗೆ ಹೊಸಜಾತಿಯ ಬೆಳೆಗಳನ್ನು ಉಂಟುಮಾಡುವುದು ; ಒಳ್ಳೆಯ ಬೀಜಗಳನ್ನು ಒದಗಿಸುವುದು ; ರೋಗಗಳನ್ನೂ ಕ್ರಿಮಿಕೀಟಗಳನ್ನೂ ನಾಶ

ಪಡಿಸುವುದು ; ತಿಳಿವಳಿಕೆ ಹರಡುವುದು ; ವ್ಯವಸಾಯ ವಿಧಾನಗಳನ್ನು ತೋರಿಸುವುದು ; ಶಾಸ್ತ್ರ ಮತ್ತು ಅನುಕೂಲ ಕಾಲಗಳ ಶಿಕ್ಷಣಕೊಡುವುದು ; ಉತ್ತಮವಾದ ಗೊಬ್ಬರಗಳನ್ನು ತರಿಸಿ, ತಯಾರಿಸಿ, ಅವುಗಳನ್ನು ಜನರ ಬಳಕೆಗೆ ತರುವುದು ; ನೌಕರರ ಮೂಲಕವೂ ಪ್ರಕಟನೆ ಪ್ರದರ್ಶನಗಳ ಮೂಲಕವೂ ಶಾಸ್ತ್ರ ರೀತಿಗಳನ್ನು ಪ್ರಚಾರ ಮಾಡುವುದು ; ಹೊಸದಾದ ವ್ಯವಸಾಯ ಯಂತ್ರಗಳನ್ನು ರೂಢಿಗೆ ತರುವುದು ; ದನದ ಮೇವಿನ ಹುಲ್ಲು ಹಿಂಡಿ ಮುಂತಾದವುಗಳಲ್ಲಿ ಇದು ಮೊದಲೆಂದು ತೋರಿಸಿ ಹಾಲು ಕೊಡುವ ದನದ ಕರಾವನ್ನು ಹೆಚ್ಚಿಸುವುದು ; ದನದ ರೋಗಗಳಿಗೆ ಪಶುವೈದ್ಯ ಶಾಖೆಯ ಮೂಲಕ ಚಿಕಿತ್ಸೆಯ ಏರ್ಪಾಡು ಮಾಡುವುದು ; ಹೋರಿಗಳನ್ನೊದಗಿಸುವುದು ; ಹೊಸವಾದ ದೃಢವಾದ ರಾಸುಗಳ ಜನನಕ್ಕೆ ಏರ್ಪಾಡು ಮಾಡುವುದು ಮುಂತಾಗಿ ಸರ್ವತೋಮುಖವಾಗಿ ಕೆಲಸ ನಡಸುತ್ತಿದ್ದಾರೆ.

ಇತರ

ಅಮೃಮಹಲ್ ಇಲಾಖೆಯಲ್ಲಿ ಜಾತಿಯ ಎತ್ತುಗಳ ಮತ್ತು ಕುದರೆಗಳ ತಯಾರಿನ ಕೆಲಸ ನಡೆಯುವುದು. ಎಳಚಹಳ್ಳಿ ಮತ್ತು ಬಬ್ಬೂರು ಕರೋಹಟ್ಟಿಗಳಲ್ಲಿ ಕುರಿಗಳ ಪೋಷಣೆಯ ಮತ್ತು ಉತ್ಪತ್ತಿಯ ಕೆಲಸಗಳನ್ನು ಒಂದು ಭಾಗದವರು ಮಾಡುವರು. ಹಣ್ಣು ಹಂಪಲ ತರಕಾರಿಗಳ ಬೆಳಸಿಗೆ ಸಂಬಂಧಿಸುವ ಕೆಲಸಗಳನ್ನು (Horticultural) ಇಲಾಖೆಯವರು ಮಾಡುತ್ತಾರೆ.

ತಕಾವಿ

ಆಗಾಗ್ಗೆ ಸಮ್ಮೇಳನಗಳನ್ನು ಏರ್ಪಡಿಸಿ ವ್ಯವಸಾಯಕ್ಕೆ ಸಂಬಂಧಪಡುವ ವಿಚಾರಗಳ ಚರ್ಚೆ ಮಾಡುವರು. ದೊಡ್ಡ ವ್ಯವಸಾಯ ಮಂಡಲಿಯೊಂದು ಏರ್ಪಟ್ಟು ಎಂಟು ಉಪ ಸಭೆಗಳಲ್ಲಿ ಕೆಲಸವನ್ನು ಹಂಚಿಕೊಂಡು ಕೆಲಸಮಾಡುತ್ತಿದೆ. ಇದೇ ಅಲ್ಲದೆ ಭೂಮಿಯ ಯಜಮಾನರಿಗೆ ಒದಗುವ ತೊಂದರೆಗಳ ನಿವಾರಣೆಗೂ, ಬೀಜವನ್ನೂ ರಾಸುಗಳನ್ನೂ ಕೊಳ್ಳುವುದಕ್ಕೂ, ಇತರ ಕೃಷಿಯ ಕೆಲಸಗಳಿಗೂ, ಭೂಮಿಯನ್ನು ಉತ್ತಮಪಡಿಸಿ ಕೊಳ್ಳಬೇಕೆನ್ನುವ ರೈತರಿಗೆ ತಕಾವಿ ಸಾಲಗಳನ್ನು ಕೊಡುತ್ತಾರೆ. ಅಸ

ಲನ್ನೂ ಬಡ್ಡಿಯನ್ನೂ ಭೂ ಕಂದಾಯದ ಜೊತೆಗೆ ವಸೂಲು ಮಾಡಿಕೊಳ್ಳು ತ್ತಾರೆ. ತೆಂಗಿನ ಕೃಷಿ, ಕಬೂಲಿ ಬಂಜರು ಭೂಮಿಯನ್ನು ಬೇಸಾಯಕ್ಕೆ ತರುವುದು, ಬಾವಿ ತೋಡುವುದು, ಸಾಗುವಳಿ ಕಟ್ಟೆಗಳ ಸ್ಥಾಪನೆ, ಹಣ್ಣು ಗಳ ವ್ಯವಸಾಯ, ರೇಷ್ಮೆಯ ವೃದ್ಧಿ, ವ್ಯವಸಾಯದ ಮುಟ್ಟುಗಳನ್ನು ಕೊಳ್ಳಲು ಸಹಾಯ, ಹಾಲು ಬೆಣ್ಣೆಗಳನ್ನು ತಯಾರಿಸುವ ಸಂಘಗಳ ಕೆಲಸ, ಜಾತಿಯ ಕುದುರೆ ಮತ್ತು ದನದ ಉತ್ಪತ್ತಿ, ಯಂತ್ರಕೊಳ್ಳುವುದು ಮುಂತಾದುವಕ್ಕೆಲ್ಲ, 'ಭೂಮಿಯ ಅಬಾದು ಮತ್ತು ತಕಾವೀ' ಎಂಬ ಬಾಬಿನ ಸಾಲ ತಕ್ಕಮಟ್ಟಿಗೆ ದೊರೆಯುತ್ತದೆ.

ಇದರ ಮೇಲೆ ತೆರಬೇಕಾಗುವ ಬಡ್ಡಿ ಶೇಕಡ ೪ರಿಂದ ೬½ರ ವರೆಗೆ ಇರುತ್ತದೆ. ಡ್ಯೆರಿ ಫಾರಂ, ಕುದುರೆ ಮತ್ತು ದನಗಳ ತಯಾರಿಗೆ ಕೊಡುವ ಸಾಲದ ಜೊತೆಗೆ ಸ್ವಲ್ಪ ಭೂಮಿಯನ್ನೂ ಅಗ್ಗವಾಗಿಯೊ ಉಚಿತ ವಾಗಿಯೊ ಕೊಡುವುದುಂಟು.

ಭದ್ರಾ ವಸತಿ

ಈಚೆಗೆ ಭದ್ರಾ ನದಿಯ ಆಸರೆಯಲ್ಲಿ ಒಂದು ವ್ಯವಸಾಯ ವಸತಿ ಯನ್ನು (Agricultural colony) ಕಲ್ಪಿಸಿ ವ್ಯವಸಾಯದ ಅನುಭವ ವಿರುವ, ಶಿಕ್ಷಣ ಪಡೆದು ವಿದ್ಯಾವಂತರಾದ ಯುವಕರು ಬೇಸಾಯ ಮಾಡ ಲೆಂದು ಅನುಕೂಲಮಾಡಿಕೊಟ್ಟಿದ್ದಾರೆ. ಇಲ್ಲಿನ ಕಾರ್ಯಗಳೆಲ್ಲವೂ ಸರ ಕಾರದವರ ಸಹಾಯದಿಂದ ಹೊಸ ಶಾಸ್ತ್ರರೀತಿಯಿಂದಲೇ ನಡೆಯುವುದ ರಿಂದ ಇಲ್ಲಿನ ಕಾರ್ಯಗಳು ಅನೇಕರಿಗೆ ಮಾರ್ಗದರ್ಶಕವಾಗಬಹುದು.

ನೀರಾವರಿ ಕೆಲಸಗಳು

ವ್ಯವಸಾಯಕ್ಕೆ ಸೇರಿದಂತೆ ನೀರಾವರಿ ಕೆಲಸಗಳು ನಡೆಯುತ್ತಿವೆ ಯಲ್ಲವೆ? ನಾಲೆಯ ನೀರು, ಕೆರೆ ಕಟ್ಟೆ ಮುಂತಾದಲ್ಲಿ ನಿಲ್ಲಿಸಿ ಕಾಪಾಡಿದ ನೀರು, ಬಾವಿಗಳಿಂದಲೂ ನದಿಗಳಿಂದಲೂ ಮೇಲೆತ್ತಿದ ನೀರು—ಹೀಗೆ ನೀರೊದಗುವುದು. ೧೯೨೬—೨೭ರಲ್ಲಿ ಒಟ್ಟು ಬಿತ್ತನೆಯಾದ ಭೂಮಿ ೫೩ಲಕ್ಷ ಎಕರೆ ಜಮೀನಿಗೆ ಸುಮಾರು ೧೧ ಲಕ್ಷ ಎಕರೆಯಷ್ಟಕ್ಕೆ ಮಾತ್ರ ಎಂದರೆ ಶೇಕಡ ೨೧ಕ್ಕೆ ನೀರಾವರಿ ಸಹಾಯವಿತ್ತು. ನಾಲೆ ಕೆಳಗಿನ ಜಮೀನಿ ಗಿಂತ ಇತರ ವಿಧವಾಗಿ ಕೆರೆ, ಕಟ್ಟೆ, ಭಾವಿಗಳಿಂದ ನೀರೊದಗುವ ಪ್ರದೇ

ಶಗಳೇ ಹೆಚ್ಚು. ಇವುಗಳಲ್ಲಿ ನೀರು ಸಂತತವಾಗಿರುವುದಿಲ್ಲ. ನಾಲೆ ಕೆಳಗೆ ಇರುವ ಭೂಮಿಯ ನಾಲ್ಕರಷ್ಟು ಭೂಮಿ ಕೆರೆಗಳ ಕೆಳಗಿವೆ. ಅರ್ವಿನ್ ಕಾಲುವೆಯ ಕೆಳಗೆ ಸುಮಾರು ೧ ಲಕ್ಷ ೨೦ ಸಾವಿರ ಎಕರೆಗಳ ಭೂಮಿ ತರೀ ಸಾಗುವಳಿಗೆ ಬರುವುದೆಂದೂ ಒಟ್ಟು ಕನ್ನಂಬಾಡಿಯ ಕಟ್ಟೆಯ ನೀರಿನಿಂದ ಸಾಗುವಳಿಯಾಗುವ ಭೂಮಿಯ ವಿಸ್ತೀರ್ಣ ೩–೪ ಲಕ್ಷ ಎಕರೆಯಾಗುವುದೆಂದೂ ಎಣಿಕೆಯಿದೆ.

ಕನ್ನಂಬಾಡಿಯ (ಕೃಷ್ಣರಾಜ ಸಾಗರ) ನಾಲೆಗಳನ್ನು ಬಿಟ್ಟು ಒಟ್ಟು ನಾಡಿನ ನೀರಿನ ನಾಲೆಗಳ ಉದ್ದ ೪೬೦೧ ೧/೨ ಮೈಲಿಗಳು.

ಸಹಕಾರ ಇಲಾಖೆ

ದೇಶದಲ್ಲಿ ಜನರ ಬಡತನವನ್ನು ಕಡಮೆಮಾಡಬೇಕು ; ಮುಖ್ಯವಾಗಿ ಹಳ್ಳಿಗಾಡಿನವರನ್ನು ಸಾಲದಿಂದ ಮುಕ್ತರನ್ನಾಗಿಸಬೇಕು ; ಅವರ ಕಸುಬು ವೃತ್ತಿಗಳಿಗೆ ಅನೇಕ ವಿಧವಾಗಿ ನೆರವು ಕೊಡಬೇಕು ; ಬೆಳೆದ ಬೆಳಸಿಗೆ ಲಾಭ ಬರುವಂತೆ ಮಾರಾಟದ ಏರ್ಪಾಡು ಮಾಡಬೇಕು ; ಅವರು ಸಾಹುಕಾರರಿಗೆ ತೆರುವ ಮನೆಹಾಳು ಬಡ್ಡಿಯನ್ನು ತಗ್ಗಿಸಿ ಹಿಂದಿನ ಸಾಲಗಳು ತೀರುವಂತೆಯೂ ಹೊಸದಾಗಿ ವ್ಯವಸಾಯಕ್ಕೆ ಬಂಡವಾಳವಾಗುವಂತೆಯೂ ಸುಲಭವಾದ ಬಡ್ಡಿಗೆ ಸಾಲವನ್ನು ಹುಟ್ಟಿಸಬೇಕು ; ಅವರಲ್ಲಿ ಮಿತವ್ಯಯ ಮತ್ತು ಹಣ ಕೂಡಿಸುವ ಬುದ್ಧಿ ಹೆಚ್ಚಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಂಡು, ಪರಸ್ಪರ ನಂಬಿಕೆಯನ್ನು ಬೆಳಸಿಕೊಂಡು, ದಲ್ಲಾಳರ ಕೈಗೆ ತಮ್ಮ ಬೆಳಸನ್ನು ಕೊಟ್ಟು ಅವರು ಕೊಟ್ಟುದನ್ನು ತೆಗೆದುಕೊಳ್ಳುವುದಕ್ಕೆ ಮೊದಲು ತಾವೇ ಸಾಮಾನುಗಳನ್ನು ಮಾರಿ, ಬಂದ ಲಾಭವನ್ನು ತಾವೇ ಹಂಚಿಕೊಳ್ಳುವುದು ; ಎಲ್ಲರೂ ಸಮನಾಗಿ ಸೇರಿ ದೊಡ್ಡ ಸಂಘಗಳು ವ್ಯಾಪಾರ ಕಾರ್ಯ ಮುಂತಾದವನ್ನು ನಿರ್ವಹಿಸುವ ಶಕ್ತಿ ಪಡೆಯುವುದು ಈ ರೀತಿಯಾದರೆ ಅವರ ಏಳಿಗೆ ಜಾಗ್ರತೆಯಾಗಿಯೂ ಸಮರ್ಪಕವಾಗಿಯೂ ಆಗುವುವೆಂದು ಇಂಗ್ಲಂಡಿನಲ್ಲಿ ಒವೆನ್ ಎಂಬಾತನೂ ಜರ್ಮನಿಯಲ್ಲಿ ರೈಫೆಸೆನ್ ಮತ್ತು ಷೂಲ್ಸ್‌ಡೆಲ್‌ಷ್ ಎಂಬವರೂ ಸಹಕಾರ ಪದ್ಧತಿಯನ್ನು ಸ್ಥಾಪಿಸಿದರು ; ಈಗ ಇಂಗ್ಲೆಂಡ್, ಜರ್ಮನಿ, ಐರ್‌ಲೆಂಡ್, ಹಾಲೆಂಡ್, ಬೆಲ್ಜಿಯಂ ಮುಂತಾದ ರಾಷ್ಟ್ರಗಳಲ್ಲಿ ಈ ಸಂಘಗಳು ಕಾಮಧೇನು ಕಲ್ಪ

ವೃಕ್ಷಗಳಂತೆ ಆಗಿವೆ. ಅವುಗಳು ಮಾಡದಿರುವ ಕೆಲಸವೇ ಇಲ್ಲ; ಅವು ಉಂಟುಮಾಡಿ ಕೊಡಲಾರದ ಸೌಖ್ಯಲಾಭಗಳೇ ಇಲ್ಲ.

ಚರಿತ್ರೆ

ಈ ಪದ್ಧತಿಯನ್ನು ಬ್ರಿಟಿಷ್ ಸರ್ಕಾರದವರು ೧೯೦೪ ರಲ್ಲಿ ಇಂಡಿಯಾ ದಲ್ಲಿ ಪ್ರಚಾರಕ್ಕೆ ತಂದರು; ಮೈಸೂರಿಗೆ ಅದು ಬಂದುದು ೧೯೦೫ ರಲ್ಲಿ. ೧೯೧೨ ರಲ್ಲಿ ಕಲವು ಮಾರ್ಪಾಡುಗಳಾದುವು. ಅಂದಿನಿಂದ ಈಗಿನವರೆಗೂ ಈ ಸಂಘಗಳು ಸಂಖ್ಯೆಯಲ್ಲಿಯೂ, ಧನ ಪುಷ್ಟಿಯಲ್ಲಿಯೂ ವ್ಯಾಪಾರ ಕಾರ್ಯಗಳಲ್ಲಿಯೂ ಲಾಭದಲ್ಲಿಯೂ ವರ್ಷೇ ವರ್ಷೇ ಬೆಳೆಯುತ್ತಾ ಬಂ ದಿವೆ. ಬಹುಮಟ್ಟಿಗೆ ಬಡಬಗ್ಗರಿಗೆ ಜೀವನಾನುಕೂಲವನ್ನು ತಂದು ಅವರ ಮತ್ತು ನಡು ತರಗತಿಯವರ ಋಣವಿಮೋಚನೆಗೆ ಮುಖ್ಯ ಸಹಾಯವಾಗಿವೆ.

ವಿಧಗಳು

ಸಹಕಾರ ಸಂಘಗಳು ಸ್ಥೂಲವಾಗಿ ಎರಡು ಬಗೆಯವು :—ಕೇಂದ್ರ ಸಂಘಗಳು, — ಮೂಲಸಂಘಗಳು; ಅಮಿತ ಜವಾಬ್ದಾರಿ ಸಂಘಗಳು ಅಥವಾ ಮಿತಜವಾಬ್ದಾರಿ ಸಂಘಗಳು. ಮಿತ ಜವಾಬ್ದಾರಿಯೆಂದರೆ ಸಂಘ ದಲ್ಲಿ ಷೇರುದಾರರ ಷೇರು ಎಷ್ಟಿದೆಯೋ ಅಷ್ಟಕ್ಕೆ ಮಟ್ಟಿಗೆ ಅವರು ಸಂಘದ ನಷ್ಟಗಳನ್ನು ಕಟ್ಟಿಕೊಡಲು ಜವಾಬ್ದಾರರು; ಹೆಚ್ಚಿಗಲ್ಲ. ಸಂಘಕ್ಕೆ ೧೦೦ ಷೇರುದಾರರಿದ್ದು ಇವರ ಷೇರು ೫ ಭಾಗವಿದ್ದರೆ, ಒಟ್ಟು ನಷ್ಟದಲ್ಲಿ ಇವರು ಕಟ್ಟಿಕೊಡಬೇಕಾದುದು ೨೦ ರಲ್ಲಿ ಒಂದು ಭಾಗ ಮಾತ್ರ. ಅಮಿತ ಜವಾಬ್ದಾರಿ ಸಂಘಗಳಲ್ಲಿ ಹಾಗಲ್ಲ. ಒಬ್ಬರ ಷೇರು ಒಂದಿರಲಿ ನೂರಿರಲಿ ಅಗತ್ಯ ಬಿದ್ದರೆ ಅವರು ಸಂಘದ ಒಟ್ಟು ನಷ್ಟಕ್ಕೆ ಹೊಣೆಯಾಗಿರಬೇಕು. ಇಂಥ ಸಂಘಗಳು ರೈತರ ಜಾಗ್ರತೆಗಾಗಿಯೇ ಏರ್ಪಡುವುವು. ಸಂಘಕ್ಕೆ ಊನಬಂದರೆ ಯಾರೊಬ್ಬನ ಮೇಲಾದರೂ ಸಾಲತೀರಿಸುವ ಭಾರ ಬೀಳು ವುದರಿಂದ ಸಂಘದ ಕಾರ್ಯಗಳು ಬಹು ಎಚ್ಚರಿಕೆಯಿಂದ ಆಗುವುವೆಂಬ ಭರವಸೆಯಿಂದ ಈ ತೆರನಾದ ಸಂಘಗಳೇ ಹಳ್ಳಿಯ ರೈತರಿಗೆ ಉತ್ತಮ ವೆಂದು ಬೇರೆ ದೇಶಗಳಲ್ಲಿ ಎಣಿಸಿದ್ದಾರೆ. ಆದರೂ ಈ ದೇಶದಲ್ಲಿ ಪರಿ ಮಿತ ಜವಾಬ್ದಾರಿ ಸಂಘಗಳೇ ಬಹಳ.

ಸಹಕಾರದ ಮುಖ್ಯ ಲಕ್ಷಣಗಳು

(೧) ಸಭ್ಯರಾದ ಯಾರಾದರೂ ಮೆಂಬರಾಗಿರಬಹುದು. ಮೆಂಬರುಗಳು ಒಬ್ಬರೊಬ್ಬರಿಗೆ ಪರಿಚಿತರಾಗಿರಬೇಕು.

(೨) ಯಾರು ಎಷ್ಟೇ ಷೇರು ತೆಗೆದುಕೊಳ್ಳಲಿ, ಚುನಾವಣೆ ಮುಂತಾದ ಕಾಲಗಳಲ್ಲಿ ಎಲ್ಲರಿಗೂ ಸಮವಾಗಿ ಒಂದೇ ವೋಟು. (ಕೂಡು ಬಂಡವಾಳದ ಸಂಘಗಳಲ್ಲಿ ಹಾಗಲ್ಲ. ಎಷ್ಟು ಷೇರುಗಳಿದ್ದರೆ ಅಷ್ಟು ವೋಟುಗಳು.) ಇಲ್ಲಿನ ಸಂಬಂಧ ಹಣದ ಸಂಬಂಧವಲ್ಲ; ಗೌರವ ಮತ್ತು ನಂಬಿಕೆಯ ಸಂಬಂಧ.

(೩) ಯಾವ ಮೂರನೆಯ ದಲ್ಲಾಳನು ತಲೆ ಹಾಕುವುದಕ್ಕೂ ಮಾರ್ಗವಿಲ್ಲ; ಲಾಭವೆಲ್ಲ ಮೆಂಬರುಗಳಲ್ಲಿಯೇ ಹಂಚಿಕೆಯಾಗುವುದು.

(೪) ಮೆಂಬರುಗಳಲ್ಲಿ ಜವಾಬ್ದಾರಿ ಬುದ್ಧಿಯೂ ಕಾರ್ಯರೀತಿಗಳ ತಿಳಿವಳಿಕೆಯೂ, ಪರಸ್ಪರ ನಂಬಿಕೆಯೂ ಅನ್ಯೋನ್ಯತೆಯೂ ಉಂಟಾಗಿ ಒಂದುಬಗೆಯ ಶೀಲ ಶಿಕ್ಷಣವೂ ವಿದ್ಯಾಭ್ಯಾಸವೂ ಆಗುವುವು.

೧೮ ವಯಸ್ಸಿಗೆ ಮೇಲ್ಪಟ್ಟು ಸಭ್ಯರಾದ ಯಾವ ಹತ್ತು ಜನವಾದರೂ ಸೇರಿ ಸಹಕಾರ ಸಂಘವನ್ನು ಸ್ಥಾಪಿಸಬಹುದು. ಅವರು ಸಾಧಾರಣವಾಗಿ ಯಾವುದಾದರೂ ಒಂದು ಪ್ರದೇಶದಲ್ಲಿ ವಾಸವಾಗಿ, ಒಂದು ಜಾತಿ, ಕಸುಬು, ಅಥವಾ ಸಮುದಾಯಕ್ಕೆ ಸೇರಿರಬೇಕು. ಸಾಧಾರಣವಾಗಿ ಒಂದು ಕಡೆ ಮೆಂಬರಾದರೆ ಇನ್ನೊಂದುಕಡೆ ಕೂಡದು; ಒಂದರಲ್ಲಿ ಸಾಲ ತೆಗೆದರೆ ಇನ್ನೊಂದರಲ್ಲಿ ಕೂಡದು; ಇನ್ನೊಂದು ಸಾಲ ತೆಗೆಯಬಾರದು—ಎಂಬ ಇವು ನಿಯಮಗಳಾಗಿದ್ದರೂ ಮೆಂಬರುಗಳು ಪಟ್ಟಣಗಳಲ್ಲಿ ಈ ಅಂಕೆಯನ್ನು ವಸ್ತುತಃ ಎಲ್ಲೆಲ್ಲಿಯೂ ಮೀರುತ್ತಿದ್ದಾರೆ.

ಮೆಂಬರಿನ ಸ್ಥಾನ

ಇವುಗಳಲ್ಲಿನ ಎಲ್ಲ ಕಾರ್ಯಗಳನ್ನೂ ಮೆಂಬರುಗಳೇ ಅವರು ವರ್ಷಕ್ಕೊಂದಾವರ್ತಿ ಆರಿಸುವ ಪ್ರತಿನಿಧಿಗಳ ಮೂಲಕ ನಡಸುತ್ತಾರಾಗಿ ಎಲ್ಲರಿಗೂ ಈ ಕೆಲಸದಲ್ಲಿ ಮುತುವರ್ಜಿ ಬರುವುದು; ಸಂಘದ ಕಾರ್ಯದರ್ಶಿಯಾದವನು ವರ್ಷಕ್ಕೆ ಅಥವಾ ಎರಡು ವರ್ಷಕ್ಕೆ ಒಂದು ಸಲ ಆರಿ

ಸಲ್ಪಡುವುದರಿಂದ ಕೆಲಸದಲ್ಲಿ ಜಾಗರೂಕನಾಗಿರುವನು ; ಎಲ್ಲ ಮೆಂಬರುಗಳೂ ಈ ಕಾರ್ಯದರ್ಶಿ ಸ್ಥಾನಕ್ಕೆ ಬರಲು ನ್ಯಾಯತಃ ಅರ್ಹರಾಗಿರುವುದರಿಂದ ಪ್ರತಿಯೊಬ್ಬರಿಗೂ ಉತ್ತೇಜನವೂ, ಆಕಾಂಕ್ಷೆಯೂ ಉಂಟಾಗಿ ಅವರು ಕಾರ್ಯ ಮರ್ಮಗಳನ್ನೂ ರೀತಿಗಳನ್ನೂ ತಿಳಿಯುವ ಪ್ರಯತ್ನ ಮಾಡುವರು. ಇದರಿಂದ ಅಧಿಕಾರಕ್ಕೂ ಜವಾಬ್ದಾರಿ ಬುದ್ಧಿಯ ಬೆಳವಳಿಕೆಗೂ ಬೇಕಾದ ದೊಡ್ಡ ಗುಣಗಳು ಮೆಂಬರುಗಳ ಅಭ್ಯಾಸಕ್ಕೆ ಬರುವುವು.

ಸರಕಾರದ ರಿಯಾಯಿತಿ

ಈ ಸಂಘಗಳಿಗೆ ಸರಕಾರದವರು ಅನೇಕ ರಿಯಾಯಿತಿಗಳನ್ನು ತೋರಿಸಿರುತ್ತಾರೆ; ಯಾರಾದರೊಬ್ಬ ಮೆಂಬರಿಂದ ಇವಕ್ಕೆ ಬರಬೇಕಾದ ಸಾಲ ಇತರ ಸಾಹುಕಾರರಿಗೂ ವರ್ತಕರಿಗೂ ಅವನು ತೆರಬೇಕಾದ ಸಾಲಗಳಿಗೆ ಮುಂಚೆಯೇ ಬರುವಂತೆ ಏರ್ಪಾಡಿರುತ್ತದೆ. ಯಾರೊಬ್ಬರ ಷೇರೂ ಜಪ್ತಿಯಾಗಲಾರದು. ಸತ್ತ ಮೆಂಬರಿನ ಷೇರನ್ನೂ ಹಣವನ್ನೂ ಆತನ ಹೆಂಡತಿಮಕ್ಕಳಿಗೇ ಕೊಡುವರು. ಕೆಲವು ವೇಳೆ ಸರಕಾರದವರು ಇವುಗಳ ಮೇಲೆ ವರಮಾನದ ತೆರಿಗೆ ಎತ್ತುವುದಿಲ್ಲ ; ಸ್ಟಾಂಪು ಫೀ ಮತ್ತು ರೆಜಿಸ್ಟ್ರೇಷನ್ ಫೀಯನ್ನು ಮೆಂಬರುಗಳು ಪತ್ರಗಳ ಮೇಲೆ ಪೂರ್ತಿ ತೆರಬೇಕಾಗಿರುವುದಿಲ್ಲ.

ಉಪಕಾಯಿದೆಗಳು

ಪ್ರತಿಯೊಂದು ಸಂಘವೂ ಅದಕ್ಕೆ ವಿಶೇಷವಾಗಿ ಹೊಂದುವ ಉಪನಿಬಂಧನೆಗಳನ್ನು ಮಾಡಿಕೊಳ್ಳಬಹುದು. ಆದರೂ ಇಂಥ ಇಂಥ ಸಂಘಗಳವರು ಈ ರೀತಿಯಾಗಿಯೇ ಸಾಲಗಳನ್ನು ಕೊಡಬೇಕು ; ಇಷ್ಟಕ್ಕೆ ಮೇಲ್ಪಟ್ಟು ಒಬ್ಬ ಮೆಂಬರಿಗೆ ಕೊಡಕೂಡದು ; ಇಂಥ ಆಧಾರದ ಮೇಲೆಯೇ ಕೊಡಬೇಕು ; ಇಷ್ಟು ದರಕ್ಕೆ ಮೀರಿದ ಬಡ್ಡಿ ಹಾಕಕೂಡದು ; ಲಾಭವನ್ನು ಹೀಗೇ ಹಂಚಬೇಕು ಎಂಬ ಸರಕಾರದ ನಿರ್ಬಂಧಗಳಿವೆ. ಸಂಘಗಳ ಲೇವಾದೇವಿಗೆ ಸಂಬಂಧಿಸುವ ಎಲ್ಲ ವಿವಾದಗಳನ್ನೂ ನಿರ್ಧರಿಸಿ ತೀರ್ಮಾನಕೊಡಲು ಸರಕಾರದವರು ಸಹಕಾರ ಇಲಾಖೆಯೊಂದನ್ನು ಸ್ಥಾಪಿಸಿ ಅಲ್ಲಿನ ಮೇಲಧಿಕಾರಿಗಳೇ ನ್ಯಾಯಾಧೀಶರಾಗಿರುವಂತೆ ಏರ್ಪಾಡು ಮಾಡಿದ್ದಾರೆ.

ಮೂಲಧನ

ಮೆಂಬರುಗಳು ಕೊಡುವ ಷೇರು ಹಣದಿಂದಲೂ ಅವರೂ ಇತರರೂ ಅದರಲ್ಲಿಡುವ ಪುದುವಟ್ಟು ಹಣದಿಂದಲೂ, ಕೇಂದ್ರಸಂಘಗಳಿಂದ ಅದು ಪಡೆಯುವ ಸಾಲದಿಂದಲೂ ಸಂಘದ ಕೆಲಸಕ್ಕೆಲ್ಲ ಹಣವೊದಗುವುದು. ಸಣ್ಣ ಸಂಘಗಳು ಸಾಮಾನ್ಯವಾಗಿ ಎಲ್ಲವೂ ಕೇಂದ್ರ ಸಂಘಗಳ ಮೆಂಬರುಗಳಾಗಿರುತ್ತವೆ. ಕೇಂದ್ರ ಸಂಘಗಳಿಗೆ ತನ್ನ ಷೇರುದಾರರಿಂದಲೂ, ಅವರಿಟ್ಟ ಪುದುವಟ್ಟು ಹಣದಿಂದಲೂ, ತಾವು ಹಣದ ಪೇಟೆ, ಸರಕಾರ ಬ್ಯಾಂಕು, ಇವುಗಳಿಂದ ತೆಗೆದ ಸಾಲಗಳಿಂದಲೂ ಹಣವೊದಗುವುದು. ಈ ಕೇಂದ್ರ ಸಂಘಗಳಿಗೆಲ್ಲ ದಿ ಪ್ರೊವಿನ್‌ಷಿಯಲ್ ಏಪೆಕ್ಸ್ ಬ್ಯಾಂಕೆಂಬ ಶಿಖರ ಸಂಸ್ಥೆಯೊಂದಿದೆ. ಅದೇ ಮುಖ್ಯ ಸೆಂಟ್ರಲ್ ಬ್ಯಾಂಕು.

ಮೈಸೂರಿನಲ್ಲಿ ಸಹಕಾರ

ಇಂಡಿಯಾ ದೇಶದ ಇತರ ಭಾಗಗಳಲ್ಲಿನಂತೆಯೇ ನಮ್ಮಲ್ಲಿಯೂ ಸಾಲಕೊಟ್ಟು ಲೇವಾದೇವಿ ಮಾಡುವ ಸಂಘಗಳೂ, ಸ್ಟೋರ್ಸ್ ಎಂಬ ಸಾಮಾನು ಮಾರುವ ಸಂಘಗಳೂ ಹೆಚ್ಚು. ಹಳ್ಳಿಗಳಿಗಿಂತಲೂ ಪಟ್ಟಣಗಳಲ್ಲಿ ಈ ಎರಡು ಬಗೆಯ ಸಂಸ್ಥೆಗಳೂ ಚೆನ್ನಾಗಿ ಬೆಳೆಯುತ್ತಿವೆ ಎನ್ನಬಹುದು. ಹಳ್ಳಿಗಳ ಕಡೆಯ ಸಂಘಗಳೂ ರೈತರಿಗೆ ಬೇಕಾದ ಸಾಲವನ್ನು ಒದಗಿಸುವುದರ ಜೊತೆಗೆ ಬಿತ್ತನೆ ಗೊಬ್ಬರ, ಬೇಸಾಯದ ಹೊಸ ತೆರದ ಮುಟ್ಟು ಇವುಗಳನ್ನು ಒದಗಿಸುವ ಸಂಘಗಳು ಹೆಚ್ಚಬೇಕು. ವಿದ್ಯಾಭಿವೃದ್ಧಿಯೂ ಶೀಲವಂತರಾದ ಹಳ್ಳಿಯ ಜನರೂ ಹೆಚ್ಚಿದ ಹೊರತು ಸಹಕಾರ ಬಹುವಾಗಿ ಮುಂದುವರಿಯಲಾರದು. ಕೆಲವು ದೇಶಗಳಲ್ಲಿ ಕೆಲವುಕಡೆ ಈ ಸಂಘಗಳು ಉತ್ಪತ್ತಿ ಕಾರ್ಯಗಳನ್ನೂ ಮಾಡುತ್ತಿವೆ. ರಾಸುಗಳನ್ನು ಒದಗಿಸುವುದು ; ಗೂಳಿ ಎತ್ತು ಮುಂತಾದವನ್ನು ಬೆಳಸಿ ಮಾರುವುದು ; ಆಲೆ, ಎಣ್ಣೆಯ ಯಂತ್ರ, ಹಿಟ್ಟಿನ ಯಂತ್ರ, ಮುಂತಾದವನ್ನು ಏರ್ಪಡಿಸುವುದು ; ಹಸು ಎಮ್ಮೆಗಳನ್ನು ಕಾಪಾಡಿ ಹಾಲು ಬೆಣ್ಣೆಗಳನ್ನು ಒದಗಿಸುವುದು ; ಗೇಷ್ಮೆ, ಗಂಧದ ಸಾಮಾನು, ನೇಗೆಯ ಕೆಲಸ ಮುಂತಾದವು ಈ ಬಗೆಯ ಸಂಘಗಳ ಕೆಲಸ. ಆದರೆ ಇವುಗಳ ಸಂಖ್ಯೆ ಕಡಮೆ. ವಿದ್ಯಾಶಾಲೆಗಳಲ್ಲಿಯೂ ಅನೇಕರು ಸಹಕಾರ ಸಂಘಗಳನ್ನು ಸ್ಥಾಪಿಸಿ

ತಮಗೆ ಬೇಕಾದ ಎಲ್ಲ ಪುಸ್ತಕ ಮುಂತಾದ ಸಾಮಾನುಗಳನ್ನೂ ಒದಗಿಸಿಕೊಳ್ಳುತ್ತಿರುವರು. ಸಹಕಾರ ಪದ್ಧತಿ ಮೇಲಾಗಿ ಹೆಚ್ಚಿರುವ ಡಿಸ್ಟ್ರಿಕ್ಟುಗಳು ಮೊದಲು ಬೆಂಗಳೂರು, ಆ ಮೇಲೆ ಮೈಸೂರು, ಕೋಲಾರ, ತುಮಕೂರು, ಹಾಸನ, ಶಿವಮೊಗ್ಗ, ಕಡೂರು, ಚಿತ್ರದುರ್ಗ ಈ ಕ್ರಮದಲ್ಲಿವೆ.

ಒಟ್ಟಿನಲ್ಲಿ ಈ ಪದ್ಧತಿಯಿಂದ ಜನರ ನಯನೀತಿಗಳೂ, ತಿಳಿವಳಿಕೆಯೂ ಕಾರ್ಯಶಕ್ತಿಯೂ, ವ್ಯಾಪಾರಧರ್ಮವೂ, ಧೈರ್ಯ ಪರಸ್ಪರ ನಂಬಿಕೆಗಳೂ, ವ್ಯಕ್ತಿ ಗೌರವವೂ, ನಾಲ್ಕು ಜನ ಸೇರಿ ಒಮ್ಮತದಿಂದ ಕೆಲಸಮಾಡುವ ಶಕ್ತಿಯೂ ಹೆಚ್ಚಿವೆಯೆನ್ನಬಹುದು. ಈಗಾಗಲೆ ಸಾಹುಕಾರರ ಕೈಯಿಂದ ಬಡ ಜನರನ್ನು ಬಿಡಿಸಿ, ಸುಲಭ ದರಗಳ ಬಡ್ಡಿ ಒದಗಿಸಿ ಅನೇಕರನ್ನು ಇದು ಉದ್ಧಾರಮಾಡಿದೆ. ಇದುವರೆಗೆ ಅನುಪಯುಕ್ತವಾಗಿ ಉಳಿಯುತ್ತಿದ್ದ ಹಣಗಳು ಪುದುವಟ್ಟಿನ ರೂಪದಲ್ಲಿ ಸಂಘಗಳಿಗೆ ಬರುತ್ತಿವೆ. ಅವಕ್ಕೆ ಬಡ್ಡಿಯೂ ಲಾಭವೂ ಬರುವುವೆಂಬ ಆಸೆಯನ್ನು ಹೆಚ್ಚಿಸಿದೆ. ಕೊನೆಗೆ ಅನೇಕಜನ ಲೇವಾದೇವಿ ಮಾಡುತ್ತಿದ್ದ ಸಾಹುಕಾರರೂ ತಮ್ಮ ಹಣವನ್ನು ಇಲ್ಲಿ ಪುದುವಟ್ಟಾಗಿಡುವಂತೆ ಮಾಡಿದೆ. ಆ ಮೂಲಕವೂ ಸಂಘಗಳ ವ್ಯಾಪಾರಕ್ಕೆ ಒದಗುವ ಹಣವನ್ನು ಹೆಚ್ಚಿಸಿ ಅವುಗಳ ಅನುಕೂಲಗಳನ್ನು ಜನರಿಗೆ ಹರಡುತ್ತಿದೆ. ಕೀಳ್ಪಕ್ಷ ಸಾಹುಕಾರರು ಹಾಕುತ್ತಿದ್ದ ಬಡ್ಡಿಯ ದರಗಳನ್ನು ಬಹಳಮಟ್ಟಿಗೆ ಇಳಿಸಿ, ಸಾಲತೆಗೆಯುವವರನ್ನು ಕಾಪಾಡಿದೆ ಎನ್ನಬಹುದು.

ವ್ಯಾಪಾರ ಕೈಗಾರಿಕೆಗಳ ಶಾಖೆ

ಸ್ಥಾಪನೆ – ಕೆಲಸ

ನಮ್ಮ ದೇಶದ ವ್ಯಾಪಾರಕ್ಕೂ ಕೈಗಾರಿಕೆಗೂ ಸಂಬಂಧಪಡುವ ಎಲ್ಲ ವಿಷಯಗಳನ್ನು ಸಂಗ್ರಹಿಸುವುದು ; ಬೇಕುಬೇಕಾದ ಸಲಹೆಗಳನ್ನು ಕೊಡುವುದು ; ತಕಾವಿ ಸಾಲಗಳನ್ನು ಕೊಡಿಸುವುದು ; ವ್ಯಾಪಾರ ಸಂಘಗಳಿಗೂ ಪ್ರಚಾರ ಕಾರ್ಯಗಳಿಗೂ ಬೇಕಾಗುವ ವೇತನಗಳನ್ನೂ ಪ್ರವಾಸಗಳನ್ನೂ ಒದಗಿಸುವುದು ; ಪ್ರದರ್ಶನಗಳನ್ನು ಏರ್ಪಡಿಸಿ ಸಹಾಯಮಾಡುವುದು ; ಹೊಸ ಕೈಗಾರಿಕೆಗಳನ್ನು ಸರ್ಕಾರದ ಆಶ್ರಯದಲ್ಲಿ ಸ್ಥಾಪಿಸಿ, ಕೆಲವುದಿನ ತಾವೇ ನಡಸಿ ಆಮೇಲೆ ಅವನ್ನು ಸಾಹುಕಾರರ ಆಡಳಿತಕ್ಕೆ ಕೊಡುವುದು ;

ಯಂತ್ರೋದ್ಯೋಗಗಳ ನಿರ್ಮಾಣಕ್ಕೂ, ಪ್ರಸಾರಣಕ್ಕೂ, ಬೇಕಾದ ಎಲ್ಲ ತಿಳಿವಳಿಕೆಯನ್ನೂ ಸಹಾಯವನ್ನೂ ಕೊಡುವುದು ; ಧಾರಣೆವಾಸಿ ಲೆಕ್ಕ, ವ್ಯಾಪಾರದ ಪರಿಮಾಣ ಮುಂತಾದವನ್ನು ಗುಣಿಸಿ ಪ್ರಕಟಿಸುವುದು. ಕಾಮಗಾರಿಗೆ ಸಂಬಂಧಪಡುವ ಎಲ್ಲ ವಿಷಯಗಳಲ್ಲಿಯೂ ಸಲಹೆ ಕೊಡುವುದು ಮುಂತಾದ ಕಾರ್ಯಗಳನ್ನು ಈ ಇಲಾಖೆ ಮಾಡುತ್ತಿದೆ. ಇದು ಮೊದಲಾದಂದಿನಿಂದ ಅನೇಕ ಹಳೆಗೆಯ ಕಾರ್ಯಗಳು ದೇಶದಲ್ಲಿ ನೆಲೆಗೊಂಡಿವೆ. ಇದೂ ವ್ಯವಸಾಯದ ಮತ್ತು ಸಹಕಾರದ ಇಲಾಖೆಯೂ ಸೇರಿ ಅನೇಕವೇಳೆ ಕೆಲಸಮಾಡಿವೆ. ಹೊಸ ಶಾಸ್ತ್ರವಿಧಾನಗಳನ್ನೂ ಯಂತ್ರಪದ್ಧತಿಗಳನ್ನೂ ಬಳಕೆಗೆ ತರಲು ಬಹುವಾಗಿ ನೆರವಿತ್ತಿದೆ. ಹೊರದೇಶಗಳಲ್ಲಿ ನಮ್ಮ ವ್ಯಾಪಾರದ ಪ್ರತಿನಿಧಿ ಏರ್ಪಟ್ಟುದೂ ಈ ಇಲಾಖೆಯ ಸಲಹೆಯಿಂದಲೇ ಎನ್ನಬಹುದು. ಕಸುಬು ಕೈಗಾರಿಕೆಗಳನ್ನು ಕಲಿತು ಬರುವುದಕ್ಕೆ ಆಗಾಗ್ಗೆ ದೇಶಿಯರನ್ನು ಕಳುಹಿಸುತ್ತ, ವಿಶೇಷ ವಿದ್ಯೆಗಳನ್ನು ಕಲಿಸುವುದಕ್ಕೂ ವಿಶೇಷ ಕಾರ್ಯವಿಧಾನಗಳನ್ನು ಸ್ಥಾಪಿಸುವುದಕ್ಕೂ ವಿದೇಶಿ ಕಾರ್ಯಜ್ಞರನ್ನು ಕರಸಿಕೊಂಡು ಅವರಿಂದ ಉಪಯೋಗ ಹೊಂದುತ್ತ ಅನೇಕ ಕೈಗಾರಿಕೆಗಳು ತಲೆಯೆತ್ತುವುದಕ್ಕೂ ಸಹಾಯ ಮಾಡುತ್ತಿದೆ.

ಆಡಳಿತಕ್ಕೆ ಒಳಪಡುವ ಸಂಸ್ಥೆ—ಕಾರ್ಯಗಳು

ಈಗ ದೇಶದಲ್ಲಿ ಸ್ಥಾಪಿತವಾಗಿ ನಡೆಯುವ ಕೆಲವು ದೊಡ್ಡ ಕೈಗಾರಿಕೆಗಳೂ ಕೆಲಸಗಳೂ ಈ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿವೆ. ಭದ್ರಾವತಿಯ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ, ಮೈಸೂರು ಬೆಂಗಳೂರುಗಳಲ್ಲಿನ ಶ್ರೀಗಂಧದ ಎಣ್ಣೆಯ ಕಾರ್ಖಾನೆಗಳು, ಪಿಂಗಾಣಿ ಕಾರ್ಖಾನೆ, ಸಿಮೆಂಟ್, ಸಕ್ಕರೆ, ಕಾಗದ, ಕಚ್ಚಾರೇಷ್ಮೆ ಗಿರಣಿಗಳು, ಮಿಲ್ಲುಗಳು ಮುಂತಾದ ಕೈಗಾರಿಕೆ ಯಂತ್ರಾಲಯಗಳು, ಸರ್ಕಾರದವರು ಕೊಡುವ ತಕಾವಿ ಸಾಲದ ಏರ್ಪಾಡು ಇವು ಬಹುಮಟ್ಟಿಗೆ ಸರ್ಕಾರದವರ ಸಾಹಸದಿಂದ ಹುಟ್ಟಿ ನಡೆಯುತ್ತಿದ್ದರೂ, ಕೇಂದ್ರ ಕೈಗಾರಿಕೆ ಕಾರ್ಯಾಲಯವೂ (Central Industrial Workshop) ಡಿಸ್ಟ್ರಿಕ್ಟ್ ಕಾರ್ಯಾಲಯಗಳೂ, ಕಲಾವಸ್ತುಗಳ ಕಾರ್ಯಾಲಯವೂ, ಸಾಬೂನಿನ ಕಾರ್ಖಾ

ನೆಯ ಕೆಲಸಗಳೂ, ಸರ್ಕಾರದ ನೇಗೆಯ ಕಾರ್ಖಾನೆಯೂ, ಈ ಇಲಾಖೆಯ ವಿಚಾರಣೆಗೆ ಒಳಪಟ್ಟಿವೆ. ಹೊಸದಾಗಿ ಬದನವಾಳ ತಗಡೂರು ಅಜ್ಜಂಪುರಗಳಲ್ಲಿ ಖಾದಿ ಕಾರ್ಯಗಳನ್ನೇರ್ಪಡಿಸಿದುದೂ ಇದರ ಪ್ರಭಾವದಿಂದಲೇ. ಕಲೆ ಕೈಗಾರಿಕೆಗೆ ಕಸುಬು ವೃತ್ತಿಗಳಿಗೆ ಬೇಕಾಗುವ ಶಿಕ್ಷಣವನ್ನು ಕೊಡುವ ಕಲಾಶಾಲೆಗಳೂ, ಜಿಲ್ಲಾ ಪ್ರದೇಶಗಳಲ್ಲಿಯೂ ದಾವಣಗೆರೆ, ಚೆನ್ನಪಟ್ಟಣ, ದೊಡ್ಡಬಳ್ಳಾಪುರ, ಸಾಗರ, ಗುಡಿಬಂಡೆ, ಮೇಲುಕೋಟೆ, ಹೊಳೆನರಸೀಪುರ ಮುಂತಾದ ಇತರ ಕಡೆಗಳಲ್ಲಿ ಇರುವ ಕೈಗಾರಿಕೆ ಶಿಕ್ಷಣ ಶಾಲೆಗಳೂ ಬೆಂಗಳೂರು, ಮೈಸೂರುಗಳಲ್ಲಿ ನಡೆಯುವ ಮನೆಯ ಕೈಗಾರಿಕೆ ಶಿಕ್ಷಣ ಶಾಲೆಗಳೂ ಇವೆಲ್ಲವೂ ಈ ಇಲಾಖೆಯ ಆಡಳಿತಕ್ಕೆ ಒಳಪಟ್ಟಿವೆ.

ಜೊತೆಗೆ ತೂಕ ಅಳತೆಗಳ ಮೇಲ್ವಿಚಾರಣೆ, ಹೊಸ ಯಂತ್ರಾದಿಗಳನ್ನು ಮಾಡುವವರ ರಕ್ಷಣೆ ಮುಂತಾದ ಕೆಲಸಗಳೂ, ಈ ಇಲಾಖೆಗೇ ಸೇರಿವೆ. ಆಗಾಗ್ಗೆ ಕಾರ್ಖಾನೆಗಳ ಸ್ಥಿತಿ ವಿಚಾರಣೆ ಮಾಡಲು ಇನ್‌ಸ್ಪೆಕ್ಟರುಗಳು ಇದ್ದಾರೆ. ಅವರ ಜೊತೆಗೆ ಈ ಇಲಾಖೆಯ ಮುಖ್ಯಾಧಿಕಾರಿಗಳನ್ನು ಶ್ರೇಷ್ಠ ವಿಚಾರಣಾಧಿಕಾರಿಯಾಗಿ ನಿಯಮಿಸಿ, ಅಲ್ಲಿನ ನ್ಯೂನಾತಿರೇಕಗಳನ್ನು ಸರಿಪಡಿಸಲು ಏರ್ಪಾಡಾಗಿದೆ. ಕಾಮಗಾರರ ನಷ್ಟವನ್ನು ತುಂಬಿಕೊಡಲು, ಏರ್ಪಟ್ಟಿರುವ ಶಾಸನದ ಸಂಬಂಧದಲ್ಲಿಯೂ ಈ ಅಧಿಕಾರಿಯೇ ಎಲ್ಲ ಕೆಲಸಗಳನ್ನೂ ಸರ್ಕಾರದ ಪರವಾಗಿ ನಿರ್ವಹಿಸುವನು.

ಅರ್ಥಸಾಧನ ಸಮಿತಿ

ಉದ್ದೇಶ – ಕೆಲಸ

ಈ ಸಮಿತಿ ೧೯೧೧ ರಲ್ಲಿ ಏರ್ಪಟ್ಟು ಸರ್ಕಾರದವರ ಜೊತೆಗೆ ದೇಶದ ಅರ್ಥಾಭಿವೃದ್ಧಿಯಲ್ಲಿ ಶ್ರದ್ಧಾಳುಗಳಾದ ಖಾಸಗಿ ಮಹಾಜನರು ಸೇರಿ ಆಲೋಚನೆಗಳನ್ನು ಮಾಡುವ ಏರ್ಪಾಡು ನಡೆಯಿತು. ಇದರ ಕೆಲಸ ವ್ಯವಸಾಯಾಭಿವೃದ್ಧಿ, ವಿದ್ಯಾಭಿವೃದ್ಧಿ, ಕೈಗಾರಿಕೆ ವ್ಯಾಪಾರಗಳ ಅಭಿವೃದ್ಧಿ—ಎಂಬ ಮೂರು ಮುಖಗಳಲ್ಲಿ ನಡೆಯುತ್ತಿದೆ. ಪತ್ರಿಕೆಗಳನ್ನು ಹೊರಡಿಸುವುದು, ಉಪನ್ಯಾಸಕರನ್ನು ಕಳುಹಿಸುವುದು, ಪೌರನೀತಿ,

ಸಮಾಜದ ಕ್ಷೇಮೋನ್ನತಿ ಮುಂತಾದ ತತ್ವಗಳನ್ನು ತಿಳಿಸಿ ಅವಕ್ಕೆ ಸಂಬಂಧಪಟ್ಟ ಸ್ಥಳ ಸಂಸ್ಥೆಗಳನ್ನೂ ಕಾರ್ಯಮಂಡಲಿಗಳನ್ನೂ ಸ್ಥಾಪಿಸುವುದು ; ಮೇಲೆ ಹೇಳಿದ ಮೂರು ಮುಖ್ಯವಾದ ಅಭಿವೃದ್ಧಿಸಾಧನೆಗೂ ಬೇಕಾದ ಸಲಹೆಗಳನ್ನು ಕೊಟ್ಟು, ತೆಗೆದುಕೊಂಡು ಕಾರ್ಯರೂಪಕ್ಕೆ ತರಲು ಯತ್ನಿಸುವುದು ಮುಂತಾದ ಕೆಲಸಗಳನ್ನು ಈ ಸಮಿತಿ ಮಾಡುತ್ತಿದೆ. ಈ ಸಭೆಯ ಕಾರ್ಯಗಳ ಫಲವಾಗಿ ದೇಶದಲ್ಲಿ ವಿದ್ಯಾಪ್ರಚಾರ ಹೆಚ್ಚಿದೆಯಲ್ಲದೆ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಗುವುದಕ್ಕೂ ಮೈಸೂರು ಬ್ಯಾಂಕು ಮೈಸೂರು ಬೆಂಗಳೂರುಗಳ ವರ್ತಕ ಮಹಾಸಂಘಗಳು (Chambers of Commerce) ಏರ್ಪಟ್ಟು ಕೆಲಸ ಮಾಡುವುದಕ್ಕೂ ಅನುಕೂಲವಾಯಿತು. ವ್ಯಾಪಾರ ಕೈಗಾರಿಕೆಗಳ ಇಲಾಖೆ ಪ್ರತ್ಯೇಕವಾಗಿ ಏರ್ಪಡುವುದಕ್ಕೂ ೧೯೧೮—೧೯ರಲ್ಲಾದ ಆಹಾರ ಸಂಗ್ರಹ ಕಾರ್ಯಗಳು ನಡೆದು ಜನರ ಕಷ್ಟಗಳು ಕಡಮೆಯಾಗುವುದಕ್ಕೂ ಸರ್ಕಾರಕ್ಕೆ ಬೇಕಾದ ಸ್ಟೋರ್ಸ್ ಕೊಳ್ಳುವ ಕಾರ್ಯಶಾಖೆಯೊಂದು ಏರ್ಪಡುವುದಕ್ಕೂ ಈ ಸಮಿತಿಯೇ ಕಾರಣ.

ಸಂಪದಭಿವೃದ್ಧಿಗೆ ಮುಖ್ಯವಾಗಿ ನೆರೆಯುವ ಇಲಾಖೆಗಳ ಕೆಲಸ ಒಂದು ಕ್ರಮದಲ್ಲಿ ನಡೆದು ಶಾಖೆಗಳು ಹೊಂದಿಕೊಂಡು ಬೆಳೆಯುವಂತೆ ಮಾಡುವುದೂ, ಮಹಾಜನರಿಗೂ ಸರಕಾರಕ್ಕೂ ಒಂದು ಹೊಸರೀತಿಯಲ್ಲಿ ಹತ್ತಿರದ ಸಂಪರ್ಕವನ್ನುಂಟುಮಾಡಿಕೊಟ್ಟು ಪರಸ್ಪರ ಅಭಿಪ್ರಾಯ ಸೂಚನೆ ಸಲಹೆಗಳಿಂದ ಕಾರ್ಯಸಾಧನೆ ಮಾಡುವುದೂ ಈ ಸಮಿತಿಯ ಕೆಲಸ. ಸರ್ಕಾರದಿಂದ ದೇಶದಲ್ಲಿ ಅರ್ಥಸಾಧನೆಗೆ ಯಾವ ಬಗೆಯ ಸಹಾಯವಾಗಬೇಕೆಂಬುದನ್ನು ವಿಚಾರಮಾಡಿ ಆ ಸಹಾಯ ಒದಗುವಂತೆ ಮಾಡತಕ್ಕದ್ದು ಈ ಸಮಿತಿಯ ಮುಖ್ಯ ಕಾರ್ಯ. ಹೊಸ ವಿದ್ಯೆಗಳು, ಕಸುಬುಗಳು, ಕಾರ್ಯವಿಧಾನಗಳು, ಯಂತ್ರಗಳು ಇವುಗಳನ್ನು ಬಳಕೆಗೆ ತರುವುದರಲ್ಲಿಯೂ ದೇಶದಲ್ಲಿ ಉದ್ಯೋಗವನ್ನು ಹೆಚ್ಚುಮಾಡಿ ಎಲ್ಲ ಪ್ರಯತ್ನಗಳನ್ನೂ ಸಾರ್ಥಕಮಾಡುವ ವಿಚಾರದಲ್ಲಿಯೂ ಇವರು ಶ್ರದ್ಧೆ ವಹಿಸಿ ಕೆಲಸ ಮಾಡುತ್ತಿದ್ದಾರೆ.

*　　*　　*　　*

ಹೀಗೆ ಸುರಚಿತವಾದ ಇಲಾಖೆಗಳ ಮೂಲಕವೂ, ಸ್ವಂತವಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದರ ಮೂಲಕವೂ, ಕೈಗಾರಿಕೆಗಳ ಚಾಲನೆಗಾಗಿ ಬೇಕಾಗುವಷ್ಟು ವಿದ್ಯುಚ್ಛಕ್ತಿ ಹಣ ಮುಂತಾದವನ್ನು ಒದಗಿಸುವುದರ ಮೂಲಕವೂ, ಶಾಸನಗಳ ಮೂಲಕವೂ, ಜನರ ಆಯುಸ್ಸು, ಆರೋಗ್ಯ, ಸಂಪತ್ತು ಇವು ಹೆಚ್ಚುವಂತೆಯೂ, ಜನದ ಸ್ವತಂತ್ರಜೀವನಶಕ್ತಿ ಮೊದಲಾದವು ಹೆಚ್ಚುವಂತೆಯೂ, ಅವರಿಗೆ ಹೊಸ ಆರ್ಥಿಕ ವಿಧಾನಗಳೂ ತತ್ವಗಳೂ ತಿಳಿದು ಹೊಸ ಅಭ್ಯಾಸಗಳು ರೂಢಿಗೆ ಬರುವಂತೆಯೂ ಪ್ರಯತ್ನ ಮಾಡುತ್ತ ಮೈಸೂರು ಸರ್ಕಾರದವರು ಜನದ ಹಿತಾಕಾಂಕ್ಷಿಗಳಾಗಿ ತಮ್ಮ ಸ್ಥಿತಿಗತಿ ಶಕ್ತಿಗಳಿಗೆ ಮೀರಿ ಅನುಕೂಲವನ್ನು ಒದಗಿಸುತ್ತ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗುತ್ತಿದ್ದಾರೆ.

೧೧. ಬ್ರಿಟಿಷ್ ಸರ್ಕಾರಕ್ಕೂ ಮೈಸೂರಿಗೂ ಇರುವ ಅರ್ಥಿಕ ಸಂಬಂಧ—ಪರಿಣಾಮಗಳು

ಆಶ್ರಿತ ಸಂಸ್ಥಾನ

ಬ್ರಿಟಿಷ್ ಸರ್ಕಾರದವರು ಇಂಡಿಯಾ ದೇಶದಲ್ಲಿ ಶಾಂತಿ ಸಮಾಧಾನಗಳನ್ನು ಸ್ಥಾಪಿಸಿ ಅನೇಕ ಬಗೆಯಾಗಿ ವ್ಯಾಪಾರ ಕೈಗಾರಿಕೆಗಳಿಗೆ ನೆರವು ಕೊಟ್ಟು ಅವು ವೃದ್ಧಿಯಾಗುವಂತೆ ಏರ್ಪಡಿಸಿರುವುದರ ಫಲವಾಗಿ ನಮ್ಮ ದೇಶಕ್ಕೂ ನೆರೆಯ ಪ್ರಾಂತಗಳಿಗೂ ಲಾಭಕರವಾದ ಸಂಬಂಧ ಉಂಟಾಗಿ ಇಬ್ಬರಿಗೂ ಪ್ರಯೋಜನವಾಗುತ್ತಿದೆ. ಮೈಸೂರು ಆಶ್ರಿತ ಸಂಸ್ಥಾನ; ಅನೇಕ ವಿಚಾರಗಳಲ್ಲಿ ಪ್ರಧಾನ ಸರ್ಕಾರಕ್ಕೆ ಒಳಪಟ್ಟಿದೆ. ಈ ಅಧೀನತೆಯಿಂದ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕೆಲವು ನಷ್ಟಗಳಿಗೂ ಈಡಾಗಿದೆ. ಈ ದೇಶ ಈಗಿನ ಸುವ್ಯವಸ್ಥಸ್ಥಿತಿಗೆ ಬಂದಿರುವುದೇ ಬ್ರಿಟಿಷರ ಸಹಾಯದಿಂದ ಎಂಬುದು ನಿಜ. ಆದರೂ ಪಕ್ಕದ ಪ್ರಾಂತ ಪ್ರದೇಶಗಳವರು ಅನುಭವಿಸಬೇಕಾಗಿಲ್ಲದ ಕೆಲವು ನಷ್ಟಗಳನ್ನು ಮೈಸೂರಿನಂಥ ದೇಶೀಯ ಸಂಸ್ಥಾನಗಳು ಅನುಭವಿಸುತ್ತಿವೆ.

ಪೊಗದಿ

ಮೊನ್ನೆಮೊನ್ನೆಯವರೆಗೂ ಸಂಸ್ಥಾನ ೩೫ ಲಕ್ಷ ರೂಪಾಯಿಗಳ ಪೊಗದಿಯನ್ನು ತೆರುತ್ತಿತ್ತು. ೧೭೯೯ ರಲ್ಲಿ ಅದು, ಬ್ರಿಟಿಷರ ಕೈಗೆ ಹೋದಾಗ ನಡೆದ ಸಹಾಯಕ ಕರಾರಿನ ಪ್ರಕಾರ ಮಹಾರಾಜರ ರಾಜ್ಯದ ರಕ್ಷಣೆಗಾಗಿ ಬ್ರಿಟಿಷರು ಸೈನ್ಯ ಸಾಮಗ್ರಿಗಳನ್ನು ಸಿದ್ಧವಾಗಿಟ್ಟಿರಬೇಕಾದುದಕ್ಕಾಗಿ ಎಂದು ೨೪೭ ಲಕ್ಷ ರೂಪಾಯಿಗಳ ಪೊಗದಿ ಕೊಡಬೇಕೆಂದು ಗೊತ್ತುಮಾಡಿದರು. ಸಮಯ ಬಂದಾಗ ಪರಸ್ಪರವಾಗಿ ರಕ್ಷಣೆಗೆ ಸಿದ್ಧರಾಗಿರಬೇಕೆಂದೂ ತೀರ್ಮಾನವಾಯಿತು. ಅದಕ್ಕಾಗಿ ರಾವುತ ಸೈನ್ಯ

ವನ್ನಿಡಬೇಕೆಂದಾಗಿ, ಕೊನೆಗೆ ಹೆಚ್ಚಾಗಿ ೧೦ತ್ತಿ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದಾಯಿತು. ೧೯೨೮_೨೯ರಲ್ಲಿ ನಮ್ಮ ರಾಜ್ಯದ ಸುವ್ಯವಸ್ಥಿತಿಗಾಗಿ ಬಹುಮಾನ ಕೊಟ್ಟಂತೆ ಈ ೧೦ತ್ತಿ ಲಕ್ಷ ರೂಪಾಯಿಗಳನ್ನು ಪೊಗದಿಯಿಂದ ಇಳಿತಾಯಮಾಡಿಕೊಟ್ಟರು.

ಸೈನ್ಯ

ಮೈಸೂರಿನಲ್ಲಿ ಒಳದೇಶದ ರಕ್ಷಣೆಗಾಗಿ ಒಂದು ಸೈನ್ಯವಿದೆ. ಕೇವಲ ಬ್ರಿಟಿಷ್ ಸರ್ಕಾರದವರ ಉಪಯೋಗಕ್ಕಾಗಿಯೇ ಇಂಪೀರಿಯಲ್ ಲ್ಯಾನ್ಸರ್ಸ್ ಎಂಬ ರಾವುತ ದಳವೊಂದು ನಮ್ಮ ಖರ್ಚಿನಿಂದ ಪೋಷಿತವಾಗುತ್ತಿದೆ. ಬೇರೆ ಯಾವುದಕ್ಕೂ ಉಪಯೋಗಿಸದೆ ನಮ್ಮ ಸಂಸ್ಥಾನದ ರಕ್ಷಣೆಗಾಗಿಯೆ ಪ್ರತ್ಯೇಕವಾಗಿ ಅವರು ಸೈನ್ಯವನ್ನು ಇಡಲಾಗಲಿ ಅದಕ್ಕೆ ಬೇಕಾಗುವ ಸಾಮಗ್ರಿಯನ್ನು ಸಂಗ್ರಹಿಸುವ ಅಗತ್ಯವಾಗಲಿ ಇಲ್ಲ. ಆದುದರಿಂದ ಇಷ್ಟು ಪೊಗದಿ ನ್ಯಾಯವಲ್ಲವೆಂದೂ, ಶೇಕಡ ೮೦ ಕ್ಕೆ ಮೇಲ್ಪಟ್ಟ ಆಶ್ರಿತ ಸಂಸ್ಥಾನಗಳು ಪೊಗದಿಯನ್ನು ಕೊಡುತ್ತಿಲ್ಲವೆಂದೂ, ಅದನ್ನು ಬಿಟ್ಟುಕೊಡಬೇಕೆಂದೂ ಕೇಳುವುದು ಅನುಚಿತವಾಗಲಾರದು. ಇತರ ಪ್ರಾಂತ ಸರ್ಕಾರಗಳವರು, ಅವರ ಭೂಪರಿಮಿತಿ ಸ್ಥಿತಿಗತಿಗಳಿಗೆ ತಕ್ಕಂತೆ ಯಾವರೀತಿ ರಾಜ್ಯರಕ್ಷಣೆಗೆ ಧನವನ್ನು ಒದಗಿಸುತ್ತಿದ್ದಾರೆಯೋ ಅದೇರೀತಿ ಅದೇ ಪ್ರಮಾಣದಲ್ಲಿ ಮೈಸೂರಿಂದಲೂ ತೆಗೆದುಕೊಳ್ಳಬಹುದೆಂದು ಕೇಳುವುದೂ ಅನ್ಯಾಯವಾಗಲಾರದು. ಪೊಗದಿಯ ಹಣ ದೇಶಕ್ಕುಳಿದರೆ ಅಭಿವೃದ್ಧಿ ಕಾರ್ಯಗಳಿಗೆ ಅತಿಶಯ ಸಹಾಯವಾದೀತು.

ಆಮದು ರಫ್ತುಗಳ ಮತ್ತು ಅಬ್ಕಾರಿ ತೆರಿಗೆಗಳು

ಬ್ರಿಟಿಷ್ ಸರ್ಕಾರದವರು ಆಮದು ರಫ್ತುಗಳ ಮೇಲೆ ಹಾಕುವ ತೆರಿಗೆಯಿಂದ ವರ್ಷೇವರ್ಷೇ ಹೆಚ್ಚು ಹಣ ಪಡೆಯುತ್ತಿದ್ದಾರೆ. ಇತರ ಯಾವ ಹುಟ್ಟುವಳಿಯ ಬಾಬೂ ಅವರಿಗೆ ಇಷ್ಟು ಹಣವನ್ನು ಒದಗಿಸುತ್ತಿಲ್ಲ. ಪರದೇಶದವರ ಪೈಪೋಟಿಯಿಂದ ನಾಡಿನ ಕೈಗಾರಿಕೆಗಳಿಗೆ ರಕ್ಷಣೆ ದೊರೆಯಬೇಕೆಂಬ ಉದ್ದೇಶದಿಂದಲೂ, ನಾಡಿನ ಮೂಲ ಸಾಮಗ್ರಿಗಳಿಂದ ನಾಡಿನಲ್ಲಿ ಕೈಗಾರಿಕೆಗಳು ಸ್ಥಾಪಿತವಾಗಲೆನ್ನುವ ಉದ್ದೇಶದಿಂದಲೂ ಈ ತೆರಿಗೆಗಳು ಏರುತ್ತಲೇ ಇವೆ. ಈ ಸಂಸ್ಥಾನದ ಜನಸಂಖ್ಯೆ ಭರತಖಂಡದ

ಸಂಖ್ಯೆಯು ೩೦ರಲ್ಲಿ ಒಂದು ಭಾಗ. ಈ ತೆರಿಗೆಗಳ ಹುಟ್ಟುವಳಿಯಲ್ಲಿ ೧/೩೦ ಭಾಗ ನಮ್ಮ ಸಂಸ್ಥಾನದವರಿಂದ ಬರುತ್ತಿದೆನ್ನಬಹುದು. ಇದನ್ನು ಎತ್ತಿದರೆ ನಮಗೆ ಭಾಗವಿಲ್ಲವೆಂದಾಗಲಿ, ಸಂಸ್ಥಾನದೊಳಕ್ಕೆ ಬಂದು ಇಲ್ಲಿ ಭೋಜ್ಯವಾಗುವ ವಸ್ತುಗಳ ಮೇಲೆ ಇಂಥ ತೆರಿಗೆಗಳನ್ನು ನಾವು ಹಾಕಕೂಡದೆಂದಾಗಲಿ ಯಾವ ಕರಾರಿನಲ್ಲಿಯೂ ಹೇಳಿಲ್ಲ. ಸಾಮಾನಿನ ಬೆಲೆ ಹೆಚ್ಚಿ ನಮ್ಮವರು ಅವನ್ನು ಕೊಳ್ಳುವಾಗ ಅವಕ್ಕೆ ಹೆಚ್ಚುಬೆಲೆ ಬೇರೆ ತೆರುತ್ತಿರುವರು. ಇದನ್ನೂ ಪರೋಕ್ಷವಾದ ಒಂದು ತೆರಿಗೆ ಎಂದೇ ಎನ್ನಬೇಕು. ಇದಲ್ಲದೆ ಅವರು ಉಪ್ಪಿನ ಮೇಲೆ ಹಾಕಿರುವ ತೆರಿಗೆಯಿಂದಲೂ ೧೫–೨೦ ಲಕ್ಷ ರೂಪಾಯಿಗಳ ಭಾಗ ನಮ್ಮಿಂದ ಉತ್ಪತ್ತಿಯಾಗುವುದು. ಮೋಟರ್ ಗಾಡಿಗಳು, ಉಪಯೋಗಿಸುವ ಪೆಟ್ರೋಲ್ ಎಂಬ ಎಣ್ಣೆಯ ಮೇಲೆ ಹೆಚ್ಚು ತೆರಿಗೆಯನ್ನು ಹಾಕಿರುವರು; ನಮ್ಮ ದೇಶದಲ್ಲಿ ಖರ್ಚಾಗುವ ಪೆಟ್ರೋಲ್ ಹುಟ್ಟುವಳಿಯಲ್ಲಿಯೂ ನ್ಯಾಯತಃ ನಮಗೆ ಭಾಗ ಬರಬೇಕೆಂದು ಕೇಳಬಹುದು.* ಬೆಳ್ಳಿಯ ಮೇಲೆ ಎತ್ತುವ ಕರವೂ ಹೀಗೆಯೇ. ಹೊಸದಾಗಿ ಹೆಚ್ಚಿಸಿದಂಥ ಸಾಯರ್‌ಬಾಬಿನಿಂದ ಸಂಸ್ಥಾನಕ್ಕೆ ನ್ಯಾಯವಾಗಿ ಸೇರಬೇಕಾದ ಭಾಗ ಕೂಡಿ ಸುಮಾರು ೭೬ ಲಕ್ಷ ರೂಪಾಯಿಗಳೆಂದು ಹೇಳಬಹುದು.

ಬ್ರಿಟಿಷ್ ಸರ್ಕಾರದವರು ತಮಗೆ ಅನುಕೂಲ ತೋರಿದಂತೆ ತೆರಿಗೆಗಳಲ್ಲಿ ಏರು ತಗ್ಗುಗಳನ್ನು ಮಾಡುವುದರಿಂದ ಸಂಸ್ಥಾನದ ಹಲವು ವರಮಾನಗಳು ಹೆಚ್ಚುಕಡಮೆಯಾಗುವುವು. ಉದಾಹರಣೆ:—ಹತ್ತಿಯ ಮೇಲೆ ಸುಂಕವನ್ನು ಹಾಕಿದಾಗಲೂ ತೆಗೆದಾಗಲೂ, ಹತ್ತಿ ಬೆಳೆಯುವ ಸಂಸ್ಥಾನಗಳ ತಿಳಿವಳಿಕೆಯಿಲ್ಲದೆ, ಒಪ್ಪಿಗೆ ಇಲ್ಲದೆ ಹಾಕಿದರು. ಆ ವರ್ಷ ನಮ್ಮ ಸಂಸ್ಥಾನಕ್ಕೂ ನಷ್ಟವಾಯಿತು. ೧೯೨೭ರಲ್ಲಿ ಚರ್ಮ ಚಕ್ಕಳಗಳ ರಫ್ತಿನ ಮೇಲೆ ಹಾಕಿದ ತೆರಿಗೆಯಿಂದಲೂ ಹಾಗೇ. ಚೀಣಾ ಜಪಾನ್ ದೇಶಗಳವರ ಪೈಪೋಟಿಯಿಂದ ನಮ್ಮ ರೇಷ್ಮೆ ಕೈಗಾರಿಕೆ ಹಾಳಾಗುವ ಸ್ಥಿತಿಗೆ ಬಂದರೂ ಬ್ರಿಟಿಷ್ ಸರ್ಕಾರದವರು ಹಾಕಿರುವ ಸುಂಕದಿಂದ ಬ್ರಿಟಿಷ್ ಇಂಡಿಯಾ ಖಜಾನೆಗೆ ಹಣ ಬಂದರೂ ನಮ್ಮ ರೇಷ್ಮೆಯ ಕೈಗಾರಿಕೆಗೆ ಸುರಕ್ಷಣೆ ದೊರೆಯಲಿಲ್ಲ. ಅದನ್ನು ಸ್ವತಂತ್ರವಾಗಿ ಕಾಪಾಡಲು ಅವಕಾಶವಿಲ್ಲ: ತೆರಿಗೆಯ ಉತ್ಪತ್ತಿಯಲ್ಲಿಯೂ ಭಾಗವಿಲ್ಲ.

* ಈಗ ಈ ಹುಟ್ಟುವಳಿಯಲ್ಲಿ ಅಷ್ಟು ಭಾಗವನ್ನು ನಮಗೆ ಕೊಡುತ್ತಿರುವರು.

ಟಂಕಸಾಲೆ

ತಿರುವಾಂಕೂರು, ಹೈದರಾಬಾದುಗಳಂತೆ ನಮ್ಮ ಸಂಸ್ಥಾನಕ್ಕೆ ಸ್ವಂತ ಟಂಕಸಾಲೆಯಾಗಲಿ ಹಣದ ಚಲಾವಣೆಯಾಗಲಿ ಇಲ್ಲ. ಬ್ರಿಟಿಷ್ ಸರ್ಕಾರದವರು ಅಚ್ಚುಮಾಡಿದ ಹಣವನ್ನೇ ನಾವೂ ಉಪಯೋಗಿಸುತ್ತೇವೆ. ಅದರಿಂದ ದೇಶದ ವ್ಯಾಪಾರವೂ ಲೇವಾದೇವಿಯೂ ಹೆಚ್ಚು ಸುಲಭವಾಗಿ ನಡೆಯುವಂತಾಗಿರುವುದಾದರೂ ಸ್ವಂತ ಟಂಕಸಾಲೆ ಇದ್ದಿದ್ದರೆ ಅದರಿಂದ ನಮಗೆ ಲಾಭ ಬರುತ್ತಿತ್ತು. ನೋಟುಗಳ ಬೆಲೆಯನ್ನು ಕಾಪಾಡಲು ಇಟ್ಟಿರುವ ನಿಧಿಯಿಂದಲೂ ಇಂಡಿಯಾ ಸರ್ಕಾರದವರಿಗೆ ಬಡ್ಡಿ, ವರಮಾನ, ಬರುತ್ತವೆ. ನಾಣ್ಯ ನಿರ್ಮಾಣ ಪ್ರಚಾರಣೆಗಳಿಂದ ಅವರಿಗೆ ಬರುವ ಉತ್ಪತ್ತಿಯಲ್ಲಿ ನಮ್ಮ ಸಂಸ್ಥಾನದಿಂದಲೇ ಕೀಳ್‌ಪಕ್ಷ ೯–೧೦ ಲಕ್ಷ ರೂಪಾಯಿಗಳ ಉತ್ಪತ್ತಿಯಿದೆ. ಇದರ ಜೊತೆಗೆ ನಾಣ್ಯ ಪದ್ಧತಿಯಲ್ಲಿ ಅವರು ಆಗಾಗ್ಗೆ ಮಾಡುವ ವ್ಯತ್ಯಾಸಗಳಿಂದಲೂ ನಮಗೆ ನಷ್ಟ. ಮೈಸೂರು ದೇಶಕ್ಕೆ ಬರಬೇಕಾದ ರಾಯಮಾನವೂ ಗಣಿಗಳವರು ವಿದ್ಯುಚ್ಛಕ್ತಿಗಾಗಿ ಕೊಡುವ ಹಣವೂ, ಗಂಧದ ಎಣ್ಣೆಯ ಮಾರಾಟದಿಂದ ಬರುವ ವರಮಾನವೂ ಪೌಂಡಿನ ಲೆಕ್ಕದಲ್ಲಿ ಬರುವುವು. ರೂಪಾಯಿಗೂ, ಪೌಂಡಿಗೂ ಇರುವ ಮಾರುವೆಯಲ್ಲಿ ದರಗಳು ಏರುತ್ತ ಇಳಿಯುತ್ತ ಇರುವುದರಿಂದ ಒಂದು ಸಲ ಪೌಂಡಿಗೆ ೨೦ ರೂಪಾಯಿ ಇನ್ನೊಂದು ಸಲ ೧೫ರೂಪಾಯಿ ಮತ್ತೊಂದುಸಲ ರೂ. ೧೩–೫–೪ ಹೀಗೆ ಬೆಲೆ ಹತ್ತಿ ಇಳಿಯುವುದರಿಂದ ನಮ್ಮ ಸರ್ಕಾರದ ಹುಟ್ಟುವಳಿಯಲ್ಲಿಯೂ ವ್ಯತ್ಯಾಸವಾಗುವುದು. ಹಣದ ನಿಧಿಗಳಲ್ಲಿ ಕೊಂಡಿಟ್ಟಿರುವ ಚಿನ್ನದ ಪತ್ರಗಳ ಬೆಲೆಯೂ ಹೆಚ್ಚು ಕಡಮೆಯಾಗುವುವು. ವಿದೇಶಿ ಮಾರುವೆಯಲ್ಲಿ ರೂಪಾಯಿನ ಬೆಲೆ ಹೆಚ್ಚು ಕಡಮೆಯಾದರೆ ನಮಗೂ ಲಕ್ಷಾಂತರ ರೂಪಾಯಿಗಳ ನಷ್ಟ. ಜೊತೆಗೆ ಒಳದೇಶದಲ್ಲಿಯೇ ಕಡಮೆಯೆಂದರೆ ಆಮಟ್ಟಿಗೆ ಸಾಮಾನುಗಳ ಕರೀದಿ ಏರಿ ಜನರು ಹಾಗೂ ನಷ್ಟಪಡಬೇಕು.

ಸಾಲ

ನಮ್ಮ ಸರ್ಕಾರದವರಿಗೆ ಕೈಗಾರಿಕೆ ಮುಂತಾದ ಅಭಿವೃದ್ಧಿಕಾರ್ಯಗಳನ್ನು ಏರ್ಪಡಿಸುವುದಕ್ಕೂ ನಡಸುವುದಕ್ಕೂ ಸಾಲ ಬೇಕಾದಾಗ ಅವರು ಸ್ವತಂತ್ರವಾಗಿ ಭರತಖಂಡದಲ್ಲಿ ಸಾಲವೆತ್ತುವ ಹಾಗಿಲ್ಲ. ಅದಕ್ಕೆ ಇಂಡಿಯಾ

ಸರ್ಕಾರದ ಅನುಮತಿ ಬೇಕು. ಅವರೊ ಪ್ರಾಂತ ಸರ್ಕಾರದವರೊ ಅದೇ ಕಾಲದಲ್ಲಿ ಸಾಲ ತೆಗೆಯುತ್ತಿದ್ದರೆ, ಆಗ ಬಿಟ್ಟು ಬೇರೆ ಕಾಲದಲ್ಲಿ ತೆಗೆಯಬೇಕು. ಹೀಗಾಗಿ ಸಾಲಕ್ಕೆ ತೆರಬೇಕಾದ ಬಡ್ಡಿಯ ದರ ಕೂಡ ಹೆಚ್ಚುವುದು. ನಮ್ಮ ಸರ್ಕಾರದ ಪ್ರಾಮಿಸರಿ ನೋಟುಗಳನ್ನು ಇಂಪೀರಿಯಲ್ ಬ್ಯಾಂಕಿನವರು ಯೋಗ್ಯವಾದ ಆಧಾರ ಪತ್ರಗಳೆಂದು ಒಪ್ಪಿ ಅವುಗಳ ಮೇಲೆ ಸಾಲ ಕೊಡರು. ಅವನ್ನು 'ಟ್ರಸ್ಟೀ' ಜಾತಿಯ ಪತ್ರಗಳ ಗುಂಪಿಗೆ ಸೇರಿಸುವುದಿಲ್ಲ. ಇದರಿಂದ ನಾವು ಸಾಲ ತೆಗೆಯುವುದಕ್ಕೂ ನಮ್ಮ ಪತ್ರಗಳ ಬೆಲೆ ಗೌರವಗಳಿಗೂ ನ್ಯೂನತೆಯುಂಟಾಗಿ ನಷ್ಟ ಸಂಭವಿಸುತ್ತಿದೆ.

ತಂತೀ ಅಂಚೆ–ಸೇವಿಂಗ್ಸ್ ಬ್ಯಾಂಕ್ ಇತ್ಯಾದಿ

ಇಲ್ಲಿ ನಡೆಯುವ ಎಲ್ಲ ವರ್ತಮಾನ ವಾಹಕ ಕಾರ್ಯಗಳನ್ನೂ ಬ್ರಿಟಿಷ್ ಸರ್ಕಾರದವರೇ ನಡಸಿ ಆ ಮೂಲಕ ಬರುವ ಎಲ್ಲಾ ಲಾಭಗಳನ್ನೂ ಅವರೇ ಪಡೆಯುವರು. ನಮ್ಮ ಸರ್ಕಾರಕ್ಕೆ ಯಾವ ಭಾಗವನ್ನೂ ಕೊಡದೆ ಇಲ್ಲಿಯೇ ತಮ್ಮ ಸೇವಿಂಗ್ಸ್ ಬ್ಯಾಂಕ್ ಕೆಲಸವನ್ನೂ ಕ್ಯಾಷ್ ಸರ್ಟಿಫಿಕೇಟುಗಳ ಮಾರಾಟವನ್ನೂ ನಡಸುವರು. ಇದರಲ್ಲಿ ವಿಶೇಷ ಸಂಗತಿ ಇನ್ನೊಂದು ಉಂಟು. ಮೈಸೂರು ಸರ್ಕಾರದವರೇ ಈಗ ಸೇವಿಂಗ್ಸ್ ಬ್ಯಾಂಕ್ ಮತ್ತು (Cash Certificate) ಮಾರಾಟದ ಕೆಲಸಗಳನ್ನೂ ಮಾಡುತ್ತಿದ್ದಾರೆ. ಒಂದೇ ಪ್ರದೇಶದಲ್ಲಿ ಎರಡು ಸರ್ಕಾರಗಳವರು ಹೀಗೆ ಮಾಡುವುದರಿಂದ ನಮಗೆ ಬರುವ ಪ್ರಯೋಜನ ಕಡಮೆಯಾಗುವುದು. ಅದೂ ಅಲ್ಲದೆ ಅಂಚೆಯ ಕಚೇರಿಗಳೆಲ್ಲ ನಮ್ಮ ಕೈಯಲ್ಲಿಯೇ ಇದ್ದಿದ್ದರೆ ಆ ಮೂಲಕವಾಗಿ ಸಂಸ್ಥಾನದಲ್ಲೆಲ್ಲಾ ಈ ಕೆಲಸವನ್ನು ವಿಶೇಷವಾಗಿ ಬೆಳಸಬಹುದಾಗಿದ್ದಿತು. ಅದರಲ್ಲಿ ಕೂಡಿದ ಹಣದ ಆಧಾರದಿಂದ ಸರ್ಕಾರದವರು ಅನೇಕ ಸಹಾಯಗಳನ್ನೂ ಲಾಭಗಳನ್ನೂ ಪಡೆಯಬಹುದಾಗಿತ್ತು.

ತಂತೀ ವರ್ತಮಾನ ವ್ಯವಸ್ಥೆಯಿಂದ ಬರುವ ಹುಟ್ಟುವಳಿಯಲ್ಲಿ ನಮಗೆ ಒಂದು ಭಾಗವನ್ನು ಕೊಡುತ್ತಾರೆಂಬ ಮಾತಿತ್ತು. ಈ ವರೆಗೂ ಭಾಗ ದೊರೆತಿಲ್ಲ. ಅಷ್ಟೇ ಅಲ್ಲದೆ ಚೆನ್ನಾಗಿ ಕೆಲಸಮಾಡದೆ ನಷ್ಟವಾಗುತ್ತಿರುವ ತಂತೀ ಮನೆಗಳಿಗಾಗಿ ನಮ್ಮ ಸರ್ಕಾರದವರೇ ನಷ್ಟವನ್ನು ಕಟ್ಟಿಕೊಡಬೇಕೆಂದು ಅವರು ಕೇಳುತ್ತಿರುವರು.

ರೈಲ್ವೆ ಕಂಪೆನಿಗಳ ಸ್ವತ್ತು

ಸಂಸ್ಥಾನದಲ್ಲಿ ಹಾಕಿ ಈಗ ಕಂಪನಿಯ ಕೈಕೆಳಗೆ ಕೆಲಸಮಾಡುತ್ತಿರುವ ರೈಲುಮಾರ್ಗಗಳ ಎಲ್ಲ ಆಡಳಿತವನ್ನೂ ವಹಿಸುವುದಕ್ಕಾಗಲಿ ಈಗ ಅವರ ಉಪಯೋಗದಲ್ಲಿರುವ ಪ್ರದೇಶಗಳಿಂದ ಯಾವ ವಿಧವಾದ ಹುಟ್ಟುವಳಿ ಪಡೆಯುವುದಕ್ಕಾಗಲಿ, ಬ್ರಿಟಿಷ್ ಸರ್ಕಾರದವರ ಅನುಮತಿ ಇಲ್ಲದಾಗಿ ನಮ್ಮ ಸರ್ಕಾರಕ್ಕೆ ಬರಬಹುದಾಗಿದ್ದ ಆಯದಲ್ಲಿ ಹೀಗೂ ಸ್ವಲ್ಪ ಕೊರತೆಯಾಗಿದೆ.

ದಂಡು.


ಬೆಂಗಳೂರು ದಂಡು ಸುಮಾರು ೧೪ ಚದರ ಮೈಲಿಯ ವಿಸ್ತಾರವುಳ್ಳದ್ದು ; ೧೩ ಲಕ್ಷ ಪ್ರಜೆಗಳ ವಾಸಸ್ಥಾನ. ವರ್ಷಕ್ಕೆ ಅದರ ಹುಟ್ಟುವಳಿ ೧೮ ಲಕ್ಷ ರೂಪಾಯಿಗಳು ನಮ್ಮ ರಾಜ್ಯದಲ್ಲಿ ಅಕ್ಕಪಕ್ಕಗಳಲ್ಲಿರುವ ಪೇಟೆ, ದಂಡು, ಇಂಥ ದೊಡ್ಡಪಟ್ಟಣದ ಮೇಲಧಿಕಾರವೂ ಬೇರೆ ಬೇರೆ ಎರಡು ರಾಜ್ಯಗಳವರಿಗೆ ಸೇರಿ ಕಾಯಿದೆ ಕಾನೂನುಗಳೂ ನ್ಯಾಯಕ್ರಮ ಪದ್ಧತಿಗಳೂ ಬೇರೆಯಾಗಿ ಅನೇಕ ತೊಂದರೆಗಳು ಸಂಭವಿಸುವುವು. ಎಲ್ಲ ಕೆಲಸದಲ್ಲಿಯೂ ನಮ್ಮ ಸರ್ಕಾರದವರು ಅವರ ಮ್ಯುನಿಸಿಪಾಲಿಟಿಯನ್ನೊಂದು ಕಡೆಯೂ, ಸೈನ್ಯಶಾಖೆಯ ಅಧಿಕಾರಿಗಳನ್ನೊಂದುಕಡೆಯೂ ಒಪ್ಪಿಸಿದ ಹೊರತು ಏನನ್ನೂ ಮಾಡುವ ಹಾಗಿಲ್ಲದಾಗುವುದು. ಕುಡಿಯುವ ನೀರಿನ ವ್ಯವಸ್ಥೆ ವಿದ್ಯುಚ್ಛಕ್ತಿಯ ಸಹಾಯ, ತೆರಿಗೆ, ಆಯವ್ಯಯ ವಿಭಾಗ ಮುಂತಾದ ಎಲ್ಲ ಭಾಗಗಳಲ್ಲಿಯೂ ವಾಗ್ವಾದಗಳೂ ಸಿಕ್ಕು ತೊಂದರೆಗಳೂ ಉಂಟಾಗುತ್ತವೆ.

ಲಾಭ ನಷ್ಟಗಳು

ಈ ಸಂಬಂಧ ಅಥವಾ ಅಸಂಬದ್ಧತೆಗಳಿಂದ ನಮ್ಮ ಸರ್ಕಾರಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳ ವರೆಗೂ ಎಂದರೆ ತಲೆಯೊಂದಕ್ಕೆ ರೂ. ೧–೧೧–೦ ಆಣೆಯಂತೆ ಆದರೂ ನಷ್ಟವಾಗುತ್ತಿದೆಯೆನ್ನಬಹುದು. ಈ ಹಣ ದೇಶದ ಜನಜೀವನಕ್ಕೆ ರಾಜಾದಾಯ ರೂಪದಲ್ಲಿಯೂ ಇತರ ವಿಧದಲ್ಲಿಯೂ ದೊರೆತರೆ ನಮ್ಮ ಅನೇಕ ಕಷ್ಟಗಳು ನಿವಾರಿತವಾಗುವುವು. ಪ್ರಜೆಗಳ ಕ್ಷೇಮಾಭಿವೃದ್ಧಿಕಾರ್ಯಗಳು ಬಹುಮುಖವಾಗಿ ನಡೆಯಲು ಅನುಕೂಲವಾಗುವುದು.

ಪ್ರಜಾಧರ್ಮ

ಅನುಕ್ರಮಣಿಕೆ



ಮೈಸೂರಿನ ಸಿಂಹಾಸನ

ಪ್ರಜಾಧರ್ಮ

ಮುನ್ನುಡಿ

ಸಮಾಜ ಮತ್ತು ರಾಷ್ಟ್ರ—(ಸರ್ಕಾರ ಮತ್ತು ಪ್ರಜೆ)

ಹಲಕೆಲರು ಸನ್ಯಾಸಿಗಳು ವಿನಾ ಒಂಟಿಯಾಗಿ ಯಾರೂ ಜೀವಿಸುವುದಿಲ್ಲ. ಒಟ್ಟಿಗೆ ಸೇರಿ ಜೀವಿಸುವುದರಲ್ಲಿ ಮನೆ, ಕೇರಿ, ಗ್ರಾಮ, ಪಟ್ಟಣ, ದೇಶಗಳಂತೆಯೇ ಕುಟುಂಬ, ಕುಲ, ಸಮಾಜ ಅಥವಾ ಜನಾಂಗವೆಂಬುವು ಏರ್ಪಡುತ್ತವೆ. ಯಾವ ದೇಶ (Country) ಕ್ಕಾದರೂ ಅಲ್ಲಿಯ ಜನರು ನಾಗರಿಕರಾಗಿ ದೇಶಾಭಿವೃದ್ಧಿಯ ಮೂಲಸಾಧಕವಾದ ಆಡಳಿತವನ್ನು ಪಡೆದ ಕೂಡಲೆ ರಾಷ್ಟ್ರ (State) ವೆಂಬ ಹೆಸರು ಸಲ್ಲುತ್ತದೆ. ರಾಷ್ಟ್ರವೆಂಬುದರಲ್ಲಿ ಆಡಳಿತ (Administration) ವನ್ನು ನಿರ್ವಹಿಸುವ ಸರ್ಕಾರ (Government) ಮತ್ತು ಆಡಳಿತಕ್ಕೊಳಗಾದ ಪ್ರಜೆ (Subjects) ಎರಡೂ ಸೇರುತ್ತವೆ. ರಾಷ್ಟ್ರವು ಅಭಿವೃದ್ಧಿಯನ್ನೂ ಉನ್ನತಿಯನ್ನೂ ಪಡೆಯಲು ಸರ್ಕಾರವೂ ಸಮರ್ಪಕವಾಗಿರಬೇಕು. ಪ್ರಜೆಗಳೂ ಪ್ರಜ್ಞಾವಂತರಾಗಿರಬೇಕು. ಪ್ರಜೆಗಳು ಅಭಿವೃದ್ಧಿಯನ್ನು ಪಡೆದಾಗ ಸರ್ಕಾರವೂ ಅಭಿವೃದ್ಧಿ ಯನ್ನು ಪಡೆಯುವುದು ; ಪ್ರಜೆಗಳು ಹೀನದಶೆಯಲ್ಲಿದ್ದರೆ ಸರ್ಕಾರವು ನೀತಿ ತಪ್ಪಬಹುದು. ಇದನ್ನೇ 'ಪ್ರಜೆಯಂತೆ ಸರ್ಕಾರ' ಅಥವಾ 'ಪ್ರಜೆಯ ಯೋಗ್ಯತೆಯಂತೆ ಸರ್ಕಾರವಿರುತ್ತದೆ' ಎಂಬ ವಾಕ್ಯವು ದೃಢೀಕರಿಸುತ್ತದೆ. ಈ ಕಾರಣದಿಂದ ಪ್ರತಿ ಪ್ರಜೆಯೂ ತನ್ನ ರಾಷ್ಟ್ರ ಅಥವಾ ಸಮಾಜದ ಪೂರ್ವ ವೃತ್ತಾಂತವನ್ನೂ, ಪ್ರಕೃತ ಸ್ಥಿತಿಗತಿಗಳನ್ನೂ, ಮುಂದಿನ ಗತಿಯನ್ನೂ ತಿಳಿದುಕೊಂಡು ತನ್ನ ಧರ್ಮವನ್ನು ಆಚರಿಸಲು ಸದಾ ಯತ್ನಿಸಬೇಕು.

ರಾಷ್ಟ್ರ ಸ್ಪರ್ಧೆ

ಪೂರ್ವ ಕಾಲದಲ್ಲಿ ರಾಜರೂ ಪ್ರಜೆಗಳೂ ಧರ್ಮಬದ್ಧರಾಗಿದ್ದಾಗ ರಾಷ್ಟ್ರವು ಸುಸ್ಥಿತಿಯಲ್ಲಿಯೇ ಇತ್ತು. ಆಧುನಿಕಕಾಲದಲ್ಲಿಯಾದರೆ ಯಾವ ರಾಷ್ಟ್ರವಾದರೂ ಇತರರ ಸಂಪರ್ಕವಿಲ್ಲದೆ ಇರಲಾಗುವುದಿಲ್ಲ. ಪರಸ್ಪರ ಸಂಬಂಧಗಳು ಈ ಕಾಲದಲ್ಲಿ ಹೆಚ್ಚಿವೆ; ಸಂಬಂಧಗಳೊಂದಿಗೆ ಸ್ಪರ್ಧೆಯೂ ಹೆಚ್ಚಿದೆ. ಆದ್ದರಿಂದ ಪರಸ್ಪರ ಸ್ಪರ್ಧೆಯೇ ಮೂಲಮಂತ್ರ ದಂತಿರುವ ಈ ಕಾಲದಲ್ಲಿ ನೆರೆಹೊರೆಯಲ್ಲಿನ ಪರಿಸ್ಥಿತಿಯ ಪರೀಕ್ಷೆಯು ಅಡಿಗಡಿಗೂ ಅತ್ಯವಶ್ಯಕವೆನಿಸುವುದು. ಈ ಕಾರಣದಿಂದ ಮೈಸೂರಿನ ಪ್ರಜೆಗಳಾದ ನಾವು ಸುತ್ತಮುತ್ತಲಿನ ಭಾರತೀಯ ಸ್ಥಿತಿಗತಿಗಳನ್ನ ಲ್ಲದೆ ದೂರದೇಶಗಳ ವಿವರವನ್ನೂ ತಿಳಿದುಕೊಳ್ಳಬೇಕಾಗುವುದು. ವಾಸ್ತವ ವಾಗಿ ಪ್ರಜೆಯಾದವನು ತನ್ನ ರಾಷ್ಟ್ರದಲ್ಲಿ ತನ್ನ ಸ್ಥಾನವನ್ನು ಯೋಗ್ಯ ವಾದ ರೀತಿಯಲ್ಲಿ ತುಂಬಿ, ಪ್ರಜ್ಞಾವಂತನಾಗಿ ಬಾಳುವುದರಲ್ಲಿ ತನ್ನ ದೇಶದ್ದೊಂದೇ ಅಲ್ಲದೆ ಇತರ ದೇಶಗಳ ಭೂತಭವಿಷ್ಯದ್ವರ್ತಮಾನ ಕಾಲಗಳ ಸ್ಥಿತಿಗತಿಗಳನ್ನೂ ತಿಳಿದು ವಿಚಾರಿಸಿ ತನ್ನ ಧರ್ಮವನ್ನು ಆಚ ರಿಸಬೇಕು.

ಪೂರ್ವಕಾಲದ ಸ್ಥಿತಿ : ಈಗಿನ ಕಾಲದ ಸ್ಥಿತಿ : ನಾನಾಮುಖವೃದ್ಧಿ : ಜನಸ್ವಾಮ್ಯ : ಏಕದೇಹನ್ಯಾಯ

ಪಾಶ್ಚಾತ್ಯರಾದ ಬ್ರಿಟಿಷರು ನಮ್ಮನ್ನಾಳುವುದಕ್ಕೆ ಮೊದಲು ರಾಜ ತ್ವವೇ ವಿಶೇಷವಾಗಿ ರೂಢಿಯಲ್ಲಿತ್ತು. ನಮ್ಮ ದೇಶದಲ್ಲಿ ರಾಜನಾದವನು ಧರ್ಮಿಷ್ಠನಾಗಿ ದುಷ್ಟನಿಗ್ರಹ, ಶಿಷ್ಟರಕ್ಷಣೆಯನ್ನು ಮಾಡುವ ಆದರ್ಶ ಬಲದಿಂದ ಸ್ವೇಚ್ಛಾ ಪ್ರವರ್ತಕನಾಗದಿದ್ದು, ವಿಷ್ಣ್ವಂಶ ಸಂಭೂತನೆನಿಸಿ ರಾಷ್ಟ್ರದ ಶಿರೋಮಣಿಯಾಗಿದ್ದನು. ಪ್ರಜೆಗಳು ರಾಜಭಕ್ತಿಯುತರಾಗಿ ತಮ್ಮ ಧರ್ಮಗಳನ್ನು ತಾವು ಪಾಲಿಸುತ್ತಿದ್ದರು. ಇಂತಹ ಸ್ಥಿತಿಯಲ್ಲಿ ಸರ್ಕಾರಕ್ಕೆ ಅಥವಾ ರಾಜನ ಅಧಿಕಾರ ವರ್ಗಕ್ಕೆ ದೇಶವನ್ನು ಪರರಾಯ ರಿಂದ ರಕ್ಷಿಸುವುದು—ಅಂದರೆ ಸೈನ್ಯದ ಏರ್ಪಾಟು, ಮತ್ತು ದೇಶದ ಒಳ ಭಾಗದಲ್ಲಿ ದುಷ್ಟರ ಕಾಟವಿಲ್ಲದೆ ನೆರವೇರಿಸುವುದು—ಅಂದರೆ ಪೋಲೀಸಿನ ಮತ್ತು ನ್ಯಾಯಸ್ಥಾನಗಳ ಏರ್ಪಾಟು—ಇವೆರಡೇ ಮುಖ್ಯ ಕರ್ತವ್ಯಗ

ಳಾಗಿದ್ದುವು. ಈಗಲಾದರೋ ಸರ್ಕಾರವು ನಾಡಿನ ಜೀವನದ ಪ್ರತ್ಯಂಗದಲ್ಲಿಯೂ ಪ್ರವೇಶಿಸುತ್ತದೆ—ಆರೋಗ್ಯರಕ್ಷಣೆ, ಶಿಕ್ಷಣ, ವ್ಯಾಪಾರ, ಉದ್ಯೋಗಗಳೇ ಏಕೆ, ಜನಜೀವನದ ವಿನೋದಗಳಲ್ಲಿಯೂ ಸರ್ಕಾರದವರು ನೆರವೇರಿಸಬೇಕಾದ ಕರ್ತವ್ಯವಿರುತ್ತದೆ. ಸರ್ಕಾರವು ಸರ್ವತ್ರ ವ್ಯಾಪಿಸಿರುವುದು ಒಂದು ವಿಶೇಷ. ಇನ್ನೊಂದು ಸಂಗತಿಯೂ ಆಧುನಿಕ ಕಾಲದ ಲಕ್ಷಣವಾಗಿದೆ. ಪಾಶ್ಚಾತ್ಯ ನಾಗರಿಕತೆಯ ಸಂಪರ್ಕ ಮೊದಲಾದಂದಿನಿಂದ ಸರ್ಕಾರವು ಜನತೆಯ ಅಭಿವೃದ್ಧಿಯನ್ನು ನಾನಾ ವಿಧವಾಗಿ ಸಾಧಿಸಿದಂತೆಯೇ ಜನಕ್ಕೆ ಅಧೀನವಾಗಿರಬೇಕೆಂಬುದೂ ಉಂಟು. ರಾಷ್ಟ್ರನೀತಿಯಲ್ಲಿಯೂ, ರಾಷ್ಟ್ರ ರಚನೆಯಲ್ಲಿಯೂ, ಜನಸ್ವಾಮ್ಯವೆಂಬ ತತ್ವವು (Democracy) ಪ್ರಬಲವಾಗಿದೆ. ಈ ತತ್ವದ ಅನುಷ್ಠಾನದಲ್ಲಿ ಪ್ರಜೆಗೆ ಕರ್ತವ್ಯಗಳೂ ಹೆಚ್ಚು ; ಅಧಿಕಾರಗಳೂ ಹೆಚ್ಚು. ಪೂರ್ವಕಾಲದಲ್ಲಿ ಧರ್ಮಿಷ್ಠನಾದ ಪ್ರಜೆಯು ಸಾಲುಮರಗಳನ್ನು ನೆಡಿಸಿಯೋ, ಕೆರೆ ಸತ್ರ ದೇವಾಲಯಗಳನ್ನು ಕಟ್ಟಿಸಿಯೋ, ಅರವಟ್ಟಿಗೆಗಳನ್ನು ಇಡಿಸಿಯೋ ರಾಷ್ಟ್ರಸೇವೆಯನ್ನು ಮಾಡುತ್ತಿದ್ದನು. ಈಗಿನ ಕಾಲದಲ್ಲಾದರೆ ರಾಷ್ಟ್ರಸೇವೆಯು ನಾನಾಮುಖವಾಗಿ ನಡೆಯತಕ್ಕದ್ದಾಗಿರುತ್ತದೆ ; ಮತ್ತು ಎಲ್ಲರೂ ರಾಷ್ಟ್ರಸೇವೆಯನ್ನು ಕೈಕೊಳ್ಳುವುದು ಆವಶ್ಯವೆನಿಸುತ್ತದೆ. ಆದ್ದರಿಂದ ಹಲಕೆಲವರು ಮಾತ್ರ ಪ್ರಜ್ಞಾವಂತರಾದರೆ ಸಾಲದು. ದೇಹದಲ್ಲಿ ಒಂದು ಬೆರಳು ಸೊಟ್ಟಾಗಿದ್ದರೆ ದೇಹವು ಹೇಗೆ ಪೂರ್ಣವೂ ಸುಂದರವೂ ಆಗದೋ, ಹಾಗೆಯೇ ಒಬ್ಬ ಪ್ರಜೆಯು ನೀತಿ ತಪ್ಪಿದರೂ ರಾಷ್ಟ್ರಕ್ಕೆ ಅದಕ್ಕೆ ಸಮಾನವಾದ ಲೋಪವುಂಟಾಗುತ್ತದೆ. ಈ ಕಾರಣದಿಂದ ಪ್ರತಿ ಪ್ರಜೆಗೂ ತನ್ನ ದೇಶದ ಸ್ಥಿತಿಗತಿಗಳ ಪರಿಚಯವೂ, ರಾಷ್ಟ್ರ ಪರಿಜ್ಞಾನವೂ ಇದ್ದು ತಾನು ಪಾಲಿಸತಕ್ಕ ನೀತಿಯಲ್ಲಿ ಆದರವೂ, ಶ್ರದ್ಧೆಯೂ ಇರಬೇಕು.

ಆಡಳಿತದ ರೀತಿ

ಜನಸ್ವಾಮ್ಯದ ಆಚರಣೆಯಲ್ಲಿ ಸರ್ಕಾರವೆಂಬುದು ರಾಷ್ಟ್ರವನ್ನು ನಡೆಸತಕ್ಕ ಒಂದು ಯಂತ್ರ ಮಾತ್ರ. ಏಕೆಂದರೆ ಜನಸ್ವಾಮ್ಯದಲ್ಲಿ ಸರ್ಕಾರವು ಜನಗಳಿಂದ ನಿರ್ಮಿತವಾಗಿ ಜನರ ಅಭಿಮತಕ್ಕನುಸಾರವಾಗಿ ನಡೆಯತಕ್ಕದ್ದು. ಪ್ರಜೆಗಳ ಇಷ್ಟಪ್ರಕಾರ ಆಡಳಿತವು ನಡೆಯು

ವುದೇ ಪರಮೋದ್ದೇಶವಾದುದರಿಂದ, ಪ್ರಜೆಗಳ ಇಷ್ಟವು ರೂಪಗೊಂಡು ನಿಶ್ಚಿತವಾಗುವ ಬಗೆಯನ್ನೂ, ಆ ಇಷ್ಟವನ್ನು ಸರ್ಕಾರವು ಅನುಸರಿಸತಕ್ಕ ವಿಧಾನವನ್ನೂ ನಾವು ತಿಳಿಯಬೇಕಾಗುವುದು. ಮೈಸೂರು ಸಂಸ್ಥಾನದ ರಾಷ್ಟ್ರ ವ್ಯವಸ್ಥೆಯನ್ನು ನಾವು ಕಾಣುವ ಮೊದಲು ಸಾಮಾನ್ಯವಾಗಿ ಆಡಳಿತದ ರೂಪ, ಅಂಗ, ಕರ್ತವ್ಯಗಳನ್ನು ನೆನಪಿನಲ್ಲಿಡುವ.

ರೂಪ

ಜನಸ್ವಾಮ್ಯ ತತ್ವವು ರಾಜನಿಲ್ಲದಿರುವಾಗಲೇ ಪೂರ್ಣಾಚರಣೆಯಲ್ಲಿರುವುದು. ಆದರೂ ರಾಜತ್ವವುಳ್ಳ ರಾಷ್ಟ್ರದಲ್ಲಿಯೇ ಆ ತತ್ವವು ಯಥೇಷ್ಟವಾಗಿ ಆಚರಣೆಯಲ್ಲಿರಬಹುದು. ಫ್ರಾನ್ಸ್ ಮತ್ತು ಅಮೆರಿಕದ ಸಂಯುಕ್ತ ಸಂಸ್ಥಾನಗಳು ರಾಜರಹಿತವಾದ ಜನಸ್ವಾಮ್ಯ ಪ್ರತಿಷ್ಠೆಗೆ ಉದಾಹರಣೆಗಳು. ರಾಜತ್ವವಿರುವ ಸಂಯುಕ್ತರಾಜ್ಯದಲ್ಲಿಯೇ (United Kingdom) ರಾಜನು ಸ್ವೇಚ್ಛಾ ಪ್ರವರ್ತಕನಾಗದಂತೆ ರಾಜಾಧಿಕಾರಕ್ಕೆ ಮೇರೆಗಳನ್ನು ನಿರ್ದೇಶಮಾಡಿ ಸಾಂಕುಶ ಪ್ರಭುತ್ವವೆಂಬುದನ್ನು ಅವಲಂಬಿಸಿರುವುದು ಎರಡನೆಯದಕ್ಕೆ ದೃಷ್ಟಾಂತ. ಮೈಸೂರಿನ ರಾಷ್ಟ್ರ ರಚನೆಯು ಕೆಲವು ಅಂಶಗಳಲ್ಲಿ ಇಂಗ್ಲೆಂಡಿನ ರಚನೆಯನ್ನು ಹೋಲುತ್ತದೆ. ಮೈಸೂರಿನ ರೀತಿಗೆ ಇಂಗ್ಲೆಂಡಿನ ರೀತಿಯೇ ಆದರ್ಶವಾಗಿದೆಯೆನ್ನಬಹುದು. ಆದರೆ ರೂಪವೇ ಗುರಿಯಲ್ಲ ; ಆಡಳಿತದ ರೂಪ ಮಾತ್ರದಿಂದಲೇ ದೇಶದ ಉನ್ನತಿಯು ಕೈಗೂಡುವುದಿಲ್ಲ. ಸ್ಥಿತಿಗತಿಗಳಿಗನುಸಾರವಾಗಿಯೂ, ಸಂಪ್ರದಾಯಕ್ಕನುಸಾರವಾಗಿಯೂ ಆಡಳಿತವು ರೂಪಗೊಳ್ಳಬೇಕು.

ಅಂಗ

ಆಡಳಿತದ ಪ್ರಧಾನಾಂಗಗಳು ಮೂರು : — ಕಾರ್ಯಾಂಗ (Executive), ನ್ಯಾಯಾಂಗ (Judiciary) ಮತ್ತು ಶಾಸಕಾಂಗ, (Legislature). ಮೂರರಲ್ಲಿ ಪ್ರತಿಯೊಂದೂ ಪುನಃ ಬೇರೆಬೇರೆಯಾಗಿ ಒಡೆದು ಅನೇಕಾಂಗಗಳಾಗುವ ಕಾರಣದಿಂದ ಅವುಗಳಿಗೆ ಪ್ರಧಾನಾಂಗಗಳೆಂಬ ಹೆಸರು ಸಲ್ಲುವುದು.

೧. ಕಾರ್ಯಾಂಗ ಅಥವಾ ಕಾರ್ಯನಿರ್ವಾಹಕಾಂಗ. ಸರ್ಕಾರವೆಂಬ ಮಾತನ್ನು ಅನೇಕ ವೇಳೆ ಇದನ್ನು ಉದ್ದೇಶಿಸಿಯೇ ಉಪಯೋಗಿಸು

ವರು. ನ್ಯಾಯ ನಿರ್ಣಯವೊಂದನ್ನು ಬಿಟ್ಟು ಉಳಿದ ಸರ್ಕಾರದ ಇಲಾಖೆಗಳೆಲ್ಲವೂ ಇದರಲ್ಲಿ ಸೇರುತ್ತವೆ. ಮೈಸೂರಿನಲ್ಲಿ ಎಕ್ಸಿಕ್ಯುಟಿವ್ ಕೌನ್ಸಿಲ್ ಎಂಬುದು ಇದರ ರೂಪ.

೨. ನ್ಯಾಯಾಂಗ ಅಥವಾ ನ್ಯಾಯತೀರ್ಮಾನ ಮಾಡುವ ಅಂಗ. ನ್ಯಾಯಸ್ಥಾನಗಳೆಲ್ಲವೂ ಈ ಅಂಗದಲ್ಲಿ ಸೇರತಕ್ಕವು. ಪ್ರಜೆಗೂ—ಪ್ರಜೆಗೂ, ಮತ್ತು ಪ್ರಜೆಗೂ—ಸರ್ಕಾರಕ್ಕೂ ವ್ಯಾಜ್ಯ ಹುಟ್ಟಿದಾಗ ನ್ಯಾಯ ನಿಶ್ಚಯವನ್ನು ಈ ಅಂಗವು ಮಾಡಬೇಕಾದುದರಿಂದ ಈ ಅಂಗವು ಆಡಳಿತದ ಅಂಗವಾದರೂ ಕಾರ್ಯಾಂಗ ಅಂಗವಲ್ಲ. ಇದು ಪ್ರತ್ಯೇಕವಾದ, ಸ್ವತಂತ್ರವಾದ ಮತ್ತು ಬಲು ಮುಖ್ಯವಾದ ಅಂಗ.

೩. ಶಾಸಕಾಂಗ ಅಥವಾ ನ್ಯಾಯವಿಧಾಯಕಾಂಗ. ಇದು ಆಡಳಿತದ ನೀತಿಯನ್ನು ತೋರಿಸತಕ್ಕ ಅಂಗ. ಪ್ರಜಾಭಿಮತವನ್ನು ವ್ಯಕ್ತಗೊಳಿಸಿ, ಕಾನೂನು ಕಾಯದೆ ನಿಬಂಧನೆಗಳನ್ನು ಕಾಲಕಾಲಕ್ಕೆ ರಚಿಸಿ, ಆಡಳಿತದ ರೀತಿನೀತಿಗಳನ್ನು ನಿಶ್ಚಯಿಸತಕ್ಕ ಕೆಲಸವು ಇದರಿಂದಲೇ ನಡೆಯತಕ್ಕುದು.

ಪರಸ್ಪರ ಸಂಬಂಧ

ಜನಸ್ವಾಮ್ಯವನ್ನವಲಂಬಿಸುವ ರಾಷ್ಟ್ರದಲ್ಲಿ ಕಾರ್ಯಾಂಗವು ಶಾಸನಾಂಗಕ್ಕೆ ಅಧೀನವಾಗಿರುವುದು. ನ್ಯಾಯಾಂಗವು ಸ್ವತಂತ್ರವಾಗಿರುವುದು.

ಕರ್ತವ್ಯ

ಆಡಳಿತದಲ್ಲಿ ಜನಜೀವನವೆಲ್ಲವೂ ಸೇರುವುದು ; ಸೇರದೆ ಇರತಕ್ಕ ಭಾಗವಿಲ್ಲ. ಅನುಕೂಲಕ್ಕಾಗಿ ಆಡಳಿತದ ಕೆಲಸಗಳನ್ನು ವಿಂಗಡಿಸಿಕೊಳ್ಳುವುದು ಮೇಲು. ಇವುಗಳನ್ನು * ಅನಿವಾರ್ಯ ಮತ್ತು ಐಚ್ಛಿಕಗಳೆಂದು ಎರಡು ತೆರನಾಗಿ ಕಾಣಬಹುದು :—

ಅನಿವಾರ್ಯ ಭಾಗದಲ್ಲಿ ರಾಜ್ಯರಕ್ಷಣೆ—ಅಂದರೆ ಸೈನ್ಯವನ್ನಿಟ್ಟು ಹೊರಗಿನಿಂದಾಗಲಿ, ಒಳಗಿನಿಂದಾಗಲಿ ವಿರೋಧಿಗಳು ಸಿದ್ಧರಾಗದಂತೆಯೂ, ಪೋಲೀಸು ಸಿಬ್ಬಂದಿ, ಕೋರ್ಟು ಕಾನೂನು ಮುಂತಾದ ವ್ಯವಸ್ಥೆಯಿಂದ

* ಅನಿವಾರ್ಯ, ಐಚ್ಛಿಕವೆಂದು ವಿಂಗಡಿಸುವುದು ನಮ್ಮ ಅನುಕೂಲಕ್ಕೆ ಮಾತ್ರ.

ಕಳ್ಳಕಾಕರ ಮತ್ತು ಪುಂಡರ ಅವಾಂತರಕ್ಕೆ ಎಡೆಯಿಲ್ಲದಂತೆಯೂ ಮಾಡುವುದು—ಮೊದಲನೆಯದು. ಹೀಗೆ ಮಾಡಲು ಅವಶ್ಯವಾದ ಹಣವನ್ನು ಕಂದಾಯ, ತೆರಿಗೆ, ಸುಂಕಗಳ ರೂಪವಾಗಿ ಎತ್ತುವುದೂ ಅನಿವಾರ್ಯವಾದ ಕರ್ತವ್ಯವಾಗಿಯೇ ಇರುತ್ತದೆ. ಶಾಂತಿ, ಬಲ ಮತ್ತು ಕೋಶಗಳು ಈ ಭಾಗದಲ್ಲಿ ಮುಖ್ಯ.

ಐಚ್ಛಿಕ ಭಾಗದಲ್ಲಿ ಎಲ್ಲವೂ ಸೇರುವುದು. ಆರೋಗ್ಯರಕ್ಷಣೆ, ಶಿಕ್ಷಣ ವ್ಯವಸ್ಥೆ, ಆರ್ಥಿಕಾಭಿವೃದ್ಧಿ ಅಂದರೆ ವ್ಯವಸಾಯ, ಉದ್ಯೋಗ, ಕೈಗಾರಿಕೆ, ವ್ಯಾಪಾರ, ಸಂಚಾರ ಸೌಕರ್ಯಗಳು, ಖಾನೇಷುಮಾರಿ ಮುಂತಾದುವೆಲ್ಲವೂ ಸೇರುತ್ತವೆ. ಸರ್ಕಾರದ ಆದಾಯ ಹೆಚ್ಚಬೇಕಾದರೆ ಈ ಅಂಶಗಳೂ ಸುವ್ಯವಸ್ಥೆಗೆ ಒಳಗಾಗಬೇಕಾದುದರಿಂದ, ಕೇವಲ ಸರ್ಕಾರ ದೃಷ್ಟಿಯಿಂದಲೇ ಇವು ಅವಶ್ಯಕರ್ತವ್ಯಗಳಾಗುತ್ತವೆ. ಮ್ಯೂಸಿಯಂ, ಪ್ರಾಕ್ತನ ವಿಮರ್ಶೆ ಮುಂತಾದುವನ್ನು ಐಚ್ಛಿಕ ಕರ್ತವ್ಯಗಳೆಂದು ಹೇಳಬಹುದು.

ಶ್ರೀಮನ್ ಮಹಾರಾಜರವರು.

ಅಧಿಕಾರದ ಮೂಲಸ್ಥಾನ

ಮೈಸೂರಿನಲ್ಲಿ ನೆಲೆಸಿರುವ ಸರ್ಕಾರಕ್ಕೆ ಮಹಾರಾಜರವರ ಸರ್ಕಾರವೆಂದು ಹೆಸರು. ಸರ್ಕಾರದ ಕೆಲಸವೆಲ್ಲವೂ ಅವರ ಹೆಸರಿನಲ್ಲಿಯೇ ನಡೆಯುತ್ತದೆ. ದೊಡ್ಡ ಹುದ್ದೆದಾಗರನ್ನು ನಿಯಮಿಸುವವರು ಅವರೇ; ಶಿಕ್ಷಿಸತಕ್ಕವರೂ ಅವರೇ. ಸರ್ಕಾರದ ಅಧಿಕಾರಿಗಳೆಲ್ಲರೂ ಅವರ ಆಜ್ಞಾಬದ್ಧರಾಗಿರಬೇಕು. ಅಧಿಕಾರ ವರ್ಗಕ್ಕೆ ಇರುವುದು ಅವರು ಕೊಟ್ಟ ಅಧಿಕಾರವೇ. ಆದ್ದರಿಂದ ಮಹಾರಾಜರು ಸರ್ಕಾರದ ಅಥವಾ ಕಾರ್ಯಾಂಗದ ಯಜಮಾನರು. ನ್ಯಾಯ ತೀರ್ಮಾನದಲ್ಲಿಯೂ ಮಹಾರಾಜರಿಗೆ ಎಲ್ಲರಿಗಿಂತಲೂ ಮೇಲ್ಪಟ್ಟ ಅಧಿಕಾರವುಂಟು. ನ್ಯಾಯಾಧಿಪತಿಗಳನ್ನು ನಿಯಮಿಸುವವರು ಅವರೇ. ಆದುದರಿಂದ ಅವರೂ ಮಹಾರಾಜರ ಆಜ್ಞಾಬದ್ಧರು. ನ್ಯಾಯ ವಿಧಾಯಕವಾದ ಅಂಗಕ್ಕೂ ಮಹಾರಾಜರೇ ಯಜಮಾನರು. ಅವರ ಸಮ್ಮತಿಯಿಲ್ಲದೆ ಯಾವ ಕಾನೂನೂ, ನಿಬಂಧನೆಯೂ ಆಚರಣೆಗೆ ಬರಲಾಗುವುದಿಲ್ಲ. ಅಲ್ಲದೆ ತಾವೇ ಸ್ವಂತವಾಗಿ ನಿರೂಪಗಳನ್ನು ಕೊಟ್ಟು, ವಿಧಿಗಳನ್ನು ನಿರ್ಮಿಸಲೂ ಬಲ್ಲರು. ಆದ್ದರಿಂದ ಮಹಾರಾಜರು ಸರ್ವಶಕ್ತರು; ನಾಡಿನ ಒಡೆಯರು; ಆಡಳಿತದಲ್ಲಿ ಪ್ರಭುಗಳು ಮತ್ತು ಪ್ರಜಾವರ್ಗದ ಭಕ್ತಿಗೆ ಪಾತ್ರರಾದವರು.

ಹಿಂದೂರಾಜತ್ವ

ಹಿಂದೂ ಧರ್ಮಶಾಸ್ತ್ರಾನುಸಾರವಾಗಿಯೂ, ಪರಂಪರಾಗತವಾಗಿಯೂ ಇರುವ ಕಾರಣದಿಂದ ಮೈಸೂರಿನ ರಾಜತ್ವವು ಧರ್ಮಬದ್ಧವಾದ ರಾಜತ್ವ; ಸ್ವೇಚ್ಛಾಪ್ರವರ್ತಕವಾದುದಲ್ಲ. ಇತರ ದೇಶಗಳಲ್ಲಿ ನಿರಂಕುಶ ಪ್ರಭುತ್ವವೆಂಬ ಹೆಸರನ್ನು ಪಡೆದ ರಾಜತ್ವಕ್ಕೂ, ಹಿಂದೂಗಳ ರಾಜತ್ವಕ್ಕೂ ಬಹಳ ಭೇದವಿರುವುದು. ಹಿಂದೂಗಳ ವ್ಯವಸ್ಥೆಯಲ್ಲಿ

ರಾಜನು ಧರ್ಮ ಬದ್ಧನು ಮತ್ತು ಸಕಲ ಧರ್ಮಗಳಿಗೂ ಮೂಲನಾದವನು. ರಾಜನನ್ನು ದೇವಾಂಶಸಂಭೂತನೆಂದು ಹೇಳುವ ಶಾಸ್ತ್ರಗಳೇ ಬೇರೆಡೆಗಳಲ್ಲಿ ಸುಭಿಕ್ಷಕ್ಕೂ ದುರ್ಭಿಕ್ಷಕ್ಕೂ ರಾಜನೇ ಕಾರಣನೆಂದೂ, ಪ್ರಜೆಗಳು ಮಾಡಿದ ಪಾಪದಲ್ಲಿ ರಾಜನು ಭಾಗಿಯಾಗುವನೆಂದೂ, ದುಷ್ಟನಾದ ದೊರೆಯು ದಂಡನಾರ್ಹನೆಂದೂ ವಿಧಿಸುತ್ತವೆ ಮೈಸೂರಿನ ರಾಜತ್ವದ ಸ್ಥಿತಿಯು ಶಾಸ್ತ್ರಕ್ಕೆ ಅನುಸಾರವಾದುದು ; ಆದುದರಿಂದ ರಾಜರು ಸ್ವೇಚ್ಛಾಪ್ರವರ್ತಕರಾಗತಕ್ಕ ನಿರಂಕುಶ ಪ್ರಭುಗಳಲ್ಲ.

ಮರ್ಯಾದೆಯ ತವರ್ಮನೆ

ದೇಶದಲ್ಲಿ ಸಮಸ್ತ ಮರ್ಯಾದೆಗೂ ಮಹಾರಾಜರೇ ನೆಲೆ. ಅಧಿಕಾರಿವರ್ಗದವರೂ, ಪ್ರಜಾವರ್ಗದವರೂ ಮೆಚ್ಚುಗೆಮರ್ಯಾದೆಗಳನ್ನು ಪಡೆಯುವುದು ಅವರಿಂದಲೇ. ಯೋಗ್ಯರಾಗಿ ಅಧಿಕಾರವನ್ನು ನಿರ್ವಹಿಸಿದವರಿಗೂ ಮಾನ್ಯರಾಗಿ ಬಾಳಿ ಜನಸೇವೆಯಲ್ಲಿ ನಿರತರಾದ ಪ್ರಜೆಗಳಿಗೂ ಬಿರುದು ಬಹುಮಾನಗಳು ಸಲ್ಲುವುದು ಅವರಿಂದಲೇ. ಅಧಿಕಾರಿಗಳನ್ನು ಪ್ರೋತ್ಸಾಹಿಸುತ್ತ ದಂಡಿಸುತ್ತಲೊಂದುಕಡೆ, ಪ್ರಜೆಯನ್ನು ಪ್ರೋತ್ಸಾಹಿಸುತ್ತ ದಂಡಿಸುತ್ತಲಿನ್ನೊಂದುಕಡೆ, ಮಹಾರಾಜರು ದುಷ್ಟಶಿಕ್ಷಣ, ಶಿಷ್ಟರಕ್ಷಣವನ್ನು ಮಾಡತಕ್ಕವರಾದ್ದರಿಂದ ಅವರೇ ರಾಷ್ಟ್ರಸೌಭಾಗ್ಯದ ಮೂರ್ತಿ. ರಾಷ್ಟ್ರದ ಗೌರವ, ವೈಭವ, ಅಟ್ಟಹಾಸಗಳು ಅವರ ಮೂಲಕವೇ ಲೋಕಕ್ಕೆ ಪ್ರಕಾಶವಾಗುತ್ತವೆ. ಆ ಕಾರಣದಿಂದ ರಾಷ್ಟ್ರಭಕ್ತಿಯಿಂದ ರಾಷ್ಟ್ರಸೇವೆ ಮಾಡುವ ಅಧಿಕಾರವರ್ಗ, ಪ್ರಜಾವರ್ಗ—ಎರಡು ವರ್ಗಗಳೂ ಮಹಾರಾಜರಲ್ಲಿ ಭಕ್ತಿಪೂರಿತರಾಗಿರಬೇಕು.

ಬ್ರಿಟಿಷರೊಡನೆ ಕರಾರು

ಮೈಸೂರು ಬ್ರಿಟಿಷರ ಆಶ್ರಯದಲ್ಲಿರುವ ಸಂಸ್ಥಾನ. ಆದ್ದರಿಂದ ಮಹಾರಾಜರ ಅಧಿಕಾರವೂ ಸ್ವಾತಂತ್ರ್ಯವೂ, ಅವರೊಡನೆ ನಡೆದಿರುವ ಕರಾರುಗಳಲ್ಲಿ ನಿರ್ಣಯವಾಗಿದೆ.

ಒಳ ಆಡಳಿತದಲ್ಲಿ ಮಹಾರಾಜರವರ ಅಧಿಕಾರಕ್ಕೆ ಅಡ್ಡಿಯಿಲ್ಲ. ಅಧಿಕಾರವರ್ಗಕ್ಕಾಗಲಿ, ಪ್ರತಿನಿಧಿಸಭೆಗಳಿಗಾಗಲಿ, ಪ್ರಜೆಗಳಿಗಾಗಲಿ ಅವರು

ಕೊಟ್ಟಷ್ಟು ಅಧಿಕಾರವಿರುತ್ತದೆಯೇ ಹೊರತು ಹೆಚ್ಚಾಗಿರುವುದಿಲ್ಲ. ಹಾಗೆ ಕೊಟ್ಟ ಅಧಿಕಾರವನ್ನು ಮಹಾರಾಜರು ಯುಕ್ತವೆಂದು ತೋರಿದಾಗ ತಾವೇ ಪುನಃ ವಹಿಸಿಕೊಳ್ಳಬಹುದು.

ಇಂಗ್ಲೆಂಡಿನ ಹೋಲಿಕೆ.

ಸಾಂಕುಶ ಪ್ರಭುತ್ವವುಳ್ಳ ದೇಶಗಳಿಗೂ, ಮೈಸೂರಿನ ರಾಜ್ಯಕ್ರಮಕ್ಕೂ ಈ ಅಂಶದಲ್ಲಿ ವಿಶೇಷವಾದ ವ್ಯತ್ಯಾಸವಿದೆ. ಇಂಗ್ಲೆಂಡಿನಲ್ಲಿ ರಾಜರಿಗೆ ಪ್ರಜೆಗಳು ಕೊಟ್ಟಷ್ಟು ಅಧಿಕಾರವುಂಟು ; ಮೈಸೂರಿನಲ್ಲಿ ಪ್ರಜೆಗಳಿಗೆ ರಾಜರು ಕೊಟ್ಟಷ್ಟು ಅಧಿಕಾರವುಂಟು. ಇಂಗ್ಲೆಂಡಿನಲ್ಲಿ ಶತಮಾನಗಟ್ಟಲೆ ಪ್ರಜಾಮುಖ್ಯರಿಗೂ ರಾಜರಿಗೂ ವ್ಯಾಜ್ಯ ನಡೆದು ಕಡೆಗೆ ಒಪ್ಪಂದಗಳು ಸಿದ್ಧವಾದವು. ಮೈಸೂರಿನಲ್ಲಿ ಅಂತಹ ಒಪ್ಪಂದಗಳಾವುವೂ ಇಲ್ಲ. ಇಂಗ್ಲೆಂಡಿನಲ್ಲಿ ದೊರೆಯು ಹೆಸರಿಗೆ ಪ್ರಭು ; ಮೈಸೂರಿನಲ್ಲಿ ಮಹಾರಾಜರು ಹೆಸರು ಅಧಿಕಾರಗಳೆರಡನ್ನೂ ಪಡೆದ ಪ್ರಭುಗಳು.

ಕಾರ್ಯಾಂಗ

ಸರ್ಕಾರ

ಎಂತಹ ನಿರಂಕುಶ ಪ್ರಭುವಾದರೂ ಆಡಳಿತದ ಕೆಲಸವನ್ನು ಒಬ್ಬರೇ ನೆರವೇರಿಸಲಾಗುವುದಿಲ್ಲ ; ಮಂತ್ರಿಗಳೂ, ಅಧಿಕಾರಿಗಳೂ ಬೇಕೇ ಬೇಕು. ಮೈಸೂರಿನಲ್ಲಿ ಮಹಾರಾಜರ ಇಷ್ಟದಂತೆ ಆಡಳಿತವನ್ನು ನಡೆಸಲು ಮಂತ್ರಿಗಳೂ ಅಧಿಕಾರಿಗಳೂ ನಿಯಮಿತರಾಗುತ್ತಲೇ ಇರುತ್ತಾರೆ. ಅಧಿಕಾರಿಗಳ ಗುಂಪಿಗೆಲ್ಲಕ್ಕೂ ಸರ್ಕಾರವೆಂಬ ಹೆಸರು ಸಲ್ಲುವುದು. ಬೆಂಗಳೂರಿನಲ್ಲಿರುವ ಅಠಾರಾ ಕಚೇರಿಯೆಂಬುದೇ ಈ ಅಧಿಕಾರಿ ವರ್ಗಕ್ಕೆ ಮುಖ್ಯಸ್ಥಾನ. ಹೆಸರಿನಲ್ಲಿ ಹದಿನೆಂಟು ಕಚೇರಿಗಳೆಂದಿದ್ದರೂ ವಾಸ್ತವವಾಗಿ ಇನ್ನೂ ಹೆಚ್ಚಾಗಿವೆ. ಇರುವ ಎಲ್ಲ ಕಚೇರಿಗಳಿಗೂ, ಅಧಿಕಾರಿಗಳಿಗೂ ಮೇಲ್ಪಟ್ಟದ್ದಾಗಿ, ಮಹಾರಾಜರವರ ಇಷ್ಟವನ್ನು ತಿಳಿದು, ಸರ್ಕಾರದಲ್ಲಿ ಮುಖ್ಯವೆನಿಸಿ, ಎಲ್ಲ ಶಾಖೆಗಳ ಮೇಲ್ವಿಚಾರಣೆಯನ್ನೂ ಮಾಡಲು ಒಂದು ಮಂತ್ರಿಮಂಡಲಿಯಿದೆ. ಅದಕ್ಕೇ ಕೌನ್ಸಿಲ್ ಎಂದು ಹೆಸರು. ಎಕ್ಸೆಕ್ಯುಟಿವ್ ಕೌನ್ಸಿಲ್

ಅಥವಾ ಕಾರ್ಯನಿರ್ವಾಹಕ ಸಭೆಯೆಂಬುದು ಪೂರ್ತಿಯಾದ ಹೆಸರು. ಮಹಾರಾಜರ ತರುವಾಯ ಈ ಸಭೆಯೇ ಮುಖ್ಯವಾದುದು. ಅನೇಕ ಸಂದರ್ಭಗಳಲ್ಲಿ ಸರ್ಕಾರವೆಂಬ ಮಾತು ಈ ಸಭೆಗೇ ಸಲ್ಲುತ್ತದೆ.

ಸಭೆಯ ವ್ಯವಸ್ಥೆ—ದಿವಾನರ ಅಧಿಕಾರ

ಅಧ್ಯಕ್ಷರಾದ ದಿವಾನರೂ, ಸಂದರ್ಭಾನುಸಾರವಾಗಿ ಇಬ್ಬರೋ ಮೂವರೋ ಆಗಿ ನಿಯಮಿತರಾಗುವ ಇತರ ಸಭಿಕರೂ ಸರ್ಕಾರದ ಇಲಾಖೆಗಳ ವಿಚಾರಣೆಯನ್ನು ತಮ್ಮಲ್ಲಿಯೇ ಹಂಚಿಕೆ ಮಾಡಿಕೊಳ್ಳುವರು. ಸಭಿಕರು ತಂತಮ್ಮ ಇಲಾಖೆಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಯಜಮಾನರೆನಿಸಿ ಅನೇಕ ವಿಷಯಗಳನ್ನು ತಾವೇ ತೀರ್ಮಾನ ಮಾಡಿ ಆಜ್ಞೆಗಳನ್ನು ಕೊಡುವರು. ಸ್ವತಂತ್ರರಾಗಿ ತಾವೇ ತೀರ್ಮಾನ ಮಾಡಲಾಗದ ವಿಷಯಗಳ ಪಟ್ಟಿಯೊಂದುಂಟು. ಆ ಪಟ್ಟಿಯಲ್ಲಿ ಸೂಚಿತವಾದ ಅಂಶಗಳು ನಿರ್ಣಯವಾಗಲು ಸಭೆ ಸೇರಲೇಬೇಕು. ಸಭೆಯಲ್ಲಿ ಚರ್ಚೆಯಾದ ಮೇಲೆ ಸಭಿಕರ ಅಭಿಪ್ರಾಯದೊಂದಿಗೆ ಅದರ ವರದಿಯು ಮಹಾರಾಜರನ್ನು ತಲಪುವುದು ; ಆಗ ಮಹಾರಾಜರ ಇಷ್ಟವೂ, ಸಹಿಯೂ ಪ್ರಕಟವಾಗುವುದು. ಸಭೆಯಲ್ಲಿ ಚರ್ಚೆ ನಡೆಯುವಾಗ ಸಭಿಕರು ಸಮಾನರಂತೆ ವಾದಿಸಿದರೂ, ದಿವಾನರಿಗೇ ಅಧಿಕಾರ ಹೆಚ್ಚು. ಮತಭೇದ ತೋರಿದಾಗ ದಿವಾನರ ಅಭಿಮತವು ಶ್ರೇಷ್ಠವೆನಿಸುವುದು. ದಿವಾನರಿಗೆ ಎಲ್ಲ ಇಲಾಖೆಗಳ ಮೇಲ್ವಿಚಾರಣೆಯ ಅಧಿಕಾರವೂ ಉಂಟು. ಬೇರೊಬ್ಬ ಸಭಿಕರ ಅಧಿಕಾರಕ್ಕೊಳಪಟ್ಟ ವಿಷಯದಲ್ಲಿಯೂ ದಿವಾನರು ಪ್ರವೇಶಿಸಲು ಆಸ್ಪದವುಂಟು.

ಇಂಗ್ಲೆಂಡಿನ ಹೋಲಿಕೆ

ಇಷ್ಟೇ ಸಭಿಕರಿರತಕ್ಕುದೆಂದಾಗಲಿ, ಇಷ್ಟೇಕಾಲ ಸಭಿಕರಾಗಿರಬೇಕೆಂದಾಗಲಿ ನಿಯಮವಿಲ್ಲ. ಸಭೆಯಲ್ಲಿ ಬಹುಮತಾನುಸಾರವಾಗಿಯೇ ತೀರ್ಪುಗಳಾಗಬೇಕೆಂಬ ನಿಯಮವೂ ಇಲ್ಲ ; ಪದ್ಧತಿಯೂ ಇಲ್ಲ. ಸಭೆಗೆ ವ್ಯತಿರಿಕ್ತವಾಗಿ ಪ್ರವರ್ತಿಸುವ ಅಧಿಕಾರವೂ ದಿವಾನರಿಗೆ ಇರುವುದರಿಂದ ಸಭಿಕರಿಗೆ ಸಮಾನಾಧಿಕಾರವಿಲ್ಲ. ಇಂಗ್ಲೆಂಡಿನ ಮಂತ್ರಿಮಂಡಲಿಗೂ, ಈ ಮಂತ್ರಿಮಂಡಲಿಗೂ ಹೋಲಿಕೆಯು ಕಡಿಮೆ. ಇಂಗ್ಲೆಂಡಿನ ಮಂತ್ರಿಗಳು

ಪ್ರಜಾಪ್ರತಿನಿಧಿಗಳು, ಸಮಾನಾಧಿಕಾರಿಗಳು, ಮತ್ತು ಒಟ್ಟುಗೂಡಿ ವರ್ತಿಸ ತಕ್ಕವರು ; ಅಲ್ಲದೆ ಪ್ರಜೆಯ ಬೆಂಬಲ ತಪ್ಪಿದ ಸೂಚನೆ ತೋರಿದ ಕೂಡಲೆ ತಮ್ಮ ಪದವಿಗಳನ್ನು ಬಿಟ್ಟುಕೊಡತಕ್ಕವರು. ಕಾರ್ಯಕ್ರಮವು ಗೋಪ್ಯವಾಗಿ ನಡೆಯುವ ಲಕ್ಷಣವೊಂದೇ ಎರಡು ಮಂಡಲಿಗಳಿಗೂ ಸಾಮಾನ್ಯವಾದುದು. ಮೈಸೂರಿನ ಮಂತ್ರಿಮಂಡಲಿಗೆ ಆಧಾರವಾದುದು ಮಹಾರಾಜರ ಇಷ್ಟವೇ ವಿನಾ ಇಂಗ್ಲೆಂಡಿನಲ್ಲಿರುವಂತೆ ಪ್ರಜಾನುಗ್ರಹವಲ್ಲ.

ಕಾರ್ಯದರ್ಶಿಗಳು

ವಾರಕ್ಕೊಮ್ಮೆಯಾದರೂ ಈ ಸಭೆಯು ಬೆಂಗಳೂರಿನಲ್ಲಿ ನೆರೆಯುವುದು. ದಿವಾನರು, ಸಭಿಕರು ಮತ್ತು ಛೀಫ್ ಸೆಕ್ರೆಟರಿ ಅಥವಾ ಶ್ರೇಷ್ಠ ಕಾರ್ಯದರ್ಶಿಗಳು ಸೇರುತ್ತಾರೆ. ಕಾರ್ಯದರ್ಶಿಗಳು ಚರ್ಚೆಯಲ್ಲಿ ಪ್ರವೇಶ ಮಾಡುವುದಿಲ್ಲ ; ಚರ್ಚೆಗೆ ಬೇಕಾದ ಕಾಗದಪತ್ರಗಳನ್ನು ಸಿದ್ಧಪಡಿಸಿಕೊಂಡು ಸಭೆಯ ಕಾರ್ಯಕಲಾಪವನ್ನು ಒರೆದಿಡುವುದು ಅವರ ಕೆಲಸ. ಸಾಧಾರಣವಾಗಿ ದಿವಾನರ ಸ್ವಂತ ವಿಚಾರಣೆಗೊಳಪಟ್ಟ ಇಲಾಖೆಗಳ ಕೆಲಸವು ಈ ಮುಖ್ಯ ಕಾರ್ಯದರ್ಶಿಗಳ ಮೂಲಕವೇ ನಡೆಯುತ್ತದೆ. ಇತರ ಇಲಾಖೆಗಳ ಮುಖ್ಯಾಧಿಕಾರಿಗಳಿಗೂ ಸಭೆಗೂ ಮಧ್ಯವರ್ತಿಗಳಾಗಿ ಇತರ ಕಾರ್ಯದರ್ಶಿಗಳೂ (ರಾಯಸದವರಂತೆ) ಇರುತ್ತಾರೆ. ಕಾರ್ಯದರ್ಶಿಗಳ ಕಾರ್ಯಾಧಿಕಾರ ವ್ಯವಸ್ಥೆಯು ಈ ಪರಿಯಾಗಿರುವುದು :—

೧. ಚೀಫ್ ಸೆಕ್ರೆಟರಿ—ಶ್ರೇಷ್ಠ ಕಾರ್ಯದರ್ಶಿ ; ರಾಜಕೀಯ ಇಲಾಖೆ. ಅಂದರೆ ಬ್ರಿಟಿಷರೊಡನೆ ನಡೆಸುವ ಪತ್ರವ್ಯವಹಾರ, ಸೇನಾ ಶಾಖೆ, ಅರಮನೆಯ ವಿಚಾರಗಳು ಸಾಧಾರಣವಾಗಿ ದಿವಾನರ ಸ್ವಂತ ವಿಚಾರಣೆಯಲ್ಲಿಯೇ ಇರುತ್ತವೆಯಾದ್ದರಿಂದ ಆ ಇಲಾಖೆಗಳು ಈತನಿಗೆ ಸಂಬಂಧಪಟ್ಟವು ; ಮಂತ್ರಿ ಸಭೆಯ ಕಾರ್ಯಕಲಾಪವನ್ನು ಸಕಾಲಕ್ಕೆ ಒದಗಿಸುವುದೂ, ಬರೆಸಿಡುವುದೂ ಈತನ ಕೆಲಸ.

೨. ಫೈನಾನ್ಸ್ ಸೆಕ್ರೆಟರಿ.—ಆಯವ್ಯಯ ಕಾರ್ಯದರ್ಶಿ ; ಆಯವ್ಯಯದ ಅಂದಾಜು, ಬೊಕ್ಕಸದ ಅಧಿಕಾರ ಇತ್ಯಾದಿ.

೩. ರೆವೆನ್ಯೂ ಸೆಕ್ರೆಟರಿ.—ಆಯದ ಕಾರ್ಯದರ್ಶಿ ; ಮುಜರಾಯಿ, ರೆಜಿಸ್ಟ್ರೇಷನ್, ಸರ್ವೆ, ಸ್ಟಾಂಪು, ಅಬ್ಕಾರಿ, ನೆಲಗಂದಾಯ ಇತ್ಯಾದಿ.

೪. ಡೆವೆಲಪ್ಮೆಂಟ್ ಸೆಕ್ರೆಟರಿ.—ಅಭಿವೃದ್ಧಿ ಕಾರ್ಯದರ್ಶಿ ; ಆರೋಗ್ಯ ಮತ್ತು ನೈರ್ಮಲ್ಯರಕ್ಷಣೆ, ಶಿಕ್ಷಣ, ವಿಶ್ವವಿದ್ಯಾನಿಲಯ, ವ್ಯವಸಾಯ, ಅಮೃತಮಹಲ್, ಉದ್ಯಾನಗಳು, ಅಂತರಿಕ್ಷ ಪರೀಕ್ಷೆ, ಆರ್ಥಿಕ ಸಮ್ಮೇಳನಗಳು ಇತ್ಯಾದಿ.

೫. ಜನರಲ್ ಸೆಕ್ರೆಟರಿ.—ಸಾಧಾರಣ ಕಾರ್ಯದರ್ಶಿ ; ಪ್ರತಿನಿಧಿ ಸಭೆಗಳು, ಪೋಲೀಸು ಮತ್ತುಸೆರೆಮನೆಗಳು, ಅಂಕಸಂಗ್ರಹ (Statistics), ಪರಸ್ಪರ ಸಹಾಯ ಇತ್ಯಾದಿ.

೬. ಪಬ್ಲಿಕ್ ವರ್ಕ್ಸ್ ಸೆಕ್ರೆಟರಿ—ಮರಾಮತ್ ಕಾರ್ಯದರ್ಶಿ, ಈ ಭಾಗದಲ್ಲಿ ನೀರಾವರಿ ಮತ್ತು ಕಟ್ಟಡ, ರೈಲ್ವೆ ಮತ್ತು ವಿದ್ಯುಚ್ಛಕ್ತಿಗಳಿಗೂ ಮೂವರು ಕಾರ್ಯದರ್ಶಿಗಳುಂಟು.

ಹಂಚಿಕೆಯು ಸರಿಸುಮಾರಾಗಿ ಈ ವಿವರದಂತೆಯೇ ಇದ್ದರೂ ಅನುಕೂಲಕ್ಕೆ ತಕ್ಕಂತೆ ಬದಲಾವಣೆಗಳಾಗುವುವು. ಮಂತ್ರಿಸಭೆಯವರು ಆಡಳಿತದ ಇಲಾಖೆಗಳನ್ನು * ತಮ್ಮಲ್ಲಿ ಹಂಚಿಕೊಂಡ ಹಾಗೆ ಕಾರ್ಯದರ್ಶಿಗಳು ತಮ್ಮ ಕಾಗದ ಪತ್ರಗಳನ್ನು ಕಳುಹಿಸಿ ಆಜ್ಞೆಗಳನ್ನು ಸಾರುವರು. ಸರ್ಕಾರವೆನ್ನುವುದು ಆ ಸಭೆಯೇ ಆದುದರಿಂದ, ಶ್ರೇಷ್ಠ ಕಾಯದರ್ಶಿಯೇ ಸರ್ಕಾರದ ಪ್ರತಿನಿಧಿಯಂತಿರುವನು. ಸರ್ಕಾರದ ಆಜ್ಞೆಗಳು ಹೊರಡುವುದು ಆತನ ಮೂಲಕವೇ ; ಪ್ರಜೆಗಳು ಪತ್ರವ್ಯವಹಾರ ನಡೆಸಬೇಕಾದರೆ ಆತನೊಡನೆಯೇ.

ಈ ರೀತಿಯಲ್ಲಿ ಮಂತ್ರಿಮಂಡಲಿಯು ಆಡಳಿತವನ್ನು ನಡೆಸುವುದಲ್ಲದೆ ಒಂದು ಅಂಶದಲ್ಲಿ ಎಲ್ಲಕ್ಕೂ ಮೇಲ್ಪಟ್ಟ ನ್ಯಾಯಸ್ಥಾನವಾಗಿರುವುದು. ರೆವೆನ್ಯೂ ಬಾಬುಗಳಲ್ಲಿ ಎಂತಹ ವ್ಯಾಜ್ಯವಾದರೂ ಕಡೆಯ ತೀರ್ಪಿನ ಅಧಿಕಾರವು ಈ ಸಭೆಗೆ ಸೇರಿರುವುದು.

---

* ಮುಖ್ಯ ಇಲಾಖೆಗಳು

೧. ರೆವೆನ್ಯೂ, ೨. ಸರ್ವೆ ಮತ್ತು ಸೆಟ್ಲ್‌ಮೆಂಟು, ೩. ಫಾರೆಸ್ಟು, ೪. ಎಕ್ಸೈಸ್, ೫. ಸ್ಟಾಂಪು, ರೆಜಿಸ್ಟ್ರೇಷನ್ ಇತ್ಯಾದಿ, ೬. ಅಕೌಂಟ್ಸ್, ೭. ಜುಡಿಷಿಯಲ್, ೮. ಜೈಲು, ೯. ಪೋಲೀಸು, ೧೦. ವಿಶ್ವವಿದ್ಯಾನಿಲಯ, ೧೧. ಶಿಕ್ಷಣ, ೧೨. ಮೆಡಿಕಲ್: ಪಬ್ಲಿಕ್ ಹೆಲ್ತ್, ೧೩. ವ್ಯವಸಾಯ, ೧೪. ಗಣಿಗಳು ಮತ್ತು ಭೂಶೋಧನೆ, ೧೫. ಉದ್ಯೋಗ ವ್ಯಾಪಾರಗಳು, ೧೬. ಭದ್ರಾವತಿ ಕಬ್ಬಿಣದ ಕಾರ್ಖಾನೆ, ೧೭. ಮರಾಮತ್ ಇಲಾಖೆ, ೧೮. ರೈಲುಗಳು, ೧೯. ವಿದ್ಯುಚ್ಛಕ್ತಿ, ೨೦. ಸೈನ್ಯದ ಇಲಾಖೆ, ೨೧. ಮುಜರಾಯಿ, ೨೨. ಅರಮನೆ, ೨೩. ವಿವಿಧ.

ದೇಶದ ವಿಭಾಗ

ಆಡಳಿತಕ್ಕಾಗಿ ಒಟ್ಟು ಸಂಸ್ಥಾನವು ಎಂಟು ಡಿಸ್ಟ್ರಿಕ್ಟ್ ಅಥವಾ ಜಿಲ್ಲೆಗಳೆಂದು ವಿಭಾಗವಾಗಿ, ಪ್ರತಿ ಜಿಲ್ಲೆಯೂ ತಾಲ್ಲೂಕುಗಳಾಗಿ ವಿಭಾಗವಾಗಿರುವುದು. ಪ್ರತಿ ತಾಲ್ಲೂಕಿನಲ್ಲಿಯೂ ಅನೇಕ ಗ್ರಾಮಗಳು ಸೇರಿರುತ್ತವೆ. ಅಧಿಕಾರಿಗಳನ್ನು ಲೆಕ್ಕಿಸುವಾಗ ಗ್ರಾಮ, ತಾಲ್ಲೂಕು, ಸಬ್ ಡಿವಿಜ಼ರ್, ಮತ್ತು ಜಿಲ್ಲಾ ಅಧಿಕಾರಿಗಳ ತರುವಾಯ ಕೇಂದ್ರ ಸ್ಥಾನದಲ್ಲಿರುವ ಶಾಖಾಧಿಕಾರಿಗಳನ್ನು ಗಣಿಸಬೇಕು. ಗ್ರಾಮ, ಪಟ್ಟಣ ಮತ್ತು ಜಿಲ್ಲೆಗಳಲ್ಲಿ ಕೆಲವು ಕರ್ತವ್ಯಗಳು ಸ್ಥಳದವರಿಂದಲೇ ನಿರ್ವಾಹವಾಗುವುದರಿಂದ, ಆ ಭಾಗವು ಸ್ಥಳೀಯ ನಿರ್ವಾಹವೆಂಬ ಪ್ರತ್ಯೇಕ ವಿಚಾರವಾಗುತ್ತದೆ. ಆ ಭಾಗವನ್ನು ಬಿಟ್ಟು ಉಳಿದುದೆಲ್ಲವೂ ಅಧಿಕಾರಿ ವರ್ಗದ ಸ್ವಂತ ಆಳ್ವಿಕೆಯಲ್ಲಿಯೇ ಇರುತ್ತದೆ. ಅಧಿಕಾರಿಗಳ ಹೆಸರಿನಿಂದಲೇ ಅವರ ಕರ್ತವ್ಯಗಳೂ ಸೂಚಿತವಾಗುತ್ತವೆ.

ಗ್ರಾಮ :—ಗ್ರಾಮಾಧಿಕಾರಿಗಳಲ್ಲಿ ಗೌಡ ಅಥವಾ ಪಟೇಲ, ಶಾನುಭೋಗ, ತೋಟಿ, ತಳವಾರರು ಸರ್ಕಾರದ ಕೆಲಸವನ್ನು ಮಾಡಿ, ಅಧಿಕಾರಿಗಳಿಗೆ ಸಹಾಯ ಮಾಡುತ್ತ ಪೋಟಿಗೆಯನ್ನೂ, ಸಂಬಳಗಳನ್ನೂ ಪಡೆಯುವರು. ಪಟೇಲಿಯು ಗೌರವದ ಹುದ್ದೆ : ಕಂದಾಯದ ವಸೂಲಿ, ನ್ಯಾಯ ವಿಚಾರಣೆ, ಗ್ರಾಮರಕ್ಷಣೆ ಮತ್ತು ಗ್ರಾಮಾಭಿವೃದ್ಧಿಗಳು ಇವರಿಗೆ ಸೇರಿರುತ್ತವೆ.

ಹಲಕೆಲವು ಹಳ್ಳಿಗಳು ಸೇರಿ ಹೋಬಳಿಯೆನಿಸುತ್ತದೆ. ಅನೇಕ ಹೋಬಳಿಗಳು ಸೇರಿ ತಾಲ್ಲೂಕು ಅಧಿಕಾರಿಗಳಿಗೆ ಒಳಗಾಗಿರುತ್ತವೆ.

ತಾಲ್ಲೂಕು ಮತ್ತು ಪಟ್ಟಣ :—ಇಲ್ಲಿ ಅಮಲ್ದಾರ್, ಪೋಲೀಸ್ ಇರ್ನ್ಸ್ಪೆಕ್ಟರ್, ಸಬ್‌ರೆಜಿಸ್ಟ್ರಾರ್, ಸ್ಯಾನಿಟೆರಿ ಇರ್ನ್ಸ್ಪೆಕ್ಟರ್, ಸಬ್ ಅಸಿಸ್ಟೆಂಟ್ ಸರ್ಜರ್, ಓವರ್ಸಿಯರ್ ಮುಂತಾದ ಅಧಿಕಾರಿಗಳಿರುತ್ತಾರೆ. ಅನೇಕ ವೇಳೆ ಕೆಲಸಕ್ಕೆ ತಕ್ಕಂತೆ ಮೂರು-ನಾಲ್ಕು ತಾಲ್ಲೂಕುಗಳ ಕೆಲಸವನ್ನು ಒಬ್ಬ ಅಧಿಕಾರಿಗೇ ಕೆಲವು ಇಲಾಖೆಗಳಲ್ಲಿ ವಹಿಸುವುದುಂಟು.

ಸಬ್‌ಡಿವಿಜ಼ರ್. —ಮುಖ್ಯವಾಗಿ ರೆವೆನ್ಯೂ ವಿಚಾರಕ್ಕಾಗಿಯೇ ಅನೇಕ ತಾಲ್ಲೂಕುಗಳನ್ನು ಒಟ್ಟುಗೂಡಿಸಿ ಈ ವಿಭಾಗವನ್ನು ರಚಿಸುವರು.

ಅಡಳಿತದ ಕೆಲಸ ಹೆಚ್ಚಿದಾಗ ಜಿಲ್ಲಾಧಿಕಾರಿಗಳಿಗೆ ಸಹಾಯ ಮಾಡಲು ಈ ವಿಭಾಗಗಳನ್ನು ಮಾಡಿ ಬೇರೆ ಅಧಿಕಾರಿಗಳನ್ನು ನಿಯಮಿಸುತ್ತಾರೆ.

ಜಿಲ್ಲೆ :—ಜಿಲ್ಲೆಗೆ ಡೆಪ್ಯುಟಿ ಕಮಿಷನರ್ ಎಂಬುವಗೇ ಮುಖ್ಯಾಧಿಕಾರಿಗಳು. ರೆವೆನ್ಯೂ ಬಾಬುಗಳಲ್ಲಿ ಸಬ್‌ಡಿವಿಜ಼ನ್ ಅಧಿಕಾರಿಗಳು ಸಹಾಯಕರಾದಂತೆ ಬೊಕ್ಕಸ ಅಥವಾ ಟ್ರೆಜರಿ, ಆಬ್ಕಾರಿ ಅಥವಾ ಎಕ್ಸೈಸ್, ಪೋಲೀಸ್, ಕಾಡು, ಆರೋಗ್ಯ ಮತ್ತು ಚಿಕಿತ್ಸೆ, ಮರಾಮತ್, ಶಿಕ್ಷಣ ಮುಂತಾದ ಶಾಖೆಗಳಿಗೆ ತಕ್ಕಂತೆ ಇತರ ಅಧಿಕಾರಿಗಳಿರುತ್ತಾರೆ.

ಈ ಅಧಿಕಾರಿಗಳು ತಾವು ಯಾವ ಶಾಖೆಗೆ ಸೇರಿರುತ್ತಾರೆಯೋ ಆ ಶಾಖೆಯ ಅಧ್ಯಕ್ಷರಿಗೆ ಅಧೀನರಾಗಿರುತ್ತಾರೆ. ಶಾಖೆ ಅಥವಾ ಇಲಾಖೆಗಳ ಮುಖ್ಯ ಸ್ಥಾನವು ಬೆಂಗಳೂರಿನಲ್ಲಿಯೇ ; ಅವಶ್ಯವಿದ್ದಂತೆ ಅವುಗಳಲ್ಲಿ ಹೆಚ್ಚುಕಡಿಮೆಗಳಾಗುತ್ತಿರುತ್ತವೆ.

ಇಲಾಖೆಗಳೆಲ್ಲಕ್ಕೂ ಅಧ್ಯಕ್ಷರುಗಳೇ ಮುಖ್ಯಾಧಿಕಾರಿಗಳು. ಯೋಗ್ಯರಾದವರೇ ಅಧಿಕಾರಿಗಳಾಗುವಂತೆ ಸಿವಿಲ್ ಸರ್ವಿಸ್ ಎಂಬ ಪರೀಕ್ಷೆಯ ಏರ್ಪಾಡುಂಟು. ಕೆಲವು ಇಲಾಖೆಗಳಲ್ಲಿ ವಿಶೇಷ ಶಿಕ್ಷಣವು ಬೇಕಾದುದರಿಂದ ಆ ಶಿಕ್ಷಣ ಪಡೆದವರಿಗೇ ಅಲ್ಲಿಯ ಹುದ್ದೆಗಳು ದೊರಕುತ್ತವೆ. ರಾಜಕೀಯ ಕಾರಣಗಳಿಗಾಗಿ ಪರೀಕ್ಷೆಗೊಳಗಾಗದವರೂ ನಿಯಮಿತರಾಗುದುಂಟು.

ನ್ಯಾಯಾಂಗ.

ನ್ಯಾಯ ತೀರ್ಮಾನದ ಕ್ರಮ.

ಕಾರ್ಯಾಂಗವೆಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ನ್ಯಾಯಾಂಗ. ಮೈಸೂರಿನಲ್ಲಿ ಕಾರ್ಯಾಂಗಕ್ಕೆ ಮಹಾರಾಜರವರೇ ಶಿಖರವಾದಂತೆ, ನ್ಯಾಯಾಂಗಕ್ಕೂ ಅವರೇ ಶಿರೋಭೂಷಣರು. ನ್ಯಾಯಾಧಿಪತಿಗಳೆಲ್ಲರೂ ತಾವು ಮಹಾರಾಜರ ಪ್ರತಿನಿಧಿಗಳೆಂಬ ಭಾವನೆಯಿಂದ ವ್ಯಾಜ್ಯಗಳನ್ನು ವಿಚಾರಿಸಿ ಎರಡು ಪಕ್ಷಗಳ ಹೇಳಿಕೆಯನ್ನೂ ಕೇಳಿ ನ್ಯಾಯುವನ್ನು ನಿಶ್ಚಯಿಸುವರು. ನ್ಯಾಯ ತೀರ್ಮಾನದಲ್ಲಿ ಅಧಿಕಾರಿಗಳು ತಮ್ಮ ಮನಸ್ಸಿಗೆ ತೋರಿದಂತೆ ತೀರ್ಪುಗಳನ್ನು ಕೊಡುವುದಕ್ಕಾಗಲಿ, ದಂಡಗಳನ್ನು ವಿಧಿ

ಸುವುದಕ್ಕಾಗಲಿ ಆಸ್ಪದವಿಲ್ಲ. ನ್ಯಾಯಶಾಸ್ತ್ರಗಳೂ, ವಿಧಿಗಳೂ, ಕಾನೂನುಗಳೂ ಬೇಕಾದಷ್ಟಿರುವುವು. ಅವುಗಳನ್ನನುಸರಿಸಿ ನ್ಯಾಯಾಧಿಪತಿಗಳು ವರ್ತಿಸಬೇಕು. ಎಂತಹ ವ್ಯಾಜ್ಯವಾಗಲಿ ನ್ಯಾಯಾನ್ಯಾಯಗಳನ್ನೂ, ಕಾನೂನಿನ ಬಲಾಬಲಗಳನ್ನೂ ವಿವರವಾಗಿ ತೋರಿಸಿ ವಾದವಿವಾದ ಮಾಡಲು ವಕೀಲರಿದ್ದು ಕಕ್ಷಿಗಾರರಿಗೂ, ನ್ಯಾಯಾಧಿಪತಿಗಳಿಗೂ ಸಹಾಯಕರಾಗಿರುತ್ತಾರೆ. ನ್ಯಾಯ ಶಾಸ್ತ್ರಗಳನ್ನು ತಿದ್ದುವುದೂ, ವಿಧಿಗಳನ್ನು ಬದಲಾಯಿಸುವುದೂ, ಹೊಸ ಕಾನೂನುಗಳನ್ನು ನಿರ್ಮಿಸುವುದೂ ಶಾಸಕಾಂಗದ ಕೆಲಸ ; ನ್ಯಾಯಾಂಗಕ್ಕೆ ಆ ಕೆಲಸವಿಲ್ಲ.

ನ್ಯಾಯಸ್ಥಾನಗಳು

ನ್ಯಾಯ ತೀರ್ಮಾನಕ್ಕಾಗಿ ಮೈಸೂರು ದೇಶವು ಮೂರು ಡಿಸ್ಟ್ರಿಕ್ಟು ಅಥವಾ ವಿಭಾಗಗಳಾಗಿದೆ. ಡಿಸ್ಟ್ರಿಕ್ಟುಗಳು ಪುನಃ ವಿಭಾಗವಾಗಿ ಸಣ್ಣ ಭಾಗಗಳು ಏರ್ಪಟ್ಟಿವೆ. ನ್ಯಾಯಾಧಿಪತಿಗಳಲ್ಲಿ ಸಾಧಾರಣವಾಗಿ ಎರಡು ಬಗೆಯುಂಟು :—

೧. ಸಿವಿಲ್ ಅಥವಾ ಆಸ್ತಿ, ಒಪ್ಪಂದ, ಮದುವೆ ಮುಂತಾದ ವಿಷಯಗಳನ್ನೊಳಗೊಂಡ ಭಾಗದವರು, ೨. ಕ್ರಿಮಿನಲ್–ಅಂದರೆ ಖೂನಿ, ಫೋರ್ಜರಿ, ಮಾನಹಾನಿ, ಅಂಗಹಾನಿ, ಕಳ್ಳತನ ಮುಂತಾದ ವಿಷಯಗಳನ್ನೊಳಗೊಂಡ ವಿಭಾಗದವರು. ಸಾಧಾರಣ ಮಾತಿನಲ್ಲಿ ಮೊದಲನೆಯವರನ್ನು ಜಡ್ಜಿಗಳೆಂದೂ, ಎರಡನೆಯವರನ್ನು ಮ್ಯಾಜಿಸ್ಟ್ರೇಟರೆಂದೂ ಕರೆಯುವರು. ಸಿವಿಲ್ ಭಾಗದಲ್ಲಿ ಮುನಸೀಫ್, ಸಬ್‌ಜಡ್ಜ್, ಡಿಸ್ಟ್ರಿಕ್ಟ್ ಜಡ್ಜ್ ಎಂಬ ಅಧಿಕಾರಿಗಳೂ, ಕ್ರಿಮಿನಲ್ ಭಾಗದಲ್ಲಿ ಮೂರನೆ, ಎರಡನೆ, ಮೊದಲನೆ ತರಗತಿಯ ಮ್ಯಾಜಿಸ್ಟ್ರೇಟರುಗಳೂ ಕ್ರಮವಾಗಿರುತ್ತಾರೆ. ಡಿಸ್ಟ್ರಿಕ್ಟ್ ಜಡ್ಜಿಯೆಂಬಾತನೇ ಸಂಚಾರ ಮಾಡುತ್ತ ಸೆಷನ್ಸ್ ಜಡ್ಜಿಯೆಂದೆನಿಸಿ ಕ್ರಿಮಿನಲ್ ವ್ಯವಹಾರವನ್ನು ನಡೆಸುತ್ತಾನೆ. ಎಂತಹ ವ್ಯವಹಾರವಾದರೂ ಈ ಕ್ರಮದಲ್ಲಿಯೇ ವಿಚಾರವಾಗಬೇಕು. ಡಿಸ್ಟ್ರಿಕ್ಟ್ ಅಥವಾ ಸೆಷನ್ಸ್ ನ್ಯಾಯಸ್ಥಾನದಲ್ಲಿಯೂ ತೀರ್ಪು ಸಮಾಧಾನವನ್ನುಂಟು ಮಾಡದಿದ್ದಾಗ ಹೈಕೋರ್ಟೆಂಬ ಶ್ರೇಷ್ಠ ಸ್ಥಾನಕ್ಕೆ ಅಪೀಲ್ ಹೊರಡುವುದು. ಸಂಸ್ಥಾನದಲ್ಲಿ ಸಿವಿಲಿನಲ್ಲಾಗಲಿ, ಕ್ರಿಮಿನಿನಲ್ಲಾಗಲಿ ಹೈ ಕೋರ್ಟಿಗೇ

ಕಡೆಯ ಅಧಿಕಾರವಿರುವುದು. ಕ್ರಿಮಿನಲ್ ಕೇಸುಗಳಲ್ಲಿ ಮಾತ್ರ ಕಠಿಣ ಶಿಕ್ಷೆಗೆ ಗುರಿಯಾದ ಅಪರಾಧಿಯು ಹೈಕೋರ್ಟನ್ನು ದಾಟಿ ಮಹಾರಾಜರಲ್ಲಿ ಮೊರೆಯಿಟ್ಟುಕೊಳ್ಳಬಹುದು. ಮಹಾರಾಜರು ಕನಿಕರದಿಂದ ಶಿಕ್ಷೆಯನ್ನು ಕಡಿಮೆ ಮಾಡಬಹುದು. ಇದಿಷ್ಟೇ ಮಹಾರಾಜರು ಸ್ವಂತವಾಗಿ ನ್ಯಾಯ ತೀರ್ಮಾನದಲ್ಲಿ ಪ್ರವೇಶಿಸುವ ಪದ್ಧತಿ.

ಕಾರ್ಯಾಂಗದ ಸಂಬಂಧ

ಸಂಸ್ಥಾನದಲ್ಲಿ ಎಲ್ಲೆಲ್ಲಿಯೂ ನ್ಯಾಯವು ಏಕರೀತಿಯಾಗಿರಬೇಕಾದುದು ಅವಶ್ಯವಾದುದರಿಂದ ನ್ಯಾಯಸ್ಥಾನಗಳೆಲ್ಲವೂ ಒಂದೇ ಯಂತ್ರದ ಭಾಗಗಳಂತೆ ವರ್ತಿಸುತ್ತವೆ. ಕ್ರಿಮಿನಲ್ ವಿಭಾಗದಲ್ಲಿ ಅಪರಾಧಿಯಾದವನು ರಾಷ್ಟ್ರ ಕಂಟಕನೆನಿಸುತ್ತಾನೆ. ಕಳ್ಳನ ಕೈಗೆ ಸಿಕ್ಕಿ ಪ್ರಜೆಗೆ ನಷ್ಟವಾಗುವುದು ಒಂದು ಕಡೆ; ಕಳ್ಳನಿರುವುದರಿಂದ ಪ್ರಜೆಗಳೆಲ್ಲರಿಗೂ, ಅಂದರೆ ರಾಷ್ಟ್ರಕ್ಕೆ, ಹಾನಿಯಾಗುವ ಸಂಭವವಿನ್ನೊಂದು ಕಡೆ. ಆದ್ದರಿಂದ ಕ್ರಿಮಿನಲ್ ಅಪರಾಧಗಳೆಲ್ಲವೂ ರಾಷ್ಟ್ರ ಸಮ್ಮುಖದಲ್ಲಿ ಅಪರಾಧಗಳೆನಿಸಿ ಆಡಳಿತದ ಕರ್ತವ್ಯವಾದ ದುಷ್ಟ ಶಿಕ್ಷಣದಲ್ಲಿ ಸೇರುತ್ತವೆ. ಆದ್ದರಿಂದ ಕ್ರಿಮಿನಲ್ ಕೇಸುಗಳನ್ನು ಪೋಲೀಸು ಅಧಿಕಾರಿಗಳೇ ಪ್ರಾರಂಭ ಮಾಡತಕ್ಕವರು. ಆಡಳಿತದ ಪರವಾಗಿಯೇ ಅವರು ವಿಚಾರಣೆಯನ್ನು ಹೂಡುವರು. ಪೋಲೀಸ್ ಇಲಾಖೆಯೇ ತಪ್ಪಿತಸ್ಥರನ್ನು ಕಂಡುಹಿಡಿಯುವುದಕ್ಕಾಗಿರುವಾಗ ಅಪರಾಧಿಗಳನ್ನು ಗುಮಾನಿಯ ಮೇಲೆ ಹಿಡಿದು ನ್ಯಾಯಾಧಿಪತಿಗಳಲ್ಲಿ ಫಿರ್ಯಾದು ಮಾಡಿ ಪೋಲೀಸಿನವರು ಒಂದು ಪಕ್ಷವಾಗುವರು. ಆದ್ದರಿಂದ ಪೋಲೀಸು ಅಧಿಕಾರಿಗೆ ನ್ಯಾಯಾಂಗದ ಅಧಿಕಾರವಿರುವುದು ನ್ಯಾಯವೆನ್ನಿಸುವುದಿಲ್ಲ. ಪೋಲೀಸಿನವರು ತಮ್ಮ ಇಲಾಖೆಯ ಅಧಿಕಾರಿಗಳಿಗಲ್ಲದೆ, ಮ್ಯಾಜಿಸ್ಟ್ರೇಟರಿಗೂ ಒಳಗಾಗಿರುವುದು ಈ ಕಾರಣದಿಂದಲೇ. ತಾಲ್ಲೂಕುಗಳಲ್ಲಿ ಅಮಲ್ದಾರರು, ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರು ಪೋಲೀಸಿನವರ ಮೇಲಣ ಅಧಿಕಾರಿಗಳಾಗಿರುತ್ತಾರೆ. ಹೀಗಿರುವುದರಿಂದ ಒಂದು ಕಡೆ ರೆವೆನ್ಯೂ ಮುಂತಾದ ವ್ಯವಹಾರವನ್ನು ನಡೆಸಲು ವ್ಯವಹಾರವನ್ನು ನಡೆಸಿ ಮತ್ತೊಂದು ಕಡೆ ತಾವೇ ನ್ಯಾಯಸ್ಥಾನದಲ್ಲಿ ಕುಳಿತು ಎರಡೂ ಕೆಲಸಗಳನ್ನು ಒಬ್ಬರೇ ನಡೆಸುವ ಪದ್ಧತಿಯು ದೋಷಯುಕ್ತವೆಂದು ಈಚೆಗೆ

ಸುಧಾರಣೆಗೆ ಪಾತ್ರವಾಗಿದೆ. ಕಾರ್ಯಾಂಗದವರೂ, ನ್ಯಾಯಾಂಗದವರೂ ಪ್ರತ್ಯೇಕವಾಗಿರತಕ್ಕದ್ದು ಆಧಾರ ತತ್ವಗಳಲ್ಲೊಂದು ; ಈ ಸುಧಾರಣೆಯು ಈಗ ಎಲ್ಲ ಡಿಸ್ಟ್ರಿಕ್ಟುಗಳಲ್ಲಿಯೂ ಜಾರಿಗೆ ಬಂದಿದೆ.

ದಂಡನೆಯ ದೃಷ್ಟಿ

ಗುಮಾನಿಯ ಮೇಲೆ ಅಪರಾಧಿಯೆಂದು ಹಿಡಿದೊಪ್ಪಿಸಿದಾಗ ರುಜುವಾತು ಸಿದ್ಧವಾಗಿ ಅಪರಾಧಿ ಈತನೇ ಎಂದು ದೃಢವಾಗುವವರೆಗೂ ಅಂತಹವನನ್ನು ನಿರಪರಾಧಿಯೆಂದೇ ಎಣಿಸುವುದು ನ್ಯಾಯಸಮ್ಮತವಾದುದು. ಈ ಕಾರಣದಿಂದ ಆಪಾದಿತನಾದವನು ತನ್ನ ಪರವಾಗಿ ವಾದವನ್ನೂ, ಸಾಕ್ಷಿಗಳ ಪರೀಕ್ಷೆಯನ್ನೂ ವಕೀಲರಿಲ್ಲದೆ ತಾನೇ ಮಾಡಬಹುದು. ದಂಡವನ್ನು ವಿಧಿಸುವುದರಲ್ಲಿಯೂ ಅಪರಾಧಿಗಳನ್ನು ಉತ್ತಮಗೊಳಿಸುವ ದೃಷ್ಟಿಯಿರುವುದೇ ನಾಗರಿಕತೆಯ ಲಕ್ಷಣ. ಅಸಭ್ಯ ಜನರಲ್ಲಿ ಮುಯ್ಯಿಗೆ ಮುಯ್ಯಿ ಎಂಬುದೇ ರೂಢಿ; ಅಪರಾಧಕ್ಕೆ ತಕ್ಕ ಶಿಕ್ಷೆ ಕೊಟ್ಟಾಗ ಅದರಿಂದ ಇತರರು ಹಾಗೆ ಮಾಡದಂತೆ ಎಚ್ಚರಗೊಂಡಾರೆಂಬ ಉದ್ದೇಶವು ಅದಕ್ಕಿಂತ ಮೇಲಿನದು. ಈ ಎರಡು ಮಾರ್ಗಗಳಿಗಿಂತ ಸುಧಾರಣೆಯ ಮಾರ್ಗವೇ ಶ್ರೇಷ್ಠವಾದುದು : ಬಡತನದಿಂದಲೋ, ಅಶಿಕ್ಷೆಯಿಂದಲೋ ಅನೇಕ ಅಪರಾಧಗಳು ನಡೆಯುತ್ತವೆ. ಆದ್ದರಿಂದ ಮೂಲ ಕಾರಣವನ್ನು ನಿವಾರಿಸುವ ಉಪಾಯವೇ ಅವಲಂಬನೀಯವಾದುದು. ಜೈಲುಗಳಲ್ಲಿ ಶಿಕ್ಷಣವನ್ನು ಕೊಡುವುದೂ ಉದ್ಯೋಗ ಕೈಗಾರಿಕೆಗಳನ್ನು ಹೇಳಿಸುವುದೂ ಈ ದೃಷ್ಟಿಯಿಂದಲೇ. ಮರಣದಂಡನೆ, ಏಕಾಂತ ಸೆರೆಗಳು ಈ ರೀತಿಯಲ್ಲಿ ಅನಾಗರಿಕವೆನ್ನಿಸಿವೆ. ಮುಂದುವರಿದ ರಾಷ್ಟ್ರಗಳಲ್ಲಿ ಸೆರೆಮನೆಯಿಂದ ಬಿಡುಗಡೆಯಾಗಿ ಬಂದವರಿಗೆ ಜೀವನೋಪಾಯಗಳನ್ನು ಕಲ್ಪಿಸಿಕೊಡಲು ಸಂಘಗಳು ಹುಟ್ಟಿವೆ. ಅಜ್ಞಾನಿಗಳೂ, ದರಿದ್ರರೂ ಅಪರಾಧ ಮಾಡುವುದಕ್ಕೆ ಸಮಾಜದ ಅಸಡ್ಡೆಯೇ ಮೂಲಕಾರಣವೆಂಬ ಮಾತು ನೆನಪಿನಲ್ಲಿರತಕ್ಕದ್ದು.

ನ್ಯಾಯಸ್ಥಾನಗಳ ಸ್ವಾತಂತ್ರ್ಯ

ಮೈಸೂರಿನಲ್ಲಿ ಹೈ ಕೋರ್ಟಿನ ಜಡ್ಜಿಗಳೇ ನ್ಯಾಯಾಂಗವೆಲ್ಲಕ್ಕೂ ಅಧಿಕಾರಿಗಳು. ಇತರ ನ್ಯಾಯಾಧಿಪತಿಗಳೆಲ್ಲರೂ ಇವರ ಅಧೀನರು.

ಅಧಿಪತಿಗಳನ್ನು ವರ್ಗಾಯಿಸುವುದಕ್ಕೂ, ಶಿಕ್ಷಿಸುವುದಕ್ಕೂ, ಪ್ರೋತ್ಸಾಹಿಸುವುದಕ್ಕೂ ಅವರೇ ದಕ್ಷರಾದವರು. ಅವರ ಅಭಿಪ್ರಾಯದಂತೆ ಸರ್ಕಾರದವರು ನ್ಯಾಯಾಂಗದ ವ್ಯವಸ್ಥೆಯನ್ನೂ ತಿದ್ದುಪಾಟನ್ನೂ ಕೈಕೊಂಡು ನ್ಯಾಯಾಧೀಶರನ್ನು ನಿಯಮಿಸುತ್ತಾರೆ. ಇಲ್ಲಿ ಬಲು ಮುಖ್ಯವೆನಿಸಿದ ಒಂದು ತತ್ವವುಂಟು. ಮುಂದುವರಿದ ರಾಷ್ಟ್ರಗಳಲ್ಲಿ ನ್ಯಾಯಾಧಿಪತಿಗಳು ಸ್ವತಂತ್ರರು ; ಇಂಗ್ಲೆಂಡಿನಲ್ಲಿ ಒಬ್ಬಾತನು ನ್ಯಾಯಾಧಿಪತಿಯಾಗಿ ನಿಯಮಿತನಾದ ಮೇಲೆ ಆತನನ್ನು ಕೆಲಸದಿಂದ ತೆಗೆದು ಹಾಕಲು ದೊರೆಗೂ ಅಧಿಕಾರವಿಲ್ಲ ; ಜೀವಂತನಾಗಿರುವವರೆಗೂ ಆತನು ನ್ಯಾಯಾಧಿಪತಿಯೇ ಆಗಿರುತ್ತಾನಾದುದರಿಂದ ಯಾರ ಹಂಗಿಗೂ ಒಳಗಾಗದೆ ನ್ಯಾಯವನ್ನೇ ನಿಶ್ಚಯಿಸುತ್ತಾನೆ. ಅಪೂರ್ವ ಸಂದರ್ಭಗಳಲ್ಲಿ ಮಾತ್ರ ನ್ಯಾಯಾಧಿಪತಿಯನ್ನು ಕೆಲಸದಿಂದ ತಪ್ಪಿಸಲು ಒಂದು ಮಾರ್ಗ ಮಾತ್ರ ಉಳಿದಿದೆ. ಪಾರ್ಲಿಮೆಂಟಿನ ಸಭೆಗಳೆರಡೂ ಸೇರಿ ಆತನಲ್ಲಿ ದೋಷವನ್ನು ಸ್ಥಾಪಿಸಿ ದೊರೆಯಲ್ಲಿ ಅರಿಕೆ ಮಾಡಿ, ಅರ್ಜಿ ಹಾಕಿಕೊಂಡಾಗ ದೊರೆಯು ಆತನನ್ನು ಕೆಲಸದಿಂದ ತಪ್ಪಿಸಬಹುದು. ಇದೇ ನ್ಯಾಯಾಂಗದ ಸ್ವಾತಂತ್ರ್ಯವೆಂಬುದು. ಮೈಸೂರಿನಲ್ಲಿ ಇನ್ನೂ ಆ ಸ್ಥಿತಿಯು ತೋರಿಕೊಂಡಿಲ್ಲ. ಚೀಫ್ ಜಡ್ಜಿಗಳು ಮೊದಲ್ಗೊಂಡು ಮುನಸೀಫ್, ಸಬ್‌ಮ್ಯಾಜಿಸ್ಟ್ರೇಟರವರೆಗೆ ಎಲ್ಲರನ್ನೂ ಸರ್ಕಾರದವರೇ, ಅಂದರೆ ಕಾರ್ಯಾಂಗದವರೇ, ನಿಯಮಿಸುವವರು ; ಪ್ರೋತ್ಸಾಹಿಸುವವರು ; ಶಿಕ್ಷಿಸುವವರು. ನ್ಯಾಯಾಧಿಕಾರಿಗಳು ಸ್ವತಂತ್ರರಾಗದಿದ್ದಾಗ ಶುದ್ಧವಾದ ನ್ಯಾಯವು ಸದಾ ಸ್ಥಾಪನೆಯಾದೀತೆಂಬ ಭರವಸೆಯಿರುವುದಿಲ್ಲ. ಆದ್ದರಿಂದಲೇ ನ್ಯಾಯಾಂಗವು ಕಾರ್ಯಾಂಗಕ್ಕಾಗಲಿ, ಶಾಸಕಾಂಗಕ್ಕಾಗಲಿ ವಶವಾಗಿರಕೂಡದೆಂಬುದು ರಾಷ್ಟ್ರರಚನೆಯ ಮೂಲತತ್ವಗಳಲ್ಲೊಂದು. ಕಾರ್ಯಾಂಗಕ್ಕೂ ಪ್ರಜೆಗಳಿಗೂ, ಅಥವಾ ಕಾರ್ಯಾಂಗಕ್ಕೂ ಶಾಸನಾಂಗಕ್ಕೂ, ವ್ಯವಹಾರ ಹುಟ್ಟಿದಾಗ ನ್ಯಾಯಾಧಿಪತಿಗಳು ಸ್ವತಂತ್ರರಾಗಿರದೆ ಕಾರ್ಯಾಂಗದ ಅಧೀನರಾಗಿದ್ದರೆ ಹೇಗೆ ?

ವಿಶೇಷ ಹಕ್ಕುಳ್ಳವರು

ನ್ಯಾಯ ದೇವತೆಯೆದುರಿನಲ್ಲಿ ಎಲ್ಲರೂ ಸಮಾನರೇ. ಆದರೂ ಕೆಲವು ಕಾರಣಗಳಿಂದ ಎಲ್ಲರಿಗೂ ಸಮತ್ವವಿಲ್ಲ. ಮಠಾಧಿಪತಿಗಳು, ದಿವಾನರು

ಮುಂತಾದ ಶ್ರೇಷ್ಠಪುರುಷರು ಸಿವಿಲ್ ಕೇಸುಗಳಲ್ಲಿ ಕೋರ್ಟಿನಲ್ಲಿ ಸ್ವತಃ ಬಾರದೆ ತಮ್ಮ ಪ್ರತಿನಿಧಿಯನ್ನು ಕಳುಹಿಸಿ ಕೊಡಬಹುದು ; ಹಾಗೆಯೇ ದೊಡ್ಡ ಮನೆತನದ ಹೆಂಗಸರೂ, ಜನಾನಾದವರೂ ವ್ಯವಹಾರದಲ್ಲಿ ಸಿಕ್ಕಿದಾಗ ಸ್ವತಃ ಕೋರ್ಟಿಗೆ ಬರಲಾರರು. ಅಂತಹ ಸಂದರ್ಭಗಳಲ್ಲಿ ಅನುಕೂಲಕ್ಕಾಗಿಯೂ, ಮರ್ಯಾದೆಗಾಗಿಯೂ ಕೋರ್ಟಿನವರೇ ಅವರನ್ನು ಸಾಧಾರಣದಂತೆ ಕಾಣದೆ ವಿಶೇಷವೆನಿಸುವ ಪದ್ಧತಿಯನ್ನವಲಂಬಿಸಬಹುದು. ಬ್ರಿಟಿಷರೊಡನೆ ನಡೆದಿರುವ ಕರಾರಿನ ಪ್ರಕಾರ ಐರೋಪ್ಯನೆನಿಸಿದವನನ್ನು ಯಾವ ಕ್ರಿಮಿನಲ್ ಕೋರ್ಟಿನವರಾಗಲಿ ವಿಚಾರಣೆಗೆ ಗುರಿಮಾಡಬೇಕಾದಾಗ ಮೊದಲು ಆತನ ಇಷ್ಟವನ್ನು ಕೇಳಿ ಆತನು ಇಷ್ಟಪಟ್ಟರೆ ತರುವಾಯ ನ್ಯಾಯಾಧಿಪತಿಯು ವಿಚಾರಣೆಗೆ ತೊಡಗಬೇಕು. ಆತನು ಇಷ್ಟಪಡದಿದ್ದರೆ ಆತನ ವಿಚಾರಣೆಯನ್ನು ಐರೋಪ್ಯರಿಗಾಗಿಯೇ ಪ್ರತ್ಯೇಕವಾಗಿ ಬ್ರಿಟಿಷರಿಂದ ನಿಯಮಿತರಾದ ಜಸ್ಟಿಸಸ್ ಆಫ್ ದಿ ಪೀಸ್ ಎಂಬ ಐರೋಪ ನ್ಯಾಯಾಧಿಪತಿಗಳಿಗೆ ಒಪ್ಪಿಸಿಬಿಡಬೇಕು. ಅಧಿಕಾರಿಗಳಿಗೂ ಕೆಲವು ಹಕ್ಕುಗಳಿರುತ್ತವೆ. ಸಾಧಾರಣ ಪ್ರಜೆಯು ಅಧಿಕಾರಿಯ ಮೇಲೆ ವ್ಯವಹಾರ ನಡೆಸಬೇಕಾದರೆ ಮೊದಲು ಕಾರ್ಯಾಂಗದವರು ಅನುಮತಿಯನ್ನು ಕೊಡಬೇಕು. ಅಧಿಕಾರಿಯಾದವನು ತನ್ನ ಇಲಾಖೆಯ ನಿಬಂಧನೆಗಳ ನಿರ್ಬಂಧಕ್ಕೆ ಒಳಗಾಗಿರುವುದರಿಂದ ಅಧಿಕಾರಸ್ಥಾನದಿಂದ ತಾನು ವ್ಯವಹಾರ ನಡೆಸುವಾಗಲೂ ಸರ್ಕಾರದ ಅನುಮತಿಯನ್ನು ಪಡೆಯಬೇಕು ; ಆದ್ದರಿಂದ ಯಾವ ಅಧಿಕಾರಿಯ ಮೇಲೆ ಇತರರು ಕೇಸನ್ನು ಹೂಡಬೇಕೆಂದರೂ ಸರ್ಕಾರದ ಅನುಮತಿಯು ಮೊದಲು ಅವಶ್ಯಕ.

ಗೌರವದ ಅಧಿಕಾರ

ಜಸ್ಟಿಸಸ್ ಆಫ್ ದಿ ಪೀಸ್ ಎನ್ನುವವರಿಗೆ ಸಂಬಳವಿಲ್ಲ ; ಜನಸೇವಾ ದೃಷ್ಟಿಯಿಂದಲೇ ಅವರು ಉಚಿತವಾಗಿ ಕೆಲಸಮಾಡಿ ತಮ್ಮ ಧರ್ಮವನ್ನು ಪಾಲಿಸುವರು. ಪೂರ್ವದ ಪಂಚಾಯಿತಿ ಪದ್ಧತಿಯಲ್ಲಿಯೂ, ಹೀಗೆಯೇ ಪಂಚಾಯಿತರು ಪ್ರತಿಫಲವಿಲ್ಲದೆ ವಿಚಾರಣೆಯನ್ನು ನಡೆಸುತ್ತಿದ್ದರು. ಈ ಪದ್ಧತಿಯನ್ನೇ ಅನುಸರಿಸುವುದು ಬೆಂಚ್ ಮ್ಯಾಜಿಸ್ಟ್ರೇಟರುಗಳ ಏರ್ಪಾಡು. ಪ್ರತಿಫಲಾಪೇಕ್ಷೆಯಿಲ್ಲದೆ ಸೇವಾತುರತೆಯಿಂದಲೇ ಅನೇಕ ವೇಳೆ ಕೆಲಸವು

ಸಮರ್ಪಕವಾಗಿ ನೆರವೇರುವುದು ; ಗೌರವವೇ ಪ್ರತಿಫಲವಾದಾಗ ಯಾರೂ ಅನ್ಯಾಯ ಮಾಡಿ ಗೌರವವನ್ನು ಕಳೆದುಕೊಳ್ಳುವುದಿಲ್ಲವೆಂಬುದೇ ಇದರ ಗುಟ್ಟು. ಪ್ರತಿಫಲವಿಲ್ಲದೆ ಯಾರಾದರೂ ಕೆಲಸ ಮಾಡಿಯಾರೇ ಎಂದು ಅಚ್ಚರಿಯಾಗಬಹುದು. ವಿಚಾರಿಸಿ ನೋಡಿದಾಗ ಅನೇಕಾನೇಕ ಸಂದರ್ಭಗಳಲ್ಲಿ ಪ್ರತಿಫಲವನ್ನು ಕೊಟ್ಟ ಕೂಡಲೇ ಕೆಲಸದ ಗೌರವವು ಹಾಳಾಗುವುದಲ್ಲದೆ ಕೆಲಸವು ಯೋಗ್ಯವಾದ ರೀತಿಯಲ್ಲಿ ನಡೆಯುವುದು ನಿಂತು ಹೋಗುವುದು. ಎಲ್ಲೆಡೆಗಳಿಗಿಂತಲೂ ನ್ಯಾಯ ಸ್ಥಾನಗಳಲ್ಲಿಯೇ ಪವಿತ್ರತೆಯು ನೆಲೆಸುವುದು ಆವಶ್ಯವಾದುದರಿಂದ ನ್ಯಾಯಾಧಿಪತಿಗಳು ಲಂಚ ರುಷುವತ್ತುಗಳಿಗೆ ಮನ ಸೋಲದಂತೆ ನೆರವೇರಿಸಲು ಭಾರಿ ಸಂಬಳಗಳನ್ನು ಅವರಿಗೆ ಕೊಡುವುದೂ, ಗೌರವದಾಸೆಯನ್ನು ಅವರ ಮನಸ್ಸಿನಲ್ಲಿ ಹೆಚ್ಚಿಸುವುದೂ ಉಪಾಯಗಳು.

ಶಾಸಕಾಂಗ

ಸ್ಥಾನ, ನ್ಯಾಯರಚನೆ

ಆಡಳಿತಕ್ಕೆ ಶಾಸಕಾಂಗವು ಆಧಾರಭೂತವಾದುದು. ದೇಶದ ಅಭ್ಯುದಯ ಮಾರ್ಗವನ್ನು ಚರ್ಚಿಸಿ, ಕಾರ್ಯಾಂಗಕ್ಕೆ ದಾರಿತೋರಿಸುವುದು ಇದೇ. ವಿಧಿಗಳನ್ನೂ ಕಾನೂನುಗಳನ್ನೂ ರಚಿಸಿ, ನ್ಯಾಯವನ್ನು ಸೂಚಿಸಿ, ನ್ಯಾಯಾಂಗಕ್ಕೆ ಸಾಧನಗಳನ್ನು ಒದಗಿಸುವುದೂ ಇದೇ. ಜನತೆಯ ಮನಸ್ಸನ್ನೂ, ದೇಶದ ಮನಸ್ಸನ್ನೂ ವ್ಯಕ್ತಗೊಳಿಸುವ ಅಂಗವೇ ಇದು. ಆದ್ದರಿಂದ ಪ್ರಜೆಗಳ ಕಷ್ಟನಷ್ಟಗಳನ್ನೂ ಇಷ್ಟಾರ್ಥಗಳನ್ನೂ ಸ್ಪಷ್ಟಗೊಳಿಸಿ, ಸರ್ವತೋಮುಖವಾದ ಅಭಿವೃದ್ಧಿಯು ದೇಶದಲ್ಲಿ ನೆಲೆಗೊಳ್ಳುವಂತೆ ಆಡಳಿತದ ರೀತಿಯನ್ನೂ ಗತಿಯನ್ನೂ ವಿಚಾರಮಾಡಿ ಸೂಚಿಸತಕ್ಕ ಘನವಾದ ಕರ್ತವ್ಯವು ಈ ಅಂಗಕ್ಕೆ ಸೇರಿರುತ್ತದೆ. ನಿರಂಕುಶ ಪ್ರಭುತ್ವದಲ್ಲಿ ದೊರೆಯೇ ಈ ಕರ್ತವ್ಯವನ್ನು ಕೈಕೊಳ್ಳುತ್ತಾನೆ. ರಾಷ್ಟ್ರಕ್ಕೆ ಆಧಾರಭೂತವಾದ ಈ ಕರ್ತವ್ಯವಾಗಲಿ ಅಧಿಕಾರವಾಗಲಿ ಸಾಂಕುಶ ಪ್ರಭುತ್ವದಲ್ಲಿ ದೊರೆಗೆ ಇರುವುದಿಲ್ಲ. ಜನಸ್ವಾಮ್ಯದಲ್ಲಂತೂ ಪ್ರಜಾಕೋಟಿಯೇ ತನ್ನ ಪ್ರತಿನಿಧಿಗಳ ಮೂಲಕ ಈ ಕರ್ತವ್ಯವನ್ನು ಹೊತ್ತು, ಈ ಅಧಿಕಾರವನ್ನು



ಅಠಾರ ಕಛೇರಿಗಳು

ನಿರ್ವಹಿಸುತ್ತದೆ. ಮೈಸೂರಿನ ರಾಷ್ಟ್ರಕ್ರಮಕ್ಕೆ ಸಾಂಕುಶ ಪ್ರಭುತ್ವವೆಂದು ಹೆಸರಾಗಿರುವುದರಿಂದ ಮಹಾರಾಜರವರಿಗೆ ನ್ಯಾಯರಚನೆಯ ಅಧಿಕಾರವಿಲ್ಲವೆಂದು ಹೇಳಲಾಗುವುದಿಲ್ಲ. ಪ್ರಜಾಧಿಕಾರವೇ ಮಹಾರಾಜರಿಂದ ದತ್ತವಾಗಿರುವಾಗ ಮಹಾರಾಜರಿಗೆ ನ್ಯಾಯರಚನೆಯ ಅಧಿಕಾರವುಂಟು. ಮೈಸೂರಿನ ಕ್ರಮದಲ್ಲಿ ಶಾಸನರಚನೆಯು ಮಹಾರಾಜರವರಿಂದಲೂ, ಪ್ರಜೆಗಳಿಂದಲೂ, ಇಬ್ಬರಿಂದಲೂ ನಡೆಯುತ್ತದೆ. ಆದರೆ ಅಧಿಕಾರವೆಲ್ಲವೂ ಮಹಾರಾಜರದೇ.

ಪ್ರಾತಿನಿಧ್ಯದ ರೀತಿ

ಜನಸ್ವಾಮ್ಯವನ್ನು ಅವಲಂಬಿಸುವ ರಾಷ್ಟ್ರಗಳಲ್ಲಿ ಪ್ರಜೆಯೇ ಪ್ರಭುವಾಗಬೇಕೆಂಬ ಮಂತ್ರವು ಆಚರಣೆಯಲ್ಲಿ ಬರುವುದು ಹೇಗೆ? ಆಡಳಿತದ ತಳಹದಿಯಾದ ನ್ಯಾಯರಚನೆಯನ್ನು ಪ್ರಜೆಗಳು ವಹಿಸುವುದರಿಂದ ಕೋಟ್ಯನುಕೋಟಿ ಪ್ರಜೆಗಳು ಆಗಾಗ್ಗೆ ಒಟ್ಟು ಸೇರಿ ವಿಚಾರಮಾಡುವುದು ಸಾಧ್ಯವೇ? ಇಲ್ಲ. ಆದುದರಿಂದ ಪ್ರಜೆಗಳು ತಮ್ಮ ಮನಸ್ಸನ್ನು ಪ್ರಕಾಶವಾಗಿ ತಿಳಿಸುವಂತೆ ಪ್ರತಿನಿಧಿಗಳನ್ನು ಚುನಾಯಿಸುವರು. ಪ್ರತಿನಿಧಿಗಳು ಸಭೆ ಸೇರಿ, ಸಭೆಯಲ್ಲಿ ಚರ್ಚೆ ವಿಚಾರಗಳನ್ನು ನಡೆಸಿ, ಬಹುಮತಾನುಸಾರವಾಗಿ ತೀರ್ಮಾನ ಮಾಡಿಕೊಂಡು, ಅದರಂತೆ ಆಡಳಿತವು ನಡೆಯತಕ್ಕುದೆಂದು ಕಾರ್ಯಾಂಗದವರನ್ನು ಒತ್ತಾಯಪಡಿಸುವರು. ಪ್ರತಿನಿಧಿಗಳ ಚುನಾವಣೆ, ಸಭೆಗಳ ಕಾರ್ಯಕ್ರಮ, ಬಹುಮತದ ಅನುಸರಣೆ, ತದನುಸಾರ ಅಧಿಕಾರ ಪ್ರಾಪ್ತಿಗಳು ಅಂತಹ ರಾಷ್ಟ್ರಗಳಲ್ಲಿ ವಿಪುಲವಾಗಿ ಬೆಳೆದು ವಿಸ್ತಾರವಾದ ಶಾಸ್ತ್ರವಾಗಿ ಕೊನೆಗಂಡಿವೆ. ಇಂಗ್ಲೆಂಡಿನಲ್ಲಿ ಪಾರ್ಲಿಮೆಂಟ್, ಫ್ರಾನ್ಸಿನಲ್ಲಿ ಪಾರ್ಲಿಮೆಂಟ್, ಸಂಯುಕ್ತ ಸಂಸ್ಥಾನದಲ್ಲಿ ಕಾಂಗ್ರೆಸ್, ಆಸ್ಟ್ರೇಲಿಯ, ಕೆನಡ, ದಕ್ಷಿಣ ಆಫ್ರಿಕ ಮುಂತಾದ ಡುಮಿನಿಯನ್ನುಗಳಲ್ಲಿ ಪಾರ್ಲಿಮೆಂಟುಗಳು ಎರಡು ಸಭೆಗಳಾಗಿ ಈ ರೀತಿಯಲ್ಲಿಯೇ ವರ್ತಿಸುತ್ತವೆ. ಅಲ್ಬೇನಿಯ ಮುಂತಾದ ಕೆಲವು ರಾಷ್ಟ್ರಗಳಲ್ಲಿ ಮಾತ್ರ ಒಂದೇ ಸಭೆಯುಂಟು. ಪರಿಸ್ಥಿತಿಗೆ ತಕ್ಕಂತೆ ಶಾಸಕಾಂಗವು ಒಂದೇ ಸಭೆಯಾಗಿಯೋ, ಎರಡು ಸಭೆಗಳಾಗಿಯೋ ಇರುತ್ತದೆ.

ಮೈಸೂರಿನ ಸಭೆಗಳು

ಮೈಸೂರಿನಲ್ಲಿ ಎರಡು ಸಭೆಗಳುಂಟು--(೧) ಪ್ರಜಾಪ್ರತಿನಿಧಿ ಸಭೆ ಅಥವಾ ರೆಪ್ರೆಸೆಂಟೆಟಿವ್ ಅಸೆಂಬ್ಲಿ ಮತ್ತು (೨) ನ್ಯಾಯ ವಿಧಾಯಕ ಸಭೆ ಅಥವಾ ಲೆಜಿಸ್ಲೆಟಿವ್ ಕೌನ್ಸಿಲ್. ಇವೆರಡರಲ್ಲಿ ನ್ಯಾಯವಿಧಾಯಕ ಸಭೆಯೇ ಮುಖ್ಯವಾದುದು: ನ್ಯಾಯರಚನೆಯು ಆಗುವುದು ಅಲ್ಲಿಯೇ. ಪ್ರತಿನಿಧಿ ಸಭೆಯಲ್ಲಿ ಪ್ರಜೆಗಳ ಮನೋಗತಿಯೂ, ಹಿತಾಹಿತಗಳೂ ವ್ಯಕ್ತವಾಗುತ್ತವೆ. ಪ್ರತಿನಿಧಿ ಸಭೆಯ ಇಷ್ಟಕ್ಕೆ ಅನುಸಾರವಾಗಿ ನ್ಯಾಯ ನಿರ್ಮಾಣವು ನ್ಯಾಯ ವಿಧಾಯಕ ಸಭೆಯಲ್ಲಿಯೇ ನಡೆಯುತ್ತದೆ. ಅಸೆಂಬ್ಲಿಯು ಪ್ರಜೆಗಳ ಇಷ್ಟಗಳನ್ನೂ ಕಷ್ಟಗಳನ್ನೂ ವಿಶದಪಡಿಸುವ ಸಭೆ; ಕೌನ್ಸಿಲ್ಲು ಪರಿಣತರಿಂದ ಕೂಡಿ, ವಿಧಿಗಳನ್ನು ವಿಧಿಸಿ, ನೀತಿಯನ್ನು ನಿರ್ದೇಶ ಮಾಡುವ ಸಭೆ. ಆದ್ದರಿಂದ ನ್ಯಾಯವಿಧಾಯಕ ಸಭೆಯೇ ನಿಜವಾದ ನ್ಯಾಯಾಂಗ.

ಅರ್ಹತೆಯ ಸಾಮಾನ್ಯ ವಿಚಾರ

ದೇಶದ ಆಡಳಿತದಲ್ಲಿ ಭಾಗಿಯಾಗತಕ್ಕವನು ಯೋಗ್ಯನಾದ ಪ್ರಜೆಯಾಗಿರಬೇಕಷ್ಟೆ! ಮೈಸೂರಿನ ನಿವಾಸಿಯಾಗದೆ ಮೈಸೂರಿನ ಸುಖ ದುಃಖಗಳಲ್ಲಿ ಭಾಗಿಯಾಗದೆ ಇರತಕ್ಕವನು ಅರ್ಹನಾದಾನೆ? ಆದ್ದರಿಂದ ಸಭಿಕನಾಗುವುದಕ್ಕೂ, ಸಭಿಕರನ್ನು ಚುನಾಯಿಸುವುದಕ್ಕೂ ಸ್ಥಿರವಾಗಿ ಮೈಸೂರಿನ ನಿವಾಸಿಯಾಗಿರತಕ್ಕದ್ದು ಅತ್ಯವಶ್ಯಕ. ಹುಚ್ಚರು, ಅಪರಾಧಿಗಳು ಸಭಿಕರಾದರೆ ಹೇಗೆ? ಆದ್ದರಿಂದ ನಿಬಂಧನೆಗಳಲ್ಲಿ ಪ್ರತಿನಿಧಿಸಭೆ, ನ್ಯಾಯವಿಧಾಯಕ ಸಭೆ, ಜಿಲ್ಲಾ ಬೋರ್ಡು, ಪೌರ ಸಭೆ, ಗ್ರಾಮ ಪಂಚಾಯಿತ ಸಭೆಗಳೆಲ್ಲಕ್ಕೂ ಸಂಬಂಧ ಪಡುವಂತೆ ಅಯೋಗ್ಯತೆಯ ವಿವರವುಂಟು. ನಿಬಂಧನೆಗಳ ಪ್ರಕಾರ ಅನರ್ಹರು ಯಾರೆಂದರೆ:—

(೧) ೨೧ ವರ್ಷ ವಯಸ್ಸಿಗೆ ಕಡಿಮೆಯಾದವರು
(೨) ಬುದ್ಧಿವಿಕಲರು
(೩) ದಿವಾಳಿಯಾದವರು
(೪) ಕ್ರಿಮಿನಲ್ ಶಿಕ್ಷೆಗೆ ಗುರಿಯಾದವರು
(೫) ಸರ್ಕಾರಿ ನೌಕರಿಯಿಂದ ಭ್ರಷ್ಟರಾದವರು.

ಇವರನ್ನು ಬಿಟ್ಟು ಉಳಿದವರೆಲ್ಲರೂ ಯೋಗ್ಯರೇ ಸರಿ; ದೇಶದಲ್ಲಿ ಸ್ಥಿರವಾಗಿ ನೆಲೆಸಿ ಮನೆಮಾರುಗಳನ್ನು ಪಡೆದು ದೇಶಜೀವನದಲ್ಲಿ ಭಾಗಿಗಳಾಗಿರುವುದಲ್ಲದೆ, ತಕ್ಕಷ್ಟು ಪ್ರಜ್ಞಾವಂತರಾಗಿರಬೇಕಾದುದೂ ಅವಶ್ಯಕ. ಆದ್ದರಿಂದ ಶಾಸಕಾಂಗದಲ್ಲಿ ಎಣಿಕೆಯಾಗುವ ಪ್ರತಿ ಸಂಸ್ಥೆಯಲ್ಲಿಯೂ ತಕ್ಕಂತೆ ಯೋಗ್ಯತಾ ಪರೀಕ್ಷೆಯು ನಡೆಯಬೇಕಾಗುವುದು.

ಪ್ರತಿನಿಧಿ ಸಭೆ

ಪೂರ್ವ ವೃತ್ತಾಂತ

[೧೮೮೧ರಲ್ಲಿ ಮೊದಲಾದ ಪ್ರಜಾಪ್ರತಿನಿಧಿ ಸಭೆಯು ಕಾಲಕ್ರಮೇಣ ಅಭಿವೃದ್ಧಿಯನ್ನು ಪಡೆಯಿತು. ಚುನಾವಣೆಯ ಪದ್ಧತಿ ವರ್ಷಕ್ಕೆರಡು ಬಾರಿ ಸೇರುವುದು, ಸರ್ಕಾರದ ವರದಿಯನ್ನು ಕೇಳಿ ಪ್ರಶ್ನೆಗಳನ್ನು ಹಾಕುವುದು, ನ್ಯಾಯ ರಚನೆಯಲ್ಲಿ ಹಿತಾಹಿತಗಳನ್ನು ವಿಚಾರಿಸುವುದು—ಮುಂತಾದ ಪ್ರಾತಿನಿಧ್ಯದ ಲಕ್ಷಣಗಳು ತೋರಿಕೊಂಡವು. ಮೊದಮೊದಲು ಪ್ರಜಾಮುಖ್ಯರೆನಿಸಿ ಸಭೆಯಲ್ಲಿ ಕುಳಿತವರಿಗೆ ತಮ್ಮ ಕರ್ತವ್ಯಗಳಾಗಲಿ, ಅಧಿಕಾರವಾಗಲಿ ತಿಳಿದಿರಲಿಲ್ಲ. ಸ್ವಲ್ಪ ಕಾಲದಲ್ಲಿಯೇ ರಾಜಕೀಯವಾದ ಆ ಪ್ರಜ್ಞೆಯು ಹುಟ್ಟಿ ದೃಢವಾಯಿತು. ಪ್ರತಿನಿಧಿಗಳಾಗಿ ನಿಲ್ಲಲು ಸ್ಪರ್ಧೆಯು ಹುಟ್ಟಿದಂತೆ ಸಭೆಯ ಅಧಿಕಾರವು ವೃದ್ಧಿಯಾಗಬೇಕೆಂಬ ಇಷ್ಟವೂ ತೋರಿಕೊಂಡಿತು. ಈ ಸೂಚನೆಗಳನ್ನು ಆದರದಿಂದ ಕಾಣುತ್ತಿದ್ದ ಮಹಾರಾಜರು ೧೯೨೨ರಲ್ಲಿ ಪ್ರತಿನಿಧಿ ಸಭೆಯ ಸ್ಥಾನವನ್ನೂ, ಅಧಿಕಾರ ಕರ್ತವ್ಯಗಳನ್ನೂ ವಿಚಾರಮಾಡಿ ಭದ್ರಗೊಳಿಸಲು ಸೀಲ್ ಸಭೆಯೆಂಬ ವಿಚಾರಣಾ ಸಭೆಯನ್ನು ನೇಮಿಸಿದರು. ೧೯೨೩ರಲ್ಲಿ ಆ ಸಭೆಯ ವರದಿಯನ್ನನುಸರಿಸಿ ಮಹಾರಾಜರು ರಾಜಕೀಯ ಸುಧಾರಣೆಗಳನ್ನು ಅನುಗ್ರಹರೂಪವಾಗಿ ಪ್ರಕಟಿಸಿದರು. ಅಂದಿನಿಂದ ಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳೆರಡೂ ಸೀಲ್ ಸಭೆಯ ವರದಿ ಮತ್ತು ಅದರ ಸಂಬಂಧವಾಗಿ ಪ್ರಕಟವಾದ ನಿಬಂಧನೆಗಳ ಪ್ರಕಾರ ನಡೆಯುತ್ತವೆ.]

ಸಭೆಯ ಸಾಮಾನ್ಯ ಆಚಾರ

ಪ್ರತಿನಿಧಿ ಸಭೆಯು ಸಾಧಾರಣವಾಗಿ ವರ್ಷಕ್ಕೆ ಎರಡು ವೇಳೆ—ವರ್ಧಂತ್ಯುತ್ಸವದಲ್ಲಿಯೂ (ಬಡ್ಜೆಟ್ ಸೆಷನ್) ನವರಾತ್ರಿ ಮಹೋತ್ಸವದಲ್ಲಿಯೂ ರಾಜಧಾನಿಯಾದ ಮೈಸೂರಿನಲ್ಲಿ ನೆರೆಯುವುದು. ಬಡ್ಜೆಟ್ ಸೆಷನ್ನಿನಲ್ಲಿ ಸರ್ಕಾರದವರು ಹಿಂದಿನ ವರ್ಷದ ಆಯವ್ಯಯದ ಲೆಕ್ಕವನ್ನು ಕೊಟ್ಟು, ಮುಂದಿನ ವರ್ಷದ ಆಯವ್ಯಯದ ಅಂದಾಜನ್ನು ಕಟ್ಟಿ, ತಾವು ಕೈಕೊಳ್ಳುವ ವೆಚ್ಚವನ್ನೂ, ಎತ್ತಬೇಕೆನ್ನುವ ಕಂದಾಯ ತೆರಿಗೆಗಳನ್ನೂ ವಿವರಿಸಿ ಸಭೆಯ ಮುಂದಿಡುವರು. ನವರಾತ್ರಿ ಕಾಲದಲ್ಲಿ ಕಳೆದ ವರ್ಷದ ಆಡಳಿತದ ವರದಿಯನ್ನು ದಿವಾನರಿಂದ ಕೇಳಿ ನ್ಯಾಯ ಸೂಚನೆಯನ್ನು ಸಭೆಯವರು ಕೈಕೊಳ್ಳುವರು. ಈ ಸಭೆಗೆ ದಿವಾನರೇ ಅಧ್ಯಕ್ಷರು.

ಉಳಿದ ಮಂತ್ರಿ (ಕೌನ್ಸಿಲ್ಲರು) ಗಳು ಉಪಾಧ್ಯಕ್ಷರು. ಒಟ್ಟು ಸಭೆಯಲ್ಲಿ ೨೫೦ರವರೆಗೆ ಸಭಿಕರಿರಬಹುದು ; ಯುಕ್ತವೆಂದು ತೋರಿದಾಗ ಸರ್ಕಾರದವರು ೨೭೫ರವರೆಗೂ ಸಂಖ್ಯೆಯನ್ನು ಹೆಚ್ಚಿಸಬಹುದು. ಸಾಧಾರಣವಾಗಿ ಅಸ್ಸೆಂಬ್ಲಿಗೆ ಜೀವಿತಕಾಲ ೩ ವರ್ಷ ; ಸರ್ಕಾರದವರಿಗೆ ಸೂಕ್ತವೆಂದು ತೋರಿದಾಗ ಇನ್ನೂ ಒಂದು ವರ್ಷ ಕಾಲ ಹೆಚ್ಚಿಸಬಹುದು. ಸಭೆಯನ್ನು ಕರೆಸುವುದೂ, ಬರಖಾಸ್ತು ಮಾಡುವುದೂ, ಮುಕ್ತಾಯ ಮಾಡುವುದೂ ಅಧ್ಯಕ್ಷರಾದ ದಿವಾನರಿಗೆ ಸೇರಿದ್ದು. ಸಾಧಾರಣವಾಗಿ ಎರಡು ಸಲವಲ್ಲದೆ ಅವಶ್ಯವೆಂದು ತೋರಿದಾಗಲೂ ದಿವಾನರು ಸಭೆಯನ್ನು ಕರೆಸಬಹುದು ; ಅಂತಹುದು ಅಸಾಧಾರಣ ಅಧಿವೇಶನವೆನ್ನಿಸುತ್ತದೆ. ಸಭೆಯೆಂಬ ಹೆಸರು ಸಲ್ಲಬೇಕಾದರೆ ಅಧ್ಯಕ್ಷರೊಂದಿಗೆ ಕನಿಷ್ಠಪಕ್ಷ ೭೦ ಮಂದಿ ಸಭಿಕರಾದರೂ ನೆರೆದಿರಬೇಕು. ಸಭೆಯ ಕಾರ್ಯಕ್ರಮವನ್ನು ನಿರ್ಣಯಿಸಲು ಸಭೆಯವರೇ ತಕ್ಕ ನಿಬಂಧನೆಗಳನ್ನು ಮಾಡಿಕೊಳ್ಳುವರು ; ಆದರೆ ಸರ್ಕಾರದವರೇ ವಿಶೇಷವಾಗಿ ಕಾರ್ಯ ವಿವರವನ್ನು ಸಿದ್ಧಪಡಿಸಿ ಕೆಲಸವನ್ನು ನಡೆಸುತ್ತಾರೆ.

ಸಭೆಯಲ್ಲಿ ಸರ್ಕಾರದ ಪಕ್ಷ ಮತ್ತು ಪ್ರಜಾಪಕ್ಷ ಎಂಬ ಎರಡುಂಟು. ಸರ್ಕಾರದ ಪಕ್ಷವೆಂದರೆ ಇಲಾಖೆಗಳ ಅಧ್ಯಕ್ಷರು ಮತ್ತು ಸಭಿಕರಾಗಿ ನಿಯಮಿತರಾದ ಅಧಿಕಾರಿಗಳು. ಇವರೇ ಅಧಿಕಾರಿ ವರ್ಗ ; ಪ್ರಜಾವರ್ಗದಲ್ಲಿ ಎರಡು ಬಗೆಗಳುಂಟು—ಚುನಾಯಿತರು ಮತ್ತು ನಿಯಮಿತರು. ಮೊದಲು ಚುನಾವಣೆಯೇ ಇರಲಿಲ್ಲ ; ನವೀನವಾದುದರಿಂದ ಪ್ರಜೆಗಳಿಗೆ ಚುನಾವಣೆಯ ಧರ್ಮವು ತಿಳಿದಿಲ್ಲವೆಂದು ಸರ್ಕಾರದವರೇ ಯೋಗ್ಯರಾದ ಪ್ರಜೆಗಳನ್ನು ಆರಿಸಿ ಕರೆಯಿಸುತ್ತಿದ್ದರು. ಈಗಲೂ ಕೆಲವು ಸಂದರ್ಭಗಳಲ್ಲಿ ಸರ್ಕಾರದವರೇ ಪ್ರಜಾಮುಖ್ಯರನ್ನು ಆರಿಸಿ ಸಭಿಕರೆಂದು ಗೊತ್ತುಮಾಡುತ್ತಾರೆ.

ಚುನಾವಣೆಯ ರೀತಿ

ಪ್ರತಿನಿಧಿಸಭೆಗೆ ಪ್ರತಿನಿಧಿಗಳಾಗತಕ್ಕವರು ಯಾರು ? ಪ್ರಜೆಗಳ ಮನಸ್ಸನ್ನು ತಿಳಿದು ಅದನ್ನು ವ್ಯಕ್ತಪಡಿಸಬಲ್ಲವರು ; ಪ್ರಜೆಗೆ ಪ್ರೀತಿಪಾತ್ರರಾಗಿದ್ದು ದೇಶಭಕ್ತಿಯಿಂದಲೂ, ವಿಚಾರ ಪರತೆಯಿಂದಲೂ ನಿರ್ಭೀತರಾಗಿ ಮಾತನಾಡಬಲ್ಲವರು. ಇವರು ಯಾರೆಂಬುದನ್ನು ತಿಳಿಯಲು ಚುನಾವಣೆ

ಯ ಏರ್ಪಾಟು ಬೆಳೆದಿದೆ. ದೇಶದ ಎಲ್ಲ ಭಾಗಗಳಿಗೂ ಮತ್ತು ಪ್ರಜೆಯ ಎಲ್ಲ ಪಂಗಡಗಳಿಗೂ ಪ್ರಾತಿನಿಧ್ಯವಿರುವಂತೆ ಚುನಾವಣೆಯು ನಡೆಯುವುದು ಹೇಗೆ? ದೇಶದಲ್ಲಿ ಅಲ್ಲಲ್ಲಿ ಪಟ್ಟಣಗಳುಂಟು; ಎಲ್ಲೆಲ್ಲಿಯೂ ಗ್ರಾಮಗಳುಂಟು. ಪ್ರಜೆಯಲ್ಲಿ ಜಾತಿ ಪಂಗಡಗಳುಂಟು, ಮತ್ತು ದೇಶಾಭ್ಯುದಯದ ಅಥವಾ ಜನಜೀವನದ ಒಂದು ಭಾಗವನ್ನೇ ವಿಶೇಷವಾಗಿ ಕಟ್ಟಿಕೊಂಡ ಸಂಸ್ಥೆಗಳೂ ಉಂಟು. ಇವುಗಳನ್ನು ಅನುಸರಿಸಿ ಚುನಾವಣೆಗಾಗಿ ಕ್ಷೇತ್ರಗಳು ಅಥವಾ ರಂಗಗಳು ಈ ರೀತಿಯಾಗಿ ವಿಂಗಡವಾಗಿವೆ.

೧. ಸಾಧಾರಣ ಕ್ಷೇತ್ರಗಳು :—ಪ್ರತಿ ತಾಲ್ಲೂಕು, ಸ್ವತಂತ್ರವಾದ ಸಬ್‌ತಾಲ್ಲೂಕು, ಮತ್ತು ಕೋಲಾರ ಚಿನ್ನದ ಗಣಿಗಳ ಪ್ರದೇಶಗಳು ಗ್ರಾಮ ವಿಭಾಗದಲ್ಲಿ ಸೇರಿ ಅವುಗಳಿಂದ ೧೬೩ ಪ್ರತಿನಿಧಿಗಳು ಸಿದ್ಧರಾಗುತ್ತಾರೆ: ಪ್ರತಿ ಸಿಟಿ, ಮತ್ತು ೫೦೦೦ ಪ್ರಜಾ ಸಂಖ್ಯೆಯಿದ್ದು ಮುನಿಸಿಪಾಲಿಟಿಯೆನಿಸಿದ ಪಟ್ಟಣಗಳು ನಗರ ವಿಭಾಗವಾಗಿ ೩೭ ಪ್ರತಿನಿಧಿಗಳು ಚುನಾಯಿತರಾಗುತ್ತಾರೆ.

೨. ವಿಶೇಷ ಕ್ಷೇತ್ರಗಳು :—ವಿಶ್ವವಿದ್ಯಾನಿಲಯ, ವಕೀಲರ ಸಂಘ, ತೋಟಗಾರರಾದ ಐರೋಪ್ಯರ ಸಂಘ, ತೋಟಗಾರರಾದ ಭಾರತೀಯರ ಸಂಘ, ಚಿನ್ನದ ಗಣಿಗಳ ಯಜಮಾನರು, ವಾಣಿಜ್ಯ ಸಂಘಗಳು, ಇನಾಂದಾರರ ಸಂಘ; ಮತ್ತು ಗಿರಣಿ ಕೂಲಿಗಾರರು, ಗಣಿಗಳ ಕೂಲಿಗಾರರು, ಇತರ ಕೈಗಾರಿಕೆಗಳಲ್ಲಿ ನಿರತರು ಸರ್ಕಾರದವರಿಗೆ ಯೋಗ್ಯವಾಗಿ ಕಂಡುಬಂದಂತೆ ಈ ಭಾಗದಲ್ಲಿ ಎಣಿಕೆಯಾಗುತ್ತಾರೆ. ಒಟ್ಟು ಈ ಕ್ಷೇತ್ರಗಳಿಂದ ೧೫ ಪ್ರತಿನಿಧಿಗಳು.

೩. ಅಲ್ಪಸಂಖ್ಯಾ ವಿಭಾಗ :—ಸಾರ್ವತ್ರಿಕವಾಗಿ ಚುನಾವಣೆಯು ನಡೆಯುವಾಗ ಯಾವುದಾದರೂ ಜಾತಿಯವರೋ, ಕೋಮಿನವರೋ ಅಲ್ಪಸಂಖ್ಯಾಕರಾಗಿದ್ದು ಪ್ರಾತಿನಿಧ್ಯವನ್ನು ಪಡೆಯಲಾರರೆಂಬ ಸಂಭವ ತೋರಿದಾಗ ಅಂತಹವರಿಗಾಗಿ ಪ್ರತ್ಯೇಕ ಕ್ಷೇತ್ರವೊಂದು ನಿರ್ಮಾಣವಾಗುವುದು. ಅಂತಹವರು ಸಂಘವನ್ನೇರ್ಪಡಿಸಿಕೊಂಡಿದ್ದು ಸಂಘವು ಸರ್ಕಾರದ ಗೌರವಕ್ಕೆ ಪಾತ್ರವಾಗಿದ್ದರೆ ಆ ಸಂಘದ ಮೂಲಕ ತಮ್ಮ ಪ್ರತಿನಿಧಿಯನ್ನು ಗೊತ್ತು ಮಾಡುವರು; ಇಲ್ಲದಾಗ ಸರ್ಕಾರದವರೇ ಅಂತಹವರ ಪ್ರತಿನಿಧಿ

ಗಳನ್ನು ನಾಮಕರಣದ ಮೂಲಕ ನಿಶ್ಚಯಿಸುವರು. ಈ ಬಗೆಯಾಗಿ ಸಭಿಕರಾಗುವವರು ೩೫ ಮಂದಿ.

ಈ ಕ್ಷೇತ್ರಗಳಲ್ಲಿ ಮೂರು ವರ್ಷಕ್ಕೊಮ್ಮೆ ಸಾರ್ವತ್ರಿಕವಾದ ಚುನಾವಣೆಯಿಂದಲೂ ನಾಮಕರಣದಿಂದಲೂ ಪ್ರತಿನಿಧಿಗಳು ಇಂತಹವರೆಂದು ನಿಶ್ಚಯವಾಗುವುದು. ಇದು ಸಾರ್ವತ್ರಿಕ ಚುನಾವಣೆ ; ಯಾರಾದರೂ ಚುನಾಯಿತ ಸಭಿಕರು ಕಾಲವಾದರೆ ಅಥವಾ ಕಾರಣಾಂತರದಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರೆ ಆ ಒಂದು ಸ್ಥಾನಕ್ಕಾಗಿ ಕೂಡಲೆ ಚುನಾವಣೆಯು ನಡೆಯುವುದು. ಅದು ತಾತ್ಕಾಲಿಕ ಚುನಾವಣೆ ಯೆನಿಸುವುದು.

ಯೋಗ್ಯತಾ ಪರೀಕ್ಷೆ

ಸಭಿಕರಾಗುವುದಕ್ಕೂ, ಚುನಾವಣೆಗಳಲ್ಲಿ ವೋಟನ್ನು ಕೊಡುವುದಕ್ಕೂ ನಿಬಂಧನೆಯ ಪ್ರಕಾರ ಯೋಗ್ಯತಾ ಪರೀಕ್ಷೆಯು ನಡೆಯುತ್ತದೆ.

[ಅದರಂತೆ ವೋಟುದಾರನೆನ್ನಿಸುವುದಕ್ಕೂ ವರಣಾರ್ಥಿಯಾಗುವ ದಕ್ಕೂ

(೧) ಗ್ರಾಮ ವಿಭಾಗದಲ್ಲಿ ಕನಿಷ್ಠಪಕ್ಷ ವಾರ್ಷಿಕ ನೆಲಗಂದಾಯ ೨೫ ರೂ. ಕೊಡತಕ್ಕವನಾಗಿರಬೇಕು, ಅಥವಾ ೨೫ ರೂ. ಕಂದಾಯವನ್ನು ಇನಾಂದಾರನಿಗೆ ಕೊಡುವ ಕದೀಮ ರೈತನಾಗಿರಬೇಕು, ಅಥವಾ ಕನಿಷ್ಠಪಕ್ಷ ೫ ರೂ. ಗಳಷ್ಟು ಮೊಹತರ್ಫಾ ಅಥವಾ ಮುನಿಸಿಪಲ್ ತೆರಿಗೆಯನ್ನು ಕೊಡತಕ್ಕವನಾಗಿರಬೇಕು ಅಥವಾ ಕನಿಷ್ಠಪಕ್ಷ ೧೨೫ ರೂ.ಗಳ ಬೇರೀಜುಳ್ಳ ಇನಾಂದಾರನಾಗಿ ಸ್ಥಳ ನಿವಾಸಿಯಾಗಿರಬೇಕು, ಅಥವಾ ವಿಶ್ವ ವಿದ್ಯಾನಿಲಯದ ಬಿ.ಎ. ಪದವಿಯನ್ನು ಪಡೆದು ಅಲ್ಲಿಯ ನಿವಾಸಿಯಾಗಿರಬೇಕು, ಅಥವಾ ಸೈನ್ಯಾಧಿಕಾರದಿಂದ ನಿವೃತ್ತನಾಗಿ ಪಿಂಚನ್ದಾರನಾಗಿ ಅಲ್ಲಿಯ ನಿವಾಸಿಯಾಗಿರಬೇಕು, ಅಥವಾ ವರಮಾನದ ತೆರಿಗೆಯನ್ನು ಕೊಡತಕ್ಕವನಾಗಿರಬೇಕು ; ಮತ್ತು

(೨) ನಗರ ವಿಭಾಗದಲ್ಲಿ ಮುನಿಸಿಪಲ್ ಚುನಾವಣೆಗಳಲ್ಲಿ ವೋಟನ್ನು ಕೊಡಲು ಯೋಗ್ಯನೆನಿಸಿದ್ದರೆ, ಪ್ರತಿನಿಧಿ ಸಭೆಯ ಚುನಾವಣೆಯಲ್ಲಿಯೂ ಅರ್ಹನೆನಿಸುವನು. ಅಂದರೆ ಆರು ತಿಂಗಳ ವಾಸಮಾಡಿರುವವನೋ ಮತ್ತು ವಿದ್ಯಾವಂತನೋ ಅಥವಾ ಗೊತ್ತಾದ ನಗರದ ತೆರಿಗೆಯನ್ನು ಕೊಡುವವನೋ ಆಗಿದ್ದರೆ ಸಾಕು.

ನಗರ ನಿವಾಸಿಗಳಾದವರು ವೋಟುಗಳನ್ನು ಗ್ರಾಮ ವಿಭಾಗದಲ್ಲಿಯೂ, ಗ್ರಾಮಸ್ಥರು ನಗರಗಳಲ್ಲಿಯೂ ಕೊಡಲಾಗುವುದಿಲ್ಲ ; ತನ್ನ ಸ್ಥಳದಲ್ಲಿಯೇ ವೋಟುದಾರನು ವೋಟನ್ನು ಕೊಡಬೇಕು. ಸಭಿಕನಾಗಲು ಇಷ್ಟವುಳ್ಳವನು ತನ್ನ ಇಷ್ಟವನ್ನು ಚುನಾವಣೆಗೆ ಮೊದಲೇ ಎಲ್ಲರಿಗೂ ತಿಳಿಸಬೇಕು. ತರುವಾಯ ಯಾವ ಸ್ಥಳಕ್ಕಾದರೂ ಉಮೇದುವಾರರೆಷ್ಟು ಮಂದಿಯೆಂಬುದನ್ನು ಸರ್ಕಾರದವರೇ ಪ್ರಕಟಿಸುತ್ತಾರೆ. ವೋಟುಗಳ ಸಂಗ್ರಹ ಮತ್ತು ಪರೀಕ್ಷೆಗಳನ್ನು ಸರ್ಕಾರದ ಅಧಿಕಾರಿಗಳೇ ಗೊತ್ತಾದ ಸ್ಥಳಗಳಲ್ಲಿ ಒಂದೇ ದಿನ ಸಾರ್ವತ್ರಿಕವಾಗಿ ನಡೆಸಿ ವೋಟುಗಳನ್ನು ಎಣಿಸಿ ಜಯಶಾಲಿಗಳಾರೆಂಬುದನ್ನು ಕ್ರಮದಂತೆ ನಿರ್ಣಯಿಸುತ್ತಾರೆ. ವೋಟನ್ನು ಕೊಡುವ ಕ್ರಮದಲ್ಲಿ ವೋಟುದಾರನು ತನ್ನ ವೋಟನ್ನು ಗೋಪ್ಯವಾಗಿ ಕೊಡುವ ಏರ್ಪಾಟು ಮುಖ್ಯವಾದುದು. ಚುನಾವಣೆಯಲ್ಲಿ ಅಕ್ರಮವಾವುದಾದರೂ ನಡೆದರೆ ಅದನ್ನು ನ್ಯಾಯಸ್ಥಾನದಲ್ಲಿ ವಿಚಾರಿಸಲು ಆಸ್ಪದವಿರುವುದು.]

ಒಟ್ಟಿನ ಮೇಲೆ ಮೈಸೂರು ಸಂಸ್ಥಾನದಲ್ಲಿ ೨೫,೦೦೦ ಪ್ರಜೆಗೆ ಒಬ್ಬನಂತೆ ಪ್ರತಿನಿಧಿಯಿರುತ್ತಾನೆ.

ಅಧಿಕಾರ: ನ್ಯಾಯರಚನೆಯಲ್ಲಿ

೧೯೨೩ರಲ್ಲಿ ನಡೆದ ಸುಧಾರಣೆಯ ಮೇರೆಗೆ ಪ್ರತಿನಿಧಿ ಸಭೆಗೆ ರಾಜ್ಯಾಂಗವ್ಯವಸ್ಥೆಯಲ್ಲಿ ಶಾಸನ ಬದ್ಧವಾದ ಸ್ಥಾನವು ಸಂದಿತು. ಇದರಂತೆ ಮುಖ್ಯವಾದ ಎಲ್ಲ ನ್ಯಾಯ ನಿಬಂಧನೆಗಳ ರಚನೆಯಲ್ಲಿಯೂ, ಸರ್ಕಾರದವರು ಪ್ರತಿನಿಧಿ ಸಭೆಯ ಅಭಿಮತವನ್ನು ತಿಳಿಯಲೇಬೇಕು. ಅಸಾಧಾರಣವೆನ್ನಿಸಿದಾಗ ಮಾತ್ರ ಪ್ರತಿನಿಧಿ ಸಭೆಯ ಸಂಪರ್ಕವಿಲ್ಲದೆ, ನ್ಯಾಯವಿಧಾಯಕ ಸಭೆಯಲ್ಲಿಯೇ ಕಾನೂನು ರಚನೆಯಾಗಬಹುದು. ಪ್ರತಿನಿಧಿ ಸಭೆಯಲ್ಲಿ ಕಾಯಿದೆಯು ಚರ್ಚೆಗೆ ಬಂದಾಗ ವಿವರವಾದ ಚರ್ಚೆಯು ನಡೆಯುವುದಿಲ್ಲ. ಆ ಕಾಯಿದೆಗೆ ಸಂಬಂಧಪಟ್ಟ ಸಾಮಾನ್ಯ ತತ್ವಗಳು ಮಾತ್ರ ಚರ್ಚೆಯಾಗುತ್ತವೆ. ಸಾಧಾರಣ ಸಭಿಕರು ಹೊಸ ಕಾನೂನೊಂದನ್ನು ಬಯಸಿದಾಗ ಅದರ ಸೂಚನೆಯನ್ನು ಅಧ್ಯಕ್ಷರಾದ ದಿವಾನರಿಗೆ ಮುಂಚಿತವಾಗಿಯೇ ಬರೆದು ಕಳುಹಿಸಿ ಅವರ ಅನುಮತಿಯನ್ನು ಪಡೆದ ಮೇಲೆ ಸಭೆಯಲ್ಲಿ ಅದರ ಚರ್ಚೆಯನ್ನು ಪ್ರಾರಂಭಿಸಬೇಕು. ಈ ರೀತಿಯಲ್ಲಿ ಆಡಳಿತದಲ್ಲಿ ನಡೆಯುವ ನ್ಯಾಯ ನಿಬಂಧನೆಗಳ ರಚನೆಯಲ್ಲಿ ಪ್ರಜಾಭಿಮತವನ್ನು ತಿಳಿಸಲು ಪ್ರತಿನಿಧಿ ಸಭೆಯು ಯೋಗ್ಯವಾದ ಸಂಸ್ಥೆಯಾಗಿದೆ.

ಆಯವ್ಯಯದಲ್ಲಿ ಗೊತ್ತುವಳಿಗಳು

ಪ್ರತಿನಿಧಿ ಸಭೆಯಲ್ಲಿ ಪೂರ್ವಭಾವಿಯಾಗಿ ಚರ್ಚೆ ನಡೆಯದೆ ಯಾವ ಹೊಸ ತೆರಿಗೆಯನ್ನೂ ಎತ್ತಕೂಡದೆಂಬುದು ಒಂದು ಮುಖ್ಯಾಂಶ. ಹೊಸ ತೆರಿಗೆಯನ್ನೆತ್ತಬೇಕೆಂದು ಸರ್ಕಾರದವರಿಗೆ ತೋರಿದರೆ ಆ ವಿಷಯವನ್ನು ಪ್ರತಿನಿಧಿ ಸಭೆಯಲ್ಲಿ ಚರ್ಚೆಗಿಟ್ಟು ಪ್ರತಿನಿಧಿಗಳ ಅಭಿಮತವನ್ನು ತಿಳಿಯಲೇಬೇಕು. ಬಡ್ಜೆಟ್ ಸೆಷನ್ನಿನಲ್ಲಿ ಆಯವ್ಯಯದ ವಿಮರ್ಶೆಯು ನಡೆಯುವಾಗ ಚರ್ಚೆಯೊಂದಿಗೆ ಸಭೆಯು ಗೊತ್ತುವಳಿಗಳನ್ನು ನಿರ್ಣಯ ಮಾಡಬಹುದು. ಗೊತ್ತುವಳಿಗಳೂ ಸರ್ಕಾರಕ್ಕೆ ಪ್ರಜಾಭಿಪ್ರಾಯವನ್ನು ತಿಳಿಸಿಕೊಡುತ್ತವೆ. ಆಯವ್ಯಯದ ಸಂಬಂಧದಲ್ಲಿ ಪ್ರತಿನಿಧಿಗಳು ಚರ್ಚಿಸಲಾಗದ

ಕೆಲವು ವಿಚಾರಗಳುಂಟು ; ಆ ನಿಷಿದ್ಧ ಭಾಗವನ್ನು ನ್ಯಾಯವಿಧಾಯಕ ಸಭೆಯಲ್ಲಿ ವಿವರದಲ್ಲಿ ಕಾಣುವೆವು.

ಕೋರಿಕೆಗಳು

ನ್ಯಾಯರಚನೆ, ಆಯವ್ಯಯಗಳು ಎರಡು ಮುಖ್ಯವಾದ ವಿಷಯಗಳು. ಇವಲ್ಲದೆ ಆಡಳಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಸಭಿಕರು ಯಾವುದನ್ನಾದರೂ ದಿವಾನರ ಅನುಮತಿಯನ್ನು ಪಡೆದು ಚರ್ಚೆಮಾಡಿ ಅರಿಕೆಯನ್ನು ಸೂಚಿಸಬಹುದು. ಸಭೆಯ ಪ್ರಾರಂಭದಲ್ಲಿ ಯಾವ ಸಭಿಕನಾದರೂ ಎರಡು ಪ್ರಶ್ನೆಗಳನ್ನು ಬರೆದು ಕಳುಹಿಸಿ ಆ ಮೂಲಕ ಸಮಾಚಾರವನ್ನು ಹೊರಗೆಡವಬಹುದು ; ಒಟ್ಟು ಒಂದು ಸೆಷನ್ನಿನಲ್ಲಿ ೫೦ ಪ್ರಶ್ನೆಗಳನ್ನು ಕೇಳಬಹುದು. ಅವಕಾಶವಿದ್ದಂತೆ ದಿವಾನರು ಉಪಪ್ರಶ್ನೆಗಳಿಗೂ ಅವಕಾಶವನ್ನು ಕೊಡಬಹುದು.

ಅಧ್ಯಕ್ಷರ ಅಧಿಕಾರ

ಪ್ರತಿನಿಧಿ ಸಭೆಯ ಕಾರ್ಯಕ್ರಮ, ಚುನಾವಣೆ, ಅಧಿಕಾರಗಳ ವಿಷಯಗಳಲ್ಲಿ ವಿಸ್ತಾರವಾದ ನಿಬಂಧನೆಗಳುಂಟು. ಆ ನಿಬಂಧನೆಗಳಿಗನುಸಾರವಾಗಿ ಅಧ್ಯಕ್ಷರಾದ ದಿವಾನರು ಕೆಲಸವನ್ನು ನಡೆಸುತ್ತಾರೆ. ಸರ್ಕಾರದ ಹುದ್ದೇದಾರರಲ್ಲಿ ಸಭಿಕರಾಗಿ ಕೆಲವರನ್ನು ದಿವಾನರೇ ನಿಯಮಿಸುವರು. ಚರ್ಚೆ ನಡೆಸುವುದರಲ್ಲಿಯೂ, ವಿಷಯಗಳಿಗೆ ಆಸ್ಪದವನ್ನು ಕೊಡುವುದರಲ್ಲಿಯೂ ಅಧ್ಯಕ್ಷರಾದ ದಿವಾನರಿಗೆ ಹೆಚ್ಚಾದ ಅಧಿಕಾರ ಉಂಟು : ಸಭೆಯ ಕೆಲಸ ನಡೆಯಲು ಅಧ್ಯಕ್ಷರಿಗೆ ಸಾಕಾದಷ್ಟು ಅಧಿಕಾರವಿರಲೇಬೇಕು. ಆದರೆ ಪ್ರತಿನಿಧಿ ಸಭೆಗಳಲ್ಲಿ ಸಾಧಾರಣವಾಗಿ ಸರ್ಕಾರದ ಅಧಿಕಾರಿ ವರ್ಗದವರು ಅಧ್ಯಕ್ಷರಾಗಿರುವುದಿಲ್ಲ. ಮೈಸೂರಿನಲ್ಲಿ ದಿವಾನರೇ ಅಧ್ಯಕ್ಷರಾಗಿರುವುದು ವಿಶೇಷ. ನಮ್ಮ ಪ್ರತಿನಿಧಿ ಸಭೆಯನ್ನು ಶಾಸಕ ಸಭೆಗಳ ಗುಂಪಿನಲ್ಲಿ ಸೇರಿಸುವುದು ಸರಿಯಲ್ಲ. ಪ್ರತಿನಿಧಿ ಸಭೆಯ ಉಪಯೋಗವು ಪ್ರಜೆಗಳ ಮನಸ್ಸನ್ನು ತೋರಿಸಿಕೊಡುವುದೆಷ್ಟೋ ಅಷ್ಟೇ ಎಂಬ ಮುಖ್ಯಾಂಶವನ್ನು ಮರೆಯತಕ್ಕದ್ದಲ್ಲ.

ನ್ಯಾಯವಿಧಾಯಕ ಸಭೆ

ಆಚರಣೆ : ಪ್ರತಿನಿಧಿ ಸಭೆಯೊಡನೆ ಹೋಲಿಕೆ

ಪ್ರತಿನಿಧಿ ಸಭೆಯಂತೆಯೇ ಇದೂ ಮೂರು ವರ್ಷಗಳಿಗೊಮ್ಮೆ ಹೊಸ ಚುನಾವಣೆಗೆ ಒಳಗಾಗುವುದು. ಅದರಂತೆ ಈ ಸಭೆಯೂ ಸಾಮಾನ್ಯವಾಗಿ ವರ್ಷಕ್ಕೆರಡು ಬಾರಿ ಸೇರುವುದು. ದಿವಾನರೇ ಇದಕ್ಕೂ ಅಧ್ಯಕ್ಷರು ; ದಿವಾನರಿಲ್ಲದಿದ್ದಾಗ ಅವರ ತರುವಾಯ ಮಂತ್ರಿಗಳಲ್ಲಿ ಹಿರಿಯರು ಯಾರೋ ಅವರು ಅಧ್ಯಕ್ಷತೆಯನ್ನು ವಹಿಸುವರು. ಸಭೆಯನ್ನು ಕರೆಸುವುದೂ, ಬರಖಾಸ್ತು, ಮುಕ್ತಾಯಮಾಡುವುದೂ, ಆಲೋಚ್ಯ ವಿಷಯವನ್ನು ನಿರ್ಣಯಿಸುವುದೂ, ಸಭೆಯಲ್ಲಿ ವಾದವಿವಾದಗಳನ್ನು ಹದ್ದಿನಲ್ಲಿ ಜರುಗಿಸುವುದೂ ಅಧ್ಯಕ್ಷರಿಗೇ ಸೇರಿದ್ದು. ಆದರೆ ಪ್ರತಿನಿಧಿ ಸಭೆಯು ಸಾಧಾರಣವಾಗಿ ರಾಜಧಾನಿಯಲ್ಲಿ ಸೇರುತ್ತದೆ; ನ್ಯಾಯವಿಧಾಯಕ ಸಭೆಯು ಸಾಧಾರಣವಾಗಿ ಬೆಂಗಳೂರಿನಲ್ಲಿ ಸೇರುತ್ತದೆ. ಪ್ರತಿನಿಧಿ ಸಭೆಯು ಮಹಾರಾಜರ ವರ್ಧಂತಿ ಮತ್ತು ನವರಾತ್ರಿಯ ಉತ್ಸವ ಕಾಲದಲ್ಲಿ ನೆರೆಯುತ್ತದೆ ; ನ್ಯಾಯವಿಧಾಯಕ ಸಭೆಯು ಆವಶ್ಯಕ ತೋರಿದಾಗಲೆಲ್ಲ ನೆರೆಯುತ್ತದೆ. ಏಕೆಂದರೆ ನ್ಯಾಯವಿಧಾಯಕ ಸಭೆಯು ಆಡಳಿತದಲ್ಲಿ ಅವಶ್ಯವಾದ ಮತ್ತು ಮುಖ್ಯವಾದ ಅಂಗ. ಪ್ರತಿನಿಧಿ ಸಭೆಯಿಲ್ಲದೆ ಆಡಳಿತವು ನಡೆಯಬಲ್ಲುದು ; ನ್ಯಾಯವಿಧಾಯಕ ಸಭೆಯಿಲ್ಲದೆ ನಡೆಯಲಾರದು. ಪ್ರತಿನಿಧಿ ಸಭೆಯಲ್ಲಿ ಸಭಿಕರು ವೋಟುಮಾಡುವ ಅವಶ್ಯವಿಲ್ಲ ; ವಿಭಾಗವಾಗಬಹುದು. ನ್ಯಾಯವಿಧಾಯಕ ಸಭೆಯಲ್ಲಿ ವೋಟುಗಳನ್ನು ಕೊಡುವ ಮತ್ತು ಬಹುಮತವನ್ನು ಅನುಸರಿಸುವ ಸಂಪ್ರದಾಯದಿಂದಲೇ ಕೆಲಸವಾಗಬೇಕು. ಪ್ರತಿನಿಧಿ ಸಭೆಯ ಮಾತುಕಥೆಗಳು ಕನ್ನಡದಲ್ಲಿಯೇ ನಡೆಯುತ್ತವೆ. ನ್ಯಾಯವಿಧಾಯಕ ಸಭೆಯಲ್ಲಿ ಇಂಗ್ಲಿಷು ಭಾಷೆಯೇ ಹೆಚ್ಚು. ಪ್ರತಿನಿಧಿ ಸಭೆಯಲ್ಲಿ ಪ್ರಜೆಗಳಿಂದ ಚುನಾಯಿತರಾದವರೇ ಸಭಿಕರಾಗಿದ್ದಾಗ್ಗೂ ಅವರು ನ್ಯಾಯವಿಧಾಯಕ ಸಭೆಯ ಸಭಿಕರಂತೆ ವಿದಗ್ಧರೂ, ಅನುಭವಶಾಲಿಗಳೂ ಆಗಿರಬೇಕಾದುದಿಲ್ಲ. ಪ್ರತಿನಿಧಿ ಸಭೆಯು ಪ್ರಜೆಗಳ ಇಷ್ಟಾನಿಷ್ಟಗಳನ್ನು ತೋರಿಸಿಕೊಡುವುದು ; ನ್ಯಾಯವಿಧಾಯಕ ಸಭೆಯು ಆ ತೋರಿಕೆಯನ್ನು

ಕಂಡು, ಕಾನೂನು ನಿಬಂಧನೆಗಳನ್ನು ಮಾಡಿಡುವುದಲ್ಲದೆ ಆಡಳಿತದ ವಿಮರ್ಶೆಯನ್ನು ತಕ್ಕಷ್ಟು ವಿವರವಾಗಿ ಮಾಡುವುದು. ಅಲ್ಲದೆ ಪ್ರತಿನಿಧಿ ಸಭೆಯಲ್ಲಿ ೨೫೦ ಸಭಿಕರಿರುವುದರಿಂದ ವಿವರವಾದ ಚರ್ಚೆಯು ೫೦ ಸಭಿಕರೇ ಉಳ್ಳ ನ್ಯಾಯವಿಧಾಯಕ ಸಭೆಯಲ್ಲಿ ನಡೆಯುವಷ್ಟು ಸಮರ್ಪಕವಾಗಿ ನಡೆಯಲಾರದು.

ಪಕ್ಷಗಳು : ಬಹುಮತ ನಿಶ್ಚಯ

ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳನ್ನು ಬಿಟ್ಟು ನ್ಯಾಯವಿಧಾಯಕ ಸಭೆಯಲ್ಲಿ ೫೦ ಸಭಾಸದರಿರುತ್ತಾರೆ. ಅವರಲ್ಲಿ ಅರ್ಧಭಾಗಕ್ಕೆ ಕಡಿಮೆಯಿಲ್ಲದಂತೆ ಖಾಸಗಿ ಜನರೇ ಇರಬೇಕು ; ಮತ್ತು ಖಾಸಗಿ ಸಭಿಕರಲ್ಲಿ ೧/೩ ಗಿಂತ ಹೆಚ್ಚಾಗಿ ಸರ್ಕಾರದವರು ನಾಮಕರಣಮಾಡಲಾಗದು. ವಾಸ್ತವವಾಗಿ ಸಭಿಕರಲ್ಲಿ ಪ್ರಜೆಗಳ ಚುನಾವಣೆಯಿಂದ ಬಂದವರು ೨೨ ಮಂದಿ, ನಿಯಮಿತರಾದ ಅಧಿಕಾರಿಗಳು ೨೦ ಮಂದಿ, ಮತ್ತು ನಿಯಮಿತರಾದ ಖಾಸಗಿ ಜನರು ೮ ಮಂದಿ ಇರುತ್ತಾರೆ. ಇದರಿಂದ ಈ ಸಭೆಯಲ್ಲಿ ಸರ್ಕಾರದವರ ಮತ್ತು ಪ್ರಜೆಗಳ ಪಕ್ಷಗಳು ಸ್ಪಷ್ಟವಾಗಿ ಏರ್ಪಡುತ್ತವೆ. ಪ್ರತಿನಿಧಿ ಸಭೆಯಲ್ಲಿ ಕೆಲವು ಅಧಿಕಾರಿಗಳು ಸಭಿಕರಾದಾಗ್ಯೂ ೨೫೦ ಪ್ರತಿನಿಧಿಗಳ ಮಧ್ಯೆ ಇರುವುದರಿಂದ ಎಲ್ಲರೂ ಪ್ರಜಾಪಕ್ಷದವರೇ ಎಂದು ಹೇಳಿದರೂ ಹೇಳಬಹುದು. ನ್ಯಾಯವಿಧಾಯಕ ಸಭೆಯಲ್ಲಿ ಅಧಿಕಾರಿವರ್ಗದವರು ೨೦ ಜನರಾಗಿದ್ದು ಸಾಮಾನ್ಯವಾಗಿ ನಿಯಮಿತರಾದ ೮ ಜನ ಖಾಸಗಿ ಸಭಿಕರ ಬೆಂಬಲವನ್ನು ಪಡೆದೇ ಇರುತ್ತಾರೆ. ಇವರಲ್ಲದೆ ಅವಶ್ಯವೆಂದು ಕಂಡುಬಂದಾಗ ಸರ್ಕಾರದವರು ಯಾವುದಾದರೂ ಕಾನೂನಿನ ಅಥವಾ ನಿಬಂಧನೆಯ ಸಂದರ್ಭದಲ್ಲಿ ವಿಶೇಷ ಪರಿಶ್ರಮವುಳ್ಳ ಬೇರೆ ಇಬ್ಬರನ್ನು ಸಭಿಕರಾಗಿ ನಿಯಮಿಸಬಹುದು. ಸಭಾಕಾರ್ಯವನ್ನು ನಡೆಸುವ ವಿಧಾನದಲ್ಲಿ ಅನೇಕ ನಿಬಂಧನೆಗಳುಂಟು. ಆ ನಿಬಂಧನೆಗಳಿಗೆ ಅನುಸಾರವಾಗಿ ಚರ್ಚೆಯು ನಡೆದ ಮೇಲೆ ಸಭಿಕನಾದವನೇ ಕೋರಿದಂತೆಯೋ ಅಧ್ಯಕ್ಷರು ನಿಶ್ಚಯಿಸಿದಂತೆಯೋ ಸಭಿಕರು ತಮ್ಮ ಅಭಿಮತಗಳನ್ನು ಕೈಯೆತ್ತುವುದರ ಮೂಲಕ ತೋರಿಸುತ್ತಾರೆ. ಎಷ್ಟು ಜನ ಅನುಕೂಲರು, ಎಷ್ಟು ಜನ ಪ್ರತಿಕೂಲರು ಎಂಬುದನ್ನು ಸಭೆಯ ಕಾರ್ಯದರ್ಶಿಯು ಎಚ್ಚರಿಕೆಯಿಂದ ಬರೆದುಕೊಳ್ಳುತ್ತಾನೆ. ಅಧ್ಯಕ್ಷರು ಬಹುಮತವು ಹೇಗೆಂಬುದನ್ನು

ಪ್ರಕಾಶವಾಗಿ ಹೇಳಿ ಮುಂದಿನ ವಿಷಯಕ್ಕೆ ತೊಡಗುವರು. ಒಂದು ವೇಳೆ ಎರಡು ಪಕ್ಷಗಳೂ ಸಮಾನವಾಗಿ ವಿಭಾಗವಾಗಿ ವೋಟುಗಳು ಸಮತೂಕ ವಾದಾಗ ಅಧ್ಯಕ್ಷರಿಗೆ ಹೆಚ್ಚಾದ ವೋಟೊಂದುಂಟು; ಅದನ್ನೇ ಕ್ಯಾಸ್ಟಿಂಗ್ ವೋಟೆನ್ನುವುದು. ಅಂತಹ ಸಂದರ್ಭದಲ್ಲಿ ಆ ವೋಟಿನಂತೆ ವಿಷಯವು ತೀರ್ಮಾನವಾಗುವುದು.

ಮಸೂದೆಯ ಕ್ರಮ : ಮೊದಲನೆ ಹೆಜ್ಜೆ

ಹೊಸ ಕಾನೂನಾಗಲಿ ನಿಬಂಧನೆಯಾಗಲಿ ರಚನೆಯಾಗುವಾಗ ಒಂದು ಕ್ರಮವುಂಟು. ಯಾವ ಸಭಿಕನಾದರೂ ವಿಷಯವನ್ನು ಪ್ರಾರಂಭಿಸ ಬಹುದು. ಉದಾಹರಣೆಗೆ ಕಡೂರೋ ಹಾಸನವೋ ಯಾವುದೋ ಒಂದು ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ॥ ಬೋರಣ್ಣನವರೆಂಬುವರು ಪ್ರತಿ ಹಳ್ಳಿಗೂ ಒಂದೊಂದು ಆಸ್ಪತ್ರೆಯನ್ನು ಸ್ಥಾಪಿಸತಕ್ಕ ದ್ದೆಂದೋ ಕಂದಾಯದಲ್ಲಿ ಇಂತಿಂತಹ ಭಾಗವನ್ನು ಬಿಟ್ಟುಬಿಡಬೇಕೆಂದೋ ಒಂದು ನಿಬಂಧನೆಯನ್ನು ಹುಟ್ಟಿಸಲು ಆಸೆಪಡುವರು. ಆಗ ಅವರು ತಮ್ಮ ಸೂಚನೆಯ ವಿವರವನ್ನೂ ತಮ್ಮ ಸೂಚನೆಗೆ ಕಾರಣಗಳನ್ನೂ ಬರೆದು ಅಧ್ಯಕ್ಷರಾದ ದಿವಾನರವರಿಗೆ ಕಳುಹಿಸಿ ಅವರ ಸಮ್ಮತಿಯನ್ನು ಪಡೆಯ ಬೇಕು. ಆ ಸಮ್ಮತಿಯು ದೊರೆತ ಮೇಲೆ ೧೫ ದಿನಗಳಿಗೆ ಮುಂಚಿತ ವಾಗಿಯೇ ಸಭೆಯ ಕಾರ್ಯದರ್ಶಿಗಳಿಗೆ ತಿಳಿವಳಿಕೆಕೊಟ್ಟು ತುಂಬಿದ ಸಭೆಯಲ್ಲಿ ತಮ್ಮ ಸೂಚನೆಯನ್ನು ಚರ್ಚೆಗಿಡಲು ಸಭೆಯವರ ಅನುಮತಿ ಯನ್ನು ಕೇಳಬೇಕು. ಆಗ ಆ ಸೂಚನೆಗೆ ಮಸೂದೆ ಅಥವಾ ಬಿಲ್ ಎಂದು ಹೆಸರು. ನ್ಯಾಯವಿಧಾಯಕ ಸಭೆಯಲ್ಲಿ ಯಾವ ಬಿಲ್ಲು ತೋರಿ ಕೊಳ್ಳುವುದಕ್ಕೂ ಮೊದಲೇ ಪ್ರತಿನಿಧಿ ಸಭೆಯಲ್ಲಿ ಅದರ ಸಾಮಾನ್ಯ ತತ್ವಗಳು ವಿಚಾರಣೆಯಾಗಿರಬೇಕಾದುದರಿಂದ ದಿವಾನರು ಬೋರಣ್ಣನವರ ಸೂಚನೆಗೆ ಅನುಮತಿಯನ್ನಿತ್ತು ಕೂಡಲೇ ಪ್ರತಿನಿಧಿ ಸಭೆಯಲ್ಲಿ ಅದನ್ನು ಚರ್ಚೆ ಮಾಡಿಸಿ ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆದಿರುತ್ತಾರೆ. ಸಭೆಯವರು ಬಿಲ್ಲು ಸಮುಯೋಚಿತವಾಗಿದೆಯೆಂದು ಅಭಿಪ್ರಾಯಪಟ್ಟ ತರುವಾಯ ಬೋರಣ್ಣ ನವರು ತಮ್ಮ ಮಸೂದೆಯನ್ನೂ, ಅದರ ಸಾಧಕ ಬಾಧಕಗಳನ್ನು ವಿವರಿ ಸುವ ಇತರ ಪತ್ರಗಳನ್ನೂ ಸಭೆಯ ಕಾರ್ಯದರ್ಶಿಗೆ ಕೊಡಬೇಕು.

ಕಾರ್ಯದರ್ಶಿಯು ಅವುಗಳನ್ನು ಮುದ್ರಿಸಿ ಸಭಿಕರೆಲ್ಲರಿಗೂ ಕೊಟ್ಟು ಕಳುಹಿಸುವನು; ಮತ್ತು ಗೆಜೆಟ್ಟಿನಲ್ಲಿಯೂ ಅದನ್ನು ಪ್ರಕಟಿಸುವನು. ಇದಿಷ್ಟು ಕಾನೂನು ರಚನೆಯ ಮೊದಲನೆಯ ರಂಗ; ಅಥವಾ ಅಂಕ.

ಎರಡನೆಯ ಹೆಜ್ಜೆ

ಗೆಜೆಟ್ಟಿನಲ್ಲಿ ಪ್ರಕಟವಾದ ೧೫ ದಿನಗಳ ತರುವಾಯ ಆರು ದಿನಗಳ ಮೊದಲೇ ಕಾರ್ಯದರ್ಶಿಗೆ ತಿಳಿವಳಿಕೆ ಕೊಟ್ಟು ಬೋರಣ್ಣನವರು ಎರಡನೆ ಸಲ ಸಭೆಯಲ್ಲಿ ಮಸೂದೆಯನ್ನು ಓದಬೇಕೆಂದು ಸೂಚನೆ ಮಾಡಿ, ಅದರ ಸಾಮಾನ್ಯ ತತ್ವಗಳು ಒಪ್ಪಿಗೆಯಾದ ಮೇಲೆ ಮಸೂದೆಯನ್ನು ವಿವರವಾಗಿ ಪರೀಕ್ಷೆ ಮಾಡಲು ಉಪಸಭೆಯೊಂದನ್ನು ಗೊತ್ತುಮಾಡಬೇಕೆಂದು ಸಭೆಯಲ್ಲಿ ವಾದಿಸಬೇಕು. ಆ ಉಪಸಭೆಯಲ್ಲಿ ಬೋರಣ್ಣನವರಿದ್ದೇ ತೀರಬೇಕು: ಉಪಸಭೆಯವರು ಕೂಲಂಕಷವಾಗಿ ಮಸೂದೆಯ ವಿಷಯದಲ್ಲಿ ವಾದವಿವಾದಗಳನ್ನು ನಡೆಸಿ, ಸೂಕ್ತತೋರಿದಂತೆ ತಿದ್ದುಪಾಟನ್ನು ಮಾಡಿ ತಮ್ಮ ವರದಿಯನ್ನೂ, ಮಸೂದೆಯನ್ನೂ ಸಹ ಒಪ್ಪಿಸುವರು. ಈ ಉಪಸಭೆಯ ರಂಗವೇ ಬಿಲ್ಲಿನ ಚರಿತ್ರೆಯಲ್ಲಿ ಎರಡನೆಯ ಅಂಕ.

ಮೂರನೆಯ ಹೆಜ್ಜೆ

ಉಪಸಭೆಯನ್ನು ದಾಟಿದ ಮೇಲೆ ಪುನಃ ಮಸೂದೆಯ ನಕಲೂ, ಉಪಸಭೆಯವರ ವರದಿ ತಿದ್ದುಪಾಟುಗಳೂ ಎಲ್ಲವೂ ಅಚ್ಚಾಗಿ ಎಲ್ಲ ಸಭಿಕರಿಗೂ ತಲಪಿ ೧೫ ದಿನಗಳು ಕಳೆದಬಳಿಕ, ಮೂರನೆಯ ರಂಗವು ಪ್ರಾರಂಭವಾಗುತ್ತದೆ. ಸಮಯ ಬಂದಕೂಡಲೆ ಬೋರಣ್ಣನವರೇ ಎದ್ದು ಬಿಲ್ಲಿನಪರವಾಗಿ ವಾದವನ್ನುಮಾಡಿ ಅದನ್ನು ಜಾರಿಗೆ ತರಬೇಕೆಂದು ಕೇಳಬೇಕು. ಆಗ ಇತರ ಸಭಿಕರು ಸೂಚಿಸುವ ತಿದ್ದುಪಾಟುಗಳೂ, ಮಾರ್ಪಾಡುಗಳೂ ಚರ್ಚೆಗೆ ಗುರಿಯಾಗುವುವು. ಚರ್ಚೆಯು ಮುಗಿದು ಬಹುಮತವು ಅನುಕೂಲವಾಗಿ ಕಂಡುಬಂದ ಮೇಲೆ, ಕಾರ್ಯದರ್ಶಿಯು ಮಸೂದೆಯ ನಕಲನ್ನು ಚೆನ್ನಾಗಿ ಪರಿಶೀಲಿಸಿ ದಿವಾನರಿಗೆ ಕೊಟ್ಟು ಕಳುಹಿಸಬೇಕು. ಆಗ ದಿವಾನರು ಅದನ್ನು ಮಹಾರಾಜರ ಬಳಿಗೆ ಕಳುಹಿಸಿ ಕೊಡುತ್ತಾರೆ.

ಕಡೆಯ ಹೆಜ್ಜೆ

ಮಹಾರಾಜರು ಒಪ್ಪಿಗೆಯನ್ನು ಕೊಡುವುದೇ ಮಸೂದೆಯ ಕಟ್ಟ ಕಡೆಯ ರಂಗ. ಅವರ ಒಪ್ಪಿಗೆಯಿಲ್ಲದಿದ್ದರೆ ಮಸೂದೆಯು ಹಿಂತಿರುಗಿ ಬಂದು ಮೂಲೆಗೆ ಬೀಳುವುದು. ಒಪ್ಪಿಗೆ ದೊರೆತ ಕೂಡಲೆ ದಿವಾನರು ಅದರ ಮೇಲೆ ಮಂಜೂರಾಗಿದೆಯೆಂದು ಸ್ವಹಸ್ತದಿಂದ ಬರೆದು ಅದನ್ನು ಪತ್ರಗಳ ಸಂಗ್ರಹಾಲಯಕ್ಕೆ ಕಳುಹಿಸುವರು. ಆಗ ಅದು ಬಿಲ್ಲೆಂಬ ಹೆಸರನ್ನು ತೊರೆದು ಕಾನೂನು ಎನ್ನಿಸುವುದು. ಕೂಡಲೇ ಗೆಜೆಟ್ಟಿನಲ್ಲಿ ಪ್ರಕಟವಾಗುವುದು ; ಪ್ರಕಟವಾದಂದಿನಿಂದ ಜಾರಿಗೆ ಬರುವುದು. ಆದರೆ ಸಾಧಾರಣವಾಗಿ ಸರ್ಕಾರದವರು ಮೊದಲಿಡುವ ಮಸೂದೆಗಳೇ ಹೆಚ್ಚು ; ಖಾಸಗಿ ಸಭಿಕರಿಗೆ ಅವಕಾಶವು ಸಹಜವಾಗಿ ಅಲ್ಪವಾಗಿಯೇ ಇರುತ್ತದೆ.

ಸಭೆಯ ಶ್ರೇಷ್ಠತೆ

ಈ ಕ್ರಮದಿಂದ ಆತುರದಲ್ಲಿ ಕಾನೂನಾಗಲಿ ನಿಬಂಧನೆಯಾಗಲಿ ರಚನೆಯಾಗಲು ಆಸ್ಪದವಿಲ್ಲ. ಅತ್ತಲಾಗಿ ಪ್ರತಿನಿಧಿ ಸಭೆಯ ಅಭಿಮತವು ತಿಳಿಯುವುದಕ್ಕೂ, ಸಾಮಾನ್ಯ ಪ್ರಜೆಗಳು ವೃತ್ತಪತ್ರಿಕೆಗಳ ಮತ್ತು ಸಾರ್ವಜನಿಕ ಸಭೆಗಳ ಮೂಲಕವಾಗಿ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೂ ಸಾಕಾದಷ್ಟು ಅವಕಾಶವಿರುತ್ತದೆ. ಚರ್ಚೆಯು ೫೦ ಜನರ ಸಭೆಯಲ್ಲಿ ಕೂಲಂಕಷವಾಗಿ ನಡೆಯುತ್ತದೆ. ಪ್ರತಿನಿಧಿ ಸಭೆಯಲ್ಲಿ ಸುಲಭವಾಗಿ ಆಗಲಾರದ ಕೆಲಸವನ್ನು, ಆ ಸಭೆಯ ಇಷ್ಟವನ್ನು ತಕ್ಕಮಟ್ಟಿಗೆ ಅನುಸರಿಸಿಯೇ, ನ್ಯಾಯವಿಧಾಯಕ ಸಭೆಯವರು ಮಾಡುತ್ತಾರೆ. ಅಂದರೆ ಪ್ರತಿನಿಧಿ ಸಭೆಯ ಸಭಿಕರಿಗಿಂತಲೂ ನ್ಯಾಯವಿಧಾಯಕ ಸಭೆಯ ಸಭಿಕರು ಹೆಚ್ಚು ಪ್ರಭಾವವುಳ್ಳವರೆಂದು ಸ್ಪಷ್ಟವಾಗುವುದು.

ಸಭಿಕರ ಚುನಾವಣೆ

೨೦ ಜನ ಅಧಿಕಾರಿಗಳಂತೂ ಸರ್ಕಾರದವರಿಂದ ನಿಯಮಿತರಾದ ಇಲಾಖೆಗಳ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು. ಸಾಧಾರಣ ಪ್ರಜೆಗಳು ೨೨ ಖಾಸಗಿ ಜನರನ್ನು ಚುನಾಯಿಸುವುದು ಈ ಪರಿ :—

(೧) ಎಂಟು ಜಿಲ್ಲೆಗಳಿಗೂ ಜಿಲ್ಲೆಗೊಬ್ಬರಂತೆ ೮ ಮಂದಿ (ಗ್ರಾಮ ಭಾಗ)

(೨) ಬೆಂಗಳೂರು, ಮೈಸೂರು ಸಿಟಿಗಳಿಗೆ ೨ ,, (ನಗರ ಭಾಗ)

(೩) ಪ್ರತಿನಿಧಿ ಸಭೆಯಿಂದ ಚುನಾಯಿತರು ೮ ಮಂದಿ (ಪ್ರತಿನಿಧಿಸಭೆ)
(೪) ವಿಶ್ವವಿದ್ಯಾನಿಲಯ, ವಾಣಿಜ್ಯ, ತೋಟ
ಗಳು ಮತ್ತು ಕೂಲಿಗಾರ ವರ್ಗಗಳ
ಪ್ರತಿನಿಧಿಗಳು ೪ ,, (ವಿಶೇಷಕ್ಷೇತ್ರಗಳು)

ಒಟ್ಟು ೨೨

ಎಂಟು ಜನ ಖಾಸಗಿ ಸಭಿಕರನ್ನು ನಿಯಮಿಸುವ ಸಂದರ್ಭದಲ್ಲಿ ಸರ್ಕಾರದವರು ಕೂಡಿದ ಮಟ್ಟಿಗೂ ದಳಿತವರ್ಗ, ಉದ್ಯೋಗ ಕೈಗಾರಿಕೆಗಳು, ಶಿಶುಪೋಷಣೆ, ಅಲ್ಪಸಂಖ್ಯರ ವರ್ಗ, ಪಾಂಡಿತ್ಯ ವಿಶೇಷವುಳ್ಳವರು—ಎಂಬ ಕ್ಷೇತ್ರಗಳನ್ನು ಅನುಸರಿಸತಕ್ಕದ್ದೆಂಬ ನಿಯಮವುಂಟು.*

ಯೋಗ್ಯತಾ ಲಕ್ಷಣ

* [ಚುನಾವಣೆಯ ಮೂಲಕ ನ್ಯಾಯವಿಧಾಯಕ ಸಭೆಯನ್ನು ಸೇರಲು ಉಮೇದುವಾರರಿಗೆ ಹೆಚ್ಚಾದ ಯೋಗ್ಯತೆಯೇ ನಿಷ್ಕೃಷ್ಟವಾಗಿದೆ. ಉಮೇದುವಾರರಾಗಲು ಇಷ್ಟಪಡತಕ್ಕವರು

(೧) ನಗರಗಳಲ್ಲಾದರೆ ೧೫ ರೂ. ಗೆ ಕಡಿಮೆಯಿಲ್ಲದಂತೆ ಮೊಹತರ್ಫಾ ಅಥವಾ ಮುನಿಸಿಪಲ್ ತೆರಿಗೆಗಳನ್ನು ಕೊಡುವವರಾಗಿರಬೇಕು.

(೨) ಗ್ರಾಮಗಳಲ್ಲಾದರೆ ೧೦೦ ರೂ. ಕಂದಾಯವನ್ನು ಸರ್ಕಾರಕ್ಕೋ, ಇನಾಂದಾರನಿಗೋ ಸಲ್ಲಿಸುವವರಾಗಿರಬೇಕು, ಅಥವಾ ೨೫೦ ರೂ. ಬೇರೀಜುಳ್ಳ ಇನಾಂ ಭೂಮಿಗಳನ್ನು ಪಡೆದವರಾಗಿರಬೇಕು, ಅಥವಾ ಹತ್ತು ವರ್ಷಗಳ ಹಿಂದೆಯೇ ಬಿ.ಎ. ಪದವಿಯನ್ನು ಪಡೆದು ಮೂರುವರ್ಷ ಕಾಲದಿಂದಲಾದರೂ ಸ್ಥಳನಿವಾಸಿಯಾಗಿರಬೇಕು, ಅಥವಾ ೧೦೦ ರೂ. ಗಳಷ್ಟು ವರಮಾನದ ತೆರಿಗೆಯನ್ನು ಕೊಡತಕ್ಕವರಾಗಿರಬೇಕು.

ಜಿಲ್ಲೆಗಳಿಂದಲೋ, ಸಿಟಿಗಳಿಂದಲೋ ಉಮೇದುವಾರರಾಗತಕ್ಕವರು ಇಂತಹವರಾಗಿರಬೇಕು. ಇದು ಪ್ರತ್ಯಕ್ಷವಾದ ಚುನಾವಣೆ. ಪ್ರತಿನಿಧಿ ಸಭೆಯಿಂದಲೂ, ವಿಶೇಷ ಕ್ಷೇತ್ರಗಳಿಂದಲೂ ಬರತಕ್ಕವರಲ್ಲಿ ಈ ನಿಯಮವಿಲ್ಲ; ವೋಟು ಕೊಡುವ ಅಧಿಕಾರವಿದ್ದರೆ ಸಾಕು. ಪ್ರತಿನಿಧಿ ಸಭೆಗೆ ಪ್ರತಿನಿಧಿಗಳಾಗಿರತಕ್ಕವರು ಎರಡು ಚುನಾವಣೆಗಳಿಗೆ ಒಳಗಾಗಬೇಕು; ಅದನ್ನು ಪರೋಕ್ಷವಾದ ಚುನಾವಣೆಗೆ ದೃಷ್ಟಾಂತವೆನ್ನಬಹುದು.

ಪ್ರತ್ಯಕ್ಷವಾದ ಚುನಾವಣೆಯಲ್ಲಿ ವೋಟುದಾರರಾಗತಕ್ಕವರು ಪಟ್ಟಣನಿವಾಸಿಗಳಾದ ಪಕ್ಷದಲ್ಲಿ ೧೦ ರೂ. ಗೆ ಕಡಿಮೆಯಿಲ್ಲದಂತೆ ತೆರಿಗೆಗಳನ್ನು ಮುನಿಸಿಪಾಲಿಟಿಗೆ ಕೊಡತಕ್ಕವರಾಗಿರಬೇಕು ; ಗ್ರಾಮಸ್ಥರಾದ ಪಕ್ಷದಲ್ಲಿ ೫೦ ರೂ. ಗೆ ಕಡಿಮೆಯಿಲ್ಲದಷ್ಟು ನೆಲಗಂದಾಯವನ್ನು ಸರ್ಕಾರಕ್ಕೋ, ಇನಾಂದಾರನಿಗೋ ಕೊಡತಕ್ಕವರಾಗಿರಬೇಕು, ಅಥವಾ ೨೫೦ ರೂ. ಬೇರೀಜುಳ್ಳ ಇನಾಂದಾರರಾಗಿರಬೇಕು, ಅಥವಾ ಸ್ಥಳನಿವಾಸಿಯಾಗಿರುವ ಬಿ.ಎ. ಪದವೀಧರರೋ, ಸರ್ಕಾರಕ್ಕೆ ವರಮಾನದ ತೆರಿಗೆಯನ್ನು ತೆರತಕ್ಕವರೋ, ಸಂಸ್ಥಾನದ ಸೈನ್ಯದಲ್ಲಿ ಹುದ್ದೇದಾರರಾಗಿದ್ದು ವಿಶ್ರಾಂತಿವೇತನವನ್ನು ಪಡೆಯುತ್ತಿರುವವರೋ ಆಗಿರಬೇಕು.

ವಿಶೇಷ ಕ್ಷೇತ್ರಗಳಲ್ಲಿ ಆಯಾ ಸಂಸ್ಥೆಗಳವರು ತಮ್ಮ ಸಭೆಗಳಲ್ಲಿ ಕ್ರಮದಂತೆ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ಹುಟ್ಟಿನಿಂದಲೋ, ಮೂರು ವರ್ಷದ ನಿವಾಸದಿಂದಲೋ ಮೈಸೂರಿನವರೆನಿಸಿರತಕ್ಕ ನಿಯಮವು ವಿಶೇಷ ಕ್ಷೇತ್ರಗಳಲ್ಲಿಲ್ಲ. ಪರೀಕ್ಷೆಮಾಡಿ ನೋಡಿದಾಗ ಪ್ರತಿನಿಧಿ ಸಭೆಯ ಸಭಿಕನಿಗಿಂತ ನ್ಯಾಯವಿಧಾಯಕ ಸಭೆಯ ಸಭಿಕನಿಗೆ ಎರಡರಷ್ಟು ಯೋಗ್ಯತೆಯು ನಿರ್ಣಯವಾಗಿರುವುದು ಕಾಣುವುದು. ಎರಡು ಸಭೆಗಳಿಗೂ ಸ್ತ್ರೀಯರು ವೋಟುದಾರರಾಗಿರಬಹುದು ; ಉಮೇದುವಾರರಾಗಿ ನಿಲ್ಲುವ ಅಧಿಕಾರವು ಈಚೆಗೆ ಅವರಿಗೆ ಸಂದಿದೆ.]

ಅಧಿಕಾರ

ನ್ಯಾಯವಿಧಾಯಕ ಸಭೆಯಲ್ಲಿ ಸಭಾಪೂರ್ತಿಗೆ ಅಧ್ಯಕ್ಷರು ಉಪಾಧ್ಯಕ್ಷರುಗಳಲ್ಲದೆ ಕನಿಷ್ಠಪಕ್ಷ ಅರ್ಧ ಸಂಖ್ಯೆ, ಎಂದರೆ ೨೦ ಸಭಿಕರು, ಇದ್ದರೆ ಸಾಕು. ಈ ಸಭೆಯ ಕೆಲಸವನ್ನೂ ಅಧಿಕಾರವನ್ನೂ ಈ ರೀತಿಯಾಗಿ ವಿಂಗಡಿಸಿಕೊಳ್ಳಬಹುದು :—

ನಿಷಿದ್ಧ ಭಾಗ

(೧) ನ್ಯಾಯ ರಚನೆ.—ಸಭೆಗೆ ಕಾನೂನುಗಳನ್ನೂ ನಿಬಂಧನೆಗಳನ್ನೂ ರಚಿಸುವ ಅಧಿಕಾರವುಂಟು. ಆದರೆ ರಚನೆಯಾಗುವುದಕ್ಕೆ ಪೂರ್ವದಲ್ಲಿ ಬರಹದ ಮೂಲಕ ದಿವಾನರ ಮಂಜೂರಾತಿಯು ಅವಶ್ಯಕ. ಅಲ್ಲದೆ ಈ ಕೆಳಗಿನ ವಿಷಯಗಳಲ್ಲಿಯಾಗಲಿ ಅವುಗಳಿಗೆ ಸಂಬಂಧಿಸುವ ವಿಷಯಗಳಲ್ಲಿಯಾಗಲಿ ಸಭೆಯವರಿಗೆ ಪ್ರವೇಶವಿಲ್ಲ.—

(೧) ಆಳುವ ರಾಜವಂಶ.

(೨) ಶ್ರೇಷ್ಠ ಪ್ರಭುಗಳೊಡನೆಯಾಗಲಿ (ಬ್ರಿಟಿಷರು), ಇತರ ರಾಜರು ರಾಷ್ಟ್ರಗಳೊಡನೆಯಾಗಲಿ ಮಹಾರಾಜರವರು ನಡೆಸುವ ಸಂಬಂಧಗಳು.

(೩) ಶ್ರೇಷ್ಠ ಪ್ರಭುಗಳೊಂದಿಗೆ ಕರಾರು ಮತ್ತು ಒಪ್ಪಂದಗಳ ಮೂಲಕ ಮಹಾರಾಜರು ನಡೆಸಿರುವ ಅಥವಾ ನಡೆಸುವ ವಿಚಾರಗಳು.

(೪) ಪ್ರತಿನಿಧಿ ಸಭೆಯನ್ನೂ, ನ್ಯಾಯವಿಧಾಯಕ ಸಭೆಯನ್ನೂ ಸ್ಥಾಪಿಸಿರುವ ನಿಬಂಧನೆಗಳು.

(೫) ಕಾಲಕಾಲಕ್ಕೆ ಮಹಾರಾಜರು ಸರ್ಕಾರದವರಿಂದಲೇ ವ್ಯವಹರಿಸಲ್ಪಡಬೇಕೆಂದು ಗೊತ್ತುಮಾಡುವ ವಿಷಯಗಳು;

೨. ಆಯವ್ಯಯದ ಮಂಜೂರಾತಿ.—ಪ್ರತಿವರ್ಷವೂ ಸರ್ಕಾರದವರು ತಮ್ಮ ಬಡ್ಜೆಟ್ಟನ್ನು ಸಭೆಗೆ ಒಪ್ಪಿಸಿ, ತಾವು ಎತ್ತಬೇಕೆಂದಿರುವ ಹಣವನ್ನು ವಸೂಲುಮಾಡಿಕೊಳ್ಳುವುದಕ್ಕೂ ಉಪಯೋಗಿಸಿಕೊಳ್ಳುವುದಕ್ಕೂ ಒಂದೊಂದಂಶಕ್ಕಾಗಿ ಸಭೆಯ ಅನುಮತಿಯನ್ನು ಸಾಮಾನ್ಯವಾಗಿ ಪಡೆಯಬೇಕು.

ಸಂಸ್ಥಾನದ ಆಯವ್ಯಯದ ವಿಮರ್ಶೆಯಲ್ಲಿ ಈ ಕೆಳಗೆಕಂಡ ವಿಷಯಗಳಲ್ಲಿ ಸಭೆಗೆ ಯಾವ ಅಧಿಕಾರವೂ ಇಲ್ಲ.—

ನಿಷಿದ್ಧ ಭಾಗ

೧. ಅರಮನೆಯ ಅಥವಾ ರಾಜವಂಶದ ವೆಚ್ಚ

೨. ಸೈನ್ಯದ ವೆಚ್ಚ

೩. ನೌಕರರ ವಿಶ್ರಾಮ ವೇತನಗಳು

೪. ಮಹಾರಾಜರು ನಡೆಸಿಕೊಂಡ ಕರಾರು ಒಪ್ಪಂದಗಳಿಗೆ ಸಂಬಂಧಪಟ್ಟ ವೆಚ್ಚ

೫. ಸಾಲವನ್ನೆತ್ತಿದ್ದರೆ ಅದಕ್ಕೆ ಸಂಬಂಧಿಸಿದ ವೆಚ್ಚ

೬. ಕಾನೂನು ಮೂಲಕ ನಿಷ್ಕರ್ಷೆಯಾಗಿರುವ ವೆಚ್ಚ—

ಈ ಅಂಶಗಳು ವಿನಾ ಉಳಿದ ಅಂಶಗಳಲ್ಲಿ ಸರ್ಕಾರದವರು ಹಣ ಕೇಳಿದಾಗ ಸಭಿಕರು ಅಡಳಿತದ ವಿಮರ್ಶೆಯನ್ನು ಮಾಡುವರು. ಎರಡು ಸಭೆಗಳಿಗೂ ಅನ್ವಯಿಸುವ ಮೇಲಿನ ನಿಷಿದ್ಧ ವಿಷಯಗಳನ್ನು ಬಿಟ್ಟು ಒಳ ಆಡಳಿತಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳೂ ಸಭೆಯಲ್ಲಿ ಚರ್ಚೆಯಾಗಿ ನಿಶ್ಚಯಗಳು ಹುಟ್ಟಬಹುದು. ಪ್ರಜಾಹಿತಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಯಾವ ಸಭಿಕ ನಿಗಾದರೂ ಠರಾವನ್ನು ಸೂಚಿಸಿ ಚರ್ಚೆಗೆ ತಂದೊಡ್ಡುವ ಅಧಿಕಾರವುಂಟು. ಠರಾವುಗಳು ಸರ್ಕಾರಕ್ಕೆ ಶಿಫಾರಸಿನ ರೂಪದಲ್ಲಿಯೇ ಇರಬೇಕು: ಮತ್ತು ದಿವಾನರು ಅವಕಾಶವನ್ನು ಕೊಟ್ಟಾಗಲೇ ಚರ್ಚೆಯು ನಡೆಯಬೇಕು. ಆಡಳಿತದ ಒಳಗಿನ ಸಮಾಚಾರವನ್ನು ತಿಳಿಯಪಡಿಸುವಂತೆ ಪ್ರಶ್ನೆಗಳನ್ನು ಹಾಕುವ ಅಧಿಕಾರ ಪ್ರತಿ ಸಭಿಕನಿಗೂ ಉಂಟು. ಒಂದು ಸೆಷನ್ನಿನಲ್ಲಿ ಎರಡು ಪ್ರಶ್ನೆಗಳಿಗಿಂತ ಹೆಚ್ಚಾಗಿ ಯಾವ ಸಭಿಕನೂ ಕೇಳಲಾಗುವುದಿಲ್ಲ. ಅದರಂ ತೆಯೇ ಸೆಷನ್ನೊಂದಕ್ಕೆ ೨ಂಕ್ಕಿಂತ ಹೆಚ್ಚಾಗಿ ಠರಾವುಗಳನ್ನು ಚರ್ಚಿಸಲು ಅವಕಾಶವಿಲ್ಲ.

ಸರ್ಕಾರದ ಅಧಿಕಾರ, ಇತರ ದೇಶಗಳೊಡನೆ ಹೋಲಿಕೆ

ಸಭೆಗಳೆರಡಕ್ಕೂ ದಿವಾನರೇ ಅಧ್ಯಕ್ಷರಾಗಿರುವುದು ವಿಶೇಷವೆಂದು ಆಗಲೇ ಹೇಳಿತು. ಸಭೆಯ ಕಾರ್ಯಕಲಾಪದಲ್ಲಿ ಅಧ್ಯಕ್ಷರಿಗೆ ಹೆಚ್ಚಿನ ಅಧಿ ಕಾರವುಂಟು. ಇದರಿಂದ ಪ್ರಜಾಕೋಟಿಯ ಪ್ರತಿನಿಧಿಗಳೇ ಸಭೆ ಸೇರಿ

ದಾಗ್ಯೂ ಸರ್ಕಾರಕ್ಕೆ ಅಧೀನರಾಗಿರತಕ್ಕದ್ದು ಅವರಿಗೆ ಅನಿವಾರ್ಯವಾಗಿರುತ್ತದೆ. ಪ್ರತಿನಿಧಿ ಸಭೆಯಲ್ಲಿ ಸರ್ಕಾರದವರು ಕೆಲಸವನ್ನು ನಡೆಸುತ್ತ ಸಭಾವಿಭಾಗದಲ್ಲಿ ಸೇರದಿದ್ದರೂ ಹೆಚ್ಚಾದ ಅಧಿಕಾರವನ್ನೇ ಅನುಭವಿಸುತ್ತಾರೆ. ಪ್ರತಿನಿಧಿ ಸಭೆಯ ತೋರಿಕೆಗಳಿಗಾಗಲಿ (Representations) ನ್ಯಾಯವಿಧಾಯಕ ಸಭೆಯ ಠರಾವುಗಳಿಗಾಗಲಿ ಸರ್ಕಾರದವರು ಒಳಪಡಲೇಬೇಕೆಂಬ ನಿರ್ಬಂಧವಿಲ್ಲ. ಶಾಸಕಾಂಗಕ್ಕೆ ಕಾರ್ಯಾಂಗದ ಮೇಲೆ ಯಾವ ಅಧಿಕಾರವೂ ಮೈಸೂರಿನ ಆಡಳಿತದಲ್ಲಿಲ್ಲ. ಅಂತಹ ಅಧಿಕಾರವು ಇತರ ರಾಷ್ಟ್ರಗಳಲ್ಲಿ ಎರಡು ಬಗೆಯಾಗಿ ರೂಪಗೊಳ್ಳುತ್ತದೆ. ಮೊದಲನೆಯದು ಹಣದ ವಿಚಾರ. ಇಂಗ್ಲೆಂಡು ಅಮೇರಿಕಾ ಮುಂತಾದ ದೇಶಗಳಲ್ಲಿ ಪ್ರತಿನಿಧಿಸಭೆಗಳ ಅನುಮತಿಯಿಲ್ಲದೆ ಸರ್ಕಾರದವರು ಒಂದು ಕವಡೆ ತೆರಿಗೆಯನ್ನೂ ಎತ್ತಲಾಗುವುದಿಲ್ಲ. ಮೈಸೂರಿನಲ್ಲಿ ಪ್ರತಿನಿಧಿ ಸಭೆಗೆ ಬಡ್ಜೆಟ್ಟಿನ ವಿವರದಲ್ಲಿ ಪ್ರವೇಶವಿಲ್ಲ ; ನ್ಯಾಯವಿಧಾಯಕ ಸಭೆಗೆ ಪ್ರವೇಶವಿದ್ದು ಒಂದೊಂದಂಶವಾಗಿ ಒಪ್ಪಿಗೆಯಾಗಬೇಕೆಂಬ ನಿಯಮವಿದ್ದರೂ ಹಣದ ಮೇಲೆ ಪೂರ್ಣವಾದ ಅಧಿಕಾರವಿಲ್ಲ. ಏಕೆಂದರೆ ನ್ಯಾಯವಿಧಾಯಕ ಸಭೆಯವರು ಬೇಡವೆಂದ ಅಂಶವನ್ನು ದಿವಾನರು ತಮ್ಮ ಅಧಿಕಾರದಿಂದಲೇ ನಿಲ್ಲಿಸಿಕೊಂಡು ಎತ್ತಲೂ ಬಹುದು, ವ್ಯಯಮಾಡಲೂ ಬಹುದು. ಎರಡನೆಯದು, ಇತರ ದೇಶಗಳಲ್ಲಿ ಸರ್ಕಾರದ ಪ್ರಮುಖರು ಪ್ರಜೆಗಳ ನಂಬುಗೆಯನ್ನೂ, ಪ್ರೀತಿಯನ್ನೂ ಕಳೆದುಕೊಂಡ ತಕ್ಷಣವೇ ಅಧಿಕಾರಕ್ಕೆ ಅನರ್ಹರೆನಿಸಿ ತಮ್ಮ ಹುದ್ದೆಗಳನ್ನು ಬಿಟ್ಟುಕೊಡುವರು. ಆದ್ದರಿಂದ ಅಲ್ಲಿಯ ಶಾಸಕಾಂಗಕ್ಕೆ ಕಾರ್ಯಾಂಗವನ್ನು ನಿರ್ಮಿಸುವ ಅಧಿಕಾರವೇ ಉಂಟು. ಮೈಸೂರಿನಲ್ಲಿ ಇಂತಹ ಬಲವಾವುದೂ ಶಾಸಕಾಂಗಕ್ಕಿರುವುದಿಲ್ಲ. ನ್ಯಾಯರಚನೆಯ ಕ್ಷೇತ್ರದಲ್ಲಿಯೂ ಮೈಸೂರಿನ ಸಭೆಗಳಿಗೆ ಪೂರ್ಣಾಧಿಕಾರವಿರುವುದಿಲ್ಲ. ಆರು ತಿಂಗಳವರೆಗೆ ಬಲವಿರುವ ನಿಬಂಧನೆಯನ್ನು ದಿವಾನರೇ ವಿಧಿಸಬಹುದು. ಇಂಗ್ಲೆಂಡು ಮುಂತಾದ ರಾಷ್ಟ್ರಗಳೊಡನೆ ಹೋಲಿಸಿ ನೋಡಿದಾಗ ಮೈಸೂರಿನ ಶಾಸಕಾಂಗದ ವಿಷಯದಲ್ಲಿ ಈ ಅಂಶಗಳು ಸ್ಪಷ್ಟವಾಗುತ್ತವೆ.—

೧. ಸಭಿಕರೆಲ್ಲರೂ ಚುನಾಯಿತರಲ್ಲ, ಸಭೆಗಳಗೆ ತುಂಬಿದ ಪ್ರಾತಿನಿಧ್ಯವಿಲ್ಲ.

೨. ಹಣದ ವಿಷಯದಲ್ಲಿ ಸರ್ವಾಧಿಕಾರವಿಲ್ಲ.

೩. ನ್ಯಾಯರಚನೆಯಲ್ಲಿ ಪೂರ್ಣಾಧಿಕಾರವಿಲ್ಲ
೪. ಅಧಿಕಾರಿವರ್ಗದ ಮೇಲೆ ಅಧಿಕಾರವಿಲ್ಲ.

ಮುಖ್ಯೋದ್ದೇಶ

ಪ್ರತಿನಿಧಿ ಸಭೆಯಾಗಲಿ ನ್ಯಾಯವಿಧಾಯಕ ಸಭೆಯಾಗಲಿ ಒಪ್ಪದಿದ್ದರೂ ಮಹಾರಾಜರು ತಮ್ಮ ಸ್ವಂತ ಅಧಿಕಾರ ಬಲದಿಂದ ಹೊಸ ಕಾನೂನನ್ನು ಮಾಡಬಹುದು; ಹೊಸ ತೆರಿಗೆಯನ್ನು ವಿಧಿಸಬಹುದು. ಸಾಧಾರಣವಾಗಿ ನ್ಯಾಯರಚನೆಯು ಈ ಸಭೆಗಳ ಮೂಲಕ ನಡೆಯುವ ಕ್ರಮದಿಂದ ಮಹಾರಾಜರ ಅಧಿಕಾರಕ್ಕೆ ಯಾವ ಕುಂದುಕೊರತೆಯೂ ಇರುವುದಿಲ್ಲ. ಮೈಸೂರಿನ ರಾಷ್ಟ್ರವ್ಯವಸ್ಥೆಯು ರಾಜತ್ವವೇ ಆದ್ದರಿಂದ ಇದು ಸಹಜವಾಗಿಯೇ ಇರುತ್ತದೆ. ಪ್ರತಿನಿಧಿ ಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ಸ್ಥಾಪನೆಯ ಉದ್ದೇಶವು ಒಂದು ಕಡೆ ಪ್ರಜಾರಾಶಿಗೂ ಮತ್ತೊಂದು ಕಡೆ ಪ್ರಭುತ್ವದವರಿಗೂ ಅನ್ಯೋನ್ಯತೆಯನ್ನು ಕಲ್ಪಿಸಿ, ಪ್ರಜಾಮುಖ್ಯರೆನಿಸಿದವರಿಗೆ ಆಡಳಿತದ ವಿಷಯಗಳಲ್ಲಿ ಪರಿಚಯ ಪರಿಶ್ರಮಗಳನ್ನೊದಗಿಸಿ ಪ್ರಾಜ್ಞರನ್ನಾಗಿ ಮಾಡುವುದೇ ಆಗಿರುತ್ತದೆ.

ಸಿದ್ಧ ಸಭೆಗಳು

ಎರಡು ಸಭೆಗಳಲ್ಲಿಯೂ ಚುನಾಯಿತರಾಗಿ ಬಂದ ಹಲಕೆಲವು ಸಭಿಕರಿಂದಲೂ, ಸರ್ಕಾರದವರಿಂದ ನಿಯಮಿತರಾದ ಕೆಲವು ಸಭಿಕರಿಂದಲೂ ಕೂಡಿದ ಸಣ್ಣ ಸಭೆಗಳು ಕೆಲವುಂಟು. ಆರೋಗ್ಯರಕ್ಷಣೆ, ಶಿಕ್ಷಣ, ಸ್ಥಳೀಯ ನಿರ್ವಾಹ, ವ್ಯಾಪಾರೋದ್ಯೋಗಗಳು ಮುಂತಾದ ಪ್ರಜಾಭಿವರ್ಧಕ ಇಲಾಖೆಗಳಿಗೆ ಆಗಿಂದಾಗ್ಗೆ ಪ್ರಜಾಹಿತವನ್ನು ಸೂಚಿಸುವುದೇ ಈ ಸ್ಟಾಂಡಿಂಗ್ ಕಮಿಟಿಗಳ ಕರ್ತವ್ಯ. ಇವಲ್ಲದೆ ನ್ಯಾಯವಿಧಾಯಕ ಸಭೆಗೊಂದು, ಪ್ರತಿನಿಧಿ ಸಭೆಗೊಂದು ಸ್ಟಾಂಡಿಂಗ್ ಕಮಿಟಿಯುಂಟು. ನ್ಯಾಯವಿಧಾಯಕ ಸಭೆಯ ಈ ಉಪಸಭೆಯು ಆಯವ್ಯಯದ ಲೆಕ್ಕವನ್ನೂ ರೀತಿನೀತಿಗಳನ್ನೂ ಪರಿಶೋಧಿಸುತ್ತದೆ. ಪ್ರತಿನಿಧಿಸಭೆಯ ಉಪಸಭೆಯು ಸಭಾಕಾರ್ಯಭಾಗವನ್ನು ನಿರ್ಣಯಿಸಲು ಸಹಾಯಕವಾಗಿರುತ್ತದೆ.

ಸ್ಥಳೀಯ ವ್ಯವಸ್ಥೆ*

ಸಾಧಾರಣ ಅರ್ಥ

ಪ್ರತಿನಿಧಿ ಸಭೆಯಲ್ಲಾಗಲಿ ನ್ಯಾಯವಿಧಾಯಕ ಸಭೆಯಲ್ಲಾಗಲಿ ದೇಶದ ಒಂದು ಭಾಗಕ್ಕೆ ಮಾತ್ರ ಸಂಬಂಧಪಟ್ಟ ವಿಷಯವನ್ನು ಚರ್ಚಿಸುವುದಕ್ಕೂ ತೀರ್ಮಾನ ಮಾಡುವುದಕ್ಕೂ ಆಗುವುದಿಲ್ಲ. ಕೇವಲ ಒಂದು ಭಾಗಕ್ಕೇ ಅಥವಾ ಒಂದು ಸ್ಥಳಕ್ಕೇ ಸಂಬಂಧಪಟ್ಟ ವಿಷಯವು ಸ್ಥಳೀಯ ಅಧಿಕಾರಿಗಳಿಂದಲೇ ನಿಷ್ಕರ್ಷೆಯಾಗುವಂತೆ ಸ್ಥಳೀಯವಾದ ವಿಚಾರಗಳು ಸ್ಥಳೀಯ ಸಂಸ್ಥೆಗಳಿಂದಲೇ ಇತ್ಯರ್ಥವಾಗಬೇಕು. ಸ್ಥಳಗಳೆಂದರೆ ಜಿಲ್ಲೆ, ಪಟ್ಟಣ ಮತ್ತು ಗ್ರಾಮಗಳು. ಗ್ರಾಮಕ್ಕೆ ಸಂಬಂಧಿಸಿದ ವಿಷಯವು ಗ್ರಾಮಸ್ಥರಿಂದಲೇ, ಪಟ್ಟಣಕ್ಕೆ ಸಂಬಂಧಿಸಿದ ವಿಷಯವು ಪಟ್ಟಣಿಗರಿಂದಲೇ ನಿರ್ವಾಹವಾಗತಕ್ಕದ್ದು ನ್ಯಾಯ. ಒಟ್ಟು ಜಿಲ್ಲೆಗೆ ಅನ್ವಯಿಸುವ ವಿಚಾರವು ಆ ಜಿಲ್ಲೆಯ ಜನರೆಲ್ಲರಿಂದಲೂ ವಿಚಾರವಾಗಿ ನಿರ್ಣಯವಾಗಬೇಕು. ಎಲ್ಲ ಜಿಲ್ಲೆಗಳಿಗೂ ಎಲ್ಲ ಪ್ರಜೆಗಳಿಗೂ ಸಂಬಂಧವಾದ ವಿಷಯಗಳು ಕೇಂದ್ರ ಸರ್ಕಾರದ ಕರ್ತವ್ಯವಾದ್ದರಿಂದ ಕೇಂದ್ರ ಸಭೆಗಳಲ್ಲಿ ನಿಶ್ಚಯವಾಗಬೇಕು.

ಮೂಲ ಕಾರಣಗಳು

ರಾಜಕೀಯ ರಂಗದಲ್ಲಿ ಪ್ರಜೆಗಳು ಯೋಗ್ಯತೆಯನ್ನೂ ದಕ್ಷತೆಯನ್ನೂ ಪಡೆದು ಪ್ರಾಜ್ಞರಾಗಲು ಸ್ಥಳೀಯ ಕಾರ್ಯವ್ಯವಸ್ಥೆಯು ಸಾಧಕ. 'ಮನೆಗೆ ಮಾರಿ ನೆರೆಮನೆಗುಪಕಾರಿ' ಯಾಗುವುದು ಸಹಜವಲ್ಲ; ಸ್ವಸ್ಥಳದಲ್ಲಿ, ನೆರೆಹೊರೆಯ ಜನರಲ್ಲಿ ಆದರವಿಲ್ಲದವನು ವಿಶಾಲಕ್ಷೇತ್ರದಲ್ಲಿ ಕರ್ತವ್ಯಪರನೂ ಜನಹಿತಸಾಧಕನೂ ಆಗುವನೇ! ಆದ್ದರಿಂದ ಪ್ರತಿ ಪ್ರಜೆಗೂ ತನ್ನ ಸ್ವಂತ

---

*ಪೂರ್ವಕಾಲದಲ್ಲಿ ಗ್ರಾಮ ಪಂಚಾಯಿತಿಗಳೂ, ನಗರ ಶ್ರೇಣಿಗಳೂ, ನಾಡುಗಳಲ್ಲಿ ಪೂಗಗಳೂ ಪ್ರಜಾಭಾಗಗಳಾಗಿದ್ದು ಸ್ಥಳದ ಕ್ಷೇಮಾಭಿವೃದ್ಧಿಗಳು ನೆರವೇರುತ್ತಿದ್ದವು. ಕಾರಣಾಂತರದಿಂದ ಆ ಏರ್ಪಾಟುಗಳು ಗತ ವೃತ್ತಾಂತಗಳಾಗಿ ಈಗಿನ ಕಾಲದಲ್ಲಿ ಪಟ್ಟಣಗಳು ಹೆಚ್ಚುವಂತಾಯಿತು. ೧೮೮೧ರಲ್ಲಿ ೮೪ ಪೌರಸಭೆಗಳಿದ್ದವು. ಅಲ್ಲಿಂದೀಚೆಗೆ ೧೯೦೨ರಲ್ಲಿ ಜಿಲ್ಲಾ ಬೋರ್ಡುಗಳೂ, ತಾಲ್ಲೂಕು ಬೋರ್ಡುಗಳೂ ಅಂಕುರವಾದವು. ಕೆಲವು ಕಾಲದ ಮೇಲೆ ಗ್ರಾಮಾಭಿವರ್ಧಕ ಸಂಘಗಳು ಸ್ಥಾಪಿತವಾಗಿ ಲೋಕಲ್ ಬೋರ್ಡುಗಳಿಗೂ ಗ್ರಾಮಪಂಚಾಯತನಕ್ಕೂ ನಿಬಂಧನೆಗಳು ಹುಟ್ಟಿ ತಾಲ್ಲೂಕು ಸಮ್ಮೇಳನಗಳೂ ಜಿಲ್ಲಾ ಸಮ್ಮೇಳನಗಳೂ ಕೂಡುತ್ತ ಬಂದವು.

ಸ್ಥಳದ ಹಿತಚಿಂತನೆಯು ಮೊದಲಿರಬೇಕು. ಸ್ವಸ್ಥಳದ ಅಭ್ಯುದಯಸಾಧನೆಯಿಂದ ಆಡಳಿತ ವಿಷಯದಲ್ಲಿ ಶಿಕ್ಷಣ ದೊರಕುವುದು. ಅಲ್ಲದೆ ಸ್ಥಳೀಯವೆನಿಸಿದ ಕೆಲಸಗಳು ಸ್ಥಳನಿವಾಸಿಗಳಿಂದ ಸಮರ್ಪಕವಾಗಿ ನಡೆಯುತ್ತವೆಯೇ ವಿನಾ ಅನ್ಯರಿಂದ ನಡೆಯಲಾರವು. ಈ ಎರಡು ಕಾರಣಗಳಿಂದ ಮುಂದು ಎನಿಸಿರುವ ಎಲ್ಲ ರಾಷ್ಟ್ರಗಳಲ್ಲಿಯೂ, ಸ್ಥಳೀಯ ಕಾರ್ಯನಿರ್ವಾಹವೆನ್ನುವುದು ಸುವ್ಯವಸ್ಥೆಗೊಳಗಾಗಿರುತ್ತದೆ.

೧೯೩೩ರ ಸುಧಾರಣೆಗಳು ಆಚರಣೆಗೆ ಬಂದ ಮೇಲೆ ಸ್ಥಳೀಯ ಸಭೆಗಳು ಪುನರ್ವ್ಯವಸ್ಥೆಗೊಳಗಾಗಿ ೧೯೨೬–೨೭ರಲ್ಲಿ ಜಿಲ್ಲಾ ಸಭೆಗಳು, ಪೌರಸಭೆಗಳು, ಮತ್ತು ಗ್ರಾಮ ಪಂಚಾಯಿತಿಗಳ ವಿಷಯದಲ್ಲಿ ವಿಸ್ತಾರವಾದ ನಿಬಂಧನೆಗಳು ಹುಟ್ಟಿ ಈಗ ಜಾರಿಯಲ್ಲಿವೆ.

ಜಿಲ್ಲಾ ಸಭೆಗಳು

ಆಚರಣೆ

ಸಂಸ್ಥಾನದ ಜಿಲ್ಲೆಗಳು ಎಂಟಾಗಿರುವಂತೆ ಎಂಟು ಜಿಲ್ಲಾ ಸಭೆಗಳಿವೆ. ನಗರ ಅಥವಾ ಮುನಿಸಿಪಾಲಿಟಿಗಳು ಇವುಗಳಲ್ಲಿ ಸೇರುವುದಿಲ್ಲ. ಏಕೆಂದರೆ ಜಿಲ್ಲಾ ಸಭೆಗಳು ಗ್ರಾಮವಿಭಾಗಕ್ಕಾಗಿಯೇ ಇರತಕ್ಕವು. ಎರಡು ಅಥವಾ ಹೆಚ್ಚು ಗ್ರಾಮಗಳಿಗೆ ಸಂಬಂಧಿಸಿದ ವಿಷಯಗಳೂ, ಒಟ್ಟು ಜಿಲ್ಲೆಗೆ ಅನ್ವಯಿಸುವ ವಿಷಯಗಳೂ ಈ ಸಭೆಗಳ ಸಮಾಲೋಚನೆಗೂ, ಕರ್ತವ್ಯರಾಶಿಗೂ ಒಳಗಾಗುತ್ತವೆ. ಈ ಸಭೆಗಳ ಕಾರ್ಯಾಲಯವು ಜಿಲ್ಲೆಯ ಮುಖ್ಯಪಟ್ಟಣದಲ್ಲಿಯೇ ಇರುತ್ತದೆ ; ಸಭೆಗಳು ಇತರ ಸ್ಥಳಗಳಲ್ಲಿ ಆವಶ್ಯವಿದ್ದಂತೆ ನೆರೆದರೂ ಸಾಮಾನ್ಯವಾಗಿ ಮುಖ್ಯಪಟ್ಟಣಗಳಲ್ಲಿಯೇ ಸೇರುತ್ತವೆ. ಈ ಸಭೆಗಳು ಸರ್ಕಾರಕ್ಕೆ ಅಧೀನವಾಗಿದ್ದರೂ ತಕ್ಕಮಟ್ಟಿಗೆ ಸ್ವತಂತ್ರಗಳಾಗಿವೆ. ಮುಖ್ಯವಾಗಿ ಅಭಿವರ್ಧಕ ವಿಷಯಗಳಲ್ಲಿ ನ್ಯಾಯವಿಧಾಯಕ ಸಭೆಯಂತೆ ಈ ಸಭೆಗಳು ಕೆಲಸ ಮಾಡುತ್ತವೆ.

ಕರ್ತವ್ಯಗಳು

ಅಭಿವರ್ಧಕ ವಿಷಯಗಳೆಂದರೆ ಮುಖ್ಯವಾಗಿ ಆರೋಗ್ಯಪಾಲನೆ ಮತ್ತು ರೋಗ ಚಿಕಿತ್ಸೆ, ಶಿಕ್ಷಣ, ಸಂಚಾರ ಸೌಕರ್ಯ, ಕೃಷಿ, ವ್ಯಾಪಾರ,

ಉದ್ಯೋಗಗಳು. ಈ ಮಾರ್ಗಗಳಲ್ಲಿ ಜಿಲ್ಲಾ ಸಭೆಯವರಿಗೆ ೧೯೨೬ನೆ ಸಾಲಿನ ನಿಬಂಧನೆಯಂತೆ ಈ ಕರ್ತವ್ಯಗಳು ವಿಧಿಸಲ್ಪಟ್ಟಿವೆ :—

೧. ಆರೋಗ್ಯ ರಕ್ಷಣೆ.—ಆಸ್ಪತ್ರೆಗಳನ್ನೂ ಚಿಕಿತ್ಸಾಲಯಗಳನ್ನೂ ಸ್ಥಾಪಿಸಿ ನಡೆಸುವುದು, ದೇವಿ ಹಾಕಿಸುವುದು, ಪಶುಚಿಕಿತ್ಸೆಗೆ ಏರ್ಪಾಟು ಮಾಡುವುದು, ಸಂತೆ, ಜಾತ್ರೆ ಮುಂತಾದ ಜನ ಸಮ್ಮೇಳನಗಳ ವೇಳೆಗಳಲ್ಲಿ ರೋಗಕ್ಕವಕಾಶವಿಲ್ಲದಂತೆ ಮಾಡುವುದು, ಜನನ ಮರಣಗಳ ಲೆಕ್ಕವನ್ನು ಮಾಡಿಸುವುದು, ಸಾಲು ಮರಗಳನ್ನು ನೆಡಿಸುವುದು, ಬಾವಿ ಕೆರೆ ಕುಂಟೆಗಳನ್ನು ಹೊಸದಾಗಿ ಅಗೆಸುವುದಲ್ಲದೆ ಸುಸ್ಥಿತಿಯಲ್ಲಿಡಿಸುವುದು.

೨. ಸಂಚಾರ ಸೌಕರ್ಯಗಳು.—ರಸ್ತೆಗಳನ್ನು ಹೊಸದಾಗಿ ಹಾಕಿಸುವುದಲ್ಲದೆ ಜೀರ್ಣೋದ್ಧಾರಮಾಡಿಸುವುದು, ಮುಸಾಫರಖಾನೆಗಳನ್ನು ಇಡಿಸಿ ನಡೆಸುವುದು, ಸೇತುವೆ, ನಾಲೆ, ರೈಲು, ಬಸ್ಸು, ಟ್ರಾಮು ಮುಂತಾದ ಅನುಕೂಲಗಳನ್ನು ವ್ಯವಸ್ಥೆಗೊಳಿಸುವುದು.

೩. ಶಿಕ್ಷಣ.—ಹೊಸದಾಗಿ ಶಾಲೆಗಳನ್ನು ಸ್ಥಾಪಿಸುವುದು, ಸ್ಥಾಪಿತವಾಗಿರುವ ಶಾಲೆಗಳನ್ನು ನಡೆಸುವುದು.

೪. ಕೃಷಿ ವ್ಯಾಪಾರೋದ್ಯೋಗಗಳು.—ಸಂತೆಗಳನ್ನೂ ಪೇಟೆಗಳನ್ನೂ ಏರ್ಪಡಿಸುವುದು, ಪ್ರದರ್ಶನಗಳನ್ನು ನಡೆಸುವುದು, ಪರಸ್ಪರ ಸಹಾಯ ಸಂಘಗಳನ್ನು ಪ್ರೋತ್ಸಾಹಿಸುವುದು.

೫. ಆಪನ್ನಿವಾರಣೆ.—ಬರಗಾಲದಲ್ಲಿ ನಿವಾರಣೋಪಾಯಗಳನ್ನು ಕೈಕೊಳ್ಳುವುದು, ದೀನಾನಾಥರನ್ನೂ ಅಂಗಹೀನರನ್ನೂ ರಕ್ಷಿಸುವುದು, ಇತ್ಯಾದಿ.

ಆಯ

ಇವುಗಳಲ್ಲದೆ ಜಿಲ್ಲೆಯ ಸೌಭಾಗ್ಯವನ್ನು ಸಾಧಿಸುವ ಕೆಲಸವಾವುದನ್ನಾದರೂ ಸಭೆಯವರು ಆಲೋಚಿಸಿ ಕೈಕೊಳ್ಳಬಹುದು. ಇಷ್ಟು ಕೆಲಸಗಳನ್ನು ನಡೆಸಲು ಹಣ ಬೇಕು ತಾನೆ? ಬೋರ್ಡುಗಳಿಗಿರುವ ಸ್ವಂತ ಸ್ವತ್ತಿನ ವರಮಾನವಲ್ಲದೆ ಲೋಕಲ್ ಸೆಸ್ಸಿನ ಭಾಗವೂ, ರೈಲ್ವೆ ಮತ್ತು ಶಿಕ್ಷಣದ ಸೆಸ್ಸುಗಳೂ ಸುಂಕದ ಹಣವೂ ಸೇರಿ ಬರುತ್ತವೆ. ಸಭೆಯವರು ತಮ್ಮ ಅಧಿಕಾರಿಗಳನ್ನೇ ನಿಯಮಿಸಿಕೊಂಡು ಅವರ ಕರ್ತವ್ಯವನ್ನು ಗೊತ್ತುಮಾಡುತ್ತಾರೆ. ತಾವು ಒದಗಿಸಿಕೊಡುವ ಅನುಕೂಲಕ್ಕಾಗಿ ಜನರಿಂದ ತಕ್ಕಹಾಗೆ ಸುಂಕವನ್ನೆತ್ತುವುದು ನ್ಯಾಯವಾಗಿಯೇ ಇರುತ್ತದೆ.

3336

ಸರ್ಕಾರದ ಅಧಿಕಾರ

ಸಭೆಯವರ ಕರ್ತವ್ಯ ನಿರ್ವಾಹವನ್ನು ಸರ್ಕಾರದವರು ಆಗಿಂದಾಗ್ಗೆ ಪರಾಮರ್ಶೆ ಮಾಡುವುದೇ ಅಲ್ಲದೆ, ಅವುಗಳಿಗೆ ಮೇಲ್ಪಟ್ಟ ಅಧಿಕಾರವನ್ನು ಇಟ್ಟುಕೊಂಡೇ ಇರುತ್ತಾರೆ. ಸಭೆಯ ಅಧಿವೇಶನವು ನಡೆದ ಕೂಡಲೇ ನಡೆದ ಕಾರ್ಯಕಲಾಪದ ವಿವರವನ್ನು ಸಭಾಪತಿಗಳು ಸರ್ಕಾರದವರಿಗೆ ಕಳುಹಿಸಿಕೊಡಬೇಕು. ಸಭೆಗೆ ಸರ್ಕಾರದಿಂದ ಕೊಡಲ್ಪಟ್ಟ ಅಧಿಕಾರ ವೆಷ್ಟೋ ಅಷ್ಟೇ ಇರುತ್ತದೆ. ಸ್ಥಳೀಯ ಕಾರ್ಯಗಳು ಸ್ಥಳದವರಿಂದಲೇ ನಿರ್ವಾಹವಾಗುವುದು ಉತ್ತಮವೆಂಬ ನೀತಿಯನ್ನನುಸರಿಸಿ ಸರ್ಕಾರ ದವರು ಕಾಲಕಾಲಕ್ಕೆ ಸಭೆಗಳ ಅಧಿಕಾರಗಳನ್ನೂ, ಕರ್ತವ್ಯಗಳನ್ನೂ ನ್ಯಾಯವಿಧಾಯಕ ಸಭೆಯ ಮೂಲಕ ವಿಧಿಸುತ್ತಾರೆ.

ಸಭಿಕರ ವಿಚಾರ

ಒಂದು ಜಿಲ್ಲೆಯಂತೆಯೇ ಮತ್ತೊಂದು ಜಿಲ್ಲೆಯಿರುವುದಿಲ್ಲವಾದುದ ರಿಂದ ಜಿಲ್ಲಾ ಸಭೆಗಳೆಲ್ಲವೂ ಒಂದೇ ಸಂಖ್ಯೆಯುಳ್ಳವುಗಳಲ್ಲ. ಪ್ರತಿ ಜಿಲ್ಲೆಗೂ ಎಷ್ಟು ಸಭಿಕರಿರತಕ್ಕುದೆಂದು ಸರ್ಕಾರದವರೇ ವಿಧಿಸುವರು. ಸಭಿಕರಲ್ಲಿ ೨/೩ ಪಾಲಿಗೆ ಕಡಿಮೆಯಿಲ್ಲದಂತೆ ಚುನಾಯಿತರಿರಬೇಕೆಂದೂ, ಉಳಿದ ಭಾಗದಲ್ಲಿ ಅರ್ಧಕ್ಕಿಂತ ಹೆಚ್ಚಿಗೆ ಸರ್ಕಾರದ ಅಧಿಕಾರಿಗಳಿರಬಾರದೆಂದೂ ನಿಯಮವುಂಟು. ಹೀಗೆ ಜಿಲ್ಲಾ ಸಭೆಗಳಲ್ಲಿ ಚುನಾಯಿತ ಸಭಿಕರ ಜತೆಗೆ ನಿಯಮಿತರಾದ ಖಾಸಗಿ ಸಭಿಕರೂ, ಅಧಿಕಾರಿಗಳೂ ಇರುತ್ತಾರೆ. ಸಭಾ ಪತಿ ಅಥವಾ ಅಧ್ಯಕ್ಷರು ಸಭೆಯಲ್ಲಿಯೇ ಚುನಾಯಿತರು. ಅಧ್ಯಕ್ಷರೂ, ಉಪಾಧ್ಯಕ್ಷರೂ ಸಭೆಯಲ್ಲಿ ಚರ್ಚೆಯನ್ನು ನಿಬಂಧನೆಗಳಿಗನುಸಾರವಾಗಿ ನಡೆಸುವುದಲ್ಲದೆ, ಸಭೆಯ ಮುಖ್ಯಾಧಿಕಾರಿಗಳೆನಿಸಿರುತ್ತಾರೆ.

ಯೋಗ್ಯತೆಯ ವಿಚಾರ

ಸಭಿಕರ ಚುನಾವಣೆಯು ೩ ವರ್ಷಗಳಿಗೊಮ್ಮೆ ನಡೆಯುವುದು. ಚುನಾವಣೆಯಲ್ಲಿ ಸಭಿಕರಾಗುವುದಕ್ಕೂ, ವೋಟುಕೊಡುವುದಕ್ಕೂ ಪ್ರತಿನಿಧಿ ಸಭೆಯ ವಿಚಾರದಲ್ಲಿರುವ ಯೋಗ್ಯತಾ ಪರೀಕ್ಷೆಯೇ ಅನ್ವಯಿಸುವುದು. ಇನಾಂದಾರರ ವಿಷಯದಲ್ಲಿ ಮಾತ್ರ ೨೫ ರೂ. ಬೇರೀಜಿದ್ದರೆ ಸಾಕು.

ಕೋಲಾರದ ಚಿನ್ನದ ಗಣಿಗಳ ಪ್ರದೇಶವು ವಿಶೇಷವಾದ ಭಾಗವೆನಿಸಿ ಸ್ಯಾನಿಟರಿ ಬೋರ್ಡೆಂಬ ಒಂದು ಪ್ರತ್ಯೇಕ ಸಂಸ್ಥೆಯನ್ನು ಪಡೆದಿದೆ.

ಗ್ರಾಮ ಪಂಚಾಯಿತಿಗಳು

ಸಂಸ್ಥಾನದಲ್ಲಿ ಸುಮಾರು ೧೬,೦೦೦ ಗ್ರಾಮಗಳಿವೆ. ಆದರೆ ಸಂಸ್ಥಾನದಲ್ಲಿರುವ ಎಲ್ಲ ಗ್ರಾಮಗಳಲ್ಲಿಯೂ ಪಂಚಾಯಿತಿಗಳು ನೆಲೆಸಿಲ್ಲ; ಸುಮಾರು ೯,೦೦೦ ಗ್ರಾಮಗಳಲ್ಲಿ ಸ್ಥಾಪಿತವಾಗಿವೆ.

ಕರ್ತವ್ಯಗಳು

ಗ್ರಾಮಾಭಿವೃದ್ಧಿಗೆ ಅವಶ್ಯವೆನಿಸಿದ ಕೆಲಸಗಳನ್ನು ಪಂಚಾಯಿತ ಸಭೆಯು ಕೈಕೊಳ್ಳತಕ್ಕದ್ದೆಂದು ಸ್ಪಷ್ಟವಾಗಿದೆ. ಆದರೆ ನಿಬಂಧನೆಯಲ್ಲಿ ಮಾಡಲೇಬೇಕಾದವು ಮತ್ತು ಮಾಡಬಹುದಾದವು ಎಂದು ಎರಡು ತೆರನಾಗಿ ಅವುಗಳ ಕರ್ತವ್ಯಗಳನ್ನು ಸರ್ಕಾರದವರೇ ವಿಂಗಡಿಸಿ ವಿವರಿಸಿರುತ್ತಾರೆ. ಮಾಡಲೇಬೇಕಾದ ಕರ್ತವ್ಯಗಳಲ್ಲಿ ಆರೋಗ್ಯ ಮತ್ತು ನೈರ್ಮಲ್ಯ ರಕ್ಷಣೆಯೇ ಮುಖ್ಯವಾದುದು.

<u>ಬಲವಂತ ಭಾಗ.</u>—ಗ್ರಾಮದ ರಸ್ತೆ, ಬಂಡಿ ಜಾಡು, ಮೋರಿ, ಸೇತುವೆಗಳನ್ನು ಏರ್ಪಡಿಸುವುದು, ಸುಸ್ಥಿತಿಯಲ್ಲಿಡಿಸುವುದು ; ಕೊಳೆ ನೀರು ದೂರ ಸಾಗುವಂತೆ ಚರಂಡಿಗಳನ್ನು ಮಾಡಿಸುವುದು ; ಎಲ್ಲರಿಗೂ ಸೇರಿದ ಬೀದಿ, ಕೆರೆ, ಬಾವಿ, ತೋಪು ಮುಂತಾದುವುಗಳನ್ನು ಪರಿಶುದ್ಧವಾಗಿಯೂ, ಭದ್ರವಾಗಿಯೂ ಇಡುವುದು ; ಕಟ್ಟಡಗಳ ಕಟ್ಟುವಿಕೆಯನ್ನು ಕ್ರಮಪಡಿಸುವುದು ; ದನಗಳ ದೊಡ್ಡಿಗಳ ಮೇಲ್ವಿಚಾರಣೆ ; ಶವದಹನ, ಖನನ ಸ್ಥಳಗಳ ಏರ್ಪಾಟು ; ಗ್ರಾಮದ ಪಾಕೀಜು, ಸತ್ರ, ದೇಗುಲ, ಮಂಟಪ, ಚಾವಡಿಗಳನ್ನು ಸುಸ್ಥಿತಿಯಲ್ಲಿಡುವುದು ; ಮನೆಗಳ ಉಪಯೋಗಕ್ಕೆ ನೀರನ್ನು ಒದಗಿಸುವುದು.

---

* ಪ್ರತಿ ಗ್ರಾಮದಲ್ಲಿಯೂ ಸುವ್ಯವಸ್ಥೆ ನೆಲೆಸುವಂತೆ ಗ್ರಾಮಸ್ಥರೇ ಯತ್ನಿಸುವ ಏರ್ಪಾಟು ೧೯೨೬ರಲ್ಲಿ ಹುಟ್ಟಿದ ನಿಬಂಧನೆಯ ಬಲದಿಂದ ೧೯೨೭ರಲ್ಲಿ ಆಚರಣೆಗೆ ಮೊದಲಾಯಿತು. ಪೂರ್ವಕಾಲದಲ್ಲಿ ಗ್ರಾಮಗಳಲ್ಲಿದ್ದ ಪಂಚಾಯಿತಿಗಳ ವ್ಯವಸ್ಥೆಯು ಕಾರಣಾಂತರಗಳಿಂದ ಶಿಥಿಲವಾಗಿ ಹೋಯಿತು. ಕೇಂದ್ರದಿಂದಲೇ ಗ್ರಾಮಗಳ ಸುಸ್ಥಿತಿಯ ಪ್ರಯತ್ನವು ಕೆಲಕಾಲ ನಡೆದು ಸಫಲವಾಗದೆ, ಕಡೆಗೆ ಪಂಚಾಯಿತಿಗಳೇ ಪುನಃ ಆಚರಣೆಯಲ್ಲಿ ಬರುವಂತೆ ಏರ್ಪಾಡಾಯಿತು.

ಐಚ್ಛಿಕ ಭಾಗ.—ಪ್ರಯಾಣಿಕರಿಗೆ ಅನುಕೂಲಮಾಡುವುದು ; ಅನಾಥರಿಗೂ, ರೋಗಗ್ರಸ್ತರಿಗೂ ಸಹಾಯ ಮಾಡುವುದು ; ಗ್ರಾಮ ನಿವೇಶನಗಳ ಬಡಾವಣೆ; ದನಗಳು ಕುಡಿಯುವ ನೀರಿಗಾಗಿ ಹೊಂಡಗಳನ್ನೂ ಕುಂಟೆಗಳನ್ನೂ ಸುವ್ಯವಸ್ಥೆಗೊಳಿಸುವುದು ; ಸಾಲುಮರಗಳನ್ನು ನಡಿಸುವುದು ; ಗೋಮಾಳಗಳನ್ನೂ, ಬೀಳು ಪ್ರದೇಶಗಳನ್ನೂ ಸ್ವಾಧೀನದಲ್ಲಿಟ್ಟುಕೊಂಡು ತಕ್ಕಂತೆ ಉಪಯೋಗಿಸುವುದು ; ಶಿಕ್ಷಣ, ವ್ಯವಸಾಯ, ಪರಸ್ಪರ ಸಹಾಯ, ಉದ್ಯೋಗ ಮತ್ತು ವ್ಯಾಪಾರಗಳಿಗೆ ಪ್ರೋತ್ಸಾಹಕೊಡುವುದು ; ಗ್ರಾಮದಲ್ಲಿ ದೀಪದ ವ್ಯವಸ್ಥೆ—ಇತ್ಯಾದಿಯಾಗಿ ಗ್ರಾಮಸ್ಥರ ಕ್ಷೇಮ, ಆರೋಗ್ಯ, ಅನುಕೂಲಗಳ ಸಾಧನೆಗೆ ಸಂಬಂಧಿಸಿದ ಏರ್ಪಾಡುಗಳು. ಇವುಗಳಲ್ಲದೆ ಸರ್ಕಾರದವರೇ ಯುಕ್ತತೋರಿದಂತೆ ಯಾವ ಪಂಚಾಯಿತ ಸಭೆಗಾದರೂ ಹುಲ್ಲುಬನ್ನಿ ಮತ್ತು ಗೋಮಾಳ ಭೂಮಿಗಳ ವ್ಯವಸ್ಥೆ, ಗ್ರಾಮಕ್ಕೆ ಸೇರಿದ ಕಾಡಿನ ವ್ಯವಸ್ಥೆ, ಕೆರೆ ಪಂಚಾಯಿತಿ ಮತ್ತು ಧರ್ಮಶಾಲೆ, ದೇವಾಲಯ ಪಾಠಶಾಲೆಗಳ ಮೇಲಿನ ವಿಚಾರಣೆಯನ್ನೊಪ್ಪಿಸಿ ಬಿಡಬಹುದು.

ಆಯ

ಈ ಕರ್ತವ್ಯಗಳ ಪಾಲನೆಗೆ ಬೇಕಾದ ಅಧಿಕಾರವು ನಿಬಂಧನೆಯ ಮೂಲಕ ಪಂಚಾಯಿತ ಸಭೆಗಳಿಗೆ ದತ್ತವಾಗಿದೆ. ಅದಕ್ಕಾಗಿ ಬೇಕಾದ ಹಣಕ್ಕೂ, ಪಂಚಾಯಿತ ನಿಧಿಯೆಂಬುದೊಂದು ಏರ್ಪಾಟಾಗಿದೆ. ಕಟ್ಟಡ, ನಿವೇಶನ, ವಾಹನಗಳ ಮೇಲೆ ತೆರಿಗೆಗಳನ್ನೆತ್ತುವ ಅಧಿಕಾರವು ಪಂಚಾಯಿತರಿಗುಂಟು. ಇತರ ಸಂಸ್ಥೆಗಳ ವಿಷಯದಲ್ಲಿದ್ದಂತೆಯೇ ಗ್ರಾಮ ಪಂಚಾಯಿತ ಸಭೆಗಳು ಅನೇಕ ಬಗೆಗಳಲ್ಲಿ ಸರ್ಕಾರಕ್ಕೆ ಅಧೀನವಾಗಿರುತ್ತವೆ.

ಸಭಿಕರು

ಗ್ರಾಮಗಳಲ್ಲಿ ದೊಡ್ಡವೂ, ಚಿಕ್ಕವೂ ಉಂಟು ; ಕುಗ್ರಾಮಗಳೂ ಉಂಟು. ಆದ್ದರಿಂದ ಪಂಚಾಯಿತ ಸಭೆಗಳ ನಿರ್ಮಾಣದಲ್ಲಿ ಸಣ್ಣಪುಟ್ಟ ಹಳ್ಳಿಗಳು ಅಕ್ಕಪಕ್ಕದಲ್ಲಿರುವ ಗ್ರಾಮಗಳೊಡನೆ ಸೇರಬೇಕಾಗುತ್ತದೆ. ಪಂಚಾಯಿತ ಸಭೆಯು ಎಲ್ಲೆಲ್ಲಿ ಸ್ಥಾಪಿತವಾಗಬೇಕೆಂಬುದನ್ನು ಜಿಲ್ಲಾಧಿಕಾರಿಯು (ಡೆಪ್ಯುಟಿ ಕಮಿಷನರ್) ನಿಷ್ಕರ್ಷೆ ಮಾಡುತ್ತಾನೆ. ಅದರಂತೆ ಸಭೆಗಳು ಏರ್ಪಡುತ್ತವೆ. ಸಭೆಯಲ್ಲಿ ಏಳರಿಂದ ಮೊದಲ್ಗೊಂಡು ಹನ್ನೆರಡರ

ವರೆಗೆ ಜಿಲ್ಲಾಧಿಕಾರಿಯು ನಿಶ್ಚಯಿಸಿದಂತೆ ಸಭಿಕರಿರುತ್ತಾರೆ. ಸಭಿಕರೆಲ್ಲರೂ ಗ್ರಾಮಸ್ಥರಿಂದ ಚುನಾಯಿತರಾಗಿರಬಹುದು ; ಅಥವಾ ಕೆಲವು ಸಭಿಕರನ್ನು ಮಾತ್ರ ಜಿಲ್ಲಾಧಿಕಾರಿಯು ನಿಯಮಿಸಿರಬಹುದು. ಸಭಿಕರಾಗಲು ಗ್ರಾಮಸ್ಥರಲ್ಲಿ ಗಂಡಸರೆಲ್ಲರೂ ಯೋಗ್ಯರೇ. ಗ್ರಾಮಸ್ಥರೆಲ್ಲರೂ ವೋಟುದಾರರು.

ಅಧಿಕಾರಿಗಳು

ಪಂಚಾಯಿತ ಸಭೆಗೆ ಇತರ ಸಭೆಗಳಲ್ಲಿದ್ದಂತೆಯೇ ಅಧ್ಯಕ್ಷ ಅಥವಾ ಯಜಮಾನನುಂಟು. ಈತನನ್ನು ಜಿಲ್ಲಾಧಿಕಾರಿಗಳು ನಿಯಮಿಸಿದರೂ ನಿಯಮಿಸಬಹುದು, ಅಥವಾ ಸರ್ಕಾರಕ್ಕೆ ಸೂಕ್ತವೆಂದು ತೋರಿದರೆ ಸಭಿಕರೇ ಚುನಾಯಿಸಬಹುದು. ಸಭೆಗೆ ಕಾರ್ಯದರ್ಶಿ ಒಬ್ಬನಿರುತ್ತಾನೆ. ಕಾರ್ಯದರ್ಶಿ ಮತ್ತು ಅಧ್ಯಕ್ಷರಿಬ್ಬರೂ ಪಂಚಾಯಿತ ಸಭೆಯ ಅಧಿಕಾರಿಗಳು.

ಪೌರಸಭೆಗಳು

ಪಾಶ್ಚಾತ್ಯರ ಮೇಲ್ಪಂಕ್ತಿ

ಪಟ್ಟಣದ ನಾಗರಿಕತೆಯು ಪಾಶ್ಚಾತ್ಯ ದೇಶಗಳ ಮುಖ್ಯ ಲಕ್ಷಣ. ಪಾಶ್ಚಾತ್ಯದೇಶಗಳಲ್ಲಿ ನಡೆದಿರುವ ನಗರ ವ್ಯವಸ್ಥೆಯು ನಮಗೆ ಸಹಜವಾಗಿ ಮೇಲ್ಪಂಕ್ತಿಯಾಗಿರುವುದು. ಪಾಶ್ಚಾತ್ಯರು ಐನೂರು ಮಂದಿ ಒಂದು ಕಡೆ ನೆಲೆಸಿದರೆ ಸಾಕು ; ಸ್ವಲ್ಪಕಾಲದಲ್ಲಿಯೇ, ಕನ್ಸರ್ವೆನ್ಸಿಯ ಓಣಿಗಳು, ಗುಪ್ತಗಾಮಿನಿಗಳಾದ ಚರಂಡಿಗಳು, ಗಟ್ಟಿಮಾಡಿದ ರಸ್ತೆಗಳು, ಕೊಳಾಯಿ ನೀರು, ವಿದ್ಯುಚ್ಛಕ್ತಿಯ ದೀಪಗಳು ಸಿದ್ಧವಾಗುತ್ತವೆ. ನಗರ ವ್ಯವಸ್ಥೆಯಲ್ಲಿ ಇವು ಮೊಟ್ಟಮೊದಲಿನ ಅನುಕೂಲಗಳು. ಮುಂದುವರಿದ ನಗರಗಳಲ್ಲಾದರೋ ಮುನಿಸಿಪಾಲಿಟಿಯವರು ಉದ್ಯಾನವನ, ಮಕ್ಕಳ ಕ್ರೀಡಾಕ್ಷೇತ್ರ, ನಾಟಕ ಮಂದಿರ, ಸಭಾಮಂದಿರ, ವಾಹಕ ಸಾಧನಗಳು, ಹಾಲಿನ ಶಿಸ್ತು ಮುಂತಾದ ಅನೇಕಾನೇಕ ಕೆಲಸ ಕಾರ್ಯಗಳನ್ನು ಕೈಕೊಂಡು ತಮ್ಮ ಪಟ್ಟಣದ ಅಭಿವೃದ್ಧಿ ರಂಜನೆಗಳನ್ನು ಸಾಧಿಸುತ್ತಾರೆ. ನಮ್ಮ ದೇಶದಲ್ಲಿ ಮುನಿಸಿಪಾಲಿಟಿಗಳು ಇನ್ನೂ ಪ್ರಾಥಮಿಕ ಸಿದ್ಧಿಗಳ ಸಾಧನೆಯಲ್ಲಿಯೇ ತೊಡಗಿವೆ.

ನಮ್ಮ ಪೌರಸಭೆಗಳು

ನಮ್ಮ ಸಂಸ್ಥಾನದಲ್ಲಿರುವ ಮುನಿಸಿಪಾಲಿಟಿಗಳು ಮೂರು ಬಗೆಯಾದವು : ಬೆಂಗಳೂರು ಮತ್ತು ಮೈಸೂರು ಸಿಟಿಗಳಾದುದರಿಂದ ಅವೆರಡರ ಸಭೆಗಳು ವಿಶೇಷ ; ಪಟ್ಟಣಗಳಲ್ಲಿ ಟೌನ್ ಮುನಿಸಿಪಾಲಿಟಿಗಳು ; ಇತರೆಡೆಗಳಲ್ಲಿ ಮೈನರ್ ಮುನಿಸಿಪಾಲಿಟಿಗಳು. ಸಾಧಾರಣವಾಗಿ ನಮ್ಮ ಮುನಿಸಿಪಾಲಿಟಿಗಳು ಜನಗಳ ಆರೋಗ್ಯ ಸಿದ್ಧಿ, ಶಿಕ್ಷಣ, ಅನಾಥರಕ್ಷಣೆ ಮತ್ತು ಸಂಚಾರ ಸೌಕರ್ಯಗಳಿಗೆ ಸಂಬಂಧಿಸಿದ ಕೆಲಸಗಳೆಷ್ಟೋ ಅಷ್ಟನ್ನೇ ನಡೆಸಲು ಯತ್ನಿಸುತ್ತಿವೆ.*

---

* ೧೯೨೮ನೆಯ ಸಾಲಿನ ನಿಬಂಧನೆಯಲ್ಲಿ ಬಲವಂತವಾದ ಮತ್ತು ಐಚ್ಛಿಕವಾದ ಭಾಗಗಳು ವಿಂಗಡವಾಗಿ ಈ ರೀತಿಯಾಗಿವೆ.—

ಬಲವಂತ ಭಾಗ:—ಸಾರ್ವಜನಿಕವಾದ ರಸ್ತೆ, ಸ್ಥಳ ಮತ್ತು ಕಟ್ಟಡಗಳಲ್ಲಿ ಸಾಲು ದೀಪವನ್ನುರಿಸುವುದು ; ಸಾರ್ವಜನಿಕವಾದ ರಸ್ತೆಗಳಿಗೂ, ಸ್ಥಳಗಳಿಗೂ ನೀರು ಚೆಲ್ಲಿಸುವುದು ; ಸಾರ್ವಜನಿಕವಾದ ಸ್ಥಳಗಳೆಲ್ಲವನ್ನೂ ಶುದ್ಧಿಮಾಡಿ ಶುಚಿಯಾಗಿಡಿಸುವುದು; ಬೆಂಕಿ ತಗಲಿದಾಗ ಅದನ್ನು ಶಮನ ಮಾಡುವುದು ; ಅಪಾಯಕರವಾದ ಅಥವಾ ಅಸಹ್ಯವಾದ ವೃತ್ತಿಗಳನ್ನು ಹದ್ದಿನಲ್ಲಿಡುವುದು ; ಸಾರ್ವಜನಿಕವಾದ ಕ್ಷೇತ್ರಗಳಲ್ಲಿ ಪ್ರತಿಬಂಧಕಗಳಿದ್ದರೆ ಅವುಗಳನ್ನು ತೆಗೆಸುವುದು ; ಅಪಾಯಕರವಾದ ಕಟ್ಟಡಗಳನ್ನೂ, ಸ್ಥಳಗಳನ್ನೂ ವಶಪಡಿಸಿಕೊಂಡು ಅನಾರೋಗ್ಯಕರವಾದ ಸ್ಥಳಗಳನ್ನು ಶುದ್ಧಿಮಾಡುವುದು ; ಸ್ಮಶಾನಗಳನ್ನು ಕ್ರಮಗೊಳಿಸುವುದು ; ರಸ್ತೆ, ಮೋರಿ, ಮೇರೆ, ಮಾರ್ಕೆಟ್ಟು, ವಧಾಸ್ಥಾನ, ಕಕ್ಕಸು, ಚರಂಡಿ, ಸ್ನಾನ ಘಟ್ಟ, ಕೆರೆ, ಬಾವಿ, ಅಣೆಕಟ್ಟು ಮುಂತಾದುವನ್ನು ಕಟ್ಟಿಸಿ ಸುಸ್ಥಿತಿಯಲ್ಲಿಡಿಸುವುದು ; ನಿವಾಸಿಗಳು ಕುಡಿಯಲು ತಕ್ಕ ನೀರನ್ನು ಒದಗಿಸುವುದು ; ಮನೆಗಳನ್ನೆಣಿಕೆಮಾಡಿ ಬೀದಿಗಳಿಗೆ ಹೆಸರಿಡುವುದು ; ಜನನ ಮರಣಗಳ ಪಟ್ಟಿಯನ್ನು ಸಿದ್ಧಗೊಳಿಸುವುದು ; ದೇವಿ ಹಾಕಿಸುವುದು ; ದನಗಳಿಗೆ ತಕ್ಕ ಸ್ಥಳಗಳನ್ನು ಏರ್ಪಡಿಸಿ ದೇವಿಯ ಏರ್ಪಾಟಿಗೆ ಸಹಾಯ ಮಾಡುವುದು ; ಸಾರ್ವಜನಿಕವಾದ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು ; ಪ್ರಾಥಮಿಕ ಶಿಕ್ಷಣಾಲಯಗಳನ್ನು ಸ್ಥಾಪಿಸುವುದು ; ಅನಾಥರನ್ನೂ ಅಂಗಹೀನರನ್ನೂ ಪೋಷಿಸುವುದು; ಸರ್ಕಾರಕ್ಕೆ ವರದಿಯನ್ನು ಕೊಡುವುದು; ರಕ್ಷಣೆಗೆ ಬೇಕಾದ ಪೋಲೀಸ್ ಅಥವಾ ಫೌಜಿನ ಸಿಬ್ಬಂದಿಯನ್ನು ಅಪೇಕ್ಷಿಸಿ ಅದರ ಭಾರವನ್ನು ಹೊರುವುದು ; ಶಿಕ್ಷಣ, ಕೃಷಿ, ಉದ್ಯೋಗ ವ್ಯಾಪಾರಗಳ ಅಭಿವೃದ್ಧಿಗಾಗಿ ಯತ್ನಿಸುವುದು ; ರೋಗವು ರೇಗಿದಾಗ ರೋಗಿಗಳಿಗೆ ಅನುಕೂಲಗಳನ್ನೊದಗಿಸಿ ರೋಗವು ಹರಡದಂತೆ ಮಾಡುವುದು ; ಬರಗಾಲದಲ್ಲಿ ನಿರ್ಗತಿಕರಾದವರಿಗೆ ಸಹಾಯ ಮಾಡುವುದು.

ಐಚ್ಛಿಕ ಭಾಗ.—ಹೊಸದಾದ ರಸ್ತೆಗಳನ್ನು ನಿರ್ಮಿಸುವುದು ; ಸಾರ್ವಜನಿಕವಾದ ಉದ್ಯಾನ, ಪುಸ್ತಕ ಭಂಡಾರ, ವಸ್ತು ಸಂಗ್ರಹಾಲಯ, ಬುದ್ಧಿ ವಿಕಲರ ಚಿಕಿತ್ಸೆ, ಸಭಾಸ್ಥಾನ, ಚಾವಡಿ, ಧರ್ಮಶಾಲೆ ಮುಂತಾದ ಕಟ್ಟಡಗಳನ್ನು ಸ್ಥಾಪಿಸುವುದು ; ಬಡವರ ವಾಸಕ್ಕಾಗಿ ಮನೆಗಳನ್ನು ಯೋಗ್ಯರೀತಿಯಲ್ಲಿ ಕಟ್ಟಿಸುವುದು ; ಕಲೆ, ಕೈಗಾರಿಕೆಗಳ ಪ್ರೋತ್ಸಾಹಕ್ಕಾಗಿ ಸಾಲ ಸೋಲಗಳನ್ನು ಕೊಡುವುದು ; ಸಾಲುಮರಗಳನ್ನು ನೆಡಿಸುವುದು ; ಖಾನೇಷುಮಾರಿ ಮತ್ತು ಸರ್ವೆಗಳನ್ನು ಮಾಡಿಸುವುದು ; ತುಂಟ ನಾಯಿಗಳನ್ನು ನಾಶಗೊಳಿಸುವುದು ; ಅಪಾಯಕರವೂ ಅಸಹ್ಯಕರವೂ ಆದ ವೃತ್ತಿಗಳಿಗೆ ಸರಿಯಾದ ತಾಣಗಳನ್ನು ಏರ್ಪಡಿಸುವುದು ; ಮನೆಗಳಿಗೂ ಚರಂಡಿಗಳಿಗೂ ಸಂಬಂಧವನ್ನು ಕಲ್ಪಿಸುವುದು , ಕಶ್ಮಲವನ್ನು ಸಾಗಿಸಿ ಅದಕ್ಕೆ ತಕ್ಕಂತೆ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದು , ಜನರ ಕ್ಷೇಮ, ಆರೋಗ್ಯ ಮತ್ತು ಸೌಕರ್ಯಗಳನ್ನು ಸಾಧಿಸುವ ಯಾವುದಾದರೂ ಇತರ ಕೆಲಸಗಳು ; ಮತ್ತು ಸರ್ಕಾರದ ಅನುಮತಿಯನ್ನು ಪಡೆದು ತಮ್ಮ ಸರಹದ್ದಿನಲ್ಲಿ ಉತ್ಸವ ವಿನೋದ ಅಥವಾ ಪ್ರದರ್ಶನಗಳನ್ನು ನಡೆಸುವುದು.

ಸಭಿಕರು

ಎಲ್ಲ ತೆರದ ಪೌರಸಭೆಗಳಲ್ಲಿಯೂ ೧೯೨೯ನೆಯ ಇಸವಿಯಲ್ಲಿ ಒಟ್ಟು ೧೫೫೪ ಸಭಿಕರಿದ್ದರು; ಅವರಲ್ಲಿ ೭೩೮ ಪ್ರಜೆಗಳಿಂದ ಚುನಾಯಿತರು; ೩೩೫ ಸರ್ಕಾರದಿಂದ ನಿಯಮಿತರಾದ ಖಾಸಗಿ ಜನರು; ಉಳಿದವರು ಸರ್ಕಾರಿ ನೌಕರರು. ಇತರ ಸಭೆಗಳಂತೆಯೇ ೩ ವರ್ಷಗಳಿಗೊಮ್ಮೆ ಚುನಾವಣೆಯಾಗುವ ಈ ಮುನಿಸಿಪಾಲಿಟಿಗಳಲ್ಲಿ ದೊಡ್ಡವಾದರೆ ಚುನಾಯಿತರು ೨/೩ ಪಾಲಾಗಿಯೂ, ಚಿಕ್ಕವಾದರೆ ೧/೨ ಪಾಲಾಗಿಯೂ ಇರುತ್ತಾರೆ. ರಥೋತ್ಸವ, ಜಾತ್ರೆ ಮುಂತಾದ ಕಾರಣದಿಂದ ಜನಬಾಹುಳ್ಯವು ತೋರಿಕೊಂಡಾಗ ಸರ್ಕಾರದವರು ಅಲ್ಲಿ ಒಂದು ಹಂಗಾಮಿಯಾದ ಮುನಿಸಿಪಾಲಿಟಿಯನ್ನು ಸ್ಥಾಪಿಸುವರು.

ಸರ್ಕಾರದ ಅಧಿಕಾರ

ಸಾಧಾರಣವಾಗಿ ಪೌರಸಭೆಗಳ ಕಾರ್ಯನಿರ್ವಾಹದಲ್ಲಿ ಸರ್ಕಾರದವರ ಪ್ರವೇಶವೂ ಅಧಿಕಾರವೂ ಹೆಚ್ಚಾಗಿಯೇ ಇವೆ. ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಮತ್ತು ಪ್ರಜೆಯ ಶಿಕ್ಷಣವಾಗುವಂತಹ ಕಾಲದಲ್ಲಿ ಅದು ಸಹಜವೇ. ಎಲ್ಲ ಸಭೆಗಳಿಗೂ ಅಧ್ಯಕ್ಷರು ಚುನಾಯಿತರಲ್ಲ; ಮತ್ತು ನಿತ್ಯಗಟ್ಟಳೆಯ ಕೆಲಸವನ್ನು ಬಿಟ್ಟು ಬೇರೆ ಎಂತಹ ಕೆಲಸಕ್ಕಾದರೂ ಸರ್ಕಾರದ ಅನುಮತಿಯು ಆವಶ್ಯಕ. ಸ್ಥಿತಿಗತಿಗಳನ್ನು ಪರೀಕ್ಷಿಸಿ ನೋಡಿದರೆ ನಮ್ಮ ಸ್ಥಳೀಯ ಸಂಸ್ಥೆಗಳು ತೇಜಸ್ಸಿನಿಂದ ಪ್ರವರ್ತಿಸಲು ಹಲಕೆಲವು ತೊಂದರೆಗಳು ಕಾಣುತ್ತವೆ.

ಉನ್ನತಿಗೆ ತೊಂದರೆಗಳು

ಮೊದಲನೆಯದು ಹಣದ ಕಷ್ಟ. ಪ್ರಜೆಗಳು ಹೆಚ್ಚಿನ ತೆರಿಗೆಯನ್ನು ಕೊಡುವ ಹಾಗಿಲ್ಲ. ಗ್ರಾಮಪಂಚಾಯಿತ ಸಭೆಯಾಗಲಿ, ಜಿಲ್ಲಾ ಸಭೆಯಾಗಲಿ, ಪೌರಸಭೆಯಾಗಲಿ ವಿಶೇಷವಾಗಿ ಕೆಲಸಮಾಡಲಿಕ್ಕೆ ವಿಶೇಷವಾಗಿ ಹಣ ಬೇಕು. ಅದಕ್ಕಾಗಿ ತೆರಿಗೆಯನ್ನೆತ್ತಬೇಕು. ಈಗಲೇ ಕೊಡುತ್ತಿರುವ ತೆರಿಗೆಗಳನ್ನು ಬಹಳ ಕಷ್ಟದಿಂದ ಪ್ರಜೆಗಳು ಕೊಡುವಾಗ ಹೆಚ್ಚಿನ ತೆರಿಗೆಯನ್ನೆತ್ತುವುದು ಸಾಧ್ಯವಲ್ಲ. ಎರಡನೆ ತೊಂದರೆ ಜನರ ಉದಾಸೀನ. ನಿರಕ್ಷರಸ್ಥರೂ, ಅಶಿಕ್ಷಿತರೂ ಅಜ್ಞಾನದಿಂದ ಉದಾಸೀನರಾಗುತ್ತಾರೆ; ಉತ್ತಮ

ವರ್ಗದವರು ಅಲಕ್ಷ್ಯಭಾವವನ್ನು ವಹಿಸಿ ಉದಾಸೀನರಾಗುತ್ತಾರೆ. ಕೋಮು ವಾರು ಜಗಳವೆನ್ನುವುದು ಮತ್ತೊಂದು ವಿಷಾದಕರವಾದ ಸಂಗತಿ; ಚುನಾವಣೆಯ ಪ್ರೈಪೋಟಿಗಳಲ್ಲಿಯೇ ಅಲ್ಲದೆ ಸಾರ್ವಜನಿಕವಾದ ಕರ್ತವ್ಯಗಳಲ್ಲಿಯೂ ಪರಸ್ಪರ ವೈಷಮ್ಯಗಳು ತೋರಿಕೊಂಡು ಮೇಲಿಗೆ ಬದಲಾಗಿ ಹಾನಿಯೇ ಉಂಟಾಗುತ್ತದೆ. ಸರ್ಕಾರದವರು ಅನೇಕ ವೇಳೆ ಗಳಲ್ಲಿ ಸ್ಥಳೀಯ ಸಂಸ್ಥೆಯು ಸಮರ್ಪಕವಾಗಿ ನಡೆಯಲಿಲ್ಲವೆಂದು ತಾವೇ ಪ್ರವೇಶಿಸಿ ಸಂಸ್ಥೆಗಳ ಅಧಿಕಾರವನ್ನು ತಗ್ಗಿಸುವುದು ಇದರಿಂದಲೇ. ಸರ್ಕಾರದವರನ್ನು ಅವಲಂಬಿಸಬೇಕಾದ ಅಗತ್ಯವೇ ಕೆಲವು ವೇಳೆಗಳಲ್ಲಿ ಐಕಮತ್ಯಕ್ಕೂ ಅಭಿವೃದ್ಧಿಗೂ ಅಡ್ಡಿಯಾಗುವುದುಂಟು. ಸ್ವಾತಂತ್ರ್ಯ ಸಾಲ ದೆಂದು ತಟಸ್ಥರಾಗಿರುವ ಸ್ಥಿತಿಯು ಒಂದು ಕಡೆ; ಶಂಕೆಪಟ್ಟು ತಟಸ್ಥರಾ ಗುವುದು ಇನ್ನೊಂದು ಕಡೆ; ಅಜ್ಞಾನದಿಂದ ದೂರವಾಗಿರುವುದು ಮತ್ತೊಂದು ಕಡೆಯಾಗಿದೆ. ಪ್ರಜೆಗಳಲ್ಲಿ ಪ್ರಜ್ಞೆಯೂ ಶ್ರದ್ಧೆಯೂ ಹೆಚ್ಚಿದಂತೆ ಈ ಸ್ಥಿತಿಯು ಉತ್ತಮಗೊಳ್ಳಬೇಕು. ಸ್ಥಳೀಯ ಸಂಸ್ಥೆಗಳ ಸ್ಥಿತಿಯೇ ಯಾವಾಗಲೂ ಜನರ ಯೋಗ್ಯತೆಯನ್ನು ಸೂಚಿಸತಕ್ಕುದು; 'ಯೋಗ್ಯತೆಗೆ ತಕ್ಕ ಆಡಳಿತ' ವೆಂಬಂತೆ ಜನಗಳ ಯೋಗ್ಯತೆಗೆ ತಕ್ಕಂತೆ ಸ್ಥಳೀಯ ವ್ಯವಸ್ಥೆ ಗಳು ಸಮರ್ಪಕವಾಗಿಯೋ ಅಸಮರ್ಪಕವಾಗಿಯೋ ಇರುತ್ತವೆ.

ಪ್ರಜೆಯ ಕರ್ತವ್ಯಾ ಅಧಿಕಾರಗಳು.

ಶಾಸನ ಪ್ರಭುತ್ವ

ಸರ್ಕಾರ ಮತ್ತು ಪ್ರಜೆ ಒಂದನ್ನು ಬಿಟ್ಟು ಇನ್ನೊಂದು ಇರಲಾಗು ವುದಿಲ್ಲ; ಒಂದು ಅಭಿವೃದ್ಧಿಯಾದರೆ ಮತ್ತೊಂದೂ ಅಭಿವೃದ್ಧಿಯಾಗುವುದು. ರಾಷ್ಟ್ರವೆನ್ನುವುದು ಸುಸೂತ್ರವಾಗಿ ನಡೆಯಲು ಸರ್ಕಾರದವರೂ ಪ್ರಜೆಯೂ ಧರ್ಮಬದ್ಧರಾಗಿ ಪ್ರವರ್ತಿಸಬೇಕು. ಧರ್ಮ ಅಥವಾ ನ್ಯಾಯವೆಂಬುದೇ ಭಾಗ್ಯದ ತಳಹದಿಯಾದುದರಿಂದ ಧರ್ಮವೇ ಅವಲಂಬನೀಯವಾದುದು; ಸಮಾಜ ಧರ್ಮದಲ್ಲಿ ರಾಜಕೀಯವಾದ ಭಾಗವು ಕಾನೂನುಗಳಲ್ಲಿ ರೂಪ ಗೊಂಡಿರುತ್ತದೆ. ಆದ್ದರಿಂದ ಸರ್ಕಾರದವರೂ ಪ್ರಜೆಗಳೂ ಇಬ್ಬರೂ ಕಾನೂನಿನಂತೆ ನಡೆಯತಕ್ಕದ್ದು ಅವಶ್ಯಕ. ಮನಸ್ಸು ಬಂದಂತೆ ಆಚರಿಸು

ವುದು ಕಾನೂನು ಬಲವುಳ್ಳ ರಾಷ್ಟ್ರದಲ್ಲಿ ಯಾರಿಗೂ ಶಕ್ಯವಲ್ಲ. ಇದನ್ನೇ ಇಂಗ್ಲೀಷಿನಲ್ಲಿ The Reign of Law ಎನ್ನುವರು. ಅಂದರೆ ನ್ಯಾಯವೇ ಪ್ರಭುವೆಂದು ಅದಕ್ಕೆ ಅರ್ಥ. ಈಗಿನ ಕಾಲದಲ್ಲಿ ಈ ಸ್ಥಿತಿಯೇ —ಎಂದರೆ ವ್ಯಕ್ತಿಯನ್ನವಲಂಬಿಸಿದ ಆಡಳಿತಕ್ಕೆ ಬದಲಾಗಿ ನ್ಯಾಯವನ್ನವಲಂಬಿಸುವ ಆಡಳಿತವೇ—ಸರ್ವತ್ರ ಜನತೆಯ ಗುರಿಯಾಗಿದೆ. ಈ ವ್ಯವಸ್ಥೆಯಲ್ಲಿ ಪ್ರಜೆಯ ಸ್ಥಾನವೆಂತಹುದು, ಅವನ ಕರ್ತವ್ಯಗಳು ಎಂತಹವು, ಅಧಿಕಾರಗಳು ಯಾವುವು ಎಂಬ ವಿಚಾರವು ಆವಶ್ಯಕ.

ಯಾರು ಪ್ರಜೆ ?

ಪ್ರಜೆಗಳೆಂಬವರು ಯಾರು ? ಆಳಿಕೆಗೊಳಗಾದವರೆಲ್ಲರೂ ಪ್ರಜೆಗಳು ಎಂಬುದು ರೂಢಿಯಾದರೂ ಶಾಸ್ತ್ರೀಯವಲ್ಲ. ದೇಶಭಕ್ತಿ ಅಥವಾ ಸಮಾಜ ಪ್ರೀತಿಯಿಲ್ಲದವನು ಯೋಗ್ಯನಾದ ಪ್ರಜೆಯಾದಾನೆ ? ಯೋಗ್ಯನಾದ ಪ್ರಜೆಗೆ ದೇಶಭಕ್ತಿಯಂತೆಯೇ ಹಿತಾಹಿತಜ್ಞಾನ ಅಥವಾ ವಿವೇಚನಾ ಶಕ್ತಿಯೂ ಇರಬೇಕು ; ರಾಷ್ಟ್ರದ ಸ್ಥಿತಿಗತಿಗಳಲ್ಲಿ ಮತ್ತು ಉನ್ನತಿಯ ಸಾಧಕಗಳಲ್ಲಿ ತಕ್ಕಷ್ಟು ಪರಿಜ್ಞಾನವೂ ಇರಬೇಕು. ಯೋಗ್ಯನಾದ ಪ್ರಜೆಯು ಪ್ರಾಜ್ಞನಾಗಿಯೇ ಇರುವನು. ಪ್ರಜೆಯಾದವನು ಕ್ರಮವಾಗಿ ವ್ಯಕ್ತಿ, ಮನೆ ಅಥವಾ ಕುಟುಂಬ, ಗ್ರಾಮ ಅಥವಾ ನೆರೆಯವರು, ನಾಡು ಅಥವಾ ದೇಶೀಯರು, ಮತ್ತು ಲೋಕ ಅಥವಾ ಮಾನವ ರಾಶಿಗಳೆಂಬ ಐದು ಕ್ಷೇತ್ರಗಳಲ್ಲಿ ತನ್ನ ಕರ್ತವ್ಯಗಳನ್ನು ಪಾಲಿಸಬೇಕೆಂದು ಹಿರಿಯರು ಬೋಧಿಸಿದರು. ಈ ಕರ್ತವ್ಯಗಳ ಸಾಧನೆಯಲ್ಲಿ ಪ್ರಜೆಗೆ ಸಹಾಯ ಮಾಡುವುದೇ ಸರ್ಕಾರದ ಧರ್ಮ ; ಆಡಳಿತದಗುರಿ. ಏಕೆಂದರೆ ರಾಷ್ಟ್ರದ ಅಥವಾ ಸಮಾಜದ ಉನ್ನತಿ, ಅಭ್ಯುದಯಗಳೇ ಸರ್ಕಾರಕ್ಕೂ ಪ್ರಜೆಗೂ ಇಬ್ಬರಿಗೂ ಸಮಾನವಾಗಿ ಧ್ಯೇಯವಾದುದು. ಆದ್ದರಿಂದ ರಾಷ್ಟ್ರ ಭಕ್ತಿಯೆನ್ನುವುದು ಸರ್ಕಾರಕ್ಕೂ ಪ್ರಜೆಗೂ ಇಬ್ಬರಿಗೂ ಸಮಾನವಾಗಿ ಇರತಕ್ಕದ್ದು.

ಪ್ರಜಾಲಕ್ಷಣ

ಈ ರೀತಿಯಲ್ಲಿ ಪ್ರಜೆಗೆ ಮೂರು ಮುಖ್ಯ ಗುಣಗಳು ಇರಬೇಕು:— ದೇಶಭಕ್ತಿ, ಪರಿಸ್ಥಿತಿಯ ಅರಿವು ಮತ್ತು ವಿವೇಕ. ಮೈಸೂರಿನ ಪ್ರಜೆಗೆ

ಮೈಸೂರು ಸಂಸ್ಥಾನದ ಸ್ಥಿತಿಗತಿಗಳ ಪರಿಚಯವಿರಬೇಕು ; ಭಾರತೀಯ ನಾದುದರಿಂದ ಭರತವರ್ಷದ ಸ್ಥಿತಿಗತಿಗಳ ಪರಿಚಯವೂ ಇರ ಬೇಕು ; ಮತ್ತು ಬ್ರಿಟಿಷ್ ಸಾಮ್ರಾಜ್ಯದ ತಿಳಿವೂ ತಕ್ಕಮಟ್ಟಿಗೆ ಇರಬೇಕು. ದೇಶಭಕ್ತಿಯಿಲ್ಲದವನು ಪ್ರತ್ಯಕ್ಷ ದೇಶದ್ರೋಹಿಯಾಗದಿದ್ದರೂ ಪರೋಕ್ಷ ದ್ರೋಹಿಯೇ ಆಗುತ್ತಾನೆ. ತನ್ನಿಂದ ದೇಶಕ್ಕಾಗಬಹುದಾದ ಮಂಗಳ ವನ್ನು ಮಾಡದಿದ್ದಾಗ ತಾನು ದೇಶದ ಸೌಭಾಗ್ಯದ ಭಾಗವನ್ನು ಕದ್ದಂ ತೆಯೇ ನೀತಿ ಶಾಸ್ತ್ರದಲ್ಲಿ ಸಿದ್ಧಾಂತವಾಗುವುದು. ಅಜ್ಞಾನಿಯಾಗಿರು ವುದೂ ಈ ರೀತಿಯಲ್ಲಿ ದೋಷವೆನಿಸುವುದು. ದುರ್ಬಲರಾಗಿ ಹುಟ್ಟಿದವ ರನ್ನು ಪ್ರಾಚೀನ ಕಾಲದಲ್ಲಿ ಯೌಧೇಯರು, ಕಠರು, ಮಾಳವರು ಮತ್ತು ಗ್ರೀಸ್ ದೇಶದ ಸ್ಪಾರ್ಟದವರು ವಧೆಗೆ ಗುರಿ ಮಾಡುತ್ತಿದ್ದುದು ಇಂತಹ ರಾಷ್ಟ್ರದ ದೃಷ್ಟಿಯಿಂದಲೇ; ಅಂತಹವರು ವಧ್ಯರೇ ಎನ್ನು ವುದು ಚರ್ಚಾಸ್ಪದವಾದುದು. ಆದರೆ ಪ್ರಜೆಯು ಯೋಗ್ಯನೆನಿಸಲು ರಾಷ್ಟ್ರಭಕ್ತನೂ, ಪ್ರಾಜ್ಞನೂ, ವಿವೇಕಿಯೂ ಆಗಿರಬೇಕೆನ್ನುವುದು ನಿರ್ವಿ ವಾದವಾದುದು.

ವಿವೇಕದ ಆವಶ್ಯಕತೆ

ಕೇವಲ ರಾಷ್ಟ್ರಭಕ್ತಿಯೊಂದರಿಂದಲೇ ಯೋಗ್ಯತೆಯು ಬರುವುದಿಲ್ಲ ; ಪರಿಸ್ಥಿತಿಯ ಪರಿಚಯವೂ, ಆ ಪರಿಚಯಕ್ಕಿಂತ ಹೆಚ್ಚಾದ ವಿವೇಕವೂ ಅವಶ್ಯ ವಾಗಿರಬೇಕು. ಸಾಧಾರಣವಾಗಿ ಶತ್ರುಗಳೊಡನೆ ಯುದ್ಧದಲ್ಲಿ ಹೋರಾ ಡುತ್ತ ಪ್ರಾಣವನ್ನು ತೆತ್ತವನನ್ನು ದೇಶಭಕ್ತನೆಂದೆನ್ನುತ್ತೇವೆ. ಅಷ್ಟೇ ಧೈರ್ಯ ಸಾಹಸಗಳನ್ನು ವಹಿಸಿ ಶಾಂತಿಕಾಲದಲ್ಲಿಯೂ ದೇಶಭಕ್ತನು ಮಾಡುವ ಕೆಲಸಗಳು ನೂರಾರಿರುತ್ತವೆ. ವಿಚಾರಮಾಡಿ ನೋಡಿದರೆ ಪ್ಲೇಗು ರೋಗಿಗೆ ಚಿಕಿತ್ಸೆ ಮತ್ತು ಉಪಚಾರ ಮಾಡುವ ವೈದ್ಯನೂ ಫಿರಂಗಿ ಯೆದುರಿನಲ್ಲಿ ಹೆಜ್ಜೆಹಾಕುವ ಯೋಧನಿಗೆ ಧೈರ್ಯದಲ್ಲಿ ಸಮಾನನೆಂದು ಕಾಣುವುದಿಲ್ಲವೆ ? ಮೂಢವಾದ ದೇಶಭಕ್ತಿಗಿಂತ ವಿಚಾರಪರತೆಯಿಂದ ಕೂಡಿದ ದೇಶಭಕ್ತಿಯು ಎಂದಿಗಾದರೂ ಮೇಲು. ವಿಷಯಗಳನ್ನು ತಿಳಿ ಯಲು ವಿಚಾರವು ಅವಶ್ಯವಾದಂತೆಯೇ ಕಾರ್ಯತತ್ಪರನಾಗುವಾಗಲೂ ವಿಚಾರವು ಬೇಕು.

ಸಂಕುಚಿತ ದೃಷ್ಟಿದೋಷ

ರಾಷ್ಟ್ರಭಕ್ತಿಯೆನ್ನುವುದು ವ್ಯಕ್ತಿಯಲ್ಲಿ ಭಕ್ತಿರೂಪವಾಗಿ ಪರಿಣಮಿಸಿದಾಗ ಸಂಕುಚಿತವಾಗಿ ಮೂಢವೋ, ದೋಷಯುಕ್ತವೋ ಆಗಬಹುದು. ಆದರೆ ನಿಜವಾದ ರಾಷ್ಟ್ರಭಕ್ತಿಯುಳ್ಳ ಪ್ರಜೆಯು ಸಂಕುಚಿತ ದೃಷ್ಟಿಯಿಂದ ತನ್ನ ಸ್ವಂತ ಸುಖವೊಂದನ್ನೇ ಅಥವಾ ತನ್ನವರ ಸುಖ ಮಾತ್ರವನ್ನೇ ಬಯಸಲಾರನು. ಮುನಿಸಿಪಲ್ ಮೆಂಬರಾಗಿ ತನ್ನ ಮನೆಮುಂದೆ ದೀಪವನ್ನು ಹಾಕಿಸಿಕೊಂಡರೆ ಸ್ವಾರ್ಥವೆನ್ನುವಂತೆಯೇ ತನ್ನ ಜಾತಿ ಅಥವಾ ಕೋಮಿನ ಕ್ಷೇಮ ಸೌಕರ್ಯಗಳಿಗೆ ಮಾತ್ರವೇ ಆಸೆಪಡುವುದೂ ದೋಷವೆನಿಸುವುದು. ಯೋಗ್ಯನಾದ ಪ್ರಜೆಯು ವಿಶಾಲ ದೃಷ್ಟಿಯಿಂದಲೇ ವಿಷಯ ವಿಚಾರವನ್ನು ಮಾಡಿ ಕೆಲಸಮಾಡುತ್ತಾನೆ.

ಕರ್ತವ್ಯಾಧಿಕಾರಗಳ ಅನ್ಯೋನ್ಯತೆ

ಪ್ರಜೆಯು ತನ್ನ ಧರ್ಮವನ್ನು ಪಾಲಿಸುವುದೆಂದರೆ ತನ್ನ ಕರ್ತವ್ಯಗಳನ್ನು ನೆರವೇರಿಸಿ ತನ್ನ ಅಧಿಕಾರವನ್ನು ಅನುಭವಿಸುವುದೆಂದರ್ಥ. ಕರ್ತವ್ಯ ಮತ್ತು ಅಧಿಕಾರಗಳು ಬೇರೆಯಾದರೂ ಒಂದನ್ನೊಂದು ಎಡೆಬಿಡದೆ ಇರತಕ್ಕವುಗಳು. ಉದಾಹರಣೆಗೆ ನನ್ನ ತೋಟದಲ್ಲಿ ಯಾರೂ ಕದಿಯಕೂಡದೆಂದೂ, ನನ್ನ ಆಸ್ತಿಪಾಸ್ತಿಗಳು ನನ್ನವೇ ಆಗಿರಬೇಕೆಂದೂ ನನ್ನ ಆಸೆ, ನನ್ನ ನಿರೀಕ್ಷೆ ಮತ್ತು ನನ್ನ ಹಕ್ಕು. ಆದರೆ, ನೆರೆಯವರ ತೋಟದಲ್ಲಿ ನಾನು ಕದಿಯಬಹುದೇನು ? ಇತರರಿಗೆ ಬೇಡವೆಂದು ನಾನು ಮಾತ್ರ ಅಧಿಕಾರವನ್ನು ವಹಿಸುವುದು ನ್ಯಾಯವೇ ? ಇತರರ ಸ್ವತ್ತಿಗಾಸೆ ಪಡದೆ ಇರುವುದು ನನ್ನ ಧರ್ಮ ; ಇತರರ ವಸ್ತುವನ್ನು ಕದಿಯದೆ ಇರುವುದು ನನ್ನ ಹೊಣೆಗಾರಿಕೆ. ನನ್ನಂತೆಯೇ ಇತರರೂ ನನಗೆ ಸಮಾನವಾದ ಅಧಿಕಾರವನ್ನು ಅನುಭವಿಸುವಂತೆ ಅನುಕೂಲಪಡಿಸುವುದು ನನ್ನ ಕರ್ತವ್ಯ. ಈ ರೀತಿಯಲ್ಲಿ ಅಧಿಕಾರ ಬೇಕಾದಾಗ ಕರ್ತವ್ಯವನ್ನು ಪಾಲಿಸಬೇಕಾದುದೇ ನ್ಯಾಯ. ಕರ್ತವ್ಯವಿಲ್ಲದೆ ಅಧಿಕಾರ ಬರುವುದಿಲ್ಲ ; ಅಧಿಕಾರವನ್ನು ತಾರದ ಕರ್ತವ್ಯವೂ ಇರುವುದಿಲ್ಲ. ಇದೇ ಕರ್ತವ್ಯಾಧಿಕಾರಗಳ ಅನ್ಯೋನ್ಯತೆ ಎಂಬ ಲಕ್ಷಣ. ತನ್ನ ಅಧಿಕಾರವನ್ನು ಇತರರು ಸಹಿಸುವಂತೆ ತಾನು ಇತರರ ಅಧಿಕಾರವನ್ನು ಸಹಿಸಬೇಕು ; ಮತ್ತು ಇತರರು ಕರ್ತವ್ಯಪರ

ರಾಗಬೇಕೆಂದು ನಿರೀಕ್ಷಿಸುತ್ತ ತಾನು ಕರ್ತವ್ಯ ಭ್ರಷ್ಟನಾಗಬಾರದು. ಇದಲ್ಲದೆ ಅಧಿಕಾರದಲ್ಲಿಯೇ ಕರ್ತವ್ಯವು ಹುಟ್ಟುವ ವಿಚಿತ್ರ ಸಂಗತಿಯೂ ಉಂಟು. ವೋಟುಗಳನ್ನು ಕೊಡುವುದು ಅಧಿಕಾರವೆಂದೇ ಸಾಮಾನ್ಯವಾಗಿ ಭಾವಿಸುತ್ತೇವೆ. ವೋಟುದಾರನಾದವನು ಸಮಯಕ್ಕೆ ಸರಿಯಾಗಿ ತನ್ನ ವೋಟನ್ನು ಕೊಡದಿದ್ದರೆ ತನ್ನ ಅಧಿಕಾರವನ್ನು ಬಿಟ್ಟನೆಂದು ಮಾತ್ರವೇ ಅಲ್ಲ, ತನ್ನ ಕರ್ತವ್ಯವನ್ನು ಮಾಡದೆ ಹೋದನೆಂಬ ಆಪಾದನೆಗೆ ಗುರಿಯಾಗುವನು. ಆಸ್ಟ್ರೇಲಿಯದಲ್ಲಿ ಭಾರತೀಯರು ವೋಟುದಾರರಾಗಿ ಪ್ರಯಾಣ ಪ್ರಯಾಸದಿಂದ ವೋಟುಗಳನ್ನು ಕೊಡದಿದ್ದಾಗ ಅಲ್ಲಿಯ ಸರ್ಕಾರವು ಅವರನ್ನು ಕುರಿತು 'ನೀವು ಕರ್ತವ್ಯ ಭ್ರಷ್ಟರಾದೀರಿ, ಅಪರಾಧಕ್ಕೆ ಗುರಿಯಾದೀರಿ' ಎಂದು ಹೇಳಿತು. ಸುವ್ಯವಸ್ಥಿತವಾದ ರಾಷ್ಟ್ರದಲ್ಲಿ ಕರ್ತವ್ಯವೇ ಅಧಿಕಾರವಾಗಿಯೂ, ಅಧಿಕಾರವೇ ಕರ್ತವ್ಯವಾಗಿಯೂ ಪರಿಣಮಿಸುವುದು.

ಪ್ರಮಾಣ ಪತ್ರಗಳು

ನಮ್ಮ ದೇಶದಲ್ಲಿ ಪೂರ್ವಕಾಲದಿಂದಲೂ ಧರ್ಮ ಅಥವಾ ಕರ್ತವ್ಯಗಳಲ್ಲಿ ದೃಷ್ಟಿಯು ಪ್ರಬಲ; ಹಕ್ಕು ಅಧಿಕಾರಗಳಲ್ಲಿ ಕಡಿಮೆ. ಅಧಿಕಾರವನ್ನು ಅನುಭವಿಸುವುದಕ್ಕಿಂತ ಕರ್ತವ್ಯಗಳನ್ನು ಪಾಲಿಸುವುದೇ ಹೆಚ್ಚಿನದೆಂದು ನಮ್ಮ ಸಮಾಜ ವ್ಯವಸ್ಥೆಯ ತತ್ತ್ವ. ಪಾಶ್ಚಾತ್ಯದೇಶಗಳಲ್ಲಿ ದುಷ್ಟರೂ, ನಿಷ್ಠುರರೂ ಆದ ಅಧಿಕಾರಿವರ್ಗದವರ ದೆಸೆಯಿಂದ ನಾನಾ ಕಷ್ಟನಷ್ಟಗಳನ್ನು ಪ್ರಜಾವರ್ಗದವರು ಪಟ್ಟು, ಒಟ್ಟಾಗಿ ದಂಗೆಯೆದ್ದು, ತಮ್ಮ ಅಧಿಕಾರಗಳನ್ನು ಒಪ್ಪಂದದ ರೀತಿಯಲ್ಲಿ ಪ್ರಮಾಣಪತ್ರಗಳಲ್ಲಿ ಬರೆಸಿಟ್ಟುಕೊಂಡಿರುವರು. ಅಂತಹ ಪ್ರಮಾಣಪತ್ರಗಳನ್ನು ಉಲ್ಲಂಘಿಸಲು ಯಾರಿಗೂ ಶಕ್ಯವಿಲ್ಲ. ಆದ್ದರಿಂದ ಮುಂದುವರಿದ ರಾಷ್ಟ್ರಗಳಲ್ಲಿ ನ್ಯಾಯವೇ ಪ್ರಭು; ವ್ಯಕ್ತಿಯಲ್ಲ. ವ್ಯಕ್ತಿಯನ್ನವಲಂಬಿಸಿದ ವ್ಯವಸ್ಥೆಯು ವ್ಯಕ್ತಿಯ ಗುಣದೋಷಗಳ ಪ್ರತಿಬಿಂಬವಾಗುವುದು ಸಹಜ; ಆದ್ದರಿಂದ, ಆ ದೇಶಗಳಲ್ಲಿ ವ್ಯಕ್ತಿಯ ಮಹಿಮೆಯು ಕಡಿಮೆ; ನ್ಯಾಯದ ಮಹಿಮೆಯೇ ಬಹಳ ಹೆಚ್ಚು. ಈ ಸ್ಥಿತಿಯು ನೆಲೆಯಾಗಿರುವುದು ಆ ಪ್ರಮಾಣ ಪತ್ರಗಳ ಬಲದಿಂದ. ಘೋರಯುದ್ಧ ಮುಗಿದ ಅನಂತರ ಹೊಸದಾಗಿ ಹುಟ್ಟಿದ ರಾಷ್ಟ್ರಗಳ ಪ್ರಜೆಗಳ ಹಕ್ಕು

ಬಾಧ್ಯತೆಗಳು ವಿಸ್ತಾರವಾಗಿ ಕ್ರೋಢೀಕೃತವಾಗಿವೆ. ಇಂಗ್ಲೆಂಡು, ಅಮೇರಿಕಾ, ಫ್ರಾನ್ಸು ದೇಶಗಳಲ್ಲಿಯೂ ಪ್ರಜೆಗಳ ಅಧಿಕಾರ ಭಾಗವು ರಾಷ್ಟ್ರಕ್ಕೆ ಮೂಲಾಧಾರಗಳೆನಿಸಿದ ಪತ್ರಗಳಲ್ಲಿ ಉಲ್ಲೇಖವಾಗಿದೆ. ಭಾರತವರ್ಷದಲ್ಲಿ ಬ್ರಿಟಿಷ್ ವಿಭಾಗದಲ್ಲಾಗಲಿ, ಆಶ್ರಿತ ಸಂಸ್ಥಾನಗಳಲ್ಲಾಗಲಿ ಅಂತಹ ಪತ್ರಗಳು ಯಾವುವೂ ಇಲ್ಲ. ಪ್ರಜೆಗಳ ಕರ್ತವ್ಯಾಧಿಕಾರಗಳು ಸೂಚಿತವಾದ ಭಾಗವಾಗಿದೆಯೇ ವಿನಾ ಪ್ರಕಟಿತವೂ ಶಾಸನಸ್ಥವೂ, ಆದವುಗಳಲ್ಲ.

ಸರ್ವಸಿದ್ಧಿ

ರಾಷ್ಟ್ರವೆಂಬ ಏರ್ಪಾಟಿನಲ್ಲಿ ಹೆಗ್ಗುರಿಯು ಜನತೆಯು ಸರ್ವಸಿದ್ಧಿಯೆಂಬುದಕ್ಕೆ ಅರ್ಥವೇನು ? ಸರ್ವಸಿದ್ಧಿಯೆಂದರೇನು ? ಇದನ್ನು ವಿವರಿಸುವುದು ಕಷ್ಟವಾದರೂ, ಸುವ್ಯವಸ್ಥೆಯುಳ್ಳ ರಾಷ್ಟ್ರಗಳ ಸ್ಥಿತಿಯನ್ನು ಕಂಡಮೇಲೆ, ಕೆಲವು ಅಂಶಗಳನ್ನು ಎತ್ತಿ ಹೇಳಬಹುದು. ಸುಸ್ಥಿತಿ ಅಥವಾ ಸರ್ವಸಿದ್ಧಿಯೆಂದರೆ ಪ್ರತಿಯೊಬ್ಬನ ದೇಹ, ಸ್ವತ್ತು ಮತ್ತು ಗೌರವಗಳು ಭದ್ರವಾಗಿರಬೇಕು; ಪ್ರತಿಯೊಬ್ಬನಿಗೂ ಮಾತಿನ ಮತ್ತು ಕಸಬಿನ ಸ್ವಾತಂತ್ರ್ಯವಿರಬೇಕು ; ಸುಲಭವಾದ ಶಿಕ್ಷಣ ದೊರೆಯಬೇಕು ; ಇಷ್ಟವಾದ ಮತವನ್ನವಲಂಬಿಸುವ ಸ್ವಾತಂತ್ರ್ಯವಿರಬೇಕು ; ಹಗುರವಾದ ಮತ್ತು ನ್ಯಾಯವಾದ ತೆರಿಗೆಯಿರಬೇಕು ; ವ್ಯವಸಾಯ, ವ್ಯಾಪಾರ, ಉದ್ಯೋಗ ಮತ್ತು ಕೈಗಾರಿಕೆಗಳಲ್ಲಿ ಸುಭಿಕ್ಷವಾಗಿರಬೇಕು ; ಪ್ರತಿಯೊಬ್ಬನೂ ದೇಹದಾರ್ಢ್ಯವುಳ್ಳವನೂ ಆರೋಗ್ಯವಂತನೂ ಆಗಿರಬೇಕು ; ದೇಶದ ರಕ್ಷಣೆ, ಪಾಲನೆಗಳು ಸಮರ್ಥವಾದುವಾಗಿರಬೇಕು ; ಎಲ್ಲ ವರ್ಗಗಳೂ ಮಾನವಂತರಾಗಿ ಬದುಕಬೇಕು ; ದೇಶದ ಗೌರವ ಯಶಸ್ಸುಗಳು ವೃದ್ಧಿಯಾಗುತ್ತಲಿರಬೇಕು. ಇವುಗಳೆಲ್ಲವೂ ಕೂಡಿ ಒದಗಿದರೆ ದೇಶೋನ್ನತಿಯೂ, ಪ್ರಜಾಭ್ಯುದಯವೂ ಸಿದ್ಧವಾಗುವುದರಲ್ಲಿ ಸಂದೇಹವಿಲ್ಲ. ಪ್ರಜೆಯೂ, ಸರ್ಕಾರವೂ ಎರಡೂ ಇವಕ್ಕಾಗಿ ಶ್ರಮಪಡುವಾಗ ಒಬ್ಬರಿಗೊಬ್ಬರು ಸಹಾಯಕರಾಗಿರತಕ್ಕದ್ದು ನ್ಯಾಯ ಮತ್ತು ಅವಶ್ಯಕ. ಸರ್ಕಾರದ ಆಡಳಿತಕ್ಕೆ ಪ್ರಜೆಯು ಒಪ್ಪಿ ಸಹಾಯಕನಾಗಬೇಕು ; ಸರ್ಕಾರವು ಪ್ರಜೆಯ ಅಧಿಕಾರವನ್ನು ಒಪ್ಪಿ ಅದನ್ನು ವೃದ್ಧಿಪಡಿಸಬೇಕು. ಎಲ್ಲಿ ಈ ಅನ್ಯೋನ್ಯತೆಗೆ ಬದಲಾಗಿ ವಿರೋಧವೇ ಸ್ಥಿರವಾಗಿ ತೋರಿಬರುವುದೋ ಅಲ್ಲಿ ಸುಸ್ಥಿತಿಯು

ನೆಲೆಸಿರಲಾರದು. ಇಬ್ಬರ ಉದ್ದೇಶವೂ ಒಂದೇ ಆಗಿದ್ದರೆ ವಿರೋಧವು ಸ್ಥಿರವಾಗುವುದಿಲ್ಲ ; ಉದ್ದೇಶದಲ್ಲಿ ಭೇದವಿದ್ದರೆ ವೈರವೇ ಹುಟ್ಟುವುದು. ಅನ್ಯಾಕ್ರಾಂತವಾದ ದೇಶಗಳಲ್ಲಿ ವಿರೋಧವು ತೋರಿಕೊಳ್ಳುವುದು ಈ ಉದ್ದೇಶ ವ್ಯತ್ಯಾಸದಿಂದಲೇ.

ಮೈಸೂರಿನವರ ಸ್ಥಾನ

ಮೈಸೂರಿನ ಪ್ರಜೆಗಳು ಮೊದಲು ಮೈಸೂರಿನವರು ; ಹಾಗೆಯೇ ಭಾರತೀಯರು. ಮೈಸೂರಿನ ಪ್ರಜೆಗಳು ಮಹಾರಾಜರ ಸರ್ಕಾರದ ಆಡಳಿತಕ್ಕೊಳಗಾದವರೂ ಹೌದು; ಭಾರತ ಪ್ರಪಂಚಕ್ಕೆ ಸೇರಿದವರೂ ಹೌದು. ಎರಡು ಆಡಳಿತಗಳೂ ಒಂದಕ್ಕೊಂದು ಹೊಂದಿಕೊಂಡು ನಡೆಯುತ್ತಲಿವೆ. ಈ ಸರ್ಕಾರದ ಕೆಲಸದಲ್ಲಿ ಪ್ರಜೆಯು ನೆರವಾಗುವುದು ಹೇಗೆ? ಪ್ರಜೆಯ ಕರ್ತವ್ಯಗಳು ಯಾವುವು ? ಎಂಬ ಪ್ರಶ್ನೆಗೆ ಉತ್ತರ ಕೊಡುವುದರಲ್ಲಿ ಮೊದಲು ಕಾನೂನುಗಳಲ್ಲಿ ಹೇಳಿರುವ ಸ್ವಲ್ಪ ಭಾಗವನ್ನು ಕಾಣಬೇಕು. ಆ ಭಾಗವನ್ನು ನಿರ್ಬಂಧದ ಅಥವಾ ಬಲವಂತದ ಭಾಗ ವೆನ್ನಬಹುದು.

ಬಲವಂತ ಕರ್ತವ್ಯಗಳು

ಮೊದಲು ನಮ್ಮ ಯೋಗ್ಯತೆಗೆ ತಕ್ಕಂತೆ, ಮತ್ತು ವಿಧಾಯಕವಾದಂತೆ ತೆರಿಗೆ ಕಂದಾಯಗಳನ್ನು ಕೊಡತಕ್ಕದೆಂದು ಕಾನೂನುಗಳು ಸಾರುತ್ತವೆ. ಸರ್ಕಾರವು ನಡೆಯಲು ತೆರಿಗೆಯನ್ನು ಕೊಡುವ ಪ್ರತಿ ಪ್ರಜೆಯೂ ಸಹಾಯಮಾಡಿ ತನ್ನ ಕರ್ತವ್ಯವನ್ನು ಪಾಲಿಸುತ್ತಾನೆ. ಕ್ರಿಮಿನಲ್ ವ್ಯವಹಾರಗಳ ವಿಚಾರಣೆಗಳಲ್ಲಿ ಜೂರಿರ್ಮ್ಯ ಅಥವಾ ಪಂಚಾಯಿತನಾಗಬೇಕೆಂದು ಗೊತ್ತಾದರೆ ಆ ಕರ್ತವ್ಯವನ್ನು ಪ್ರಜೆಯು ಹೊತ್ತೇ ತೀರಬೇಕು. ಅದರಂತೆಯೇ ಕ್ರಿಮಿನಲ್ ಸಂಬಂಧವಾದ ಅಪರಾಧಗಳು ನಡೆದಾಗ ತನಗೆ ಗೊತ್ತಿದ್ದ ಸಮಾಚಾರವನ್ನು ಅಧಿಕಾರಿಗಳಿಗೆ ತಿಳಿಸುವುದೂ, ಶಾಸನ ವಿರುದ್ಧವೆಂಬ ಸಭೆಗಳನ್ನು ಭಂಗಪಡಿಸುವುದರಲ್ಲಿ ಅಧಿಕಾರಿಗಳಿಗೆ ಕೈಯಲ್ಲಾದ ಸಹಾಯವನ್ನು ಮಾಡುವುದೂ ನಿಬಂಧನೆಯಿಂದ ವಿಧಾಯಕವಾಗಿದೆ. ಕ್ರಾಂತಿಯ ಕಾಲದಲ್ಲಿ ಇರುವ ಪೋಲೀಸ್ ಸಿಬ್ಬಂದಿಯು ಸಾಲದೆಂದು ಖಾಸಗಿ ಜನರನ್ನೇ ಪೋಲೀಸು ದಳದಲ್ಲಿ ವಿಶೇಷವಾಗಿ ನಿಯಮಿಸಿದಾಗ



ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ಅವರು



ಶ್ರೀ ಜಯಚಾಮರಾಜೇಂದ್ರ ಒಡೆಯರ್ ಅವರು

ಹಾಗೆ ನಿಯಮಿತರಾದವರು ಆ ಕರ್ತವ್ಯವನ್ನು ಅಂಗೀಕರಿಸಬೇಕು. ನಿಬಂಧನೆಗಳಲ್ಲಿ ಈ ಕರ್ತವ್ಯಗಳೇ ಮುಖ್ಯವಾದವು. ಮಾಡಬಾರದುದನ್ನು ಪೀನಲ್ ಕೋಡಿನಲ್ಲಿಯೇ ವಿವರಿಸಿರುತ್ತದೆ. ಈ ಬಲವಂತ ಭಾಗದಲ್ಲಿ ಅತಿಕ್ರಮವಾದರೆ ಶಿಕ್ಷೆಗೆ ಅರ್ಹತೆಯು ತೋರಿತೆಂದು ಸಿದ್ಧವಾಗುತ್ತದೆ.

ಐಚ್ಛಿಕ ಕರ್ತವ್ಯಗಳು

ಐಚ್ಛಿಕವಾದ ಕರ್ತವ್ಯವು ಬೇಕಾದಷ್ಟಿರುವುದು. ಗೌರವ ಕಾರ್ಯ ಕ್ಷೇತ್ರದಲ್ಲಿ ತನ್ನ ಪಾಲಿಗೆ ಬಂದುದನ್ನು ಸ್ವೀಕರಿಸುವುದು ಕರ್ತವ್ಯವಲ್ಲನೇ ? ಆದರೆ, ಅದು ನಿಬಂಧನೆಯಲ್ಲಿರಲಾರದ ವಿಷಯ. ಪ್ರಜೆಯು ಕರ್ತವ್ಯಕ್ಕೆ ನಿಜವಾಗಿ ಮೇರೆಯಿಲ್ಲ ; ಮಾಡಬೇಕಾದ ಕರ್ತವ್ಯಕ್ಕೆ ತಕ್ಕಷ್ಟು ಆಸ್ಪದವು ಸರ್ವದಾ ಇರುವುದಿಲ್ಲ. ಕಳ್ಳನನ್ನು ಹಿಡಿದುಕೊಡುವುದು, ದೀನರಿಗೂ ಅನಾಥರಿಗೂ ಸಹಾಯಮಾಡುವುದು, ಶಾಲೆಗಳು ಚಿಕಿತ್ಸಾಲಯು ಗಳು ದೇವಾಲಯಗಳು ಮುಂತಾದುವನ್ನು ಸ್ಥಾಪಿಸುವುದು, ವೋಟು ಕೊಡುವುದು ಮುಂತಾದುವೆಲ್ಲವೂ ಜನ ಸೇವೆಯೇ ; ಜನ ಸೇವೆಯೆಲ್ಲವೂ ಕರ್ತವ್ಯವೇ. ಮಕ್ಕಳಿಗೆ ಶಿಕ್ಷಣ ಕೊಡಿಸುವುದು ತಂದೆಯ ಕರ್ತವ್ಯ ; ಅಂತಹ ಶಿಕ್ಷಣದ ಅನುಕೂಲವನ್ನು ಪಡೆಯುವುದು ಆತನ ಹಕ್ಕು. ಆದ್ದರಿಂದ ಅಧಿಕಾರ ವಿವರದಿಂದಲೇ ಕರ್ತವ್ಯವೆಷ್ಟಿದೆಯೆಂದು ಗೋಚರವಾಗುವುದು. ಏಕೆಂದರೆ, ಪ್ರತ್ಯಧಿಕಾರವೂ ಒಂದು ಕರ್ತವ್ಯವನ್ನು ಸೂಚಿಸುತ್ತದೆ ; ಅಧಿಕಾರವು ಕರ್ತವ್ಯದಲ್ಲಿ ಕೊನೆಗಾಣುವುದೇ ಸುಸ್ಥಿತಿ.

ಅಧಿಕಾರ ಲಕ್ಷಣ

ಪ್ರಜೆಯ ಅಧಿಕಾರವೆನ್ನುವುದಕ್ಕೆ ಮೂರು ಮುಖ್ಯ ಲಕ್ಷಣಗಳಿರಬೇಕು. ಎಂತಹ ಅಧಿಕಾರವಾದರೂ ದೇಶೋನ್ನತಿಗೆ ಅಥವಾ ರಾಷ್ಟ್ರ ಸೌಭಾಗ್ಯಕ್ಕೆ ಸಹಾಯಕವಾಗಿರಬೇಕೆಂಬುದು ಮೊದಲನೆಯ ಲಕ್ಷಣ. ಎರಡನೆಯದು ಎಂತಹ ಅಧಿಕಾರವಾದರೂ ಪ್ರಜೆಯ ಯಾವುದೋ ಒಂದು ಭಾಗಕ್ಕಲ್ಲದೆ ಎಲ್ಲರಿಗೂ ಕಾಲಾನಂತರವಾದರೂ ಅನ್ವಯಿಸುವಂತೆ ಇರಬೇಕು. ಹಕ್ಕುಬಾಧ್ಯತೆಗಳು ಸರ್ವಸಾಮಾನ್ಯವಾಗಿಲ್ಲದಿದ್ದಾಗ ದೇಶದಲ್ಲಿ ಕ್ಷೇಮವು ಸ್ಥಿರವಾಗಿ ನೆಲೆಸಲು ಅಡ್ಡಿಯಾಗುವುದು. ಚರಿತ್ರೆಯಲ್ಲಿ ಇದಕ್ಕೆ

ಅನೇಕ ದೃಷ್ಟಾಂತಗಳುಂಟು. ಅಧಿಕಾರದ ಮೂರನೆಯ ಲಕ್ಷಣವೂ ಮುಖ್ಯವಾದುದು. ಏಕೆಂದರೆ, ತನ್ನ ಅಧಿಕಾರವನ್ನು ಪ್ರಜೆಯಾದವನು ಸ್ಥಾಪಿಸಿಕೊಳ್ಳಲು ತಕ್ಕ ಆಧಾರವು ಕಾನೂನುಗಳಲ್ಲಿಯೂ ಇರಬೇಕು. ಕಾನೂನಿನ ಆಧಾರವಿಲ್ಲದ ಅಧಿಕಾರವು ಪ್ರಜೆಗೆ ಧೈರ್ಯವನ್ನಾಗಲಿ ಗೌರವ ವಿಶ್ವಾಸಗಳನ್ನಾಗಲಿ ಕೊಡುವುದಿಲ್ಲ. ಆದ್ದರಿಂದ, ಕಾನೂನಿನ ಬೆಂಬಲ ವಿರುವುದು ಅತ್ಯಾವಶ್ಯಕ. ಪ್ರಜಾಧಿಕಾರವೆಂದರೆ ಸಂಕ್ಷೇಪವಾಗಿ ಅಭ್ಯು ದಯಕ್ಕೆ ಆಸ್ಪದವನ್ನೂ ಉತ್ತೇಜನವನ್ನೂ ಕೊಡತಕ್ಕ ವಿಷಯಗಳಲ್ಲಿ ಸ್ವಾತಂತ್ರ್ಯವೆಂದರ್ಥ ; ಒಬ್ಬರ ಸ್ವಾತಂತ್ರ್ಯದಿಂದ ಮತ್ತೊಬ್ಬರಿಗೆ ಆಟಂಕ ವಾಗದಂತಿರುವುದೇ ಅಧಿಕಾರದ ಎಲ್ಲೆ. ಈ ಮೇರೆಯನ್ನು ಕಟ್ಟಿಕೊಂಡು, ಹುಟ್ಟಿದ ಪ್ರಜೆಗಳೆಲ್ಲರೂ ತಮ್ಮ ದೇಶದಲ್ಲಿ ತಮ್ಮ ಏಳಿಗೆಯನ್ನು ಸಾಧಿಸುವು ದರಲ್ಲಿ ನಿರತರಾಗಿ ಆ ಸಾಧನೆಯಲ್ಲಿ ನಿರಾತಂಕರಾಗಿರಬೇಕು.

ಪ್ರತಿಯೊಂದು ನಾಗರಿಕ ಜನಾಂಗದಲ್ಲಿಯೂ ಪ್ರಜೆಗಳಿಗೆ ಇರಬೇ ಕಾದ ಪ್ರಧಾನಾಧಿಕಾರಗಳು ಇವು :—

ಮೂಲಾಧಿಕಾರಗಳು

(೧) ಶರೀರ ಸ್ವಾತಂತ್ರ್ಯ : ಪ್ರಜೆಯ ದೇಹವನ್ನು ಬಂಧಿಸು ವುದು ಅಥವಾ ಹಿಂಸಿಸುವುದು ಯಾರಿಗಾದರೂ ಅಧರ್ಮವೆನಿಸಿರಬೇಕು. ಕಳ್ಳರು, ಹುಚ್ಚರು ಮುಂತಾದವರಿಗೆ ಹೊರತು ಉಳಿದ ಪ್ರಜೆಗಳೆಲ್ಲರಿಗೂ ಈ ಅಧಿಕಾರವಿದ್ದೇ ಇರಬೇಕು. ಕಾರಣವನ್ನು ಸ್ಪಷ್ಟವಾಗಿ ತೋರದೆ ದಸ್ತಗಿರಿ ಮಾಡುವುದು, ದಸ್ತಗಿರಿ ಮಾಡಿದ ಮೇಲೆ ವಿಚಾರಣೆಯಿಲ್ಲದೆ ಬಂಧನದಲ್ಲಿಡುವುದು ಈ ಅಧಿಕಾರಕ್ಕೆ ವ್ಯತಿರಿಕ್ತವಾದುದು.

(೨) ಸಂಚಾರ ಸ್ವಾತಂತ್ರ್ಯ : ಸ್ವದೇಶದಲ್ಲಿ ಎಲ್ಲಿಗೆ ಬೇಕಾ ದರೂ ಹೋಗುವ ಮತ್ತು ಎಲ್ಲಿ ಬೇಕಾದರೂ ನೆಲೆಸುವ ಅಧಿಕಾರವೂ ಪ್ರಧಾನವಾದುದು. ಪರಂಪರೆಯಾಗಿ ದರೋಡೆ, ಡಕಾಯಿತಿಗಳಲ್ಲಿಯೇ ನಿರತರಾದವರಿಗೆ ಮಾತ್ರ ಈ ಅಧಿಕಾರವನ್ನು ಕೊಡದಿರುವುದು ನ್ಯಾಯ. ಅದೇ ಈ ಅಧಿಕಾರಕ್ಕೆ ಸಹಜವಾದ ಎಲ್ಲೆ.

(೩) ಮತ ಸ್ವಾತಂತ್ರ್ಯ: ಇದರ ಅರ್ಥ, ಪ್ರಜೆಯಾದವನು ತನಗೆ ಇಷ್ಟಬಂದ ಮತವನ್ನು ಅವಲಂಬಿಸುವ ಅಧಿಕಾರ. ನಮ್ಮ ದೇಶದಲ್ಲಿ ಈ

ವಿಷಯದಲ್ಲಿ ಮಹಮ್ಮದೀಯರು ರಾಜ್ಯಸ್ಥಾಪನೆ ಮಾಡುವವರೆಗೂ ಪರಧರ್ಮ ಸಹಿಷ್ಣುತೆಯೇ ಧರ್ಮವಾಗಿದ್ದಿತು; ಮುಹಮ್ಮದೀಯರ ಪ್ರಭುತ್ವದಲ್ಲಿಯೂ ಕಡೆಗೆ ಸಹಿಷ್ಣುತೆಯೇ ನೆಲೆಸುವಂತಾಯಿತು. ಪಾಶ್ಚಾತ್ಯ ದೇಶಗಳಲ್ಲಿ ಮತ ವಿರೋಧವು ಘೋರ ರೂಪವನ್ನು ತಾಳಿದ್ದುದರಿಂದ, ಅಲ್ಲಿಯ ಜನರು ಇದನ್ನು ಪ್ರಿಯವೆಂದೆಣಿಸುತ್ತಾರೆ. ಬ್ರಿಟಿಷರ ಆಳಿಕೆಯಲ್ಲಿ ಮತ ಸ್ವಾತಂತ್ರ್ಯವುಂಟು.

(೪) ವಾಕ್ಸ್ವಾತಂತ್ರ್ಯ: ಪ್ರಜೆಗೆ ತನ್ನ ಯೋಚನೆಗಳನ್ನೂ ಅಭಿಪ್ರಾಯಗಳನ್ನೂ ಪ್ರಕಾಶಗೊಳಿಸುವುದರಲ್ಲಿ ಅಡ್ಡಿಯಿರಬಾರದೆಂದು ಇದರ ಉದ್ದೇಶ. ಪ್ರಕಾಶಪಡಿಸುವುದು ಬಾಯಿಮಾತಿನಿಂದಲೂ ಬರಹದಿಂದಲೂ ಆಗುತ್ತದೆ. ಆದ್ದರಿಂದ ಭಾಷಣ, ವೃತ್ತಪತ್ರಿಕೆ ಮತ್ತು ಪುಸ್ತಕ ಪ್ರಕಟನೆಗಳು ಈ ಪ್ರಸ್ತಾಪದಲ್ಲಿ ಸೇರುತ್ತವೆ. ಅಶ್ಲೀಲತೆ ಅಥವಾ ಮಾನರಾಹಿತ್ಯ ಮತ್ತು ವ್ಯಕ್ತಿನಿಂದೆಗಳೇ ಈ ಅಧಿಕಾರಕ್ಕೆ ನ್ಯಾಯವಾದ ಮೇರೆಗಳು.

ನಮ್ಮ ದೇಶದಲ್ಲಿ ಈ ಅಧಿಕಾರವು ಇಲ್ಲವೆಂದೇ ಹೇಳಬೇಕು. ಇಂಗ್ಲೆಂಡು, ಅಮೇರಿಕಾ ಮುಂತಾದ ದೇಶಗಳಲ್ಲಿ ಆಡಳಿತದ ತೀವ್ರ ವಿಮರ್ಶೆ ಮಾಡುತ್ತ ವೃತ್ತ ಪತ್ರಿಕೆಗಳು ಸರ್ವಸ್ವಾತಂತ್ರ್ಯವನ್ನು ಪಡೆದು ಜನಜೀವನದಲ್ಲಿ ಪ್ರಬಲ ಶಕ್ತಿ ಸ್ವರೂಪವನ್ನು ತಾಳಿರುತ್ತವೆ.

(೫) ಸಭಾಧಿಕಾರ: ಪ್ರಜೆಗಳು ಯಾವ ವಿಷಯವನ್ನಾದರೂ ಚರ್ಚಿಸುವುದಕ್ಕೂ ತಮ್ಮ ಅಭಿಪ್ರಾಯಗಳನ್ನು ಇತರರಿಗೆ ತಿಳಿಸುವುದಕ್ಕೂ ಇದೇ ಸಹಜವಾದ ಮಾರ್ಗ. ಈ ಮೂಲಕ ಸಾಮಾನ್ಯ ಪ್ರಜೆಗೆ ಶಿಕ್ಷಣವೂ ದೊರಕುವುದು. ನಾಗರಿಕತೆಯುಳ್ಳ ದೇಶಗಳಲ್ಲಿ ಸಭೆ ಸೇರುವ ಅಧಿಕಾರ ಪ್ರಜೆಯ ಜನ್ಮಸಿದ್ಧವಾದ ಹಕ್ಕೆನಿಸಿರುತ್ತದೆ.

(೬) ಸಂಘಾಧಿಕಾರ: ನಾನಾ ಮುಖವಾದ ಪ್ರಜಾಹಿತವನ್ನು ಸಾಧಿಸಲು ನಾನಾ ಮುಖವಾದ ಪ್ರಯತ್ನಗಳು ಬೇಕು. ಒಬ್ಬನೇ ಯತ್ನಿಸುವುದಕ್ಕಿಂತ ಸಮಷ್ಟಿಯಾಗಿ ಯತ್ನಿಸುವುದರಲ್ಲಿ ಗುಣ ಹೆಚ್ಚು. ಆದ್ದರಿಂದ ಪ್ರಜಾಹಿತಕ್ಕೆ ವಿರುದ್ಧವಲ್ಲದ ಎಂತಹ ಉದ್ದೇಶದಿಂದಲಾದರೂ ಸಂಘವನ್ನು ಸ್ಥಾಪಿಸಿಕೊಳ್ಳುವ ಅಧಿಕಾರವು ಪ್ರಜೆಗಿರತಕ್ಕದ್ದು ನ್ಯಾಯ.

ಈ ಆರೂ ಮೂಲಾಧಿಕಾರಗಳು : ನ್ಯಾಯಸಮ್ಮತವಾಗಿ ಪ್ರಜೆಗೆ ಆಜನ್ಮವಾಗಿ ಇರಬೇಕಾದವು ; ಸರ್ವರಿಗೂ ಅನ್ವಯಿಸತಕ್ಕವು ; ಮತ್ತು ಪ್ರಜಾಭ್ಯುದಯಕ್ಕೆ ತಳಹದಿಯಂತೆ ಅತ್ಯವಶ್ಯಕವಾದವು. ಕರ್ತವ್ಯಗಳೂ ಅಧಿಕಾರಗಳೂ ಅನ್ಯೋನ್ಯವಾಗಿರತಕ್ಕವಾದುದರಿಂದ ಈ ಅಧಿಕಾರಗಳ ಉಪಯೋಗದಲ್ಲಿಯೇ ಪ್ರಜೆಯ ಕರ್ತವ್ಯವೂ ಸೂಚಿತವಾಗುವುದು. ಸೂಚಿತವಾದ ಕರ್ತವ್ಯಗಳಲ್ಲಿ ಪ್ರಜೆಯು ಎಲ್ಲೆಯನ್ನು ಮೀರಿದಾಗ ಅಧರ್ಮಕ್ಕೊಳಕಾಗುವನು. ಆ ಧರ್ಮಲೋಪವನ್ನು ಶಿಕ್ಷಿಸಲು ರಾಷ್ಟ್ರದ ಸಾಧಾರಣ ಶಾಸನಗಳೇ ಸಾಕಾಗುವುವು.

ನೈತಿಕವಾದ ಅಧಿಕಾರಗಳು

ಇವುಗಳಲ್ಲದೆ ಪ್ರಜೆಗೆ ಸಲ್ಲುವ ಇತರ ಅಧಿಕಾರಗಳೂ ಉಂಟು. ಹುಟ್ಟಿದ ಮೇಲೆ ಬದುಕಲು ಆಸೆಪಡುವುದು, ಧನಿಕನಾಗುವುದು, ಮನೆ ಮಾರುಗಳನ್ನು ಕಟ್ಟಿಕೊಂಡು ಸ್ವಂತವೆಂಬ ಆಸ್ತಿಯನ್ನು ಕಟ್ಟಿಕೊಳ್ಳುವುದು— ಇಂತಹ ಅಧಿಕಾರಗಳು ನೈತಿಕವೆನಿಸುತ್ತವೆ. ಪ್ರಜೆಯಾದವನು ತನ್ನ ಸಮಾಜಕ್ಕಾಗಿ ಅಥವಾ ದೇಶಕ್ಕಾಗಿ ಪ್ರಾಣವನ್ನು ಕೊಡಲು ಸಿದ್ಧನಾಗಿರುವುದು ನೀತಿ ಸಂಬಂಧವಾದುದು ; ದೇಶರಕ್ಷಣೆಯು ಕರ್ತವ್ಯವೂ ಹೌದು; ಅಧಿಕಾರವೂ ಹೌದು. ಜರ್ಮನಿಯಲ್ಲಿ ಪ್ರತಿ ಪ್ರಜೆಗೂ ಚಮೂ ಶಿಕ್ಷಣವು ಬಲವಂತದಿಂದ ನಡೆಯುವುದು ಈ ಕರ್ತವ್ಯ ದೃಷ್ಟಿಯಿಂದ.

ನೀತಿಗನುಸಾರವಾಗಿ ಪ್ರಜೆಗೆ ಜನ್ಮಸಿದ್ಧವಾದ ಹಕ್ಕು ಮತ್ತೊಂದುಂಟು. ಪ್ರಜಾಧರ್ಮವನ್ನು ಬೋಧಿಸಿ ವಿವರಿಸಿರುವ ತತ್ವಜ್ಞರು ಅಧರ್ಮವಾದ ಕಾನೂನು ಹುಟ್ಟಿದಾಗ ಅದನ್ನು ಇತರರಿಗೆ ಹಿಂಸೆ ಕೊಡದ ರೀತಿಯಲ್ಲಿ ವಿರೋಧಿಸುವುದು ನ್ಯಾಯವೆಂದೂ, ಅದು ಪ್ರಜೆಗಳ ಕರ್ತವ್ಯದಲ್ಲಿ ಉತ್ತಮವಾದುದೆಂದೂ ಹೇಳಿರುತ್ತಾರೆ.

ಪ್ರಜೆಗಳ ಧರ್ಮವೇನೆಂಬುದನ್ನು ಜನರು ಅರಿತಷ್ಟೂ ಅವರಿಗೆ ತಮ್ಮ ದೇಶದಲ್ಲಿಯೂ ಅದರ ಆಡಳಿತದಲ್ಲಿಯೂ ಹೆಚ್ಚು ಹೆಚ್ಚಾದ ಅಧಿಕಾರವೂ, ಪ್ರಾಬಲ್ಯವೂ, ನಡವಳಿಕೆಯ ಸ್ವಾತಂತ್ರ್ಯವೂ ಸಿದ್ಧವಾಗುವುವೆಂಬುದು ಒತ್ತಿ ಹೇಳಬೇಕಾದ ಸಂಗತಿ.

ಭಾರತವರ್ಷದಲ್ಲಿ ಮೈಸೂರಿನ ಸ್ಥಾನ

ದೇಶೀಯ ಸಂಸ್ಥಾನಗಳು

ಇಂಗ್ಲೆಂಡಿನ ಪ್ರಭುಗಳಿಗೆ ಅಧೀನವಾಗಿರುವ ಭಾರತ ಸಾಮ್ರಾಜ್ಯವೆನ್ನುವ ಭಾಗದಲ್ಲಿ ಬ್ರಿಟಿಷ್ ಇಂಡಿಯ ಮತ್ತು ದೇಶೀಯ ಸಂಸ್ಥಾನಗಳು ಎಂಬ ಎರಡು ಭಾಗಗಳುಂಟು. ಬ್ರಿಟಿಷ್ ಇಂಡಿಯವೆಂಬ ಭಾಗವು ೧೦,೯೬,೧೭೧ ಚ. ಮೈ. ವಿಸ್ತೀರ್ಣ (೬೧%) ಉಳ್ಳದ್ದಾಗಿಯೂ ೨೭,೧೫,೨೬,೯೩೩ ಜನಸಂಖ್ಯೆ (೭೮%) ಉಳ್ಳುದಾಗಿಯೂ ಇರುವುದು; ಆಶ್ರಿತ ಸಂಸ್ಥಾನಗಳು ಒಟ್ಟು ೭,೧೨,೫೦೮ ಚ. ಮೈ. ವಿಸ್ತೀರ್ಣವುಳ್ಳವುಗಳಾಗಿಯೂ ೮೧,೩೧೦,೮೪೫ ಜನಸಂಖ್ಯೆಯುಳ್ಳವುಗಳಾಗಿಯೂ ಇರುತ್ತವೆ. ಎರಡು ಭಾಗಗಳೂ ಸೇರಿ ಇಂಡಿಯ ಸಾಮ್ರಾಜ್ಯವೆನ್ನುವುದು ೧೮,೦೮,೬೭೯ ಚದರ ಮೈಲಿಗಳಾಗಿದ್ದು ೩೫,೨೮,೩೮,೦೦೦ ಜನ ಬಲವನ್ನು ಪಡೆದಿರುತ್ತದೆ. ದೇಶೀಯ ಸಂಸ್ಥಾನಗಳು ೬೦೦ರ ವರೆಗೂ ಇದ್ದಾಗ್ಯೂ ಎಲ್ಲವೂ ಒಂದೇ ಸಮನಾಗಿಲ್ಲ; ಚಿಕ್ಕವು ಸಂಖ್ಯೆಯಲ್ಲಿ ಅನೇಕ; ದೊಡ್ಡವು ಹಲವು ಮಾತ್ರ. ಚಿಕ್ಕವು ಏಜಂಟೆಂಬ ಬ್ರಿಟಿಷ್ ಅಧಿಕಾರಿಗೊಳಗಾಗಿರುತ್ತವೆ. ದೊಡ್ಡವುಗಳಲ್ಲಿ ರೆಸಿಡೆಂಟೆಂಬ ಬ್ರಿಟಿಷ್ ಅಧಿಕಾರಿಯು ಇರುತ್ತಾನೆ. ಮೈಸೂರು ಸಂಸ್ಥಾನವು ದೊಡ್ಡದಾಗಿದ್ದು ಮೊದಲನೆ ತರಗತಿಯ ಸಂಸ್ಥಾನಗಳಲ್ಲಿ ಎಣಿಕೆಯಾಗುವುದು. ಆದ್ದರಿಂದ ಮೈಸೂರಿನ ರೆಸಿಡೆಂಟರೇ ಇಂಗ್ಲೆಂಡು ಪ್ರಭುವಿನ ಪ್ರತಿನಿಧಿಯಾದ ಇಂಡಿಯದ ವೈಸ್ರಾಯರ ಪ್ರತಿನಿಧಿಯಾಗಿರುತ್ತಾರೆ. ಆಶ್ರಿತದ ಸ್ಥಾನದಲ್ಲಿರುವ ಮೈಸೂರಿನ ಸರ್ಕಾರದವರು ಶ್ರೇಷ್ಠ ಅಥವಾ ಮೇಲ್ಪಟ್ಟ ಸರ್ಕಾರದೊಡನೆ ನಡೆಸುವ ವ್ಯವಹಾರವನ್ನು ಸಾಮಾನ್ಯವಾಗಿ ರೆಸಿಡೆಂಟರ ಮೂಲಕ ನಡೆಸುತ್ತಾರೆ. ರೆಸಿಡೆಂಟರಿಗೆ ಮೇಲ್ಪಟ್ಟ ಅಧಿಕಾರಿಯು ವೈಸ್ರಾಯ್; ಆತನಿಗೂ ಮೇಲ್ಪಟ್ಟ ಅಧಿಕಾರಿಯು ಲಂಡನ್ನಿನಲ್ಲಿ ಇಂಗ್ಲೆಂಡಿನ ಮಂತ್ರಿ ಮಂಡಲಿಯಲ್ಲಿ ಒಬ್ಬನಾದ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಎಂಬಾತನು.

ಭಾರತವರ್ಷದ ಭಾಗ

ಸಕಲವಿಧಗಳಲ್ಲಿಯೂ ಮೈಸೂರಿನ ಜನಜೀವನವು ಭಾರತೀಯ ಜನಜೀವನವನ್ನು ಅನುಸರಿಸುತ್ತದೆ. ಸ್ಥಿತಿಗತಿಗಳೂ ನ್ಯಾಯನಿಬಂ

ಧನೆಗಳೂ ಎರಡು ಭಾಗಗಳಲ್ಲಿಯೂ ಒಂದೇ ಬಗೆ. ಆದ್ದರಿಂದ ಬ್ರಿಟಿಷ್ ಇಂಡಿಯವೆಂಬ ಕ್ಷೇತ್ರದಲ್ಲಿ ನಡೆಯುವ ಘಟನಾವಳಿಗಳೂ, ಪ್ರಜೆಗಳ ಇಷ್ಟ ಅನಿಷ್ಟಗಳೂ, ಚಲನೆ ಚಳವಳಿಗಳೂ ಮೈಸೂರಿನಲ್ಲಿಯೂ ತಮ್ಮ ಪ್ರಭಾವವನ್ನು ಬೀರುತ್ತವೆ. ಪ್ರಜೆಗಳ ವಿಚಾರದಲ್ಲಿ ಈ ರೀತಿಯಲ್ಲಿ ತೋರುವ ಸಮೀಪ ಸಂಬಂಧವೇ ಸರ್ಕಾರದ ವಿಚಾರದಲ್ಲಿಯೂ ತೋರುವುದು. ರಾಜಕೀಯ ಕ್ಷೇತ್ರದಲ್ಲಿಯೂ, ಆರ್ಥಿಕ ಕ್ಷೇತ್ರದಲ್ಲಿಯೂ ಸಂಸ್ಥಾನಗಳ ವ್ಯವಸ್ಥೆಯು ಬ್ರಿಟಿಷರ ಆಡಳಿತವನ್ನು ಅವಲಂಬಿಸಬೇಕಾಗಿರುತ್ತದೆ. ಸಾಧಾರಣವಾಗಿ ಅಖಿಲ ಭಾರತೀಯ ವಿಷಯಗಳೆನಿಸುವ ರಕ್ಷಣೆ, ಸಂಚಾರ ಸೌಕರ್ಯ, ಸುಂಕಗಳ ಏರ್ಪಾಟುಗಳಲ್ಲಿ ಬ್ರಿಟಿಷರ ಪ್ರಜೆಗಳೂ ಸಂಸ್ಥಾನಗಳ ಪ್ರಜೆಗಳೂ ಒಂದೇ.

ಸೆಕ್ರೆಟರಿ ಆಫ್ ಸ್ಟೇಟ್

೧೮೫೮ರಲ್ಲಿ ಈಸ್ಟಿಂಡಿಯಾ ಕಂಪೆನಿಯು ರದ್ದಾಗಿ ಇಂಗ್ಲೆಂಡಿನ ಸರ್ಕಾರವೇ ಭಾರತ ಸಾಮ್ರಾಜ್ಯವನ್ನು ವಹಿಸಿದ ಮೇಲೆ ಭಾರತದ ಆಡಳಿತದ ಮೇಲ್ವಿಚಾರಣೆಯನ್ನು ನಡೆಸುತ್ತಲಿರಲು ಒಬ್ಬ ಮಂತ್ರಿಯು ನಿಯಮಿತನಾದನು. ಈತನಿಗೆ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಎಂದು ಹೆಸರು ; ಈತನು ಕ್ಯಾಬಿನೆಟ್ಟೆಂದು ಹೆಸರುಳ್ಳ ಮಂತ್ರಿ ಮಂಡಲಿಯಲ್ಲೊಬ್ಬನು ; ಇತರ ಮಂತ್ರಿಗಳಂತೆಯೇ ಈತನೂ ರಾಜಕೀಯ ಕಕ್ಷಿಯೊಂದರಲ್ಲಿ ಸೇರಿದವನಾಗಿ ತನ್ನ ಕಕ್ಷಿಗೆ ಪಾರ್ಲಿಮೆಂಟಿನ ಬೆಂಬಲವಿರುವವರೆಗೂ ಅಧಿಕಾರದಲ್ಲಿರುತ್ತಾನೆ. ಇಂಗ್ಲೆಂಡಿನಲ್ಲಿಯೇ ಇರುವ ಈ ಸೆಕ್ರೆಟರಿಗೆ ಸಹಾಯಮಾಡಲು ಒಂದು ಆಲೋಚನಾ ಸಭೆಯೂ ಸಿಬ್ಬಂದಿಯೂ ಉಂಟು. ಈತನು ದೊರೆಯ ಹೆಸರಿನಲ್ಲಿ ಆಡಳಿತವನ್ನು ನಡೆಸುತ್ತಿದ್ದರೂ ವಾಸ್ತವವಾಗಿ ಪಾರ್ಲಿಮೆಂಟಿಗೆ ಜವಾಬ್ದಾರನೇ ವಿನಾ ದೊರೆಗಲ್ಲ. ಆದ್ದರಿಂದ ಇಂಗ್ಲೆಂಡು, ಸ್ಕಾಟ್ಲೆಂಡು, ಮತ್ತು ವೇಲ್ಸುಗಳ ಪ್ರತಿನಿಧಿಗಳು ಸೇರಿದ ಪಾರ್ಲಿಮೆಂಟೆಂಬ ನ್ಯಾಯವಿಧಾಯಕ ಸಭೆಯೇ ಎಲ್ಲಕ್ಕೂ ಮೇಲ್ಪಟ್ಟ ಅಂಗ. ಸೆಕ್ರೆಟರಿಯು ಆ ಸಭೆಯ ಇಷ್ಟದಂತೆ ಪ್ರವರ್ತಿಸುವ ಸೇವಕನಾಗಿರುತ್ತಾನೆ. ಆತನ ಅಧಿಕಾರಕ್ಕೆ ಪಾರ್ಲಿಮೆಂಟ್ ಸಭೆಯ ಅಡ್ಡಿಯೆಷ್ಟೋ, ಅಷ್ಟೇ ಅಡ್ಡಿ.

ಬ್ರಿಟಿಷ್ ಸಮುದಾಯ ಬಂಧ

(Commonwealth of Free Nations)

ಪೃಥ್ವಿಯಲ್ಲಿ ಬ್ರಿಟಿಷರಿಗೆ ಸೇರಿರುವ ಕ್ಷೇತ್ರಗಳ ಸಮುದಾಯದಲ್ಲಿ ಇಂಗ್ಲೆಂಡು ಮಾತೃಸ್ಥಾನದಲ್ಲಿದೆ. ಡುಮಿನಿಯನ್ನುಗಳೆಂಬ ಹೆಸರುಳ್ಳ ಕೆನಡಾ, ನ್ಯೂ ಫೌಂಡ್ಲೆಂಡ್, ದಕ್ಷಿಣ ಆಫ್ರಿಕ, ಆಸ್ಟ್ರೇಲಿಯ, ನ್ಯೂಸೀಲೆಂಡ್ ಮುಂತಾದ ಕ್ಷೇತ್ರಗಳು ಅಧಿಕಾರದಲ್ಲಿ ಇಂಗ್ಲೆಂಡಿಗೆ ಸಮನಾಗಿ ತೂಗುತ್ತವೆ. ಒಟ್ಟುಕೂಡಿದಾಗ ಬ್ರಿಟಿಷ್ ಕಾಮನ್ವೆಲ್ತ್ ಆಫ್ ಫ್ರೀ ನೇಷನ್ಸ್ ಎಂಬ ಹೆಸರನ್ನು ಇವುಗಳು ಪಡೆಯುತ್ತವೆ. ಇವೇ ಪ್ರಬಲವಾದ ಭಾಗಗಳು. ಕಾಲೊನಿ, ಪ್ರೊಟೆಕ್ಟೊರೇಟ್ ಎಂಬ ಹೆಸರುಳ್ಳ ಇತರ ಕ್ಷೇತ್ರಗಳು ಇಂಗ್ಲೆಂಡಿನ ಮಂತ್ರಿಮಂಡಲಿಯಲ್ಲೊಬ್ಬನ ಅಧಿಕಾರದಲ್ಲಿರುತ್ತವೆ. ಭಾರತ ವರ್ಷವು ಈ ಗುಂಪಿನಲ್ಲಿ ಸೇರಿಲ್ಲ: ಸಾಮ್ರಾಜ್ಯವೆಂಬ ಹೆಸರಿನಿಂದ ಆಶ್ರಿತವೂ, ಅಧೀನವೂ ಆದ ಕ್ಷೇತ್ರವಾಗಿರುತ್ತದೆ. ಡುಮಿನಿಯನ್ನುಗಳಲ್ಲಿ ಪ್ರತ್ಯೇಕವಾದ ಪ್ರತಿನಿಧಿ ಸಭೆಗಳೂ, ಆ ಸಭೆಗಳ ಇಷ್ಟದಂತೆ ವರ್ತಿಸುವ ಮಂತ್ರಿ ಮಂಡಲಿಯೂ, ದೊರೆಯ ಪ್ರತಿನಿಧಿಯೂ ಸೇರಿ ಆಳಿಕೆಯನ್ನು ನಡೆಸುತ್ತಾರೆ. ಭಾರತ ಸಾಮ್ರಾಜ್ಯಕ್ಕೆ ದೊರೆಯ ಪ್ರತಿನಿಧಿಯಾದ ವೈಸ್ರಾಯಿಗೂ, ಡುಮಿನಿಯನ್ನುಗಳಲ್ಲಿರುವ ಗವರ್ನರ್ ಜನರಲ್ಲರಿಗೂ ಬಹಳ ಭೇದವಿರುವುದು ಈ ಕಾರಣದಿಂದಲೇ.

ರಾಜಕೀಯ ಸುಧಾರಣೆಗಳು

ಭಾರತ ಸಾಮ್ರಾಜ್ಯದಲ್ಲಿ ಬ್ರಿಟಿಷ್ ಭಾಗ ಮತ್ತು ಆಶ್ರಿತ ಭಾಗಗಳೆರಡಕ್ಕೂ ವೈಸ್ರಾಯಿಯೇ ಸರ್ವಾಧಿಕಾರಿ. ಇಂಗ್ಲೆಂಡಿನಲ್ಲಿರುವ ಮಂತ್ರಿಯ ಆಜ್ಞಾಧಾರಕನಾಗಿ ಈತನು ಪ್ರವರ್ತಿಸುವನು. ಬಹು ಕಾಲ ವೈಸ್ರಾಯಿಗೆ ನಿರಂಕುಶವಾದ ಅಧಿಕಾರವೇ ಇತ್ತು. ಕಾಲಕ್ರಮೇಣ ಮಂತ್ರಾಲೋಚನ ಸಭೆಯೂ, ಸಿಬ್ಬಂದಿಯೂ ಹೆಚ್ಚಿದ್ದಲ್ಲದೆ ಕಾರಣಾಂತರಗಳಿಂದ ಆಡಳಿತದಲ್ಲಿ ಭಾರತೀಯರ ಪ್ರಾತಿನಿಧ್ಯವನ್ನೂ, ಸಹಾನುಭೂತಿಯನ್ನೂ ಪಡೆಯುವ ನೀತಿಯು ಆಚರಣೆಗೆ ಬಂದಿತು. ಭಾರತೀಯರೂ ರಾಜಕೀಯ ಪ್ರಜ್ಞಾಯುತರಾಗಿ ಜನಸ್ವಾಮ್ಯ ನೀತಿಯ ಆರಾಧಕರಾಗಿ ದೇಶದ ಆಡಳಿತದಲ್ಲಿ ತಾವೂ ಭಾಗಿಗಳಾಗಬೇಕೆಂದು ಒತ್ತಾಯಪಡಿಸುತ್ತಾ

ಬಂದರು. ೧೯೧೪ರಲ್ಲಿ ಪ್ರಾರಂಭವಾದ ಘೋರ ಯುದ್ಧ ಕಾಲದ ಮಧ್ಯೆ ೧೯೧೭ನೇ ಇಸವಿ ಆಗಸ್ಟು ತಿಂಗಳಲ್ಲಿ ತಮ್ಮನ್ನು ತಾವೇ ಆಳಿಕೊಳ್ಳಲು ಸಮರ್ಥರಾಗುವಂತೆ ಭಾರತೀಯರನ್ನು ಶಿಕ್ಷಿಸುವುದೇ ಹಿಂದೂಸ್ಥಾನದ ಆಳಿಕೆಯಲ್ಲಿ ಬ್ರಿಟಿಷರ ಘನೋದ್ದೇಶವೆಂದು ಪಾರ್ಲಿಮೆಂಟಿನಲ್ಲಿಯೇ ವಾಕ್ಯವು ಹೊರಟಿತು. ಸ್ವಲ್ಪಸ್ವಲ್ಪವಾಗಿ ಅಧಿಕಾರವನ್ನು ಭಾರತೀಯರಿಗೆ ಕಾಲಾನುಕಾಲವಾಗಿ ಕೊಡುವ ಈ ಉದ್ದೇಶದ ಮೇರೆಗೆ ಯುದ್ಧ ಮುಗಿದ ಮೇಲೆ ೧೯೧೯ರಲ್ಲಿ—ಮಾಂಟೆಗ್ಯೂ-ಚೆಲ್ಮ್ಸ್‌ಫರ್ಡ್ ರಿಫಾರ್ಮ್ಸ್ ಎಂಬ ಹೆಸರಿನ ಸುಧಾರಣೆಗಳ ಶಾಸನವು ಸಿದ್ಧವಾಯಿತು. ಈಗ ನಡೆಯುತ್ತಲಿರುವ ಆಡಳಿತವು ಆ ವಿಧಿಯನ್ನನುಸರಿಸುತ್ತದೆ.

ಕೇಂದ್ರ ವ್ಯವಸ್ಥೆ

ಆ ಶಾಸನದ ಪ್ರಕಾರ ದೇಶಕ್ಕೆಲ್ಲ ಸಂಬಂಧಿಸಿದ ರಕ್ಷಣೆ, ಸುಂಕ, ಸಂಚಾರ ಸಾಕರ್ಯ, ಅನ್ಯದೇಶ ತಂತ್ರ, ನಾಣ್ಯ ಮುಂತಾದ ವಿಷಯಗಳ ಆಳಿಕೆಯು ದಿಲ್ಲಿಯಲ್ಲಿ ಸ್ಥಾಪಿತವಾದ ಕೇಂದ್ರ ಸರ್ಕಾರದ ಅಧಿಕಾರದಿಂದ ನಡೆಯುತ್ತದೆ. ಇದಕ್ಕೆ ವೈಸ್ರಾಯಿಯವರೇ ಅಧಿಪತಿಗಳು. ಕಾರ್ಯನಿರ್ವಾಹ ಮಾಡಲು ಸಾಧಾರಣವಾಗಿ ೬–೮ ಸಭಿಕರಿರುವ ಒಂದು ಸಭೆಯುಂಟು. ಶಾಸಕಾಂಗವು ಎರಡು ಸಭೆಗಳಾಗಿರುತ್ತದೆ. ಒಂದು ೬೦ ಸಭಿಕರುಳ್ಳ ಕೌನ್ಸಿಲ್ ಆಫ್ ಸ್ಟೇಟ್; ಇನ್ನೊಂದು ೧೪೪ ಸಭಿಕರುಳ್ಳ ಲೆಜಿಸ್ಲೇಟಿವ್ ಅಸೆಂಬ್ಲಿ. ಬ್ರಿಟಿಷ್ ಭಾಗದ ಎಲ್ಲ ವಿಭಾಗಗಳಿಂದಲೂ ಚುನಾಯಿತರಾದವರೂ, ನಿಯಮಿತರಾದ ಖಾಸಗಿ ಜನರೂ, ಅಧಿಕಾರಿಗಳೂ ಸೇರಿ ಈ ಸಭೆಗಳಲ್ಲಿ ಚರ್ಚಿಸುತ್ತಾರೆ. ಎರಡು ಸಭೆಗಳಲ್ಲಿಯೂ ಪ್ರಶ್ನೆಗಳನ್ನು ಹಾಕುವ, ಚರ್ಚಿಸುವ, ಆಯವ್ಯಯವನ್ನು ಅನುಮೋದಿಸುವ ಮತ್ತು ಕಾನೂನನ್ನು ರಚಿಸುವ ಕೆಲಸವು ನಡೆಯುವುದು. ಆಯವ್ಯಯದ ಮಂಜೂರಾತಿಯಲ್ಲಿ ಸಾಲ ಸೋಲದ ವೆಚ್ಚ, ನಿಬಂಧನೆಯಿಂದ ವಿಧಾಯಕವಾದ ವೆಚ್ಚ, ದೊರೆಯಿಂದ ನಿಯಮಿತರಾದ ಅಧಿಕಾರಿಗಳ ವೇತನ, ಚರ್ಚುಗಳಿಗೆ (ಕ್ರೈಸ್ತ ಮಂದಿರ) ಅಥವಾ ರಾಜಕೀಯ ಶಾಖೆಗೆ ಅಥವಾ ರಕ್ಷಣೆಗೆ ಸಂಬಂಧವಾದುದೆಂದು ವೈಸ್ರಾಯಿಯು ನಿಶ್ಚಯಿಸಿದ ಅಂಶಗಳು ಸಭೆಯವರ ವೋಟಿಗೊಳಪಟ್ಟಿಲ್ಲ. ವೋಟಿಗೊಳಗಾದ ಅಂಶಗಳಲ್ಲಿಯೂ

ಕೂಡ ಪ್ರತಿನಿಧಿಗಳು ವಿರೋಧಿಸಿದ್ದರೂ ವೈಸ್ರಾಯಿಯು ಆ ವೆಚ್ಚವನ್ನು ಮಾಡಿಸುವ ಅಧಿಕಾರವನ್ನು ಪಡೆದಿರುತ್ತಾನೆ; ಹಾಗೆಯೇ ಯಾವುದಾದರೂ ಕಾನೂನನ್ನು, ಸಭೆಗಳಲ್ಲಿ ಒಪ್ಪಿಗೆಯಾಗದಿದ್ದರೂ ವೈಸ್ರಾಯಿಯು ತನ್ನ ಸ್ವಂತ ಅಧಿಕಾರದಿಂದ ಆರು ತಿಂಗಳ ಬಲವಿರುವ ನಿಬಂಧನೆಯಂತೆ ಸಾರಿ ಜಾರಿಯಲ್ಲಿ ಬರುವಂತೆ ಮಾಡಬಹುದು. ಈ ಕಾರಣದಿಂದ ದಿಲ್ಲಿಯಲ್ಲಿ ಸೇರುವ ಶಾಸನ ಸಭೆಗಳಿಗೆ ಹಣದ ಅಧಿಕಾರವಾಗಲಿ, ಕಾನೂನಿನ ಅಧಿಕಾರವಾಗಲಿ ಸಂಪೂರ್ಣವಾಗಿಲ್ಲ; ಅಧಿಕಾರಿ ವರ್ಗದ ಮೇಲೆ ಅಧಿಕಾರವೂ ಇಲ್ಲ; ಸಭಿಕರೆಲ್ಲರೂ ಚುನಾಯಿತರಲ್ಲ.

ಪ್ರಾಂತ ವ್ಯವಸ್ಥೆ

ಬ್ರಿಟಿಷ್ ಭಾಗದಲ್ಲಿ ೧೫ ಪ್ರಾಂತಗಳುಂಟು; ಅವುಗಳಲ್ಲಿ ೧೨ಕ್ಕೆ ಗವರ್ನರುಗಳು ಅಧಿಪತಿಗಳು; ಉಳಿದವುಗಳಿಗೆ ಛೀಫ್ ಕಮಿಷನರುಗಳು ಮುಖ್ಯಾಧಿಕಾರಿಗಳು. ಛೀಫ್ ಕಮಿಷನರುಗಳು ವೈಸ್ರಾಯಿಯ ಆಜ್ಞಾಧಾರಕರಾಗಿಯೇ ತಮ್ಮ ಪ್ರಾಂತಗಳ ಆಡಳಿತವನ್ನು ನಡೆಸುತ್ತಾರೆ. ದೊಡ್ಡವೆಂದು ಹೆಸರಾಗಿ ಗವರ್ನರುಗಳ ಕೈಕೆಳಗಿರುವ ೧೨ ಪ್ರಾಂತಗಳಲ್ಲಿ ಆಡಳಿತವು ದ್ವಿಮುಖವಾದುದೆಂದು ಹೆಸರು ಪಡೆದಿದೆ. ಕೇಂದ್ರ ಸರ್ಕಾರಕ್ಕೆ ಅನ್ವಯಿಸದ ನೆಲಗಂದಾಯ, ಆಬ್ಕಾರಿ, ಕಾಡುಗಳು, ನೀರಾವರಿ, ಆರ್ಥಿಕವೃದ್ಧಿ, ನ್ಯಾಯ ತೀರ್ಮಾನ, ಪೋಲೀಸು, ಆರೋಗ್ಯ, ಶಿಕ್ಷಣ, ಸ್ಥಳೀಯ ವ್ಯವಸ್ಥೆ ಮುಂತಾದುವು ಪ್ರಾಂತ ವಿಷಯಗಳೆನಿಸಿ ಪ್ರಾಂತ ಸರ್ಕಾರಗಳ ನಿರ್ವಾಹದಲ್ಲಿರುತ್ತವೆ. ಇವುಗಳಲ್ಲಿ ಸ್ಥಳೀಯ ವ್ಯವಸ್ಥೆ, ಆರೋಗ್ಯ ರಕ್ಷಣೆ ಮತ್ತು ಚಿಕಿತ್ಸೆಯ ವ್ಯವಸ್ಥೆ, ಶಿಕ್ಷಣ, ಮರಾಮತ್ ಇಲಾಖೆ, ಆಬ್ಕಾರಿ, ಮತ್ತು ಉದ್ಯೋಗ ಕೈಗಾರಿಕೆಗಳ ಅಭಿವೃದ್ಧಿಗಳೆಂಬ ಇಲಾಖೆಗಳು ಮಾತ್ರ ಟ್ರಾನ್ಸ್‌ಫರ್ಡ್ ಎಂದೂ, ಉಳಿದವು ರಿಸರ್ವ್ಡ್ ಎಂದೂ ನಿರ್ದೇಶವಾಗಿವೆ. ರಿಸರ್ವ್ಡ್ ಭಾಗವು ಗವರ್ನರ್ ಮತ್ತು ಕೌನ್ಸಿಲರುಗಳೆಂಬವರ ಕೈಯಲ್ಲಿಯೂ, ಟ್ರಾನ್ಸ್‌ಫರ್ಡ್ ಭಾಗವು ಗವರ್ನರ್ ಮತ್ತು ಮಂತ್ರಿಗಳೆಂಬುವರ ಕೈಯಲ್ಲಿಯೂ ಇರುತ್ತವೆ. ಗವರ್ನರಾದವನು ಅಧಿಪತಿ; ಕೌನ್ಸಿಲ್ಲರುಗಳೂ, ಮಂತ್ರಿಗಳೂ ಸೇರಿ ಕಾರ್ಯಾಂಗದ ಅಧ್ಯಕ್ಷರು. ಇವರಲ್ಲಿರುವ ಭೇದವೇನೆಂದರೆ ಕೌನ್ಸಿಲ್ಲರುಗಳನ್ನು ಸೆಕ್ರೆಟರಿ ಆಫ್ ಸ್ಟೇಟ್

ನಿಯಮಿಸುತ್ತಾನೆ; ಮಂತ್ರಿಗಳನ್ನಾದರೋ ನ್ಯಾಯವಿಧಾಯಕ ಸಭೆಯ ಖಾಸಗಿ ಸಭಿಕರಲ್ಲಿ ಪ್ರಬಲರಾದವರನ್ನು ಆರಿಸಿ ಗವರ್ನರೇ ನಿಯಮಿಸುತ್ತಾನೆ. ಶಾಸಕಾಂಗಕ್ಕೆ ೧೦ ಪ್ರಾಂತಗಳಲ್ಲಿ ೧೦ ಶಾಸನ ಸಭೆಗಳಿವೆ; ಅವುಗಳಲ್ಲಿ ಚುನಾಯಿತ ಭಾಗವು ಸಾಧಾರಣವಾಗಿ ಶೇಕಡ ೭೦ ರಷ್ಟಿರುತ್ತದೆ. ಆದರೆ ಅಧಿಕಾರದಲ್ಲಿ ಕೇಂದ್ರ ಸಭೆಗಳಂತೆಯೇ ಸಂಪೂರ್ಣವಾದ ಅಧಿಕಾರವನ್ನು ಯಾವ ಅಂಶದಲ್ಲಿಯೂ ಪಡೆದಿಲ್ಲ. ಹಣದ ವಿಷಯದಲ್ಲಿಯೂ, ಕಾನೂನಿನ ವಿಷಯದಲ್ಲಿಯೂ, ಗವರ್ನರಿಗೆ ಮೇಲ್ಪಟ್ಟ ಅಧಿಕಾರ ಉಂಟು. ಈ ವಿಧವಾದ ವ್ಯವಸ್ಥೆಯೇ ಮದರಾಸು, ಮುಂಬಯಿ, ವಾಯವ್ಯ ಸರಹದ್ದು, ಪಂಜಾಬು, ಮಧ್ಯಪ್ರಾಂತಗಳು, ಸಂಯುಕ್ತಪ್ರಾಂತಗಳು, ಬಿಹಾರ ಮತ್ತು ಒರಿಸ್ಸ, ಬಂಗಾಳ, ಅಸ್ಸಾಂ ಮತ್ತು ಬರ್ಮಾ ಪ್ರಾಂತಗಳಲ್ಲಿ ನಡೆಯುತ್ತಲಿದೆ.

ನ್ಯಾಯಾಂಗ

ನ್ಯಾಯ ತೀರ್ಮಾನದ ಭಾಗಕ್ಕಾಗಿ ಪ್ರತಿ ಪ್ರಾಂತದಲ್ಲಿಯೂ ಹೈಕೋರ್ಟುಗಳೆಂಬ ಶ್ರೇಷ್ಠ ನ್ಯಾಯಸ್ಥಾನಗಳುಂಟು. ಹೈ ಕೋರ್ಟುಗಳ ನ್ಯಾಯಾಧೀಶರನ್ನು ದೊರೆಯ ಹೆಸರಿನಲ್ಲಿ ಸೆಕ್ರೆಟರಿಯೇ ನಿಯಾಮಕ ಮಾಡುವನು. ಇಂಗ್ಲೆಂಡಿನಲ್ಲಿರುವ ಸ್ವಾತಂತ್ರ್ಯವು ಈ ನ್ಯಾಯಾಧಿಪತಿಗಳಿಗಿಲ್ಲ; ಏಕೆಂದರೆ ಇಲ್ಲಿಯ ಜಡ್ಜಿಗಳು ದೊರೆಯ ಅಭಿಮಾನವಿರುವವರೆಗೆ ಕೆಲಸದಲ್ಲಿರುತ್ತಾರೆ; ಜೀವಂತರಾಗಿರುವವರೆಗಲ್ಲ. ಹೈ ಕೋರ್ಟುಗಳಿಗೆ ಅಧೀನವಾಗಿ ಸೆಷನ್ಸ್ ಜಡ್ಜಿಗಳು, ಸಬ್‌ಜಡ್ಜಿಗಳು, ಮುನಸೀಫರು, ಮ್ಯಾಜಿಸ್ಟ್ರೇಟರುಗಳು ಮೈಸೂರು ಸಂಸ್ಥಾನದಲ್ಲಿದ್ದಂತೆಯೇ ಇರುತ್ತಾರೆ. ಮುಖ್ಯವಾಗಿ ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕಾದುದು (೧) ಕಾರ್ಯಾಂಗದವರೇ ರೆವಿನ್ಯೂ ಮತ್ತು ಕ್ರಿಮಿನಲ್ ವ್ಯವಹಾರಗಳಲ್ಲಿ ನ್ಯಾಯ ತೀರ್ಮಾನವನ್ನು ವಹಿಸಿರುವುದು, ಮತ್ತು (೨) ನ್ಯಾಯಾಂಗವು ಕಾರ್ಯಾಂಗಕ್ಕೆ ಅಧೀನವಾಗಿರುವುದು.

ಸ್ಥಳೀಯ ವ್ಯವಸ್ಥೆ

ಸ್ಥಳೀಯ ವ್ಯವಸ್ಥೆಯೂ ಸರಿಸುಮಾರಾಗಿ ಮೈಸೂರಿನಲ್ಲಿದ್ದಂತೆಯೇ ಇರುತ್ತದೆ. ನಗರಗಳಲ್ಲಿ ಮುನಿಸಿಪಾಲಿಟಿಗಳೂ, ಜಿಲ್ಲೆಗಳಲ್ಲಿ ಜಿಲ್ಲಾ

ಬೋರ್ಡುಗಳೂ, ಗ್ರಾಮಪಂಚಾಯಿತಿಗಳನ್ನುದ್ಧರಿಸುವ ಪ್ರಯತ್ನಗಳೂ ನಡೆಯುತ್ತಲಿವೆ. ಹಣದ ತೊಂದರೆಯಿಂದಲೂ, ರಾಜಕೀಯ ಮತ್ತು ಕೋಮುವಾರು ಪಕ್ಷವಿಪಕ್ಷಗಳ ತೊಂದರೆಯಿಂದಲೂ, ಸರ್ಕಾರದ ಅತ್ಯಧಿಕಾರದಿಂದಲೂ ಸ್ಥಳೀಯ ಸಂಸ್ಥೆಗಳು ಇನ್ನೂ ಆರಂಭದಲ್ಲಿಯೇ ಇರುತ್ತವೆ.

ಮುಂದಿನ ಗತಿ

ಬ್ರಿಟಿಷ್ ವಿಭಾಗದಲ್ಲಿ ಸುಮಾರು ೫೦ ವರ್ಷಗಳಿಂದಲೂ ನಡೆಯುತ್ತಿರುವ ರಾಜಕೀಯ ಚಳವಳಿಯು ಬೇರೂರುತ್ತ ಬಂದು, ಆಡಳಿತವು ದೇಶದ ಸ್ಥಿತಿಗತಿಗಳಿಗನುಸಾರವಾಗಿದ್ದು ಜನರ ನಿಜ ಸುಖ ಸಂಪತ್ತುಗಳನ್ನು ಸಾಧಿಸಲು ಸರ್ಕಾರವು ಜನತೆಗೆ ವಶವಾಗಿರಬೇಕೆಂಬ ಸಂಕಲ್ಪವು ದೃಢವಾಗುತ್ತಲಿದೆ. ಸೈಮನ್ ಸಭೆ ಮತ್ತು ಬಟ್ಲರ್ ಸಭೆಗಳ ವೃತ್ತಾಂತವು ಚರಿತ್ರೆಯಲ್ಲಿಯೇ ಸೂಚಿತವಾಯಿತು. ಡುಮಿನಿಯನ್ನುಗಳಲ್ಲಿರುವ ರಾಷ್ಟ್ರಕ್ರಮ ಸ್ಥಾಪನೆಯೇ ಭಾರತವರ್ಷವನ್ನಾಳುವ ಬ್ರಿಟಿಷರ ಲಕ್ಷ್ಯವೆಂಬುದಾಗಿ ವೈಸ್‌ರಾಯಿಯವರು ೧೯೨೯ರಲ್ಲಿ ಪ್ರಕಟಿಸಿದರು. ಆ ತರುವಾಯ ಬ್ರಿಟಿಷ್ ರಾಷ್ಟ್ರಕರ್ತರೂ ಭಾರತೀಯ ಪ್ರಮುಖರೂ ಲಂಡನ್ ನಗರದಲ್ಲಿ ಮೂರು ಬಾರಿ ಸಭೆಗಳಲ್ಲಿ ಸೇರಿ ಚರ್ಚೆಗಳನ್ನು ನಡೆಸಿದರು. ಅವುಗಳನ್ನು ಅನುಸರಿಸಿ ಇಂಗ್ಲೆಂಡಿನ ಮಂತ್ರಿಮಂಡಲಿಯವರು ಭಾರತ ರಾಷ್ಟ್ರದ ಮುಂದಿನ ಆಡಳಿತದ ವ್ಯವಸ್ಥೆಗಾಗಿ ಹೊಸ ವಿಧಿಯೊಂದನ್ನು ಪಾರ್ಲಿಮೆಂಟಿನಲ್ಲಿ ರೂಪಗೊಳಿಸಿದರು. ಗವರ್ನಮೆಂಟ್ ಆಫ್ ಇಂಡಿಯ ಆಕ್ಟೆಂಬ ಹೆಸರಿನಿಂದ ಆ ವಿಧಿಯು ೧೯೩೫ರಲ್ಲಿ ಪ್ರಕಟವಾಯಿತು. ಇನ್ನು ಸ್ವಲ್ಪಕಾಲದಲ್ಲಿಯೇ ಆ ವಿಧಿಯು ಆಚರಣೆಯಲ್ಲಿ ತೋರಿಕೊಳ್ಳುವುದು.

ಮುಂದಿನ ಕಾಲದಲ್ಲಿ ಭಾರತವರ್ಷವು ಫೆಡರೇಷನ್ ರೂಪವಾಗಿ ಏರ್ಪಡುವುದು. ಬ್ರಿಟಿಷ್‌ಪ್ರಾಂತಗಳೂ ದೇಶೀಯ ಸಂಸ್ಥಾನಗಳೂ ಕೇಂದ್ರ ಅಥವಾ ಫೆಡರಲ್ ಸರ್ಕಾರದಲ್ಲಿ ಸಮಜೋಡಿಯಾಗಿ ವ್ಯವಹರಿಸಬೇಕಾಗುವುದು. ಇಂಗ್ಲೆಂಡಿನ ಪ್ರಭುವಿನ ಪ್ರತಿನಿಧಿಯಾದ ವೈಸ್‌ರಾಯಿಯವರ ಮೇಲ್ವಿಚಾರಣೆಯು ಎಂದಿನಂತೆ ಇರುವುದಾದರೂ ಮೈಸೂರು ಸಂಸ್ಥಾನದವರು ಅಖಿಲಭಾರತದ ಅಥವಾ ಫೆಡರಲ್ ಸರ್ಕಾರದ ಅಂಗವಾಗಿ ವರ್ತಿಸಬೇಕಾಗುವುದು. ಹಿಂದಿನಿಂದ ನಡೆದು ಬಂದಿರುವ ತಮ್ಮ

ಸ್ಥಾನಮಾನಗಳನ್ನು ಯಥಾಯೋಗ್ಯವಾಗಿ ರಕ್ಷಿಸಿಕೊಳ್ಳುವುದಲ್ಲದೆ ಸಂಸ್ಥಾನದವರು ಅಖಿಲ ಭಾರತದ ಜನಜೀವನದಲ್ಲಿ ಹೆಚ್ಚು ಹೆಚ್ಚಾದ ಸಹಕಾರವನ್ನು ತೋರಬೇಕಾಗುವುದು.

ಮೈಸೂರಿನ ಕರಾರು

ಪಟ್ಟ.

೧. ಪಟ್ಟವನ್ನೇರಲು ವೈಸರಾಯರ ಅನುಮತಿಯನ್ನು ಪಡೆಯಬೇಕು.

ಸೈನ್ಯ ಇತ್ಯಾದಿ

೨. ಬ್ರಿಟಿಷರ ಸೈನ್ಯವೊಂದನ್ನು ರಾಜ್ಯದಲ್ಲಿಟ್ಟುಕೊಂಡು ಅದಕ್ಕೆ ಬೇಕಾದ ಕ್ಷೇತ್ರ ಮತ್ತು ನೈರ್ಮಲ್ಯಾನುಕೂಲಗಳನ್ನು ಉಚಿತವಾಗಿ ಒದಗಿಸಿಕೊಡುವುದಲ್ಲದೆ, ಆ ಸೈನ್ಯದಿಂದ ರಾಜ್ಯರಕ್ಷಣೆಯಾಗುವುದರಿಂದ ವಾರ್ಷಿಕವಾಗಿ ೨೪½ ಲಕ್ಷ ರೂಪಾಯಿಗಳನ್ನು ಎರಡು ಕಂತುಗಳಾಗಿ ಸಲ್ಲಿಸಬೇಕು.

೩. ಮಹಾರಾಜರ ಸ್ಥಾನ ಗೌರವಕ್ಕೆ ತಕ್ಕಂತೆ ಎಷ್ಟು ಸೈನ್ಯವನ್ನು ಸ್ವಂತವಾಗಿಟ್ಟುಕೊಳ್ಳ ಬಹುದೆಂಬುದನ್ನು ವೈಸರಾಯರು ನಿಶ್ಚಯಿಸುವರು. ಸಮಯದಲ್ಲಿ ಈ ಸೇನೆಯು ಬ್ರಿಟಿಷರಿಗೆ ಸಹಾಯವಾಗತಕ್ಕದ್ದು.

೪. ರಾಜ್ಯದಲ್ಲಿ ಕೋಟೆ ಕೊತ್ತಲಗಳನ್ನು ಕಟ್ಟಿಸುವುದಾಗಲಿ, ಯುದ್ಧ ಸಾಮಗ್ರಿಯನ್ನು ಹೊರಗಿನಿಂದ ತರಿಸಿಕೊಳ್ಳುವುದಾಗಲಿ, ದೇಶದಲ್ಲಿಯೇ ಸಿದ್ಧಗೊಳಿಸಿಕೊಳ್ಳುವುದಾಗಲಿ ಕೂಡದು.

ಅನ್ಯಸಂಬಂಧ

೫. ಪರರಾಷ್ಟ್ರಗಳೊಡನೆ ಎಂತಹ ಸಂಬಂಧವನ್ನಾದರೂ ವೈಸರಾಯಿಯ ಅನುಮತಿಯಿಂದ ಮತ್ತು ವೈಸರಾಯಿಯ ಮೂಲಕ ಕಲ್ಪಿಸಿಕೊಳ್ಳಬೇಕು.

೬. ಭಾರತೀಯನಲ್ಲದವನನ್ನು ನೌಕರಿಯಲ್ಲಿಡಬೇಕಾದರೆ ವೈಸರಾಯಿಯ ಅನುಮತಿಯನ್ನು ಪಡೆಯಬೇಕು.

೭. ಐರೋಪ್ಯ ಕುಲದವರ ದಂಡನೆಯಲ್ಲಿ ಕಾಲಕಾಲಕ್ಕೆ ವೈಸರಾಯರು ನಿರ್ಣಯಿಸುವಷ್ಟು ಅಧಿಕಾರವೇ ಮಹಾರಾಜರವರಿಗೆ ಇರತಕ್ಕದ್ದು.

ಸಾಮಾನ್ಯ ಇಲಾಖೆಗಳು

೮. ಬ್ರಿಟಿಷ್ ನಾಣ್ಯಗಳೇ ಮೈಸೂರಿನಲ್ಲಿಯೂ ಬಳಕೆಯಾಗತಕ್ಕದ್ದು. ಮಹಾರಾಜರವರು ಸ್ವಂತವಾಗಿ ನಾಣ್ಯಗಳನ್ನು ಏರ್ಪಡಿಸಕೂಡದು. ಉಪ್ಪು ಅಫೀಂ ವಿಚಾರಗಳಲ್ಲಿಯೂ ಹೀಗೆಯೇ ಸ್ವತಂತ್ರವಿಲ್ಲ.

೯. ತಂತಿಯ ಇಲಾಖೆಯು ಬ್ರಿಟಿಷರದೇ ಆಗಿರತಕ್ಕದ್ದು ; ಆ ಇಲಾಖೆಗೆ ಬೇಕಾದ ಅನುಕೂಲಗಳನ್ನು ಮಹಾರಾಜರವರು ಒದಗಿಸಿಕೊಡಬೇಕು. ಹಾಗೆಯೇ ಬ್ರಿಟಿಷರು ಮೈಸೂರಿನಲ್ಲಿ ರೈಲನ್ನು ಹಾಕಬೇಕಾಗಿ ಬಂದರೆ ಅದಕ್ಕೆ ಅವಶ್ಯಕವಾದ ಭೂಮಿಯನ್ನೂ, ಇತರ ಅನುಕೂಲಗಳನ್ನು ಕೊಡಬೇಕು.

೧೦. ಬ್ರಿಟಿಷ್ ರಾಜ್ಯದಲ್ಲಿ ಅಪರಾಧಕ್ಕೆ ಗುರಿಯಾದವರನ್ನು ಬ್ರಿಟಿಷ್ ಅಧಿಕಾರಿಗಳು ಕೇಳಿದಂತೆ ಹಿಡಿದು ಒಪ್ಪಿಸಿ ಅವರ ವಿಚಾರಣೆಯಲ್ಲಿ ನೆರವಾಗ ತಕ್ಕದ್ದು.

ಒಳ ಆಡಳಿತ

೧೧. ೧೮೮೧ರಲ್ಲಿ ರಾಜ್ಯವನ್ನು ಹಿಂತಿರುಗಿ ಒಪ್ಪಿಸಿದ ಕಾಲದಲ್ಲಿ ಬ್ರಿಟಿಷರು ಜಾರಿಗೆ ತಂದಿದ್ದ ಕಾನೂನುಗಳನ್ನೂ, ನಿಬಂಧನೆಗಳನ್ನೂ ಮಹಾರಾಜರವರು ಹಾಗೆಯೇ ನಡೆಸತಕ್ಕದ್ದು. ಬದಲಾಯಿಸುವ ಸಂದರ್ಭದಲ್ಲಿ ವೈಸರಾಯಿಯ ಅನುಮತಿಯು ಅವಶ್ಯಕ.

೧೨. ಆಡಳಿತಕ್ರಮದಲ್ಲಿ ವೈಸರಾಯಿಯ ಅನುಮತಿಯಿಲ್ಲದೆ ಮುಖ್ಯವಾದ ಬದಲಾವಣೆಗಳನ್ನು ನಡೆಸಕೂಡದು.

೧೩. ಬ್ರಿಟಿಷರ ಕಾಲದಲ್ಲಿ ವ್ಯವಸ್ಥೆಯಾದ ಸನ್ನದುಗಳನ್ನಾಗಲಿ, ಭೂ ಕಂದಾಯದ ಏರ್ಪಾಟುಗಳನ್ನಾಗಲಿ ನ್ಯಾಯಸ್ಥಾನದ ತೀರ್ಪುಗಳ ಪ್ರಕಾರವಾಗಿಯೋ ಅಥವಾ ವೈಸರಾಯಿಯ ಅನುಮತಿಯನ್ನು ಪಡೆದೋ ಬದಲಾಯಿಸಬಹುದೇ ವಿನಾ ಬೇರೆ ಯಾವ ಬಗೆಯಲ್ಲಿಯೂ ಬದಲಾಯಿಸ ಕೂಡದು.

ಶ್ರೇಷ್ಠಾಧಿಕಾರ

೧೪. ಸೂಕ್ತವೆಂದು ತೋರಿದಾಗ ವೈಸರಾಯಿಯು ಒಳ ಆಡಳಿತದಲ್ಲಿಯೂ ಪ್ರವೇಶಿಸಿ, ಯೋಗ್ಯವಾದ ಆಡಳಿತಕ್ಕೆ ತಕ್ಕಂತೆಯೋ, ಅಥವಾ ಬ್ರಿಟಿಷರ ಕ್ಷೇಮ ಭದ್ರತೆಗಳಿಗೆ ತಕ್ಕಂತೆಯೋ, ಸಮಯೋಚಿತವಾದ ಏರ್ಪಾಟುಗಳನ್ನು ಮಾಡ ಬಹುದು.

ಆಡಳಿತದ ಕಟ್ಟುಗಳು

ಅನ್ಯದೇಶಗಳೊಡನೆ ಸಂಧಿ ವಿಗ್ರಹವೆನ್ನುವುದು ಮೈಸೂರಿಗೆ ಇಲ್ಲ. ಬ್ರಿಟಿಷರ ಆಶ್ರಯದಲ್ಲಿ ಬ್ರಿಟಿಷರ ಮೇಲ್ವಿಚಾರಣೆಗೊಳಪಟ್ಟು ವೈಸರಾಯಿಯಿಂದ ನಿಯಮಿತ ನಾದ ರೆಸಿಡೆಂಟಿನ ಸಲಹೆಗಳನ್ನೂ, ಸೂಚನೆಗಳನ್ನೂ ಅಂಗೀಕರಿಸಿ ಆಳುವಂತೆ ನಿಷ್ಕರ್ಷೆಯಾಗಿರುವುದು. ಇದಲ್ಲದೆ ಸಾಂಕುಶ ಪ್ರಭುತ್ವವನ್ನೂ, ಕ್ರಮಬದ್ಧವಾದ ಆಡಳಿತವನ್ನೂ ನೆಲೆಗೊಳಿಸಲು ರಾಜ್ಯವನ್ನು ಹಿಂತಿರುಗಿಕೊಡುವ ಸಂದರ್ಭದಲ್ಲಿ—

"೧. ಅರಮನೆ ವೆಚ್ಚಕ್ಕಾಗಿ ರಾಜ್ಯಾದಾಯದಿಂದ ಸಲ್ಲಬೇಕಾದ ಅಂಶವು ನಿಷ್ಕೃಷ್ಟವಾಗಿರತಕ್ಕದ್ದು.

"೨. ಉಳಿದ ಹಣವನ್ನು ಪ್ರಜಾಕಾರ್ಯಗಳಿಗೆ ವಿನಿಯೋಗಿಸಬೇಕು. ಇದಕ್ಕೆ ವರ್ಷೇವರ್ಷೇ ಆದಾಯವ್ಯಯದ ಅಂದಾಜು ಪದ್ಧತಿ (Budget)ಯಂತೆ ಲೆಕ್ಕಪತ್ರಗಳಿರತಕ್ಕದ್ದು.

"೩. ಜಾರಿಯಲ್ಲಿರುವ ಕಾಯಿದೆಗಳೂ, ಹಕ್ಕುಗಳೂ, ಮಾಮೂಲುಗಳೂ ಹಾಗೆಯೇ ಇರಬೇಕು; ಅವುಗಳ ಬದಲಾವಣೆಯು ಕ್ರಮವಾದ ಶಾಸನ ಸಭೆಯಿಂದಲೇ ಆಗಬೇಕು.

"೪. ಸಿವಿಲ್ ಮತ್ತು ಕ್ರಿಮಿನಲ್ ಕೋಡುಗಳು ಸ್ವತಂತ್ರವಾಗಿಯೂ ನ್ಯಾಯ ಸಮ್ಮತವಾಗಿಯೂ ಇರಬೇಕು. ಅವುಗಳ ವಿಮರ್ಶೆ, ತೀರ್ಮಾನಗಳ ವಿಚಾರದಲ್ಲಿ ಸರ್ಕಾರವು ಕೈ ಹಾಕಬಾರದು.

"೫. ಕಂದಾಯ, ಸುಂಕ, ತೆರಿಗೆಗಳನ್ನು ಶಾಸನಸಮ್ಮತವಾಗಿ ಅಥವಾ ಸಂಪ್ರದಾಯಾನುಸಾರವಾಗಿ ವಿಧಿಸಬೇಕು.

"೬. ರಾಜ್ಯಯಂತ್ರವು ಸರಿಯಾಗಿ ನಡೆಯುವುದಕ್ಕೆ ಬೇಕಾದ ಅಧಿಕಾರಿ ವರ್ಗವೂ, ಅದಕ್ಕೆ ತಕ್ಕ ನಿಯಮಗಳೂ, ಅಧಿಕಾರಿಗಳನ್ನು ನಿಯಮಿಸುವುದಕ್ಕೆ ತಕ್ಕ ಕಟ್ಟುಪಾಡುಗಳೂ ಇರಬೇಕು.

"೭. ಸ್ವೇಚ್ಛಾ ಪ್ರವೃತ್ತಿಗೆ ಅವಕಾಶವಿಲ್ಲದಂತೆಯೂ, ಪ್ರಭುತ್ವವು ಬಹುಜನಸಮ್ಮತವಾಗುವಂತೆಯೂ ನೆರವೇರಲು ಒಂದು ಮಂತ್ರಾಲೋಚನ ಸಭೆಯಿರಬೇಕು. ಈ ಸಭೆಯೇ ರಾಜ್ಯದ ಪ್ರಧಾನಾಂಗವಾಗಿ ಜವಾಬ್ದಾರಿ ವಹಿಸತಕ್ಕದ್ದಾಗಿರಬೇಕು" ಎಂಬ ಆಡಳಿತದ ಕಟ್ಟುಗಳೂ ಏರ್ಪಟ್ಟವು.



ಶ್ರೀ ವೀರನಾರಾಯಣ



ಮದನ ಕೈ ವಿಗ್ರಹ

ಮೈಸೂರಿನ ಲಲಿತ ಕಲೆಗಳು

ಮೈಸೂರಿನ ಲಲಿತ ಕಲೆಗಳು.

ಮನುಷ್ಯನು ಸಾಮಾನ್ಯವಾಗಿ ಸೌಂದರ್ಯಾಭಿಲಾಷೆಯುಳ್ಳವನು. ಮತ್ತು ಆನಂದಾನುಭವವನ್ನು ಬಯಸತಕ್ಕವನು. ಈ ಸೌಂದರ್ಯ ಮತ್ತು ಆನಂದಗಳ ಫಲವಾಗಿ ಲಲಿತ ಕಲೆಗಳು ಸೃಷ್ಟಿಯಾಗಿವೆ. ಮನುಷ್ಯನ ನಾಗರಿಕ ಸ್ಥಿತಿಯು ಹೆಚ್ಚಿದಂತೆಲ್ಲ ಅವನಿಗೆ ಲಲಿತ ಕಲೆಗಳಲ್ಲಿ ಅಭಿರುಚಿಯು ಹೆಚ್ಚುತ್ತದೆ. ಅವನು ತನ್ನ ಕಾಲವನ್ನೂ ಹಣವನ್ನೂ ಬುದ್ಧಿಯನ್ನೂ ಕಲಾಭಿವೃದ್ಧಿಗಾಗಿ ವಿನಿಯೋಗಿಸುತ್ತಾನೆ. ಕಲಾಭಿರುಚಿಯೆಂಬುದು ಅನಾಗರಿಕರಾದ ಕಾಡುಮನುಷ್ಯರಿಗೂ ಇರುತ್ತದೆ. ಆದರೆ ಆ ಕಲೆಯೂ, ಆ ಅಭಿರುಚಿಯೂ ಇನ್ನೂ ಅಸಂಸ್ಕೃತ ರೂಪದಲ್ಲಿರುತ್ತವೆ. ಅವರಲ್ಲಿ ಏರ್ಪಟ್ಟಿರುವ ಕುಣಿತವೂ, ಆ ಕುಣಿತದಲ್ಲಿ ಅವರಿಗಿರುವ ಆಸಕ್ತಿಯೂ ಇದಕ್ಕೆ ಉದಾಹರಣೆಗಳಾಗಿವೆ. ನಾಟ್ಯಶಾಸ್ತ್ರ ಪರಿಚಯವುಳ್ಳ ನಾಗರಿಕ ಜನರಿಗೆ ಕಾಡುಜನಗಳ ರಾಗಾಲಾಪನೆಗಳೂ, ಕುಣಿತಗಳೂ ಘೋರವಾಗಿ ಕಂಡುಬರಬಹುದು. ಆದರೆ ನಾಗರಿಕರೆಂದು ಹೇಳಿಕೊಳ್ಳುವ ನಾವು ಕೂಡ ಒಂದಾನೊಂದು ಕಾಲದಲ್ಲಿ ಇಂತಹ ಅಸಂಸ್ಕೃತ ಸ್ಥಿತಿಯಲ್ಲಿದ್ದು ಅವುಗಳಲ್ಲಿ ಆಸಕ್ತಿಯನ್ನು ತೋರಿಸಿದ್ದೇವೆ. ಅವರಾದರೋ ತಮ್ಮ ಕಲೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ತಕ್ಕ ಬುದ್ಧಿ ಶಕ್ತಿಯಿಲ್ಲದವರು. ನಾವಾದರೋ ನಮಗಿರುವ ಪರಿಸರಣದ ಫಲದಿಂದ ಉತ್ತಮ ಸ್ಥಿತಿಯನ್ನೇ ಕೋರತಕ್ಕವರು, ಮತ್ತು ಅದಕ್ಕಾಗಿ ಬುದ್ಧಿಯನ್ನು ಉಪಯೋಗಿಸತಕ್ಕವರು.

ಲಲಿತ ಕಲೆಗಳಲ್ಲಿ ಸಂಗೀತ, ಸಾಹಿತ್ಯ, ವಾಸ್ತು, ಶಿಲ್ಪ ಮತ್ತು ಚಿತ್ರ ಎಂಬ ಐದೇ ಮುಖ್ಯವಾದುವು. ಸಂಗೀತ ಸಾಹಿತ್ಯಗಳಿಗೆ ಕಾರ್ಯಸಾಮಗ್ರಿಗಳು ಘನಪದಾರ್ಥಗಳಲ್ಲ. ಅವುಗಳಲ್ಲಿ "ಶಬ್ದಾರ್ಥ ಸೌಂದರ್ಯಗಳು ಮುಖ್ಯ". ವಾಸ್ತು, ಶಿಲ್ಪ ಮತ್ತು ಚಿತ್ರಗಳಿಗೆ ಕಾರ್ಯಸಾಮಗ್ರಿಗಳು ಆವಶ್ಯಕ. ವಾಸ್ತುಕಲೆಯು ಕಟ್ಟಡಗಳಿಗೆ ಸಂಬಂಧಪಟ್ಟಿರುವುದರಿಂದ

ಸಾಮಗ್ರಿಗಳನ್ನು ಯಾವ ರೀತಿ ಜೋಡಿಸಿ ಸೌಂದರ್ಯ ಬೋಧೆಯನ್ನು ಮಾಡಿದ್ದಾರೆ? ಆನಂದವನ್ನು ದೊರಕಿಸಿದ್ದಾರೆ? ಎಂದು ಕೇಳುತ್ತೇವೆ. ಶಿಲ್ಪವೆಂಬುದು ಕೆತ್ತನೆಯ ಕೆಲಸಕ್ಕೆ ಸೇರಿದುದು. ಕಲ್ಲು, ಮಣ್ಣು, ಲೋಹ ಇತ್ಯಾದಿಗಳಲ್ಲಿ ಆಕಾರಗಳನ್ನೂ, ಭಾವಭಂಗಿಗಳನ್ನೂ ತಂದು ನಮ್ಮ ಮನಸ್ಸನ್ನು ಹೇಗೆ ಆಕರ್ಷಿಸಿದ್ದಾರೆ? ಎಂದು ಕೇಳುತ್ತೇವೆ. ಚಿತ್ರಗಳಲ್ಲಾದರೋ ಕಾಗದ, ಬಟ್ಟೆ, ಬಣ್ಣ, ಇವುಗಳಿಂದ ರೂಪರೇಖಾ ವಿನ್ಯಾಸಾದಿಗಳು ಹೇಗೆ ಜೋಡಣೆಯಾಗಿ ಆನಂದವನ್ನುಂಟುಮಾಡುತ್ತವೆ, ಎಂದು ಕೇಳುತ್ತೇವೆ. ಒಂದು ಜನಾಂಗದ ವೈಭವವೂ, ನಾಗರಿಕತೆಯೂ, ಅದು ತೋರ್ಪಡಿಸಿಗುವ ಲಲಿತಕಲಾ ನೈಪುಣ್ಯದಿಂದ ತಿಳಿಯುವುವು. ಈ ಕಲೆಗಳಲ್ಲಿ ಸಾಹಿತ್ಯದ ವಿಚಾರವನ್ನು ಬೇರೇ ಪ್ರಕರಣದಲ್ಲಿ ವಿವರಿಸಿದ್ದೇವೆ. ಉಳಿದುವನ್ನು ಇಲ್ಲಿ ಸ್ಥೂಲವಾಗಿ ತಿಳಿಸುವೆವು.

ಕಟ್ಟಡಗಳ ವಿಚಾರವನ್ನು ಮೊದಲು ತೆಗೆದುಕೊಳ್ಳೋಣ. ಕಾಡು ಮನುಷ್ಯನು ಮಳೆ ಗಾಳಿ ಬಿಸಲುಗಳಿಗೆ ಮರೆಯಾಗಿ ತಾನಿರುವುದಕ್ಕೆ ಗುಹೆಗಳನ್ನು ಆಶ್ರಯಿಸಬಹುದು. ತನ್ನ ಆಹಾರ ಪದಾರ್ಥಗಳನ್ನು ಶೇಖರಿಸುವುದಕ್ಕೂ ಆ ಗುಹೆಯೇ ಅವನಿಗೆ ಗತಿ. ಸ್ವಲ್ಪ ನಾಗರಿಕತೆಯುಳ್ಳ ಮನುಷ್ಯನಾದರೋ ನಿಲ್ಲುವುದಕ್ಕೆ ಸ್ವಲ್ಪ ನೆರಳಾದರೆ ಸಾಕೆಂದು ಒಂದು ಗುಡಿಸಲನ್ನು ಹಾಕಿಕೊಳ್ಳಬಹುದು. ನಮ್ಮಲ್ಲಿ ಅನೇಕ ಜನಗಳು ಹಳ್ಳಿಗಳಲ್ಲಿ ವಾಸಮಾಡುವರಾದ್ದರಿಂದಲೂ, ಹೊಟ್ಟೆಬಟ್ಟೆಗಳಿಗೆ ಕೂಡ ಸಾಕಾದಷ್ಟು ಉಪಪತ್ತಿ ಇಲ್ಲದವರಾದ್ದರಿಂದಲೂ, ನಮ್ಮಲ್ಲಿ ಗುಡಿಸಲುಗಳೂ, ಮಣ್ಣಿನ ಮನೆಗಳೂ ಹೆಚ್ಚಾಗಿವೆ. ಅವರಿಗೆ ನಿಲ್ಲುವುದಕ್ಕೆ ನೆಲೆಯಾದರೆ ಸಾಕೆಂಬ ಆತುರವಿರುವುದಲ್ಲದೆ ಸೌಂದರ್ಯ, ಆನಂದ ಮುಂತಾದುವುಗಳ ಕಡೆಗೆ ಗಮನವು ಹೋಗುವುದಿಲ್ಲ. ಐಶ್ವರ್ಯವಂತರಾದವರು ಉಪಯುಕ್ತತೆಯನ್ನು ನೋಡುವರು; ಮತ್ತು ಸೌಂದರ್ಯವನ್ನು ನೋಡುವರು.

ಮನುಷ್ಯನು ತನಗೆ ಪ್ರೀತಿ ಪಾತ್ರರಾದವರ ಸ್ಮಾರಕಕ್ಕಾಗಿ ಏನಾದರೂ ಗುರುತನ್ನು ಮಾಡುವುದುಂಟು. ಕಾಲವಾದ ತನ್ನ ಹಿರಿಯರನ್ನೂ, ಬಂಧು ಬಳಗದವರನ್ನೂ ಮಣ್ಣುಮಾಡಿದಾಗ, ಕೆಲವರು ಮಣ್ಣಿನ ದಿಣ್ಣೆಯನ್ನೂ, ಕೆಲವರು ಮಂಟಪ, ಗೋಪುರಗಳನ್ನೂ ಕಟ್ಟುವರು. ಅವರಲ್ಲಿ ಹೆಚ್ಚಾಗಿ ಪ್ರೀತಿಯಿದ್ದು ಅಥವ ಗೌರವವಿದ್ದು, ಒಳ್ಳೆಯ ಸ್ಮಾರಕವನ್ನು

ಕಟ್ಟುವುದಕ್ಕೆ ಹಣವೂ ಇದ್ದರೆ ಮಣ್ಣುಮಾಡಿದೆಡೆಯಲ್ಲಿ ದಿವ್ಯಭವನಗಳು ಏರ್ಪಡಬಹುದು. ಒಂದೊಂದು ಬಾರಿ ಅಂತಹ ಕಡೆ ಲಿಂಗಪ್ರತಿಷ್ಠೆಯನ್ನು ಮಾಡಿ ದೇವಸ್ಥಾನಗಳನ್ನು ಕಟ್ಟುವುದೂ ಉಂಟು. ಕಾಲವಾದ ಜನರನ್ನು ಲಿಂಗೈಕ್ಯರಾಗಿರುವರೆಂದು ಸಾಮಾನ್ಯವಾಗಿ ಹೇಳುತ್ತಾರೆ.

ಸಾಮಾನ್ಯವಾಗಿ ಮನುಷ್ಯನಿಗೆ ಮೊದಲಿಂದಲೂ 'ದೇವರು' ಎಂಬ ಅಗೋಚರ ವ್ಯಕ್ತಿ ಇರುವುದೆಂಬ ನಂಬಿಕೆಯೂ, ಆ ವ್ಯಕ್ತಿಯ ಅನುಗ್ರಹ ದಿಂದ ಸುಖವೂ, ಆಗ್ರಹದಿಂದ ದುಃಖವೂ, ಪ್ರಾಪ್ತವಾಗುವುದೆಂಬ ಭಾವನೆಯೂ ಇದ್ದೇ ಇವೆ. ಇಂತಹ ಅಪಾರ ಶಕ್ತಿಯುಳ್ಳ ದೇವರು ನಾನಾ ರೂಪಗಳಲ್ಲಿ ಅಭಿವ್ಯಕ್ತನಾಗಿ ದುಷ್ಟಶಿಕ್ಷಣ, ಶಿಷ್ಟರಕ್ಷಣೆ ಮಾಡಿರುವನೆಂದು ಅನೇಕರು ನಂಬಿದ್ದಾರೆ. ಆತನನ್ನು ಸ್ತೋತ್ರದಿಂದಲೂ, ಪೂಜೆಯಿಂದಲೂ, ಧ್ಯಾನದಿಂದಲೂ ಒಲಿಸಿಕೊಳ್ಳದಿದ್ದರೆ ಜನ್ಮಗಳನ್ನು ಎತ್ತುತ್ತಲೇ ಇದ್ದು ಕಷ್ಟಪಡಬೇಕಾಗುತ್ತದೆಂಬ ಹೆದರಿಕೆಯೂ ಇದೆ. ಆ ದೇವರನ್ನು ಸಾಕಾರ ವಾಗಿ ಮಾಡಿಕೊಂಡು ಅವನಿಗಾಗಿ ಕಟ್ಟಡಗಳನ್ನು ಕಟ್ಟಿರುವುದರಿಂದ ದೇವಸ್ಥಾನಗಳನೇಕವು ನಮ್ಮಲ್ಲಿ ಏರ್ಪಟ್ಟಿವೆ. ಮೊದಲು ಮೊದಲು ಇಂತಹ ದೇವಸ್ಥಾನಗಳು ಚಿಕ್ಕದಾಗಿದ್ದಿರಬಹುದು. ಸೌಂದರ್ಯ ಬೋಧೆಯ ದೃಷ್ಟಿ ಯಿಲ್ಲದೆ ನಿರ್ಮಿತವಾಗಿದ್ದಿರಬಹುದು. ಆದರೆ ಕ್ರಮಕ್ರಮವಾಗಿ ಮನುಷ್ಯನ ಸ್ಥಿತಿಯು ಉತ್ತಮವಾದ ಹಾಗೆಲ್ಲ ದೇವಸ್ಥಾನಗಳೂ ಉತ್ತಮವಾಗುತ್ತ ಬಂದಿವೆ. ಎಲ್ಲರಿಗಿಂತ ದೊಡ್ಡವನಾದ ದೇವರಿಗೆ ಕಟ್ಟುವ ಮನೆಯನ್ನು ತಮ್ಮ ಕಲಾನೈಪುಣ್ಯವನ್ನೆಲ್ಲ ವೆಚ್ಚ ಮಾಡಿ ಶಿಲ್ಪಿಗಳೂ, ತಮ್ಮ ದ್ರವ್ಯಸಂಪತ್ತ ನ್ನೆಲ್ಲ ವ್ಯಯಮಾಡಿ ಧನಿಕರೂ, ಕಟ್ಟಿದರು. "ದೇವರ ದರ್ಶನಕ್ಕ ಲ್ಲದಿದ್ದರೆ ಕಲಾನೈಪುಣ್ಯದ ದರ್ಶನಕ್ಕಾದರೂ ಜನರ ಮನಸ್ಸು ಎಳೆಯಲಿ —ಕಲಾನೈಪುಣ್ಯ ದರ್ಶನದ ಮೂಲಕ ದೇವರ ದರ್ಶನವೂ ಕೈಗೂಡಲಿ" ಎಂಬ ಉದಾತ್ತ ಭಾವನೆಗಳಿಂದ ಕಲಾಕಲ್ಪವೃಕ್ಷಗಳನ್ನು ಹಿಂದಿನವರು ಬಿಟ್ಟಿದ್ದಾರೆ.

ನಮ್ಮ ಸಂಸ್ಥಾನದಲ್ಲಿ ಪೂರ್ವನಿವಾಸಿಗಳ ವಾಸಗೃಹಗಳಾವುವೂ ನಮಗೆ ದೊರೆಯದೇ ಹೋದರೂ ಅವರು ಸ್ಮಾರಕವಾಗಿ ಬಿಟ್ಟುಹೋಗಿರುವ ಕೆಲವು ಕಿಸ್ತುವಾನಗಳು ಸಿಕ್ಕುತ್ತವೆ. ಈ ಕಟ್ಟಡಗಳ ರೀತಿಯನ್ನು ನೋಡಿ ದರೆ ಅವು ಮುಂದೆ ಹೇಳಿರುವ ರೀತಿಯಿರುವುವು. ತಳದಲ್ಲಿ ಅಗಲವಾದ

ಒಂದು ದೊಡ್ಡ ಕಲ್ಲೂ ಅದರ ಸುತ್ತಲೂ ನಿಲ್ಲಿಸಿರುವ ಕಲ್ಲು ಚಪ್ಪಡಿಗಳೂ, ಮೇಲೆ ಮೊಗಚಿರುವ ದೊಡ್ಡ ಕಲ್ಲುಬಂಡೆಯೂ ಕೂಡಿದ ಭೂಗೃಹವಾಗಿರುತ್ತದೆ. ಈ ಕಟ್ಟಡವು ಮುಕ್ಕಾಲು ಪಾಲೆಲ್ಲ ಭೂಮಿಯ ಒಳಗಡೆಯೇ ಇದ್ದು ಮೇಲು ಭಾಗದಲ್ಲಿ ಒಂದೆರಡು ಅಡಿಗಳಷ್ಟು ಮಾತ್ರ ಕಾಣುವುದು. ಪೂರ್ವ ದಿಕ್ಕಿನ ಮುಖದಲ್ಲಿ ಸುಮಾರು ಒಂದು ಅಡಿ ವ್ಯಾಸವುಳ್ಳ ಕಂಡಿಯು ಇರುತ್ತದೆ. ಒಳಗಿರುವ ಮಣ್ಣನ್ನೆಲ್ಲ ಅಗೆದು ಕಟ್ಟಡವನ್ನು ನೋಡುವುದಾದರೆ ಪಶ್ಚಿಮದ ಗೋಡೆಗೆ ಒರಗಿಸಿರುವ ಮಡಕೆಗಳು ಕಾಣುವುವು. ಈ ಕಟ್ಟಡಗಳನ್ನು ಪೂರ್ವನಿವಾಸಿಗಳು ಕಟ್ಟಿದರೆಂಬುದರಲ್ಲಿ ಸಂಶಯವಿಲ್ಲ. ಅವರು ಕಾಲವಾದ ತಮ್ಮ ಬಂಧು ಬಳಗಗಳ ಸ್ಮಾರಕಕ್ಕಾಗಿ ಕಟ್ಟಿದರೆಂಬುದರಲ್ಲಿಯೂ ಸಂದೇಹವಿಲ್ಲ. ಆ ಮಡಕೆಗಳಲ್ಲಿ ಮೃತನಾದವನ ಸಾಮಾನುಗಳೂ, ಅಸ್ಥಿಗಳೂ ಇದ್ದಿರಬಹುದು. ಪೂರ್ವದಿಕ್ಕಿನಲ್ಲಿರುವ ಕಂಡಿಯ ಮೂಲಕ, ಗತಿಸಿ ಹೋದ ಮನುಷ್ಯನಿಗೆ ಆಹಾರಾದಿಗಳನ್ನು ಕೊಡುತ್ತಿದ್ದಿರಬಹುದೆಂದು ಊಹಿಸಬಹುದಾಗಿದೆ.

ಮೊಳಕಾಲ್ಮುರು ತಾಲ್ಲೂಕನಲ್ಲಿ ದೊರೆಯುವ ಈ ಬಗೆಯ ಸಣ್ಣ ಕಟ್ಟಡಗಳನ್ನು ಮೌರ್ಯರ ಮನೆಗಳೆಂದು ಹೇಳುತ್ತಾರೆ. ನೀಲಗಿರಿಯ ಬಡಗರೂ, ಇಂತಹ ಮನೆಗಳಿಗೆ ಅದೇ ಹೆಸರನ್ನು ಹೇಳುವರು. ಮೌರ್ಯರ ದಿಣ್ಣೆಯೆಂದು ಹೆಸರಿರುವ ಕೆಲವು ಚಕ್ರಾಕಾರದ ಅಸ್ಥಿಭಾರಗಳಿವೆ. ಇವು ಮೊಳಕಾಲ್ಮುರು, ಚಳ್ಳಕೆರೆ ಮತ್ತು ಚಿತ್ರದುರ್ಗ ತಾಲ್ಲೂಕುಗಳಲ್ಲಿ ದೊರೆಯುವುವು. ಇಲ್ಲಿ ಪೂರ್ವನಿವಾಸಿಗಳಾದ ಬೇಡರ ಗುಡಿಗಳಿದ್ದುವೆಂದು ಊಹಿಸಲಾಗಿದೆ. ಏಕೆಂದರೆ ಈ ಜನರು ಸಾಮಾನ್ಯವಾಗಿ ಗುಂಡಗಿರುವ ಅಸ್ಥಿಭಾರದ ಮೇಲೆ ಕಟ್ಟಡವನ್ನು ಕಟ್ಟಿ ಮಧ್ಯೆ ಒಂದು ಕಂಬವನ್ನು ನೆಟ್ಟು ಆ ಕಂಬವನ್ನೇ ದೇವರೆಂದು ಪೂಜಿಸುವ ಪದ್ಧತಿಯುಳ್ಳವರು.

ಸಾಮಾನ್ಯವಾಗಿ ಹಳ್ಳಿಗಳ ಕಡೆ ಹೋದರೆ ಕಾರುಕಲ್ಲು, ಎಲ್ಲೆಕಲ್ಲು, ಮಾಸ್ತಿಕಲ್ಲು, ಮತ್ತು ವೀರಗಲ್ಲು ಮುಂತಾದುವನ್ನು ನೋಡಬಹುದು. ಕಾರುಕಲ್ಲು, ಆಯಾ ಗ್ರಾಮವನ್ನು ಕಟ್ಟಿದಾಗ ನಿಲ್ಲಿಸಿದ ಸ್ಮಾರಕಚಿಹ್ನೆ. ಎಲ್ಲೆಕಲ್ಲು ಆಯಾ ಗ್ರಾಮದ ಸರಹದ್ದನ್ನು ತೋರಿಸುವ ಕಲ್ಲು. ವರ್ಷಕ್ಕೊಂದು ಬಾರಿ ಪಟೇಲನಾಗಲಿ, ಕುಳವಾಡಿಯಾಗಲಿ ಕಾರುಕಲ್ಲಿಗೆ ಪೂಜೆಯನ್ನು ಮಾಡುವ ಪದ್ಧತಿಯಿದೆ. ಪೂಜೆಯು ಮುಗಿದ ಮೇಲೆ ನೈವೇದ್ಯಕ್ಕೆ

ಇಟ್ಟಿರುವ ಅಕ್ಕಿ, ತೆಂಗಿನಕಾಯಿ ಮುಂತಾದುವನ್ನು ಕುಳವಾಡಿಯು ತೆಗೆದು ಕೊಂಡು ಹೋಗುವನು.

ಮಾಸ್ತಿಕಲ್ಲು ಎಂಬುದು ಮಹಾಸತಿ ಕಲ್ಲು ಎಂಬುದರ ವಿಕಾರರೂಪ. ಇವು ಹಿಂದೆ ಸ್ತ್ರೀಯರು ಸಹಗಮನ ಮಾಡಿದ ಸ್ಮಾರಕ ಚಿಹ್ನೆಗಳು. ಮಾಸ್ತಿ ಕಲ್ಲುಗಳು ಸಾಮಾನ್ಯವಾಗಿ ನಾಲ್ಕು ಅಡಿ ಎತ್ತರವುಳ್ಳವು. ಒಂದು ಕಂಬ ದಂತೆ ಕೆತ್ತಿ ಅದರ ಕೊನೆಯಲ್ಲಿ ಬಿಚ್ಚಿದ ಕೈಯನ್ನು ಎತ್ತಿ ತೋರಿಸಿರುತ್ತದೆ. ಕೈಬೆರಳುಗಳು ಪ್ರತ್ಯೇಕ ಮಾಡಲ್ಪಟ್ಟು ಮೇಲಕ್ಕೆ ಚಾಚಿಕೊಂಡಿರುವುವು. ಅನೇಕ ವೇಳೆ ಒಂದು ನಿಂಬೆಯ ಹಣ್ಣನ್ನು ಹೆಬ್ಬೆರಳಿಗೂ, ಮೊದಲನೆಯ ಬೆರಳಿಗೂ ಮಧ್ಯೆ ಇರುವಂತೆ ತೋರಿಸುವ ಸಂಪ್ರದಾಯವಿದೆ. ಈ ಕಲ್ಲಿನಲ್ಲಿ ಒಬ್ಬ ಗಂಡಸು ಮತ್ತು ಅವನ ಹೆಂಡತಿ ಇವರ ಪ್ರತಿಮೆಗಳಿರುತ್ತವೆ.

ವೀರಗಲ್ಲುಗಳಲ್ಲಿ ಕೆತ್ತನೆ ಕೆಲಸವು ಹೆಚ್ಚಾಗಿರುವುದು. ಪ್ರತಿಯೊಂದು ಕಲ್ಲಿನಲ್ಲಿಯೂ ಮೂರು ಭಾಗಗಳಿರುತ್ತವೆ. ತಳಭಾಗದಲ್ಲಿ ಆ ವೀರನು ಯಾವ ರೀತಿ ಮರಣವನ್ನು ಹೊಂದಿದನು ಎಂಬುದನ್ನು ತೋರಿಸಿರುತ್ತಾರೆ. ಅದರ ಮೇಲು ಭಾಗದಲ್ಲಿ ಅಪ್ಸರಸ್ತ್ರೀಯರು ಆ ವೀರನನ್ನು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವುದನ್ನು ತೋರಿಸಿರುತ್ತಾರೆ. ಅದರ ಮೇಲುಭಾಗದಲ್ಲಿ ವೀರನು ದೇವರ ಸಾನ್ನಿಧ್ಯದಲ್ಲಿರುವುದನ್ನು ತೋರಿಸಿರುತ್ತಾರೆ. ಆ ವೀರ ನಾರು? ಆತನು ಮಾಡಿದ ಸಾಹಸ ಕಾರ್ಯವೇನು? ಯಾವಾಗ ಆತನು ಮರಣವನ್ನು ಹೊಂದಿದ್ದು? ಎಂಬ ವಿಷಯಗಳನ್ನೆಲ್ಲ ಅಕ್ಷರಗಳಲ್ಲಿ ಕೆತ್ತಿ ಬರೆ ದಿರುತ್ತಾರೆ. ಈ ವೀರಗಲ್ಲುಗಳಲ್ಲಿ ತಳಭಾಗದಲ್ಲಿರುವ ಚಿತ್ರಗಳು ಸ್ವಾರಸ್ಯ ವುಳ್ಳವು. ಏಕೆಂದರೆ ಆಗಿನ ಕಾಲದ ಉಡಿಗೆತೊಡಿಗೆಗಳು, ಆಯುಧಗಳು ಯುದ್ಧಮಾಡುವ ರೀತಿ ಮುಂತಾದುವುಗಳನ್ನೆಲ್ಲ ಅವು ತೋರಿಸುತ್ತವೆ.

ಮೈಸೂರು ದೇಶದಲ್ಲಿರುವ ಕಟ್ಟಡಗಳನ್ನೂ, ದೇವಸ್ಥಾನಗಳನ್ನೂ ನೋಡಿದರೆ ವಾಸ್ತುಕಲೆಯ ಅಭಿವೃದ್ಧಿಗೆ ಜೈನರು, ಬ್ರಾಹ್ಮಣರು ಮತ್ತು ವೀರಶೈವರು ಸಹಾಯ ಮಾಡಿರುವುದು ಗೋಚರವಾಗುತ್ತದೆ. ಇತಿಹಾಸದ ದೃಷ್ಟಿಯಿಂದ ಬೌದ್ಧರು ವಾಸ್ತುಶಿಲ್ಪಕಲೆಗಳಿಗೆ ತಳಹದಿಯನ್ನು ಹಾಕಿದವ ರೆಂದು ಹೇಳುವುದಾದರೂ ಬೌದ್ಧರ ಕಟ್ಟಡಗಳಾವುವೂ ಮೈಸೂರು ಸಂಸ್ಥಾನದಲ್ಲಿ ಇಲ್ಲದಿರುವುದರಿಂದ ಅವರ ವಿಚಾರವನ್ನು ಇಲ್ಲಿ ಮಾಡುವು ದಿಲ್ಲ. ಜೈನರ ಪರವಾಗಿ ಅವರ ಬೆಟ್ಟಗಳೂ, ಬಸ್ತಿಗಳೂ ಇರುವುವು.

ವೀರಶೈವರ ಪರವಾಗಿ ಅವರ ಮಠಗಳಿರುವುವು. ಬ್ರಾಹ್ಮಣರ ಪರವಾಗಿ ಅನೇಕ ದೇವಸ್ಥಾನಗಳಿರುವುವು.


ನಮ್ಮ ದೇಶದ ವಾಸ್ತುಕಲೆಯಲ್ಲಿ ಹಿಂದೂರೀತಿ ಮತ್ತು ಮಹ್ಮದೀಯ ರೀತಿಗಳೆಂದು ಎರಡು ರೀತಿಗಳಿವೆ. ಕೆಲವು ಕಡೆ ಇವೆರಡೂ ಕಲೆತ ಮಿಶ್ರ ರೀತಿಗಳಿರುವುವು. ಹಿಂದೂ ರೀತಿಯನ್ನು ದ್ರಾವಿಡ ಮತ್ತು ಚಾಳುಕ್ಯ ಎಂದು ವಿಂಗಡಿಸುವುದುಂಟು. ಆದರೆ ಕೆಲವರು 'ಚಾಳುಕ್ಯ' ಎಂಬುದಕ್ಕೆ ಬದಲು ಹೊಯ್ಸಳ ಎಂದು ಹೇಳಿದರೆ ಹೆಚ್ಚು ಸಮಂಜಸವಾಗಿರುವುದೆಂದು ಅಭಿಪ್ರಾಯಪಡುತ್ತಾರೆ. 'ಚಾಳುಕ್ಯ ರೀತಿ' ಎಂದು ಹೇಳುವ ಕಟ್ಟಡಗಳೆಲ್ಲ ಹೊಯ್ಸಳರ ಕಾಲದಲ್ಲಿ ಕಟ್ಟಿದವು. ಮತ್ತು ಈ ಕಟ್ಟಡಗಳಿಗೆ ಹೊಯ್ಸಳ ರಾಜರೂ, ಅವರ ಆಶ್ರಿತರೂ ಮುಖ್ಯ ಪ್ರೇರಕರಾದುದರಿಂದ 'ಹೊಯ್ಸಳ ರೀತಿ' ಎಂದು ಹೇಳುವುದೇ ಯುಕ್ತವಾಗಿ ಕಾಣುತ್ತದೆ ಎಂಬುದೇ ಹೊಯ್ಸಳ ಪಂಥದವರ ವಾದ.

"ದ್ರಾವಿಡ ರೀತಿಯ ಕಟ್ಟಡಗಳು ನಮ್ಮ ದೇಶದಲ್ಲಿ ಕೆಲವಿವೆ. ಕೋಲಾರ ಡಿಸ್ಟ್ರಿಕ್ಟಿನ ನಂದಿಯಲ್ಲಿರುವ ಭೋಗನಂದೀಶ್ವರ ದೇವಾಲಯ, ಶ್ರವಣಬೆಳುಗೊಳದಲ್ಲಿರುವ ಚಾವುಂಡರಾಯನ ಬಸ್ತಿ, ಕುರುಡುಮಲೆಯಲ್ಲಿರುವ ಸೋಮೇಶ್ವರ ದೇವಸ್ಥಾನ, ಇಕ್ಕೇರಿಯ ಅಘೋರೇಶ್ವರ ದೇವಸ್ಥಾನ, ಜಂಬಿಟಿಗೆಯಲ್ಲಿರುವ ನೀಲಕಂಠೇಶ್ವರ ದೇವಸ್ಥಾನ, ಬೆಂಗಳೂರು ದಂಡಿನಲ್ಲಿರುವ ಹಲಸೂರು ದೇವಸ್ಥಾನ, ಮತ್ತು ಕೋಲಾರದ ಸೋಮೇಶ್ವರ ದೇವಸ್ಥಾನ ಇವು ಈ ರೀತಿಗೆ ಉದಾಹರಣೆಗಳು. ಈ ರೀತಿಯ ದೇವಸ್ಥಾನಗಳಲ್ಲೆಲ್ಲಾ ಪ್ರಾಯಶಃ ಐದು ಭಾಗಗಳಿರುತ್ತವೆ.

೧. ವಿಮಾನ.—ಇದರಲ್ಲಿ ಗರ್ಭಗುಡಿ, ಸುಕನಾಸಿ, ಎಂಬ ಎರಡು ಭಾಗಗಳಿರುತ್ತವೆ. ಇದರ ತಳವು ಚೌಕವಾಗಿರುತ್ತದೆ. ಶಿಖರವು ಒಂದು ಅಥವ ಹೆಚ್ಚು ಅಂತಸ್ತುಗಳುಳ್ಳದ್ದಾಗಿರುತ್ತದೆ.

೨. ಮುಖಮಂಟಪ.—ಇದು ವಿಮಾನದ ಮುಂದೆ ಅದಕ್ಕೆ ಸೇರಿದ ಹಾಗೆ ಇರುತ್ತದೆ.

೩. ಗೋಪುರ.—ಇದು ಮಹಾದ್ವಾರದ ಮೇಲೆ ಇರತಕ್ಕ ಎತ್ತರವಾದ ಕಟ್ಟಡ; ಸಾಮಾನ್ಯವಾಗಿ ಇದು ದೇವಸ್ಥಾನದಲ್ಲೆಲ್ಲ ಬಹು ಎತ್ತರವಾಗಿಯೂ ಭವ್ಯವಾಗಿಯೂ ಇರುತ್ತದೆ.



ಸೋಮನಾಥಪುರದ ದೇವಾಲಯ



ಶ್ರೀ ವೀರನಾರಾಯಣ ದೇವಾಲಯ

೪. ಹಜಾರ.—ಇದು ಎತ್ತರವಾದ ಕಂಭಗಳಿಂದ ಕೂಡಿ ಅನೇಕ ಅಂಕಣಗಳಾಗಿ ವಿಭಾಗಿಸಲ್ಪಟ್ಟಿರುತ್ತದೆ. ಇದು ಮುಖಮಂಟಪಕ್ಕೆ ಮುಂಭಾಗದಲ್ಲಿಯಾಗಲಿ, ಅದರ ಅಕ್ಕಪಕ್ಕಗಳಲ್ಲಾಗಲಿ, ಅದನ್ನು ಹೊಂದಿ ಕೊಂಡಾಗಲಿ, ಬೇರೆಯಾಗಲಿ ಇರುತ್ತದೆ.

೫. ದ್ವಾರಮಂಟಪ.—ಇದು ಸಾಧಾರಣವಾಗಿ ಒಂದು ಅಂಕಣ ಅಗಲವುಳ್ಳದ್ದಾಗಿ ಮುಖ ಮಂಟಪದ ಅಥವ ಹಜಾರದ ಬಾಗಿಲುಗಳ ಮುಂಭಾಗದಲ್ಲಿರುತ್ತದೆ.

ಇವಲ್ಲದೆ ಸುಂದರವಾದ ಪ್ರಾಕಾರದ ಗೋಡೆಗಳೂ, ಕೊಳಗಳೂ ಇರುವುದುಂಟು. ದ್ರಾವಿಡ ದೇವಸ್ಥಾನಗಳಲ್ಲಿ ಪ್ರಾಯಶಃ ಒಂದೇ ಗರ್ಭ ಗುಡಿ ಇರುತ್ತದೆ. ಒಂದು ದೇವಸ್ಥಾನದಲ್ಲಿ ಒಂದೇ ಪ್ರಧಾನ ದೇವತೆ. ಆದರೆ ತಿಪಟೂರು ತಾಲ್ಲೂಕಿನ ನೊಣವಿನಕೆರೆಯಲ್ಲಿರುವ ಗೋಪಾಲಕೃಷ್ಣ ದೇವಸ್ಥಾನ ಮಾತ್ರ ಇದಕ್ಕೆ ವಿರುದ್ಧವಾಗಿದೆ. ಇದು ತ್ರಿಕೂಟಾಚಲ. ಇದರಲ್ಲಿ ಒಂದು ಮುಖಮಂಟಪವೂ, ಅದರ ಮೂರು ಕಡೆಗಳಲ್ಲಿ ಮೂರು ಗರ್ಭಗುಡಿಗಳೂ ಇರುತ್ತವೆ."

"ಹೊಯ್ಸಳ ರೀತಿಯ ಕಟ್ಟಡಗಳು ನಮ್ಮ ದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಹೆಚ್ಚಾಗಿವೆ. ಕೃಷ್ಣರಾಜಪೇಟೆ ತಾಲ್ಲೂಕು ತೊಣಚಿಯಲ್ಲಿರುವ ಬಸವೇಶ್ವರ ದೇವಸ್ಥಾನವೂ, ಮೂಡಗೆರೆ ತಾಲ್ಲೂಕು ಅಂಗಡಿಯಲ್ಲಿರುವ ಮಲ್ಲಿನಾಥ ಬಸ್ತಿಯೂ ಈ ರೀತಿಯಲ್ಲಿ ಕಟ್ಟಿದ ಪ್ರಾಚೀನತಮವಾದ ಕಟ್ಟಡಗಳು. ಬೇಲೂರಿನ ಚೆನ್ನಕೇಶವ ದೇವಸ್ಥಾನ, ಹಳೆಯಬೀಡಿನ ಹೊಯ್ಸಳೇಶ್ವರ ಮತ್ತು ಕೇದಾರೇಶ್ವರ ದೇವಸ್ಥಾನಗಳು, ನುಗ್ಗೆಹಳ್ಳಿಯ ಮತ್ತು ವಿಘ್ನಸಂತೆಯ ಲಕ್ಷ್ಮೀನರಸಿಂಹ ದೇವಸ್ಥಾನಗಳು, ಹೊಸಹೊಳಲಿನಲ್ಲಿರುವ ಲಕ್ಷ್ಮೀನಾರಾಯಣ ದೇವಸ್ಥಾನ, ಹರಿಹರದಲ್ಲಿರುವ ಹರಿಹರೇಶ್ವರ ದೇವಸ್ಥಾನ, ಅರಸೀಕೆರೆಯಲ್ಲಿರುವ ಈಶ್ವರ ದೇವಾಲಯ, ಸೋಮನಾಥಪುರ, ತುರುವೇಕೆರೆ ಮತ್ತು ಅರಳಗುಪ್ಪೆಗಳಲ್ಲಿರುವ ಕೇಶವ ದೇವಸ್ಥಾನಗಳು ಇವು ಈ ರೀತಿಯ ಕಟ್ಟಡಗಳಲ್ಲಿ ಮುಖ್ಯವಾದುವುಗಳು. ಇವುಗಳಲ್ಲಿ ಬೇಲೂರು, ಹಳೆಯಬೀಡು ಮತ್ತು ಸೋಮನಾಥಪುರದ ಕಟ್ಟಡಗಳು ಶ್ಲಾಘ್ಯತಮವಾದುವುಗಳು.

ಈ ದೇವಾಲಯುಗಳಲ್ಲಿ ಪ್ರಾಯಶಃ ಕೆಳಗೆ ಕಂಡ ಭಾಗಗಳಿರುತ್ತವೆ.—

೧. ವಿಮಾನ.—ಇದರಲ್ಲಿ ಗರ್ಭಗುಡಿ, ಅದರ ಮುಂದೆ ಸುಕನಾಸಿ ಎಂಬ ಎರಡು ಒಳಭಾಗಗಳು ಇರುತ್ತವೆ. ಇದರ ತಳವು ಬಹು ಮೂಲೆಗಳನ್ನುಳ್ಳದ್ದಾಗಿಯೋ, ನಕ್ಷತ್ರಾಕಾರವಾಗಿಯೋ ಇರುತ್ತದೆ. ಶಿಖರವು ದ್ರಾವಿಡ ದೇವಾಲಯಗಳ ಶಿಖರದಷ್ಟು ಎತ್ತರವಾಗಿರುವುದಿಲ್ಲ. ಮತ್ತು ಅವುಗಳ ಹಾಗೆ ಮೆಟ್ಟಲು ಮೆಟ್ಟಲುಗಳಾಗಿರದೆ ಸೂಚ್ಯಾಕಾರದಲ್ಲಿ ಕ್ರಮವಾಗಿ ಸಣ್ಣಸಣ್ಣದಾಗಿ ಮೇಲಕ್ಕೆ ಹೋಗುತ್ತದೆ.

೨. ನವರಂಗ.—ಇದು ವಿಮಾನದ ಮುಂಭಾಗದಲ್ಲಿ ಅದಕ್ಕೆ ಸೇರಿದ ಹಾಗೆ ಇರತಕ್ಕ ಹಜಾರ. ಇದರಲ್ಲಿ ಸಾಮಾನ್ಯವಾಗಿ ಒಂಬತ್ತು ಅಂಕಣಗಳಿರುತ್ತವೆ.

೩. ಮುಖಮಂಟಪ.—ಇದು ನವರಂಗದ ಮುಂಭಾಗದಲ್ಲಿ ಅದಕ್ಕೆ ಸೇರಿದಹಾಗೆ ಇರತಕ್ಕ ಮಂಟಪ. ಇದು ಚೌಕವಾಗಿಯಾಗಲಿ, ಬಹು ಚತುರಸ್ರಾಕಾರವಾಗಿಯಾಗಲಿ ಇರುತ್ತದೆ.

೪. ದ್ವಾರಮಂಟಪ.—ಮುಖಮಂಟಪಗಳಿಲ್ಲದ ಸ್ಥಳಗಳಲ್ಲಿ ನವರಂಗದ ಮುಂಭಾಗದಲ್ಲಿ ಇರತಕ್ಕ ಒಂದು ಅಂಕಣ ಅಗಲವುಳ್ಳ ಮಂಟಪ. ಇದು ಸಾಮಾನ್ಯವಾಗಿ ಚೌಕವಾಗಿರುತ್ತದೆ. ಆದರೆ ಅರಸೀಕೆರೆಯಲ್ಲಿರುವ ಈಶ್ವರ ದೇವಾಲಯದ ಮುಂಭಾಗದಲ್ಲಿರುವುದು ಮಾತ್ರ ಎಂಟು ಮುಖವುಳ್ಳದ್ದಾಗಿದೆ.

೫. ಸಭಾಮಂಟಪ.—ಇದು ಕೆಲವು ದೇವಸ್ಥಾನಗಳಲ್ಲಿ ಮಾತ್ರ ಮುಖಮಂಟಪದ ಮುಂದೆ ಅದಕ್ಕೆ ಸೇರಿದಹಾಗೆ ಇರುತ್ತದೆ. ಆದರೆ ಮುಖಮಂಟಪಕ್ಕಿಂತಲೂ ಹೆಚ್ಚು ವಿಸ್ತಾರವುಳ್ಳದ್ದಾಗಿರುತ್ತದೆ.

ಈ ದೇವಸ್ಥಾನಗಳಲ್ಲೆಲ್ಲಾ ಮೇಲೆ ಹೇಳಿದ ಸಾಮಾನ್ಯ ಲಕ್ಷಣಗಳಿದ್ದರೂ ಅವುಗಳ ರಚನೆಯಲ್ಲಿ ವೈವಿಧ್ಯವಿರುತ್ತದೆ. ಈ ರೀತಿಯ ಕಟ್ಟಡಗಳು ಪ್ರಾಯಶಃ ಮೂರು ಗರ್ಭಗುಡಿಗಳುಳ್ಳ ತ್ರಿಕೂಟಾಚಲವೇ ಆಗಿರುವುವು. ಆದರೆ ಬೇಲೂರಿನ ಚನ್ನಕೇಶವ ದೇವಸ್ಥಾನದಲ್ಲಿ ಒಂದೇ ಗರ್ಭಗುಡಿಯೂ, ಹಳೇಬೀಡಿನ ಹೊಯ್ಸಳೇಶ್ವರ ದೇವಸ್ಥಾನ, ಮತ್ತು ಸಿಂಧುಘಟ್ಟದ ಸಂಗಮೇಶ್ವರ ದೇವಸ್ಥಾನಗಳಲ್ಲಿ ಎರಡೂ, ದೊಡ್ಡಗದ್ದವಳ್ಳಿಯ

ಲಕ್ಷ್ಮಿ ದೇವಸ್ಥಾನದಲ್ಲಿ ನಾಲ್ಕೂ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯದಲ್ಲಿ ಐದೂ ಇರುತ್ತವೆ.''

''ಹೊಯ್ಸಳ ದೇವಾಲಯಗಳು ವಿಗ್ರಹ ಭಂಡಾರಗಳಂತಿದ್ದು ಮೂರ್ತಿ ವಿದ್ಯೆಯನ್ನು ಕಲಿಯುವವರಿಗೆ ಅಮೂಲ್ಯವಾದ ಸಂಗತಿಗಳನ್ನು ಒದಗಿಸಿ ಕೊಡುತ್ತವೆ. ಅನೇಕ ದೇವ ದೇವಿಯರ ವಿಗ್ರಹಗಳು ಗೋಡೆಗಳ ಹೊರಮುಖದ ಮೇಲೆ ಒಂದೊಂದು ಸಣ್ಣ ಅಂಶದಲ್ಲಿಯೂ ಶಿಲ್ಪಿ ಶಾಸ್ತ್ರ ನಿಯಮವನ್ನು ಚಾಚೂ ತಪ್ಪದಂತೆ ಅನುಸರಿಸಿ ಕೆತ್ತಲ್ಪಟ್ಟಿರುತ್ತವೆ.''

''ಹೊಯ್ಸಳ ರೀತಿಯ ಕಟ್ಟಡಗಳಲ್ಲಿ ಆಶ್ಚರ್ಯದಿಂದ ಬೆರಗು ಮಾಡುವ ಭಾಗವೆಂದರೆ ಅವುಗಳ ಭುವನೇಶ್ವರಿಗಳು. ಇವು ದ್ರಾವಿಡ ರೀತಿಯ ಕಟ್ಟಡಗಳಲ್ಲಿರುವುದಿಲ್ಲ. ಇವುಗಳ ವಿನ್ಯಾಸ, ಆಕಾರ, ನಕ್ಷೆ, ನಕಾಸು ಗಳಲ್ಲಿ ಬೇಕಾದಷ್ಟು ವೈವಿಧ್ಯವು ಕಂಡುಬರುತ್ತದೆ. ಹೊಯ್ಸಳ ಶಿಲ್ಪಿಯ ಸಾಮರ್ಥ್ಯವೆಲ್ಲಾ ಇಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವುಗಳಲ್ಲಿ ರೇಖಾ ಗಣಿತ ನೈಪುಣ್ಯವನ್ನು ಸೂಚಿಸುವ ವಿಚಿತ್ರತರವಾದ ಆಕಾರಗಳುಳ್ಳ ಕೆತ್ತನೆಯ ಕೆಲಸಗಳೂ, ಬಹು ಸೂಕ್ಷ್ಮನಾದ ನಕಾಸೆ ಕೆಲಸಮಾಡಿದ ಸೊಗಸಾದ ಮೂರ್ತಿಗಳೂ ಇರುತ್ತವೆ.''

''ಹೊಯ್ಸಳ ಶಿಲ್ಪಿಗಳು ತಾವು ಕೆತ್ತಿದ ವಿಗ್ರಹಗಳ ಕೆಳಗೆ ತಮ್ಮ ಹೆಸರನ್ನು ಬರೆಯುವ ಪದ್ಧತಿಯಿತ್ತು. ಆ ಹೆಸರುಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟಿದೆ. ದಾಸೋಜ, ಚವನ, ಚಿಕ್ಕಹಂಪ, ಮಲ್ಲಿಯಣ್ಣ, ಪದರಿ ಮಲ್ಲೋಜ, ನಾಗೋಜ. ಇವರುಗಳಿಗೆ ಬಿರುದುಗಳು ಕೂಡ ಇದ್ದುವು. ರೂವಾರಿ ಗೊಂಡಳ ಬಡಿವ, ರೂವಾರಿ ಶರಭ ಭೇರುಂಡ, ಮಚ್ಛರಿಪ ರೂವಾರಿಗಳ ಗಂಡ, ರೂವಾರಿ ಪುಲಿ, ರೂವಾರಿಗಳ ವಜ್ರದಂಡ, ರೂವಾರಿ ಗಳ ಗಂಡಗತ್ತರಿ ಎಂಬಿವು ಕೆಲವು ಬಿರುದುಗಳು.''


ಬೇಲೂರು, ಹಳೇಬೀಡು, ಮತ್ತು ಸೋಮನಾಥಪುರದ ದೇವ ಸ್ಥಾನಗಳು ಜಗತ್ತಿನಲ್ಲೆಲ್ಲ ಅತ್ಯಂತ ಸುಂದರವಾದ ಕಟ್ಟಡಗಳೆಂದು ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿರುತ್ತಾರೆ.

ಜೈನರ ಕಟ್ಟಡಗಳು.—ಇವುಗಳಲ್ಲಿ ಬಸ್ತಿಗಳೆಂದೂ, ಬೆಟ್ಟಗಳೆಂದೂ ಎರಡು ವಿಧ. ಬಸ್ತಿಗಳು ಸಾಮಾನ್ಯವಾಗಿ ದೇವಸ್ಥಾನಗಳಂತೆ ಇದ್ದು ಒಳಗೆ ತೀರ್ಥಂಕರ ಮೂರ್ತಿಯು ಪ್ರತಿಷ್ಠಿತವಾಗಿರುತ್ತದೆ. ಬೆಟ್ಟಗಳ


ಲ್ಲಾದರೋ ಬೆಟ್ಟದ ಮೇಲ್ಭಾಗದಲ್ಲಿ ಪ್ರಾಕಾರದ ಗೋಡೆಯಿದ್ದು ಗೊಮ್ಮಟೇಶ್ವರ ವಿಗ್ರಹವು ಬಯಲಿನಲ್ಲಿ ಸ್ಥಾಪಿತವಾಗಿರುತ್ತದೆ. ಜೈನರ ಬಸ್ತಿಗಳು ಶ್ರವಣಬೆಳುಗೊಳ, ಹುಂಬುಚ, ಮತ್ತು ಮಲೆಯಾರುಗಳಲ್ಲಿವೆ. ಇವುಗಳಲ್ಲಿ ಶ್ರವಣಬೆಳುಗೊಳದ ಬಸ್ತಿಗಳು ಪ್ರಸಿದ್ಧವಾದುವು. ಈ ಬಸ್ತಿಗಳು ಸಾಮಾನ್ಯವಾಗಿ ದ್ರಾವಿಡ ರೀತಿಯನ್ನು ಅನುಸರಿಸಿ ಕಟ್ಟಿದವು. ಆದರೆ ಹಿಂದೂ ದೇವಾಲಯಗಳ ದ್ವಾರಮಂಟಪದಲ್ಲಿ ನಾಲ್ಕು ಮೂಲೆಗೂ ನಾಲ್ಕು ಕಂಬಗಳಿರುವುದು ಸಹಜವಾಗಿದ್ದರೆ ಈ ಬಸ್ತಿಗಳಲ್ಲಿ ಐದು ಕಂಬಗಳಿರುತ್ತವೆ. ಐದನೆಯದು ಮಂಟಪದ ಮಧ್ಯದಲ್ಲಿರುವುದು. ಶ್ರವಣಬೆಳುಗೊಳದಲ್ಲಿ ಬೆಟ್ಟಕ್ಕೇರುವ ಕಡೆ ಇಂತಹ ಮಂಟಪವಿದ್ದು ಆ ಮಂಟಪದ ಐದನೆಯ ಕಂಬವು ಬಹಳ ಸೂಕ್ಷ್ಮವಾಗಿ ನಿಲ್ಲಿಸಲ್ಪಟ್ಟಿರುತ್ತದೆ. ಇದರ ಬುಡದಲ್ಲಿ ಒಂದು ತೆಳ್ಳನೆಯ ಬಟ್ಟೆಯನ್ನು ಹೊಗಿಸಿ ಆಚೆಯ ಕಡೆ ಎಳೆದುಕೊಳ್ಳಬಹುದು. ಈ ಬಸ್ತಿಗಳಲ್ಲಿ ಎರಡನೆಯ ವಿಶೇಷವೇನೆಂದರೆ ಗರುಡ ಕಂಬಗಳೆಂದು ನಾವು ಕರೆಯುವ ಸ್ತಂಭಗಳು.

ವೀರಶೈವರ ಕಟ್ಟಡಗಳು.—ಇವುಗಳ ವಿಚಾರವನ್ನು ಒಂದು ವಾಕ್ಯದಲ್ಲಿ ಹೇಳಿ ಮುಗಿಸಬಹುದು. ಇವು ಹಿಂದೂ ಮತ್ತು ಮಹಮ್ಮದೀಯ ಮಿಶ್ರ ರೀತಿಯ ಕಟ್ಟಡಗಳು. ಇವರಲ್ಲಿ ಮಠಗಳು, ಸಮಾಧಿ ಸ್ಥಳಗಳು ಚೆನ್ನಾಗಿ ರಚಿತವಾಗಿರುತ್ತವೆ.

ಮಹಮ್ಮದೀಯ ರೀತಿ.—ಮಹಮ್ಮದೀಯ ರೀತಿಗೆ ಉತ್ತಮಾದರ್ಶಗಳು ಸೀರ್ಯದಲ್ಲಿ ದೊರೆಯುತ್ತವೆ. ಈ ರೀತಿಯನ್ನು ಮೊಗಲರ ರೀತಿಯೆಂದು ಕರೆಯಬೇಕಾಗಿದೆ. ಬೀಜಾಪುರದಲ್ಲಿದ್ದ ಸುಲ್ತಾನರು ಪಠಾನ ವಂಶಕ್ಕೆ ಸೇರಿದವರಾಗಿದ್ದರೂ ಆ ಸುಲ್ತಾನರ ಕಾಲದಲ್ಲಿ ಕರ್ಣಾಟಕದ ಆಧಿಪತ್ಯವೆಲ್ಲ ಅವರ ಕೈಕೆಳಗಿನ ಮರಾಟೆಯ ಸರದಾರರ ವಶದಲ್ಲಿತ್ತು. ಆದುದರಿಂದ ಪಠಾನ ರೀತಿಯ ಕಟ್ಟಡಗಳು ಹೆಚ್ಚಾಗಿ ತಲೆದೋರಲವಕಾಶವಾಗಲಿಲ್ಲ. ರಣದುಲ್ಲಾಖಾನನು ಸಂತೇಬೆನ್ನೂರಿನಲ್ಲಿ ಕಟ್ಟಿಸಿದ ಸೊಗಸಾದ ಒಂದು ಮಸೀದಿ ಮಾತ್ರ ಇದೆ. ಮೊಗಲರು ಕ್ರಿ.ಶ. ೧೬೮೭ರಲ್ಲಿ ಬೀಜಾಪುರವನ್ನು ಆಕ್ರಮಿಸಿಕೊಂಡು ಕರ್ಣಾಟಕದ ರಾಷ್ಟ್ರಕ್ಕೆ ಸೀರ್ಯವನ್ನು ರಾಜಧಾನಿಯಾಗಿ ಮಾಡಿ ತಮ್ಮ ಕಡೆಯವರನ್ನು ಅಲ್ಲಿ ಬಿಟ್ಟಿದ್ದರಿಂದ ಮೊಗಲ ರೀತಿಯ ಕಟ್ಟಡಗಳು ಆರಂಭವಾದುವು. ಸೀರ್ಯದಲ್ಲಿರುವ ಜುಮ್ಮಾ



ದರಿಯಾದೌಲತ್



ದರಿಯಾದೌಲತ್ತಿನಲ್ಲಿನ ಚಿತ್ರಗಳು

ಮಸೀದಿ, ಗೋರೀಬಿದನೂರು ಮತ್ತು ಸೀರ್ರ್ಯಗಳಲ್ಲಿರುವ ಕೆಲವು ಗೋರಿಗಳು ಮಾತ್ರ ವಾಸ್ತುಕಲೆಯ ನಿದರ್ಶನಾರ್ಥವಾಗಿ ಉಳಿದಿವೆ.

ಸೀರ್ರ್ಯದ ನವಾಬನಾದ ದಿಲಿವರ್‌ಖಾನನು ಒಳ್ಳೆಯ ಅರಮನೆಗಳನ್ನು ಕಟ್ಟಿದಂತೆಯೂ ಹೈದರ್ ಮತ್ತು ಟೀಪು ಸುಲ್ತಾನರು ಬೆಂಗಳೂರು ಮತ್ತು ಶ್ರೀರಂಗಪಟ್ಟಣಗಳಲ್ಲಿ ಕಟ್ಟಿದ ಅರಮನೆಗಳಿಗೆ ಇವೇ ಮಾದರಿಯಾದುವೆಂದೂ ತಿಳಿದುಬಂದಿದೆ. ಶ್ರೀರಂಗಪಟ್ಟಣದಲ್ಲಿರುವ ದರಿಯಾದೌಲತ್ತು ಮಸೀದಿ ಮತ್ತು ಗುಂಬಸ್. ಆಗಿನ ಕಾಲದ ಮಹಮ್ಮದೀಯ ವಾಸ್ತುಕಲೆಗೆ ಉದಾಹರಣೆಗಳಾಗಿವೆ. ಗುಂಬಸ್ಸಿನಲ್ಲಿ ಹೈದರ್ ಮತ್ತು ಟೀಪು ಸುಲ್ತಾನರ ಗೋರಿಗಳಿರುವುವು. ಗೋರಿಗಳಿರುವ ಮಧ್ಯದ ಕೋಠಡಿಯಲ್ಲಿ ಮೇಲ್ಛಾವಣಿಯು ದೊಡ್ಡ ಅರ್ಧ ಗೋಲಾಕಾರದ ಗೋಪುರವಾಗಿದೆ. ಈ ಕೊಠಡಿಯ ನಾಲ್ಕು ಕಡೆಗೂ ಹಜಾರವಿರುವುದು. ಹಜಾರದ ಕಂಬಗಳು ಕರಿಯ ಕಲ್ಲಿನಿಂದ ಮಾಡಿದುವು. ಅವು ಪಳಪಳನೆ ಹೊಳೆಯುತ್ತವೆ. ಕೊಠಡಿಯನ್ನು ಪ್ರವೇಶಿಸುವ ಒಳಬಾಗಿಲುಗಳು ಕರಿಯ ಮರದಿಂದ ಮಾಡಲ್ಪಟ್ಟು ದಂತದ ಕೆತ್ತನೆಯ ಕೆಲಸಗಳನ್ನು ಒಳಗೊಂಡಿದೆ. ಈ ಬಾಗಿಲುಗಳನ್ನು ಗವರ್ನರ್ ಜನರಲ್ ಆಗಿದ್ದ ಡಾಲ್‌ಹೌಸಿ ಸಾಹೇಬರು ಉಚಿತವಾಗಿ ಕೊಟ್ಟರಂತೆ.

ಆಧುನಿಕ ಕಾಲದ ಕಟ್ಟಡಗಳು.— ಇವುಗಳಲ್ಲಿ ಬೆಂಗಳೂರಿನಲ್ಲಿರುವ ಶ್ರೀಮನ್ಮಹಾರಾಜರ ಅರಮನೆ, ಅಠಾರಾ ಕಚೇರಿಗಳು, ಆಸ್ಪತ್ರೆಗಳು, ವಿದ್ಯಾಮಂದಿರಗಳು, ಶೇಷಾದ್ರಿ ಅಯ್ಯರವರ ಸ್ಮಾರಕ ಭವನ, ಇವು ಮುಖ್ಯವಾದುವು. ಇವುಗಳಲ್ಲಿ ಅರಮನೆಯು ಆಂಗ್ಲೇಯರ 'ಕ್ಯಾಸಲ್' ಎಂಬ ರೀತಿಗೆ ಸೇರಿದುದು. ಶೇಷಾದ್ರಿ ಅಯ್ಯರವರ ಸ್ಮಾರಕ ಭವನದಲ್ಲಿ ಪುಸ್ತಕ ಭಂಡಾರವಿದೆ. ಈ ಭವನವು ಪಾಶ್ಚಾತ್ಯ ಮಿಶ್ರ ರೀತಿಗೆ ಸೇರಿದುದು. ಉಳಿದ ಕಟ್ಟಡಗಳು ಇಂತಹ ರೀತಿಗೆ ಸೇರಿದುವೆಂದು ಹೇಳುವುದು ಕಷ್ಟ. ಇವು ಎಲ್ಲ ರೀತಿಗಳ ಬೆರಕೆಯಾಗಿದೆ. ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರ ಅರಮನೆ, ಅವರ ಇತರ ಕಟ್ಟಡಗಳೂ, ಆಸ್ಪತ್ರೆಗಳೂ, ಕಚೇರಿಗಳೂ, ವಿದ್ಯಾಮಂದಿರಗಳೂ ಇವೆ. ಇವುಗಳಲ್ಲಿ ಅರಮನೆಯು ಹಿಂದೂ ಮಹಮ್ಮದೀಯ ಮಿಶ್ರರೀತಿಯಲ್ಲಿ ಕಟ್ಟಿದುದು. ವಿದ್ಯಾಮಂದಿರಗಳನ್ನು ಬಿಟ್ಟರೆ ಉಳಿದವುಗಳಲ್ಲಿ ಮಹಮ್ಮದೀಯ ರೀತಿಯೇ ಹೆಚ್ಚಾಗಿ ಪ್ರಕಟವಾಗಿದೆ.


ಶಿಲ್ಪಕಲೆ.—ಮಣ್ಣು, ಕಲ್ಲು, ಮರ, ಮತ್ತು ಲೋಹಗಳಲ್ಲಿ ರೂಪಿಸಿರುವ ವಿಗ್ರಹಗಳಲ್ಲಿ ಶಿಲ್ಪಕಲೆಯನ್ನು ನೋಡಬಹುದು. ದೇವಸ್ಥಾನಗಳಲ್ಲಿ ಇರುವ ವಿಗ್ರಹಗಳನ್ನು ಆಗಲೇ ತಿಳಿಸಿದೆ. ಶ್ರವಣಬೆಳುಗೊಳದಲ್ಲಿರುವ ಗೊಮ್ಮಟೇಶ್ವರ ವಿಗ್ರಹವು ಶಿಲ್ಪಕಲೆಗೆ ಅತ್ಯಾಶ್ಚರ್ಯಕರವಾದ ಉದಾಹರಣೆಯಾಗಿದೆ. ಇದರ ಎತ್ತರವು ೫೭ ಅಡಿಗಳು. ಇದನ್ನು ಗಂಗರಾಜನಾದ ರಾಚಮಲ್ಲನ ಮಂತ್ರಿ ಚಾವುಂಡರಾಯನು ಸ್ಥಾಪಿಸಿದನು. ಇದು ಸಾವಿರ ವರ್ಷಗಳ ಮೇಲಿಂದಲೂ ಅಲ್ಲಿ ನಿಂತಿದೆ. ವಿಗ್ರಹವು ಬೆತ್ತಲೆಯಾಗಿ ನೆಟ್ಟಗೆ ನಿಂತಿದೆ. ಮುಖವು ಉತ್ತರದ ಕಡೆಗಿದೆ. ಮುಖಭಾವವು ಗಂಭೀರವಾಗಿರುವುದು. ಮುಂಗೂದಲು ಗುಂಗುರುಗುಂಗುರಾಗಿದೆ. ಕಿವಿಗಳು ಉದ್ದವಾಗಿಯೂ, ದೊಡ್ಡದಾಗಿಯೂ ಇರುವುವು. ಬಾಹುಗಳು ವಿಶಾಲವಾಗಿವೆ. ಕೈಗಳನ್ನು ಕೆಳಕ್ಕೆ ಇಳಿ ಬಿಟ್ಟಿದೆ. ಮೊಣಕಾಲಿನಿಂದ ಕೆಳಕ್ಕೆ ಕಾಲುಗಳು ಸ್ವಲ್ಪ ಮೋಟಾಗಿರುವಂತೆ ಕಾಣುವುದು. ಪಾದಗಳು ಕೆತ್ತಿದ ತಾವರೆಯ ಮೇಲಿವೆ. ಹುತ್ತಗಳನ್ನು ಇಕ್ಕಡೆಗಳಲ್ಲೂ ಕೆತ್ತಿ ಅವುಗಳಿಂದ ಬಳ್ಳಿಯು ಹೊರಟಂತೆಯೂ, ತೊಡೆ ತೋಳುಗಳನ್ನು ಆವರಿಸಿದಂತೆಯೂ ತೋರಿಸಲ್ಪಟ್ಟಿದೆ. ತಪಸ್ಸಿನಲ್ಲಿ ನಿರತ ನಾದ ಯತಿಯಂತೆ ಅಚಲನಾಗಿ ಗೊಮ್ಮಟೇಶ್ವರನು ನಿಂತಿರುವನು. ಇಂತಹ ಅಗಾಧ ಮೂರ್ತಿಯನ್ನು ಹೇಗೆ ಕೆತ್ತಿದರು ? ಹೇಗೆ ನಿಲ್ಲಿಸಿದರು ? ಎಂಬುದು ಶಾಸ್ತ್ರಜ್ಞರಿಗೆಲ್ಲ ದೊಡ್ಡ ಸಮಸ್ಯೆಯಾಗಿದೆ.

ಸಾಮಾನ್ಯವಾಗಿ ಲೋಹಗಳಲ್ಲಿ ಅನೇಕ ದೇವತಾಪರವಾದ ವಿಗ್ರಹ ನಮ್ಮ ಜನರು ಮಾಡಿದ್ದಾರೆ. ಹಿಂದಿನ ಕಾಲದಲ್ಲಿ ಬರೆದ ತಾಮ್ರ ಶಾಸನಗಳಲ್ಲಿಯೂ ಕೆತ್ತನೆಯ ಕೆಲಸವು ಕಂಡುಬರುತ್ತದೆ.

ಮರದಲ್ಲಿ ಕೆತ್ತನೆಯ ಕೆಲಸವನ್ನು ಮಾಡುವುದು ನಮ್ಮ ದೇಶಕ್ಕೆ ಹೊಸದೇನೂ ಅಲ್ಲ. ದೇವರ ರಥಗಳನ್ನು ಮರದಲ್ಲಿ ಮಾಡುವರಷ್ಟೆ. ಈ ರಥಗಳಲ್ಲಿ ಅನೇಕ ವಿಗ್ರಹಗಳನ್ನು ಕೆತ್ತಿ ಶಿಲ್ಪಿಗಳು ತಮ್ಮ ಜಾಣ್ಮೆಯನ್ನು ತೋರಿಸಿದ್ದಾರೆ. ಐಶ್ವರ್ಯವಂತರ ಮನೆಗಳಲ್ಲಿ ಬಾಗಿಲುವಾಡಗಳು ಕೆತ್ತನೆಯ ಕೆಲಸದಿಂದ ಕೂಡಿರುತ್ತವೆ. ಗಂಧದ ಮರದಲ್ಲಿ ಕೆತ್ತನೆಯ ಕೆಲಸಮಾಡುವ ಗೂಡಿಗರು ಆಶ್ಚರ್ಯಕರವಾದ ರೀತಿಯಲ್ಲಿ ವಿಗ್ರಹಗಳನ್ನು ಕೆತ್ತುತ್ತಾರೆ. ದಂತದಲ್ಲಿ ವಿಗ್ರಹಗಳನ್ನು ಮಾಡುವವರು ನಮ್ಮ ದೇಶದಲ್ಲಿ ಬಹುಮಂದಿ ಇದ್ದಾರೆ. ವೀಣೆಯಲ್ಲಿಯೂ, ತಂಬೂರಿಯಲ್ಲಿಯೂ ದಂತದ ಕೆಲಸವನ್ನು



ಶ್ರೀ ಗೊಮ್ಮಟೇಶ್ವರ



ಶ್ರವಣಬೆಳಗೊಳ

ಮಾಡಿ ಮನೋಹರವಾಗಿರುವಂತೆ ಏರ್ಪಡಿಸುವುದು ರೂಢಿಯಾಗಿ ಹೋಗಿದೆ. ಸಾಮಾನ್ಯವಾಗಿ ಮೈಸೂರಿನಲ್ಲಿ ಏರ್ಪಡುವ ಪ್ರದರ್ಶನಗಳಿಗೆ ಹೋದರೆ ಶಿಲ್ಪಿಕಲಾನೈಪುಣ್ಯವು ಎಷ್ಟರಮಟ್ಟಿಗಿದೆ ಎಂಬುದನ್ನು ನೋಡಬಹುದು.

ಈಗ ನಮ್ಮ ದೇಶದಲ್ಲಿ ಪ್ರಸಿದ್ಧ ಶಿಲ್ಪಿಕಾರರೂ, ಚಿತ್ರಕಾರರೂ ಎಂದರೆ ಮ॥ರಾ॥ ವೆಂಕಟಪ್ಪನವರು. ಆಧುನಿಕ ಕರ್ಣಾಟಕ ಕಲಾ ಸಂಪ್ರದಾಯಕ್ಕೆ ಅವರು ಮಾರ್ಗದರ್ಶಿಗಳಾಗಿದ್ದಾರೆ. ಚಿತ್ರ ಕೆಲಸಗಳನ್ನು ಹಿಂದಿನ ಕಾಲದಲ್ಲಿ ಯಾರೂ ಹೆಚ್ಚಾಗಿ ಮಾಡಿದಂತೆ ಕಾಣುವುದಿಲ್ಲ. ಚಾಳುಕ್ಯ ಚಕ್ರವರ್ತಿಗಳ ಪ್ರೋತ್ಸಾಹದಿಂದ ಅಜಂತಾ ಗುಹಾಲಯಗಳಲ್ಲಿ ನಡೆದಂಥ ಅದ್ಭುತವಾದ ಕೆಲಸಗಳು ಮೈಸೂರು ದೇಶದಲ್ಲಿಲ್ಲ. ಹಿಂದೆ ಇದ್ದ ಕೆಲವು ಚಿತ್ರಗಳು ಪ್ರಕೃತಿ ಸಹಜವಾದುವುಗಳಲ್ಲ. ಅಷ್ಟೊಂದು ಭಾವಪ್ರದರ್ಶಕವಾದುವುಗಳೂ ಅಲ್ಲ. ಜಗನ್ಮೋಹನ ಬಂಗಲೆಯಲ್ಲಿರುವ ಚಿತ್ರಗಳೂ, ಅರಮನೆಯಲ್ಲಿರುವ ಚಿತ್ರಗಳೂ ನೋಡತಕ್ಕುವಾಗಿವೆ. ಇವು ಈಚೆಗೆ ಬರೆಯಲ್ಪಟ್ಟುವು. ಶ್ರೀರಂಗಪಟ್ಟಣದ ದರಿಯಾದವಲತ್ತಿನಲ್ಲಿರುವ ಚಿತ್ರಗಳು ಚರಿತ್ರೆಯ ಸಂಗತಿಗಳನ್ನು ಕೊಂಚಮಟ್ಟಿಗೆ ತಿಳಿಸುತ್ತವೆ. ಇವು ಟೀಪುವಿನ ಕಾಲದಲ್ಲಿ ಬರೆಯಲ್ಪಟ್ಟು ಈಚೆಗೆ ಸರಿಪಡಿಸಲ್ಪಟ್ಟುವು. ನಾಟಕ ಸಂಘಗಳನೇಕವು ದೇಶದಲ್ಲಿರುವುದರಿಂದ ಅವರಿಗೆ ಬೇಕಾದ ಪರದೆಗಳನ್ನು ಬರೆಯುವುದು ಆವಶ್ಯಕವಾಗಿದೆ. ಈ ಪ್ರೋತ್ಸಾಹದಿಂದ ಚಿತ್ರಗಾರರು ಕೆಲವರಿರುವುದಾದರೂ ಹೆಸರುವಾಸಿಯಾದವರು ಅತಿ ವಿರಳರಾಗಿದ್ದಾರೆ.

<u>ಸಂಗೀತ.</u>— ಸಂಗೀತದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿ ಈ ಪ್ರಕರಣವನ್ನು ಮುಗಿಸುತ್ತೇವೆ.

ಸಂಗೀತವು ಶಾಸ್ತ್ರವಾಗಿ ಮೊದಲು ಏರ್ಪಟ್ಟದ್ದು ಹಿಂದೂ ದೇಶದಲ್ಲಿಯೇ. ಇದು ಸಾಮವೇದ ಗಾಯನದಿಂದಲೂ, ವೇದ ಋಕ್ಕುಗಳನ್ನು ಹೇಳುವುದರಿಂದಲೂ ಆರಂಭವಾಗಿರಬಹುದೆಂದು ತಿಳಿಯುತ್ತದೆ. ಹಿಂದೂ ದೇಶದಲ್ಲಿ ಈಗ ಹಿಂದೂಸ್ಥಾನಿ ಮತ್ತು ಕರ್ಣಾಟಕ ಎಂದು ಎರಡು ಸಂಗೀತ ಪದ್ಧತಿಗಳಿವೆ. ಇವುಗಳಲ್ಲಿ ಉತ್ತರದೇಶದವರು ಹಿಂದೂಸ್ಥಾನೀ ಪದ್ಧತಿಯನ್ನೂ, ದಕ್ಷಿಣದೇಶದವರು ಕರ್ಣಾಟಕ ಪದ್ಧತಿಯನ್ನೂ ಹೆಚ್ಚಾಗಿ ಅವಲಂಬಿಸುತ್ತಾರೆ. ಈಚೆಗೆ ನಾಟಕಗಳ ಫಲವಾಗಿ ಹಿಂದೂಸ್ಥಾನಿಯ

ಮಟ್ಟುಗಳು ವಿಶೇಷವಾಗಿ ಬೆರಕೆಯಾಗುತ್ತಿವೆ. ಹಾಡುಗಾರಿಕೆಯಲ್ಲದೆ ವಾದ್ಯ ವಿಶೇಷಗಳಿಂದಲೂ ಸಂಗೀತವನ್ನು ನುಡಿಸುತ್ತಾರೆ. ಇವುಗಳಲ್ಲಿ ವೀಣೆಯು ಪ್ರಾಚೀನ ಕಾಲದಿಂದಲೂ ಬಂದಿರುವ ವಾದ್ಯ. ವೀಣೆಗಿರುವ ಪ್ರಾಶಸ್ತ್ಯವು ನಮ್ಮಲ್ಲಿ ಮಿಕ್ಕ ಯಾವ ವಾದ್ಯಕ್ಕೂ ಇಲ್ಲ. ಕೊಳಲು ಗಾನವು ಬಹು ಕಾಲದಿಂದಲೂ ಇದೆ. ಶ್ರೀ ಕೃಷ್ಣನು ವೇಣುಗಾನಲೋಲನೆಂದು ಹೆಸರು ಪಡೆದಿದ್ದನು. ಜಲತರಂಗ, ಸಿತಾರು, ಗೋಟುವಾದ್ಯ, ಪಿಟೀಲು ಮುಂತಾದುವು ಆಚರಣೆಯಲ್ಲಿರುವ ಇತರ ವಾದ್ಯಗಳು. ಶ್ರುತಿಗಾಗಿ ತಂಬೂರಿಯನ್ನು ಉಪಯೋಗಿಸುವರು. ಇದರಲ್ಲಿ ಇಂಪಾದ ಶ್ರುತಿಯು ಬರುತ್ತದೆ. ಈಚೆಗೆ ಹಾರ್ಮೋನಿಯಂ ಎಂಬ ಪಾಶ್ಚಾತ್ಯ ಸಂಗೀತ ವಾದ್ಯವು ಆಚರಣೆಗೆ ಬರುತ್ತಿದೆ. ಆದರೆ ಒಳ್ಳೆಯ ಸಂಗೀತಗಾರರು ಇದನ್ನು ಮೆಚ್ಚುವುದಿಲ್ಲ.

ಸಾಮಾನ್ಯವಾಗಿ ಮೈಸೂರು ದೇಶದವರು ಕಲಾಭಿಜ್ಞರು. ಅವರಿಗೆ ಅಂದ, ಚಂದ, ಸೊಗಸು ಮುಂತಾದುವಲ್ಲಿ ಪ್ರೀತಿ ಹೆಚ್ಚು. ಅವರ ಉಡಿಗೆ ತೊಡಿಗೆಗಳಲ್ಲಿಯೂ ಈ ಸೌಂದರ್ಯಾಭಿಮಾನವು ಚೆನ್ನಾಗಿ ಕಾಣುತ್ತದೆ. ಹಿಂದಿನ ಕಾಲದಲ್ಲಿ ಕಂಡುಬಂದ ವಾಸ್ತುಶಿಲ್ಪ ಕಲೆಗಳ ನೈಪುಣ್ಯವು ಈಗ ಕಡಮೆಯಾದರೂ ಅವರಿಗೆ ಸಹಜವಾದ ಕಲಾಭಿರುಚಿಯಿರುವುದರಿಂದ ಮುಂದೆ ಒಳ್ಳೆಯ ಶಿಲ್ಪಿಗಳೂ, ಚಿತ್ರಗಾರರೂ ತಲೆದೋರುವರೆಂಬುದರಲ್ಲಿ ಸಂದೇಹವಿಲ್ಲ.

ಕನ್ನಡ ಸಾಹಿತ್ಯ

ಕನ್ನಡ ಸಾಹಿತ್ಯ

ಕನ್ನಡದ ಪ್ರಾಚೀನತೆ

ಕನ್ನಡ ಭಾಷೆಯೂ ಅದರ ಸಾಹಿತ್ಯವೂ ಬಹು ಪ್ರಾಚೀನವಾದುವು. ಸುಮಾರು ಕ್ರಿ.ಶ. ೧ ಮತ್ತು ೨ನೆಯ ಶತಮಾನಗಳಲ್ಲಿಯೇ ಈ ಭಾಷೆಯು ಪ್ರಚಾರದಲ್ಲಿ ಇದ್ದಿರಬಹುದೆಂದು ಊಹಿಸುವುದಕ್ಕೆ ಅವಕಾಶವಿದೆ. ಕನ್ನಡದಲ್ಲಿ ಯಾವಾಗ ಗ್ರಂಥರಚನೆಗೆ ಆರಂಭವಾಯಿತೆಂಬುದನ್ನು ಹೇಳಲಾಗುವುದಿಲ್ಲ. ಕನ್ನಡ ಭಾಷೆಯಲ್ಲಿ ಬರೆದ ಶಾಸನವು ಮೊತ್ತ ಮೊದಲಿನದೆಂದರೆ ಕ್ರಿ.ಶ. ೫ನೆಯ ಶತಮಾನದ್ದಾಗುತ್ತದೆ. ಆದರೆ ಇತರ ದ್ರಾವಿಡ ಭಾಷೆಗಳಾದ ತೆಲಗು, ತಮಿಳು, ಮಲೆಯಾಳಗಳೊಡನೆ ಹೋಲಿಸಿ ನೋಡುವುದಾದರೆ ಕನ್ನಡ ತಮಿಳಿನಷ್ಟು ಪ್ರಾಚೀನವಲ್ಲದಿದ್ದರೂ ಉಳಿದ ಭಾಷೆಗಳಿಗಿಂತ ಬಹಳ ಹಿಂದೆಯೇ ಇತ್ತೆಂದು ಹೇಳಬಹುದು. ಕನ್ನಡ ಸಾಹಿತ್ಯದ ವಿಚಾರವೂ ಹೀಗೆಯೇ. ತಮಿಳು ಸಾಹಿತ್ಯವನ್ನು ಬಿಟ್ಟರೆ ಕನ್ನಡ ಸಾಹಿತ್ಯವೇ ಬಹಳ ಪ್ರಾಚೀನವಾದುದು. ರಾಷ್ಟ್ರಕೂಟ ಚಕ್ರವರ್ತಿಯಾದ ನೃಪತುಂಗನು ಬರೆದ ಕವಿರಾಜಮಾರ್ಗವೆಂಬ ಲಕ್ಷಣಗ್ರಂಥವೇ ನಮಗೆ ಈಗ ಸಿಕ್ಕಿರುವ ಗ್ರಂಥಗಳಲ್ಲಿ ಬಹಳ ಪುರಾತನವಾದುದು. ಇದು ೯ನೆಯ ಶತಮಾನದಲ್ಲಿ ಹುಟ್ಟಿದುದು. ನೃಪತುಂಗನು ತನ್ನ ಗ್ರಂಥದಲ್ಲಿ ತನಗೆ ಹಿಂದೆ ಇದ್ದ ಕೆಲವು ಪ್ರಸಿದ್ಧ ಕವಿಗಳನ್ನು ಹೇಳಿದ್ದಾನೆ; ಮತ್ತು ಆತನ ಗ್ರಂಥದಲ್ಲಿ ದೊರೆಯುವ ಕೆಲವು ಉದಾಹರಣೆಗಳು ಆತನಿಗೆ ಹಿಂದೆ ರಚಿತವಾದ ಯಾವುದೋ ರಾಮಾಯಣದಿಂದ ತೆಗೆದುಕೊಂಡ ಹಾಗೆ ಕಾಣುತ್ತವೆ. ಈ ಕಾರಣಗಳಿಂದ ಕನ್ನಡ ಸಾಹಿತ್ಯವು ೯ನೆಯ ಶತಮಾನಕ್ಕೆ ಹಿಂದೆಯೇ ಬಹಳವಾಗಿ ಬೆಳೆದಿರಬೇಕೆಂದು ಹೇಳಬಹುದು.

ಕನ್ನಡ ಕವಿಗಳು

ಕನ್ನಡ ಸಾಹಿತ್ಯವನ್ನು ಬೆಳೆಸಿಕೊಂಡು ಬಂದಿರುವ ಕವಿಗಳನ್ನು ಸಾಮಾನ್ಯವಾಗಿ ಜೈನರು, ವೀರಶೈವರು, ಮತ್ತು ಬ್ರಾಹ್ಮಣರೆಂದು ವಿಭಾಗ ಮಾಡುವ ಪದ್ಧತಿಯಿದೆ. ಇವರ ಜೊತೆಗೆ ಇನ್ನು ಕೆಲವರನ್ನು ಸೇರಿಸ ಬಹುದು. ಬೌದ್ಧ ಮತವು ಅಶೋಕನ ಕಾಲಕ್ಕೆ ಹಿಂದೂಸ್ಥಾನದಲ್ಲೆಲ್ಲಾ ಹರಡಿತ್ತೆಂದೂ ಅಶೋಕನು ಬೌದ್ಧಮತ ಪ್ರಚಾರಕ್ಕಾಗಿ ಜನರನ್ನು ಮಹಿಷಿ ಮಂಡಲಕ್ಕೆ (ಮೈಸೂರು ದೇಶಕ್ಕೆ) ಕಳುಹಿಸಿದ್ದನೆಂದೂ ಚರಿತ್ರೆಯಿಂದ ಗೊತ್ತಾಗುವುದು. ಸಾಮಾನ್ಯವಾಗಿ ಮತ ಪ್ರಾಚುರ್ಯ ಕಾರ್ಯವನ್ನು ಮಾಡು ವಾಗ ಆಯಾ ಪ್ರಾಂತದ ಭಾಷೆಯನ್ನು ಕಲಿತು ಜನರಿಗೆ ಬೋಧಿಸುವುದೇ ವಾಡಿಕೆಯಾಗಿದೆ. ಆದುದರಿಂದ ಬೌದ್ಧ ಗ್ರಂಥಗಳಾವುವೂ ಈಗ ನಮಗೆ ದೊರೆಯದೇ ಇದ್ದರೂ ಕರ್ಣಾಟಕದಲ್ಲಿ ಬೌದ್ಧಮತವು ಪ್ರಚಾರದಲ್ಲಿದ್ದಾಗ ಬೌದ್ಧರು ಗ್ರಂಥಗಳನ್ನು ಬರೆದಿರಬೇಕೆಂದು ಊಹಿಸಬಹುದಾಗಿದೆ. ಮೇಲೆ ಹೇಳಿದ ಮತದವರಲ್ಲದೆ ಇತರರೂ ಕನ್ನಡದಲ್ಲಿ ಗ್ರಂಥಗಳನ್ನು ಬರೆದಿ ರುವರು.

ಕನ್ನಡ ಸಾಹಿತ್ಯದ ಲಕ್ಷಣಗಳು

ಕನ್ನಡ ಸಾಹಿತ್ಯದ ಕೆಲವು ಸಾಮಾನ್ಯ ಲಕ್ಷಣಗಳನ್ನು ಇಲ್ಲಿ ಸಂಗ್ರಹಿಸಿ ಹೇಳಬಹುದು. ಹಿಂದಿನ ಕಾಲದ ಸಾಹಿತ್ಯವೆಲ್ಲ ಮುಕ್ಕಾಲು ಪಾಲು ಮತಾಭಿ ಮಾನದಿಂದಲೇ ಬೆಳೆದು ಬಂದಂತೆ ಕಾಣುವುದು. ಜೈನರು ತಮ್ಮ ತೀರ್ಥಂ ಕರರ ಮತ್ತು ಜಿನಭಕ್ತರ ಚರಿತ್ರೆಗಳನ್ನು ಯಥೇಚ್ಛವಾಗಿ ಬರೆದಿರುತ್ತಾರೆ. ರಾಮಾಯಣ ಭಾರತಗಳನ್ನು ಬರೆದಿರುವುದಾದರೂ ಅಲ್ಲಿ ಬರುವ ಶ್ರೀ ರಾಮಾದಿಗಳೂ ಪಾಂಡವರೂ ಕೇವಲ ಜೈನರು. ಕೆಲವು ಗ್ರಂಥಗಳು ಅನ್ಯ ಮತಗಳನ್ನು ಹೀಯಾಳಿಸಿ ಜೈನರ ಮತದ ಸರ್ವೋತ್ಕೃಷ್ಟತೆಯನ್ನು ಸಾರ ತಕ್ಕುವಾಗಿವೆ. ಜೈನ ಕವಿಗಳು ಕೆಲವರು ಲೌಕಿಕ ಗ್ರಂಥಗಳನ್ನೂ ಬರೆದಿರು ತ್ತಾರೆ. ಆದರೆ ಅಂತಹ ಗ್ರಂಥಗಳು ಬಹಳ ವಿರಳವಾಗಿವೆ. ಹೀಗೆಯೇ ವೀರಶೈವ ಕವಿಗಳು ಪವಾಡ ಪುರುಷರ ಜೀವನ ಚರಿತ್ರೆಗಳನ್ನೂ ಮತ ತತ್ವಗಳ ಗ್ರಂಥಗಳನ್ನೂ ಹೇರಳವಾಗಿ ಬರೆದಿರುವರು. "ನರಸ್ತುತಿಯನ್ನು ಮಾಡಬಾರದು. ಶಿವಶರಣರ ಕಥೆಗಳನ್ನು ಬರೆಯಬೇಕು" ಎಂಬುದೇ

ಅವರ ಪಂಥ. ಬ್ರಾಹ್ಮಣ ಕವಿಗಳಾದರೋ ಭಾರತ, ಭಾಗವತ ರಾಮಾಯಣಗಳನ್ನೂ ಕೀರ್ತನೆಗಳನ್ನೂ ಬರೆದಿರುವರು. ಕೆಲವು ಸಂದರ್ಭಗಳಲ್ಲಿ ಪುರಾಣೋಕ್ತವಾದ ಸ್ಥಳಮಾಹಾತ್ಮ್ಯಗಳನ್ನೂ, ಕೆಲವು ಐತಿಹಾಸಿಕ ಗ್ರಂಥಗಳನ್ನೂ ಬರೆದಿರುವರು. ಕನ್ನಡ ಸಾಹಿತ್ಯದಲ್ಲಿರುವ ಗ್ರಂಥಗಳನ್ನು ಸ್ಥೂಲವಾಗಿ ಹೀಗೆ ವಿಂಗಡಿಸುವುದಾದರೂ ವೈದ್ಯ ಗ್ರಂಥಗಳೂ, ಅಶ್ವಶಾಸ್ತ್ರ ಗಜಶಾಸ್ತ್ರ ಗ್ರಂಥಗಳೂ, ಗಣಿತ ಗ್ರಂಥಗಳೂ ಇಲ್ಲದೇ ಹೋಗಿಲ್ಲ. ಆದರೆ ಇವುಗಳೆಲ್ಲ ಎಷ್ಟರಮಟ್ಟಿಗೆ ಸಾಹಿತ್ಯವೆನ್ನಿಸಿಕೊಳ್ಳುವುವೋ ಹೇಳಲಾಗದು.

ಸಾಹಿತ್ಯವು ಬೆಳೆದು ಬಂದಿದೆ

ಕನ್ನಡಸಾಹಿತ್ಯವನ್ನು ಪರೀಕ್ಷಿಸಿದರೆ ಆ ಸಾಹಿತ್ಯವು ಜೀವನದಿಯಾಗಿ ಬೆಳೆದು ಬಂದಿರುವುದೂ ಕಾಲಕಾಲಕ್ಕೆ ಹೊಸಹೊಸ ಜೀವನವು ತಲೆದೋರಿ ತುಂಬಿ ಹರಿದಿರುವುದೂ ಗೋಚರಿಸುತ್ತದೆ. ಈ ಕಾರಣದಿಂದ ಸಾಹಿತ್ಯದ ಬೆಳೆವಣಿಗೆಯು ಕೆಲವುಕಾಲಗಳಲ್ಲಿ ಕೆಲವು ನಿಷ್ಕೃಷ್ಟಕಾರಣಗಳಿಂದ ಮಾರ್ಪಟ್ಟಿರುವುದೆಂದು ಹೇಳಬೇಕು. ಸಾಹಿತ್ಯದ ಕಾಲಗಳನ್ನು ಆಯಾ ಲಕ್ಷಣಗಳನ್ನನುಸರಿಸಿ ಹೀಗೆ ವಿಭಾಗ ಮಾಡಿಕೊಳ್ಳಬಹುದು. (೧) ಪ್ರಾಚೀನ ಕಾಲ. (೨) ಐತಿಹಾಸಿಕ ಕಾಲ, ಅಥವಾ ಸಂಸ್ಕೃತ ಪ್ರಾಬಲ್ಯದ ಕಾಲ. (೩) ಮತ ಪ್ರಾಬಲ್ಯದ ಕಾಲ ಅಥವಾ ದೇಶೀಯ ಶೈಲಿಯ ಕಾಲ. (೪) ಅವನತಿಯ ಕಾಲ. (೫) ಆಧುನಿಕ ಕಾಲ.

ಇವುಗಳನ್ನು ಒಂದೊಂದಾಗಿ ತೆಗೆದುಕೊಂಡು ವಿಮರ್ಶಿಸುವೆವು.

ಪ್ರಾಚೀನ ಕಾಲ.—ಇದನ್ನು ಕ್ರಿ. ಶಕದ ಆದಿಯಿಂದ ೯ನೆಯ ಶತಮಾನದ ವರೆಗೆಂದು ಹೇಳಬಹುದು. ಈ ಕಾಲದ ವಿಷಯಗಳು ನಮಗೆ ಹೆಚ್ಚಾಗಿ ಗೊತ್ತಿಲ್ಲ. ವಿಮಳೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮೊದಲಾದವರು ಗದ್ಯಗ್ರಂಥಗಳನ್ನು ರಚಿಸಿರುವರೆಂದು ಕವಿರಾಜ ಮಾರ್ಗದಿಂದ ತಿಳಿಯುತ್ತದೆ. ಆದರೆ ಆ ಗ್ರಂಥಗಳಾವುವು ಎಂಬುದು ಗೊತ್ತಿಲ್ಲ. ಹೀಗೆಯೇ ಶ್ರೀವಿಜಯ, ಕವೀಶ್ವರ ಪಂಡಿತ, ಚಂದ್ರ, ಲೋಕಪಾಲ ಮುಂತಾದವರು ಪದ್ಯಗ್ರಂಥಗಳನ್ನು ಬರೆದಿರುವರೆಂದು ತಿಳಿಯುತ್ತದೆ, ಆ ಪದ್ಯಗ್ರಂಥಗಳಾವುವೂ ದೊರೆತಿಲ್ಲವಾದುದರಿಂದ ಅವು ಏನು, ಹೇಗಿವೆ, ಎಂಬುದು ತಿಳಿದಿಲ್ಲ. ಈ ಪ್ರಾಚೀನ ಕಾಲದಲ್ಲಿ ತುಂಬಲೂರಾಚಾರ್ಯ ಅಥವಾ

ಶ್ರೀವರ್ಧದೇವನೆಂದು ಹೆಸರುಳ್ಳ ಕವಿಯು ಚೂಡಾಮಣಿ ಎಂಬ ೯೬,೦೦೦ ಪದ್ಯಗಳುಳ್ಳ ಗ್ರಂಥವನ್ನು ಬರೆದಿರುವನೆಂದೂ, ಆತನನ್ನು ಸಂಸ್ಕೃತ ಕವಿಯಾದ ದಂಡಿಯು ಹೊಗಳಿರುವನೆಂದೂ ತಿಳಿದು ಬಂದಿದೆ. ಆದರೆ ಈ ಚೂಡಾಮಣಿ ಎಂಬ ಗ್ರಂಥವು ಉಪಲಬ್ಧವಾಗಿಲ್ಲ.

ಮೇಲೆ ಹೇಳಿದ ಕವಿಗಳಲ್ಲಿ ಯಾರು ಜೈನರು , ಯಾರು ಬ್ರಾಹ್ಮಣರು ಎಂಬುದನ್ನು ವಿಂಗಡಿಸಿ ಹೇಳುವುದು ಕೂಡ ಸಾಧ್ಯವಿಲ್ಲ. ಅವರಲ್ಲಿ ಕೆಲವರು ಬೌದ್ಧರಿದ್ದರೂ ಇರಬಹುದು.

೧. ಪ್ರಾಚೀನ ಕಾಲದ ಸ್ಥಿತಿ

ಆಗಿನ ಕಾಲದ ಸ್ಥಿತಿಯನ್ನು ಕೆಲವು ಮಾತುಗಳಲ್ಲಿ ತಿಳಿಸಬಹುದು. ಕ್ರಿ.ಶ. ೭ನೆಯ ಶತಮಾನದವರೆಗೂ ಬೌದ್ಧ ಜೈನ ಮತಗಳು ಪ್ರಬಲವಾಗಿದ್ದುವು. ಸುಮಾರು ೭ನೆಯ ಶತಮಾನದಲ್ಲಿ ಚೋಳ ಮಂಡಲದಲ್ಲಿ ಶೈವ ಮತದ ಪ್ರಾಬಲ್ಯ ಉಂಟಾಯಿತು. ಆಗ ಅಲ್ಲಿ ಜೈನ ಮತ್ತು ಬೌದ್ಧ ಮತಗಳಿಗೆ ಉಳಿಗಾಲವಿರಲಿಲ್ಲ. ಆ ಶೈವ ಮತದ ಪ್ರಭಾವವು ಕರ್ಣಾಟಕಕ್ಕೂ ಬಂದಿತು. ಚಾಳುಕ್ಯರ ಎರಡನೆಯ ಪುಲಕೇಶಿಯನ್ನು ಪಲ್ಲವ ಮತ್ತು ಪಾಂಡ್ಯ ರಾಜ್ಯರು ಸೇರಿ ಸೋಲಿಸಿದಾಗ ಶೈವ ಮತವು ಕರ್ಣಾಟಕದಲ್ಲಿ ವ್ಯಾಪಿಸಲು ಅನುಕೂಲವಾಯಿತು. ಇನ್ನೊಂದು ಕಡೆ ಕುಮಾರಿಲಭಟ್ಟ, ಮತ್ತು ಶಂಕರಾಚಾರ್ಯರ ದಿಗ್ವಿಜಯಗಳಿಂದ ಬೌದ್ಧಮತವು ನಾಮಾವಶೇಷವಾಗುತ್ತ ಬಂದಿತು. ಜೈನಮತವಾದರೋ ಆಗ ಪ್ರಬಲರಾದ ರಾಷ್ಟ್ರಕೂಟದವರೂ, ಗಂಗರಸರೂ ಅದಕ್ಕೆ ಬೆಂಬಲರಾಗಿದ್ದುದರಿಂದ ಅದು ಉಳಿದುಕೊಂಡಿತು. ಆದುದರಿಂದ ೭ ಮತ್ತು ೮ನೆಯ ಶತಮಾನಗಳಲ್ಲಿ ವೈದಿಕ ಮತವು ಜೀರ್ಣೋದ್ಧಾರವಾಗುತ್ತಲೂ, ಜೈನಮತವು ತನ್ನ ಪ್ರಾಶಸ್ತ್ಯಕ್ಕಾಗಿ ಪ್ರಯತ್ನ ಪಡುತ್ತಲೂ, ಬೌದ್ಧ ಮತವು ಮತಾಂತರದವರ ಪೆಟ್ಟುಗಳಿಂದ ಅಳಿದು ಹೋಗುತ್ತಲೂ, ಇತ್ತೆಂದು ಹೇಳಬಹುದು.

ಕಾವ್ಯಲಕ್ಷಣಗಳು.

ಆಗಿನ ಕಾಲದ ಕಾವ್ಯದ ಲಕ್ಷಣಗಳು ಹೇಗಿದ್ದುವೆಂಬುದನ್ನು ಸ್ವಲ್ಪ ಮಟ್ಟಿಗೆ ಹೇಳಬಹುದು. ಆ ಗ್ರಂಥಗಳಾವುವೂ ದೊರೆತಿಲ್ಲವೆಂಬುದನ್ನು

ಹಿಂದೆಯೇ ಹೇಳಿದ್ದೇವಷ್ಟೆ. ಆದರೂ ಕವಿರಾಜಮಾರ್ಗದ ಆಧಾರದಿಂದ ಹಿಂದಿನ ಗ್ರಂಥಗಳ ಲಕ್ಷಣಗಳನ್ನು ಊಹಿಸಬಹುದಾಗಿದೆ. ನೃಪತುಂಗನು ಪದ್ಯಗದ್ಯಗಳ ವಿಚಾರ ಹೇಳಿರುವುದು ಮಾತ್ರವಲ್ಲದೆ ಬೆದಂಡೆ ಚೆತ್ತಾಣ ಮುಂತಾದ ಕಾವ್ಯಗಳ ಲಕ್ಷಣಗಳನ್ನೂ ಹೇಳಿದ್ದಾನೆ. ಇದನ್ನು ನೋಡಿದರೆ ನೃಪತುಂಗನ ಕಾಲಕ್ಕೆ ಹಿಂದೆ ಈ ಬಗೆಯ ಕಾವ್ಯಗಳು ಇದ್ದಿರಬೇಕು. ಇವುಗಳಲ್ಲದೆ ಚಂಪೂ ಕಾವ್ಯಗಳೂ ಇದ್ದಿರಬಹುದು.

೨. ಐತಿಹಾಸಿಕ ಕಾಲದ ಸ್ಥಿತಿ

ಈ ಕಾಲವನ್ನು ೯ನೆಯ ಶತಮಾನದಿಂದ ಹನ್ನೆರಡನೆಯ ಶತಮಾನದ ಮಧ್ಯಭಾಗದ ವರೆಗೆಂದು ಹೇಳಬಹುದು. ಈ ಕಾಲದ ಲಕ್ಷಣಗಳನ್ನು ಈ ರೀತಿ ಸಂಗ್ರಹಿಸಬಹುದು. ರಾಷ್ಟ್ರಕೂಟರು ೯–೧೦ನೆಯ ಶತಮಾನಗಳಲ್ಲಿ ಪ್ರಬಲರಾಗಿದ್ದರು. ಚಾಳುಕ್ಯರು ತಮ್ಮ ಹಿಂದಿನ ಪ್ರಾಶಸ್ತ್ಯವನ್ನು ಕಳೆದುಕೊಂಡು ಪುನಃ ದೊಡ್ಡ ಚಕ್ರಾಧಿಪತ್ಯವನ್ನು ಕಟ್ಟಲು ಹವಣಿಸುತ್ತಿದ್ದರು. ದಕ್ಷಿಣದಲ್ಲಿ ಗಂಗರಸರು ಒಳ್ಳೆಯ ಉಚ್ಛ್ರಾಯ ಸ್ಥಿತಿಯಲ್ಲಿದ್ದು ರಾಷ್ಟ್ರಕೂಟದವರೊಡನೆ ಸಂಬಂಧಗಳನ್ನು ಮಾಡಿ ಇಡೀಯ ಕರ್ಣಾಟಕಕ್ಕೆ ಸೂತ್ರಧಾರಿಗಳಾಗಿದ್ದರು. ಹನ್ನೊಂದನೆಯ ಶತಮಾನದ ಆದಿಭಾಗದಲ್ಲಿ ಚೋಳರು ಗಂಗವಾಡಿಯನ್ನು ಆಕ್ರಮಿಸಿಕೊಂಡು ಗಂಗರಸರನ್ನು ಮೂಲೋತ್ಪಾಟನೆ ಮಾಡಿದರು. ಅದರಿಂದ ಜೈನಮತಕ್ಕೆ ದೊಡ್ಡ ಪೆಟ್ಟು ಬಿದ್ದಂತಾಗಿ ಶೈವ ಮತವು ಹರಡಲು ಅನುಕೂಲಿಸಿತು. ಹೀಗೆಯೇ ಉತ್ತರದಲ್ಲಿ ಚಾಳುಕ್ಯರು, ರಾಷ್ಟ್ರಕೂಟದವರ ಆಧಿಪತ್ಯದಿಂದ ಮುಕ್ತರಾಗಿ ಸ್ವತಂತ್ರವಾದ ರಾಜ್ಯವನ್ನು ಪುನಃ ಕಟ್ಟಿದರು. ಚಾಳುಕ್ಯ ವಿಕ್ರಮಾದಿತ್ಯನು ತನ್ನದೊಂದು ಶಕೆಯನ್ನು ಸ್ಥಾಪಿಸಿ ಕೀರ್ತಿವಂತನಾದನು. ನೈರುತ್ಯ ಮೂಲೆಯಲ್ಲಿ ಹೊಯ್ಸಳ ರಾಜ್ಯಕ್ಕೆ ಅಂಕುರಾರ್ಪಣವಾಗಿ ಅದು ಕ್ರಮಕ್ರಮವಾಗಿ ಮುಂದುವರಿಯುತ್ತಿತ್ತು. ರಾಮಾನುಜಾಚಾರ್ಯರು ಚೋಳಮಂಡಲದಿಂದ ಹೊರಟು ಕರ್ಣಾಟಕದಲ್ಲಿ ನೆಲೆಸಿದ್ದರಿಂದ ವೈಷ್ಣವ ಮತದ ಪ್ರಾಬಲ್ಯಕ್ಕೂ ಜೈನಮತದ ಅವನತಿಗೂ ಕಾರಣವಾಯಿತು.

ಹೀಗೆ ರಾಜ್ಯಗಳೂ ಚಕ್ರಾಧಿಪತ್ಯಗಳೂ ಹೊಸದಾಗಿ ಸ್ಥಾಪಿತವಾಗುತ್ತಿದ್ದ ಈ ಕಾಲವನ್ನು ಐತಿಹಾಸಿಕ ಕಾಲವೆಂದು ನಾವು ಕರೆಯು

ತ್ತೇವೆ. ಮತ್ತು ಆಗಿನ ಕಾಲದ ವೀರಲಕ್ಷಣವು ಕೆಲವು ಕಾವ್ಯಗಳಲ್ಲಿಯೂ ತಲೆದೋರಿದೆ. ಆದಿಪಂಪ ಮತ್ತು ರನ್ನ ಈ ಇಬ್ಬರು ಜೈನಕವಿಗಳು ತಮ್ಮ ದೊರೆಗಳ ಪ್ರತಾಪವನ್ನು ವರ್ಣಿಸುವ ಉದ್ದೇಶದಿಂದ ಅವರನ್ನು ನಾಯಕರನ್ನಾಗಿ ಮಾಡಿಕೊಂಡು ಅತ್ಯುತ್ತಮವಾದ ಎರಡು ಕಾವ್ಯಗಳನ್ನು ಬರೆದಿರುತ್ತಾರೆ.

ಈ ಕಾಲವನ್ನು ಸಂಸ್ಕೃತ ಪದ್ಧತಿಯ ಕಾಲವೆಂದು ಕರೆದಿರುವುದಕ್ಕೂ ಕೆಲವು ಕಾರಣಗಳುಂಟು. ಈ ಕಾಲದ ಕಾವ್ಯ ಲಕ್ಷಣಗಳನ್ನು ನೋಡಿದರೆ ಅವು ಮುಕ್ಕಾಲು ಪಾಲೆಲ್ಲ ಚಂಪೂ ಶೈಲಿಯಲ್ಲಿವೆ. ಕಾವ್ಯಗಳನ್ನು ಬರೆದ ಕವಿಗಳು ಸಂಪೂರ್ಣವಾಗಿ ಸಂಸ್ಕೃತಜ್ಞರು. ಸಂಸ್ಕೃತ ಸಾಹಿತ್ಯದಲ್ಲಿ ಚಂಪೂ ಗ್ರಂಥಗಳು ಇರುವುದಾದರೂ ಅವು ಈಚೆಗೆ ಬೆಳೆದು ಬಂದುವೆಂದೂ, ಮೊತ್ತಮೊದಲಿನಲ್ಲಿ ಕಾವ್ಯಾದಿ ಬೇರೇ ರೂಪಗಳು ಅನೇಕವಾಗಿರುವುವೆಂದೂ ಹೇಳಬೇಕು. ಹೀಗಿದ್ದರೂ ಪ್ರೌಢವಾದ ಚಂಪೂ ಶೈಲಿಯನ್ನೇ ಕನ್ನಡ ಕವಿಗಳು ಈ ಕಾಲದಲ್ಲಿ ಅನುಸರಿಸಿರುತ್ತಾರೆ. ಇವರ ಕಾವ್ಯಗಳಾದರೋ ಪಾಮರರಿಗೆ ಅರ್ಥವಾಗುವುದು ಕಷ್ಟ. ಸಂಸ್ಕೃತದಲ್ಲಿ ಪಂಡಿತರಾಗಿದ್ದರೆ ಅಂಥವರಿಗೆ ಸುಲಭದಲ್ಲಿ ಅರ್ಥವಾಗುವುದು. ಕವಿಗಳು ಸಂಸ್ಕೃತ ಲಕ್ಷಣ ಗ್ರಂಥಗಳಿಗನುಸಾರವಾಗಿಯೇ ತಮ್ಮ ಗ್ರಂಥಗಳನ್ನು ಬರೆದಿರುತ್ತಾರೆ.

ಐತಿಹಾಸಿಕ ಕಾಲದ ಕವಿಗಳು

ಈ ಕಾಲದ ಕೆಲವು ಮುಖ್ಯ ಕವಿಗಳನ್ನು ಕೆಳಗೆ ತಿಳಿಸುತ್ತೇವೆ.—

ನೃಪತುಂಗ.—ಈತನು ರಾಷ್ಟ್ರಕೂಟರ ಚಕ್ರವರ್ತಿ. ಮಾನ್ಯಖೇಡವೆಂಬುದು ರಾಜಧಾನಿಯಾಗಿತ್ತು. ಕನ್ನಡದಲ್ಲಿ ಒಳ್ಳೆಯ ಕವಿ. ‘ಕವಿರಾಜ ಮಾರ್ಗ’ ಎಂಬ ಲಕ್ಷಣ ಗ್ರಂಥವನ್ನು ಬರೆದಿದ್ದಾನೆ. ಕೊಂಚ ಭಾಗದಲ್ಲಿ ವ್ಯಾಕರಣಾಂಶಗಳನ್ನೂ, ಕೊಂಚಭಾಗದಲ್ಲಿ ಕಾವ್ಯ ಲಕ್ಷಣಗಳನ್ನೂ, ಅನಂತರ ಅಲಂಕಾರಾದಿಗಳನ್ನೂ ವಿವರಿಸಿದ್ದಾನೆ. ಈ ಗ್ರಂಥದಿಂದ ಪ್ರಾಚೀನ ಕಾಲದ ಸಾಹಿತ್ಯ ವಿಚಾರವು ತಕ್ಕಮಟ್ಟಿಗೆ ತಿಳಿಯುತ್ತದೆ. ಈತನ ಕಾಲದಲ್ಲಿ ಗೀತಿಕೆಗಳನ್ನು ಬರೆಯುತ್ತಿದ್ದರೆಂದು ಕಾಣುವುದು.

ಆದಿಪಂಪ.—ಈತನು ಚಾಳುಕ್ಯರ ದೊರೆಯಾದ ಅರಿಕೇಸರಿಯಲ್ಲಿ ದಂಡನಾಯಕನಾಗಿದ್ದನು. ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಆದಿಪುರಾಣವು ಆದಿ ತೀರ್ಥಂಕರನಾದ ವೃಷಭನಾಥನ ಚರಿತ್ರೆಯಾಗಿದೆ. ಇದನ್ನು ಮೂರು ತಿಂಗಳಲ್ಲಿ ಕವಿಯು ಮುಗಿಸಿದನಂತೆ. ವಿಕ್ರಮಾರ್ಜುನ ವಿಜಯವು ಪಂಪ ಭಾರತವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಇದರಲ್ಲಿ ಮಹಾಭಾರತದ ಕಥೆಯಿದೆ. ತನ್ನ ದೊರೆಯಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಭಾರತದ ಕಥೆಗೆ ಅರ್ಜುನನನ್ನೇ ನಾಯಕನನ್ನಾಗಿ ಮಾಡಿದ್ದಾನೆ. ಇದು ಒಳ್ಳೆಯ ಪ್ರೌಢಗ್ರಂಥ.

ಪೊನ್ನ.—ಈ ಕವಿಯು ರಾಷ್ಟ್ರಕೂಟರ ದೊರೆಯಾದ ಕನ್ನರ ಅಥವ ಕೃಷ್ಣರಾಜನ ಪೋಷಣೆಯಲ್ಲಿದ್ದವನು. ಈತನಿಗೆ ಉಭಯ ಕವಿ ಚಕ್ರವರ್ತಿ ಎಂಬ ಬಿರುದಿತ್ತು. ಈತನು ಶಾಂತಿಪುರಾಣವನ್ನು ಬರೆದಿದ್ದಾನೆ. ಶಾಂತಿನಾಥನು ಹದಿನಾರನೆಯ ತೀರ್ಥಂಕರನು. ಇದಲ್ಲದೆ ಜಿನಾಕ್ಷರ ಮಾಲೆ ಭುವನೈಕರಾಮಾಭ್ಯುದಯ ಎಂಬ ಗ್ರಂಥಗಳನ್ನು ಬರೆದಿದ್ದಾನೆ.

ರನ್ನ.—ಈತನು ಚಾಳುಕ್ಯರ ದೊರೆಗಳಾದ ಆಹವಮಲ್ಲ, ತೈಲಪರ ಪೋಷಣೆಯಲ್ಲಿದ್ದವನು. ಮೊದಲಿನಲ್ಲಿ ಕೆಲವು ಸಾಮಂತರಾಜರ ಆಶ್ರಯ ದಲ್ಲಿದ್ದು ಅನಂತರ ಚಾಳುಕ್ಯ ಚಕ್ರವರ್ತಿಯ ಆಶ್ರಯವನ್ನು ಪಡೆದಂತೆ ಕಾಣುತ್ತದೆ. ಈತನು ಬರೆದಿರುವ ಗ್ರಂಥಗಳಲ್ಲಿ ಅಜಿತ ಪುರಾಣ ಮತ್ತು ಸಾಹಸಭೀಮವಿಜಯ ಎಂಬಿವು ದೊರೆತಿವೆ. ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ ಎಂಬ ಗ್ರಂಥಗಳು ದೊರೆತಿಲ್ಲ. ಅಜಿತ ಪುರಾಣದಲ್ಲಿ ಎರಡನೆಯ ತೀರ್ಥಂಕರನಾದ ಅಜಿತನಾಥನ ಕಥೆಯಿದೆ. 'ಸಾಹಸ ಭೀಮವಿಜಯ' ಎಂಬುದು 'ಗದಾಯುದ್ಧ' ಎಂಬ ಹೆಸರಿನಿಂದ ಪ್ರಸಿದ್ಧ ವಾಗಿದೆ. ಈ ಕಾವ್ಯದಲ್ಲಿ ಕವಿಯು ತನ್ನ ದೊರೆಯಾದ ಆಹವಮಲ್ಲನನ್ನು ಮಹಾಭಾರತದ ಭೀಮಸೇನನಿಗೆ ಹೋಲಿಸಿ ಕಥಾನಾಯಕನನ್ನಾಗಿ ಮಾಡಿ ದ್ದಾನೆ. ಇದು ವೀರ ಮತ್ತು ಕರುಣಾರಸಗಳಿಂದ ತುಂಬಿರುವ ಪ್ರೌಢ ಗ್ರಂಥ.

ಕನ್ನಡ ಸಾಹಿತ್ಯದಲ್ಲಿ ಆದಿಪಂಪನ ಭಾರತವೂ, ರನ್ನನ ಗದಾ ಯುದ್ಧವೂ ಬಹಳ ಉತ್ತಮವಾದ ಕಾವ್ಯಗಳೆಂದು ಹೆಸರು ಪಡೆದಿವೆ.

ನಾಗವರ್ಮ.—ಕನ್ನಡ ಸಾಹಿತ್ಯದಲ್ಲಿ ಈ ಹೆಸರಿನ ಕವಿಗಳು ಎರಡು ಮೂರು ಮಂದಿ ಇದ್ದಾರೆಂದು ಕೆಲವರು ಹೇಳುತ್ತಾರೆ. ಈ ವಿಷಯವು ಅಷ್ಟೊಂದು ನಿಷ್ಕೃಷ್ಟವಾಗಿ ತೀರ್ಮಾನವಾಗಿಲ್ಲ. ಸಂಸ್ಕೃತದಲ್ಲಿ ಬಾಣ ಕವಿಯು ಬರೆದಿರುವ ಕಾದಂಬರಿ ಎಂಬ ಗ್ರಂಥವನ್ನು ನಾಗವರ್ಮನು ಕನ್ನಡದಲ್ಲಿ ಚಂಪೂ ಕಾವ್ಯವಾಗಿ ಬರೆದಿದ್ದಾನೆ. ಇದಲ್ಲದೆ 'ಛಂದೋಂಬುಧಿ' ಎಂಬ ಛಂದಸ್ಸಿನ ಗ್ರಂಥವನ್ನೂ ಬರೆದಿದ್ದಾನೆ. ಕಾವ್ಯಾವಲೋಕನ ಮತ್ತು ಕರ್ಣಾಟಕ ಭಾಷಾಭೂಷಣ ಎಂಬ ಗ್ರಂಥಗಳನ್ನು ಈ ಮೊದಲನೆಯ ನಾಗವರ್ಮನೇ ಬರೆದಿರಬಹುದೆಂದು ಕೆಲವರೂ, ಆ ಗ್ರಂಥಗಳನ್ನು ಬರೆದಾತ ಕ್ರಿ. ಶ. ೧೧೪೫ರಲ್ಲಿದ್ದ ಬೇರೆ ನಾಗವರ್ಮನೆಂದು ಇತರರೂ ಹೇಳುತ್ತಾರೆ.

ನಾಗಚಂದ್ರ.—ಈತನಿಗೆ ಅಭಿನವ ಪಂಪನೆಂದು ಹೆಸರಿದೆ. ಆದಿ ಪಂಪನ ಶೈಲಿಯನ್ನನುಸರಿಸಿ ತಾನು ಬರೆದಿರುವುದಾಗಿಯೂ, ಅಭಿನವ ಪಂಪನೆಂಬ ಬಿರುದು ತನಗೆ ಸಲ್ಲತಕ್ಕದ್ದೆಂದೂ ಕವಿಯ ಅಭಿಪ್ರಾಯವಿರುವಂತೆ ತೋರುತ್ತದೆ. ಈತನು ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಎಂಬ ಕಾವ್ಯಗಳನ್ನು ಬರೆದಿದ್ದಾನೆ. ಮಲ್ಲಿನಾಥ ಪುರಾಣವು ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತ್ರೆಯಾಗಿದೆ. ರಾಮಚಂದ್ರ ಚರಿತ ಪುರಾಣವು ಪಂಪರಾಮಾಯಣವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವುದು. ಇದು ಜೈನ ಪರವಾದ ರಾಮಾಯಣ ಕಥೆ. ವಾಲ್ಮೀಕಿ ರಾಮಾಯಣಕ್ಕೂ ಇದಕ್ಕೂ ಅನೇಕ ಕಡೆಗಳಲ್ಲಿ ವ್ಯತ್ಯಾಸವಿದೆ.

ನಯಸೇನ ಮತ್ತು ಬ್ರಹ್ಮಶಿವ ಎಂಬ ಕವಿಗಳು ಕ್ರಮವಾಗಿ 'ಧರ್ಮಾಮೃತವನ್ನೂ' 'ಸಮಯ ಪರೀಕ್ಷೆ' ಯನ್ನೂ ಬರೆದಿದ್ದಾರೆ. ಇವು ಜೈನಮತದ ಸರ್ವೋತ್ಕೃಷ್ಟತೆಯನ್ನುಸಾರುವ ಗ್ರಂಥಗಳು. ಇವುಗಳಲ್ಲಿ ಅನ್ಯಮತಗಳ ಅವಹೇಳನವು ಕಂಡು ಬರುತ್ತದೆ.

ದುರ್ಗಸಿಂಹ.—ಈತನು ಬ್ರಾಹ್ಮಣ ಕವಿ. ಚಾಳುಕ್ಯರ ಚಕ್ರವರ್ತಿಯಾದ ಜಗದೇಕಮಲ್ಲನಲ್ಲಿ ಸಂಧಿ ವಿಗ್ರಹಿಯಾಗಿಯೂ ದಂಡನಾಯಕನಾಗಿಯೂ ಇದ್ದನು. ಸಂಸ್ಕೃತದಲ್ಲಿರುವ 'ಪಂಚತಂತ್ರ' ಎಂಬ ಗ್ರಂಥವನ್ನು ಚಂಪೂ ಶೈಲಿಯಲ್ಲಿ ಕನ್ನಡದಲ್ಲಿ ರಚಿಸಿದ್ದಾನೆ.

೩. ಮೂರನೆಯ ಕಾಲದ ಸ್ಥಿತಿ

ಮೂರನೆಯ ಕಾಲ.—ಮತ ಪ್ರಾಬಲ್ಯದ ಕಾಲ ಅಥವ ದೇಶೀಯ ಪದ್ಧತಿಯ ಕಾಲ. ಇದನ್ನು ಹನ್ನೆರಡನೆಯ ಶತಮಾನದ ಮಧ್ಯಭಾಗದಿಂದ ಹದಿನಾರನೆಯ ಶತಮಾನದ ಪೂರ್ತಿ ಎಂದು ಹೇಳಬಹುದು. ಈ ಕಾಲದಲ್ಲಿ ಎರಡು ಭಾಗಗಳನ್ನು ಮಾಡಿಕೊಳ್ಳಬಹುದು ಹೊಯ್ಸಳರ ಚಕ್ರಾಧಿಪತ್ಯವು ಕೊನೆಗಂಡ ೧೪ನೆಯ ಶತಮಾನದ ಆದಿಭಾಗದವರೆಗೂ ಒಂದು ಕಾಲ. ಈ ಕಾಲದಲ್ಲಿ ಕರ್ಣಾಟಕ ಸಾಹಿತ್ಯದ ಕೇಂದ್ರಸ್ಥಾನವು ದಕ್ಷಿಣದಲ್ಲಿತ್ತು. ೧೪ನೆಯ ಶತಮಾನದ ಆದಿಭಾಗದಿಂದ ಎಂದರೆ ಹೆಚ್ಚು ಕಡಮೆ ವಿಜಯನಗರ ರಾಜ್ಯವು ಸ್ಥಾಪಿತವಾದಂದಿನಿಂದ ೧೬ನೆಯ ಶತಮಾನ ಪೂರ್ತಿ—ಎಂದರೆ ವಿಜಯನಗರ ಚಕ್ರಾಧಿಪತ್ಯವು ಕೊನೆಗಂಡವರೆಗೂ—ಎಡನೆಯ ಕಾಲಭಾಗ. ಈ ಕಾಲದಲ್ಲಿ ಕರ್ಣಾಟಕ ಸಾಹಿತ್ಯದ ಕೇಂದ್ರಸ್ಥಾನವು ಉತ್ತರದಲ್ಲಿತ್ತು.

ಆ ಕಾಲದ ಲಕ್ಷಣಗಳನ್ನು ಈರೀತಿ ಸಂಗ್ರಹಿಸಬಹುದು. ಚಾಳುಕ್ಯ ಚಕ್ರಾಧಿಪತ್ಯವು ಕೊನೆಗಂಡು ಹೊಯ್ಸಳ ಚಕ್ರಾಧಿಪತ್ಯವು ತಲೆದೋರಿತು. ಮಹಮ್ಮದೀಯರು ೧೪ನೆಯ ಶತಮಾನದ ಆದಿಭಾಗದಲ್ಲಿ ದಕ್ಷಿಣ ಹಿಂದೂಸ್ಥಾನಕ್ಕೆ ನುಗ್ಗಿ ಹೊಯ್ಸಳ ಚಕ್ರಾಧಿಪತ್ಯವನ್ನು ಧ್ವಂಸಮಾಡಿದರು. ಇದಾದ ಕೆಲವು ವರ್ಷಗಳೊಳಗಾಗಿ ವಿಜಯನಗರ ಸಾಮ್ರಾಜ್ಯವನ್ನು ವಿದ್ಯಾರಣ್ಯರು ಸ್ಥಾಪಿಸಿದರು. ಈ ಅವಧಿಯಲ್ಲಿ ಅನ್ಯಮತವಾದ ಮಹಮ್ಮದೀಯ ಮತದ ಹಾವಳಿಯನ್ನು ತಡೆಯುವುದು ಅತ್ಯಾವಶ್ಯಕವಾಯಿತು. ಒಂದು ಕಡೆ ಬಸವೇಶ್ವರರು ವೀರಶೈವಮತವನ್ನು ಪುನರುದ್ಧಾರವಾಡಿ ಜನಸಾಮಾನ್ಯದಲ್ಲಿ ಐಕಮತ್ಯವನ್ನುಂಟುಮಾಡಿದರು. ಮಧ್ವಾಚಾರ್ಯರೂ, ದಾಸ ಕೂಟದವರೂ ಭಕ್ತಿಪಂಥವನ್ನು ಹರಡಿ ಜನರಲ್ಲಿ ಮತಾಭಿಮಾನವನ್ನು ತುಂಬಿದರು. ಜೈನಮತವು ಸೌಂದತ್ತಿಯ ರಟ್ಟರಾಜರಲ್ಲಿಯೂ, ಕೊಂಕಣದ ತುಳುವ ರಾಜರಲ್ಲಿಯೂ ಆಶ್ರಯವನ್ನು ಪಡೆಯಿತು.

ಕಾವ್ಯಗಳ ಲಕ್ಷಣ

ಮೇಲೆ ಹೇಳಿದ ಕಾರಣಗಳಿಂದ. ಸಾಹಿತ್ಯ ಸ್ವರೂಪದಲ್ಲಿಯೂ ಮಾರ್ಪಾಟುಗಳಾದುವು. ಇದುವರೆಗೂ ಸಂಸ್ಕೃತಬದ್ಧವಾಗಿ ಪಂಡಿತ

ಜನಕ್ಕೆ ಮಾತ್ರ ಉಪಯೋಗವಾಗಿದ್ದ ಸಾಹಿತ್ಯವು ದೇಶೀಯ ಶೈಲಿಯನ್ನು ಅನುಸರಿಸಿ ಪಾಮರರಿಗೂ ಉಪಯೋಗವಾಗಬೇಕಾಯಿತು. ಕೆಲವು ಸಂದರ್ಭಗಳಲ್ಲಿ ಸಂಸ್ಕೃತವನ್ನು ಉಪಯೋಗಿಸಲೇಬಾರದೆಂಬ ಹಠವೂ ಅಲಂಕಾರಾದಿಗಳನ್ನು ತೀರ ಕಡಮೆ ಮಾಡಬೇಕೆಂಬ ಸಂಕಲ್ಪವೂ ಕಂಡು ಬರುತ್ತವೆ. ಪಾಮರರಿಗೆ ಸುಲಭದಲ್ಲಿ ಅರ್ಥವಾಗುವ ವೀರಶೈವರ ವಚನ ಗ್ರಂಥಗಳೂ ಪುರಾಣಗಳೂ ಹೇರಳವಾಗಿ ರಚಿತವಾದುವು. ಹಿಂದೆ ಇದ್ದ ಚಂಪೂ ಶೈಲಿಯನ್ನು ಬಿಟ್ಟು ಷಟ್ಪದಿ, ಸಾಂಗತ್ಯ, ಹಾಡು ಮುಂತಾದ ರೂಪಗಳಲ್ಲಿ ಕಾವ್ಯಗಳು ರಚಿತವಾಗಲಾರಂಭವಾದುವು. ಹೀಗೆ ನಾವು ಹೇಳುವುದಾದರೂ ೧೪ನೆಯ ಶತಮಾನದವರೆಗೂ ಚಂಪೂ ಕಾವ್ಯಗಳು ತಕ್ಕಮಟ್ಟಿಗೆ ರಚಿತವಾಗಿರುವುವೆಂದೂ ಅಲ್ಲಿಂದಾಚೆಗೆ ಅಲ್ಪಸ್ವಲ್ಪವಾಗಿ ಕಂಡು ಬರುತ್ತವೆಂದೂ ಹೇಳಬೇಕು. ಬ್ರಾಹ್ಮಣ ಕವಿಗಳು ಭಾರತ, ಭಾಗವತ, ರಾಮಾಯಣಗಳನ್ನು ಕನ್ನಡದಲ್ಲಿ ಬರೆದು ಪ್ರಚಾರ ಮಾಡಿದರು.

ಈ ಕಾಲದ ಕೆಲವು ಮುಖ್ಯ ಕವಿಗಳನ್ನೂ ಅವರ ಕಾವ್ಯಗಳನ್ನೂ ಕೆಳಗೆ ವಿವರಿಸಿದೆ :—

ಆ ಕಾಲದ ಕವಿಗಳು

ಹರಿಹರ.—ಈತನು ವೀರಶೈವ ಕವಿ. ಹಂಪೆಯಲ್ಲಿ ಪ್ರಬಲನಾದ ಗುರುವಾಗಿಯೂ ಇದ್ದನು. ಪಂಪಾಶತಕ, ಗಿರಿಜಾಕಲ್ಯಾಣ ಶಿವಗಣದ ರಗಳೆಗಳು, ಮತ್ತು ಮುಡಿಗೆಯ ಅಷ್ಟಕ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲಿ ಶಿವಗಣದ ರಗಳೆಗಳನ್ನು ಬಿಟ್ಟರೆ ಉಳಿದವು ಹಿಂದಿನ ಪಂಡಿತ ಶೈಲಿಯನ್ನು ಅನುಸರಿಸಿವೆ. ಪಂಪಾಶತಕದಲ್ಲಿ ಹಂಪೆಯ ವಿರೂಪಾಕ್ಷನನ್ನು ಸ್ತುತಿಸುವ ವೃತ್ತಗಳಿವೆ. ಮುಡಿಗೆಯ ಅಷ್ಟಕವೂ ವಿರೂಪಾಕ್ಷನ ಸ್ತುತಿರೂಪವಾಗಿದೆ. ಗಿರಿಜಾಕಲ್ಯಾಣವು ಪಾರ್ವತೀ ಪರಮೇಶ್ವರರ ವಿವಾಹ ವರ್ಣನಾರೂಪವಾದುದು. ಇದು ಚಂಪೂ ಮಹಾಕಾವ್ಯ. ಶಿವಗಣದ ರಗಳೆಗಳಲ್ಲಿ ತಮಿಳು ದೇಶದ ಅರುವತ್ತುಮೂರು ಪುರಾತನರಲ್ಲಿ ಕಥೆಗಳೂ, ನೂತನಪುರಾತನರೆನಿಸಿದ, ಬಸವೇಶ್ವರ, ಅಕ್ಕನಾಗಮ್ಮ, ಅಲ್ಲಮ ಮುಂತಾದವರ ಕಥೆಗಳೂ ಇವೆ. ಹರಿಹರನು ಱ, ೞ, ಅಕ್ಷರಗಳ ಪ್ರಯೋಗ ವಿಚಾರದಲ್ಲಿ ಪ್ರತಿಭಟಿಸಿದನು. ಹಳೆಯ ಶೈಲಿಯು ಮುಕ್ತಾಯವಾಗಿ ಹೊಸ ಶೈಲಿಯು ಪ್ರಾರಂಭವಾದುದಕ್ಕೆ ಈತನು ಉದಾಹರಣೆಯಾಗಿದ್ದಾನೆ.

ರಾಘವಾಂಕ.—ಈತನೂ ವೀರಶೈವ ಕವಿ. ಹರಿಹರನ ಶಿಷ್ಯನು. ಹರಿಶ್ಚಂದ್ರ ಕಾವ್ಯ, ಸೋಮನಾಥಕಾವ್ಯ, ಸಿದ್ಧರಾಮ ಪುರಾಣ, ಎಂಬ ಈತನ ಗ್ರಂಥಗಳು ದೊರೆತಿವೆ. ವೀರಭದ್ರ ವಿಜಯ ಮತ್ತು ಹರಿಹರ ಮಹತ್ವ ಎಂಬ ಗ್ರಂಥಗಳು ದೊರೆತಿಲ್ಲ. ಈತನು ವಾರ್ಧಕ ಷಟ್ಪದಿಯಲ್ಲಿ ಕಾವ್ಯಗಳನ್ನು ಪ್ರೌಢವಾಗಿ ರಚಿಸಿದ್ದಾನೆ. ಹರಿಶ್ಚಂದ್ರ ಕಾವ್ಯದಲ್ಲಿ ಇಕ್ಷ್ವಾಕು ವಂಶದ ಹರಿಶ್ಚಂದ್ರ ಮಹಾರಾಯನ ಕಥೆಯು ನಿರೂಪಿತವಾಗಿದೆ. ಹರಿಶ್ಚಂದ್ರನು ಶಿವಭಕ್ತನೆಂದು ವರ್ಣಿತವಾಗಿದೆ. ಸೋಮನಾಥ ಕಾವ್ಯದಲ್ಲಿ ಆದಯ್ಯನೆಂಬ ಪವಾಡಪುರುಷನು ಪುಲಿಗೆರೆಯಲ್ಲಿ ಜೈನರನ್ನು ಭಂಗಿಸಿ ಸೋಮನಾಥಲಿಂಗವನ್ನು ಪ್ರತಿಷ್ಠಿಸಿದ ಕಥೆಯಿದೆ. ಸಿದ್ಧರಾಮ ಪುರಾಣದಲ್ಲಿ ಬಸವೇಶ್ವರನ ಸಮಕಾಲೀನನಾದ ಸಿದ್ಧರಾಮನೆಂಬ ಪವಾಡ ಪುರುಷನ ಚರಿತ್ರೆಯಿದೆ. ಸಿದ್ಧರಾಮನು ಷೋಲಾಪುರದವನು. ಅಲ್ಲಿ ಒಂದು ದೊಡ್ಡಕೆರೆಯನ್ನು ಕಟ್ಟಿಸಿ ಅದರ ಮಧ್ಯದಲ್ಲಿ ಸಮಾಧಿಯನ್ನು ಹೊಂದಿದನು. ಷೋಲಾಪುರದಲ್ಲಿ ಸಿದ್ಧರಾಮೇಶ್ವರ ದೇವಸ್ಥಾನವಿದೆ.

ನೇಮಿಚಂದ್ರ.—ಈತನು ಜೈನಕವಿ. ಲೀಲಾವತಿ ಮತ್ತು ಅರ್ಧನೇಮಿ ಪುರಾಣಗಳನ್ನು ಬರೆದಿದ್ದಾನೆ. ಈತನು ಒಳ್ಳೆಯ ಪ್ರೌಢಕವಿ.

ಪಾಲ್ಕುರಿಕೆ ಸೋಮನಾಥ.—ಈತನು ವೀರಶೈವ ಕವಿ. ಕನ್ನಡದಲ್ಲಿ ಪ್ರಸಿದ್ಧವಾಗಿರುವ ಸೋಮೇಶ್ವರ ಶತಕವನ್ನು ರಚಿಸಿದವನು. ತೆಲುಗಿನಲ್ಲಿ ಬಸವಪುರಾಣವನ್ನು ಬರೆದಿದ್ದಾನೆ. ಸಂಸ್ಕೃತದಲ್ಲಿ ಬಸವೇಶ್ವರನ ಸ್ತೋತ್ರ ರೂಪವಾದ ಪದ್ಯಗಳನ್ನು ಬರೆದಿರುವನು.

ರುದ್ರಭಟ್ಟ.—ಈತನು ಬ್ರಾಹ್ಮಣಕವಿ. ಎರಡನೆಯ ವೀರಬಲ್ಲಾಳನ ಮಂತ್ರಿಯಾದ ಚಂದ್ರಮೌಳಿಯ ಆಶ್ರಯದಲ್ಲಿದ್ದವನು. ಜಗನ್ನಾಥ ವಿಜಯವೆಂಬ ಕಾವ್ಯವನ್ನು ಬರೆದಿದ್ದಾನೆ. ಇದು ಭಾಗವತದ ಕಥೆ. ಶ್ರೀ ಕೃಷ್ಣ ಚರಿತ್ರೆ. ಚಂಪೂಶೈಲಿಯಲ್ಲಿ ರಚಿತವಾಗಿದೆ.

ಜನ್ನ.—ಈತನು ಜೈನಕವಿ. ಎರಡನೆಯ ವೀರ ಬಲ್ಲಾಳನ ಆಸ್ಥಾನದಲ್ಲಿ ಮಹಾಕವಿಯಾಗಿದ್ದನು. ಈತನು ಅನಂತನಾಥ ಪುರಾಣವನ್ನೂ, ಯಶೋಧರ ಚರಿತ್ರೆಯನ್ನೂ ಬರೆದಿದ್ದಾನೆ; ಕೆಲವು ಶಾಸನಗಳನ್ನೂ ಬರೆದಿದ್ದಾನೆ. ಅನಂತನಾಥ ಪುರಾಣವು ಹದಿನಾಲ್ಕನೆಯ ತೀರ್ಥಂಕರನಾದ ಅನಂತನಾಥನ ಚರಿತ್ರೆಯಾಗಿದೆ. ಈ ಕಾವ್ಯದಲ್ಲಿ ತಾನು ಹೆಚ್ಚಾಗಿ ಅಲಂ

ಕಾರಾದಿಗಳನ್ನು ಉಪಯೋಗಿಸುವುದಿಲ್ಲವೆಂದು ಕವಿಯು ಹೇಳಿ ಅದರಂತೆ ಬರೆದಿದ್ದಾನೆ. ಇದು ಚಂಪೂ ಶೈಲಿಯಲ್ಲಿದೆ. ಯಶೋಧರ ಚರಿತ್ರೆಯು ಜೈನಮತದ ಸರ್ವೋತ್ಕೃಷ್ಟತೆಯನ್ನೂ "ಅಹಿಂಸಾಪರಮೋಧರ್ಮಃ" ಎಂಬುದನ್ನು ಸಾರಿದ ಇಬ್ಬರು ರಾಜಕುಮಾರರ ಚರಿತ್ರೆಯನ್ನೂ ತಿಳಿಸುತ್ತದೆ. ಇದರಲ್ಲಿ ಗದ್ಯವಿಲ್ಲ. ಒಂದೆರಡು ವೃತ್ತಗಳನ್ನು ಬಿಟ್ಟರೆ ಎಲ್ಲವೂ ಕಂದ ಪದ್ಯಗಳಾಗಿಯೇ ಇವೆ. ಜನ್ನನಿಗೆ "ಕವಿ ಚಕ್ರವರ್ತಿ" ಎಂಬ ಬಿರುದನ್ನು ಬಲ್ಲಾಳ ಚಕ್ರವರ್ತಿಯು ಕೊಟ್ಟನು.

ಆಂಡಯ್ಯ.—ಈತನು ಜೈನಕವಿ. ಯಾವ ರಾಜನ ಆಶ್ರಯದಲ್ಲಿಯೂ ಇದ್ದಂತೆ ಕಾಣುವುದಿಲ್ಲ. 'ಕಬ್ಬಿಗರ ಕಾವ' ಎಂಬ ಗ್ರಂಥವನ್ನು ಬರೆದಿದ್ದಾನೆ. ಸಂಸ್ಕೃತ ಪದಗಳ ಸಹಾಯವಿಲ್ಲದೆ ಕನ್ನಡದಲ್ಲಿ ಕಾವ್ಯಗಳನ್ನು ಬರೆಯಲಾಗುವುದಿಲ್ಲವೆಂದು ಕೆಲವರು ಹೇಳಿದ ಹಾಗೂ, ಬರೆಯಲಾಗುವುದೆಂದು ತೋರಿಸುವುದಕ್ಕಾಗಿ ಸಂಸ್ಕೃತದ ಒಂದು ಪದವೂ ಇಲ್ಲದೆ ತಾನು ಈ ಕಾವ್ಯವನ್ನು ಬರೆದಿರುವುದಾಗಿಯೂ ಕವಿಯು ಹೇಳುತ್ತಾನೆ. ಆದುದರಿಂದಲೇ, 'ಕಬ್ಬಿಗರ ಕಾವ' ಎಂದರೆ ಕನ್ನಡ ಕವಿಗಳ ಮಾನವನ್ನು ರಕ್ಷಿಸುವುದು ಎಂಬ ಹೆಸರು ಕಾವ್ಯಕ್ಕೆ ಬಂದಿದೆ. ಆಂಡಯ್ಯನು, ತತ್ಸಮಪದಗಳಿಗೆ ಬದಲು ತದ್ಭವಗಳನ್ನು ಉಪಯೋಗಿಸಿರುವನು. ಮನ್ಮಥನಿಗೂ, ಈಶ್ವರನಿಗೂ ನಡೆದ ಯುದ್ಧವು ಇದರಲ್ಲಿ ವರ್ಣಿತವಾಗಿದೆ.

ಕುಮುದೇಂದು.—ಈತನು ಜೈನಕವಿ. ಜೈನ ರಾಮಾಯಣವನ್ನು ರಚಿಸಿರುತ್ತಾನೆ. ಈ ಕಾವ್ಯವು ವಿವಿಧವಾದ ಷಟ್ಪದಿಗಳಲ್ಲೂ, ರಗಳೆಗಳಲ್ಲೂ ರಚಿತವಾಗಿದೆ.

ಭೀಮಕವಿ.—ಈತನು ವೀರಶೈವ ಕವಿ. ಬಸವ ಪುರಾಣವನ್ನು ಬರೆದಿದ್ದಾನೆ. ಹಿಂದೆ ತೆಲುಗಿನಲ್ಲಿ ಪಾಲ್ಕುರಿಕೆ ಸೋಮಾರಾಧ್ಯನು ಬಸವ ಪುರಾಣವನ್ನು ಬರೆದನು. ಅದರ ಆಧಾರದಿಂದ ತನ್ನ ಗ್ರಂಥವನ್ನು ಬರೆದುದಾಗಿ ಕವಿಯ ಹೇಳುತ್ತಾನೆ. ಈ ಗ್ರಂಥವು ಭಾಮಿನೀ ಷಟ್ಪದಿಯಲ್ಲಿದೆ. ವೀರಶೈವ ಮತವನ್ನು ಪುನರುದ್ಧಾರಮಾಡಿದ ಕಲ್ಯಾಣದ ಬಸವೇಶ್ವರನ ಚರಿತ್ರೆಯೂ, ಆತನು ಮಾಡಿದ ಪವಾಡಗಳೂ ಇದರಲ್ಲಿ ವರ್ಣಿತವಾಗಿವೆ.

ಕುಮಾರ ವ್ಯಾಸ.—ಈತನು ಬ್ರಾಹ್ಮಣಕವಿ. ಈತನ ನಿಜವಾದ ಹೆಸರು ನಾರಣಪ್ಪ. 'ಕುಮಾರ ವ್ಯಾಸ' ಎಂಬುದು ಬಿರುದು. ಗದುಗಿನ

ವೀರನಾರಾಯಣಸ್ವಾಮಿಯೇ ಈತನ ಉಪಾಸನಾ ದೇವರು. ಮಹಾಭಾರತದ ದಶಪರ್ವಗಳನ್ನು ಈತನು ಭಾಮಿನೀ ಷಟ್ಪದಿಯಲ್ಲಿ ಬರೆದಿದ್ದಾನೆ. ಈ ಗ್ರಂಥವು ಕರ್ಣಾಟಕ ಸಾಹಿತ್ಯದಲ್ಲಿ ಬಹಳ ಉತ್ತಮವಾದ ಸ್ಥಾನವನ್ನು ಪಡೆದಿದೆ. ಈ ಕಾವ್ಯವು ಬಹಳ ರಸವತ್ತಾಗಿಯೂ, ಮನೋಹರವಾಗಿಯೂ, ಪಂಡಿತ ಪಾಮರ ರಂಜಕವಾಗಿಯೂ ಇರುವುದು.

ಕುಮಾರ ವಾಲ್ಮೀಕಿ.—ಈತನು ಬ್ರಾಹ್ಮಣಕವಿ. ಈತನ ನಿಜವಾದ ಹೆಸರು ನರಹರಿ. 'ಕುಮಾರ ವಾಲ್ಮೀಕಿ' ಎಂಬುದು ಬಿರುದು. ಷೋಲಾಪುರ ಡಿಸ್ಟ್ರಿಕ್ಟಿನ ತೊರವೆಯೆಂಬ ಗ್ರಾಮವೇ ಕವಿಯ ಊರು. ಅಲ್ಲಿಯ ಲಕ್ಷ್ಮೀನರಸಿಂಹ ಸ್ವಾಮಿಯು ಕವಿಯ ಉಪಾಸನಾ ದೇವರು. ಈತನು ರಾಮಾಯಣವನ್ನು ಭಾಮಿನೀ ಷಟ್ಪದಿಯಲ್ಲಿ ಮನೋಹರವಾಗಿ ರಚಿಸಿದ್ದಾನೆ.

ವಿರೂಪಾಕ್ಷ ಪಂಡಿತ.—ಈತನು ವೀರಶೈವ ಕವಿ. ಚನ್ನಬಸವಪುರಾಣವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿರುತ್ತಾನೆ. ಬಸವೇಶ್ವರನ ಸೋದರಳಿಯನಾದ ಚನ್ನಬಸವನ ವೃತ್ತಾಂತವೂ, ಆ ಚನ್ನಬಸವನು ಸಿದ್ಧರಾಮನಿಗೆ ಮಾಡಿದ ಉಪದೇಶಗಳೂ ಈ ಗ್ರಂಥದಲ್ಲಿವೆ. ವೀರಶೈವ ಮತದ ವಿಚಾರಗಳನೇಕವು ಈ ಕಾವ್ಯದಿಂದ ತಿಳಿಯುವುವು.

ಈಗ ಮೇಲೆ ಹೇಳಿದ ಕವಿಗಳಲ್ಲದೆ ಜೈನ ಪುರಾಣಗಳನ್ನು ಬರೆದ ಇತರರೂ ಈ ಕಾಲದಲ್ಲಿದ್ದರು. ವಚನ ಗ್ರಂಥಗಳನ್ನು ರಚಿಸಿದ ಅನೇಕ ವೀರಶೈವ ವಚನಕಾರರೂ ಜೀವಿಸಿದ್ದರು. ಇದೇ ಕಾಲದಲ್ಲಿ ಬಸವ ಪುರಾಣ, ಚೆನ್ನಬಸವ ಪುರಾಣಗಳಲ್ಲದೆ ಇತರ ವೀರಶೈವ ಪುರಾಣಗಳೂ ರಚಿತವಾಗಿವೆ. ಜೈನಪುರಾಣ ಕರ್ತೃಗಳಲ್ಲಿ ಚಂದ್ರಪ್ರಭ ಪುರಾಣವನ್ನು ಬರೆದ ಅಗ್ಗಳ, ವರ್ಧಮಾನ ಪುರಾಣವನ್ನು ಬರೆದ ಆಚಣ್ಣ, ಪಾರ್ಶ್ವನಾಥ ಪುರಾಣವನ್ನು ಬರೆದ ಪಾರ್ಶ್ವಪಂಡಿತ, ಪುಷ್ಪದಂತ ಪುರಾಣವನ್ನು ಬರೆದ ಎರಡನೆಯ ಗುಣವರ್ಮ, ಶಾಂತೀಶ್ವರ ಪುರಾಣವನ್ನು ಬರೆದ ಕಮಲಭವ, ನೇಮಿನಾಥ ಪುರಾಣವನ್ನು ಬರೆದ ಮಹಾಬಲ ಕವಿ, ಧರ್ಮನಾಥ ಪುರಾಣವನ್ನು ಬರೆದ ಮಧುರ, ಇವರ ಹೆಸರುಗಳನ್ನು ಹೇಳಬಹುದು. ಇತರ ವೀರಶೈವ ಕವಿಗಳಲ್ಲಿ ಪದ್ಮರಾಜ ಪುರಾಣ ಕರ್ತೃವಾದ ಪದ್ಮಣಾಂಕ, ಭಾವಚಿಂತಾರತ್ನ, ವೀರಶೈವಾಮೃತ ಪುರಾಣಗಳ ಕರ್ತೃವಾದ ಮಲ್ಲ

ಣಾರ್ಯ, ಪ್ರಭುಲಿಂಗ ಲೀಲೆಯ ಕರ್ತೃವಾದ ಚಾಮರಸ, ಮಲಬಸವ ಚರಿತ್ರವನ್ನು ಬರೆದ ಸಿಂಗಿರಾಜ, ಎಂಬವರನ್ನು ಹೇಳಬಹುದು.

ಈ ಕಾಲದ ದಾಸಪಂಥದವರಲ್ಲಿ ಇಬ್ಬರ ಹೆಸರುಗಳನ್ನು ಹೇಳಬಹುದು; ಪುರಂದರದಾಸ ಮತ್ತು ಕನಕದಾಸ. ಇವರಿಬ್ಬರೂ ವಿಷ್ಣು ಭಕ್ತರು. ಪುರಂದರದಾಸರು ಪಂಡರಪುರದಲ್ಲಿದ್ದು ವೈರಾಗ್ಯವನ್ನು ತಾಳಿ ವಿಠಲದೇವರ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಕನಕದಾಸರು ಕಾಗಿನೆಲೆಯ ಕೇಶವಸ್ವಾಮಿಯ ಅಂಕಿತದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಇದಲ್ಲದೆ ಮೋಹನ ತರಂಗಿಣಿ, ರಾಮಧ್ಯಾನದ ಚರಿತ್ರೆ, ನಳಚರಿತ್ರೆ ಎಂಬ ಗ್ರಂಥಗಳನ್ನು ಬರೆದಿರುವರು.

೪. ನಾಲ್ಕನೆಯ ಕಾಲದ ಸ್ಥಿತಿ

ನಾಲ್ಕನೆಯ ಕಾಲ.—ಈ ಕಾಲವನ್ನು ಕ್ರಿ. ಶ. ೧೭ನೆಯ ಶತಮಾನದಿಂದ ೧೯ನೆಯ ಶತಮಾನದ ಮಧ್ಯಭಾಗದವರೆಗೆ ಅಥವ ೧೮೮೦ರ ವರೆಗೆಂದು ಹೇಳಬಹುದು. ಈ ಕಾಲದ ಲಕ್ಷಣಗಳನ್ನು ಈ ರೀತಿ ಸಂಗ್ರಹಿಸಬಹುದು. ತಾಳೀಕೋಟೆಯ ಯುದ್ಧಾನಂತರ ವಿಜಯನಗರ ಸಾಮ್ರಾಜ್ಯವು ಒಡೆದುಹೋಯಿತಷ್ಟೆ. ಆಗ ಮೈಸೂರಿನಲ್ಲಿದ್ದ ಯದುವಂಶದ ದೊರೆಗಳು ಸ್ವತಂತ್ರರಾಗಲು ಹವಣಿಸಿದ್ದರು. ಕರ್ಣಾಟಕದಲ್ಲೆಲ್ಲ ಈ ಯದುವಂಶದ ರಾಜರೇ ಪ್ರಬಲರಾಗಿ ರಾಜ್ಯವಿಸ್ತಾರ ಮಾಡುತ್ತ ಬಂದರು. ಸುಮಾರು ಕ್ರಿ. ಶ. ೧೬೧೦ ರಿಂದ ಇವರ ಪ್ರಾಬಲ್ಯದ ಕಾಲವೆಂದು ಹೇಳಬೇಕು. ಕನ್ನಡ ಸಾಹಿತ್ಯದ ಕೇಂದ್ರ ಸ್ಥಾನವು ದಕ್ಷಿಣಕ್ಕೆ ಬಂತು. ಬೀಜಾಪುರದ ಸುಲ್ತಾನರು ಪ್ರಬಲರಾಗಿ ಆಗಿಂದಾಗ್ಯೆ ದಂಡಯಾತ್ರೆಗಳನ್ನು ಮಾಡುತ್ತ ಸುತ್ತಮುತ್ತಲಿನ ಪಾಳೆಯಗಾರರನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತಿದ್ದರು. ಆದುದರಿಂದ, ಒಂದು ಕಡೆ ಮೈಸೂರಿನವರ ಪ್ರಾಬಲ್ಯ ಇನ್ನೊಂದು ಕಡೆ ಬೀಜಾಪುರದವರ ಪ್ರಾಬಲ್ಯ ಕಂಡುಬರುತ್ತದೆ. ಮೈಸೂರು ದೊರೆಗಳಲ್ಲಿ ಕೆಲವರು ಪ್ರಖ್ಯಾತರಾಗಿಯೂ, ಕವಿಗಳಿಗೆ ಪೋಷಕರಾಗಿಯೂ ಇದ್ದರು. ಈ ದೊರೆಗಳ ಬಳಿಯಲ್ಲಿ ಶ್ರೀ ವೈಷ್ಣವ ಮಂತ್ರಿಗಳು ಸೇರಿ, ರಾಜರಿಗೆ ವೈಷ್ಣವ ಮತಾಭಿಮಾನವನ್ನುಂಟುಮಾಡಿದರು. ಕ್ರಿ. ಶ. ೧೭೬೦ ರಿಂದ ಮೈಸೂರು ರಾಜ್ಯವು ಹೈದರ್ ಮತ್ತು ಟೀಪು

ಸುಲ್ತಾನರ ಪಾಲಾಯಿತಷ್ಟೆ. ಪುನಃ ರಾಜ್ಯವು ಯದುವಂಶದ ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ದೊರೆತಾಗ ಸಾಹಿತ್ಯಕ್ಕೆ ಒಳ್ಳೆಯ ಬೆಂಬಲ ವುಂಟಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಃ ವಿದ್ಯಾವಂತರೂ ಕವಿಗಳೂ ಆಗಿದ್ದರು. ಆದುದರಿಂದ, ಆಗ ಸಾಹಿತ್ಯವು ಹೆಚ್ಚಾಗಿ ಬೆಳೆಯು ವುದಕ್ಕೆ ಅನುಕೂಲಿಸಿತು.

ಕಾವ್ಯಲಕ್ಷಣಗಳು.

ಈ ಕಾಲದಲ್ಲಿ ಕಾವ್ಯ ಲಕ್ಷಣಗಳನ್ನು ನೋಡಿದರೆ ಕೆಲವಂಶಗಳು ಗೋಚರವಾಗುತ್ತವೆ. ವೈಷ್ಣವ ಮತ ಪ್ರಾಬಲ್ಯ ಸೂಚಕವಾದ ಗ್ರಂಥ ಗಳು ಹೊರಬಿದ್ದಿರುವುದು; ಪ್ರಖ್ಯಾತರಾದ ರಾಜರನ್ನು ಕುರಿತು ಬರೆದ ಐತಿಹಾಸಿಕ ಗ್ರಂಥಗಳು; ಜನಸಾಮಾನ್ಯಕ್ಕೆ ರುಚಿಸುವಂತಹ ಹಾಡುಗಳು, ಯಕ್ಷಗಾನ ಗ್ರಂಥಗಳ ರಚನೆ. ಇವುಗಳ ಜೊತೆಗೆ ಗದ್ಯವು ಹೆಚ್ಚು ಹೆಚ್ಚಾಗಿ ಉಪಯೋಗಕ್ಕೆ ಬಂದು ಗದ್ಯಗ್ರಂಥಗಳು ಅನೇಕವಾಗಿ ಹೊರಬಿದ್ದಿರು ವುದು.

ಈ ಕಾಲದ ಕೆಲವು ಮುಖ್ಯ ಕವಿಗಳನ್ನೂ ಅವರ ಗ್ರಂಥಗಳನ್ನೂ ಕೆಳಗೆ ವಿವರಿಸಿದೆ :—

ಚಾಮರಾಜ ಒಡೆಯರ್.—ಇವರು ಮೈಸೂರು ದೊರೆಗಳಲ್ಲಿ ಒಬ್ಬರು. ವಾಲ್ಮೀಕಿ ರಾಮಾಯಣವನ್ನು ಚಾಮರಾಜೋಕ್ತಿವಿಳಾಸ ಎಂಬ ಹೆಸರಿ ನಿಂದ ಗದ್ಯದಲ್ಲಿ ಬರೆದಿದ್ದಾರೆ.

ಸಿದ್ಧನಂಜೇಶ.—ಈತನು ವೀರಶೈವ ಕವಿ. ರಾಘವಾಂಕ ಕಾವ್ಯ ವನ್ನೂ, ಗುರುರಾಜ ಚರಿತ್ರವನ್ನೂ ಬರೆದಿದ್ದಾನೆ. ರಾಘವಾಂಕ ಕಾವ ದಲ್ಲಿ ಹರೀಶ್ವರನ ಸೋದರಳಿಯನಾದ ರಾಘವಾಂಕ ಕವಿಯ ಚರಿತ್ರೆಯು ನಿರೂಪಿತವಾಗಿದೆ. ಗುರುರಾಜ ಚರಿತ್ರದಲ್ಲಿ ವೀರಶೈವ ಪುರಾತನರ ಕಥೆ ಗಳೂ, ಈಶ್ವರನ ಪಂಚವಿಂಶತಿ ಲೀಲೆಗಳೂ ಇವೆ. ಈ ಎರಡು ಗ್ರಂಥ ಗಳೂ ವಾರ್ಧಕ ಷಟ್ಪದಿಯಲ್ಲಿವೆ.

ಷಡಕ್ಷರಿ.—ಈತನು ವೀರಶೈವ ಕವಿ. ಚಿಕ್ಕದೇವರಾಜೊಡೆಯರ ಕಾಲದಲ್ಲಿದ್ದವನು. ಅಲ್ಲಿ ಮಂತ್ರಿಯಾಗಿಯೂ ಇದ್ದಂತೆ ತೋರುತ್ತದೆ. ಮೊದಲು ಮಳವಳ್ಳಿಯ ತಾಲ್ಲೂಕಿನ ದನುಗೂರಲ್ಲಿ ಇದ್ದು ಕಡೆಗೆ ಎಳಂದೂ ರಲ್ಲಿ ನೆಲಸಿದಂತೆ ಕಾಣುವುದು. ಈತನು ರಾಜಶೇಖರ ವಿಳಾಸ, ವೃಷ

ಭೇಂದ್ರ ವಿಜಯ ಮತ್ತು ಶಬರಶಂಕರ ವಿಲಾಸ, ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇವುಗಳಲ್ಲದೆ ಶಿವಾಧಿಕ್ಯ, ಭಕ್ತಾಧಿಕ್ಯ, ಕವಿಕರ್ಣರಸಾಯನ, ಎಂಬ ಸಂಸ್ಕೃತ ಗ್ರಂಥಗಳನ್ನೂ ವೀರಭದ್ರ ದಂಡಕ ಮುಂತಾದ ಸ್ತೋತ್ರ ಗ್ರಂಥಗಳನ್ನೂ ಬರೆದಿದ್ದಾನೆ. ಈತನ ರಾಜಶೇಖರ ವಿಳಾಸವು ಪ್ರಸಿದ್ಧ ವಾದ ಚಂಪೂಕಾವ್ಯ. ಸತ್ಯೇಂದ್ರ ಚೋಳನ ಮಗನಾದ ರಾಜಶೇಖರ ನೆಂಬ ಶಿವಭಕ್ತನ ಚರಿತ್ರವೂ, ಪಂಚಾಕ್ಷರೀ ಮಹಾತ್ಮ್ಯವೂ, ವರ್ಣಿತವಾ ಗಿವೆ. ವೃಷಭೇಂದ್ರ ವಿಜಯವು ಬಸವೇಶ್ವರನ ಚರಿತ್ರೆಯಾಗಿದೆ. ಶಬರ ಶಂಕರ ವಿಳಾಸದಲ್ಲಿ ಅರ್ಜುನನು ತಪಸ್ಸುಮಾಡಿ ಪಾಶುಪತಾಸ್ತ್ರವನ್ನು ಪಡೆದ ಕಥೆಯು ಹೇಳಿದೆ. ಇವುಗಳೆಲ್ಲ ಚಂಪೂ ಶೈಲಿಯಲ್ಲಿವೆ.

ಚಿಕ್ಕುಪಾಧ್ಯಾಯ.—ಈತನು ಶ್ರೀ ವೈಷ್ಣವ ಕವಿ. ಚಿಕ್ಕದೇವರಾಜ ಒಡೆಯರಿಗೆ ಉಪಾಧ್ಯಾಯನಾಗಿಯೂ ಇದ್ದನು. ಈತನು ಪದ್ಯ ಗದ್ಯ ಗ್ರಂಥಗಳನ್ನು ಸುಮಾರು ಮೂವತ್ತರ ಮೇಲೆ ಬರೆದಿದ್ದಾನೆ. ವಿಷ್ಣು ಪುರಾಣವನ್ನು ಕನ್ನಡದಲ್ಲಿ ಗದ್ಯದಲ್ಲಿಯೂ ಬರೆದಿರುವನು.

ಚಿಕ್ಕ ದೇವರಾಜ ಒಡೆಯರು.—ಇವರು ಮೈಸೂರು ದೊರೆಗಳಲ್ಲಿ ಬಹಳ ಪ್ರಖ್ಯಾತರು. ಚಿಕ್ಕದೇವರಾಜ ಬಿನ್ನಪ, ಭಾಗವತ, ಭಾರತ, ಶೇಷಧರ್ಮ, ಗೀತ ಗೋಪಾಲ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಕೆಲವು ಗದ್ಯ ಗ್ರಂಥಗಳು. ಕೆಲವು ಪದ್ಯ ಗ್ರಂಥಗಳು.

ಹೊನ್ನಮ್ಮ.—ಈಕೆ ಚಿಕ್ಕದೇವರಾಜ ಒಡೆಯರ ಕಾಲದಲ್ಲಿದ್ದವಳು. ಚಿಕ್ಕುಪಾಧ್ಯಾಯನ ಶಿಷ್ಯಳು. ಸಂಚಿಯ ಹೊನ್ನಮ್ಮ ಎಂಬುದಾಗಿ ಹೆಸ ರಿದೆ. ಅಂತಃಪುರದಲ್ಲಿ ಚಾಕರಿಯಲ್ಲಿದ್ದಳು. 'ಹದಿಬದೆಯ ಧರ್ಮ' ಎಂಬುದಾಗಿ ಸಾಂಗತ್ಯದ ಗ್ರಂಥವನ್ನು ರಚಿಸಿದ್ದಾಳೆ.

ಲಕ್ಷ್ಮೀಶ.—ಈತನು ಬ್ರಾಹ್ಮಣ ಕವಿ. ಕೆಲವರು ಈತನನ್ನು ಶ್ರೀ ವೈಷ್ಣವನೆಂದೂ, ಮತ್ತೆ ಕೆಲವರು ಭಾಗವತ ಸಂಪ್ರದಾಯದ ಸ್ಮಾರ್ತ ಬ್ರಾಹ್ಮಣನೆಂದೂ ಹೇಳುತ್ತಾರೆ. ದೊಡ್ಡ ಬಾಣಾವರದ ಬಳಿಯಿರುವ ದೇವನೂರು ಈತನ ಸ್ಥಳವೆಂದು ಕೆಲವರು ಅಭಿಪ್ರಾಯಪಡುವರು. ಈತನು ಕನ್ನಡ ಜೈಮಿನಿ ಭಾರತವನ್ನು ವಾರ್ಧಕ ಷಟ್ಪದಿಯಲ್ಲಿ ಬರೆದಿ ದ್ದಾನೆ. ಭಾರತ ಯುದ್ಧಾನಂತರ ಧರ್ಮರಾಯನು ಅಶ್ವಮೇಧ ಯಾಗ ಮಾಡಿದ ಕಥೆಯು ಇದರಲ್ಲಿ ಹೃದಯಂಗಮವಾಗಿಯೂ, ರಸವತ್ತಾಗಿಯೂ

ವರ್ಣಿತವಾಗಿದೆ. ಈ ಗ್ರಂಥವು ಪಂಡಿತ ಪಾಮರ ರಂಜಕವಾಗಿರುವುದು.

ಈ ಕಾಲದಲ್ಲಿ ಹುಟ್ಟಿದ ಕೆಲವು ಐತಿಹಾಸಿಕ ಗ್ರಂಥಗಳನ್ನು ಹೇಳಬಹುದು.

ಗೋವಿಂದ ವೈದ್ಯನು ಕಂಠೀರವ ನರಸರಾಜ ವಿಜಯವನ್ನು ಸಾಂಗತ್ಯದಲ್ಲಿ ಬರೆದಿರುವನು. ಕಂಠೀರವ ನರಸರಾಜ ಒಡೆಯರು ಮೈಸೂರು ದೊರೆಗಳಲ್ಲಿ ಬಹಳ ಪ್ರಖ್ಯಾತರು. ಇವರು ತಿರುಚನಾಪಳ್ಳಿಯ ಜಟ್ಟಿಯನ್ನು ಗೆದ್ದದ್ದು, ಬೀಜಾಪುರದ ರಣದುಲ್ಲಾಖಾನನನ್ನು ಸೋಲಿಸಿದ್ದು, ಟಂಕಸಾಲೆಯನ್ನು ಸ್ಥಾಪಿಸಿದ್ದು, ಅನೇಕ ಪಾಳೆಯಗಾರರನ್ನು ಗೆದ್ದದ್ದು, ಇವೇ ಮುಂತಾದ ಚಿರಸ್ಮರಣೀಯವಾದ ಕಾರ್ಯಗಳಿಂದ ಪ್ರಜೆಗಳ ಭಕ್ತಿ ವಿಶ್ವಾಸಗಳಿಗೆ ಪಾತ್ರರಾದರು. ಕವಿಯು ಇವರ ಸಾಹಸಕಾರ್ಯಗಳನ್ನು ವರ್ಣಿಸಿದ್ದಾನೆ. ಚಿಕ್ಕದೇವರಾಜ ಯಶೋಭೂಷಣ ಮತ್ತು ಚಿಕ್ಕದೇವರಾಜ ವಂಶಾವಳಿಯನ್ನು ತಿರುಮಲಯ್ಯಂಗಾರ್ಯನು ರಚಿಸಿರುವನು. ಪುಟ್ಟಯ್ಯನು ಮೈಸೂರು ಅರಸುಗಳ ಪೂರ್ವಾಭ್ಯುದಯವನ್ನು ಬರೆದಿದ್ದಾನೆ. ಲಿಂಗಕವಿಯು ಕೆಳದೀನೃಪ ವಿಜಯವನ್ನು ಬರೆದಿದ್ದಾನೆ. ಕೆಳದೀ ಅರಸರ ವಂಶಾವಳಿಯನ್ನು ಈ ಗ್ರಂಥವು ಸ್ವಾರಸ್ಯವಾಗಿ ತಿಳಿಸುತ್ತದೆ.

ಸರ್ವಜ್ಞ.—ಈತನು ವೀರಶೈವ ಕವಿ. ಸರ್ವಜ್ಞ ಮೂರ್ತಿಯ ವಚನಗಳು ಎಂಬ ತ್ರಿಪದಿಯ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ನೀತಿಯ ವಿಚಾರವಾಗಿಯೂ, ನಾನಾಧರ್ಮಗಳ ವಿಚಾರವಾಗಿಯೂ ಪದ್ಯಗಳಿವೆ. ಇವುಗಳಲ್ಲದೆ ಜ್ಯೋತಿಷ, ಕಾಲಜ್ಞಾನದ ವಚನಗಳೂ ಇವೆ. ಈತನು ನಿದಾರ್ಕ್ಷಿಣ್ಯವಾಗಿಯೂ, ಮನೋಹರವಾಗಿಯೂ ವಿಷಯಗಳನ್ನು ತಿಳಿಸಿದ್ದಾನೆ.

ಮುಮ್ಮಡಿ ಕೃಷ್ಣರಾಜ ಒಡೆಯರ್.—ಬ್ರಿಟಿಷರು ಟೀಪುಸುಲ್ತಾನನನ್ನು ಸಂಹಾರ ಮಾಡಿದಮೇಲೆ ರಾಜ್ಯವು ಈ ಯದುವಂಶದ ದೊರೆಗಳಿಗೆ ಬಂತು. ಇವರು, ಈಗಿನ ದೊರೆಗಳಾದ ನಾಲ್ವಡಿ ಕೃಷ್ಣರಾಜಒಡೆಯರ ತಾತಂದಿರು. ಶಾಕುಂತಲ ನಾಟಕದ ನವೀನಟೀಕೆ, ವತ್ಸರಾಜಕಥೆ ಮುಂತಾದ ಗದ್ಯಗ್ರಂಥಗಳನ್ನು ಬರೆದಿದ್ದಾರೆ.

ಕೆಂಪುನಾರಾಯಣ.—ಈತನು ಬ್ರಾಹ್ಮಣ ಕವಿ. ಮುದ್ರಾ ಮಂಜೂಷವೆಂಬ ಗದ್ಯಗ್ರಂಥವನ್ನು ರಚಿಸಿದ್ದಾನೆ. ಚಾಣಕ್ಯನು ಚಂದ್ರಗುಪ್ತ

ಮೌರ್ಯನ ಪಕ್ಷವನ್ನು ವಹಿಸಿ ನವನಂದರನ್ನು ಧ್ವಂಸಮಾಡಿದ ಕಥೆಯು ಇದರಲ್ಲಿ ಬಹಳ ಚೆನ್ನಾಗಿ ವರ್ಣಿತವಾಗಿದೆ.

ಈಗಿನ ಕಾಲದಲ್ಲಿ ಕಳಲೆ ನಂಜರಾಜ ಮತ್ತು ಶಾಲ್ಯದ ಕೃಷ್ಣರಾಜ ಎಂಬುವರು ಯಕ್ಷಗಾನಗಳನ್ನೂ ಪುರಾಣಗಳನ್ನೂ ಇನ್ನೂ ಇತರ ಅನೇಕ ಗ್ರಂಥಗಳನ್ನೂ ಬರೆದಿದ್ದಾರೆ.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಕ್ಷೇತ್ರ ಮಹಾತ್ಮ್ಯದ ಗ್ರಂಥಗಳು ಬಹುವಾಗಿ ರಚಿತವಾದುವು. ಇವುಗಳಲ್ಲಿ ಮೊದಲಿನ ಕೆಲವು ಆಶ್ವಾಸಗಳು ಮೈಸೂರು ದೊರೆಗಳ ವೃತ್ತಾಂತವನ್ನು ತಿಳಿಸುತ್ತವೆ. ಮಿಕ್ಕ ಭಾಗಗಳು ಪುರಾಣೋಕ್ತವಾದ ಕಥೆಗಳನ್ನು ತಿಳಿಸುತ್ತವೆ. ಸಾಹಿತ್ಯ ದೃಷ್ಟಿಯಿಂದ ಈ ಮಹಾತ್ಮ್ಯ ಗ್ರಂಥಗಳು ಅಷ್ಟೊಂದು ಉತ್ಕೃಷ್ಟವಾದುವಲ್ಲ. ಈ ಗ್ರಂಥಗಳಲ್ಲಿ ಕೆಲವುದರ ಹೆಸರುಗಳನ್ನು ಇಲ್ಲಿ ಹೇಳಿದೆ. ಚಿಕ್ಕುಪಾಧ್ಯಾಯ ರಚಿತವಾದ ಕಮಲಾಚಲ ಮಾಹಾತ್ಮ್ಯ, ಪಶ್ಚಿಮರಂಗ ಮಾಹಾತ್ಮ್ಯ, ಯದುಗಿರಿ ಮಾಹಾತ್ಮ್ಯ, ವೆಂಕಟಗಿರಿ ಮಾಹಾತ್ಮ್ಯ, ಹಸ್ತಿಗಿರಿ ಮಾಹಾತ್ಮ್ಯ, ತಿಮ್ಮಕವಿಯ ಯಾದವಗಿರಿ ಮಾಹಾತ್ಮ್ಯ, ಪಶ್ಚಿಮರಂಗ ಮಾಹಾತ್ಮ್ಯ, ಮಲ್ಲಿಕಾರ್ಜುನ ಕವಿಯ ಶ್ರೀರಂಗ ಮಹಾತ್ಮ್ಯ.

ಈ ಕಾಲದ ಕೆಲವು ಜೈನ ಕವಿಗಳನ್ನೂ ಅವರ ಗ್ರಂಥಗಳನ್ನೂ ವಿವರಿಸಬಹುದು. ಪಂಚಬಾಣನೆಂಬ ಕವಿಯು ಭುಜಬಲಿ ಚರಿತ್ರೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಚಂದ್ರಮನೆಂಬ ಕವಿಯು ಕಾರ್ಕಳದ ಗೊಮ್ಮಟೇಶ್ವರ ಚರಿತೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಧರಣಿಪಂಡಿತನು ಬಿಜ್ಜಳರಾಯ ಚರಿತ್ರೆಯನ್ನು ಸಾಂಗತ್ಯದಲ್ಲಿಯೂ, ಚಂದ್ರಸಾಗರ ವರ್ಣಿಯು ಬಿಜ್ಜಳರಾಯ ಪುರಾಣವನ್ನು ಷಟ್ಪದಿಯಲ್ಲಿಯೂ ರಚಿಸಿರುವರು. ದೇವಚಂದ್ರನು ರಾಜಾವಳೀ ಕಥೆ ಎಂಬ ಗದ್ಯಗ್ರಂಥವನ್ನು ಬರೆದಿದ್ದಾನೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಹುಟ್ಟಿದ್ದು. ಇದರಲ್ಲಿ ಜೈನಮತ, ಜೈನಗುರುಗಳು ಮತ್ತು ಇನ್ನೂ ಅನೇಕ ವಿಷಯಗಳು ಪ್ರಸ್ತಾಪಿಸಲ್ಪಟ್ಟಿವೆ.

೫. ಅಧುನಿಕ ಕಾಲದ ಲಕ್ಷಣಗಳು

ಆಧುನಿಕ ಕಾಲ.— ಈ ಕಾಲವನ್ನು ಶ್ರೀ ಚಾಮರಾಜೇಂದ್ರ ಒಡೆಯರವರು ರಾಜ್ಯವನ್ನು ವಹಿಸಿಕೊಂಡಲಾಗಾಯಿತೆಂದು ಹೇಳಬಹುದು.

ಈ ಕಾಲದ ಲಕ್ಷಣಗಳನ್ನು ಈ ರೀತಿ ಸಂಗ್ರಹಿಸಬಹುದು. ಪುಸ್ತಕಗಳನ್ನು ಮುದ್ರಿಸುವ ಅಚ್ಚುಮೊಳೆಗಳೂ ಮುದ್ರಣ ಯಂತ್ರಗಳೂ ೧೯ನೆಯ ಶತಮಾನದ ಆದಿಭಾಗದಲ್ಲಿಯೇ ಮಿಷನರಿಗಳಿಂದ ತರಲ್ಪಟ್ಟು ಮುದ್ರಣಾನುಕೂಲ್ಯಗಳನ್ನು ಒದಗಿಸಿದ್ದುವು. ಆದುದರಿಂದ, ಗ್ರಂಥ ರಚನೆಗೂ ಗ್ರಂಥ ಪ್ರಚಾರಕ್ಕೂ ಅನುಕೂಲಗಳು ಒದಗಿದವು. ಪಾಠಶಾಲೆಗಳನ್ನು ಕ್ರಮವರಿತು ಸ್ಥಾಪಿಸಿ ವಿದ್ಯಾಭ್ಯಾಸದ ಪ್ರಚಾರವನ್ನು ಮಾಡಿದ್ದರಿಂದ ಓದುವವರ ಸಂಖ್ಯೆಯು ಹೆಚ್ಚಾಯಿತು. ನಮ್ಮ ದೇಶದ ಶಾಸನಗಳನ್ನೂ, ಗ್ರಂಥಗಳನ್ನೂ ಸಂಗ್ರಹಿಸಿ ಪೂರ್ವಚರಿತ್ರೆಯನ್ನು ಫ್ಲೀಟ್, ರೈಸ್ ಮುಂತಾದವರು ತಿಳಿಸಿದ್ದರಿಂದ ದೇಶಾಭಿಮಾನವೂ ಸಾಹಿತ್ಯಾಭಿಮಾನವೂ ತಲೆದೋರಿದುವು. ಹಿಂದಿನ ಸಾಹಿತ್ಯರಾಶಿಯನ್ನು ಅವಲೋಕಿಸಿದ ಮಹನೀಯರು ಅದನ್ನು ಎಲ್ಲರ ಮುಂದೆಯೂ ಇಡಬೇಕೆಂದು ಕಾವ್ಯಮಂಜರಿ, ಕಾವ್ಯಕಲಾನಿಧಿ ಎಂಬ ಮಾಸಪತ್ರಿಕೆಗಳನ್ನು ಸ್ಥಾಪಿಸಿ ಅನೇಕ ಪುಸ್ತಕಗಳನ್ನು ಹೊರಗೆಡಹಿದರು. ಚಾಮರಾಜೇಂದ್ರ ಒಡೆಯರವರು ಸಾಹಿತ್ಯಾಭಿಮಾನಿಗಳಾಗಿ ಕವಿಗಳಿಗೆ ಆಶ್ರಯವನ್ನು ಕೊಟ್ಟದ್ದರಿಂದಲೂ, ನಾಟಕಸಭೆಯನ್ನು ಸ್ಥಾಪಿಸುವುದಕ್ಕೆ ಪ್ರೋತ್ಸಾಹವಿತ್ತದ್ದರಿಂದಲೂ ಕಾವ್ಯಗಳೂ ನಾಟಕಗಳೂ ಹೊರಬೀಳಲು ಅನುಕೂಲವಾಯಿತು. ಇದಲ್ಲದೆ, ಪಾಶ್ಚಾತ್ಯ ವಿದ್ಯೆಯನ್ನು ಅಭ್ಯಾಸ ಮಾಡಿ ದೇಶೀಯರು ಆಂಗ್ಲೇಯ ಸಾಹಿತ್ಯದಲ್ಲಿರುವ ಮುಖ್ಯಾಂಶಗಳನ್ನು ಕನ್ನಡದಲ್ಲಿ ತರಲು ಆತುರರಾದರು. ಹೀಗೆಯೇ ಮರಾಟಿ, ಬಂಗಾಳಿ, ತೆಲುಗು ಮುಂತಾದ ಭಾಷೆಗಳ ಸಾಹಿತ್ಯರಾಶಿಗಳನ್ನು ಅವಲೋಕಿಸಿದವರು ಅಲ್ಲಿನ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಮಾಡಲು ಹವಣಿಸಿದರು.

ಕಾವ್ಯಗಳ ಲಕ್ಷಣಗಳು

ಈ ಆಧುನಿಕ ಕಾಲವನ್ನು ೧೯೧೪ರ ವರೆಗೆ ಒಂದು ಭಾಗವಾಗಿಯೂ ಅಲ್ಲಿಂದೀಚೆಗೆ ಇನ್ನೊಂದು ಭಾಗವಾಗಿಯೂ ಇಟ್ಟುಕೊಂಡರೆ ಕಾವ್ಯ ಲಕ್ಷಣಗಳನ್ನು ಸಂಗ್ರಹಿಸಿ ಹೇಳುವುದಕ್ಕೆ ಅನುಕೂಲವಾಗುತ್ತದೆ. ೧೯೧೪ರ ವರೆಗೆ ಭಾಷಾಂತರದ ಕಾಲವೆಂದೂ ಅಲ್ಲಿಂದೀಚೆಗೆ ಸ್ವಾತಂತ್ರ್ಯದ ಕಾಲವೆಂದೂ ಹೇಳಬಹುದು. ಮೊದಲಿನ ಭಾಗದಲ್ಲಿ ಸಂಸ್ಕೃತ

ಜ್ಞರೂ, ಆಂಗ್ಲೇಯ ಭಾಷಾಪ್ರವೀಣರೂ ಸಮನಾಗಿ ಗ್ರಂಥರಚನೆ ಮಾಡಿದ್ದಾರೆ. ಎರಡನೆಯ ಭಾಗದಲ್ಲಿ ಆಂಗ್ಲೇಯ ಸಾಹಿತ್ಯದ ಪರಿಚಯವುಳ್ಳವರೇ ಮಾರ್ಗದರ್ಶಕರಾಗಿರುತ್ತಾರೆ. ಮೊದಲಿನ ಭಾಗದಲ್ಲಿ ಕಾಳಿದಾಸ, ಭವಭೂತಿ ಮುಂತಾದ ಸಂಸ್ಕೃತ ಕವಿಗಳ ನಾಟಕಗಳೂ ಕಾವ್ಯಗಳೂ ಕನ್ನಡಕ್ಕೆ ಭಾಷಾಂತರವಾಗಿವೆ. ಹಾಗೆಯೇ ಇಂಗ್ಲೀಷಿನಲ್ಲಿರುವ ಷೇಕ್ಸ್‌ಪಿಯರ್ ಕವಿಯ ನಾಟಕಗಳೂ ಭಾಷಾಂತರ ಹೊಂದಿವೆ. ಮತ್ತು ಇಂಡಿಯಾದೇಶದ ಇತರ ಭಾಷೆಗಳಾದ ಬಂಗಾಳಿ, ಮರಾಟಿ ಮತ್ತು ತೆಲುಗು ಇವುಗಳಿಂದ ನಾವೆಲ್‌ಗಳೆಂಬ ಕಥಾರೂಪದ ಗ್ರಂಥಗಳು ಭಾಷಾಂತರವಾಗಿ ಹೊರಬಿದ್ದಿವೆ. ಕೆಲವು ಸ್ವತಂತ್ರ ಗ್ರಂಥಗಳು ರಚಿತವಾಗಿದ್ದರೂ ಅವು ಸಂಸ್ಕೃತದ ಕಟ್ಟುಗಳಿಂದಲೇ ಬಂಧಿತವಾಗಿರುವುವು. ಈ ಆಧುನಿಕ ಕಾಲದಲ್ಲಿ ಮಾಸಪತ್ರಿಕೆಗಳೂ, ವರ್ತಮಾನಪತ್ರಿಕೆಗಳೂ ಅನೇಕವಾಗಿ ಮುದ್ರಣವಾಗುತ್ತಲಿವೆ.

ಈ ಕಾಲದಲ್ಲಿ ಬಸವಪ್ಪ ಶಾಸ್ತ್ರಿಗಳು, ಜಯರಾಯಾಚಾರ್ಯ, ಕುಂಡಲಗಿರಿಯಾಚಾರ್ಯ, ಎಸ್. ಜಿ. ನರಸಿಂಹಾಚಾರ್, ಮುಂತಾದ ಲೇಖಕರಿದ್ದರು. ನಾವೆಲ್ಲುಗಳನ್ನು ಭಾಷಾಂತರಮಾಡಿದವರಲ್ಲಿ ಬಂಗಾಳಿಯ ಭಾಷೆಗೆ ಬಿ. ವೆಂಕಟಾಚಾರ್ಯರನ್ನು ಹೇಳಬಹುದು. ಮರಾಟಿ ಭಾಷೆಯಿಂದ ಭಾಷಾಂತರಮಾಡಿರುವವರಲ್ಲಿ ಗಳಗನಾಥರೂ, ತೆಲುಗು ಭಾಷೆಯಿಂದ ಭಾಷಾಂತರಮಾಡಿರುವವರಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳೂ, ಇನ್ನೂ ಜೀವಂತರಾಗಿದ್ದಾರೆ. ಒಳ್ಳೆಯ ಗದ್ಯಶೈಲಿಯನ್ನು ಏರ್ಪಡಿಸಿದವರಲ್ಲಿ ಈಗ ಜೀವಂತರಾಗಿರುವ ಚ. ವಾಸುದೇವಯ್ಯನವರನ್ನು ಹೇಳಬಹುದು.

೧೯೧೪ಳ ಕ್ಕಿಂತ ಈಚೆಗೆ ಅನೇಕರು ಲೇಖಕರು ಇದ್ದಾರೆ. ಆಂಗ್ಲೇಯ ಸಾಹಿತ್ಯದ ಮಾರ್ಗವನ್ನನುಸರಿಸಿ ವಿವಿಧ ರೂಪಗಳು ನಮ್ಮಲ್ಲಿಯೂ ತಲೆದೋರುತ್ತಲಿವೆ. ಗೀತಗಳು, ಸಣ್ಣಕಥೆಗಳು, ವಿಮರ್ಶೆಗಳು, ಜೀವನ ಚರಿತ್ರೆಗಳು ಮುಂತಾದುವೆಲ್ಲ ಬಂದಿವೆ. ಇನ್ನೂ ಹೊಸಹೊಸ ಪ್ರಯತ್ನಗಳು ನಡೆಯುತ್ತಿರುವುವು.

೧೯೧೫ನೆಯ ಸಂವತ್ಸರದಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದುದೂ, ಅಲ್ಲಿಂದೀಚೆಗೆ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ಕನ್ನಡದ

ವ್ಯಾಸಂಗಕ್ಕೆ ಪ್ರೋತ್ಸಾಹವನ್ನು ಕೊಟ್ಟಿರುವುದೂ, ಸಾಹಿತ್ಯಾಭಿವೃದ್ಧಿಗೆ ಬಹಳ ಅನುಕೂಲವಾಗಿದೆ. ಹಿಂದಿನ ಸಂಸ್ಕೃತ ಮಾರ್ಗದಿಂದ ಬಿಡುಗಡೆ ಹೊಂದಬೇಕೆಂಬ ಇಚ್ಛೆಯೂ, ಮಾನವ ಸುಖದುಃಖ ಕಷ್ಟಸಂಕಟಗಳನ್ನು ಜೀವನದಲ್ಲಿರುವಂತೆ ಚಿತ್ರಿಸಬೇಕೆಂಬ ಆಕಾಂಕ್ಷೆಯೂ ಪ್ರಬಲವಾಗಿ ಕಂಡು ಬರುತ್ತಿವೆ. ಆದುದರಿಂದ, ಕನ್ನಡ ಸಾಹಿತ್ಯವು ಇನ್ನುಮುಂದೆ ಹೊಸ ಮಾರ್ಗದಲ್ಲಿ ಶೋಭಿಸುವುದೆಂದು ಹೇಳಬೇಕಾಗಿದೆ.

———

ಶ್ರೀಮನ್ ಮಹಾರಾಜರವರ

ಉಪಕಾರಗಳು.

ಶ್ರೀಮನ್ ಮಹಾರಾಜರು ಮಾಡಿರುವ ಉಪಕಾರಗಳು.

ಮಾದರಿಯ ಸಂಸ್ಥಾನ: ಕಾರಣಗಳು.

ನಮ್ಮ ಮಹಾರಾಜರಾದ ಶ್ರೀ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರು ರಾಜ್ಯಭಾರವನ್ನು ಸ್ವತಃ ವಹಿಸಿಕೊಂಡು ಇಂದಿಗೆ ಮುವತ್ತು ನಾಲ್ಕು ವರ್ಷಗಳ ಮೇಲಾಯಿತು. ಈ ಅವಧಿಯಲ್ಲಿ ದೇಶಾಭ್ಯುದಯಕ್ಕೆ ಸಂಬಂಧಪಟ್ಟ ಕಾರ್ಯ ಕಲಾಪಗಳು ಸರ್ವತೋಮುಖವಾಗಿಯೂ ಅನೇಕವಾಗಿಯೂ ನಡೆದಿರುವುವು. ದೇಶೀಯ ಸಂಸ್ಥಾನಗಳಲ್ಲಿ ಮತ್ತಾವುದರಲ್ಲಿಯೂ ಇಂತಹ ಅಭಿವೃದ್ಧಿಯ ಕಾರ್ಯಗಳನ್ನು ಇಷ್ಟೊಂದು ಅಲ್ಪಾವಧಿಯಲ್ಲಿ ಕೈಕೊಂಡು, ಸಾಂಗವಾಗಿ ಮುಗಿಸಿಲ್ಲ. ಇದಕ್ಕೆ ಮುಖ್ಯವಾಗಿ ಕಾರಣಗಳೆರಡು. ಮೊದಲನೆಯದು ಶ್ರೀಮನ್ ಮಹಾರಾಜರ ದೇಶವಾತ್ಸಲ್ಯ, ಪ್ರಜಾವಾತ್ಸಲ್ಯ ಮತ್ತು ದೂರದರ್ಶಿತ್ವ. ಎರಡನೆಯದು ನಮ್ಮ ದೇಶದಲ್ಲಿ ಪರಂಪರೆಯಾಗಿ ದಕ್ಷರೂ ದೇಶಾಭಿಮಾನಯುಕ್ತರೂ ಆದ ದಿವಾನರುಗಳು ಅಧಿಕಾರವನ್ನು ವಹಿಸಿರುವುದು. ಅವರು ಕಾಲಕಾಲಕ್ಕೆ ತಕ್ಕ ಸಲಹೆಗಳನ್ನು ಕೊಟ್ಟು ಶ್ರೀಮನ್ ಮಹಾರಾಜರವರ ಸಂಪೂರ್ಣಾನುಮತದಿಂದ ಬಗೆಬಗೆಯ ಏರ್ಪಾಡುಗಳನ್ನು ಆಚರಣೆಗೆ ತಂದರು. ಅವುಗಳ ಫಲವಾಗಿ ಮೈಸೂರು ಸಂಸ್ಥಾನವು ಮಾದರಿಯ ಸಂಸ್ಥಾನವೆಂಬ ಕೀರ್ತಿಯನ್ನು ಪಡೆಯಿತು. ಈ ಮುವತ್ತು ನಾಲ್ಕು ವರ್ಷಗಳ ಕಾಲದಲ್ಲಿ ಆಚರಣೆಗೆ ಬಂದ ಏರ್ಪಾಡುಗಳನ್ನು ಸಂಗ್ರಹಿಸಿ ಇಲ್ಲಿ ವಿವರಿಸುವುದು ಯುಕ್ತವಾಗಿ ಕಾಣುತ್ತದೆ.

ಉಪಕಾರದ ಪಂಗಡಗಳು

ದೇಶಕ್ಕೆ ಆಗಿರುವ ಪ್ರಯೋಜನಗಳನ್ನು ನೋಡಿದರೆ ಈ ಏರ್ಪಾಡುಗಳನ್ನು ನಾಲ್ಕು ಪಂಗಡಗಳಾಗಿ ವಿಂಗಡಿಸಬಹುದು. ಮೊದಲನೆಯದು

ದೇಶದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿರುವ ಏರ್ಪಾಡುಗಳು. ಎರಡನೆಯದು ಪ್ರಜಾಸೌಖ್ಯವನ್ನು ಹೆಚ್ಚಿಸಿರುವ ಏರ್ಪಾಡುಗಳು. ಮೂರನೆಯದು ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಹೆಚ್ಚಿಸಿರುವ ಏರ್ಪಾಡುಗಳು. ನಾಲ್ಕನೆಯದು ರಾಜ್ಯಭಾರ ಕ್ರಮದಲ್ಲಿ ದಕ್ಷತೆಯನ್ನು ಹೆಚ್ಚಿಸಿರುವ ಏರ್ಪಾಡುಗಳು. ಹೀಗೆ ಕೆಲವು ವಿಶೇಷವಾದ ಲಕ್ಷಣಗಳಿಂದ ಅವುಗಳನ್ನು ವಿಂಗಡಿಸುವುದಾದರೂ ಅವು ಪರಸ್ಪರ ಸಂಬಂಧವುಳ್ಳವಾಗಿ ಒಂದರೊಡನೊಂದು ಮಿಳಿತವಾಗುವ ಸಂಭವವಿದ್ದೇ ಇರುತ್ತದೆ. ಏಕೆಂದರೆ ದೇಶದ ಆರ್ಥಿಕ ಸ್ಥಿತಿಯು ಹೆಚ್ಚಿದಂತೆಲ್ಲ ಒಂದು ರೀತಿಯಲ್ಲಿ ಪ್ರಜಾಸೌಖ್ಯವೂ ಹೆಚ್ಚುತ್ತ ಬರುತ್ತದೆ. ಪ್ರಜೆಗಳಿಗೆ ಹಕ್ಕು ಬಾಧ್ಯತೆಗಳು ಹೆಚ್ಚಿದಂತೆಲ್ಲ ಅವರ ಕಷ್ಟ ನಿಷ್ಠುರಗಳು ಕಡಮೆಯಾಗಿ ಸೌಖ್ಯವೂ ಹೆಚ್ಚುತ್ತದೆ. ರಾಜ್ಯಭಾರ ಕ್ರಮದ ದಕ್ಷತೆಗೆ ಪ್ರಜೆಗಳಿಗಿರುವ ಹಕ್ಕು ಬಾಧ್ಯತೆಗಳು ಬಹುಮಟ್ಟಿಗೆ ಕಾರಣವಾಗಿ ಪರಿಣಾಮದಲ್ಲಿ ಆ ದಕ್ಷತೆಯು ಪ್ರಜಾಸೌಖ್ಯಕ್ಕಾಗಿಯೇ ವಿನಿಯೋಗವಾಗುವುದು. ಆದುದರಿಂದ ಅನುಕೂಲಕ್ಕಾಗಿ ಈ ಪಂಗಡಗಳನ್ನು ಮಾಡಿಕೊಂಡಿರುವುವೇ ಹೊರತು ಪರಸ್ಪರ ಮಿಳಿತವಾಗದ ಕಡಖಂಡಿತವಾದ ವಿಭಾಗಗಳೆಂದು ಅವುಗಳನ್ನು ತಿಳಿಯಲಾಗದು.

೧. ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿರುವ ಏರ್ಪಾಡುಗಳು.

ಮೊದಲನೆಯ ಪಂಗಡವಾದ ದೇಶದ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸಿರುವ ಏರ್ಪಾಡುಗಳಲ್ಲಿ, ಮುಖ್ಯವಾದ ಕೆಲವನ್ನು ಇಲ್ಲಿ ವಿವರಿಸಿದೆ. ಈ ಪಂಗಡದಲ್ಲಿ ವಿದ್ಯುಚ್ಛಕ್ತಿ, ಕೆರೆಕಟ್ಟೆ ಕಾಲುವೆಗಳು, ಕೈಗಾರಿಕೆಗಳು, ಕಾಡುಗಳು ಮತ್ತು ರೈಲುಗಳನ್ನು ಹೇಳಬಹುದು.

ವಿದ್ಯುತ್ತು

ನಮ್ಮ ದೇಶದಲ್ಲಿ ಕಾವೇರಿಯ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ದೊರಕಿಸಿಕೊಂಡುದು ಇಂದ್ರಜಾಲದ ಕಥೆಯಂತೆ ಭಾಸವಾಗಬಹುದು. ಆದರೆ ಅದು ಇಂದ್ರಜಾಲವೂ ಅಲ್ಲ, . ಮಹೇಂದ್ರ ಜಾಲವೂ ಅಲ್ಲ. ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ವಾಸಮಾಡುವವರೂ ಹಾಗೆಯೇ ತುಮಕೂರು, ಚನ್ನಪಟ್ಟಣ ಮುಂತಾದ ಊರುಗಳಲ್ಲಿ ಇರುವವರೂ ವಿದ್ಯು

ತ್ತಿನಿಂದ ಪಡೆಯುತ್ತಿರುವ ಪ್ರಯೋಜನವನ್ನು ನೋಡಿದರೆ ಕಾವೇರಿಯ ಜಲಪಾತವು ಸತ್ಯಪ್ರಪಂಚಕ್ಕೆ ಸೇರಿದ ವಿಷಯವೆಂಬುದು ಸ್ಫುರಿಸುತ್ತದೆ. ದಿವಾನ್ ಶೇಷಾದ್ರಿ ಅಯ್ಯರವರ ಕಾಲದಲ್ಲಿ ಅವರ ಅದ್ಭುತವಾದ ಮೇಧಾ ಶಕ್ತಿಯಿಂದಲೂ ಶಿಲ್ಪ ಶಾಸ್ತ್ರಜ್ಞಾನದಿಂದಲೂ ಈ ದೊಡ್ಡ ಕಾಮಗಾರಿಯು ಆರಂಭವಾಯಿತು. ವ್ಯರ್ಥವಾಗಿ ಧುಮುಕಿ ಹೋಗುತ್ತಿದ್ದ ಆ ನೀರನ್ನು ತಡೆಗಟ್ಟಿ ಅದರಿಂದ ಅದ್ಭುತ ಶಕ್ತಿಯನ್ನು ಪಡೆದು ಒಂದು ಕಡೆ ಕೋಲಾರದ ಚಿನ್ನದ ಗಣಿಗಳ ಕೆಲಸಕ್ಕೂ ಇನ್ನೊಂದು ಕಡೆ ಬೆಂಗಳೂರು ಮೈಸೂರು ಪಟ್ಟಣಗಳಲ್ಲಿ ಬೆಳಕಿಗೂ ಕೈಗಾರಿಕೆಗಳಿಗೂ ನೆರವಾಗುವಂತೆ ಮಾಡಿದ ಸಾಹಸ ಕಾರ್ಯವನ್ನು ಜಗತ್ತಿನಲ್ಲೆಲ್ಲಾ ಕೊಂಡಾಡುತ್ತಿದ್ದಾರೆ. ವಿದ್ಯುಚ್ಛಕ್ತಿಯ ಇಲಾಖೆಯಿಂದ ಸರ್ಕಾರಕ್ಕೆ ವರ್ಷಂಪ್ರತಿ ೪೫ ಲಕ್ಷ ರೂಪಾಯಿಗಳ ಆದಾಯವಿದೆ. ಇದರಿಂದ ದೇಶದ ಸಂಪತ್ತು ಎಷ್ಟರ ಮಟ್ಟಿಗೆ ಹೆಚ್ಚಿದಂತಾಯಿತೆಂಬುದನ್ನು ಊಹಿಸಿ ನೋಡಿ. ವಿದ್ಯುಚ್ಛಕ್ತಿಯು ಸುಲಭ ಬೆಲೆಗೆ ದೊರೆಯುವಂತೆ ಸರ್ಕಾರದವರು ಮಾಡಿರುವುದರಿಂದ ಸಣ್ಣ ಪುಟ್ಟ ಕೈಗಾರಿಕೆಗಳು ಅಲ್ಲಲ್ಲಿ ತಲೆದೋರಿ ಹಲವರ ಜೀವನೋಪಾಯಕ್ಕೆ ಸಹಾಯವಾಗಿದೆ.

ಕೆರೆ ಕಟ್ಟೆ ಕಾಲುವೆಗಳು

ಕೆರೆ ಕಟ್ಟೆ ಕಾಲುವೆಗಳ ವಿಚಾರದಲ್ಲಿಯೂ ನಮ್ಮ ದೇಶವು ಬಹಳ ಮುಂದುವರಿದಿದೆ. ಹಿಂದಿನ ಕಾಲದಲ್ಲಿ ಅನುಕೂಲವಾದ ಕಡೆಗಳಲ್ಲೆಲ್ಲಾ ಕೆರೆಗಳನ್ನು ಕಟ್ಟಿರುವುದು ನಿಜ. ಕಪಿನಿ, ಕಾವೇರಿ ಮುಂತಾದ ನದಿಗಳಿಂದ ಕಾಲುವೆಗಳನ್ನು ತೆಗೆದಿರುವುದೂ ನಿಜ. ಆದರೆ ಹಿಂದೆ ಕಟ್ಟಿದ ಅನೇಕ ಕೆರೆಗಳು ಬಹುಮಟ್ಟಿಗೆ ಹೂತುಹೋಗಿರುತ್ತವೆ. ಅವುಗಳ ಏರಿಗಳು ಭದ್ರವಾಗಿಲ್ಲದೆ ಹೆಚ್ಚು ನೀರು ನಿಲ್ಲಲು ಅವಕಾಶವಿರಲಿಲ್ಲ. ಆದುದರಿಂದ ಸರ್ಕಾರದವರು ವರ್ಷಂಪ್ರತಿಯೂ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ದೊಡ್ಡದೊಡ್ಡ ಕೆರೆಗಳನ್ನು ಸರಿಪಡಿಸಿ ಅವುಗಳಿಂದ ಜಮೀನುಗಳು ಸರಿಯಾಗಿ ಸಾಗುವಳಿಯಾಗುವಂತೆಯೂ, ಭೂಗಂದಾಯವು ಸರಿಯಾಗಿ ಬರುವಂತೆಯೂ ಮಾಡಿದ್ದಾರೆ. ಇದೂ ಅಲ್ಲದೆ ಹಿರಿಯೂರು ತಾಲ್ಲೂಕು ಯಾವಾಗಲೂ ಮಳೆಯಿಲ್ಲದ ಪ್ರದೇಶವಾಗಿಯೂ ದುರ್ಭಿಕ್ಷದ ಬೀಡಾಗಿಯೂ ಇರುವುದನ್ನು ನೋಡಿ ಅಲ್ಲಿ ಮಾರೀಕಣಿವೆಯ ಕೆರೆ

ಅಥವಾ ವಾಣೀವಿಲಾಸಸಾಗರ ಎಂಬ ದೊಡ್ಡ ಕೆರೆಯನ್ನು ಕಟ್ಟಿದರು. ಅದಕ್ಕಾಗಿ ಸುಮಾರು ಒಂದು ಕೋಟಿ ರೂಪಾಯಿಗಳು ವೆಚ್ಚವಾದುವು. ಇತ್ತ ಕಾವೇರಿ ನದಿಯಲ್ಲಿ ಬಿಸಿಲುಗಾಲ ಬಂದಾಗ ನೀರು ಕಡಮೆಯಾಗಿಯೂ ಮಳೆಗಾಲದಲ್ಲಿ ಮಾತ್ರ ತುಂಬು ಹೊಳೆಯಾಗಿಯೂ ಇರುವುದನ್ನು ನೋಡಿ, ವರ್ಷಾಕಾಲದಲ್ಲಿ ಬರುವ ಹೆಚ್ಚು ನೀರನ್ನು ಶೇಖರಿಸಿ ವ್ಯವಸಾಯಕ್ಕೂ ವಿದ್ಯುತ್ಸಂಚಯಕ್ಕೂ ಸಹಾಯ ಮಾಡಬೇಕೆಂದು ಶ್ರೀ ಕೃಷ್ಣರಾಜಸಾಗರವನ್ನು ಕಟ್ಟಿದರು. ಇದರಿಂದ ಶಿವನ ಸಮುದ್ರದಲ್ಲಿ ಸದಾ ಕಾಲಗಳಲ್ಲಿಯೂ ಏಕರೀತಿಯಾದ ಜಲ ಪ್ರವಾಹವು ದೊರೆತು ಮೊದಲಿಗಿಂತ ಹೆಚ್ಚಾಗಿ ವಿದ್ಯುತ್ತನ್ನು ಪಡೆಯಲು ಅನುಕೂಲಿಸಿತು. ಮತ್ತು ಶ್ರೀ ಕೃಷ್ಣರಾಜಸಾಗರದಿಂದ ಅರ್ವಿ್ ಕೆನಾಲ್ ಎಂಬುದಾಗಿ ನಾಲೆಯನ್ನು ತೆಗೆದು ಎರಡು ಮೂರು ಲಕ್ಷ ಎಕರೆ ಜಮೀನನ್ನು ತರೀ ವ್ಯವಸಾಯಕ್ಕೆ ಅನುಕೂಲ ಪಡಿಸುತ್ತಿದ್ದಾರೆ. ಹೀಗೆ ಏರ್ಪಾಡನ್ನು ಮಾಡಿರುವುದರಿಂದ ಜಮೀನಿನ ಬೆಲೆಯು ಏರಿ ದೇಶದ ಸಂಪತ್ತು ಹೆಚ್ಚಿತಲ್ಲದೆ ಅಲ್ಲಿಯ ಭೂಗಂದಾಯವು ಮೊದಲಿಗಿಂತ ನಾಲ್ಮಡಿಯಾಗಿ ಸರ್ಕಾರದ ಆದಾಯವೂ ಮುಂದುವರಿಯಿತು. ಈಚೆಗೆ ಭದ್ರಾನದಿಗೂ ಅಣೆಕಟ್ಟನ್ನು ಕಟ್ಟಿ ವ್ಯವಸಾಯಕ್ಕೆ ಅನುಕೂಲಪಡಿಸಿರುವರು. ಒಟ್ಟಿನಲ್ಲಿ ಸುಮಾರು ಎಂಟು ಕೋಟಿ ರೂಪಾಯಿಗಳವರೆಗೂ ಕೆರೆಕಟ್ಟೆ ಕಾಲುವೆಗಳ ಮೇಲೆ ಸರ್ಕಾರದವರು ವೆಚ್ಚ ಮಾಡಿದ್ದಾರೆ. ದೇಶದ ಸಂಪತ್ತು ಕನಿಷ್ಠಪಕ್ಷ ಅದರ ಎರಡರಷ್ಟಾದರೂ ಹೆಚ್ಚಿರುವುದೆಂದು ಹೇಳಬೇಕು.

ಕೈಗಾರಿಕೆಗಳಿಗೆ ಪ್ರೋತ್ಸಾಹ

ಮೂರನೆಯದು ಕೈಗಾರಿಕೆಗಳು. ಸರ್ಕಾರದವರು ಕ್ರಿ. ಶ. ೧೯೧೩ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯದ ಇಲಾಖೆಯನ್ನು ಪ್ರತ್ಯೇಕವಾಗಿ ಸ್ಥಾಪಿಸಿದರು. ದೇಶದಲ್ಲಿ ಕೈಗಾರಿಕೆ ಮತ್ತು ವ್ಯಾಪಾರಗಳನ್ನು ಅಭಿವೃದ್ಧಿಗೊಳಿಸುವುದೇ ಆ ಇಲಾಖೆಯ ಪ್ರಥಮೋದ್ದೇಶವು. ಅಲ್ಲಲ್ಲಿ ಯಂತ್ರಸ್ಥಾಪನೆಮಾಡಿ, ಅವನ್ನು ನಡೆಸುವ ರೀತಿ, ಅವುಗಳಿಂದ ಲಾಭ ಪಡೆಯುವ ರೀತಿ ಮುಂತಾದುವನ್ನು ತಿಳಿಸಲು ಇಲಾಖೆಯವರು ದಕ್ಷರಾದ ನೌಕರರನ್ನು ಗೊತ್ತುಮಾಡುವರು. ಕೇವಲ ವ್ಯವಸಾಯದಿಂದಲೇ ಜೀವನ ಮಾಡು

ತ್ತಿದ್ದ ನಮ್ಮ ದೇಶದವರಿಗೆ ಕೈಗಾರಿಕೆಗಳಲ್ಲಿ ಪ್ರವೇಶಿಸಲು ತಕ್ಕ ಧೈರ್ಯೋತ್ಸಾಹಗಳು ಉಂಟಾಗಲೆಂದು ಸರ್ಕಾರದವರೇ ಕೆಲವು ಕೈಗಾರಿಕೆಗಳನ್ನು ಸ್ಥಾಪಿಸಿ ನಡೆಸಿರುವರು. ಅವುಗಳಲ್ಲಿ ಮೆಟಲ್ ಫ್ಯಾಕ್ಟರಿ ಮತ್ತು ಸೋಪು ಫ್ಯಾಕ್ಟರಿ ಎಂಬಿವು ಮುಖ್ಯವಾದುವು. ಪಾತ್ರೆಗಳನ್ನು ತಯಾರ್ಮಾಡುವ ಮೆಟಲ್ ಫ್ಯಾಕ್ಟರಿಯನ್ನು ಕೆಲವು ವರ್ಷಗಳವರೆಗೆ ನಡೆಸಿ ಅನಂತರ ಖಾಸಗಿ ದೊಡ್ಡ ಮನುಷ್ಯರಿಗೆ ಅದನ್ನು ಸರ್ಕಾರದವರು ಕೊಟ್ಟುಬಿಟ್ಟರು. ಸಾಬೂನು ತಯಾರು ಮಾಡುವ ಸೋಪು ಫ್ಯಾಕ್ಟರಿಯಾದರೋ ಇನ್ನೂ ಸರ್ಕಾರದವರ ಅಧೀನದಲ್ಲಿಯೇ ಇದೆ. ಅಲ್ಲಿ ಸಿದ್ಧವಾಗುತ್ತಿರುವ ಶ್ರೀಗಂಧದೆಣ್ಣೆಯ ಸಾಬೂನುಗಳು ಇಂಡಿಯಾ ದೇಶದಲ್ಲೆಲ್ಲ ಪ್ರಸಿದ್ಧವಾಗಿರುವುವು. ಮತ್ತು ಆ ಕಾರ್ಖಾನೆಯಿಂದ ವರ್ಷಂ ಪ್ರತಿ ಮೂವತ್ತು ನಾಲ್ವತ್ತು ಸಾವಿರ ರೂಪಾಯಿಗಳ ನಿವ್ವಳ ಲಾಭವು ದೊರೆಯುತ್ತಿದೆ. ಹೀಗೆಯೇ ಸರ್ಕಾರದವರು ನೆಯ್ಗೆಯ ಕಾರ್ಖಾನೆಯನ್ನೂ ವ್ಯವಸಾಯದ ಮುಟ್ಟುಗಳನ್ನು ಮಾಡುವ ಕಾರ್ಖಾನೆಯನ್ನೂ ಸ್ಥಾಪಿಸಿರುತ್ತಾರೆ. ಈ ಯಂತ್ರಗಳ ಕಾರ್ಖಾನೆಯಲ್ಲಿ ತಯಾರಾಗುವ ಕಬ್ಬಿನ ಗಾಣಗಳೂ ನೇಗಿಲುಗಳೂ ಉತ್ಕೃಷ್ಟವಾದುವೆಂದು ಹೆಸರು ಪಡೆದಿವೆ. ಇವುಗಳಿಗಾಗಿ ಹೊರದೇಶಕ್ಕೆ ಹೋಗುತ್ತಿದ್ದ ಹಣವು ಉಳಿತಾಯವಾಯಿತಲ್ಲದೆ ಆ ಯಂತ್ರ ಸಾಮಗ್ರಿಗಳನ್ನು ಮಾಡತಕ್ಕ ಸಾಮರ್ಥ್ಯವೂ ನಮ್ಮ ಜನಗಳಿಗೆ ಉಂಟಾಯಿತು. ಭದ್ರಾವತಿಯಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಸರ್ಕಾರದವರೇ ಸ್ಥಾಪಿಸಿದ್ದಾರೆ. ಬಾಬಾಬುಡರ್ ಬೆಟ್ಟಗಳಲ್ಲಿ ದೊರೆಯುವ ಕಬ್ಬಿಣದ ಅದುರುಗಳನ್ನು ಇದ್ದಿಲು ಮತ್ತು ಸುಣ್ಣಕಲ್ಲುಗಳೊಡನೆ ಮಿಶ್ರಮಾಡಿ ಕರಗಿಸುವರು. ಭದ್ರಾವತಿಯಲ್ಲಿ ಕಬ್ಬಿಣದ ಕೊಳವೆಗಳು ಕಂಭಗಳು ಮುಂತಾದುವನ್ನು ತಯಾರುಮಾಡುತ್ತಿದ್ದಾರೆ. ಇದೂ ಅಲ್ಲದೆ ಇದ್ದಿಲನ್ನು ಸಿದ್ಧಪಡಿಸಿಕೊಳ್ಳುವ ಹವ್ಯಾಸದಲ್ಲಿ ಕೆಲವು ಉಪ ಪದಾರ್ಥಗಳು ದೊರೆತು ಅವು ಇಂಡಿಯಾ ದೇಶದಲ್ಲಿಯೂ ಹೊರಗಡೆಯಲ್ಲಿಯೂ ಮಾರಾಟವಾಗುತ್ತಿವೆ. ಸರ್ಕಾರದವರು ಭದ್ರಾವತಿ ಕಾರ್ಖಾನೆಗಾಗಿ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿದ್ದಾರೆ.

ಸರ್ಕಾರದವರು ಹಾಕಿದ ಮೇಲು ಪಂಕ್ತಿಯಿಂದಲೂ ಅವರು ದ್ರವ್ಯ ರೂಪದಲ್ಲಿ ಮತ್ತು ಇತರ ವಿಧಗಳಲ್ಲಿ ಕೊಟ್ಟಿರುವ ಪ್ರೋತ್ಸಾಹ

ದಿಂದಲೂ ದೇಶದಲ್ಲಿ ಕೆಲವು ಗಿರಣಿಗಳೂ, ಬತ್ತವನ್ನು ಕುಟ್ಟುವ ಯಂತ್ರಗಳೂ, ಹಿಟ್ಟುಮಾಡುವ ಕೈಗಾರಿಕೆಗಳೂ ಅಭಿವೃದ್ಧಿಗೆ ಬಂದಿವೆ. ಇವುಗಳೆಲ್ಲರಿಂದಲೂ ದೇಶದಲ್ಲಿ ಹಾಕಿರುವ ಬಂಡವಾಳವು ಅಧಿಕವಾಗಿ ಅದರಿಂದ ಉತ್ಪತ್ತಿಯು ದೊರೆತು ದೇಶದ ಸಂಪತ್ತು ಹೆಚ್ಚಿರುವುದೆಂದು ಹೇಳಬೇಕು.

ಕಾಡುಗಳ ಅಭಿವೃದ್ಧಿ

ಕಾಡುಗಳು ಪ್ರಕೃತಿ ನಿರ್ಮಿತವಾಗಿರುವುದಾದರೂ ಮನುಷ್ಯನು ಅವುಗಳಿಂದ ಪಡೆಯುವ ಲಾಭಕ್ಕನುಸಾರವಾಗಿ ದೇಶದ ಸಂಪತ್ತು ಹೆಚ್ಚುತ್ತದೆ. ನಮ್ಮ ದೇಶದಲ್ಲಿ ತೇಗ, ಕರಿಯಮರ, ಮತ್ತಿ, ಹೊನ್ನೆ, ಶ್ರೀಗಂಧದ ಮರ ಮುಂತಾದುವು ಹೇರಳವಾಗಿ ಬೆಳೆಯುತ್ತವೆ. ಸರ್ಕಾರದವರು ಅನುಕೂಲವಾದ ಕಡೆಗಳಲ್ಲಿ ತೇಗದ ಮತ್ತು ಶ್ರೀಗಂಧದ ಮರಗಳನ್ನು ನೆಟ್ಟು 'ಪ್ಲಾಂಟೇಷನ್' ಎಂಬುದಾಗಿ ಕಾಡುಗಳನ್ನು ಮಾಡಿದ್ದಾರೆ. ಇದರಿಂದ ವರ್ಷಂಪ್ರತಿಯೂ ಬೆಳೆದ ಮರಗಳನ್ನು ಕಡಿದು ಉಪಯೋಗಿಸಿಕೊಳ್ಳುತ್ತಿದ್ದರೆ, ಹೊಸಹೊಸದಾಗಿ ಮರಗಳು ಬೆಳೆದು ಆದಾಯವು ಕಡಮೆಯಾಗದಂತೆ ಪರಿಣಾಮವಾಗಿದೆ. ಇದರ ಜೊತೆಗೆ ಕಾಡಿಗೆ ಸಂಬಂಧಪಟ್ಟ ಕೆಲವು ಕೈಗಾರಿಕೆಗಳನ್ನು ಸರ್ಕಾರದವರು ಸ್ಥಾಪಿಸಿರುತ್ತಾರೆ. ಅರಗು ಒಂದು ವಿಧವಾದ ಅರಗು ಹುಳುಗಳಿಂದ ತಯಾರಾಗುವುದು. ಈ ಅರಗನ್ನು ಹೆಚ್ಚುಗಟ್ಟಲೆಯಾಗಿಯೂ, ಪರಿಶುದ್ಧವಾಗಿಯೂ ತಯಾರು ಮಾಡುವುದಕ್ಕೆ ಸರ್ಕಾರದವರು ಏರ್ಪಾಡನ್ನು ಇಟ್ಟಿದ್ದಾರೆ. ನಮ್ಮ ದೇಶದಲ್ಲಿ ದೊರೆಯುವ ಕೆಲವು ಮರಗಳಿಂದ ಬೆಂಕಿಯ ಕಡ್ಡಿಗಳನ್ನು ಮಾಡಬಹುದೆಂದೂ, ಬೊಂಬು ಮುಂತಾದುವುಗಳಿಂದ ಕಾಗದವನ್ನು ತಯಾರು ಮಾಡಬಹುದೆಂದೂ, ಕೆಲವು ಬೀಜಗಳಿಂದ ಮೇಣದ ಬತ್ತಿಗಳನ್ನು ಮಾಡಬಹುದೆಂದೂ ಶಾಸ್ತ್ರಜ್ಞರು ನಿಶ್ಚಯಿಸಿರುವರು. ಇವುಗಳಲ್ಲಿ ಬೆಂಕಿಯ ಕಡ್ಡಿಯ ಕಾರ್ಖಾನೆಯೂ ಕಾಗದ ಮಾಡುವ ಕಾರ್ಖಾನೆಯೂ ಸ್ಥಾಪಿತವಾಗಿವೆ. ನಮ್ಮ ದೇಶದ ಶ್ರೀಗಂಧದ ಮರದಿಂದಲೇ ವರ್ಷಂಪ್ರತಿ ೨೦ ಲಕ್ಷ ರೂಪಾಯಿಗಳವರೆಗೆ ವರಮಾನವು ದೊರೆಯುತ್ತಿತ್ತು. ಆದರೆ ಶ್ರೀಗಂಧದ ಮರವನ್ನು ಹಾಗೆಯೇ ಮಾರುವುದಕ್ಕಿಂತ, ಅದರಿಂದ ಎಣ್ಣೆಯನ್ನು ತೆಗೆದು ಆ ಎಣ್ಣೆಯನ್ನು ಮಾರಾಟ ಮಾಡುವುದರಿಂದ ಹೆಚ್ಚು ಲಾಭ ದೊರೆಯುವು

ದೆಂದು ತಿಳಿದು ಸರ್ಕಾರದವರು ಶ್ರೀಗಂಧದೆಣ್ಣೆಯ ಕಾರ್ಖಾನೆಗಳನ್ನು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ಸ್ಥಾಪಿಸಿದರು. ಈಗ ಮೈಸೂರಿನಲ್ಲಿ ಮಾತ್ರ ಒಂದು ಕಾರ್ಖಾನೆಯಿದೆ. ಇದರಿಂದ ಸುಮಾರು ೩೦ ಲಕ್ಷ ರೂಪಾಯಿಗಳ ಎಣ್ಣೆಯು ಪ್ರತಿ ವರ್ಷವೂ ತಯಾರಾಗಿ ವಿದೇಶಗಳಿಗೆ ಹೋಗುತ್ತಿದೆ. ಇದರಿಂದ ಸರ್ಕಾರದ ಆದಾಯವು ಎಷ್ಟರ ಮಟ್ಟಿಗೆ ಹೆಚ್ಚಿರುವುದೆಂಬುದು ಸ್ಪಷ್ಟವಾಗುವುದು.

ರೈಲು ಮಾರ್ಗಗಳು

ಇನ್ನೊಂದು ವಿಚಾರವನ್ನು ಈ ಪಂಗಡದಲ್ಲಿ ಸೇರಿಸಿ ಹೇಳಬಹುದು, ದೇಶದಲ್ಲಿ ಹಾಕಿರುವ ರೈಲುಮಾರ್ಗಗಳು. ಹಿಂದೆ ಕಮಿಷನರುಗಳ ಕಾಲದಲ್ಲಿಯೇ ನಮ್ಮ ದೇಶದಲ್ಲಿ ರೈಲುಗಳನ್ನು ಹಾಕಲು ಮೊದಲಾಯಿತು. ಅಲ್ಲಿಂದೀಚೆಗೆ ಈ ರೈಲುಗಳಿಂದ ಜನಗಳ ಪ್ರಯಾಣಕ್ಕೂ ವ್ಯಾಪಾರಕ್ಕೂ ಇರುವ ಅನುಕೂಲಗಳನ್ನು ನೋಡಿ, ದೇಶದ ಎಲ್ಲಾ ಭಾಗಗಳಿಗೂ ರೈಲುಗಳನ್ನು ಹಾಕಬೇಕೆಂದು ಸರ್ಕಾರದವರು ಸಂಕಲ್ಪಿಸಿದರು. ಆದರೆ ಇಂತಹ ಕಾರ್ಯಗಳಿಗೆ ತಕ್ಕ ಬಂಡವಾಳವು ಅತ್ಯಾವಶ್ಯಕವಾದುದರಿಂದ ರೈಲುಗಳನ್ನು ಮುಂದುವರಿಸುವ ಏರ್ಪಾಡನ್ನು ಮಾನಸಿಕ ಮಾಡಬೇಕಾಯಿತು. ಈಗಿನ ಪ್ರಭುಗಳಾದ ಶ್ರೀ ಕೃಷ್ಣರಾಜೇಂದ್ರ ಒಡೆಯರವರ ಆಳಿಕೆಯಲ್ಲಿ ರೈಲುಗಳನ್ನು ಹಾಕುವುದಕ್ಕೆ ಪ್ರಬಲವಾದ ಪ್ರೋತ್ಸಾಹವುಂಟಾಯಿತು. ಅದರ ಫಲವಾಗಿ ಬೆಂಗಳೂರಿಂದ ಚಿಕ್ಕಬಳ್ಳಾಪುರ, ಶ್ರೀನಿವಾಸಪುರದ ಮಾರ್ಗವಾಗಿ ಕೋಲಾರ ಬೌರಿಂಗಪೇಟೆಗೂ, ಮೈಸೂರಿಂದ ಅರಸೀಕೆರೆಗೂ, ನಂಜನಗೂಡಿನಿಂದ ಚಾಮರಾಜನಗರದವರೆಗೂ, ಚಿಕ್ಕಜಾಜೂರಿನಿಂದ ಚಿತ್ರದುರ್ಗಕ್ಕೂ ಶಿವಮೊಗ್ಗೆಯಿಂದ ಅನಂತಪುರದವರೆಗೂ ರೈಲುಗಳು ಹಾಕಲ್ಪಟ್ಟವು. ಇವುಗಳಲ್ಲದೆ ತರೀಕೆರೆಯಿಂದ ನರಸಿಂಹರಾಜಪುರಕ್ಕೆ 'ಟ್ರಾಂ ಲೈನ್' ಎಂಬುದಾಗಿ ಚಿಕ್ಕ ರೈಲನ್ನು ಹಾಕಲಾಯಿತು. ಈ ರೀತಿ ಕೋಟ್ಯಂತರ ರೂಪಾಯಿಗಳನ್ನು ಬಂಡವಾಳವಾಗಿ ಹಾಕಿರುವುದರಿಂದ ವರ್ಷಂಪ್ರತಿಯೂ ರೈಲುಗಳ ಮೂಲಕ ಲಕ್ಷಾಂತರ ರೂಪಾಯಿಗಳ ವರಮಾನವು ಸರ್ಕಾರಕ್ಕೆ ಬರುತ್ತಿದೆ. ದೇಶದಲ್ಲಿರುವ ಆಸ್ತಿಯನ್ನು ಪರಿಗಣನೆ ಮಾಡುವಾಗ ಈ ರೈಲುಗಳಿಗೆ ಮುಖ್ಯಸ್ಥಾನವು ದೊರೆಯಲೇಬೇಕು.

ಹೀಗೆ ಸರ್ಕಾರದವರು ಕೈಕೊಂಡ ವಿದ್ಯುಚ್ಛಕ್ತಿಯ ಉತ್ಪಾದನೆ, ಕೆರೆಕಟ್ಟೆ ಕಾಲುವೆಗಳು, ಕೈಗಾರಿಕೆಗಳು, ಕಾಡುಗಳ ಬೆಳೆವಣಿಗೆ, ಮತ್ತು ರೈಲುಗಳು ಇವುಗಳ ಮೂಲಕ ದೇಶದ ಬಂಡವಾಳವು ಶಾಶ್ವತವಾಗಿ ಹೆಚ್ಚಿ ಆದಾಯವು ಪ್ರತಿವರ್ಷವೂ ಹೆಚ್ಚುತ್ತಲೇ ಬರುತ್ತಿದೆ. ಬರುವ ವರಮಾನ ದಲ್ಲಿ ಹಣವನ್ನು ಮಿಗಿಸಿಕೊಂಡು ಅದನ್ನು ದೇಶದ ಸಂಪತ್ತನ್ನು ಹೆಚ್ಚಿಸುವ ಏರ್ಪಾಡುಗಳಿಗೆ ವಿನಿಯೋಗಿಸುವುದು ಉತ್ತಮವಾದ ಆರ್ಥಿಕನಿಯಮವೆಂಬುದನ್ನು ಶ್ರೀಮನ್ಮಹಾರಾಜರು ಕಂಡುಕೊಂಡಿದ್ದಾರೆ.

೨. ಪ್ರಜಾಸೌಖ್ಯವನ್ನು ಹೆಚ್ಚಿಸಿರುವ ಏರ್ಪಾಡುಗಳು.

ವಿದ್ಯಾಭ್ಯಾಸ

ಈಗ ಎರಡನೆಯ ಪಂಗಡದ ಏರ್ಪಾಡುಗಳನ್ನು ಪರ್ಯಾಲೋಚಿಸೋಣ. ಈ ಪಂಗಡದಲ್ಲಿ ವಿದ್ಯಾಭ್ಯಾಸ, ಸಹಕಾರ, ವೈದ್ಯ ಮತ್ತು ಆರೋಗ್ಯ, ರೇಷ್ಮೆಯ ವ್ಯವಸಾಯ ಮುಂತಾದುವು ಮುಖ್ಯವಾಗಿವೆ. ಅವುಗಳಲ್ಲಿ ವಿದ್ಯಾಭ್ಯಾಸಕ್ಕೆ ಪ್ರಥಮ ಸ್ಥಾನವು ದೊರೆಯಲೇಬೇಕು. ಅಜ್ಞಾನಾಂಧಕಾರದಲ್ಲಿ ಮುಳುಗಿರುವ ಪ್ರಜೆಗಳಿಗೆ ಯಾವ ಸೌಖ್ಯವು ತಾನೇ ಇದ್ದೀತು. ಅವಿದ್ಯೆಯೆಂಬ ಕತ್ತಲೆಯನ್ನು ಹೋಗಲಾಡಿಸಿ ಪ್ರಜೆಗಳಿಗೆ ತಿಳಿವಳಿಕೆಯೂ, ಸೌಖ್ಯವೂ ಉಂಟಾಗುವಂತೆ ವಿದ್ಯಾದಾನ ಮಾಡಿದ ಮಹತ್ಕೀರ್ತಿಯು ಶ್ರೀಮನ್ಮಹಾರಾಜರಿಗೆ ಚಿರಸ್ಥಾಯಿಯಾಗಿ ನಿಂತಿರುತ್ತದೆ. ೧೯೦೦—೧ರಲ್ಲಿ ಎಲ್ಲಾ ವಿಧವಾದ ಪಾಠಶಾಲೆಗಳೂ ಸೇರಿ ೪,೦೦೯ ಇದ್ದುವು. ಸುಮಾರು ೧,೧೧,೦೦೦ ವಿದ್ಯಾರ್ಥಿಗಳು ಆ ಶಾಲೆಗಳಲ್ಲಿ ವಿದ್ಯಾವ್ಯಾಸಂಗ ಮಾಡುತ್ತಿದ್ದರು. ವಿದ್ಯಾಭ್ಯಾಸಕ್ಕಾಗಿ ಸುಮಾರು ಹತ್ತು ಲಕ್ಷ ರೂಪಾಯಿಗಳು ವೆಚ್ಚವಾಗುತ್ತಿತ್ತು. ವಿದ್ಯೆಯನ್ನು ಕಲಿಯಬೇಕಾದವರ ಸಂಖ್ಯೆಗೂ ಸಾಕ್ಷಾತ್ತಾಗಿ ಕಲಿಯುತ್ತಿದ್ದವರ ಸಂಖ್ಯೆಗೂ ಹೋಲಿಸಿದರೆ, ಕಲಿಯುತ್ತಿದ್ದವರು ಸೇಕಡಾ ೧೪ ಮಾತ್ರವಿದ್ದರು. ಈಗಲಾದರೋ ಎಲ್ಲ ಬಗೆಯ ಪಾಠಶಾಲೆಗಳೂ ಸೇರಿ ೭೦೦೦ದ ಮೇಲಿವೆ. ಓದುವವರ ಸಂಖ್ಯೆಯು ಮೂರೂವರೆ ಲಕ್ಷದ ಮೇಲಿದೆ. ವಿದ್ಯಾಭ್ಯಾಸಕ್ಕಾಗಿ ೭೦ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ವೆಚ್ಚವಾಗುತ್ತಿದೆ. ಓದುತ್ತಿರುವವರ ಸಂಖ್ಯೆ

ಯನ್ನು ಓದಬೇಕಾದವರ ಸಂಖ್ಯೆಯೊಡನೆ ಹೋಲಿಸಿದರೆ ಸೇಕಡ ೩೭ರ ವರೆಗೂ ಏರಿದೆ.

ವಿದ್ಯಾಪ್ರಚಾರವಾಗುವುದಕ್ಕಾಗಿ ಶ್ರೀಮನ್ಮಹಾರಾಜರವರ ಸರ್ಕಾರದವರು ಮಾಡಿರುವ ಮುಖ್ಯವಾದ ಏರ್ಪಾಡುಗಳನ್ನು ಮುಂದೆ ವಿವರಿಸಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಪಾಠಶಾಲೆಗಳಲ್ಲಿದ್ದ ಫೀಜನ್ನು ತೆಗೆದುಹಾಕಿ ಲೋಅರ್ ಸೆಕೆಂಡರಿ ದರ್ಜೆಯವರೆಗೂ ಬಾಲಕ ಬಾಲಕಿಯರಿಗೆಲ್ಲ ಉಚಿತವಾಗಿಯೇ ವಿದ್ಯೆಯನ್ನು ಹೇಳಿಕೊಡುವುದು ಮತ್ತು ಕಡ್ಡಾಯವಾಗಿಯೇ ವಿದ್ಯೆಯನ್ನು ಕಲಿಯಬೇಕೆಂಬುದಾಗಿ ಕಾನೂನು ಮಾಡಿರುವುದು. ಗ್ರಾಮಾಂತರಗಳಲ್ಲೆಲ್ಲ ಪಾಠಶಾಲೆಗಳನ್ನು ಸ್ಥಾಪಿಸಿ ವಿದ್ಯಾಭ್ಯಾಸವು ಮನೆಯ ಮುಂದೆಯೇ ದೊರೆಯುವಂತೆ ಏರ್ಪಡಿಸಿರುವುದು. ಕೀಳು ಜಾತಿಯವರಿಗೂ ವಿದ್ಯೆಯು ಲಭ್ಯವಾಗುವಂತೆ ಪ್ರತ್ಯೇಕ ಪಾಠಶಾಲೆಗಳನ್ನು ಸ್ಥಾಪಿಸಿಗುವುದು, ಮತ್ತು ಸಾಧ್ಯವಾದ ಕಡೆಗಳಲ್ಲಿ ಇತರ ಪಾಠಶಾಲೆಗಳಲ್ಲಿ ಅವರಿಗೆ ಅವಕಾಶವನ್ನು ಕೊಟ್ಟಿರುವುದು. ಬಡವರಾದವರಿಗೆ ಪುಸ್ತಕ ಹಲಗೆಗಳನ್ನು ಉಚಿತವಾಗಿ ಕೊಡುವುದು. ಹಿಂದುಳಿದ ಪಂಗಡದವರಿಗೆ ಪ್ರೋತ್ಸಾಹವಿರಲೆಂದು ವಿದ್ಯಾರ್ಥಿ ವೇತನಗಳನ್ನು ಧಾರಾಳವಾಗಿ ಕೊಡುವುದು. ಕಸಬುಗಳಿಗೂ ವೃತ್ತಿಗಳಿಗೂ ಅನುಕೂಲಿಸುವಂತೆ ಬಗೆಬಗೆಯ ಪಾಠಶಾಲೆಗಳನ್ನು ಸ್ಥಾಪಿಸಿರುವುದು. ಮತ್ತು ನಮ್ಮ ದೇಶದಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿರುವುದು. ಅಲ್ಲಿಂದ ಮುಂದೆಯೂ ವಿದೇಶಗಳಿಗೆ ಹೋಗಿ ಪ್ರೌಢವ್ಯಾಸಂಗ ಮಾಡತಕ್ಕ ಬುದ್ಧಿಶಾಲಿಗಳಿಗೆ ಸಮಯೋಚಿತವಾಗಿ ವಿದ್ಯಾರ್ಥಿ ವೇತನಗಳನ್ನು ಕೊಡುವುದು. ಈ ರೀತಿ ವಿದ್ಯಾಭ್ಯಾಸಕ್ಕಾಗಿ ಸರ್ವತೋಮುಖವಾದ ಏರ್ಪಾಡುಗಳನ್ನು ಸರ್ಕಾರದವರು ಮಾಡಿರುತ್ತಾರೆ. ಸ್ತ್ರೀ ವಿದ್ಯಾಭ್ಯಾಸಕ್ಕಾಗಿಯೂ, ಮಹಮ್ಮದೀಯರ ವಿದ್ಯಾಭ್ಯಾಸಕ್ಕಾಗಿಯೂ, ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡಿರುವರು.

ವೈದ್ಯ ಮತ್ತು ಆರೋಗ್ಯ

ಎರಡನೆಯದು ವೈದ್ಯ ಮತ್ತು ಆರೋಗ್ಯ. ಪ್ರಜೆಗಳಿಗೆ ರೋಗರುಜಿನಾದಿಗಳು ಬಂದರೆ ತಕ್ಕ ಚಿಕಿತ್ಸೆ ಮಾಡಿಸುವ ಏರ್ಪಾಡು ಈಚೆಗೆ ಬೆಳೆಯುತ್ತ ಬಂದಿದೆ. ಕ್ರಿ. ಶ. ೧೯೦೨ ರಲ್ಲಿ ಆಸ್ಪತ್ರೆಗಳು ೧೩೫ರ ವರೆಗೆ

ಇದ್ದವು. ಆಗ ಸುಮಾರು ೫ ಲಕ್ಷ ರೂಪಾಯಿಗಳು ವೆಚ್ಚವಾಗುತ್ತ ಇದ್ದುವು. ಈಗಲಾದರೋ ೨೦೦ರ ಮೇಲೆ ಆಸ್ಪತ್ರೆಗಳಿವೆ. ವೆಚ್ಚವು ಹನ್ನೆರಡು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಿದೆ. ಬೆಂಗಳೂರಿನಲ್ಲಿ ದೊಡ್ಡದಾದ ವಿಕ್ಟೋರಿಯಾ ಆಸ್ಪತ್ರೆ ಇರುವಂತೆಯೇ, ಮೈಸೂರಿನಲ್ಲಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆ ಇರುವುದು. ಎಲ್ಲಾ ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರುಗಳಲ್ಲಿಯೂ ಹೆಂಗಸರ ಮತ್ತು ಹೆರಿಗೆಯ ಆಸ್ಪತ್ರೆಗಳನ್ನು ಸರ್ಕಾರದವರು ಸ್ಥಾಪಿಸಿರುತ್ತಾರೆ. ಈ ಬಗೆಯ ಧರ್ಮಕಾರ್ಯಗಳನ್ನು ಮಾಡುವಂತೆ ಸರ್ಕಾರದವರು ಖಾಸಗೀ ದೊಡ್ಡಮನುಷ್ಯರಿಗೂ ಪ್ರೋತ್ಸಾಹ ಕೊಟ್ಟು ಅವರಿಂದಲೂ ಈ ಬಗೆಯ ಆಸ್ಪತ್ರೆಗಳನ್ನು ಕಟ್ಟಿಸಿರುವರು. ಇದೂ ಅಲ್ಲದೆ ನೇತ್ರ ಚಿಕಿತ್ಸೆಗೆ ಪ್ರತ್ಯೇಕವಾದ ಆಸ್ಪತ್ರೆ, ಕಿವಿ, ಮೂಗು, ಗಂಟಲುಗಳಿಗೆ ಪ್ರತ್ಯೇಕವಾದ ಶಾಖೆ, ಕ್ಷಯರೋಗ ನಿವಾರಣೆಗೂ, ಅಂಟುರೋಗಗಳ ಪರಿಹಾರಕ್ಕೂ ಆಸ್ಪತ್ರೆಗಳು ಎಂದು ಮುಂತಾಗಿ ಏರ್ಪಡಿಸಿ ಆಯಾ ವೈದ್ಯದಲ್ಲಿ ಪಾರಂಗತರಾದ ಪಂಡಿತೋತ್ತಮರನ್ನು ನೇಮಕ ಮಾಡಿರುವರು. ಇನ್ನೊಂದು ಕಡೆ ದೇಶೀಯ ಪದ್ಧತಿಯನ್ನು ಅನುಸರಿಸಿ ಆಯುರ್ವೇದ, ಯುನಾನಿ ಆಸ್ಪತ್ರೆಗಳು ರೋಗಿಗಳಿಗೆ ಔಷಧೋಪಚಾರವನ್ನು ಮಾಡುತ್ತಿವೆ. ಸರ್ಕಾರದವರು ಅನೇಕವಾದ ಆಯುರ್ವೇದ ಮತ್ತು ಯುನಾನಿ ಆಸ್ಪತ್ರೆಗಳಿಗೆ ಗ್ರಾಂಟುಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿರುವರು. ಪಾಶ್ಚಾತ್ಯ ರೀತಿಯಲ್ಲಿ ವೈದ್ಯ ಶಾಸ್ತ್ರವನ್ನು ಹೇಳಿಕೊಡುವುದಕ್ಕಾಗಿ ' ಮೆಡಿಕಲ್ ಸ್ಕೂಲ್ ' ಎಂಬ ಶಾಲೆಯನ್ನೂ ಅದಕ್ಕಿಂತ ಪ್ರೌಢವಾದ ವ್ಯಾಸಂಗಕ್ಕೆ ವಿಶ್ವವಿದ್ಯಾಲಯದಲ್ಲಿ ಮೆಡಿಕಲ್ ಕಾಲೇಜನ್ನೂ ಸರ್ಕಾರದವರು ಸ್ಥಾಪಿಸಿರುವರು. ಇದರಿಂದ ವೈದ್ಯಶಾಸ್ತ್ರದಲ್ಲಿ ತೇರ್ಗಡೆಯಾಗುವವರು ಹೆಚ್ಚಿ ಸ್ವಂತ ಅಂಗಡಿಗಳನ್ನು ಇಟ್ಟುಕೊಂಡು ರೋಗಿಗಳನ್ನು ಗುಣಪಡಿಸುವುದಕ್ಕೂ ಸಹಾಯವಾಗಿದೆ. ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಪ್ರಕಾರ ವೈದ್ಯವನ್ನು ಕಲಿಯುವವರಿಗೂ ಪ್ರೌಢವಾದ ಕಾಲೇಜು ಮೈಸೂರಿನಲ್ಲಿದೆ.

ಈಚೆಗೆ ಕೊಕ್ಕೆ ಹುಳದ ರೋಗ ಮುಂತಾದುವು ಜನಗಳಲ್ಲಿ ಹರಡುತ್ತಿರುವುವೆಂದು ಸರ್ಕಾರದವರು ತಿಳಿದು ಆರೋಗ್ಯ ಶಾಲೆಯನ್ನೇ ಪ್ರತ್ಯೇಕವಾಗಿ ಏರ್ಪಡಿಸಿದ್ದಾರೆ. ಅಮೇರಿಕಾ ದೇಶದಲ್ಲಿ ಸುಶಿಕ್ಷಿತರಾಗಿ ವೈದ್ಯ ವಿದ್ಯೆಯಲ್ಲಿ ಪಾರಂಗತರಾದ ಅಧಿಕಾರಿಗಳನ್ನು ಕೆಲವು ಕಡೆಗಳಲ್ಲಿ ನೇಮಕ

ಮಾಡಿ ಜನರ ಆರೋಗ್ಯವನ್ನು ಪರೀಕ್ಷಿಸುವಂತೆಯೂ ತಕ್ಕ ಸಲಹೆಗಳನ್ನು ಕೊಡುವಂತೆಯೂ ಏರ್ಪಡಿಸಿರುವರು. ಇದೂ ಅಲ್ಲದೆ ಪಾಠಶಾಲೆಗಳಲ್ಲಿ ಓದುವ ಬಾಲಕ ಬಾಲಕಿಯರಿಗೆ ಅವರು ಎಳೆಯವರಾಗಿದ್ದಾಗಲೇ ಅವರ ಶರೀರ ಪರೀಕ್ಷೆಮಾಡಿ ಇರುವ ಕುಂದು ಕೊರತೆಗಳನ್ನು ಸರಿಪಡಿಸುವಂತೆ ಮಾಡಿದ್ದಾರೆ.

ಸಹಕಾರ ಸಂಘಗಳಿಗೆ ಪ್ರೋತ್ಸಾಹ

ಈ ಪಂಗಡದಲ್ಲಿ ಮೂರನೆಯದಾದ ಸಹಕಾರ ಸಂಘಗಳ ಏರ್ಪಾಡು ಅತ್ಯಂತ ಮುಖ್ಯವಾದುದೂ ಸರ್ವಜನೋಪಯುಕ್ತವಾದುದೂ ಆಗಿರುವುದು. ಪ್ರಜೆಗಳು ನಾನಾ ಕಾರಣಗಳಿಂದ ಸಾಲಗಳನ್ನು ಮಾಡಿ ಸಾಹುಕಾರರ ಹಂಗಿಗರಾಗಿ ಕಷ್ಟಪಡುವುದನ್ನು ತಪ್ಪಿಸಬೇಕೆಂಬುದೇ ಈ ಸಹಕಾರ ಸಂಘಗಳ ಮುಖ್ಯೋದ್ದೇಶವು. ಜನರು ತಮ್ಮಲ್ಲಿ ಮಿಗ ಬಹುದಾದ ಹಣವನ್ನು ಹೂಳಿಡದೆ, ನಂಬಿಕೆಗೆ ಅರ್ಹವಾದ ಇಂತಹ ಬ್ಯಾಂಕುಗಳಲ್ಲಿಟ್ಟು ಇತರರಿಗೂ ಉಪಕಾರಮಾಡಿ ತಾವೂ ಲಾಭವನ್ನು ಪಡೆಯಬಹುದು. ಮತ್ತು ಈ ಸಂಘಗಳ ಕಾರ್ಯಕ್ರಮವೆಲ್ಲ ಅವುಗಳ ಸದಸ್ಯರಿಂದಲೇ ನಡೆಯುವುದಾದರಿಂದ ಬೇರೆಯವರ ಆಡಳಿತಕ್ಕೆ ಸಿಕ್ಕದೆ ತಮಗೆ ಅನುಕೂಲವಾಗುವಂತೆ ಬಡ್ಡಿಯನ್ನು ಕಡಮೆ ಮಾಡಿಕೊಳ್ಳಲೂ ಬಹುದು. ಈ ಕಾರಣಗಳಿಂದ ಪ್ರಜೆಗಳಿಗೆ ತಿಳಿವಳಿಕೆ ಕೊಡುವುದಕ್ಕಾಗಿಯೂ ಉಪಕಾರ ಮಾಡುವ ಇಂತಹ ಸಂಘಗಳನ್ನು ಸ್ಥಾಪಿಸುವುದಕ್ಕಾಗಿಯೂ ಸರ್ಕಾರದವರು ಸಹಕಾರದ ಇಲಾಖೆಯನ್ನು ಏರ್ಪಡಿಸಿದರು. ಕ್ರಿ. ಶ. ೧೯೦೫ರಲ್ಲಿ ಸಹಕಾರ ಸಂಘಗಳು ಏಳು ಮಾತ್ರವಿದ್ದುವು. ೧೯೧೨ ರಲ್ಲಿ ಸಹಕಾರ ಸಂಘಗಳ ಸಮ್ಮೇಳನವೊಂದು ನಡೆದು ಶ್ರೀಮದ್ಯುವರಾಜರು ಅಗ್ರಾಸನಾಧಿಪತಿಗಳಾದರು. ಆ ವೇಳೆಗೆ ದೇಶದಲ್ಲಿ ೨೦೮ ಸಂಘಗಳಿದ್ದುವು. ಸದಸ್ಯರ ಸಂಖ್ಯೆಯು ಹದಿಮೂರು ಸಾವಿರಕ್ಕೆ ಮೇಲ್ಪಟ್ಟಿದ್ದಿತು. ಸುಮಾರು ಆರು ಲಕ್ಷ ರೂಪಾಯಿಗಳ ಬಂಡವಾಳವು ಈ ಸಂಘಗಳಲ್ಲಿ ಶೇಖರವಾಗಿದ್ದಿತು. ಒಂದು ಕಡೆ ಅರ್ಥಸಾಧಕ ಮಂಡಲಿಯ ಸ್ಥಾಪನೆ, ಇನ್ನೊಂದು ಕಡೆ ಕೈಗಾರಿಕೆಗಳ ಅಭಿವೃದ್ಧಿ, ಮಗುದೊಂದು ಕಡೆ ಇಲಾಖೆಯವರ ಕಾರ್ಯೋತ್ಸಾಹ, ಈ ಎಲ್ಲ ಕಾರಣಗಳಿಂದ ವಿಶ್ವೇಶ್ವರಯ್ಯನವರ ದಿವಾನಗಿರಿಯಲ್ಲಿ ಸಂಘಗಳ ಸಂಖ್ಯೆಯು ಬಹಳವಾಗಿ ಹೆಚ್ಚಿತು. ಸರ್ಕಾರದವರು ತಮ್ಮ

ಹಣದಲ್ಲಿ ಕೆಲವು ಭಾಗವನ್ನು ಈ ಸಂಘಗಳಲ್ಲಿ ಇಡುತ್ತಾ ಬಂದರು. ಅದರಿಂದ ಸಂಘಗಲ್ಲಿ ಜನರಿಗೆ ಹೆಚ್ಚು ನಂಬಿಕೆಯೂ ತಲೆದೋರಿತು. ಸಂಘಗಳು ಹೆಚ್ಚು ಉತ್ಸಾಹದಿಂದ ಕೆಲಸಮಾಡಲೂ ಅನುಕೂಲಿಸಿತು. ಈಗಲಾದರೋ ೧೭೦೦ ರ ಮೇಲೆ ಸಹಕಾರ ಸಂಘಗಳಿವೆ. ಸದಸ್ಯರ ಸಂಖ್ಯೆಯು ಒಂದು ಲಕ್ಷದ ವರೆಗೆ ಏರಿದೆ. ಷೇರುಗಳ ಮೂಲಧನವು ೩೫ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಿದೆ. ಸುಮಾರು ಮೂರು ಕೋಟಿ ರೂಪಾಯಿಗಳ ಲೇವಾದೇವಿಯು ಈ ಸಂಘಗಳಲ್ಲಿ ನಡೆದಿರುವುದು. ಈಚೆಗೆ ಸರ್ಕಾರದವರು ಚಿಕ್ಕ ಚಿಕ್ಕ ಸಂಘಗಳಿಗೆ ಸಾಲವನ್ನು ಕೊಡುವುದಕ್ಕಾಗಿ ಎಪೆಕ್ಸ್ ಬ್ಯಾಂಕ್ ಎಂಬುದನ್ನೂ ಜಮೀನುಗಳನ್ನು ಅಡಮಾನಹಾಕಿ ಗೋಳಾಡುತ್ತಿರುವ ರೈತರ ಕಷ್ಟಗಳನ್ನು ತಪ್ಪಿಸಲು ಜಮೀನು ಅಡಮಾನದ ಬ್ಯಾಂಕನ್ನೂ ಸ್ಥಾಪಿಸಿ ಜನಗಳಿಗೆ ಉಪಕಾರ ಮಾಡುತ್ತಿದ್ದಾರೆ.

ರೇಷ್ಮೆ ವ್ಯವಸಾಯಕ್ಕೆ ಉತ್ತೇಜನ

ರೇಷ್ಮೆ ವ್ಯವಸಾಯದ ವಿಚಾರವಾಗಿ ಕೆಲವು ಮಾತುಗಳನ್ನು ಹೇಳಿ ಈ ಭಾಗವನ್ನು ಮುಗಿಸಬಹುದು. ನಮ್ಮ ದೇಶದಲ್ಲಿ ರೇಷ್ಮೆಯ ವ್ಯವಸಾಯವು ಸುಮಾರು ಒಂದು ಶತಮಾನಕ್ಕಿಂತಲೂ ಹಿಂದಿನಿಂದ ಇರುವುದೆಂದು ಹೇಳಬೇಕು. ಆದರೆ ಅದಕ್ಕೆ ಸಾಕಾದಷ್ಟು ಲಕ್ಷ್ಯವನ್ನು ಕೊಡದೆಯೂ, ಇತರ ಕಾರಣಗಳಿಂದಲೂ ಸುಮಾರು ೫೦ ವರ್ಷಗಳ ಹಿಂದೆ ಅದು ನಿಂತು ಹೋಗುವ ದುಃಸ್ಥಿತಿಗೆ ಬಂದಿತ್ತು. ಆದರೆ ಕ್ರಿ. ಶ. ೧೯೧೩ ರಲ್ಲಿ ರೇಷ್ಮೆಯ ಇಲಾಖೆಯನ್ನು ಸರ್ಕಾರದವರು ಸ್ಥಾಪಿಸಿದರು. ಅಲ್ಲಿಂದೀಚೆಗೆ ರೇಷ್ಮೆಯ ವ್ಯವಸಾಯಕ್ಕೆ ಪ್ರಬಲವಾದ ಪ್ರೋತ್ಸಾಹವು ದೊರೆತಿರುತ್ತದೆ. ಸಾಮಾನ್ಯವಾಗಿ ಜಮೀನು ವ್ಯವಸಾಯ ಮಾಡತಕ್ಕವರು ಇದನ್ನು ಉಪವೃತ್ತಿಯಾಗಿ ಇಟ್ಟುಕೊಂಡಿರುವರು. ಈಗ ಸುಮಾರು ಎರಡು ಲಕ್ಷ ಸಂಸಾರದವರು ಯಾವುದಾದರೊಂದು ರೀತಿಯಲ್ಲಿ ಈ ರೇಷ್ಮೆಯ ವ್ಯವಸಾಯದಲ್ಲಿ ನಿರತರಾಗಿದ್ದಾರೆ ವರ್ಷ ಒಂದಕ್ಕೆ ಒಂದು ಕೋಟಿ ರೂಪಾಯಿಗಳ ರೇಷ್ಮೆ ತಯಾರಾಗುತ್ತಿದೆ. ರೇಷ್ಮೆಯ ವ್ಯವಸಾಯಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಸ್ಥೂಲವಾಗಿ ನಾಲ್ಕೆಂದು ಹೇಳಬಹುದು, ದಾರಕ್ಕಾಗಿ ಗೂಡುಗಳನ್ನು ಕಾಪಾಡುವುದು, ಬೀಜದ ಹುಳುಗಳನ್ನು ಸಾಕು

ವುದು, ರೇಷ್ಮೆಯ ದಾರವನ್ನು ತೆಗೆಯುವುದು, ಮತ್ತು ಹುಳುವಿಗೆ ಆಹಾರವಾದ ಉಪ್ಪುನೇರಳೆ ಸೊಪ್ಪನ್ನು ಬೆಳೆಯುವುದು. ಇವುಗಳಲ್ಲಿ ಬೀಜದ ಹುಳುಗಳನ್ನು ಒದಗಿಸುವ ಕೆಲಸವನ್ನು ಬಿಟ್ಟು ಉಳಿದ ಕಾರ್ಯಗಳು ಅನೇಕ ತಾಲ್ಲೂಕುಗಳಲ್ಲಿ ನಡೆದು ಬರುತ್ತಿವೆ. ಬೀಜದ ಹುಳುಗಳನ್ನು ಒದಗಿಸುವ ಕೆಲಸವು ಸಾಮಾನ್ಯವಾಗಿ ಬಿಡದಿ ಮತ್ತು ಮಾಗಡಿಯ ಸುತ್ತಮುತ್ತಲೂ ನಡೆಯುತ್ತಿದೆ. ಸರ್ಕಾರದವರು ಚೆನ್ನಪಟ್ಟಣದಲ್ಲಿ ಒಂದು ಕಾರ್ಖಾನೆಯನ್ನಿಟ್ಟು ರೇಷ್ಮೆಯ ಹುಳುಗಳಿಗೆ ಬರುವ ರೋಗಗಳನ್ನೂ ಅವುಗಳಿಗೆ ಪರಿಹಾರೋಪಾಯಗಳನ್ನೂ ಕಂಡುಹಿಡಿದು ರೋಗರುಜಿನಾದಿಗಳಿಲ್ಲದೆ ಆರೋಗ್ಯಸ್ಥಿತಿಯಲ್ಲಿರುವ ಬೀಜದ ಹುಳುಗಳನ್ನು ಸುಲಭವಾದ ಬೆಲೆಗೆ ಒದಗಿಸುತ್ತಿದ್ದಾರೆ. ಇದೂ ಅಲ್ಲದೆ ನೂಲನ್ನು ತೆಗೆಯುವ ಉತ್ತಮ ತರದ ಯಂತ್ರಸಾಧನಗಳನ್ನೂ ಪ್ರಚಾರಕ್ಕೆ ತರುತ್ತಿದ್ದಾರೆ. ಹೀಗೆ ಜಮೀನು ವ್ಯವಸಾಯದ ಜೊತೆಗೆ ರೇಷ್ಮೆಯ ವ್ಯವಸಾಯವನ್ನೂ ಸರ್ಕಾರದವರು ಪ್ರೋತ್ಸಾಹಿಸಿರುವುದರಿಂದ ಜನರ ಜೀವನೋಪಾಯಕ್ಕೆ ಅನುಕೂಲವಾಗಿದೆ.

೩. ಹಕ್ಕುಬಾಧ್ಯತೆಗಳನ್ನು ಹೆಚ್ಚಿಸಿರುವ ಏರ್ಪಾಡುಗಳು.

ಪ್ರಜಾಪ್ರತಿನಿಧಿ ಸಭೆ

ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಹೆಚ್ಚಿಸಿರುವ ಮೂರನೆಯ ಪಂಗಡದ ಏರ್ಪಾಡುಗಳು ಬಹು ಮುಖ್ಯವಾಗಿವೆ. ಇವುಗಳಲ್ಲಿ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ, ಸ್ಥಳೀಯ ಮಂಡಲಿಗಳು, ಮತ್ತು ಅರ್ಥಸಾಧಕ ಸಭೆ ಮುಖ್ಯವಾದುವು. ಯಾವ ದೇಶದಲ್ಲಿ ಪ್ರಜೆಗಳು ತಿಳಿವಳಿಕೆಯುಳ್ಳವರಾಗಿ ರಾಜ್ಯಭಾರ ಕಾರ್ಯವನ್ನು ಸ್ವತಃ ವಹಿಸಿಕೊಳ್ಳುವ ಸಾಮರ್ಥ್ಯವುಳ್ಳವರಾಗಿರುತ್ತಾರೋ ಅಲ್ಲಿ ಸರ್ಕಾರವು ವಿಚಕ್ಷಣೆಯಿಂದಲೂ ದಕ್ಷತೆಯಿಂದಲೂ ನಡೆಯುವುದು; ಮತ್ತು ಪ್ರಜೆಗಳಿಗೆ ಅನುಕೂಲ್ಯಗಳೂ ಇರುವುವು. ಹಿಂದೆ ಶ್ರೀ ಚಾಮರಾಜೇಂದ್ರ ಒಡೆಯರವರ ಆಳಿಕೆಯಲ್ಲಿ ಪ್ರಜಾಪ್ರತಿನಿಧಿ ಸಭೆಯು ಸ್ಥಾಪಿತವಾಯಿತು. ಸರ್ಕಾರದವರು ನಡೆಯಿಸುವ ಕಾರ್ಯಕ್ರಮಗಳ ವರದಿಯನ್ನು ಪ್ರಜಾಪ್ರಮುಖರ ಮುಂದೆ ಹೇಳಿ ಆ ಪ್ರಮುಖರು ಹೇಳುವ ಸಲಹೆಗಳನ್ನೂ ಮಾಡುವ ವಿಜ್ಞಾಪನೆಗಳನ್ನೂ ಗಮನಿಸಿ ಪ್ರಜಾ

ಸೌಖ್ಯವನ್ನು ಹೆಚ್ಚಿಸುವುದೇ ಸರ್ಕಾರದವರ ಧ್ಯೇಯವಾಗಿದೆ. ಹಿಂದೆ ಈ ಸಂಸ್ಥೆಗೆ ಯಾವುದೊಂದು ಹೆಚ್ಚು ಅಧಿಕಾರವೂ ಇರಲಿಲ್ಲ. ಶ್ರೀಮತ್ಕೃಷ್ಣ ರಾಜ ಒಡೆಯರವರ ಪ್ರಭುತ್ವದಲ್ಲಿ ಈ ಪ್ರಜಾಪ್ರತಿನಿಧಿ ಸಭೆಗೆ ಹೆಚ್ಚು ಪ್ರಾಶಸ್ತ್ಯವು ದೊರೆತಿದೆ. ಸಂಸ್ಥಾನದ ಆಯವ್ಯಯದ ಪಟ್ಟಿಯನ್ನು ಚರ್ಚಿಸುವ ಅಧಿಕಾರವು ಕ್ರಿ. ಶ. ೧೯೧೫ರಲ್ಲಿ ಕೊಡಲ್ಪಟ್ಟಿತು. ಈ ಸಭೆಯ ಅಧಿವೇಶನಗಳು ವರ್ಷಕ್ಕೆ ಎರಡುಬಾರಿ ಸೇರುವಂತೆ ಶ್ರೀಮನ್ಮಹಾರಾಜರವರು ೧೯೧೭ ರಲ್ಲಿ ಆಜ್ಞೆಮಾಡಿದರು. ಇದರಿಂದ ಸರ್ಕಾರಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಲು ಅನುಕೂಲವುಂಟಾಯಿತು. ೧೯೧೮ರಲ್ಲಿ ಚುನಾವಣೆದಾರರ ಮತ್ತು ಸದಸ್ಯರಾಗತಕ್ಕವರ ಯೋಗ್ಯತಾಪಕ್ಷಗಳನ್ನು ಕಡಮೆ ಮಾಡಿ ಹೆಚ್ಚು ಜನ ಚುನಾವಣೆಯಲ್ಲಿ ಭಾಗಿಗಳಾಗುವಂತೆಯೂ ಸಾಮಾನ್ಯರೂ ಸದಸ್ಯರಾಗುವಂತೆಯೂ ಸರ್ಕಾರದವರು ಏರ್ಪಡಿಸಿದರು. ಮತ್ತು ಸರ್ಕಾರದ ನಡೆವಳಿಕೆಯ ವಿಚಾರದಲ್ಲಿ ಪ್ರಶ್ನೆಗಳನ್ನು ಹಾಕಿ ಉತ್ತರಗಳನ್ನು ಪಡೆಯುವ ಹಕ್ಕನ್ನು ಸಹ ದಯಪಾಲಿಸಿದರು. ೧೯೨೩ರಲ್ಲಿ ಈ ಸಭೆಯು ಪರಿಷ್ಕೃತವಾಗಿ ಇದರ ರಚನೆಯು ಪ್ರಜಾಪಕ್ಷವಾಗಿ ಮಾರ್ಪಟ್ಟಾಗ ಇನ್ನೂ ಕೆಲವು ಹಕ್ಕುಗಳು ಈ ಮಂಡಲಿಗೆ ದೊರೆತವು. ಕುಂದು ಕೊರತೆಗಳನ್ನು ತಿಳಿಸುವುದಕ್ಕೂ ಆದಾಯ ವ್ಯಯದ ಪಟ್ಟಿಯನ್ನು ಚನ್ನಾಗಿ ಚರ್ಚೆಮಾಡಿ ಹೆಚ್ಚು ಹಣವನ್ನು ಕೆಲವು ಬಾಬುಗಳಿಗೆ ಕೇಳುವುದಕ್ಕೂ ಹಕ್ಕು ಉಂಟಾಯಿತು. ಮತ್ತು ಆಡಳಿತದ ವಿಚಾರವಾಗಿ ಪ್ರಶ್ನೆಗಳನ್ನು ಹಾಕತಕ್ಕ, ಉತ್ತರಗಳನ್ನು ಪಡೆಯತಕ್ಕ ಸೌಲಭ್ಯವೂ ದೊರೆಯಿತು. ಈಗ ಆ ಸಭೆಯ ಕಾರ್ಯಕ್ರಮಗಳನ್ನು ಪರಿಶೀಲಿಸಿ ನೋಡಿದರೆ ಕೆಳಗೆ ಕಾಣಿಸಿರುವ ವಿಷಯಗಳು ನಮ್ಮ ಗಮನಕ್ಕೆ ಬರುತ್ತವೆ. ಸಂಸ್ಥಾನದಲ್ಲಿ ಜಾರಿಗೆ ಬರತಕ್ಕ ಪ್ರತಿಯೊಂದು ಶಾಸನ ಅಥವಾ ನಿಬಂಧನೆಯು ಈ ಸಭೆಯಲ್ಲಿ ಚರ್ಚೆಗೆ ಬಂದು ಅದರ ಅಭಿಪ್ರಾಯವನ್ನು ಸರ್ಕಾರದವರು ತೆಗೆದುಕೊಳ್ಳುವುದು ; ಹೆಂಗಸರಿಗೂ ಚುನಾವಣೆ ಮಾಡುವ ಹಕ್ಕು ಮತ್ತು ಸಭೆಗೆ ಬರತಕ್ಕ ಹಕ್ಕು ದೊರೆತಿರುವುದು ; ಆದಾಯ ವ್ಯಯದ ಪಟ್ಟಿಗಳನ್ನು ಚರ್ಚಿಸುವುದು ಮತ್ತು ತತ್ಸಂಬಂಧವಾಗಿ ಠರಾವುಗಳನ್ನು ತರುವುದು ; ಆಡಳಿತದ ವಿಚಾರವಾಗಿಯೂ ಠರಾವುಗಳನ್ನು ತರುವುದು ; ಸಭೆಯ

ಅನುಮತಿ ಇಲ್ಲದೆ ಯಾವ ಹೊಸ ಕಂದಾಯವನ್ನೂ ಹಾಕದೇ ಇರುವುದು ; ಚುನಾವಣೆಯಲ್ಲಿ ಬರಲಾಗದ ಸಣ್ಣ ಪುಟ್ಟ ಪಂಗಡದವರ ಪ್ರಾತಿನಿಧ್ಯವನ್ನು ಪಾಲಿಸುವುದಕ್ಕಾಗಿ ಆಯಾ ಪಂಗಡಗಳಿಂದ ನಾಮಕರಣಮಾಡಿ ಸದಸ್ಯರನ್ನು ಸಭೆಗೆ ಬರಮಾಡಿಕೊಳ್ಳುವುದು. ಈ ಸಭೆಯಿಂದ ಇತರ ಸಮಿತಿಗಳಿಗೆ, ಕಳುಹಿಸುವುದು ಇವುಗಳೆಲ್ಲ ಅಮೂಲ್ಯವಾದ ಹಕ್ಕುಗಳೆಂಬುದರಲ್ಲಿ ಸಂದೇಹವಿಲ್ಲ.

ನ್ಯಾಯವಿಧಾಯಕ ಸಭೆ.

ಎರಡನೆಯದು ನ್ಯಾಯವಿಧಾಯಕ ಸಭೆ. ಈ ಸಂಸ್ಥೆಯನ್ನು ೧೯೦೭ ರಲ್ಲಿ ಎಂದರೆ ದಿವಾನ್ ಮಾಧವರಾಯರ ಕಾಲದಲ್ಲಿ ಶ್ರೀಮನ್ ಮಹಾರಾಜರು ಸ್ಥಾಪಿಸಿದರು. ನಮ್ಮ ದೇಶಕ್ಕೆ ಆವಶ್ಯಕವಾದ ಕಟ್ಟಳೆ ಕಾನೂನುಗಳನ್ನು ಚರ್ಚಿಸಿ ಜಾರಿಗೆತರಲು ಅನುಮತಿ ಕೊಡುವುದೇ ಈ ಸಂಸ್ಥೆಯ ಕರ್ತವ್ಯ. ಈ ಕಾರ್ಯವನ್ನು ಹಿಂದೆ ಸರ್ಕಾರದ ಮಂತ್ರಾಲೋಚನ ಸಭೆಯವರೇ ನೆರವೇರಿಸುತ್ತಿದ್ದರು. ಪ್ರಜಾಕ್ಷೇಮಕ್ಕೆ ಬೇಕಾದ, ಮತ್ತು ಪ್ರಜೆಗಳ ಹಕ್ಕುಗಳಿಗೆ ಸಂಬಂಧಪಟ್ಟ ಕಾನೂನು ಮುಂತಾದುವುಗಳನ್ನು ಬಹಿರಂಗವಾಗಿ ಚರ್ಚಿಸದೇ ಇದ್ದುದೂ, ಆ ಚರ್ಚೆಯಲ್ಲಿ ಪ್ರಜಾಪ್ರಮುಖರು ಭಾಗಿಗಳಾಗದೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗದೇ ಇದ್ದುದೂ ಈ ಏರ್ಪಾಡಿನಲ್ಲಿ ಮುಖ್ಯವಾದ ದೋಷಗಳಾಗಿದ್ದುವು. ನ್ಯಾಯವಿಧಾಯಕ ಸಭೆಯನ್ನು ಸ್ಥಾಪಿಸಿದಾಗ ಚುನಾವಣೆಯಿಂದ ಬರತಕ್ಕವರು ಯಾರೂ ಇರಲಿಲ್ಲ. ಆದರೆ ೧೯೦೮ ರಲ್ಲಿ ಪ್ರಜಾಪ್ರತಿನಿಧಿ ಸಭೆಯಿಂದ ಇಬ್ಬರು ಸದಸ್ಯರು ಬರುವುದಕ್ಕೂ ೧೯೧೪ ರಲ್ಲಿ ಎಂಟು ಡಿಸ್ಟ್ರಿಕ್ಟುಗಳಿಂದ ನಾಲ್ಕು ಜನರೂ, ಪ್ರಜಾಪ್ರತಿನಿಧಿ ಸಭೆಯಿಂದ ನಾಲ್ಕು ಜನರೂ ಚುನಾವಣೆಯ ಮೂಲಕ ಬರುವುದಕ್ಕೂ ಬೇಕಾದ ತಿದ್ದುಪಡಿಗಳನ್ನು ಮಾಡಿದರು. ಕ್ರಮ ಕ್ರಮವಾಗಿ ಚುನಾವಣೆಯಿಂದ ಬರುವವರ ಸಂಖ್ಯೆಯು ಹೆಚ್ಚಿತು. ನ್ಯಾಯವಿಧಾಯಕ ಸಭೆಯ ಸದಸ್ಯರು ಮೂರು ವರ್ಷಗಳಕಾಲ ಸದಸ್ಯತ್ವವನ್ನು ಪಡೆಯಬಹುದೆಂದು ಅಂಗೀಕಾರವಾಯಿತು. ಹಣಕಾಸುಗಳ ವಿಚಾರದಲ್ಲಿ ಸಲಹೆಗಳನ್ನು ಕೊಡಲು ಕೆಲವು ಸದಸ್ಯರ ಒಂದು ಸಮಿತಿಯು ಏರ್ಪಟ್ಟಿತು. ಆದಾಯ ವ್ಯಯ ಪಟ್ಟಿಯನ್ನು ಚರ್ಚಿಸುವುದಕ್ಕೂ, ಪ್ರಶ್ನೆಗಳನ್ನು

ಹಾಕಿ ಉತ್ತರ ಪಡೆಯುವುದಕ್ಕೂ ಹಕ್ಕುಗಳು ದೊರೆತವು. ೧೯೨೩ ರಲ್ಲಿ ಸರ್ಕಾರದ ರಚನೆಯು ಪರಿಷ್ಕೃತವಾದಾಗ ಈ ಸಭೆಗೆ ಇನ್ನೂ ಹೆಚ್ಚಾಗಿ ಪ್ರಾಶಸ್ತ್ಯವು ದೊರೆಯಿತು. ಈಗ ಸದಸ್ಯರ ಸಂಖ್ಯೆಯು ೫೦ರ ವರೆಗಿದೆ. ಎಂಟು ಡಿಸ್ಟ್ರಿಕ್ಟುಗಳಿಂದ ಎಂಟು ಮಂದಿ, ಪ್ರಜಾಪ್ರತಿನಿಧಿ ಸಭೆಯಿಂದ ಎಂಟು ಮಂದಿ, ಸ್ಥಳೀಯ ಸಂಸ್ಥೆಗಳಿಂದಲೂ, ಕೋಮುವಾರು ಸಂಸ್ಥೆಗಳಿಂದಲೂ ಕೆಲವರು, ಹೀಗೆ ಚುನಾವಣೆಯಾಗಿ ಬರುವುದಕ್ಕೆ ಸರ್ಕಾರದವರು ಅವಕಾಶಕೊಟ್ಟಿದ್ದಾರೆ. ಶಾಸನ ಮಾಡತಕ್ಕ ಕೆಲಸವೊಂದಲ್ಲದೆ, ಆಡಳಿತದ ವಿಚಾರದಲ್ಲಿ ಆಕ್ಷೇಪಣೆಗಳು, ಠರಾವುಗಳು, ಆದಾಯವ್ಯಯ ಪಟ್ಟಿಯನ್ನು ಚರ್ಚಿಸಿ ಹಣದ ಬಾಬುಗಳನ್ನು ಹೆಚ್ಚು ಕಡಮೆ ಮಾಡುವುದು, ಇತ್ಯಾದಿಯಾಗಿ ಪಲವು ಹಕ್ಕುಗಳು ಈ ಮಂಡಲಿಗೆ ದೊರೆತಿವೆ. ಇವುಗಳಿಂದ ಸರ್ಕಾರದ ಆಡಳಿತವು ಪ್ರಜಾಪಕ್ಷವಾಗಿಯೂ, ಪ್ರಜಾಭಿಪ್ರಾಯದಂತೆಯೂ ನಡೆಯುವುದಕ್ಕೆ ಬಹುಮಟ್ಟಿಗೆ ಅನುಕೂಲವಾಗಿದೆ.

ಸ್ಥಳೀಯ ಸಂಸ್ಥೆಗಳು

ಮೂರನೆಯದು ಸ್ಥಳೀಯ ಸಂಸ್ಥೆಗಳು. ಇವುಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್, ಮುನಿಸಿಪಾಲಿಟಿ, ಮತ್ತು ಗ್ರಾಮಪಂಚಾಯಿತಿಗಳು ಸೇರಿವೆ. ಆಯಾ ಪ್ರಾಂತದ ಆಡಳಿತವನ್ನು ಕೊಂಚಮಟ್ಟಿಗೆ ಪ್ರಜಾಪ್ರಮುಖರಿಗೆ ಒಪ್ಪಿಸಿ ವೆಚ್ಚಕ್ಕೆ ಬೇಕಾದ ಹಣವನ್ನು ಕಂದಾಯ ತೆರಿಗೆಗಳ ಮೂಲಕ ಈ ಸಂಸ್ಥೆಗಳು ಎತ್ತುವಂತೆ ಸರ್ಕಾರದವರು ಏರ್ಪಾಡು ಮಾಡಿದ್ದಾರೆ. ಜನಗಳಿಗೆ ಆಡಳಿತದ ವಿಚಾರವು ಮಂದಟ್ಟಾಗುವುದಕ್ಕೂ ತಮ ತಮಗೆ ಸಂಬಂಧಪಟ್ಟ ಕೆಲಸಗಳನ್ನು ತಾವೇ ಮಾಡಿಕೊಳ್ಳುವ ಹಕ್ಕು ದೊರೆಯುವುದಕ್ಕೂ ದೇಶದಲ್ಲಿ ಅಭಿಮಾನ ಉಂಟಾಗುವುದಕ್ಕೂ ಸ್ಥಳೀಯ ಸಂಸ್ಥೆಗಳು ಉಪಯುಕ್ತವಾಗಿವೆ. ಈಗ ಡಿಸ್ಟ್ರಿಕ್ಟು ಬೋರ್ಡುಗಳಲ್ಲಿ ಖಾಸಗೀ ದೊಡ್ಡ ಮನುಷ್ಯರೇ ಪ್ರೆಸಿಡೆಂಟ್ ಮತ್ತು ವೈಸ್ ಪ್ರೆಸಿಡೆಂಟ್ ಅಧಿಕಾರಗಳನ್ನು ವಹಿಸಿದ್ದಾರೆ. ಆ ಮಂಡಲಿಯಲ್ಲಿ ಚುನಾವಣೆಯಿಂದ ಬರತಕ್ಕವರ ಸಂಖ್ಯೆಯು ಹೆಚ್ಚಾಗಿಯೇ ಇದೆ. ಇವರು ಆಸ್ಪತ್ರೆಗಳನ್ನೂ ಪಾಠಶಾಲೆಗಳನ್ನೂ ಸ್ಥಾಪಿಸಿರುವುದಲ್ಲದೆ, ಮುಸಾಫರ್ ಬಂಗಲೆಗಳನ್ನು ಕಟ್ಟಿಸುವುದು, ರಸ್ತೆಗಳನ್ನು ಹಾಕುವುದು, ಬಾವಿಗಳನ್ನು ತೋಡಿಸುವುದು ಮುಂತಾದ ಸರ್ವಜನೋಪಯುಕ್ತವಾದ ಕೆಲಸಗಳನ್ನು ಮಾಡಿರುತ್ತಾರೆ.

ಮುನಿಸಿಪಾಲಿಟಿಗಳ ಕಾನೂನು ಮೊತ್ತ ಮೊದಲು ೧೯೦೭ರಲ್ಲಿ ಜಾರಿಗೆ ಬಂತು. ಪ್ರಾರಂಭದಲ್ಲಿ ಸರ್ಕಾರದ ಅಧಿಕಾರಿಗಳ ವ್ಯಾಪನೆಯೇ ಈ ಸಂಸ್ಥೆಗಳಲ್ಲಿ ಬಹುಮಟ್ಟಿಗೆ ಇತ್ತು. ಆದರೆ ೧೯೧೮ರಲ್ಲಿಯೂ ಅಲ್ಲಿಂದೀಚೆಗೂ ಖಾಸಗೀ ದೊಡ್ಡ ಮನುಷ್ಯರೇ ಮುನಿಸಿಪಾಲಿಟಿಗಳ ಆಡಳಿತವನ್ನು ನಡೆಸಿಕೊಂಡು ಬರುವಂತೆ ಸರ್ಕಾರದವರು ಏರ್ಪಡಿಸಿದ್ದಾರೆ. ಇದರಿಂದ ಆಯಾ ಪಟ್ಟಣದ ಅಥವ ಊರಿನ ನೈರ್ಮಲ್ಯ, ಆರೋಗ್ಯ, ಬೆಳಕು, ಕುಡಿಯುವ ನೀರು ಮುಂತಾದುವುಗಳನ್ನು ಏರ್ಪಾಡು ಮಾಡಿಕೊಳ್ಳಲು, ಜನಗಳಿಗೆ ಅವಕಾಶ ದೊರೆಯಿತು. ಬೆಂಗಳೂರು–ಮೈಸೂರು ಮತ್ತು ತುಮಕೂರುಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಈ ಪೌರಸಭೆಗಳಿಗೆ ಸರ್ಕಾರದವರು ವಹಿಸಿರುತ್ತಾರೆ. ಈ ಪೌರಸಭೆಯವರು ಆಸ್ಪತ್ರೆಗಳನ್ನಿಟ್ಟಿರುವರು, ವಾಚನಾಲಯಗಳನ್ನು ಸ್ಥಾಪಿಸಿರುವರು, ಒಳ್ಳೆಯ ರಸ್ತೆಗಳನ್ನು ಹಾಕಿರುವರು.

ಗ್ರಾಮಪಂಚಾಯಿತಿಗಳ ಕಾನೂನು ಜಾರಿಗೆ ಬಂದು ಹತ್ತು ವರ್ಷಗಳಾದುವು. ಇದರಿಂದ ಆಯಾ ಗ್ರಾಮದ ಪ್ರಮುಖರೇ ತಮಗೆ ಬೇಕಾದ ಅನುಕೂಲ್ಯಗಳನ್ನು ಒದಗಿಸಿಕೊಳ್ಳಲು ಅವಕಾಶ ದೊರೆತಿದೆ. ಗ್ರಾಮಪಂಚಾಯಿತಿಯ ಸದಸ್ಯರು ಚುನಾವಣೆಯಿಂದ ಬರತಕ್ಕವರು. ಅಧ್ಯಕ್ಷರನ್ನು ಸರ್ಕಾರದವರು ನೇಮಕ ಮಾಡುತ್ತಿರುವುದಾದರೂ, ಗ್ರಾಮದಲ್ಲಿ ಅಕ್ಷರಸ್ಥರು ಹೆಚ್ಚಿ ತಿಳಿವಳಿಕೆಯು ಬಂದಂತೆಲ್ಲ ಅಧ್ಯಕ್ಷರನ್ನು ಚುನಾಯಿಸುವ ಹಕ್ಕೂ ಗ್ರಾಮಸ್ಥರಿಗೆ ದೊರೆಯುವುದರಲ್ಲಿ ಸಂದೇಹವಿಲ್ಲ. ಪಾಠಶಾಲೆ, ಆಯುರ್ವೇದ ಆಸ್ಪತ್ರೆ, ಕೆರೆಗಳನ್ನು ಸರಿಪಡಿಸುವುದು, ರಸ್ತೆಗಳನ್ನು ಮಾಡುವುದು, ಬಾವಿಗಳನ್ನು ತೋಡುವುದು, ವಾಚನಾಲಯಗಳನ್ನು ಇಡುವುದು ಇವೇ ಮುಂತಾದ ಕೆಲಸಗಳನ್ನು ಪಂಚಾಯಿತಿಯವರು ಮಾಡಬಹುದು. ಇವುಗಳಿಗೆ ಬೇಕಾದ ಹಣವನ್ನು ಮನೆಗಂದಾಯ ಮುಂತಾದುವುಗಳಿಂದ ಪಡೆಯಬಹುದು. ಕಂದಾಯಗಳನ್ನು ಕೊಡಲಾರದವರು ಸ್ವತಃ ಕೆಲಸ ಮಾಡಿ ಕಂದಾಯಕ್ಕೆ ವಜಾ ಕಟ್ಟುವಂತೆಯೂ ಮಾಡಿಕೊಳ್ಳಬಹುದು. ಪ್ರಾಥಮಿಕ ವಿದ್ಯಾಭ್ಯಾಸದ ಕಾನೂನು ಜಾರಿಗೆ ಬರುತ್ತಿರುವುದರಿಂದ ಗ್ರಾಮ ಪಂಚಾಯಿತಿಗಳ ಜವಾಬ್ದಾರಿಯು ಇನ್ನೂ ಹೆಚ್ಚುತ್ತ ಬರುವುದೆಂಬುದರಲ್ಲಿ ಸಂದೇಹವಿಲ್ಲ.

ಅರ್ಥಸಾಧಕ ಸಭೆ

ಅರ್ಥಸಾಧಕ ಸಭೆಯ ವಿಚಾರದಲ್ಲಿ ಕೆಲವು ಮಾತುಗಳನ್ನು ಹೇಳ್ಳುವುದು ಯುಕ್ತವಾಗಿದೆ. ಈ ಸಭೆಯು ೧೯೧೧ ರಲ್ಲಿ ಸ್ಥಾಪಿತವಾಯಿತು. ದೇಶದ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಗೊಳಿಸುವುದೇ ಇದರ ಉದ್ದೇಶ. ಸರ್ಕಾರವು ಪ್ರಜೆಗಳ ಪುರೋಭಿವೃದ್ಧಿಯಲ್ಲಿ ಆಸಕ್ತವಾಗಿರುವುದಾದರೂ ಪ್ರಜೆಗಳು ಸರ್ಕಾರದೊಂದಿಗೆ ಸಹಕಾರ ಮಾಡದಿದ್ದರೆ ಕ್ಷಿಪ್ರದಲ್ಲಿ ಅಭಿವೃದ್ಧಿ ಕಂಡುಬರುವುದಿಲ್ಲ. ಆದುದರಿಂದ ವ್ಯಾಪಾರಗಾರರೂ, ಕೈಗಾರಿಕೆಯವರೂ, ವಿದ್ಯಾಭಿಮಾನಿಗಳೂ, ರೈತರೂ ಆದ ಪ್ರಜಾಪ್ರಮುಖರನ್ನು ಸೇರಿಸಿ, ದೇಶದ ಪ್ರಕೃತಿ ಸ್ಥಿತಿ, ಏಳಿಗೆಗೆ ಬರಬೇಕಾದರೆ ಮುಂದೆ ಮಾಡಬೇಕಾದ ಏರ್ಪಾಡುಗಳು, ಸರ್ಕಾರದವರು ಕೊಡಬಹುದಾದ ಸಹಾಯ, ಪ್ರಜೆಗಳು ಆಚರಿಸಬೇಕಾದ ಮಾರ್ಗಗಳು, ಇವೇ ಮುಂತಾದ ವಿಷಯಗಳನ್ನು ಚರ್ಚಿಸಿ ಪ್ರಜೆಗಳಿಗೆ ದೇಶದ ಅಭಿವೃದ್ಧಿಯಲ್ಲಿರುವ ಬಾಧ್ಯತೆಯನ್ನು ಸ್ಪಷ್ಟಪಡಿಸಬೇಕಾದುದು ಅತ್ಯಾವಶ್ಯಕವಾಯಿತು. ಇದಕ್ಕಾಗಿ ಸರ್ಕಾರದ ಅಧಿಕಾರಿಗಳೂ, ಖಾಸಗಿ ದೊಡ್ಡ ಮನುಷ್ಯರೂ ಸೇರಿದ ಕೆಲವು ಸಮಿತಿಗಳನ್ನು ಅರ್ಥಸಾಧಕ ಸಭೆಗೆ ಅಂಗವಾಗಿ ಏರ್ಪಡಿಸಿದರು. ಜಮೀನು ವ್ಯವಸಾಯ, ಕೈಗಾರಿಕೆಗಳು ಮತ್ತು ವಿದ್ಯಾಭ್ಯಾಸ ಎಂಬುದಾಗಿ ಮುಖ್ಯವಾದ ಮೂರು ಸಮಿತಿಗಳು ಹೀಗೆ ಏರ್ಪಟ್ಟುವು. ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಹಿಂದೆ ಎಕನಾಮಿಕ್ ಸೂಪರಿಂಟೆಂಡೆಂಟ್ ಎಂಬ ಅಧಿಕಾರಿಯು ನೇಮಕಮಾಡಿ ಕೈಗಾರಿಕೆ, ವ್ಯವಸಾಯ ಮುಂತಾದುವು ಮುಂದುವರಿಯಲು ಪ್ರೋತ್ಸಾಹವನ್ನು ಕೊಡಲಾಯಿತು.

ರಾಜ್ಯಾಂಗ ಪದ್ಧತಿಯ ಪರಿಷ್ಕರಣ

ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ಹೆಚ್ಚಿಸಿರುವ ಏರ್ಪಾಡುಗಳಲ್ಲಿ ಅವುಗಳಿಗಾಗಿರುವ ಸಂಸ್ಥೆಗಳನ್ನು ಮೇಲೆ ವಿವರಿಸಿದ್ದೇವೆ. ಈ ಸಂಸ್ಥೆಗಳಿಗಿರುವ ಅಧಿಕಾರವನ್ನು ಕ್ರಮ ಕ್ರಮವಾಗಿ ಶ್ರೀಮನ್ ಮಹಾರಾಜರು ಹೇಗೆ ಹೆಚ್ಚಿಸಿರುವರೆಂಬುದನ್ನು ನೋಡಿದ್ದೇವೆ. ಸರ್ಕಾರದ ಆಡಳಿತವು ಪ್ರಜಾಭಿಪ್ರಾಯದಂತೆ ನಡೆಯಲು ಮಾಡಿದ ಏರ್ಪಾಡುಗಳಲ್ಲಿ ಮುಖ್ಯವಾದುದು 1923ರಲ್ಲಿ ಆಚರಣೆಗೆ ಬಂದ ರಾಜ್ಯಾಂಗ ಪದ್ಧತಿಯ ಪರಿಷ್ಕಾರ. ಈ ಪರಿಷ್ಕಾರದಿಂದ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆ ಮುಂತಾ

ದುವು ಶಾಸನಬದ್ಧವಾಗಿ ಸದಸ್ಯರ ಹಕ್ಕುಗಳು ಅಂಗೀಕೃತವಾದುವು. ಆ ಸಂಸ್ಥೆಗಳಿಗೆ ಹಿಂದೆ ವಿವರಿಸಿದಂತೆ ಹೆಚ್ಚು ಅಧಿಕಾರಗಳು ಕೊಡಲ್ಪಟ್ಟುವು. ಸರ್ಕಾರದ ಆಡಳಿತದಲ್ಲಿ ಸೇರಿ ಅಭಿಪ್ರಾಯವನ್ನು ತಿಳಿಸುವುದಕ್ಕೆ ಕೆಲವು ಸಮಿತಿಗಳು ಶಾಶ್ವತವಾಗಿ ಏರ್ಪಟ್ಟುವು. ಸ್ಥಳಿಕ ಸಂಸ್ಥೆಗಳಿಗಿರುವ ಅಧಿಕಾರ ಹಕ್ಕುಗಳು ಹೆಚ್ಚಿರುವುವು. ಸ್ತ್ರೀಯರಿಗೂ ಚುನಾವಣೆ ಮಾಡುವ ಮತ್ತು ಸಭೆಗಳಿಗೆ ಬರುವ ಹಕ್ಕುಗಳು ದೊರೆತುವು.

೪. ದಕ್ಷತೆಯ ಏರ್ಪಾಡುಗಳು ಸೆಕ್ರಿಟೇರಿಯಟ್ಟಿನ ಪರಿಷ್ಕರಣ.

ನಾಲ್ಕನೆಯ ಪಂಗಡಕ್ಕೆ ಸೇರಿದ ಏರ್ಪಾಡುಗಳನ್ನು ಈಗ ಪರ್ಯಾಲೋಚಿಸುವೆವು. ಇವು ರಾಜ್ಯಭಾರ ಕ್ರಮದ ದಕ್ಷತೆಗಾಗಿ ಮಾಡಿದ ಏರ್ಪಾಡುಗಳು. ಶ್ರೀಮಜ್ ಮಹಾರಾಜರು ಪಟ್ಟಕ್ಕೆ ಬಂದ ಸ್ವಲ್ಪ ಕಾಲದಲ್ಲಿಯೇ ಸರ್ಕಾರದ ಕಾಗದ ಪತ್ರಗಳು ವ್ಯವಸ್ಥೆಯಾಗುವುದಕ್ಕೆ ಬಹುಕಾಲ ಹಿಡಿಯುವುದನ್ನು ನೋಡಿ, ಅದನ್ನು ಸರಿಪಡಿಸಲು ಏರ್ಪಾಡು ಮಾಡಿದರು. ಸೆಕ್ರಿಟೇರಿಯಟ್ ಕಚೇರಿಯನ್ನು ಇಂಡಿಯಾ ಸರ್ಕಾರದ ಸೆಕ್ರಿಟೇರಿಯಟ್ ಕಚೇರಿಯ ಮಾದರಿಯನ್ನನುಸರಿಸಿ ಪರಿಷ್ಕರಿಸಿದರು. ಕಚೇರಿಯ ಕಾರ್ಯಕ್ರಮಗಳಿಗೆ ಸಂಬಂಧಪಟ್ಟಂತೆ ಒಂದು ಮ್ಯಾನ್ಯುಯಲ್ ಎಂಬ ಪುಸ್ತಕವನ್ನು ರಚನೆ ಮಾಡಿಸಿ ಅಲ್ಲಿಯ ಪ್ರತಿಯೊಬ್ಬ ಉದ್ಯೋಗಸ್ಥನೂ ಅದರಲ್ಲಿ ತೇರ್ಗಡೆಯಾಗುವಂತೆ ಮಾಡಿದರು. ಹೀಗೆ ಮಾಡಿದ ಏರ್ಪಾಡುಗಳಿಂದ ಸರ್ಕಾರದ ಕಾಗದ ಪತ್ರಗಳು ಸುಸೂತ್ರವಾಗಿಯೂ, ಶೀಘ್ರವಾಗಿಯೂ ವ್ಯವಸ್ಥೆಯಾಗುವುದಕ್ಕೆ ಅನುಕೂಲವಾಯಿತು.

ಸಿವಿಲ್ ಸರ್ವಿಸ್ ಪರೀಕ್ಷೆಯ ತಿದ್ದುಪಡಿ

'ಸಿವಿಲ್ ಸರ್ವಿಸ್' ಎಂಬ ಶಾಖೆಯು ೧೮೬೨ರಲ್ಲಿ ಸ್ಥಾಪಿತವಾಗಿದ್ದರೂ ಅದರಲ್ಲಿ ಕೆಲವು ಕುಂದುಕೊರತೆಗಳಿದ್ದುವು. ಬುದ್ಧಿವಂತರೂ, ಒಳ್ಳೆಯ ಮನೆತನದವರೂ, ದಕ್ಷರೂ ಆದ ಯುವಕರನ್ನು ಸರ್ಕಾರದ ಮುಖ್ಯ ಕೆಲಸಗಳಿಗೆ ಸೇರಿಸಿ ಕಾರ್ಯ ಕ್ರಮಗಳು ವಿಚಕ್ಷಣೆಯಿಂದ ನಡೆಯುವಂತೆ ಮಾಡಬೇಕೆಂಬುದೇ ಈ ಶಾಖೆಯನ್ನು ಸ್ಥಾಪಿಸಿದುದರ ಉದ್ದೇಶ. ಶ್ರೀಮಜ್ ಮಹಾರಾಜರು ಈ ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಕಟ್ಟು

ನಿಟ್ಟಾಗಿ ಏರ್ಪಡಿಸಿ, ಆ ಕಠಿನವಾದ ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಮಾತ್ರ ಉದ್ಯೋಗಗಳು ದೊರೆಯುವಂತೆ ಮಾಡಿದರು. ೧೯೧೨ರಲ್ಲಿ ಮೈಸೂರಿನವರು ಮಾತ್ರ ಈ ಪರೀಕ್ಷೆಗಳಿಗೆ ಕೂಡಬಹುದೆಂಬ ನಿರ್ಬಂಧ ಉಂಟಾಯಿತು. ೧೯೨೪ರಲ್ಲಿ ಸಿವಿಲ್ ಸರ್ವಿಸ್ ಶಾಖೆಯು ಪುನಃ ಪರಿಷ್ಕೃತ ವಾಯಿತು. ಇದರಿಂದ ಕೆಲವರು ಪರೀಕ್ಷೆಯಲ್ಲಿ ತೇರ್ಗಡೆಯ ಮೂಲಕವೂ, ಕೆಲವರು ಕೆಳಗಿನ ಅಧಿಕಾರದಿಂದ ಬಡ್ತಿ ಪಡೆದೂ ಇನ್ನು ಕೆಲವರು ಶ್ರೀಮನ್ ಮಹಾರಾಜರಿಂದ ಸಾಕ್ಷಾತ್ತಾಗಿ ನೇಮಕರಾಗಿಯೂ ಬರುವಂತಾಯಿತು. ಹೀಗೆ ಬರುವ ಯುವಕರಿಗೆಲ್ಲ ಮುಖ್ಯವಾದ ಇಲಾಖೆಗಳಲ್ಲಿ ಒಳ್ಳೆಯ ಶಿಕ್ಷಣವು ದೊರೆಯುವಂತೆ ಏರ್ಪಡಿಸಿದ್ದಾರೆ. ಇದರಿಂದ ರಾಜ್ಯಭಾರ ಕ್ರಮವು ದಕ್ಷತೆಯಿಂದ ನಡೆಯಲು ಅನುಕೂಲವಾಗಿದೆ.

ಇಲಾಖೆಗಳನ್ನು ಹೆಚ್ಚಿಸಿದ್ದು

ಆಡಳಿತದ ಕಾರ್ಯಗಳು ಹೆಚ್ಚಿದಂತೆಲ್ಲ ಇಲಾಖೆಗಳನ್ನು ಹೆಚ್ಚಿಸಿ, ಆಯಾ ಇಲಾಖೆಗಳಿಗೆ ದಕ್ಷರಾದವರನ್ನು ನೇಮಕ ಮಾಡಿರುವುದು ರಾಜ್ಯ ಭಾರದ ದಕ್ಷತೆಗೂ ಕಾರಣವಾಗಿದೆ. ಸರ್ಕಾರದವರು ಬುದ್ಧಿಶಾಲಿಗಳಾದ ಅಧಿಕಾರಿಗಳನ್ನೂ, ಯುವಕರನ್ನೂ ವಿದೇಶಗಳಿಗೆ ಕಳುಹಿಸಿ ಅಲ್ಲಿ ಆಯಾ ಶಾಸ್ತ್ರಗಳಲ್ಲಿ ಪಾರಂಗತರಾಗುವಂತೆ ಮಾಡುತ್ತಾರೆ. ಅವರು ಹಿಂದಿರುಗಿ ಬಂದ ಮೇಲೆ ಜವಾಬ್ದಾರಿಯುಳ್ಳ ಕೆಲಸಗಳನ್ನು ಕೊಟ್ಟು ಅವರ ಅನುಭವ ಮತ್ತು ಪಾಂಡಿತ್ಯಗಳು ಆಡಳಿತಕ್ಕೆ ದೊರೆಯುವಂತೆ ಮಾಡಿದ್ದಾರೆ.

ಅಧಿಕಾರವನ್ನು ಹಂಚಿದುದು

ಸರ್ಕಾರದಲ್ಲಿಯೇ ಕೇಂದ್ರೀಕರಿಸಿರುವ ಅಧಿಕಾರವನ್ನು ಆಯಾ ಇಲಾಖೆಯ ಮೊಖ್ತೇಸರರಿಗೂ ಅವರ ಕೈಕೆಳಗಿನ ಅಧಿಕಾರಿಗಳಿಗೂ ತಾರ ತಮ್ಯಾನುಸಾರ ಬಿಟ್ಟುಕೊಟ್ಟಿರುವರು. ಇದರಿಂದ ಆಯಾ ಅಧಿಕಾರಿಗಳ ಜವಾಬ್ದಾರಿಯು ನಿಷ್ಕೃಷ್ಟವಾಗಿ ವಿಂಗಡವಾಗಿ ಆಡಳಿತದ ಕಾರ್ಯ ಕ್ರಮ ಗಳು ಶೀಘ್ರವಾಗಿ ನೆರವೇರಲು ಅನುಕೂಲವಾಗಿದೆ. ಹೀಗೆಯೇ ಮಂತ್ರಾ ಲೋಚನಾ ಸಭೆಯಲ್ಲಿರುವ ಪ್ರತಿಯೊಬ್ಬ ಕೌನ್ಸಿಲರಿಗೂ ಕೆಲವು ವಿಚಾರಗಳಲ್ಲಿ ಸಂಪೂರ್ಣ ಅಧಿಕಾರವನ್ನು ಶ್ರೀಮನ್ ಮಹಾರಾಜರು ದಯಪಾಲಿಸಿದ್ದಾರೆ.

ಮುಖ್ಯ ವಿಷಯಗಳನ್ನು ಆ ಸಭೆಯವರೆಲ್ಲ ಚರ್ಚಿಸಿ ಶ್ರೀಮತ್ ಮಹಾರಾಜರಿಗೆ ತಮ್ಮ ಅಭಿಪ್ರಾಯ ಸಮೇತ ಒಪ್ಪಿಸುವರು.

ಸಂಬಳಗಳ ನಿಷ್ಕರ್ಷೆ

ರಾಜ್ಯಭಾರವು ದಕ್ಷತೆಯಿಂದ ನಡೆಯಬೇಕಾದರೆ ನೌಕರರ ಸಂಬಳ ಇತ್ಯಾದಿಗಳು ತೃಪ್ತಿಕರವಾಗಿರಬೇಕು. ಅವರು ಲಂಚ ಮುಂತಾದುವನ್ನು ತೆಗೆದುಕೊಳ್ಳಲು ಆಸ್ಪದವಿರಬಾರದು. ಸರ್ಕಾರದವರು ತಮ್ಮ ನೌಕರರ ಸಂಬಳಗಳನ್ನು ಸರಿಯಾಗಿ ಗೊತ್ತುಪಡಿಸಿದ್ದಾರೆ; ಮತ್ತು ಕಾಲ ಸ್ಥಿತಿಗೆ ಅನುಗುಣವಾಗಿ ಆಗಿಂದಾಗ್ಯೆ ಆ ಸಂಬಳಗಳನ್ನು ಹೆಚ್ಚಿಸುತ್ತಲೂ ಇದ್ದಾರೆ. ಲಂಚ ಮುಂತಾದುವುಗಳನ್ನು ಅಧಿಕಾರಿಗಳು ತೆಗೆಯದಂತೆ ಮೇಲ್ವಿಚಾರಣೆಯನ್ನು ಇಟ್ಟಿರುವರು.

ಅಧಿಕಾರಿಗಳ ಸಂಚಾರ ಮತ್ತು ತನಿಖೆ

ಕೈ ಕೆಳಗಿನ ಅಧಿಕಾರಿಗಳು ಸರಿಯಾಗಿ ಕೆಲಸಗಳನ್ನು ಮಾಡುತ್ತಾರೆಯೇ ಇಲ್ಲವೇ ಎಂಬುದನ್ನು ಪದೇ ಪದೇ ಪರೀಕ್ಷಿಸಿ ತಿಳಿಯುತ್ತಾರೆ. ಮೇಲ್ಪಟ್ಟ ಅಧಿಕಾರಿಗಳು ಹೀಗೆ ಪರೀಕ್ಷೆ ಮಾಡುವುದು ಮಾತ್ರವಲ್ಲದೆ ಸಂಸ್ಥಾನಾಮಳೆ ಸಂಚಾರ ಮಾಡಿ ಪ್ರಜೆಗಳ ಕುಂದುಕೊರತೆಗಳನ್ನು ಕೇಳಿ ಪರಿಹಾರ ಮಾಡುವರು. ಮಂತ್ರಾಲೋಚನಾ ಸಭೆಯ ಕೌನ್ಸಿಲರುಗಳೂ ದಿವಾನರೂ ಪದೇ ಪದೇ ಸಂಚಾರ ಮಾಡುತ್ತಿರುವುದರಿಂದ ಪ್ರಜೆಗಳು ಈ ಅಧಿಕಾರಿಗಳನ್ನು ಸಂಧಿಸಿ ಅರಿಕೆ ಮಾಡಿಕೊಳ್ಳಲು ಒಳ್ಳೆಯ ಅವಕಾಶಗಳು ದೊರೆಯುತ್ತವೆ. ಆದುದರಿಂದ ಸ್ಥಳೀಯ ಅಧಿಕಾರಿಗಳಲ್ಲಿರುವ ಲೋಪದೋಷಗಳು ಬಹು ಬೇಗ ಸರ್ಕಾರದ ಗಮನಕ್ಕೆ ಬರುವುವು. ಪ್ರಜೆಗಳಿಗೆ ಉಂಟಾಗಿರುವ ಕಷ್ಟಗಳು ಪರಿಹಾರವಾಗುವುವು.

ಶ್ರೀಮತ್ ಮಹಾರಾಜರ ಸಂಚಾರ

ಸರ್ಕಾರದ ಅಧಿಕಾರಿಗಳಲ್ಲದೆ ಶ್ರೀಮತ್ ಮಹಾರಾಜರೇ ಆಗಾಗ ದೇಶದಲ್ಲಿ ಸಂಚಾರ ಮಾಡಿ ಪ್ರಜೆಗಳ ಕಷ್ಟ ನಿಷ್ಠುರಗಳನ್ನು ವಿಚಾರಿಸುವರು. ಆದುದರಿಂದ ಅಧಿಕಾರಿಗಳಿಗೆ ಭಯವು ತಪ್ಪಿರುವುದಿಲ್ಲ. ಸ್ಥಳದ ವಿದ್ಯಮಾನಗಳು ನಾನಾ ರೀತಿಗಳಲ್ಲಿ ಶ್ರೀಮತ್ ಮಹಾರಾಜರ ಗಮನಕ್ಕೆ ಬರು

ತ್ತವೆ. ಅವರು ಯಾವಾಗಲೂ ಪ್ರಜಾಸೌಖ್ಯವನ್ನೇ ಕೋರುತ್ತಿರುವುದರಿಂದ ಪ್ರತಿಯೊಂದು ಅಂಶವನ್ನೂ ಚೆನ್ನಾಗಿ ಕಣ್ಣಿಟ್ಟು ನೋಡುವರು; ವಿಷಯಗಳನ್ನು ಸಂಪೂರ್ಣವಾಗಿ ಆಲೋಚಿಸಿ ತೀರಿಕೆಗಳನ್ನು ಕೊಡುವರು. ಇದರಿಂದ ಆಡಳಿತವು ದಕ್ಷತೆಯಿಂದ ನಡೆದುಬರುತ್ತಿದೆ.

ಅಧಿಕಾರಿಗಳ ದೇಶಾಭಿಮಾನ

ಅಧಿಕಾರಿಗಳಲ್ಲಿ ಅನೇಕರು ವಿದ್ಯಾವಂತರಾಗಿ ನಮ್ಮ ದೇಶದವರಾಗಿ ದೇಶಾಭಿಮಾನದಿಂದ ಕೂಡಿದವರಾಗಿ ಇರುವುದರಿಂದ ಅವರೆಲ್ಲರೂ ಶ್ರೀಮರ್ ಮಹಾರಾಜರ ಮನೋಭಿಪ್ರಾಯವನ್ನೇ ಅನುಸರಿಸಿ ದೇಶದ ಏಳ್ಗೆಯನ್ನು ಬಯಸುತ್ತಿರುವರು. ಒಂದು ಕಡೆ ಪ್ರಜಾಪಕ್ಷದ ಸಂಸ್ಥೆಗಳು, ಇನ್ನೊಂದು ಕಡೆ ಅಧಿಕಾರಿಗಳ ಕಾರ್ಯತತ್ಪರತೆ, ಮಗುದೊಂದು ಕಡೆ ಶ್ರೀಮರ್ ಮಹಾರಾಜರ ದೇಶವಾತ್ಸಲ್ಯ, ಮತ್ತು ವಿಚಕ್ಷಣೆ ಇವುಗಳೆಲ್ಲರಿಂದಲೂ ಸರ್ಕಾರದ ಆಡಳಿತವು ದಕ್ಷತೆಯಿಂದ ನಡೆದು ಬರುತ್ತಿದೆಯೆಂದು ಹೇಳಬೇಕು.

ಅಚ್ಚಿನ ಕೆಲವು ಸರಿತಪ್ಪುಗಳು

ಪುಟ	ಸಾಲು	ತಪ್ಪು	ಸರಿ
೩೦	೬	ಏರ್ಪಾಡು	ಮಾರ್ಪಾಡು
೨೩೭	೨೩	ಅರೋಗ್ಯ	ಅರೋಗ
೨೪೭	ಅಡಿ (೧)	ಜಗಳು	ಜಗಳ
೨೫೧	೭	ಅಶ್ಯಂ	ಅಶ್ಯಂ
೨೬೬	೧೦	–ಯಲ್ಲವೂ	–ಯೆಲ್ಲವೂ
೨೬೭	೬	–ಗಳನ್ನು	–ಗಳನ್ನೂ
೨೬೮	೨೬	ವಿಕೆ (೩)	ವುದು (೩)
೨೯೪	೧೧	–ದರದಲ್ಲಿದೆ	–ದರಲ್ಲಿವೆ
೩೦೧	೨೫	ರಫ್ತೂ	ರಫ್ತು
೩೧೪	೮	–ವುವು	–ವುದು
೩೧೬	ಅಡಿ (೧)	ಕಾಮಗಾರಿಗೆ	ಕಾಮಗಾರರಿಗೆ
೩೧೮	೭	–ರನ್ನು	–ರನ್ನೂ
೩೨೩	೧೫	–ಯೊಂದಕೆ	–ಯೊಂದಕ್ಕೆ
೩೨೬	೧೧	ಜನರು	ಜನ
೩೩೦	೨	ಕೂಡಿ೧ು	ಕೂಡಿದು
೩೩೬	೫	–ಳಲ್ಲ	–ಳಲ್ಲಿ
೩೪೦	೧೪	ತೆರೆಗೆ	ತೆರಿಗೆ
೩೪೮	೨೧	ಸಂಪತೂ	ಸಂಪತ್ತು
೩೪೯	೧೭	–ಕಾರವಾದ	–ಕಾರಕವಾದ
೪೦೨	೨೫	ವ್ಯವಹಾರವನ್ನು ನಡೆಸಲು	(ಬಿಟ್ಟು ಓದಿ)
೪೭೨	೧೫	ರಾಜ್ಯರು	ರಾಜರು
೪೭೮	೨೬	ಅ, ಬ,	ಅಬ,
೪೮೧	೭	ಷೋಲಾಪುರ	ಬಿಜಾಪುರ
೪೮೬	೬, ೧೦	ಮಹಾತ್ಮ್ಯ	ಮಾಹಾತ್ಮ್ಯ
೪೯೨	೧೦	ನಿಷ್ಟುರ	ನಿಷ್ಠುರ
೪೯೬	೧೪	–ತ್ತಿದ್ದರೆ	–ತ್ತಿದ್ದರೂ
೪೯೮	೨೧	ವೆಚ್ಚವಾಗುತ್ತಿತು	ವೆಚ್ಚವಾಗುತ್ತಿತ್ತು
೫೦೦	೨೬	ಶಾಲೆ	ಶಾಖೆ